ವಿಜ್ಞಾನ ಕನ್ನಡ –12

ನಡಾವಳಿ

12ನೇ ಕನ್ನಡ ವಿಜ್ಞಾನ ಸಮ್ಮೇಳನ

15–17ನೇ ಸೆಪ್ಟೆಂಬರ್. 2016, ಕ.ಪ.ಪ.ಮೀ.ವಿ.ವಿ, ಬೀದರ

ಆಯೋಜಕರು

ಸ್ವದೇಶಿ ವಿಜ್ಞಾನ ಆಂದೋಲನ–ಕರ್ನಾಟಕ

(ವಿಜ್ಞಾನ ಭಾರತಿಯ ಕರ್ನಾಟಕ ರಾಜ್ಯ ಘಟಕ)

"ಸ್ವದೇಶಿ ಸದನ", ಗುರುನಾರಾಯಣ ವಿದ್ಯಾ ವಿಹಾರ, ಹೆಬ್ಬಾಳ, ಬೆಂಗಳೂರು–560 024;
ದೂರವಾಣಿ:– 080 23258777; ಟೆಲಿಫ್ಯಾಕ್ಸ್:– 080 23258719

E-mail: svak@svakarnataka.com; vasu@svakarnataka.com; ramesh@svakarnataka.com

ಜಂಟಿ ಆಯೋಜನೆ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಸಹಯೋಗ

ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರ್ಗಿ

Sponsored by: SERB- DST, New Delhi, ISRO, Bengaluru, DRDO, New Delhi, UAS-Dharwad, BLDE Univ., KSCST, Bengaluru, KLE University, Belgavi Universities in Karnataka & Govt. of Karnataka

ಪರಿವಿಡಿ

ಕ್ರ. ಸಂ	ವಿಷಯ	ಪುಟಸಂಖ್ಯೆ
1.	ಸಮ್ಮೇಳನದ ಅನಿಸಿಕೆ:– ಪ್ರೊ॥ ಕೆ. ಐ. ವಾಸು	3
2.	ಪೂರ್ಣ ಪ್ರಬಂಧಗಳು ವಿಭಾಗವಾರು	
	* ಪಾಣೀನೀಯಮ್: ಮಾನವಶಾಸ್ತ್ರ ಮತ್ತು ಭಾಷಾ ವಿಜ್ಞಾನಗಳು	4 – 40
	* ಪತಂಜಲೀಯಮ್: ಮನೋಅಧ್ಯಾತ್ಮಿಕ ಮತ್ತು ತತ್ವಶಾಸ್ತ್ರ ವಿಜ್ಞಾನಗಳು	41 – 63
	* ಭಾರತೀಯಮ್: ಸಾಮಾಜಿಕ ಸಾಂಸ್ಕೃತಿಕವನ್ನೊಳಗೊಂಡ ಕಲೆ, ಸಂಗೀತ ನಾಟ್ಯಶಾಸ್ತ್ರ ವಿಜ್ಞಾನಗಳು	64 – 105
	* ಕೌಟಿಲ್ಯೀಯಮ್: ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ	106 – 147
	* ಧನ್ವಂತರೀಯಮ್: ಆಯುರ್ವೇದ ಮತ್ತು ಆರೋಗ್ಯ ವಿಜ್ಞಾನಗಳು	148 – 168
	* ಪರಾಶರೀಯಮ್: (ಅ) ಕೃಷಿ, (ಆ)ತೋಟಗಾರಿಕೆ. ಅರಣ್ಯ, (ಕ)ಪಶುಸಂಗೋಪನೆ ಮತ್ತು ಮೀನುಗಾರಿಕೆ	169 – 237
	* ನಾಗಾರ್ಜುನಿಯಮ್: ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಪಧಾರ್ಥವಿಜ್ಞಾನಗಳು	238 – 250
	* ಭಾಸ್ಕರೀಯಮ್: ಭೌತಿಕಶಾಸ್ತ್ರ, ಗಣಿತಶಾಸ್ತ್ರ ಮತ್ತು ಖಭೌತಶಾಸ್ತ್ರ ವಿಜ್ಞಾನಗಳು	251 – 259
	* ಬಾರದ್ವಾಜೀಯಮ್ : ವಾಸ್ತುನಿರ್ಮಾಣಶಾಸ್ತ್ರ, ಯಂತ್ರಶಾಸ್ತ್ರ, ವೈಮಾಂತರಿಕ್ಷಶಾಸ್ತ್ರ ಮತ್ತು ಸಾರಿಗೆ ವಿಜ್ಞಾನಗಳು	260 – 264
	* ವರಾಹಮಿಹಿರಮ್: ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಅಣುರೇಣುಮಾನ ತಂತ್ರಜ್ಞಾನ, ಆಹಾರ ತಂತ್ರಜ್ಞಾನ ಮತ್ತು ಅತೀತ ವಿಜ್ಞಾನಗಳು	265 – 278
	* ಸಮ್ಮೇಳನದ ಕೇಂದ್ರ ವಿಷಯ: ವೈಜ್ಞಾನಿಕ ಪಶುಸಂಗೋಪನೆ ಹಾಗೂ ಮೀನುಗಾರಿಕೆಯಿಂದ ಆರ್ಥಿಕ ಸಬಲೀಕರಣ	279 – 291
3.	ಲೇಖಕರ ಪಟ್ಟಿ	292 – 294
4.	2016ನೇ ಸಾಲಿನ ವಿಶ್ವೇಶ್ವರಯ್ಯ ವಿಜ್ಞಾನಪುರಸ್ಕೃತರ ಬಾವಚಿತ್ರ ಮತ್ತು ಪೂರ್ಣ ವಿವರ 2016ನೇ ಸಾಲಿನ ಸಿ. ಎನ್. ಆರ್. ರಾವ್ ವಿಜ್ಞಾನ ಪುರಸ್ಕೃತರ ಬಾವಚಿತ್ರ ಮತ್ತು ಪೂರ್ಣ ವಿವರ	

ಓದುಗರ ಗಮನಕ್ಕೆ ,

ಈ ನಡಾವಳಿಯಲ್ಲಿ ಮುದ್ರಿತವಾಗಿರುವ ಎಲ್ಲಾ ಲೇಖನಗಳು ಆಯಾ ಲೇಖಕರುಗಳಿಂದ ಬಂದಂತಹದು. ಈ ಲೇಖನಗಳನ್ನು ಸಂಸ್ಥೆಯು ಯಾವುದೇ ಸಂಕಲಗಳನ್ನು ಮಾಡದೇ ಮುದ್ರಿಸಲಾಗಿದೆ. ಈ ಲೇಖನಗಳಲ್ಲಿ ಯಾವುದೇ ತಪ್ಪು ಕಂಡುಬಂದಲ್ಲಿ ಇದರ ಜವಾಬ್ದಾರಿಯು ಆಯಾ ಲೇಖಕರುಗಳಿಗೆ ಮಾತ್ರ ಸಂಬಂಧಿಸಿದ್ದು, ಇದರಲ್ಲಿ ಸಂಸ್ಥೆಯ ಪಾತ್ರ ಯಾವುದೇ ಇರುವುದಿಲ್ಲ ಮತ್ತು ಜವಾಬ್ದಾರಿಯು ಇರುವುದಿಲ್ಲ. ಪ್ರಬಂಧಗಳ ಬಗ್ಗೆ ಹೆಚ್ಚಿನ ಚರ್ಚೆ, ಮಾಹಿತಿ ಬೇಕಾದಲ್ಲಿ ಲೇಖಕರನ್ನು ನೇರವಾಗಿ ಸಂಪರ್ಕಿಸಬಹುದು. ಈ ನಡಾವಳಿಯಲ್ಲಿ ಸಮ್ಮೇಳನದಲ್ಲಿ ಪ್ರಬಂಧಗಳನ್ನು ಮಂಡನೆ ಮಾಡಿದಂತಹ ಹಾಗೂ ನಿಗದಿತ ಸಮಯಕ್ಕೆ ಕಳುಹಿಸಿಕೊಟ್ಟಂತಹ ಲೇಖನಗಳನ್ನು ಮಾತ್ರ ಮುದ್ರಿಸಲಾಗಿದೆ. ಯಾವುದೇ ಲೇಖಕರು ಪ್ರಬಂಧ ಮಂಡನೆ ಮಾಡಿ ಅವರ ಲೇಖನಗಳು ನಡಾವಳಿಯಲ್ಲಿ ಮುದ್ರಣವಾಗದಿದ್ದಲ್ಲಿ ಇದಕ್ಕೆ ಲೇಖಕರು ತಮ್ಮ ಪ್ರಬಂದಗಳನ್ನು ನಿಗದಿತ ಸಮಯಕ್ಕೆ ಹಾಗೂ ಆಯೋಜಕರು ಕೇಳಿರುವ ಅಹಿಗಳಲ್ಲಿ ಕಳುಹಿಸದ ಕಾರಣ ಅಂತವರ ಲೇಖನಗಳನ್ನು ನಡಾವಳಿಯಲ್ಲಿ ಮುದ್ರಿಸಲಾಗಿಲ್ಲ.

ಸಮ್ಮೇಳನದ ಅನಿಸಿಕೆ

ವೇದಿಕೆಯ ಮೇಲ್ಲಿರುವಂತಹ ಗಣ್ಯರೆ, ಆತ್ಮೀಯ ಪ್ರತಿನಿಧಿಗಳೆ, ಇತರೆ ಎಲ್ಲಾ ಸದಸ್ಯರೆ

ನಮಸ್ಕಾರಗಳು!

ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ಪ್ರತಿ ವರ್ಷವೂ ಹೆಮ್ಮೆಯಿಂದ ಕನ್ನಡ ವಿಜ್ಞಾನ ಸಮ್ಮೇಳನ ಗಳನ್ನು ಕರ್ನಾಟಕದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಅಥವಾ ಸಂಶೋಧನಾ ಸಂಸ್ಥೆಗಳ ಜೊತೆಯಲ್ಲಿ ಆಯೋಜಿಸಲಾಗುತ್ತಿದೆ. ಈ ನೋಬಲ್ ಕೆಲಸದ ಬಗ್ಗೆ ನಮಗೆ ಹೆಮ್ಮೆಯಿದೆ. ಹಾಗೂ ಈ ಕೆಲಸದಿಂದ ಮೂರು ಪ್ರಮುಖ ಉದ್ದೇಶಗಳನ್ನು ಹೊಂದಿದೆ.

1) ಎಲ್ಲಾ ಶೈಕ್ಷಣಿಕ ವರ್ಗ ಹಾಗೂ ಜನಸಾಮಾನ್ಯರಲ್ಲಿ ಕನ್ನಡದ ಬಗ್ಗೆ ಪ್ರೀತಿಯ ಜೊತೆಗೆ ಕುಶಲತೆಯನ್ನು ಬೆಳೆಸಲು
2) ವಿಜ್ಞಾನ ಮತ್ತು ತಂತ್ರಜ್ಞಾನದ ಎಲ್ಲಾ ಆಯಾಮಗಳಲ್ಲಿ ನಮ್ಮ ಶೈಕ್ಷಣಿಕ ವರ್ಗವು ಕನ್ನಡ ಭಾಷೆಯ ಮೂಲಕ ಪರಿಣಾಮಕಾರಿ ರೀತಿಯಲ್ಲಿ ರಾಜ್ಯದೆಲ್ಲಡೆ ಪಸರಿಸುವಂತೆ ಮಾಡುವ ಉದ್ದೇಶ
3) ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಆರ್ಥಿಕವಾಗಿ ಅಭಿವೃದ್ಧಿಪಡಿಸಲು ಆಹ್ವಾನ

ಇವುಗಳ ಜೊತೆಗೆ ಕರ್ನಾಟಕ ರಾಜ್ಯವು ಭಾರತ ದೇಶಕ್ಕೆ ಹೆಮ್ಮೆಯ ರತ್ನಗಳಾದ ಭಾರತ ರತ್ನ ಡಾ॥ ಎಂ ವಿಶ್ವೇಶ್ವರಯ್ಯ, ಭಾರತ ರತ್ನ ಡಾ॥ ಪಂಡಿತ್ ಭೀಮ್‌ಸೇನ್ ಜೋಶಿ ಮತ್ತು ಭಾರತ ರತ್ನ ಡಾ॥ ಸಿ. ಎನ್. ಆರ್. ರಾವ್ ರಂತ ಹೆಮ್ಮೆಯ ಪುತ್ರರನ್ನು ನೀಡಿದೆ. ಅಷ್ಟೇ ಅಲ್ಲದೇ ನೋಬಲ್ ಪುರಸ್ಕೃತ ಡಾ॥ ಸಿ. ವಿ. ರಾಮನ್ ರವನ್ನು ಕರ್ನಾಟಕ ರಾಜ್ಯ ಪ್ರತಿನಿಧಿಸಿದೆ. ಈ ಎಲ್ಲಾ ಮಹನೀಯರುಗಳ ಹೆಸ–ರಿನಲ್ಲಿ ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ಪುರಸ್ಕಾರಗಳನ್ನು ಸ್ಥಾಪಿಸಿ ಕರ್ನಾಟಕ ಹೆಮ್ಮೆಯ ವಿಜ್ಞಾನಿ, ಶೈಕ್ಷಣಿಕ ವೃಂದದವರಿಗೆ ಪ್ರಧಾನ ಮಾಡಲಾಗುತ್ತಿದೆ.

2016ನೇ ಸಾಲಿನ ಭಾರತ ರತ್ನ ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರವನ್ನು ಇಸ್ರೋದ ಡಾ॥ ಬಿ. ಎನ್. ಸುರೇಶ್, ಮತ್ತು ಎನ್. ಎ. ಎಲ್ ನ ಡಾ॥ ಶುಭ. ವಿ ವಿಜ್ಞಾನಿಗಳಿಗೆ ನೀಡಲಾಗುತ್ತಿದೆ. ಮತ್ತು ಭಾರತ ರತ್ನ ಸಿ. ಎನ್. ಆರ್. ರಾವ್ ವಿಜ್ಞಾನ ಪುರಸ್ಕಾರವನ್ನು ಐ. ಐ. ಎಸ್. ಸಿ. ಯ ಪ್ರೊ॥ ಹೆಚ್. ಆರ್. ಕೃಷ್ಣಮೂರ್ತಿ ರವರುಗಳಿಗೆ ಈ ಸಮ್ಮೇಳನದಲ್ಲಿ ಪ್ರಧಾನ ಮಾಡಲಾಗುತ್ತದೆ. ಈ ಎಲ್ಲಾ ಪುರಸ್ಕೃತರಿಗೆ ನನ್ನ ಶುಭಾಶಯಗಳು, ಹಾಗೂ ನಾವು ಇವರುಗಳಂದ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಕನ್ನಡ, ವಿಜ್ಞಾನ ಮತ್ತು ಕರ್ನಾಟಕದ ಅಭೃವೃದ್ಧಿಗೆ ತಮ್ಮ ಕೊಡುಗೆಗಳನ್ನು ನೀಡಬೇಕೆಂದು ನಾವು ಆಶಿಸುತ್ತೇವೆ.

ವಂದನೆಗಳು

ಜೈ ವಿಜ್ಞಾನ, ಜೈ ಕನ್ನಡ, ಜೈ ಕರ್ನಾಟಕ

ಪ್ರೊ॥ ಕೆ. ಐ. ವಾಸು
ನಿವೃತ್ತ – ನಿರ್ದೇಶಕರು, ಸಿ.ಎಸ್.ಐ.ಅರ್–ಸಿ.ಇ.ಸಿ.ಆರ್.ಐ, ಕಾರಿಕುಡಿ
ನಿವೃತ್ತ – (ಕಾರ್ಯಾನಿಯೋಜಿತ) ಕುಲಪತಿಗಳು, ಮದುರೈ ಕಾಮರಾಜ ವಿ. ವಿ
ನಿವೃತ್ತ – ಪ್ರೊ. ವೈಸಚಾನ್ಸಲರ್, ಕೊಚ್ಚಿನ್ ವಿ. ವಿ
ನಿವೃತ್ತ – ಪ್ರಾದ್ಯಾಪಕರು, ಐ.ಐ.ಎಸ್.ಸಿ, ಬೆಂಗಳೂರು
ಸ್ಥಾಪಕ / ಪೋಷಕ / ಮಾರ್ಗದರ್ಶಿಕ
ಸ್ವದೇಶಿ ವಿಜ್ಞಾನ ಅಂದೋಳನ–ಕರ್ನಾಟಕ

ವಿಭಾಗ:–1

ಪಾಣಿನೀಯಮ್

ಮಾನವಶಾಸ್ತ್ರ ಮತ್ತು ಭಾಷಾ ವಿಜ್ಞಾನಗಳು

PANINEEYAM

Humanities and Linguistic Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಪ್ರಾಚೀನ ಭಾರತದಲ್ಲಿ ಮಹಿಳೆಯರ ಜ್ಞಾನದ ನೆಲೆಗಳು	ಗೀತಾ. ಸಿ	6 – 8
2.	ಮಾಸ್ತಿ ಕಥಾಸಾಹಿತ್ಯದ ವೈಶಿಷ್ಟ್ಯಗಳು	ಶಂಕ್ರಮ್ಮ.ಅ.ಹುಲಕಟ್ಟಿ.	8 – 9
3.	ವಿಜ್ಞಾನ ವಿವೇಚನೆಯ ಸ್ವಾರಸ್ಯದ ಸಾರಾಂಶ	ಶ್ರೀ. ರೆಹಮಾನ ಆಯ್. ಗೊರಜನಾಳ	9 – 14
4.	"ಭಾರತ ಸಿಂಧು ರಶ್ಮಿ" ಮಹಾಕಾವ್ಯದಲ್ಲಿ ಮಾನವ ಜೀವನ ದರ್ಶನ	ಶ್ರೀ ರೆಹಮಾನ ಆಯ್. ಗೊರಜನಾಳ	14 – 18
5.	ಹಸುಗಳು: ಪಾರಂಪರಿಕ, ಸಾಹಿತ್ಯಕ, ವೈಜ್ಞಾನಿಕ ಆಯಾಮಗಳು	ಡಾ. ಆರ್. ಪೂರ್ಣಿಮ	18 – 23
6.	'ತೇರು' ಕಾದಂಬರಿಯಲ್ಲಿ ದಲಿತರ ಚಿತ್ರಣ	ಡಾ. ಪತ್ರೆಮ್ಮ ಧಾರವಾಡ	23 – 25
7.	ಡಾ. ಸೋಮಶೇಖರ ಇಮ್ರಾಪೂರ ಅವರ ಕಾವ್ಯವಲೋಕನ	ಭೀಮಪ್ಪ ಹೊನ್ನಿಕೊಳ್ಳ	26 – 28
8.	ಕರ್ವಾಲೊ ಕಾದಂಬರಿ–ಸ್ಥಳೀಯ ಜ್ಞಾನಗಳ ಶೋಧ	ಮುತ್ತುಶೆಟ್ಟಿ	29 – 32
9.	ಇಂದಿನ ಶಿಕ್ಷಣದಲ್ಲಿ ಮೌಲ್ಯಗಳು	ವಿದ್ಯಾಶಂಕರ ಎಂ.ಹೆಚ್ ಚಂದನ ಎಸ್	32 – 34
10.	ದೇವನೂರ ಮಹಾದೇವರ ಕಾದಂಬರಿಗಳಲ್ಲಿ ಮಹಿಳೆ, ಪಶುಸಂಗೋಪನೆ ಮತ್ತು ಆರ್ಥಿಕ ಸಬಲೀಕರಣ	ಡಾ.ಟಿ.ಎಂ.ಗೀತಾಂಜಲಿ	35 – 39
11.	ಗಣಕದ ಇಂಗ್ಲೀಷ್ ಕೀಲಿಮಣೆಯಲ್ಲಿ ಕನ್ನಡದ (ಭಾರತೀಯ ಭಾಷೆಗಳ) ಬೆರಳೊತ್ತು (ಮುದ್ರಣ) ಇಂಗ್ಲೀಷ್‌ಗಿಂತ ನಿಧಾನವಾಗಿದೆ..... ಏಕೆ?	ಡಾ. ದತ್ತಾತ್ರೇಯ. ವಿ. ಎನ್	39 – 40

ಪ್ರಾಚೀನ ಭಾರತದಲ್ಲಿ ಮಹಿಳೆಯರ ಜ್ಞಾನದ ನೆಲೆಗಳು

ಗೀತಾ. ಸಿ
ಹಸ್ತಪ್ರತಿಶಾಸ್ತ್ರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

ಭಾರತೀಯ ಸಮಾಜದಲ್ಲಿ ಜ್ಞಾನ ಪರಂಪರೆ ಎನ್ನುವುದು ಕ್ರಿಯಾತ್ಮಕವಾದದ್ದು ಹಾಗೂ ಅನುಭವಾತ್ಮಕವಾದದ್ದು. ಪುರಾತನ (ವೇದಗಳ) ಕಾಲದಿಂದಲೂ ಮಹಿಳೆಯರು ಪುರುಷರ ಸರಿಸಮನಾಗಿರುವೇ ಜ್ಞಾನವನ್ನು ಹೊಂದಿದ್ದಾರೆ. ವೇದಗಳಲ್ಲಿ ಹಲವಾರು ಶ್ಲೋಕಗಳನ್ನು ಋಕ್‌ಗಳನ್ನು ರಚಿಸಿದ್ದಾರೆ. ಮಹಿಳೆ ಪುರುಷರಿಗೆ ಮಾರ್ಗದರ್ಶಕಳಾಗಿದ್ದಳು ಎನ್ನುವುದನ್ನು 'ಶರಿಕರಾಹಾರ್ಯಾ ಮಲಿಷ್ಯಾಮಿಶ್ಯಾ,' ವಾಗ್ಬಾದದ ಪ್ರಥಮಾರ್ಧದಲ್ಲಿ ತೀರ್ಮಾಗಾರಳಾಗಿ ಭಾರತೀದೇವಿಯನ್ನು ನೇಮಿಸುವ ಪ್ರಥಮಾರ್ಧವನ್ನು ಗಮನಿಸಿದರೆ ಅರ್ಥವಾಗುತ್ತದೆ. ಈ ರೀತಿಯಾಗಿ ಆರಂಭದಿಂದಲೂ ಮಹಿಳೆಯ ಅಸ್ತಿತ್ವವು ಉನ್ನತವಾಗಿತ್ತು. ಇದಕ್ಕೆ ಪೂರಕವಾಗಿ ಪಂಡಿತ ತಾರಾನಾಥರ ಈ ಹೇಳಿಕೆಯನ್ನು ಉದಾಹರಣೆಯಾಗಿ ಗಮನಿಸುವುದಾದರೆ "ಪಾಣಿನಿಯ ಪ್ರಕಾರ ಪತ್ನಿ ಎಂಬ ಶಬ್ದಕ್ಕೆ ಸಮಾನ ಹಕ್ಕು ಭಾಧ್ಯತೆಗಳಾಗೂ ಮತ್ತು ಸಮಾನ ವಿಧವಾದ ಕರ್ತವ್ಯ ಚಲಾಯಿಸಲಿಗಳಿಗೂ ಯೋಗ್ಯಳಾಗಿರತಕ್ಕವಳೇ ಎಂಬ ಅರ್ಥವಾಗುತ್ತದೆ. ಇದೇ ರೀತಿಯಾಗಿಯೇ ಪ್ರತಿಯೊಬ್ಬ ಸ್ತ್ರೀಯೂ ಆ ಕಾಲದಲ್ಲಿ ತನ್ನ ಗಂಡಸರಿಂದ ಭಾವಿಸಲ್ಪಡುತ್ತಿದ್ದಳು." (ಅಂಬಿಕ ನಂಟು.ಪು. 370) ತಾರಾನಾಥರು ಪಾಣಿನಿಯನ್ನು ಉಲ್ಲೇಖ ಮಾಡುತ್ತಾ ಭಾರತೀಯ ಸಮಾಜದಲ್ಲಿ ಪುರಾತನ ಕಾಲದಿಂದಲೂ ಮಹಿಳೆಯರು ಗೌರವಾಹಾರಗಳಿಗೆ ಪಾತ್ರರಾಗಿದ್ದಾರೆ ಎನ್ನುವುದನ್ನು ಸಮರ್ಥಿಸುವುದಾಗಿದೆ. ಹಾಗಾದರೆ ಮಹಿಳಾ ಜ್ಞಾನ ಮತ್ತು ಮಹಿಳೆಯರ ಸ್ಥಾನಮಾನ ಯಾವಾಗ ಅವಜ್ಞೆಗೊಳಗಾಗಿತು ಎಂಬ ಪ್ರಶ್ನೆ ಕುತೂಹಲಕ್ಕಾದರೂ ಉದ್ಭವಿಸುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವುದಾದರೆ, 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂಬ ಮನು ಸ್ಮೃತಿಯ ಹೇಳಿಕೆ ಹಾಗೂ ಭಾಷ್ಯಕಾರರ ಕಾಲಕ್ಕೆ ಮಹಿಳಾ ಜ್ಞಾನ ಅವಜ್ಞೆಗೊಳಗಾಯಿತು. ಹಾಗೆಯೇ ಆಧುನಿಕ ಪರಿಭಾರ್ಧದಲ್ಲಿ ಕಾಯಿಕವಿಲವರೇ ಪಡೆಮಕೊಂಡ ಮಹಿಳೆಯ ಜ್ಞಾನವನ್ನು ಪುಸ್ತಕಕೇಂದ್ರಿತವಾದ ಸಮಾಜದಲ್ಲಿ ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ. 'ಉದಾರೀಕರಣ' 'ಖಾಸಗೀಕರಣ' 'ಜಾಗತೀಕರಣ'ದ ಪರಿಭಾರ್ಧದಲ್ಲಿ 'ಭೂಮಿ' ಮತ್ತು 'ಹೆಣ್ಣನ್ನು' ಫಲವಂತಿ–ಕೆಯಿಯ ಪರಿಕೇತವಾಗಿ ನೋಡಲಾರಂಭಿಸಲಾಯಿತು. ಮಕ್ಕಳನ್ನು ಹೆರುವುದು, ಬಾಲನೆ, ಪಾಲನೆ, ಪೋಷಣೆ, ಕುಟುಂಬದ ನಿರ್ವಹಣೆ ಮಾಡುವುದಷ್ಟೇ ಅವಳ ಕೆಲಸವಾಯಿತು. ಇಂತಹ ಗೃಹಕೆಲಸಗಳ ಶ್ರಮವನ್ನು ಸಮಾಜದಲ್ಲಿ ದುಡಿಮೆ ಎಂದಾಗಲೀ ಆರ್ಥಿಕಮೂಲವೆಂದಾಗಲೀ ಪರಿಗಣಿಸಲಿಲ್ಲ ಆದರೂ ತನ್ನ ಪ್ರಾಮಾಣಿಕ ಶ್ರಮ ಹಾಗೂ ಆರೋಚನೆಗಳಿಂದ ತನ್ನನ್ನು ಗುರುತಿಸಿಕೊಂಡು ಬಂದಿರುವುದು ಮಹತ್ವವಾದ ಸಂಗತಿಯಾಗಿದೆ. ಕನ್ನಡ ಜ್ಞಾನ ಪರಂಪರೆಯಲ್ಲಿ ಇಂಥ ಮಹಿಳೆಯರಿಗಿದ್ದ ಸ್ಥಾನಮಾನಗಳನ್ನು ಕುರಿತು ಚರ್ಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಮಹಿಳಾ ಜ್ಞಾನ ಪರಂಪರೆಯ ಚರಿತ್ರೆಯ ಪ್ರಾಚೀನತೆಯನ್ನು ಹೇಳುತ್ತಾ ಈ ಮೊದಲು ಹೇಳಿದ ಹಾಗೆ ವೇದಗಳ ಕಾಲದಲ್ಲಿ ಮಹಿಳೆ ಪುರುಷನಷ್ಟೇ ಸರಿ ಸಮಾತತೆಯನ್ನು ಹೊಂದಿದ್ದೂ ಶಿಕ್ಷಣದಲ್ಲಿ ತನ್ನನ್ನು ಶಿಕ್ಷಣದಲ್ಲಿ ತೊಡಗಿಸಿಕೊಂಡಿದ್ದಳು ಎಂಬ ಮಾತನ್ನು ಇಂದು ಮರು ಪರಶೀಲನೆಗೆ ಒಳಪಡಿಸಬೇಕಾಗಿದೆ. ಅಂದರೆ ವೇದಗಳ ಕಾಲದಲ್ಲಿ ಮಹಿಳೆಯರಿಗೆ ವಿದ್ಯಾಭ್ಯಾಸ ಮಾಡಲು ಗುರುಕುಲಗಳಲ್ಲಿ ಮತ್ತು ಮಠಗಳಲ್ಲಿ ಅವಕಾಶ ಕಲ್ಪಿಸಿಕೊಟ್ಟಿದ್ದರು ಎಂದು ಹೇಳುವ ಚರಿತ್ರೆಯ ಪುಟಗಳನ್ನು ಇಂದು ಮರು ಓದಿಗೆ ಒಳಪಡಿಸಬೇಕಾದ ತುರ್ತಿದೆ. ಮಹಿಳೆಯರಿಗೆ ಶಿಕ್ಷಣ ಒದಗಿಸಲಾಗಿತ್ತು ಎಂದರೆ ಅವರು ಯಾವ ವರ್ಗದ ಯಾವ ಮನೆತನದ ಮಕ್ಕಳಾಗಿದ್ದರು ಎಂಬ ಹಿನ್ನೆಯನ್ನು ಕುರಿತು ಪ್ರಶ್ನೆಯನ್ನು ಹಾಕಿಕೊಂಡರೆ ಉತ್ತರ ದೊರಕೀತು ಎನಿಸುತ್ತದೆ. ಅಂದರೆ ಪುರೋಹಿತ, ರಾಜರ ಮತ್ತು ಮಂತ್ರಿಗಳಂತಹ ಅಧಿಕಾರಸ್ಥರ ಹೆಣ್ಣು ಮಕ್ಕಳಿಗೆ ಮಾತ್ರ ಅಕ್ಷರ ಕಲಿಯಲು ಅವಕಾಶವಿತ್ತು. ಅದರಲ್ಲೂ ಪುತ್ರಸಂತಾನ ಇಲ್ಲದಿದ್ದಾಗ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಹಾಗೂ ಯಜ್ಞ ಯಾಗ ಪೂಜೆ' ಮಾಡಲು ಅವಕಾಶವಿತ್ತು. ಗಾರ್ಗಿ ಮೈತ್ರೇಯಿ, ಅಪಾಲಾ, ವಿಶ್ವವರ , ಗೋದಾ, ಷೋಷಾ, ಮೊದಲಾದವರು ಹೆಣ್ಣಿನ ಜ್ಞಾನದ ಪ್ರತಿನಿಧಿಗಳಾಗಿ ನಿರ್ವಚನೆಗೊಂಡಿದ್ದಾರೆ. ವೇದಗಳ ಕಾಲದಕೊನೆಯಲ್ಲಿ ಹೆಣ್ಣಿಗೆ ಶಿಷ್ಟವಾದಂತಹ ಸಾರ್ವಜನಿಕ ವಲಯಗಳ ಅವಕಾಶಗಳು ಕ್ಷೀಣಗೊಂಡವು ಇದು ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮೊದಲಾದ ಕ್ಷೇತ್ರಗಳಲ್ಲಿಯೂ ಮಹಿಳೆಯರನ್ನು ಅವಕಾಶಗಳಿಂದ ವಂಚಿತರನ್ನಾಗಿ ಮಾಡಲಾಗಿತ್ತು. ವೇದಗಳ ಕೊನೆಯ ಕಾಲಘಟ್ಟದಲ್ಲಿ ಸ್ತ್ರೀಯರು ವಿದ್ಯಾಭ್ಯಾಸ ಮಾಡುವುದು ಯಜ್ಞಯಾಗಾದಿಗಳನ್ನು ಮಾಡುವುದು, ಗಂಡಂದಿರ ಜೊತೆಯಲ್ಲಿ ಪೂಜಾ ಕಾರ್ಯದಲ್ಲಿ ಸಮಾನವಾಗಿ ಬಾಗವಹಿಸುವುದು ಅಪರಾಧವೆಂಬಂತೆ ಚಿತ್ರಿತವಾಯಿತು ಏಕೆಂದರೆ ಆ ಕಾಲದಲ್ಲಿ ರಚನೆಯಾಗಿದ್ದ ಸ್ಮೃತಿಗಳು ಸ್ತ್ರೀಯರ ಸ್ವಾತಂತ್ರವನ್ನು ಪಡೆಯಲು ಅನರ್ಹಳು ಎಂದು ಹೇಳಿದವು. ಆದ್ದರಿಂದ ಸ್ತ್ರೀಯರು ಯಾವುದೇ ಸಭೆ ಸಮಾರಂಭದಲ್ಲಿ ಭಾಗವಹಿಸದಂತೆ ಮಾಡಲಾಗಿತ್ತು. ಹೆಣ್ಣನ್ನು ತೋರಿಕೆಗಾಗಿ ಗೌರವಿಸುತ್ತಲೇ ಅವಳನ್ನು ಅಧೀನವಾಗ ಮಾಡಿಕೊಂಡ ಸಂಗತಿಗಳೇ ಹೆಚ್ಚು. ಈ ಕಾರಣ ಅವಳ ತಿಳುವಳಿಕೆಯ ನೆಲೆಗಳನ್ನು ಉಪೇಕ್ಷಿಸಲಾಯಿತು.

ವೈದಿಕ ಹಾಗೂ ವಸಾಹತುಶಾಹಿ ಕಾಲದಲ್ಲಿ ಮಹಿಳೆ ಹಾಗೂ ಅಸ್ತಿತ್ವವನ್ನು ಉಪೇಕ್ಷಿಸಿದ್ದಲ್ಲದೇ, ಸ್ತ್ರೀ ಎಂದರೆ, ಚಂಚಲೆ, ಬುದ್ದಿ ಹೀನೆ, ಅತಿ ಕಾಮಿ, ಆತುರಗಾರ್ತಿ ಎಂದು ಆರೋಪಿಸಲಾಯಿತು. "ಹೆಂಗಸರ ಬುದ್ದಿ ಮೊಣಕಾಲ ಕೆಳಗೆ", "ನೀರಿನಲ್ಲಿ ಮೀನಿನ ಹೆಜ್ಜೆಯನ್ನು ಕಂಡು ಹಿಡಿಯ ಬಹುದು ಆದರೆ ಹೆಣ್ಣಿನ ಮನಸಿನ ಮರ್ಮವನ್ನು ಕಂಡು ಹಿಡಿಯುವುದಕ್ಕೆ ಆಗುವುದಿಲ್ಲ." ಎಂದು ಹೇಳುವ ಮೂಲಕ ಹೆಣ್ಣಿನ ಗುಣ ಸ್ವಭಾವಗಳನ್ನು ಸಂಶಯಿಸಲಾಯಿತು, ಇಂತಹ ಮನುಷ್ಯ ವಿರೋಧಿ ಆರೋಪಗಳಿದ್ದರೂ ಮಹಿಳೆಯರು ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಅಲ್ಪ ಸ್ವಲ್ಪವಾದರೂ ತನ್ನ ಜ್ಞಾನದ ಚಹರೆ ಹಾಗೂ ಅಸ್ತಿತ್ವವನ್ನು ಉಳಸಿಕೊಂಡು ಬಂದಿರುವುದು ಮಹತ್ವದ ಸಂಗತಿಯಾಗಿದೆ. ವಿಶೇಷವಾಗಿ ಪುರಾಣ ಹಾಗೂ ಶಿಷ್ಟ ಮಹಾ ಕಾವ್ಯಗಳಲ್ಲಿ ಹೆಣ್ಣನ್ನು ಅಧೀನ ಸ್ಥಿತಿಯಲ್ಲೇ ನಿರೂಪಿಸಲಾಗಿದೆ. ದೇವಿ ಮಹಾತ್ಮೆಯಂಥಹ ಪುರಾಣಗಳಲ್ಲಿ ಮಹಿಳೆ ಆದಿ ಶಕ್ತಿ ಸೂಕ್ಷ್ಮವಾದ ಬುದ್ದಿ ಶಕ್ತಿ ಉಳ್ಳವಳಾಗಿದ್ದರೂ ಪುರುಷ ದೇವತೆಯ

ಅಧೀನದಲ್ಲೇ ಇರುವುದನ್ನು ನೋಡಬಹುದಾಗಿದೆ. ಪಾತೀವ್ರತ್ಯದ ನೆರಗಿನಲ್ಲಯೇ ರೇಣುಕೆ ಜಮದಗ್ನಿಯ ಅಧೀನದಲ್ಲಿಯೂ, ಅಹಲ್ಯೆ ಕಲ್ಲಾಗಿಯೂ, ಸೀತೆ ವನವಾಸಿಯೂ ಆದ ಕಥನಗಳು ಕುತೂಹಲವಾದಂಥಹವು. ಅಷ್ಟೇ ಅಲ್ಲದೇ ಗಂಗೆ, ಗೌರಿ ಶಿವನ ಜಡೆ ಹಾಗೂ ತೊಡೆಯ ಮೇಲೆ ಲಕ್ಷ್ಮಿ ವಿಷ್ಣುವಿನ ಪಾದಸೇವಕಿಯಾಗಿ ನಿರೂಪಣೆಗೊಂಡ ಕ್ರಮಗಳು ಹೆಣ್ಣು ದೇವತೆಯಾದರೇನು? ಮನುಷ್ಯಳಾದರೇನು? ಅವಳು ಪುರುಷರ ಅಧೀನವೆಂದೇ ಬಿಂಬಿಸುತ್ತವೆ. ಈ ಎಲ್ಲಾ ಪುರಾಣ ಮೂಲಗಳ ಉಲ್ಲೇಖಗಳನ್ನು ಗಮನಿಸಿದಾಗ ಸ್ಪಷ್ಟವಾಗುವ ಅಂಶವೆಂದರೇ ಮಹಿಳೆಯನ್ನು ಧರ್ಮ ಮತ್ತು ಸಂಪ್ರದಾಯ ಪ್ರಧಾನ ಸಾಮಾಜಿಕ ವ್ಯವಸ್ಥೆಯು ಪಾತಿವ್ರತ್ಯ ಹಾಗೂ ನೈತಿಕತೆಯ ಹೆಸರಿನಲ್ಲಿ ಬಂಧಿಸಲಾಗಿದೆ.

ಹಾಗೆಯೇ ಬುಡಕಟ್ಟು ಮಹಾಕಾವ್ಯಗಳಲ್ಲಿ ಮಹಿಳೆಯ ಚಿತ್ರಣವನ್ನು ಗಮನಿಸುವುದಾದರೇ ಶಿಷ್ಟ ಕಾವ್ಯಗಳಿಗಿಂತ ತುಸು ಭಿನ್ನವಾಗಿವೆ. ಇಲ್ಲಿನ ಮಹಿಳೆಯರು ಪುರುಷಾಧಿಕಾರವನ್ನು ವಿರೋಧಿಸುತ್ತಾರೆ. 'ಸಿರಿ ಮಹಾಕಾವ್ಯದ' 'ಸಿರಿ' ತನ್ನನ್ನು ವಿನಃ ಕಾರಣ ಶಿಕ್ಷಿಸುವ ಗಂಡನ ಹಂಗನ್ನೇ ದಿಕ್ಕರಿಸುತ್ತಾಳೆ. 'ಮಲೆಯ ಮಹದೇಶ್ವರ' ಕಾವ್ಯದಲ್ಲಿ ಬರುವಂತಹ 'ಸಂಕಮ್ಮ' ತನ್ನ ಶೀಲದ ಬಗ್ಗೆ ಅನುಮಾನಿಸುವ ಗಂಡನ ಅಸ್ತಿತ್ವವನ್ನೇ ನಿರಾಕರಿಸಸುತ್ತಾಳೆ. ಶಿಷ್ಟ ಮಹಾಕಾವ್ಯಗಳಾದ ' ರಾಮಾಯಣ' 'ಮಹಾಭಾರತ'ಗಳಲ್ಲಿ ಪುರುಷ ಪ್ರಾಧಾನ್ಯತೆಯನ್ನು ಮೀರಿ ಬರುವುದು ತುಂಬಾ ಕಡಿಮೆ. ಶಿಷ್ಟ ಸಾಹಿತ್ಯದಲ್ಲಿ ಅಕ್ಷರ ಕೇಂದ್ರಿತವಾದ ಜ್ಞಾನಕ್ಕೆ ಮಹತ್ವವಿದೆ. ಜಾನಪದ ಸಾಹಿತ್ಯದಲ್ಲಿ ಅನುಭವಕ್ಕೇ ಹಾಗೂ ದಿನ ನಿತ್ಯ ತಮ್ಮ ಬದುಕಿನಲ್ಲಿ ಕಲಿತ ತಿಳುವಳಿಕೆಗೆ ಹೆಚ್ಚು ಮನ್ನಣೆ ಇದೆ. ಅದರಲ್ಲಿಯೂ ಮಹಿಳೆಯ ಜ್ಞಾನದ ಸ್ವರೂಪ ಹೆಚ್ಚು ಲಯ ಹಾಗೂ ಗೇಹ ಸ್ವರೂಪದ್ದು. ಸುಗ್ಗಿಯ ಸಮಯದಲ್ಲಿ ತನ್ನ ಶ್ರಮ ಪರಿಹಾರಕ್ಕಾಗಿ ಹಾಡುವ ಹಾಡುಗಳು ಮದುವೆ, ಉತ್ಸವ, ಜಾತ್ರೆಗಳಲ್ಲಿ ಹಾಡುವ ಅವರ ಕಾವ್ಯ ಜ್ಞಾನವನ್ನು ಕಾವ್ಯವೆಂದಾಗಲಿ ಜ್ಞಾನವೆಂದಾಗಲಿ ಅಭಿವ್ಯಕ್ತತೆಯೆಂದಾಗಲಿ ಗುರುತಿಸುವುದು ವಿರಳವೆಂದೇ ಹೇಳಬಹುದು.

ಜಾನಪದ ಸಾಹಿತ್ಯದಲ್ಲಿ ಹಾಗೂ ಬುಡಕಟು ಸಮುದಾಯದಲ್ಲಿ ಮಹಿಳೆಯರಿಗೆ ದೊರಕಿದ ಸ್ವಾತಂತ್ರ್ಯವೆಂದರೆ ಹಾಡಿನ ಕ್ರಮ ಹಾಡಿನ ಪರಿ ಹಾಗೂ ಭಾಷೆಯ ಸ್ವರೂಪವನ್ನು ಕೊರವಂಜಿಯ ಹಾಡಿನ ಮೂಲಕ ನೋಡಬಹುದಾಗಿದೆ.

ಹೆಬ್ಬಾಗಿಲದೋಳ್ ಹುಬ್ಬುಗಳ ಕುಣಿಸುತ
ಹಬ್ಬರದಿಂದ ಸ್ವರ ಗೈದಾಳು
ಏಯವ್ವಾ ಏಯಕ್ಕಾ ಏಯಮ್ಮ ಬಾರೆಂದು
ಸಾರುತ ನಡೆದಾಲು ಕೊರವಂಜಿ ।

ಸಾಮಾನ್ಯ ವರ್ಗದಿಂದ ಬಂದ ಮಹಿಳೇ ಮಾತಿನಲ್ಲಿ ಹಾಗೂ ಭಾಷೆಯಲ್ಲಿ ಅಳಕು ಇಲ್ಲದೆ ಇಂಪಾದ ಧ್ವನಿಯಿಂದ ಇನ್ನೊಬ್ಬ ಮಹಿಳೆಯ ಮನಸ್ಥಿತಿಯನ್ನು ಅರಿತು ಅವಳಿಗೆ ಸಮಾಧಾನದ ಮಾತುಗಳನ್ನು ಹೇಳಿ ಸಂತೈಸುತ್ತಾಳೆ. ಹಾಗೆಯೇ ದೇಶವನ್ನು ಸುತ್ತಿ ಬರುತ್ತಾಳೆ. ಅವಳಿಗೆ ಅಕ್ಷರ ಜ್ಞಾನದ ಪರಿವೇ ಇಲ್ಲದೆ ತಾನು ಪಡೆದುಕೊಂಡ ತಿಳುವಳಿಕೆಯಿಂದ ಕುಟುಂಬದ ನಿರ್ವಹಣೆ ಮಾಡಿಕೊಂಡು ಹೋಗುತ್ತಾಳೆ. ಇಂತಹ ತಿಳುವಳಿಕೆಯನ್ನು ಆಧುನಿಕ ಸಂದರ್ಭದಲ್ಲಿ ಪರಿಗಣಿಸುವುದಿಲ್ಲ. ಜಾನಪದ ಸಾಹಿತ್ಯವು ಮಹಿಳೆಯರ ಕವಿತ್ವದ ಗಂಗೋತ್ರಿ ಎಂದು ಕರೆಯುತ್ತಾರೆ. ಇವರ ದೈನಂದಿನ ಬದುಕಿನ ನೋವು ನಲಿವು ಪಾಡು ಹಾಡಾಗಿ ಸಹಜ ಲಯ ಪ್ರಾಸ ಛಂದಸ್ಸುಗಳ ತೊಡುಗೆ ತೊಟ್ಟಿದೆ. ಏಕೆಂದರೆ ಇಂತಹ ಸಾಹಿತ್ಯ ಪ್ರಕಾರದಲ್ಲಿ ಹೆಚ್ಚು ಮಹಿಳೆಯರೇ ಭಾಗವಹಿಸುತ್ತಾರೆ ಎನ್ನುವುದು ವಿಶೇಷವಾಗಿದೆ.

12ನೇ ಶತಮಾನಕ್ಕೆ ಬಂದಾಗ ಶರಣರು ಹೆಣ್ಣಿನ ಅನುಭವ ಮತ್ತು ಅಸ್ತಿತ್ವಕ್ಕೆ ಆಧ್ಯತೆ ನೀಡಿದರು. ಈ ಒಂದು ಕಾಲಘಟ್ಟದಲ್ಲಿ ಹೆಚ್ಚು ಮಹಿಳೆಯರು ಕ್ರಿಯಾಶೀಲ ಅನುಭವವನ್ನು ಅಭಿವ್ಯಕ್ತಪಡಿಸುವಲ್ಲಿ ಯಶಸ್ವಿಯಾಗುತ್ತಾರೆ. ಕೌಶಿಕನ್ನು ಧಿಕ್ಕರಿಸಿ ಅರಮನೆಯಿಂದ ಹೊರಬಂದ ಅಕ್ಕಮಹಾದೇವಿ ಪುರುಷಾಧಿಕಾರದ ವಿರುದ್ಧ ಧ್ವನಿಯೆತ್ತುತ್ತಾಳೆ. ಅಕ್ಕ ಇಲ್ಲಿ ಯಾವ ಪುರುಷ ಪ್ರಧಾನ ಸಮಾಜವು ಹೆಣ್ಣನ್ನು ದೇಹ ಕೇಂದ್ರಿತ ನೆಲೆಯನ್ನು ಪ್ರಧಾನವಾಗಿಸಿಕೊಂಡು ನೊಡುತದೆಯೋ ಅಂತಹ ದೇಹದ ಮೂಲಕವೇ ಉತ್ತರವನ್ನು ಕೊಡುವ ಪ್ರಯತ್ನವನ್ನು ಮಾಡುತ್ತಾಳೆ. ಅಕ್ಕನದು ಇಲ್ಲಿ ವೈಯಕ್ತಿಕ ಅಸ್ಮಿತೆಯ ಹುಡುಕಾಟವಾಗಿದೆ. ಹಾಗೆಯೇ ಮತ್ತೊಂದು ರೀತಿಯಲ್ಲಿ ಆಯ್ದಕ್ಕಿ ಲಕ್ಕಮ್ಮ ಕಾಯಕದ ಹಿನ್ನೆಲೆಯಲ್ಲಿ ವೈಚಾರಿಕ ಜ್ಞಾನವನ್ನು ಮೆರೆದಿದ್ದಾಳೆ.

" ಆಸೆ ಎಂಬುದು ಶಿವ ಭಕ್ತರಿಗುಂಟೇ ಅಯ್ಯ?
ರೋಷವೆಂಬುದು ಯಮದೂತಂಗಲ್ಲದೆ ಅಜಾತರಿಗುಂಟೇ?

ಈಸಕ್ಕಿಯಾಸೆ ನಿಮಗೇಕೆ।" ಈಶ್ವರನೊಪ್ಪ ಹೆಣ್ಣಿನ ಆಸೆಯ ಹಾಗೂ ಮಾಯೆಯ ರೂಪದಲ್ಲಿ ನೊಡಿದ್ದ ಜಗತ್ತಿಗೆ ಹೊಸ ಜ್ಞಾನಾನುಭವವನ್ನು ಮಹಿಳಾ ವಚನಕಾರ್ತಿಯರು ಕೊಡುತ್ತಾರೆ. ಜ್ಞಾನಮಗ್ನನಾಗಿರುವ ಮಾರಯ್ಯನಿಗೆ 'ಕಾಯಕ ನಿಂದಿತ್ತು ಹೋಗಯ್ಯ ಎನ್ನುತ್ತಾಳೆ' 'ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ ಹೋಗಿ ಸುರಿದು ಬನ್ನಿ' ಎಂದು ಲಕ್ಕಮ್ಮ ಹೇಳುವ ಮಾತುಗಳು 'ಆಸೆ ಎಂಬುದು ಅರಸಂಗೆ, ಶ್ರೀಮಂತರಿಗೆ, ಪುರೋಹಿತರಿಗೆ ಮಾತ್ರ ಹೊರತು ಶೀವಭಕ್ತರಿಗಲ್ಲ ಎನ್ನುವ ಗಟ್ಟಿ ಧ್ವನಿ ತೆಗೆಯುತ್ತಾಳೆ. ಶಿವ ಭಕ್ತರಿಗೆ ಆಸೆ ಆಮಿಷ್ಯವಿರಬಾರದು ಎಂದು ಹೇಳುತ್ತಾಳೆ.

ಆಧುನಿಕ ಕನ್ನಡ ಸಾಹತ್ಯದ ಸಂದರ್ಭಕ್ಕೆ ಬಂದಾಗ ಮಹಿಳೆಯರು ಮಾತು ಹಾಗೂ ಮೌನಗಳ ಮೂಲಕ ತೋರುವ ಪ್ರತಿಕ್ರಿಯೆಯು ವಿಶಿಷ್ಟವಾದುದು. ಮಾತು ಹಾಗೂ ಮೌನಗಳು ಬರವಣಿಗೆಯ ರೂಪ ಪಡೆದು 'ಸೃಜನಶೀಲ'ವಾದ ಕಥೆ, ಕಾದಂಬರಿ, ಕಾವ್ಯ ರೂಪ ಪಡೆದವು ತನ್ನ ಕಾಲದ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಾರೆ. ವೈದವ್ಯ, ಬಾಲ್ಯ ವಿವಾಹ, ಕೇಶಮುಂಡನ ಇಂತಹ ಸಾಂಪ್ರದಾಯಿಕ ಸಮಸ್ಯೆಗಳನ್ನು ತಮ್ಮ ಕಥೆ ಅಥವಾ ಕಾದಂಬರಿಗಳ ವಸ್ತುವನ್ನಾಗಿಸಿಕೊಂಡಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿದ್ದುಕೊಡ ಅಸ್ತಿತ್ವ ಹಾಗೂ ಅಭಿವ್ಯಕ್ತಿಯ ನೆಲೆಗಳನ್ನು ಎತ್ತಿ ಹಿಡಿಯುತ್ತಾರೆ.

ಹೀಗೆ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಸ್ಥೂಲವಾಗಿ ಗಮನಿಸಿದಾಗ ಹೆಣ್ಣಿನ ಜ್ಞಾನದ ಸ್ವರೂಪವು ಅಖಂಡವು ಮತ್ತು

ಅನುಭವ ಪ್ರಧಾನವೂ ಆಗಿದ್ದು ತಿಳಿದು ಬರುತ್ತದೆ. ಜ್ಞಾನದ ಸಾಂಸ್ಥಿಕ ರೂಪವು ಹೆಣ್ಣಿನ ಭಾಷೆ ಭಾವನೆ ಹಾಗೂ ಅಭಿವ್ಯಕ್ತಿಯ ರೂಪಗಳನ್ನು ಅವಳ ಅಸ್ತಿತ್ವವನ್ನು ಶಿಥಿಲಗೊಳಿಸಿದ ನೆಲೆಗಳು ಕನ್ನಡ ಸಾಹಿತ್ಯದ ಮತ್ತೊಂದು ಮಗ್ಗಲಿನ ಬಹುದೊಡ್ಡ ತಿಳುವಳಿಕೆಯ ಲೋಕವನ್ನು ಊನಗೊಳಿಸಿದ್ದು ಸ್ಪಷ್ಟವಾಗಿ ಕಾಣುತ್ತದೆ. ಈ ಅರ್ಥದಲ್ಲಿ ಹೆಣ್ಣಿನ ಜ್ಞಾನ ಹಾಗೂ ತಿಳುವಳಿಕೆಯ ನೆಲೆಗಳು ಒಂದು ಶಿಸ್ತಾಗಿ ಗಂಭೀರ ಅಧ್ಯಯನಕ್ಕೊಳಗಾಗಬೇಕಾದ ಜರೂರು ಇಂದು ಇದೆ.

ಮಾಸ್ತಿ ಕಥಾಸಾಹಿತ್ಯದ ವೈಶಿಷ್ಟ್ಯಗಳು

ಶಂಕ್ರಮ್ಮ.ಅ.ಹುಲಿಕಟ್ಟಿ.
ಸಂಶೋಧನಾ ವಿದ್ಯಾರ್ಥಿನಿ. ಡಾ.ಆರ್. ಸಿ. ಹಿರೇಮಠ ಕನ್ನಡ ಅಧ್ಯಯನಪೀಠ. ಕರ್ನಾಟಕ ವಿಶ್ವವಿದ್ಯಾಲಯ.
ಧಾರವಾಡ–೫೮೦೦೦೩ e-mail : hulikattiom@gmail.com

ಮಾಸ್ತಿ ವೆಂಕಟೇಶ ಅಯ್ಯಂಗಾರರು ಕನ್ನಡ ಸಾಹಿತ್ಯಲೋಕ ಕಂಡ ವಿಶಿಷ್ಟ ಪ್ರತಿಭೆಯ ಲೇಖಕರಾಗಿದ್ದಾರೆ. ಸಣ್ಣಕತೆಯ ಪ್ರಕಾರಕ್ಕೆ ಸರಿಬರಿಬಿಸಿದರಿಂತೆ ಅವರು ಅನುಪಮ ಸಾಧನೆ. ಸಣ್ಣಕತೆಯನ್ನು ಸಾಹಿತ್ಯಾಭಿವ್ಯಕ್ತಿಯ ಪ್ರಧಾನ ಮಾಧ್ಯಮವನ್ನಾಗಿ ಮಾಡಿಕೊಂಡು ಅದಕ್ಕೆ ತನ್ನ ಆದ ವೈಶಿಷ್ಟ್ಯವನ್ನು ಮಾಸ್ತಿ ತಂದುಕೊಟ್ಟಿದ್ದಾರೆ. ಅವರ ಕತೆಗಳು ಕನ್ನಡಸಾಹಿತ್ಯದಲ್ಲಿ ಸಣ್ಣಕತೆಯನ್ನು ತನ್ನದೇ ಆದ ವಿಶಿಷ್ಟ ಮಾಧ್ಯಮವನ್ನಾಗಿ ಸ್ಥಿರಗೊಳಿಸಿವೆ. ಐತಿಹಾಸಿಕ,ಸಾಮಾಜಿಕ, ಪೌರಾಣಿಕ, ಹೀಗೆ ಸಾವಿರಾರು ಪಾತ್ರಗಳು ಮಾಸ್ತಿಯವರ ಕತೆಗಳಲ್ಲಿ ಚಿತ್ರಣಗೊಂಡಿವೆ ಸಮಾಜದ ಬೇರೆ ಬೇರೆ ಮುಖಗಳಿಗೆ ಕನ್ನಡಿ ಹಿಡಿದಿಯುತ್ತವೆ. ಪುರಾಣ ಇತಿಹಾಸಗಳ ನಾಯಕ ನಾಯಕಿಯರಿಂದ ಹಿಡಿದು ತೀರ ಸಾಮಾನ್ಯ ವ್ಯಕ್ತಿಗಳವರೆಗೆ ಅವರ ಕತೆಗಳ ಪಾತ್ರವೈವಿಧ್ಯವಿದೆ. ಈ ಪಾತ್ರಗಳು ಜೀವನದ ಅನಂತಮುಖಗಳನ್ನು ಅವುಗಳ ಸ್ವಭಾವ ವೈಚಿತ್ರ್ಯಗಳನ್ನು ಹೃದಯಸ್ಪರ್ಶಿಯಾಗುವಂತೆ ನಿರೂಪಿಸುತ್ತವೆ. ವಸ್ತು ವೈವಿಧ್ಯತೆ,ಜೀವನದೃಷ್ಟಿ ,ತಂತ್ರ, ಪ್ರಯೋಗಶೀಲತೆ, ಭಾಷೆ ಮತ್ತು ಶೈಲಿಯ ದೃಷ್ಟಿಯಿಂದ ಮಾಸ್ತಿ ಕಥಾಸಾಹಿತ್ಯ ತನ್ನದೇ ಆದ ಛಾಪನ್ನು ಸಾಹಿತ್ಯ ಕ್ಷೇತ್ರದಲ್ಲಿ ಮೂಡಿಸಿವೆ. ಜೀವನಾಶಯ ಹಾಗೂ ಮಾನವೀಯತೆ ಮಾಸ್ತಿಯವರ ಕತೆಗಳ ವಿಶೇಷ ಗುಣಗಳಾಗಿದ್ದು ಪ್ರಸ್ತುತ ಲೇಖನದಲ್ಲಿ ಅವರ ಕಥಾಸಾಹಿತ್ಯದ ವೈಶಿಷ್ಟ್ಯಗಳನ್ನು ಕುರಿತು ವಿವೇಚಿಸಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಒಬ್ಬ ಪ್ರಮುಖ ಲೇಖಕ ಮಾಸ್ತಿ ವೆಂಕಟೇಶ ಅಯ್ಯಂಗಾರರು. ಮೊದಲು ಸಣ್ಣ ಕತೆಗಳನ್ನು ಬರೆದವರು ಅವರಲ್ಲವಾದರೂ ಅದನ್ನೊಂದು ಸಮರ್ಥ ಮಾಧ್ಯಮವನ್ನಾಗಿ ದುಡಿಸಿಕೊಂಡವರಲ್ಲಿ ಮಾಸ್ತಿ ಪ್ರಮುಖರಾಗಿದ್ದಾರೆ.

ತಂತ್ರ : ತಂತ್ರದ ದೃಷ್ಟಿಯಿಂದ ಮಾಸ್ತಿಯವರ ಕತೆಗಳ ಮೊದಲ ಸಂಗ್ರಹ ಗಮನಾರ್ಹವಾದುದು.ಕೆಲವು ಕತೆಗಳಲ್ಲಿ ಕತೆ ಹೇಳುವವನು ಕ್ರಿಯೆಯ ಅಂಚಿನಲ್ಲಿ ನಿಂತ ಹಿರಿಯ; ಅನೇಕ ಕತೆಗಳಲ್ಲಿ ಸರ್ವಸಾಕ್ಷಿ ಕತೆಗಾರ, ನಮ್ಮ ಮೇಷ್ಟರು ಕಥೆಯ ಬಹುಭಾಗದಲ್ಲಿ ಕತೆ ಹೇಳುವವಳು ಬೆಳೆದ ಸ್ತ್ರೀ.ತನ್ನ ಬಾಲ್ಯದ ನೆನಪನ್ನು ಚಿತ್ತರಿಸುತ್ತಿದ್ದಾಳೆ. ಕಡೆಯ ಭಾಗದಲ್ಲಿ ಅವಳ ವರ್ತಮಾನ ಕಾಲಕ್ಕೆ ಬರುತ್ತಾಳೆ.ಈ ಭಾಗದಲ್ಲಿ ಇದ್ದಕ್ಕಿದ್ದಂತೆ ಮೇಷ್ಟರು ಅವರ ಹೆಂಡತಿಯನ್ನು ತೀರ ಹೊಸದಾದ ದೃಷ್ಟಿಯಿಂದ ಕಾಣುತ್ತೇವೆ. ಅವರ ಪಾತ್ರಗಳಿಗೆ ಹೊಸ ಆಯಾಮಗಳು ಬರುತ್ತವೆ.

'ರಂಗಪ್ಪನ ದೀಪಾವಳಿಯಲ್ಲಿ ಹೇಳಲು ಸಾಧ್ಯವಾಗುವಂತಹ ಕಥೆ ಇಲ್ಲ. ಈ ಕಥೆಯಲ್ಲಿ ಚೌಕಟ್ಟಿನೊಳಗೊಂದು ಚೌಕಟ್ಟು. ವಯಸ್ಸಾದ ಶಾಮಣ್ಣ ಎಳೆಯ ದಂಪತಿಗಳ ಜಗತ್ತನ್ನು ನೋಡುವಂತೆ ತೀರ ಮುಗ್ಧೆಯೂ ಅಲ್ಲದ ಎಲ್ಲ ಅರ್ಥವಾಗುವವಳೂ ಅಲ್ಲದ ಅಮ್ಮಯ್ಯನೂ ಆ ಜಗತ್ತನ್ನು ನೋಡುತ್ತಾಳೆ. ಈ ಕಥೆಯಲ್ಲಿ ವಾಚಾಳಿತನ ಸ್ವಲ್ಪ ಹೆಚ್ಚೆ ಆಯಿತೆನ್ನಿಸಿದರೂ ಯುವ ದಂಪತಿಗಳ ಜಗತ್ತು ವಯಸ್ಸಾದವರ ಜಗತ್ತು ಎರಡೂ ಪ್ರೀತಿಯಲ್ಲಿ ಮಿಂದು ಇಡೀ ಕತೆ ಉಲ್ಲಾಸವನ್ನು ಬೀರುತ್ತದೆ.

ಪ್ರಯೋಗಶೀಲತೆ : ಮಾಸ್ತಿಯವರ ಪ್ರಯೋಗಶೀಲತೆ ಅವರ ಹೇಮಕೂಟದಿಂದ ಬಂದಮೇಲೆ ಹಾಗೂ ಕಾಕಲೋಕ ಕತೆಗಳಲ್ಲಿ ವ್ಯಕ್ತವಾಗಿದೆ.ಹೇಮಕೂಟದಿಂದ ಬಂದಮೇಲೆ ಆಶಯದಲ್ಲಿ ನವ್ಯ ಕತೆಗೆ ತೀರ ಹತ್ತಿರವಾದ ಕೃತಿ. ಮನುಷ್ಯನ ಜೀವನದಲ್ಲಿ ಕಾಲ ಎಷ್ಟು ಪ್ರಭಾವಶಾಲಿಯಾಗಿದೆಯೆನ್ನುವುದಕ್ಕೆ ಈ ಕತೆ ಉದಾಹರಣೆ ಕತೆಯ ಲಕ್ಷವೆಲ್ಲ ಶಕುಂತಲೆಯಲ್ಲಿ ಕೇಂದ್ರೀಕೃತವಾಗಿದೆ. ಶಕುಂತಲೆ ಈಗ ದುಷ್ಯಂತನ ರಾಣಿ. ಮಗನನ್ನೊಡಗೂಡಿ ತವರಿಗೆ ಮರಳಿದ್ದಾಳೆ. ಅವಳ ಸಂಕಟಗಳೆಲ್ಲ ಪರಿಹಾರಗೊಂಡಿವೆ. ಆದರೂ ಒಂದು ರೀತಿಯ ವಿಷಾದ ಅವಳ ಮನಸ್ಸನ್ನಾವರಿಸಿದೆ. ಪ್ರಪಂಚ ಇಂದು ಅಂದಿದ್ದಂತೆಯೇ ಇದೆ ಎಂದು ಶಕುಂತಲೆಗೆ ತೋರಿತು. ಆದರೆ ಅಂದಿನ ಉಲ್ಲಾಸ ತಿರುಗಿ ಅವಳ ಮನಸ್ಸಿನಲ್ಲಿ ಮೂಡಲಿಲ್ಲ ಒಂದು ರೀತಿಯ ಪರಕೀಯತೆಯ ಅನುಭವ ಅವಳನ್ನು ಕಾಡುತ್ತದೆ.ಅವಳ ಮನಸ್ಸಿನಲ್ಲಿ ಮೂಡಲಿಲ್ಲ..ಒಂದು ರೀತಿಯ ಪರಕೀಯತೆಯ ಅನುಭವ ಅವಳನ್ನುಕಾಡುತ್ತದೆ. ಅವಳ ಅಂದಿನ ಬಾಳು ಯಾರದೋ ಬೇರೊಬ್ಬರ ಬಾಳೆಂಬಂತೆ ಕಂಡಿತು.ತನ್ನ ಸಾಕುತಾಯಿ,ತಂದೆ,ಗೆಳತಿಯರು ಇವರೆಲ್ಲರ ನಡುವೆಯೂ ಅವಳು ಈಗ ಏಕಾಕಿಯಾಗಿದ್ದಾಳೆ.ಈ ಕತೆಗೂ ಗೌತಮಿಹೇಳಿದ ಕತೆಗೂ ಆಕರ ಒಂದೇ ಆದರೂ ಅವುಗಳ ಸ್ವರೂಪ ಮಾತ್ರ ಬೇರೆ ಬೇರೆಯಾಗಿವೆ.

ಕಾಕಲೋಕದ ಆಕೃತಿ ಅಲಿಗರಿಗೆ ತೀರ ಹತ್ತಿರವಾದದ್ದು.ಈ ಕತೆಯಲ್ಲಿ ಭಾವನೆಯ ತೀವ್ರತೆಯಿದೆ. ಪುಟ್ಟಹಕ್ಕಿಯ ಸಂಸಾರವೊಂದನ್ನು ಕಾಗೆಗಳು ನಾಶಮಾಡುವ ಸನ್ನಿವೇಶದಲ್ಲಿ ಹಿಂಸೆಯ ಲೋಕವೇ ನಿರೂಪಕನಿಗೆ ತೆರೆದುಕೊಳ್ಳುತ್ತದೆ.ನನಗೆ ಸಹಿಸಲಾರದಷ್ಟು ದುಃಖ ಬಾಯಿ ತೆರೆಯಲಾಗಲಿಲ್ಲ ಹಾಗೆಯೇ ಕಾಗೆಗಳ ಮೇಲೆ ಹಿಡಿಯಲಾರದ ಕೋಪ.

ನಾನು ಕಿರಿಯನಾಗಿದ್ದರೆ ಪ್ರಾಯಶಃ ಹಲಸಿನ ಮರವನ್ನೇರಿ ಆ ಕಾಗೆಯ ಗೂಡನ್ನು ಕಿತ್ತು ಮೊಟ್ಟೆಗಳನ್ನು ಕೆಳಗೆಸೆದು ಸೇಡು ತೀರಿಸಿಕೊಳ್ಳುತ್ತಿದ್ದೆನು. ನಿರೂಪಕನಿಗೆ ಕಾಕಲೋಕಕ್ಕೂ ಮನುಷ್ಯ ಲೋಕಕ್ಕೂ ಅಂತರ ಕಾಣುವುದಿಲ್ಲ. ನಮಗಿಂತ ಗುಣವಂತ ಮನುಷ್ಯ ಎಂದರೆ ಮನುಷ್ಯನಿಗೆ ಅಂಥವನ ಮೇಲೆ ದ್ವೇಷ.ಪಕ್ಷಿಗಳು ಮನುಷ್ಯರಂತೆಯೇ ಇರಬೇಕು. ಹಕ್ಕಿಗಳನಿರಾಸೆ, ಎದೆಯ ಶೂನ್ಯ ನನ್ನ ಬಾಳು ನನ್ನೆದೆಯನ್ನು ತುಂಬಿ ಕವಿದವು. ಇದು ಕತೆಯ ಕೊನೆಯ ವಾಕ್ಯ.

ವಸ್ತು ವೈವಿಧ್ಯ: ಮಾಸ್ತಿಯವರ ಆನೇಕ ಕತೆಗಳಲ್ಲಿ ಪ್ರಧಾನವಸ್ತು. ವಿವಿಧ ಮನೋಧರ್ಮದ ನೂರಾರು ಹೆಣ್ಣು ಪಾತ್ರಗಳನ್ನು ಮಾಸ್ತಿ ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. ಎಲ್ಲ ಬಗೆಯ ಸರಳೀಕರಣ, ಆದರ್ಶೀಕರಣಗಳನ್ನು ಬದಿಗೊತ್ತಿ ಮಾಸ್ತಿ ಹೆಣ್ಣುಗಳನ್ನು ಜೀವಂತ ಪಾತ್ರಗಳಾಗಿ ಚಿತ್ರಿಸಿದ್ದಾರೆ.ಹೀಗಾಗಿ ಸ್ತ್ರೀಯರು ಮಾಸ್ತಿಯವರ ಕತೆಗಳಲ್ಲಿ ಸಂಕೇತ, ಪ್ರತಿಮೆಗಳಲ್ಲಿ ಕಳೆದು ಹೋಗದೇ ರಕ್ತ ಮಾಂಸಗಳಿಂದ ತುಂಬಿದ ಮನುಷ್ಯರೆಂಬಂತೆ ಕಾಣುತ್ತಾರೆ. ಇವರಲ್ಲಿ ಮುಗ್ಧರು, ಪ್ರಬುದ್ಧರು, ಒಳ್ಳೆಯವರು ಅಷ್ಟು ಒಳ್ಳೆಯರಲ್ಲದವರು ಎಲ್ಲರೂ ಸೇರುತ್ತಾರೆ ವಿವಿಧ ಮನುಷ್ಯ ಸಂದರ್ಭಗಳಲ್ಲಿ ಇವರ ಅಂತರಂಗದ ನೂರು ಭಾವನೆಗಳು ನೂರು ರೀತಿಯಲ್ಲಿ ಚೆಲ್ಲಿಕೊಳ್ಳುತ್ತವೆ. ಹೆಣ್ಣಿನ ಬಗ್ಗೆ ಅಪಾರವಾದ ಸಹಾನುಭೂತಿಯಿದ್ದೂ ಹೆಣ್ಣುಗಳನ್ನು ಕೇವಲ ಪ್ರತೀಕಗಳೆಂಬಂತೆ ದುಡಿಸಿಕೊಳ್ಳದಿರುವುದು ಮಾಸ್ತಿಯವರ ಕತೆಗಳ ಒಂದು ವಿಶೇಷ ಗುಣ. ನಮ್ಮ ಮೇಷ್ಟರು, ಮೇಲೂರಿನ ಲಕ್ಷ್ಮಮ್ಮ, ಕೃಷ್ಣಮೂರ್ತಿಯ ಹೆಂಡತಿ, ನಳಿನಿಯ ತಂದೆ, ದುರದೃಷ್ಟದ ಹೆಣ್ಣು, ಚೆನ್ನಮ್ಮ, ಸನ್ಯಾಸವಲ್ಲದ ಸನ್ಯಾಸ, ಚಟ್ಟೀಕಾರ ತಾಯಿ,ಸೋರಲೀ ಪ್ರಸಂಗ,ಕಾಮನ ಹಬ್ಬದ ಒಂದು ಕತೆ, ಸಾರಿಪುತ್ರನ ಕಡೆಯ ದಿನಗಳು ಮೊದಲಾದ ಕತೆಗಳಲ್ಲಿ ಹೆಣ್ಣಿನ ಬವಣೆಯ ಪ್ರಸ್ತಾಪ ಇದೆ. ಹೆಣ್ಣು ಇವರ ಎಲ್ಲ ಕತೆಗಲಲ್ಲೂ ಕಣ್ಣೀರು ಸುರಿಸುವ ಅಸಹಾಯಕಳಲ್ಲ, ಕೆಲವುಕತೆಗಳಲ್ಲಿ ಆಕೆ ಗಂಡಸಿನಂತೆ ಎಲ್ಲ ಜವಾಬ್ದಾರಿಯನ್ನೂ ಹೊತ್ತು,ಎಲ್ಲವನ್ನೂಎದುರಿಸಿ ನಿಲ್ಲಬಲ್ಲ ಕೆಚ್ಚೆದೆಯವಳೂ ಹೌದು.ಮತ್ತೆ ಕೆಲವು ಕತೆಗಳಲ್ಲಿ ತನ್ನ ಗಂಡನ್ನು ತಿರಸ್ಕರಿಸುವವಳೂ ಹೌದು. ಮಾಸ್ತಿ ಹೆಣ್ಣಿನ ಬಗ್ಗೆ ಅಪಾರ ಗೌರವ ಸಹಾನುಭೂತಿ ಹೊಂದಿದ್ದೂ ಭಾವುಕರಾಗುವುದಿಲ್ಲ ಎಂಬುದಕ್ಕೆ ಈ ವೈವಿಧ್ಯವೇ ಒಂದು ಸಾಕ್ಷಿಯಾಗಿದೆ.

ಮಾಸ್ತಿ ಅನೇಕ ವರ್ಷಗಳ ಕಾಲ ಆಡಳಿತಾತ್ಮಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದವರು ಹೀಗಾಗಿ ಅವರ ಅನೇಕ ಕತೆಗಳಲ್ಲಿ ಆಡಳಿತ ವ್ಯವಸ್ಥೆಗಳ, ನ್ಯಾಯ ತೀರ್ಮಾನಗಳ ಪ್ರಸ್ತಾಪ ಪ್ರಧಾನವಾಗಿ ಬರುತ್ತದೆ. ಅಧಿಕಾರಶಾಹಿಯನ್ನು ಮಾಸ್ತಿ ಹತ್ತಿರದಿಂದ ಕಂಡವರಾಗಿದ್ದರಿಂದ ಅವರ ಅನೇಕ ಕತೆಗಳಲ್ಲಿ ಅದರ ದಟ್ಟ ಚಿತ್ರಣವನ್ನು ನೀಡುತ್ತಾರೆ. ಬಾದಷಹನ ನ್ಯಾಯ, ಜೋಗ್ಯೋರ ಅಂಜಪ್ಪನ ಕೋಳಿ ಕತೆ, ಪಂಡಿತನ ಮರಣಶಾಸನ, ಇಲ್ಲಿಯ ತೀರ್ಪು,ಬಾದಷಹನ ದಂಡನೆ, ಮೊಸರಿನ ಮಂಗಮ್ಮ, ಸುಬೇದಾರರಿಗರ ಪ್ಯಾದೆ ಮಾತು, ವೆಂಕಟಶಾಮಿಯ ಪ್ರಣಯ,ಟಾಂಗಾ ಹುಸೇನ,ಪದವಿಯ ಅಪಾಯ, ಬೈಚೇಗೌಡ, ಉಗ್ರಪ್ಪನ ಉಗಾದಿ ಮುಂತಾದ ಕತೆಗಳಲ್ಲಿ ಆಡಳಿತ ವ್ಯವಸ್ಥೆ ಹೇಗಿರಬೇಕು ಅದು ಅಮಾನವೀಯವಾದರೆ ಏನಾಗುತ್ತದೆ ಎನ್ನುವ ಮಾಸ್ತಿಯವರ ನಂಬಿಕೆಗಳು ಮೂಡಿಬರುತ್ತವೆ.

ವಿಜ್ಞಾನ ವಿವೇಚನೆಯ ಸ್ವಾರಸ್ಯದ ಸಾರಾಂಶ

ಶ್ರೀ. ರೆಹಮಾನ ಆಯ್. ಗೊರಜನಾಳ

ಸಂಶೋಧನಾ ವಿದ್ಯಾರ್ಥಿ, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩.
rahimangorajanal28@gmail.com

'ವಿಶ್ವದ ವಿವಿಧ ವಿಷಯಿಗಳ ವಿಶಿಷ್ಟ ಸಂಗಮವೇ "ವಿಜ್ಞಾನ" ಅಗೋಚರವು ಜ್ಞಾನಗೋಚರ ಆಗುವುದೇ ವಿಜ್ಞಾನ. ಭಾವನೆಯಿಲ್ಲಿ, ಅಂತರಾಲಗವಲ್ಲಿ ಕಾಣುವ ಜ್ಞಾನದ ಅಂಕಗಳನ್ನು ವಿಜ್ಞಾನದ ಕ್ರಿಯೆಗೆ ಒಳಪಡಿಸಿದಾಗಲೇ ಅದು ಬಹಿರಂಗಕ್ಕೆ ಗೋಚರಿಸುವುದಾಗಿದೆ. ಜ್ಞಾನದ ಕ್ರಿಯಾಸ್ವರೂಪವೇ ವಿಜ್ಞಾನ. ಅದ್ಭ–ರಿಂದ ಜ್ಞಾನವು ವಿಜ್ಞಾನದ ಮೂಲವೆನಿಸಿ ಹೇಳಲಾಗುತ್ತಿದೆ. ಮನುಷ್ಯನ ಬದುಕಿನಲ್ಲಿ ವಿಜ್ಞಾನದ ಹೊಸ–ಹೊಸ ಆವಿಷ್ಕಾರಗಳು ಉತ್ತಾರಿತಿಯನ್ನುರಿಚು ಮಾಡುವುದರೊಂದಿಗೆ ಅತ್ಯುಪಯುಕ್ತ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ವಿಜ್ಞಾನದ ಆವಿಷ್ಕಾರದಿಂದ ಇಂದು ಬದುಕು ಬಹುವೇಗವಾಗಿ ಬದಲಾಗುತ್ತಿದೆ. ಹಲವು ರೀತಿಯ ಯಂತ್ರಗಳ ಸಹಾಯದಿಂದ ಬದುಕು ಶ್ರೀಮಂತವಾಗುತ್ತಿದೆ, ಸುಖಮಯವಾಗುತ್ತಿದೆ.

ಒಟ್ಟಾರೆಯಾಗಿ ವಿಜ್ಞಾನವು ವಾಸ್ತವದೊಂದಿಗೆ ಸುಖಜೀವನ ನಡೆಸಲು ಅನುಕೂಲ ಮಾಡಿಕೊಟ್ಟಿದೆ. ವಿಜ್ಞಾನದ ಸಂಶೋಧನೆಯು ಸಾಮಾನ್ಯಿಗಳಿಂದ ಮಾನವನ ಏಳಿಗೆಗೆ ಮತ್ತು ಯಂತ್ರೋಪಕರಣಗಳ ಅಭಿವೃದ್ಧಿಯು ಆಗಿದೆ. ಕೈಗಾಲಿಕೆಯಲ್ಲಿ ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗಿದೆ. ಇದರಿಂದ ಬದಲಾಗುತ್ತಿರುವ ಜಗತ್ತಿನಲ್ಲಿ ವಿಜ್ಞಾನದ ಕೊಡುಗೆಯು ಮಹತ್ವದ್ದಾಗಿದೆ. ಡಾ.ಕೆ.ಎಸ್.ನಿಸಾರ ಅಹ್ಮದ ಅವರ ವಿಜ್ಞಾನದ ವಿಚಾರಗಳು ನಮಗೆ ಲೇಖನಗೆಗೆ ಅಚ್ಚುತ್ತವೆ. ಜ್ಞಾನಸಂಪಾದನೆಗೆ ತೊಡಗಿಸುತ್ತವೆ. ಅದರಂತೆಯೇ ಎಂ.ಅಬ್ದುಲ್ ರೆಹಮಾನ್ ಪಾಷ ಅವರ ವಿಜ್ಞಾನ ಪ್ರಯೋಗಗಳು ನಮ್ಮಲ್ಲಿ ಆಸಕ್ತಿಯನ್ನು ಕೆರಳಿಸುತ್ತವೆ. ಪ್ರಯೋಗ ಮಾಡುವಂತೆ ನಮಗೆ ಹುಚ್ಚುತ್ತವೆ. ಆದರಿಂದ ವಿಜ್ಞಾನವು ಸದಾ ಕಲಿಯುವ ಕಲಿಸುವ ಭವಿಷ್ಯತ್ತಿನಲ್ಲಿ ಒಳ್ಳೆಯದಾಗುವ ನಿರೀಕ್ಷೆ ನೀಡುತ್ತದೆ. ವಿಜ್ಞಾನದಿಂದ ಅವಗಢಗಳು ಸಂಭವಿಸಿವೆ. ತಪ್ಪಾಗಿ ಕಾರ್ಯಕ್ಕೆ ಬಳಕೆ ಮಾಡಿಕೊಂಡಿವೆ. ಆದರೂ ಸಕಾರಾತ್ಮಕವಾಗಿ ವಿಜ್ಞಾನ ಬಳಕೆ ಮಾಡುವುದು ಆಗಿದೆ. ವಿಜ್ಞಾನದ ಮಹತ್ವವನ್ನು ಅಭ್ಯಯನದಿಂದ ಅರಿಯಬಹುದಾಗಿದೆ.

ಪೀಠಿಕೆ: ಜಗತ್ತಿನಲ್ಲಿ ಅಡಗಿರುವ ರಹಸ್ಯವನ್ನು ಬೇಧಿಸಲು ಹೊರಟ ವಿಜ್ಞಾನ ಒಂದು ನೆಲೆಯಲ್ಲಿ ನಿಂತುಬಿಡುತ್ತದೆ. ಆದರೆ ಅದನ್ನು ಅಲ್ಲಿಂದ ಮುಂದೆ ಅರಿಯುವುದಕ್ಕೆ ಸಾಹಿತ್ಯ ನೆರ'ವು ನೀಡುತ್ತದೆ. ಸಾಹಿತ್ಯ ಮತ್ತು ವಿಜ್ಞಾನ ಪರಸ್ಪರ ವಿರುದ್ಧ ನೆಲೆಯಾಗಿವೆ. ಆದರೆ ಇವುಗಳ ಸಂಬಂಧ ಒಂದಕ್ಕೊಂದು ವಿರುದ್ಧವಾಗಿದ್ದಂತೆ ಮೇಲ್ನೋಟಕ್ಕೆ ಕಂಡುಬರುತ್ತವೆ. ಆದರೆ ಸೂಕ್ಷ್ಮವಾಗಿ ಕಂಡು ನೋಡಿದರೆ ಇವುಗಳ ಸಂಬಂಧಗಳನ್ನು ಗುರುತಿಸಬಹುದಾಗಿದೆ. "ಸಾಹಿತ್ಯ ಮತ್ತು ವಿಜ್ಞಾನದ ಜೀವನದ ಎರಡು ಕಣ್ಣುಗಳಂದಂತೆ ಎರಡು ಕೈಗಳದಂತೆ ಎಂದು ವರ್ಣಿಸಿರುವುದು ಉಂಟು. ಒಂದು ಬದುಕಿನ ಬಹಿರ್ ಪ್ರಪಂಚಕ್ಕೆ ಸಂಬಂಧಿಸಿದ್ದಾರೆ. ಇನ್ನೊಂದು ಅಂತರಂಗ ಜಗತ್ತಿಗೆ ಸಂಬಂಧಿಸಿದ್ದು" ಎಂದು ಒಂದು ಬುದ್ಧಿಯನ್ನು ಅವಲಂಬಿಸಿದರೆ ಇನ್ನೊಂದು ಭಾವವನ್ನು ಅವಲಂಬಿಸಿದೆ ಎಂದು ತಿಳಿದುಬರುತ್ತದೆ.

ಈ ವಿಜ್ಞಾನ ವಿವೇಚನೆಯ ಸ್ವಾರಸ್ಯವನ್ನು ನಾವು ನಾಡೋಜ ಡಾ.ಕೆ.ಎಸ್.ನಿಸಾರ ಅಹಮ್ಮದ ಮತ್ತು ಅಬ್ದುಲ ರೆಹಮಾನ ಪಾಷ ಅವರ ವಿಷಯಗಳಂದ ಅರಿಯುವುದಾಗಿದೆ. ಇವರು ವಿಜ್ಞಾನದ ವಿವಿಧ ಮಜಲುಗಳನ್ನು ಪರಿಚಯಿಸುತ್ತಾರೆ. ಇಂದಿನ ವಾಸ್ತವಿಕೆತೆಯನ್ನು ಪ್ರಾಯೋಗಿಕ ರೀತಿಯಿಂದ ತಿಳಿಸುತ್ತಾರೆ. ವಿಜ್ಞಾನದ ಇಂದಿನ ಗ್ರಹಿಕೆ ಯಾವ ಸ್ಥಿತಿಗತಿಯನ್ನು ಪಡೆದಿದೆ ಎಂದು ತಿಳಿಸುತ್ತಾರೆ. ವಿಜ್ಞಾನದ ಅವಿಷ್ಕಾರದಿಂದ ಬದುಕಿನ ದಿಕ್ಕನ್ನು ಮಾರ್ಪಡಿಸಿದೆ ಅಲ್ಲ ಇಂದು ಮಾನವನ ಚಿಂತನೆಯ ದಿಕ್ಕು ಬದಲಾಗಿದೆ. ಸಾಹಿತ್ಯದ ಮೇಲೂ ತೀವ್ರ ಪರಿಣಾಮ ಬೀರುತ್ತಿದೆ.

2) **ವಿಜ್ಞಾನದ ಅರ್ಥೈಯಿಸುವಿಕೆ** : ಪ್ರಪಂಚದ ಯಾವ ವಸ್ತುವೇ ಆಗಲಿ, ಯಾವ ಕ್ರಿಯೆ–ಪ್ರಕ್ರಿಯೆಯೇ ಆಗಲಿ, ಇದು, ಅದು ಎನ್ನದೇ ಎಲ್ಲವೂ ವಿಜ್ಞಾನವೇ. 'ವಿಜ್ಞಾನವೇ. 'ವಿ' ಚಿತ್ರವಾದ ವಿಶೇಷವಾದ 'ವಿ'ಸ್ತಾರವಾದ ಜ್ಞಾನವೇ "ವಿಜ್ಞಾನ". 'ವಿಶ್ವದ ವಿವಿಧ ವಿಷಯಗಳ ವಿಶಿಷ್ಟ ಸಂಗಮವೇ "ವಿಜ್ಞಾನ" ಅಗೋಚರವು ಜ್ಞಾನಗೋಚರ ಆಗುವುದೇ ವಿಜ್ಞಾನ. ಭಾವನೆಯಲ್ಲಿ, ಅಂತರಂಗದಲ್ಲಿ ಕಾಣುವ ಜ್ಞಾನದ ಅಂಕಗಳನ್ನು ವಿಜ್ಞಾನದ ಕ್ರಿಯೆಗೆ ಒಳಪಡಿಸಿದಾಗಲೇ ಅದು ಬಹಿರಂಗಕ್ಕೆ ಗೋಚರಿಸುವುದಾಗಿದೆ. ಜ್ಞಾನದ ಕ್ರಿಯಾಸ್ವರೂಪವೇ ವಿಜ್ಞಾನ. ಆದ್ದರಿಂದ ಜ್ಞಾನವು ವಿಜ್ಞಾನದ ಮೂಲವೆಂದು ಹೇಳಲಾಗುತ್ತಿದೆ. ಮನುಷ್ಯನ ಬದುಕಿನಲ್ಲಿ ವಿಜ್ಞಾನದ ಹೊಸ–ಹೊಸ ಆವಿಷ್ಕಾರಗಳು ಉತ್ಕ್ರಾಂತಿಯನ್ನುಂಟು ಮಾಡುವುದರೊಂದಿಗೆ ಅತ್ಯುಪಯುಕ್ತ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ವಿಜ್ಞಾನದ ಆವಿಷ್ಕಾರದಿಂದ ಇಂದು ಬದುಕು ಬಹುವೇಗವಾಗಿ ಬದಲಾಗುತ್ತಿದೆ. ಹಲವು ರೀತಿಯ ಯಂತ್ರಗಳ ಸಹಾಯದಿಂದ ಬದುಕು ಶ್ರೀಮಂತವಾಗುತ್ತಿದೆ, ಸುಖಮಯವಾಗುತ್ತಿದೆ.

3) ವಿಜ್ಞಾನದ ಕುರಿತು ವ್ಯಾಖ್ಯಾನಗಳು: 1) ಸತ್ಯ, ಪ್ರೇಮ, ಯಥಾರ್ಥ ಜ್ಞಾನಾನುರಾಗವೇ ವೈಜ್ಞಾನಿಕ ದೃಷ್ಟಿಯ ಮುಖ್ಯ ಲಕ್ಷಣ. ಯಥಾರ್ಥ ಜ್ಞಾನವೆಂದರೆ ಇದ್ದ ವಿಷಯಗಳನ್ನು ಇದ್ದ ಹಾಗೆಯೇ ತಿಳಿದುಕೊಳ್ಳುವುದು. ಕಂಡದ್ದನ್ನು ಕಂಡ ಹಾಗೆಯೇ ಹೇಳುವ ಪ್ರಾಮಾಣಿಕ ಧೈರ್ಯ ತೋರುವುದು. 2) ವಿಜ್ಞಾನವೆಂದರೆ ಪ್ರಕೃತಿ ವ್ಯಾಪಾರಗಳ ಮೇಲೆ ಮನುಷ್ಯ ಸ್ಥಾಪಿಸುವ ಯಜಮಾನಿಕೆ ಹಾಗೂ ಅವುಗಳ ಬುದ್ಧಿಗಮ್ಯ ಜ್ಞಾನವೆಂದೂ, ನೈಸರ್ಗಿಕ ಆಗುಹೋಗುಗಳ ಮತ್ತು ಅವುಗಳ ನಡುವಣ ಅನ್ಯೋನ್ಯ ಸಂಬಂಧಗಳನ್ನು ಕುರಿತು ಸುವ್ಯವಸ್ಥಿತವೂ ಕ್ರಮಾಗತವೂ ಆದ ವೈಚಾರಿಕ ತಿಳವು ವಿಜ್ಞಾನ ಎಂಬ ವ್ಯಾಖ್ಯಾತನತೆಯನ್ನು ನೀಡುತ್ತದೆ. 3) "ಹಿಂದೆ ಪ್ರಾಯೋಗಿಕ ವಿಧಾನವಾಗಿತ್ತು. ಭೌತಜಗತ್ತಿನ ವ್ಯವಸ್ಥಿತವಾದ ವಿಶ್ಲೇಷಣಾತ್ಮಕ ಅಧ್ಯಯನ, ತಿಳುವಳಿಕೆಯನ್ನು ಆ ಹೆಸರಿನಿಂದ ಕರೆಯಬಹುದಿತ್ತು. ಇನ್ನೂ ಸ್ವಲ್ಪ ಮುಂದುವರೆದು ಅನುಭವ ಪ್ರಾಮಾಣ್ಯವಿರುವ ಅವಲೋಕನ, ಸಮೀಕ್ಷೆಗಳು ತಾಳುವ ತರ್ಕ ಸಮ್ಮತ ನಿರ್ಣಯಗಳ ಮುಖೇನ ಸತ್ಯ ಸ್ಪರ್ಶ ಮಾಡುವ ಪ್ರಕ್ರಿಯೆಯನ್ನು ವಿಜ್ಞಾನ" ಎಂದು ಕರೆಯಬಹುದು. 4) 'ಜಡವಾದ ಅಣುವಿನಿಂದ ಹಿಡಿದು ಚೇತನರೂಪೀ ಆತ್ಮದವರೆಗೆ ತೃಣ–ಕಾಷ್ಟಗಳಂದ ಹಿಡಿದು ವೇದ–ವೇದಾಂತಗಳವರೆಗೆ ದೈವೀಕಲ್ಪನೆಯವರೆಗೆ ಗುಟ್ಟಿನ ಹುಟ್ಟಿನಿಂದ ಅಂತ್ಯವೇ ಇಲ್ಲದ ನಿರಂತರ ಬೆಳವಣಿಗೆ ಗತಿಶೀಲ ಪ್ರಗತಿವರೆಗೆ ಎಲ್ಲವೂ ವಿಜ್ಞಾನ'ದ ವಿಚಾರಕ್ಕೆ ಒಳಪಡುತ್ತವೆ ಎಂದು ಹೇಳಬಹುದು.

4) ಪ್ರೊ. ಕೆ.ಎಸ್. ನಿಸಾರ ಅಹಮದ್ ಅವರ ವಿಜ್ಞಾನ ವಿವೇಚನೆ:

*** ವಿಜ್ಞಾನ ಪದದ ಸುರಳ:** ವಿಜ್ಞಾನ ಪದವು ಸರ್ವವ್ಯಾಪ್ತಿಯ ಗ್ರಹಿತೆಯನ್ನು ಬೇಡುವ ಪದವಾಗಿದೆ. ಇದು ಶಾಖೋಪಶಾಖೆಯನ್ನು ಒಳಗೊಂಡಿದೆ. ಕೊನೆಗೂ ಅಮೂರ್ತ ಭಾವನೆಯನ್ನು ಮನಸ್ಸಿನಲ್ಲಿ ಉಳಯುವಂತೆ ಮಾಡುತ್ತದೆ. ಈ ಕಳೆದ ಒಂದೆರೆಡು ಶತಮಾನದಿಂದೀಚೆಗೆ ಹಿಂದಿನ ಮತ್ತು ಇಂದಿನ ವಿಜ್ಞಾನದ ಸರಳ ಸ್ವರೂಪಕ್ಕೂ ಸಂಕೀರ್ಣ ರೂಪಕ್ಕೂ ಸಂಬಂಧವಿಲ್ಲ ಏನೋ ಎಂಬಂತೆ ಮುಂದುವರೆದಿದೆ. ವಿಜ್ಞಾನವನ್ನು ಪ್ರಾಯೋಗಿಕ ವಿಧಾನ. ವಿಶ್ಲೇಷಣಾತ್ಮಕ ಅಧ್ಯಯನ, ಭೌತಿಕ ಜಗತ್ತಿನ ವ್ಯವಸ್ಥಿತ ಅರಿವು ಎಂದು ತಿಳಿಯಬಹುದು. ಸಮೀಕ್ಷೆಗಳು ನೀಡುವ ವರದಿಯನ್ನು ತರ್ಕ ಸಮ್ಮತದಿಂದ ನಿರ್ಣಯವೇ ಸತ್ಯದರ್ಶನವನ್ನು ಮಾಡುವ ಪ್ರಕ್ರಿಯೆಯನ್ನು ವಿಜ್ಞಾನ ಎಂದು ತಿಳಿಯಬಹುದು "ವಿಜ್ಞಾನವೂ ಒಂದು ಪ್ರಮಾಣಿತ, ಬುದ್ಧಿಗಮ್ಯ ಜ್ಞಾನ ನೈಸರ್ಗಿಕ ಆಗುಹೋಗುಗಳ ಇವುಗಳ ಮಧ್ಯಂತರ ಸಂಬಂಧಗಳು ಸುವ್ಯವಸ್ಥಿತ ಕ್ರಮಾನುಗತವೂ ಆದ ವೈಚಾರಿಕ ತಿಳವು" ಎಂದೂ ನುಡಿದಿದ್ದರೆ ಅದು ಅತ್ಯಂತ ಸಮಂಜಸವಾಗುತ್ತಿತ್ತು ಎಂದು ಇವರ ಅಭಪ್ರಾಯವಾಗಿದೆ.

*** ಸೈದ್ಧಾಂತಿಕ ಸ್ವರೂಪ:** ಸುಮಾರು ಎರಡು ಎರಡೂವರೆ ಶತಮಾನದ ವಿಜ್ಞಾನದ ನಡಿಗೆ ಶೈಲಿ. ವೇಗ ಬದಲಿಕೆ ಕುರಿತು ಇಲ್ಲಿ ಹೇಳಿದ್ದಾರೆ. ವಿಜ್ಞಾನದ ಪ್ರಯೋಗಾತ್ಮಕತೆ, ಇದರ ಪ್ರಯೋಜನತೆಯು ಅರ್ಥ ಬೆಳೆದು ಅತ್ಯಂತ ಬಲಗೊಂಡು ಜನರ ಮನದಲ್ಲಿ ತಳಸ್ಪರ್ಶದ ಬೇರೂರಿದೆ. ವಿಜ್ಞಾನದ ಎಂದರೆ ಇದರ ಮೂಲಕ್ಕಿಂತ ಫಲರೂಪಿಯ ಮುಖವನ್ನು ಪಡೆದುಕೊಂಡಿದೆ. ಹೊಸ ಯಂತ್ರೋಪಕರಣ ಸಂಶೋಧನೆ, ಸಹಕಾರಿಯಾಗುವ, ಉಪಯೋಗಾತ್ಮಕವಾಗುವ ವೈಜ್ಞಾನಿಕ ಸಂಶೋಧನೆಯ ಸಾಧನಗಳು ಅತ್ಯಂತ ಮುಖ್ಯ ಅಂಶವಾಗಿ ಇಂದು ಪರಿಗಣಿಸಿದೆ.

ಇದರಲ್ಲಿ ಅಪಪ್ರಚಾರ ಮೂಲಕ್ಕೆ ಪರಿಶುದ್ಧವೂ ಮತ್ತು ತರ್ಕವಿಚಾರಗಳ ಕುರಿತು ಸೈದ್ಧಾಂತಿಕ ಸ್ವರೂಪ ನೀಡುವುದಾಗಿದೆ. "ಪರಿಪಾಲನೆಗೆ ಯೋಗ್ಯವಾದುದು, ತರ್ಕಬುದ್ಧಿ ಚಿಂತನೆಗಳನ್ನು ವಿಲಾಸಗಳನ್ನು ಅನುಮಾನ ಪ್ರತ್ಯಕ್ಷ ಪ್ರಮಾಣ ಪ್ರಯೋಗಗಳ ಮೂಲಾಜಿಲ್ಲದ ಬಳಕೆಗಳ ಧಾರಾಳತೆಯನ್ನು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಅದರ ಸಾಧನೆ ಸಿದ್ಧಿಗಳಿಗೆ ಆತ್ಮಪ್ರಾಯವಾಗಿರುವ ವೈಜ್ಞಾನಿಕ ಮನೋಭಾವ, ಪೂರ್ವಾಗ್ರಹಪೀಡಿತವಲ್ಲದ ನಿರ್ಮುಕ್ತ ದೃಷ್ಟಿಕೋನವನ್ನು ಗೌರವಿಸಿ ಇವುಗಳಿಗೆ ಬದುಕಿನಲ್ಲಿ ಆಧ್ಯತೆಯನ್ನು ಕಲ್ಪಿಸುವುದು ಇಂದಿನ ತುರ್ತುಗಳಲ್ಲಿ ಅತೀ ಮುಖ್ಯವಾಗಿದೆ" ಎಂದು ಹೇಳುತ್ತಾರೆ. ನಾಗರಿಕತೆ ಉಚ್ಚಾಯ ಏರುತ್ತಿದ್ದರು. ಏಕಪಕ್ಷೀಯ ನಿಲುವು, ವಿಜ್ಞಾನದ ಮೂಲಭೂತ ಸ್ವರೂಪ ಇದರ ಪರಿಣಾಮದಿಂದ ಸರ್ವವೂ ಸಾಧ್ಯವಿಲ್ಲ. ಶಿಕ್ಷಣದ ಅಗತ್ಯ ರಾಷ್ಟ್ರದ ಹಿತದೃಷ್ಟಿಯಿಂದ ಇಂದು ಹೆಚ್ಚಾಗದೆ ವಿಜ್ಞಾನದ ಅಧ್ಯಯನ ಮಹತ್ವದ್ದಾಗಿದೆ.

* **'ವಿಜ್ಞಾನದ ಸಂಸ್ಕೃತಿ' ಸಾಮಾಜಿಕ ಏಕತೆ:** ಸಂಪ್ರದಾಯಿಕ ಆಚರಣೆಗಳು ನೀಡುವ ಶಾಂತಿ ಸಮಾಧಾನಗಳನ್ನು ವಿಜ್ಞಾನದ ಪರ್ಯಾಯದ ವಿಜ್ಞಾನದ ಉಪಕರಣಗಳಿಂದಲೂ ಪಡೆಯುವುದು ಸಾಧ್ಯವಾಗಿದೆ. ಏಕೆಂದರೆ ರಾಜಕೀಯ, ಆರ್ಥಿಕ, ಸ್ವಾವಲಂಬನೆಯ, ಧಾರ್ಮಿಕ ವಿಚಾರಗಳಲ್ಲಿ ಪರಿಷ್ಕರಿಸಿ ಹೊಸದಾಗಿ ರೂಪಿಸುವಂತೆ ಮನುಷ್ಯನ ನೈತಿಕತೆಗೆ ವಿವೇಚನೆಯನ್ನು ಬದಲಾಸುತ್ತವೆ. ಇದರಿಂದ ವ್ಯಕ್ತಿಮಟ್ಟದಿಂದ ಹಿಡಿದು ಗ್ರಾಮೀಣದ ಪ್ರದೇಶದಿಂದ ರಾಷ್ಟ್ರಮಟ್ಟದವರೆಗೆ ಸ್ಪರ್ಧಾತ್ಮಕತೆ, ಸುಖ ಸಮೃದ್ಧಿಯ ಕೊಡುಗೆ ನಡುವೆ ಹುನ್ನಾರ ಕಂಡುಬರುತ್ತದೆ. "ನಾನಾ ಸಂಪ್ರದಾಯ, ಮತಧರ್ಮ,ಆಚಾರ ವಿಚಾರ ವರ್ಗ–ವರ್ಣಗಳ ವಿಭಿನ್ನ ಜನರನ್ನು ಒಂದು ಸಾಮಾಜಿಕ ಏಕತೆಯತ್ತ ಒಂದುಗೂಡಿಸಿರುವ ಅಗ್ಗಳಿಕೆ ವಿಜ್ಞಾನದ್ದು". ವಿಜ್ಞಾನದತ್ತವಾದದಿಂದ ಸಂಚಾರ ವ್ಯವಸ್ಥೆ, ಟಿ.ವಿ. ದೂರವಾಣಿ ತಂತಿ ಸೌಕರ್ಯಗಳು, ಗೃಹ ಉಪಯೋಗಿ ಸಲಕರಣೆಗಳು, ರೇಡಿಯೋ ಇತ್ಯಾದಿಯಿಂದ ಹಿಡಿದು ಕೂಡಿದಾಗಿದೆ. ಅಷ್ಟೇ ಅಲ್ಲ ಉಡುಗೆ–ತೊಡುಗೆ ಏಕರೀತಿಯ ದೈನಂದಿನ ಸಂಬಂಧ ಹೊಂದಿವೆ. ಕೊನೆಗೆ ವಿಜ್ಞಾನದ ಈ ಸಾಮಾಜಿಕ ಮಹತ್ವದ ಸಾಮರ್ಥ್ಯ ಹಿಂದಿನ ಶತಮಾನದಲ್ಲಿ ಬೇರೆ ಯಾವುದು ಪಡೆದಿರಲಿಲ್ಲ ಎನ್ನಬಹುದು. ವಿಜ್ಞಾನ ಸಂಸ್ಕೃತಿ ನಿರ್ದಿಗಂತ ಸ್ವರೂಪಿ ಆಗಿದೆ.

* **ವಿಜ್ಞಾನ ತಂತ್ರಜ್ಞಾನಗಳ ತಿಳುವಳಿಕೆ:** ಈ ಆಧುನಿಕ ತಂತ್ರಜ್ಞಾನದ ತಿಳುವಳಿಕೆ ನಮಗೆ ಇಂದು ಅತ್ಯಗತ್ಯವಾಗಿ ಬೇಕಾಗಿದೆ. ಯಾಕೆಂದರೆ ಜೀವನ ರೂಪಿಸಲು ಮತ್ತು ಹಸನುಗೊಳಿಸಿಕೊಳ್ಳಲು, ಸೌಲಭ್ಯವನ್ನು ಮುಕ್ತವಾಗಿ ಪಡೆಯಲು ಆಗಿದೆ ವಿಜ್ಞಾನದ ತಂತ್ರಜ್ಞಾನದ ಅನೇಕಾನೇಕ ಶಕ್ತಿಯನ್ನು ಅರಿಯುವ ಗೋಜಿಗೆ ಹೋಗದಿದ್ದರೆ ನಾವು ನಮ್ಮ ಬುದ್ಧಿಯನ್ನು ಒಂದು ಸೀಮೆಗೆ ನಿಲ್ಲಿಸಿ ಬಿಡುತ್ತೇವೆ. "ಬೆರಗುಗೊಳಿಸುವ ಕಂಪ್ಯೂಟರ್‌ನ ತಂತ್ರಜ್ಞಾನ–ಅಂತರ್ಜಾಲ ಮಿಂಚಂಚೆ ಶರವೇಗದ ಸಾರಿಗೆ ಸಂಪರ್ಕ ಸಾಧನಗಳಿಂದ ಅತೀ ದೊಡ್ಡದಾದ ಜಗತ್ತು ತೀರಾ ಚಿಕ್ಕದಾಗಿಯೋ? ಇಡೀ ಜಗತ್ತನ್ನೇ ಒಂದು ಹಳ್ಳಿಯಂತೆ ಮಾಡಿರುವ ಅಗಾಧ ದೈತ್ಯ ಶಕ್ತಿಯ ವಿಜ್ಞಾನದ ಕೊಡುಗೆ ಆಗಿದೆ" ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಮನಸ್ಸಿನ ಸಂವೇದನೆಸೂಕ್ಷ್ಮತೆಗಳನ್ನು ಮೊಂಡುತನದಂತೆ ಆತ್ಮವನ್ನು ಗಾಸಿಗೊಳಿಸಿದಂತೆ ಕಂಡುಬರುತ್ತದೆ. ಈ ಅಹಿತ ಪರಿಣಾಮ ಕೇವಲ ಭೌತಿಕ ಜಗತ್ತಿನ ವಿದ್ಯಮಾನ ತಿಳಿದುಬರುತ್ತದೆ.

* **ವಿಜ್ಞಾನದ ವಿಸ್ಮಯ ಮತ್ತು ಆಧ್ಯಾತ್ಮಿಕ ಅಂತರಲೋಕ:** ಈ ವಿಜ್ಞಾನದ ಸುಂದರತೆಯ ಮತ್ತು ಆಧ್ಯಾತ್ಮಿಕ ಉತ್ಕರ್ಷಕ್ಕೆ ಸಂಬಂಧಿಸಿದ ಸಂವೇದನವನ್ನು ನಾವಾಗಿ ಕಡಿಮೆಗೊಳಿಸುವಂತೆ ಸಚರಾಚರಗಳು, ಸಕಲವೂ ಒಂದೆಡೆ ಸಂಬಂಧವನ್ನು ಐಕ್ಯವನ್ನು ನಿರ್ಮಿಸಿಕೊಂಡ ಅರಿವು ಆಗಿದೆ. ಪ್ರಕೃತಿಯಲ್ಲಿ ಉತ್ತುಂಗತೆಗೆ ಏರುತ್ತಿರುವ ಮಾನವ ಸಾಹಸ ಮತ್ತು ಸಫಲತೆ ಪಡೆಯುವ ಚಿಂತನೆ ಒಂದು ಸತ್ಯದ ದರ್ಶನ ಆಗುತ್ತದೆ. "ವಿಜ್ಞಾನದ ಗಾಢ ತಿಳುವಳಿಕೆಯಿಂದ ಲಭಿಸುವ ಸತ್‌ಫಲಗಳು, ಸೃಷ್ಟಿಯ ಕೂಲಂಕುಷ ವಿವೇಚನೆಯ ಅಧ್ಯಯನಗಳು ಅದರ ಅಪಾರತೆ ಅಗಮ್ಯತೆಗಳ ಕಲ್ಪನೆಯನ್ನು ನಮ್ಮಲ್ಲಿ ಮೂಡಿಸಿ ವಿಸ್ಮಯಗೊಳಿಸಬಲ್ಲವು. ಈ ವಿಸ್ಮಯ ಆದಿ ಭೌತಿಕ ಶಕ್ತಿಯ ಅಸ್ತಿತ್ವ ಸಾರ್ವಭೌಮತ್ವಗಳನ್ನು ಕುರಿತು ಆಲೋಚಿಸಲು ಅನುವಾಗಬಲ್ಲದು. ವಿಜ್ಞಾನದ ತರ್ಕ ವಿಚಾರಗಳ ಸೀಮೆ ಮುಗಿದ ಬಳಿಕ ಆಧ್ಯಾತ್ಮದ ಅಂತರ್ಲೋಕ ತೆರೆದುಕೊಳ್ಳುತ್ತದೆ" ಎಂದು ತಿಳಿದುಬರುತ್ತದೆ. ವಿಜ್ಞಾನದ ನೀಡುವ ಅನುಭವಕ್ಕೂ ಪರಾನುಭೂತಿಗೂ ಇರುವ ಅವಿನಾಭವ ಸಂಬಂಧವಿದೆ. ವಿಸ್ಮಯ ಮತ್ತು ಆಧ್ಯಾತ್ಮಿಕ ಆದಿಭೌತಿಕ ಶಕ್ತಿಯ ಅಸ್ತಿತ್ವ ಸಾರ್ವಭೌಮತ್ವಗಳನ್ನು ಕುರಿತು ಆಲೋಚಿಸಲು ಅನುವಾಗಬಲ್ಲದು.

* **ವಿಜ್ಞಾನದ ನೈತಿಕತೆ:** ನಿಸರ್ಗದ ಸತತ ವಿಕಾಸದಲ್ಲಿ ವಿಜ್ಞಾನ ತಂತ್ರಜ್ಞಾನಗಳು ಒಂದು ಅವಿಭಾಜ್ಯ ಘಟಕವಾಗಿ ಕೆಲಸ ಮಾಡುವುದು ಬಹಳ ಜನರಿಗೆ ತಿಳಿದಿಲ್ಲ. ಮನುಷ್ಯನು ವಿಜ್ಞಾನದ ಜೊತೆಗೂಡಿ ವಿಕಾಸ ಪಥದಲ್ಲಿ ಮುಂದುವರೆದು ನಿಸರ್ಗಕ್ಕೆ ಗೌರವವನ್ನು ನೀಡಿದ್ದಾನೆ. "ವಿಜ್ಞಾನದ ಪರಮೋದ್ಭುತ ಸಾಧನಗಳನ್ನು ಮನುಷ್ಯ ತನ್ನ ಸ್ವಾರ್ಥ ಲೋಭಗಳಿಗಾಗಿ ಅಪವ್ಯಯ ಮಾಡಿಕೊಂಡರೆ ಅದು ಅವನ ತಪ್ಪೇ ವಿನಾನೀರಪೇಕ್ಷ ಸ್ವರೂಪಿಯಾದ ವಿಜ್ಞಾನದ್ದಲ್ಲ. ವೈದ್ಯನ ಶಸ್ತ್ರಗಳು ರೋಗಚಿಕಿತ್ಸೆಯ ಆಶಯದಿಂದ ತಯಾರಾದವೇ ವಿನಃ ಕಗ್ಗೊಲೆಗೆ ಬಳಸಲೆಂದಲ್ಲ ಬಾಹ್ಯ ಸಮೃದ್ಧಿಯ ಜೊತೆಗೆ ಮನುಷ್ಯನ ನೈತಿಕತೆಯನ್ನು ವಿಜ್ಞಾನ ಬಲಪಡಿಸಬಲ್ಲರು ನೈತಿಕತೆಯ ಅಂತಿಮ ಉದ್ದೇಶವೆಂದರೆ ಸರ್ವಮಾನವರ ಕಲ್ಯಾಣ ಸಾಧನೆಗೆ ಸಹಕಾರಿಯಾಗುವುದು" ಎಂದು ವಿಜ್ಞಾನದ ಪ್ರೇರಣೆಗಳ ಅರಿವು ಹೆಚ್ಚಿಸುವುದು. ನಿಸರ್ಗದಲ್ಲಿ ಮಾನವ ದೈತ್ಯವಾದ ಉತ್ತಮ ಶಕ್ತಿಗಳನ್ನು ವಿಜ್ಞಾನಿ ಪಳಗಿಸಿ ಪರಿಷ್ಕರಣೆಗೊಳಿಸಲು ಸಂಶೋಧನೆ ನಡೆಸುವುದು ಮಾನವ ಹಿತದ ಮಹಾ ಉದ್ದೇಶದಿಂದ ಮಾತ್ರ ಅದರಲ್ಲಿ ಮಾನವನು ದುರುದ್ದೇಶಕ್ಕೂ ಕಾಲಕ್ಕೆ ತಕ್ಕಂತೆ ಬಳಸಿಕೊಂಡಿದ್ದಾನೆ.

* **ವೈಜ್ಞಾನಿಕ ಶೋಧಗಳು ಮತ್ತು ಅವುಗಳ ಪ್ರಾಯೋಗಿಕ ಉಪಯೋಗ:** ವಿಜ್ಞಾನದ ಶೋಧನೆಗಳು ಕೇವಲ ವ್ಯಕ್ತಿ ಮತ್ತು ರಾಷ್ಟ್ರಕ್ಕೆ ಸೀಮಿತವಾಗಿಲ್ಲ. ಜನಾಂಗದ ಸ್ವತ್ತಾಗುವ ಕಾಲವು ಎಂದು ಮುಗಿದಿದೆ. ಆದ್ದರಿಂದ ಕೆಲವರ ಉದ್ಧಾರಕ್ಕೆ ಶ್ರಮಿಸಿಉಳಿದವರನ್ನು

ದನಮನಕ್ಕೆ ಇಡಾಗುವುದಿದ್ದರೆ ಇದು ತಪ್ಪಾಗುತ್ತದೆ. ಇದು ವಿಜ್ಞಾನಿ ಎನಿಸಿಕೊಳ್ಳುವುದಿಲ್ಲ. "ಎಲ್ಲ ಬಗೆಯ ಮತ್ತು ಸ್ವರಗಳ ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕುವಲ್ಲಿಅದರ ಪಾತ್ರ ದೊಡ್ಡದು. ಇಂಥ ಸಂದರ್ಭದಲ್ಲಿ ಸಂಪನ್ನ ಬದುಕಿನ ಉಪಾಯಗಳನ್ನು ರೂಪಿಸುವ ಜವಾಬ್ದಾರಿಯನ್ನು ಹೊರಲು ವಿಜ್ಞಾನ ಮುಂದಾಗುತ್ತದೆ" ಎಂದು ತಿಳಿಸುತ್ತಾ ಕೋಟ್ಯಾಂತರ ಜನರು ಅನ್ನ ಅನ್ನ ಎಂದು ಬಳಲುತ್ತಿರುವಾಗ ಪೂರೈಸುವ ಹಂಬಲವಿರಬೇಕು. ಸೂಕ್ಷ್ಮತೆಗಳು, ಭಾವನೆಗಳ ಧ್ಯೇಯದ ಉನ್ನತಿಗಳನ್ನು ಅರಿಯಬಾರದೆಂದು ಹೇಳುತ್ತಾರೆ.

*** ವಿಜ್ಞಾನದ ವಸ್ತುಗಳ ಉತ್ಪಾದನೆ ಆಗಾಧವಾಗಿದೆ**: ವಿಜ್ಞಾನವು ಬೇಡಿಕೆಯನ್ನು ಈಡೇರಿಸುತ್ತದೆ. ಆದರೆ ಆ ವಸ್ತುಗಳನ್ನು ಸರಿಸಮಾನವಾಗಿ ಬದುಕಿನಲ್ಲಿ ಪಡೆಯಲು ವೈಫಲ್ಯ ಹೊಂದಿದೆ. ಗ್ರಾಮ ನಗರ, ರಾಷ್ಟ್ರದ ಜೀವಿತ ಮಟ್ಟದ ವಿಧಾನಗಳು ಬೇರೆ ಬೇರೆ ಇದ್ದರೆ ಸ್ವಾತಂತ್ರ ಪಡೆದುದು ಅದರ ಅರ್ಥವೂ ಉಳಯುವುದಿಲ್ಲ. ಬದುಕಿಗೆ ಅಗತ್ಯವಾದ ಸಾಮಾನುಗಳನ್ನು ನಗರದಿಂದ ಹಳ್ಳಿಗೆ ತರಿಸಿಕೊಳ್ಳುವದು ಅವಶ್ಯಕತೆ ಇದೆ. ಕಂಪ್ಯೂಟರ್, ವಿದ್ಯುತ್ಶಕ್ತಿ, ವೈದ್ಯಕೀಯ ಸೌಲಭ್ಯ ಮುಂತಾದವುಗಳಿಗೆ ವಿಜ್ಞಾನವೇ ಅವಲಂಬಿಸಬೇಕಿದೆ. ಸಮಾಜಕ್ಕೆ ಸೈನಿಕ ರಾಜಕೀಯವಾಗಿ ಇವುಗಳನ್ನು ತಂತ್ರಜ್ಞಾನದ ನೆರವು ಕುರಿತು ಟೀಕಿಸುತ್ತಾರೆ. "ವಿಜ್ಞಾನದ ಸಾಮಗ್ರಿಗಳು ಮಾನವನನ್ನು ಪತನದ ಹಾದಿಗೆ ಒಯ್ಯುತ್ತವೆಂದು ವಾದಿಸುತ್ತಾರೆ. ಹೀಗಿದ್ದರೂ ಅಭಿವೃದ್ಧಿಶೀಲ ದೇಶದ ಪ್ರಜೆಗಳ ಕಲ್ಯಾಣಕ್ಕಾಗಿ ಮಹತ್ವದ ಪಾತ್ರ ವಹಿಸಬೇಕೆಂದು ವಿಜ್ಞಾನಕ್ಕೆ ಮೊರೆ ಇಡುತ್ತಾರೆ" ಎಂದು ವಿಜ್ಞಾನದ ಕುರಿತು ಅಭಿಪ್ರಾಯ ಮೂಡುತ್ತವೆ.

*** ಅವೈಜ್ಞಾನಿಕ ವಿಧಾನ ನಗೆ ಬರಿಸುತ್ತದೆ**: ವಿಜ್ಞಾನ ವಿಷಯದಲ್ಲಿ ಸಂಭವಿಸುವ ಕೆಲವು ಅಂಶಗಳು ತುಂಬಾ ವಿಚಿತ್ರವಾಗಿರುತ್ತವೆ. ವಿಜ್ಞಾನದ ಸಂಬಂಧದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಿಸಾರ್ ಅಹಮದ್ ಅವರ ಅಭಿಪ್ರಾಯದಂತೆ "ನಮ್ಮ ಪ್ರತಿಭಾಶಾಲಿ ವೈಜ್ಞಾನಿಕರು ತಂತ್ರಜ್ಞರು ವಿಜ್ಞಾನ ಬೋಧಕರು ಪ್ರಯೋಗಾಲಯದಲ್ಲಿ ತಮ್ಮ ತಮ್ಮ ಅನನ್ಯ ಕಾರ್ಯಕ್ಷೇತ್ರಗಳಲ್ಲಿ ತೊಡಗಿರುವಾಗ ವರ್ತಿಸುವ ಸತ್ಯಶೋಧಕರ ನಿಷ್ಠುರ ನೀತಿಗೂ ಸಾಮಾಜಿಕ ಜೀವನವನ್ನು ಪ್ರವೇಶಿಸುವಾಗ ತಾಳುವ ರಾಜಿ ಸಮಜಾಯಿಷಿಗಳ ಅವೈಚಾರಿಕ ನಿಲುಮೆಗೂ ಅರ್ಥಾರ್ಥ ಸಂಬಂಧ ಕಾಣಿಸದು" ಎಂದು ಹೇಳುತ್ತಾರೆ. ಸಭೆ ಸಮಾರಂಭಗಳಿಗೆ ಮತ್ತು ಅಮೇರಿಕಾದಲ್ಲಿ ಜರುಗುವ ವಿಶ್ವ ವಿಜ್ಞಾನಾಧಿವೇಶನದಲ್ಲಿ ಭಾಗವಹಿಸಲು ಹೋಗುವಾಗ ಅವರ ವಿವೇಚನೆ ನೋಡಬೇಕು. ರಾಹುಕಾಲ, ಗುಳಕಾಲ, ಯಮಗಂಡಕಾಲದ ಗಣನೆ, ಪರಿಗಣನೆ, ಶುಭ–ಅಶುಭಗಳ ನಿರೀಕ್ಷೆಗಳ ಇತ್ಯಾದಿ ಅಂಧಶ್ರದ್ಧೆ, ಮೌಢ್ಯತೆಯು ಭಾರತೀಯ ವಿಜ್ಞಾನಿಗಳ ಮನಸ್ಸಿನಲ್ಲಿ ಆವರಿಸಿದರೆ ಆಶ್ಚರ್ಯದ ಸಂಗತಿಯಾಗುತ್ತದೆ. ವಿದ್ಯಾರ್ಥಿ–ವಿದ್ಯಾರ್ಥಿನಿಯರು ಪ್ರಯೋಗಾಲಯದಲ್ಲಿ ಕಪ್ಪೆ, ಜಿರಲೆ, ಸಸ್ಯಗಳನ್ನು ಸರಿಯಾಗಿ ಕತ್ತರಿಸುತ್ತಾರೆ. ಆದರೆ ಮನೆಯಲ್ಲಿ ಸಾಮಾನುಗಳು, ಪುಸ್ತಕಗಳು ಮತ್ತು ತರಕಾರಿ ಕತ್ತರಿಸುವ ವಿಧಾನ ಅವೈಜ್ಞಾನಿಕ ವಿಧಾನ ನಗೆತರಿಸುತ್ತದೆ.

*** ವಿಜ್ಞಾನದ ಪ್ರಭೇದಗಳು**: ವಿಜ್ಞಾನದ ಪ್ರಬೇಧಗಳು ಜಟಿಲತೆಯ ಶಾಖೆಗಳಾಗಿವೆ. ಇದು ತಾರ್ಕಿಕ ಅದ್ಯಯನ ಮಾಡುವವರಿಗೆ, ವ್ಯವಸಾಯ ಮಾಡುವವರಿಗೆ ಅಂತರ ಸಂಬಂಧ ಅರಿಯಲು ಅಸಾಧ್ಯದ ಮಾತಾಗಿದೆ. ಯಾಕೆಂದರೆ ಮನುಷ್ಯನ ನರನಾಡಿಯಂತೆ ಅದರ ಸಂಬಂಧ ಹಬ್ಬಿದೆ. ಕಂಪ್ಯೂಟರಿನ ಒಳಭಾಗಗಳಂತೆ ಅದರ ವ್ಯವಸ್ಥೆ ಹೊಂದಿದೆ. "ಕೆಲವು ವಿಜ್ಞಾನ ಭಾಗಗಳು ಮುನ್ನಡೆಯ ಮೆರುವನ್ನು ಮುಟ್ಟಿದರೆ ಮತ್ತೆ ಕೆಲವು ತಗ್ಗಿನಲ್ಲಿ ತೆವಳವೆ" ಎಂದು ವಿಜ್ಞಾನದ ಸ್ಥಿತಿಗತಿ ಕುರಿತು ಹೇಳುತ್ತಾರೆ. ಚಂಡಮಾರುತದ ಮುನ್ನಚ್ಚರಿಕೆ ನೀಡುವಂತೆ ಉಳದೆಲ್ಲ ಭೂಕಂಪ, ಅಗ್ನಿಮುಖಗಳ ಬಗ್ಗೆ ವಿಜ್ಞಾನದ ಪ್ರಭೇದಗಳು ಅನಾಹುತದಿಂದ ಪಾರುಮಾಡಲಾರದವು. ವೈಜ್ಞಾನಿಕ ಮನೋಭೂಮಿಕೆ ಮತ್ತು ವಿಚಾರ ಪರತೆಯನ್ನು ಮಾನವನು ರೂಢಿಸಿಕೊಳ್ಳಬೇಕು. ಇದರ ಲಾಭ ಮನುಷ್ಯನಿಗೆ ಆಗಬೇಕು. ಪ್ರಾಯೋಗಿಕ ವಸ್ತುಗಳಿಂದ ಮತ್ತು ಸಮಷ್ಠಿಯ ಐಕ್ಯತೆಯ ಅಭಿವೃದ್ಧಿ ಸೈದ್ಧಾಂತಿಕವಾಗಿ ಸ್ವರೂಪ ಪಡೆಯಬೇಕು.

*** ವಿಜ್ಞಾನ ಮತ್ತು ಮತಧರ್ಮಗಳ ಸಂಘರ್ಷ**: ವಿಜ್ಞಾನದ ಭೌತಿಕ ಉತ್ಕರ್ಷ ಮತ್ತು ಧರ್ಮದ ಆತ್ಮೋನ್ನತಿಗೆ ಬದುಕಿನಲ್ಲಿ ಎರಡು ಮುಖವಾಗಿವೆ. ಪ್ರಾಚೀನ ಕಾಲದಿಂದಲೂ ಮಾನವನಿಗೆ ಮೇಲ್ಮೈಗೆಗಾಗಿ ದುಡಿದಿವೆ. ಶಾಶ್ವತ ಮೌಲ್ಯಗಳ ಕಲ್ಪನೆಯನ್ನು ಎಣೆದಿವೆ. ಇದರಿಂದ ಕಡಿವಾಣ ಹಾಕಿವೆ. ಅಜ್ಞಾನವನ್ನು ಧರ್ಮಗಳು ಮನವರಿಕೆ ಮಾಡಿಕೊಡುತ್ತವೆ. "ಧರ್ಮಕ್ಕೆ ವೈಚಾರಿಕ ಪ್ರವೃತ್ತಿ ಮಾಡಿದರೆ ರೂಢ ಆಚಾರ–ವಿಚಾರಗಳು ವಿಜ್ಞಾನದ ಒಳಗಾದರೆ ಆತ್ಮಕ್ಕೆ ದೇಹದ ಉಭಯವು ಲಾಭವಾದಿತು" ಎಂದು ಹೇಳುತ್ತಾರೆ. ವಿಜ್ಞಾನ ತರ್ಕಬುದ್ಧಿಗಳನ್ನು ಸಮರ್ಥವಾಗಿ ತತ್ವಶಾಸ್ತ್ರದಿಂದ ಸವಾಲು ಪರಿಹರಿಸುತ್ತದೆ.

*** ನಿಸರ್ಗ ಮತ್ತು ವಿಜ್ಞಾನ** : ಮನುಷ್ಯ ತಾನು ಪ್ರಕೃತಿಯೊಂದಿಗೆ ಪ್ರಯತ್ನದೊಂದಿಗೆ ಫಲ ಪಡೆದಿದ್ದಾನೆ. ಮನುಷ್ಯನು ಪ್ರೀತಿ, ಭಾವುಕತನದಿಂದ ನಡೆದುಕೊಂಡು ಸಂಶೋಧನೆಗಳ ಮೂಲಕ ತನ್ನ ಕೈವಶ ಪಡಿಸಿಕೊಳ್ಳುವುದು ಜಾಣ್ಮೆಯಾಗಿದೆ. "ವಿಜ್ಞಾನೋಪಕರಣಗಳಿಂದ ಪ್ರಕೃತಿಯನ್ನು ಶೋಧಕ್ಕೆ ಒಳಪಡಿಸಿ ಅಮೂಲ್ಯ ಸಂಪತ್ತ' ಸಮೃದ್ಧಿಯನ್ನು ಪಡೆದುಕೊಂಡ ಆಧುನಿಕ ಕಾಲಕ್ಕೂ ಇರುವ ಮಹತ್ವದ ಅಂತರದಿಂದ ವಿಜ್ಞಾನದ ಹಿರಿಮೆ ತಿಳಿಯುತ್ತದೆ" ಎಂದು ನಿಸರ್ಗದ ಬಗ್ಗೆ ತಿಳಿಯುತ್ತಾ ಬಂದಿದೆ. ವಿಜ್ಞಾನದ ಸಾಹಸದ ಫಲಗಳಿಂದ ಜಗತ್ತನ್ನು ತಿಳಿದುಕೊಳ್ಳುವುದು ತಪ್ಪಾಗುತ್ತದೆ ಎಂಬ ಅಭಿಪ್ರಾಯ ತಿಳಿದುಬರುತ್ತದೆ.

*** ವಿಜ್ಞಾನದ ಬಗ್ಗೆ ವಿಶೇಷ ಕಳಕಳಿಯಿಲ್ಲ** : ಅನೇಕ ವಿದ್ಯಾವಂತರಿಗೆ ವಿಜ್ಞಾನದ ಬಗ್ಗೆ ಕಳಕಳಿಯಿಲ್ಲ ಎಂದು ತಿಳಿಸುತ್ತದೆ. ಅದರ ಮೂಲಭೂತದ ಅರಿವಿಲ್ಲ. ಹೊಸ ಹೊಸತನಸಂಶೋಧನೆಯ ಸಾಮಗ್ರಿಗಳ ಸುಧಾರಿತವಾದುದೇ ಎಂದು ತಿಳಿಸಿದ್ದಾರೆ. ಮಾನವನ ರೋಗರುಜಿನಗಳ ಚಿಕಿತ್ಸ ಮತ್ತು ಆಹಾರದ ವ್ಯವಸ್ಥೆ ಕುರಿತು ತಿಳಿಯಬಹುದು. ವಿಜ್ಞಾನದ ವೈಚಾರಿಕತೆ, ನಿಷ್ಠುರ ನಿಷ್ಪಕ್ಷತೆ, ಸತ್ಯ ನಿಷ್ಠೆ, ಮತ್ತು ನಿರ್ಭೀತ ಮನೋಭಾವ ಇರುವುದರಿಂದ ಮಾನವನ ಬದುಕು ಶೋಭಾಯನ ಆಗುತ್ತದೆ ಎಂದು ತಿಳಿಯಬಹುದು.

*** ವಿಜ್ಞಾನದ ಸತತವಾದ ವಿಶೇಷ ಅದ್ಯಯನ ಬಯಸುತ್ತದೆ**

: ವಿಜ್ಞಾನವು ನಿರಂತರ ವಿಶೇಷಾಧ್ಯಯನ ಬಯಸುತ್ತದೆ. ಇದರಲ್ಲೂ ಒಂದು ಕ್ರಮ ಸಮಾಂಗತೆ ಉಪಯೋಗವಾಗುವ ಲಕ್ಷಣ ಇರಬೇಕು. ಸಂಶೋಧನೆಗಳು ಹೆದ್ದಾರಿ ಇದ್ದಂತೆ ಎನ್ನುತ್ತಾರೆ. ಇವುಗಳು ಪೂರ್ಣ ಅಲ್ಲ. ಆದರೂ ಒಂದು ಗುರಿ ನೀಡುತ್ತವೆ "ವಿಶೇಷ ಅಧ್ಯಯನ, ಶೋಧಗಳು ಒಂದು ಸುಸಂಘಟಿತವೂ, ಅರ್ಥಪೂರ್ಣವೂ ಆದ ಕೊನೆಯಲ್ಲಿ ಒಂದುಗೂಡಬೇಕು. ಅವುಗಳಿಂದ ದೊರಕಿದ ಎಲ್ಲ ಫಲ, ಸಕಲ, ಬೆಲೆ ತಿಳುವಳಿಕೆಯೊಂದರ ಸಮಂಜಸ ಹೊಂದಾಣಿಕೆಯಲ್ಲಿ ಐಕ್ಯಗೊಳ್ಳಬೇಕು" ಎಂದು ನಿಸಾರ ಅವರು ಹೇಳುತ್ತಾರೆ.

5) ಎಂ.ಅಬ್ದುಲ್ ರೆಹಮಾನ್ ಪಾಷ ಅವರ ವಿಜ್ಞಾನ ಸ್ವಾರಸ್ಯ: ಮಣ್ಣಿನ ಕುಡಿಕೆಯಲ್ಲಿ ನೀರನ್ನು ಇಟ್ಟರೆ ಅದು ಸ್ವಲ್ಪ ಸಮಯದ ನಂತರ ತಂಪಾಗುತ್ತದೆ ಎಂಬುದು ನಮಗೆ ಎಲ್ಲ ಗೊತ್ತು. ಆದರೆ ಕುಡಿಕೆಯಲ್ಲಿನ ನೀರು ತಂಪಾಗಿ ಏಕೆ ಆಗುತ್ತದೆ ಎಂಬುದು ತಿಳಿಯುವ ಮಹತ್ವವಿದೆ. ಮುಖ್ಯವಾಗಿ ಮೊದಲು ತಿಳಿಯುವ ವಿಚಾರ ಎಂದರೆ ಯಾವುದೇ ಸಮತಲದ ಮೇಲೆ ನೀರು ಆವಿಯಾದರೆ ಆ ಸಮತಲವು ತಂಪಾಗುತ್ತದೆ ಎಂಬುದು ಒಂದು ಸರಳವಾದ ಸತ್ಯ. ಕುಡಿಕೆಯ ಮೈಮೇಲೆ ಸೂಕ್ಷ್ಮಾತಿಸೂಕ್ಷ್ಮ ರಂಧ್ರಗಳು ಇರುತ್ತವೆ. ಕುಡಿಕೆಯಲ್ಲಿನ ನೀರು ಈ ರಂಧ್ರಗಳ ಮೂಲಕ ಹೊರಗೆ ಬರುತ್ತವೆ. ಕುಡಿಕೆಯ ಮೇಲ್ಮೈಗೆ ಬಂದ ಕೂಡಲೇ ಇಂಥ ನೀರು ಆವಿಯಾಗಿ ಪರಿಸರ (ವಾತಾವರಣ) ದಲ್ಲಿ ಸೇರಿಕೊಳ್ಳುತ್ತವೆ. ನೀರು ಆವಿಯಾಗಲು ಕುಡಿಕೆಯಲ್ಲಿನ ನೀರು ತಾಪಮಾನ ಹೊರಗಿನ ತಾಪಮಾನಕ್ಕಿಂತ ಕಡಿಮೆಯಾಗುತ್ತದೆ. ಆದ್ದರಿಂದ ಅದಕ್ಕೆ ಕುಡಿಕೆಯಲ್ಲಿನ ನೀರುತಂಪಾಗಿರುತ್ತದೆ.

ನಾವು ನೋಡಿದ್ದೇವೆ. ಹೊಸ ಕುಡಿಕೆಯಲ್ಲಿ ನೀರು ಬೇಗ ಮತ್ತು ಹೆಚ್ಚು ತಂಪಾಗುವುದು. ಹಳೆಯ ಕುಡಿಕೆಯಲ್ಲಿ ನೀರು ಅಷ್ಟು ತಂಪಾಗಿ ಇರುವುದಿಲ್ಲ ಯಾಕೆ? ಎಂಬ ಪ್ರಶ್ನೆ ಮೂಡುತ್ತದೆ. ಯಾಕೆಂದರೆ ಹೊಸ ಕುಡಿಯಲ್ಲಿ ಮೈಯಲ್ಲಿನ ಸೂಕ್ಷ್ಮ ರಂಧ್ರಗಳು ತೆರೆದುಕೊಂಡಿರುತ್ತವೆ. ಕುಡಿಕೆ ಹಳೆಯದಾದ ಹಾಗೇನೆ ಈ ರಂಧ್ರಗಳು ಮುಚ್ಚಿಕೊಳ್ಳುತ್ತಾ ಬರುತ್ತವೆ. ಹೀಗಾಗಿ ಒಳಗಿನ ನೀರು ಹೊರಗಡೆ ಬರುವುದು ಕಡಿಮೆಯಾಗುತ್ತದೆ. ಇದರಿಂದ ಹೊರಬಂದ ನೀರು ಆವಿಯಾಗುವುದು. ಅದರಿಂದಾಗಿ ಕುಡಿಕೆಯಲ್ಲಿನ ನೀರು ತ'ಂಪಾಗುವುದು ನಿಧಾನವಾಗುತ್ತದೆ.

ಇದಕ್ಕೆ ನಾವು ಒಂದು ಉಪಾಯವನ್ನು ಮಾಡುತ್ತೇವೆ. ಕುಡಿಕೆಯ ಮೇಲೆ ಒಂದು ಒದ್ದೆ ಬಟ್ಟೆಯನ್ನು ಸುತ್ತುತ್ತೇವೆ. ಹಸಿಬಟ್ಟೆಯಲ್ಲಿನ ನೀರಿನ ಅಂಶ ಆವಿಯಾಗುತ್ತಿರುವ ಹಾಗೆ ಅದು ಕುಡಿಕೆಯ ನೀರನ್ನು ತಂಪಾಗಿಸುತ್ತದೆ. ಇನ್ನೊಂದು ಮಾತು "ಕುಡಿಯುವ ನೀರಿನ ಕುಡಿಕೆಯನ್ನು ಮುಚ್ಚಿಡಬೇಕು. ನೀರನ್ನು ತೆಗೆದರೆ ಕೈ ಮತ್ತು ಲೋಟದ ಕೊಳೆ ನೀರಿನಲ್ಲಿ ಸೇರಿಕೊಳ್ಳುತ್ತದೆ. ಆರೋಗ್ಯಕ್ಕೆ ಒಳ್ಳೆಯದಲ್ಲ" ಬದಲಿಗೆ ಈಗ ಮಾರುಕಟ್ಟೆಯಲ್ಲಿ ನಲ್ಲಿ ಮತ್ತು ಮುಚ್ಚಳ ಇರುವ ಕುಡಿಕೆಗಳು ಬಂದಿವೆ. ನೀರನ್ನು ನಲ್ಲಿಯಿಂದ ತೆಗೆದುಕೊಳ್ಳುವುದು ಹೆಚ್ಚು ಸುರಕ್ಷಿತ ಹಾಗೆಯೇ ಕುಡಿಯುವ ನೀರಿನ ಕುಡಿಕೆಯನ್ನು ಆಗಾಗ ತೊಳೆಯುತ್ತಿರಬೇಕು.

*** ಮೇಣದ ಬತ್ತಿಯ ಹಠಮಾರಿ ಜ್ವಾಲೆಯ ಪ್ರಯೋಗ:** ಮೇಣದ ಬತ್ತಿಯನ್ನು ಹೆಚ್ಚಿದಾಗ ಅದರ ಉರಿ ಅಥವಾ ಜ್ವಾಲೆ (ಲಂಬ) ಮೇಲ್ಮುಖವಾಗಿ ಉರಿಯುವುದನ್ನು ನೋಡಿದ್ದೀರಾ? ಮೇಣದ ಬತ್ತಿಯನ್ನು ಲಂಬವಾಗಿಡಿ, ಸಮಾನಾಂತರವಾಗಿ ಹಿಡಿಯಿರಿ ಅಥವಾ ತಲೆಕೆಳಗಾಗಿ ಹಿಡಿದರೂ ಅದರ ಜ್ವಾಲೆ ಮಾತ್ರ ಮೇಲ್ಮುಖವಾಗಿಯೇ ಉರಿಯುವ ಹಠ ಮಾಡುತ್ತದೆ. ಇದಕ್ಕೆ ಕಾರಣವೇನು? ಎಂಬುದು ತಿಳಿಯುವುದಾಗಿದೆ. ಮೇಣದ ಬತ್ತಿ ಉರಿಯುತ್ತಿರುವಾಗ ಬೆಳಕು ಕಾರ್ಬನ್ ಡೈ ಆಕ್ಸೈಡ್ ನೀರಾವಿ, ಮಸಿ ಇತ್ಯಾದಿಗಳ ಜೊತೆ ಶಾಖವನ್ನು ಉತ್ಪತ್ತಿ ಮಾಡುತ್ತದೆ. ಇದರಿಂದಾಗಿ ಜ್ವಾಲೆಯ ಸುತ್ತುಮುತ್ತಲಿನ ಗಾಳಿಯು ಬಿಸಿಯಾಗುತ್ತದೆ. ಬಿಸಿ ಗಾಳಿ ಉಳದ ಗಾಳಿಗಿಂತ ಹಗುರುವಾಗುತ್ತದೆ. ಆದ್ದರಿಂದ ಇದು ಮೇಲಕ್ಕೆ ಏರುತ್ತದೆ. ಇದನ್ನು ಅನುಸರಿಸಿ ಜ್ವಾಲೆಯೂ ಮೇಲ್ಮುಖವಾಗಿ ಉರಿಯುತ್ತದೆ. ಸುತ್ತಮುತ್ತಲಿನ ತಂಪುಗಾಳಿಯು ಜ್ವಾಲೆಯ ಸಂಪರ್ಕಕ್ಕೆ ಬಂದು ಅದು ಬಿಸುಯಾಗಿ ಮೇಲಕ್ಕೆ ಏರುವ ಕ್ರಿಯೆ ಮುಂದುವರೆಯುತ್ತದೆ. ಮೇಣದ ಬತ್ತಿಯಷ್ಟೇ ಅಲ್ಲ. ಯಾವುದೇ ಜ್ವಾಲೆಯು ಮೇಲ್ಮುಖವಾಗಿಯೇ ಉರಿಯುತ್ತದೆ. ಮೇಲೆ ಹೇಳಿದ ಪ್ರಕ್ರಿಯೆನೇ ಇದಕ್ಕೆ ಕಾರಣ.

*** ಪಟಾಕಿ ಸದ್ದುವಿನ ವಿಜ್ಞಾನದ ದೃಷ್ಟಿಯಂತೆ:** ಗಣೇಶ ಚತುರ್ಥಿ, ದೀಪಾವಳಿ ಹಬ್ಬ, ಮದುವೆಯ ಸಮಾರಂಭದಲ್ಲಿ ವಿಜಯೋತ್ಸವದಲ್ಲಿ ಮತ್ತು ಶವ ಯಾತ್ರೆಯಲ್ಲಿ ಪಟಾಕಿಯ ಶಬ್ದ ಕೇಳಬಹುದು. ಪಟಾಕಿ ಇರುವುದೇ ಶಬ್ಧ ಮಾಡಲು ದೊಡ್ಡದಾಗಿ ಶಬ್ಧ ಮಾಡಲು ಇರುವುದು. ಇನ್ಯಾವುದೇ ಸಂದರ್ಭದಲ್ಲಿ ನಾವು ಬಗೆಬಗೆಯ ಪಟಾಕಿ ಹಚ್ಚುತ್ತೇವೆ. ಆದರೆ ಪಟಾಕಿ ಹಾರಿದಾಗ ದೊಡ್ಡ ಶಬ್ಧ ಏಕೆ ಆಗುತ್ತದೆ? ಎಂಬುದು ತಿಳಿಯುವುದು ಮುಖ್ಯವಾಗಿದೆ.

ಪಟಾಕಿಯಲ್ಲಿ ಒತ್ತಿ ತುಂಬಿರುವ ರಾಸಾಯನಿಕಗಳು ಹೊತ್ತಿ ಉರಿದಾಗ ಬೃಹತ್ ಪ್ರಮಾಣದ ಅನಿಲದ ಅಣುಗಳನ್ನು ಕ್ಷಣ ಮಾತ್ರದಲ್ಲಿ ಉತ್ಪತ್ತಿ ಮಾಡುತ್ತವೆ. ಇವುಗಳ ಸುತ್ತಲಿನ ಗಾಳಿಯ ಅಣುಗಳೊಂದಿಗೆ ಡಿಕ್ಕಿ ಹೊಡೆದಾಗ ಶಬ್ಧದ ತೀವ್ರವಾದ ಅಲೆಗಳನ್ನು ಉಂಟು ಮಾಡುತ್ತವೆ. ಅವು ನಮ್ಮ ಕಿವಿಯ ತಮ್ಮಟೆಗೆ ತಾಗಿದಾಗ ದೊಡ್ಡ ಶಬ್ಧವನ್ನು ಕೇಳಿದ ಅನುಭವವಾಗುತ್ತದೆ. "ಇನ್ನೊಂದು ವಿಚಾರ ಪಟಾಕಿಯು ಹಾರಿದಾಗ ಉಂಟಾಗುವ ಬೆಂಕಿಯ ಶಾಖದಿಂದಾಗಿ ಹತ್ತಿರದಲ್ಲಿರುವ ಗಾಳಿಯೂ ಇದ್ದಕ್ಕಿದ್ದ ಹಾಗೆ ಹಿಗ್ಗುತ್ತದೆ. ಇದು ಸುತ್ತಲಿನ ಗಾಳಿಯೊಂದಿಗೆ ತಾಡನಕ್ಕ ಒಳಗಾಗುತ್ತದೆ" ಇದರಿಂದಾಗಿಯೂ ಶಬ್ಧ ಉಂಟಾಗುತ್ತದೆ. ಹೆಚ್ಚು ಅನಿಲ ಬಿಡುಗಡೆ ಹೆಚ್ಚು ಬೆಂಕಿ ಉಂಟಾದಂತೆ ಉಂಟಾಗುವ ಶಬ್ಧದ ಪ್ರಮಾಣವೂ ಹೆಚ್ಚಾಗಿರುತ್ತದೆ.

ಜಗತ್ತಿನ ಅನೇಕ ದೇಶಗಳು ಪಟಾಕಿಯನ್ನು ಬಳಕೆ ಮಾಡುವುದನ್ನು ನಿಷೇದಿಸಿವೆ. ಯಾಕೆಂದರೆ ಕಿವಿಗೆ ಮಾರಕವಾದ ಈ ಶಬ್ದದ ಕಾರಣವೇ ಆಗಿದೆ. ಇದರಿಂದ ಪರಿಸರದಲ್ಲಿ ಏನೆಲ್ಲ ಆಗುವ ಸಾಧ್ಯತೆ ಇರುತ್ತದೆ.

ಕೆಲವು ದೇಶಗಳು ನಿಯಂತ್ರಿಸಿದರು. ಶಬ್ದ ಪ್ರಿಯರಾದ ಭಾರತದವರು ನಾವು ಮಾತ್ರ 'ಕಿವಿಯನ್ನು ಮುಚ್ಚಿಕೊಂಡಾದರೂ ಪಟಾಕಿ ಹಾರಿಸುತ್ತೇವೆ. ಇದು ಸತ್ಯ. ಈ ಪಟಾಕಿ ದುರಂತದಲ್ಲಿ ಎಷ್ಟೋ ಜನ ತಮ್ಮ ಕೈ–ಕಾಲು ಕಣ್ಣುಗಳನ್ನು ಮತ್ತು

ಜೀವವನ್ನು ಸಹ ಕಳೆದುಕೊಂಡಿದ್ದಾರೆ. ಆದರೆ ಈಗ ಕೇಂದ್ರ ಮತ್ತು ರಾಜ್ಯ ಸರ್ಕಾರವು ಎಚ್ಚೆತ್ತುಕೊಂಡು ಅದನ್ನು ಕೆಲವು ಮಾರ್ಪಾಡಿನೊಂದಿಗೆ ಪಟಾಕಿಯನ್ನು ಹಾರಿಸಲು ಅನುಮತಿ ನೀಡಿದೆ.

ಒಟ್ಟಾರೆಯಾಗಿ ವಿಜ್ಞಾನವು ವಾಸ್ತವದೊಂದಿಗೆ ಸುಖಜೀವನ ನಡೆಸಲು ಅನುಕೂಲ ಮಾಡಿಕೊಟ್ಟಿದೆ. ವಿಜ್ಞಾನದ ಸಂಶೋಧನೆಯ ಸಾಮಾಗ್ರಿಗಳಿಂದ ಮಾನವನ ಏಳಿಗೆಗೆ ಮತ್ತು ಯಂತ್ರೋಪಕರಣಗಳ ಅಭಿವೃದ್ಧಿಯು ಆಗಿದೆ. ಕೈಗಾರಿಕೆಯಲ್ಲಿ ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗಿದೆ. ಇದರಿಂದ ಬದಲಾಗುತ್ತಿರುವ ಜಗತ್ತಿನಲ್ಲಿ ವಿಜ್ಞಾನದ ಕೊಡುಗೆಯು ಮಹತ್ವದ್ದಾಗಿದೆ. ಡಾ.ಕೆ.ಎಸ್.ನಿಸಾರ ಅಹ್ಮದ ಅವರ ವಿಜ್ಞಾನದ ವಿಚಾರಗಳು ನಮಗೆ ಯೋಚನೆಗೆ ಅಚ್ಚುತ್ತವೆ. ಜ್ಞಾನಸಂಪಾದನೆಗೆ ತೊಡಗಿಸುತ್ತವೆ. ಅದರಂತೆಯೇ ಎಂ.ಅಬ್ದುಲ್ ರೆಹಮಾನ್ ಪಾಷ ಅವರ ವಿಜ್ಞಾನ ಪ್ರಯೋಗಗಳು ನಮ್ಮಲ್ಲಿ ಆಸಕ್ತಿಯನ್ನು ಕೆರಳಿಸುತ್ತವೆ. ಪ್ರಯೋಗ ಮಾಡುವಂತೆ ನಮಗೆ ಹಚ್ಚುತ್ತವೆ. ಆದರಿಂದ ವಿಜ್ಞಾನವು ಸದಾ ಕಲಿಯುವ ಕಲಿಸುವ ಭವಿಷ್ಯತ್ತನಲ್ಲಿ ಒಳ್ಳೆಯದಾಗುವ ನಿರೀಕ್ಷೆ ನೀಡುತ್ತದೆ. ವಿಜ್ಞಾನದಿಂದ ಅವಗಡಗಳು ಸಂಭವಿಸಿವೆ. ತಪ್ಪಾಗಿ ಕಾರ್ಯಕ್ಕೆ ಬಳಕೆ ಮಾಡಿಕೊಂಡಿದೆ. ಆದರೂ ಸಕಾರಾತ್ಮಕವಾಗಿ ವಿಜ್ಞಾನ ಬಳಕೆ ಮಾಡುವುದು ಆಗಿದೆ. ವಿಜ್ಞಾನದ ಮಹತ್ವವನ್ನು ಅಧ್ಯಯನದಿಂದ ಅರಿಯಬಹುದಾಗಿದೆ.

ಆಕರಗ್ರಂಥಗಳು:

1. ನಾಡೋಜ ಪ್ರೊ. ಕೆ.ಎಸ್.ನಿಸಾರ್ ಅಹಮದ್ 'ಮನದೊಂದಿಗೆ ಮಾತುಕತೆ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006.

2. ಸಂ: ಜೈನುಲ್ಲಾ ಬಳ್ಳಾರಿ 'ವಿಜ್ಞಾನ ಸಂಗಾತಿ' ಮಾರ್ಚ 2016, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2016.

3. ಸಂ: ಜೈನುಲ್ಲಾ ಬಳ್ಳಾರಿ 'ವಿಜ್ಞಾನ ಸಂಗಾತಿ' ಅಕ್ಟೋಬರ್ 2015, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2015.

4. ಸಂ: ಜೈನುಲ್ಲಾ ಬಳ್ಳಾರಿ 'ವಿಜ್ಞಾನ ಸಂಗಾತಿ'ಜನೇವರಿ 2016, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2016.

5. ಪ್ರ.ಸಂ. ಪ್ರೊ. ಮಾಲಿ ಮದ್ದಣ್ಣ 'ಐಚ್ಛಿಕ ಕನ್ನಡ' ಭಾಗ-2, ನವೀನ ಪ್ರಕಾಶನ, ಬೆಂಗಳೂರು 2008.

"ಭಾರತ ಸಿಂಧು ರಶ್ಮಿ" ಮಹಾಕಾವ್ಯದಲ್ಲಿ ಮಾನವ ಜೀವನ ದರ್ಶನ

ಶ್ರೀ ರೆಹಮಾನ ಆಯ್. ಗೊರಜನಾಳ

ಸಂಶೋಧನಾ ವಿದ್ಯಾರ್ಥಿ, ಡಾ॥ ಆರ್.ಸಿ. ಹಿರೇಮಠ ಕನ್ನಡ ಅಧ್ಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 580003

rahimangorajanal28@gmail.com

ಡಾ. ವಿನಾಯಕ ಕೃಷ್ಣ ಗೋಕಾಕ್ ಅವರು ಆಧುನಿಕ ಕನ್ನಡದ ಶಿಖರ ಸಾಹಿತಿಗಳಲ್ಲಿ ಒಬ್ಬರು. ಪೂರ್ವ ಪಶ್ಚಿಮಗಳಲ್ಲಿನ ಇತ್ಯಾತ್ಮಕ ಅಂಶಗಳೆಲ್ಲವನ್ನೂ ಸ್ವೀಕರಿಸಿ, ಸಾಹಿತ್ಯ ಮತ್ತು ಬದುಕು ಎರಡಲ್ಲೂ ಸಮನ್ವಯತೆಯನ್ನು ಸಾಧಿಸಿದ್ದ ವಿನಾಯಕರು ಸಾಹಿತ್ಯ ದೃಷ್ಟಿಯ ಜೊತೆ ಜೊತೆಗೆ ಶ್ರೇಷ್ಠ ದರ್ಜೆಯ ಮೌಲಿಕವಾದ ಸೇವೆಸಲ್ಲಿಸಿದ್ದವರು. "ಭಾರತ-ಸಿಂಧುರಶ್ಮಿ" ವಿನಾಯಕರ ಏಳು ವರ್ಷಗಳ ತಪಸ್ಸಿನ ಫಲವಾಗಿ ಹೊರಬಂದ ಮಹಾಕಾವ್ಯ ವಿಸ್ತಾರ, ಆಳ ಚಿಂತನೆ, ಕಾವ್ಯ ಸೌಂದರ್ಯ- ಈ ಎಲ್ಲ ನೆಲೆಗಳಲ್ಲೂ ಜಗತ್ತಿನ ಮಹಾಕಾವ್ಯಗಳ ಸಾಲಿನಲ್ಲಿರುವ ಈ ಕೃತಿಯಿಂದಾಗಿ ಕನ್ನಡಕ್ಕೆ ಐದನೆಯ "ಜ್ಞಾನಪೀಠ ಪ್ರಶಸ್ತಿ"1 ಲಭಿಸಿದಂತಾಗಿದೆ. ಇದರಲ್ಲಿ ಹನ್ನೆರಡು ಕಾಂಡಗಳಲ್ಲಿ ಎರಡು ಸಂಪುಟಗಳಲ್ಲಿ 2400 ಪಂಕ್ತಿಗಳಲ್ಲಿ (೩೬,೦೦೦) ರಚಿತವಾಗಿರುವ ಕೃತಿ.

ಒಟ್ಟಾರೆಯಾಗಿ, ಡಾ॥ ವಿ.ಕೃ. ಗೋಕಾಕರ ಭಾರತ ಸಿಂಧುರಶ್ಮಿಯು ವೇದಕಾಲದಲ್ಲಿನ ವಿಷಯ ವಸ್ತು ಆಧುನಿಕ ಮಾನವನ ಜೀವನದರ್ಶನ ಮಾಡಿಸುತ್ತದೆ. 'ಕ್ರಿಶಲಿಕುವಿನ ಪ್ರಜ್ಞಾಪ್ರಭಾತ' ಖರವ ಮೇರೆ ವಿನಾಯಕರಿಗೆ ವಿಶ್ವಾಮಿತ್ರನ ಪಾತ್ರ ಮೈಮನಗಳನ್ನು ಹೊಕ್ಕಿತೆಂದರೆ ಅತಿಶಯೋಕ್ತಿ ಯಾಗಲಾರದು ಒಂದೆಡೆ ವೇದಕಾಲದ ಸಾಹಿತ್ಯ, ಸಂಸ್ಕೃತಿ ಇತಿಹಾಸ, ತತ್ವಜ್ಞಾನವಾದ ಕುರುತಾಗಿದ್ದು ಎಲ್ಲ ಮಹತ್ವದ ಗ್ರಂಥಗಳ ತಲಸ್ಪರ್ಶಿಯಾದ ಅಧ್ಯಯನ ಕೈಕೊಂಡಿದ್ದರು. ವಿಶ್ವಾಮಿತ್ರನ ಪಾತ್ರ ಇನ್ನೊಂದು ಕಡೆ ಅವರನ್ನು ಇನ್ನಷ್ಟು ಆಕರ್ಷಿಸಿತು. ತಾವು ಆರಾಧಿಸಿದ 'ಸಂಕೀರ್ಣತೆ'ಗೆ ಅತ್ಯಂತ ಶ್ರೇಷ್ಠ ಮಾದರಿ ವಿಶ್ವಾಮಿತ್ರರ ಪಾತ್ರವಲ್ಲಿ ಅವರಿಗೆ ಬೊರೆಯಿತು. ಅದರ ಫಲವೇ ಈ ಬೃಹತ್ ಕಾವ್ಯದ ರಚನೆ.

ಪ್ರಸ್ತಾವನೆ : ಡಾ. ವಿನಾಯಕ ಕೃಷ್ಣ ಗೋಕಾಕ್ ಅವರು ಆಧುನಿಕ ಕನ್ನಡದ ಶಿಖರ ಸಾಹಿತಿಗಳಲ್ಲಿ ಒಬ್ಬರು. ಪೂರ್ವ ಪಶ್ಚಿಮಗಳಲ್ಲಿನ ಇತ್ಯಾತ್ಮಕ ಅಂಶ'ಗಳೆಲ್ಲವನ್ನೂ ಸ್ವೀಕರಿಸಿ, ಸಾಹಿತ್ಯ ಮತ್ತು ಬದುಕು ಎರಡಲ್ಲೂ ಸಮನ್ವಯತೆಯನ್ನು ಸಾಧಿಸಿದ್ದ ವಿನಾಯಕರು ಸಾಹಿತ್ಯ ದೃಷ್ಟಿಯ ಜೊತೆ ಜೊತೆಗೆ ಶ್ರೇಷ್ಠ ದರ್ಜೆಯ ಮೌಲಿಕವಾದ ಸೇವೆಸಲ್ಲಿಸಿದ್ದವರು. "ಭಾರತ-ಸಿಂಧುರ'ಶ್ಮಿ" ವಿನಾಯಕರ ಏಳು ವರ್ಷಗಳ ತಪಸ್ಸಿನ ಫಲವಾಗಿ ಹೊರಬಂದ ಮಹಾಕಾವ್ಯ ವಿಸ್ತಾರ, ಆಳ ಚಿಂತನೆ, ಕಾವ್ಯ ಸೌಂದರ್ಯ- ಈ ಎಲ್ಲ ನೆಲೆಗಳಲ್ಲೂ ಜಗತ್ತಿನ ಮಹಾಕಾವ್ಯಗಳ ಸಾಲಿನಲ್ಲಿರುವ ಈ ಕೃತಿಯಿಂದಾಗಿ ಕನ್ನಡಕ್ಕೆ ಐದನೆಯ "ಜ್ಞಾನಪೀಠ ಪ್ರಶಸ್ತಿ"1 ಲಭಿಸಿದಂತಾಗಿದೆ. ಇದರಲ್ಲಿ ಹನ್ನೆರಡು ಕಾಂಡಗಳಲ್ಲಿ ಎರಡು ಸಂಪುಟಗಳಲ್ಲಿ 2400 ಪಂಕ್ತಿಗಳಲ್ಲಿ (೩೬,೦೦೦) ರಚಿತವಾಗಿರುವ ಕೃತಿ.

2) "ಭಾರತ ಸಿಂಧು ರಶ್ಮಿ" : "ಭಾರತ ಸಿಂಧು ರಶ್ಮಿ" ಅನೇಕ

ದೃಷ್ಟಿಗಳಿಂದ ಒಂದು ವಿಶಿಷ್ಟವಾದ ಆಧುನಿಕ ಮಹಾಕಾವ್ಯವಾಗಿದೆ. ಹನ್ನೆರಡು ಕಾಂಡಗಳಲ್ಲಿ ಎರಡು ಸಂಪುಟಗಳಲ್ಲಿ ಈ ಬೃಹತ್ ಕೃತಿ ರಚಿತವಾಗಿದೆ. ಇಲ್ಲಿರುವುದು ಅತ್ಯಂತ ಪ್ರಾಚೀನವಾದ ಕಥಾವಸ್ತು "ವೈದಿಕ ಯುಗದ ವಿಶ್ವಾಮಿತ್ರ ಋಷಿಯ ಕಥೆ ಒಂದು ನೆಪವಾಗಿ ಆ ಯುಗದ ಬದುಕಿನ ಸಮಗ್ರ ಚಿತ್ರಣವಿದೆ"2 ಈ ಕಥಾವಸ್ತುವಿನ ಮೂಲಕ ಕೃತಿಗೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ ಒದಗಿದೆ. ಋಗ್ವೇದದ ಕಾಲದ ಬದುಕನ್ನು ನಿರೂಪಿಸುತ್ತಲೇ, ಆ ಬದುಕಿನ ಹಿನ್ನೆಲೆಯಲ್ಲಿ ಆಧುನಿಕ ಮಾನವಜನಾಂಗದ ಬದುಕನ್ನು ಅರ್ಥೈಸುವ ಪ್ರಯತ್ನವಿದೆ. ಅತ್ಯಂತ ಬೃಹತ್ತಾದ ಈ ಕಾವ್ಯರಂಗದ ಮೇಲೆ ಸುಮಾರು ಎರಡುನೂರು ಪಾತ್ರಗಳು ಸುಳದಾಡುತ್ತೇವೆ. ಮಾನವ ಸ್ವಭಾವದ ವೈವಿಧ್ಯಮಯವಾದ ಚಿತ್ರಣವಿದೆ. ಈ ಕಾವ್ಯದಲ್ಲಿ ಅಷ್ಟಾದಶ ವರ್ಣನೆಗಳು, ನವರಸಗಳನ್ನು ಕುರಿತು ಸೂಚನೆ ದೃಷ್ಟಿಕೋನವಿದೆ.

೩) "ಭಾರತೀಯ ಸಂಸ್ಕೃತಿಗೆ ಕನ್ನಡಿ ಹಿಡಿಯುತ್ತದೆ : "ಭಾರತ'ದ ಸಿಂಧುರಶ್ಮಿ"–ಭಾರತೀಯ ಸಂಸ್ಕೃತಿಗೆ ಕನ್ನಡಿ ಹಿಡಿಯುತ್ತದೆ. ಅದರ ವಿವಿಧ ಮುಖಗಳ ಸಮಗ್ರ ಚಿತ್ರಣವಿದೆ. ಭಾರತೀಯ ಸಂಸ್ಕೃತಿಯ ಚರಿತ್ರೆಯನ್ನು ಅದರ ಆರಂಭ, ವಿಕಾಸಗಳನ್ನು ರೂಪಿಸುತ್ತದೆ. ಈ ಹಿನ್ನೆಲೆಯಲ್ಲಿ ಆರ್ಯದ್ರಾವಿಡ ಸಂಸ್ಕೃತಿಗಳ ಘರ್ಷಣೆ, ಅನಂತರದ ಸಮನ್ವಯ ಭಾರತೀಯ ರಾಜರು ವಿದೇಶಿಗಳಿಗೆ ಹೋಗಿ ನೆಲೆಸಿ ಭರತ ಖಂಡದ ವಿಸ್ತಾರವನ್ನು ಹೆಚ್ಚಿಸಿದ್ದು, ಇಂತಹ ಹಲವು ವಿವರಗಳಿಂದ ಕಾವ್ಯ ಇತಿಹಾಸಕ್ಕೆ ತನ್ನದೇ ಆದ ವ್ಯಾಖ್ಯಾನವನ್ನು ನೀಡುತ್ತದೆ.

1) ವಿನಾಯಕ ಕೃಷ್ಣ ಗೋಕಾಕ್ ಭಾರತ ಶಿಂಧು ರಶ್ಮಿ" ಸಂ. –1) ಪು.1

2) ಡಾ॥ ಕೈಲಜಾ ಕೊಪ್ಪರ" ಭಾರತ ಶಿಂಧು ರಸ್ಮಿ"–ಒಂದು ಅಧ್ಯಯನ ಪು. ೩

4) ಡಾ. ವಿ.ಕೆ. ಗೋಕಾಕರ "ಭಾರತ ಸಿಂಧುರಶ್ಮಿ"ಯಲ್ಲಿ ಮಾನವ ಸಂಬಂಧಗಳು :

1) ಸಪ್ತಸಿಂಧೂ ಪ್ರದೇಶ : 'ಭಾರತ ಸಿಂಧೂರಶ್ಮಿ'ಯ ಕೇಂದ್ರಬಿಂದು ವಿಶ್ವಾಮಿತ್ರ ಋಷ್ಷಿ ಬ್ರಹ್ಮಋಷಿ ಪದವಿ ಪಡೆದ ರಾಜರ್ಷಿ. ಗೋಕಾಕರು ಚಿತ್ರಿಸಿದ ವಿಶ್ವಾಮಿತ್ರ ಹರಿಶ್ಚಂದ್ರ ಕಾವ್ಯದಲ್ಲಿ ಓದಿದ ಜಗಳಗಂಟ ವಿಶ್ವಾಮಿತ್ರನಲ್ಲ. ಈ ಪಾತ್ರವನ್ನು ಸೃಷ್ಟಿಸಿದಾಗ ವೈದಿಕ ಪರಂಪರೆಯೇ ಗೋಕಾಕರ ಮುಂದೆ ಇತ್ತು. ಕ್ಷಾತ್ರತೇಜ ಮೆರೆದು ನಂತರ ಆತ್ಮ ವಿಕಸನದ ಬ್ರಹ್ಮತೇಜದೆಡೆ ಒಂದು ಸಪ್ತರ್ಷಿ ಮಂಡದಲ್ಲಿ ಸ್ಥಾನ ಪಡೆದ ವಿಶಾಮಿತ್ರನೇ, ಸಪ್ತ ಸಿಂಧೂ ಪ್ರದೇಶವನ್ನು ಒಂದೆಡೆ ತಂದು ಒಂದೇ ರಾಷ್ಟ್ರ ನಿರ್ಮಾಣ ಮಾಡುವ ಕಾರ್ಯದಲ್ಲಿ ಸುದಾಸನಿಗೆ ಕುಲಪುರೋಹಿತನಾಗುತ್ತಾನೆ. ಉದಾಃ ಮಥಿಸಿದೆಯ ಅರ್ಥದೊಳಗಿಹ ಅಂತರಾರ್ಥವನ್ನು, ಇಲ್ಲದಿರೆ ನಿನಗಿಲ್ಲ ರಸಾಮೃತ ಬರಿ ವಿಷವು!".

2) ಮಾನವತೆಯ ಕತೆಯೆಂಬ ಸಂಬಂಧ ಬೆಸೆಯುವಿಕೆ :ಈ ಮಹಾಕಾವ್ಯದಲ್ಲಿ ವ್ಯಕ್ತಿಗಳಲ್ಲಿ ಮೊದಲನೆಯ ಗುಂಪು ಋಷಿಗಳದು. ಭಾರತದಲ್ಲಿ ಉದಯವಾದ ಮಾನವ ಸಮಾಜದ ಏಳುಬಿಳನ ಅರಿವನ್ನು ಪಡೆದು ಸುದಾಸನಂಥ ಎರಡನೆಯ ಗುಂಪಿನ ವೀರಪುರ ಮೂಲಕ ಅವರಿಗೆ ಪೋಷಕವಾಗಿ ಬರುವ ಕಿರ್ಮೀರ, ಮಾಹೇಶ್ವರಿ ಇವರಂಥ ದುರುಳ ವ್ಯಕ್ತಿಗಳ ನಾಲ್ಕನೆಯ ಗುಂಪು ಮಾನವತೆಯ ವಿಕಸನ ಕ್ರಿಯೆಯನ್ನು ಅಧಃಪತನದತ್ತ ಸೆಳೆಯುವಲ್ಲಿ ಕೆಲಕಾಲ ವಿಜೃಂಭಿಸಿ ಸರ್ವನಾಶ ಹೊಂದುತ್ತವೆ. ಭಾರತದ ಒಳಹೊರಗೆ ಆರ್ಯ ದ್ರಾವಿಡ, ದಶ್ಯಕುಲಗಳಲ್ಲಿ ನಡೆದ ಸಂಘರ್ಷ ಸಮನ್ವಯ ಸಂಬಂಧಗಳ ಮಹಾ ತುಮುಲದಲ್ಲಿ ಭಾಗಿಯಾಗುವ ಜನಸಾಮನ್ಯರ ಐದನೆಯ ಬೃಹದೇತ್ತೆರ ಗುಂಪು, ಇವೆರಡರ ಜೀವನ ಹೋರಾಟದ ಸಂದ್ಯಾಕಾಲದಲ್ಲಿ ಕಣ್ತೆರದ ಹೊಸ ತಲೆಮಾರಿನ ಆರನೆಯ ಗುಂಪಿನ ತರುಣ ವ್ಯಕ್ತಿಗಳು ಭಾರತ ಸಿಂಧುರಶ್ಮಿ ಕಾವ್ಯವನ್ನು ಇಡೀ ಮಾನವತೆಯ ಕತೆಯನ್ನಾಗಿಸುತ್ತಾರೆ. ಇವರೆಲ್ಲರ ಜೀವಂತಿಕೆಯ, ತಿಳವಳಿಕೆಯ ವಿವರಕಾಂತಿಯಿಂದ ಕಾವ್ಯದ ಒಳದ್ದು ರಂಗುರಂಗಾಗಿದೆ. ಉದಾಃ "ದರ್ಶನವಹುದು, ಕಾವ್ಯಾಂಗಮನ; ದರ್ಶನವೆ ಶುಭವನತಿ, ದರ್ಶನಕೆ ಕಾರಣದೇಹವಾಗಿಹುದು ಸಂಕೇತ, ಸೂಕ್ಷ್ಮ ದೇಹವು ಪ್ರತಿಮೆ, ಪ್ರತಿನೆ– ಸಂಕೇತಗಳ, ವಾಗರ್ಥದೇಹವೆ ಕಾವ್ಯ. ಪ್ರತಿಮಾವೈಭೈವವಿಹುದು, ದಶನನವ' ತಿಳವುದಕೆ, ಬರಿ ಪ್ರತಿಮಾ ಪೂಜಕನಲ್ಲ!" ೩

೩) ಮನುಕುಲಹಂಸಕಾಂಡ : ಈ ಮಹಾಕಾವ್ಯದಲ್ಲಿ ಹನ್ನೆರಡು ಕಾಂಡಗಳಲ್ಲಿ ಎಷ್ಟೇ ವೈವಿಧ್ಯವಿದ್ದರೂ ಪ್ರತಿಕಾಂಡದಲ್ಲಯೂ ಮಾನವೀಯತೆ–ತನ್ನ ಎಲ್ಲ ಹಿರಿಮೆಗರಿಮೆಗಳೊಂದಿಗೆ ದೌರ್ಬಲ್ಯ ಪ್ರಾಬಲ್ಯಗಳೊಂದಿಗೆ, ಸಾಹಸ, ದುಸ್ಸಾಹಸ, ಅಪಹಾಯಕ ಚಿತ್ತಾರ, ರಮ್ಯ ಸಂಭ್ರಮ ನಿರ್ಮಲ ತಪೋಜೀವನಗಳೊಂದಿಗೆ

೩) ಗೋಕಾಕರ" ಭಾರತ ಶಿಂಧು ರಸ್ಮಿ" ಸಂ. 1 –ಪು– ಥಥಾ

ಕೇಂದ್ರ ವಸ್ತುವಾಗಿ ನಿಲ್ಲುತ್ತದೆ ಉದಾಹರಣೆಗೆ 'ಮನುಕುಲ ಹಂಸಕಾಂಡ' ದಲ್ಲಿ ವೈವಸ್ವತಮನು ಸತ್ಯವ್ರತ ಮಹಾರಾಜ ದ್ಯಾನದಲ್ಲಿ ಕಂಡ ತಿಳವಳಿಕೆಯನ್ನು ಗಮನಿಸಬೇಕು. "ತಮ್ಮೊಳಗೆ ತಾನು ಧೇನಿಸಿದಂತೆ ಹಿರಿದಾಯ್ತು ಮನುಕುಲದ ಮಹೋನ್ನತಿಯು ವಿಕಸನದ ಜೀವನವು ವಿಶ್ವದಲ್ಲಿ ಮತ್ತಾವಗಣಕಿಲ್ಲ ಕುಲಕಿಲ್ಲ."

4) ಸತ್‌ಪುತ್ರನನ್ನು ಪಡೆಯುವ ಹೆಬ್ಬಯಕೆ : ಕಾನ್ಯಕುಬ್ಜದ ದೊರೆ ಗಾಧಿರಾಜನ ಪತ್ನಿ ಊರ್ವಿದೇವಿ ಹಾಗೂ ಅವರ ಪುತ್ರಿ ಸತ್ಯವತಿ. ಇವರಿಬ್ಬರಿಗೂ ಸತ್‌ಪುತ್ರನನ್ನು ಪಡೆಯುವ ಹೆಬ್ಬಯಕೆ ಉಂಟಾಗುತ್ತದೆ. ಭೃಗುವಂಶದ ಋಷೀಕೆ ಎಂಬ ಋಷಿಯ ಸತ್ಯವತಿಯ ಕೈಹಿಡಿದುರುತ್ತಾನೆ. ತಾಯಿ, ಮಗಳು ಅವನಿಗೆ ಶರಣು ಹೋಗುತ್ತಾರೆ. ಅವನು ಅವರಿಬ್ಬರಿಗೂ ಮಂತ್ರಿಸಿದ ಪಾಯಸವನ್ನೂ ಎರಡು ಬಟ್ಟಲುಗಳಲ್ಲಿ ಕೊಡುತ್ತಾನೆ. ಇಬ್ಬರೂ ತಮಗೆ ಕೊಟ್ಟ ಪಾಯಸ ಅದಲು ಬದಲು ಮಾಡುತ್ತಾರೆ. ಅವರಿಬ್ಬರೂ ಗರ್ಭಧರಿಸುತ್ತಾರೆ ಬದಲಾಸಿದ ಪಾಯಸದ ವಿಷಯ ತಿಳಿದಾಗ ಋಷಿ ಅವರಿಗೆ ಹೇಳುತ್ತಾನೆ6 ನಿಮಗೆ ಹೊಟ್ಟಿಲಿರುವ ಸಂತಾನ ಕೂಡ ಮಂತ್ರ ಪ್ರಭಾವದಿಂದ ಬೇರೆ ಬೇರೆ ಸ್ವಭಾವ ಪಡೆದಿರುತ್ತದೆ. ಊರ್ವಿದೇವಿಗೆ ಬ್ರಹ್ಮ ತೇಜಸ್ಸಿನ ಪುತ್ರ ಜನಿಸಿದರೆ, ಸತ್ಯವತಿ ಕ್ಷಾತ್ರತೇಜದ ಮಗ ಜನಿಸುತ್ತಾನೆ. ಆಗ ಸತ್ಯವತಿ ಋಷಿಗೆ

ಬೇಡಿಕೊಳ್ಳುತ್ತಾಳೆ 'ನನ್ನ ಮೊಮ್ಮಗ ಕ್ಷಾತ್ರತೇಜದವನಾಗಿರಲಿ' ಎಂದು ಇದರ ಪ್ರಕಾರ ಊರ್ವಿದೇವಿಗೆ ವಿಶ್ವರಥ (ನಂತರ ವಿಶ್ವಮಿತ್ರಾ) ಮಗನಾಗಿ ಹುಟ್ಟುತ್ತಾನೆ. ಸತ್ಯವತಿಗೆ ಜಮದಗ್ನಿ ಮಗನಾಗಿ ಹುಟ್ಟುತ್ತಾನೆ. ಅವಳ ಮೊಮ್ಮಗನೆ ಕ್ಷಾತ್ರತೇಜದ ಪರುಶುರಾಮ.

5) ವಿಶ್ವರಥ ಸಂಕೃತಿಯನ್ನು ಮದುವೆಯಾಗುತ್ತಾನೆ : ವಿಶ್ವರಥನ ವಿದ್ಯಾಭ್ಯಾಸ ಮುಗಿದಾಗ ಅವನ ತಂದೆ ಅವನಿಗೆ ಪಟ್ಟಗಟ್ಟಿ ತಾನು ವಾನಪ್ರಸ್ಥಾಶ್ರಮಕ್ಕೆ ತೆರಳುವ ಇಚ್ಛೆ ವ್ಯಕ್ತಪಡಿಸುತ್ತಾನೆ. ರಾಜ್ಯದ ಭಾರ ಹೊರುವ ಮುನ್ನ ಒಂದು ವರ್ಷದವರೆಗೆ ಸಪ್ತಸಿಂಧು ಪ್ರದೇಶದ ಯಾತ್ರೆಮಾಡಿ ಬರುವ ಆಸೆ ವ್ಯಕ್ತಪಡಿಸುತ್ತಾನೆ. ಭಾರತ ಸಿಂಧುರಶ್ಮಿ ಕೂಡ ಪಾಶ್ಚಾತ್ಯ ಕಾವ್ಯಗಳಂತೆ' ಮೀಡಿಯಾಸ್‌ರೆಸ ಅಂದರೆ ಕಥಾ ಮಧ್ಯದಿಂದಲೇ ಆರಂಭಗೊಳ್ಳುತ್ತದೆ. "ಮೊದಲನೆಯ ಸಂಧಿ ಶರ್ಯಾಣಾವತೆ ಸಮುದ್ರ'ದ ವರ್ಣನೆಯಿಂದ ಪ್ರಾರಂಭವಾಗುತ್ತದೆ. ವಿಶ್ವರಥನು ಭೂಸಂಚಾರ ಕೈಗೊಂಡು ಈ ಸುಂದರ ಪ್ರದೇಶಕ್ಕೆ ಬಂದಿರುತ್ತಾನೆ. ವಿಶ್ವರಥನು ಪಯಣದಲ್ಲಿ ದಶ್ಯೂರಾಜ ಅಭೀರನನ್ನು ಹುಲಿಯಿಂದ ರಕ್ಷಿಸಿ ಅವನ ಸ್ನೇಹಿತನಾಗುತ್ತಾನೆ. ದೂರದ ಸಂಬಂಧಿಯಾಗಿದ್ದ ಸುದಾಸನ ಅತಿಥಿಯಾದಾಗ ಅವನ ತಂಗಿ ಸಂಕೃತಿಯಲ್ಲಿ ಅನುರಕ್ತನಾಗುತ್ತಾನೆ. ತಂದೆಯಿಂದ ಬಹಿಷ್ಕೃತನಾದ ಪಾಪಕರ್ಮದಿಂದ ತಿಶಂಕುವಾದ ಸತ್ರವ್ರತನೆ ಸ್ಥಿತಿಯನ್ನು ಬದಲಾಯಿಸಲು ಪ್ರಯತ್ನಿಸುವುದಾಗಿ ಹೇಳುತ್ತಾನೆ. ಇಷ್ಟರಲ್ಲಿ ತಂದೆಯ ಮರಣವಾರ್ತೆ ತಲುಪುತ್ತದೆ. ತನ್ನ ರಾಜ್ಯಕ್ಕೆ ಧಾವಿಸುತ್ತಾನೆ. ವಿಶ್ವರಥನ ರಾಜ್ಯಾರೋಹಣವಾದ ಮೇಲೆ ಅವನ ತಾಯಿ ಸಹಗಮನಮಾಡಿ ಪ್ರಾಣತ್ಯಾಗ ಮಾಡುತ್ತಾಳೆ. ವಿಶ್ವರಥ ಸಂಕೃತಿಯನ್ನು ಮದುವೆಯಾಗುತ್ತಾನೆ"4

4) ಡಾ॥ ಜೀ.ವಿ. ಕುಲಕರ್ಣಿ ನಾಕಂಡ ಗೋಕಾಕ ಜೀವನ ಮತ್ತು ಸಾಹಿತ್ಯ (ಸಹವಿನದು) ಪು–234–235

6) ಜೀವನಕ್ಕೆ ದೊಡ್ಡ ತಿರುವು : ಸುದಾಸನ ಮದುವೆಗೆ ವಿಶ್ವರಥ ಹೋದಾಗ ವಶಿಷ್ಠರನ್ನು ಕಾಣುತ್ತಾನೆ. ವಶಿಷ್ಠರೇ ಪೌರೋಹಿತ್ಯ ವಹಿಸುತ್ತಾರೆ. ಭಾವನೆ ಮದುವೆಗೆ ಹೋದ ವಿಶ್ವರಥ, ಮರಳುವಾಗ ವಶಿಷ್ಠರ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಅಲ್ಲಿ ಕಾಮಧೇನುವಿನ ಸಂತಾನವಾದ 'ನಂದಿನಿ'ಯನ್ನು ಕಂಡು ಮೋಹಿತವಾಗಿ ಬೇಡುತ್ತಾನೆ. ಕೊನೆಗೆ ಬಲತ್ಕಾರದಿಂದ ಅಪಹರಿಸುವ ಯತ್ನದಲ್ಲಿ ವಿಫಲನಾಗುತ್ತಾನೆ. ಅವನ ಗರ್ವಭಂಗವಾಗುತ್ತದೆ. ಇದೇ ವಿಶ್ವರಥನ ಜೀವನಕ್ಕೆ ದೊಡ್ಡ ತಿರುವು ನೀಡುತ್ತದೆ. ರಾಜಪುರೋಹಿತರ ಮಾರ್ಗದರ್ಶದಲ್ಲಿ ಸಂಸ್ಕೃತಿಗೆ ರಾಜ್ಯಭಾರವನ್ನು ಒಪ್ಪಿಸಿ ತಪಃಶ್ಚರ್ಯೆ ಮಾಡಲು ಕಾಡಿಗೆ ತೆರಳುತ್ತಾನೆ. ಇದೇ ಸಂಧಿಸಾಧಿಸಿ ರೌಹಿಣ ತನ್ನ ಸ್ನೇಹಿತರೊಡನೆ ಕಾನ್ಯಕುಬ್ಜದ ಮೇಲೆ ದಾಳ ಮಾಡುತ್ತಾನೆ. ಹೋರಾಟದಲ್ಲಿ ವಿಫಲಳಾದ ಸಾಂಕೃತಿ ಅಭೀರನ ಸಹಾಯದಿಂದ ಸಂಸ್ಕೃತಿ ಹಾಗೂ ಅವಳ ಮಕ್ಕಳಿಗೆ ಆಶ್ರಯ ನೀಡುತ್ತಾನೆ. ವ್ಯಾಧಿಗ್ರಹಸ್ತಳಾಗಿ ಸಾಂಕೃತಿ ಸಾಯುತ್ತಾಳೆ. ವಿಶ್ವರಥನಿಗೆ ಕನಸಿನ ಮೂಲಕ ಸಾಂಕೃತಿಯ ಮರಣದ ವಿಷಯ ತಿಳಿಯುತ್ತದೆ. ಕಾಡಿನಲ್ಲಿ ಅವನ ಸೇವೆ ಸಲ್ಲಿಸುತ್ತಿದ್ದ ಮಂತ್ರಿ ಮಹಷ್ಮಂತನನ್ನು ಕಳಿಸಿ ಸಾಂಕೃತಿಯ ವಿಷಯ ತಿಳಿದುಕೊಂಡು ಬರಲು ಹೇಳುತ್ತಾನೆ.

ಏಕಾಕಿಯಾಗಿರುವ ವಿಶ್ವರಥನ ಧ್ಯಾನದಲ್ಲಿ ನಗ್ನ ಸುಂದರಿಯೋರ್ವಳ ದರ್ಶನದಿಂದಾಗಿ ಚಿತ್ತ ವಿಚಲಿತವಾಗುತ್ತದೆ. ಅವನಲ್ಲಿದ್ದ ಕಾಮದ ದೋಷ ನಿವಾರಿಸಲು ಇಂದ್ರ ಅಪ್ಸರೆ, ಮೇನಕೆಯನ್ನು ಕಳಿಸುತ್ತಾನೆ. ಪ್ರೇಮದ ವಿವಿಧ ಮುಖಗಳ ಬಗ್ಗೆ ವಿಶ್ವರಥ ಅವಳೊಂದಿಗೆ ಚರ್ಚಿಸುತ್ತಾನೆ. 'ಸತಿಯ ಪ್ರಿಯತಮಭಾವ ಅವಳ ತಾಯ್ತನದಲ್ಲಿ' ಎಂದು ಅವಳಿಗೆ ಹೇಳಿದಾಗ ಅಪ್ಸರೆ ನಾಗಕನ್ನಿಕೆಯಾಗಿ ಮರೆಯಾಗುತ್ತಾಳೆ (ಗೋಕಾಕರ ಕಲ್ಪನೆ) ಮುಂದೆ ವಿಶ್ವರಥ ಪ್ರಗತಿ ಪಥದಲ್ಲಿ ಸಾಗಿ 'ಗಾಯಿತ್ರಿ' ಮಂತ್ರದ ದೃಷ್ಟಾರನಾಗುತ್ತಾನೆ. ಮಾತೆ ಅದಿತಿ ಪ್ರತ್ಯಕ್ಷಳಾಗುತ್ತಾಳೆ. ಸಪ್ತಸಿಂಧುವಿನ ಪುನರುದ್ಧಾರ ಕಾರ್ಯದಲ್ಲಿ ಸಕ್ರಿಯ ಪಾತ್ರವಹಿಸಲು ವಿಶ್ವರಥನಿಗೆ ಹೇಳುತ್ತಾಳೆ. ಇದೇ ವೇಳೆಗೆ ವಿಶ್ವರಥ 'ವಿಶ್ವಮಿತ್ರ'ನಾಗುತ್ತಾನೆ.

7) ಹೆಂಡತಿ ಹಾಗೂ ಮಕ್ಕಳಿಗೆ ಆಶ್ರಯ : ಸತ್ಯವ್ರತ (ತ್ರಿಶಂಕು) ತನ್ನ ಹೆಂಡತಿ ಸತ್ಯರಥೆಯನ್ನು ಅನ್ಯೋನ್ಯವಾಗಿ ಪ್ರೀತಿಸುತ್ತಾನೆ. ಅವಳ ಮರಣದ ನಂತರ ಅವನಿಗೆ ವಿರಕ್ತಿಯುಂಟಾಗಿ ತನ್ನ ರಾಜ್ಯವನ್ನು ಪುತ್ರ ಹರಿಶ್ಚಂದ್ರನಿಗೆ ಒಪ್ಪಿಸುತ್ತಾನೆ. ಹೆಂಡತಿಯ ಇಚ್ಛೆಯಂತೆ ತಾನು ಸದೇಹ' ಸ್ವರ್ಗಸೇರಿ ಅವಳನ್ನು ಕೊಡುವ ಬಯಕೆಯನ್ನು ವಿಶ್ವಾಮಿತ್ರನಿಗೆ ತಿಳಿಸುತ್ತಾನೆ. ಸದೇಹಸ್ವರ್ಗ ಸಾಧ್ಯವಿಲ್ಲವೆಂಬುದು ವಿಶ್ವಾಮಿತ್ರನಿಗೆ ಗೊತ್ತಿರುತ್ತದೆ. ಆದರೆ ತಾನು ತಪಸ್ಸಿಗೆ ಹೋದಾಗ ಸತ್ಯರಥ ತನ್ನ ಹೆಂಡತಿ ಹಾಗೂ ಮಕ್ಕಳಿಗೆ ಆಶ್ರಯ ನೀಡಿದ್ದ. ಆ ಋಣವನ್ನು ತೀರಿಸಲು ಅವನ ಇಚ್ಛಾಪೂರ್ತಿಗೊಳಿಸಲು ತನ್ನ ತಪಃ ಶಕ್ತಿಯನ್ನು ಧಾರೆಯರೆಯಲು ನಿಶ್ಚಯಿಸುತ್ತಾನೆ. ಅದಕ್ಕಾಗಿ ವಿಶೇಷ ಯಜ್ಞ ಹೊಡುತ್ತಾನೆ. ಯಜ್ಞ, ಸಾಗಿದಂತೆ ಸತ್ಯವೃತ ಮೇಲೇರಿ ಸ್ವರ್ಗ, ಬುದ್ಧಿ. ಕಲ್ಪಕತೆಯ ಮೂರುಲೋಕಗಳಲ್ಲಿ ಸಂಚರಿಸುತ್ತಾನೆ. ಅವುಗಳಿಗಿಂತ ಹುಲ್ಲಿನ ಎಸಳೇ ಮೇಲೆಂದು ಭಾವಿಸಿ ಭೂಮಿಯತ್ತ ಹೊರಳುತ್ತಾನೆ. ಅವನ ವಿಕಲ್ಪವನ್ನು ಗಮನಿಸಿದ ವಿಶ್ವಾಮಿತ್ರ ಅವನನ್ನೂ ಮೇಲಕ್ಕೆ ಒತ್ತುತ್ತಾನೆ. ಭೂಮಿಯ ಆಕರ್ಷಣ ಹಾಗೂ ವಿಶ್ವಾಮಿತ್ರ ಊರ್ಧ್ವಗಮನ ಯತ್ನದ ನಡುವೆ ಸತ್ಯವ್ರತ ಸಿಲುಕುತ್ತಾನೆ. ಅವನಿಗೆ ಸರಸ್ವತಿ ದರ್ಶನವಾಗುತ್ತದೆ. ಉದಾಃ ಅವಳಲ್ಲದಾಗಿರಲು ಮುನ್ನೊಕಿ ಹೊಲ್ಲಪ್ರಜ್ಞೆ, ಬಾಳ ಬೇರುಗಳನೆಲ್ಲಾ ಡಿಸಿದೆ ಚಂಡಪತ'ನ. ವಿಶ್ವರಥ ನೃಪನಡಿಗೆ ಶರಣೆಂದು ಅಂದೆರಗಿದೆ. ವಿಶ್ವಾಮಿತ್ರಾ ಋಷಿವರರಿಗನ್ನು ಗೆ'ಯ್ಯುವೆನು ನಮನ ಅವರಾರ್ಷ ಧ್ವನಿ ಕೇಳ ತೊಲಗಬಹುದೀ ಮೈಲಿಗೆ ಅವರ ಅಮೃತ ಸ್ಪರ್ಶನಕೆ ಅಹುದು ತನು–ಮನ ಪುನೀತ. ಬೆಳಗುವದು ಮಹರ್ಷಿ ಕರುಣಿಸಿದ ಸ್ಫುರಣದಿಂದ ಊರ್ಧ್ವ ಪಯಣ, ಸರಾಗವಾಗುವುದು ಬಾಳ ಗೀತ!" 5

8) ನರಮೇಧ ಯಾಗ : ವಿಶ್ವಾಮಿತ್ರನ ಸಿದ್ಧಿಗೆ ಬರೆಗಲ್ಲಾದ ಘಟನೆಯು ಶುನಶ್ಯೇಪಾಖ್ಯಾನದಲ್ಲಿದೆ. ತ್ರಿಸಂಕುವಿನ ಮಗನಾದ ಹರಿಶ್ಚಂದ್ರನು ಮಗನನ್ನು ಪಡೆಯಲು ವರುಣನ ಮೊರೆ ಹೋಗುತ್ತಾನೆ. ಹುಟ್ಟಿದ ಮಗನನ್ನೇ ಬಲಿಕೊಡುವುದಾಗಿ ಮಾತು ಕೂಡುತ್ತಾನೆ. ಮಗ ಹುಟ್ಟಿದ ನಂತರ 'ಇಂದಿಲ್ಲ ನಾಳೆ' ಎಂದು

ನೆಪ ಒಡ್ಡುತ್ತಾನೆ. ಮಗ ರೋಹಿತಾಶ್ವ ಅರ್ಜಿಗರ್ತನೆಂಬ ಬ್ರಾಹ್ಮಣ ಮಗ ಶುನಃ ಶೇಪನನ್ನು ಕ್ರಯಕ್ಕೆ ಪಡೆದು ತನ್ನ ಬದಲಾಗಿ ನರಮೇಧ ಮಾಡುವುದಾಗಿ ಮುಂದೆ ಬರುತ್ತಾನೆ. ವರುಣ ಇದಕ್ಕೆ ಒಪ್ಪುತ್ತಾನೆ. ಈ ನರಮೇಧ ಯಾಗಕ್ಕೆ ವಿಶ್ವಾಮಿತ್ರನೇ ಅಧ್ಯವರ್ಯು ಆಗುತ್ತಾನೆ. ವಿಶ್ವಾಮಿತ್ರ ಶುನಃಶೇಪನಿಗೆ ಪಾರಾಗುವ ಮಾರ್ಗಸೂಚಿಸುತ್ತಾನೆ. ವರುಣನನ್ನು ಪ್ರಾರ್ಥಿಸಲು ಹೇಳುತ್ತಾನೆ. ನರಮೇಧನದಿಂದ ಪಾರಾದ ಶುನಃಶೇಪ ಎಲ್ಲರ ಆದರಕ್ಕೆ ಪಾತ್ರನಾಗುತ್ತಾನೆ.

ಅವನನ್ನು ಮಾರಿದ ನಂತರ ಗೋವುಗಳ ಆಸೆಯಿಂದ ಯೂಪಸ್ತಂಭಕ್ಕೆ ಕಟ್ಟಿದ. ಯಾರೂ ವಧಿಸಲು ಸಿದ್ಧರಾಗದೆ ಇದ್ದಾಗ, ಗೋವುಗಳ ಆಸೆಯಿಂದ ಮಗನನ್ನು ವಧಿಸಲೂ ಸಿದ್ಧನಾದ ತಂದೆ ಅಜೀಗರ್ತ ಈಗ ಮಗನನ್ನು ಸ್ವಾಗತಿಸುತ್ತಾನೆ. "ಬಾ, ಮಗುವೆ ಬಾ ಶುನಃಶೇಪ, ನಾವಿದ್ದೆಡೆಗೆ ನನ್ನೊಡನೆ ಕಣ್ಣೀರಿಡುವ ತಾಯಿಯ ಬಳಗೆ, ನಿನ್ನ ಬರವನ್ನೆದುರು ನೋಡಿಹರಣ್ಣ ತಮ್ಮೆದುರು ಶುನಃಪುಚ್ಛ, ಶುನೋಲಾಂಗುಲ, ಅನ್ನಾನುಗತಿಕನಿಗೆ ಮಾರಿಕೊಂಡೆನು ನಿನ್ನ, ತಪ್ಪೆಣಸದಿರು ಕ'ಂದ". ಅದಕ್ಕೆ ಶುನಃಶೇಪ 'ನಿನ್ನ ಬಾಯೊಳು ಶೋಭಿಸಬಹುದೆ ನುಡಿಗಳವು?' ಎಂದು ತಂದೆ ಮಾಡಿದ ಅನ್ಯಾಯ ನೆನೆಯುತ್ತಾನೆ. ಆಗ ಇವನು 'ದೇವಸಂತತಿ' ಎಂದು ಕರೆದು 'ದೇವರಾತ' ಎಂಬ ಹೆಸರನ್ನಿಟ್ಟು ತನ್ನ ಮಗನನ್ನಾಗಿ ವಿಶ್ವಾಮಿತ್ರ ಸ್ವೀಕರಿಸುತ್ತಾನೆ.

5. ವಿನಾಯಕ ಕೃಷ್ಣ ಗೋಕಾಕ್ ಭಾರತ ಸಿಂಧುರಶ್ಮಿ' ಸಂ–2 ಪು–499.

9) ಆಯುಷ್ಯ ಮತ್ತು ಸಂತಸದ ಸಂತಸ : 'ಭಾರತ ಸಿಂಧುರಶ್ಮಿ' ಕಾವ್ಯದ ಮುಕ್ತಾಯದಲ್ಲಿ ನೂರು ವರ್ಷ ಪೂರ್ತಿಗೊಳಿಸಿದ ವಿಶ್ವಾಮಿತ್ರ ಋಷಿ ಎರಡು ನೂರು ವರ್ಷ ಬಾಳಲಿ ಎಂದು ಮೃತ್ಯುಂಜಯ ಹೋಮ ನಡೆಸುವ ವರ್ಣನೆಯಿದೆ. ಭಾರತದ ನಾನಾ ಭಾಗದಿಂದ ಋತ್ವಿಜರು ಬರುತ್ತಾರೆ. ತೃತ್‌ಸುಪುರಿಗಾಗಮಿಸಿ ವಿಶ್ವಾಮಿತ್ರರಿಗೆ ಸಾಸ್ಟಾಂಗವೆರಗುತ್ತಾರೆ. "ಶತಾಯುಷ್ಮಂತರಿಗೆ ಮಣಿಯ ಬಂದಿಹವಾವು, ಆದರ್ಶ ನೈಪತಿಗಳು, ಕಿಲಪತಿ, ವಾಕ್ಪತಿ ತಾವು. ಕ್ರಾಂತದರ್ಶನವಿದ್ದ ಸಂಕ್ರಾಂತಿ ಪುರುಷರು, ದ್ವಿಶತಾಬ್ಧ ಪರ್ಯಂತ ತಮ್ಮ ಸನ್ನಿಧಿ ಲಭಿಸಿ ಧನ್ಯರಿರಲೆಂದಾವು ಆಯುಷ್ಯ ಹೋಮವ ಯಜಿಸಿ ಹಿಗ್ಗುವೆವು. ಒಪ್ಪಿಹರು ಚಕ್ರವರ್ತಿಗಳದಕೆ, ಅಭೀಷ್ಟವ ಆಶೀರ್ವದಿಸಿ." ಈ ಮಾತಿಗೆ ವಿಶ್ವಾಮಿತ್ರ "ನಿಮಿಷ್ಠಭಂಗ ನನ್ನಿಂದೇಕೆ ನಿಮ್ಮಭೀಷ್ಟೆಕೆ? ನಿಮಗೆ ಸಂತಸ ತರುವ ಸಂತಸದ ಉಪಕರಣವಾಗುವನು" ಎಂದು ಸಹಕಾರ ನೀಡುತ್ತಾರೆ.

10) ಭವ್ಯಯಜ್ಞ & ದಾಂಪತ್ಯ ಸುಖದ ಪ್ರಶ್ನೆ–ಉತ್ತರ : ಸರಸ್ವತಿ ನದಿಯ ತೀರದಲ್ಲಿ ಭವ್ಯಯಜ್ಞ ಮಂಟಪ ನಿರ್ಮಾಣವಾಗುತ್ತದೆ. ಈ ಯಜ್ಞಕ್ಕೆ ಮೆಧು ಛಂದಸನು ಯಜಮಾನ್ಯವಹಿಸುತ್ತಾನೆ. ಸುದಾಸ, ಅವನ ಪತ್ನಿ ಅಂಬಾದೇವಿ ಕೇಳಿದ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡುತ್ತಾರೆ. ಹಲವಾರು ನೃಪತಿಗಳು ಯಜಮಾನರು ವಿಶ್ವಾಮಿತ್ರರನ್ನು ಕಾಣಲು ಬರುತ್ತಾರೆ. ತ್ರಿಶಂಕುವಿನ ಮಗ ಹರಿಶ್ಚಂದ್ರ, 'ಋಷಿವರರೆ, ಸತ್ಯಾವಾವುದು? ಸತ್ಯವತ್ರನಾರು? ಎಂದು ಪ್ರಶ್ನಿಸುತ್ತಾನೆ. "ಸತ್ಯ ತರ್ಕವಶವಲ್ಲ. ಅರ್ಕನೇತ್ರಕೆ ವಶವು" ಎಂದು ಉತ್ತರಿಸುತ್ತಾರೆ. ಪುತ್ರ ರೋಹಿತ ಬಂದು ತಾನು ವಿವಾಹದಲ್ಲಿ ದೈವಶಾಲಿಯಾಗುವೇನೊ? ಎಂದು ಪ್ರಶ್ನಿಸುತ್ತಾನೆ.

"ಲೆತ್ತೆದಾಟುವು ಮದುವೆ, ಬ್ರಹ್ಮ, ದೈವವಿವಾಹ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ, ಪೈಶಾಚ" ಈ ಎಂಟು ವಿಧದ ಮದುವೆಯಲ್ಲ 'ಯಾವ ವಿಧದ ದಾಂಪತ್ಯ ಸುಖ? ಇದೆ. ಎಂದು ಕೇಳಲು ಮಾರ್ನುಡಿದವರು ಕೌಶಿಕರು "ಅಷ್ಟ ವಿಧಗಳಲೊಂದು" "ಇಷ್ಟವಿಹ ವಿಧದಿಂದ ಮನವಂದ ವಧು ಬಂಧು ಬಾಳೋಳು ಜೇನು ತುಂಬಿಗಳು, ದೈವಾಯುತ್ತ ವಿರಲು ವಧು. ವಿಷವಿರಲಿ, ಮಧುವಿರಲಿ, ವಿಕಸನ, ದೈವಾಯುತ್ತ" 6 ಎನ್ನುತಾನೆ.

11) ಕಪಿಂಜಪಕ್ಷಿ, ವಿಶ್ವಾಮಿತ್ರ ಮತ್ತು ಮಾನವ ಕರುಣೆ : ವಿಶ್ವಾಮಿತ್ರರ ವಿಶ್ವಮೈತ್ರಿ ಭಾವದ ಶಿಖರ ಸನ್ನಿವೇಶವೆನಿಸುತ್ತದೆ. ಕಪಿಂಜಲಪಕ್ಷಿ ವಿಶ್ವಾಮಿತ್ರರ ಮಾನವ ಕರುಣೆಯ ಪ್ರತೀಕವಾಗುತ್ತದೆ. ವಿಶ್ವಾಮಿತ್ರರ ಉತ್ತಮಾಂಗದ ಮೃದುವಾದ ಬ್ರಹ್ಮ ರಂಧ್ರದಿಂದ ರತಜಪ್ರಭೆ ಬೆಳಗುತ್ತದೆ ಸೌರಜ್ಯೋತಿಯ ಜ್ವಾಲೆ ಅಲ್ಲಿಂದ ನಗೆಯುತ್ತದೆ. ಸುದಾಸ ಅಂಬಾದೇವೀ ಶಯ್ಯಾಗೃಹದಿಂದ ಪಕ್ಕನೆ ಎದ್ದು ಅನರ್ಘ್ಯ ರತ್ನ ಕಳಚಿತು ಎನ್ನುತ್ತಾರೆ. ದೇವರಾತ ಬಿಕ್ಕುತ್ತಾನೆ. "ಓ ನನ್ನ ತಾಯ್ತಂದೆ, ನನ್ನ ಗುರು, ನನ್ನ ಪುರುಷನೆ, ಪರಮ ವ್ಯೋಮ, ಅರಳಿಗೆಯಲಿ ಮರುಳುವನಿತರೊಳು ತೆರಳುವರೆ? ಎಂದು ರೋದಿಸುತ್ತಾರೆ".

6. ಡಾ॥ ಸಾ. ಶಿ. ಮರುಳಯ್ಯ "ಜ್ಞಾನಪೀಠ ಸಾಹಿತ್ಯ ಪು–415

ಯುಗ ಯುಗಕೆ ವಿಶ್ವಾಮಿತ್ರರರುದಿಸಲಿ ಪೃಥ್ವಿಯುದರದಲಿ, ಅಭ್ಯುದಯ ನಿ: ಶ್ರೇಯಗಳಿಗೆ ಮಾಡಲಿ ದಾರಿ ಸಪ್ತರಶ್ಮಿ ದರ್ಶನದ ಭವ್ಯಭವನದಲ್ಲ, ಮರ್ತ್ಯಗಳದಲಿ ದೇವಮಾನವರಾಗಿ! ಮಾರ್ಪಡಲಿ ಮರ್ತ್ಯಸಮಾಜ, ಆಗಿ ದಿವ್ಯಸಮಾಜ. ಎಂದು ಸನಾತನ ಮಹಾಕಾವ್ಯವಾಗಿದೆ.

12) ಶ್ರೀ ಸಾಮಾನ್ಯನಮಟ್ಟಕ್ಕೆ ಸಂದೇಶ ತಲುಪಿಸಿದರು : ಬೇಡನಾದ ವಾಲ್ಮೀಕಿ ಪಕ್ಷಿಯ ಬೇಟೆಯ ದೃಶ್ಯದಿಂದ ರಾಮಾಯಣ ಮಹಾಕಾವ್ಯದರ್ಶಿಯಾದ ಋಷಿಯಾದ. ಭಾರತದ ಭೌಗೋಲಿಕ ಕ್ಷೇತ್ರಕ್ಕೆ ಪರಿಮಿತವಾದರೂ ಒಟ್ಟು ಮಾನವ ವ್ಯಕ್ತಿತ್ವದಲ್ಲಯ ಬೇಡಬುದ್ಧಿ, ತೊಲಗಿ, ಆರ್ಯ–ದಶ್ಯು ಜನಾಂಗಗಳಲ್ಲ ಮೈತ್ರಿ ಸಂಘಟಿಸಿದಂತೆ, ಮಾನವತೆಯಲ್ಲಿಯ ಬೇಡಬುದ್ಧಿ–ಜೀವಹಿಂಸೆ ತೊಲಗಿ ವಿಶ್ವಮೈತ್ರೀ ಉದಯಿಸುವ ದರ್ಶನವನ್ನು ವಿಶ್ವಾಮಿತ್ರರ ಕಂಡು ಸುದಾಸನಂತಹ ವೀರನ ಮೂಲಕ ಶ್ರೀ ಸಾಮಾನ್ಯನ ಮಟ್ಟಕ್ಕೂ ಆ ಸಂದೇಶ ತಲುಪಿಸಿದರು. ಆ ಸಿಂಧುರಶ್ಮಿಯ ದರ್ಶನ ಶ್ರೀ ವಿನಾಯಕರ ಮೆಚ್ಚುಗನ್ನಡದ' ಸಂಕೀರ್ಣ ಪ್ರಜ್ಞಾಭಿವ್ಯಕ್ತಿಯ ಭಾಷೆಯಲ್ಲಿ ವಿರಾಡರೂಪ ತಾಳಿನಿಂತಿದೆ ಅಪೂರ್ವ ಸಮೆಗ್ರತೆಯ ಸಂಕೀರ್ಣ ಸಾಗರವಾಗಿ ವೈದಿಕವಾಗಂಭೃಣಿಯವಾಣಿಯಲ್ಲಿ ಭೋರ್ಗರೆಯುತ್ತಿದೆ.

5) ಉಪಸಂಹಾರ : ಒಟ್ಟಾರೆಯಾಗಿ, ಡಾ॥ ವ್ಹಿಕೃ. ಗೋಕಾಕರ ಭಾರತ ಸಿಂಧುರಶ್ಮಿಯು ವೇದಕಾಲದಲ್ಲಿನ ವಿಷಯ ವಸ್ತು

ಆಧುನಿಕ ಮಾನವನ ಜೀವನದರ್ಶನ ಮಾಡಿಸುತ್ತದೆ. 'ತ್ರಿಶಂಕುವಿನ ಪ್ರಜ್ಞಾಪ್ರಭಾತ' ಬರದ ಮೇಲೆ ವಿನಾಯಕರಿಗೆ ವಿಶ್ವಾಮಿತ್ರನ ಪಾತ್ರ ಮೈಮನಗಳನ್ನು ಹೊಕ್ಕಿತೆಂದರೆ ಅತಿಶಯೋಕ್ತಿ ಯಾಗಲಾರದು ಒಂದೆಡೆ ವೇದಕಾಲದ ಸಾಹಿತ್ಯ, ಸಂಸ್ಕೃತಿ ಇತಿಹಾಸ, ತತ್ವಜ್ಞಾನದ ಕುರುತಾಗಿದ್ದು ಎಲ್ಲಿ ಮಹತ್ವದ ಗ್ರಂಥಗಳ ತಲಸ್ಪರ್ಶಿಯಾದ ಅಧ್ಯಯನ ಕೈಕೊಂಡರು. ವಿಶ್ವಾಮಿತ್ರನ ಪಾತ್ರ ಇನ್ನೊಂದು ಕಡೆ ಅವರನ್ನು ಇನ್ನಷ್ಟು ಆಕರ್ಷಿಸಿತು. ತಾವು ಆರಾಧಿಸಿದ 'ಸಂಕೀರ್ಣತೆ'ಗೆ ಅತ್ಯಂತ ಶ್ರೇಷ್ಠ ಮಾದರಿ ವಿಶ್ವಾಮಿತ್ರರ ಪಾತ್ರದಲ್ಲಿ ಅವರಿಗೆ ದೊರೆಯಿತು. ಅದರ ಫಲವೇ ಈ ಬೃಹತ್ ಕಾವ್ಯದ ರಚನೆ.

ಗ್ರಂಥಋಣ

1) ಡಾ. ಜೀವಿ ಕುಲಕರ್ಣಿ ನಾ ಕಂಡ ಗೋಕಾಕ: ಜೀವನ ಮತ್ತು ಸಾಹಿತ್ಯ (ರಸವಿಮರ್ಶೆ) ಹರ್ಷವರ್ಧನ ಪ್ರಕಾಶನ ಮುಂಬಯಿ–1999

2) ವಿನಾಯಕ ಕೃಷ್ಣ ಗೋಕಾಕ್' ಭಾರತ ಸಿಂಧುರಶ್ಮಿ ಸಂ. ಪು. 1 ಐಬಿಎಚ್. ಪ್ರಕಾಶನ ಬೆಂಗಳೂರು–2006

3) ಸಂ. ಹಾ.ಮಾ. ನಾಯಕ, ಸಿಂಧುವಳ್ಳಿ ಅನಂತಮೂರ್ತಿ 'ವಿನಾಯಕ ವಾಙ್ಮಯ' ಸುರುಚಿ ಪ್ರಕಾಶನ ಮೈಸೂರು–1969

4) ವಿನಾಯಕ ಕೃಷ್ಣ ಗೋಕಾಕ 'ಭಾರತ ಸಿಂಧುರಶ್ಮಿ ಪು. 2' ಐಬಿಎಚ್. ಪ್ರಕಾಶನ ಬೆಂಗಳೂರು–2006

5) ಸಂ. ಎಸ್. ಚೆನ್ನಪ್ಪ 'ವಿನಾಯಕ ಸಾಹಿತ್ಯ ವಿಹಾರ' ಅರ್ಕಾವತಿ ಪ್ರಕಾಶನ ಮೈಸೂರು 1990

6) ಡಾ. ಸಾ.ಶಿ. ಮರುಳಯ್ಯ ಭಾರತೀಯ ಜ್ಞಾನಪೀಠ ಸಾಹಿತ್ಯ ಪ್ರಶಸ್ತಿ ಪುರಸ್ಕೃತರು ಸಪ್ನಬುಕ್ ಹೌಸ್ ಬೆಂಗಳೂರು 2012

7) ವಿನಾಯಕ ತ್ರಿಶಂಕುಲನ ಪ್ರಜ್ಞಾಪ್ರಭಾತ' ಸುದರ್ಶನ ಪ್ರಕಾಶನ ತಿಪಟೂರು. 1965.

8) ಡಾ. ಶೈಲಜಾ ಕೊಪ್ಪರ 'ಭಾರತಸಿಂಧುರಶ್ಮಿ–ಒಂದು ಅಧ್ಯಯನ ರಸಿಕರ ರಂಗ ಪ್ರಕಾಶನ ಧಾರವಾಡ–2008

ಹಸುಗಳು: ಪಾರಂಪರಿಕ, ಸಾಹಿತ್ಯಕ, ವೈಜ್ಞಾನಿಕ ಆಯಾಮಗಳು

ಡಾ. ಆರ್. ಪೂರ್ಣಿಮ
ನಿವೃತ್ತ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ ಮೈಸೂರು–570006
Email: rpurnima2007@rediffmail.com ; ವಿಳಾಸ: ಡಾ. ಆರ್. ಪೂರ್ಣಿಮ, 2907/1, 3ನೇ ಮುಖ್ಯ ರಸ್ತೆ, ವಿ ವಿ ಮೊಹಲ್ಲ, ಮೈಸೂರು–570002

ಹಸುವನ್ನು ಭಾರತದ ಬಹಳ ಪವಿತ್ರವಾದ ಪ್ರಾಣಿಯೆಂದು ಪರಿಗಣಿಸಿರುವುದು, ಅದರ ಶಾಂತ ಸ್ವಭಾವ ಬೌದ್ಧ ಧರ್ಮೀಯರಿಗೆ ಪ್ರಿಯವಾಗಿರುವುದು, ಹಿಂದೂಗಳಿಗೆ, ಬೌದ್ಧ ಧರ್ಮೀಯರಿಗೆ ಗೋವು ತಾಳ್ಮೆ ಹಾಗೂ ಪಾವಿತ್ರ್ಯದ ಸಂಕೇತವಾಗಿರುವುದು, ರೈತರಿಗೆ ತಾನೆ ತಿಳಿಯದ ವಿಷಯವಾಗಿದೆ? "ಕಾಮಧೇನು" ರೈತಾ ಭಾರತೀಯರಿಗೆ ಅಪರಿಚಿತ? ಗೋವಿನ ಗೀತೆ ರೈತ ಕನ್ನಡಿಗರಿಗೆ ತಿಳಿದಿಲ್ಲ? ಇಚ್ಚರೆ ಏಗಾಬೆರೈತಾಬೆ, ...ವೀನಾರಿಗಾಬೆರೋ ಎರೆ ಮಾನಾವ... ಈ ಸಾಲುಗಳನ್ನು ಕೇಳಿದವರು ರೈತಾರು? ಹಸುವಿನ ಬಗ್ಗೆ ಹಲವು ಮತ್ತು ಕರಿತಿರುವ ಸಮಸ್ಯೆರೈತ್ತಿಲ್ಲ ಬರುವ ವ್ಯಾಖ್ಯಾನ ರೈತಾರ ಮನವನ್ನು ಮೆಚ್ಚಿಸದೇ ಇಲ್ಲ? ಪ್ರೇಮ್‌ಚಂದ್‌ರವರ, ಮನ ಕರಗಿಸುವ, ಗೋದಾನ್ ಕಾದಂಬರಿ ರೈತಾ ಸಾಹಿತ್ಯ ಪ್ರಿಯರನ್ನು ಹಿಡಿದಿಟ್ಟಿಲ್ಲ? ಹಸುವಿನ ಇನ್ನೊಂದು ಆರೈತಾಮವನ್ನು ತೋರಿಸುವ ಕಾದಂಬರಿ ಹಾರ್ಡಿಯ ಟೆಸ್. ಇದರಲ್ಲಿ ರೈತಾ ಸೂಕ್ಷ್ಮ ಅರಿತಗಳನ್ನು ಬಹಪೆ, ಕಣ್ಣಿಗೆ ಕಟ್ಟುವಂತೆ ಹಸುಗಳ ಕೆಚ್ಚಲಿನ ಆಕಾರ, ಬಣ್ಣ, ಗಾತ್ರದ ವರ್ಣನೆರೈತಾನ್ನು ಹಾರ್ಡಿ ನೀಡಿರುವುದನ್ನು, ಹಾಗೂ ರಾಚಾರಾರೈತರ "ದ ಕೌ ಆಫ್‌ದ ಬ್ಯಾಲಿಕೇಪ್", ಪಣ್ಣ ಕಥೆರೈತಾನ್ನು ಓದದೇ ಇರುವ ಇರಿಗ್ಲೀಷ್ ಸಾಹಿತ್ಯದ ವಿದ್ಯಾರ್ಥಿ ಇಲ್ಲವೆಂದೆ ಹೇಳಬೇಕು. ಅಷ್ಟಿ ಆತರಿಕವಿಲ್ಲದೆ ಮಾತ್ರವಾಹುವ ಕ್ಲಾರಬೆಲ್ ಕೌ (ವಾರ್ ಬಿಸ್ಸಿ ಹಾಗೂ ಯುಬಿವರೆಕ್ಟ್ ಸೈಷ್ಟಿಪಿರುವ ಒರಿಯ ಹಸುವಿನ ಪಾತ್ರ); ಹಾಗೂ ಸ್ಟೀವ್ ಕೋರ್ ವಿರಚಿತ ಒರಿಯ ಸೈನ್ಸ್ ಫಿಕ್ಷನ್ ಆದ ಕೌಸ್ ಇನ್ ಅ್ಯಕ್ಷನ್ ಬಗ್ಗೆ ವಾರ್ ಬಿಸ್ಸಿ ಹಾಗೂ ಸೈನ್ಸ್ ಫಿಕ್ಷನ್ ಅಭಿಮಾನಿ ಆಪಕ್ತಿ ಹೊರಬಿರದೇ ಇರುವುದಿಲ್ಲ. ಶೇಕ್ಸ್‌ಪಿಯರ್/ಕಾರಂತರ ಸಾಹಿತ್ಯದಲ್ಲಿ ಹಸುವಿಗೆ ಸರಿಬರಬಿಸಿದರಿಕೆ ಬರುವ ರೂಪಕ/ಪ್ರತಿಮೆಗಳು, ಹಸುವಿನ ಬಗ್ಗೆ ಇರುವ ಗಾದೆಗಳು, ಹಾಗೂ ಗೃಹ ಪ್ರವೇಶದಿಂದ ಹಿಡಿದು ಹಳ್ಳಿ ಹರಿದಿನಗಳಲ್ಲಿ ಹಸುವಿನ ಪಾತ್ರದ ಮಹತ್ವದ ಬಗ್ಗೆ ಹೇಳುತ್ತಾ ಹೋದರೆ ಕೊನೆ ಮೊದಲಿಲ್ಲ. ಹಲವು ರೋಗಗಳ ನಿವಾರಕ ಶಕ್ತಿಯ ಹಿರಿಮೆರೈತಾನ್ನು ಹೊರಬಿರುವ ಗೋಮೂತ್ರದ ಬಗ್ಗೆ ಹಾಗೂ "ಹಾಲಲ್ಲ, ಚಿನ್ನವೂ ಕೊಡುತ್ತವೆ ಗಿರ್ ತಳಿಯ ಹಸು!" ಸರಿಸೋಧನೆಯ ಬಗ್ಗೆ ತಿಳಿದಿಲ್ಲವೆಂದರೆ ಅರಿಥವರನ್ನು ಏನೆಂದು ಕರೆಯಬೇಕೊ ತಿಳಿಯುತ್ತಿಲ್ಲ.

ಹಸುವನ್ನು ಭಾರತದಲ್ಲಿ ಅತ್ಯಂತ ಪವಿತ್ರವಾದ ಪ್ರಾಣಿಯೆಂದು ಪರಿಗಣಿಸಲಾಗಿದೆ. ಹಿಂದೂಗಳಿಗೆ, ಬೌದ್ಧ ಧರ್ಮಿಗಳಿಗೆ ಗೋವು ಶಾಂತಿ, ತಾಳ್ಮೆ ಹಾಗೂ ಪಾವಿತ್ರದ ಸಂಕೇತವಾಗಿವೆ. ವೇದ ಪುರಾಣಗಳಲ್ಲೂ ಅವುಗಳನ್ನು ಗೌರವಿಸಿದ್ದಾರೆ. ಆಕೆಯನ್ನು ಸಮೃದ್ಧಿಯಾಗಿ, ಫಲ ಕೊಡುವ ಮಾತೆಯಂತೆ ಹಾಗೂ ಆಕೆ ಬ್ರಹ್ಮಾಂಡದಲ್ಲಿ ದೈವದತ್ತವದ ಪಾತ್ರವನ್ನು ಮಾಡುತ್ತಿರುವಂತೆ ನೋಡಿದ್ದಾರೆ. ಹಿಂದುಗಳು ಹಸುವನ್ನು ಪೂಜಿಸುತ್ತಾರೆ. ಅದನ್ನು ಅಹಿಂಸಾ ತತ್ವದ ಪ್ರತೀಕವೆಂದು ಪರಿಗಣಿಸಿದ್ದಾರೆ. ಹಸುಗಳನ್ನು ಗೌರವಿಸಿದರೆ ಅವು ಮೃದು ಸ್ವಭಾವ, ಸೌಮ್ಯತೆ, ಗ್ರಹಣ ಶಕ್ತಿ, ಸುಸಂಬಂಧತೆ ಮುಂತಾದ ಗುಣಗಳನ್ನು ಎರೆಯುತ್ತದೆಎಂದು ವಿಶ್ವಾಸ ಇದೆ. ಹಸು ನಮ್ಮನ್ನು ಪೋಷಿಸುತ್ತಾಳೆ. ಕಾಮಧೇನುಎಂಬ ಹಿಂದು ದೇವಿಗೆ ಕೇಳಿದ್ದನ್ನು ನೀಡುವ ಶಕ್ತಿ ಇದೆಯೆಂದು ನಂಬಿಕೆ ಇದೆ. ಆಕೆಯ ಹೆಸರಿನಲ್ಲೇ ಈ ಅರ್ಥವಿದೆ. "ಕಾಮ" ಅಂದರೆ ಅಪೇಕ್ಷೆ, ಹಾಗೂ "ಧೇನು"

ಅಂದರೆ ಹಾಲು ಕೊಡುವ ಹಸು. "ಸಮೃದ್ಧಿ/ಯಥೇಷ್ಟದ' ಸಂಕೇತ"ವಾದ ಕಾಮಧೇನುವನ್ನು ಗೋವುಗಳ ಮಾತೆಯೆಂದು ಪರಿಗಣಿಸಲಾಗಿದೆ. ಎಲ್ಲಾ ದೇವತೆಯರು ಆಕೆಯ ಶರೀರದಲ್ಲಿ ವಾಸವಿದ್ದಾರೆ ಎನ್ನುವ ಭಾವನೆ ಇದೆ. ಜಾನಪದ ಕಥನ ಗೀತೆ ಗೋಪಿಕಾ–ಕೃಷ್ಣರ ಸಂವಾದ "ಆಕಳು ಕೊಡೋ, ನಮ್ ಆಕಳು ಕೊಡೋ" ಹಾಗೂ ಈ ಗೋ ಸ್ತೋತ್ರವನ್ನು ಶೃಂಗೇರಿಯ ಲಲಿತಜ್ಜಿ ಬಾಯಲ್ಲಿ ಕೇಳಿದ್ದ ಜ್ಞಾಪಕ:–

ಬೆಳಗ್ಗೆ ಏಳ್ಗಳಘೇಲೇ ಎದ್ದು ವಿಶ್ವಮೂರ್ತಿ ದರ್ಶನ ಮಾಡಬೇಕು/ ಬೆಳಗ್ಗೆ ಏಳ್ಗಳಘೇಲೇ ಎದ್ದು ಸಜ್ಜನ ಸ್ಮರಣೆ ಮಾಡಬೇಕು/ ಬೆಳಗಾಗ್ತಾಲೇ ಎದ್ದು ಶ್ರೀ ತುಳಸೀ ದರ್ಶನ ಮಾಡಬೇಕು/ ಬೆಳಗಾಗ್ತಾಲೇ ಎದ್ದು ಆಕಳ ದರ್ಶನ ಮಾಡಬೇಕು/ ಆಕಳ ಪಾದದಲ್ಲ ಪಾಂಡವರಿರುವರು/ ಆಕಳ ಗೋಮುತ್ರದಲ್ಲ ಗಂಗಾದೇವಿ ಇರುವರು/ ಆಕಳ ಗೋಮಯದಲ್ಲ ಲಕ್ಷ್ಮೀದೇವಿ ಸನ್ನಿಧಾನ/ ಆಕಳ ಬಾಲದಲ್ಲ ಭಾಗೀರಥೀ ಇರುವರು/ ಆಕಳ ಬೆನ್ನಲ್ಲ ಬ್ರಹ್ಮದೇವ್ರಿರುವರು/ ಆಕಳ ಕೊಂಬ್ನಲ್ಲ ಅಶ್ವಿನಿ ದೇವತೆಗಳರುವರು/ ಆಕಳ ಕಿವಿಯಲ್ಲ ಕೊಟಲ್ ಗೋಪಾಲರುವರು/ ಆಕಳ ಹಣೆಯಲ್ಲ ಹರಿಶ್ಚಂದ್ರರಾಯ್ರರುವರು/ ಆಕಳ ಮೂಗ್ನಲ್ಲ ಮುಕುಂದ ಸ್ವಾಮಿರುವರು/ ಆಕಳ ಬಾಯಲ್ಲ ಭಾರತೀದೇವ್ರಿರುವರು/ ಆಕಳ ನಾಲ್ಗೇಲ ಸರಸ್ವತೀದೇವ್ರಿರುವರು/ ಆಕಳ ಕಣ್ಣಲ್ಲ ಚಂದ್ರಸೂರ್ಯಾದಿಗಳರುವವರು/ ಆಕಳ ಹೊಟ್ಟೇಲ ಕೃಷ್ಣಸ್ವಾಮಿರುವವರು/ ಆಕಳ ನಾಭೀಕಮಲ್ದಲ್ಲ ಬ್ರಹ್ಮದೇವ್ರಿರುವರು/ ಆಕಳ ರೋಮರೋಮಕ್ಕೂ ಶತಕೋಟ – / ದೇವಾದಿ ದೇವತೆಗಳರುವವರು/ ಆಕಳ ಕೆಚ್ಚಲಲ್ಲ ಸಮಸ್ತ ಸಮುದ್ರವಿರುವುದು / ಇತಿ ಆಕಳ ಸ್ತೋತ್ರ ಯರ್ ಹೇಳ್ದಾಗ್ಯೂ, ಕೇಳ್ದಾಗ್ಯೂ/ ಕರು ಸಹಿತ ಕಪಿಲೇಲ್ ದಾನಕೊಟ್ಟಷ್ಟು ಫಲಅಂದ್ರು / ಕೇಳೀ ಮಧ್ಯಾಚಲದಲ್ಲ, ದ್ರೋಣಮುದ್ಗಲದಲ್ಲ/ ವೇದವ್ಯಾಸ್ರು ಹೇಳ್ತಾ ಇದ್ರು, ಪರವಾಸು ದೇವ್ರು ಕೇಳ್ತಾ ಇದ್ರು / ಸಇತಿ ಆಕಳ ಸ್ತೋತ್ರ ಸಂಪೂರ್ಣಮಸ್ತು.

ಹಸುಗಳಿಗೆ ದೇವರುಗಳಾದ ಕೃಷ್ಣನ ಜೊತೆ ನಿಕಟವಾದ ಸಂಬಂಧವಿದೆ. ಕೃಷ್ಣ ತನ್ನ ಸಣ್ಣ ವಯಸ್ಸಿನಲ್ಲ ಗೋಪಾಲನಾಗಿದ್ದ. ಗೋಗಳ ಬಗ್ಗೆ ಋಗ್ ವೇದದಲ್ಲ ಉಲ್ಲೇಖವಿದೆ. ಆಲ್ಲ ಹೇಳಲಾಗಿದೆ "ಗೋವುಗಳು ನಮಗೆ ಅದ್ರಷ್ಟವನ್ನು ತಂದಿದೆ. ತಮ್ಮ ಹಿತವಾದ ಅಂಬಾಯೆಂಬ ಧ್ವನಿಯಿಂದ ನಮ್ಮ ವಾಸಸ್ಥಾನಕ್ಕೆ ಸಂತೋಷವನ್ನು ತರುತ್ತದೆ." ಭಾಗವತ ಪುರಾಣದಲ್ಲ ಸುರಭಿ ಎನ್ನುವ ಹಸು ಪಾರಮಾರ್ಥಿಕ ಗ್ರಹದಲ್ಲಿದೆ ಹಾಗೂ ಅದನ್ನು ಕೃಷ್ಣ ಸಾಕಿದ್ದಾನೆ ಮತ್ತು ಬೇರೆ ಹಸುಗಳ ಆಕಾರ/ರೂಪ ಮತ್ತು ಚಹರೆ/ಲಕ್ಷಣ ಸುರಭಿ ಹಸುವಿನ ರೀತಿಯಲ್ಲಿದೆ ಎಂಬ ನಂಬಿಕೆ ಇದೆ.

ಕ್ರೈಸ್ತರಿಗೆ ಕುರಿ ಹೇಗೋ, ಹಿಂದುಗಳಿಗೆ ಹಸು ಹಾಗೆ. ಹಸುಗಳನ್ನು ಕೊಲ್ಲಬಾರದೆಂದು ಹಿಂದೂ ಸಂಘ/ಸಂಘಟನೆಗಳು ವಾದಿಸಿ ಚಳುವಳಿ ನಡೆಸಿರುವುದು ಎಲ್ಲರಿಗೂ ತಿಳಿದ ವಿಷಯವೇ. ಹಿಂದೂ ಧರ್ಮ, ಜೈನ ಮತ, ಜರತುಷ್ಟ/ಪಾರಸಿ ಧರ್ಮ, ಹಾಗೂ ಪ್ರಾಚೀನ ಈಜಿಪ್ಟ್, ಗ್ರೀಸ್, ಇಸ್ರೆಲ್, ರೋಮ್, ಜರ್ಮನಿ, ಹೀಗೆ ಅನೇಕ ವಿಶ್ವ ಧರ್ಮಗಳು ಹಸುವನ್ನು ಪವಿತ್ರವೆಂದು ತಿಳಿದಿರುವರು. ವೇದ ಗಳಲ್ಲ/ಪುರಾಣಗಳಲ್ಲ/ಸಾಹಿತ್ಯಗಳಲ್ಲ ಹಸುಗಳಿಗೆ ಮಹತ್ವವಾದ ಸ್ಥಾನವಿದೆ. ವಸಿಷ್ಠರಿಗೆ ನಂದಿನೀ ಧೇನು ನೀಡಿರುತ್ತಾರೆ. ವಿಶ್ವಾಮಿತ್ರ ರಾಜನಾಗಿದ್ದಾಗ ಅವನ ಹೆಸರು ವಿಶ್ವರಥ. ಬೇಟೆಗೆ ಹೋದವನು ವಸಿಷ್ಠರ ಆಶ್ರಮಕ್ಕೆ ಬಂದಾಗ ನಂದಿನೀಧೇನುವಿನ ಮಹಿಮೆಯಿಂದ ಅವನ ಪರಿವಾರಕ್ಕೆ ರಾಜೋಪಚಾರ ಮಾಡಿಸುತ್ತಾರೆ. ಆ ಧೇನುವನ್ನು ತಾನು ಪಡೆಯಲು ಅವನು ಪ್ರಯತ್ನಮಾಡಿ ವಿಫಲನಾದಾಗ ಬಲಪ್ರಯೋಗಮಾಡಿ ಸೋತು ತಪಸ್ಸುಮಾಡಿ ಕೊನೆಗೆ ಬ್ರಹ್ಮರ್ಷಿಯಾಗುತ್ತಾನೆ. ಹೀಗೆ ಬ್ರಹ್ಮರ್ಷಿ ವಿಶ್ವಾಮಿತ್ರನ ಪರಿವರ್ತನೆಗೆ ಧೇನು ಕಾರಣವಾಗುತ್ತದೆ. ಕಾಳಿದಾಸನ ರಘುವಂಶ – ದಿಲೀಪ ಚಕ್ರವರ್ತಿ ಸ್ವರ್ಗಲೋಕದಿಂದ ಹಿಂದಿರುಗುವಾಗ ದಾರಿಯಲ್ಲ ಇದ್ದ ಕಾಮಧೇನುವಿಗೆ ನಮಸ್ಕಾರ ಮಾಡುವುದಿಲ್ಲ. ಏಕೆಂದರೆ ಅವನ ಪತ್ನಿ ಬಹಿಷ್ಠೆಯಾಗಿರುತ್ತಾಳೆ. ಆದರೆ ಪೂಜ್ಯ ಧೇನುವಿಗೆ ನಮಸ್ಕಾರ ಮಾಡದಿರುವುದು ಹೆಚ್ಚು ದೋಷ'. ಆ ಕಾರಣದಿಂದಾಗಿ, ಅವನಿಗೆ ಮಕ್ಕಳಾಗಿರುವುದಿಲ್ಲ. ಕುಲಗುರುಗಳಾದ ವಸಿಷ್ಠರು ಈ ಕಾರಣವನ್ನು ತಿಳಿದು ಅವನಿಗೆ ನಂದಿನೀ ಧೇನುವಿನ ಸೇವೆ ಮಾಡಲು ತಿಳಿಸುತ್ತಾರೆ. ನಂದಿನೀ ಧೇನು ಅವನ ನಿಷ್ಠೆಯನ್ನು ಪರೀಕ್ಷಿಸಿ, ಅವನು ಪ್ರಾಣತ್ಯಾಗಕ್ಕೂ ಸಿದ್ಧನಾದಾಗ ಅನುಗ್ರಹಿಸುತ್ತಾಳೆ. ನಂತರ ರಘುವಿನ ಜನನವಾಗುತ್ತದೆ. ಭಿಷ್ಮ ಮಹಾಭಾರತದಲ್ಲ ಹೇಳುವುದು "ಹಸುಗಳು ಬದಲಿ/ಬಾಡಿಗೆ ತಾಯಂದಿರು, ಏಕೆಂದರೆ ಮನುಷ್ಯರಿಗೆ ಜೀವನ ಪರ್ಯಂತ ಹಾಲು ನೀಡುತ್ತವೆ. ಆದ್ದರಿಂದ ಹಸು ನಿಜಕ್ಕೂ ಪ್ರಪಂಚದ ಮಾತೆ." ಗೋವುಗಳನ್ನು ಕೊಡುಗೆಯಾಗಿ ಕೊಡುವುದು ಭಾರತದ ಹಳ್ಳಗಳಲ್ಲ ಹಾಗೂ ಪುರಾಣಗಳಲ್ಲ ಬಹು ಧಾರ್ಮಿಕ ಕ್ರಿಯೆಎಂದು ಪರಿಗಣಿಸಲಾಗಿದೆ. ರಾಮ ದೇವರಿಗೆ ಸಾವಿರಾರು ಗೋಗಳು ಹಾಗೂ ಎತ್ತುಗಳನ್ನು ನೀಡಿದರಂತೆ. ವ್ಯಾಸರು ಹೇಳುತ್ತಾರೆ, "ಹಸುವಿನ ಸಗಣಿ ಅತ್ಯಂತ ಫಲಕಾರಿ ಸ್ವಚ್ಛಕ." ಹಸು ಚಲಿಸುವ ವೈದ್ಯಕೀಯ ಔಷಧ ಶಾಲೆ/ದವಾಖಾನೆಎನ್ನುವುದು ಯಾರಿಗೆ ತಾನೇ ತಿಳಿದಿಲ್ಲ? ಆರ್ಯುವೇದದಲ್ಲ ಪಂಚಗವ್ಯಪ್ರತ ಶ್ರೇಷ್ಟವಾದ ಔಷಧ. ಗಾಂಧೀಜಿಯವರು ಗೋವನ್ನು ಆರಾಧಿಸುತಿದ್ದರು.

ಹಲವಾರು ಸಂಸ್ಕೃತಿಗಳಲ್ಲ ಅವಳು ಭೂತಾಯಿ, ಫಲ, ಸಮೃದ್ಧಿ, ಜೀವಚೇತನ, ಮತ್ತು ಚಂದ್ರನ ಸಂಕೇತ. ಪ್ರಾಚೀನ ಈಜಿಪ್ಟ್ ಸಂಸ್ಕೃತಿಯಲ್ಲ ಹಸುಗಳು ಫಲವತ್ತು, ಸಮೃದ್ಧಿ ಹಾಗೂ ಪುನರ್ ಜೀವನದ ಸಂಕೇತವಾಗಿದ್ದಳು. ಆಕೆಯು ಸೂರ್ಯದೇವನ ತಾಯಿ. ಎಹೆತ್ಯೆಯೆಂಬ ದೇವತೆ ತನ್ನ ಕೊಂಬುಗಳ ನಡುವೆ ಸೂರ್ಯನ ಬಿಂಬ/ಮಂಡಲವನ್ನು ಹಿಡಿದಂತೆ ಬಿಂಬಿಸಿರುವರು. ಈಜಿಪ್ಟ್‌ನ ದೇವ ಮಂದಿರಗಳಲ್ಲ ಹ್ಯಾತಾರ್ ಎಂಬ ದೇವತೆ ಹಸುವಿನ ವಿವಿಧ ರೂಪಗಳನ್ನು ಹೊಂದಿರುತ್ತಾಳೆ. ಆಕೆ ಫೇರೋಗಳಿಗೆ ಹಾಲನ್ನು ಉಣಿಸುವಳು ಎಂಬ ನಂಬಿಕೆ ಇದೆ.

ಗೋವಿನ ಗೀತೆ ಯಾವ ಕನ್ನಡಿಗನಿಗೆ ತಿಳಿದಿಲ್ಲ? ಹಾಗೆಯೇ – "ಇಟ್ಟರೆ ಸೆಗಣಿಯಾದೆ, ತಟ್ಟಿದರೆ ಕುರುಳಾದೆ/ ಸುಟ್ಟರೆ ನೊಸಲಿಗೆ ವಿಭೂತಿಯಾದೆ/ ತಟ್ಟದೇ ಹಾಕಿದರೆ ಮೇಲುಗೊಬ್ಬರವಾದೆ/ ನೀನಾರಿಗಾದೆಯೋ ಎಲೆ ಮಾನವ/ ಹರಿ ಹರಿ ಗೋವು ನಾನು..." – ಈ ಸಾಲುಗಳನ್ನು ಕೇಳದವರು ಯಾರು? – ಅದರಂತೆಯೇ ಹಸುವಿನ ಬಗ್ಗೆ ಹಂಪ ಮತ್ತು ಕಂತಿಯರ ಸಮಸ್ಯೆಯಲ್ಲ ಬರುವ

ವ್ಯಾಖ್ಯಾನ ಯಾರ ಮನವನ್ನು ಮೆಚ್ಚಿಸದೇ ಇಲ್ಲ?

....ಚಂ

ದನಮಂ ಕಡಿಕಡಿದು ಬಸದಿಗೆಳೆಯು ತಿರ್ಪರ್

ಒಂದು ಪದ್ಯವನ್ನು ಚಮತ್ಕಾರಯುತವಾಗಿ ಕಟ್ಟುವ ಸಂದರ್ಭದಲ್ಲಿ ಬಳಕೆಯಾಗಿರುವ ಪ್ರಾಣಿ ರೂಪಕವಾಗಿ "ಹಂಪ ಮತ್ತು ಕಂತಿಯರ ಸಮಸ್ಯೆ" ಯನ್ನು ನೋಡಬಹುದು. 'ಸಮಸ್ಯೆ ಪೂರಣ' ಒಂದು ಸ್ಪರ್ದೆ. ಒಗಟನ್ನು ಬಿಡಿಸುವ ತಂತ್ರಗಾರಿಕೆಯನ್ನು ಇದು ತಕ್ಕಮಟ್ಟಿಗೆ ಹೋಲುತ್ತದೆ. ಕನ್ನಡ ಸಾಹಿತ್ಯದಲ್ಲಿ ಇದು ಪ್ರಚಲಿತದಲ್ಲಿದೆ. ಪದ್ಯದ ಕಡೆಯ ಸಾಲನ್ನು ಹೇಳುವುದರ ಮೂಲಕವಾಗಿ, ಅದಕ್ಕೆ ಸೂಕ್ತವಾದ ಅರಂಭದ ಮೂರು ಸಾಲುಗಳನ್ನು ಕಟ್ಟುವ ಕ್ರಿಯೆ ಈ ಸಮಸ್ಯ ಪೂರಣದಲ್ಲಿ ನಡೆಯುತ್ತದೆ. ಬುದ್ದಿವಂತಿಕೆಯಿಂದ ಒಗಟನ್ನು ಬಿಡಿಸುವ ಕ್ರಿಯೆಗೆ ಇದು ಹತ್ತಿರವಿದೆ. ಈ ಪದ್ಯದ ಕಡೆಯ ಸಾಲಾದ "ದನಮಂ ಕಡಿಕಡಿದು ಬಸದಿಗೆಳೆಯು ತಿರ್ಪರ್" ಹೇಳಿದಾಗ, ದನಕ್ಕೆ ಇಲ್ಲೊಂದು ಉಲ್ಲೇಖವಿದೆ. ಆದರೆ, ಇದನ್ನು 'ಸಮಸ್ಯ ಪೂರಣ'ದಲ್ಲಿ ಓದುವ ರೀತಿ ವಿಶಿಷ್ಟವೂ, ಕುತೂಹಲಕಾರಿಯೂ, ಮೆಚ್ಚುವಂತದ್ದು, ಬೆರಗಾಗುವಂತದ್ದೂ ಆಗಿರುತ್ತದೆ. 'ಸಮಸ್ಯ ಪೂರಣ'ವಾದ ಮೇಲೆ, ವಾಚಕನಿಗೆ, ಶೋತ್ರುವಿಗೆ ಕಾವ್ಯಾನಂದ/ರಸಾನಂದದ' ಅನುಭವವಾಗುತ್ತದೆ. ಈ ಸ್ಪರ್ದೆಯಲ್ಲಿ ಬರುವ ವ್ಯಕ್ತಿಗಳು ಜೈನ ಧರ್ಮಿಯರು. ಅಹಿಂಸಾ ತತ್ವವನ್ನು ಪ್ರಮುಖವಾಗಿ ಬೊಧಿಸುವ ಜೈನ ಧರ್ಮಿಯರು ಹಿಂಸಾವಾದ ಈ ಮಾತುಗಳನ್ನು ನುಡಿಯುವುದು ವಿಪರ್ಯಾಸವೇ ಸರಿ. ಆದರೆ, ಸಮಸ್ಯೆ ಪೂರಣಗೊಂಡ ಮೇಲೆ, ಇಲ್ಲಿನ ವಿಪರ್ಯಾಸ ಮರೆಯಾಗಿ, ಶೋತ್ರುವಿಗೆ ವಿಶೇಷ ಆನಂದ ಪ್ರಾಪ್ತವಾಗುತ್ತದೆ. ಈ 'ಸಮಸ್ಯ ಪೂರಣ' ವೆಂಬ ವಿಶಿಷ್ಠ ಹಾಗೂ ವಿರಳ ಪ್ರಕಾರದಲ್ಲಿ ಪದ್ಯದ ಕೊನೆಯ ಸಾಲನ್ನು ಓದುವ ಮೊದಲು, ಹಿಂದಿನ ಸಾಲಿನ ಅಕ್ಷರವನ್ನೂ/ಪದವನ್ನೂ ಸೇರಿಸಿಕೊಳ್ಳುವುದು ಅವಶ್ಯ.

ಪ್ರೇಮ್‌ಚಂದ್‌ರವರ, ಮನ ಕರಗಿಸುವ, ಗೋದಾನ್ ಕಾದಂಬರಿ ಯಾವ ಸಾಹಿತ್ಯ ಪ್ರಿಯನನ್ನು ಹಿಡಿದಿಟ್ಟಿಲ್ಲ? 1968ರಲ್ಲಿ ಅನುವಾದವಾಗಿ, 1963ರಲ್ಲಿ ಚಲನಚಿತ್ರವಾದ ಇದು ಮನೆಮಾತಾಗಿ, 2004ರಲ್ಲಿ ಕಿರುತೆರೆಯಮೇಲೆ ಪ್ರಖ್ಯಾತಿಪಡೆದ, ಹೃದಯಸ್ಪರ್ಶಿಯಾದ ಗೋದಾನ್ ಪ್ರೇಮ್‌ಚಂದ್‌ರವರು ಸಂಪೂರ್ಣವಾಗಿ ರಚಿಸಿದ ಅಂತಿಮ ಕಾದಂಬರಿ. ಕಾದಂಬರಿಯ ಮುಖ್ಯ ಪಾತ್ರವಾದ ಹೋರಿಗೆ ತನ್ನ ಮನೆಯಲ್ಲಿ ಹಸುವನ್ನು ಸಾಕಬೇಕು ಎನ್ನುವ ಅಪೇಕ್ಷೆ. (ಕಾರಂತರ ಚೋಮನ ದುಡಿಯಲ್ಲಿ ಬರುವ ಚೋಮನ ಹಾಗೆ.) 80 ರೂ ಸಾಲವನ್ನು ಪಡೆದು, ಛಲದಿಂದ ಹಸುವನ್ನು ಕೊಳ್ಳುತ್ತಾನೆ. ಅಸೂಯೆಯಿಂದ ಹೋರಿಯ ತಮ್ಮ ಹಸುವಿಗೆ ವಿಷವನ್ನು ಉಣಿಸಿ ಅದನ್ನು ಕೂಂದು, ತಲೆ ತಪ್ಪಿಸಿಕೊಳ್ಳುತ್ತಾನೆ. ಪೋಲೀಸರು ಗೋಹತ್ಯೆಯ ಬಗ್ಗೆ ವಿಚಾರಣೆ ನಡೆಸಲು ಬಂದಾಗ, ಮತ್ತೊಮ್ಮೆ ಸಾಲ ಪಡೆದು ಪೋಲೀಸರನ್ನು ಮೌನವಾಗಿಸುತ್ತಾನೆ ಹೋರಿ. ಸಾಲ ಪಡೆದು ರೂಪಾಳ (ಮಗಳು) ಮದುವೆ ಮಾಡುತ್ತಾನೆ. ಅವನು ಸಾಯುತ್ತಿರುವ ಸಮಯದಲ್ಲಿ, ಹೋರಿಯ ಪತ್ನಿ ಧನಿಯ, ತನ್ನಲ್ಲಿದ್ದ ಎಲ್ಲಾ ಹಣ (ರೂ 1.25)ನ್ನು, ಗೋದಾನದ ಬದಲಾಗಿ ಹೋರಿಯ ಕೈಯಿಂದಲೇ ಪೂಜಾರಿಗೆ ಕೊಡಿಸಿ, ಹೋರಿಯ ಸಂಪ್ರದಾಯದ ಕನಸನ್ನು ನನಸಾಗಿಸುತ್ತಾಳೆ. ಇದರಿಂದ ಹೋರಿಗೆ ಸಾಯುವ ಸಮಯದಲ್ಲಿ ಅರ್ಧ ಸಮಾಧಾನ, ಅರ್ಧ ನಿರಾಶೆ. ಹಸುವನ್ನು ದಾನ ಕೊಡುವುದು ಹಿಂದು ಧರ್ಮದ ಮಹತ್ವವಾದ ಧಾರ್ಮಿಕ ಪದ್ಧತಿ. ಇದರಿಂದ ಪಾಪ ವಿಮೋಚನೆಯಾಗುತ್ತದೆ ಅನ್ನುವ ನಂಬಿಕೆ ಒಂದೆಡೆಯಾದರೆ, ಮತ್ತೊಂದೆಡೆ ದೇವಿಯ ಅನುಗ್ರಹವಾಗುತ್ತದೆಎನ್ನುವ ಪ್ರಬಲವಾದ ನಂಬಿಕೆ. ಯಾರಾದರು ಕಾಲವಾದಾಗ, ಹಸುವನ್ನು ದಾನವಾಗಿ ಕೊಡುವುದು ದಶ ದಾನಗಳಲ್ಲಿ ಪ್ರಧಾನವಾದದ್ದು. ನಂಬಿಕೆ ಏನಂದರೆ ಮಡಿದವರ ಪ್ರೇತವನ್ನು ವೈತರಣಿ ನದಿಯನ್ನು ದಾಟಿಸಲು ಗೋವಿಗೆ ಮಾತ್ರ ಸಾಧ್ಯವಿದೆಎಂಬ ನಂಬಿಕೆ ಇದೆ. ಆದುದರಿಂದ ಗೋದಾನ ಮಾಡುವ ಸಂಪ್ರದಾಯವಿದೆ.

ಯಾವ ಸೂಕ್ಷ್ಮ ಅಂಶಗಳನ್ನು ಬಿಡದೆ, ಕಣ್ಣಿಗೆ ಕಟ್ಟುವಂತೆ ತಾಲ್ ಬುಥೇಸ್ ಡೈರಿಯಲ್ಲಿರುವ ಹಸುಗಳ ಕೆಚ್ಚಲಿನ' ಆಕಾರ, ಬಣ್ಣ, ಗಾತ್ರದ ವರ್ಣನೆಯನ್ನು ನೀಡಿ, ಹಸುವಿನ ಇನ್ನೊಂದು ಆಯಾಮವನ್ನು ತೋರಿಸುವ ಕಾದಂಬರಿ ಹಾರ್ಡಿಯ ಟೆಸ್. ಹಸುವಿನ ಕೆಚ್ಚಲು, ಹಾಲಿನ ದೊಡ್ಡಗಾತ್ರದ ಚೀಲಗಳೇ ಆಗಿವೆ. ಅವುಗಳನ್ನು ಹಸುಗಳು ಭಾರದಿಂದ ತೂಗಾಡಿಸುತ್ತವೆ. ಕೆಚ್ಚಲು ಹಾಗೂ ಮೊಲೆಗಳು ಜೀವನದ ಪೂರ್ಣತೆಯನ್ನು ಪ್ರತಿಬಿಂಬಿಸುತ್ತವೆ. ಹಾರ್ಡಿ ಗಮನ ಸೆಳೆಯುವಂತೆ, ಸಜೀವವೆನ್ನುವಂತೆ ಹಸುಗಳ ವರ್ಣನೆ ನೀಡುತ್ತಾನೆ, ಇದು, ಅವನಿಗೆ ಹಸುಗಳು ಹಾಗೂ ಪ್ರಕೃತಿಯ ಬಗ್ಗೆ ಇದ್ದ ಆಸಕ್ತಿ ಮತ್ತು ಒಲವನ್ನು ಬಿಂಬಿಸುತ್ತದೆ.

ರಾಜಾರಾಯರ "ದ ಕೌ ಆಫ್ ದ ಬ್ಯಾರಿಕೇಡ್", ಸಣ್ಣ ಕಥೆಗೆ ಇಬ್ಬರು ಮುಖ್ಯ ಪಾತ್ರಧಾರಿಗಳು – ಮಾಸ್ಟರ್ ಮತ್ತು ಗೌರಿಯೆಂಬ ಹಸು. ಪ್ರತಿ ಮಂಗಳವಾರ ಆಗಮಿಸುವ ಗೌರಿಯನ್ನು ಸೂರ್ಯನಾರಾಯಣ ರಸ್ತೆಯ ಜನರು ಗೌರವಿಸುತ್ತಿದ್ದರು. ಆಕೆಯನ್ನು ಲಕ್ಷ್ಮೀದೇವರಂದೆ ನಂಬಿದ್ದರು. ವಿವಿಧ ಜನರು ತಮ್ಮ ವಿವಿಧ ಆಸೆ ಆಕಾಂಕ್ಷೆಗಳು ಆಕೆಯಿಂದ ಈಡೇರುತ್ತದೆಂದು ತಿಳಿದಿದ್ದರು. ನಂತರ' ದೃಶ್ಯ ಬದಲಾಗುತ್ತದೆ. ಸ್ವಾತಂತ್ರಕ್ಕಾಗಿ ಹೋರಾಟ. ಮಾಸ್ಟರ್ ಹೇಳುತ್ತಾರೆ: "ಅಣ್ಣ ತಮ್ಮಂದಿರೆ ಯುದ್ಧ ಬೇಡವೇ ಬೇಡ." ಇನ್ನೇನು ಪಟ್ಟಣದ ಮೇಲೆ ಆಕ್ರಮಣ ಆಗಬೇಕೆಂದಿರುವಾಗ ಗೌರಿ ತಡೆಗಟ್ಟಿನ ಮೇಲೆ ಹತ್ತುತ್ತಾಳೆ. ಕೋಪಗೊಂಡ ಸೇನೆಯ ಮುಖಂಡ ಗೌರಿಯ ಮೇಲೆ ಗುಂಡನ್ನು ಚಲಾಯಿಸಿ ಅವಳನ್ನು ಕೊಲ್ಲುತ್ತಾನೆ. "ಮಾಸ್ಟರ್ ಮಹಾತ್ಮ ಗಾಂಧಿಯವರಾದರೆ, ಹಸು ಭಾರತ ಮಾತೆ". ಜನರು ಅದನ್ನು "ಪೂಜಿಸಿದಾಗ ಅದು ಪರಂಪರೆಯ ಭಂಡಾರವಾಗುತ್ತದೆ, ಯಾವಾಗ ಬ್ರಿಟಿಷ್ ಅಧಿಕಾರಿ ಅದನ್ನು ಕೊಲ್ಲುತ್ತಾನೊ ಅದು ಹಲವಾರು ಜನರ ಪ್ರಾಣವನ್ನು ಉಳಿಸಿದ ಹಾಗೂ ಭಾರತದ ಸ್ವಾತಂತ್ರಕ್ಕಾಗಿ ಬಲಿಯಾದ ಹುತಾತ್ಮನಾಗುತ್ತದೆ."

ಅಮೆರಿಕನ್ ಕವಿ ಪ್ರಾಸ್ಟ್ ಪದ್ಯ "ಮೆಂಡಿಂಗ್ ವಾಲ್" ನಲ್ಲಿ ಬರುವ ರೈತ, ತನ್ನ ನೆರೆಯವನಾದ ರೈತನಿಗೆ ಹೇಳುತ್ತಾನೆ– "ನಾವಿಬ್ಬರೂ ಹಸುಗಳ ಒಡೆಯರಲ್ಲ, ಆದುದರಿಂದ ಒಬ್ಬರ ಹಸು

ಮತ್ತೊಬ್ಬರ ತೋಟಕ್ಕೆ ನುಗ್ಗುತ್ತದೆ ಎನ್ನುವ ಮಾತು/ ಅಥವಾ ಸಂಘರ್ಷ ಬರುವುದೇ ಇಲ್ಲ." ಈ ಸಂದರ್ಭದಲ್ಲಿ ಹಸುಗಳು ವ್ಯಾಜ್ಯಕ್ಕೂ ಕಾರಣರಾಗಬಹುದೂ ಎಂದು ಸೂಚಿಸಲಾಗಿದೆ. ಆರ್‌ವೆಲ್ ವಿರಚಿತ ಕಾದಂಬರಿ ಆ್ಯನಿಮಲ್ ಫಾರಮ್‌ನಲ್ಲಿ ಹಸುಗಳಿಗೆ ಅಷ್ಟೇನು ಪ್ರಧಾನವಾದ ಪಾತ್ರವಿಲ್ಲ. ಆದರೆ, ಅವುಗಳನ್ನು ಹಂದಿಗಳು ತಾವು ಮಾಡುವ ಕುತಂತ್ರಕ್ಕೆ ಬಲಿಪಶು ಮಾಡಿಕ್ಕೊಳ್ಳುತ್ತವೆ. ಅವುಗಳನ್ನು ಕ್ರಾಂತಿಗೆ ಸೇರಲು ಪ್ರೇರಿಸಲು ಒಂದು ಗಾಳ ಹಾಕುತ್ತವೆ. ಅದೇನಂದರೆ ಹಸುಗಳ ಹಾಲನ್ನು ಅವುಗಳು ಕದಿಯುವುದಿಲ್ಲವೆಂದು; ತಮ್ಮ ಕರುಗಳನ್ನು ಬೆಳೆಸಲು ಅವುಗಳೇ ಉಪಯೋಗಿಸಬಹುದೆಂದು. ಹಾಲು ಕರೆಯಲು ಕಲಿತ ಹಂದಿಗಳು, ಹಾಲನ್ನು ತಾವು ತಿನ್ನುವ ಮ್ಯಾಷ್‌ನಲ್ಲಿ ಸೇರಿಸುತ್ತವೆ. ಬೇರೆ ಪ್ರಾಣಿಗಳಿಗೆ ಈ ಭೋಗವಿಲ್ಲ. (ಕೌ ಬಾಯ್ ಫಿಕ್ಷನ್‌ಗಳಾದ ಓವೆನ್ ವಿರಚಿತ ದಿ ವರ್ಜಿನಿಯನ್ ಮುಂತಾದುವುಗಳನ್ನು ನಾನು ಈ ಅಧ್ಯಯನಕ್ಕೆ ಪರಿಗಣಿಸಿಲ್ಲ).

ಶೇಕ್ಸ್‌ಪಿಯರ್ ವಿರಚಿತ ಮಚ್ ಅಡೊ ಅಬೌಟ್ ನತಿಂಗ್‌ನಲ್ಲಿ, ಲೇಖಕನು ಬೆನಿಡಿಕ್‌ನನ್ನು ಎತ್ತಿಗೆ ಮತ್ತು ಬಿಯಟ್ರೀಸ್‌ನ್ನು ಹಸುಗಳಿಗೆ' ಹೋಲಿಸುತ್ತಾನೆ. ಬೆನಿಡಿಕ್ ವಿವಾಹವಾಗಲು ಮನಸ್ಸಿಲ್ಲದವನಾಗಿದ್ದಾನೆ. ವಿವಾಹ ಸಂಬಂಧವನ್ನು ಎತ್ತು ಹೊರುವ ಹೊರೆಯ ಹಾಗೆ ಎಂದು ಡಾನ್ ಪೆಡ್ರೊ ಹಾಗೂ ರೌಡಿಯ ಹೇಳುತ್ತಾರೆ. ಅಂತೆಯೇ ಲಿನೆಟೋ ಹಾಗೂ ಬಿಯಟ್ರೀಸ್ ನಡುವೆ ಆಗುವ ಪದಗಳ ವಿನಿಮಯದಲ್ಲಿ, ಶೇಕ್ಸ್‌ಪಿಯರ್ ಚಿತ್ರಿಸಿರುವ ಬಿಯಟ್ರೀಸ್‌ನಲ್ಲಿ, ಅದೇ ರೀತಿಯ ಪ್ರವೃತ್ತಿಯನ್ನು ನೋಡುತ್ತೇವೆ. ಎರಡು ಉಪಮೆಗಳು ವಿವಾಹಕ್ಕೆ ಹೇಳಿ ಮಾಡಿಸಿದಂತ ರೂಪಕಾಲಂಕಾರಗಳು. ಬೆನಿಡಿಕ್ ಪುರುಷನಾಗಿರುವುದರಿಂದ, ಅವನನ್ನು ಗಂಡು ಜಾತಿಯ ಹಸುವೆಂದು ಹೋಲಿಕೆ ಮಾಡಲಾಗಿದೆ. ಕೊಂಬಿಲ್ಲದ ಗೂಳಿಯನ್ನು ಹಸುವಿನ ಜೊತೆ ಹೋಲಿಕೆ ಮಾಡಲಾಗಿದೆ. ಈ ಸಂಯೋಜನೆ ಶೇಕ್ಸ್‌ಪಿಯರ್ ಪ್ರೇಕ್ಷಕರಿಗೆ ಸ್ಪಷ್ಟವಾಗಿ ಅರ್ಥವಾಗುತಿತ್ತು.

ಕಾರಂತರ ಬೆಟ್ಟದ ಜೀವ ಕಾದಂಬರಿಯಲ್ಲಿ ಅವರ ಪಯಣ ಪ್ರಾರಂಭವಾಗುವುದು ಕಳೆದುಹೋದ ಒಂದು ಹಸುವನ್ನು ಹುಡುಕುವಾಗ. "ಈಗ ನನ್ನ ಪಯಣದ ಉದ್ದೇಶವನ್ನು ಕುರಿತು ಹೇಳಬಹುದಲ್ಲ... ನಮ್ಮ ಮನೆಯ ಹಸು ಒಂದು ದಿನ ಮೇವಿಗೆ ಹೋದುದು ಮರಳಿ ಬರಲಿಲ್ಲ..... ಹಾಲಿಲ್ಲದೆ ನರಳುತ್ತಿದ್ದ ಒಂದು ಬಡ ನರಹುಲಿ ನನ್ನ ದನವನ್ನು ಕದ್ದುದಕ್ಕೆ ಏಕೆ ಅಳಬೇಕು?" (ಪುಟ 28, ಹರ್ಷ ಪ್ರಕಟಣಾಲಯ. ಪುತ್ತೂರು, ದ.ಕ. ಒಂಬತ್ತನೆಯ ಆವೃತ್ತಿ).

ಕಾರಂತರ ಅಳಿದ ಮೇಲೆ ಕಾದಂಬರಿಯಲ್ಲಿ ಬರುವ ಯಶವಂತರೊಬ್ಬರು ಚಿತ್ರಕಲಾಭ್ಯಾಸಿಗಳು. "ಅವರ ಚಿತ್ರಗಳ ರಾಶಿಯಲ್ಲಿ ಒಂದು ದನದ ಚಿತ್ರವಿದೆ. ಆ ದನ ಮೇಯುತ್ತಿದೆ; ಅದರ ಮೈಯ ಮೇಲೆ ಕುಳಿತ ಒಂದು ಕಾಡು ಮೈನಾ ಹಕ್ಕಿ ಅದರ ಮೈಯನ್ನು ಕುಕ್ಕಿ, ಗಾಯ ಮಾಡಿದೆ." (44 ಪುಟ) ಯಶವಂತರಿಗೆ ಇದೊಂದು ಉಪಮೆ. ಅವರ ಜೀವನಕ್ಕೆ ಸಂಬಂಧಿಸದಂಥದ್ದು. ನಂತರ ಓದುಗನಿಗೆ ತಿಳಿಯುತ್ತದೆ: "....ಅವು ಪಕ್ಷಿಗಳು! ಇವು ಪಶುಗಳು. ಇವಕ್ಕೆ ಹುಲ್ಲು ಆಹಾರ; ಅವಕ್ಕೆ ಕೀಟ ಆಹಾರ. ದನಕರುಗಳಿಗೆ ಈ ಉಣ್ಣಿ ಒಂದು ಪೀಡೆ. ಆ ಪೀಡೆಯನ್ನು ನಿವಾರಿಸುವ ಕಾಡು ಮೈನಾ ಸ್ವಾಭಾವಿಕ ಸ್ನೆಹಿತ..... ಒಂದು ದಿನ ನೋಡುತ್ತೇನೆ–ಉಣ್ಣಿ ಇಲ್ಲದ್ದಕ್ಕೋ ಏನೋ, ಹಸಿವಾದುದಕ್ಕೋ ಏನೋ, ಒಂದು ಮೈನಾ ಬಡ ದನವೊಂದರ ಬೆನ್ನನ್ನು ಕುಕ್ಕಿ ಗಾಯ ಮಾಡಿತ್ತು; ಅದರಿಂದ ರಕ್ತ ಬರುತ್ತಿತ್ತು....ರೀಮಾ ಕಾಡುಹಕ್ಕಿ;...ನನಗಾದ ಗಾಯ ಗಾಯವಲ್ಲವೇ?" ಸತ್ಯದ ತೂಕ ಎಷ್ಟು ಸ್ವಲ್ಪ ಎಂಬುದನ್ನು ಯಶವಂತರು ಇಲ್ಲಿ ಚಿತ್ರಿಸಿದ್ದಾರೆ. (50–51 ಪುಟಗಳು) ..... ವಾತ್ಸಲ್ಯ ಹದಗೆಟ್ಟರೆ ಹೇಗೆ ಹುಳತು ವಿಷವಾಗುತ್ತದೆ ಎನ್ನುವುದನ್ನು ದನ ಹಾಗೂ ಕಾಡು ಮೈನಾದ ಉಪಮೆಯಿಂದ ತಿಳಿಯುತ್ತದೆ. ಮತ್ತೊಂದು ಉಪಮೆ ಹೀಗಿದೆ. "ಬಿಳ ಬಣ್ಣದ ಬಡಕಲು ದನವೊಂದು ಹುಲ್ಲುಗಾವಲಿನಲ್ಲಿ ನಿಂತಿದೆ. ಅದರ ಬಳ ಅರ್ಥಾರ್ಥ ಸಂಬಂಧವಿಲ್ಲದ ಒಂದು ಕರುವಿತ್ತು. .... ಪಾರ್ವತಮ್ಮನೇ ಆ ಹಸು. ಅದರಲ್ಲಿನ ಎಮ್ಮೆಯ ಕರುವೇ ಬಾಲಕ ಯಶವಂತ. ತನ್ನದಲ್ಲದ ಕರುವನ್ನು ತನ್ನದಾದುದಕ್ಕಿಂತಲೂ ಹೆಚ್ಚಿನ ಮಮತೆಯಿಂದ ಕಂಡ ಪಾರ್ವತಮ್ಮನ ವಾತ್ಸಲ್ಯಭಾವಕ್ಕೆ ಋಣಿಯಾಗಿ ಯಶವಂತರು ಈ ಚಿತ್ರವನ್ನು ಬರೆದಿದ್ದರು," (92–93 ಪುಟ ಎಸ್ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, 1996)

ಕಾರಂತರ ಮೈ ಮನಗಳ ಸುಳಿಯಲ್ಲಿ ಕಾದಂಬರಿಯಲ್ಲಿ ಕಾಮಾತುರನಾದ ಪ್ಯೆ ಒರಟು, ಹಾಗೂ ನಯ ನಾಜೂಕು ಇಲ್ಲದವ. ಮಂಜುಳ ಅವನ ಸಾನಿಧ್ಯದಲ್ಲಿ ಒಂದು ಚಿತ್ರ ಹಿಂಸೆಗೆ ಒಳಗಾದ ಪಶುವಿನ ಹಾಗೆ. ಹಾರ್ಡಿಯ ಹಾಗೆ ಶೇಕ್‌ಸ್ಪಿಯರ್/ ಕಾರಂತರು, ಸುಪರಿಚಿತ ಸಸ್ಯ–ಮಾನವ ಹೋಲಿಕೆಯನ್ನು ಪ್ರಾಣಿ/ಮೃಗಕ್ಕೆ ಸಂಬಂಧಿಸಿದ ಪ್ರತಿಮಾ/ಸಂಕೇತಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಾರೆ. ಅವರ ಪಾತ್ರಗಳ ಮನೋದರ್ಮ/ಪ್ರಕೃತಿಯನ್ನು ಬಹಿರಂಗಪಡಿಸಲು, ಅಥವಾ ಪಾತ್ರಗಳ ಆಂತರಿಕ ಸ್ವರೂಪವನ್ನು ಪರಿಶೋಧಿಸಲೂ ಮತ್ತು ಪಾತ್ರಗಳ ವರ್ತನೆಯನ್ನು ಬಿಂಬಿಸಲು ಪ್ರಾಣಿ/ಮೃಗಕ್ಕೆ ಸಂಬಂಧಿಸಿದ ಪ್ರತಿಮಾ/ಸಂಕೇತಗಳನ್ನು, ಹಾಗೂ ಸೂಚಕವಾದ ಹೋಲಿಕೆಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಪ್ರಾಣಿ/ಮೃಗದ ರೂಪಕಾಲಂಕಾರದ ಮೂಲಕ ಕಾರಂತರು ಮೈಥುನವನ್ನು ನೋಡುತ್ತಾರೆ. ಕಾರಂತರ ಕೇವಲ ಮನುಷ್ಯರು (ಪುತ್ತೂರು: ಹರ್ಷ ಪ್ರಕಟನಾಲಯ, 1971) ಕಾದಂಬರಿಯಲ್ಲಿ ಅಭಿನಂದನ ಸ್ವಾಮಿಯನ್ನು ಅರಸುವ ಜಾರೆಯ ಮನೋಭಾವವಿರುವ ಶಾಂತ ಒಂದು ಹಸಿದಿರುವ ಹಸು. "ಗುಟುರು ಹಾಕುವ" ಪ್ಯೆ, (106–107), "ಹೆಗ್ಗಂಡಾಗಿ" ಚಿತ್ರಿತವಾಗಿರುವ ನಂಜಪ್ಪರಿಗೆ ಮಂಜುಳ ಒಂದು ಹಸು/ಅಥವಾ ಎಮ್ಮೆ. (ಪುಟ 235, ಮೈ ಮನಗಳ ಸುಳಿಯಲ್ಲಿ, ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು–53)

ಅಡ್ಡಿ ಆತಂಕವಿಲ್ಲದೆ ಮಾತನಾಡುವ ಕ್ಲಾರಬೆಲ್ ಕೌ (ವಾಲ್ ಡಿಸ್ನಿ ಹಾಗೂ ಉಬ್‌ಐವರೆಕ್ಸ್ ಸೃಷ್ಟಿಸಿರುವ ಒಂದು ಹಸುವಿನ ಪಾತ್ರ) ಹಾಗೂ ಸ್ಟೀವ್ ಕೋಲ್ ವಿರಚಿತ ಒಂದು ಸೈನ್ಸ್ ಫಿಕ್ಷನ್ ಆದ ಕೌಸ್ ಇನ್ ಆ್ಯಕ್ಷನ್ ಬಗ್ಗೆ ವಾಲ್ ಡಿಸ್ನಿ ಹಾಗೂ ಸೈನ್ಸ್ ಫಿಕ್ಷನ್ ಅಭಿಮಾನಿಗಳು ಆಸಕ್ತಿ ಹೊಂದಿರದೇ ಇರುವುದಿಲ್ಲ. ಕ್ಲಾರಬೆಲ್ ಕೌ ಹರಟೆಮಲ್ಲ. ಬುಡವಿಲ್ಲದ ಆಕೆಯ ಗಾಳಿ ಮಾತಿನ ಬಗ್ಗೆ ಮಿಕ್ಕಿ ಹೇಳುತ್ತಾನೆ, "ಆಕೆಗೆ ಧ್ವನಿ ಲೇಖನದ ಸೂಜಿ ಚುಚ್ಚಿರಬೇಕು."

ಆಕೆ ಕೆಲವೊಮ್ಮೆ ಸದ್ಗುಣ ಸಂಪನ್ನೆ ಕೊಡ; ಮೆಚ್ಚುಗೆಗೆ ಪಾತ್ರಳಾಗುತ್ತಾಳೆ ಅನ್ನುವುದು ನಿಜ. ಆದರೆ ಕೆಲವೊಮ್ಮೆ ಒಡ್ಡೊಡ್ಡಾಗಿ ಹಾಗೂ ಅವಿವೇಕದಿಂದ ವರ್ತಿಸುತ್ತಾಳೆ. ಸ್ಟೀವ್ ಕೋಲ್ ವಿರಚಿತ ಒಂದು ಸೈನ್ಸ್ ಫಿಕ್ಷನ್ ಆದ ಕೌಸ್ ಇನ್ ಅ್ಯಕ್ಷನ್ ಪುಸ್ತಕದಲ್ಲಿ ೩ ಹಸುಗಳು ಬರುತ್ತವೆ. ಬಹಳ ಬುದ್ಧಿವಂತ ಹಸು ಪ್ರೋಪೆಸರ್ ಎಂಸಿ ಮೂ, ಪ್ಯಾಟ್ ಮತ್ತು ಬೋವಿನ. ಎಂಸಿ ಮೂ ವರ್ಜಿಸಿರುವ ಜಮೀನಿನ ಯಂತ್ರೋಪಕರಣಗಳಿಂದ ಒಂದು ಟೈಮ್ ಮಷೀನ್ ಮಾಡಿದ್ದಾನೆ. ಭವಿಷ್ಯದಲ್ಲಿ ಒಂದು ರೋಬಾಟ್ ಹಸು ಅಟರ್–ಮೂ–ನೆಟರ್ ಬಂದು ಇವುಗಳ ಮೇಲೆ ಆಕ್ರಮಣ ಮಾಡಿದಾಗ ತಾನು ಹಾಗೂ ತನ್ನ ಇಬ್ಬರು ಗೆಳೆಯರಾದ, ಪ್ಯಾಟ್ ಮತ್ತು ಬೋವಿನರನ್ನು ಬಾರ್ನರ್ ಒಕ್ಕಿಲಿನಿಂದ ಹೊರಗೆ ಕರೆದೊಯುತ್ತಾನೆ.

ಹಸುವಿನಬಗ್ಗೆಉಲ್ಲೇಖವಿರುವಕೆಲವುಗಾದೆಗಳು/ನುಡಿಗಟ್ಟುಗಳು/ ದೇವತೆಗಳು–ಶಾಪಗಳು, ಭಾಷಾ ಶಾಸ್ತ್ರ, ಹಾಗೂ ಗೃಹ ಪ್ರವೇಶದಿಂದ ಹಿಡಿದು ಹಬ್ಬ ಹರಿದಿನಗಳ ಒಂದು ಪಕ್ಷಿ ನೋಟ .

ದೇವತೆಗಳು,–ಶಾಪಗಳು: ಏಒ ಗ್ರೀಕ್ ದೇವತೆಯಾದ ಹೆರಾಳ ಅರ್ಚಕಳು. ಮಹಾ ಅಸೂಯೆಯಿಂದ ಕೂಡಿದ್ದ ಹೆರಾ ಜೂಸ್ ದೇವರ ಪತ್ನಿ. ಜೂಸ್ ನಂಬಿಕೆಗೆ ಅರ್ಹಸನಾಗಿರಲಿಲ್ಲ. ಅವನು ಏಒಳನ್ನು ಪ್ರೀತಿಸುತಿದ್ದ, ಹೆಂಡತಿಯ ಕಣ್ಣು ತಪ್ಪಿಸಲು ತನ್ನನ್ನು ಕಪ್ಪು ಮೋಡವಾಗಿ ಮಾರ್ಪಾಡು ಮಾಡಿಕೊಂಡ. ತನ್ನ ಹೆಂಡತಿಯ ಕೋಪ ಏಒಗೆ ತಟ್ಟದಿರಲೆಂದು ಏಒಳನ್ನು ಹಸುವಾಗಿ ಬದಲಾಯಿಸಿದ. ನುಡಿಗಟ್ಟು . "ಬಹಳ ಹೊತ್ತು" ಅನ್ನುವುದನ್ನು ತಿಳಿಸಲು ಹೀಗೆ ಹೇಳುತ್ತಾರೆ; "ನಿಲ್ಲಿಸೆಂದು ನಾನು ಹೇಳದಿದ್ದರೆ, ದನ ಹಿಂದಿರುವವರೆಗೆ, ಅವಳು ಮಾತು ಮುಗಿಯುವುದೇ ಇಲ್ಲ". ಭಾಷಾ ಶಾಸ್ತ್ರ – "ರೂಢಿಯಲ್ಲಿರುವ ರೂಪಗಳ ಆಧಾರದ ಮೇಲೆ ಹೊಸ ರೂಪಗಳನ್ನು ಸೃಷ್ಟಿಸುವುದು – "cow ಪದದ ಬಹುವಚನ kine ಇದ್ದದ್ದು ಈಗ cow ಎಂದು ಬಳಕೆಯಾಗಿದೆ". (ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು) ಹಬ್ಬಗಳು – ಹಿಂದೂ ಪಂಚಾಂಗದ ಪ್ರಕಾರ 12ನೇ ತಿಂಗಳನ 12ನೆ ದಿನದಂದು ರಾಜಾಸ್ಥಾನದ ಜೋದ್‌ಪುರದಲ್ಲಿ ಹಸುವಿಗೆ ಸಂಬಂಧಿಸಿದಂತೆ ಆಚರಣೆ/ಧಾರ್ಮಿಕ ಅನುಷ್ಠಾನ ಮಾಡುತ್ತಾರೆ. ಹಸುವಿನ ಉತ್ಪನ್ನಗಳಾದ ಗೋಮುತ್ರ, ಗೋಮಯ, ಹಾಲು, ಮೊಸರು ಮತ್ತು ತುಪ್ಪ ಮಿಶ್ರಣವೇ ಪಂಚಗವ್ಯ. ಧಾರ್ಮಿಕ ವಿಧಿವಿಧಾನಗಳಲ್ಲಿ ಪಂಚಗವ್ಯ ಮುಖ್ಯವಾದದ್ದು. ಹಾಸನದಲ್ಲಿ ನಡೆಯುವ ದನಗಳ ಜಾತ್ರೆ, ಮದುರೈನಲ್ಲಿರುವ ನಂದಿಬುಲ್ ಹಾಗೂ ಮಹಾಬಲಪುರಂನಲ್ಲಿರುವ ಶಿವ ದೇವಸ್ಥಾನ ಹಾಗೂ ಗೋಗಳ ಕೇಂದ್ರ ಬಿಂದುವಾದ ಬೆಂಗಳೂರಿನ ನಂದಿ ದೇವಸ್ಥಾನ, ಜಾನ್ಸಿಯಲ್ಲಿರುವ ವಿಶ್ವನಾಥ ದೇವಸ್ಥಾನ, ಮೈಸೂರಿನಲ್ಲಿರುವ ಚಾಮುಂಡಿ ಬೆಟ್ಟದಲ್ಲರುವ ನಂದಿಯ ಪ್ರತಿಮೆ ಬಹು ಪ್ರಖ್ಯಾತ. ನೇಪಾಲ್ ದೇಶದ ರಾಷ್ಟ್ರ ಪ್ರಾಣಿ ಗೋವು. ಅದನ್ನು ಅವರು ದಿವಾಲಯಲ್ಲಿ ಪೂಜೆಯನ್ನು ಮಾಡುತ್ತಾರೆ. ಗೋವು ಲಕ್ಷಿಯ ಪ್ರತಿರೂಪವೆಂದು ನಂಬಿಕೆ ಇದೆ. ಮೈಸೂರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಸಂಕ್ರಾಂತಿಯ ಹಬ್ಬದಲ್ಲಿ ಹಸುಗಳಿಗೆ ಅಲಂಕರಿಸಿ, ಪೂಜೆಮಾಡಿ ಅವುಗಳನ್ನು ಬೆಂಕಿಯಮೇಲೆ ಹಾಯಿಸುವ ಸಂಪ್ರದಾಯವಿದೆ. ಗಾದೆಗಳು – ಆಕಳಂತ ಅತ್ತೆ, ಗೋಕುಲದಂತ ಮಾವ/ ಊರಿನ ದನವೆಲ್ಲ ಮೈಯಿಸಿದ ಬೋರೆಗೌಡ / ಸೆಟ್‌ಲಿಂಗ್ ಏ ಡಿಸ್‌ಪ್ಯೂಟ್ ತ್ರೂ ದಿ ಲಾ ಇಸ್ ಲೈಕ್ ಲೂಸ್‌ಇಂಗ್ ಏ ಕೌ ಪಾ಼ರ್ ದಿ ಸೇಕ್ ಆಫ್ ಏ ಕ್ಯಾಟ್/ (ಜೀನಾ ದೇಶದ ಗಾದೆ) / ಏ ಪೂಲ್ ಲುಕ್ಸ್ ಪಾ಼ರ್ ಡಂಗ್ ಹ್ವೇರ್ ದಿ ಕೌ ನೆವರ್ ಗ್ರೇಸ್‌ಡ್ (ಇಥಿಯೋಪಿಯಾ ದೇಶದ ಗಾದೆ).

"ಗೋಮೂತ್ರ ಬಂಗಾರ!" (ವಿಜಯ ಕರ್ನಾಟಕ, 29 ಜೂನ್ 2016 – ಟಿಎನ್ ಎನ್ ಜುನಾಗಢ) ಒಂದು ಕುತೂಹಲ ಕೆರಳಿಸುವ ಲೇಖನ, "....ಜುನಾಗಢ ಕೃಷಿ ವಿವಿಯ ಆಹಾರ ಪರೀಕ್ಷಾ ಪ್ರಯೋಗಾಲಯದಲ್ಲಿ ನಡೆಸಿದ ಗಿರ್ ಜಾತಿಯ ದನಗಳ ಮೂತ್ರ ಪರೀಕ್ಷೆಯಲ್ಲಿ, ಒಂದು ಲೀಟರ್ ಮೂತ್ರದಲ್ಲಿ ಮೂರು ಮಿಲಿ ಗ್ರಾಂನಿಂದ 10ಮಿಲಿ ಗ್ರಾಂವರೆಗೆ ಚಿನ್ನದ ಅಂಶಗಳಿರುವುದು ಕಂಡುಬಂದಿದೆ." "ಬದುಕು ಲಾಲಿಸುವ ಪಶು ಪಾಲನೆ" ಎನ್ನುವ ಲೇಖನದಲ್ಲಿ (ಪ್ರಜಾವಣಿ, ಮೆಟ್ರೊ ಜುಲೈ 23, 2016) ರೇವಣ್ಣ ಮಾಕಳರವರು ಹೀಗೆ ಹೇಳುತ್ತಾರೆ "ಹೈನುಗಾರಿಕೆ ಹಲವಾರು ಮಂದಿಗೆ ಸ್ವಉದ್ಯೋಗವನ್ನು ಒದಗಿಸುವ/ಹಾಗೂ ಕುಲಕಸುಬು ಆಗಿದೆ....ಇತ್ತೀಚಿನ ದಿನಗಳಲ್ಲಿ ಗೋಮಾಳಗಳಲ್ಲ. ಹುಲ್ಲು ಬೆಳೆಯಲು ಸಾಧ್ಯವಾಗುತ್ತಿಲ್ಲ. ಆ ಜಾಗವೆಲ್ಲ ಈಗ ವಾಣಿಜ್ಯೀಕರಣಗೊಳ್ಳುತ್ತಿದೆ. ಹಸುಗಳು ರಸ್ತೆಗಿಳದರೆ ಅವುಗಳನ್ನು ಹಿಡಿದು ಬಿಡುತ್ತಾರೆ.... ಹಿಂದೆ ಟ್ರ್ಯಾಕ್ಟರ್ನಲ್ಲೇ ಹುಲ್ಲು ತಂದು ಕೊಡುವ ವ್ಯವಸ್ಥೆಯೂ ಇತ್ತು. ಈಗ ಅದು ಅಷ್ಟು ಇಲ್ಲ. ಬೂಸಾ, ಕಡ್ಲೆ ಹೊಟ್ಟಿನ ದರ ದುಬಾರಿಯಾಗಿದೆ. ಬೇರೆ ಬೇರೆ ರಾಜ್ಯದ ಯೂರಿಯಾ ಮಿಶ್ರಣ ಮಾಡಿದ ಹಾಲನ್ನು ಹೋಟೆಲ್‌ಗಳಲ್ಲಿ ಖರೀದಿಸುತ್ತಿದ್ದಾರೆ. ಈ ರೀತಿಯ ಸಮಸ್ಯೆಗಳಿಂದ ಇತ್ತೀಚಿನ ಯುವ ಜನರು ಬೇರೆ ಉದ್ಯೋಗಗಳತ್ತ ವಾಲುತ್ತಿದ್ದಾರೆ.... ಹಾಲು ಕರೆಯುವ ಸ್ಪರ್ಧೆಗಳನ್ನು ಹಮ್ಮಿಕೊಂಡು, ಆಕರ್ಷಕ ಬಹುಮಾನಗಳನ್ನು ನೀಡುವುದರಿಂದ ಹೈನುಗಾರಿಕೆಗೆ ಹೆಚ್ಚು ಬೆಂಬಲ ಕೊಟ್ಟಂತೆ ಆಗುತ್ತದೆ." ತೊಣಚಿಕೊಪ್ಪಲಿನ ಯಶೋದಾ ಹೀಗೆ ಹೇಳುತ್ತಾರೆ "ಪಶುಸಂಗೋಪನೆ ಜೀವನಕ್ಕೆ ಆಧಾರವಾಗಿದೆ.... ಬೇರೆ ಉದ್ಯೋಗದಲ್ಲಿ ಇಷ್ಟು ಸಮಾಧಾನವೂ/ ಆದಾಯವೂ ಸಿಗುವುದಿಲ್ಲ". ವ್ಯರ್ಥವಾಗುವ ಸಗಣಿ, ಗಂಜಳಗಳ ಬಗ್ಗೆ ಮಾತನಾಡುವ ಲೇಖಕರು ಸಮಸ್ಯೆಯನ್ನು ಓದುಗರ ಮುಂದೆ ಇಡುತ್ತಾರೆ "ಸಾವಯವ ಗೊಬ್ಬರಕ್ಕೆ ಬೇಡಿಕೆಯೂ ಹೆಚ್ಚಿದೆ. ಆದರೆ, ನಗರದಲ್ಲಿ ಮಾತ್ರ ಹಸುಗಳ ಸಗಣಿ, ಗಂಜಳ ವ್ಯರ್ಥವಾಗುತ್ತಿದೆ. ಸಗಣಿಯನ್ನು ಒಟ್ಟು ಮಾಡಿ ಮಾರಾಟ ವ್ಯವಸ್ಥೆ ಇದ್ದರೆ ಹೆಚ್ಚು ಲಾಭ ಖಚಿತ." ಪವನ ಎಚ್.ಎಸ್ ವಿರಚಿತ "ದೀಪದ ಕೆಳಗಿನ ಕತ್ತಲು" ಲೇಖನದಲ್ಲಿ (ಪ್ರಜಾವಣಿ, ಮೆಟ್ರೊ ಜುಲೈ 23, 2016), ಪಡುವಾರಹಳ್ಳಿಯ ಶಂಕರಪ್ಪ ತಮ್ಮ ಅನುಭವ ಹಂಚಿಕೊಳ್ಳುತ್ತಾರೆ "ಹೈನುಗಾರಿಕೆಯಲ್ಲಿ ಲಾಭ ಇದೆ. ಆದರೆ, ಸ್ವಲ್ಪ ತಾಳ್ಮೆ ಬೇಕು....ನಮಗೂ ಸೌಲಭ್ಯಗಳನ್ನು ನೀಡಬೇಕು" ಎಂಬುದು ಅವರ ಬಿನ್ನಹವಾಗಿದೆ. ಹದಿನೆಂಟನೇ ವಯಸ್ಸಿಗೆ ವಿಧವೆಯಾದ ಹಿಂಕಲ್‌ನಲ್ಲಿರುವ ರೇಣುಕಾಳ ಅನುಭವ ಮತ್ತೊಂದು ಆಯಾಮವನ್ನು ತೋರಿಸುತ್ತದೆ. "ಹೈನುಗಾರಿಕೆ ನನಗೆ ಎಲ್ಲವೂ ಆಗಿದೆ." ಬಹು ಕಾರ್ಯ ನಿರ್ವಹಣೆ ಮಾಡುತ್ತಿರುವ ತನ್ನ ಇಬ್ಬರು ಗಂಡು ಮಕ್ಕಳ ಬಗ್ಗೆ ಹೀಗೆ ಹೇಳುತ್ತಾಳೆ, "ಅವರು ಓದನ್ನು ಮುಂದುವರೆಸುತ್ತಿದ್ದಾರೆ,

ನನಗೆ ಸಹಾಯವು ಮಾಡುತ್ತಿದ್ದಾರೆ; ಮುಂದೆಯೂ ಕೆಲಸದ ಜೊತೆಗೂ ಹೈನುಗಾರಿಕೆಯನ್ನು ಮುಂದುವರೆಸುತ್ತೇವೆ ಎಂದು ಹೇಳುತ್ತಾರೆ". ಹೀಗೆ ಹೇಳುವ ರೇಣುಕಾಳ ಕಣ್ಣಲ್ಲಿ ಹೆಮ್ಮೆಯ ಮಿಂಚನ್ನು ಗಮನಿಸದೇ ಇರುವುದು ಅಸಾಧ್ಯ.

ಹೈದರಾಬಾದಿನ ಹತ್ತಿರವಿರುವ ಯಾದಗಿರಿಗುಟ್ಟದಲ್ಲಿ 400 ಚದರ ಗಜ ನೆಲ/ಜಮೀನನ್ನು 3.5 ಲಕ್ಷಕ್ಕೆ ಕೊಂಡು ಒಂದು (ಹೆಚ್ ಫ್ – ಕ್ರಾಸ್ ಬ್ರೀಡ್)ನ್ನು ಕೊಡುಗೆಯಾಗಿ ನೀಡುವುದಾಗಿ ಅವಕಾಶವನ್ನು ಒದಗಿಸಲಾಗಿದೆ. (Bangalore Times, Sunday, July 31, 2016 - "The Real Estate venture in Telangana is out to milk the cow frenzy in the country".) ಎನ್ನುವ ಪ್ರಕಟನೆಯನ್ನು ಪತ್ರಿಕೆಯಲ್ಲಿ ಓದಿದಾಗ ಕುತೂಹಲ ಕೆರಳಿದರೆ, ವಿಜಯ ಕರ್ನಾಟಕ 11 ಸೆಪ್ಟೆಂಬರ್ 2016, ಪುಟ 09ರಲ್ಲಿ ಪ್ರಕಟವಾದ ಅಮೆರಿಕಾದಲ್ಲಿ ಹಾಲಿನ ಪೂರೈಕೆ ಮತ್ತು ಉತ್ಪಾದನೆಯನ್ನು ತಗ್ಗಿಸುವ ಮೂಲಕ ಹಾಲಿನ ಬೆಲೆ ಹೆಚ್ಚಿಸಲು 5 ಲಕ್ಷ ಹಸುಗಳ ಹತ್ಯೆ! ಅಮೆರಿಕಾದಲ್ಲಿ ಅಮಾನವೀಯ ಕೃತ್ಯ / 52 ದಶಲಕ್ಷ ಡಾಲರ್ ಪರಿಹಾರಕ್ಕೆ ಆದೇಶ (ಏಜೆನ್ಸೀಸ್ ವಾಷಿಂಗ್ಟನ್) ಶಿರೋನಾಮ ಯಾರನ್ನಾದರು ಕೆರಳಿಸದೆ ಇರದು. ಇದೊಂದು ಮುಖವಾದರೆ, ಮತ್ತೊಂದು ಇತ್ತೀಚೆಗೆ ನಡೆದ ಘಟನಾವಳಿಗಳು: "ದಲಿತರ ಮೇಲೆ ಬೇಡ, ನನ್ನ ಮೇಲೆ ಹಲ್ಲೆ ನಡೆಸಿ" –ಗೋರಕ್ಷಕರ ವಿರುದ್ಧ ಚಾಟಿ, ಪ್ರಧಾನಿಯವರ ಪ್ರತಿಕ್ರಿಯೆ. (ಪ್ರಜಾವಾಣಿ, ಆಗಸ್ಟ್, 8 2016). ನಂತರ ಹೀಗೆ ಮುಂದುವರಿಯಿತು – "ಗೋರಕ್ಷಕರ ವಿರುದ್ಧ ಕಠಿಣ ಕ್ರಮ – ಗೋರಕ್ಷಣೆಯ ಹೆಸರಿನಲ್ಲಿ ಕಾನೂನು ಉಲ್ಲಂಘಿಸುವವರನ್ನು ಸಹಿಸಿಕೊಳ್ಳಬೇಡಿ...." (ಪ್ರಜಾವಾಣಿ, ಆಗಸ್ಟ್, 10 2016). ಹಸುಗಳ ಬಗ್ಗೆ ಹೇಳುತ್ತಾ ಹೋದರೆ ಕೊನೆ ಎಲ್ಲಿದೆ ಅದಕ್ಕೆ? ಇಷ್ಟನ್ನು ಮಾತ್ರ ನಿಖರವಾಗಿ ಹೇಳಬಹುದು. ನಾವೂ ಬದುಕಿ, ಪ್ರಾಣಿ, ಪಕ್ಷಿಗಳನ್ನೂ, ಗಿಡ ಮೂಲಿಕೆಗಳನ್ನೂ ಬದುಕಲು ಬಿಟ್ಟರೆ ಈ ವಿಶ್ವ ಎಷ್ಟು ಸುಂದರ, ಅಲ್ಲವೇ?

'ತೇರು' ಕಾದಂಬರಿಯಲ್ಲಿ ದಲಿತರ ಚಿತ್ರಣ

ಡಾ. ಪತ್ರೆಮ್ಮ ಧಾರವಾಡ
ಪಿಡಿಎಫ್, ಡಾ.ಆರ್.ಸಿ ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
Email: salagatti@gmail.com

ಅನೇಕ ವರ್ಷಗಳಿಂದ ಮೇಲ್ವರ್ಗದವರಿಂದ ಶೋಷಣೆ ಮತ್ತು ಅವಮಾನಗಳಿಗೆ ಒಳಗಾದ ಸಾಮಾಜಿಕ ವರ್ಗವೊಂದು ತನಗಾದ ನೋವುಗಳಿಗೆ ಅಕ್ಷರ ರೂಪದಲ್ಲಿ ಆ ನೋವನ್ನು ಹಂಚಿಕೊಂಡಿದುದರ ಪರಿಣಾಮವಾಗಿ ದಲಿತ ಸಾಹಿತ್ಯ ಬೆಳಕಿಗೆ ಬಂದಿದೆ. ಶೋಷಣೆಗೆ ಒಳಗಾದ ದಲಿತ ವರ್ಗದ ನೆನಪುಗಳು ನೋವಿನಿಂದ ಕೂಡಿರುವುದು ಸಹಜವಾಗಿದೆ. ಹಾಗಾಗಿ ಆಧುನಿಕ ಕಾಲದ ಕಾದಂಬರಿ ಪ್ರಕಾರಗಳಲ್ಲಿ ದಲಿತರ ನೋವುಗಳನ್ನು ಚಿತ್ರಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ನಿಟ್ಟಿನಲ್ಲಿ ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯು ಪ್ರಮುಖವಾಗಿದೆ. ಧರಮನಟ್ಟಿ ಎಂಬ ಪುಟ್ಟ ಊರಿನ ಸುತ್ತ ಕಾದಂಬರಿ ಹುಟ್ಟಿಕೊಳ್ಳುತ್ತದೆ. ದೇಸಗತಿಯ ಸಣ್ಣಸಾಮ್ರಾಜ್ಯವೊಂದರ ವೈಭವದ ಆರಂಭದ ದಿನಗಳು ಹಾಗೂ ಪ್ರಸ್ತುತ ಸಂದರ್ಭದಲ್ಲಿ ರಾಜಕೀಯದ ವಾತಾವರಣವನ್ನು ಇದು ಒಳಗೊಂಡಿದೆ.

ಧರಮನಟ್ಟಿಯ ದೇಸಗತಿಯನ್ನು ಹುಟ್ಟುಹಾಕಿದ ರಂಗೋಪಟ ವರ್ಧನ ದೇಸಾಯಿಯು ತನ್ನ ಮನೆದೇವರಾದ ವಿಠ್ಠಲನ ಭವ್ಯ ದೇವಾಲಯವನ್ನು ಮತ್ತು ಅದಕ್ಕೊಂದು ಸುಂದರವಾದ ತೇರನ್ನು ಕಟ್ಟಿಸುತ್ತಾನೆ. ದೇವಾಲಯದ ಮೊದಲ ಉತ್ಸವದ ಸಂದರ್ಭದಲ್ಲಿ ತೇರು ಮುಂದೆ ಚಲಿಸುವುದಿಲ್ಲ. ದೇಸಾಯರು

ಈ ಕಾದಂಬರಿಯಲ್ಲಿ ಮೊದಲ ತಲೆಮಾರಿನ ದ್ಯಾವಪ್ಪನಂಥವರ ಧಾರ್ಮಿಕ ನಂಬಿಕೆ, ಶ್ರದ್ಧೆಗಳಿಗೂ ಮತ್ತು ಆಧುನಿಕ ದ್ಯಾವಪ್ಪನ ನಂಬಿಕೆಗಳಿಗೂ ಸಾಕಷ್ಟು ವ್ಯತ್ಯಾಸವಿರುವುದನ್ನು ಕಾಣಬಹುದು. ಕಾದಂಬರಿಯು ಪರಂಪರೆ ಮತ್ತು ಆಧುನಿಕತೆಗಳ ನಡುವಿನ ಸ್ಥಿತ್ಯಂತರವನ್ನು ಹೇಳುತ್ತದೆ. ಭೂಮಿಯಿಲ್ಲದ ಮೇಲ್ವರ್ಗದ ಜನರು ಭೂಮಿಯಿಲ್ಲದ ಕೆಳವರ್ಗದ ಜನರನ್ನು ಶೋಷಣೆಮಾಡುವುದು ಕಾದಂಬರಿಯಲ್ಲಿ ಕಂಡು ಬರುವ ಅಂಶವಾಗಿದೆ. ಹಣ ಮತ್ತು ಅಧಿಕಾರದ ಬಲದಿಂದ ಮೆರೆಯುವ ಮೇಲ್ವರ್ಗಗಳು ಕೆಳವರ್ಗಗಳ ಜನರ ಶೋಷಣೆಯನ್ನು ಮಾಡುತ್ತಾಬಂದಿವೆ. ರಕ್ತಶಿಲಕದ ನೇವೆಯಿಂ ಮೂಲಕ ಮೇಲ್ವರ್ಗದ ಜನರು ದಲಿತರನ್ನು ತಮ್ಮ ಸ್ವಾರ್ಥಕ್ಕಾಗಿ ಹಣ, ಭೂಮಿಯ ಆಮಿಷ ಒಡ್ಡಿ ಹೇಗೆ ಶೋಷಣೆಗೊಳಪಡಿಸುತ್ತಾರೆ ಎನ್ನುವುದು ಕಾದಂಬರಿ ಮೂಲಕ ತಿಳಿದುಕೊಳ್ಳಬಹುದು. ಕೆಳವರ್ಗದ ಜನರ ಬಡತನ, ಮೌಢ್ಯ, ನೇವರು ಧರ್ಮಗಳ ಮೇಲೆ ಅಪಾರವಾದ ನಂಬಿಕೆಯಿಲ್ಲಿ ಬದುಕುವ ದಲಿತರ ಚಿತ್ರಣ "ತೇರು" ಕಾದಂಬರಿಯಲ್ಲಿ ಕಂಡುಬರುತ್ತದೆ. ಈ ಕಾದಂಬರಿಯಲ್ಲಿ ಬರುವ ದಲಿತರ ನೋವನ್ನು ಚಿತ್ರಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಅನೇಕ ವರ್ಷಗಳಿಂದ ಮೇಲ್ವರ್ಗದವರಿಂದ ಶೋಷಣೆ ಮತ್ತು ಅವಮಾನಗಳಿಗೆ ಒಳಗಾದ ಸಾಮಾಜಿಕ ವರ್ಗವೊಂದು ತನಗಾದ ನೋವುಗಳಿಗೆ ಅಕ್ಷರ ರೂಪದಲ್ಲಿ ಆ ನೋವನ್ನು ಹಂಚಿಕೊಂಡಿದುದರ ಪರಿಣಾಮವಾಗಿ ದಲಿತ ಸಾಹಿತ್ಯ ಬೆಳಕಿಗೆ ಬಂದಿದೆ. ಶೋಷಣೆಗೆ ಒಳಗಾದ ದಲಿತ ವರ್ಗದ ನೆನಪುಗಳು ನೋವಿನಿಂದ ಕೂಡಿರುವುದು ಸಹಜವಾಗಿದೆ. ಹಾಗಾಗಿ ಆಧುನಿಕ ಕಾಲದ ಕಾದಂಬರಿ ಪ್ರಕಾರಗಳಲ್ಲಿ ದಲಿತರ ನೋವುಗಳನ್ನು ಚಿತ್ರಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ನಿಟ್ಟಿನಲ್ಲಿ ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯು ಪ್ರಮುಖವಾಗಿದೆ. ಧರಮನಟ್ಟಿ ಎಂಬ ಪುಟ್ಟ ಊರಿನ ಸುತ್ತ ಕಾದಂಬರಿ ಹುಟ್ಟಿಕೊಳ್ಳುತ್ತದೆ. ದೇಸಗತಿಯ ಸಣ್ಣಸಾಮ್ರಾಜ್ಯವೊಂದರ ವೈಭವದ ಆರಂಭದ ದಿನಗಳು ಹಾಗೂ ಪ್ರಸ್ತುತ ಸಂದರ್ಭದಲ್ಲಿ ರಾಜಕೀಯದ ವಾತಾವರಣವನ್ನು ಇದು ಒಳಗೊಂಡಿದೆ.

ಧರಮನಟ್ಟಿಯ ದೇಸಗತಿಯನ್ನು ಹುಟ್ಟುಹಾಕಿದ ರಂಗೋಪಟ ವರ್ಧನ ದೇಸಾಯಿಯು ತನ್ನ ಮನೆದೇವರಾದ ವಿಠ್ಠಲನ ಭವ್ಯ ದೇವಾಲಯವನ್ನು ಮತ್ತು ಅದಕ್ಕೊಂದು ಸುಂದರವಾದ ತೇರನ್ನು ಕಟ್ಟಿಸುತ್ತಾನೆ. ದೇವಾಲಯದ ಮೊದಲ ಉತ್ಸವದ ಸಂದರ್ಭದಲ್ಲಿ ತೇರು ಮುಂದೆ ಚಲಿಸುವುದಿಲ್ಲ. ದೇಸಾಯರು

ಶಾಸ್ತ್ರದ ಅಯ್ಯನವರನ್ನು ಕರೆಸಿ ಶಾಸ್ತ್ರ ಕೇಳಿದಾಗ ಅದು ನರಬಲಿಯನ್ನು ಬೇಡುತ್ತಿದೆ ಎಂದು ಗೊತ್ತಾಗುತ್ತದೆ. ದೇಸಾಯರು ಮತ್ತು ಕಾರಭಾರಿಗಳಾದ ತ್ರಿಯಂಬಕ ಭಟ್ಟರು ನರಬಲಿಗೆ ತಮ್ಮ ತಮ್ಮ ಮನೆಗಳವರು ಸಾಧ್ಯವಿಲ್ಲವೆಂದು ಅವರವರೇ ನಿರ್ಧರಿಸಿ ಡಂಣಾಯಕನಿಗೆ ಯಾರನ್ನಾದರೂ ಹಿಡಿದು ತಾರೆಂದು ಅಪ್ಪಣೆ ಕೊಡುತ್ತಾರೆ. ಕೆಳವರ್ಗದ ಜನ ನರಬಲಿಗೆ ಬೇಕು ಆದರೆ ಮೇಲ್ವರ್ಗದವರು ಬೇಡ. ಹೆಣ್ಣು ಗಂಡು ಎಂಬ ಭೇದವಿಲ್ಲ. ದೊಡ್ಡವರು ಸಣ್ಣವರೆಂಬ ವಯಸ್ಸಿನ ನಿರ್ಬಂಧವಿಲ್ಲ. ಯಾರನ್ನಾದರೂ ಹಿಡಿದು ತರಬೇಕೆಂದು ಡಂಣಾಯಕನಿಗೆ ಆಜ್ಞೆಮಾಡುತ್ತಾರೆ. ಡಂಣಾಯಕ ಊರೆಲ್ಲ ಅಲೆದಾಡಿ ಸಂಕಟಪಟ್ಟುಕೊಂಡು ಮನೆಗೆ ಬರುತ್ತಾನೆ. ಮನೆಯಲ್ಲಿ ತಲೆಗೆ ಕೈಕೊಟ್ಟು ಕುಳಿತಿರುವಾಗ ಆತನ ಮಡದಿ ಪಾರೋತಿ ಅವನನ್ನು ಸಮಾಧಾನಿಸುತ್ತಾಳೆ. ವಿಠ್ಠಲ ದೇವರ ಜಾತ್ರೆಗೆಂದು ಗೊಂಬೀರಾಮರ ಕುಟುಂಬವು ಧರಮನಟ್ಟಿಗೆ ಬಂದಿತ್ತು. ಬಡತನದ ಜಂಜಾಟದ ಜೀವನದಿಂದ ನೊಂದಿದ್ದ ಗೊಂಬೀರಾಮರ ದ್ಯಾವಪ್ಪ ಒಂಬತ್ತು ಮಕ್ಕಳು ಮತ್ತು ಬಸುರಿ ಹೆಂಡತಿಯ ಜೊತೆ ಸಂಸಾರ ಸಮೇತ ಧರಮನಟ್ಟಿಗೆ ಬಂದಿದ್ದ. ಅದನ್ನು ಡಂಣಾಯಕನ ಹೆಂಡತಿ ನೋಡಿ ಅವರನ್ನು ಭೇಟಿಯಾಗಿ, 'ವ್ಯಾಪಾರಿ ಬುದ್ಧಿ' ಉಪಯೋಗಿಸಿ ಒಂಬತ್ತು ಮಕ್ಕಳ ಬಡತಂದೆ ಗೊಂಬೀರಾಮರ ದ್ಯಾವಪ್ಪನನ್ನು 'ಜ್ವಾಳ–ಗೋಧಿ–ಬ್ಯಾಳ–ಬೆಲ್ಲ'ಗಳ ಉಡುಗೊರೆಯಿಂದ ಒಪ್ಪಿಸಿ, ಎಂಟಿಕರೆ ಜಮೀನಿನ ಆಮಿಷ ಒಡ್ಡಿ, ಆತನ 'ನಡುವಿನ ಹುಡುಗ ಚಂದ್ರಾಮ'ನನ್ನು ನರಬಲಿಗಾಗಿ ಕೊಡಬೇಕೆಂದು ಒಪ್ಪಸಿ ಮನೆಗೆ ಬರುತ್ತಾಳೆ. ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದ ದ್ಯಾವಪ್ಪನ ಬಸುರಿ ಹೆಂಡತಿಯನ್ನು ಗಮನದಲ್ಲಿರಿಸಿ ಅವರೆಲ್ಲ ರಾತ್ರಿ ತಪ್ಪಿಸಿಕೊಂಡು ಊರುಬಿಟ್ಟು ಹೋಗದಂತೆ ಕಾವಲು ಹಾಕುತ್ತಾರೆ. ಮರುದಿನ ಚೈತ್ರ ಶುಕ್ಲ ನವಮಿಯಂದೇ ಪುಟ್ಟಬಾಲಕ ಚಂದ್ರಮನ ಬಲಿಯೊಂದಿಗೆ ವಿಠ್ಠಲದೇವರ ರಥೋತ್ಸವವೂ ಸಾಂಗವಾಗಿ ಮುನ್ನಡೆಯುತ್ತದೆ.

ದ್ಯಾವಪ್ಪನಿಗೆ ಸಮೀಪದ ಗ್ರಾಮ ಕಳ್ಳಗುದ್ದಿಯಲ್ಲಿ ಎಂಟಿಕರೆ ಜಮೀನನ್ನು ಕೊಡುತ್ತಾರೆ. ಆತ ಅಲ್ಲಿಯೇ ತನ್ನ ಹೆಂಡತಿ, ಮಕ್ಕಳನ್ನು ಕರೆದುಕೊಂಡು ಹೋಗುತ್ತಾನೆ ಮತ್ತು ಅಲ್ಲಿ ಒಂದು ಮನೆಯನ್ನು ಕಟ್ಟಿಸಿಕೊಳ್ಳುತ್ತಾನೆ. ದೇಸಾಯರ ಕಾರಭಾರಿ ತ್ರಿಯಂಬಕ ಭಟ್ಟರು ಈ ಘಟನೆಯನ್ನು ಅಲ್ಲಿಗೆ ಬಿಡದೇ ಅದನ್ನೊಂದು ಪದ್ಧತಿಯನ್ನಾಗಿ ಮಾಡಿ ಮುಂದುವರೆಸುತ್ತಾರೆ. ಇದನ್ನೇ ದೇಸಾಯರ ಆಜ್ಞೆಯಂತೆ ಸನದನ್ನು ಮಾಡಿ ದ್ಯಾವಪ್ಪನಿಗೆ ಕೊಡುತ್ತಾರೆ. 'ವಿಠ್ಠಲದೇವರ ಉತ್ಸವಕ್ಕೆ ಮುನ್ನ ಪ್ರತಿವರ್ಷವೂ ದ್ಯಾವಪ್ಪ ನಂತರ ಅವನ ವಂಶದವರು ರಥದ ಕಲ್ಲಿನ ಗಾಲಿಗೆ ಹಣೆಹೊಡೆದುಕೊಂಡು ರಕ್ತವನ್ನು ರಥದ ಮೂಡಲ ದಿಕ್ಕಿನ ಮುಖಕ್ಕೆ ತಿಲಕವಾಗಿಸುವುದು' ಉತ್ಸವದ ಅವಿಭಾಜ್ಯ ಅಂಗವಾಗಿ ಆಚರಣೆಗೆ ಬರುತ್ತದೆ. ಗೊಂಬೀರಾಮರ ಕಸುಬಿನ ದ್ಯಾವಪ್ಪ ಮತ್ತವನ ವಂಶದವರು ಈ ವಿಠ್ಠಲ ದೇವಸ್ಥಾನಕ್ಕೆ ಬದ್ಧವಾಗಿರಬೇಕೆಂಬ ಸಂಬಂಧ ಅಲ್ಲಿ ಸೃಷ್ಟಿಮಾಡುತ್ತಾರೆ.

ಹೊಟ್ಟೆಯ ಹಸಿವು ಕಾರಣವಾಗಿ 'ಸ್ವಾಮೀ ಕೊಟ್ಟದ್ದು ಸ್ವಾಮಿಗೆ ಅರ್ಪಿತವಾಗಲಿ' ಎಂದು ಹಳೆಯ ತಲೆಮಾರಿನ ದ್ಯಾವಪ್ಪ ತನ್ನ ಮಗುವನ್ನು ರಥಕ್ಕೆ ಬಲಿಕೊಡಲು ಒಪ್ಪಿದ್ದ. ದೇವರ ಮೇಲೆ ಅಖಂಡ ವಿಶ್ವಾಸವಿಟ್ಟು ತನ್ನ ಮುಂದಿನ ಎಲ್ಲ ಬದುಕನ್ನು ದೇವರಿಗೆ ಸಂಪೂರ್ಣವಾಗಿ ಅರ್ಪಿಸಿದ. ದೇವರ ಕೃಪೆಗೆ ಪಾತ್ರನಾಗಲು ತಾನು ಶುದ್ಧಗೊಳ್ಳುವುದು ಮುಖ್ಯವೆಂದು ನಂಬಿದ್ದ. ಇಪ್ಪತ್ತು ದಿನಗಳ ಔಷಧ ಪಥ್ಯದ ಆರೈಕೆ ಮಾಡಿಕೊಳ್ಳುತ್ತಾನೆ. ಅದರಂತೆಯೇ ದೇವರ ಸೇವೆಗೆ ರಕ್ತಶುದ್ಧಿ ಮಾಡಿಕೊಂಡು, ತೀರ್ಥಯಾತ್ರೆ ಮುಗಿಸಿಕೊಂಡು ಧರಮನಟ್ಟಿಯ ತೇರಿನ ಹಿಂದಿನ ದಿನ ಅಲ್ಲಿಗೆ ಹೋಗುತ್ತಿದ್ದ. ಮುಂದೆ ತನ್ನ ವಂಶದವರೆಲ್ಲರೂ ಇದೇ ಹಾದಿಯಲ್ಲಿ ನಡೆಯಬೇಕೆಂದು ಆಜ್ಞಾಪಿಸುತ್ತಾನೆ. ಆತನ ನಂಬಿಕೆ, ಬದ್ಧತೆ ಇವು ಅವನ ಮನಸ್ಸಿಗೆ ನೆಮ್ಮದಿಯನ್ನು ತಂದುಕೊಡುತ್ತವೆ. ಧರಮನಟ್ಟಿಯ ಅಪರೂಪದ ತೇರಿನ ಸೇವೆಗೆ ತನ್ನನ್ನು ಸಮರ್ಪಿಸಿಕೊಂಡ ವ್ಯಕ್ತಿತ್ವ ಮೂಲದ್ಯಾವಪ್ಪನದಾಗಿದೆ. ಕೆಲ ತಲೆಮಾರುಗಳ ಕಾಲ ನಿಷ್ಠೆ, ನಂಬಿಕೆಗಳು ಕ್ರಮಬದ್ಧವಾಗಿಯೇ ಮುಂದುವರೆದು ಕ್ರಮೇಣ ಅದು ಕಡಿಮೆಯಾಗುತ್ತ ಹೋಗುತ್ತದೆ.

ಮರುದಿನ ತೇರಿಗೆ ಮಗನ ಬಲಿಯಾದ ನಂತರ ಆತನಲ್ಲಿ ಬದಲಾವಣೆಯಾಗುತ್ತದೆ. ತನ್ನನ್ನು ತನ್ನ ಮನೆತನದವರನ್ನು ವಿಶೇಷವಾದೊಂದು ಸೇವೆಗಾಗಿ ದೇವರೇ ಆರಿಸಿಕೊಂಡಿದ್ದಾನೆ, ತಾನು ಅದೃಷ್ಟವಂತ ಎನ್ನುವ ನಂಬಿಕೆ ಆತನಲ್ಲಿ ಮೊಳೆಯುತ್ತದೆ. "...ತನ್ನ ಮಗನ ಎದಿಯ ಮ್ಯಾಲೆ ಸ್ವಾಮಿಯ ತೇರು ಹಾಯುತ್ತಿದ್ದಂಗೆ ತೇರಿನ್ಯಾಗಿನ ವಿಠ್ಠಲ ಸ್ವಾಮಿಯ ಮೀಸಿಗಳು ಕುಣದವು...ಸ್ವಾಮಿಯ ಕಣ್ಣಿನ್ಯಾಗಿಂದ ಬೆಂಕಿಯ ಕೆಂಡದಂಥಾ ಬೆಳಕು ಚಿಮ್ಮಿ...ಆ ಬೆಳಕಿಗೆ ತನ್ನ ಹೆಂಡತಿಯ ಕಣ್ಣುಕುಕ್ಕಿ ಆಕಿ ಕಕ್ಕಾವಿಕ್ಕಿಯಾಗಿ ಬೇಹೋಶ ಆಗಿ ಹೆಂಗ ಬಿದ್ದಳೆಂಬುದನ್ನ..." (ಪುಟ–39) ವರ್ಣಿಸುತ್ತಾನೆ. ಅಲ್ಲಿ ಗೌಡನ ಚಾವಡಿಯಲ್ಲಿ 'ದುಸ್ಯಪ್ಪಗೋಳ ಸಂತ ರಾಮಜೀ' ತನ್ನ ಕಾಲಿಗೆ ನಮಸ್ಕರಿಸಿದಾಗ ಅವನಿಗೆ ತನ್ನಲ್ಲಿರುವ ವಿಶೇಷತೆಯ ಅರಿವಾಗುತ್ತದೆ. ಇದು ತನ್ನ ಸೌಭಾಗ್ಯ ಮತ್ತು ತನ್ನ ಮನೆತನದ ಪುಣ್ಯ ಎಂದುಕೊಳ್ಳುತ್ತಾನೆ. ಅಂಥ ಭಾಗ್ಯದ ದಾಖಲೆಯಾಗಿರುವ ದೇಸಾಯರ ಸನದನ್ನು ಗಾಜಿನ ಕಟ್ಟು ಹಾಕಿಸಿ, ದೇವರು ಗೂಡಿನ ಮೇಲೆ ಗೋಡೆಯಲ್ಲೇ ಕಿಂಡಿ ಮಾಡಿ ಕೂರಿಸಿ ಅದಕ್ಕೊಂದು ಬೀಗವನ್ನು ಹಾಕುತ್ತಾನೆ.

ಧರಮನಟ್ಟಿಯನ್ನಾಳಿದ ದೇಸಾಯರ ದೇಸಗತಿಯ ಸಂಕೇತವಾಗಿ ತೇರು ಸಿದ್ಧಗೊಂಡಿತ್ತು. ಜನರ ನಂಬಿಕೆಯಲ್ಲಿ ತೇರು ಘನವಾಗಿ ಬೆಳೆದು ಎಲ್ಲರ ಉತ್ಸಾಹಕ್ಕೆ ಕಾರಣವಾಗಿತ್ತು. ಅಂದು ದೇಸಗತಿಯ ಪ್ರತಿಷ್ಟೆಯ ಸಂಕೇತವಾಗಿದ್ದ ತೇರು ಇಂದು ಮುಂದೆ ಚಲಿಸಲಾರದೇ ನಿಂತಿದೆ. ತೇರಿನ ಚಲನೆಗೆ ಗೊಂಬೀರಾಮರ ಮಗನನ್ನು ಬಲಿತೆಗೆದುಕೊಂಡು ಸಾಗಿತ್ತು. ಮುಂದೆ ಅದೇ ಮನೆತನದ ವ್ಯಕ್ತಿಯ ರಕ್ತದ ತಿಲಕವನ್ನು ಪಡೆದು ತೇರು ಚಲಿಸುತ್ತಿತ್ತು. ಆದರೆ ಈಗ ತೇರು ಚಲಿಸಲಾರದೇ ಹಾಗೆಯೇ ನಿಂತಿದೆ. ಆದರೆ ಅದಕ್ಕೆ ಕಾರಣವಾಗುವವನೂ ಅದೇ ಕುಟುಂಬದ ವ್ಯಕ್ತಿ ಆಧುನಿಕ ದ್ಯಾವಪ್ಪ.

ಧರಮನಟ್ಟಿಯ ಮೂಲ ಮೂತ್ಯಾನ ಮೂರನೇಯ ತಲೆಮಾರಿನವನಾದ ಆಧುನಿಕ ದ್ಯಾವಪ್ಪ ಹೊಸ ಚಿಂತನೆಕಾರ. ಆತ ಬೆಂಗಳೂರಿನಲ್ಲಿ ಪತ್ರಕರ್ತ ಪಾಟೀಲರನ್ನು ಭೇಟಿಯಾಗಿ

ಧರಮನಟ್ಟಿಯ ತೇರಿನ ಕಥೆಗೆ ಹೊಸ ರೂಪವನ್ನು ಕೊಡಲು ಪ್ರಯತ್ನಿಸುತ್ತಾನೆ. ಅವನಲ್ಲಿರುವ ಆಧುನಿಕ ಚಿಂತನೆ, 'ನವ ನಿರ್ಮಾಣ ಚಳವಳಿಯ' ಪ್ರಭಾವ ಅದರಿಂದಾಗುವ ಪರಿಣಾಮ, ನಂತರದ ಪರಿವರ್ತನೆಗಳು, ಧರಮನಟ್ಟಿಯ ತೇರಿನ ಸೇವೆಯನ್ನು ಕಡಿಮೆಮಾಡಲು ಕಾರಣವಾಗುತ್ತದೆ. ತನ್ನ ಹಿರಿಯರ ಮೌಢ್ಯವನ್ನು ಕಳೆದುಕೊಳ್ಳುತ್ತಾ, ಕೊನೆಗೆ ಊರಿನ ಹಿರಿಯರ ದೃಷ್ಟಿಯಲ್ಲಿ ಕೀಳಾಗಿಯೂ ಕಂಡುಬರುತ್ತಾನೆ. ಮೂಲ ದ್ಯಾವಪ್ಪನಿಗೆ ವಿಠ್ಠಲ ದೇವರ ಮೇಲೆ ನಂಬಿಕೆ ಮತ್ತು ವಿಶ್ವಾಸವಿತ್ತು. ಆದರೆ ಜಾರ್ಜ್ ಫನಾಂಡೀಸ ಮತ್ತು ಜೇಪೀ ಇತನ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿದರು. ಅವರು ಅನ್ಯಾಯವನ್ನು ಸರಿಪಡಿಸುತ್ತಾರೆ ಎನ್ನುವುದು ಆತನ ದೃಢನಂಬಿಕೆಯಾಗಿತ್ತು. ಈ ಆಧುನಿಕ ದ್ಯಾವಪ್ಪ ಪಟ್ಟಕ್ಕೆ ಬಂದ ನಂತರ ಮೊದಲೆರಡು ವರ್ಷ ನಿಷ್ಠೆಯಿಂದ ರಕ್ತಶುದ್ಧಿ ಮತ್ತು ತೀರ್ಥಯಾತ್ರೆಯನ್ನು ಮಾಡಿ ಧರಮನಟ್ಟಿಯ ರಕ್ತತಿಲಕದ ಸೇವೆಯನ್ನು ಮಾಡಿದ. ಭೂ ಸುಧಾರಣೆ ಕಾಯಿದೆಯ ದುರುಪಯೋಗ ಪಡೆದು ತನ್ನೂರಿನ ಗೌಡ ತಮ್ಮ ಜಮೀನನೆಲ್ಲ ತೆಗೆದುಕೊಂಡಾಗ ಆತನಿಗೆ ಕೀಳರಿಮೆಯುಂಟಾಗುತ್ತದೆ. ಬಡವರಿಗೆ ಯಾವುದೇ ಕಾನೂನು ಅನುಕೂಲಕ್ಕೆ ಬರುವುದಿಲ್ಲ ಎನ್ನುವುದು ಗೊತ್ತಾದಾಗ ಆತ ಜೇಪೀಯವರ 'ನವ ನಿರ್ಮಾಣ ಚಳುವಳಿ'ಯಲ್ಲಿ ಭಾಗವಹಿಸುತ್ತಾನೆ.

ಬೆಂಗಳೂರಿನಲ್ಲಿರುವ ಪತ್ರಕರ್ತ ಪಾಟೀಲರನ್ನು ಆಧುನಿಕ ದ್ಯಾವಪ್ಪ ಭೇಟಿಯಾಗುತ್ತಾನೆ. ಆತನ ಮುಂದೆ ರಕ್ತತಿಲಕದ ಸೇವೆಯ ಬಗ್ಗೆ, ಭಕ್ತರು ಕೊಡುವ ಕಾಣಿಕೆಗಳ ಬಗ್ಗೆ ಹೇಳುತ್ತಾನೆ. "ಆಗ ಕೊಡವರು ಅದನ್ನ ಭಕ್ತಿ ಅಂತ ಕೊಡತಿದ್ದರು ಮತ್ತು ಇಸಗೋಳಾವರು ಅದನ್ನ ಭಿಕ್ಷಾ ಅಂತ ಅನಕೋತಿದ್ದಿಲ್ಲ. ಮುಂದ ಕೊಡವರಿಗೆ ಅದು ಭಿಕ್ಷಾ ಅಂತ ತಿಳತು...ಕೊಡೊದನ್ನ ಬಂದ ಮಾಡಿದರು...ಈಗ ಮಂದಿಗೆ ದೇವರ ಖರೇ ಹಕಿಕತ್ತು ತಿಳದೈತಿ. ಹಿಂಗಾಗಿ ಕೊಡೂದು ಗಿಡೂದು ಬಂದ ಮಾಡ್ಯಾರು... ದೇವರೂ ದಿಂಡರೂ ಎಲ್ಲ ಔಟ್ ಆಫ್ ಡೇಟ್ ಆಗ್ಯಾವರೀ... ಔಷಧದ ಬಾಟಲೀಮ್ಯಾಲ ಹಾಕಿರತಾರ ನೋಡರೀ..ಎಕ್ಸಪೈರೀ ಡೇಟು...ಹಂಗ!...ದೇವರೂ ದಿಂಡಿರದು ಎಕ್ಸಪೈರಿ ಡೇಟು ಆಗಿ ಹೋಗೇತಿರಿ...ಹಿಂತಾ ದೇವರ ತೇರಿನ ಸೇವಾ ಮಾಡಿಕೋತ ನಿರುಪಯೋಗ ಆಗಿ ಹಾಳ ಆಗಲಿಕ್ಕೆ ಬಿಡದ ನಮ್ಮಂಥಾ ಹುಡುಗೋರಿಗೆ ದುಡಿಲಿಕ್ಕ ಕೆಲಸಾ ಕೊಡಬೇಕರಿ..." (ಪುಟ–74) ಎಂದು ಹೇಳುತ್ತಾ ತಾನು ಸೇವೆಗೆ ಈಗಲೂ ಹೋಗುತ್ತೇನೆ ಎಂದು ಹೇಳುತ್ತಾನೆ. ದ್ಯಾವಪ್ಪನ ವಾಸ್ತವ ಬದುಕು ನೋವಿನಿಂದ ತುಂಬಿಹೋಗಿದೆ. ಅದನ್ನು ಸ್ವಲ್ಪಮಟ್ಟಿಗಾದರೂ ಬದಲಾಸಿಕೊಳ್ಳಲು ಪ್ರಯತ್ನಿಸುತ್ತಾನೆ. ಮತ್ತೆ ಪಾಟೀಲರಿಗೆ "ಆದರ ನಾವು ನಡಕೋದರೊಳಗ ನಮಗ ನಂಬಿಕಿ ನಿಷ್ಠಾ ಇರಬೇಕಲ್ಲರೀ... ಖರೇದಿಂದ ನಡಕೋಬೇಕು...ಸ್ವತಾ ನಾನ...ಈಗ ಎರಡ ವರ್ಷ ನಮ್ಮ ಮೂಲ ಮುತ್ಯಾ ಏನು ಹಾದೀ ಹಾಕಿಕೊಟ್ಟಿದ್ದ ನೋಡರೀ... ಅದ ಪ್ರಕಾರನ ಅಗದೀ ನಿಷ್ಠಾದಿಂದ ಸೇವಾ ನಡಸಿದನರೀ... ರಕ್ತ ಶುದ್ಧಿ ಮಾಡಿಕೊಳ್ಳುವ ಆಚಾರಾ, ಯಾತ್ರಾ.. ಎಲ್ಲಾನೂ.. ಆದರ ಮನಸಿಗೆ ಎಲ್ಲ ವ್ಯರ್ಥ ಅನಿಸಿತರಿ. ಗೂಗೀ ಕೊಳ್ಳದಾಗ ಈಗ ಯಾವ ಸಿದ್ಧರು ಕಾಣುವುದಿಲ್ಲ... ಎಂದು ಹೇಳುತ್ತ ಬಿಸಿಲಿಗೆಂದು ಯಾರದಾದರೂ ಮನೆಯ ಕಟ್ಟಿಗೆ ಕೂಡಲು ಹೋದರೆ ಬಾಗಿಲು ಹಾಕಿಕೊಳ್ಳುವುದನ್ನೂ, ಬಾಯಾರಿದಾಗ ನೀರು ಕೇಳಿದರೆ ಚಹಾದ ಅಂಗಡಿಗೆ ಹೋಗೆನ್ನುತ್ತಾರೆ ಎಂದು ವಿಷಾದದಿಂದ ಹೇಳುತ್ತ ಎರಡು ಮೂರು ದಿನಕ್ಕ ಒಮ್ಮೆ ನಳ್ಳಯಲ್ಲಿ ನೀರು ಬಂದರೆ ಮತ್ತೆ ಎಂದ ನಳಾ ಬಿಡತಾರೋ ಅಂತನ್ನೂ ಅಂಜಿಕೀ ಎಲ್ಲಾರಿಗೂ... ಎಂದು ಅವರ ಪರ ಅನುಕಂಪದ ಮಾತನ್ನಾಡುತ್ತಾನೆ. ನಾ ಎರಡವರ್ಷ ಅಗದೀ ನಿಷ್ಠಾದಿಂದ ಅಗದೀ ಭಕ್ತಿಲಂದ ಯಾತ್ರಾ ಮಾಡಿದಿನರೀ...ಆದರ ಯಾವ ಒಂದ ದೇವಸ್ಥಾನದೊಳಗನೂ ಒಂದು ಕ್ಷೇತ್ರದಾಗಾದರೂ ದೇವರಿದ್ದಾನಂತ ಅನ್ನೂ ಭಾವನಾ ನನಗ ಬರಲಿಲ್ಲ ನೋಡರಿ.." (ಪುಟ–75) ಇಲ್ಲಿ ಆತನ ಸಂದೇಹವೂ ಕಂಡುಬರುತ್ತದೆ. ದೇವರಿಲ್ಲವಾದ್ದರಿಂದ ರಥವೂ ಇಲ್ಲ ಎನ್ನುವ ಅವನ ಭಾವನೆ ಆಧುನಿಕ ದ್ಯಾವಪ್ಪನ ಪ್ರಾಮಾಣಿಕತೆಯನ್ನು ತೋರಿಸುತ್ತದೆ. ಮುಂದೆ ದಲಿತ ಆಧುನಿಕ ದ್ಯಾವಪ್ಪ ಬಾಬಾ ಅಮ್ಟೆಯವರ ಆಶ್ರಮದಲ್ಲಿ ತನ್ನ ಬದುಕನ್ನು ಸಮಾಜದ ಉಪಯೋಗಕ್ಕಾಗಿ ಮೀಸಲಿಡುತ್ತಾನೆ. 'ದೇವರೂ ಎನ್ನುವುದು ಇದ್ದರೆ ಅದರ ವಿರುದ್ಧ ನನ್ನ ಧಿಕ್ಕಾರವಿದೆ, ಅದರ ವಿರುದ್ಧ ನನ್ನ ಸತ್ಯಾಗ್ರಹವಿದೆ' ಎಂದು ತಾನೂ ಅನುಭವಿಸಿದ ನೋವು ಸಂಕಟಗಳಿಗೆ ದೇವರನ್ನು ಹೊಣೆಯಾಗಿಸುತ್ತಾನೆ. ಇಲ್ಲಿ ತೇರೆನ್ನುವುದು ಯುವ ದ್ಯಾವಪ್ಪನ ಆದರ್ಶಕ್ಕೆ ಪ್ರತೀಕವಾದಂತೆ ಕಂಡುಬರುತ್ತದೆ.

ಈ ಕಾದಂಬರಿಯಲ್ಲಿ ಮೊದಲ ತಲೆಮಾರಿನ ದ್ಯಾವಪ್ಪನಂಥವರ ಧಾರ್ಮಿಕ ನಂಬಿಕೆ, ಶ್ರದ್ಧೆಗಳಿಗೂ ಮತ್ತು ಆಧುನಿಕ ದ್ಯಾವಪ್ಪನ ನಂಬಿಕೆಗಳಿಗೂ ಸಾಕಷ್ಟು ವ್ಯತ್ಯಾಸವಿರುವುದನ್ನು ಕಾಣಬಹುದು. ಕಾದಂಬರಿಯು ಪರಂಪರೆ ಮತ್ತು ಆಧುನಿಕತೆಗಳ ನಡುವಿನ ಸ್ಥಿತ್ಯಂತರವನ್ನು ಹೇಳುತ್ತದೆ. ಭೂಮಿಯನ್ನು ಹೊಂದಿರುವ ಮೇಲ್ವರ್ಗದ ಜನರು ಭೂಮಿಯಿಲ್ಲದ ಕೆಳವರ್ಗದ ಜನರನ್ನು ಶೋಷಣೆಮಾಡುವುದು ಕಾದಂಬರಿಯಲ್ಲಿ ಕಂಡು ಬರುವ ಅಂಶವಾಗಿದೆ. ಹಣ ಮತ್ತು ಅಧಿಕಾರದ ಬಲದಿಂದ ಮೆರೆಯುವ ಮೇಲ್ವರ್ಗಗಳು ಕೆಳವರ್ಗಗಳ ಜನರ ಶೋಷಣೆಯನ್ನು ಮಾಡುತ್ತಾಬಂದಿವೆ. ರಕ್ತತಿಲಕದ ಸೇವೆಯ ಮೂಲಕ ಮೇಲ್ವರ್ಗದ ಜನರು ದಲಿತರನ್ನು ತಮ್ಮ ಸ್ವಾರ್ಥಕ್ಕಾಗಿ ಹಣ, ಭೂಮಿಯ ಆಮಿಷ ಒಡ್ಡಿ ಹೇಗೆ ಶೋಷಣೆಗೊಳಪಡಿಸುತ್ತಾರೆ ಎನ್ನುವುದು ಕಾದಂಬರಿ ಮೂಲಕ ತಿಳಿದುಕೊಳ್ಳಬಹುದು. ಕೆಳವರ್ಗದ ಜನರ ಬಡತನ, ಮೌಢ್ಯ, ದೇವರು ಧರ್ಮಗಳ ಮೇಲೆ ಅಪಾರವಾದ ನಂಬಿಕೆಯಲ್ಲಿ ಬದುಕುವ ದಲಿತರ ಚಿತ್ರಣ 'ತೇರು' ಕಾದಂಬರಿಯಲ್ಲಿ ಕಂಡುಬರುತ್ತದೆ.

ಪರಾಮರ್ಶನ ಗ್ರಂಥಗಳು:

1) ತೇರು : ರಾಘವೇಂದ್ರ ಪಾಟೀಲ

2) ದಲಿತ ಸಾಹಿತ್ಯ ಸಂಚಯ : (ಸಂ) ಡಾ.ಅರ್ಜುನ ಗೊಳಸಂಗಿ

3)ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು... : (ಸಂ) ಮೈ. ಶ್ರೀ. ನಟರಾಜ

ಡಾ. ಸೋಮಶೇಖರ ಇಮ್ರಾಪೂರ ಅವರ ಕಾವ್ಯವಲೋಕನ

ಭೀಮಪ್ಪ ಹೊನ್ನಿಕೊಳ್ಳ
ಸಂಶೋಧನ ವಿದ್ಯಾರ್ಥಿ, ಡಾ. ಅರ್. ಸಿ. ಹಿರೇಮಠ ಕನ್ನಡ ಅಧ್ಯಯನ್ ಪೀಠ, ಕ. ವಿ.ವಿ. ಧಾರವಾಡ–೫೮೦ ೦೦೩
Email : bhimsi550@gmail.com

'ಗಂಡ ಹೆಂಡಿರ ಜಗಳ ಗಂಧತೀಡಿದ್ಹಾಂಗ' ' ಖ್ಯಾತಿಯ ಡಾ. ಸೋಮಶೇಖರ ಇಮ್ರಾಪೂರ ಅವರು ಕನ್ನಡಾ ನಾಡು ಕಂಡಂತಹ ಪ್ರಮುಖ ಕವಿ, ವಿಮರ್ಶಕ, ಅಂಕಣಕಾರ, ಸಂಪಾದಕ, ಹಾಗೂ ಜಾನಪದ ವಿದ್ವಾಂಸರೆಂದು ಸುಪ್ರಸಿದ್ಧರಾದ ಇವರು, ಇವರೆಗೂ ಮೂವತ್ತೆರಿಟು ಕೃತಿಗಳನ್ನು ರಚಿಸಿದ್ದಾರೆ. 1940ರಲ್ಲಿ ಗದಗ ಜಿಲ್ಲೆಯ ಅಬ್ಬಿಗೇರಿ ಗ್ರಾಮದಲ್ಲಿ ಜನಿಸಿದ ಇವರು. ಗ್ರಾಮೀಣ ಬದುಕಿನ ಚಿತ್ರಣವನ್ನೇ ಕಾವ್ಯವಾಗಿಸಿ, 'ಬಸಿಲ ಹೂ', 'ಬೆಳದಿಂಗಳು', 'ಬೆಂಕಿ', 'ಬಿರುಗಾಳಿ', 'ಜಲತರಂಗ', 'ಹುತ್ತಗಳು', ಹಾಗೂ 'ಗಂಡ ಹೆಂಡಿರ ಜಗಳ ಗಂಧತೀಡಿದ್ಹಾಂಗ' ಎನ್ನುವ ಕವನ ಸಂಕಲನಗಳನ್ನು ಕನ್ನಡ ಕಾವ್ಯ ಲೋಕಕ್ಕೆ ನೀಡಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾವ್ಯಸೃಷ್ಟಿಗೆ ತೊಡಗಿದ ಡಾ. ಇಮ್ರಾಪೂರ ಅವರು ಪಾಶ್ಚಾತ್ಯ ಪ್ರೇರಣೆಯನ್ನು ಅನುಕರಿಸುತ್ತಿದ್ದ ಕನ್ನಡ ಕಾವ್ಯಕ್ಕೆ ಎಚ್ಚರಿಸಿಕೊಡಿದೆ, ತಮ್ಮ ಕಾವ್ಯದಲ್ಲಿ ದೇಶಿಯ ಸೋಗಡಾನ್ನು ಅಳವಡಿಸಿಕೊಳ್ಳುವವರ ಮೂಲಕ ಸಾಹಿತ್ಯ ಪರಂಪರೆಯಲ್ಲಿ ಭಿನ್ನವಾಗಿ ಗುರುತಿಸಲ್ಪಟ್ಟಿದ್ದಾರೆ. ಇವರ ಕಾವ್ಯದಲ್ಲಿ ಕಾಣುವ ವೈವಿಧ್ಯಮಯವಾದ ಚಿಂತನೆಗಳು, ಅನುಭವಗಳು, ಸಾಮಾನ್ಯರಲ್ಲಿ ಗ್ರಾಮ್ಯ ಜೀವನದ ಹೊಸ ಅರಿವನ್ನೇ ಮೂಡಿಸುವವರಿಂದ ಕಾವ್ಯಗಳು ಅತ್ಯಂತ ಗಮನಾರ್ಹ ಮತ್ತು ವೈಶಿಷ್ಟ್ಯವಾಗಿವೆ.

ಇಮ್ರಾಪೂರ ಅವರ ಕಾವ್ಯವನ್ನು ಓದುತ್ತಾ ಹೋದಂತೆ, ವೈಯಕ್ತಿಕ ಜೀವನಾನುಭವವೇನಿಸಿದರು ಸಾಹಿತ ಕಾವ್ಯದಲ್ಲಿ ಅಭಿವ್ಯಕ್ತಗೊಂಡಿರುವ, ಮನುಷ್ಯ ಸಂಬಂಧ, ಪ್ರೀತಿ–ಪ್ರೇಮ, ವಿಶ್ವಾಸ, ಸ್ನೇಹ, ಸೌಜನ್ಯದಂತಹ ಅಂಶಗಳು ಸರ್ವರ ಆಸ್ತಿ ಎನ್ನುವುದನ್ನು ಮರೆಯುವಂತಿಲ್ಲ. ಅವರ ಕಾವ್ಯವನ್ನು ಸಾಮಾಜಿಕ ಪ್ರಜ್ಞೆ, ಜೀವನ ಮೌಲ್ಯಗಳು, ಪ್ರೀತಿ–ಪ್ರೇಮ–ಪ್ರಣಯ, ಸ್ತ್ರೀ ಚಿಂತನೆ, ಹೀಗೆ ಬದುಕಿನ ಭಿನ್ನಸ್ತರಗಳ ಅನುಭವಗಳೊಂದಿಗೆ ನೋಡಬಹುದು.

"ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ" ಖ್ಯಾತಿಯ ಡಾ. ಸೋಮಶೇಖರ ಇಮ್ರಾಪೂರ ಅವರು ಕನ್ನಡ ನಾಡು ಕಂಡಂತಹ ಪ್ರಮುಖ ಕವಿ, ವಿಮರ್ಶಕ, ಅಂಕಣಕಾರ, ಸಂಪಾದಕ ಹಾಗೂ ಜಾನಪದ ವಿದ್ವಾಂಸರೆಂದು ಸುಪ್ರಸಿದ್ಧರಾದ ಇವರು ಜಾನಪದವನ್ನೆ ಜೀವನವನ್ನಾಗಿ ಮಾಡಿಕೊಂಡು, ಬೇಂದ್ರೆ ಹಾಗೂ ಕಂಬಾರರಂತೆ ಸಹಜ ಕವಿಯಾಗಿ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾವ್ಯ ಸೃಷ್ಟಿಗೆ ತೊಡಗಿದ ಇಮ್ರಾಪೂರವರು ಪಾಶ್ಚಾತ್ಯ ಪ್ರೇರಣೆಗೆ ಒಳಗಾಗಿದ್ದರೂ ಕೂಡಾ ಹೆಚ್ಚು ಅದಕ್ಕೆ ಒತ್ತುಕೊಡದೆ, ತಮ್ಮ ಕಾವ್ಯದಲ್ಲಿ ಜನಪದ ಭಾಷೆ, ಶೈಲಿ, ಚಿಂತನೆ ಒಂದುಗೂಡಿಸಿ ಕಾವ್ಯ ರಚಿಸಿದ್ದಾರೆ. ಬೇಂದ್ರ, ಕಂಬಾರರ ಕಾವ್ಯ ಸಿದ್ಧಿ ಇಮ್ರಾಪೂರರಿಗೆ ದಕ್ಕಿದೆ. ಇಮ್ರಾಪೂರವರು ಬೇಂದ್ರೆ, ಕಂಬಾರರಂತೆ ಕಾವ್ಯ ರಚಿಸಿ ತಮ್ಮ ಚಿಂತನೆಯ ಮೂಲಕ ಸಾಹಿತ್ಯ ಪಂಕ್ತಿಯಲ್ಲಿ ಭಿನ್ನವಾಗಿ ಗುರುತಿಸಲ್ಪಟ್ಟಿದ್ದಾರೆ.

ಇಮ್ರಾಪೂರವರು ಇದುವರೆಗೆ ಏಳು ಕವನ ಸಂಕಲನಗಳನ್ನು ರಚಿಸಿದ್ದಾರೆ. ಅವರು ಬಿ.ಎ. ಓದುತ್ತಿರುವಾಗಲೇ(1964) ಮೊದಲ ಕವನ ಸಂಕಲನ 'ಬಸಿಲ ಹೂ', ಪ್ರಕಟಿಸಿದ್ದಾರೆ. ಎಂ.ಎ ಪ್ರಥಮ ವರ್ಷದಲ್ಲಿರುವಾಗ(1966), 'ಬೆಳದಿಂಗಳು', ಆನಂತರ 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ'(1970), 'ಬೆಂಕಿ'(1971), 'ಬಿರುಗಾಳಿ'(1975), ಹೀಗೆ ಭರದಿಂದ ಪ್ರಕಟಗೊಂಡ ಅವರ ಕಾವ್ಯಾಭಿವ್ಯಕ್ತಿಯ ಸೆಲೆ ಇದ್ದಕ್ಕಿದಂತೆ ನಿಂತು ಹೋಗಿ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಮೇಲೆ 'ಹುತ್ತಗಳು', 'ಜಲತರಂಗ' ವನ್ನು 2000ರಲ್ಲಿ ಪ್ರಕಟಿಸಿದ್ದಾರೆ. ಈ ಎಲ್ಲ ಸಂಕಲನಗಳನ್ನು ಕುರಿತಂತೆ ಸಂಶೋಧನ ಲೇಖನಗಳೂ, ವಿಮರ್ಶೆ ಬಂದಿರುವದು ತುಂಬಾ ವಿರಳ ಈ ನಷ್ಟವನ್ನು ತುಂಬಿಕೊಡುವ ಪ್ರಯತ್ನವಾಗಿದೆ.

ಇವರ ಬಹುಪಾಲು ಕಾವ್ಯಗಳು ದುಃಖದ ಮೂಲದಿಂದಲೇ ಹುಟ್ಟಿಕೊಂಡು ಬದುಕಿನ ಭಿನ್ನಸ್ತರದ ಅನುಭವಗಳನ್ನು ನೀಡುವದಲ್ಲದೆ, ಗ್ರಾಮೀಣ ಜೀವನ ವ್ಯವಸ್ಥೆ ಮತ್ತು ಆಡುನುಡಿ ಭಾಷೆಯ ಹೊಸ ಅಲೆಯನ್ನೇ ಕಟ್ಟಿಕೊಡುತ್ತವೆ, ಎನ್ನುವುದಕ್ಕೆ ಅವರ ಕಾವ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಭಾಷೆ ಮತ್ತು ಭಾವನೆಗಳೆ ಸಾಕ್ಷಿಯಾಗಿವೆ. ಇವುಗಳನ್ನು ರಾಗ, ತಾಳ, ದಾಟಿ ಹಚ್ಚಿ ಹಾಡಲು ಕಷ್ಟವಾಗಬಹುದು. ಏಕೆಂದರೆ ಅವರ ಕಾವ್ಯದಲ್ಲಿ ಹೆಚ್ಚು ಬಳಕೆಗೊಂಡಿರುವ ಆಡುನುಡಿಯ ಭಾಷಾ ಪದಗಳೇ ಕಾರಣವಾಗಿವೆ. ಈ ಮಾತಿಗೆ ಸಾಕ್ಷಿ ಎಂಬಂತೆ ಚನ್ನವೀರ ಕಣವಿಯವರು ಕೂಡಾ 'ಹಳ್ಳಿಯ ಹಾಡಿನ ಗತಿ, ಗತ್ತು, ಗಾಡಿ–ಮೋಡಿ, ಬೆಡಗು, ಬಿನ್ನಾನಗಳನ್ನು ಸಜೀವವಾಗಿ ಹಿಡಿದು ದೇಶಿಯ ಸೋಗಡಿನಿಂದ ಹೊಮ್ಮಿ ಹೊಡಕರಿಸುತ್ತವೆ' ಈ ಹಾಡುಗಳು. ಅವರ ಈ ಮಾತುಗಳು ಕಾವ್ಯಕ್ಕೆ ಸೂಕ್ತ ಭಾಷೆಯನ್ನು ಬರೆದಂತಿದೆ. ಡಾ. ಕಣವಿಯರು ಹೇಳಿರುವ ಸಜೀವವಾದ ಭಾಷೆ ಎನ್ನುವದು ಇಮ್ರಾಪೂರವರು ಕಾವ್ಯದಲ್ಲಿ ಬಳಸಿರುವ ಗ್ರಾಮೀಣರ ಜೀವನ ವ್ಯವಸ್ಥೆ, ಭಾಷಾ, ಶೈಲಿಯನ್ನು ನೇರವಾಗಿ ತೆಗೆದುಕೊಂಡು ಅದಕ್ಕೊಂದು ಪ್ರತಿಮೆ, ರೂಪಕವನ್ನು ಜೋಡಿಸಿ ಕಾವ್ಯವಾಗಿಸಿರುವುದನ್ನು ಎತ್ತಿ ಹೇಳುತ್ತದೆ.

ಇವರ ಕಾವ್ಯದಲ್ಲಿ ಕಾಣುವ ಕಷ್ಟ–ನಷ್ಟ, ಸಿಹಿ–ಕಹಿಗಳೂ ಅವರ ವೈಯಕ್ತಿಕ ಜೀವನವೇನಿಸಿದರೂ ಕೂಡಾ ಅಲ್ಲಿ ಅಡಗಿರುವ ಮನುಷ್ಯ ಸಂಬಂಧ, ಪ್ರೀತಿ–ಪ್ರೇಮ, ಸ್ನೇಹ, ಸೌಜನ್ಯದಂತಹ ನೈತಿಕ, ಸಾಂಸ್ಕೃತಿಕ ಅಂಶಗಳೂ ಸರ್ವರ ಆಸ್ತಿ ಎನ್ನುವುದನ್ನು ಮರೆಯುವಂತಿಲ್ಲಾ. 'ಬಸಿಲ ಹೂ', 'ಬೆಳದಿಂಗಳು', 'ಬೆಂಕಿ', 'ಗಂಡ–ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಮತ್ತು 'ಬಿರುಗಾಳಿ', 'ಜಲತರಂಗ' ಕಾವ್ಯಗಳು ಹಂತ ಹಂತವಾಗಿ ಇಮ್ರಾಪೂರವರ ಸಾಹಿತ್ಯಿಕ ಉನ್ನತಿಯೊಂದಿಗೆ ಅವರ ಕಾವ್ಯಗಳ ಬೆಳವಣಿಗೆಯನ್ನು ಸೂಚಿಸುತ್ತವೆ. ಅವರು ಜೀವನದಲ್ಲಿ

ಕಂಡುಂಡ ಸುಖ, ಸಂತೋಷ, ಕಷ್ಟ–ನಷ್ಟ, ಆಸೆ–ನಿರಾಸೆ, ಎಲ್ಲಾ ಭಾವನೆಗಳನ್ನು ಕೂಡಿಸಿ ಕಾವ್ಯವಾಗಿ ಅಭಿವ್ಯಕ್ತಿಪಡಿಸಿದ್ದು ಅವರೊಬ್ಬ ಸಿದ್ಧ ಹಸ್ತ ಕವಿ ಎನ್ನುವುದನ್ನು ಎತ್ತಿ ತೋರಿಸುತ್ತವೆ.

'ಬಿಸಿಲ ಹೂ' ಇಮ್ರಾಪೂರವರ ಪ್ರಥಮ ಕವನ ಸಂಕಲನ. ಈ ಸಂಕಲನದ ಪದ್ಯಗಳು ಬದಕಿನ ದಾರುಣ ಅನುಭವವನ್ನು ಅಭಿವ್ಯಕ್ತಗೊಳಿಸುತ್ತವೆ. ಇದನ್ನೆ ಕವಿ 'ಬಿಸಿಲ ಹೂಗಂಪನ್ನೆ ಸವಿದ ನನ್ನೀ ಬಾಳು' ಎನ್ನುವ ಸಾಲುಗಳ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ಇಲ್ಲಿ 'ಬಿಸಿಲ ಹೂ' ಎನ್ನುವದು ಶ್ಲೇಷಾರ್ಥವನ್ನು ಒಳಗೊಂಡಿದೆ. ಬಿಸಲು ಎನ್ನುವುದು ಅವರ ಕಷ್ಟಗಳನ್ನು ಪ್ರತಿನಿಧಿಸಿದರೆ, ಹೂ ಸಂತೋಷವನ್ನು ಪ್ರತಿನಿಧಿಸುತ್ತದೆ. ಇಮ್ರಾಪೂರವರು ಅನೇಕ ಕಷ್ಟ–ನಷ್ಟ, ನೋವನ್ನುಂಡು ಹೂವಾಗಿ ಬೆಳೆದವರು. ದ.ರಾ.ಬೇಂದ್ರೆಯರು ಕವಿ ಜೀವ ಬೀಸಿಲೂ ಬಲ್ಲುದು ಹೂವು ಬಲ್ಲದು, ಬಿಸಿಲಿನ ಹೂವ ಕಂಡದ್ದು ಅದರ ಕಮಾಯ' ಎನ್ನುವ ಮಾತು ಅವರ ಜೀವನ ಆದರ್ಶವನ್ನು ಎತ್ತಿ ಹೇಳುತ್ತದೆ.

ಇಮ್ರಾಪೂರವರು ನೋವುಗಳ ಮೂಲಕ ಸಂತೋಷ, ಕಷ್ಟದ ಮೂಲಕ ಸುಖವನ್ನು ಕಂಡವರು. ಸುಖ–ಕಷ್ಟಗಳೆರಡನ್ನೂ ಅನುಭವಿಸಿ ಬೆಳೆದವರು, ವ್ಯಕ್ತಿ ಬೆಳೆಯಬೇಕು ಅದನ್ನೆ ಕವಿ 'ನರನರಕು ಮಧುಕಂಪನಿಕ್ಕಿನಿಂತಿಹ ಹೂವೆ' ಎನ್ನುವ ಮಾತು ಇದನ್ನೇ ಹೇಳುತ್ತದೆ. ಒಟ್ಟು ಈ 'ಬಿಸಿಲ ಹೂ' ಸಂಕಲನದ ಪದ್ಯಗಳು ಕವಿಯ ಜೀವನಾನುಭವ ತಿಳಿಸುವದರೊಂದಿಗೆ ವ್ಯಕ್ತಿ ಎಷ್ಟೆ ಕಷ್ಟ–ನಷ್ಟಗಳು ಬಂದರೂ ಎದೆಗುಂದದೆ ಆದರ್ಶಯುತ ಬದುಕನ್ನು ಕಟ್ಟಿಕೊಳ್ಳಬೇಕೆಂಬ ಸಂದೇಶವನ್ನು ನೀಡುತ್ತವೆ.

'ಬೆಳದಿಂಗಳು' ಕವನ ಸಂಕಲನ ಹೆಸರೆ ಸೂಚಿಸುವಂತೆ ಸುಖ–ಸಂತೋಷದ ಪ್ರತೀಕ' 'ಬಿಸಿಲ ಹೂ'ನಲ್ಲಿಯ ನೋವು–ನಷ್ಟಗಳು ಇಲ್ಲಿ ಬೆಳಕಾಗಿ ಪರಿಣಮಿಸಿವೆ. 'ಸೌಂದರ್ಯ' ಕಾವ್ಯದಲ್ಲಿಯ 'ಹಳೆ ಕಣಜ ಮುಚ್ಚಿ ಬಿಡು, 'ಹೊಸ–ಕಾಳ ಸಿಹಿ ನೋಡು', ಎಂದಿರುವ ಮಾತು ಇದನ್ನೇ ಸೂಚಿಸುತ್ತದೆ. ಹಳೆಯ ನೋವುಗಳನ್ನು ಮರೆತು ವರ್ತಮಾನ ಜೀವನದ ಬದುಕನ್ನು ಕಂಡು ಸಂತೋಷ ಪಟ್ಟಿದ್ದಾರೆ. 'ಬೆಳದಿಂಗಳು' ಸಂಕಲನದ ಪದ್ಯದುದ್ದಕ್ಕೂ ಕವಿ ತನ್ನ ನೋವುಗಳಿಗೆ ದುಃಖಕ್ಕೆ, ನಿರಾಶೆಗೆ, ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಇದಕ್ಕೆ ಪ್ರೀತಿ ಪದ್ಯದ ಸಾಲುಗಳನ್ನು ನೋಡಬಹುದು.

"ಈ ಪ್ರೀತಿ ಹರಿದು ಹರಿಪಲ್ಲೆ ಮಾಡಿ
ಗಾಳ್ಯಾಗ ತೂರಲೇನ
ಗಾಳಿಯ ಹಿಡಿದು ಗಡಿಗ್ಯಾಗ ತುಂಬಿ
ಕಲ್ಲಿಗೆ ಹೇರಲೇನ.
– – – – – – – – – –
– – – – – – – – – –
ಎಣ್ಣೆಯ ಉಗ್ಗಿ ಉರಿಯ್ಯಾಗ ಒಗದೆ
ಸುಡಲಿಲ್ಲ ಮಾಡಲೇನ".

ಇಲ್ಲಿ ಕವಿ ಪ್ರೀತಿಯ ನೋವನ್ನು ಭಾವತೀವ್ರತೆಯ ಮೂಲಕ ಅದಕ್ಕೊಂದು ಮೂರ್ತ ರೂಪ ಕೊಟ್ಟು ಅದರಿಂದ ಮುಕ್ತರಾಗಲೂ ಪ್ರಯತ್ನಿಸಿದ್ದಾರೆ. ಆದರೆ ಕೊನೆಗೆ ಸುಡಲಿಲ್ಲ ಮಾಡಲೇನ, ಎನ್ನುವ ಮಾತು ಪ್ರೀತಿಯ ಗಟ್ಟಿತನವನ್ನು ಹೇಳುವದರೊಂದಿಗೆ, ಪ್ರೀತಿಯು ಅಮೂರ್ತವಾದದ್ದು, ಬೆಲೆಕಟ್ಟಲಾಗದ ವಸ್ತು, ಇದನ್ನೊಂದು ಮೂರ್ತರೂಪದಲ್ಲಿ ಹಿಡಿದಿಡುವದಾಗಲಿ ಆ ಮೂಲಕ ಪಡೆದುಕೊಳ್ಳುವದಾಗಲೀ, ಕಳೆದುಕೊಳ್ಳವುದಾಗಲಿ ಸಾಧ್ಯವಿಲ್ಲ. ಪ್ರೀತಿ ಎಲ್ಲವನ್ನು ಇಲ್ಲಿ ಮೀರಿ ನಿಂತಿದೆ. ಈ ಬೆಳದಿಂಗಳು ಸಂಕಲನದ ಪದ್ಯದುದ್ದಕ್ಕೂ ಕವಿಯು ಬಳಸಿರುವ ಹರಿಪಲ್ಲೆ, ಗಡಗಿ, ಉರಿ, ಅಂತಹ ಭಾಷಾ ರೂಪಗಳನ್ನು ನೋಡಿದ್ದಾದರೆ, ಜನಪದರ ಆಡು–ನುಡಿಯ ಭಾಷೆ ಸಾಹಿತ್ಯಿಕ ಭಾಷೆಯಾಗಬೇಕೆಂಬ ಧ್ಯೇಯವನ್ನು 'ಬೆಳದಿಂಗಳು' ಸಂಕಲನದುದ್ದಕ್ಕೂ ವ್ಯಕ್ತಪಡಿಸಿದ್ದಾರೆ.

'ಬೆಂಕಿ' ಸಂಕಲನದ ಪದ್ಯಗಳು, ಕವಿಯ ಆಶೆ, ಆಕಾಂಕ್ಷೆ ಹಾಗೂ ಸುಖದ ಕಲ್ಪನೆಗಳೂ ಪಲ್ಲಟಗೊಂಡಾಗ ಅಂದರೆ ಸಮಾಜದಲ್ಲಿ ನೆಲೆಯೂರಬೇಕಾದ ಅಂಶಗಳು ನೆಲೆಯೂರದಿದ್ದಾಗ ಮನಸ್ಸು ನಿರಾಸೆಯನ್ನು ಹೊಂದಿ–ಕಾವ್ಯವಾಗಿ ಹೊರಹೊಮ್ಮಿದೆ ಅದನ್ನೆ ಕವಿ ಬೆಂಕಿ ಪದ್ಯದಲ್ಲಿ ಹೀಗೆ ಹೇಳಿದ್ದಾರೆ.

"ನಾ ಜೋತುಬಿದ್ದ ಟೊಂಗೆ ಮುರಿದು
ನಾ ನಂಬಿ ನಿಂತ ನೆಲ ಕುಸಿದು
ಹಸಿದ ಬಾಯಿಗೆ ಬಿದ್ದಿದೆ ಕಳ್ಳ ಹಾಲು"

ಇಂತಹ ಅನೇಕ ಕಾವ್ಯಗಳಾದ 'ವೇದಾಂತ' 'ಹುಟ್ಟಬಾರದಾಗಿತ್ತು ಗಾಂಧೀ' 'ಹಚ್ಚಿಬೀಡು ದೀಪ',ದಂತಹ ಕಾವ್ಯದಲ್ಲಿ ಸಾಮಾಜಿಕ ಅವ್ಯವಸ್ಥೆಯನ್ನೂ ತೀವ್ರಗೊಂಡ ಮನಸ್ಸಿನಿಂದ ಎತ್ತಿ ಹೇಳಿದ್ದಾರೆ. 'ಬೆಂಕಿ' ಪದ್ಯದ ಸಾಲು ಸೂಚಿಸುವ 'ಹಸಿದ ಬಾಯಿಗೆ ಬಿದ್ದದೆ ಕಳ್ಳ ಹಾಲು' ಎನ್ನುವ ಮಾತು ನೈತಿಕ ಮತ್ತು ಶ್ರಮಜೀವಿಗಳಿಗಾಗುವ ಅನ್ಯಾಯದ ಪ್ರತೀಕವಾಗಿ ಧ್ವನಿಸುತ್ತದೆ. ಕವಿಯು ಕಂಡಂತಹ ಅಂಶಗಳಿಗೆ ಇವತ್ತಿನ ವಾಸ್ತವ ಸಮಾಜದಲ್ಲಿಯೂ ಮನ್ನಣೆ ಸಿಗದಂತಾಗಿದೆ. ನ್ಯಾಯವನ್ನು ನಂಬಿ ಕುಳಿತ ಜನರ ಬಾಯಿಗೆ ಕಳ್ಳ ಹಾಲು ಬಿದ್ದಂತಾಗಿದೆ. ಅನ್ಯಾಯ, ಅನೈತಿಕತೆ ತಾಂಡವಾಡುತ್ತಿದೆ. ಆದರೆ ಇದರಿಂದ ಬದುಕು ಕಟ್ಟಿಕೊಂಡವರು ಎಂದು ತಮ್ಮ ಪೂರ್ಣ ಗುರಿಯನ್ನು ಮುಟ್ಟಲೂ ಸಾಧ್ಯವಿಲ್ಲ. ಅದನ್ನೆ ಕವಿ ಅವರ ಬಾಳು 'ಗಂಡನಿಲ್ಲದ ಪರದೇಶಿ ಬಾಳು' 'ಮುಂಡವಿಲ್ಲದ ರುಂಡ–ಮುಂಡೆಗಳು' ಎನ್ನುವುದು ಅಂತವರ ಬದುಕಿನ ಚಿತ್ರಣ ನೀಡುವುದರೊಂದಿಗೆ, ಸಾಮಾಜಿಕ ವ್ಯವಸ್ಥೆಯ ವಿರೋಧ ಧ್ವನಿಯಾಗಿ ನಿಂತಿದ್ದಾರೆ. ಬೆಂಕಿ ಸಂಕಲನದ ಬಹುಪಾಲು ಪದ್ಯಗಳು ಸಾಮಾಜಿಕ ಅವ್ಯವಸ್ಥೆಯ ವಿರೋಧ ಧ್ವನಿ ಎತ್ತುವದರೊಂದಿಗೆ ಬೆಂಕಿಯಾಗಿ ಅದನ್ನು ಸುಡುವ ಪ್ರಯತ್ನವನ್ನು ಮಾಡುತ್ತವೆ.

'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಖ್ಯಾತಿಯ ಇಮ್ರಾಪೂರವರು ಹೆಚ್ಚು ಜನಮನವನ್ನು ತಟ್ಟಿದ್ದು ಮತ್ತು ಕವಿಯಾಗಿ ಉನ್ನತ ಶಿಖರವನ್ನೇರಿದ್ದು ಈ ಕವನ ಸಂಕಲನದ ಮೂಲಕವಾಗಿದೆ. ಇಲ್ಲಿ ಗ್ರಾಮೀಣ ದಂಪತಿಗಳ ಸರಸ–ವಿರಸ, ಸಫಲ–ವಿಫಲದಂತಹ ಪ್ರೇಮದ ಸಂದರ್ಭಗಳು ಜನಪರರ ಆಡುನುಡಿಯಲ್ಲಿ ವ್ಯಕ್ತಗೊಂಡಿರುವದು ಕವನದ ವೈಶಿಷ್ಟವಾಗಿದೆ. ಈ ಸಂಗ್ರಹವನ್ನು ಕುರಿತು ಡಾ. ಎಂ.ಎಂ.ಕಲಬುರ್ಗಿಯವರು 'ಮೈಸೂರು ಮಲ್ಲಿಗೆ ಅರಳಿ ಮೂವತ್ತು ವರ್ಷಗಳು ಗತಿಸಿದವು.

ಅದನ್ನು ನೆನಪಿಸುವ ಪ್ರೇಮಕವನ ಸಂಕಲನ ತುಂಗಭದ್ರೆಯ ಉತ್ತರ-ದಕ್ಷಿಣಗಳಲ್ಲಿ ಈ ವರೆಗೆ ಮೂಡಿಬರಲಿಲ್ಲ. ಆ ಕೊರತೆಯನ್ನು ತುಂಬಿಕೊಡುತ್ತವೆ. ಈ ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಎನ್ನುವ ಈ ಮಾತು ಇಮ್ರಾಪೂರರ ಸಾಹಿತ್ಯಿಕ ಉನ್ನತಿಯನ್ನು ಎತ್ತಿ ಹೇಳುತ್ತದೆ.

ಈ ಸಂಕಲನದ ಕಾವ್ಯಗಳಲ್ಲಿ ಎರಡು ಮುಖ್ಯವಾದ ಅಂಶಗಳು ಎದ್ದುಕಾಣುತ್ತವೆ. ಒಂದು ಸಂಭಾಷಣೆ ಇನ್ನೊಂದು ಪ್ರೇಮದ ವಿವಿಧ ಮುಖದ ನೇರ ಅಭಿವ್ಯಕ್ತಿ. ಇದಕ್ಕೆ ಗಂಡಹೆಂಡಿರ ಜಗಳ ಗಂಧ ತೀಡಿದ್ಹಾಂಗ ಮತ್ತು ಬೇವು ಬೆಲ್ಲ ಪದ್ಯದ ಸಾಲುಗಳನ್ನು ಇಲ್ಲಿ ಗಮನಿಸಬಹುದು. ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ ಕವಿತೆಯಲ್ಲಿ ಗಂಡನು ಬೆಳಗಿನ ದೈನಂದಿನ ಕೆಲಸಕ್ಕೆ ಅಣಿಯಾಗಲು ಹೆಂಡತಿಯನ್ನು ಎಚ್ಚಿಸುವ ಸಂದರ್ಭದಲ್ಲಿ ಗಂಡ ಆಡಿದ ಮಾತುಗಳು

"ಏಳ ಹೊತ್ತು ಹೂಡ ಮರಳ ಬಂತು
ಕಸ ಹೊತ್ತು ಹಾಕ ಹೊರಗ
ದೊಡ್ಡೆಮ್ಮಿ ಎಲ್ಲ ಹೋಗೈತಿ ಹ್ಯಾಂಗ
ಕರಕಟ್ಟು ಹಿತ್ತಲೊಳಗೆ"

ಹೆಂಡತಿ ಪ್ರತಿಯಾಗಿ ಗಂಡನೊಂದಿಗೆ ವಾಗ್ವಾದಕ್ಕಿಳಯುತ್ತಾಳೆ.

"ಕಟ್ಯಾರ ಕಟ್ಟು ಬಿಟ್ಟಾರ ಬಿಟಗೊ
ಒಟ್ಟೈತಿ ಕೆಲಸ ನನಗ
ಕಟ್ಟಾಕ ಮತ್ತು ಬೀಸಾಕ ಇದಕ
ಕೊಟ್ಟಿಲ ನನ್ನ ನಿನಗ"

ಗ್ರಾಮೀಣ ಕೃಷಿ ಕುಟುಂಬ ಮನೆತನದ ದಂಪತಿಗಳು ಈಗಲೂ ಇಂತಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ನಿಜವಾಗಿಯೂ ಈ ಪದ್ಯದ ಸಾಲುಗಳು ಇಂದಿನ ಗ್ರಾಮೀಣ ದಂಪತಿಗಳ ಜೀವನವನ್ನೇ ನೇರವಾಗಿ ಚಿತ್ರಿಸುವಂತಿರುವದು ಮಹತ್ವದ್ದೇನಿಸುತ್ತದೆ. ಇಷ್ಟೆಲ್ಲ ಸಮಸ್ಯೆಗಳ ಸರಸ-ವಿರಸಗಳ ಮಧ್ಯದಲ್ಲಿಯೂ ಅವರು ಪ್ರೀತಿಯಿಂದ ಒಪ್ಪಂದದ ಜೀವನವನ್ನು ನಡೆಸುತ್ತಾರಲ್ಲದೆ ಮನಸ್ಸಿಗೆ ನೋವಾದಾಗ ಒಬ್ಬರಿಗೊಬ್ಬರು ಸಮಾಧಾನ ಪಡಿಸಿಕೊಳ್ಳುತ್ತಾರೆ.

"ಅಳಬ್ಯಾಡ ಮಳ್ಳ ಬಾಬಾರ ಇಲ್ಲಿ
ಅಳತಾರ ಏನ ಹೀಂಗ
ಗಂಡ ಹೆಂಡ್ರ ಜಗಳಂದ್ರ ನೋಡ ಏ
ಗಂಧ ತೀಡಿದ್ಹಾಂಗ"

ಗಂಧ ಎಷ್ಟು ತೀಡಿದರೂ ಸುವಾಸನೆಯನ್ನು ಕೊಡುತ್ತದೆ ಹೊರತು ದುರ್ವಾಸನೆಯನ್ನಲ್ಲಾ. ಹಾಗೆ ಗ್ರಾಮೀಣ ದಂಪತಿಗಳ ಸರಸ-ವಿರಸದ ಜೀವನ ಗಂಧ ಇದ್ದ ಹಾಗೆ ಅವರು ಕಷ್ಟ, ನೋವಿನಲ್ಲೂ ಪ್ರೀತಿ, ವಾತ್ಸಲ್ಯ, ಕರುಣೆಯನ್ನು ತೋರುತ್ತಾರೆ. ಇಂತಹ ದಾಂಪತ್ಯ ಜೀವನ ಓದುಗರದಾಗಬೇಕೆಂಬ ಸಂದೇಶ ನೀಡಿದ್ದಾರಲ್ಲದೆ, ಗಂಡ-ಹೆಂಡರೂ ಎಷ್ಟೆ ಜಗಳವಾಡಿದರೂ ತಮ್ಮ ಪರಿದಿಯಲ್ಲೇ ಬದುಕಬೇಕು. ಅದೇ ಪ್ರೀತಿ, ಅದೇ ಗಂಧ. ಮೌಲ್ಯಯುತ ಬದುಕು ಎನ್ನುವ ಮಾತನ್ನು 'ಸಂಸಾರ ಸಾರ ಸುರಿಯೋಣ ಬಾರ' 'ಹೊನ್ನ ಕನಸು' ಮುತ್ತು ಕೊಡತಾಳ' ಎನ್ನುವಂತಹ ಅನೇಕ ಕಾವ್ಯಗಳೊಂದಿಗೆ ವ್ಯಕ್ತಪಡಿಸಿದ್ದಾರೆ.

'ಬಿರುಗಾಳ' ಕವನ ಸಂಕಲನ ನವ್ಯ ಕಾಲಘಟ್ಟದಲ್ಲಿ ಪ್ರಕಟಗೊಂಡಿದ್ದು, ಅಂದಿನ ಸಾಮಾಜಿಕ ಮತ್ತು ಸಾಹಿತ್ಯಿಕ ನೈಜಕತೆಯನ್ನು ಕಟ್ಟಿಕೊಡುತ್ತವೆ. ಇಮ್ರಾಪೂರವರು ಎಷ್ಟೇ ನವ್ಯದ ಪ್ರಭಾವಕ್ಕೆ ಒಳಗಾದರೂ ಕೂಡಾ ಈ ಸಂಕಲನದಲ್ಲಿ ವ್ಯಕ್ತಗೊಂಡ ಗ್ವಾಡಿ, ದುಮ್ಮಜಲಿನ ಮನೆ, 'ಕಿಸೆ'ಅಂತಹ ಜಾನಪದೀಯ ಶಾಬ್ದಿಕ ರಚನೆಯನ್ನು ಬಿಟ್ಟುಕೊಡದಿರುವದು ಇಲ್ಲಿ ಎದ್ದು ಕಾಣುತ್ತದೆ. ಇದು ಇಮ್ರಾಪೂರರು ಹೊಂದಿರುವ ಅಚಲ ಭಾಷಾ ಸಂಸ್ಕಾರಕ್ಕೆ ಸಾಕ್ಷಿಯಾಗಿದೆ.

'ಬಿರುಗಾಳ' ಸಂಕಲನದ ಪದ್ಯವಾದ 'ಕಪ್ಪು ರಾವಣ' 'ಬೆಳಗಾಗಿದೆ' ಎನ್ನುವ ಪದ್ಯದಲ್ಲಿ ನವ್ಯ ಕಾವ್ಯವನ್ನು ಕಟುವಾಗಿ ಟೀಕಿಸಿದ್ದಾರೆ. ಹಾಗೆಯೇ 'ದುಮ್ಮಜಲಿನ ಮನೆ', 'ಗತಿ-ಸ್ಥಿತಿ', 'ಸಮಾಂತರ ರೇಖೆಗಳು', ಎನ್ನುವಂತಹ ಪದ್ಯಗಳು ಗ್ರಾಮೀಣರ ಅರೆ ಶ್ರೀಮಂತಿಕೆಯನ್ನು ಸೂಚ್ಯವಾಗಿ ತಿಳಿಸುವದರೊಂದಿಗೆ, ಮತ್ತೆ ಮನುಷ್ಯನ ಹೊಸ ಬೇಡಿಕೆಗಳು, ಅವಶ್ಯಕತೆಗಳು ಹೆಚ್ಚಾದಂತೆ ಇವು ಶ್ರೀಮಂತಿಕೆಯಲ್ಲೂ ಹೇಗೆ ಬಡತನವನ್ನು ತಂದೊಡ್ಡುತ್ತವೆ ಎನ್ನುವದನ್ನು ಇಲ್ಲಿಯ ಕಾವ್ಯಗಳು ವ್ಯಕ್ತಪಡಿಸುತ್ತವೆ. ಅಲ್ಲದೆ ಬದಲಾದ ಯುಗಕ್ಕೆ ತಕ್ಕಂತೆ ಹೊಂದಿಕೊಳ್ಳುವಂತಹ ಅಂಶಗಳನ್ನು ತಿಳಿಸುತ್ತವೆ.

ಒಟ್ಟಾರೆ ಇಮ್ರಾಪೂರವರ ಕಾವ್ಯಗಳಲ್ಲಿ ಬಳಕೆಗೊಂಡ ಭಾವ ತೀವ್ರತೆ, ರೂಪಕ ನಿರ್ಮಾಣ, ಚಿತ್ರಕ ಶಕ್ತಿ, ಜಾನಪದ ಸೊಗಡು ದೇಶಿ ಅನುಭವ, ಶ್ರೀಮಂತಿಕೆ, ಅಪ್ರತಿಮಾ ಊಹಾ ನೈಪುಣ್ಯತೆ ಹಾಗೂ ಮುಟ್ಟಿದರೆ ಸುಡುವ ತೀವ್ರತೆ ಕಾವ್ಯದ ಮುಖ್ಯ ಲಕ್ಷಣಗಳಾಗಿ ಎದ್ದು ಕಾಣುತ್ತವೆ. ಅಲ್ಲದೆ ಭಾಷಾ ಬಳಕೆಯಲ್ಲಿ ಬೇಂದ್ರೆಯ ನಂತರ ಉತ್ತರ ಕರ್ನಾಟಕ ಕಂಡ ಒಬ್ಬ ಶ್ರೇಷ್ಠ ಕವಿ ಎನ್ನುವದನ್ನು ಮರೆಯುವಂತಿಲ್ಲಾ. ಆದರೆ ಇವರ ಕಾವ್ಯ ಎಲೆಮರೆಯ ಕಾಯಿಯಂತೆ ಸಾಹಿತ್ಯ ವಿಮರ್ಶೆಯಿಂದ ಕಡೆಗಣಿಸಲ್ಪಟ್ಟಿದೆ. ಇಮ್ರಾಪೂರವರ ಕಾವ್ಯವನ್ನು ಸಾಹಿತ್ಯ ವಿಮರ್ಶೆ, ಕಾವ್ಯವಿಮರ್ಶೆ ಮಾಡುವ ಅವಶ್ಯಕತೆಯಿದೆ.

ಪರಾಮರ್ಶನ ಗ್ರಂಥಗಳು

1.ಬಿಸಿಲ ಹೂ-ಡಾ. ಸೋಮಶೇಖರ ಇಮ್ರಾಪೂರ ಚೇತನಾ ಪ್ರಕಾಶನ ಧಾರವಾಡ-1964

2.ಬೆಳದಿಂಗಳು-ಡಾ. ಸೋಮಶೇಖರ ಇಮ್ರಾಪೂರ ಚೇತನಾ ಪ್ರಕಾಶನ ಧಾರವಾಡ-1966

3.ಬೆಂಕಿ- ಡಾ. ಸೋಮಶೇಖರ ಇಮ್ರಾಪೂರ ಚೇತನಾ ಪ್ರಕಾಶನ ಧಾರವಾಡ-1970

4.ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ-ಡಾ. ಸೋಮಶೇಖರ ಇಮ್ರಾಪೂರ-1971

5.ಬೇವು-ಬೇಲ್ಲ-ಅಭಿನಂದನಾ ಗ್ರಂಥ ಸಂಭಾವನೆ ಸಿವರಾಂಪೇಟೆ ಮೈಸೂರ-2001

ಕರ್ವಾಲೊ ಕಾದಂಬರಿ–ಸ್ಥಳೀಯ ಜ್ಞಾನಗಳ ಶೋಧ

ಮುತ್ತುಶೆಟ್ಟಿ
ಸಂಶೋಧನಾರ್ಥಿ, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ
e-mail: muthusetty83@gmail.com.

ಕೆ. ಪಿ ಪೂರ್ಣಚಂದ್ರ ತೇಜಸ್ವಿ ಅವರು ಆಧುನಿಕ ಕನ್ನಡ ಸಾಹಿತ್ಯದ ಅಸಾಧಾರಣ ಲೇಖಕರಾಗಿದ್ದಾರೆ, ನವೋದಯ, ನವ್ಯ ನವೋತ್ತರ ಈ ಮೂರು ಕಾಲ ಘಟ್ಟಗಳಲ್ಲೂ ಕೃತಿರಚಿಸುತ್ತ ಖಂಡಿರುವ ತೇಜಸ್ವಿಯವರು ಯಾವುದೇ ಪರಿಛಪ ಚೌಕಟ್ಟಿಯನ್ನು ಅಂಟಿಸಿಕೊಳ್ಳದೆ ಖರವಾಗಿಯೆಯಲ್ಲಿ ತಮ್ಮದೇ ಆದ ಹೊಸತನವನ್ನು ಕಾಯ್ದುಕೊಂಡರು. ತಮ್ಮ ಎಲ್ಲಾ ಕೃತಿಗಳಲ್ಲಿ ಮಲೆನಾಡಿನ ಪರಿಸರದ ಸೂಕ್ಷ್ಮತೆ, ವೈಚಿತ್ರ್ಯಕ್ಕೆ ಕಾರಣವಾದ ಪರಿಸರಜ್ಞಾನವನ್ನು ಜನಸಾಮಾನ್ಯರ ಪಾತ್ರಗಳ ಮೂಲಕ ನಿರೂಪಿಸಿದ್ದಾರೆ. ಆ ಮೂಲಕ ಸ್ಥಳೀಯರ ಪರಿಸರ ಜ್ಞಾನಗಳನ್ನು ಶೋಧಿಸುವು ರೊಂದಿಗೆ ಆಧುನಿಅಕತೆಯು ನಿಸರ್ಗದ ಮೇಲೆ ಖಂಡಿತಾದ ಪ್ರಭಾವವನ್ನು ನಿರೂಪಿಸುತ್ತಾರೆ. ಪ್ರಸ್ತುತ ಪ್ರಬಂಧದಲ್ಲಿ ತೇಜಸ್ವಿಯವರ ಪ್ರಸಿದ್ಧ 'ಕರ್ವಾಲೋ' ಕಾದಂಖರಿಯಲ್ಲಿ ಸ್ಥಳೀಯ ಜನ ಸಾಮಾನ್ಯರಾದ ಮಂಡಪ್ಪ, ರಾಮಯ್ಯ, ಪ್ರಭಾಕರ, ಲಕ್ಷ್ಮಣ, ಪ್ಯಾರ, ಯಂಕ್ಷ, ಕರಿಯಪ್ಪನ ಪಾತ್ರಗಳ ಮುಖಾಂತರ ಸ್ಥಳೀಯ ಜ್ಞಾನಪರಂಪ್ರೆಯನ್ನು ಶೋಧಿಸಿ ಆಧುನೀಕತೆಯೊಂದಿಗೆ ಯಾವ ರೀತಿ ಮುಖಾಮುಖಿಯಾಗಿಸಿದ್ದಾರೆ ಎಂಖುದನ್ನು ನಂಖಿಕೊಂಡಿದರೂ ಕಾದಂಖರಿಯ ತಾತ್ಪಿಕ ನೆಲೆಗಟ್ಟು ಅದಕ್ಕಿಂತ ಖನ್ನವಾಗಿದೆ. ನಿರೂಪಕರು ಚೇನ್ನನ್ನು ಕೊಳ್ಳಲು ಅರಣ್ಯಕ್ಕೆ ತೆರಳೀದಾಗ ಮಂಡಪ್ಪನು ಪರಿಸರವಿಜ್ಞಾನಿಯಂತೆ ಚೇನು ತುಪ್ಪವ ಉತ್ಪಾದನೆ ಅತಿಯಾಗಲು ಈ ವರ್ಷ ಮಲೆನಾಡಿನಲ್ಲಿ 'ಗುರುಗಿ' ಎಂಖ ಒಂದು ಜಾತಿಯ ಪಟ್ಟವಾಗಿರುವ ಹುಳು ಹೂವಾಗಿಯೆಯಂತೆ ಎಂಟು ವರ್ಷಗಳಿಗೆ ಒಮ್ಮೆ ಹೂವಾಗುವ ಈ ಪುಷ್ಪ ಹೂ ಖಿಟ್ಟ ವರ್ಷ ಮಲೆನಾಡಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಚೇನು ಉತ್ಪಾದನೆಯಾಗುತ್ತದೆ ಎಂದು ಹೇಳುತ್ತಾನೆ. ಕರ್ವಾಲೊ ಪ್ರಕಾರ ಮಂಡಪ್ಪ ಅಪ್ರಕಿಮ ವಿಜ್ಞಾನಿ ಆದರೆ ಅವನಲ್ಲಿ ಅಕಾಡಮಿಕ್ ಶಿಕ್ಷಿಲ್ಲದಿದ್ದರೂ ಸ್ಥಳೀಯಜ್ಞಾನದ ನಿಗೂಢತೆಗಳು, ಸೂಕ್ಷ್ಮತೆಗಳನ್ನು ಕರಗತ ಮಾಡಿಕೊಂಡಿದ್ದಾನೆ. ಆದರೆ ಮಂಡಪ್ಪನ ಪರಿಸರಜ್ಞಾನದ ಖಗ್ಗೆ ರಾಮನ್ನ್ಯ ಅಪಾಕ್ಷ್ಯ ಮಾಡುತ್ತಾನೆ. ಹೀಗೆ ಕಾದಂಖರಿಯು ಹೂರುವ ಓಳಿಯನ್ನು ಕಂಡುಹಿಡಿಯುವ ಕರ್ವಾಲೋರ ಸಾಹಸದ ಕಥೆ–ೈಯಿಪನೆ ಇನ್ನಿತರ ಸ್ಥಳೀಯ ಪಾತ್ರಗಳ ಮುಖಾಂತರ ಪ್ರಕೃತಿಯಲ್ಲಿನ ಸೂಕ್ಷ್ಮತೆ ವೈಚಿತ್ರ್ಯವನ್ನು ಗ್ರಹಿಸಿ ರಾಹ್ಯಮಯವಾದ ವಿಚಾರಗಳನ್ನು ಶೋಧಿಸುವ ಖಗೆಯಲ್ಲಿ ಕರ್ವಾಲೊ ಕಾದಂಖರಿಯು ಯಶಸ್ವಿಯಾಗಿರುವುದನ್ನು ನೋಡಖಹುದಾಗಿದೆ. ಆ ಮೂಲಕ ತೇಜಸ್ವಿಯವರು ಆಧುನಿಕತೆಯ ಜ್ಞಾನಗಳಿಗೆ ಎದುರಾಗಿ ದೇಶೀಯ ಪಾರಂಪರಿಕ ಜ್ಞಾನಗಳನ್ನು ನಿಲ್ಲಿಸುವುದರ ಮೂಲಕ ನಿರ್ಲಕ್ಷ್ಯತೆಗೆ ಒಳಗಾಗಿರುವ ಸ್ಥಳೀಯ ಜ್ಞಾನಗಳ ಮಹತ್ವವನ್ನು ನಿರೂಪಿಸಿದ್ದಾರೆ.

ವಿಶ್ವದ ಪ್ರತಿಯೊಬ್ಬ ಕೃತಿಕಾರನು ತನ್ನ ಸುತ್ತಮುತ್ತಲಿನ ಪರಿಸರದಿಂದ ಪ್ರಭಾವಿತನಾಗುತ್ತಾನೆ. ತಾನು ಹುಟ್ಟಿ ಬೆಳೆದ ಪರಿಸರದ ಆಗು–ಹೋಗುಗಳನ್ನು ಅನಿಸಿಕೆಗಳನ್ನು ಲೇಖನೀಯ ಮುಖಾಂತರ ಕಥೆ, ಕವನ, ಕಾದಂಬರಿ, ನಾಟಕ ಮೊದಲಾದ ಸಾಹಿತ್ಯ ಪ್ರಕಾರಗಳ ಮೂಲಕ ತನ್ನದೇಯಾದ ಭಾಷೆಯಲ್ಲಿ ಅಭವ್ಯಕ್ತಿಸುತ್ತಾನೆ. ಅದೇ ರೀತಿಯಲ್ಲಿ ಮಲೆನಾಡಿನ ಪರಿಸರದಲ್ಲಿ ಹುಟ್ಟಿ ಬೆಳೆದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಎಲ್ಲಾ ಕೃತಿಗಳಲ್ಲೂ ತಮ್ಮ ಸುತ್ತಮುತ್ತಲಿನ ಪರಿಸರದ ಸೂಕ್ಷ್ಮತೆಗಳನ್ನು ಗ್ರಹಿಸಿ, ವೈಚಿತ್ರ್ಯಕ್ಕೆ ಕಾರಣವಾದ ಪಾರಂಪರಿಕ ಪರಿಸರ ಜ್ಞಾನವನ್ನು ಜನಸಾಮಾನ್ಯರ ಸ್ಥಳೀಯ ಪಾತ್ರಗಳ ಮೂಲಕ ನಿರೂಪಿಸಿದ್ದಾರೆ. ಅದೇ ರೀತಿಯಲ್ಲಿ ತೇಜಸ್ವಿಯವರ ಪ್ರಸಿದ್ಧ 'ಕರ್ವಾಲೊ' ಕಾದಂಬರಿಯಲ್ಲಿ ಉನ್ನತ ಶಿಕ್ಷಣ ಪಡೆದು ಸಂಶೋಧನೆ ಕೈಗೊಂಡ ಕೀಟ ಶಾಸ್ತ್ರಜ್ಞ ಮತ್ತು ಸಂಶೋಧಕರಾದ ಕರ್ವಾಲೊರ ಪರಿಸರ ಜ್ಞಾನವನ್ನು ಮೀರಿಸುವ ಜನಸಾಮಾನ್ಯ ಸ್ಥಳೀಯ ಮಂದಣ್ಣ, ಎಂಗ್ಟ, ಕರಿಯಣ್ಣ, ಪ್ಯಾರ, ಕಿವಿ, ಪ್ರಭಾಕರ, ಲಕ್ಷ್ಮಣ ಪಾತ್ರಗಳ ಮೂಲಕ ಸುತ್ತಲಿನ ಸ್ಥಳೀಯ ಜ್ಞಾನ ಪರಂಪರೆಯನ್ನು ಶೋಧಿಸಿದ್ದಾರೆ. ಈ ಸ್ಥಳೀಯ ಜ್ಞಾನಗಳ ಶೋಧನೆಯೊಂದಿಗೆ ವರ್ತಮಾನದ ಸಂದರ್ಭಕ್ಕೆ ಅನುಗುಣವಾಗಿ ಚರ್ಚಿಸಿದ್ದಾರೆ. ಪ್ರಸ್ತುತ ಪ್ರಬಂಧದಲ್ಲಿ ತೇಜಸ್ವಿಯವರ 'ಕರ್ವಾಲೊ' ಕಾದಂಬರಿಯಲ್ಲಿ ಆಧುನಿಕತೆಯ ಜ್ಞಾನಗಳಿಗೆ ಎದುರಾಗಿ ದೇಶೀಯ ಜ್ಞಾನಗಳನ್ನು ಹೇಗೆ ತಂದಿದ್ದಾರೆ ಎಂಬುದನ್ನು ವಿಶ್ಲೇಷಿಸುವುದರೊಂದಿಗೆ ಸ್ಥಳೀಯ ಜ್ಞಾನಗಳ ಮಹತ್ವವನ್ನು ನಿರೂಪಿಸುವುದು ಪ್ರಮುಖ ಉದ್ದೇಶವಾಗಿದೆ.

ಸಾಹಿತ್ಯ ಕೃತಿಗಳು ಮತ್ತು ಸ್ಥಳೀಯತೆ :– ಪ್ರತಿಯೊಬ್ಬ ಕೃತಿಕಾರನ ಸಾಹಿತ್ಯ ಕೃತಿಗಳು ತಾನು ಹುಟ್ಟಿ ಬೆಳೆದ ಪರಿಸರದ ಪ್ರಭಾವದಿಂದ ರೂಪುಗೊಳ್ಳುತ್ತವೆ. ಈ ಸಾಹಿತ್ಯ ಕೃತಿಗಳ ಮೂಲ ಉದ್ದೇಶವೆಂದರೆ ಸಮಾಜದ ಬದ್ಧತೆಯಾಗಿರುತ್ತದೆ. ಕೃತಿಕಾರನು ತನ್ನ ಕೃತಿಯಲ್ಲಿ ಸುತ್ತಲಿನ ಸ್ಥಳೀಯ ಪರಿಸರದಲ್ಲಿ ನಡೆದ ಅಥವಾ ನಡೆಯಬಹುದಾದ ತಾನು ಕಂಡುಂಡ ಅನುಭವಗಳನ್ನು ಲೇಖನೀಯ ಮುಖಾಂತರ ಹೊರಹಾಕುತ್ತಾನೆ. ಇಂತಹ ಸಾಹಿತ್ಯ ಕೃತಿಗಳು ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವುದರೊಂದಿಗೆ ಸುಸ್ಥಿರವಾದ ಸಮಾಜವನ್ನು ನಿರ್ಮಾಣ ಮಾಡಲು ಸಹಕಾರಿಯಾಗುತ್ತವೆ. ಸಾಹಿತ್ಯ ಕೃತಿಗಳಲ್ಲಿ ಲೇಖಕನು ಸ್ಥಳೀಯ ಪರಿಸರದಲ್ಲಿನ ಆಗುಹೋಗುಗಳನ್ನು ಸೂಕ್ಷ್ಮ ಸಂವೇದನೆಯಿಂದ ಚಿತ್ರಿಸುತ್ತಾನೆ. ಇಲ್ಲಿ ಚಿತ್ರಿತವಾಗುವ ವಿಷಯಗಳಿಗೂ ಮತ್ತು ಕೃತಿಕಾರನ ಸ್ಥಳೀಯ ಪರಿಸರಕ್ಕೂ ಪೂರಕವಾದ ಸಂಬಂಧವಿರುತ್ತದೆ. ಆದ್ದರಿಂದ ಎಲ್ಲಾ ಸಾಹಿತ್ಯ ಕೃತಿಗಳು ಸ್ಥಳೀಯ ಮೂಲ ಪರಿಸರದಿಂದಲೇ ರೂಪುಗೊಳ್ಳುತ್ತವೆ. ಅದೇ ರೀತಿಯಲ್ಲಿ 'ಕರ್ವಾಲೊ' ಕಾದಂಬರಿಯು ಸಹ ಸ್ಥಳೀಯ ಪ್ರಜ್ಞೆಯ ಹಿನ್ನೆಲೆಯಿಂದಲೇ ರಚನೆಯಾಗಿದೆ.

ತೇಜಸ್ವಿ ಸಾಹಿತ್ಯದ ಆಶಯಗಳು :– ತೇಜಸ್ವಿಯವರು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಜಾತ್ಯಾತೀತವಾದ ವರ್ಗಾತೀತವಾದ ಲಿಂಗತೀತವಾದ ಹಾಗೂ ಶ್ರೀಸಾಮಾನ್ಯರ ಸಮಾಜವನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ಪರಿಸರದ ವಿಸ್ಮಯ, ಔಚಿತ್ಯ, ನಿಗೂಢತೆಗಳನ್ನು ಕುತೂಹಲದಿಂದ ನೋಡಿ ಜನಸಾಮಾನ್ಯ ಪಾತ್ರಗಳ ಮೂಲಕ ವಿವರಿಸಿದ್ದಾರೆ. ಸಮಾಜ ಮತ್ತು ಪ್ರಕೃತಿ ಇವೆರಡರ ತೀವ್ರವಾದ ಮುಖಾಮುಖಿ ತೇಜಸ್ವಿಯವರ ಕೃತಿಗಳಲ್ಲಿ ಕಾಣಿಸಿಕೊಂಡಿರುವುದನ್ನು ನೋಡಬಹುದಾಗಿದೆ. ತಮ್ಮ ಎಲ್ಲಾ

ಕೃತಿಗಳಲ್ಲಿ ಪರಂಪಾರಾಗತವಾಗಿ ಬಂದ ಕೃಷಿ ಪದ್ಧತಿ ಜೀವ ವೈವಿಧ್ಯ ಸಂರಕ್ಷಣಾ ಪದ್ಧತಿ, ಕರಕುಶಲ ತಂತ್ರಜ್ಞಾನ, ನಾಟಿ ಔಷಧಿ ಗ್ರಾಮೀಣ ಸಂಸ್ಕೃತಿಯ ಮೇಲೆ ಆಧುನಿಕತೆ ಮತ್ತು ಜಾಗತೀಕರಣ ಉಂಟುಮಾಡಿದ ಪರಿಣಾಮದ ಬಗ್ಗೆ ಚರ್ಚಿಸುವುದರೊಂದಿಗೆ ಸ್ಥಳೀಯ ಪರಂಪರೆಯನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ತಮ್ಮ ಎಲ್ಲಾ ಸಾಹಿತ್ಯ ಕೃತಿಗಳಲ್ಲಿ ವಿಷಾದ, ತಮಾಷೆ, ಹಾಸ್ಯ, ವಿನೋದ, ನಿರೂಪಣಾ ಕೌಶಲ್ಯದಿಂದಾಗಿ ಸಹೃದಯರ ಮನಮುಟ್ಟಿದ್ದಾರೆ. ತಮ್ಮ ಕೃತಿಗಳಲ್ಲಿ ಜನಸಾಮಾನ್ಯ ಪಾತ್ರಗಳ ಮೂಲಕ ಪಾರಂಪರಿಕ ಜ್ಞಾನಗಳನ್ನು ಸಂರಕ್ಷಿಸುವ ಅಗತ್ಯತೆಯನ್ನು ನಿರೂಪಿಸುತ್ತಾರೆ.

ಸ್ಥಳೀಯ ಜ್ಞಾನಗಳ ಶೋಧದ ಬಗೆ :– ತೇಜಸ್ವಿಯವರ 'ಕರ್ವಾಲೊ' ವಿಶಿಷ್ಟವಾದ ಕಾದಂಬರಿಯಾಗಿದೆ. ನಿರೂಪಕರು ಕಾದಂಬರಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾ ಮಲೆನಾಡಿನ ಮೂಡಗೆರೆಯ ಪ್ರಕೃತಿಯ ವಿಸ್ಮಯ, ಸೂಕ್ಷ್ಮತೆ, ವೈಚಿತ್ರ್ಯಗಳನ್ನು ಸ್ಥಳೀಯ ಜನಸಾಮಾನ್ಯರ ಪಾತ್ರಗಳ ಮುಖಾಂತರ ಶೋಧಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಕಾದಂಬರಿಯು ಮೂಡಗೆರೆ ಪರಿಸರದ ಚಿತ್ರಣದ ಜೊತೆಗೆ ಕರ್ವಾಲೊರ ಹಾರುವ ಓತಿಯ ಸಂಶೋಧನೆಯೊಡನೆ ಕೇಂದ್ರೀಕೃತವಾಗಿದೆ. ಕಾದಂಬರಿಯ ಪ್ರಮುಖ ಪಾತ್ರ 'ಕರ್ವಾಲೊ'. ಅದರ ಜೊತೆಗೆ ಮಂದಣ್ಣ, ಎಂಗ್ಟ, ಕರಿಯಣ್ಣ, ಪ್ಯಾರ, ಕಿವಿ, ಪ್ರಭಾಕರ, ಲಕ್ಷ್ಮಣ ಈ ಪಾತ್ರಗಳ ಮೂಲಕ ಸ್ಥಳೀಯ ಜ್ಞಾನಗಳನ್ನು ಹಾಸ್ಯದ ಲಹರಿಯ ಮೂಲಕ ಶೋಧಿಸಿರುವುದು ಕಂಡುಬರುತ್ತದೆ.

ಕಾದಂಬರಿಯು ನಿರೂಪಕರು ಜೇನು ತುಪ್ಪ ಕೊಳ್ಳಲು ಸೊಸೈಟಿಗೆ ತೆರಳುವುದರೊಂದಿಗೆ ಆರಂಭವಾಗುತ್ತದೆ. ಆಗ ಮಂದಣ್ಣನು ಜೇನಿನ ಉತ್ಪಾದನೆ ಅಧಿಕವಾಗಲು ಪರಿಸರ ಜ್ಞಾನಿಯಂತೆ ನಿಸರ್ಗದ ವೈಚಿತ್ರ್ಯದ ಕಾರಣವನ್ನು ಹೀಗೆ ನೀಡುತ್ತಾನೆ: "ಈ ವರ್ಷ ಮಲೆನಾಡಿನಲ್ಲಿ ಗುರುಗಿ ಎಂಬ ಒಂದು ಜಾತಿಯ ದಟ್ಟವಾಗಿರುವ ಹಳು ಹೂವಾಗಿದೆಯಂತೆ. ಎಂಟು ವರ್ಷಗಳಿಗೊಮ್ಮೆ ಹೂವಾಗುವ ಈ ಸಸ್ಯ ಹೂ ಬಿಟ್ಟ ವರ್ಷ ಮಲೆನಾಡಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜೇನು ಉತ್ಪಾದನೆಯಾಗುತ್ತದೆ" (ಕರ್ವಾಲೊ, ಪುಟ 4). ಹೀಗೆ ಸಮರ್ಥವಾದ ಕಾರಣ ನೀಡುತ್ತಾನೆ. ಗುರುಗಿ ಎಂಬ ಹಳು ಹೂ ಬಿಟ್ಟ ಸಂದರ್ಭದಲ್ಲಿ ಹೂವಿನ ಮಕರಂದ ಹೆಚ್ಚಾಗಿದ್ದು ಜೇನುಗಳು ಮಕರಂದ ಸವಿಯಲು ಹೆಚ್ಚಾಗಿ ಬರುತ್ತವೆ. ಆದ್ದರಿಂದ ಜೇನಿನ ಉತ್ಪಾದನೆ ಅಧಿಕವಾಗುತ್ತದೆ. ನಂತರ ನಿರೂಪಕರಿಗೆ ಜೇನುಗಳ ಜೀವ ವಿಕಾಸದ ಬಗ್ಗೆ ಮಾಹಿತಿ ನೀಡಿ ಅವರಿಗೆ ಜೇನುಗಳ ಬಗ್ಗೆ ತಿಳಿಯಲು ಆಸಕ್ತಿ ಮೂಡಿಸುತ್ತಾನೆ.

ಮಂದಣ್ಣನು ಕರ್ವಾಲೊ ಎಂಬ ಪ್ರಸಿದ್ಧ ಕೀಟಶಾಸ್ತ್ರದ ಸಂಶೋಧಕನಿಗೆಸಹಾಯಕನಾಗಿಕಾರ್ಯನಿರ್ವಹಿಸುತ್ತಿರುತ್ತಾನೆ. ಆದರೆ ಮಂದಣ್ಣನಿಗೆ ತನ್ನ ಅಪಾರ ಪರಿಸರದ ಜ್ಞಾನದ ಅರಿವು ಇರುವುದಿಲ್ಲ. ಈತನ ಮಹದಾಸೆ ಎಂದರೆ ರಾಮಯ್ಯನ ಮಗಳಾದ ರಾಮಿಯನ್ನು ಮದುವೆಯಾಗುವುದೇ ಆಗಿತ್ತು. ಅದಕ್ಕಾಗಿ ಗುಮಾಸ್ತನ ಕೆಲಸಕ್ಕೆ ಸೇರಲು ಪ್ರಯತ್ನಿಸುತ್ತಿರುತ್ತಾನೆ. ಒಂದು ಸಾರಿ ಜೇನು ಪೆಟ್ಟಿಗೆ ಕ್ಲೀನ್ ಮಾಡುತ್ತಿರಬೇಕಾದರೆ 'ಗ್ಲೋವರ್ಮ್' ಎಂಬ ಹುಳುವನ್ನು ಪತ್ತೆ ಮಾಡುತ್ತಾನೆ. ಕೊನೆಗೆ ಅದರ ಚಲನವಲನಗಳನ್ನು ಅಭ್ಯಾಸ ಮಾಡಿ ಅದು ಶಂಕದ ಹುಳು ತಿನ್ನುತ್ತದೆ ಎಂದು ಕಂಡುಹಿಡಿಯುತ್ತಾನೆ. ಇದನ್ನು ಕರ್ವಾಲೊರಿಗೆ ವಿವರಿಸಿದಾಗ ತುಂಬಾ ಸಂತೋಷದಿಂದ ಸಂಶೋಧನೆ ಕೈಗೊಳ್ಳುತ್ತಾರೆ. ಆಗ ಈ ಹುಳುವಿಗೆ ಅಪಾಯದ ಸೂಚನೆಗಳು ಕಂಡುಬಂದರೆ ವೈರಿಗಳನ್ನು ಹೆದರಿಸಿ ಓಡಿಸಲು ದೀಪ ಹತ್ತಿಸುತ್ತವೆ. ವೈರಿಗಳು ಇದನ್ನು ಬೆಂಕಿ ಕೆಂಡವೆಂದು ಭ್ರಮಿಸಿ ದೂರಾಗುತ್ತವೆ. ಈ ರೀತಿ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳುತ್ತವೆ. ಇದರ ಬೆಳಕಿನ ಮೂಲ ಯಾವುದು, ನಾವು ಸಹ ಅದರಂತೆ ದೀಪಗಳನ್ನು ಸೃಷ್ಟಿ ಮಾಡಬಹುದೆಂದು ಕರ್ವಾಲೊ ಸಂಶೋಧನೆ ಕೈಗೊಳ್ಳುತ್ತಾರೆ. ಇದರಿಂದ ಮಂದಣ್ಣ ಕರ್ವಾಲೊರ ಸಂಶೋಧನೆಗೆ ಸಹಾಯಕನಾಗಿ ಪ್ರಶಂಸೆಗೆ ಪಾತ್ರನಾಗುತ್ತಾನೆ. ಕರ್ವಾಲೊರ ಪ್ರಕಾರ ಮಂದಣ್ಣ ಅಪ್ರತಿಮ ಪರಿಸರ ವಿಜ್ಞಾನಿ. ಅಕಾಡೆಮಿಕ್ ಶಿಸ್ತಿಲ್ಲದಿದ್ದರೂ ಸ್ಥಳೀಯ ಪರಿಸರ ಜ್ಞಾನದ ನಿಗೂಢತೆಗಳನ್ನು ಸೂಕ್ಷ್ಮತೆಗಳನ್ನು ಕರಗತ ಮಾಡಿಕೊಂಡಿರುತ್ತಾನೆ. ಆದರೆ ಈತನ ಪರಿಸರ ಜ್ಞಾನದ ಬಗ್ಗೆ ರಾಮಯ್ಯ ಅಪಹಾಸ್ಯ ಮಾಡುತ್ತಾನೆ. ಆದರೆ ಸ್ವತಃ ಮಂದಣ್ಣನೆ ತನ್ನ ಸುತ್ತಮುತ್ತಲಿನ ಪರಿಸರದ ಬಗ್ಗೆ "ಬರೀ ಮಳೆ, ಕಾಡು, ನೆತ್ತರು, ಹೀರೋ ಜಿಗಣೆ, ನಮ್ಮ ಭತ್ತ ಲೂಟಿ ಮಾಡೋ ಕಾಡು ಹಂದಿಗಳು...." ಎಂಬ ನಿರ್ಲಕ್ಷ್ಯ ಭಾವನೆಗೆ ಒಳಗಾಗಿರುತ್ತಾನೆ. ಮಂದಣ್ಣನ ಈ ವಿಸ್ಮೃತಿಗೆ ಕಾರಣವೆಂದರೆ ಸ್ಥಳೀಯ ಜ್ಞಾನದ ಮಹತ್ವ ತಿಳಿಯದೇ ಇರುವುದರ ಜೊತೆಗೆ ವಿದ್ಯಾವಂತರ ಜ್ಞಾನ ಮಾತ್ರ ಶ್ರೇಷ್ಠವಾದುದು ನಮ್ಮಂತವರ ಜ್ಞಾನ ಕನಿಷ್ಟ ಎಂಬ ಭಾವನೆಗೆ ಒಳಗಾಗಿರುತ್ತಾರೆ. ಮಂದಣ್ಣನು ಹುಳ ಹುಪ್ಪಟೆಗಳನ್ನು ಹಿಡಿಯುತ್ತಾ ಪರಿಸರದ ಸೂಕ್ಷ್ಮತೆ ನಿಗೂಢತೆಗಳನ್ನು ಅರಿತವನಾಗಿರುತ್ತಾನೆ. ಆದರೆ ಜನರ ದೃಷ್ಟಿಯಲ್ಲಿ ಕೆಲಸವಿಲ್ಲದ ನಿರುಪಯುಕ್ತ ಅಲೆಮಾರಿಯಾಗಿರುತ್ತಾನೆ. ಈತನ ಹಾರುವ ಓತಿಯನ್ನು ಕುರಿತ ಜ್ಞಾನದ ಬಗ್ಗೆ ಕರ್ವಾಲೊರೆ "ಮಂದಣ್ಣನ ಪರಿಸರ ಜ್ಞಾನವನ್ನು ಮೀರಿಸುವವರು ಯಾರೂ ಇಲ್ಲ, ಅಷ್ಟೊಂದು ಚೆನ್ನಾಗಿ ಪರಿಸರದ ಸೂಕ್ಷ್ಮತೆಗಳನ್ನು ಗ್ರಹಿಸುತ್ತಾನೆ. ಅವನೊಬ್ಬ ಹುಟ್ಟಾ ನ್ಯಾಚುರಲಿಸ್ಟ್ ಈವರೆಗೂ ಅವನು ಹೇಳಿರುವುದು ಒಂದೊಂದು ಕೂಡ ಸುಳ್ಳಾಗಿಲ್ಲ. ಅದ್ಭುತ ಪ್ರಕೃತಿಶಾಸ್ತ್ರಜ್ಞ" (ಅದೇ, ಪುಟ 77) ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಹಾರುವ ಓತಿಯನ್ನು ನೋಡಲು ಅರಣ್ಯಕ್ಕೆ ತೆರಳಿದಾಗ ಒಂದು ಮರದ ಬೇರುಗಳೆಡೆಯಲ್ಲಿ ಹಬ್ಬಿದ ಅಣಬೆಗಳ ಸಮೂಹಗಳನ್ನು ಪತ್ತೆ ಮಾಡಿ ಅದರಿಂದ ಪ್ರಕಾಶಮಾನವಾದ ಬೆಳಕು ಬರುತ್ತದೆಂದು ಪ್ರಭಾಕರನಿಗೆ ತೋರಿಸುತ್ತಾನೆ. ನಂತರ ದಟ್ಟವಾದ ಕಾನನದ ಮಧ್ಯದಲ್ಲಿ ಅದೃಶ್ಯವಾಗಿ ಕಾಣಿಸಿಕೊಳ್ಳುವ ಹಾರುವ ಓತಿಯ ಚಹರೆಗಳು ಮಂದಣ್ಣನು ಕರ್ವಾಲೊರಿಗೆ ವಿವರಿಸಿದ ರೀತಿಯಲ್ಲೇ ಇರುತ್ತದೆ. ಇದರ ಜೊತೆಗೆ ಡ್ರಮ್ ಬಾರಿಸುವುದರಲ್ಲಿ, ಶಿಕಾರಿ ಮಾಡುವುದರಲ್ಲಿ ನಿಪುಣನಾಗಿದ್ದನು. ತೇಜಸ್ವಿಯವರು ಮಂದಣ್ಣನ ಪಾತ್ರದ ಮೂಲಕ ಸ್ಥಳೀಯ ಜ್ಞಾನ ಪರಂಪರೆಯನ್ನು ಶೋಧಿಸಿದ್ದಾರೆ.

ಕಾದಂಬರಿಯ ಮತ್ತೊಂದು ಪಾತ್ರವಾದ ಪ್ಯಾರಾನು ನಿರೂಪಕರ ಮನೆಯಲ್ಲಿ ಅಡುಗೆ ಸಹಾಯಕನಾಗಿ

ಕಾರ್ಯನಿರ್ವಹಿಸುತ್ತಿರುತ್ತಾನೆ. ನಿರೂಪಕರು ಜೇನನ್ನು ತಂದಾಗ ಜೇನಿನ ಟಿನ್ನಿನ ಮೇಲೆ ನಾಲ್ಕು ಕೆಂಡವನ್ನು ಅದರ ಮೇಲಿಟ್ಟು ಊದಿ ಕಾಯಿಸಿ ಬೆಸುಗೆ ತೆಗೆದು ಅದನ್ನು ನೋಡಿ "ಏನೋಪು ಕೊಬ್ಬರಿ ಎಣ್ಣೆ ಇದ್ದಂಗಿದೆ" (ಅದೇ, ಪುಟ 10) ಎಂದು ಅನುಮಾನ ವ್ಯಕ್ತಪಡಿಸುತ್ತಾನೆ. ನಂತರ ಕೊಬ್ಬರಿ ಎಣ್ಣೆಯಂತೆಯೇ ಇದು ಕೂಡ ಚಳಿಗೆ ಗಟ್ಟಿಯಾಗ್ಯೈತೆ ಎಂದು ಕಾರಣ ನೀಡುತ್ತಾನೆ. ಈತ ಹೇಳುವ ಹಾಗೆ ಪರಿಸರದ ವಿಸ್ಮಯಗಳು ಕಾಣ್ತೇತೇ, ಆದ್ರೆ ಕಾಣಕ್ಕಿಲ್ಲ ಎಂದು ಹೇಳಿದ್ದು ಪರಿಸರದ ಒಳ ಸೂಕ್ಷ್ಮತೆಗಳನ್ನು ಧ್ವನಿಸುತ್ತದೆ. ಪ್ಯಾರಾನು ಮುಗ್ಧ ಸ್ವಭಾವದವನಾಗಿದ್ದು, ಕಿವಿ ಎಂಬ ನಾಯಿಯನ್ನು ತನ್ನ ತಮ್ಮನಂತೆ ಭಾವಿಸಿ ಚೆನ್ನಾಗಿ ಉಪಚರಿಸುತ್ತಾನೆ.

ಕಾದಂಬರಿಯ ಮತ್ತೊಂದು ಪಾತ್ರವಾದ ಪ್ರಭಾಕರನು ಚಿಕ್ಕಮಗಳೂರಿನಲ್ಲಿ ರೇಡಿಯೋ ರಿಪೇರಿ ಕೆಲಸ ನಿರ್ವಹಿಸುತ್ತಿರುತ್ತಾನೆ. ನಂತರ ಕರ್ವಾಲೊರ ಸಂಶೋಧನೆಗೆ ಅವಶ್ಯಕವಾದ ಫೋಟೋಗಳನ್ನು, ನಕ್ಷೆಗಳನ್ನು ತೆಗೆದುಕೊಡಲು ಆರಂಭಿಸುತ್ತಾನೆ. ಈತ ಶಾಂತ ಸ್ವಭಾವದವನಾಗಿದ್ದು, ಅಗತ್ಯವಿದ್ದಷ್ಟು ಮಾತ್ರ ಮಾತಾಡುತ್ತಿದ್ದ. ಒಬ್ಬ ಸೂಕ್ಷ್ಮ ಗ್ರಾಹಿ ಫೋಟೋಗ್ರಾಫರ್ ಆಗಿದ್ದು, ದುಂಬಿ, ಮಿಡತೆ, ಚಿಟ್ಟೆಗಳ ಅದ್ಭುತ ರೂಪ ರಚನೆಗಳನ್ನು ಗಮನಿಸಿ ತನ್ನ ಕ್ಯಾಮೆರಾದಲ್ಲಿ ಸೆರೆ ಹಿಡಿಯುತ್ತಿದ್ದನು. ಈತನ ಜ್ಞಾನವನ್ನು ಮತ್ತಷ್ಟು ಹೆಚ್ಚಿಸುವ ಉದ್ದೇಶದಿಂದ ಕರ್ವಾಲೊರು ವಿದೇಶದಿಂದ ಉಪಕರಣಗಳನ್ನು ತರಿಸಿ, ಗ್ರಾಫಿಕ್ ಫೋಟೋಗ್ರಫಿ ಎಂಬ ಹೊಸ ತಂತ್ರಜ್ಞಾನವನ್ನು ಕಲಿಸಿ ಕೊಟ್ಟರು. ಹೀಗೆ ಪ್ರಭಾಕರನು ಕಾದಂಬರಿಯಲ್ಲಿ ತಾಂತ್ರಿಕ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಾನೆ.

ಕಿವಿಯು ನಿರೂಪಕರ ಪ್ರೀತಿಗೆ ಪಾತ್ರವಾದ ನಾಯಿಯಾಗಿದೆ. ನಿರೂಪಕರು ಪ್ಯಾರಾನಿಗೆ ಜೇನುಗಳ ಮಾಹಿತಿಗಾಗಿ ಜೇನು ಗೂಡು ಕಟ್ಟಿರುವುದನ್ನು ತೋರಿಸು ಎಂದು ಹೇಳುತ್ತಾರೆ. ಆದರೆ ಕಿವಿ ನಾಯಿಯು ಒಮ್ಮೆ ಅರಣ್ಯದ ಮಧ್ಯದಲ್ಲಿ ತೋರಿಸುತ್ತದೆ. ಇದು ಬೇಟೆಯಾಡುವುದರಲ್ಲಿ ನಿಪುಣವಾಗಿದ್ದು, ಮನುಷ್ಯರ ನಡವಳಿಕೆ, ಮಾತುಗಾರಿಕೆಯನ್ನು ಅಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವಷ್ಟು ಕುಶಾಗ್ರ ಬುದ್ಧಿಯನ್ನು ಬೆಳೆಸಿಕೊಂಡಿತು. ಕಿವಿಯು ಎಂತಹ ಶಿಕಾರಿ ಹುಚ್ಚಿನ ನಾಯಿಯಾಗಿತ್ತೆಂದರೆ ಕೋವಿ ಹಿಡಿದವರನ್ನು ಕಂಡರೆ ಸಾಕು ಅವನು ಸಾಕ್ಷಾತ್ ಕಳ್ಳನೇ ಆಗಿದ್ದರೂ ಸಹ ಏನಾದರೂ ಉಪಾಯ ಮಾಡಿ ಅವನ ಸ್ನೇಹ ಸಂಪಾದಿಸಲು ಯತ್ನಿಸುತ್ತಿತ್ತು. ತೇಜಸ್ವಿಯವರು ಕಿವಿಯ ಪಾತ್ರದ ಮೂಲಕ ಒಂದು ಪ್ರಾಣಿಯೂ ಸಹ ಪರಿಸರದ ಸೂಕ್ಷ್ಮತೆಗಳನ್ನು ಗ್ರಹಿಸಿತ್ತು ಎಂಬುದನ್ನು ನಿರೂಪಿಸಿದ್ದಾರೆ.

ಕಾದಂಬರಿಯಲ್ಲಿ ಹಾರುವ ಓತಿಯನ್ನು ಹಿಡಿಯಲು ಸಹಕಾರಿಯಾಗಲು ಕರಿಯಣ್ಣನನ್ನು ಮಂದಣ್ಣ ಕರೆತರುತ್ತಾನೆ. ಈತ ಮರ ಹತ್ತುವುದರಲ್ಲಿ, ಈಜುವುದರಲ್ಲಿ, ಶಿಕಾರಿ ಮಾಡುವುದರೊಂದಿಗೆ ಬಿರಿಯಾನಿ ತಯಾರಿಕೆಯಲ್ಲಿ ಕರಗತನಾಗಿರುತ್ತಾನೆ. ಈತನು ಮರ ಹತ್ತುವುದರಲ್ಲಿ ಎಷ್ಟು ನಿಪುಣನಾಗಿದ್ದನೆಂದರೆ ಎರಡು ಕಾಲುಗಳು ಬಾಳೆ ಕಾಯಿಯಂತೆ ಕಮಾನವಾಗಿ ಬಾಗಿ ಹೋಗಿದ್ದವು. ಆದ್ದರಿಂದ ಸಾಮಾನ್ಯ ಮನುಷ್ಯರು ನೆಲದ ಮೇಲೆ ನಡೆದಾಡುವ ಹಾಗೆ ಮರ ಹತ್ತುವುದರಲ್ಲಿ ಪ್ರವೀಣನಾಗಿದ್ದನು. ಹಾರುವ ಓತಿಯನ್ನು ಕಂಡುಹಿಡಿಯಲು ಅರಣ್ಯಕ್ಕೆ ತೆರಳಿದಾಗ ತನ್ನ ಕೈಚಳಕದಿಂದ ಶಿಕಾರಿ ಮಾಡುತ್ತಾನೆ. ನಿರೂಪಕರು ಪ್ರಾಣಿಗಳನ್ನು ಕೊಲ್ಲುವುದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದಾಗ ಕಾಲಜ್ಞಾನಿಯಂತೆ 'ಕೊಂದ ಪಾಪ ತಿಂದು ಪರಿಹಾರವಂತೆ', ಅದಕ್ಕೆ ಮತ್ತೆ ಹೊಡೆದ ಮೇಲೆ ಹುರಿ ತುಂಡು ಮಾಡಿ ತಿನ್ನೋದು ಎಂದು ಉತ್ತರ ಕೊಡುತ್ತಾನೆ. ಕರಿಯಪ್ಪನು ಹಾರುವ ಓತಿಯನ್ನು ಹಿಡಿಯಲು ಮರ ಹತ್ತುತ್ತಾನೆ. ಆಗ ಓತಿಯ ಮೈ ಜಾರಿ ಬಾಲ ಹಿಡಿತಕ್ಕೆ ಸಿಕ್ಕುತ್ತದೆ. ಒಂದು ಕೈಯಲ್ಲಿ ಓತಿಯ ಬಾಲ ಮತ್ತು ಮತ್ತೊಂದು ಕೈಯಲ್ಲಿ ಮರವನ್ನು ದೀರ್ಘ ಕಾಲದವರೆಗೆ ಹಿಡಿಯಲು ಆಗದೆ ಓತಿಯು ಗಾಬರಿಯಾಗಿ ತನ್ನ ಬಲ ಪ್ರಯೋಗದಿಂದ ಕರಿಯಣ್ಣನ ಕೈಯಿಂದ ಬಿಡಿಸಿಕೊಳ್ಳಲು ಅವಣಿಸಿ ಬಿಡಿಸಿಕೊಂಡು ಹಾರಿ ಹೋಗುತ್ತದೆ. ಇದರಿಂದ ಎಲ್ಲರ ಪರಿಶ್ರಮ ವ್ಯರ್ಥವಾಗುತ್ತದೆ. ಆದರೂ ಸಹ ಯಾರಿಗೂ ಬೇಸರ ಉಂಟಾಗುವುದಿಲ್ಲ.

ಕರ್ವಾಲೊರು ಹಾರುವ ಓತಿಯ ಸಂಶೋಧನೆಗಾಗಿ ಅರಣ್ಯದಲ್ಲಿ ತೆರಳಿದಾಗ ಹಾವು ಗೊಲ್ಲರ ಎಂಗ್ಟನ ಪ್ರವೇಶವಾಗುತ್ತದೆ. ಈತ ಪುಂಗಿ ಊದಿ ಹಾವನ್ನು ಹಿಡಿಯುವುದರಲ್ಲಿ, ಮದ್ದು ಕೊಡುವುದರಲ್ಲಿ, ಶಿಕಾರಿ ಮಾಡಿದ ಪ್ರಾಣಿಗಳ ಚರ್ಮ ಸುಲಿದು ಅವುಗಳ ಪ್ರತಿಕೃತಿಗಳನ್ನು ತಯಾರಿಸಿ ಮಾರಾಟ ಮಾಡಿ, ಜೀವನ ಸಾಗಿಸುತ್ತಿರುತ್ತಾನೆ. ಎಂಗ್ಟನನ್ನು ದೂರದಿಂದ ನೋಡಿದಾಗ ಪಾಪ ಎನಿಸಿತು. ನಾಗರಿಕತೆ ಮುಂದುವರೆಯುತ್ತಾ ಎಂಗ್ಟನ ಕುಲಕಸುಬುಗಳು, ಕೈ ಚಳಕಗಳು ನಿಧಾನವಾಗಿ ನಿರುಪಯುಕ್ತವಾಗುತ್ತಿದ್ದವು. ಸರ್ಕಾರ ಹಾವಿನ ಚರ್ಮವನ್ನು ರಫ್ತು ಮಾಡುವುದನ್ನು ನಿಷೇಧಿಸಿದ ಮೇಲೆ ಅವನ ಚರ್ಮಗಳಿಗೆ ಬೆಲೆ ಇರಲಿಲ್ಲ. ಅವನ ಚಕ್ರಾಣಿ ಬೇರು, ಚಿತ್ರಮೂಲದ ಬೇರು, ಸರ್ಪಗಂಧಿ, ಅಳಲೇಕಾಯಿಗಳು, ವಿಲಾಯಿತಿ ಔಷಧದ ಎದುರು ಗಿರಾಕಿ ಕಳೆದುಕೊಂಡಿದ್ದವು. ಮೊದಲಿನಂತೆ ಮೊಲ, ಗೌಜುಗನ ಹಕ್ಕಿ, ನೀರು ನಾಯಿಗಳನ್ನು ಬೇಟೆಯಾಡುವುದಕ್ಕೂ ಅರಣ್ಯ ಇಲಾಖೆಯವರು ಅವಕಾಶ ಮಾಡಿಕೊಟ್ಟಿರಲಿಲ್ಲ. ಎಂಗ್ಟನಿಗೆ ಮನಸ್ಸಿನಾಳದಲ್ಲಿ ತಾನು ಪರಕೀಯನಾಗುತ್ತಾ ಏಕಾಂಗಿಯಾಗುತ್ತಾ ಇರುವುದರ ಅರಿವಿಲ್ಲದೇ ಇರಬಹುದು. ಅವನು ತನ್ನೆಲ್ಲಾ ಚಾಕ್ಯ ಚಕ್ಯತೆ ಚಲಾಕುಗಳನ್ನು ಉಪಯೋಗಿಸಿ, ಜನರನ್ನು ರಂಜಿಸಿ, ನಂಬಿಸಿ, ನಿದ್ದೆ ಮಾಡುತ್ತಿದ್ದ ದಾಸರ ಹಾವಿನ ಎದುರು ಪುಂಗಿ ಊದಿ, ಊಟ ಸಂಪಾದನೆ ಮಾಡಲು ಹೆಣಗುತ್ತಿದ್ದನು. 'ಕಣ್ಕಟ್ಟು ಸೂಳೆಮಗ' ಎಂದು ಜನರು ಬೈದರೂ ತಾಳ್ಮೆಯಿಂದ ಸಹಿಸಿಕೊಂಡು ಉತ್ತರಿಸುತ್ತಿದ್ದುದನ್ನು ನೋಡಬಹುದಾಗಿದೆ. ಭಾರತದ ಕಾಡುಗಳು, ಮೃಗ ಪಕ್ಷಿಗಳು, ನದಿ ಝರಿಗಳು ತಾಳ್ಮೆಯಿಂದ ತಮ್ಮ ಅವಸಾನವನ್ನು ಕಾಯುತ್ತಿರುವಂತೆಯೇ ಎಂಗ್ಟನೂ ಕಾಯುತ್ತಿದ್ದ. ಹೀಗೆ ಸ್ಥಳೀಯ ಜನಸಾಮಾನ್ಯರ ಸ್ಥಿತಿಯಾಗಿದೆ.

ಉಪಸಂಹಾರ :– ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು 'ಕರ್ವಾಲೊ' ಕಾದಂಬರಿಯ ಮೂಲಕ ಸ್ಥಳೀಯ ಪಾರಂಪರಿಕ ಜ್ಞಾನಗಳಿಗೆ ಮಹತ್ವವಿದೆ ಎಂಬುದನ್ನು ನಿರೂಪಿಸುತ್ತಾರೆ. ಆಧುನಿಕತೆ ಸ್ಥಳೀಯ ಜ್ಞಾನಗಳನ್ನು ಒಪ್ಪಿಕೊಳ್ಳಬೇಕೆಂಬುದನ್ನು

ಸಾಧಿಸಿ ತೋರಿಸಿದ್ದಾರೆ. ಕಾದಂಬರಿಯ ಕೇಂದ್ರ ಪಾತ್ರವಾದ ಕರ್ವಾಲೊರ ಸಂಶೋಧನೆಗೆ ಇಡೀ ಕಾದಂಬರಿಯಲ್ಲಿ ಸಹಾಯಕರಾದವರು ಮಂದಣ್ಣ, ಕರಿಯಣ್ಣ, ಎಂಗ್ಟ, ಪ್ರಭಾಕರರಂತಹ ಸ್ಥಳೀಯ ಜ್ಞಾನಿಗಳಾಗಿದ್ದಾರೆ. ಇಂತಹ ಸ್ಥಳೀಯ ಜ್ಞಾನಿಗಳಿಗೆ ತಮ್ಮ ಅಮೂಲ್ಯ ಜ್ಞಾನದ ಬಗ್ಗೆ ಅರಿವು ಇಲ್ಲದೇ ಇರುವುದರಿಂದ ವಿಸ್ಮೃತಿ ಉಂಟಾಗಿದೆ. ಆದ್ದರಿಂದ ಆಧುನಿಕತೆ ಜ್ಞಾನಗಳು ಬೆಳೆದಿರುವುದೇ ಸ್ಥಳೀಯ ಜ್ಞಾನಗಳ ಆಧಾರದಿಂದ. ಇಂತಹ ಹಲವಾರು ಸ್ಥಳೀಯ ಪಾರಂಪರಿಕ ಜ್ಞಾನಗಳು ಇಂದು ನಿರ್ಲಕ್ಷ್ಯಕ್ಕೆ ಒಳಗಾಗಿ ಕಣ್ಮರೆಯಾಗಿ ಹೋಗಿವೆ. ಆದ್ದರಿಂದ ಇಂತಹ ಸ್ಥಳೀಯ ಜ್ಞಾನಗಳನ್ನು ಆಧುನಿಕತೆಗೆ ಅನುಗುಣವಾಗಿ ಮಾರ್ಪಡಿಸಿ, ಪೋಷಿಸಬೇಕಾದ ಅಗತ್ಯತೆಯನ್ನು ನಿರೂಪಿಸಿದ್ದಾರೆ. ಆ ಮೂಲಕ ಸ್ಥಳೀಯ ಜ್ಞಾನಗಳನ್ನು ಒಪ್ಪಿಕೊಳ್ಳಬೇಕೆಂಬುದನ್ನು ಕರ್ವಾಲೊರ ಪಾತ್ರದ ಮೂಲಕ ಸಾಧಿಸಿ ತೋರಿಸಿದ್ದಾರೆ.

ಪರಾಮರ್ಶನ ಗ್ರಂಥಗಳು

1. ಟಿ.ಪಿ. ಅಶೋಕ, "ತೇಜಸ್ವಿ ಕಥನ", ಅಕ್ಷರ ಪ್ರಕಾಶನ, ಹೆಗ್ಗೋಡು, 2004.

2. ಕರೀಗೌಡ ಬೀಚನಹಳ್ಳಿ, "ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಬದುಕು–ಬರಹ", ಸಾಹಿತ್ಯ ಅಕಾಡೆಮಿ, ನವದೆಹಲಿ, 2010.

3. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, "ಕರ್ವಾಲೊ", ಪುಸ್ತಕ ಪ್ರಕಾಶನ, ಮೈಸೂರು, 1980.

4. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, "ವಿಮರ್ಶೆಯ ವಿಮರ್ಶೆ", ಪುಸ್ತಕ ಪ್ರಕಾಶನ, ಮೈಸೂರು, 2009.

5. ಕೆ.ಜಿ. ವಾಸುಕಿ (ಸಂ.), "ಕರ್ನಾಟಕದ ಪರಿಸರ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1995.

ಇಂದಿನ ಶಿಕ್ಷಣದಲ್ಲಿ ಮೌಲ್ಯಗಳು

[1] ವಿದ್ಯಾಶಂಕರ ಎಂ.ಹೆಚ್ , [2] ಚಂದನ ಎಸ್
[1] ಸಹಾಯಕ ಪ್ರಾದ್ಯಾಪಕರು, [2] ದ್ವಿತಿಯ ವರ್ಷ ಬಿ.ಎಸ್ಸಿ. ವಿದ್ಯಾರ್ಥಿನಿ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.

ಸಮರ್ಪಕವಾದ ಶಿಕ್ಷಣ ವ್ಯವಸ್ಥೆ ಸುಂದರವಾದ ಸಮಾಜವನ್ನು ಕಟ್ಟುತ್ತದೆ. ಇಂದು ಶಿಕ್ಷಣ ಕೇವಲ ಅಂಕಗಳಿಸುವುದೆ ತನ್ನ ಗುರಿಯಾಗಿಸಿದೆ, ವಿಶ್ವವಿದ್ಯಾನಿಲಯಗಳು ಅಂಕಪಟ್ಟಿಕೋಡುವ ಸಾಧನಗಳಾಗಿವೆ.ವಿದ್ಯಾರ್ಥಿ ಜೀವನವು ತನ್ನ ಮುಂದಿನ ಜೀವನದ ಋಣವಿ, ಆತ ವಿದ್ಯಾರ್ಥಿ ಆಗಿರುವಾಗಲೆ ಅನೇಕ ಕುಶಲತೆಗಳನ್ನು ಕಲಿತು ತನ್ನ ಜೀವನವನ್ನು ಸುಗಮವಾಗಿಸಿ, ತನ್ನ ವೈಯಕ್ತಿಕ ಜೀವನದಲ್ಲಿ ಸಫಲನಾಗಬಹುದು, ಮಕ್ಕಳಿಗೆ ಹೇಗೆ ಆರೋಚಿಸಬೇಕು ಎಂಬುವುದ್ದನು ಕಲಿಸಬೇಕು ಹೊರತಾಗಿ ಯಾವುದ್ದನ್ನು ಆರೋಚಿಸಬೇಕೆಂದಿಲ್ಲ, ಶಿಕ್ಷಕರು ತರಗತಿಯಲ್ಲಿ ಬೋಧನೆ ಮಾಡುವುದರ ಜೋತೆಯಲ್ಲಿ ಪ್ರತಿ ವಿಷಯವನ್ನು ಕ್ರಿಯಾತ್ಮಕ ಉದಾಹರಣೆಯೊಂದಿಗೆ ಅರ್ಥೈಸಬೇಕು . ಅದರಲಿತೆ ಒಳ್ಳೆ ವಿದ್ಯಾರ್ಥಿ ಸಮಾಜಕ್ಕೆ ಒಳ್ಳೆಯ ನಿಧರ್ಶನವಾಗುತ್ತಾನೆ.

ಶಿಕ್ಷಣದ ಅರ್ಥ:– ಮಾನವ ಜಗತ್ತಿನಲ್ಲಿಯೇ ಸರ್ವ ಶ್ರೇಷ್ಠ ಹಾಗೂ ಬುದ್ಧಿವಂತ ಪ್ರಾಣಿ, ಇವನಿಗೆ ವಾಕ್ ಶಕ್ತಿ, ಅಲೋಚನಾ ಶಕ್ತಿ, ಬುದ್ಧಿ ಶಕ್ತಿ ಹೀಗೆ ಹಲವಾರು ವಿಶೇಷ ಗುಣಗಳಿವೆ. ಆದರೂ ಕೂಡ ಇತರ ಪ್ರಾಣಿಗಳಿಗೆ ಹೋಲಿಕೆ ಮಾಡಿದರೆ ಇವನು ಅವಲಂಬಿ ಜೀವಿ, ಮುಂದಿನ ಭವಿಷ್ಯ ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವಿತದಲ್ಲಿ ತನ್ನ ಬುದ್ಧಿಯನ್ನು ಉಪಯೋಗಿಸಿ ವಿವಿಧ ಪ್ರಯೋಗಗಳೊಂದಿಗೆ ತನ್ನ ಜೀವನವನ್ನು ಸುಖಮಯ ಹಾಗೂ ಸುಂದರಮಯವನ್ನಾಗಿ ಮಾಡಲು ಪಡೆಯುವ ಅನುಭವಗಳೇ ಶಿಕ್ಷಣ.

ಮಾನವನು ತನ್ನ ಪೂರ್ವಜರಿಂದ ಸಂಪಾದಿಸಲ್ಪಟ್ಟ ಅನುಭವಗಳನ್ನು, ಉತ್ತಮ ಸಂಪ್ರದಾಯಗಳನ್ನು ಹಾಗೂ ರೂಢಿ ಪ್ರಜ್ಞೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ಸಾಗಿಸಿಕೊಂಡು, ಆರ್ಥಿಕ, ಸಾಮಾಜಿಕ, ಧಾರ್ಮಿಕ, ನೈತಿಕ ಹಾಗೂ ಕೈಗಾರಿಕಾ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿ ಆಧುನಿಕ ಜಗತ್ತನ್ನು ನಿರ್ಮಿಸಿರುವನು ಹಾಗೂ ಪ್ರಗತಿಯನ್ನು ಹೇಗೆ ಸಾಧಿಸಿದನು ಎಂಬ ಪ್ರಶ್ನೆಗಳಿಗೆ ಶಿಕ್ಷಣದಿಂದ ಉತ್ತರ ಸಿಗುತ್ತದೆ.

ಶಿಕ್ಷಣ EDUCATION

E – ಸಚ್ಚಾರಿತ್ರ್ಯ

D – ದೈವಿಗುಣ

U – ವಿಶ್ವಭ್ರಾತೃತ್ವ

C – ಸೃಜನಶೀಲತೆ

A – ಜಾಗೃತೆ

T – ಸತ್ಯ

I – ಐಕ್ಯತೆ

O – ವಿಧೇಯತೆ

N – ಉದಾರತೆ

ಶಿಕ್ಷಣ ಪರಂಪರೆ:– ವೇದಕಾಲೀನ ಶಿಕ್ಷಣ ಭಾರತೀಯರು ಜೀವನವನ್ನು ನೋಡುವ ದೃಷ್ಟಿ ಹಾಗೂ ಅವರ ಜೀವನ ಮೌಲ್ಯಗಳ ಪರಿಣಾಮವಾಗಿತ್ತು. ವಿದ್ಯಾರ್ಥಿಗಳು ಗುರುಕುಲಗಳಲ್ಲಿಯೇ ವಾಸಿಸುತ್ತಿದ್ದರು. ವಿದ್ಯಾರ್ಥಿಗಳು ತಮ್ಮ ಅಭಿರುಚಿಗೆ ತಕ್ಕ ವಿಷಯಗಳನ್ನು ಅಭ್ಯಸಿಸುತ್ತಿದ್ದರು. ಗುರು ಶಿಷ್ಯರ ನಡುವಿನ

ಸಂಬಂಧ ನೈತಿಕ ಶಿಸ್ತು, ವೈಯಕ್ತಿಕ ಲಕ್ಷ್ಯ, ಬೌದ್ಧಿಕ ಸ್ವಾತಂತ್ರ್ಯ ಮುಂತಾದವುಗಳು ಶಿಷ್ಯರು ಸರ್ವತೋಮುಖವಾದ ಬೆಳವಣಿಗೆಯನ್ನು ತರುವಲ್ಲಿ ಯಶಸ್ವಿಯಾಗಿದೆ.

ಮುಸ್ಲಿಂ ಕಾಲದ ಶಿಕ್ಷಣ ಜ್ಞಾನದ ಅರಿವು ಆಗದೆ ಮುಕ್ತಿ ಸಿಗದು ಎಂಬ ಆಶಯವನ್ನು ಹೊಂದಿತ್ತು ಇಸ್ಲಾಂ ಧರ್ಮದ ಸಿದ್ಧಾಂತಗಳು, ಕಾಯ್ದುಗಳು, ಸಾಮಾಜಿಕ ಪದ್ಧತಿಗಳು ಮುಂತಾದವುಗಳನ್ನು ಅಭಿವೃದ್ಧಿ ಪಡಿಸುವುದು ಶಿಕ್ಷಣದ ಇನ್ನೊಂದು ಗುರಿಯಾಗಿತ್ತು. ಕಂಠಪಾಠ ಮಾಡುವ ಪದ್ಧತಿ ಈ ಕಾಲದಲ್ಲಿ ಪ್ರಚಲಿತವಿತ್ತು. ಜ್ಞಾನದ ಅರಿವು ಆಗಬೇಕೆಂದರೆ ಶಿಸ್ತನ್ನು ಮೈಗೂಡಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಇದರಿಂದ ಉತ್ತಮ ವ್ಯಕ್ತಿತ್ವ ಸಾಧ್ಯವಿತ್ತು. ನೈತಿಕ ಜೀವನ ಮತ್ತು ವಿಧೇಯತೆ ವಿದ್ಯಾರ್ಥಿ ಜೀವನಕ್ಕೆ ಸಂದ ಮುಖ್ಯ ಶಿಕ್ಷಣವೆನಿಸಿತ್ತು.

ಬ್ರಿಟಿಷ್ ಕಾಲದ ಶಿಕ್ಷಣ ಬ್ರಿಟಿಷರೂ ಕ್ರಿಯಾತ್ಮಕ ಶಿಕ್ಷಣವನ್ನು ಭಾರತೀಯರಿಗೆ ಕೊಟ್ಟಿದ್ದರೆ ಅವರು 150 ವರ್ಷ ಭಾರತದಲ್ಲಿ ಅರಸರಾಗಿ ಉಳಿಯುತ್ತಿದ್ದಿಲ್ಲ. ಅವರ ಉದ್ದೇಶ ಸಮೃದ್ಧಿಗಾಗಿ ಇರದೆ ಬ್ರಿಟಿಷರ ಸೇವೆಗಾಗಿ ಇತ್ತು. 1854 ರಲ್ಲಿ ಭಾರತದಲ್ಲಿ ಶಿಕ್ಷಣದ ಪ್ರಗತಿಯನ್ನು ಕುರಿತಾಗಿ ವಿಚಾರ ಮಾಡಲು ಸಾಮಾನ್ಯ ಸಭೆ ಕರೆಯಲಾಗಿತ್ತು. ಇದನ್ನು ಭಾರತೀಯ ಶಿಕ್ಷಣದ ತಳಹದಿ ಎನ್ನಲಾಗಿದೆ.

ಸಂವಿಧಾನವು ಶಿಕ್ಷಣಕ್ಕೆ ಮಾಡಿರುವ ಅವಕಾಶಗಳು

* ದೇಶದಲ್ಲಿ ಉಚಿತ ಮತು ಕಡ್ಡಾಯ ಪ್ರಾಥಮಿಕ ಶಿಕ್ಷಣ
* ಅಲ್ಪ ಸಂಖ್ಯಾತ ವರ್ಗ ಮತ್ತು ಶಿಕ್ಷಣ
* ಧಾರ್ಮಿಕ ಶಿಕ್ಷಣ
* ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರ ಶಿಕ್ಷಣ
* ಸ್ತ್ರೀ ಶಿಕ್ಷಣ
* ಆಂಗ್ಲೋ ಇಂಡಿಯನ್‌ರ ಶಿಕ್ಷಣ

ಸಂವಿಧಾನ ಕೊಡಮಾಡಿರುವ ಅವಕಾಶದಿಂದ ನಮ್ಮ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಭಾಷಾ ಅಲ್ಪಸಂಖ್ಯಾತ ಮಕ್ಕಳಿಗೆ ಅವರದೇ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸಿಕೊಡುತ್ತಿವೆ. ಶಿಕ್ಷಣವನ್ನು ಒಬ್ಬ ಸ್ತ್ರೀ ಪಡೆದರೆ ಇಡೀ ಕುಟುಂಬವೇ ಸುಸಂಸ್ಕೃತವಾಗುತ್ತದೆ. ಸ್ತ್ರೀ ಶಿಕ್ಷಣವಿಲ್ಲದೆ ರಾಷ್ಟ್ರದಲ್ಲಿ ನಾವು ಸಾಮಾಜಿಕ ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸಲಾರೆವು. ಪ್ರಜಾಪ್ರಭುತ್ವವಾದ ಭಾರತಕ್ಕೆ ಸ್ವಾತಂತ್ರ್ಯ ದೊರೆತು ಅನೇಕ ವರ್ಷಗಳಾಗಿದ್ದರು ಸಂಪನ್ಮೂಲಗಳ ಕೊರತೆ ಹಾಗೂ ಬಡತನದಿಂದಾಗಿ ಅನೇಕ ಜನರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಔಪಾಚಾರಿಕ ಶಿಕ್ಷಣಕ್ಕೆ ಬದಲಿ ಉನ್ನತ ಶಿಕ್ಷಣ ವ್ಯವಸ್ಥೆಗೆ ದೂರ ಶಿಕ್ಷಣ ಎನ್ನುತ್ತಾರೆ. ನಮ್ಮ ಸಂವಿಧಾನ ಪ್ರತಿಯೊಬ್ಬರಿಗೂ ಶಿಕ್ಷಣ ದೊರಕಲೆಂದು ಅನೇಕ ಮಾರ್ಗಗಳನ್ನು ಅನುಸರಿಸಿದೆ.

ಶಿಕ್ಷಣವು ಸಂಸ್ಕೃತಿಯ ಬದಲಾವಣೆಯ ಪ್ರಮುಖ ಸಾಧನ:– ಶಿಕ್ಷಣವು ಮಾನವನನ್ನು ಕತ್ತಲೆಯಿಂದ ಬೆಳಕಿನತ್ತ ಕೊಂಡ್ಯೊಯುವ ಅಸ್ತ್ರ, ಶಿಕ್ಷಣ ಪ್ರಮುಖ ಗುರಿ ಎಂದರೆ ನೈಜತೆಯನ್ನು ಕಂಡುಕೊಳ್ಳುವುದು, ಮಾನವರು ತಮ್ಮ ವಾಸ್ತವಿಕ ಜೀವನದಲ್ಲಿ ಅನೇಕ ಮೂಢನಂಬಿಕೆಗಳನ್ನು ಸಂಪ್ರದಾಯಗಳನ್ನು ಆಚರಣೆ ಮಾಡಿಕೊಂಡು ಬಂದಿದ್ದಾರೆ, ಇಂತಹ ನಂಬಿಕೆ ದೂರಸರಿಸಿ ಉತ್ತಮವಾದ ಸಂಸ್ಕೃತಯನ್ನು ವೈಚರಿಕ ತಳಹದಿಯ ಮೇಲೆ ನಿಲ್ಲಬೇಕಾದರೆ ಶಿಕ್ಷಣವು ಪ್ರಮುಖವಾದ್ದದು.

ಸಾಮಾಜಿಕ ಬದಲಾವಣೆ ಹಾಗೂ ಶಿಕ್ಷಣ:– ಶಿಕ್ಷಣವು ಸಮಾಜ ಸುಧಾರಣೆಯ ಸಾಧನವಾಗಿದೆ. ಸಾಕ್ಷಾರತೆಯೊಂದೇ ನಮ್ಮನ್ನು ಪ್ರಗತಿಯತ್ತ ಒಯ್ಯಲು ಸಾಧ್ಯ. ಸಮಾಜದ ಅವಶ್ಯಕತೆಗಳಿಗೆ ಅನುಸರವಾಗಿ ನಿರ್ಮಿತವಾದ ಶಾಲಾ–ಕಾಲೇಜುಗಳು ಸಮಾಜ ಪ್ರಗತಿಯ ಸಾಧನಗಳು ಹೀಗಾಗಿ ಸಮಾಜ ಮತ್ತು ಶಿಕ್ಷಣಕ್ಕೂ ನಿಕಟ ಸಂಬಂಧವಿದೆ. ಶಿಕ್ಷಣ ಪಡೆದ ವ್ಯಕ್ತಿ ಸತ್ಯ, ನ್ಯಾಯ, ನೀತಿ, ಧರ್ಮ, ಪ್ರಾಮಾಣಿಕತೆ, ಶಿಸ್ತು, ನಮ್ರತೆಯಿಂದ ವರ್ತಿಸುವನು.

ಸಮರ್ಥ ಸಮಾಜ ನಿರ್ಮಾಣಕ್ಕೆ ನೈತಿಕ ಶಿಕ್ಷಣ:– ಅನೇಕ ದೇಶಾಳಲ್ಲಿ ಶಿಕ್ಷಕರು, ಪೋಷಕರನ್ನೇ ಗುಂಡಿಕ್ಕಿಕೊಂದ ಮಕ್ಕಳು, ದೆಹಲಿಯ ಪ್ರತಿಷ್ಠಿತ ಪ್ರೌಢಶಾಲೆಯೊಂದರ ಮಕ್ಕಳ ಲೈಂಗಿಕ ಪ್ರಕರಣ, ನಕಲೀನೋಟು, ಅನೇಕ ಸ್ವಾಮಿಗಳ ಕಾಮಲೀಲೆಗಳು, ವೈಶ್ಯಾವಾಟಿಕೆ ದಂಧೆಗಳು ಇವುಗಳೆಲ್ಲಾ ಇಂದಿನ ದಿನಪತ್ರಿಕೆಗಳಲ್ಲಿ ಆಗಾಗ ಕಾಣಿಸಿಕೊಳ್ಳುವ ತಲೆಬರಹಗಳು, ಇದರ ಬಗ್ಗೆ ಚಿಂತನೆ ನೆಡೆಸಿದಾಗ ಗಾಂಧೀಜಿಯವರು ಕಂಡ ರಾಮರಾಜ್ಯದ ಕನಸು ಭ್ರಮೆಯಾಗಿಯೆ ಉಳಿಯುತ್ತದೆ ಅನ್ನಿಸುತ್ತದೆ. ಬೆಳೆಯುವ ಸಿರಿ ಮೊಳಕೆಯಲ್ಲಿಯೇ, ಆದ್ದರಿಂದ ನೀತಿವಂತವಾದ ಯುವಜನತೆಯ ನಿರ್ಮಾಣಕ್ಕೆ ಸುಭದ್ರ ಅಡಿಪಾಯವಾಗುತ್ತದೆ. ಪುಣ್ಯಕೋಟಿಯ ಕತೆ ಕೇಳಿ ಕಣ್ಣೀರು ಸುರಿಸಿರುವ ವಿದ್ಯಾರ್ಥಿಗಳು ಇದ್ದಾರೆ. ಅಂದಿನ ವಿದ್ಯಾರ್ಥಿಗಳ ಮನದಲ್ಲಿ ಶಿವಾಜಿ ಮಹಾರಾಜರ ದೇಶಭಕ್ತಿ, ಕಿತ್ತೂರು ಚೆನ್ನಮ್ಮನವರ ಶೌರ್ಯ ಮೊದಲಾದ ವಿಚಾರಗಳು ವಿದ್ಯಾರ್ಥಿಗಳ ಮನಸ್ಸಲ್ಲಿರುತ್ತಿದ್ದವು. ಆದರೆ ಇಂದು ನೈತಿಕವಾದ ಶಿಕ್ಷಣವಿಲ್ಲದೆ ನಮ್ಮ ಸಮಾಜ ಎಷ್ಟು ಹದಗೆಟ್ಟಿದೆ. ಪಾಶ್ಚತ್ಯಾರ ಜೀವನಶೈಲಿ ಅಂಧಾನುಕರಣೆಗೆ ಕೋಮುಗಲಭೆ, ಪರಸ್ಪರ ಅಗೌರವ, ಭ್ರಷ್ಟಾಚಾರ ಮೊದಲಾದ ಕರಾಳ ಅಂಶಗಳಂದ ಸಮಾಜ ನರಳುತ್ತಿದೆ.

ಮೌಲ್ಯಧಾರಿತ ಶಿಕ್ಷಣ:– ಭಾರತದಲ್ಲಿನ ಜನಸಂಖ್ಯೆ ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ಗುರುತಿಸಲ್ಪಟ್ಟು ಒಳ್ಳೆಯ ಹುದ್ದೆ ಸಗಬೇಕೆಂದರೆ ವ್ಯಕ್ತಿಯ ನಡತೆ, ನಿಷ್ಠೆ, ಪ್ರಾಮಾಣಿಕತೆ ಹಾಗೂ ಶಿಕ್ಷಣ ಅತೀ ಮುಖ್ಯ ಅನೇಕ ಮೌಲ್ಯಗಳನೊಳಗೊಂಡ ಮನುಷ್ಯನ ವ್ಯಕ್ತಿತ್ವ ವಿಕಾಸಗೊಳ್ಳುತ್ತದೆ. ಇಂದಿನ ಶಿಕ್ಷಣದಲ್ಲಿ ಪುಸ್ತಕಗಳನ್ನು ಕಂಠಪಾಠಮಾಡಿ ಪರೀಕ್ಷೆಯಲ್ಲಿ ಬರೆಯುವುದೇ ಮೊದಲ ಗುರಿ. ನಾವು ಸಮಾಜದಲ್ಲಿ ಹೇಗೆ ಒಬ್ಬರನ್ನೊಬರು ಅರಿತು ಬಾಳಬೇಕು, ಜೀವನವನ್ನು ಸಮರ್ಪಕವಾಗಿ ರೂಪಿಸಿಕೊಳ್ಳುವುದು ಹೇಗೆ, ಅದಕ್ಕೆ ಅಗತ್ಯವಾದ ಕೌಶಲ್ಯಗಳಾದ ಕ್ರಿಯಾತ್ಮಕ ಚಿಂತನೆ, ಕರುಣೆ, ನಾಯಕತ್ವ ಗುಣ, ಆತ್ಮಸ್ಥರ್ಯ, ಹೊಂದಣಿಕೆ ಮನೊಭಾವ ಇವೆಲವನ್ನೂ ಶಿಕ್ಷಣದ ಜೊತೆಯಲ್ಲಿ ಕಲಿಯಬೇಕು.

ಸದ್ಗುಣಗಳ ಮೂಲಕವೇ ವ್ಯಕ್ತಿ ಸುಖ–ಸಂತೋಷವನ್ನು

ಪಡೆಯುವಂತೆ ಮಾಡುವುದೇ ಶಿಕ್ಷಣದ ಗುರಿ.

ಶಿಕ್ಷಣವನ್ನು ಸಮಾನಾಧಿಕರ ಪಟ್ಟಿಯಲ್ಲಿಡುವುದು ಅತ್ಯಂತ ಸೂಕ್ತ, ಶಿಕ್ಷಣಕ್ಕೆ ಬೇಕಾದ ತಾಂತ್ರಿಕ ಹಾಗೂ ಇತರೆ ಸೌಲಭ್ಯವನ್ನು ಒದಗಿಸಲು ಕೇಂದ್ರ ಹಾಗೂ ರಾಜ್ಯಗಳು ಸಹಕಾರಿಯಾಗುತ್ತವೆ.

ಶಿಕ್ಷಣದ ಖಾಸಗೀಕರಣ:– ಇತ್ತೀಚಿಗೆ ಖಾಸಗೀ ಶಿಕ್ಷಣ ಸಂಸ್ಥೆಗಳು ಬಹುತೇಕ ವ್ಯಾಪಾರ ಮನೋಭಾವ ತಾಳಿ ವ್ಯಾಪಾರೋದ್ಯಮ ಸಂಸ್ಥೆಗಳಾಗಿ ಮಾರ್ಪಾಡುತ್ತಿವೆ. ಅತ್ಯುಧಿಕ ಶುಲ್ಕ ಡೋನೇಷನ್ ಹಾವಳಿಯಿಂದ ಕೇವಲ ಶ್ರೀಮಂತರಿಗಷ್ಟೇ ಅವಕಾಶಗಳು ಲಭಿಸುತ್ತಿವೆ. ಉದ್ಯೋಗಗಳು ಪ್ರತಿಭಾವಂತರಿಗೆ ದೊರೆತರೂ ಹೆಚ್ಚಿನ ಪಾಲು ಹಣವುಳ್ಳವರದಾಗಿದೆ. ಶಿಕ್ಷಕ ಮತ್ತು ನೌಕರ ವರ್ಗ ಶೋಷಣೆಗೆ ಒಳಗಾಗುತ್ತಿದ್ದಾರೆ. ಖಾಸಗೀಗೊಂಡಿರುವ ನಮ್ಮ ಇಂದಿನ ಶಿಕ್ಷಣ ವ್ಯಾಪಾರವಾಗಿದೆ. ಆ ಶಾಲೆಯಲ್ಲಿ ಓದುವ ಮಗು, ಒಂದೇ ರೀತಿಯ ಬಟ್ಟೆ, ಅದಕ್ಕೆ ಟೈ, ಬೆಲ್ಟ್, ತಲೆಗೆ ಅದೇ ಬಣ್ಣದ ರಿಬ್ಬನ್, ಶಾಲೆಯಲ್ಲಿ ಕೊಡುವ ಊಟ ಮತ್ತು ಶಾಲೆಯ ಬಸ್ಸು ಅಲ್ಲೇ ಕೊಡುವ ಪುಸ್ತಕ ಕಡ್ಡಾಯ. ಹೀಗೆ ಕೇವಲ ಖಾಸಗಿ ಸಂಸ್ಥೆಯ ಮಾಲೀಕರ ಸ್ವಾರ್ಥಕ್ಕಾಗಿ ಮಕ್ಕಳ ಬದುಕು ಯಾಂತ್ರಿಕವಾಗುತ್ತಿದೆ. ಮಕ್ಕಳಿಗೆ ಕಥೆಗಳೆಂದರೆ ಇಷ್ಟ ಕಥೆಯ ಮೂಲಕ ಜೀವನದ ಅಗತ್ಯತೆಗಳನ್ನು, ನೈತಿಕ ಶಿಕ್ಷಣವನ್ನು ಕಲಿಸಬೇಕು. ಮುಂದೆ ಆ ವಿದ್ಯಾರ್ಥಿ ಇದನ್ನು ಗಮನದಲ್ಲಿಟ್ಟುಕೊಂಡು, ಅದೇ ಹಾದಿಯಲ್ಲಿ ನೆಡೆಯುತ್ತಾನೆ. ಒಳ್ಳೆಯ ಮಾರ್ಗವನ್ನು ಆಯ್ದು ಸಮಾಜಕ್ಕೆ ನಿರ್ಧಶನವಾಗುತ್ತಾನೆ. ಖಾಸಗೀ ಮತ್ತು ಸರ್ಕಾರಿ ಶಾಲೆಯ ಮಕ್ಕಳು ಕಲಿಯುವ ವಿಷಯಗಳು ಒಂದೇ ಆಗಿರಬೇಕು. ಮೌಲ್ಯಧಾರಿತ ಮತ್ತು ನೈತಿಕ ಶಿಕ್ಷಣಕ್ಕೆ ಮೊದಲ ಆಧ್ಯತೆ. ಚಟುವಟಿಕೆಯ ಮುಖಾಂತರ ಪಾಠ ಕಲಿಸಬೇಕು. ಶಾಲೆಯಲ್ಲಿ ಕಲಿತ ಮೌಲ್ಯಗಳನ್ನು ರೂಢಿಸಿಕೊಂಡು ಮಕ್ಕಳು ಸುಂದರ ಹಾದಿಯಲಿ ಸಾಗಬೇಕು.

ಮಾಧ್ಯಮವಾಗಿ ಮಾತೃಭಾಷೆ:– ಖ್ಯಾತ ಶಿಕ್ಷಣ ತಜ್ಞರು ಮತ್ತು ವಿವಿಧ ವರದಿಗಳು ಮಗುವಿನ ಮಾತೃಭಾಷೆಯೇ ಬೋಧನಾ ಮಾಧ್ಯಮವಾಗಿ ಎಲ್ಲಾ ಹಂತಗಳಲ್ಲಿರಬೇಕೆಂದು ಶಿಫಾರಸ್ಸು ಮಾಡಿವೆ. ಮಾತೃಭಾಷೆ ಬೋಧನಾ ಮಾಧ್ಯಮವಾದಾಗ ಮಾತ್ರ ಮಕ್ಕಳು ನಿರೀಕ್ಷಿತ ಮಟ್ಟದ ಜ್ಞಾನವನ್ನು ಸಂಪಾದಿಸಬಹುದು. ಇದರಿಂದ ಮಕ್ಕಳು ತಮ್ಮ ವಿಚಾರಗಳನ್ನು ಆತ್ಮವಿಶ್ವಾಸದಿಂದ ತಿಳಿಸುವಲ್ಲಿ ಸಮರ್ಥರಾಗುತ್ತಾರೆ. ಭಾರತದಲ್ಲಿ ಎಕರೂಪ ಭಾಷಾ ಪದ್ಧತಿ ಬರಬೇಕು. ಎಲ್ಲರೂ ಒಂದೇ ಭಾಷೆಯಲ್ಲಿ ವಿಷಯವನ್ನು ಕಲಿತರೆ ಮುಂದಿನ ವ್ಯಾಸಂಗಕ್ಕೆ ಅನುಕೂಲವಾಗುತ್ತದೆ. ಎಲ್ಲರೂ ಒಂದುಗೂಡಿ ಒಂದು ಭಾಷೆಯನ್ನು ರಾಷ್ಟ್ರೀಯ ಭಾಷೆಯನ್ನಾಗಿ ಇಪ್ಪಿಕೊಳ್ಳಬೇಕು. ಹಿಂದಿ ಭಾಷೆ ನಮ್ಮ ದೇಶದಲ್ಲಿ ಬಹುಭಾಗದ ಜನರು ಬಳಸುತ್ತಾರೆ. ಅಥವಾ ಇಂಗ್ಲೀಷ್ ಭಾಷೆಯನ್ನು ರಾಷ್ಟ್ರ ಭಾಷೆಯಾಗಿಸಿದರೆ ಅದು ವ್ಯಾವಹಾರಿಕ ಸಂಪರ್ಕ ಭಾಷೆಯಾಗಿದೆ. ಅದು ಶ್ರೀಮಂತ ಸಾಹಿತ್ಯ ಭಂಡಾರವನ್ನೊಳಗೊಂಡು ಪಾಶ್ಚಿಮಾತ್ಯ ವಿಚಾರಧಾರೆಯನ್ನು ಮತ್ತು ಸಂಸ್ಕೃತಿಯನ್ನು ಪರಿಚರಿಯಿಸುತ್ತದೆ. ಇಂಗ್ಲೀಷ್ ಭಾಷೆಯಿಂದ ಎಲ್ಲಾ ತಾಂತ್ರಿಕ ಮತ್ತು ವೈಜ್ಞಾನಿಕ ಜ್ಞಾನ ಲಭ್ಯವಾಗುತ್ತದೆ.

ಇಂದಿನ ದಿನಗಳಲ್ಲಿ ವೃತ್ತಿ ಶಿಕ್ಷಣ ಮುಗಿಸಿದ ಅನೇಕರು ಕಳ್ಳತನ ಮಾಡುವುದನ್ನು ನೋಡಿದ್ದೇವೆ. ಶಿಕ್ಷಣ ಪಡೆದ ವಿದ್ಯಾರ್ಥಿ ಇಂತಹ ಕೃತ್ಯ ಮಾಡುತ್ತಾನೆಂದಾದರೆ, ಆತನಿಗೆ ಸಿಕ್ಕ ಶಿಕ್ಷಣ ಎಂತಾಹದ್ದು..? ಉನ್ನತ ಶಿಕ್ಷಣದ ಗುರಿಗಳು ನಾಯಕತ್ವ ಗುಣವನ್ನು ಒದಗಿಸುವುದು, ತಂತ್ರಜ್ಞಾನಿಗಳನ್ನು ನಿರ್ಮಿಸುವುದು, ಹೀಗೆ ಅನೇಕ ಉದ್ದೇಶಗಳವೆ. ಆದರೆ ಪ್ರಸ್ತುತ ಶಿಕ್ಷಣದಲ್ಲಿ ಕೇವಲ ನಮಗೆ ಅಂಕಪಟ್ಟಿ ದೊರೆಯುತ್ತಿದೆ. ಹೊರತು ಯಾವ ಕೌಶಲ್ಯಗಳನ್ನು ಕಲಿಸಲಾಗುತ್ತಿಲ್ಲ. ಶಿಕ್ಷಕರು ಸಹ ಮಕ್ಕಳನ್ನು ಒಳ್ಳೆದಾರಿಗೆ ತರಲು ಪ್ರಯತ್ನಿಸುವುದು ಕಡಿಮೆ. ತಮ್ಮ ಸಂಬಳ ತಿಂಗಳ ಆರಂಭ್ಭದಲ್ಲಿ ಬಂದೇ ಬರುತ್ತದೆ. ಎನ್ನುವ ನಿಲುವನ್ನು ತಲುಪಿದ್ದಾರೆ.

ಬದುಕು ಅಧುನೀಕರಣವಾದಂತೆ ವಿದ್ಯಾರ್ಥಿ ಜೀವನ ಯಾಂತ್ರಿಕವಾಗಿದೆ. ವಿದ್ಯಾರ್ಥಿಗೆ ಶಿಸ್ತು ಬಹಳ ಮುಖ್ಯ. ನೈತಿಕ ಮೌಲ್ಯಗಳನ್ನು ಅನುಸರಿಸಿ ಶ್ರದ್ಧೆ, ಸತತ ಪ್ರಯತ್ನ, ಸಮಯ ಪ್ರಜ್ಞೆಯನ್ನು ಹೊಂದಿರಬೇಕು, ವಿದ್ಯಾರ್ಥಿಗಳು ಪರೀಕ್ಷೆ ತಪ್ಪಿಸಿವುದು. ನಕಲು ಮಾಡುವುದು, ಗುಂಪುಗಾರಿಕೆ, ರ್ಯಾಗಿಂಗ್ ಮಾಡುವುದು ತಪ್ಪು. ನಿರುದ್ಯೋಗ ಸಮಸ್ಯೆ ವಿರೋಧಿಸಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸುವುದು. ಆತ್ಮಹತ್ಯೆ ಮಾಡಿಕೊಳ್ಳುವುದು ಇವೆಲ್ಲವನ್ನು ಗಮನಿಸಿದರೆ ನಮ್ಮ ಇಂದಿನ ಶಿಕ್ಷಣದ ಮೌಲ್ಯ ಯಾವ ರೀತಿ ಇದೇ ಎಂಬುದು ಗೊತ್ತಾಗುತ್ತದೆ. ಶೇಕಡ 57 ರಷ್ಟು ಜನ ನಿರುದ್ಯೋಗಿಗಳಿದ್ದರೆ ಜ್ಞಾನ ಸಂಪಾದನೆಯ ವಿಷಯಕ್ಕೆ ಬಂದರೆ ಶೇಕಡ 55 ರಷ್ಟು ಜನರಿಗೆ ಗುಣಕಾರ, ಭಾಗಕಾರವೇ ಬರುವುದಿಲ್ಲ.

ಶಿಕ್ಷಣದ ಜೊತೆಗೆ ಜೀವನ ಪಯಣವನ್ನು ಸಾಗಿಸುವುದು ಹೇಗೆ, ಅದಕ್ಕೆ ಬೇಕಾದ ಕೌಶಲ್ಯತೆಗಳನ್ನು, ಮಾಹಿತಿಗಳನ್ನು ಕಲಿಸಬೇಕು, ಜ್ಞಾನ ಮುನ್ನಡೆಯಲ್ಲಿ ಕೌಶಲ್ಯದ ಅಭಿವೃದ್ಧಿ ಒಂದು ಪ್ರಮುಖ ಸಾಧನ, ಶಿಕ್ಷಣ ವಿಧಾನ ಕೆಲಸ ಮಾಡುವ ಅರ್ಹತೆ ಹೊಂದಿರುವ ಸಿದ್ಧ ಮಾನವ ಸಂಪನ್ಮೂಲವನ್ನು ನಿರ್ಮಿಸಬೇಕು. ಜ್ಞಾನ ಮತ್ತು ಕೌಶಲ್ಯಪೂರ್ಣ ಭಾರತ ನಿರ್ಮಾಣಕ್ಕೆ ಸಂಶೋಧನೆ ಅಗತ್ಯ. ಥಾಮ್ಸನ್ ರಾಯಿಟರ್ ಸಂಸ್ಥೆಯ ಪ್ರಕಟಣೆಯ ಪ್ರಕಾರ ಜನವರಿ 1, 1999 ರಿಂದ ಅಕ್ಟೋಬರ್ 31, 2008 ರಲ್ಲಿ ಚೀನ 5ನೇ ಸ್ಥಾನದಲ್ಲಿದೆ. ಇಷ್ಟೋಂದು ಮಾನವ ಸಂಪನ್ಮೂಲ ಇರುವ ಭಾರತ 12ನೇ ಸ್ಥಾನದಲ್ಲಿದೆ. ಮಾನವ ಸಂಪನ್ಮೂಲವನ್ನು ಸರಿಯಾಗಿ ಬಳಸಿದರೆ. ಅಭಿವೃದ್ಧಿ ಹೊಂದಿ ಸಫಲತೆಯ ಹಾದಿಯಲ್ಲಿ ಸಾಗಬಹುದು.

ಶಿಕ್ಷಣದ ನಿಯಮ, ಮೌಲ್ಯಗಳು ಸರಿಯಾಗಿಯೇ ಇದೆ. ಶಿಕ್ಷಣದ ವ್ಯವಸ್ಥೆಯಲ್ಲಿರುವವರ ದೆಸೆಯಿಂದ ಹದಗೆಟ್ಟಿದೆ. ಪೋಷಕರು ತಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕೃತಿಯನ್ನು ಕಲಿಸಬೇಕು. ಶಿಲ್ಪಗಳಾದಂತಹ ಶಿಕ್ಷಕರು ಶಿಕ್ಷಣದ ಗುರಿ ಮತ್ತು ಉದ್ದೇಶವನ್ನು ಅರಿತು ಮೌಲ್ಯಯುತವಾದ ವಿದ್ಯಾರ್ಥಿಯನ್ನು ರೂಪಿಸಬೇಕು. ಇದೇ ರೀತಿ ಎಲ್ಲರೂ ಶಿಕ್ಷಣ ಪಡೆದರೆ, ನಮ್ಮ ದೇಶ ಮುಂದುವರೆಯುತ್ತದೆ. ಆರ್ಥಿಕ, ಸಾಮಾಜಿಕವಾಗಿಯೂ ಮುಂದೆ ಸಾಗುತ್ತದೆ. ಮೌಲ್ಯಧಾರಿತ ಶಿಕ್ಷಣ ದೊರೆತಾಗ ಸಾಮಾಜದಲ್ಲಿ ಯಾವುದೇ ತಲೆತಗ್ಗಿಸುವಂತಹ ಘಟನೆ ನಡೆಯುವುದಿಲ್ಲ. ನಮ್ಮ ದೇಶ ಮುಂದೆ ಸಾಗಬೇಕೆಂದರೆ ಶಿಕ್ಷಣ ಬಹಳ ಮುಖ್ಯವಾಗಿದೆ.

ದೇವನೂರ ಮಹಾದೇವರ ಕಾದಂಬರಿಗಳಲ್ಲಿ ಮಹಿಳೆ, ಪಶುಸಂಗೋಪನೆ ಮತ್ತು ಆರ್ಥಿಕ ಸಬಲೀಕರಣ

ಡಾ.ಟಿ.ಎಂ.ಗೀತಾಂಜಲಿ
ಸಹಾಯಕ ಪ್ರಾದ್ಯಾಪಕರು, ಕನ್ನಡ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಮುಕ್ತ ಗಂಗೋತ್ರಿ, ಮೈಸುರು–57006

ದೇವನೂರ ಮಹಾದೇವರ 'ಒಡಲಾಳ' ಮತ್ತು 'ಕುಸುಮಬಾಲೆ' ಕನ್ನಡ ದಲಿತ ಸಾಹಿತ್ಯ ಕಾಲಮಾನದ ಮಹತ್ವಪೂರ್ಣ ಕಾದಂಬರಿಗಳು ಮತ್ತು ಕನ್ನಡ ಸಾಹಿತ್ಯದ ಮೇರು ಕೃತಿಗಳು. ಈ ಎರಡು ಕಾದಂಬರಿಗಳಲ್ಲಿ ಕರ್ನಾಟಕದ ಅತ್ಯಂತ ಕೆಳವರ್ಗಗಳಲ್ಲಿರುವ ದಲಿತ ಕೇರಿಗಳಲ್ಲಿ ವಾಸಿಸುವ ಜನತೆಯ ಬದುಕು ಅನಾವರಣಗೊಂಡಿದೆ. ಎರಡೂ ಕಾದಂಬರಿಗಳೂ ಮಹಿಳಾ ಪ್ರಧಾನ ಕಾದಂಬರಿಗಳಾಗಿದ್ದು ಮಹಿಳೆಯರ ಬದುಕು, ಮುಖ್ಯವಾಗಿ ದಲಿತ ಕೇರಿಗಳಲ್ಲಿ ತಾಯಿಯಾದವಳು ತನ್ನ ಮಕ್ಕಳನ್ನು ಸಾಕಿ ಸಲಹುವ ವಿಶೆಯಲ್ಲಿ ಎದುರಿಸಬೇಕಾದ ಸಂಕಷ್ಟಗಳು, ಹೋರಾಟಗಳು, ದಟ್ಟ ದಾರಿದ್ರ್ಯ ಬದುಕನ್ನು ಎದು–ರಿಸುವಲ್ಲಿ ಅವಳು ಅನುಭವಿಸುವ ಬವಣೆಗಳು, ನೋವು ಮತ್ತು ಸಂಕಟಾಪಗಳು ಕಾದಂಬರಿಯ ಕೇಂದ್ರ ವಸ್ತುವಾಗಿದೆ. ಮಹಾದೇವರವರು ಹೇಳುವಂತೆ ಭಾರತದಲ್ಲಿ 20ಕೋಟಿ ಜನತೆ (1970ರ ಅಂಕಿ ಅಂಶದ ಪ್ರಕಾರ: ಅವರ ಪ್ರಕಾರ ದಲಿತರು ಮತ್ತು ಮುಸ್ಲಿಮರೂ ಎರಡೂ ವರ್ಗದ ಜನತೆಯನ್ನು ಈ ಅಂಕಿ ಅಂಶ ಒಳಗೊಂಡಿದೆ) ಇಂತಹ ದಟ್ಟ ದಾರಿದ್ರ್ಯದ ಜೀವನ ಪ್ರಪಂಚದಲ್ಲಿ ಬದುಕುತ್ತಿದ್ದಾರೆ. ಮೇಲಿನ ಎರಡೂ ಕಾದಂಬರಿಗಳೂ ಇಂತಹ ಸಮಾಜದ ತೀರಾ ಕೆಳಸ್ತರದಲ್ಲಿ ವಾಸಿಸುವ ಕುಟುಂಬಗಳು ಹೊಟ್ಟೆಯ ಪಾಡಿಗಾಗಿ ಅವಲಂಬಿಸುವ ಪಶುಸಂಗೋಪನೆ, ಅವರ ಮೇಲಿನ ಅವರ ಅವಲಂಬನೆಯನ್ನೂ ಅಂಶಿಕವಾಗಿ ಚಿಕ್ರಿಸುತ್ತವೆ. ಮಹಾದೇವರ 'ಒಡಲಾಳ' ಮತ್ತು 'ಕುಸುಮಬಾಲೆ' ಈ ಎರಡೂ ಕಾದಂಬರಿಗಳನ್ನು ಅಭ್ಯಾಸ ಮಾಡುವುದರ ಮೂಲಕ ಕರ್ನಾಟಕದ ದಲಿತರ ಬದುಕಿನ ಅಭ್ಯಾಸ ಮಾಡುವುದು ಈ ಪ್ರಬಂಧದ ಉದ್ದೇಶವಾಗಿದೆ.

ದೇವನೂರ ಮಹಾದೇವರವರು (ಜನನ : 1948) ಸ್ವತಂತ್ರ ಭಾರತದಲ್ಲಿ ಜನಿಸಿದವರು. ಅವರ ಮೊದಲ ಕೃತಿ "ದ್ಯಾವನೂರು" (1973) ಕಥಾ ಸಂಕಲನ ಪ್ರಕಟವಾದದ್ದು ಸ್ವತಂತ್ರ್ಯ ಭಾರತದ ಹರೆಯದ ಕಾಲದಲ್ಲಿ, ಕನ್ನಡ ಸಾಹಿತ್ಯ ಲೋಕದಲ್ಲಿ 'ನವ್ಯ ಸಾಹಿತ್ಯ' ಪ್ರವರ್ಧಮಾನವಾಗಿದ್ದ ಸಂದರ್ಭದಲ್ಲಿ. ಮುಂದೆ ಮಹಾದೇವರವರು 1978 ರಲ್ಲಿ 'ಒಡಲಾಳ' ಮತು 1984 ರಲ್ಲಿ 'ಕುಸುಮಬಾಲ' ಎಂಬೆರಡು ಕಾದಂಬರಿಗಳನ್ನು ಪ್ರಕಟಿಸಿದ್ದರು. ಸಾಹಿತ್ಯದಲ್ಲಿ ಕೃತಿಗಳ ಪ್ರಕಟಣೆಯ ಕಾಲಮಾನ ಬಹು ಮುಖ್ಯವಾಗುತ್ತದೆ ಏಕೆಂದರೆ ಮಹಾದೇವರ ಕಾದಂಬರಿಗಳಲ್ಲಿ ಒಡನಾಡುವ ಸಂದರ್ಭದಲ್ಲಿ ಸ್ವತಂತ್ರ್ಯ ಭಾರತದ ಸಂದರ್ಭದಲ್ಲಿ ಈ ಘಟನೆಗಳು ನಡದದ್ದೆನಿಸುವುದಿಲ್ಲ. ಅವರ ಕಾದಂಬರಿಯ ಘಟನೆಗಳು ಸ್ವತಂತ್ರೋತ್ತರ ಭಾರತದಲ್ಲಿ ಘಟಿಸಿದರೂ ಕಾದಂಬರಿಯ ಪಾತ್ರಗಳು, ಮುಖ್ಯವಾಗಿ ಹೆಣ್ಣು ಮಕ್ಕಳು ಒಡನಾಡುವ ಪರಿಸರ 17 ಅಥವಾ 18ನೇ ಶತಮಾನದ ಬ್ರಿಟೀಷ್ ಆಡಳಿತ ವ್ಯವಸ್ಥೆಯಲ್ಲಿರುವಂತೆನಿಸುತ್ತದೆ.

ಮಹಾದೇವರ ವ್ಯಕ್ತಿತ್ವವನ್ನು 1979ರಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ಹುಟ್ಟು ಹಾಕಿದ ಸಂದರ್ಭದಲ್ಲಿ ಅವರು ಮಾಡಿದ ಆಶಯ ಭಾಷಣದ ಮೂಲಕ ಗುರುತಿಸಬಹುದು. 'ಸ್ನೇಹಿತರೇ, ನನ್ನೊಡನೆ ನಾನೇ ಮಾತನಾಡುತ್ತಿರುವೆ ಅಂದುಕೊಂಡು ನಿಮ್ಮೊಡನೆ ಮಾತನಾಡುವ ಯತ್ನ ಮಾಡುತ್ತಿರುವೇ. ಇಲ್ಲಿ ಒಟ್ಟಿಗಿರುವ ನಾವು ಅಲ್ಪ ಸ್ವಲ್ಪ ಬರಹಗಾರರು, ಸಾಹಿತ್ಯ ಸೃಷ್ಟಿಯಲ್ಲಿ ಆಸಕ್ತರು. ಇದರೊಡನೆಯೇ ಸಮಾಜದ ಬದಲಾವಣೆಗಾಗಿ ಆಸೆ ಪಡುವಂಥವರಾಗಿದ್ದೇವೆ. ಈ ಆಸೆ ನಮ್ಮನ್ನು ಸೇರಿಸಿದೆ. ಈಗ ನಡೆಯುತ್ತಿರುವ ಬಂಡಾಯ ಸಾಹಿತ್ಯ ಸಮ್ಮೇಳನವು ತನ್ನ ಹುಟ್ಟಿನೊಡನೆ ಗದ್ದಲವನ್ನೂ ಹುಟ್ಟಿಸಿಕೊಂಡಿದೆ. ಸ್ವಲ್ಪ ಆತುರವದರೂ ಅಂದರೆ ಏಳು ತಿಂಗಳಿಗೆ ಹುಟ್ಟಿದೆ. ಈಗ ನಮಗೆ ಉಳಿದುರುವ ಆಸೆಯಾದ ದಲಿತ ಸಂಘರ್ಷ ಸಮಿತಿಯ ಬೆಳವಣಿಗೆಯಲ್ಲಿ ಪ್ರಗತಿಪರರ ಒಡಗೂಡಿ ಅದು ತನ್ನ ಸಹಜ ಹುಟ್ಟನ್ನು ಕಂಡುಕೊಳ್ಳಬೇಕಿತ್ತು. ಏನೇ ಆಗಿದ್ದರೂ ಅದರ ಹುಟ್ಟು ತಪ್ಪಲ್ಲ. ಅದರಲ್ಲಿ ತಪ್ಪಿದರೆ ಅದರಿಂದಾಗಿ ಇಲ್ಲಿರುವ ನಮ್ಮಗಳ ಹೊಣೆ ಹೆಚ್ಚಿದಂತಾಗಿದೆ. ಅಷ್ಟೆ ಮೊದಲ ಹೆಜ್ಜೆಯಲ್ಲೇ ತೋರಿಸಿಕೊಡಬೇಕಾಗಿದೆ. ಅದಕ್ಕಿರುವ ರೂಪದಲ್ಲಿ ಎಂದೂ ನಮ್ಮಂತಹವರ ಆಸೆಗಳನ್ನು ಮುಟ್ಟಲಾರದು. ನಮ್ಮ ಆಸೆಗಳ ಪೂರೈಕೆಗಾಗಿ ಅದರ ಕಡೆ ನೋಡುವುದೇ ನಮ್ಮ ತಪ್ಪು. ಮೂರ್ಖತನ ಇತ್ಯಾದಿ. ಪರಿಷತ್ತು ನಿಲುಗಡೆಯಾದ ಸಾಹಿತ್ಯವನ್ನು ಮೆರೆಸುತ್ತಾ ಬಂದಿದೆ. ಅದರಿಂದ ಆಗುವುದು ಅದೇನೆ. ಅದಕ್ಕಾಗಿ ನಮಗೆ ಆಕ್ರೋಶವೂ ಅನಗತ್ಯ ನಾನೇ ಪರಿಷತ್ತಿನ ಅಧ್ಯಕ್ಷನಾದರೂ. ಸಿದ್ಧಲಿಂಗಯ್ಯನವರನ್ನು ಸಮ್ಮೇಳನದ ಅಧ್ಯಕ್ಷನಾಗಬಹುದು. ಇದಲ್ಲ ನಮಗೆ ಬೇಕಾಗಿರುವುದು. ನಮಗೆ ಬೇಕಾಗಿರುವುದು ನಡಿಗೆ, ಅದಕ್ಕಾಗಿ ನಾವು ಇಲ್ಲಿ ಕೂಡಿದ್ದೇವೆ. ನಮ್ಮನ್ನು ಇಂದು ಕಂಡುಕೊಳ್ಳೋಣ" ದೇವನೂರ ಮಹಾದೇವರವರು ವೈಯಕ್ತಿಕ ಬದುಕು ಮತ್ತು ಸಾಹಿತ್ಯದ ಬದುಕು ಎರಡೂ ದಾರಿಗಳಲಿ ಇಂತಹ ನಡಿಗೆಯನ್ನು ಕಾಯ್ದುಕೊಂಡಿದ್ದಾರೆ. ಆದ್ದರಿಂದಲೇ ಅವರು ನಮ್ಮ ವರ್ತಮಾನ ಕಾಲದ ಮಹತ್ವದ ಲೇಖಕರಾಗಿ ಬೆಳೆದಿದ್ದಾರೆ. ಮಹಾದೇವರವರು ತಮ್ಮ ಸಾಹಿತ್ಯ ಸೃಷ್ಟಿಯನ್ನು ಅತ್ಯಂತ ಎಚ್ಚರದ ನಡಿಗೆಯಲ್ಲಿ ಕಾದಂಬರಿಯ ನಂತರ ಅವರು 'ಎದೆಗೆ ಬಿದ್ದ ಅಕ್ಷರ' (2012) ವನ್ನು ಪ್ರಕಟಿಸಿರುವ ಕಾಲದ ಅಂತರ ಒಂದು ನಿದರ್ಶನ, ಮಹಾದೇವರ 'ಕುಸುಮಬಾಲೆ' ಕಾದಂಬರಿಯ ಕರಡಚ್ಚನ್ನು ತಿದ್ದಿಕೊಟ್ಟ ಎಲ್. ರಾಜಶೇಖರ್ ಹೇಳುವಂತೆ 'ಕುಸುಮಬಾಲೆ' ಕಾದಂಬರಿ ಮೂಲದಲ್ಲಿ ಈಗಿರುವುದಕ್ಕಿಂತ ನಾಲ್ಕುಪಟ್ಟು ದೊಡ್ಡದಿದ್ದು ಮಹಾದೇವರು ಪ್ರಕಟಿಸಿದ್ದು ತೊಂಬತ್ತು ಪುಟಗಳ 'ಕುಸುಮಬಾಲೆ'ಯನ್ನು ಎಂಬುದು ಇನ್ನೊಂದು ನಿದರ್ಶನ.

ಮಹಾದೇವರವರ 'ಒಡಲಾಳ' ಮತ್ತು 'ಕುಸುಮಬಾಲೆ' ಎರಡೂ ಕಾದಂಬರಿಗಳು ಕಥಾನಾಯಕಿ ಪ್ರಧಾನ ಕಾದಂಬರಿಗಳು, ಎರಡೂ ಕೃತಿಗಳ ಕಥಾನಾಯಕಿಯರೂ ಹೆಣ್ಣು ತಾಯಿಯಾಗಿ ಮಕ್ಕಳನ್ನು ಹೆತ್ತು–ಹೊತ್ತು ಅವರನ್ನು ಸಾಕಿ ಬೆಳಸಲು ಪಡುವ ಸಂಕಷ್ಟಗಳು, ಯಾತನೆ, ಭವಣೆಗಳನು ಅನಾವಣಗೊಳ್ಳಿಸುತ್ತವೆ. ಮಕ್ಕಳ ಏಳ್ಗೆಗಾಗಿ, ಅವರನ್ನು ಅಭಿವೃದ್ಧಿ ದಾರಿಯಲ್ಲಿಯಲ್ಲಿ ನಡಸಲಕ್ಕಾಗಿ ತಾಯಿ ಜೀವ ತುಳಿಯುವ ಹರಸಾಹಸದ ಹಾದಿ ಎರಡೂ ಕೃತಿಗಳ ಕೇಂದ್ರ ವಸ್ತುವಾಗಿದೆ. ಎರಡೂ ಕಾದಂಬರಿಗಳ ಈ ಕೇಂದ್ರ ಮಹಿಳಾ ಪಾತ್ರಗಳು ನಮ್ಮ ಸಾಮಾಜಿಕ ಸಂದಭದಲ್ಲಿ

ಅತ್ಯಂತ ಕಳಸ್ತರದ ಅಸ್ಪೃಶ್ಯರೆನಿಸಿಕೊಂಡೂ ಉರಾಜೆ ಹೊಲಗೇರಿಯಲ್ಲಿ ನೆಲೆಸಿರುವ ಪಾತ್ರಗಳಾದ್ದರಿಂದ ಭಾರತೀಯ ಸಾಮಾಜಿಕ ಸಂದರ್ಭಗಳು ದಲಿತ ಮಹಿಳೆಯರಿಗೆ ನೀಡಿರುವ ಹಕ್ಕುಬಾಧ್ಯತೆಗಳೇನು? ಸಮಲತ್ತುಗಳೇನು? ಅವಳೂ ಬದುಕು ರೂಪುಗೊಳ್ಳುವ ರೀತಿ ಹೇಗೆ? ಸಮಾಜದ ಅತ್ಯಂತ ಕೆಳಸ್ತರದ ದಲಿತ ಕುಟುಂಬಗಳಲ್ಲಿ ಮಹಿಳೆ ವಹಿಸುವ ಪಾತ್ರವೆಂತಹದು? ಇಂತಹ ಕುಟುಂಬಗಳಲ್ಲಿ ಮಹಿಳೆಯ ಸ್ಥಿತಿಗತಿಗಳು ಹೇಗೆ ರೂಪುಗೊಳ್ಳುತ್ತವೆ ಎಂದು ಪರಿಶೀಲಿಸಲು ಮಹಾದೇವರ 'ಒಡಲಾಳ' ಮತ್ತು 'ಕುಸುಮಬಾಲೆ' ಎರಡು ಕಾದಂಬರಿಗಳ ಪರಿಶೀಲನೆಯಿಂದ ಸಾಧ್ಯವಾಗಿರುತ್ತದೆ.

ಒಡಲಾಳ:– 'ಒಡಲಾಳ' ಕಾದಂಬರಿಯ ಕೇಂದ್ರ ಪಾತ್ರವಾದ ಸಾಕವ್ವ 'ಚರುಮಕ್ಕೂ ಮೂಳೆಗೂ ಹೊಂದಾಣಿಕೆ ತಪ್ಪಿತ್ತಾದ್ದರಿಂದ ಮಯ್ಯ ಚರುಮಗಳು ಸ್ವತಂತ್ರವಾಗಿ ಅಲ್ಲಾಡುತ ತಮ್ಮಷ್ಟಕ್ಕೆ ತಾವಿದ್ದ"ಂತಹ ಅರವತ್ತರ ಗಡಿ ದಾಟಿರಬಹುದಾದ ಮುದುಕಿ, ಅವಳೇ ಮಗ ಸಣ್ಣಯ್ಯನೆದುರು ಹೇಳಿಕೊಳ್ಳುವಂತೆ 'ಹುಟ್ಟಿದ್ದು ಹೆಣ್ಣು ಹೆಂಗ್ಯಾದರೂ ಗಂಡ್ಸ ಮೀರ್ಸಿ ಕಚ್ಚ ಕಚ್ಚಕಟುಕೊಂಡು ಗೇದು ಸಂಪಾದ್ಸಿವ್ನಿಕನೊ ಭೂಪತಿ. ಅಸ್ತಿ ನನ್ನ ಸ್ವಾರ್ಜಿತ" ಒಂದು ಕಾಲದಲ್ಲಿ ಪೂರ್ತವೆ ಹಂಚು ಹೊದ್ದು ಮಿಡುಗಾರಿಕೆ ಮಾಡಿ ಆ ಹಟ್ಟಿ ಇಂದು ಹಂಚು ತರಲು ಕಯ್ಲಾಗದೆ ಮುಂದಿನ ವರುಷಕ್ಕೆ ಹಂಚಾಕಿಸಿದರಾಯಿತು ಅಂದುಕೊಂಡು, ಅಖಾಲಿಗೆ ಹುಲ್ಲೂ ತೆಂಗಿನ ಗರೀನ ಕವುಚೀ ಕವುಚೀ ಏಗ ಹಂಚೂ ಹುಲ್ಲೂ ಅನೂನ್ಯವಾಗಿದ್ದ ರೂಪಕ್ಕೆ ಬಂದಿದ್ದವು. ಸಾಕವ್ವನ ಐದು ಮಕ್ಕಳು, ಆರ್ ಮೊಮ್ಮಕ್ಕಳಿಗೆ ಆಶ್ರಯ ತಾಣ ಆ ಹಟ್ಟಿ

ಕಾದಂಬರಿ ಶೀರ್ಷಿಕೆ ಸೂಚಿಸುತ್ತಿರುವಂತೆ 'ಒಡಲಾಳ' ಒಡಲಿನ (ಹೊಟ್ಟೆಯ) ಆಳದ ಕಥೆಯನ್ನು ಅನಾವಣಗೊಳಿಸುವ ಕೇಂದ್ರವಸ್ತು ಕಾದಂಬರಿಯದಾಗಿದೆ. ಸಾಕವ್ವ ಹಾಗೂ ಅವಳ ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಹಾಗೂ ಅವಳ ಕೇರಿಯ ಇತರ ಜನರೂ ಮತ್ತು ಅವಳನ್ನು ಸುತ್ತುವರೆದಿರುವ ವ್ಯವಸ್ಥೆ ಹೀಗೆ ಪ್ರತಿಯೊಂದು ಘಟನೆ, ಪ್ರತಿಯೊಂದು ಮಾತು, ಎಲ್ಲರ ಚಟುವಟಿಕೆಗಳು ಒಡಲಿನ (ಹೊಟ್ಟೆಯ) ಸುತ್ತಲೂ ಗಿರಕಿ ಹೊಡೆಯುವಂತೆ ಕಥೆಯನ್ನು ನೇಯ್ದಿರುವುದು ಕಾದಂಬರಿಕಾರನ ಸೂಕ್ಷ್ಮ ಕಲಾಪ್ರಜ್ಞೆಯುಅ ನಿರರ್ಶನ. ಸಾಕವ್ವ ದೇವರಿಗೆ ಬಿಟ್ಟಿದ ಹುಂಜ ಕಾಣೆಯಾಗುವುದರೊಂದಿಗೆ ಕಥೆ ಪ್ರಾರಂಭವಾಗುತ್ತದೆ. ಆ ಹುಂಜದಲ್ಲಿ ತನ್ನ ಪ್ರಾಣವಿರುವಂತೆ ಸಾಕವ್ವ ಅದನು ಹುಡುಕುವ ದಾರಿಯಲ್ಲಿ ವ್ಯವಸ್ಥೆಯ ಬಲಿಷ್ಠ ವ್ಯಕ್ತಿ ಇದಿರು ತನ್ನಲಿದ್ದ ಇನ್ನೊಂದು ಹುಮ್ಮಸ್ಸನ್ನು ಕಳೆದುಕೊಂಡು ಸೋತು ಕೈಚಲ್ಲಿ ನಿಲ್ಲುವುದನ್ನು ಕಾದಂಬರಿನಮ್ಮ ಮನಮುಟ್ಟಿಸುತ್ತದೆ. ಸಾಕವ್ವ ಹುಟ್ಟಿದ್ದು ಹೆಣ್ಣೆಂಗ್ಸಾದ್ರೂ ಗಂಡ್ಸ ಮೀರಿ ಕಚ್ಚೆ ಕಟ್ಟುಕೊಂಡು ಗೇದು ಸಂಪಾದಿಸಿರುವ ಹಟ್ಟಿಯ ಒಡತಿಯಾದ್ದರಿಂದ ಹಟ್ಟಿಯಲ್ಲಿರುವ ಯಾರೊಬ್ಬರನ್ನೂ ಅವಳು ಗಣನೆಗೆ ಇಟ್ಟಿಲ್ಲ. ಸೊಸೆ ಸಣ್ಣಯ್ಯನ ಹೆಂಡತಿ ಚಲುವಮ್ಮನಿಗೆ 'ನನ್ನಸ್ತಿ ಅಂಗೈಯಗಲನೆ ಇರ್ಲಕ್ಕಾ ಗರ್ತಿ .. ಅದರಲ್ಲೇ ನೀನೂವೆ ಉಣ್ತಿರೋದು' ಎಂದು ಬೆಂಕಿಯಂತೆ ಮೈ ಉರಿಸಬಲ್ಲಳು. ಹರಿಯದ ಪುಟಗೌರಿ ಬರಿಯುವ ನವಿಲಿನ ಚಿತ್ರವನ್ನು ತಗಾ ಅದ್ಯಾರೋ ಒಬ್ಬಳು ಕುಟ್ಟೊ ಬತ್ತ ಬುಟ್ಟು ಹುಟ್ಟೊ ಶ್ಯಟ ನೋಡ್ಕತ್ತಲ್ಲಂತೆ ... ಎಂದು ಹೊಟ್ಟೆ ಪಾಡಿನ ಮುಂದೆ ಕಲೆ ಲೇವಿಡಿಯ ವಸ್ತುವೆಂದು ತೋರಿಸಿಕೊಡುವವಳು. ಸಾಕವ್ವನ ಹಿರಿಮಗ ಕಾಳಣ್ಣ ಹೇಳುವಂತೆ ಎತ್ತಪ್ಪನೋರ ದನದ ಹಟ್ಟಿಯಂತಹ ಒಂದು ಹಟ್ಟಿಯಂತಹ ಒಂದು ಹಟ್ಟಿಯನ್ನೆನಾದರೂ ಸಾಕವ್ವ ಕಟ್ಟಿಸಿದರೆ ಎನ್ನೆಂಗಾಡ್ತಿದ್ಲೊ. ಕುಟುಂಬದ ಒಳಗೆ ಅಧಿಕಾರ, ದರ್ಪ ಹಾಗೂ ರೋಷಾವೇಷಗಳನ್ನು ತೋರುವಲ್ಲಿ ಮತ್ತು ಕಡ್ಡಿ ಎರಡು ತುಂಡು ಮಾಡುವಂತೆ ಮಾತನಾಡುವಲ್ಲಿ ಸಾಕವ್ವ ಯಾವುದೇ ಗಂಡಸಿಗೇನೂ ಕಡಿಮೆ ಇಲ್ಲ. ಇಂತಹ ಸಾಕವ್ವನ ಜೀವ ಝಗ್ ಎಂದು ಅವಳು ಸಾಮರ್ಥ್ಯ ಕಳೆದುಕೊಂಡು ನಡಗುವುದು ಕಾಳಣ್ಣ ಕದ್ದು ತಂದಿದ್ದ ಕಡಲೆಕಾಯಿ ಮೊಟ್ಟೆಯನ್ನು ಜಪ್ತಿಮಾಡಲು ಬಂದ ಪೋಲಿಸಿನವರ ಇದಿರು ಸ್ವತಂತ್ರ ಭಾರತದ ವ್ಯವಸ್ಥೆಯಲ್ಲಿಯೂ ದಲಿತ ಕುಟುಂಬಗಳು ಹೊಟ್ಟೆ ತುಂಬಿಸಿಕೊಳ್ಳಲು ಅಸಾಧ್ಯವಾದ ಪರಿಸ್ಥಿತಿಯನ್ನು ಮೊದಲು ನಿರ್ಮಾಣ ಮಾಡುವ ವ್ಯವಸ್ಥೆ, ಅವರು ಬದುಕುವ ಪ್ರಯತ್ನವಾಗಿ ಮಾಡುವ ಪ್ರಯತ್ನ ಕಾನೂನು ಬಾಹಿರವೆಂದು ಮತ್ತೂ ಸುಲುಗೆಗೆ ಗುರಿಯಾಗುವಂತಹ " Jungle Raaj" ಕಾನೂನು ವ್ಯವಸ್ಥೆ ಇಲ್ಲಿ ಜಾರಿಯಲ್ಲಿರುವುದನ್ನು ತೋರಿಸುತ್ತದೆ.

ಕಾಡುಗಳಲ್ಲಿ ತನ್ನ ಎಳೆ ಮರಿಗಳನ್ನು ಸಾಕಬೇಕಾದ ಹೊಣೆ ಹೊತ್ತ ಚಿರುತೆಗಳು ಹತ್ತೇಂಟು ಕಿ.ಮೀ. ಸವೆಸಿ ತಮ್ಮ ಶಕ್ತಿಯನ್ನೆಲ್ಲಾ ವ್ಯಯಿಸಿ ಬೇಟೆಯಾಡಿ ಹಿಡಿದು ಎಳೆದು ತಂದು ಮರದ ಮೇಲೆ ಇಡುತ್ತವೆ. ಆದರೆ ಚಿರುತೆಗಿಂತ ಬಲಶಾಲಿಯಾದ ಸಿಂಹ ಆ ಸುಲಭದ ಅಹಾರಕ್ಕಾಗಿ ಒಂದೆರಡು ರೆಂಬೆಗಳನ್ನು ಹತ್ತಿ ಬಂದಾಗ ಚಿರುತೆ ಪ್ರಾಣಭಯದಿಂದ ಮರದ ಮೇಲಿನ ಕೊಂಬೆಗೆ ಹತ್ತಿ ಬೇಟೆಯನ್ನು ಕೈಚೆಲ್ಲುತ್ತದೆ. ಚಿರುತೆಗಿಂತ ಬಲಶಾಲಿಯಾದ ಸಿಂಹ ಚಿರುತೆಯ ಬೇಟೆಯನ್ನು ಕಬಳಿಸುತ್ತದೆ. ಹಾಗೆ ಸಾಕವ್ವನ ಕೋಳಿಯ ಮೇಲೆ ಯಾವ ಅಧಿಕಾರವಿಲ್ಲದಿದ್ದರೂ ಸಾಕವ್ವನ ಕೋಳಿಯನ್ನು ಇನ್ಸ್‌ಪೆಕ್ಟರ್ ಕಬಳಿಸುತ್ತಾನೆ. ಹಟ್ಟಿಗೆ ಪೋಲಿಸರು ಪ್ರವೇಶಿಸಿದಾಗ ಎದೆ ಝಲ್ ಎಂದು ಸಾಮರ್ಥ್ಯ ಕಳೆದುಕೊಂಡಿದ್ದ ಮುದುಕಿ ಸಾಕವ್ವ ಇನ್ಸ್‌ಪೆಕ್ಟರ್‌ಗೆ ತನ್ನ ಮತ್ತೊಂದು ಕೋಳಿಯನ್ನು ಹಿಡಿಸಿಕೊಡುವಂತೆ ಕೇಳಿಕೊಳ್ಳುವುದು ಮತ್ತು ಅದರ ಪ್ರತಿರೂಪವಾಗಿ ಮತ್ತೊಂದು ಹುಂಜವನ್ನು ತೋರಿಸಲು ಹೋಗಿ ಬೆಸ್ತು ಬೀಳುವುದು ಹೆಣ್ಣಿನಲ್ಲಿ ಕಾಣಬಹುದಾದ ಸಹಜ ದುರ್ಬಲತೆಯಾಗಿದೆ. ಯಾವುದೇ ಹಟ್ಟಿಯ ಗಂಡಸು ಸಾಕವ್ವನಂತೆ ಮೂರ್ಖತನದಿಂದ ಮೋಸ ಹೋಗಲಾರ.

ಕುಸುಮಬಾಲೆ:– 'ಕುಸುಮಬಾಲೆ' ಕಾದಂಬರಿ ಕೂಡ ಕಥಾನಾಯಕಿ ಪ್ರಧಾನವಾದ ಕಾದಂಬರಿಯಾದರೂ ಶೀರ್ಷಿಕೆ ಸೂಚಿಸುತ್ತಿರುವಂತೆ ಕುಸುಮಬಾಲೆ ಪಾತ್ರಕ್ಕಿಂತಲೂ, ಅವಳ ಅಜ್ಜಿ ಅಕ್ಕಮಹಾದೇವಮ್ಮನ ಪಾತ್ರಕ್ಕೆ ಹೆಚ್ಚು ಒತ್ತು ಬಿದ್ದಿದ್ದೆ. ಕುಸುಮಬಾಲೆಯಂತಹ ಮೂಖ ಹೆಣ್ಣುಗಳ ದಯಾಹೀನ ಸ್ಥಿತಿಯನ್ನು ವರ್ಣಿಸುವುದು ದೇವನೂರ ಮಹಾದೇವರ ಸಾಹಿತ್ಯ ಪ್ರಜ್ಞೆಗೆ ಅಸಾದ್ಯವಾದುದು, 'ಕುಸುಮಬಾಲೆ' ಕಾದಂಬರಿಯ ಕಥಾ ಚೌಕಟ್ಟನ್ನು ಚಿತ್ರಕಾರನೊಬ್ಬ ನಾಲ್ಕೈದು ಚಿತ್ರಗಳಲ್ಲಿ ಬಣ್ಣದ ಮೂಲಕ ಕುಂಚದಿಂದ ಬಿಡಿಸಿದಂತೆ ಬಿಡಿಸಬಹುದು:

1. ಕತ್ತಲಕೋಣೆಯಲ್ಲಿ ಕಣ್ಣೀರು ಹರಿಸುತ್ತ ಮೂಕಳಾಗಿ ಕೂತ ಎಳೆಯ ಹುಡುಗಿ ಬಾಣಂತಿ ಕುಸುಮಬಾಲೆಯ ಒಂದು ಚಿತ್ರ

2. ಅಕ್ಕಮಹಾದೇವಮ್ಮ ಮತ್ತು ಅವಳ ಮಗ ಯಾಡರ ನಿರ್ಗತಿಕ ಬದುಕು-ಬವಣೆಯ ಚಿತ್ರ

3. ಅರಿಯದೋಪದಿಯಲ್ಲಿ ಕೊಲೆಯಾದ ಚೆನ್ನನ ಒಂದು ಚಿತ್ರ

4. ಮಗನ ಕೊಲೆಯನ್ನು ಅರಿಯದ ತಂದೆ-ತಾಯಿಗಳ ಮಗನ ನಿರೀಕ್ಷೆಯಲ್ಲಿ ಕಾದು ಕುಳಿತಿರುವ ಚಿತ್ರ

5. ಗುರುಸಿದ್ಧಾವ ಮತ್ತು ದಲಿತ ಸಂಘರ್ಷ ಸಮಿತಿಯ ಮತ್ತೊಂದು ಚಿತ್ರ.

ಕಾದಂಬರಿಯಲ್ಲಿ ಕಾದಂಬರಿಕಾರರು ಹೀಗೆ ಚಿತ್ರಗಳನ್ನು ಜೋಡಿಸುವ ಕೆಲಸವನ್ನು ಮಾಡಿದ್ದಾರೆನಿಸುತ್ತದೆ.

ಕಾಡುಗಳಲ್ಲಿ ವಾಸಿಸುವ ಪ್ರತಿಯೊಂದು ಜಾತಿಯ ಪ್ರಾಣಿಗಳು ಅದರದ್ದೇ ಆದ ನೀತಿ ನಿಯಮಗಳನ್ನು ಪಾಲಿಸಿಕೊಂಡು ಬಾಳ್ವೆ ಮಾಡುತ್ತವೆ, ಮುಖ್ಯವಾಗಿ ಮಾಂಸಹಾರಿ ಪ್ರಾಣಿಗಳ ಜಾತಿಗಳಲ್ಲಿ (ಪ್ರದೇಶ ಸಾರ್ವಭೌಮತ್ವ) ದ ಹೋರಾಟ ಸತತವಾಗಿ ನಡೆಯುತ್ತಲೇ ಇರುತ್ತದೆ. ಯಾವುದೇ ಪ್ರಾಣಿ ಬಲಶಾಲಿಯಾಗಿರುವಷ್ಟು ಕಾಲ ಮಾತ್ರ ಒಂದು ಪ್ರದೇಶದ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿರುವುದು ಸಾಧ್ಯ. ಮತ್ತೊಂದು ಬಲಶಾಲಿ ಬಂದಾಗ ಅವೆರಡರ ನಡುವೆ ಕಾಳಗ ನಡೆದರೆ ಗೆದ್ದ ಪ್ರಾಣಿ ಪ್ರದೇಶದ ರಾಜನಾಗುತ್ತದೆ. ಸೋತ ಪ್ರಾಣಿಯ ಜೀವನ ಮುಕ್ತಾಯವಾದಂತೇ ಸರಿ, ಉದಾ:- ಹುಲಿಗಳ ಜಾತಿಯಗಳಲ್ಲಿ ಹೆಣ್ಣು ಹುಲಿಯೊಂದು ಒಂದು ಪ್ರದೇಶದ ಒಡೆತನ ಸ್ಥಾಪಿಸಲು ಅವಕಾಶವಿರುತ್ತದೆ. ಅದಕ್ಕೆ ನಾಲ್ಕು ಹೆಣ್ಣು ಮರಿಗಳು ಜನಿಸಿದಲ್ಲಿ ಬಲಶಾಲಿಯಾದ ಅದರ ಯಾವುದೇ ಮಗಳು ತನ್ನ ತಾಯಿಯ ಪ್ರದೇಶಕ್ಕೆ ಒಡತಿಯಾಗುತ್ತದೆ. ಅದರ ಅಧಿಪತ್ಯವನ್ನು ಒಪ್ಪಿಕೊಂಡು ಒಟ್ಟಿಗೆ ಇರುವುವು ಇರುತ್ತವೆ. ಇರಲಾಗದವು ದೂರ ಸರಿದು ಬೇರೆ ಪ್ರದೇಶವನ್ನು ಹುಡುಕಿ ಹೊರಡುತ್ತವೆ. ಅಥವಾ ತಾಯಿ ಇನ್ನು ಗಟ್ಟಿಯಾಗಿದ್ದರೆ ಅದರ ಮಕ್ಕಳು ತಾಯಿಯ ಪ್ರದೇಶದ ಪಕ್ಕದ ಪ್ರದೇಶದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿಕೊಳ್ಳುತ್ತವೆ. ಸಿಂಹಗಳ ಬದುಕಿನ ಕಾನೂನು ಇದಕ್ಕೂ ಬೀಷಣವದುದು. ಅಣ್ಣ-ತಮ್ಮಂದಿರು ಕುಡು ಬಾಳ್ವೆ ನಡೆಸಿದರೂ ತನ್ನ ಸಹೋದರರ ಮರಿಗಳನ್ನು ಗಂಡು ಸಿಂಹ ಕೊಲ್ಲಲ್ಲು ಮತ್ತು ತನ್ನದೇ ಮರಿಗಳನ್ನು ಬೆಳಸಲು ಸದಾ ಹೊಂಚು ಹಾಕುತ್ತಿರುತ್ತವೆ. ಹೆಣ್ಣುಸಿಂಹ ತನ್ನ ಮರಿಗಳನ್ನು ಕಾಪಾಡಿಕೊಳ್ಳಲು ವಿಪರೀತ ಪ್ರಾಯಾಸ ಪಡುತ್ತದೆ ತಾಯಿ ಸಿಂಹ ಬೇಟೆಗೆ ಹೋದಾಗ ಗಂಡು ಸಿಂಹ ಮರಿಗಳನ್ನು ಕೊಂದು ಹಾಕುತ್ತವೆ. ಗಂಡು ಸಿಂಹಗಳ ನಡುವೆ ಕಾಳಗ ನಡೆದು ಯಾವ ಸಿಂಹ ವಿಜಯಿಯಾಗುತ್ತದೆಯೋ ಅದು ತನ್ನದೇ ವಂಶದ ಕುಡಿಗಳನ್ನು ಬೇಳಸಲು ಮಾತ್ರ ಅವಕಾಶ ನೀಡುತ್ತದೆ. ಸೋತ ಸಿಂಹ ಆ ಪ್ರದೇಶದಿಂದ ದೂರವಾಗಿ ತನ್ನದೇ ಹೊಸ ಬಾಳನ್ನು ಕಟ್ಟಿಕೊಳ್ಳಬೇಕು. ಇಲ್ಲವೇ ದುರ್ಬಲತೆಯಿಂದ ಸಾಯಬೇಕು. ಮನುಷ್ಯನ ಬದುಕಿನ ಚರಿತ್ರೆಯಲ್ಲಿ ಹರಿದ ರಕ್ತಪಾತಗಳನ್ನು ಸೃಷ್ಟಿಯಲ್ಲಿ ಮನುಷ್ಯನೂ ಒಂದು ಪ್ರಾಣಿ ಎಂದು ತೋರಿಸುತ್ತ, ಇದಕ್ಕಿಂತಲೂ ಭಿನ್ನವಾದ ಕಥೆಯನ್ನೇನೂ ಹೇಳುವುದಿಲ್ಲ. ಇಪ್ಪತೊಂದನೇ ಶತಮಾನದ ಅಣು ತಂತ್ರಜ್ಞನ ಹಾಗೂ ಅಂತರ್ಜಾಲ ಯುಗದಲ್ಲಿ ಕೂಡ ಮನುಷ್ಯನ ಚರಿತ್ರೆ ಮತ್ತೊಂದು ಮಗದೊಂದು ವೇಷದಲ್ಲಿ ಇದಕ್ಕಿಂತಲೂ ಭಿನ್ನವಾಗಿ ಏನೂ ಸಾಗುತ್ತಿಲ್ಲ. ಅಮೇರಿಕಾದ ಸಾರ್ವಭೌಮತ್ವದ ವಿಜಯಗಳು, ಐಎಸ್‌ಎಸ್ ಉಗ್ರರ ಹತ್ಯಾಖಾಂಡ ಮನುಷ್ಯ ಎಷ್ಟೇ ನಾಗರೀಕನಾದರೂ ಅತ್ಯಂತ ಆಳದಲ್ಲಿ ಅವನು ಸೃಷ್ಟಿಯಲ್ಲಿ ಒಂದು ಪ್ರಾಣಿ ಮಾತ್ರ, ತನ್ನದೇ ಸಾರ್ವಭೌಮತ್ವದ ಸಂಸ್ಥಾಪನೆ ಅವನಲ್ಲಿ ಪ್ರಾಣಿ ಸಹಜವಾಗಿ ಇದ್ದೇ ಇದೆ ಎಂಬುದನ್ನು ಎತ್ತಿ ತೋರುತ್ತಾ ಚರಿತ್ರೆ ಸಾಗುತ್ತಿದೆ.

'ಒಡಲಾಳ'ದ ಸಾಕವ್ವನ ಕುಟುಂಬದ ಮೇಲೆ ಪೋಲೀಸ್ ವ್ಯವಸ್ಥೆ ತೋರುವ ದೌರ್ಜನ್ಯ ಪ್ರಾಣಿ ಪ್ರಪಂಚದಷ್ಟೆ ನಿರ್ದಯವಾದುದು, 'ಕುಸುಮಬಾಲೆ' ಯ ಅಕ್ಕಮಹಾದೇವಮ್ಮನ ಬದುಕಿನಲ್ಲಿ ಅವಳ ಗಂಡನ ಮನೆಯವರು ತೋರುವ ಅಧಿಕಾರದ ಹಿಂಸೆ ಮತ್ತು ಕುಸುಮ ಹಾಗೂ ಚೆನ್ನರ ಬದುಕಿನಲ್ಲಿ ಅವಳ ಸ್ವಂತ ಕುಟುಂಬದವರು ಮಾಡಿರಬಹುದಾದ 'ಮರ್ಯಾದೆ ಹತ್ಯೆ' ಪ್ರಾಣಿ ಪ್ರಪಂಚದಷ್ಟೇ ಭೀಕರವಾದುದು ಮತ್ತು ಕ್ರೂರವಾದುದು.

ಯಾವುದೇ ನಾಗರೀಕ ಪ್ರಪಂಚದ ನೀತಿ-ನಿಯಮಗಳು, ಧರ್ಮ-ಅಧರ್ಮಗಲು, ಕರ್ಮ-ಕೋಟಲೆಗಳು ಮತ್ತು ನಾಗರೀಕ ಪ್ರಪಂಚಕ್ಕಾಗಿ ಸೃಷ್ಟಿಗೊಂಡ ಕಾನೂನುಗಳ ಪರಿಧಿಗೆ ಬರುವವರು ಆಯಾ ಸಮಾಜದ ಎರಡನೇ ದರ್ಜೆ (Middle Class People) ಪ್ರಜೆಗಳು ಮಾತ್ರವಾಗಿರುತ್ತಾರೆ. ಸಂಪೂರ್ಣ ಶ್ರೀಮಂತರು ಎಲ್ಲವನ್ನೂ ಹಣದಿಂದ ಹೇಗೆ ಕೊಳ್ಳಬಲ್ಲವರಾಗಿರುತ್ತಾರೋ ಹಾಗೆ ಕಾನೂನನ್ನೂ ಕೊಳ್ಳಬಲ್ಲವರಾಗಿರುತ್ತಾರೆ, ಸಂಪೂರ್ಣ ನಿರ್ಗತಿಕರು ಯಾವುದೇ ಕಾನೂನಿನ ಪರಿಧಿಯೊಳಗೆ ಬರಲಾಗದಷ್ಟು ಅಸಾಧ್ಯ ಬದುಕನ್ನು ನಡೆಸುತ್ತಿರುತ್ತಾರೆ. ಭಾರತೀಯ ಸಮಾಜದಲ್ಲಿ ದಲಿತರ ಬದುಕು ದಟ್ಟ ದಾರಿದ್ರ್ಯದ ಕಾರಣ ಅತ್ಯಂತ ನಾಜೂಕಾಗಿ ಸಾಗುತ್ತಿರುತ್ತದೆ. ಕಠಿಣ ಪರಿಸ್ಥಿತಿ ಒದಗಿದೊಡನೆ ಅವರ ಬದುಕು ಪ್ರಾಣಿ ಪ್ರಪಂಚದಷ್ಟೇ ನಿಕೃಷ್ಟತೆಯಡೆ ಸರಿದು ಬಿಡುತ್ತದೆ. 'ಕುಸುಮಬಾಲೆ'ಯ ಅಕ್ಕಮಹಾದೇವಮ್ಮನ ಬದುಕು ಇಮ್ಮತಹ ಪ್ರಾಣಿ ಪ್ರಪಂಚದಷ್ಟೆ ನಿರ್ದಯತೆಯಿಂದ ರೂಪುಗೊಂಡದ್ದಾಗಿದೆ. ಸಮಾಜ ಅವಳು ಬದುಕಬಹುದಾದ ಎಲ್ಲ ಅವಕಾಶಗಳನ್ನೂ ಅವಳಂದ ಕಿತ್ತುಕೊಂಡು ಶೋಷಣೆಗೆ ಗುರಿಪಡಿಸುತ್ತದೆ. ಇಂತಹ ಬದುಕಿನಲ್ಲಿ ಅಕ್ಕಮಹಾದೇವಮ್ಮ ಮದುವೆಯಾಗಿ ಹನ್ನೆರಡು ತಿಂಗಳಿಗೆ ಜೀತಗಾರನೊಬ್ಬನಿಗೆ ಹುಟ್ಟಿರಬಹುದಾದ ಮಗುವಿಗೆ ಗಂಡನ ಹೆಸರೇಳಿಕೊಂಡು ಬಾಳ್ವೆ ಮಾಡಲು ಮುಂದಾದರೇ ಅಂತಹ ಅಸತ್ಯಕ್ಕೆ ಅವಳನ್ನು ಸುತ್ತುವರೆದಿರುವ ಸಮಾಜ, ಕಾನುನುಗಳನ್ನು ರೂಪಿಸಿದ ನಾಗರೀಕತೆ, ಅಂತಹ ಪರಿಸ್ಥಿತಿಗೆ ಹೆಣ್ಣೊಂದನ್ನು ನೂಕುವ ಧಾರ್ಮಿಕ ವ್ಯವಸ್ಥೆ ನಾಚಿ ತಲೆ ತಗ್ಗಿಸಬೇಕೇ ಹೊರತು ಅಕ್ಕಮಹಾದೇವಮ್ಮನಲ್ಲ. ಅದೇ ಅವಳ ಮುಂದಿನ ಎರಡನೇ ತಲೆಮಾರಿನವಳಾದ ಕುಸುಮಾಳ ಮಾನಸಿಕ ಅಸ್ವಸತೆಗೆ ಕಾರಣವಾಗಿ ಹೀಗೆ ಸಮಾಜದೆಡೆ, ಆ ಸಮಾಜದ ಧರ್ಮ, ಕಾನೂನುಗಳ ಸುವ್ಯವಸ್ಥೆಯೆಡೆ ಬೆರೆಳೆತ್ತಿ

ತೋರಿಸಲೂ ಹೇಸಿಗೆ ಬರುವಷ್ಟು ರೋಗಿಷ್ಟ ಸಾಮಾಜಿಕ ಬದುಕು ಮತ್ತು ರೋಗಿಷ್ಟ ಧಾರ್ಮಿಕ ಬದುಕು ಮುಗ್ಧ ಕುಸುಮಾಳ ಉಸಿರುಗಟ್ಟಿಸಿರುವುದನ್ನು ಅವಳ ಪಾತ್ರ ತೆರೆದು ತೋರುತ್ತದೆ. ಮಹಾದೇವರವರು ಹೇಳುವಂತೆ ಭಾರತದಲ್ಲಿ ಇಪ್ಪತ್ತು ಕೋಟಿ (1974ರ ಅಂಕಿ–ಅಂಶದ ಪ್ರಕಾರ) ದಲಿತರ ಬದುಕು ಹೀಗೆ ಉಸಿರು ಕಟ್ಟಿಸುವ ಭೀಷಣ ಪ್ರಪಂಚದಲ್ಲಿ ಸಾಗುತ್ತಿದೆ. ಹೀಗೆ ನಿರ್ಧಯ ಪ್ರಪಂಚದ ಬಲಿಪಶುಗಳ ಬದುಕನ್ನು, ಏಕತಾನತೆಯಿಂದ ಸುಗಮವಾಗಿ ಬಾಳ್ವೆ ಸಾಗಿಸಲಾಗದವರ ಬದುಕನ್ನು ಕಟ್ಟಿಕೊಡಲು ಹೊರಟ 'ಕುಸುಮಬಾಲೆ' ಕಾದಂಬರಿ 'ಒಡಲಾಳ' ಕಾದಂಬರಿಯಂತೆ ಕಲಾತ್ಮಕ ನೇಯ್ಗೆಗೆ ದಕ್ಕಲಾಗದೆ ಹೋಗಿದೆ. ಗಾರಸಿದ್ಧಾವ ಮತ್ತು ದಲಿತ ಸಂಘರ್ಷ ಸಮಿತಿ ಸಭೆಯ ಚಿತ್ರಣಗಳು ಕೃತಿಯ ಬಂಧದೊಂದಿಗೆ ಹೊಂದಾಣಿಕೆಗೊಳ್ಳುವುದಿಲ್ಲ.

ದೇವನೂರ ಮಹಾದೇವರ ಕೃತಿಗಳ ಅಂತಃಸತ್ವ ರೂಪುಗೊಳ್ಳುವುದು ಅವರು ಹುಟ್ಟಿ ಬೆಳೆದ ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕಿನ ದ್ಯಾವನೂರು ಮತ್ತು ಕವಲಂದೆ ಗ್ರಾಮಗಳ ದಲಿತ ಕೇರಿಗಳಲ್ಲಿ, ಎರಡೂ ಕಾದಂಬರಿಗಳಲ್ಲಿ ಮಹಾದೇವರವರು ಬಳಸುವ ಭಾಷೆ ನಂಜನಗೂಡು ಮತ್ತು ಚಾಮರಾಜನಗರಗಳ ಘಾಸಲೆಯ ಆಡುನುಡಿ, ಕಾದಂಬರಿಕಾರರು ಇಂತಹ ಆಡುನುಡಿಯನ್ನು ಗದ್ಯಮಾಧ್ಯಮದಲ್ಲಿ ಬಳಸುವುದರಿಂದ ಕವಿಯದವನು ತನ್ನ ಭಾವಗೀತಗಳಲ್ಲಿ ತೋರಬಹುದಾದ ಭಾವತೀವ್ರತೆ, ಏಕಾಗ್ರತೆ ಮತ್ತು ಪಾತ್ರಗಳಲ್ಲಿ ಪರಕಾಯ ಪ್ರವೇಶ ಸಾಮರ್ಥ್ಯಗಳು ಕಾದಂಬರಿ ಎಂಬ ಗದ್ಯ ಮಾಧ್ಯಮದಲ್ಲಿ ಲಭ್ಯವಾಗಿವೆ. ಆದರೆ ಕೃತಿಯ ಕೇಂದ್ರ ಪಾತ್ರಗಳು ಅನುಭವಿಸುವ ಯಾತನೆ, ದುಃಖ ಮತ್ತು ಸನ್ನಿವೇಶಗಳ ಕಠೋರತೆಯನ್ನು ಮಹಾದೇವರು ಬಳಸುವ ಭಾಷೆ ಅಭಿವ್ಯಕ್ತಿ ನಿಡುವಲ್ಲಿ ಸೋಲುತ್ತವೆ. ಉದಾಹರಣೆಗೆ 'ಕುಸುಮಬಾಲೆ' ಯಲ್ಲಿ ಅಕ್ಕಮಹಾದೇವಮ್ಮ ಮತ್ತು ಯಾಡರ ಬದುಕಿನ ಕಠೋರತೆ ಓದುಗರ ಮನಮುಟ್ಟುವಂತೆ ಚಿತ್ರನಗೊಳ್ಳುವುದಿಲ್ಲ. ಕೃತಿಕಾರ ಆ ಪಾತ್ರಗಳನ್ನು ಬಗ್ಗೆ ಹೊಂದಿರುವ ಉತ್ಕಟ ಪ್ರೀತಿಯ ಕಾರಣ, ತ್ರೀವ್ರ ಭಾವ ತೀವ್ರತೆಯ ಕಾರಣ ಆ ಪಾತ್ರಗಳ ಬದುಕಿನ ಕಠೋರತೆ ಚಿತ್ರಿತವಾಗದೇ ಹೋಗಿದೆ.

ಪಶುಸಂಗೋಪನೆ ಮತ್ತು ಆರ್ಥಿಕ ಸಬಲೀಕರಣ:– 'ಒಡಲಾಳ' ಮತ್ತು 'ಕುಸುಮಬಾಲೆ' ಎರಡೂ ಕಾದಂಬರಿಗಳ ಬದುಕಿನ ಕೇಂದ್ರ ಬಿಂದು ಪಶು ಸಂಗೋಪನೆಯಾಗಿದೆ. ಎರಡೂ ಕಾದಂಬರಿಗಳೂ ನಂಜನಗೂಡಿನ ಸಮೀಪದ ಹಳ್ಳಿಯೊಂದರ ಹೊಲೆಗೇರಿಯ ಬದುಕನ್ನು ಕಟ್ಟಿಕೊಡುತ್ತವಾದ್ದರಿಂದ ದಟ್ಟ ದಾರಿದ್ರ್ಯದ ಅವರ ಬದುಕಿನಲ್ಲಿ ಬದುಕಲು ಇರುವ ಒಂದೇ ಆಧಾರಸ್ತಂಭವೆಂದರೆ, ಅವಲಂಬನೆಯೆಂದರೆ ಅವರು ಸಾಕಿರುವ ಹುಂಜ, ಕೋಳಿ, ಕುರಿ, ಎತ್ತು, ಹಸು, ಎಮ್ಮೆ, ಆಡು, ಕೋಣ ಮುಂತಾದ ಪಶುಗಳು, ಉಳುವ ಭೂಮಿ ಅವರದಾಗಿರಬಹುದು, ಇಲ್ಲದಿರಬಹುದು, ಅವರು ಬದುಕುತ್ತಿರುವ ಜೋಪಡಿ ಅವರದಾಗಿರಬಹುದು ಇಲ್ಲದಿರಬಹುದು ಆದರೆ ಇಂದಿಗೂ ಭಾರತದ ಯಾವುದೇ ಹಳ್ಳಿಯಲ್ಲಿ ದಲಿತರ ಮತ್ತು ಹೊಲೆಗೇರಿಗಳ ಜನತೆಯ ಆಸ್ತಿ ಅವರು ಹೊಂದಿರುವ ಪಶುಗಳಾಗಿರುತ್ತವೆ. ಬಡತನ, ಹಸಿವು, ದಾರಿದ್ರ್ಯದ ಬದುಕು ತನ್ನಷ್ಟಕ್ಕೆ ತಾನೇ ಪಶುಸಂಗೋಪನೆಗೆ ದಾರಿ ಮಾಡಿಕೊಡುತ್ತದೆ. ಆ ಮೂಖ ಪ್ರಾಣಿಗಳಲ್ಲದೆ ಇನ್ನಾವ ಆಸ್ತಿಯ ಬಡೆಯರಾಗಲೂ ಅವರ ಸುತ್ತಣ ಸಮಾಜಿಕ ವ್ಯವಸ್ಥೆ ಮತ್ತು ಆರ್ಥಿಕ ವ್ಯವಸ್ಥೆ ಅವರಿಗೆ ಅವಕಾಶ ನೀಡುವುದಿಲ್ಲ.

'ಒಡಲಾಳ' ಕಾದಂಬರಿಯ ಕೇಂದ್ರ ಹಸಿವು ಮತ್ತು ಕಳೆದ ಹುಂಜಕ್ಕಾಗಿ ಹುಡುಕಾಟ ಎರಡೂ ಒಂದೇ ನಾಣ್ಯದ ಎರಡು ಮಗ್ಗಲುಗಳಾಗಿವೆ. 'ಒಡಲಾಳ'ದಲ್ಲಿ ಸಾಕವ್ವ ಕಳೆದು ಹೋದ ತನ್ನ ಹುಂಜಕ್ಕಾಗಿ ಪರದಾಡುವುದು. ಹೊಲೆಗೇರಿಯ ಪ್ರತಿಯೊಬ್ಬರೂ ಒಂದು ಹೊತ್ತಿನ ಹಂಬಲಗಾಗಿ ಪರದಾಡುವುದು, ಸಾಕವ್ವನ ಗಂಡು ಮಕ್ಕಳಾದ ಕಾಳಣ್ಣ ಮತ್ತು ಸಣ್ಣಯ್ಯ ಎತ್ತಪ್ಪನೋರ ದನದ ಹಟ್ಟಿಯನ್ನು ಕುರಿತು ಮಾತನಾಡುತ್ತಾ, 'ಆ ಎತ್ತಪ್ಪನೋರ ದನದ ಹಟ್ಟಿ ಇಲ, ಅಲ್ಲರೋ ದನ, ಎಮ್ಮೆ ತಾನೇ ಏವಯ್ಯ!, ಒಂದೊಂದೂ ಆನಥರ ಹುಟ್ಟಿದಪ್ಪ ಅವು. ಅಂಥ ಒಂದು ಇಮ್ಮ ಸತ್ರಿಗಪ್ಪ.. ನಮ್ಮ ಕೇರಿ ದರಿದ್ರನಾರು ಒಂಜಿನ ಹಿಂಗ್ತದ.. ಹೀಗೆ ಕಾದಂಬರಿಯ ಎಲ್ಲ ಪಾತ್ರಗಳ ಸಂಭಾಷಣೆಯ ಕೇಂದ್ರ ಬಿಂದು ಕೂಡಾ ಪಶುಗಳನ್ನು ಕುರುತೇ ನಡೆಯುತ್ತದೆ. ಇದು 'ಒಡಲಾಳ' ಕಾದಂಬರಿಯ ಸಾಕವ್ವನ ಕುಟುಂಬದ ಬದುಕು ಮತು ಪರಿಸ್ಥಿತಿ ಮಾತ್ರವಲ್ಲ, ಸ್ವತಂತ್ರ ಭಾರತದ ಅರವತ್ತಮೂರು ವರ್ಷಗಳ ನಂತರದ ದಲಿತರ ಬದುಕಿನ ಕಥನವಾಗಿದೆ. ಎಂಬುದು ದುರಂತಕರ.

'ಕುಸುಮಬಾಲೆ' ಕಾದಂಬರಿಯಲ್ಲಿ ಕುಸುಮಬಾಲೆಯ ಕುಟುಂಬವಾದ ಅಕ್ಕಮಹಾದೇವಮ್ಮ ಮತ್ತು ಯಾಡ ಆರ್ಥಿಕವಾಗಿ ಬೆಳೆಯುವುದು ಯಾಡ ಮೇಯಿಸಲು ಕೊಂಡೊಯ್ದಿದ್ದ ಹಸುಗಳು, ಕುರಿಗಳು, ದನಗಳನ್ನು ಜಾಣತನದಿಂದ ಮಾರಾಟ ಮಾಡಿ ಜೀರ್ಣಿಸಿಕೊಂಡಿದ್ದರಿಂದ, ಬರೀ ಈ ಪಶುಗಳು ಮಾತ್ರವಲ್ಲ ಯಾಡನಿಗೆ ಕೋಟಾನೋಟಿನ ಹಣ ದೊರೆತದ್ದನ್ನು ಅವರ ಶ್ರೀಮಂತಿಕೆಗೆ ಕಾರಣವಾಗಿ ಕಾದಂಬರಿ ಚಿತ್ರಿಸುತ್ತದೆ. ಯಾವುದೇ ಭೂಮಿಯಿಂದಾಗಲೀ ಮತ್ತು ಪಶು ಸಂಗೋಪನೆಯಿಂದಾಗಲೀ ಶ್ರೀಮಂತಿಕೆ ಎಂದೂ ಎಲ್ಲೂ ಯಾರಿಗೂ ಸಾಧ್ಯವಾಗಿಲ್ಲ. ಕಾದಂಬರಿಯಲ್ಲಿ ಯಾಡನ ಮುಂದಿನ ತಲೆಮಾರಾದ ಕುಸುಮಾಳ ತಂದೆ ಸೋಮಪ್ಪನವರ ಆರ್ಥಿಕ ಸಬಲೀಕರಣವನ್ನು ಅಳೆಯುವುದು ಅವರಿಗೆ ಇರುವ ದನಗಳ ಸಂಖ್ಯೆಯಿಂದ. ಹಾಗೇ ಕಾದಂಬರಿಯಲ್ಲಿ ದಲಿತಕೇರಿಯ ಜನರ ಪ್ರತಿನಿತ್ಯದ ಬದುಕು ಕೋಳಿ, ಕುರಿ ಮತ್ತು ಹಸು, ದನಗಳೊಂದಿಗೇ ಸಾಗುತ್ತಿರುತ್ತದೆ.

ಅಡಿ ಟಿಪ್ಪಣಿಗಳು:

1. ಟಿ. ಪಿ. ಅಶೋಕ: "ಯಾರ ಜಪ್ತಿಗೂ ಸಿಗದ ನವಿಲುಗಳು", (ಪ್ರ: ಅಭಿನವ ಚಾರುರ್ಮಾಸಿಕ, ಮೇ, ಸೆಪ್ಟೆಂಬರ್ 99, ಜನವರಿ 2000) ಪುಟ: 19

2. ದೇವನೂರ ಮಹದೇವ: "ದೇವನೂರ ಮಹದೇವ ಅವರ ಸಮಗ್ರ ಕೃತಿಗಳು: ಪ್ರ: ಪತ್ರಿಕೆ ಪ್ರಕಾಶನ , ನಂ 9, ಪೂರ್ವ ಆಂಜನೇಯ ರಸ್ತೆ, ಬಸವನಗುಡಿ, ಬೆಂಗಳೂರು–560 004 ಪುಟ: 59

3. ಅದೇ, ಪುಟ:64

4. ಅದೇ, ಪುಟ: 66

5. ಅದೇ, ಪುಟ: 71

6. ದೇವನೂರ ಮಹಾದೇವ: "ಕನ್ನಡ ಸಾಹಿತ್ಯ ಮೀಮಾಂಸೆ" ಸಂಪುಟ 1, (ಪ್ರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ) ಪ್ರ. ಮು. 2001, ಪುಟ: 23

7. ದೇವನೂರ ಮಹದೇವ: "ದೇವನೂರ ಮಹದೇವ ಅವರ ಸಮಗ್ರ ಕೃತಿಗಳು" ಪ್ರ: ಪತ್ರಿಕೆ ಪ್ರಕಾಶನ, ನಂ.9, ಪೂರ್ವ ಆಂಜನೇಯ ರಸ್ತೆ, ಬಸವನಗುಡಿ, ಬೆಂಗಳೂರು–560 004, ಪುಟ: 78

ಗಣಕದ ಇಂಗ್ಲೀಷ್ ಕೀಲಿಮಣೆಯಲ್ಲಿ ಕನ್ನಡದ (ಭಾರತೀಯ ಭಾಷೆಗಳ) ಬೆರಳೊತ್ತು (ಮುದ್ರಣ) ಇಂಗ್ಲೀಷ್‌ಗಿಂತ ನಿಧಾನವಾಗಿದೆ..... ಏಕೆ?

ಡಾ. ದತ್ತಾತ್ರೇಯ. ವಿ. ಎನ್
ಕೇಣಿ ರಸ್ತೆ, ಹೊನ್ನೇಕೇರಿ, ಅಂಕೋಲ–581 314

ಭಾರತೀಯ ಭಾಷೆಗಳು ಅಮೂಲಿಕವಾದ ಮಾದರಿ ಅಪಿಯೊಂದನ್ನು ಹೆಚ್ಚುವರಿಯಾಗಿ ಹೊಲಿಸುವುದು ಅವುಗಳ ಭವಿಷ್ಯದ ದೃಷ್ಟಿಯಿಂದ ಉತ್ತಮ (ನಾವು ಇಂಗ್ಲೀಷ್ ಕೀಲಿಮಣೆಯಿಂದ ಕನ್ನಡವನ್ನು ಬೆರಳಚ್ಚು ಅನುಭವಿಸಿತ್ತುವಾದರೂ ಇಂಗ್ಲೀಷ್ ಕೀಲಿಮಣೆಯಿಂದ ಇಂಗ್ಲೀಷ್ ಅಪಿಯಿಂದ ಬೆರಳಚ್ಚು ಶಕ್ತಿಯನ್ನು ನಾವು ವೇಗ ಕಡಿಮೆಯಿಂದ. ಇದು ಏಕೆ ಹೇಗಿದೆ? ಈ ಬಗ್ಗೆ ವಿಚಾರ ಮಾಡಬೇಕು). ನಾನು ಮಾದರಿ ಅಪಿಯೊಂದನ್ನು ಇಲ್ಲಿ ಮಂಡಿಸುತ್ತಿದ್ದೇನೆ.

ಇಂದು ನಮ್ಮಲ್ಲಿ, ಗಣಕದಲ್ಲಿ ಸಾಮಾನ್ಯವಾಗಿ ಇಂಗ್ಲೀಷ್ ಕೀಲಿಮಣೆಯು ಬಳಕೆಯಲ್ಲಿದೆ. ಇದರಲ್ಲಿ ಒಟ್ಟೂ ಎರಡು ವಿಭಾಗ (ಶಿಫ್ಟ್)ಗಳಿದ್ದು, ಒಂದನೇ ಶಿಫ್ಟ್‌ನಲ್ಲಿ 54 ಮತ್ತು ಇನ್ನೊಂದರಲ್ಲಿ 54..... ಹೀಗೆ ಒಟ್ಟೂ 108 ಅಕ್ಷರ ಚಿನ್ಹೆ/ಅಪಿ ಚಿನ್ಹೆಗಳ ಮುದ್ರಣಕ್ಕೆ ಅವಕಾಶ ಇದೆ.

ಇಂಗ್ಲೀಷ್‌ನಲ್ಲಿ 'QWERTY (ಕ್ವರ್ಟಿ)' ಅಕ್ಷರಗಳ ಹೂಡಿಕೆ (ಲೇ–ಔಟ್) ಇದ್ದು, ಒಂದು ಶಿಫ್ಟ್‌ನಲ್ಲಿ 26 ದೊಡ್ಡ (ಕ್ಯಾಪಿಟಲ್) ಅಕ್ಷರಗಳು ಮತ್ತು ಇನ್ನೊಂದು ಶಿಫ್ಟ್‌ನಲ್ಲಿ 26 ಸಣ್ಣ (ಸ್ಮಾಲ್) ಅಕ್ಷರಗಳಿಗೆ ಸ್ಥಾನ ನೀಡಲಾಗಿದೆ. ಉಳಿದ ಸ್ಥಳಗಳಲ್ಲಿ ಅಂಕೆಗಳು, ಭಾಷಾ ಚಿನ್ಹೆಗಳಾದ ಪೂರ್ಣ ವಿರಾಮ, ಅಲ್ಪ ವಿರಾಮ, ಅರ್ಧ ವಿರಾಮ, ಪ್ರಶ್ನಾರ್ಥಕ ಚಿನ್ಹೆ, ಆಶ್ಚರ್ಯಕರ ಚಿನ್ಹೆ, ಉದ್ಧರಣ ಚಿನ್ಹೆ, ಕಂಸ ಇತ್ಯಾದಿಗಳು ಮತ್ತು ಗಣಿತದ ಚಿನ್ಹೆಗಳಾದ ಕೂಡಿಸು, ಕಳೆ (ಋಣ), ಗುಣಿಸು, ಭಾಗಿಸು ಇತ್ಯಾದಿಗಳಿಗೆ ಸ್ಥಾನ ಕಲ್ಪಿಸಲಾಗಿದೆ.

ಭಾರತೀಯ ಭಾಷೆಗಳಲ್ಲಿ ಒಟ್ಟೂ 51+2=53 ಅಕ್ಷರಗಳು ಇವೆ..... ಹೀಗೆಂದು ಮೇಲ್ನೋಟಕ್ಕೆ ತೋರಿದರೂ ಬರವಣಿಗೆಗೆ ಇದು ಸಾಕಾಗುವುದಿಲ್ಲ. ಬರವಣಿಗೆಯ ಕೆಲಸಕ್ಕೆ ಇನ್ನೂ ಹೆಚ್ಚುವರಿಯಾಗಿ 15 ಸ್ವರ ಮತ್ತು ಅಂ, ಅಃ, ಗಳಿಗೆ 17 ಕಾಗುಣಿತ ಚಿನ್ಹೆಗಳು ಮತ್ತು 34 ಒತ್ತಕ್ಷರಗಳಿಗೆ 35 ಒತ್ತಕ್ಷರ ಚಿನ್ಹೆಗಳು ಇವೆ ಮತ್ತು ಬೇಕಾಗುತ್ತವೆ. ಹೀಗೆ ಒಟ್ಟೂ 51+52(17+35)=103 ಅಕ್ಷರ ಚಿನ್ಹೆಗಳಾಗುತ್ತವೆ. ಗಣಕವು ಇವೆಲ್ಲವನ್ನೂ ಪ್ರತ್ಯೇಕ ಚಿನ್ಹೆಗಳೆಂದೇ ಭಾವಿಸುತ್ತದೆ. ಹೀಗೆ ಒಟ್ಟೂ 103 ಅಕ್ಷರ ಚಿನ್ಹೆಗಳನ್ನು ಹೊಂದಿ ಇವುಗಳ ಸಹಾಯದಿಂದ ಸಾಧ್ಯವಿರುವ ಎಲ್ಲಾ (20 ಸಾವಿರಕ್ಕಿಂತಲೂ ಹೆಚ್ಚು) ಕಾಗುಣಿತ ರೂಪಕಗಳು ಮತ್ತು ಸಂಯುಕ್ತಾಕ್ಷರಗಳನ್ನು ರಚಿಸಲು (ಬರೆಯಲು) ಸಾಧ್ಯವಾಗುತ್ತದೆ. ಹೀಗೆ ನಾವು ಹೆಚ್ಚಿನ ಅಕ್ಷರ ಚಿನ್ಹೆಗಳನ್ನು ಬಳಸಿ ಸಾಧ್ಯವಿರುವ ಎಲ್ಲಾ ಕಾಗುಣಿತ ರೂಪಗಳು ಮತ್ತು ಸಂಯುಕ್ತಾಕ್ಷರ ರೂಪಗಳನ್ನು ರಚಿಸಬಲ್ಲೆವು.

ಗಣಕವು ಒಂದು ಕೀಲಿಗೆ ಒಂದು ಚಿನ್ಹೆ ಎಂಬ ತತ್ವವನ್ನು ಅನುಸರಿಸುತ್ತದೆ.

ಉದಾ : ಬರೀ 'a' ಒತ್ತಿದರೆ 'a' ಬರುತ್ತದೆ. ಆದರೆ,

'A' ಬರಬೇಕಾದರೆ ಶಿಫ್ಟ್ ಒತ್ತಿ 'a' ಒತ್ತಬೇಕು.

ಕನ್ನಡದಲ್ಲಿ ಒಟ್ಟೂ 15 ಸ್ವರಗಳು + ಅಂ, ಅಃಗಳೆರಡು (2) ಹೀಗೆ 17 ಕಾಗುಣಿತಗಳಿದ್ದು ಇವುಗಳಿಗೆ 17 ಕಾಗುಣಿತ ಚಿನ್ಹೆಗಳು ಇವೆ. ಒಟ್ಟೂ 34 ವ್ಯಂಜನಗಳಿದ್ದು, ಇವುಗಳ ಒಟ್ಟೂ ಕಾಗುಣಿತ ರೂಪಗಳು 34x17=578 ಆಗುತ್ತದೆ. ಕನ್ನಡದಲ್ಲಿ ಇರುವ 34 ವ್ಯಂಜನಗಳಿಗೆ 35 ಒತ್ತಕ್ಷರ ಚಿನ್ಹೆಗಳು ಹೆಚ್ಚುವರಿಯಾಗಿ ಇವೆ. ಆದ್ದರಿಂದ ಒಟ್ಟೂ ಸಂಯುಕ್ತಾಕ್ಷರ ರೂಪಗಳು = ಕಾಗುಣಿತ ರೂಪಗಳು (578) x ಒತ್ತಕ್ಷರ ಚಿನ್ಹೆಗಳು (35) = 20530 ಸಾಧ್ಯವಾಗುತ್ತವೆ;----- ಇದು ಒಂದು ಒತ್ತರ ಇದ್ದಾಗ.

ಇನ್ನು ಎರಡು ಒತ್ತಕ್ಷರ ಇದ್ದಾಗ ಈ ಸಂಯುಕ್ತಾಕ್ಷರ ರೂಪಗಳು ಇನ್ನೂ ಹೆಚ್ಚಾಗುತ್ತವೆ; ಮೂರು ಒತ್ತಕ್ಷರ ಇದ್ದಾಗ ಇವು ಇನ್ನೂ ಇನ್ನೂ ಹೆಚ್ಚಾಗುತ್ತವೆ; ಒತ್ತಕ್ಷರಗಳು (ಸ್ವಜಾತಿ/ವಿಜಾತಿ) ಯವುಗಳು ಇದ್ದಾಗ, ಇವು ಮೇಲೆ ಕೆಳಗೆ ಎಂಬ ಸ್ಥಾನದ ದಿಸೆಯಿಂದ ಸಂಯುಕ್ತಾಕ್ಷರಗಳ ರೂಪಗಳೂ ಇನ್ನೂ ಇನ್ನೂ ಇನ್ನೂ ಹೆಚ್ಚಾಗುತ್ತವೆ. ಹೀಗೆ ಭಾರತೀಯ ಭಾಷೆಗಳು 51 ಅಕ್ಷರ ಚಿನ್ಹೆಗಳು + 17 ಕಾಗುಣಿತ ಚಿನ್ಹೆಗಳು + 35 ಒತ್ತಕ್ಷರ ಚಿನ್ಹೆಗಳು

= ಒಟ್ಟೂ 103 ಚಿನ್ಹೆಗಳನ್ನು ಹೊಂದಿ ಇವುಗಳ ಸಹಾಯದಿಂದ ಸಾಧ್ಯವಿರುವ ಎಲ್ಲಾ 20 ಸಾವಿರಕ್ಕೂ ಹೆಚ್ಚಿನ ಕಾಗುಣಿತ ರೂಪಗಳು ಮತ್ತು ಸಂಯುಕ್ತಾಕ್ಷರ ರೂಪಗಳನ್ನು ರಚಿಸುತ್ತವೆ.

ಹೀಗೆ 103 ಅಕ್ಷರ ಚಿನ್ಹೆಗಳನ್ನು ಗಣಕದ ಎರಡು ವಿಭಾಗಗಳಲ್ಲಿ (ಶಿಫ್ಟ್) ಹರಡಿ ಹಾಕಲಾಗಿದೆ. ಆದ್ದರಿಂದ ಇಂದು ನಾವು ದೀರ್ಘ ಸ್ವರಗಳಿಗೆ 4 ಸಲ + ಮಹಾಪ್ರಾಣಗಳಿಗೆ 10 ಸಲ ಮತ್ತು ಒತ್ತಕ್ಷರಗಳಿಗೆ 35 ಸಲ ಹೀಗೆ ಒಟ್ಟೂ 49 ಸಲವಾದರೂ ಅಂದರೆ ಸುಮಾರು ಅರ್ಧದಷ್ಟು ಸಲ ಬೆರಳೊತ್ತಿನ ಕಾರ್ಯದಲ್ಲಿ ಶಿಫ್ಟ್ ಬಳಸುತ್ತಿದ್ದೇವೆ. ಇದರಿಂದ ನಮ್ಮ ಬರವಣಿಗೆಯ ವೇಗವೂ ಕಡಿಮೆಯಾಗಿದೆ; ಅದು ಕ್ಲಿಷ್ಟಕರವೂ, ಸುಲಲಿತವಲ್ಲದ್ದೂ ಆಗಿದೆ. ಆದ್ದರಿಂದ ನಮ್ಮ ಮಕ್ಕಳು ಅದನ್ನು ಕಲಿಯಲು ಇಷ್ಟಪಡುತ್ತಿಲ್ಲ ಎಂಬ ಅಂಶಗಳು ನಮ್ಮ ಗಮನಕ್ಕೆ ಬಂದಿದೆ. ಇಂಗ್ಲೀಷ್ ಮೇಲೆ (ಶ್ರೇಷ್ಠ)–ಸುಲಭ; ನಮ್ಮ ಕನ್ನಡ ಕನಿಷ್ಠ (ಕೀಳು)–ಕ್ಲಿಷ್ಟ ಎಂಬ ಭಾವನೆ ನಮ್ಮ ಮಕ್ಕಳ ಒಳ ಮನಸ್ಸಿನಲ್ಲಿ ಮೂಡುತ್ತಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಇದಕ್ಕೆ ನಾವು ಪರಿಹಾರವನ್ನು ಕಂಡುಕೊಳ್ಳಬೇಕಿದೆ.

ಇಂದು ನಾವು ಇಂಗ್ಲೀಷ್ ಕೀಲಿಮಣೆಯನ್ನು ಉಪಯೋಗಿಸುತ್ತಿದ್ದೇವೆ. ಇದರಲ್ಲಿ ಒಟ್ಟೂ 108 ಸಂಕೇತ/ಅಕ್ಷರ ಚಿನ್ಹೆಗಳಿಗೆ ಸ್ಥಾನವಿದ್ದು, ಅವು ತಲಾ 54ರಂತೆ 2 ಶಿಫ್ಟ್ (ವಿಭಾಗ)ಗಳಲ್ಲಿ ಹಂಚಿಕೆಯಾಗಿವೆ. ಇದರಲ್ಲಿ ಇಂಗ್ಲೀಷರು ತಮ್ಮ ಮೊದಲಿನ ಲಿಪಿಯನ್ನು ತ್ಯಜಿಸಿ ಸುಮಾರು ಸಾವಿರ ವರ್ಷಗಳ ಹಿಂದೆ ಸ್ವೀಕರಿಸಿದ ರೋಮನ್ ಲಿಪಿಯ ಅಕ್ಷರಗಳು ಇವೆ. ಮೊದಲ ಶಿಫ್ಟ್‌ನಲ್ಲಿ ದೊಡ್ಡ (ಕ್ಯಾಪಿಟಲ್) ಅಕ್ಷರಗಳು 26 ಮತ್ತು ಎರಡನೇ ಶಿಫ್ಟ್‌ನಲ್ಲಿ ಸಣ್ಣ (ಸ್ಮಾಲ್) ಅಕ್ಷರಗಳು 26 ಇವೆ. ಉಳಿದ ಜಾಗದಲ್ಲಿ ಅಂಕೆಗಳು (0 ಯಿಂದ 9) ಮತ್ತು ಲೇಖನ ಚಿನ್ಹೆಗಳು (ಉದಾ: ಅಲ್ಪ ವಿರಾಮ, ಅರ್ಧ ವಿರಾಮ, ಪೂರ್ಣ ವಿರಾಮ, ಪ್ರಶ್ನಾರ್ಥಕ, ಆಶ್ಚರ್ಯಕರ ಚಿನ್ಹೆ ಇತ್ಯಾದಿ) & ಗಣಿತ ಚಿನ್ಹೆಗಳು (+, -, x ಇತ್ಯಾದಿ) ಸ್ಥಾನ ಪಡೆದಿವೆ.

ಇಂಗ್ಲಿಷ್‌ನಲ್ಲಿ 26 (5 ಸ್ವರಗಳು + 21 ವ್ಯಂಜನಗಳು) ಅಕ್ಷರಗಳಿವೆ. ಆದರೆ ಪ್ರತ್ಯೇಕವಾದ, ಹೆಚ್ಚುವರಿಯಾದ ಕಾಗುಣಿತ ಚಿನ್ಹೆಗಳಾಗಲಿ, ಕಾಗುಣಿತ ರೂಪಗಳಾಗಲಿ ಇಲ್ಲ. ಇದ್ದ ಸ್ವರಗಳೇ ಅದರ ಸ್ಥಾನವನ್ನು ತೆಗೆದುಕೊಳ್ಳುತ್ತವೆ. ಹಾಗೆಯೇ ಒತ್ತಕ್ಷರಗಳಿಗಾಗಿ ಹೆಚ್ಚುವರಿಯಾದ ಒತ್ತಕ್ಷರ ಚಿನ್ಹೆಗಳು ಇಲ್ಲ. ಬದಲಿಗೆ ಇದ್ದ ವ್ಯಂಜನಗಳೇ ಅದರ ಸ್ಥಾನವನ್ನು ತೆಗೆದುಕೊಳ್ಳುತ್ತವೆ. ಆದ್ದರಿಂದ ಕಡಿಮೆ ಅಕ್ಷರ ಚಿನ್ಹೆಗಳಿಂದ ಎಲ್ಲ ರೂಪಗಳನ್ನು ಬರೆಯುವುದು ಸಾಧ್ಯವಾಗಿದೆ ಮತ್ತು ಮೇಲಿಂದ ಮೇಲೆ ಶಿಫ್ಟ್ ಇಲ್ಲದೇ ಇರುವುದರಿಂದ ವೇಗದ ಬರವಣಿಗೆ ಸಾಧ್ಯವಿದೆ.

ಉದಾ: ನಮ್ಮ ಕನ್ನಡ ಲಿಪಿ ನೋಡಲು ಚೆನ್ನ = Namma kannada lipi nodalu cenna ?

ನ	ಮ್ಮ	ಕ	ನ್ನ	ಡ	ಲಿ	ಪಿ
ನೋ	ಡ	ಲು	ಚೆ	ನ್ನ.		

ನ್‌ಅ	ಮ್‌ಮ್‌ಅ		ಕ್‌ಅ	ನ್‌ನ್‌ಅ	ಡ್‌ಅ	ಲ್‌ಇ
ಪ್‌ಇ	ನ್‌ಒ	ಡ್‌ಅ	ಲ್‌ಉ	ಚ್‌ಎ	ನ್‌ನ್‌ಅ.	

na	mma		ka	nna	da	li
pi	no	da	lu	ce	nna.	

NA	MMA		KA	NNA	DA	LI
PI	NO	DA	LU	CE	NNA.	

ಇಲ್ಲಿ 'ಕ್'='K' ಮತ್ತು 'ಅ'='A'. ಆದ್ದರಿಂದ 'ಕ್'+'ಅ' = 'ಕ್‌ಅ' = 'KA' = ಇದಕ್ಕೆ 'ಕ' ಅನ್ನುತ್ತೇವೆ. ಆದರೆ 'ಕ್‌ಅ'.... ಇದಕ್ಕೆ 'ಕ' ಎನ್ನದೇ, ಇದರ ಬದಲಿಗೆ ಇದರ ಸರಿಸಮಾನವಾದ 'ಕ' ಎಂಬ ಅಕ್ಷರ ಚಿನ್ಹೆಯಿಂದ ಬರೆಯುತ್ತೇವೆ.

ಹಾಗೆಯೇ 'ನ್'+'ನ್'+'ಅ'='ನ್‌ನ್‌ಅ'='N'+'N'+'A'='NNA'..... ಇದನ್ನು 'ನ್ನ' ಎನ್ನದೇ, 'ನ'ದರ ಒತ್ತಕ್ಷರ ಚಿನ್ಹೆಯನ್ನು ಬಳಸಿ, ಇದರ ಬದಲಿಗೆ ಇದರ ಸರಿಸಮಾನವಾದ 'ನ್ನ' ಎಂಬ ಅಕ್ಷರ ಚಿನ್ಹೆಯಿಂದ ಬರೆಯುತ್ತೇವೆ.

ಹಾಗೆಯೇ 'ಲ್'+'ಇ'='ಲ್‌ಇ'='L'+'I'='LI'..... ಇಲ್ಲಿ 'LI' ಇದನ್ನು 'ಲಿ' ಎನ್ನುತ್ತೇವೆ. ಆದರೆ 'ಲ್'+'ಇ'='ಲ್‌ಇ' ಇದನ್ನು 'ಲಿ' ಎನ್ನದೇ ಇದರ ಬದಲಾಗಿ ಇದರ ಸರಿಸಮಾನವಾದ 'ಲಿ' ಎಂಬ ಅಕ್ಷರ ಚಿನ್ಹೆಯಿಂದ ಬರೆಯುತ್ತೇವೆ.

ಹೀಗೆ ನಮ್ಮಲ್ಲಿ ಹೆಚ್ಚುವರಿ ಅಕ್ಷರ ಚಿನ್ಹೆಗಳನ್ನು ಬಳಸುತ್ತೇವೆ. ಕಾಗುಣಿತಗಳಿಗಾಗಿ 17 ಅಕ್ಷರ ಚಿನ್ಹೆಗಳು ಮತ್ತು 34 ವ್ಯಂಜನಗಳಿಗಾಗಿ 35 ಹೆಚ್ಚುವರಿ ಒತ್ತಕ್ಷರ ಚಿನ್ಹೆಗಳನ್ನು ಹೀಗೆ ಒಟ್ಟೂ 52 ಹೆಚ್ಚುವರಿ ಚಿನ್ಹೆಗಳನ್ನು ಬಳಸುತ್ತೇವೆ ಮತ್ತು ಬರವಣಿಗೆಯ ಎಲ್ಲ ಅಕ್ಷರ ರೂಪಗಳನ್ನು ತಯಾರಿಸುತ್ತೇವೆ.

ಆದರೆ ಇಂಗ್ಲೀಷ್ ಲಿಪಿ ಕಡಿಮೆ ಅಕ್ಷರ ಚಿನ್ಹೆಗಳಿಂದ ಎಲ್ಲ ಕಾಗುಣಿತ ಮತ್ತು ಸಂಯುಕ್ತಾಕ್ಷರ ರೂಪಗಳನ್ನು ದೀರ್ಘಿಸುವಲ್ಲಿ ಶಕ್ತವಾಗಿದೆ.

ಆದ್ದರಿಂದ ನಾವು, ನಮ್ಮ ಅಕ್ಷರ ಚಿನ್ಹೆಗಳು ಕಡಿಮೆ ಇರುವ, ಗಣಕಕ್ಕೆ ಸೂಕ್ತವಾಗಿರುವ ಹೊಸ ಲಿಪಿಯೊಂದನ್ನು ಅನ್ವೇಷಣೆ ಮಾಡಿ ಹೆಚ್ಚುವರಿಯಾಗಿ ಹೊಂದಬೇಕಾಗಿದೆ.

ವಿಭಾಗ:–2

ಪತಂಜಲೀಯಮ್

ಮನೋಅಧ್ಯಾತ್ಮಿಕ ಮತ್ತು ತತ್ವಶಾಸ್ತ್ರ ವಿಜ್ಞಾನಗಳು

PATANJALEEYAM

Psychospiritual and Philosophical Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಭಾರತ ಇತಿಹಾಸದಲ್ಲಿ ಯೋಗ ವಿಜ್ಞಾನದ ಬೇಳವಣಿಗೆ	ಚಂದ್ರಕಾಂತ ಬಿ ಬಿರಾದರ	43 – 45
2.	ಜ್ಞಾನ ಮತ್ತು ತತ್ವಜ್ಞಾನ: ವಚನಕಾರರನ್ನು ಅನುಲಕ್ಷಿಸಿ	ಪ್ರಿಯದರ್ಶಿನಿ	45 – 49
3.	ಮಾನವನ ವಿಕಾಸದ ಹಂತದಲ್ಲಿ ಋಣಾತ್ಮಕ ಶಕ್ತಿಯ ಪಾತ್ರ	ಚಂದ್ರಮೌಳ ಎಂ.ಎಸ್	49 – 55
4.	ಮಾನವನ ವಿಕಾಸದ ಹಾದಿಯಲ್ಲಿ ಮೂರನೆ ಕಣ್ಣು ಎಂಬುವುದರ ಪ್ರಾಮುಖ್ಯತೆ	ಚಂದ್ರಮೌಳ ಎಂ.ಎಸ್	55 – 60
5.	ಸರ್ವಮೌಲ್ಯಗಳ ಸಾರ್ವಕಾಲಿಕ ಭಂಡಾರ ವಚನ ಸಾಹಿತ್ಯ	ಅನೀಲ್ ಅಪ್ರಾಳ್	60 – 63

ಭಾರತ ಇತಿಹಾಸದಲ್ಲಿ ಯೋಗ ವಿಜ್ಞಾನದ ಬೇಳವಣಿಗೆ

ಚಂದ್ರಕಾಂತ ಬಿ ಬಿರಾದರ
ಯೋಗ ಶಿಕ್ಷಕರು ದೈಹಿಕ ಶಿಕ್ಷಣ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ,ಕಲಬುರ್ಗಿ

ಇಂದು ವಿಶ್ವದಲ್ಲಿ ಬೆಳೆದು ನಿಂತಿರುವ ಯೋಗ ಇಂದು ಆತ್ಮಸಾಕ್ಷಾತ್ಕಾರಕ್ಕೆ ಅಭ್ಯಾಸ ಮಾಡುತ್ತಿದ್ದಾರು.ಆದರೆ ಇಂದು ನಾವು ರೋಗವನ್ನು ತಡೆಯಲು ರೋಗವನ್ನು ಬರದಂತೆ ಮಾಡಿಕೊಳ್ಳಲು ನಾವು ಇಂದು ಹೆಚ್ಚು ಯೋಗವನ್ನು ಬಳಸಿಕೋಳ್ಳುತ್ತಿದ್ದೇವೆ. ಆದರೂ ಯೋಗವನ್ನು ಯಾವುದಕ್ಕೆ ಬೇಕು ಅದಕ್ಕೆ ಬಳಸಿಕೊಂಡು ಮುಂದೆ ನಡೆಯುಬಹುದಾಗಿದೆ. ಹಿಂದೆ ಯೋಗವು ಗುರುವಿನಿಂದ ಶಿಷ್ಯರಿಗೆ ಪರಂಪರಾಗತವಾಗಿ ಬಾಯಿ ಮಾತಿನಿಂದ ಬರುತ್ತಿದ್ದವು. ಹೀಗೆ ಅವುಗಳ ಅರ್ಥ ಮತ್ತು ಉದ್ದೇಶ ಕುರಿತು ಸ್ಪಷ್ಟ ತಿಳುವಳಿಕೆ ನೀಡುತ್ತಿದ್ದರು. ತಮ್ಮ ಅನುಭವ ಹಾಗು ಸಾಕ್ಷಾತ್ಕಾರಗಳ ಮೂಲಕ ಯೋಗಿಗಳು ಮತ್ತು ಪಂಡಿತರು ತಮ್ಮ ನಿಷ್ಠಾವಂತ ಶಿಷ್ಯರಿಗೆ ಮಾತ್ರ ಪರಿಣಾಮ ಮಾರ್ಗವನ್ನು ಬೋಧಿಸಿತ್ತಿದ್ದರು. ಹಾಗೆಯೇ ಯೋಗದ ವಿಧಾನಗಳನ್ನು ಗೌಪ್ಯವಾಗಿಡಲಾಗಿತ್ತು. ಅವುಗಳ ಲಿಖಿತ ರೂಪದಲ್ಲಿಯಾಗಲೀ,ಸಾರ್ವಜನಿಕರಿಗೆ ಲಭ್ಯವಾಗುವಂತಾಗಲೀ ಹೀಗಾಗಿ ಇದನ್ನು ಗೌಪ್ಯವಿಡ್ಡೆಯೆಂದು ಕರೆಯುತ್ತಿದ್ದರು.

ಯೋಗದ ಬೇಳವಣಿಗೆಯಲ್ಲಿ ಭೌಗೋಳಿಕ ಲಕ್ಷಣ : ಯಾವುದೇ ದೇಶದ ಘಟನೆ ಅಥವಾ ಇತಿಹಾಸ ತಿಳಿಯಲು ಆ ದೇಶದ ಭೌಗೋಳಿಕ ಅಂಶಗಳಿಂದ ಪ್ರಭಾವಿಸಲ್ಪಟ್ಟಿರುತ್ತದೆ.ಹಾಗೆ ಯೋಗವನ್ನು ಭಾರತ ದೇಶದಲ್ಲಿ ಜನ್ಮ ತಾಳಲು ಈ ದೇಶದ ಭೌಗೋಳಿಕ ಅಂಶಗಳ ಆಧಾರದಿಂದಲೇ ಹುಟ್ಟಿಕೊಂಡಿದ್ದೆ. ಭೌತಿಕ ಪರಿಸರ, ಸಂಸ್ಕೃತಿ ಆಥವಾ ನಾಗರಿಕತೆಗಳ ನಿರ್ಮಾಣಕ್ಕೆ ಕಾರಣವಾಗುತ್ತದೆ. ಹೀಗಾಗಿ ಭಾರತ ದೇಶದಲ್ಲಿ ಜಗತ್ತಿನ ಶ್ರೇಷ್ಟ ನಾಗರಿಕತೆಗಳು, ಧರ್ಮಗಳು, ತತ್ವಶಾಸ್ತ್ರವು ಹುಟ್ಟಲು ಇಲ್ಲಿನ ಪರಿಸರವೇ ಕಾರಣವಾಗಿದೆ. ಭೌಗೋಳಿಕ ಅಂಶಗಳಿಲ್ಲದೆ ಇತಿಹಾಸ ತಿಳಿಯಲು ಸಾಧ್ಯವಿಲ್ಲ. ಭೌಗೋಳಿಕ ಅಂಶಗಳಿಲದೆ ಇತಿಹಾಸ ಸೃಷ್ಟಿಯಾಗುವದಿಲ್ಲ. ಹೀಗಾಗಿ ಭೂಗೋಳವು ಐತಿಹಾಸಿಕ ಜ್ಞಾನದ ತಳಹದಿಯಾಗಿದೆ. ಇತಿಹಾಸವು ಎರಡು ಮಹಾಶಕ್ತಿಗಳಿಂದ ನಿರ್ಮಾಣವಾಗುತ್ತದೆ. ಒಂದು ಪರಿಸರ ಮತ್ತೊಂದು ವ್ಯಕ್ತಿಗಳು. ಇತಿಹಾಸದ ಮಹಾನವ್ಯಕ್ತಿಗಳ ಪ್ರತಿಯೊಂದು ಕಾರ್ಯ ಚಟುವಟಿಕೆಯೂ ಅವರು ಹುಟ್ಟಿ ಬೆಳೆದ ಪರಿಸರದಿಂದ ಪ್ರಭಾವಿತವಾಗಿರುತ್ತದೆ. ಹೀಗಾಗಿ ಭಾರತದಲ್ಲಿ ಯೋಗವು ಹುಟ್ಟಿ ಬೇಳೆಯಲು ಇಲ್ಲಿಯ ಪರಿಸರವೇ ಕಾರಣವೆಂದು ಹೇಳಬಹುದಾಗಿದೆ.

1. ಡಾ!! ರಾಯಚೌಧರಿ ಪ್ರಕಾರ: ಪ್ರಪಂಚದ ಇತರೆ ರಾಷ್ಟ್ರಗಳ ಚರಿತೆಯಂತೆ ಭಾರತದ ಚರಿತ್ರೆಯೂ ಬಹುವಾಗಿ ಅದರ ಭೂಗೋಳದಿಂದಲೇ ಪ್ರಭಾವಿಸಲ್ಪಟ್ಟಿದೆ.

2. ಮಿ.ಕೊಲೆಟ್ರ ಪ್ರಕಾರ ''ಇತಿಹಾಸವು ಭೂಗೋಳಶಾಸ್ತ್ರದ ತಳಹದಿಯ ಮೇಲೆ ರೂಪಿಸಲ್ಪಟ್ಟಿದೆ.

3. ರಿಚರ್ಡ್ ಹಕ್ಲೂಟ್ರ ಪ್ರಕಾರ ''ಭೂಗೋಳ ಮತ್ತು ಕಾಲಗಣನೆ ಇತಿಹಾಸದ ಬಲಗಣ್ಣು ಮತ್ತು ಎಡಗಣ್ಣು ಇದ್ದಂತೆ.ಭಾರತ ದೇಶದ ಭೌಗೋಳಿಕ ಅಂಶಗಳಿಂದಲೇ ಇಲ್ಲಿ ಋಷಿಮುನಿಗಳು, ಯೋಗಿಗಳು, ಸಂತರು, ಶರಣರು ಹುಟ್ಟಲು ಕಾರಣವಾಗಿದೆ. ಹೀಗಾಗಿ ಯೋಗವು ಇಲ್ಲಿ ಹುಟ್ಟಲು ಇಲ್ಲಿಯ ಭೌಗೋಳಿಕ ಆಂಶದಿಂದಲೆ ಎಂದು ಹೇಳಬಹುದಾಗಿದೆ.

ಯೋಗ ಇಲ್ಲಿ ಹುಟ್ಟಿಕೋಳ್ಳಲು ಈ ಭೌಗೋಳಿಕ ಆಂಶಗಳೇ ಕಾರಣ

1 ಹಿಮಾಲಯ ಪರ್ವತ ಶ್ರೇಣಿಗಳು.

2 ಸಿಂಧೂ–ಗಂಗಾ ನದಿ ಬಯಲು ಪ್ರದೇಶಗಳು.

3 ದಖನ್ ಪ್ರಸ್ಥಭೂಮಿ.

4 ಪೂರ್ವಮತ್ತು ಪಶ್ಚಿಮ ಘಟ್ಟಗಳು.

5 ತೀರ ಪ್ರದೇಶ.

1 ಹಿಮಾಲಯ ಪರ್ವತ ಶ್ರೇಣಿಗಳು : ಈ ಪರ್ವತಗಳು ಭಾರತದ ನಾಗರಿಕತೆಯ ಮತ್ತು ಸಂಸ್ಕೃತಿಯ ಹುಟ್ಟು ಮತ್ತು ನಿರಂತರತೆಯಲ್ಲಿ ಹಿಮಾಲಯ ಪರ್ವತಗಳ ಪಾತ್ರ ಹಿರಿದು ಅವು ಭಾರತದ ಇತಿಹಾಸದ ಮೇಲೆ ಬೀರಿದ ಪ್ರಭಾವ ಇಂತಿವೆ.ಹಿಮಾಲಯ ಪರ್ವತಗಳು ಅನೇಕ ಸಾಧು ಸಂತರಿಗೆ,ಋಷಿಗಳ'ಗೆ ಆಶ್ರಯ ನೀಡಿದೆ. ಅದು ಶಿವನ ಅವಾಸ ಸ್ಥಾನವಾಗಿದೆ ಎಂದು ಅನೇಕ ಪುರಾಣಗಳು ತಿಳಿಸಿಕೊಡುತ್ತವೆ .ಇಲ್ಲಿ ಕೈಲಾಸ ಪರ್ವತವಿದೆ. ಕೇದಾರನಾಥ, ಬದರಿ, ಹೃಷಿಕೇಶಿ, ಹರಿದ್ವಾರ, ಅಮರನಾಥಗಳಂಥತಹ ಪುಣ್ಯಕ್ಷೇತ್ರಗಳವೆ ಹೀಗೆ ಅವು ನಮ್ಮ ತತ್ವಶಾಸ್ತ್ರ ಅಧ್ಯಾತ್ಮಿಕ ಪರಂಪರೆಯನ್ನು ಶ್ರೀಮಂತಗೋಳಿಸಿವೆ. ಈ ಎಲ್ಲಾ ಕಾರಣಗಳಿಂದಾಗಿ ಭವ್ಯವಾದ ಮತ್ತು ಸಮೃದ್ಧವಾದ ನಾಗರಿಕತೆ ಬೆಳೆಯಲು ಸಹಾಯಕವಾಯಿತು.

ಡಾ॥ ರಾಯ್‌ಚೌಧರಿ ಪ್ರಕಾರ ಹಿಮಾಲಯ ಪರ್ವತಗಳು ಭಾರತವನ್ನು ಏಷ್ಯಾದಿಂದ ಪ್ರತ್ತೇಕಿಸಿರುವುದರಿಂದ ಇಲ್ಲಿ ವಿಶಿಷ್ಟ ಸಂಸ್ಕೃತಿ ಹುಟ್ಟಿ ಬೆಳೆಯಿತು. ಅಲ್ಲದೆ ಪ್ರತ್ಯೇಕತೆಯಿಂದಾಗಿ ಭಾರತದ ಸಂಸ್ಕೃತಿ ಅವಿಚ್ಛಿನ್ನವಾಗಿ ಮುಂದುವರಿಸಿಕೊಂಡು ಬರಲು ಕಾರಣವಾಯಿತ್ತು. ಈ ಪ್ರತೆಕತೆ ಪ್ರಪಂಚದಲ್ಲೇ ಭಿನ್ನ ನಾಗರಿಕತೆಯ ಬೇಳೆವಣಿಗೆಗೆ ಸಹಾಯಕವಾಯಿತು.

ಕೆ.ಎಂ.ಫಣೀಕರ್ ಪ್ರಕಾರ : 'ಭಾರತ ಸಂಸ್ಕೃತೀಯ ನಿರಂತರತೆಯು ಹಿಮಾಲಯ ಪರ್ವತಗಳ ಶೇಷ್ಠ ಕೋಡುಗೆಯಾಗಿದೆ. ಹಿಮಾಲಯ ಪರ್ವತಗಳು ಆಧ್ಯಾತ್ಮಿಕತೆಯ ಉಗಮಕ್ಕೆ ಮಹತ್ವಸ್ಥಾನ ಕೊಟ್ಟಿದೆ. ಈ ಪರ್ವತಗಳಿಂದಲೇ ಇಲ್ಲಿ ಅನೇಕ ಸಾಧುಸಂತರು, ಋಷಿಮುನಿಗಳು ತಪಸ್ಸು ಮಾಡಲು ಸಾಧ್ಯವಾಯಿತು ಹಾಗೂ ಈ ಪರ್ವತ ಶಿವನ ಅವಾಸ ಸ್ಥಾನವಾಗಿದೆ. ಇಲ್ಲಿ ಕೈಲಾಸ ಪರ್ವತವಿದೆ. ಕೇದಾರನಾಥ,ಬದರಿನಾಥ, ಹೃಷಿಕೇಶ' ಹರಿದ್ವಾರ, ಅಮರನಾಥಗಳಂತಹ ಪುಣ್ಯಕ್ಷೇತ್ರಗಳು ಇಲ್ಲವೆ. ಹೀಗೆ ಅವು ನಮ್ಮ ತತ್ವಶಾಸ್ತ್ರ ಅಧ್ಯಾತ್ಮಿಕ ಪರಂಪರೆಯನ್ನು ಶ್ರೀಮಂತಗೋಳಿಸಿವೆ. ಈ ಎಲ್ಲಾ ಕಾರಣಗಳಂದ ಭವ್ಯವಾಧ ಮತ್ತು ಸಮೃದ್ಧವಾದ

ನಾಗರಿಕತೆ ಬೆಳೆಯಲು ಸಹಾಯಕವಾಯಿತು. ಹಾಗೂ ಇಲ್ಲಿ ಪವಿತ್ರ ನದಿಗಳ ಉಗಮದಿಂದಲೂ ಇಲ್ಲಿಯ ಆದ್ಯಾತ್ಮಿಕತೆ ಬೇಳವಣಿಗೆಗೆ ಪೂರಕವಾಗಿದೆ. ಉತ್ತರ ಭಾರತದ ಜೀವ ನದಿಗಳಾದ ಸಿಂಧೂ, ಗಂಗಾ, ಮತ್ತು ಬ್ರಹ್ಮಪುತ್ರ ನದಿಗಳ ಜನ್ಮದಿಂದ ಭಾರತ ಸಮೃದ್ಧವಾಗಿದೆ. ಹೀಗಾಗಿ ಇಲ್ಲಿ ಆದ್ಯಾತ್ಮ ಬೇಳೆಯಲು ಕಾರಣವಾಗಿದೆ.

2 ಸಿಂಧೂ–ಗಂಗಾ ನದಿಗಳ ಬಯಲು ಪ್ರದೇಶ : ಸಿಂಧೂ– ಗಂಗಾ ಮತ್ತು ಬ್ರಹ್ಮಪುತ್ರ ನದಿಗಳು ಹಾಗೂ ಅದರ ಉಪನದಿಗಳು ಹರಿಯುವ ಫಲವತ್ತಾದ ಉತ್ತರ ಕೃಷೀಭೂಮಿಯಿದು. ಹಾಗಾಗಿ ಇಲ್ಲಿ ಯಾವಾಗಲು ಜನಭರಿತವಾದ ಪ್ರದೇಶವಾಗಿದೆ. ಇದನ್ನು ಆರ್ಯವೃತ ಎಂತಲೂ ಕರೆಯುವರು. ಇದು ಸುಲೈಮಾನ್ ಪರ್ವತ ಶ್ರೇಣಿಗಳಿಂದ ಪೂರ್ವದ ಅಸ್ಸಾಂವರೆಗೂ ಸರಿಸುಮಾರು ಇಡೀ ಉತ್ತರ ಭಾರತವನ್ನು ವ್ಯಾಪಿಸಿದೆ. ಸಿಂಧೂ ನದಿ ಹಿಮಾಲಯದ ಕೈಲಾಸ ಪರ್ವತದಲ್ಲಿ ಹುಟ್ಟಿ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಹರಿದು ಅರಬೀ ಸಮುದ್ರ ಸೇರುತ್ತದೆ. ಜೇಲಂ, ಚಿನಾಬ್,ರಾವಿ,ಬಿಯಾಸ್,ಮತ್ತು ಸಟ್ಲೇಜಗಳು ಇದರ ಉಪನದಿಗಳು. ಹಿಮಾಲಯದ ಗಂಗೋತ್ರಿಯಲ್ಲಿ ಜನಿಸುವ ಗಂಗಾ ನದಿ 2640 ಕಿ.ಮೀ. ಹರಿದು ಬಂಗಾಳಕೋಲ್ಲಿಯನ್ನು ದೇರುತ್ತದೆ. ಇದು ಹಿಂದೂಗಳಿಗೆ ಪೂಜನೀಯ. ಸರಸ್ವತಿ, ಚಂಬಲ್, ಗೋಮತಿ, ಸೋನೆ. ಗೋಗ್ರಾ ಇದರ ಉಪನದಿಗಳು. ಮಾನಸ ಸರೋವರದಲ್ಲಿ ಜನಿಸುವ ಬ್ರಹ್ಮಪುತ್ರ ನದಿ ಈಶಾನ್ಯ ರಾಜ್ಯಗಳಲ್ಲಿ 2688 ಕಿ.ಮೀ. ಹರಿದು ಬಂಗಾಳಕೋಲ್ಲಿಯನ್ನು ಸೇರಿತ್ತದೆ. ವರ್ಷವಿಡೀ ಹರಿಯುವ ಜೀವನದಿಗಳಾಗಿವೆ ಇದರಿಂದ ಇಲ್ಲಿ ಋಷಿಮುನಿಗಳು ಸಂತರೂ ಯಾವಾಗಲು ತಪಸ್ಸು ಮಾಡುವ ಕೇಂದ್ರಗಳಾಗಿವೆ. ಹೀಗಾಗಿ ಸಿಂಧೂ–ಗಂಗಾ ನದಿ ಬಯಲು ಇದನ್ನು ಭಾರತ ಸಂಸ್ಕೃತಿಯ ತವರು ಮನೆ' ಎಂದು ಕರೆಯಲಾಗಿದೆ. ಈ ವಾತವರ್ಣದಿಂದಲೇ ಇಲ್ಲಿ ಯೋಗ ಮತ್ತು ಅಧ್ಯಾತ್ಮಿಕ ಪ್ರಚಾರಕಾಗಿ ಅನೇಕ ಕೇಂದ್ರಗಳು ಜನ್ಮ ತಾಳದವು ಅವುಗಳಲ್ಲಿ ಬನಾರಸ ಕಾಶಿ, ಪ್ರಯಾಗ, ಹೃಷಿಕೇಶಿ,ಮಥುರಾ, ಲುಂಬಿಣಿ, ಹತಿದ್ವಾರ ಗಯಾ, ಸಾರನಾಥ, ಕುಶಿನಗರ' ಮೋದಲಾದ ಪುಣ್ಯಕ್ಷೇತ್ರಗಳು ಇಲ್ಲಿ ಜನ್ಮ ತಾಳವೆ. ಹಾಗೆ ಶೈಕ್ಷಣಿಕವಾಗಿ ನಳಂದ, ವಿಕ್ರಮಶಿಲಾ,ತಕ್ಷಶಿಲಾ, ವಿದ್ಯಾಕೇಂದ್ರಗಳು ಜನ್ಮ ತಾಳದವು.

ಪ್ರಾಚೀನತೆಯಲ್ಲಿ ಭಾರತವು ಅತ್ಯಂತ ಪುರಾತನ ರಾಷ್ಟವಾಗಿದೆ. ಇದು ಸುಮಾರು ೫೦.೦೦ ವರ್ಷಳ ಮಾನವ ದೀರ್ಘ ಇತಿಹಾಸವನ್ನು ಹೊಂದಿದೆ. ಭಾರತವು ಶಿಲಾಯುಗ ಮಾನವ ವಾಸಸ್ಥಾನವಾಗಿತ್ತು. ಕ್ರಿ.ಪೂ. ೫೦.೦೦ ವರ್ಷಗಳ ಹಿಂದೆ ಹಳೆಯ ಶಿಲಾಯುಗ ಆರಂಭವಾಯಿತು. ಜಗತ್ತಿನ ಅತ್ಯಂತ ಪುರಾತನ ನಾಗರಿಕತೆಗಳಲ್ಲಿ ಒಂದಾದ ಸಿಂಧೂ ಬಯಲಿನ ನಾಗರಿಕತೆ ಕ್ರಿ.ಪೂ.೩೦೦೦ವರ್ಷಗಳ ಹಿಂದೆಯೇ ಅಸ್ತಿತ್ವದಲ್ಲಿತ್ತು. ಭರತ ಎಂಬ ಚಕ್ರವರ್ತಿ ಅತಿ ಪುರಾತನ ಕಾಲದಲ್ಲೇ ಈ ನಾಡನ್ನು ಆಳುತ್ತಿದ್ದನ್ನು. ಮುಂದೆಸಿಂಧು ಬಯಲಿನ ನಾಗರಿಕತೆ ಹರಪ್ ಸಂಸ್ಕೃತಿಯಲ್ಲಿ ಆದ್ಯಾತ್ಮ ಬೆಳವಣಿಗೆಯಲ್ಲಿ ಕಾರಣಗಳಾದವು

ಸಿಂಧು ಬಯಲಿನ ನಾಗರಿಕತೆ ಮತ್ತು ಹರಪ್ಪ ಸಂಸ್ಕೃತಿಯು ಭಾರತದ ಅತ್ಯಂತ ಪುರಾತನ ನಾಗರಿಕತೆಯಾಗಿದೆ. ಇದು ಜಗತಿನ ಪ್ರಪ್ರಥಮ ನಗರ ನಾಗರಿಕತೆಯಾಗಿದೆ. ಹರಪ್ಪ ಸಂಸ್ಕೃತಿಯ ಈಜಿಪ್ಟ್ ಮತ್ತು ಮೇಸಪೊಟೆಮಿಯಾ ನಾಗರಿಕತೆಗಳ ಸಮಕಾಲೀನದ್ದಾಗಿದ್ದು ಅವುಗಳಿಗಿಂತ ಹೆಚು ಮುಂದುವರಿದ ನಗರ ನಾಗರಿಕತೆಯಾಗಿತ್ತು. ವಿಲ್ಡ್ಯುರೆಂಟ್‌ರು ಅದು ಈಜಿಪ್ಟ ನಾಗರಿಕತೆಗಿಂತಲೂ ಹೆಚ್ಚು ಪ್ರಾಚ್ಚೀನವಾಗಿತ್ತು ಎಂದಿದಾರೆ.ಸಿಂಧು ನದಿಯನ್ನು ಭಾರತದ ನಾಗರಿಕತೆಯ ತೋಟ್ಟಿಲು ಎಂದು ಕರೆಯಲಾಗಿದೆ. ಇದನ್ನು ನೈಲ್ ನದಿಗೆ ಹೋಲಿಸಲಾಗಿದೆ. ಈ ಮಹಾ ನಾಗರಿಕತೆಯೂ ಕ್ರಿ.ಪೂ. ೩೦೦೦ರಲ್ಲಿ ಭಾತರದ ಗರ್ಭದಲ್ಲಿ ಬೇಳೆದು ಬಂದಿತು.ಈ ನಾಗರಿಕತೆ ಪ್ರಧಾನವಾಗಿ ಹರಪ್ಪ ಮತ್ತು ಮೋಹೆಂಜೋದಾರೋ ಎಂಬೆರಡು ದೊಡ್ಡ ನಗರಗಳಲ್ಲಿ ಅಸ್ತಿತ್ವದಲ್ಲಿತ್ತು. ಈ ನಾಗರಿಕತೆಗಳು ಬಹಳ ವ್ಯೆವಸ್ಥಿತವಾಗಿ ಸಹಭಾಳ್ವೆ, ಸಹಕಾರ,ಮತ್ತು ಧಾರ್ಮಿಕ ಆಚಣೆಯನ್ನು ಮತ್ತು ಆಧ್ಯಾತ್ಮವನ್ನು ಬಹಳ ಕಟ್ಟುನಿಟ್ಟಾಗಿ ಆಚರಣೆಯೊಂದಿಗೆ ಬದುಕನ್ನು ನಡೆಸುತ್ತಿದ್ದರು. ಹೀಗಾಗಿ ಇಲ್ಲಿ ಆಧ್ಯಾತ್ಮ' ಬೇಳೆಯಲು ಸಾಯಕಾರಿಯಾಗಿದೆ.

ಭಾರತೀಯರು ಧರ್ಮನಿಷ್ಟರು ಧಾರ್ಮೀಕ ಕ್ರಿಯೆಗಳ ಅವರ ಹುಟ್ಟಿನಿಂದ ಸಮಾಧಿಯವರೆಗೂ ಹಿಂಬಾಲಿಸುತ್ತವೆ. ಅವರು ದೈವ ಸಾಕ್ಷಾತ್ಕಾರದಲ್ಲಿ ನಂಬಿಕೆಉಳ್ಳವರು. ಅವರು ಕರ್ಮಗಳ ಫಲದಿಂದ ಆತ್ಮಕ್ಕೆ ಒದಗುವ ಕಷ್ಟಗಳ ಬಗ್ಗೆ ಚಿಂತಿಸುತ್ತಾರೆ. ಭೌತಿಕ ಜೀವನಕ್ಕಿಂತ ಪಾರಮಾರ್ಥಿಕ ಹಿತಚಿಂತನೆಯಲ್ಲಿ ಮುಳುಗಿರುತ್ತಾರೆ. ಇಂತಹ ಧರ್ಮನಿಷ್ಟೆವುಳ್ಳವರು ಬೇರೆಲ್ಲೂ ಸಿಗಲಾರರು. ಇಲ್ಲಿ ಧರ್ಮ ಮತ್ತು ರಾಜಕಾರಣಗಳು ಒಟ್ಟಾಗಿ ಬೆಳೆದಿವೆ. ಹೀಗೆ ಭಾರತದ ಚರಿತ್ರೆಯು ಆಧ್ಯಾತ್ಮಿಕ ಹೋರನೋಟವನ್ನು ಬಿಂಬಿಸುತ್ತಾ ಬಂದಿದೆ. ಇಲ್ಲಿನ ಸಾಧುಸಂತರು, ಋಷಿಗಳು, ಸುಧಾರಕರು ಆಧ್ಯಾತ್ಮಿಕ ಭಾವನೆಯನ್ನು ತುಂಬಿದ್ದಾರೆ.

ಸುಮಾರು ಹತ್ತು ಸಾವಿರ ವರ್ಷಗಳಿಗೂ ಹಿಂದೆ ಭಾರತದಲ್ಲಿ ಹಾಗೂ ಜಗತ್ತಿನ ಎಲ್ಲಾ ಭಾಗಗಳಲ್ಲಿ ಪ್ರಚಲಿತವಿದ್ದ ಹರಪ್ಪ ಮೊಹೆಂಜೋದಾರೋಗಳ ಸಿಂಧೂ ಕಣಿವೆಯಲ್ಲಿ ಪುರಾತತ್ವ ಉತ್ಖನಗಳನ್ನು ಮಾಡಿದಾಗ ಶಿವಪಾರ್ವತಿಯರನ್ನು ಹೋಲುವ ಅನೇಕ ವಿಗ್ರಹಗಳು ದೊರಕಿವೆ. ಈ ಮುರ್ತಿಗಳು ವಿವಿಧ ಭಂಗಿಗಳು ಯೋಗಾಸನಗಳು ಹಾಗೂ ಧ್ಯಾನ ಭಂಗಿಗಳನ್ನು ನಿರೂಪಿಸುತ್ತವೆ. ಈ ಅವಶೇಷಗಳು ದೋರೆತಂಥ ಸಿಂಧೂ ಉಪಖಂಡದಲ್ಲಿ ಆರ್ಯ ಸಂಸ್ಕೃತಿಯ ಪ್ರವರ್ಧಮಾನಕ್ಕೆ ಬರುವ ಮೊದಲೇ ಅಂದರೆ ವೇದಪೂರ್ವಕಾಲದಲ್ಲಿ ಇದ್ದಂಥ ಜನರಿಗೆ ಈ ಸಂಸ್ಕೃತಿಯ ಸಬ'ಂಧಿಸಿದೆ. ನಮ್ಮ ಪೂರಾಣಶಾಸ್ತ್ರಗಳ ಪ್ರಕಾರ ಯೋಗಾಸನವಿದ್ಯೆಯ ಪ್ರವರ್ತಕ ಶಿವ. ಪಾರ್ವತಿ ಆತನ ಪ್ರಥಮ ಶಿಷ್ಯೆ. ಶಿವನನ್ನು ಎಲ್ಲೆಡೆಯೂ ಅತಿಪ್ರಜ್ಞೆಯ ಸಂಕೇತ ಅಥವಾ ಸ್ವರೂಪವೆಂದು ಭಾವಿಸಲಾಗಿದೆ. ಪಾರ್ವತಿಯು ಪರಮೋಚ್ಚ ಜ್ಞಾನ, ಮನಸ್ಸು

ಹಾಗೂ ಕ್ರಿಯೆಗಳ ಪ್ರತೀಕವಾಗಿದ್ದು ಎಲ್ಲ ಸೃಷ್ಟಿಯ ಮೂಲಕರ್ತಳಾಗಿದ್ದಾಳೆ. ಈ ಶಕ್ತಿ ಅಥವಾ ಚೈತನ್ಯವನ್ನು ಕುಂಡಲಿನೀ ಶಕ್ತಿ ಎಂದು ಕರೆಯಲಾಗಿದೆ. ಇದು ಎಲ್ಲ

ಜೀವಿಗಳಲ್ಲೂ ಸುಪ್ತವಾಗಿರುವ ವಿಶ್ವಚೈತನ್ಯ. ಪಾರ್ವತಿಯನ್ನು ಜಗನ್ಮಾತೆ ಎಂದೂ ಪರಿಗಣಿಸಲಾಗಿದೆ.ವ್ಯಕ್ತಿಯ ಆತ್ಮವು ಪ್ರಾಪಂಚಿಕ ಬಂಧನದಲ್ಲಿ ಸಿಲಿಕಿಕೊಂಡಿರುತ್ತದೆ. ಜಗನ್ಮಾತೆಯ ನುಗ್ರಹದಿಂದ ಈ ಬಂಧನದಿಂದ ಬಿಡುಗಡೆ ಹೊಂದಿ ವಿಶ್ವಾತ್ಮನಲ್ಲಿ ಲೀನವಾಗುತ್ತದೆ. ಪಾರ್ವತಿ ಪ್ರೀತಿ ಹಾಗೂ ಅನುಕಂಪದಿಂದ ಗುಪ್ತವಿದ್ಯೆಯಾದ ವಿಮುಕ್ತಿಯ ಜ್ಞಾನವನ್ನು ತನ್ನ ಮಕ್ಕಳಿಗೆ ತಂತ್ರದ ರೂಪದಲ್ಲಿ ತಿಳಿಸಿಕೋಟ್ಟಿದ್ದಾಳೆ. ಯೋಗಪದ್ಧತಿಯ ಮೂಲ ತಂತ್ರದಲ್ಲಿದೆ. ಹೇಗೆ ಅತ್ಮರೂಪನಾದ ಶಿವನನ್ನು ಶಕ್ತಿಸ್ವರೂಪಿಣಿಯಿಂದ ಬೇರ್ಪಡಿಸಲು ಸಾಧ್ಯವಿಲ್ಲವೋ ಹಾಗೆ ಯೋಗವನ್ನು ತಂತ್ರದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಎಕೆಂದರೆ ಯೋಗದ ಕುರಿತಾದ ಮೊದಲಿನ ಉಲ್ಲೇಖಗಳು ಪ್ರಾಚೀನ ತಂತ್ರಗಳಲ್ಲಿ ಸಿಗುತ್ತವೆ.

ತಂತ್ರ ಎಂದರೆ ಪ್ರಜ್ಞೆಯ ವಿಕಸನ ಮತ್ತು ಇತಿಮಿತಿಗಳಿಂದ ಬಿಡುಗಡೆಮಾಡುವ ವಿಜ್ಞಾನ. ಈ ಪ್ರಪಂಚದಲ್ಲಿ ಜೀವಿಸಿರುವಾಗಲೇ ಪ್ರಾಪಂಚಿಕ ಬಂಧನಗಳಿಂದ ವಿಮುಕ್ತಿ ಪಡೆಯುವ ಮಾರ್ಗವಾಗಿದೆ. ತಂತ್ರ ದೇಹ ಹಾಗೂ ಮನಸ್ಸಿನ ಇತಿಮಿತಿಗಳನ್ನು ಹಾಗೂ ಸಾಮರ್ಥ್ಯವನ್ನು ಅರಿವಿಗೆ ತಂದುಕೊಳ್ಳುವುದು ತಂತ್ರದ ಮೊದಲ ಸೋಪಾನ. ಇದು ವ್ಯಕ್ತಿಯ ಪರಿಮಿತಿಗಳನ್ನು ದಾಟಿ ಅದನ್ನು ಮೀರಿದ ಸತ್ಯವನ್ನು ಕಂಡುಕೊಳ್ಳುವುದು ಇದರಿಂದ ಸಾಧ್ಯವಾಗುತ್ತದೆ.

ನಾಗರಿಕತೆಯು ಬೆಳೆದಂತೆ ಮಾನವನ್ನು ತನ್ನ ಅಧ್ಯಾತ್ಮಿಕ ಅಂತ: ಶಕ್ತಿಯನ್ನು ಅರಿತು ಅದನ್ನು ಅಭಿವೃದ್ಧಿಪಡಿಸುವ ವಿಧಾನವನವನು ರೂಪಿಸಿಕೋಳ್ಳತೋಡಗಿದಾಗ ಯೋಗಪದ್ಧತಿ ಆರಂಭವಾಯಿತು.ಕ್ರಮೇಣ ಯೋಗವಿಜ್ಞಾನವಿಕಾಸಗೋಂಡಿತು. ಜಗತ್ತಿನಾದ್ಯಂತ ಪ್ರಾಚೀನ ಋಷಿಮುನಿಗಳು ಇದರ ಬೆಳವಣಿಗೆಗೆ ಕಾರಣರಾದರು. ಯೋಗದ ಸಾರವನ್ನು ವಿವಿಧ ಪ್ರತೀಕಗಳು, ಸಾದೃಶ್ಯಗಳು ಹಾಗೂ ಸಂಸ್ಕೃತ ಭಾಷೆಗಳಲ್ಲಿ ಗೌಪ್ಯವಿಧಾನದಲ್ಲಿ ವಿವರಿಸಲಾಗಿದೆ. ಮಾನವಕುಲವು ತನ್ನ ದೈವೀಸ್ವರೂಪವನ್ನು ಸಾಕ್ಷಾತ್ಕರಿಸಿಕೋಳ್ಳಲು ಅನುಕುಲವಾಗುವಂತೆ ಪ್ರಾಚೀನ ಋಷಿವರ್ಯರಿಗೆ ಇದು ದೈವಿಕ ಬಳುವಳಿಯಾಗಿ ಬಂದಿತು ಮುಂದೆ ರಾಜಯೋಗವನ್ನು ಕುರಿತು ಪತಂಜಲಿಮಹರ್ಷಿಯು ಕ್ರಿ.ಪೂ 2ನೇ ಶತಮಾನದ ಕೋನೆಯಲ್ಲಿ ರಚಿಸಿದ ಯೋಗಸೂತ್ರ ಎಂಬ ಪ್ರಕರಣಗ್ರಂಥವು ಯೋಗಪದ್ಧತಿಗೆ ಸ್ವರೂಪವೆಂದು ಭಾವಿಸಲಾಗಿದೆ.ಪಾರ್ವತಿಯು ಪರಮೋಚ್ಚ ಜ್ಞಾನ, ಮನಸ್ಸು ಒಂದು ನಿರ್ಧಷ್ಟ ರೂಪವನ್ನು ಕೋಟ್ಟು ಎಲ್ಲಾ ಆಂಶಗಳನ್ನು ಕ್ರೂಡೀಕರಿಸಿದ ಪ್ರಥಮ ಕೃತಿಯಾಗಿದೆಇದನ್ನು ಅಷ್ಟಾಂಗ ಮಾರ್ಗ ಎಂದು ಕರೆಯುತ್ತಾರೆ.ಈ ಯೋಗದಲ್ಲಿ ಯಮ–ಸ್ವಯಂ ನಿರ್ಬಂಧ'ಗಳು, ನಿಯಮ–ಸ್ವಯಂ ಆಚರಣೆಗಳು, ಆಸನಗಳು–ದೇಹದಸ್ಥಿರತೆ, ಪ್ರಾಣಾಯಾಮ-ಉಸಿರಿನಮೇಲೆ ಹಿಡಿತ, ಪ್ರತ್ಯಾಹಾರ–ಇಂದ್ರಿಯನಿಗ್ರಹ, ಧಾರಣ–ಧ್ಯಾನದ ವೈವಸ್ಥೆಯನ್ನು ಧರಿಸುವದು, ಧ್ಯಾನ ಮತ್ತು ಸಮಾದಿ– ಪರಿಶುದ್ಧ ಪ್ರಜ್ಞೆಯೊಂದಿಗೆ ಗುರಿತ್ತಿಸಿಕೋಳ್ಳುವದ್ದಾಗಿದೆ. ಹೀಗಾಗಿ ಭಾರತದ ಇತಿಹಾಸದಲ್ಲಿ ದಕ್ಷಿಣ ಭರತದ ಇತಿಹಾಸಕ್ಕಿಂತ ಉತ್ತರ ಭಾರತದ ಇತಿಹಾಸಕ್ಕೆ ಹೆಚ್ಚಿನ ಪ್ರಾದಾನ್ಯತೆನೀಡಲಾಗಿದೆ, ಇದಕ್ಕೆ ಕಾರಣ ಜೀವನದಿಳಗಂತಹ ಬೌಗೋಳಿಕ ಸಮೃದ್ಧತೆಯಿಂದ ಪ್ರಾಚೀನ ನಾಗರಿಕತೆಗಳಾದ ಸಿಂಧೂ ಬಯಲಿನ ನಾಗರಿಕತೆ ಮತ್ತು ವೇದಗಳ ಕಾಲದ ನಾಗರಿಕತೆಗಳು ಇಲ್ಲಿ ಜನ್ಮ ತಾಳಿದವು ಅಲ್ಲದೆ. ಪವಿತ್ರವಾದ ವೇದಗಳ ರಚನೆಯಾದುದು. ಇದಲ್ಲದೆ. ಶ್ರೇಷ್ಟ ಆರ್ಯ ನಾಗರಿಕತೆಗಳು ಇಲ್ಲೇ ಹುಟ್ಟಿ ದಕ್ಷಿಣಕ್ಕೆ ಕಾಲಿಟ್ಟವು. ಆದ್ದರಿಂದ ನಮ್ಮ ಚರಿತ್ರೆಯ ಯುಗಮಸ್ಥಾನ ಆರ್ಯಸ್ಥಾನವೇಂದು ನಂಬಲಾಗಿದೆ. ಆದ್ದರಿಂದ ಭಾರತದ ಚರಿತ್ರೆ ಮೊದಲು ಉತ್ತರ ಭಾರತದ ಇತಿಹಾಸದಿಂದ ಆರಂಭವಾಗಿದೆ ಹೀಗಾಗಿ ಯೋಗವು ಉತ್ತರ ಭಾರತದಿಂದ ಪ್ರಾರಂಬವಾಗಿ ಮುಂದೆ ದಕ್ಷೀಣ ಭಾರತದಲ್ಲಿ ಹರಡಿಕೊಂಡಿತ್ತು. ನಂತರ ಎಲ್ಲಾ ಧರ್ಮಗಲ್ಲಿ ಯೋಗದ ಸಿದ್ಧಾಂತಗಳನ್ನು ಸೆರಿಸಿಕೊಂಡಿವೆ.ಹೀಗೆ ಯೋಗ ಬೆಳೆಯುತ್ತಾ ಇಂದು ಆಧುನಿಕ ಯೋಗವಿಜ್ಞಾನವೆಂದು ಇಡಿ ವಿಶ್ವವೇ ಯೋಗವನ್ನು ಒಪ್ಪಿಕೊಂಡು ಅಪ್ಪಿಕೊಂಡಿವೆ. ಹೀಗಾಗಿ ಯೋಗದ ಕೊಡುಗೆ ಭಾರತದ ಹೆಮ್ಮೆಯ ಕೊಡುಗೆ ಯಾಗಿದೆ.

ಜ್ಞಾನ ಮತ್ತು ತತ್ತ್ವಜ್ಞಾನ: ವಚನಕಾರರನ್ನು ಅನುಲಕ್ಷಿಸಿ

ಪ್ರಿಯದರ್ಶಿನಿ
ಸಂಶೋಧನಾ ವಿದ್ಯಾರ್ಥಿನಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ– 583276

12ನೇ ಶತಮಾನವು ಭಕ್ತಿಯ ಔಕಟ್ಟಿನಲ್ಲಿ ವೈಚಾರಿಕತೆಯನ್ನು ಇರಿಸಿಕೊರಿಸು ಬೆಕೆಏ ಕ್ರಾರಿಕಿಯಾಗಿದೆ. ಇಲ್ಲಿ ಶರಣರು ಅನುಭಾವ ತತ್ತ್ವಜ್ಞಾನದ ಪರಾಕಾಷ್ಠೆಯನ್ನು ತಮ್ಮ ವಚನಗಳಲ್ಲಿ ಅಭಿವ್ಯಕ್ತಿಪಿಸ್ಯಾರೆ. ಅವರ ಆಧ್ಯಾತ್ಮಿಕ ಮತ್ತು ನಿಜ್ಞಾನದರಿವಿನ ಆಳ, ಸೃಷ್ಟಿಯ ಬಗೆಗಿನ ತಿಳುವಳಿಕೆ, ವೇಷ–ಆತ್ಮಗಳ ಅರಿವು, ಓರಿಕಾರ, ಆತ್ಮ–ಪರಮಾತ್ಮ, ಸೂಕ್ಷ್ಮ, ಜಡ, ಸ್ಥೂಲ, ಶೂನ್ಯ, ಚಿಗತ್ತು, ಜ್ಞಾನ, ದರ್ಶನ, ತಿರೈಕ್ಯ, ಮೋಕ್ಷ, ಬಯಲು, ಅರ್ಚನ, ಅರ್ಪಣ ಇವೆಲ್ಲ ಶಿವನಲ್ಲಿ ಒರಿದಾಗುವುವು ಎರಿಸು ಈ ತತ್ತ್ವ ಸಾಹಿತ್ಯದಲ್ಲಿ ನಿರೂಪಿಸಿಸ್ಯಾರೆ.

ವಚನಕಾರರು ಪರಂಪರೆ ಮತ್ತು ಪ್ರಸ್ತುತವನ್ನು ಒಪ್ಪಿಕೊರಿಸುವರು. ಪ್ರಸ್ತುತವನ್ನರಿಯಲು ಪರಂಪರೆಯ ಜ್ಞಾನ ಅವಶ್ಯವೆನ್ನುವುದು ಇವರ ನಿಲುವು. ಇಷ್ಟುದ್ದನ್ನು ಇದ್ದ ಹಾಗೆ ಹೇಳುವ, ಸತ್ಯವನ್ನು ಒಪ್ಪಿಕೊಳ್ಳುವ, ಮೌಢ್ಯವನ್ನು ಖಂಡಿಸುವ ಪ್ರಾಮಾಣಿಕ ಖಡಕಿನ ಕಾಳಜಿ ಅವರಲ್ಲಿ ನೈಜವಾಗಿತ್ತು. ರೋಕವನ್ನು ತಿದ್ದುವ ಅನುಭಾವದ ಅರಿವು ಇವರ ವಚನಗಳ ಶಕ್ತಿಯಾಗಿದೆ. ಅರಿವು ಮೂಲತಃ ಎಲ್ಲರಲ್ಲೂ ಅರಿತಃಸ್ಸತ್ವವಾಗಿರುವ(ಅಡಕವಾಗಿರುವ) ಒರಿದು ಸಾಮಾನ್ಯ ಶಕ್ತಿ. ಅದು ರೋಕಾನುಭವವಿರಿದ ಮನುಷ್ಯನ ಅರಿವು ಎಚ್ಚರಗೊರಿಸು ಸ್ವ–ಅನುಭವವಾಗಿ ಮಾರ್ಪಾಡಾಗುತ್ತದೆ.

ಮನುಷ್ಯನು ಪಂಚೇಂದ್ರಿಯಗಳನ್ನು ತನ್ನ ಅಂಕಿತಕ್ಕೆ ಒಳಪಡಿಸಿಕೊಳ್ಳದಿದ್ದರೆ ಒಡಲ ಗುಣಗಳಾದ ಸಿಟ್ಟು, ರೋಷ, ದ್ವೇಷ ಮುಂತಾದ ದುಷ್ಟ ಗುಣಗಳ ಹಿಡಿತಕ್ಕೆ ಒಳಗಾಗಿ ಕೇಡಿಯಾಗಿ ವರ್ತಿಸುತ್ತಾನೆ. ಇದಕ್ಕೆಲ್ಲಾ ಅಜ್ಞಾನದ ದ್ವೇಷಭಾವನೆಯೇ ಕಾರಣ. ಇದನ್ನು ಉಪಶಮನ ಮಾಡಿಕೊಳ್ಳದಿದ್ದರೆ, ಪರಮಾತ್ಮನನ್ನು ಕಾಣಲು ಸಾಧ್ಯವಿಲ್ಲ. ಇಂಥವರನ್ನು ಕುರಿತು ಬಸವಣ್ಣನವರು 'ಅರಿಯದವರೊಡನೆ ಸಂಗವ ಮಾಡಿದರೆ ಕಲ್ಲ ಹೊಯ್ದು ಕಿಡಿಯ ಕೊಂಬಂತೆ, ಬಲ್ಲವರೊಡನೆ ಸಂಗವ ಮಾಡಿದರೆ ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ' ಎಂದು ವಿಶ್ಲೇಷಿಸಿದ್ದಾರೆ.

ಅರಿವೆಂಬುದು ವ್ಯಕ್ತಿತ್ವವನ್ನು ಒದಗಿಸುವ ಆಂತರಿಕ ಸಂಪತ್ತು. ಮೌಢ್ಯತೆಗೆ ವಶವಾದವನು ಎಡವುತ್ತಾ ಮುಗ್ಗರಿಸುತ್ತಾ ಸಾಗಬೇಕಾಗಿದೆ. ಅರಿವೆಂಬ ಮಹಾಬೆಳಕಿನಲ್ಲಿ ಈ ಮಾಯೆಯನ್ನು ಕಳೆಯಬೇಕು. 'ಅರಿವಿನೆಚ್ಚರದ ನೈತಿಕ ಪ್ರಜ್ಞೆಯ ಆತ್ಮಗೌರವದ ನಡೆ, ಕಾಯಕ ಮಾಡುವ ಮನಸ್ಸು, ಪರಧನವತ್ತ ಅಳುಪಬಾರದು ಎಂಬ ನೀತಿಯ ನಡೆ, ಪರದ್ರವ್ಯಕ್ಕೆ ಆಸೆ ಮಾಡಿದರೆ ನರಕದಲ್ಲಿಕ್ಕಿ ನೀನೆದ್ದು ಹೋಗಾ' ಎಂದು ದೈವಕ್ಕೆ ಸವಾಲು ಹಾಕುವ ಕೆಚ್ಚು ಮೂಡುವುದು ನೈತಿಕ ಎದೆಗಾರಿಕೆಯಿಂದ. ಅದಕ್ಕಾಗಿ ಮೌಢ್ಯವನ್ನು ಅಳಿಸಿ ಮಾನಸಿಕ ಸಿದ್ಧತೆಯನ್ನು ಮಾಡಿಕೊಳ್ಳುವಾಗ ಮನಸ್ಸಿನ ಕತ್ತಲೆ ಮತ್ತು ತನುವಿನ ಅಹಂಕಾರವನ್ನು ಕಳೆಯಬೇಕು. ಈ ಅರಿವಿನಲ್ಲಿ ಜ್ಞಾನ ಮತ್ತು ತತ್ತ್ವಜ್ಞಾನದ ಕುರಿತು ವಚನಕಾರರ ನೆರೆಯಲ್ಲಿ ಚರ್ಚಿಸುವುದು ನನ್ನ ಲೇಖನದ ಮುಖ್ಯ ಉದ್ದೇಶವಾಗಿದೆ.

12ನೇ ಶತಮಾನವು ಭಕ್ತಿಯ ಚೌಕಟ್ಟಿನಲ್ಲಿ ವೈಚಾರಿಕತೆಯನ್ನು ಇರಿಸಿಕೊಂಡು ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡಿತು. ಇಲ್ಲಿ ಶರಣರು ತಮ್ಮ ಯೋಗ, ಜ್ಞಾನ ಆತ್ಮ ಸಿದ್ಧಿಗಳಿಂದ ಗಳಿಸಿಕೊಂಡ ಜ್ಞಾನವನ್ನು ಅನುಭಾವ ತತ್ತ್ವಜ್ಞಾನದ ಪರಾಕಾಷ್ಠೆಯನ್ನು ತಮ್ಮ ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಅವರ ಆಧ್ಯಾತ್ಮಿಕ ಮತ್ತು ನಿಜ್ಞಾನದರಿವಿನ ಆಳ, ಸೃಷ್ಟಿಯ ಬಗೆಗಿನ ತಿಳುವಳಿಕೆ, ದೇಹ–ಆತ್ಮಗಳ ಅರಿವು, ಓಂಕಾರ, ಆತ್ಮ–ಪರಮಾತ್ಮ, ಸೂಕ್ಷ್ಮ, ಜಡ, ಸ್ಥೂಲ, ಜಗತ್ತು, ಜ್ಞಾನ, ದರ್ಶನ, ಶಿವೈಕ್ಯ, ಮೋಕ್ಷ, ಬಯಲು, ಅರ್ಚನ, ಅರ್ಪಣ ಇವೆಲ್ಲ ಶಿವನಲ್ಲಿ ಒಂದಾಗುವುವು ಎಂದು ನಿರೂಪಿಸಿದ್ದಾರೆ.

ತತ್ತ್ವವೆಂದರೆ 'ಯಾವುದರಿಂದ ವಸ್ತುಗಳ ನಿಜ ಸ್ವರೂಪವನ್ನು ನಿರೀಕ್ಷಿಸಿ, ಪರೀಕ್ಷಿಸಿ ನಿರೂಪಿಸಲಾಗುವುದೋ ಅದೇ ದರ್ಶನ ಅಥವಾ ತತ್ವ. ನಾನು ಯಾರು? ಎಲ್ಲಿಂದ ಬಂದೆ? ಜಗತ್ತಿನ ಸ್ವರೂಪವೇನು? ಅದು ಚೇತನವೋ? ಅಚೇತನವೋ? ಎನ್ನುವಂತಹ ಮುಂತಾದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡುವುದು ದರ್ಶನದ ಮುಖ್ಯ ಉದ್ದೇಶವಾಗಿದೆ. ಇದನ್ನೇ ತತ್ತ್ವಜ್ಞಾನ ಎಂದು ಹೇಳಲಾಗುತ್ತದೆ.

ವಚನಕಾರರದು ವಾಸ್ತವಿಕ ಜಗತ್ತಿನಲ್ಲಿ ಬದುಕುವ ಮಾನವ ಕುಲವನ್ನೆಲ್ಲವನ್ನು ಸಲಹುವ ತತ್ವವಾಗಿದೆ. ಅಲ್ಲದೆ ಇವರು ಪರಂಪರೆ ಮತ್ತು ಪ್ರಸ್ತುತತೆಯನ್ನು ಒಪ್ಪಿಕೊಂಡು, ಪ್ರಸ್ತುತವನ್ನರಿಯಲು ಪರಂಪರೆಯ ಜ್ಞಾನ ಅವಶ್ಯವೆನ್ನುವುದನ್ನು ಕಂಡುಕೊಂಡವರು. ಇದ್ದುದನ್ನು ಇದ್ದ ಹಾಗೆ ಹೇಳುವ, ಸತ್ಯವನ್ನು ಒಪ್ಪಿಕೊಳ್ಳುವ ಮೌಢ್ಯವನ್ನು ಖಂಡಿಸುವ, ಪ್ರಾಮಾಣಿಕ ಬದುಕಿನ ಕಾಳಜಿ ಅವರಲ್ಲಿದೆ. ಲೋಕವನ್ನು ತಿದ್ದುವ ಅನುಭಾವದ ಅರಿವು ಇವರ ವಚನಗಳ ಶಕ್ತಿಯಾಗಿದೆ. ಅರಿವು ಮೂಲತಃ ಎಲ್ಲರಲ್ಲಿರುವ ಒಂದು ಸಾಮಾನ್ಯ ಶಕ್ತಿ. ಅದು ಲೋಕಾನುಭವದಿಂದ ಲಭಿಸುವಂತದ್ದು. ಆಗ ಮನುಷ್ಯನ ಅರಿವು ಎಚ್ಚರಗೊಂಡು ಸ್ವ–ಅನುಭವವಾಗಿ ಮಾರ್ಪಾಡಾಗುತ್ತದೆ.

ಅರಿವೆಂಬುದು ವ್ಯಕ್ತಿತ್ವವನ್ನು ಒದಗಿಸುವ ಆಂತರಿಕ ಸಂಪತ್ತು ಮೌಢ್ಯತೆಗೆ ವಶವಾದವನು ಎಡವುತ್ತ, ಮುಗ್ಗರಿಸುತ್ತಾ ಸಾಗಬೇಕಾಗುತ್ತದೆ. ಅರಿವೆಂಬ ಮಹಾಬೆಳಕಿನಲ್ಲಿ ಈ ಮಾಯೆಯನ್ನು ಕಳೆಯಬೇಕು. ಅರಿವಿನೆಚ್ಚರದ ನೈತಿಕ ಪ್ರಜ್ಞೆ, ಆತ್ಮಗೌರದ ನಡೆ, ಕಾಯಕ ಮಾಡುವ ಮನಸ್ಸು, ಪರದನದತ್ತ ಅಳುಪಬಾರದು ಎಂಬ ನೀತಿಯ ನಡೆ, ಪರದ್ರವ್ಯಕ್ಕೆ ಆಸೆ ಮಾಡಿದರೆ ನರಕದಲ್ಲಕ್ಕಿ ನೀನೆದ್ದು ಹೋಗಾ' ಎಂದು ದೈವಕ್ಕೆ ಸವಾಲು ಹಾಕುವ ಕೆಚ್ಚು ಮೂಡುವುದು ನೈತಿಕ ಎದೆಗಾರಿಕೆಯಿಂದ. ಅದಕ್ಕಾಗಿ ಮೌಢ್ಯವನ್ನು ಅಳಿಸಿ, ಮಾನಸಿಕ ಸಿದ್ಧತೆಯನ್ನು ಮಾಡಿಕೊಳ್ಳುವಾಗ ಮನಸ್ಸಿನ ಕತ್ತಲೆ ಮತ್ತು ತನುವಿನ ಅಹಂಕಾರವನ್ನು ಕಳೆಯಬೇಕು.

ಮನುಷ್ಯನು ಪಂಚೇಂದ್ರಿಯಗಳನ್ನು ತನ್ನ ಅಂಕಿತಕ್ಕೆ ಒಳಪಡಿಸಿಕೊಳ್ಳದಿದ್ದರೆ ಒಡಲ ಗುಣಗಳಾದ ಸಿಟ್ಟು, ಅಸೂಯೆ, ರೋಷ, ದ್ವೇಷ ಮುಂತಾದ ದುಷ್ಟ ಗುಣಗಳ ಹಿಡಿತಕ್ಕೆ ಒಳಗಾಗಿ ಕೇಡಿಯಾಗಿ ವರ್ತಿಸುತ್ತಾನೆ. ಇದಕ್ಕೆಲ್ಲಾ ಅಜ್ಞಾನದ ದ್ವೇಷಭಾವನೆಯೇ ಕಾರಣ. ಅದನ್ನು ಉಪಶಮನ ಮಾಡಿಕೊಳ್ಳದಿದ್ದರೆ, ಪರಮಾತ್ಮನನ್ನು ಕಾಣಲು ಸಾಧ್ಯವಿಲ್ಲ. ಇಂಥವರನ್ನು ಕುರಿತು ಬಸವಣ್ಣನವರು 'ಅರಿಯದವರೊಡನೆ ಸಂಗವ ಮಾಡಿದರೆ ಕಲ್ಲ ಹೊಯ್ದು ಕಿಡಿಯ ಕೊಂಬಂತೆ, ಬಲ್ಲವರೊಡನೆ ಸಂಗವ ಮಾಡಿದರೆ ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ ಎಂದು ವಿಶ್ಲೇಷಿಸಿದ್ದಾರೆ.

ಎಲ್ಲರೂ ದುಡಿಯಬೇಕು ಆಲಸಿಯಾಗಬಾರದು ದುಡಿತದಲ್ಲಿ ಸತ್ಯತೆ, ಶುದ್ಧತೆ ಸ್ವಾವಲಂಬನೆ, ಶ್ರದ್ಧೆ, ಪ್ರಾಮಾಣಿಕತೆ, ವಿಶಾಲತೆ ಇರಬೇಕು. ಅಲ್ಲಿ ಮೇಲು–ಕೀಳು ಇರಬಾರದು. ಇಂಥ ದುಡಿತಕ್ಕೆ 'ಕಾಯಕ' ಎಂದರು. ಈ ಕಾಯಕದಿಂದ ಬಂದ ಫಲ ತನಗಾಗಿ, ತನ್ನ ಪರಿವಾರಕ್ಕಾಗಿ ಮಾತ್ರವಲ್ಲ. ಇಡೀ ಸಮಾಜಕ್ಕಾಗಿ ಎನ್ನುವ ಮನೋಭಾವ ಮೂಡಬೇಕು. ಕಾಯಕದ ಪರಿಶ್ರಮದಿಂದ ಬಂದುದರಲ್ಲಿ ಎಲ್ಲರೂ ಕೂಡಿ ತಿನ್ನುವಂತಾಗಬೇಕು. ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳ ಮೇಲೆ ಇಷ್ಟ. ಪ್ರಾಣ ಭಾವಲಿಂಗ ಧರಿಸಿ, ಮಲತ್ರಯಗಳ ಬಂಧನ ಕಳೆದುಕೊಳ್ಳಬೇಕು. ಗುರು ಕೊಟ್ಟ ಇಷ್ಟ ಲಿಂಗದ ಮುಖಾಂತರ ಅರುಹಿನ ಕುರುಹನ್ನು ಪೂಜಿಸುತ್ತ ತನ್ನ ತಾನರಿಯಬೇಕು. ತನ್ನಲ್ಲಿರುವ ಶ್ರದ್ಧೆಯನ್ನು ಒಳ್ಳೆಯ ಕೆಲಸದ ಮೂಲಕ ಅರಳಿಸುತ್ತಾ ಶಕ್ತಿಯನ್ನು ಸಮನ್ವಯಗೊಳಿಸಿ ಸಾಮರಸ್ಯ ಪಡೆಯಬೇಕು. ಇದುವೇ ದರ್ಶನ, ವಚನಕಾರರು ಇದನ್ನು ಶಿವಾನುಭವ ದರ್ಶನ ಎಂದರು.

ರಸ್ಕಿನ್ ಹೇಳುವಂತೆ ''ಜ್ಞಾನ ಬೇಕಾದರೆ ನಾವು ಹೆಣಗಬೇಕು, ಅನ್ನಬೇಕಾದರೆ ಅದಕ್ಕಾಗಿ ಹೆಣಗಬೇಕು, ಆನಂದ ಬೇಕಾದರೆ ಹೆಣಗಬೇಕು ಹೀಗೆ ಹೆಣಗಾಟವೇ ಜೀವನದ ನಿಯಮವಾಗಿರುತ್ತದೆ.''1

ಕಾಯಕ ಕೇವಲ ಶರೀರ ಪೋಷಕ ದೃಷ್ಟಿಯಿಂದ ಮಾಡುವುದಾದರೆ ಆತ್ಮ ಪೋಷಕ ದೃಷ್ಟಿಯಿಂದ ಮಾಡುವುದಾಗಿರುವುದೆಂಬ ಪ್ರಜ್ಞೆಯನ್ನು ಜನರಲ್ಲಿ ಜಾಗೃತಗೊಳಿಸುವುದಾಗಿದೆ. ಕಾಯಕದಲ್ಲಿ ಭಕ್ತಿ, ಜ್ಞಾನ, ವೈರಾಗ್ಯ ಇವು ಮೂರರ ಸಮನ್ವಯವಿರುವುದರಿಂದಲೇ 'ಕಾಯಕವೇ ಕೈಲಾಸ' ಎಂಬ ಅನುಭವ ಮೂಡಿದೆ.

ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣ ಮಧುರ

ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ತಿಲದೊಳಗಣ ತೈಲ

ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಕ್ಷೀರದೊಳಗಣ ಘೃತ

ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಕಾಷ್ಠಯೊಳಗಳ ಅಗ್ನಿ ಇದು ಕಾರಣ

ನಮ್ಮ ಗುಹೇಶ್ವರಲಿಂಗವ ತನ್ನೊಳವದೆನೆಂಬ ಮಹಂತಗಲ್ಲದೆ

ಸತ್ಕ್ರಿಯಾಚರಣೇ ಸಾಧನೆ ಕಾಣಿಭೋ2

ಶರಣರ ವಿಚಾರಧಾರೆ ಜ್ಞಾನಪ್ರಧಾನವಾದುದು ಮಾತ್ರವಲ್ಲ ಕ್ರಿಯಾಪ್ರಧಾನವಾದುದು. ಸಾಮಾನ್ಯವಾಗಿ ಧರ್ಮವು ಕ್ರಿಯಾ ಪ್ರಧಾನ ಆಚರಣೆಗೆ ಒತ್ತು ಕೊಡುವಂಥದ್ದಾದರೂ ಕೆಲವು ವಿಚಾರಗಳು ಜ್ಞಾನಕ್ಕೆ ಹೆಚ್ಚಿನ ಒತ್ತು ಕೊಡುತ್ತವೆ. ಶರಣ ಸಿದ್ಧಾಂತ ಜ್ಞಾನ–ಕ್ರಿಯೆಗಳ ಸಮತೋಲನ ಮಾಡುತ್ತದೆ. ಕಬ್ಬಿನಲ್ಲಿ ಸಿಹಿರಸ ಇರುತ್ತದೆ. ಅದನ್ನು ಸಕಾಲದಲ್ಲಿ ಸಂಸ್ಕರಿಸಿ ಹೊರತೆಗೆಯದಿದ್ದರೆ ಅಲ್ಲೇ ಅದು ಹಿಂಗಿ ಹೋಗುತ್ತದೆ. ಕಬ್ಬಿನೊಳಗಣ ಮಧುರ ರಸ, ಬೆಲ್ಲವಾಗಿ ಸಕ್ಕರೆಯಾಗಿ ರೂಪುಗೊಳ್ಳದೆ ಇದ್ದರೆ ಅದು ಸೂರ್ಯನ ತಾಪಕ್ಕೆ ಸಿಲುಕಿ ಬತ್ತಿಹೋಗುತ್ತದೆ. ಸೂಕ್ತ ಕಾಲದಲ್ಲಿ ಹೊರತೆಗೆದು ಸಂಸ್ಕರಿಸುವುದೇ ಜಾಣತನ. ಅದುವೇ ಜ್ಞಾನ ತಿಲದೊಳಗಿರುವ ತೈಲವನ್ನು ಮಥನದ ಮೂಲಕ ತೆಗೆದು ಬೇರ್ಪಡಿಸಬೇಕು. ಹಾಲಿನಲ್ಲಿರುವ ತುಪ್ಪವನ್ನು ತೆಗೆಯಬೇಕಾದರೆ, ಸರಿಯಾಗಿ ಕಾಯಿಸಿ ಹೆಪ್ಪು ಹಾಕಿ, ತುಪ್ಪ ತೆಗೆಯಬೇಕು. ಇಲ್ಲದಿದ್ದರೆ ಉದಾಸೀನ ಸೋಮಾರಿತನ ಈ ಎಲ್ಲವೂ ಇವುಗಳನ್ನು ಹಾಳು ಮಾಡಿಬಿಡುತ್ತವೆ. ಕಬ್ಬಿನಲ್ಲಿ ಸಿಹಿ, ಎಳ್ಳಿನಲ್ಲಿ ಎಣ್ಣೆ, ಹಾಲಿನಲ್ಲಿ ತುಪ್ಪವಿರುವಂತೆ, ಆತ್ಮನು ದೇಹದಲ್ಲಿದ್ದರೂ, ಸರಿಯಾದ ಸಂಸ್ಕಾರ ಸಾಧನೆಯ ಮೂಲಕ ಅದಕ್ಕೆ ರೂಪ ಕೊಡದಿದ್ದರೆ ಕಬ್ಬಿನ ಜಲ್ಲೆ ದಂಟಿನಂತಾಗುವಂತೆ ಈ ದೇಹ–ಮುಪ್ಪು–ಮರಣಗಳಿಂದ ಬಿದ್ದು ಹೋಗುವುದು ಆತ್ಮವು ಬಂಧನದಿಂದ ಬಿಡುಗಡೆಯಾಗುವುದಿಲ್ಲ. ಕಟ್ಟಿಗೆಯಲ್ಲಿ ಬೆಂಕಿ ಇರುವುದು ನಿಜ ಆದರೆ ಅದು ಪ್ರಕಟಗೊಳ್ಳಬೇಕಾದರೆ ಸಾಕಷ್ಟು ಪ್ರಯತ್ನಬೇಕು. ಕಟ್ಟಿಗೆಯಲ್ಲಿ ತೇವಾಂಶವಿದ್ದರೆ ಬೆಂಕಿ ಹೊತ್ತಿಕೊಳ್ಳುವುದಿಲ್ಲ. ಹಸಿತನ ಆರಬೇಕು. ಆಗ ಮಾತ್ರ ಉರಿ, ಬೇಗನೆ ಹೊತ್ತಿಕೊಳ್ಳುತ್ತದೆ. ಕಟ್ಟಿಗೆಯಲ್ಲಿ ಬೆಂಕಿ ಇದ್ದರೂ ಅದು ಸುಪ್ತಾವಸ್ಥೆಯಲ್ಲಿರುವುದರಿಂದ ಹೊರಗಿನಿಂದ ಬೆಂಕಿಯ ಸ್ಪರ್ಶ ಬೇಕು. ಅದೇ ರೀತಿ ಎಲ್ಲಯವರೆಗೂ ಜೀವಿಯಲ್ಲಿ ನಾನು ನನ್ನದು ಎಂಬ ಅಹಂಕಾರ ಮಮಕಾರಗಳು ಇರುವವರೆಗೆ ಜ್ಞಾನದ ಉರಿ ಹೊತ್ತಿಕೊಳ್ಳುವುದು ಕಷ್ಟ. ಪ್ರತಿಯೊಬ್ಬನಲ್ಲೂ ಆತ್ಮಶಕ್ತಿ ಇರುವುದು ನಿಜವಾದರೂ ಹೊರಗಿನಿಂದ ಗುರುಬೋಧೆ, ದೀಕ್ಷಾ ಸಂಸ್ಕಾರಗಳ ಕಿಡಿ ಹೊತ್ತಬೇಕು. ಹೀಗೆಲ್ಲ ಆಗದೆ ಹೋದರೆ ಕಟ್ಟಗೆ ಇಟ್ಟಲ್ಲಿಯೇ ಕೊಳೆತು ಹೋಗುವಂತೆ ದೇಹವು ರೋಗ–ರುಜಿನ ಮುಪ್ಪು ಮರಣಗಳಿಂದ ಜರ್ಝರಿತವಾಗಿ ಕೊಳೆಯುವುದು ಅದರೊಡನೆ ಆತ್ಮಶಕ್ತಿಯೂ ವ್ಯರ್ಥವಾಗುವುದು. ಇದೇ ರೀತಿ ಮಾನವನ ದೇಹದಲ್ಲಿರುವ ಆತ್ಮಶಕ್ತಿಯನ್ನು ವಿಕಾಸಗೊಳಿಸಿಕೊಳ್ಳಬೇಕಾದರೆ ಕೇವಲ ತಿಳುವಳಿಕೆ, ಅರಿವು, ಜ್ಞಾನಗಳಿದ್ದರೆ ಸಾಲದು, ಶಿಸ್ತಿನಿಂದ ಕೂಡಿದ ಸಾಧನೆ ಬೇಕು. ದೇಹವನ್ನು ಕ್ರಿಯಾಮಥನಕ್ಕೊಳಪಡಿಸುವ ಇಂತಹ ಚಿಂತನೆಗಳೇ ಕಾಯಕ ತತ್ವದ ಪ್ರತಿಪಾದನೆಗೆ ಪ್ರೇರಣೆಗಳನ್ನೊದಗಿಸುತ್ತವೆ.

ಒಡಲುಗೊಂಡವ ಹಸಿವ

ಒಡಲುಗೊಂಡವ ಹುಸಿವ

ಒಡಲುಗೊಂಡವನೆಂದು ನೀನೆನ್ನ ಜಡಿದು ನುಡಿಯದಿರಾ

ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ3

ಈ ವಚನ ಹಸಿವನ್ನು ಕುರಿತು ಹೇಳುತ್ತದೆ. ಬದುಕಿನಲ್ಲಿರುವ ಗೊಂದಲಗಳಿಗೆಲ್ಲ ಕಾರಣ ಹಸಿದ ಈ ದೇಹ. ದಾಸಿಮಯ್ಯ ಹಸಿವಿನ ವಿವಿಧ ರೂಪಗಳನ್ನು ವಿವರಿಸುವುದಕ್ಕೆ ಹೋಗುವುದಿಲ್ಲ. ಆದರೆ ಹಸಿದ ಒಡಲು ಸರಿಯಾದ ವ್ಯವಸ್ಥೆ ಇಲ್ಲದಿದ್ದಾಗ ಹುಸಿಯುವುದು ಹೇಗೆ ಸಹಜವಾಗುತ್ತದೆ ಎನ್ನುವ ಒಂದು ಮಹತ್ವದ ಅನುಭವವನ್ನು ಹೇಳುತ್ತಾನೆ. ಅಷ್ಟೇ ಅಲ್ಲ ಭಗವಂತನಿಗೆ ಸವಾಲು ಹಾಕುತ್ತಾನೆ. ಈ ದೇಹದಿಂದ ಕೂಡಿರುವವರೆಗೆ ದೇಹದ ಸ್ವಭಾವವಾಗಿರುವ ಚಾಪಲ್ಯಗಳು, ದೌರ್ಬಲ್ಯಗಳು ಇದ್ದೇ ಇರುತ್ತವೆ. ಇವುಗಳಿರುವುದರಿಂದಲೇ ಮನುಷ್ಯ ತಲ್ಲಣಕ್ಕೊಳಗಾಗುವುದು. ಆದರೆ ಅನುಭಾವಿಯು ಈ ತಲ್ಲಣಗಳನ್ನು ಗೆಲ್ಲುತ್ತಾನೆ. ಈ ಹಿನ್ನೆಲೆಯಲ್ಲೇ ದಾಸಿಮಯ್ಯ ಹುಸಿದಾತನನ್ನು ಗೇಲಿ ಮಾಡದೇ ಅದಕ್ಕೆ ಕಾರಣವೆನೆಂಬುದನ್ನು ಅರಿಯುವ ಪ್ರಯತ್ನ ಮಾಡಬೇಕೆಂದು ಹೇಳಿದ್ದಾನೆ. ಜೊತೆಗೆ ದೇವರಿಗೂ, ನೀನು ಒಮ್ಮೆ ಒಡಲುಗೊಂಡು ಬಾ ಎಂಬ ಆಹ್ವಾನದಲ್ಲಿ ಶರೀರ ಧರ್ಮವನ್ನು ಸೂಚಿಸಿದ್ದಾನೆ ಶರೀರ ಮತ್ತು ಮನಸ್ಸುಗಳ ದೌರ್ಬಲ್ಯಗಳ ಅರಿವು ಇದ್ದುದರಿಂದ ವಚನಕಾರರ ವಚನಗಳಲ್ಲಿ ಆತ್ಮಶೋಧನೆ ಮತ್ತು ಆತ್ಮ ನಿರೀಕ್ಷಣೆಗಳು ಮೂಡಿಬರುತ್ತವೆ.

ಲಿಖಿತ ಪರಂಪರೆಯ ಜ್ಞಾನದ ಆಕರಗಳಾದ ವೇದ, ಶಾಸ್ತ್ರ, ಆಗಮ ಮುಂತಾದವು ಧರ್ಮವನ್ನು ಪ್ರತಿಪಾದಿಸುವ ಗ್ರಂಥಗಳು ಜನರ ಬದುಕಿನ ಮೇಲೆ ಅಗಾಧವಾದ ಪರಿಣಾಮ ಬೀರಿ ಅವರ ಜೀವನವನ್ನು ನಿಯಂತ್ರಿಸಿದಂಥವುಗಳಾಗಿವೆ. ಆದ್ದರಿಂದ ವಚನಕಾರರು ತಮ್ಮ ವಚನಗಳಲ್ಲಿ ಸಮಕಾಲೀನ ಜನರ ಜೀವನದಲ್ಲಿದ್ದ ವೈರುಧ್ಯಗಳನ್ನು ನಿಸ್ಸಂಕೋಚವಾಗಿ ಅಲ್ಲಗಳೆಯುತ್ತಾರೆ. ವೈದಿಕರು ನಡೆಸುತ್ತಿದ್ದ ಆಚಾರಗಳನ್ನು ಪ್ರಶ್ನಿಸುತ್ತಾರೆ. ವೇದಾಧ್ಯಯನವನ್ನು ಖಂಡಿಸಿ ವೇದವನ್ನು ಓದಿನ ಮಾತು ಎನ್ನುತ್ತಾರೆ. ಜ್ಞಾನರಾಶಿಯಾದ 'ವೇದ'ವನ್ನು ಓದಿನ ಮಾತು ಎನ್ನಬೇಕಾದರೆ, ಅದನ್ನು ಓದುತ್ತಿದ್ದ ಜನರು, ಓದಿನ ರೀತಿ, ಆಚರಣೆ, ವರ್ತನೆ, ಅವರಿಗೆ ಹಿಡಿಸಿಲ್ಲ. ಓದುವಿಕೆ ಗಿಳಿ ಓದಾಗಿರಬಾರದು. ಓದು ಆಡಂಬರ, ಪ್ರದರ್ಶನ, ಅಹಂಕಾರದ

ಮೂಲವಾದರೆ ನಿಜವಾದ ಅರಿವು ಮೂಡುವುದಿಲ್ಲ. ಆದ್ದರಿಂದ ಇಂತಹ ಓದನ್ನು ವಚನಕಾರರು ತಿರಸ್ಕರಿಸುತ್ತಾರೆ.

ವೇದಶಾಸ್ತ್ರ ಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟುವ ನುಚ್ಚು ತೌಡು ಕಾಣಿಬೋ
ಇವ ಕುಟ್ಟಲೇಕೆ ಕುಸುಕಲೇಕೆ
ಅತ್ತಲತ್ತ ಹರಿವ ಮನವ ಶಿರವನರಿದಡೆ
ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನ 4

ಈ ಬಗೆಯ ಲಿಖಿತ ಪರಂಪರೆಯ ಜ್ಞಾನದ ಆಕರಗಳ ಮಹತ್ವವನ್ನು ಮುರಿದಿಕ್ಕುವ, ಜನಸಾಮಾನ್ಯರ ವ್ಯಕ್ತಿತ್ವದ, ಬದುಕನ್ನು ಸುಧಾರಿಸುವುದು ಶರಣ ಚಳುವಳಿಯ ಮುಖ್ಯ ಉದ್ದೇಶವಾಗಿತ್ತು. ಆದ್ದರಿಂದಲೇ ಅವರು ಜನರ ಬದುಕನ್ನು ಹಿಡಿದು ಆಳುತ್ತಿದ್ದ ವೇದಶಾಸ್ತ್ರ, ಪುರಾಣಗಳ ಪ್ರಸ್ತುತತೆಯನ್ನು ಪ್ರಶ್ನಿಸುತ್ತಾರೆ. ಲಿಖಿತ ಜ್ಞಾನ ಪರಂಪರೆಯ ಮಿತಿಯನ್ನು ಗುರುತಿಸಿದ್ದಾರೆ.

ಮರಕ್ಕೆ ಬಾಯಿ ಬೇರೆಂದು ತಳಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡ
ಅಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಳಾರ್ಥವನೀವನು
ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದಡೆ
ನರಕ ತಪ್ಪದು ಕಾಣಾ, ಕೂಡಲಸಂಗಮದೇವಾ5

ಅಂಗ–ಜಂಗಮ ಬೇರೆ–ಬೇರೆಯಲ್ಲ, ಅಂಗದ ಇನ್ನೊಂದು ಮುಖವೇ ಜಂಗಮ ಜನತೆಯೇ ಜಂಗ. ಅಂಥ ಜನತೆಗೆ ದಾಸೋಹ ಮಾಡದೆ, ಜಡ ದೇವರಿಗೆ ಎಡೆ ಹಿಡಿದರೆ ಪ್ರಯೋಜನವಿಲ್ಲ. ಅಂಗದ ಬಾಯಿಯಾಗಿರುವ ಜನರನ್ನು ತೃಪ್ತಿಪಡಿಸಬೇಕೆಂಬ ಸಾಮಾಜಿಕ ಕಳಕಳಿ ವಚನದ್ದಾಗಿದೆ. ಆದರೆ ಆಧುನಿಕ ವಿದ್ಯಾವಂತರು ಇದನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಉದ್ಯೋಗದಲ್ಲಿರುವ ಕೆಲವು ವಿದ್ಯಾವಂತರು 'ತಳಕ್ಕೆ ನೀರನೆರೆದಡೆ ಮೇಲೆ ಪಲ್ಲವಿಸಿತ್ತು' ಎನ್ನುವ ಮಾತುಗಳನ್ನು ತಮ್ಮ ಆಫೀಸುಗಳಲ್ಲಿ ಕೆಲಸ ಮಾಡಿಸಿಕೊಳ್ಳಲು ಬರುವ ಜನರಿಗೆ ಅನ್ವಯಿಸಿ ಹೇಳುತ್ತಾರೆ. ಅಂದರೆ ಇಲ್ಲಿ ಹಣ ಕೊಟ್ಟರೆ ಮೇಲಿನ ಅಧಿಕಾರಿಗಳಿಂದ ನಿಮ್ಮ ಕೆಲಸ ಸುಲಭವಾಗಿ ಈಡೇರುತ್ತದೆ ಎಂಬುದು ಅವರ ಅಭಿಪ್ರಾಯ. ವಾಮ ಮಾರ್ಗದಿಂದ ಹಣ ಗಳಿಸಿ ಅಧಿಕಾರ ಪಡೆದು ವೈಭವದ ಜೀವನ ನಡೆಸುವವರೇ ದೊಡ್ಡವರಾಗಿ ಮರೆಯುತ್ತಿರುವ ಪ್ರಸ್ತುತಯುಗದಲ್ಲಿ ಜಾಗತೀಕರಣ ಮತ್ತು ಭ್ರಷ್ಟಾಚಾರದ ಒಳತಂತ್ರಗಳ ಜಾಲವನ್ನು 12ನೇ ಶತಮಾನದ ಶರಣರು ಭೇದಿಸಿದ್ದಾರೆ.

ಹೊನ್ನು ಮಾಯೆಯೆಂಬುರು
ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು
ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು
ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ
ಕಾಣಾ ಗುಹೇಶ್ವರ 6

ಅಲ್ಲಮನ ದೃಷ್ಟಿಯಲ್ಲಿ ಈ ಮೂರು ಮಾಯೆಯಲ್ಲ. ಜೀವನ ಧರ್ಮ ನಿಂತಿರುವುದೇ ಈ ಮೂರರ ಮೇಲೆ. ಈ ಮಣ್ಣಿನಿಂದ ರಚನೆಯಾದ ದೇಹ ಅಂತಿಮವಾಗಿ ಲೀನವಾಗುವುದು ಮಣ್ಣಿನಲ್ಲಿಯೇ ಹೊನ್ನು ಕೂಡಾ ಈ ಭೂಮಿಯ ಒಂದು ಭಾಗ. ಹೆಣ್ಣು ಸೃಷ್ಟಿಯ ಲಿಂಗ ವ್ಯವಸ್ಥೆಯ ಮುಖ್ಯ ಪ್ರಭೇದ. ಮುಂದಿನ ಪೀಳಿಗೆಯ ರಚನೆಗೆ ಮತ್ತು ಸಂರಕ್ಷಣೆಗೆ ಹೆಣ್ಣು ಅತ್ಯವಶ್ಯ. ಅದಕ್ಕಾಗಿ ಈ ಮೂರು ಮಾಯೆಯಲ್ಲ ಮನದ ಮುಂದಿನ ಆಸೆ ಮಾಯೆ. ಈ ಆಸೆ ಹುಟ್ಟುವುದು, ಬೆಳೆಯುವುದು, ಅಳಯುವುದು, ವಿಕಾರ ಹೊಂದುವುದು ಮನಸ್ಸಿನಲ್ಲಿ ಮನಸ್ಸು ಕಲುಷಿತವಾದರೆ ಮನುಷ್ಯ ಭ್ರಮೆಗೊಳಗಾಗುತ್ತಾನೆ. ಆಗ ತನ್ನ ಅರಿವನ್ನು ಕಳೆದುಕೊಳ್ಳುತ್ತಾನೆ. ನಮ್ಮ ಮನಸ್ಸಿನ ಎಲ್ಲ ದುಃಖಗಳಿಗೂ ಆಸೆಯೇ ಕಾರಣ ಎಂದು ಬುದ್ಧ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು. ಆದ್ದರಿಂದ ನಮ್ಮ ಮನಸ್ಸಿನ ಆಸೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕೆಂಬುದೇ ಅಲ್ಲಮನ ವಚನದ ಆಶಯ. ಮಾಯಾ ಪರಿಕಲ್ಪನೆಯನ್ನು ನಿರಾಕರಿಸಿ ಆತ್ಮಕ್ಕೆ ಲಿಂಗ ಭೇದವಿಲ್ಲ ಎಂಬ ತತ್ತ್ವವನ್ನು ಪ್ರತಿಪಾದಿಸುತ್ತಾನೆ.

ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆಯೆಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು?
ಈ ಎರಡರ ಉಭಯವ ಕಳೆದು ಸುಖಿತಾನಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ 7

ಎಂದು ಪ್ರಶ್ನಿಸುವ ಮೂಲಕ ಇಡೀ ಸಮಾಜದ ವ್ಯವಸ್ಥೆಯ ಒಳಹತೋಟಿಯನ್ನೇ ದಿಕ್ಕರಿಸುವ ಹಂತಕ್ಕೆ ತಲುಪುತ್ತಾಳೆ. ಗಂಡು ಯಾವಾಗಲೂ ಕೂಡ ಹೆಣ್ಣನ್ನು ಆಸ್ತಿ. ಅಂತಸ್ತು, ಸಂಪತ್ತಿನ ರೀತಿಯ ಒಡವೆಯೆಂದು, ಪ್ರತಿಷ್ಠೆ ಎಂದು ಪರಿಗಣಿಸಿದ್ದಾನೆ. ಆದರೆ ಹೆಣ್ಣು ಬದುಕಿನ ಮೌಲ್ಯಗಳನ್ನು ಪುರುಷನಂತೆ ನಿರ್ಧರಿಸುವಂತಹ ಹಂತಕ್ಕೆ ತಲುಪಿದರೆ ಹೆಣ್ಣು ಕೂಡ ಪುರುಷನ ರೀತಿಯೇ ಗಂಡನ್ನು ಮೋಹಿಸಿ ಪಡೆದರೆ ಯಾವ ಉತ್ತರವನ್ನು ಕೊಡಬೇಕು ಎಂದು ಪ್ರಶ್ನಿಸುತ್ತಾಳೆ ಕೇವಲ ಪುರುಷ ಸಮಾಜ ಹೆಣ್ಣನ್ನು ಒಡವೆ ಎಂದು ಅರಿಯುವುದರ ಜೊತೆಗೆ ಆಕೆಯನ್ನು ಲೈಂಗಿಕ ದೃಷ್ಟಿಯಿಂದಲೇ ಕಂಡಿರುವುದು ಹಾಗೂ ಹೆಣ್ಣು ಗಂಡನ್ನು ಕೂಡ ಅದೇ ದೃಷ್ಟಿಯಿಂದ ನೋಡಿದಾಗ ಆಗುವಂಥ ವ್ಯತ್ಯಾಸವನ್ನು ಪ್ರಶ್ನಿಸುತ್ತಾಳೆ. ಆದರೆ ಕೇವಲ ಪುರುಷ ಸಮಾಜವನ್ನು ಪ್ರಶ್ನಿಸಿ ಉತ್ತರಕ್ಕಾಗಿ ಕಾಯುತ್ತಾ ಕೂರುವ ಹೆಣ್ಣಲ್ಲ ಗೊಗ್ಗವ್ವೆ. ಹಾಗಾಗಿ ಎಲ್ಲಾ ಕಾಲಕ್ಕೂ ಒಪ್ಪಿಗೆಯಾಗುವಂತಹ

ಉತ್ತರವನ್ನು ನೀಡುತ್ತಾಳೆ. ಗೊಗ್ಗವ್ವೆ ಇಲ್ಲಿ ನಾಸ್ತಿನಾಥನನ್ನು ತನ್ನ ಆರಾಧ್ಯ ದೈವವನ್ನಾಗಿಸಿಕೊಂಡರೂ ಕೂಡ ಒಬ್ಬ ಪರಿಪೂರ್ಣ ಮನುಷ್ಯನನ್ನು ಅದರಲ್ಲಿ ಸಮೀಕರಿಸುತ್ತಿದ್ದಾಳೆ. ಸ್ತ್ರೀಯಾಗಲಿ, ಪುರುಷನಾಗಲಿ ಗಂಡು–ಹೆಣ್ಣೆಂಬ ಮೋಹವನ್ನು ಕಳೆದು ಬದುಕಿದರೆ, ಆ ಬದುಕು ಪರಿಪೂರ್ಣ ಎಂದು ತಿಳಿಸುತ್ತಾಳೆ. ಅಂಗ ವ್ಯತ್ಯಾಸದ ಆಚೆಗಿನ ಬದುಕನ್ನು ವಚನಗಳ ಮೂಲಕ ಗುರುತಿಸುವಂತಹ ಪ್ರಯತ್ನ ಮಾಡುತ್ತಾಳೆ.

ಮಾನವನ ಬದುಕು ತುಂಬಾ ವಿಸ್ಮಯಗಳ ಆಗರ. ಇಲ್ಲಿ ಕಂಡುಬರುವ ಉತ್ಸಾಹಗಳು, ಸ್ಪರ್ಶಗಳು, ಸಿರಿಸಂಪತ್ತುಗಳು, ಆಪತ್ತು, ವಿಪತ್ತುಗಳು, ಸಂತೋಷ–ಸಂಕಟ ಮುಂತಾದವುಗಳೆಲ್ಲ ಒಟ್ಟಾಗಿ ಸೇರಿ ಬದುಕು ಎನಿಸಿಕೊಳ್ಳುತ್ತದೆ. ಬದುಕಿನಲ್ಲಿ ಕಾಲ ಎಂದಿಗೂ ನಿಲ್ಲುವುದಿಲ್ಲ ಈ ಕಾಲದೊಂದಿಗೆ ನಾವು ಕಾಲು ಹಾಕಿದಾಗಲೇ ಬದುಕಿಗೊಂದು ಅರ್ಥ. ಬದುಕಿನಲ್ಲಿ ಕೆಲವೊಮ್ಮೆ ನಮಗೆ ನಾವೇ ಭ್ರಮೆಗೊಳಗಾಗಿ ನಮಗೆ ಅದೇ ಬೇಕು, ಇದೇ ಬೇಕು ಎಂಬ ಆಮಿಷಕ್ಕೊಳಗಾಗುತ್ತೇವೆ. ಆದರೆ ಎಷ್ಟೋ ಸಾರಿ ಬದುಕಿನಲ್ಲಿ ಸಮಯ ಅನ್ನೋದು ಎಷ್ಟು ಮಹತ್ವದ್ದಾಗಿರುತ್ತದೆ ಎಂಬುದನ್ನು ಈ ವಚನದಿಂದ ತಿಳಿಯಬಹುದು.

ಹಗಲು ನಾಲ್ಕು ಜಾವ ಆಶನಕ್ಕೆ ಕುದಿವರು
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು
ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ
ತಮ್ಮೊಳಗಿರ್ದ ಮಹಾಘನವನರಿಯರು ಚನ್ನಮಲ್ಲಿಕಾರ್ಜುನ ೪

ಅಕ್ಕಮಹಾದೇವಿಯ ಈ ವಚನ ಪ್ರತಿಯೊಬ್ಬರ ಬದುಕಿಗೆ ತುಂಬಾ ಹತ್ತಿರವಾದದ್ದಾಗಿದೆ. ನಮ್ಮ ಜೀವಿತದ ಅವಧಿ ಅತ್ಯಲ್ಪವಾದದ್ದು. ಜಗತ್ತಿನ ಎಲ್ಲ ದಾರ್ಶನಿಕರು, ಮಹಾತ್ಮರು ಅನುಭಾವಿಗಳು ಹೇಳುವುದು ಇದನ್ನೇ ಎಷ್ಟೇ ವೈಜ್ಞಾನಿಕವಾಗಿ ಹೊಸ–ಹೊಸ ಸಂಶೋಧನೆಗಳನ್ನು ಮಾಡಿದರೂ ಈ ಮಾನವ ಪ್ರಾಣಿ ಎಂದಿಗೂ ಚಿರಂಜೀವಿಯಾಗಿ ಉಳಿಯಲಾರ ಎಂಬ ಕಹಿ ಸತ್ಯವನ್ನು ಮನಗಾಣಬೇಕಾಗಿದೆ. ನಾವು ಭೂಮಿಯ ಮೇಲೆ ಬದುಕಿರುವಷ್ಟು ಕಾಲ ಹಿರಿಯರ ಹಿತನುಡಿಗಳನ್ನು ಆಲಿಸುತ್ತಾ ಸತ್ಸಂಗದಲ್ಲಿ ಭಾಗಿಗಳಾಗುತ್ತ ವಿವೇಕದ ದಾರಿಯಲ್ಲಿ ಸಾಗಬೇಕು. ಬದುಕೆಂಬುದು ಆಳ–ಅಗಲಗಳ ವಿಚಾರಧಾರೆ, ಸ್ನೇಹ ಸಾಮರಸ್ಯಗಳ ಮೂಲಕ ನೆಮ್ಮದಿ ಅರಸಬೇಕು. ಈ ಮರ್ತ್ಯದ ಮಾಯಾಜಾಲದೊಳಗೆ ಸಿಲುಕದೇ ಘನ ವ್ಯಕ್ತಿತ್ವವನ್ನು ಪಡೆದು ಆತ್ಮೋನ್ನತಿ ಪಡೆದುಕೊಳ್ಳಬೇಕೆಂಬುದು ಇಡೀ ವಚನಸಾಹಿತ್ಯದ ಒಟ್ಟು ಆಶಯವಾಗಿದೆ.

ಈ ಮೇಲಿನ ಎಲ್ಲಾ ವಚನಕಾರರ ವಿಶಿಷ್ಠತೆ ಎಂದರೆ ಪ್ರತಿಷ್ಠಿತ ಮಾದರಿಗಳನ್ನು ಮುರಿದದ್ದು. ವ್ಯಕ್ತಿ ನೆಲೆಯಿಂದ ಸಮುದಾಯದ ನೆಲೆಯತ್ತ ಚಲಿಸುವ ದಾರಿಯಲ್ಲಿ ಎದುರಾದ ಕೌಟುಂಬಿಕ ಸಾಮಾಜಿಕ ಹಾಗೂ ಚಳುವಳಿಯೊಳಗೆ ಇದ್ದ ಆಂತರಿಕ ಅಸಮಾನತೆಗಳ ವಿರುದ್ಧ ವೈಚಾರಿಕ ಸಮರವನ್ನೇ ಸಾರಿದರು. ಆ ಮೂಲಕ ವ್ಯಕ್ತಿ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಕ್ಕಿಸಿಕೊಂಡರು. ವ್ಯಕ್ತಿತ್ವದ ಸರ್ವತೋಮುಖ ವಿಕಾಸ, ಆರೋಗ್ಯಕರ ಸಮಾಜದ ರಚನೆಗೆ ಪೂರಕವಾಗುವ ಸೂತ್ರಗಳು ವಚನ ಸಾಹಿತ್ಯದಲ್ಲಿವೆ. ವಚನಕಾರರ ನೀತಿ ಬೋಧೆಯಲ್ಲಿ ಸರಳತೆ ತುಂಬಿದೆ. ಅವರು ಹೇಳುವ ಯಾವುದೊಂದು ಮಾತು ಸುಮ್ಮನೆ ಬಂದುದುದಲ್ಲ. ಅನುಭವ ಪೂರ್ಣವಾಗಿ ನುಡಿದದ್ದು. ಅದಲ್ಲದೆ ಜನರಲ್ಲಿ ಮನೆ ಮಾಡಿದ್ದ ಜಡತ್ವವನ್ನು ಕಳೆಯಲು ಪ್ರಗತಿಪರ ಚಿಂತನೆಗೆ ತೊಡಗಿಸಲು, ಅನಿಷ್ಠಗಳ ವಿರುದ್ಧ ಬಂಡೇಳಲು, ಪ್ರೇರಣೆ ನೀಡುವ ಅಂಶಗಳು ಇಲ್ಲಿವೆ. ಹೀಗೆ ಅವರು ಪ್ರಪಂಚಕ್ಕೆಲ್ಲ ಅನ್ವಯಿಸುವಂತಹ ನೀತಿ ಪಥವನ್ನು ಸಾರಿ ಹೇಳಿದ್ದಾರೆ. 'ಸತ್ಯಂವದ, ಧರ್ಮಂಚರ' ಎಂಬುದನ್ನೇ ವಚನಕಾರರ ನೀತಿ ಬೋಧನೆಯಾಗಿದೆ.

ಅಡಿಟಿಪ್ಪಣಿ

1. ಎಂ.ಎಂ. ಕಲಬುರ್ಗಿ; ಬಸವ ದರ್ಶನ–2, 1978

2. ಎಲ್. ಬಸವರಾಜು; ಅಲ್ಲಮಪ್ರಭು ವಚನಗಳು, ವ.358

3. ಓ.ಎಲ್.ನಾಗಭೂಷಣಸ್ವಾಮಿ; ವಚನ ಸಾವಿರ, 2004, ವ–308, ಪು.90

4. ಓ.ಎಲ್.ನಾಗಭೂಷಣಸ್ವಾಮಿ; ವಚನ ಸಾವಿರ, 2004, ವ–909, ಪು.268

5. ಓ.ಎಲ್.ನಾಗಭೂಷಣಸ್ವಾಮಿ; ವಚನ ಸಾವಿರ, 2004, ವ–812, ಪು.241

6. ಓ.ಎಲ್.ನಾಗಭೂಷಣಸ್ವಾಮಿ; ವಚನ ಸಾವಿರ, 2004, ವ–1058, ಪು.315

7. ಓ.ಎಲ್.ನಾಗಭೂಷಣಸ್ವಾಮಿ; ವಚನ ಸಾವಿರ, 2004, ವ–484, ಪು.143

8. ಓ.ಎಲ್.ನಾಗಭೂಷಣಸ್ವಾಮಿ; ವಚನ ಸಾವಿರ, 2004, ವ–992, ಪು.295

ಮಾನವನ ವಿಕಾಸದ ಹಂತದಲ್ಲಿ ಋಣಾತ್ಮಕ ಶಕ್ತಿಯ ಪಾತ್ರ

ಚಂದ್ರಮೌಳ ಎಂ.ಎಸ್
ಮನಃಶಾಸ್ತ್ರಜ್ಞ, ಬೆಂಗಳೂರು

ಪ್ರಸಕ್ತ ವಿಶ್ವವು ಹಲವಾರು ರೀತಿಯ ಶಕ್ತಿಗಳಿಂದ ತುಂಬಿಕೊಂಡಿರುವುದಿದೆ. ಪ್ರತಿಯೊಂದು ಶಕ್ತಿಯೂ ಕೂಡ ವಿಶ್ವದ ಸಕಲ ಚರಾಚರ ಪದಾರ್ಥಗಳ ಮೇಲೂ ತನ್ನ ಪ್ರಭಾವವನ್ನು ನಿಖರವಾದ ರೀತಿಯಲ್ಲಿ ಖಂಡಿತವಾಗಿಯೂ ಬೀರುವುದಾಗಿದೆ. ಈ ರೀತಿಯಾದ ಶಕ್ತಿಗಳಲ್ಲಿ ಹಲವಾರು ಶಕ್ತಿಗಳು ವಿಶೇಷವಾಗಿ ಮಾನವನಿಗೆ ಪ್ರಯೋಜನಕಾರಿಯಾಗಿರುವುದಿದೆ. ಇನ್ನುಳಿದಂತೆ ಶಕ್ತಿಗಳು ಮಾನವನ ರೀತಿನೀತಿಗಳಿಗೆ ತನ್ನ ವಿಶೇಷವಾದಂತಹ ಪ್ರಭಾವವನ್ನು ಬೀರುವುದಿದೆ

ಮಾನವನ ಪ್ರಯತ್ನಗಳ ಪರಿಖರಿಖಿತವಾಗಿ ಹಾಗು ಕೆಲವೊಮ್ಮೆ ಅವನ ಯಿಷಿನ ಪರಿಖರಿಖಿತವಾಗಿರಿಯೇ ಈ ರೀತಿಯಾದ ವಿಶೇಷ ಪ್ರಭಾವನ್ನು ಕೆಲವು ಶಕ್ತಿಗಳು ಖೀರುವುದಾಗಿವೆ. ಈ ರೀತಿಯಾದರಿಂಥಃ ಪ್ರಭಾವವು ಮಾನವನಿಗೆ ವ್ಯತಿರಿಕ್ತವಾಗಿ ಪರಿಣಮಿಸಿದಾಗ ಅದನ್ನು ಅಪ್ರಯೋಜನಕಾರಿ ಶಕ್ತಿ ಎಂದು ಗುರುತಿಸುವ ವಾಡಿಕೆಯು ಇರುವುದಾಗಿದೆ. ಒಟ್ಟಾರೆಯಾಗಿ ಅವಲೋಕಿಸಿದಾಗ, ಶಕ್ತಿಗಳನ್ನು ಧನಾತ್ಮಕ ಹಾಗು ಖುಣಾತ್ಮಕ ಎಂಬುದಾಗಿ ಮಾನವನು ವರ್ಗೀಕರಿಸಿರುವುದಿದೆ.

ವೈದೀಕ ಸಾಹಿತ್ಯವನ್ನು ಅವಲೋಕಿಸಿದಾಗಲೂ ಕೂಡ ಶಕ್ತಿಗಳಲ್ಲಿ ಖುಣಾತ್ಮಕ ಹಾಗು ಧನಾತ್ಮಕ ಎಂಬೆರಡು ಶಕ್ತಿಗಳ ಪರಿಚಯವು ಅಧ್ಯಯಿಗೆ ಯಿಂಟಾಗುವುದಿದೆ. ದೇವತೆಗಳ ಕಾರ್ಯವು ಸದಾಕಾಲವೂ ಖುಣಾತ್ಮಕ ಶಕ್ತಿಗಳ ವಿರುದ್ಧ ಹೋರಾಟವೇ ಆಗಿರುವುದನ್ನು ಪುರಾಣಗಳ ಮುಖಾಂತರವಾಗಿ ಅರಿಯಬಹುದಾಗಿದೆ. ಈ ರೀತಿಯಾದಂಥಃ ಹೋರಾಟವು ದೇವತೆಗಳಿಂದ ಪ್ರಾರಂಭಗೊಂಡು, ಮಾನವನವರೆಗೂ ಮುಂದುವರೆದಿರುವುದನ್ನು ಇತಿಹಾಸಗಳು ತಿಳಿಸಿಕೊಡುವುದಾಗಿದೆ. ಇದೊಂದು ಮುಗಿಯದ ಹೋರಾಟ ಎಂತೆಂಬುವುದಕ್ಕೆ ನಿದರ್ಶನವಾಗಿ, ಭಗವದ್ಗೀತೆಯಲ್ಲಿ ಶ್ರೀಕೃಷ್ಣನು 'ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂಬುದಾಗಿ ತಾನೇ ಹೇಳಿಕೊಂಡಿರುವುದನ್ನು ಅಧ್ಯಯಿಯು ಯಾವತ್ತಿಗೂ ಕಾಣಬಹುದಾಗಿದೆ.

ಇಷ್ಟೆಲ್ಲಾ ಇತಿಹಾಸ ಇರುವಂಥಃ ದುಷ್ಟಶಕ್ತಿಗಳು ಮೊದಲಿಂದಲೂ ಭೂಮಿ ಮೇಲೆ ಮಾತ್ರವಲ್ಲದೇ ಇಡೀ ವಿಶ್ವದಲ್ಲೇ ಏಕೆ ಇರುವುದಿದೆ? ಎಂಬಂಥಃ ಪ್ರಶ್ನೆಗೆ ಉತ್ತರವಾಗಿ, 'ವ್ಯಕ್ತಾವ್ಯಕ್ತದ ಅಡಿಯಲ್ಲಿ ಇರುವಂಥಃ ಸಕಲವೂ ಅವಶ್ಯಕತೆ ಇರುವುದರಿಂದಾಗಿಯೇ ಇರುವುದಾಗಿದೆಯೇ ಪರಂತು, ಅನಾವಶ್ಯಕವಾದಂಥಃವುಗಳು ಎಂದಿಗೂ ಇರುವುದಿಲ್ಲವಾಗಿದೆ' ಎಂಬುದಾಗಿ ವೇದ ಪ್ರಕಾರವಾದ ಸಾಹಿತ್ಯದಲ್ಲಿ ಇರುವುದಿದೆ. ಹಾಗಾದರೆ, ಮಾರಕ ಎಂದೆನಿಸುವಂಥಃ ಶಕ್ತಿಯ ಅವಶ್ಯಕತೆಯು ಈ ಸೃಷ್ಟಿಯ ಅಡಿಯಲ್ಲಿ ಏಕೆ ಇರುವುದಾಗಿದೆ? ಎಂತೆಂಬ ಪ್ರಶ್ನೆಗೆ ಸಂಭವನೀಯ ಉತ್ತರದ ಹುಡುಕಾಟವೇ ಈ ಒಂದು ಪ್ರಬಂಧದ ಉದ್ದೇಶವಾಗಿರುವುದಿದೆ.

ಪ್ರಸಕ್ತ ವಿಶ್ವವು ಹಲವಾರು ರೀತಿಯ ಶಕ್ತಿಗಳಿಂದ ತುಂಬಿಕೊಂಡಿರುವುದಿದೆ. ಪ್ರತಿಯೊಂದು ಶಕ್ತಿಯೂ ಕೂಡ ವಿಶ್ವದ ಸಕಲ ಚರಾಚರ ಪದಾರ್ಥಗಳ ಮೇಲೂ ತನ್ನ ಪ್ರಭಾವವನ್ನು ನಿಖರವಾದ ರೀತಿಯಲ್ಲಿ ಖಂಡಿತವಾಗಿಯೂ ಬೀರುವುದಾಗಿದೆ. ಈ ರೀತಿಯಾದ ಶಕ್ತಿಗಳಲ್ಲಿ ಹಲವಾರು ಶಕ್ತಿಗಳು ವಿಶೇಷವಾಗಿ ಮಾನವನಿಗೆ ಪ್ರಯೋಜನಕಾರಿಯಾಗಿರುವುದಿದೆ. ಇನ್ನುಳಿದಂಥಃ ಶಕ್ತಿಗಳು ಮಾನವನ ರೀತಿನೀತಿಗಳ ಮೇಲೆ ಅದರಲ್ಲೂ ವಿಶೇಷವಾಗಿ ಪ್ರಯತ್ನಗಳ ಮೇಲೆ ಹಾಗು ಕೆಲವು ಬಾರಿ ಅವನ ಅಸ್ತಿತ್ವದ ಮೇಲೆಯೇ ಬೀರುವುದಿದೆ. ಈ ರೀತಿಯಾದಂಥಃ ಪ್ರಭಾವವು ಮಾನವನಿಗೆ ವ್ಯತಿರಿಕ್ತವಾಗಿ ಕೆಲಸಮಾಡಿದಾಗ ಅದನ್ನು ಅಪ್ರಯೋಜನಕಾರಿ ಶಕ್ತಿ ಎಂದು ಗುರುತಿಸುವ ವಾಡಿಕೆಯು ಇರುವುದಾಗಿದೆ. ಒಟ್ಟಾರೆಯಾಗಿ ಅವಲೋಕಿಸಿದಾಗ, ಧನಾತ್ಮಕ ಹಾಗು ಖುಣಾತ್ಮಕ ಎಂಬುದಾಗಿ ಮಾನವನು ಶಕ್ತಿಗಳನ್ನು ವರ್ಗೀಕರಿಸುವುದಿದೆ.

ವೈದೀಕ ಸಾಹಿತ್ಯವನ್ನು ಅವಲೋಕಿಸಿದಾಗಲೂ ಕೂಡ ಶಕ್ತಿಗಳಲ್ಲಿ ಖುಣಾತ್ಮಕ ಹಾಗು ಧನಾತ್ಮಕ ಎಂಬೆರಡು ಶಕ್ತಿಗಳ ಪರಿಚಯವು ಅಧ್ಯಯಿಗೆ ಉಂಟಾಗುವುದಿದೆ. ದೇವತೆಗಳ ಕಾರ್ಯವು ಸದಾಕಾಲವೂ ಖುಣಾತ್ಮಕ ಶಕ್ತಿಗಳ ವಿರುದ್ಧ ಹೋರಾಟವೇ ಆಗಿರುವುದನ್ನು ಪುರಾಣಗಳ ಮುಖಾಂತರವಾಗಿ ಅರಿಯಬಹುದಾಗಿದೆ. ಈ ರೀತಿಯಾದಂಥಃ ಹೋರಾಟವು ದೇವತೆಗಳಿಂದ ಪ್ರಾರಂಭಗೊಂಡು, ಮಾನವನವರೆಗೂ ಮುಂದುವರೆದಿರುವುದನ್ನು ಇತಿಹಾಸಗಳು ತಿಳಿಸಿಕೊಡುವುದಾಗಿದೆ. ಇದೊಂದು ಮುಗಿಯದ ಹೋರಾಟ ಎಂತೆಂಬುವುದಕ್ಕೆ ನಿದರ್ಶನವಾಗಿ, ಭಗವದ್ಗೀತೆಯಲ್ಲಿ ಶ್ರೀಕೃಷ್ಣನು 'ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂಬುದಾಗಿ ತಾನೇ ಹೇಳಿಕೊಂಡಿರುವುದನ್ನು ಅಧ್ಯಯಿಯು ಯಾವತ್ತಿಗೂ ಕಾಣಬಹುದಾಗಿದೆ.

ಇಷ್ಟೆಲ್ಲಾ ಇತಿಹಾಸ ಇರುವಂಥಃ ದುಷ್ಟಶಕ್ತಿಗಳು ಮೊದಲಿಂದಲೂ ಭೂಮಿ ಮೇಲೆ ಮಾತ್ರವಲ್ಲದೇ ಇಡೀ ವಿಶ್ವದಲ್ಲೇ ಏಕೆ ಇರುವುದಿದೆ? ಎಂಬಂಥಃ ಪ್ರಶ್ನೆಗೆ ಉತ್ತರವಾಗಿ, 'ವ್ಯಕ್ತಾವ್ಯಕ್ತದ ಅಡಿಯಲ್ಲಿ ಇರುವಂಥಃ ಸಕಲವೂ ಅವಶ್ಯಕತೆ ಇರುವುದರಿಂದಾಗಿಯೇ ಇರುವುದಾಗಿದೆಯೇ ಪರಂತು, ಅನಾವಶ್ಯಕವಾದಂಥಃವುಗಳು ಎಂದಿಗೂ ಇರುವುದಿಲ್ಲವಾಗಿದೆ' ಎಂಬುದಾಗಿ ವೇದ ಪ್ರಕಾರವಾದ ಸಾಹಿತ್ಯದಲ್ಲಿ ಇರುವುದಿದೆ. ಹಾಗಾದರೆ, ಮಾರಕ ಎಂದೆನಿಸುವಂಥಃ ಶಕ್ತಿಯ ಅವಶ್ಯಕತೆಯು ಈ ಸೃಷ್ಟಿಯ ಅಡಿಯಲ್ಲಿ ಏಕೆ ಇರುವುದಾಗಿದೆ? ಎಂತೆಂಬ ಪ್ರಶ್ನೆಗೆ ಸಂಭವನೀಯ ಉತ್ತರದ ಹುಡುಕಾಟವೇ ಈ ಒಂದು ಪ್ರಬಂಧದ ಉದ್ದೇಶವಾಗಿರುವುದಿದೆ.

ಸಕಲ ಚರಾಚರ ವಸ್ತುಗಳು ಶಕ್ತಿ ಸಂಚಯನದ ರೂಪಂತರವೇ ಆಗಿರುವುದಿದೆ. ಹಾಗೆಯೇ, ಯಾವುದೇ ರಚನೆಯು ಹಲವಾರು ರೀತಿಯ ಶಕ್ತಿಗಳನ್ನು ಒಳಗೊಂಡೇ ತನ್ನ ಅಸ್ತಿತ್ವವನ್ನು ಕಂಡುಕೊಂಡಿರುವುದಿದೆ, ಅಷ್ಟೇ ಅಲ್ಲದೆ ಶಕ್ತಿಯ ಮುಖಾಂತರವೇ ಯಾವುದೇ ರಚನೆಯು ತನ್ನ ಅಸ್ತತ್ವವನ್ನು ಕಂಡುಕೊಳ್ಳಲು ಸಾಧ್ಯವಿರುವುದಿದೆ. ಶಕ್ತಿ ಇಲ್ಲದೆ ಸೃಷ್ಟಿ ಇಲ್ಲ. ಹಿರಣ್ಯಗರ್ಭದಲ್ಲಿನ ಸಾಮರ್ಥ್ಯದ ಹೊರಹೊಮ್ಮುವಿಕೆಯು ಶಕ್ತಿಗಳೇ ಆಗಿರುವುದಿದೆ. ಅವ್ಯಕ್ತ ಹಾಗು ವ್ಯಕ್ತ ಎಂಬೆರಡೂ ಕೂಡ ಶಕ್ತಿಯ ಆಕರವೇ ಆಗಿದ್ದು, ಅವುಗಳು ಬೇರೆ ಬೇರೆ ರೂಪಾಂತರಗಳನ್ನು ಹೊಂದಿರುವುದಾಗಿದೆ. ಇಷ್ಟೇ ಅಲ್ಲದೆ, ಸೃಷ್ಟಿಯು ಮುಂದುವರೆದಂತೆಲ್ಲಾ ಅದರಲ್ಲಿನ ರಚನೆಗಳು ಹಲವಾರು ರೀತಿಯ ಶಕ್ತಿಗಳನ್ನು ಉಪಯೋಗಿಸಿಕೊಂಡೇ ಅಸ್ತಿತ್ವವನ್ನಷ್ಟೇ ಅಲ್ಲದೆ, ತನ್ನ ಜೀವಿತಾವಧಿಯಲ್ಲಿ ಸಕಲ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವುದಿದೆ. ಹೀಗೆಯೇ ಮುಂದುವರೆದು ನೋಡಿದಾಗ, ಈ ಜೀವರಾಶಿಗಳಲ್ಲಿ ಸಾಧನೆಯನ್ನು ಗೈಯ್ದಂಥಃ ರಚನೆಗಳು ಪುನಃ ಶಕ್ತಿಯನ್ನಷ್ಟೇ ಬಳಸಿಕೊಂಡು ಗುರಿಮುಟ್ಟಿರುವುದನ್ನು ಅಧ್ಯಯನದ ಮುಖಾಂತವಾಗಿ ಯಾವುದೇ ವ್ಯಕ್ತಿಯು ಸ್ವಯಂ ಕಂಡುಕೊಳ್ಳಬಹುದಾಗದೆ.

ವೈದೀಕ ಮಾರ್ಗದರ್ಶನವನ್ನು ಸಾಧಿಸುವ ಹಾದಿಯ ದಿಕ್ಸೂಚಿಯಾದಂಥಃ ಯೋಗ ಸಂಸ್ಕೃತಿಯು ವಿವಿಧ ಶಾಖೆಗಳು ಶಕ್ತಿ ಹಾಗು ಅವುಗಳ ಬಲಗಳ ಬಗೆಗೇ ಜ್ಞಾನವನ್ನು ಕೊಡಮಾಡುವುದಷ್ಟೇ ಅಲ್ಲದೆ, ನಿಯಂತ್ರಣ ಹಾಗು ಉಪಯೋಗವನ್ನೂ ಕೂಡ ತಿಳಿಸಿಕೊಡುವುದಾಗಿದೆ. ತಂತ್ರದ ಭಾಗವೇ ಆದಂಥಃ ನಾಡಿಶಾಸ್ತ್ರವಾಗಲೀ, ಅಥವಾ ಕುಂಡಲಿನಿಯೇ ಆಗಲಿ, ಅಥವಾ ಇನ್ಯಾವುದೇ ಶಾಖೆಯೇ ಆಗಲಿ, ಅವುಗಳೂ ಕೂಡ ಶಕ್ತಿ ಸಂಬಂಧಿತವಾಗಿಯೇ ದಾಖಲಿಸುವುದಿದೆ.

'ಖುತ' ಎಂತೆಂಬ ಪದವು ವೇದಗಳಲ್ಲಿ ಇರುವುದು ಸರಿಯಷ್ಟೆ. ಅದರ ಅರ್ಥವು, 'ವಿಶ್ವ ಕ್ರಮ' ಎಂತೆಂಬುದೇ

ಆಗಿರುವುದಿದೆ. ಇದರ ಪ್ರಕಾರವಾಗಿ ನಡೆದುಕೊಳ್ಳುವುದೇ 'ಸತ್ಯ' ಎಂದೆನಿಸಿಕೊಂಡಿರುವುದಿದೆ. ಸೃಷ್ಟಿಯಡಿಯಲ್ಲಿನ ಯಾವುದೇ ರಚನೆಯು ತನ್ನ ಗಣಿತ ಸ್ಥಿರರಾಶಿಗಳನ್ನು ಉಪಯೋಗಿಸಿಕೊಂಡು ಸತ್ಯದ ಹಾದಿಯಲ್ಲಿ ನಡೆದು ಋತ ಎಂತೆಂಬುವುದಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳುವುದನ್ನೇ 'ರಚನಾ ಧರ್ಮ' ಎಂತೆಂಬುದಾಗಿ ಪ್ರಸಕ್ತಕ್ಕೆ ಅರ್ಥೈಸಿಕೊಳ್ಳಬಹುದಾಗಿದೆ.

ರಚನೆಗಳಲ್ಲಿನ ಗಣಿತ ಸ್ಥಿರ ರಾಶಿಗಳು ವಿಶ್ವದಲ್ಲಿನ ಶಕ್ತಿಯಿಂದಲೇ ರೂಪುಗೊಂಡಿರುವುದಾಗಿದೆ. ಪ್ರಸಕ್ತದಲ್ಲಿ ಮಾನವನ ಉದಾಹರಣೆಯನ್ನು ತೆಗೆದುಕೊಂಡಾಗ, ಅವನಲ್ಲಿನ ಸಕಲ ಗಣಿತ ಸ್ಥಿರ ರಾಶಿಗಳೂ ಕೂಡ ಶಕ್ತಿಯ ಉಪಯೋಗದ ಮೂಲಕವಾಗಿಯೇ ರಚಿತಗೊಂಡಿರುವುದಿದೆ. ಹಾಗೆಯೇ ಇವನು ಯಾವುದೇ ಕೆಲಸ ಕಾರ್ಯಗಳನ್ನು ಮಾಡುವಾಗ ತನ್ನಲ್ಲಿರುವಂಥಃ ಸ್ಥಿರ ರಾಶಿಗಳ ಮುಖಾಂತರವೇ ತನ್ನ ಪ್ರಯತ್ನವನ್ನು ಸಾಧಿಸುವುದಾಗಿದೆ. ಇವನ ಪ್ರಯತ್ನದಲ್ಲಿ ಗೊತ್ತುಪಡಿಸಿಕೊಂಡಿರುವಂಥಃ ಶಕ್ತಿಗಳ ಪಾತ್ರಗಳು ಎಷ್ಟಿವೆಯೋ, ಅನಾಮಧೇಯ ಶಕ್ತಿಗಳ ಪಾತ್ರಗಳೂ ಕೂಡ ಅದಕ್ಕಿಂತಲೂ ಅಗಾಧವಾಗಿರುವುದಿದೆ. ಹೀಗಾಗಿ, ಇವನ ಪ್ರಯತ್ನದ ಫಲಿತಾಂಶಗಳಲ್ಲಿ ವೈತ್ಯಾಸವು ಕಂಡುಬರುವುದಿದೆ, ಹಾಗೆಯೇ ಕೆಲವು ಬಾರಿ ಫಲಿತಾಂಶದ ಸ್ತರದಲ್ಲಿ ಸಂಪೂರ್ಣವಾಗಿ ವಿಫಲತೆಯನ್ನೂ ಅನುಭವಿಸುವುದಿದೆ. ಹೀಗಾಗಿ, ಅವನು ಆರಂಭದಿಂದಲೂ ಶಕ್ತಿಯ ಪಾತ್ರಗಳನ್ನು ಅರಿಯಲು ಹಾಗು ಅದನ್ನು ತನಗೆ ಬೇಕಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಪ್ರಯತ್ನವನ್ನು ಪಟ್ಟಿರುವುದಿದೆ, ಹಾಗು ಪ್ರಸಕ್ತದಲ್ಲೂ ಪ್ರಯತ್ನಿಸುತ್ತಿರುವುದೂ ಇದೆ. ಈ ಪ್ರಯತ್ನದಲ್ಲಿ ಸಫಲತೆಯು ಮಾನವನಿಗೆ ಜ್ಞಾನವನ್ನು ತಂದುಕೊಡುವುದಾಗಿದ್ದು, ಅದನ್ನು ಅವನು 'ವಿಜ್ಞಾನ' ಎಂದು ಗುರುತಿಸಿಕೊಂಡಿರುವುದಿದೆ. ಈ ರೀತಿಯಾದ ಜ್ಞಾನವನ್ನು ತನಗೆ ಬೇಕಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದನ್ನೇ 'ತಂತ್ರಜ್ಞಾನ' ಎಂತೆಂಬುದಾಗಿಯೂ ಕೂಡ ವಿಭಾಗಿಸಿಕೊಂಡಿರುವುದಿದೆ.

ಪ್ರಸಕ್ತ ವಿಜ್ಞಾನವಾಗಲೀ ಅಥವಾ ವೇದ ವಿಜ್ಞಾನವಾಗಲೀ, ಪ್ರಸಕ್ತ ವಿಶ್ವದ ಆರಂಭದಿಂದಲೂ ಇವುಗಳು ಇರುವುದಾಗಿದೆ. ಈ ಒಂದು ಶುದ್ಧ ವಿಜ್ಞಾನವನ್ನು 'ಆದಿ ಯೋಗಿ ಎಂಬುದಾಗಿ ಕರೆಸಿಕೊಳ್ಳುವ ಶಿವನು, ಸಪ್ತರ್ಷಿಗಳಿಗೆ ಬೋಧಿಸಿದ' ಎಂದು ಪುರಾಣೇತಿಹಾಸಗಳು ದಾಖಲಿಸಿರುವುದಿದೆ. ಯಾವ ಸಂದರ್ಭದಲ್ಲಿ ಲೋಕಕ್ಕೆ ಅವಶ್ಯಕತೆ ಉಂಟಾಗುತ್ತದೋ ಆ ಸಮಯದಲ್ಲಿ ಸಪ್ತರ್ಷಿಗಳು ತಮ್ಮದೇ ಆದಂಥಃ ರೀತಿಯಿಂದ ಈ ವಿಜ್ಞಾನವನ್ನು ತಾಂತ್ರಿಕಾರ್ಥದಲ್ಲಿ, ಅರ್ಥಾತ್, ಒಂದು ಉಪಯೋಗಕರ ರೀತಿಯಲ್ಲಿ ಬಳಸಿಕೊಂಡಿರುವುದಿದೆ. ಉದಾಹರಣೆಗೆ, ರಾಕ್ಷಸನನ್ನು ಸಂಹರಿಸಲು ಇಂದ್ರನಿಗೆ ಆಯುಧದ ಅವಶ್ಯಕತೆ ಬಿದ್ದಾಗ, ಸಪ್ತರ್ಷಿಗಳು ದಧೀಚಿ ಮುನಿಯನ್ನು ಸಂಪರ್ಕಿಸಿದ್ದು, ಆ ಮುನಿಯು ಇಂದ್ರನಿಗೆ ವಜ್ರಾಯುಧವನ್ನು ಮಾಡಿಕೊಟ್ಟಿದ್ದು. ನಂತರದಲ್ಲಿ ಆ ಆಯುಧವನ್ನು ಮಾಡಿದಂಥಃ ತಂತ್ರವೇ ಒಂದು ರೀತಿಯ ವಿದ್ಯೆಯಾಗಿ ಮಾರ್ಪಟ್ಟಿದ್ದು, ಈ ರೀತಿಯ ಪರೀಸ್ಥಿತಿಗಳಿಂದ ಹೊರಹೊಮ್ಮಿದಂಥಃ ಶುದ್ಧ ವಿಜ್ಞಾನದ ತಾಂತ್ರಿಕಾರ್ಥವನ್ನು ಹಲವಾರು ರೀತಿಯ ಉದಾಹರಣೆಗಳಿಂದ ಅಧ್ಯಯಿಯು ಅರ್ಥಮಾಡಿಕೊಳ್ಳಬಹುದಾಗಿದೆ. ಇದೇ ರೀತಿಯಲ್ಲಿ ಕಡಲ ಮಂಥನ ತಾಂತ್ರಿಕ ಕಾರ್ಯದಲ್ಲಿ ಹಲವಾರು ರೀತಿಯ ಪದಾರ್ಥಗಳು ಜನನವಾದದ್ದು, ಹಾಗು ಅವುಗಳು ದೇವತೆಗಳ ಅವಶ್ಯಕತೆಗಳನ್ನು ಪೂರೈಸಿದ್ದನ್ನೂ ಕೂಡ ಉದಾಹರಣೆಯಾಗಿ ಕಾಣಬಹುದಾಗಿದೆ.

ಮೇಲೆ ಉಲ್ಲೇಖಿಸಿದ ರೀತಿಯಲ್ಲಿ ಪ್ರಸಕ್ತ ವಿಜ್ಞಾನದಲ್ಲೂ ಕೂಡ ಹಲವಾರು ರೀತಿಯ ಉದಾಹರಣೆಗಳು ಇರುವುದಾಗಿದೆ. ಮೂಲಭೂತ ವಿಜ್ಞಾನ ಒಂದೇ ಆಗಿದ್ದರೂ, ತಂತ್ರಜ್ಞಾನದ ಸಹಾಯದಿಂದ ಹಲವಾರು ರೀತಿಯ ಉಪಯುಕ್ತ ಉಪಕರಣಗಳನ್ನು ಮಾನವನು ಆರಂಭದಿಂದಲೂ ತನ್ನ ಜೀವನ ಪ್ರಯುಕ್ತವಾಗಿ ಕಂಡುಕೊಂಡಿರುವುದಿದೆ.

ಋತ ಅಥವಾ ಶುದ್ಧ ವಿಜ್ಞಾನ ಎಂತೆಂಬುದು ಒಂದೇ ಆಗಿದ್ದರೂ, ಅದರ ಸಂಪೂರ್ಣ ಜ್ಞಾನವು ಪ್ರಸಕ್ತದಲ್ಲೂ ಮಾನವನ ಅರಿವಿಗೆ ಬಾರದಿರುವುದಿದೆ. ಅರಿವಿಗೆ ಬಂದಂಥಃ ಜ್ಞಾನವನ್ನು ಮಾನವನು ಉಪಯುಕ್ತ ಎಂದು ಸಾಮಾನ್ಯವಾಗಿ ಗುರುತಿಸಿಕೊಂಡಿದ್ದರೂ, ಅರಿವಿಗೆ ಬಾರದಂಥಃ ಜ್ಞಾನವು ಇನ್ನೂ ಬಹಳಷ್ಟು ಇರುವುದಾಗಿದೆ. ಹೀಗಾಗಿ, ಯಾವುದೇ ಕಾರ್ಯ ಅಥವಾ ಪ್ರಯೋಗವನ್ನು ಮಾಡುವಾಗ ಉಂಟಾಗುವಂಥಃ ಪರಿಣಾಮವು ವೈತ್ಯಾಸವನ್ನು ಕಾಣುವುದಾಗಿದೆ. ಸಫಲತೆಯನ್ನು ಕಾಣಬೇಕಾದಲ್ಲ, ಆ ಒಂದು ಕೆಲಸ ಕಾರ್ಯದ ಪ್ರಕ್ರಿಯೆಯಲ್ಲಿ ಒಳಗೊಳ್ಳುವಂಥಃ ಶಕ್ತಿ ಹಾಗು ಅವುಗಳ ಬಲದ ಅರಿವು ಸಂಪೂರ್ಣವಾಗಿ ಇರಬೇಕಾದಂಥಃ ಅವಶ್ಯಕತೆಯು ಮಾನವನಿಗೆ ಖಂಡಿತವಾಗಿಯೂ ಇರುವುದಿದೆ.

ವಿಶ್ವದಲ್ಲಿನ ಸಮಸ್ತ ಶಕ್ತಿಗಳನ್ನು, ಧನಾತ್ಮಕ ಶಕ್ತಿ ಸಮೂಹ ಹಾಗು ಋಣಾತ್ಮಕ ಶಕ್ತಿ ಸಮೂಹ ಎಂದು ಮಾನವ ಬೌದ್ಧಿಕತೆಯು ಆರಂಭದಿಂದಲೂ ಎರಡು ವಿಭಾಗಗಳಾಗಿ ಮಾಡಿಕೊಂಡು ಬಂದಿರುವುದಿದೆ. ಈ ಎರಡು ಗುಂಪುಗಳೂ ಕೂಡ ಅರಿವಿಗೆ ಬಾರದಿರುವಂಥಃ ಹಾಗು ಅರಿವಿಗೆ ನಿಲುಕಿರುವಂಥಃ, ಜೊತೆಗೆ, ಊಹಾತ್ಮಕ ರೀತಿಯ ಸಕಲ ವಿಧಧ ಶಕ್ತಿಗಳನ್ನೂ ಹಾಗು ಅವುಗಳ ಬಲಗಳನ್ನೂ ಬಹುತೇಕವಾಗಿ ಒಳಗೊಂಡಿರುವುದಿದೆ. ಭಗವದ್ಗೀತೆಯ ಬೋಧನೆಯಂತೆಯೂ, ಹಾಗು ಮಾನವನ ದೃಷ್ಟಿಕೋನದ ಪ್ರಕಾರವಾಗಿಯೂ, ಅವನು ಸದಾಕಾಲವೂ ಋಣಾತ್ಮಕ ಶಕ್ತಿ ಸಮೂಹಗಳ ಪ್ರಭಾವವನ್ನು ನೀಗಿಸಿಕೊಂಡು, ಧನಾತ್ಮಕ ಶಕ್ತಿಗಳ ಸಮೂಹವನ್ನು ಸೇರಲು ನಿರಂತರವಾಗಿ ಪ್ರಯತ್ನಿಸುವುದಿದೆ. ಇದಕ್ಕೆ ಮೂಲಭೂತ ಕಾರಣವು, ಋಣಾತ್ಮಕ ಶಕ್ತಿ ಸಮೂಹಗಳು ಯಾವುದೇ ವ್ಯಕ್ತಿಯ ವೈಯುಕ್ತಿಕ ಕ್ರಮದಲ್ಲಿ ಅರ್ಥಾತ್, ಸಮಾಜದಲ್ಲಿ, ಆರೋಗ್ಯದಲ್ಲಿ, ಏಳಗೆಯಲ್ಲಿ, ಅಸ್ತಿತ್ವದಲ್ಲಿ ಹಾಗು ಜೀವದ ಕ್ರಮದಲ್ಲಿ ಬಹುಶಃ ಅಸ್ವೀಕೃತ ವೈತ್ಯಾಸವನ್ನು ಉಂಟುಮಾಡುವುದರಿಂದಾಗಿಯೇ ಆಗಿರಬಹುದಿದೆ. ಐಚ್ಛಿಕ ಒಂದನ್ನು ಹೊರತುಪಡಿಸಿ, ಅನೈಚ್ಛಿಕವಾಗಿ ಯಾವ ಕ್ರಮದಲ್ಲೂ ವೈತ್ಯಾಸವನ್ನು ಕಾಣುವುದು ಮಾನವನಿಗೆ ಸಹಿಸಲು ಅಸಾಧ್ಯವಾಗಿರುವುದೇ ಬಹುಶಃ ಮತ್ತೊಂದು ಕಾರಣವಾಗಿರುವುದಾಗಿದೆ.

ಮನಃಶಾಸ್ತ್ರದ ಪ್ರಕಾರದಲ್ಲಿ ಒಟ್ಟಾರೆಯಾಗಿ ನೋಡುವುದಾದರೆ, ಈ ರೀತಿಯಾದಂಥಃ ಎರಡು ರೀತಿಯ ಸಮೂಹಗಳು

ಮಾನವನ ಅತೀಂದ್ರಿಯ ಕ್ಷೇತ್ರದಲ್ಲಿ ಒಂದು ರೀತಿಯ ವಿಶಿಷ್ಟ ಆಯಾಮವನ್ನು ಖಂಡಿತವಾಗಿಯೂ ಹೊಂದಿರುವುದಿದೆ.

ಮನಃಶಾಸ್ತ್ರ ಹಾಗು ತಂತ್ರದ ಪ್ರಕಾರವಾಗಿ ಸಾಮೂಹಿಕ ಋಣಾತ್ಮಕ ಶಕ್ತಿಗಳು ಯಾವುದೇ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಸ್ವತಂತ್ರವಾಗಿ ಪ್ರಭಾವಗೊಳಿಸಲು ಸಾಧ್ಯವಿರದಿದ್ದರೂ, ವ್ಯಕ್ತಿಯ ಇಚ್ಛಾ ಪ್ರಕಾರ ಮಾತ್ರದಿಂದಲೇ ಅವುಗಳು ಪ್ರಭಾವಗೊಳಿಸುವಂಥಃ ಸಾಮರ್ಥ್ಯವನ್ನು ಗಳಿಸುವುದಿದೆ. ಈ ರೀತಿಯಾದ ಪರಿಸ್ಥಿತಿಯ ಪ್ರಯುಕ್ತವಾಗಿ ವ್ಯಕ್ತಗೊಂಡಂಥಃ ವ್ಯಕ್ತಿಯ ಪ್ರವೃತ್ತಿಗಳನ್ನೇ ತಾತ್ವಿಕ ಪ್ರಪಂಚವು ದುಷ್ಟ ಶಕ್ತಿಗಳು ಅರ್ಥಾತ್, ಸೈತಾನ, ಡೆವಿಲ್ ಎಂಬಿತ್ಯಾದಿಗಳಿಂದ ಗುರುತಿಸುವುದಿದೆ. ಭೂತ ಚೇಷ್ಟೆ, ಮೈಮೇಲೆ ದೆವ್ವ ಬರುವುದು ಮುಂತಾದವುಗಳು, ಋಣಾತ್ಮಕ ಶಕ್ತಿಯು ಮಾನವನ ಮನಸ್ಸನ್ನು ದುರ್ಬಲಗೊಳಿಸಿ, ಅವನ ದೇಹವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವುದರಿಂದ ಸಂಭವಿಸುವುದಾಗಿದೆ ಎಂದು ಮನಃಶಾಸ್ತ್ರವು ಹೇಳುವುದಿದೆ.

ಪ್ರಸ್ತುತವಾಗಿ ವಿಭಿನ್ನವಾದ ಮಾನಸಿಕ ಹಾಗು ಉನ್ನತ ಇಂದ್ರಿಯ ಗ್ರಾಹಕತೆಯ ವಿದ್ಯಮಾನವನ್ನು ಮಾನಸಿಕ ಶಾಸ್ತ್ರದ ಅಡಿಯಲ್ಲಿ ಸ್ವಲ್ಪ ಆಳವಾಗಿ ನೋಡೋಣ. ಋಣಾತ್ಮಕವಾದಂಥಃ ಶಕ್ತಿಯ ಸಮೂಹವು ಕೆಲವು ರೀತಿಯ ವ್ಯಕ್ತಿಗಳಿಗೆ, ವಸ್ತುಗಳಿಗೆ ಹಾಗು ಘಟನೆಗಳಿಗೆ ಸಂಬಂಧಿಸಿರುವುದಿದೆ. ವಿಶ್ವ ಪ್ರಜ್ಞೆ ಸ್ತರವು ಋಣಾತ್ಮಕ ಶಕ್ತಿ ಸಮೂಹ ಕೇಂದ್ರದ ರೀತಿಯಲ್ಲಿಯೇ ಇರುವುದಿದೆ ಹಾಗು ಅದು ಅಜಾಗೃತ ಪ್ರಜ್ಞೆಯ ಸಮೂಹವನ್ನು ಕೂಡ ಒಳಗೊಂಡಿರುವುದಿದೆ ಮತ್ತು ಸಂಬಂಧಿಸಿರುವುದಿದೆ. ಆದರೆ ಅದು ವ್ಯಕ್ತಿಯ ಅಜಾಗೃತ ಮನಸ್ಸು ಹಾಗು ಜಾಗೃತ ಪ್ರಜ್ಞೆಯಿಂದ ಪ್ರತ್ಯೇಕವಾಗಿರುವುದಿದೆ. ಮಾನವನ ವೈಯುಕ್ತಿಕ ಪ್ರಜ್ಞೆಯು, ಪ್ರಜ್ಞೆ, ಸುಪ್ತ ಪ್ರಜ್ಞೆ ಹಾಗು ಸಾಮೂಹಿಕ ಅಜಾಗೃತ ಪ್ರಜ್ಞೆಯ ಒಟ್ಟಾರೆಯಲ್ಲಿನ ಒಂದು ಚಿಕ್ಕ ಭಾಗವಾಗಿರುವುದಿದೆ. ಈ ಒಂದು ಚಿಕ್ಕ ಭಾಗವು ವೈಯುಕ್ತಿಕ ಅಜಾಗೃತ ಮನಸ್ಸು ಹಾಗು ಸಾಮೂಹಿಕ ಅಜಾಗೃತ ಪ್ರಜ್ಞೆಯ ಆಯಾಮಕ್ಕಿಂತ ಕೊಂಚ ಮೇಲೆ ವಿಸ್ತರಿಸಿಕೊಂಡಿರುವುದೇ ಆಗಿದೆ.

ಮಾನವ ಸಮಾಜದಲ್ಲಿ ಹಲವಾರು ವ್ಯಕ್ತಿಗಳು ಋಣಾತ್ಮಕ ಶಕ್ತಿ ಸಮೂಹ ಕ್ಷೇತ್ರದ ಪ್ರಭಾವಕ್ಕೆ ತಮಗೆ ಅರಿವಿಲ್ಲದಂತೆಯೇ ಒಳಗಾಗುವುದಿದೆ. ಇದರ ಪರಿಣಾಮವಾಗಿ ಇಂಥಃ ಜನರುಗಳು ಬಹುಬೇಗನೇ ಅಹಂ–ಉನ್ಮಾದಕ್ಕೆ ಒಳಗಾಗುವುದಿದೆ. ಇದಾದ ಸ್ವಲ್ಪ ಸಮಯದಲ್ಲಿ ಪ್ರಮುಖವಾಗಿ ನಕಾರಾತ್ಮಕವಾಗಿ ಅನ್ಯರ ಮೇಲೆ ತಮ್ಮಗಳ ಪ್ರಭಾವವನ್ನು ಬೀರುವುದಿದೆ, ಹಾಗೆಯೇ ಕಾಲಕ್ರಮೇಣ ಅಜಾಗೃತವಾಗಿ ಋಣಾತ್ಮಕ ಶಕ್ತಿ ಪ್ರವಾಹದ ಭಾಗವೇ ಆಗುವುದಿದೆ.

ವ್ಯಕ್ತಿಗಳು ತಮ್ಮಗಳಲ್ಲಿರುವಂಥಃ ಸುಪ್ತ ಪ್ರಜ್ಞೆಯ ಬಗೆಗೆ ಸ್ವ ಅರಿವು ಹೇಗೆ ಇರುವುದಿದೆ ಅಥವಾ ಇಲ್ಲದಿರುವುದಿದೆ, ಅಜಾಗೃತ ಪ್ರಜ್ಞೆಯ ಬಗೆಗೆ ಸಂಪರ್ಕವನ್ನು ಹೇಗೆ ಇರಿಸಿಕೊಳ್ಳುವುದಿದೆ ಅಥವಾ ಇರಿಸಿಕೊಳ್ಳದಿರುವುದಿದೆ, ಮತ್ತು ಋಣಾತ್ಮಕ ಶಕ್ತಿಯ ಸಮೂಹ ಕ್ಷೇತ್ರದ ಪ್ರಯುಕ್ತವಾಗಿ ಹೇಗೆ ಪ್ರಭಾವಿತಗೊಳ್ಳುವುದಿದೆ ಎಂತೆಂಬ ವಿಚಾರವನ್ನು ಕೆಳಕಂಡಂತೆ ವರ್ಗೀಕರಿಸಬಹುದಾಗಿದೆ.

ವ್ಯಕ್ತಿ	ಪ್ರಜ್ಞೆಯ ಸ್ಥಿತಿ	ಗುಣಲಕ್ಷಣಗಳು	ಸಾಮರ್ಥ್ಯಗಳು
ಅ	ಸ್ವಾಸ್ಥ್ಯ ಚಿತ್ತತೆ ಸ್ವಯಂ ಅರಿವು	ನಿರ್ಣಾಯಕ ಚಿಂತನೆ ಸ್ವಯಂ ಹಾಗು ವಿಶ್ವದ ಅರಿವು	ತಾರ್ಕಿಕತೆ ಸ್ವ ಮಾಹಿತಿ ಹಾಗು ಸುಧಾರಣೆ
ಆ ಮತ್ತು ಈ	ಸ್ವಸ್ಥ ಚಿತ್ತತೆ ಮತ್ತು ಸ್ವಯಂ ಅರಿವಿನೆಡೆಗೆ	ನಿರ್ಣಾಯಕ ಚಿಂತನೆ, ಹಾಗು ವಿಶ್ವದ ಅರಿವೆನೆಡೆಗೆ	ಸ್ವಯಂ ತಾರ್ಕಿಕತೆ, ಸ್ವ ಮಾಹಿತಿ ಹಾಗು ಸುಧಾರಣೆ ಯೆಡೆಗೆ
ಆ ಮತ್ತು ಈ	ಹೊರ ವ್ಯಕ್ತಿತ್ವಗಳ ಮತ್ತು ಸಿದ್ಧಾಂತಗಳ ಹತೋಟಿಯ ಆರಂಭ	ಅಹಂ–ಉನ್ಮಾದ ಸಂತೋಷದ ಬುದ್ಧಿಹೀನ ಅನ್ವೇಷಣೆ ಅಜ್ಞಾನದ ಉತ್ಸವ	ತನ್ನ ಬಗೆಗೆ ಆಲೋಚಿಸುವ ಸಾಮರ್ಥ್ಯದ ಕುಂದುವಿಕೆ ಅನಕ್ಷರತೆ
ಇ	ಹೊರ ವ್ಯಕ್ತಿತ್ವಗಳ ಮತ್ತು ಸಿದ್ಧಾಂತಗಳ ಒಟ್ಟಾರೆಯ ಹತೋಟಿ	ಭಾವೋದ್ರೇಕದ ಕುರುಡು ಭಾವೋದ್ರೇಕದ ಕಿವುಡು ಆತ್ಮಹತ್ಯಾ ನಡುವಳಿಕೆ	ಹೊರಜಗತ್ತಿನ ಬಗೆಗೆ ಕುರುಡುತನ ಹಾಗು ಕಿವುಡುತನ ತನ್ನತನವನ್ನು ನಾಶಪಡಿಸುವ ಶಕ್ತಿಗಳ ಪೋಷಣೆ

ಮೇಲಿನ ಪಟ್ಟಿಯ ಪ್ರಕಾರದಲ್ಲಿರುವಂಥಃ 'ಅ, ಆ, ಮತ್ತು ಇ' ಎಂಬ ಪ್ರಾಥಮಿಕ ಗುಂಪುಗಳು ಸಾಮಾನ್ಯವಾಗಿ ಮಾನವನ ಸಮಾಜದಲ್ಲಿ ಕಂಡುಬರುವುದಾಗಿದ್ದರೂ, 'ಈ' ಎಂಬ ಗುಂಪಿನವರೂ ಸಹ ಸಮಾಜದಲ್ಲಿ ಅಲ್ಲಲ್ಲಿ ಕಂಡುಬರುವುದಿದೆ. 'ಈ' ಎಂಬ ಗುಂಪಿನವರ ಗಣಿತ ಸ್ಥಿರ ರಾಶಿಯು 'ಆ' ಎಂಬ ಗುಂಪಿನವರ ಗಣಿತ ಸ್ಥಿರ ರಾಶಿಗೆ ಬಹುತೇಕವಾಗಿ ಹತ್ತಿರವಾದುದರಿಂದಾಗಿ, ಅವೆರಡನ್ನೂ ಒಂದೇ ಗುಂಪಿನಲ್ಲಿ ಸೇರಿಸುವುದಿದೆ. 'ಅ' ವ್ಯಕ್ತಿಯು ಪ್ರಾಥಮಿಕವಾಗಿ ಸಮೂಹ ಧನಾತ್ಮಕ ಶಕ್ತಿಯ ಕ್ಷೇತ್ರಕ್ಕೆ ತನ್ನನ್ನು ತಾನು ಸಂಬಂಧಿಸಿಕೊಳ್ಳುವುದಿದೆ. 'ಆ' ಹಾಗು 'ಈ' ವ್ಯಕ್ತಿಗಳು ಸಮೂಹ ಋಣಾತ್ಮಕ ಶಕ್ತಿಯ ಕ್ಷೇತ್ರದಿಂದ ಸ್ವಲ್ಪವಾಗಿ ಪ್ರಭಾವಿತಗೊಳ್ಳುವುದಿದೆ. ಆದರೆ 'ಇ' ವ್ಯಕ್ತಿಯು ಋಣಾತ್ಮಕ ಶಕ್ತಿಯ ಕ್ಷೇತ್ರವು ಸಂಪೂರ್ಣವಾಗಿ ತನ್ನನ್ನು ವಶಪಡಿಸಿಕೊಳ್ಳಲು ಅನುವುಮಾಡಿಕೊಡುವುದಿದೆ. 'ಆ' ಹಾಗು 'ಈ' ವ್ಯಕ್ತಿಗಳು ಸಮೂಹ ಧನಾತ್ಮಕ ಶಕ್ತಿಯ ಕ್ಷೇತ್ರಕ್ಕೆ ಏನಾದರೂ ತೆರೆದುಕೊಳುವುದಕ್ಕೆ ಇಚ್ಛಿಸಿದಲ್ಲ, 'ಅ' ಗುಂಪಿನ ವ್ಯಕ್ತಿಗಳು ಇವೆರಡು ಗುಂಪುಗಳಿಗೆ ಅನುವುಮಾಡಿಕೊಡುವುದಿದೆ. ಹೀಗಾಗಿ

'ಅ, ಆ, ಮತು ಈ' ಗುಂಪಿನ ವ್ಯಕ್ತಿಗಳು ಒಟ್ಟಾರೆಯಾಗಿ ಧನಾತ್ಮಕ ಶಕ್ತಿಯ ಕ್ಷೇತ್ರದಲ್ಲಿ ಮುಂದುವರೆಯಲು ಸಾಧ್ಯವಿರುವುದಾಗಿದ್ದರೂ, 'ಇ' ಗುಂಪಿನ ವ್ಯಕ್ತಿಗಳು ಭಾಗಶಃ ಅಧೋಗತಿಯೆಡೆಗೆ ಸಾಗುವುದೇ ಆಗಿರುವುದಿದೆ.

ಮನಃಶಾಸ್ತ್ರದ ಪ್ರಕಾರವಾಗಿ, ಧನಾತ್ಮಕತೆ ಎಡೆಗೆ ಯಾವುದೇ ವ್ಯಕ್ತಿಯು ಆಲೋಚಿಸಿದಲ್ಲಿ, ಅವನು ಆ ಶಕ್ತಿಯ ಒಂದಂಶವನ್ನು ಪ್ರತಿಬಾರಿಯೂ ಪ್ರಕೃತಿಯಿಂದ ಪಡೆದುಕೊಳ್ಳುವುದು ಸಾಧ್ಯವಿರುವುದಿದೆ. ಅದೇ ರೀತಿಯಲ್ಲಿ ಋಣಾತ್ಮಕ ಶಕ್ತಿಯ ಎಡೆಗೆ ಆಲೋಚಿಸಿದಲ್ಲಿ ಆ ವ್ಯಕ್ತಿಯು ಋಣಾತ್ಮಕ ಶಕ್ತಿಯ ಒಂದಂಶವನ್ನು ಪ್ರತಿಬಾರಿಯೂ ಪ್ರಕೃತಿಯಿಂದ ಪಡೆದು ಕೊಳ್ಳುವುದು ಕೂಡ ಸಾಧ್ಯವಿರುವುದಿದೆ. ಈ ವಿಚಾರದ ಪ್ರಯುಕ್ತವಾಗಿ ಪ್ರತೀ ವ್ಯಕ್ತಿಯು ಯಾವುದೇ ಸಮಯದಲ್ಲಿ 'ತನ್ನಲ್ಲಿ ಎಷ್ಟು ಧನಾತ್ಮಕ ಹಾಗು ಋಣಾತ್ಮಕ ಶಕ್ತಿಯು ಸಂಗ್ರಹಗೊಂಡಿದೆ' ಎಂದು ಪರೀಕ್ಷಿಸಿಕೊಳ್ಳಬೇಕಾಗಿದೆ. ಎಷ್ಟು ವಿಷಯದ ಬಗೆಗೆ ತಾನು ಭಯವನ್ನು ಹೊಂದಿರುವುದಿದೆ? ಹಾಗೆಯೇ ಎಷ್ಟು ವಿಷಯದ ಬಗೆಗೆ ತನ್ನಲ್ಲಿ ಒಳ್ಳೆಯ ಭಾವನೆಗಳು ಮೂಡುವುದಿದೆ? ಎಂತೆನ್ನುವದರ ಆಧಾರದ ಮೇಲೆ ಋಣಾತ್ಮಕ ಹಾಗು ಧನಾತ್ಮಕ ಶಕ್ತಿಯ ಮೊತ್ತವನ್ನು ಯಾವುದೇ ವ್ಯಕ್ತಿಯು ಅರಿಬಹುದಾಗಿದೆ. ಭಯವು ಋಣಾತ್ಮಕ ಶಕ್ತಿಯನ್ನು ಪ್ರತಿನಿಧಿಸಿದರೆ, ಒಳ್ಳೆಯ ಭಾವನೆಗಳು ಧನಾತ್ಮಕ ಶಕ್ತಿಯನ್ನು ಪ್ರತಿನಿಧಿಸುವುದಿದೆ. ಋಣಾತ್ಮಕ ಶಕ್ತಿಗಳು ವ್ಯಕ್ತಿಯ ಜೀವನವನ್ನು ದುಃಖದ ಕಡಲಿಗೆ ನೂಕಿದರೆ, ಧನಾತ್ಮಕ ಶಕ್ತಿಯು ವ್ಯಕ್ತಿಯನ್ನು ತೃಪ್ತಿ ಎಡೆಗೆ ಕೊಂಡೊಯ್ಯುವುದಿದೆ.

ಈ ಮೇಲೆ ಅವಲೋಕಿಸಿದಂಥಃ ವಿಚಾರಗಳು, ಪ್ರಾಕೃತಿಕವಾಗಿ ಇರುವುದಾಗಿದೆ, ಅರ್ಥಾತ್, ವ್ಯಕ್ತಿಯ ಪ್ರಕೃತಿದತ್ತ ವ್ಯಕ್ತಿತ್ವದ ಮೇಲಷ್ಟೇ ಅವಲಂಬಿತವಾಗಿರುವುದಿದೆ. ಈ ರೀತಿಯಾದ ವ್ಯಕ್ತಿತ್ವವನ್ನು ಹೊಂದಿರುವಂಥಃ ವ್ಯಕ್ತಿಯಲ್ಲಿ ಬದಲಾವಣೆಗಳು ಉಂಟಾಗಲು ಹೊರ ಜಗತ್ತಿನಲ್ಲಿನ ಪ್ರಾಕೃತಿಕ ಉದ್ದೀಪನಗಳನ್ನು ಮಹತ್ತರವಾಗಿ ಅವಲಂಬಿಸಿರುವುದಿದೆ. ಒಟ್ಟಾರೆಯಾಗಿ ನೋಡು ವುದಾದರೆ, ಈ ಒಂದು ಪ್ರಕ್ರಿಯೆಯು ಅನೈಚ್ಛಿಕವಾದದ್ದೇ ಆಗಿರುವುದಿದೆ. ಇಂಥಃ ಪರೀಸ್ಥಿತಿಯಲ್ಲಿ ವ್ಯಕ್ತಿಯ ದೈಹಿಕ ಹಾಗು ಮಾನಸಿಕ ವಿಕಾಸವು ಬಹು ಮಂದಗತಿಯದ್ದಾಗಿದ್ದು, ಬಹುಶಃ ಅತ್ಯಧಿಕವಾದಂಥಃ ಸಮಯವನ್ನು ತೆಗೆದುಕೊಳ್ಳುವುದಿದೆ.

ಅನೈಚ್ಛಿಕ ವಿಕಾಸದ ಪ್ರಕ್ರಿಯೆಯು ವಿಳಂಬವಾಗುವುದಕ್ಕೆ ಕಾರಣವು ಮುಖ್ಯವಾಗಿ ವ್ಯಕ್ತಿಯ ಅರಿವಿನ ಕೊರತೆಯೇ ಆಗಿರುವುದಿದೆ. ಅರಿವಿನ ಕೊರತೆಯು, ಅನುಭವದ ಅಲಭ್ಯತೆಯಿಂದ ಉಂಟಾಗುವುದಿದೆ. ಅನುಭವದ ಲಭ್ಯತೆಯ ಕೊರತೆಯು, ಜ್ಞಾನದ ಅಭಾವದಿಂದ ಆಗುವುದಿದೆ. ಜ್ಞಾನದ ಅಭಾವವು, ಪ್ರಾಕೃತಿ ಹಾಗು ಸಂಸ್ಕಾರದ ಕೊರತೆಯಿಂದ ಉಂಟಾಗುವುದಿದೆ. ಹೀಗಾಗಿ, ಪವಾಡ, ಅತೀಂದ್ರಿಯ ಅನುಭವ, ಅಥವಾ ಇನ್ಯಾವುದೇ ರೀತಿಯ ಸ್ವ ಪ್ರಯತ್ನಕ್ಕೆ ಮೀರಿದಂಥಃ ಸಫಲತೆಯ ಫಲತಾಂಶ ಕಾಣುವವರೆಗೂ ಅನೈಚ್ಛಿಕ ಪ್ರಕ್ರಿಯೆಗೆ ಒಳಪಟ್ಟಂಥಃ ವ್ಯಕ್ತಿಗಳಲ್ಲಿ, ಐಚ್ಛಿಕ ವಿಕಾಸದಡೆಗೆ ಮುಂದುವರೆಯುವಂಥಃ ವ್ಯಕ್ತಿತ್ವದ ಹುಟ್ಟು ವಿಕೆಯು ಭಾಗಶಃವಾಗಿ ಅಸಾಧ್ಯವೇ ಆಗಿರುವುದಿದೆ.

ಐಚ್ಛಿಕವಾಗಿ ವಿಕಾಸದಲ್ಲಿ ಮುಂದುವರೆಯಲು ನಿರ್ಧರಿಸಿದಂಥಃ ವ್ಯಕ್ತಿಯು, ಅವನು 'ಅ, ಆ, ಇ, ಅಥವಾ ಈ' ಗುಂಪಿಗೇ ಸೇರಿದವನಾಗಿರಲಿ, ಧನಾತ್ಮಕ ಹಾಗು ಋಣಾತ್ಮಕ ಶಕ್ತಿ ಸಮೂಹಗಳ ಬಗೆಗೆ ತನ್ನ ಗಮನವನ್ನು ಹರಿಸಲು ಪ್ರಾರಂಭಿ ಸುವುದಿದೆ. ಇಂಥಃ ಮನಃಸ್ಥಿತಿಯನ್ನು ಹೊಂದಿದಂಥಃ ವ್ಯಕ್ತಿ ಯು, ಸಾಮಾನ್ಯವಾಗಿ ಬಾಹ್ಯ ಜಗತ್ತಿನ ಉದ್ದೀಪನಗಳನ್ನು ಹೆಚ್ಚಾಗಿ ಅವಲಂಬಿಸದಿದ್ದು, ಮೊದಲು ತಾನು ಎಲ್ಲಿದ್ದೇನೆ ಎಂತೆಂಬುದನ್ನು ಅರಿತು, ಅಲ್ಲಿಂದ ಮುಂದಕ್ಕೆ ಚಲಿಸಲು ಏನುಮಾಡಬೇಕು ಎಂತೆನ್ನುವುದರ ಬಗೆಗೆ ತನ್ನ ಗಮನವನ್ನು ಹರಿಸಲು ನಂತರದಲ್ಲಿ ಪ್ರಾರಂಭಿಸಬಹುದಿದೆ.

ವೈದೀಕ ತಿಳುವಳಿಕೆಯ ಪ್ರಕಾರವಾಗಿ, ಸ್ವಯಂ ವಿಕಾಸದೆಡೆಗೆ ಐಚ್ಛಿಕತೆಯನ್ನು ಹೊಂದಿರದಂಥಃ ವ್ಯಕ್ತಿಯು ತನ್ನ ಜೀವನ ಪ್ರಕ್ರಿಯೆಗಳ ಮೇಲಿನ ಧನಾತ್ಮಕ ಹಾಗು ಋಣಾತ್ಮಕ ಶಕ್ತಿಗಳ ಪ್ರಭಾವಗಳನ್ನು ನಿಯಂತ್ರಿಸಲು ಅಸಮರ್ಥನಾಗುವುದಿದೆ. ಆದರೆ, ವಿಕಾಸದೆಡೆಗೆ ಐಚ್ಛಿಕತೆಯನ್ನು ಹೊಂದಿರುವಂಥಃ ವ್ಯಕ್ತಿಯು ಸಕಲ ರೀತಿಯ ಧನಾತ್ಮಕ ಹಾಗು ಋಣಾತ್ಮಕ ಶಕ್ತಿಗಳ ಪ್ರಭಾವಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಮಾತ್ರವಲ್ಲದೆ ತನ್ನ ಜೀವನಕ್ಕೆ ಉಪಯೋಗಕರವಾಗಿ ಬಳಸಿ ಕೊಳ್ಳುವುದಿದೆ. ಈ ಹಂತವನ್ನು ಮೊದಲು ಐಚ್ಛಿಕ ವ್ಯಕ್ತಿಯು ತನ್ನ ಜೀವನದಲ್ಲಿ ಹಲವಾರು ವಿಚಾರಗಳನ್ನು ಹಂತ ಹಂತವಾಗಿ ಅನುಭವಿಸಿ, ಕ್ರಮೇಣವಾಗಿ ತನ್ನ ಅರಿವಿಗೆ ತೆಗೆದುಕೊಳ್ಳುವುದರ ಮೂಲಕ ಸಾಧಿಸಿಕೊಳ್ಳುವುದಿದೆ. ಅರ್ಥಾತ್, ಐಚ್ಛಿಕತೆಯಿಂದೊ ಗೂಡಿದಂಥಃ ಪ್ರಯತ್ನವು ಆ ವ್ಯಕ್ತಿಗೆ ಎರಡೂ ಶಕ್ತಿ ಸಮುದಾಯದ ಬಗೆಗೆ ಜ್ಞಾನವನ್ನು ತಂದುಕೊಡುವುದಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಧನಾತ್ಮಕ ಹಾಗು ಋನಾತ್ಮಕ ಶಕ್ತಿಗಳ ಎಡೆಗಿನ ಅಜ್ಞಾನ ಹಾಗು ಅವುಗಳ ಅನಿಯಂತ್ರಣ ವ್ಯಕ್ತಿಯಲ್ಲಿ ಅಧೀರತೆಯನ್ನು ಉಂಟುಮಾಡುವುದಿದೆ, ಆದರೆ, ಜ್ಞಾನವು ಆ ವ್ಯಕ್ತಿಗೆ ನಿಯಂತ್ರಣವನ್ನು ಕೊಡಮಾಡಿ ಜೊತೆಗೇ ಆ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಧೀರತ್ವವನ್ನೂ ಕೂಡ ದಯಪಾಲಿಸುವುದಿದೆ. 'ನಃ ಜ್ಞಾನೇತಿ ಸದೃಶಂ!'

ಧನಾತ್ಮಕ ಶಕ್ತಿ ಸಮೂಹ ಹಾಗು ಋಣಾತ್ಮಕ ಶಕ್ತಿ ಸಮೂಹ ಎಂತೆನ್ನುವುದು ಮಾನವನು ಮಾಡಿಕೊಂಡಂಥಃ ವರ್ಗೀ ಕರಣವೇ ಪರಂತು, ಪ್ರಕೃತಿಯಲ್ಲಿ ಇರುವುದಿಲ್ಲವಾಗಿದೆ. ವೇದ ಸಂಹಿತೆಗಳ ಪ್ರಕಾರದಲ್ಲಿ, ಸೃಷ್ಟಿಯ ಅಡಿಯಲ್ಲಿ ಅವಶ್ಯವಾದಂಥಃ ಶಕ್ತಿಗಳು ಮಾತ್ರವೇ ಇರುವುದಾಗಿದೆ, ಹಾಗು ಅವುಗಳು ಮಾತ್ರವೇ ನಿಭಾಯಿಸುವಂಥಃ ಜವಾ ಬ್ದಾರಿಗಳೂ ಕೂಡ ರಚಿತಗೊಂಡಿರುವುದಿದೆ. ಮಾನವನು ತನ್ನ ಅನುಕೂಲಕ್ಕೆ ಬಳಸಲಾಗುವಂಥಃ ಶಕ್ತಿಗಳನ್ನು ಬಹುಶಃ ಧನಾತ್ಮಕ ಎಂತೆಂಬುದಾಗಿಯೂ, ಅನುಕೂಲಕ್ಕೆ ಹಾಗು ನಿಯಂತ್ರಣಕ್ಕೆ ಬಾರದಂಥಃ ಶಕ್ತಿಗಳನ್ನು ಬಹುಶಃ ಋಣಾತ್ಮಕ ಎಂತೆಂಬುದಾಗಿಯೂ ಬೌದ್ಧಿಕವಾಗಿ ವರ್ಗೀಕರಣ ಗೊಳಿಸಿಕೊಂಡಿರಬಹುದಿದೆ. ಸೂಕ್ಷ್ಮವಾಗಿ ನೋಡಿದಲ್ಲಿ, ಕೆಲವು ಸಮಯದಲ್ಲಿ ಕೆಲವು ಶಕ್ತಿಗಳು ಕೆಲವು ವ್ಯಕ್ತಿತ್ವಕ್ಕೆ ಅನುಕೂಲವಾಗಿ ಪರಿಣಮಿಸಿದ್ದರೆ, ಮತ್ತೆ ಕೆಲವು ವ್ಯಕ್ತಿಗಳಿಗೆ ಅದೇ ಶಕ್ತಿಗಳು ಪ್ರತಿಕೂಲವಾಗಿ ಪರಿಣಸಿರುವಂಥಃ ಕೆಲವು ಉದಾಹರಣೆಗಳೂ

ಕೂಡ ಸಿಗುವುದಿದೆ.

ಭಾರತೀಯ ತಾತ್ತ್ವಿಕ ಶಾಸ್ತ್ರದ ಪ್ರಕಾರದಲ್ಲಿ, ಪ್ರಕೃತಿಯಲ್ಲಿ 'ಸಮಯ' ಎಂತೆನ್ನುವ ಗಣಿತ ಸ್ಥಿರರಾಶಿಯು ಮುಂದಕ್ಕೆ ಸಾಗುವಾಗ ಬದಲಾವಣೆ ಎಂತೆನ್ನುವುದನ್ನು ಜೊತೆಜೊತೆಗೇ ತರುವುದು ಸಹಜವೇ ಆಗಿರುವುದಿದೆ. ಈ ಒಂದು ಪ್ರಕ್ರಿಯೆಯು ಯಾವದೇ ಜೀವಿಯ ಇಚ್ಛೆಗೆ ಅನುಗುಣವಾಗಿ ನಡೆಯದೆ 'ಋತ' ಎಂತೆಂಬುವುದರ ಪ್ರಕಾರವಾಗಿ ನಡೆಯುವುದಿದೆ. ಈ ಒಂದು ಓಟದಲ್ಲಿ ದೇವಾನುದೇವತೆಗಳಿಂದ ಹಿಡಿದು ಮಾನವನವರೆಗೂ ಇದರ ಪರಿಣಾಮವನ್ನು ಮೊದಲಿಂದಲೂ ಎದುರಿಸುತ್ತಾ ಬಂದಿರುವುದನ್ನು ಪುರಾಣಗಳಿಂದ ಹಾಗು ಮಾನವನ ಇತಿಹಾಸದಿಂದ ಯಾವುದೇ ವ್ಯಕ್ತಿಯು ಅರಿಯಬಹುದಾಗಿದೆ. ವಿಜ್ಞಾನವೂ ಕೂಡ, 'ಬದಲಾವಣೆಯ ಅಳವಡಿಕೆಯೇ ಜೀವಿಯು ತನ್ನ ಜೀವನವನ್ನು ಮುಂದುವರೆಸಲು ಅನುವುಮಾಡಿ ಕೊಡುವುದಿದೆ' ಎಂತೆಂಬುದಾಗಿ ಸಾಬೀತುಪಡಿಸಿರುವುದಿದೆ. ವಿಪರ್ಯಾಸವೆಂದರೆ, ಮಾನವನಾಗಲೀ ಅಥವಾ ದೇವರಾಗಲೀ ಅಥವಾ ಯಾವುದೇ ಜೀವ ರಚನೆಯಾಗಲಿ, ತನ್ನ ಜೀವನ ಕ್ರಮದಲ್ಲಿ ವೆತ್ಯಾಸವನ್ನು ಅಥವಾ ಬದಲಾವಣೆಯನ್ನು ಅಷ್ಟು ಸುಲಭವಾಗಿ ಅರಗಿಸಿಕೊಳ್ಳದಿರುವುದಿದೆ. ಹೀಗಾಗಿ, ಬದಲಾವಣೆಯ ವಿರುದ್ಧ ಜೀವ ರಚನೆಗಳು ಮೊದಲಿಂದಲೂ ಯುದ್ಧವನ್ನು ಮಾಡಿಕೊಂಡು ಬಂದಿರುವುದಿದೆ. ಈ ಸಮರದಲ್ಲಿ ಕೆಲವು ಬಾರಿ ಸಫಲತೆಯನ್ನು ಪಡೆದಿದ್ದರೂ ಬಹುಬಾರಿ ವಿಫಲತೆಯನ್ನು ಅನುಭವಿಸಿ, ವಿಧಿ ಇಲ್ಲದೆ ಒಪ್ಪಿಕೊಂಡು ಅಳವಡಿಸಿಕೊಂಡಿರುವುದಿದೆ.

ಮಂಗನಿಂದ ಮಾನವ ಎಂತೆಂಬ ಸಿದ್ಧಾಂತವು ವಿಜ್ಞಾನದಲ್ಲಿ ಸಾಬೀತಾಗಿರುವಂಥಃ ವಿಚಾರವೇ ಆಗಿರುವುದಿದೆ. ಈ ವಿಚಾರವನ್ನು ಉದಾಹರಣೆಯನ್ನಾಗಿ ತೆಗೆದುಕೊಂಡಾಗ, ಮೊಟ್ಟ ಮೊದಲು ಬಾಲವು ಇಲ್ಲದಂಥಃ ಮಂಗವು ಜನಿಸಿದಾಗ ಅದು ಆ ಗುಂಪಿನಲ್ಲಿ ಅತ್ಯಾಶ್ಚರ್ಯವನ್ನು ಉಂಟುಮಾಡಿರಬಹುದಾಗಿದೆ. ಏಕೆಂದರೆ, ಅದು ಅಂದಿನ ಕ್ರಮಕ್ಕೆ ವಿರುದ್ಧವಾದದ್ದೇ ಆಗಿದ್ದಿದೆ. ಈ ಘಟನೆಯನ್ನು ಕುರಿತು ಅಂದಿನ ಜೀವಿಗಳು 'ಓಹೋ ಅದು ದುಷ್ಟ ಶಕ್ತಿಯ ಪ್ರಭಾವದಿಂದ ಹೀಗಾಗಿರುವುದಿದೆ' ಎಂತೆಂಬುದಾಗಿ ಬಹುಶಃ ಯೋಚಿಸಲರಕ್ಕೂ ಸಾಧ್ಯತೆಗಳು ಇರುವುದಿದೆ. ಕ್ರಮೇಣವಾಗಿ, ಬಾಲವು ಇಲ್ಲದಂಥಃ ರಚನೆಗಳು ಸಂಖ್ಯೆಯಲ್ಲಿ ಬಹುಗೊಂಡ ನಂತರದಿ, ಅದೇ ಒಂದು ರೀತಿಯಾದ ಜೀವಿಗಳ ಗುಂಪಾಗಿ ವರ್ಗೀಕರಣಗೊಂಡಿರುವುದಿದೆ. ಹೀಗೆಯೇ ಮುಂದುವರೆದು ಬಾಲವೇ ಇಲ್ಲದಂಥಃ ಗುಂಪಿನಲ್ಲಿ ತನ್ನ ಪೂರ್ವಜರ ಕ್ರಮದ ರೀತಿಯಲ್ಲಿ ಬಾಲವಿರುವ ಜೀವಿಯು ಜನಿಸಿದಲ್ಲಿ, ಅದು ಪುನಃ ಅಕ್ರಮ ಎಂದೆನಿಸಿಕೊಂಡು, ಇದಕ್ಕೆಲ್ಲಾ ದುಷ್ಟ ಶಕ್ತಿಗಳ ಪ್ರಭಾವವೇ ಕಾರಣ ಇರಬಹುದೆ? ಎಂದು ಯೋಚಿಸಿರಬಹುದಾಗಿದೆ. ಹೀಗೆ ಒಂದು ಪರೀಸ್ಥಿತಿಯು ಒಂದು ಕಾಲದಲ್ಲಿ ಕ್ರಮ ಎಂದೆನಿಸಿಕೊಂಡಿದ್ದರೆ, ಮತ್ತೊಂದು ಕಾಲದಲ್ಲಿ ಅದೇ ಪರೀಸ್ಥಿತಿಯು ಅಕ್ರಮ ಎಂದು ಅದೇ ಗುಂಪಿನ ಜೀವಿಗಳಿಂದ ಗುರುತಿಸಿಕೊಂಡಿರುವುದಿದೆ.

ಪ್ರಕೃತಿಯು ಸರ್ವ ಕಾಲ ಹಾಗು ದೇಶಗಳಲ್ಲಿ ಒಂದೇ ರೀತಿ ಯಾದ ಕ್ರಮವನ್ನು ಅನುಸರಿಸದೆ, ಹೊಸ ರೀತಿಯಾದಂಥಃ ಕ್ರಮಗಳನ್ನು ಸೃಷ್ಟಿಯಲ್ಲಿ ಪರಿಚಯಿಸುವುದಿದೆ. ಪರಿಚಯಗೊಂಡ ಸಮಯದಲ್ಲಿ ಯಾವುದೇ ಒಂದು ಪರೀಸ್ಥಿತಿಯು ಅಕ್ರಮ ಎಂದೆನಿಸಿಕೊಂಡರೂ ನಂತರದಲ್ಲಿ ಅದೇ ಒಂದು ಕ್ರಮವಾಗಿ ಬಹುಶಃ ಸ್ಥಿರಗೊಂಡಿರುವುದಿದೆ. ಕ್ರಮವೇ ಆಕ್ರಮವಾಗುವುದು ಯಾವಾಗ ಎಂದು ಆಲೋಚಿಸಿದರೆ, 'ಜೀವಿಗಳಿಗೆ ಹೊಸ ರೀತಿಯ ಪರೀಸ್ಥಿಯ ಅಳವಡಿಕೆಯ ಸಮಸ್ಯೆಯಾಗಿ ತಲೆದೋರಿದಾಗ' ಎಂಬುದಾಗಿ ಅಧ್ಯಯನದ ಮುಖಾಂತರವಾಗಿ ಕಂಡುಕೊಳ್ಳಬಹುದಾಗಿದೆ.

ಪ್ರಸಕ್ತದಲ್ಲಿಯೂ ಮಾನವನು ಸಾಧಿಸಿಕೊಂಡಿರುವುಂಥಃ ಜ್ಞಾನ ದಡಿಯಲ್ಲಿ ಹಲವಾರು ವಿಚಾರಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ತನ್ನ ಇಚ್ಛೆಯನ್ನು ಸಾಧಿಸಿಕೊಳ್ಳುವುದಿದೆ. ಋತ ಹಾಗು ಸತ್ಯದ ಅರಿಯುವಿಕೆಯೇ 'ವಿಜ್ಞಾನ' ಎಂದೆನಿಸಿಕೊಂಡು, ಅದನ್ನು ಉಪಯೋಗಿಸಿಕೊಳ್ಳುವ ಕಲೆಯನ್ನು 'ತಂತ್ರಜ್ಞಾನ' ಎಂದು ಕರೆಸಿಕೊಂಡಿರುವುದಿದೆ. ಉದಾಹರಣೆಗೆ, ಕ+ಖ+ಗ=ಉ ಎಂತೆಂಬ ಬೀಜ ಗಣಿತದ ಸಮೀಕರಣದಲ್ಲಿ ಉ ಎಂಬ ಉತ್ತರವು 10 ಎಂತಾಗಬೇಕಾದರೆ, ಕ, ಖ, ಗ ಎಂಬ ಸ್ಥಾನದಲ್ಲಿ ಯಾವ ಯಾವ ಅಂಕೆಗಳ ಸಂಭವನೀಯತೆಯ ಸಮೂಹವನ್ನು ಹಾಕಿದರೆ ಉತ್ತರವನ್ನು ಪಡೆಯಬಹುದು ಎಂತೆಂಬ ಪ್ರಸಕ್ತದಲ್ಲಿ ಮಾನವನು ಜ್ಞಾನವನ್ನು ಪಡೆದಿರುವುದಿದೆ. ಈ ಸಂಭವನೀಯತೆಯು ವ್ಯಕ್ತಿಗೆ ಗೊತ್ತಿರುವೆಡೆ ಬಯಸಿದ ಉತ್ತರವನ್ನು ಪಡೆಯುವುದಾದರೆ, ಗೊತ್ತಿಲ್ಲದೆಡೆ ಬಯಸುವಂಥಃ ಉತ್ತರವು ಪುನಃ ಸಂಭವನೀಯತೆ ಎಡೆಗೆ ಚಲಿಸುವುದಿದೆ. ಒಂದು ವ್ಯಕ್ತಿಯು ತಾಂತ್ರಿಕತೆಯಿಂದ ತನ್ನ ಜ್ಞಾನವನ್ನು ಬಳಸಿ ಸಫಲಗೊಂಡಲ್ಲಿ ಕ, ಖ, ಗ ಸ್ಥಾನದಲ್ಲಿನ ಶಕ್ತಿಗಳು ಧನಾತ್ಮಕ ಎಂದು ಅವನಿಗೆ ಅನಿಸುವುದಾದರೆ, ಉತ್ತರವು ವಿಫಲಗೊಂಡ ಎಡೆಯಲ್ಲಿ ಕ, ಖ, ಗ ಸ್ಥಾನದಲ್ಲಿನ ಶಕ್ತಿಗಳು ಋಣಾತ್ಮಕ ಎಂಬುದಾಗಿ ಅವನಿಗೆ ಅನಿಸುವುದಿದೆ.

ಭೌತ ವಿಜ್ಞಾನದ ಪ್ರಕಾರವಾಗಿ, 2*ನ*ನ (ಟೂ–ಎನ್–ಸ್ಕ್ವೇರ್) ಎಂತೆಂಬುದು ಅಣುವಿನಲ್ಲಿ ಕವಚಗಳಲ್ಲಿನ ಎಲೆಕ್ಟ್ರಾನುಗಳ ವ್ಯವಸ್ಥೆಯ ಸೂತ್ರವೇ ಆಗಿರುವುದಿದೆ. ಮೊದಲ ಕವಚದಲ್ಲಿ ಈ ಸೂತ್ರದ ಪ್ರಕಾರವಾಗಿ (2*1*1, ನ=ಕವಚದ ಸ್ಥಾನಿಕ ಸಂಖ್ಯೆ) ಎಲೆಕ್ಟ್ರಾನುಗಳ ಸಂಖ್ಯೆಯು 2 ಆಗಿರಬೇಕಿದೆ (ವಾಸ್ತವದಲ್ಲಿ ಹಾಗೆಯೇ ಇರುವುದಿದೆ). ಎರಡನೇ ಕವಚದಲ್ಲಿ (2*2*2) ಎಲೆಕ್ಟ್ರಾನುಗಳ ಸಂಖ್ಯೆಯು 8 ಇರುವುದಿದೆ. ವೈದೀಕ ಸಾಹಿತ್ಯ ಪ್ರಕಾರವಾಗಿ, ಈ ಒಂದು ಕ್ರಮವನ್ನು 'ಋತ' ಎಂತೆಂದಾರೆ, ನೈಜತೆಯಲ್ಲಿ ಅಷ್ಟೇ ಸಂಖ್ಯೆಯ ಎಲೆಕ್ಟ್ರಾನುಗಳ ಇರುವಿಕೆಯನ್ನು 'ಸತ್ಯ' ಎಂದು ಕರೆದಿರುವುದಿದೆ. ಈ ಸೂತ್ರದ ಆಧಾರದ ಮೇಲೆಯೇ ವಿಶ್ವದಲ್ಲಿನ ಅಣುಗಳು ಪ್ರಸಕ್ತದಲ್ಲಿ ರಚಿತಗೊಂಡಿರುವುದಿದೆ. ಇದು ಪ್ರಸಕ್ತದ ವಿಚಾರವಾಗಿದ್ದರೆ, ಭೂತ ಕಾಲದಲ್ಲಿ ಅಥವಾ ವರ್ತಮಾನ ಕಾಲದಲ್ಲಿ ಋತ ಎಂತೆಂಬುದೇನಾದರೂ ಬೇರೆ ರೂಪದಲ್ಲಿ ಇರುವುದಿದ್ದರೆ, ಸತ್ಯವು ತಾನೇ ತಾನಾಗಿ ಬದಲಾವಣೆಗೊಳ್ಳುವುದಿದೆ. ಈ ಒಂದು ಬದಲಾವಣೆಯ ಹಂತದಲ್ಲಿ ವಿವಿಧ ರೀತಿಯಾದ ಶಕ್ತಿಗಳು ಕಾರಣೀಭೂತವಾಗಿ ಅನಾವರಣಗೊಳ್ಳುವುದಿದೆ. ಆ ಒಂದು ಬದಲಾವಣೆಗೆ ತಕ್ಕಂತೆ

ವಿಶ್ವವು ಪುನಃ ರಚಿತಗೊಳ್ಳುವುದಿದೆ. ಅಳವಡಿಸಿಕೊಳ್ಳಬಲ್ಲಂಥಃ ರಚನೆಗಳು ಮಾತ್ರವೇ ಉಳದಕೊಳ್ಳುವುದಿದ್ದು, ಮಿಕ್ಕವುಗಳು ನಾಶಗೊಳ್ಳುವುದಿದೆ. ನಾಶಕ್ಕೆ ಒಳಪಡುವಂಥಃ ರಚನೆಗಳು ಇದಕ್ಕೆ ಕಾರಣವಾದಂಥಃ ಶಕ್ತಿಯನ್ನು 'ದುಷ್ಟ' ಎಂದು ಜರಿದರೆ, ಐಚ್ಛಿಕವಾಗಿ ಅಳವಡಿಸಿಕೊಳ್ಳುವ ಜೀವಿಗಳು 'ಸಾಧನೆ' ಎಂದು ಕರೆದುಕೊಳ್ಳುವುದಿದೆ. ನಂತರದಿ ಹುಟ್ಟುವಂಥಃ ಜೀವ ರಚನೆಗಳು ಆ ಶಕ್ತಿಗಳನ್ನೇ 'ಶಿಷ್ಟ' ಎಂದು ಗುರುತಿಸುವುದಿದೆ. ಇವೆಲ್ಲವೂ ಒಟ್ಟಾರೆಯಾಗಿ ಅನುಕೂಲ ಸಿಂಧುವಾಗಿ ತೋರುವುದೇ ವಿನಃ ವಾಸ್ತವದಲ್ಲಿ ಹಾಗೇನೂ ಇರದಾಗಿದೆ.

ಹಲವು ವರ್ಷಗಳ ಹಿಂದೆ ಮಾನವ ಜೀವಿಯಲ್ಲಿ ರಾಸಾಯನಿಕ ವಸ್ತುವಾದ ಡಿ.ಡಿ.ಟಿ ಎಂಬ ಪದಾರ್ಥವು 17 ಶೇಕಡಾವರುವಿಗಿಂತ ಕಡಿಮೆ ಇದ್ದದ್ದು, ಏನಾದರೂ ಆ ಸಮಯದಲ್ಲಿ 17 ಶೇಕಡಾವಾರುವಿಗಿಂತಾ ಹೆಚ್ಚಾಗಿದ್ದಲ್ಲಿ, ಆ ವ್ಯಕ್ತಿಗೆ ಮರಣವು ಸಂಭವಿಸುವುದಾಗಿದತ್ತು. ಆದರೆ, ಇತ್ತೀಚಿನ ಬೆಳವಣಿಗೆಯಲ್ಲಿ, ಆಹಾರ ಪದಾರ್ಥಗಳ ಬಳಕೆಯಿಂದ ಅವನ ದೇಹದಲ್ಲೇ 22 ಶೇಕಡಾವಾರುವಿಗಿಂತ ಹೆಚ್ಚಾಗಿರುವುದು ಕಂಡುಬರುತ್ತದೆ. ಅಂದರೆ, ಡಿ.ಡಿ.ಟಿ ಪದಾರ್ಥವನ್ನು ಇಂದು ಮಾನವನ ದೇಹವು ಹೆಚ್ಚಾಗಿ ಅಳವಡಿಸಿಕೊಂಡಿರುವುದು ಕಂಡುಬರುತ್ತಲಿದೆ. ಕಾಲದ ಚೌಕಟ್ಟಿನಲ್ಲಿ ಅಕ್ರಮವೇ ಸಕ್ರಮವಾಗುವುದಿದೆ. ಇದೇ ರೀತಿಯಲ್ಲಿ ಪ್ರಸಕ್ತ ವೈದ್ಯಕೀಯ ವಿಭಾಗವೂ ಹಿಂದೆ ಕಂಡುಬರುತ್ತಿದ್ದಂಥಃ ರೋಗರುಜಿನಗಳಿಗೂ ಇಂದು ಕಂಡುಬರುತ್ತಿರುವಂಥಃ ರೋಗರುಜಿನಗಳಿಗೂ ಬಹಳಷ್ಟು ವೈತ್ಯಾಸವು ಇರುವುದನ್ನು ತನ್ನ ಅರಿವಿಗೆ ತಂದುಕೊಂಡಿರುವುದಿದೆ.

ಋತ ಎಂತೆಂಬುದು ತನ್ನಲ್ಲಿ ಅಗಾಧವಾದಂಥಃ ವಿವಿಧ ರೀತಿಯ ಶಕ್ತಿಗಳನ್ನು ಹುದುಗಿಸಿಕೊಂಡಿರುವುದಿದೆ. ಅವುಗಳ ಉಪಯೋಗವನ್ನು ಹಾಗು ಪಾತ್ರವನ್ನು ಕಾಲದಿಂದ ಕಾಲಕ್ಕೆ ಮಾನವನು ಅನುಭವಿಸುತ್ತಾ, ಅಳವಡಿಸಿಕೊಳ್ಳುತ್ತಾ ಹಾಗು ವಿವಿಧ ರೀತಿಯಲ್ಲಾದ ಬದಲಾವಣೆಗಳನ್ನು ಭಾಗಶಃವಾಗಿಯಾದರೂ ದಾಖಲಿಸುತ್ತಾ ಬಂದಿರುವುದಿದೆ. ಇವುಗಳಲ್ಲಿ ಅನೈಚ್ಛಿಕವಾಗಿ ಅರ್ಥಾತ್, ಪ್ರಾಕೃತಿಕವಾಗಿ ನಡೆದಂಥಃದ್ದು ಒಂದು ಕಡೆಯಾದರೆ, ಐಚ್ಛಿಕವಾಗಿ ಅರ್ಥಾತ್, ಸಾಧನೆಯ ಮುಖಾಂತರ ನಡೆದಿರುವಂಥಃದ್ದು ಮತ್ತೊಂದು ಕಡೆ ಇರುವುದಿದೆ.

ಅನೈಚ್ಛಿಕ ಅಥವಾ ಐಚ್ಛಿಕ ವಿಕಾಸದಲ್ಲಿ ಕಂಡುಬರುವಂಥಃ ಬದಲಾವಣೆಗಳಿಗೆ ವಿಶ್ವದಲ್ಲಿರುವ ಶಕ್ತಿಗಳೇ ಕಾರಣವಾಗಿರುವುದಾಗಿದೆ. ಅನೈಚ್ಛಿಕ ವಿಕಾಸದಲ್ಲಿ ಶಕ್ತಿಗಳು ಅಸಹನೀಯವಾದಂಥಃ ಪರೀಸ್ಥಿತಿಗಳನ್ನು ಜೀವಿಗಳಿಗೆ ಸೃಷ್ಟಿಸುವುದಿದೆ. ಇದಕ್ಕೆ ಜೀವಿಗಳು ಆ ಶಕ್ತಿಗಳ ಬಗೆಗೆ ಅರಿವನ್ನು ಹೊಂದದಿರುವುದು ಹಾಗು ಅದಕ್ಕೆ ತಕ್ಕದಾದಂಥಃ ತಯ್ಯಾರಿಯನ್ನು ನಡೆಸದಿರುವುದು ಮುಖ್ಯವಾದಂಥಃ ಕಾರಣವೇ ಆಗಿರಬಹುದಿದೆ. ಐಚ್ಛಿಕ ವಿಕಾಸದಲ್ಲೂ ಕೂಡ ಆ ಶಕ್ತಿಗಳು ಅದೇ ರೀತಿಯಾದಂಥಃ ಪರೀಸ್ಥಿತಿಯನ್ನು ಸೃಷ್ಟಿಸಿದರೂ ಕೂಡ, ಅರಿವಿನಿಂದೊಡಗೂಡಿದ ತಯ್ಯಾರಿ ಹೊಂದಿರುವ ಪ್ರಯುಕ್ತವಾಗಿ ಸಾಧಕನು ಅದನ್ನು ಸಹನೀಯ ಪರೀಸ್ಥಿತಿಯಾಗಿ ಬದಲಿಸಿಕೊಳ್ಳುವುದಿದೆ. ಅಸಹನೀಯ ಪರೀಸ್ಥಿತಿಯನ್ನು ಸಹಿಸಿಕೊಳ್ಳುವುದೇ ಸಾಧನೆಯ ಬಹುಮುಖ್ಯ ಅಂಗವಾಗಿರುವುದಿದೆ. ಹಾಗಾಗಿ, ಯುದ್ಧ ಪ್ರಾರಂಭಗೊಂಡ ನಂತರ ಶಸ್ತ್ರಾಭ್ಯಾಸಕ್ಕೆ ತೊಡಗುವ ಬದಲು, ಮೊದಲೇ ಅಭ್ಯಸಿಸುವುದು ಉತ್ತಮವಾಗಿರುವುದಿದೆ.

ಹುಟ್ಟು, ಸಾವು, ಜೀವನ, ಸಾಧನೆ ಎಲ್ಲವೂ ಕೂಡ ಋತ ಎಂತೆಂಬುವುದರ ಒಂದು ಕ್ರಮವಾಗಿರುವುದಿದೆ. ಬದಲಾವಣೆಯನ್ನು ಹುಟ್ಟುಹಾಕುವುದು ಅದರ ಒಂದು ಪ್ರಮುಖ ಗುಣವಾಗಿರುವುದಿದೆ. ಇದರ ಜೊತೆಗಿನ ಹೋರಾಟ ಜೀವಿಗಳ ದಿನನಿತ್ಯದ ಕರ್ಮವಾಗಿರುವುದಿದೆ. ಹೀಗಾಗಿ, ಅನುಕೂಲಕರ ಹಾಗು ಅನಾನುಕೂಲಕರ ಎಂತೆಂಬ ಮಾನವ ನಿರ್ಮಿತ ಕೇವಲ ತಾರ್ಕಿಕ ತಳಹದಿಯ ವರ್ಗೀಕೃತ ಶಕ್ತಿಗಳನ್ನು ಐಚ್ಛಿಕವಾಗಿ ಅರಿವಿಗೆ ತಂದುಕೊಂಡು, ನಿಯಂತ್ರಣಕ್ಕೆ ಒಳಪಡಿಸಿಕೊಂಡು ಯಾವುದೇ ವ್ಯಕ್ತಿಯು ಮುಂದುವರೆವುದೇ ಅವನಿಗಿರುವಂಥಃ ಒಂದೇ ಒಂದು ಮಾರ್ಗವಾಗಿರುವುದಾಗಿದೆ. ಹಾಗಿದಲ್ಲದೆ ಅನೈಚ್ಛಿಕ ವಿಕಾಸದಲ್ಲಿ ಮುಂದುವರೆದಲ್ಲಿ, ಅಹಿತಕರವಾದಂಥಃ ಅಸಹನೀಯ ಪರೀಸ್ಥಿತಿಯ ಎದುರಿಸುವಿಕೆಯು ಯಾವುದೇ ವ್ಯಕ್ತಿಗೆ ಅನಿವಾರ್ಯವಾಗುವುದು ನಿಶ್ಚಿತವಾಗುವುದಿದೆ.

ಆಧಾರ:

ಮನಃಶಾಸ್ತ್ರ
ಯೋಗ ಶಾಸ್ತ್ರ
ವೇದಾಂತ

ಮಾನವನ ವಿಕಾಸದ ಹಾದಿಯಲ್ಲಿ ಮೂರನೆ ಕಣ್ಣು ಎಂಬುವುದರ ಪ್ರಾಮುಖ್ಯತೆ

ಚಂದ್ರಮೌಳಿ ಎಂ.ಎಸ್
ಮನಃಶಾಸ್ತ್ರಜ್ಞ, ಬೆಂಗಳೂರು

ಭಾರತೀಯ ತಾತ್ತ್ವಿಕ ಚಿಂತನೆಯಲ್ಲಿ ಮೂರನೆ ಕಣ್ಣು ಎಂಬ ವಿಚಾರವು ಬಹಳಷ್ಟು ಕಂಡುಬರುವುದಿದೆ. ಭಾರತೀಯರಿಗೆ ಸಾಹಜವಾಗಿ ಮೂರನೆ ಕಣ್ಣು ಎಂಬ ಕ್ಷಣವೇ ಮುಕ್ತಸ್ವಾತ ಶಿವನ ನೆನಪು ಬರುವುದಾಗಿದೆ. ಶಿವನ ಅನೇಕ ಚಿತ್ರಣಗಳಲ್ಲಿ ಮೂರನೆಯ ಕಣ್ಣು ಎಂಬುದನ್ನು ಅವನ ಲಲಾಟದ ಮೇಲೆ ಚಿತ್ರಿಸಲಾಗಿರುವುದಿದೆ. ಮಾನವರಿಗೆ ಎರಡು ಕಣ್ಣುಗಳು ಮಾತ್ರವೇ ಇರುವುದಾಗಿದ್ದು, 'ಮೂರನೆಯ ಕಣ್ಣು' ಎಂಬುದನ್ನು ವಾಸ್ತವದಲ್ಲಿ ಇರುವುದಾಗಿದೆಯೆ? ಈ ಪ್ರಶ್ನೆಯು ಸಾಮಾನ್ಯವಾಗಿ ಭಾರತೀಯರಿಗೆ ಸದಾಕಾಲವೂ ಕಾಡಿರುವಂಥಃ ಪ್ರಶ್ನೆಯೇ ಆಗಿರುವುದಿದೆ.

ಭಾರತೀಯ ತತ್ತ್ವಶಾಸ್ತ್ರಗಳ ಶಾಖೆಯಾದ 'ಯೋಗ' ಎಂಬೆಂಬ ಶಾಖೆಯು ಮೂರನೆ ಕಣ್ಣಿನ ಮೇಲೆ ಬಹಳಷ್ಟು ಬೆಳಕನ್ನು ಚೆಲ್ಲುವುದಿದೆ. ಮಾನವನ

ಸಾಮಾನ್ಯ ಹುಟ್ಟಿನಲ್ಲಿ ಮೂರನೆಯ ಕಣ್ಣು ಎಲ್ಲರಲ್ಲಿರುವುದು ಇರದಾಗಿದ್ದರೂ, ಹಲವಾರು ಸಾಧನ ಮಾರ್ಗಗಳ ಮುಖಾಂತರವಾಗಿ ಇದನ್ನು ಸಾಧಿಸಬಹುದಾಗಿದೆ ಎಂತೆಲ್ಲಿರುವುದು ಯೋಗ ಶಾಸ್ತ್ರ ಪ್ರಸ್ತುತ ಪಡಿಸುವಂಥಃ ವಿಚಾರವೇ ಆಗಿರುವುದಿದೆ. ತಂತ್ರ ಶಾಸ್ತ್ರದ ಭಾಗವೇ ಆದಂಥಃ 'ಕುಂಡಲಿನಿ ಶಾಸ್ತ್ರ' ಎಂತೆಲ್ಲಿರುವುದು ಹಾಗು 'ನಾಡಿಶಾಸ್ತ್ರ' ಎಂತೆಲ್ಲಿರುವ ಮತ್ತೊಂದು ವೈಜ್ಞಾನಿಕ ಶಾಖೆಯ ಆಧಾರದ ಮೇಲೆ ಮೂರನೇ ಕಣ್ಣನ್ನು ಪಡೆಯುವ ಬಗೆಗೆ ಮಾರ್ಗವನ್ನು ದರ್ಶಿಸುವುದಿದೆ. ಇನ್ನು ಬೌದ್ಧಿಕತೆಯ ಆಧಾರದ ಮೇಲೆ ರಚಿತಗೊಂಡಂಥಃ ಬುದ್ಧನ ಪ್ರಕಾರದ ಯೋಗಶಾಸ್ತ್ರವು ಮೂರನೇ ಕಣ್ಣನ್ನು ಭೌತಿಕವಾಗಿ ಪಡೆಯುವ ಬಗೆಗೆ ಸಂಪೂರ್ಣವಾಗಿ ವಿವರಗಳನ್ನು ನೀಡುವುದಾಗಿದೆ. 'ಟ್ಯೂಸ್ಡೆ ಲ್ಯಾಂಪ್ಸಮ್ ರಾಂಪ' ಎಂತೆಂಬ ಸನ್ಯಾಸಿಯು ತನ್ನ ಕೃತಿಯಾದ 'ಥರ್ಡ್ ಐ' ಎಂತೆಂಬುವುದರಲ್ಲಿ ಮೂರನೆ ಕಣ್ಣಿನ ಬಗೆಗೆ ಕೂಲಂಕುಶವಾಗಿ ದಾಖಲಿಸಿರುವುದನ್ನು ಪ್ರಸಕ್ತದಲ್ಲಿಯೂ ಕೂಡ ಸರ್ವರೂ ಕಾಣಬಹುದಾಗಿದೆ.

ಪ್ರಸ್ತುತ ಲೇಖನವು ಮೂರನೆ ಕಣ್ಣನ್ನು ಪಡೆಯುವ ಬಗೆ ಹಾಗು ಇತ್ಯಾದಿ ವಿವರಗಳ ಕಡೆಗೆ ನೋಟಹರಿಸದೆ, ಕೇವಲ ಮೂರನೆ ಕಣ್ಣು ಎಲ್ಲರೆಲ್ಲಿರುವುದರೇನು? ಎಂತೆಲ್ಲಿರುವುದರ ಬಗೆಗೆ ಆಧ್ಯಾತ್ಮಿಕ ಆಲಯಾಮದ ಮನೋಶಾಸ್ತ್ರಿಯ ಸ್ತರದಲ್ಲಿ ಒಂದು ಕಿರು ಪರಿಚಯವನ್ನು ಅಧ್ಯಯಯಿಗೆ ಕೊಡಮಾಡುವ ಪ್ರಯತ್ನವೇ ಆಗಿರುವುದಿದೆ.

ಭಾರತೀಯ ತಾತ್ತ್ವಿಕ ಚಿಂತನೆಯಲ್ಲಿ ಮೂರನೆ ಕಣ್ಣು ಎಂತೆಂಬ ವಿಚಾರವು ಬಹಳಷ್ಟು ಕಂಡುಬರುವುದಿದೆ. ಭಾರತೀಯನಿಗೆ ಸಹಜವಾಗಿ ಮೂರನೆ ಕಣ್ಣು ಎಂತೆಂದ ಕ್ಷಣವೇ ಮುಕ್ಕಣ್ಣನಾದ ಶಿವನ ನೆನೆಪು ಬರುವುದಾಗಿದೆ. ಶಿವನ ಅನೇಕ ಚಿತ್ರಣಗಳಲ್ಲಿ ಮೂರನೆಯ ಕಣ್ಣು ಎಂತೆನ್ನುವುದು ಅವನ ಲಲಾಟದ ಮೇಲೆ ಚಿತ್ರಿತಗೊಂಡಿರುವುದಿದೆ. ಮಾನವನಿಗೆ ಎರಡು ಕಣ್ಣುಗಳು ಮಾತ್ರವೇ ಇರುವುದಾಗಿದ್ದು, 'ಮೂರನೆಯ ಕಣ್ಣು' ಎಂತೆನ್ನುವುದು ವಾಸ್ತವದಲ್ಲಿ ಇರುವುದಾಗಿದೆಯೆ? ಈ ಪ್ರಶ್ನೆಯು ಸಾಮಾನ್ಯವಾಗಿ ಭಾರತೀಯರಿಗೆ ಸದಾಕಾಲವೂ ಕಾಡಿರುವಂಥಃ ಪ್ರಶ್ನೆಯೇ ಆಗಿರುವುದಿದೆ.

ಭಾರತೀಯ ತತ್ತ್ವಶಾಸ್ತ್ರಗಳ ಶಾಖೆಯಾದ 'ಯೋಗ' ಎಂತೆಂಬ ಶಾಖೆಯು ಮೂರನೆ ಕಣ್ಣಿನ ಮೇಲೆ ಬಹಳಷ್ಟು ಬೆಳಕನ್ನು ಚೆಲ್ಲುವುದಿದೆ. ಮಾನವನ ಸಹಜ ಹುಟ್ಟಿನಲ್ಲಿ ಮೂರನೆಯ ಕಣ್ಣು ಎಂತೆಂಬುವುದು ಇರದಾಗಿದ್ದರೂ, ಹಲವಾರು ಸಾಧನ ಮಾರ್ಗಗಳ ಮುಖಾಂತರವಾಗಿ ಇದನ್ನು ಸಾಧಿಸಬಹುದಾಗಿದೆ ಎಂತೆಂಬುದು ಯೋಗ ಶಾಸ್ತ್ರ ಪ್ರಸ್ತುತ ಪಡಿಸುವಂಥಃ ವಿಚಾರವೇ ಆಗಿರುವುದಿದೆ. ತಂತ್ರ ಶಾಸ್ತ್ರದ ಭಾಗವೇ ಆದಂಥಃ 'ಕುಂಡಲಿನಿ ಶಾಸ್ತ್ರ' ಎಂತೆಬುವುದು ಹಾಗು 'ನಾಡಿಶಾಸ್ತ್ರ' ಎಂತೆಂಬ ಮತ್ತೊಂದು ವೈಜ್ಞಾನಿಕ ಶಾಖೆಯ ಆಧಾರದ ಮೇಲೆ ಮೂರನೇ ಕಣ್ಣನ್ನು ಪಡೆಯುವ ಬಗೆಗೆ ಮಾರ್ಗವನ್ನು ದರ್ಶಿಸುವುದಿದೆ. ಇನ್ನು ಬೌದ್ಧಿಕತೆಯ ಆಧಾರದ ಮೇಲೆ ರಚಿತಗೊಂಡಂಥಃ ಬುದ್ಧನ ಪ್ರಕಾರದ ಯೋಗಶಾಸ್ತ್ರವು ಮೂರನೆ ಕಣ್ಣನ್ನು ಭೌತಿಕವಾಗಿ ಪಡೆಯುವ ಬಗೆಗೆ ಸಂಪೂರ್ಣವಾಗಿ ವಿವರಗಳನ್ನು ನೀಡುವುದಾಗಿದೆ. 'ಟ್ಯೂಸ್ಡೆ ಲ್ಯಾಂಪ್ಸಮ್ ರಾಂಪ' ಎಂತೆಂಬ ಸನ್ಯಾಸಿಯು ತನ್ನ ಕೃತಿಯಾದ 'ಥರ್ಡ್ ಐ' ಎಂತೆಂಬುವುದರಲ್ಲಿ ಮೂರನೆ ಕಣ್ಣಿನ ಬಗೆಗೆ ಕೂಲಂಕುಶವಾಗಿ ದಾಖಲಿಸಿರುವುದನ್ನು ಪ್ರಸಕ್ತದಲ್ಲಿಯೂ ಕೂಡ ಸರ್ವರೂ ಕಾಣಬಹುದಾಗಿದೆ.

ಮೂರನೆ ಕಣ್ಣು ಎಂತೆನ್ನುವುದು ಕನಿಷ್ಠ ಪಕ್ಷ ಮೂರು ಆಯಾಮಗಳನ್ನು ದರ್ಶಿಸುವಂಥಃ ಸಾಮರ್ಥ್ಯವನ್ನು ಪಡೆದಿರುವುದಿದೆ. ಆ ಆಯಾಮಗಳು ಆದಿಭೌತಿಕ, ಆಧ್ಯಾತ್ಮಿಕ ಹಾಗು ಆದಿದೈವಿಕ ಅರ್ಥಾತ್, ಭೌತಿಕ ಸ್ತರ, ಮಾನಸಿಕ ಸ್ತರ ಹಾಗು ಶಕ್ತಿ ಸ್ತರ ಎಂತೆಂಬುವುಗಳೇ ಆಗಿರುವುದಿದೆ. ಮಾನವನ ಪ್ರಸಕ್ತ ಎರಡು ಕಣ್ಣುಗಳು ಎಚ್ಚರ ಸ್ಥಿತಿಯಲ್ಲಿ ಮೂರು ಆಯಾಮಗಳನ್ನು ಬಾಹ್ಯ ರೀತಿಯಲ್ಲಿ ಮಾತ್ರವೇ ನೋಟ ಗ್ರಹಿಕೆಯನ್ನು ಮಾಡಬಲ್ಲದಾಗಿದ್ದರೆ, ಮೂರನೆ ಕಣ್ಣು ಎಂತೆನ್ನುವುದು ಬಾಹ್ಯ ಜೊತೆಗೇ ಆಂತರಿಕ ಎಂತೆಂಬ ವಿಭಿನ್ನ ಸ್ತರಗಳಲ್ಲಿ ಮೂರು ಆಯಾಮಗಳ ಗ್ರಹಿಕೆಯನ್ನು ಮಾನವನಿಗೆ ಕೊಡಮಾಡುವುದಿದೆ. ಈ ರೀತಿಯಾದಂಥಃ ಮೂರನೇ ಕಣ್ಣು ಅನೈಚ್ಛಿಕ ವಿಕಾಸದಲ್ಲಿ ಪ್ರಸಕ್ತ ಮಾನವನಲ್ಲಿ ಕಂಡುಬರದೆ, ಕೇವಲ ಐಚ್ಛಿಕವಾದಂಥಃ ಪ್ರಯತ್ನಪೂರ್ವಕ ವಿಕಾಸದ ಸಾಧನೆಯ ಹಾದಿಯಲ್ಲಿ ಮಾತ್ರವೇ ಬಹುಶಃ ಅವನಲ್ಲಿ ಜನಿಸುವಂಥಃದ್ದಾಗಿರುವುದಿದೆ.

ಮೂರನೆ ಕಣ್ಣನ್ನು ಪಡೆಯುವ ಬಗೆ ಹಾಗು ಇತ್ಯಾದಿ ವಿವರಗಳ ಕಡೆಗೆ ನೋಟಹರಿಸದೆ, ಕೇವಲ ಮೂರನೆ ಕಣ್ಣು ಎಂತೆಂದರೇನು? ಎಂತೆಂಬುವುದರ ಬಗೆಗೆ ಆಧ್ಯಾತ್ಮಿಕ ಆಯಾಮದ ಮನೋಶಾಸ್ತ್ರಿಯ ಸ್ತರದಲ್ಲಿ ಒಂದು ಕಿರು ಪರಿಚಯವನ್ನು ಅಧ್ಯಯಯಿಗೆ ಕೊಡಮಾಡುವ ಪ್ರಯತ್ನವನ್ನು ಈ ಮುಂದೆ ಮಾಡಿರುವುದಿದೆ.

'ತಂತ್ರ' ಎಂಬುವುದರ ಒಂದು ಪ್ರಮುಖ ಅಂಗವೇ ಆದಂಥಃ 'ನಾಡಿಶಾಸ್ತ್ರ' ಎಂತೆಂಬ ಭಾಗವು ಮಾನವ ದೇಹದಲ್ಲಿನ ನಾಡಿಗಳ ಬಗೆಗೆ ಮಾತನಾಡುವುದಿದೆ. ನಾಡಿಶಾಸ್ತ್ರದ ಪ್ರಕಾರವಾಗಿ, ಮಾನವ ಅಸ್ತಿತ್ವಕ್ಕೆ ಕಾರಣವಾಗಿರುವಂಥಃ ಅನ್ನಮಯ, ಮನೋಮಯ, ಪ್ರಾಣಮಯ, ವಿಜ್ಞಾನಮಯ ಹಾಗು ಆನಂದಮಯ ಎಂತೆನ್ನುವ ಕೋಶಗಳಲ್ಲಿ, ಈ ನಾಡಿಗಳು ಪ್ರಾಣಮಯ ಕೋಶದಲ್ಲಿ ಇರುವುದಾಗಿದೆ. ನಮಗೆ ತಿಳಿದಿರುವ ಹಾಗೆ ಅನ್ನಮಯ ಕೋಶ ಅಥವಾ ಭೌತಿಕ ದೇಹದಲ್ಲಿ ಹೇಗೆ ರಕ್ತದ ನಾಡಿಗಳ ಜಾಲವು ಇರುವುದಾಗಿದ್ದು, ಅದರಲ್ಲಿ ರಕ್ತವು ಹೇಗೆ ಸಂಚರಿಸುತ್ತದೆಯೋ, ಹಾಗೆಯೇ ಪ್ರಾಣಮಯ ಕೋಶ ಎಂತೆನ್ನುವ ಶಕ್ತಿ ದೇಹದಲ್ಲಿ ಪೂರ್ಣ ಶಕ್ತಿ ರೂಪದಲ್ಲಿರುವಂಥಃ ನಾಡಿಗಳ ಜಾಲವು ಇರುವುದಾಗಿದ್ದು, ಅದರಲ್ಲಿ ಪ್ರಾಣಶಕ್ತಿಯು ತನ್ನ ಸಂಚಾರವನ್ನು ಇರಿಸಿಕೊಂಡಿರುವುದಿದೆ.

ನಾಡಿ ಶಾಸ್ತ್ರದ ಪ್ರಕಾರದಲ್ಲಿ, ಪ್ರಸಕ್ತ ಮಾನವನ ಪ್ರಾಣಮಯ ದೇಹದಲ್ಲಿ 72,000 ನಾಡಿಗಳು ಇರುವುದಾಗಿದೆ. ಇಂಥಃ ನಾಡಿಗಳು ಹಲವು ಜಾಗಗಳಲ್ಲಿ ಒಂದಕ್ಕೊಂದು ಸಂಧಿಸುವುದಿದೆ. ನಾಡಿಶಾಸ್ತ್ರದ ಪ್ರಕಾರದಲ್ಲಿ ಒಂದು ಸಂಧಿಸ್ಥಾನದಲ್ಲಿ ಕೇವಲ ಮೂರು ನಾಡಿಗಳು ಮಾತ್ರವೇ ಸೇರುವುದಿದೆ. ಈ ರೀತಿಯಲ್ಲಿ ಪ್ರಾಣಮಯ ದೇಹವು 114 ಮುಖ್ಯವಾದಂಥಃ ಸಂಧಿಸ್ಥಾನಗಳನ್ನು ಹೊಂದಿರುವುದಿದೆ. ಸಾಮಾನ್ಯವಾಗಿ ಈ ರೀತಿಯಾದಂಥಹ ಸಂಧಿಸ್ಥಾನಗಳನ್ನು 'ಚಕ್ರಗಳು' ಎಂದು ವಾಡಿಕೆಯಲ್ಲಿ ಕರೆಯಲಾಗುವುದಿದೆ. ಚಕ್ರ ಎಂತೆನ್ನುವುದರ ಪದ ಅರ್ಥವು ಒಂದು ವೃತ್ತಾಕಾರವಾದ ವಸ್ತುವೇ ಆಗಿರುವುದಿದ್ದರೂ, ಪ್ರಸ್ತುತದಲ್ಲಿ

ಈ ರೀತಿಯಾದಂಥಃ ಸಂಧಿಸ್ಥಾನಗಳು ವೃತ್ತಾಕಾರದಲ್ಲಿರದೆ, ತ್ರಿಭುಜದ ಆಕೃತಿಯಲ್ಲಿ ಇರುವುದಿದೆ. 'ನಾಡಿಗಳು ಯಾವಾಗಲೂ ತ್ರಿಭುಜದ ಆಕೃತಿಯಲ್ಲೇ ಸಂಧಿಸುವುದಿದೆ' ಎಂದು ನಾಡಿಶಾಸ್ತ್ರವು ನಿರ್ದೇಶಿಸುವುದಿದೆ.

ಸಕಲ ಯೋಗ ಶಾಸ್ತ್ರವು, 'ಈ ಸಂಧಿಸ್ಥಾನಗಳು ಏನನ್ನು ಮಾಡುವುದಿದೆ' ಎಂತೆನ್ನುವುದರ ಬಗೆಗೆಯೇ ಸರ್ವತಾ ಮಾತನಾಡುವುದಿದೆ. ಯೋಗ ಶಾಸ್ತ್ರದ ಪ್ರಕಾರವಾಗಿ, ಈ ಒಂದು 114 ಸಂಧಿಸ್ಥಾನಗಳಲ್ಲಿ 7 ಮಾತ್ರವೇ ಪ್ರಮುಖವಾದವುಗಳಾಗಿರುವುದಿದೆ. ಈ ಏಳು ಸಂಧಿಸ್ಥಾನಗಳು ಅಥವಾ ಚಕ್ರಗಳು ಮಾನವನ ದೇಹದ ವಿವಿಧ ಭಾಗಗಳಲ್ಲಿ ನೆಲೆಗೊಂಡಿರುವುದಿದೆ. ಇವುಗಳು ಕ್ರಮವಾಗಿ ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರಕ, ಅನಾಹತ, ವಿಶುದ್ಧಿ, ಆಜ್ಞಾ ಹಾಗು ಸಹಸ್ರಾರ ಎಂಬುದಾಗಿ ಇರುವುದಿದೆ.

ಕುಂಡಲಿನಿ ಶಾಸ್ತ್ರವು ಮೂಲಾಧಾರ ಎಂತೆಂದರೆ ಅಡಿಪಾಯ ಎಂತೆಂಬುದಾಗಿ ಅರ್ಥೈಸಿರುವುದಿದೆ. ಇದು ಮಾನವನ ದೇಹದಲ್ಲಿ ಜನನಾಂಗ ಹಾಗು ಗುದದ್ವಾರದ ಮಧ್ಯದಲ್ಲಿ ನೆಲೆಗೊಂಡಿರುವುದಾಗಿದೆ. ಈ ಸ್ಥಾನವನ್ನು 'ಪರಿನಿಯಮ್' ಎಂದು ವೈದ್ಯಕೀಯ ವಿಭಾಗವು ಗುರುತಿಸುವುದಿದೆ. ಈ ಒಂದು ಚಕ್ರವು ಯಾವ ವ್ಯಕ್ತಿಗೆ ಪ್ರಧಾನವಾಗಿರುತ್ತದೋ ಅರ್ಥಾತ್, ಪ್ರಾಣ ಶಕ್ತಿ ಎಂತೆಂಬುವದು ಮೂಲಾಧಾರದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿರುತ್ತದೋ ಅಂಥಃ ವ್ಯಕ್ತಿಗೆ 'ಆಹಾರ' ಹಾಗು 'ನಿದ್ರೆ' ಎಂಬೆರಡು ಗುಣಗಳು ಪ್ರಧಾನವಾಗಿ ಕಂಡುಬರುವುದಿದೆ. ಈ ಗುಣಗಳು ಯಾವುದೇ ವ್ಯಕ್ತಿಯ ಜೀವನದಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸಿರುವುದಿದೆ.

ಯಾವುದೇ ವ್ಯಕ್ತಿಯಲ್ಲಿ ಸ್ವಾಧಿಷ್ಠನ ಎಂಬ ಚಕ್ರವು ಅವನ ಜನನೇಂದ್ರಿಯದ ಮೇಲ್ಬಾಗದಲ್ಲಿ ನೆಲೆಗೊಂಡಿರುವುದಾಗಿದೆ. ಈ ಒಂದು ಚಕ್ರವು ಯಾವ ವ್ಯಕ್ತಿಗೆ ಪ್ರಧಾನವಾಗಿರುತ್ತದೋ ಅರ್ಥಾತ್, ಪ್ರಾಣ ಶಕ್ತಿ ಎಂತೆಂಬುವದು ಸ್ವಾಧಿಷ್ಠಾನದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿರುತ್ತದೋ ಆ ವ್ಯಕ್ತಿಯು ಸಂತೋಷ ಎಂಬುವುದನ್ನು ಪ್ರಮುಖವಾಗಿ ಹುಡುಕುವುದಿದೆ ಹಾಗು ಅದಕ್ಕಾಗಿಯೇ ಜೀವಿಸುವುದಿದೆ. ಪ್ರಸಕ್ತದಲ್ಲಿ ಸಂತೋಷ ಎಂತೆಂಬುವುದು ಕೇವಲ ಲೈಂಗಿಕತೆಗೆ ಮಾತ್ರವೇ ಸಂಬಂಧಿಸಿರದೆ ಬಹುತೇಕ ವಿಷಯಗಳಿಗೆ ಜೊತೆಗೆ ಸಂಪರ್ಕವನ್ನು ಹೊಂದಿರುವುದಿದೆ. ಈ ರೀತಿಯಾದ ವ್ಯಕ್ತಿಯು ಮೂಲಾಧಾರ ಚಕ್ರದ ಪ್ರಾಧಾನ್ಯತೆ ಇರುವಂಥಃ ವ್ಯಕ್ತಿಗಿಂತ ಹೆಚ್ಚು ತೀವ್ರವಾಗಿ ಜೀವನವನ್ನು ಜೀವಿಸುವುದಿದೆ.

ವ್ಯಕ್ತಿಯಲ್ಲಿ ಮಣಿಪೂರಕ ಎಂಬ ಚಕ್ರವು ಅವನ ಸ್ವಾಧಿಷ್ಠನ ಎಂಬ ಚಕ್ರಕ್ಕಿಂತ ಕೊಂಚ ಮೇಲ್ಬಾಗದಲ್ಲಿ ನೆಲೆಗೊಂಡಿರುವುದಾಗಿದೆ. ಈ ಒಂದು ಚಕ್ರವು ಯಾವ ವ್ಯಕ್ತಿಗೆ ಪ್ರಧಾನವಾಗಿರುತ್ತದೋ ಅರ್ಥಾತ್, ಪ್ರಾಣ ಶಕ್ತಿ ಎಂತೆಂಬುವದು ಮಣಿಪೂರಕ'ದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿರುತ್ತದೋ ಆ ವ್ಯಕ್ತಿಯು ಪ್ರಯತ್ನದ ಹಾದಿಯನ್ನು ಪ್ರಮುಖವಾಗಿ ತೆಗೆದುಕೊಳ್ಳುವುದಿದೆ. ರಾಜಕೀಯವೋ ಅಥವಾ ವ್ಯಾಪಾರವೋ ಈ ರೀತಿಯಾದಂಥಃ ಬಹು ಚಟುವಟಿಕೆಯನ್ನು ಒಳಗೊಂಡಿರುವಂಥಃ ಸ್ತರದಲ್ಲಿ ಇಂಥಃ ವ್ಯಕ್ತಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳುವುದಿದೆ. ಈ ರೀತಿಯಾದ ವ್ಯಕ್ತಿಯು ಮೂಲಾಧಾರ ಹಾಗು ಸ್ವಾಧಿಷ್ಠಾನ ಚಕ್ರಗಳ ಪ್ರಾಧಾನ್ಯತೆ ಇರುವಂಥಃ ವ್ಯಕ್ತಿಗಳಿಗಿಂತ ಹೆಚ್ಚು ತೀವ್ರವಾಗಿ ಜೀವನವನ್ನು ಅನುಭವಿಸುವುದಿದೆ.

ವ್ಯಕ್ತಿಯಲ್ಲಿ ಅನಾಹತ ಎಂಬ ಚಕ್ರವು ಮಣಿಪೂರಕ ಎಂಬ ಚಕ್ರಕ್ಕಿಂತ ಕೊಂಚ ಮೇಲ್ಬಾಗದಲ್ಲಿ ನೆಲೆಗೊಂಡಿರುವುದಾಗಿದೆ. ಈ ಒಂದು ಚಕ್ರವು ಯಾವ ವ್ಯಕ್ತಿಗೆ ಪ್ರಧಾನವಾಗಿರುತ್ತದೋ ಅರ್ಥಾತ್, ಪ್ರಾಣ ಶಕ್ತಿ ಎಂತೆಂಬುವದು ಅನಾಹತದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿರುತ್ತದೋ ಅಂಥಃ ವ್ಯಕ್ತಿಯು ಸೃಜನಶೀಲತೆ ಎಂಬಡೆಗೆ ತನ್ನ ಗಮನವನ್ನು ಪ್ರಮುಖವಾಗಿ ಹರಿಯಬಿಡುವುದಿದೆ. ಸಾಮಾನ್ಯವಾಗಿ ಸೃಜನಶೀಲತೆಯು ಪ್ರಸ್ತುತದಲ್ಲಿ ಕಲೆಯಾಗಿರಬಹುದಾಗಿದೆ ಅಥವಾ ನಟನೆಯಾಗಿರಬಹುದಾಗಿದೆ ಅಥವಾ ಜಾಹಿರಾತು ಕ್ಷೇತ್ರವೇ ಆಗಿರಬಹುದಾಗಿದೆ. ಇಂಥಃ ವ್ಯಕ್ತಿಗಳು ಸಾಮಾನ್ಯವಾಗಿ ಒಂದೇ ರೀತಿಯಾದ ಏಕತಾನತೆಯಿಂದ ಕೂಡಿದಂಥಃ ಕೆಲಸಕಾರ್ಯಗಳನ್ನು ಮಾಡದೆ, ಸದಾ ಕಾಲವೂ ಹೊಸತನದ ಹುಡುಕಾಟದಲ್ಲೇ ತಮ್ಮನ್ನು ತಾವು ತೊಡಗಿಸಿಕೊಳ್ಳುವುದಾಗಿದೆ. ಈ ರೀತಿಯಾದ ವ್ಯಕ್ತಿಯು ಮೂಲಾಧಾರ, ಸ್ವಾಧಿಷ್ಠಾನ ಹಾಗು ಮಣಿಪೂರಕ ಚಕ್ರಗಳ ಪ್ರಾಧಾನ್ಯತೆ ಇರುವಂಥಃ ವ್ಯಕ್ತಿಗಳಿಗಿಂತ ಹೆಚ್ಚು ತೀವ್ರವಾಗಿ ಜೀವನವನ್ನು ಅನುಭವಿಸುವುದಿದೆ.

ಪ್ರಸಕ್ತದಲ್ಲಿ ಗಮನಿಸಬೇಕಾದಂಥಃ ಮೊದಲ ಅಂಶ ಎಂತೆಂದರೆ, ಶಕ್ತಿಯ ವಿವಿಧ ರೀತಿಯ ಕೇಂದ್ರಿಕರಣ ಎಂತೆನ್ನುವುದು ವಿವಿಧ ರೀತಿಯ ಜೀವನದ ತೀವ್ರತೆ ಎಂತೆಂಬುವುದೇ ಆಗಿರುವುದಿದೆ. ವಿವಿಧ ರೀತಿಯ ತೀವ್ರತೆ ಎಂತೆನ್ನುವುದು ಜೀವನದ ಹಲವಾರು ರೀತಿಯ ಸ್ತರಗಳನ್ನು ಭಿನ್ನ ರೀತಿಯಲ್ಲಿ ಅನುಭವಿಸುವುದೇ ಆಗಿರುವುದಿದೆ.

ಗಮನಿಸಬೇಕಾದಂಥಃ ಎರಡನೆಯ ಅಂಶ ಎಂತೆಂದರೆ, ಅನಾಹತ ಎಂತೆಂಬ ಪದವು ತಡೆರಹಿತವಾದದ್ದು ಎಂತೆಂಬುದಾಗಿ ಅರ್ಥವನ್ನು ಸೂಚಿಸುವುದಿದೆ. ಅಷ್ಟೇ ಅಲ್ಲದೆ ಈ ಜಾಗವು ಜೀವನದ ಕಳ ಸ್ತರ ಹಾಗು ಮೇಲಿನ ಸ್ತರಗಳು ಸಂಧಿಸುವಂಥಃ ಸ್ಥಾನವೇ ಆಗಿರುವುದಿದೆ. ಕೆಳ ಸ್ತರವು 'ವ್ಯಕ್ತಿಯ ಬದುಕುವಿಕೆಗೆ' ಎಂತೆಂಬ ವಿಚಾರಕ್ಕೆ ಪ್ರಧಾನವಾಗಿ ಸಂಬಂಧಿಸಿರುವುದಿದೆ. ಹಾಗಾಗಿ, 'ಸ್ವಯಂ ಸಂರಕ್ಷಣೆ' ಎಂತೆಂಬ ವಿಚಾರವು ಯಾವುದೇ ವ್ಯಕ್ತಿಗೆ ಪ್ರಾಥಮಿಕ ವಿಚಾರವೇ ಆಗಿದ್ದು, ಅದು, ಕೆಳ ಸ್ತರ ಅರ್ಥಾತ್, ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರಕ ಎಂಬಂಥಃ ಮಾನವನ ದೇಹದಲ್ಲಿರುವ ಮೂರು ಚಕ್ರಗಳಿಗೆ ಮಾತ್ರವೇ ಮುಖ್ಯವಾಗಿ ಸಂಬಂಧಿಸಿರುವುದಿದೆ. ಸಾಮಾನ್ಯವಾಗಿ ಈ ರೀತಿಯಲ್ಲಿರುವಂಥಃ ವ್ಯಕ್ತಿಯ ವ್ಯಕ್ತಿತ್ವವು ಉಳದಂಥಃ ವ್ಯಕ್ತಿಗಳಿಗೆ ಬಹಳ ಅಸಹಜವಾಗಿ ಕಾಣುವುದಿದೆ. ಆದರೆ ಇಂಥಃವರುಗಳು ಜೀವನವನ್ನು ಬಹಳ ಉತ್ಸುಕತೆಯಿಂದ ಹಾಗು ಉನ್ನತಮಟ್ಟದ ತೀವ್ರತೆಯಿಂದ ಸೃಜನಶೀಲವಾಗಿ ಬದುಕುವುದಿದೆ.

ಈಗ ಮೇಲಿನ ಸ್ತರದ ಚಕ್ರಗಳ ವಿಚಾರಕ್ಕೆ ಬರೋಣ. ವ್ಯಕ್ತಿಯಲ್ಲಿ ವಿಶುದ್ಧಿ ಎಂಬ ಚಕ್ರವು ಅನಾಹತ ಎಂಬ ಚಕ್ರಕ್ಕಿಂತ ಮೇಲ್ಬಾಗದಲ್ಲಿ ನೆಲೆಗೊಂಡಿರುವುದಾಗಿದೆ. ಈ ಒಂದು ಚಕ್ರವು ಯಾವ ವ್ಯಕ್ತಿಗೆ

ಪ್ರಧಾನವಾಗಿರುತ್ತದೋ ಅರ್ಥಾತ್, ಪ್ರಾಣ ಶಕ್ತಿ ಎಂತೆಂಬುವದು ವಿಶುದ್ಧಿ ಎಂಬಲ್ಲ ಹೆಚ್ಚು ಪ್ರಭಾವಶಾಲಿಯಾಗಿರುತ್ತದೋ ಅಂಥಃ ವ್ಯಕ್ತಿಯಲ್ಲ ಶಕ್ತಿಯು ಆಕರವಾಗಿ ಇರುವುದಾಗಿರುತ್ತದೆ. ಅಧಿಕಾರಯುತವಾದಂಥಃ ಶಕ್ತಿ ಎಂತೆಂಬುವುದು ಕೇವಲ ದೈಹಿಕವಾಗಿ ಮಾತ್ರವೇ ಆಗಿರದೆ ಹಲವಾರು ರೀತಿಯಲ್ಲ ಪ್ರಭಲವೇ ಆಗುವುದಾಗಿದೆ. ಇಂಥಃ ವ್ಯಕ್ತಿಗಳು ಯಾವ ಕ್ಷೇತ್ರದಲ್ಲೇ ಇರಲಿ ಅಥವಾ ಯಾವ ಪರಿಸ್ಥಿತಿಯಲ್ಲಿಯೇ ಇರಲಿ ಅವರ ಇರುವಿಕೆಯು ಬಹಳ ಪ್ರಭಾವಶಾಲಿಯಾಗಿರುವುದಿದೆ. ಇವರುಗಳ ಇದ್ದ ಕಡೆ ಶಕ್ತಿಯು ಪ್ರವಾಹ ಉಪಾದಿಯಲ್ಲ ಹರಿಯುವುದೇ ಆಗಿರುವುದಿದೆ. ಕೆಳಸ್ತರದ ಮೂರು ಚಕ್ರಗಳು ಹಾಗು ಅನಾಹತ ಚಕ್ರಗಳ ಪ್ರಾಧಾನ್ಯತೆ ಇರುವ ವ್ಯಕ್ತಿಗಳಿಗಿಂತಾ ವಿಶುದ್ಧಿ ಚಕ್ರದ ಪ್ರಾಧಾನ್ಯತೆ ಇರುವಂಥಃವರು ಜೀವನವನ್ನು ಹೆಚ್ಚು ತೀವ್ರವಾಗಿ ಅನುಭವಿಸುವುದಾಗಿದೆ. ಇಂಥಃ ವ್ಯಕ್ತಿಗಳಿಗೆ ಜೀವನದಲ್ಲ ಕಷ್ಟ, ನಷ್ಟ ಹಾಗು ಸುಃಖ ಸಂತೋಷಗಳು ಯಾವುದೇ ಹೆಚ್ಚಿನ ರೀತಿಯ ಹಾನಿಯನ್ನು ಉಂಟುಮಾಡದಿರುವುದಿದೆ.

ನಂತರದ ಚಕ್ರವೇ ಆಜ್ಞಾ ಎಂಬುದಾಗಿದರುವುದಿದೆ. ಈ ಚಕ್ರವು ಸಾಮಾನ್ಯವಾಗಿ ಎರಡು ಹುಬ್ಬುಗಳು ಕೂಡುವ ಸ್ಥಳಕ್ಕಿಂತಾ ಕೊಂಚ ಮೇಲೆ ನೆಲೆಗೊಂಡಿರುವುದಿದೆ. ಈ ಒಂದು ಚಕ್ರವು ಯಾವ ವ್ಯಕ್ತಿಗೆ ಪ್ರಧಾನವಾಗಿರುತ್ತದೋ ಅರ್ಥಾತ್, ಪ್ರಾಣ ಶಕ್ತಿ ಎಂತೆಂಬುವದು ಆಜ್ಞಾ ಎಂಬಲ್ಲ ಹೆಚ್ಚು ಪ್ರಭಾವಶಾಲಿಯಾಗಿರುತ್ತದೋ ಅಂಥಃ ವ್ಯಕ್ತಿಗೆ ನೋಟದ ಸ್ತರದಲ್ಲ ಅತ್ಯಂತ ಸ್ಪಷ್ಟತೆಯು ಸಿಗುವುದಿದೆ. ಅಂಥಃ ವ್ಯಕ್ತಿಯು ಬೌದ್ಧಿಕ ಸ್ತರದಲ್ಲ ಅರಿವು ಎಂತೆನ್ನುವುದು ಸಿಗುವುದಾಗಿದ್ದರೂ ಅನುಭವ ಸ್ತರದಲ್ಲಿನ ಅರಿವು ಎಂತೆನ್ನುವುದು ಇನ್ನೂ ಸಿಕ್ಕಿರುವುದಿಲ್ಲವಾಗಿದೆ. ಈ ಒಂದು ಸ್ಥಿತಿಯನ್ನು ತಲುಪಿದಂಥಃ ವ್ಯಕ್ತಿಯ ಜೀವನವನ್ನು ಮತ್ಯಾರೂ ಅಥವಾ ಮತ್ಯಾವ್ದೂ ಕೂಡ ಮುಟ್ಟುವದಿಲ್ಲವಾಗಿದ್ದು, ಯಾವುದೇ ರೀತಿಯಾದ ಅಡಚಣೆ ಎಂತೆನ್ನುವುದು ಇಂಥಃವರ ಜೀವನದಲ್ಲ ಮುಂದೆಂದೂ ಕಾಣಿಸಿಕೊಳ್ಳದಿರುವುದಿದೆ. ಇವರುಗಳು ಬೌದ್ಧಿಕವಾಗಿ ಅರಿವು ಎಂತೆಂಬುವುದನ್ನು ಪಡೆದಿದ್ದರೂ ಸಹ ಬದುಕಿನ ಸೌಂದರ್ಯ ಎಂಬುದನ್ನು ಅನುಭವಿಸುವುದಿಲ್ಲದಿದೆ. ಜೀವನದ ಸೌಂದರ್ಯ ಎಂತೆಂಬುವುದು ಗೊತ್ತಿಲ್ಲದಿದ್ದರೂ, ಜೀವನದಲ್ಲ ಸ್ಥಿರತೆ ಎಂತೆನ್ನುವುದರ ಸಾಧನೆ ಮಾತ್ರ ಖಂಡಿತವಾಗಿಯೂ ಆಗುವುದಿದೆ.

ಪ್ರಸಕ್ತದಲ್ಲ ಗಮನಿಸಬೇಕಾದಂಥಃ ಪ್ರಮುಖ ಅಂಶ ಅಂದರೆ, ಮೂಲಭೂತವಾದಂಥಃ 'ಸ್ವಯಂ ಸಂರಕ್ಷಣೆ' ಎಂಬುವುದರ ಬಂಧನವನ್ನು ಅತಿಕ್ರಮಿಸಿ ಮುಂದುವರೆಯುವಂಥಃ ಸನ್ನಿವೇಶವು ವಿಶುದ್ಧಿ, ಆಜ್ಞಾ ಹಾಗು ಸಹಸ್ರಾರ ಎಂಬ ಚಕ್ರಗಳನ್ನು ಸಾಧಿಸುವುದರಿಂದಾಗಿ ವ್ಯಕ್ತಿಗೆ ಲಭಿಸುವುದೇ ಆಗಿರುವುದಿದೆ.

ಅನಾಹತ ಎಂಬ ಚಕ್ರವು ಎರಡು ತ್ರಿಭುಜಗಳಿಂದ ಸಾಂಕೇತಿಕವಾಗಿ ರಚಿತಗೊಂಡಿರುವುದಿದೆ. ಒಂದು ತ್ರಿಭುಜವು ಮೇಲ್ಮುಖವಾಗಿದ್ದು, ಮತ್ತೊಂದು ಕೆಳಮುಖವಾಗಿರುವುದಿದೆ. ಈ ರೀತಿಯಾದಂಥಃ ಎರಡು ತ್ರಿಭುಜಗಳು ಯಾವುದೇ ಒಂದು ವ್ಯಕ್ತಿಯ ಜೀವನದ ಎರಡು ಮುಖಗಳ ಚಿತ್ರಣವೇ ಆಗಿರುವುದಿದೆ. ಒಂದು ತ್ರಿಭುಜವು 'ಸ್ವಯಂ ಸಂರಕ್ಷಣೆ' ಎಂತೆಂಬುವುದನ್ನು ಸೂಚಿಸಿದರೆ, ಮತ್ತೊಂದು ತ್ರಿಭುಜವು ಇವೆಲ್ಲವನ್ನೂ ಮೀರಿ ಸಾಧಿಸುವಂಥಃ 'ಅರಿವಂತಿಕೆಯ ಜೀವನ' ಎಂಬುವುದನ್ನು ಸೂಚಿಸುವುದಿದೆ. ಮಾನವನ ದೇಹವು 'ಸ್ವಯಂ ಸಂರಕ್ಷಣೆ' ಎಂತೆಂಬುವುದರ ಕಡೆಗೆ ಪ್ರಧಾನವಾದಂಥಃ ಸಂಪರ್ಕವನ್ನು ಇರಿಸಿಕೊಂಡಿದ್ದರೆ, ಹೃದಯ ಹಾಗು ಶಿರ ಭಾಗವು ಸ್ವಯಂ ಸಂರಕ್ಷಣೆ ಎಂತೆಂಬುವುದರನ್ನು ಮೀರಿ ಬೆಳೆಯುವಂಥಃ ವಿಚಾರಗಳ ಜೊತೆಗೆ ಅರ್ಥಾತ್, ಪ್ರಧಾನವಾಗಿ ಅರಿವು ಎಂಬುವುದರನ ಜೊತೆಗೆ ಸಂಪರ್ಕವನ್ನು ಇರಿಸಿಕೊಂಡಿರುವುದಿದೆ.

ಶಕ್ತಿಯು ಮೇಲ್ಮುಖವಾಗಿ ಕೆಲವು ಚಕ್ರಗಳನ್ನು ಸಾಧಿಸಿದಂತೆಲ್ಲಾ ಆ ವ್ಯಕ್ತಿಯು ನೋಟದ ಸ್ಪಷ್ಟತೆಯು ಹೆಚ್ಚಾಗುತ್ತಾ ಹೋಗಿ, ಜಗತ್ತಿನ ವಿವಿಧ ಸಂಗತಿಗಳನ್ನು ಬೇರೆಯದೇ ರೀತಿಯಾದ ಆಯಾಮದಿಂದ ಗ್ರಹಿಸುವುದು ಸಾಧ್ಯವಿರುವುದಿದೆ. ಈ ಗ್ರಹಿಸುವಿಕೆಯು ಎರಡು ರೀತಿಯಲ್ಲ ಆಗುವುದಿದೆ. ಮೊದಲನೆಯದು ಬಾಹ್ಯವಾಗಿದ್ದರೆ ಎರಡನೆಯದು ಅಂತರ್ಮುಖವಾಗಿರುವುದಿದೆ. ಈ ಗ್ರಹಿಕೆಯು ಸಾಮಾನ್ಯವಾದ ಗ್ರಹಿಕೆಗಿಂತ ವಿಭಿನ್ನವಾಗಿರುವುದಿದೆ. ಒಟ್ಟಾರೆಯಾಗಿ ಗ್ರಹಿಕೆಯು (ಅಂಗ್ರೇಜಿ ಭಾಷೆಯಲ್ಲ ಪರ್ಸಿಪ್ಷನ್) ಸಾಮಾನ್ಯರ ಭೌತಿಕ ರೀತಿನೀತಿಗಳನ್ನು ಮೀರಿದ್ದೇ ಆಗಿರುವುದಿದೆ. ಈ ರೀತಿಯಾದಂಥಃ ಗ್ರಹಿಕೆಯನ್ನೇ ಭಾರತೀಯ ತಾತ್ತ್ವಿಕ ಸ್ತರಗಳು 'ಮೂರನೆ ಕಣ್ಣು' ಎಂದು ಕರೆಯುವುದಿದೆ.

ಈ ರೀತಿಯಾದಂಥಃ 'ಮೂರನೇ ಕಣ್ಣು' ಮಾನವನ ಲಲಾಟದಿಂದ ಕಾರ್ಯಗತಗೊಳ್ಳುವುದಾಗಿದೆ. ಆರನೆಯ ಚಕ್ರವಾದಂಥಃ ಆಜ್ಞಾಚಕ್ರ ಎಂತೆಂಬುವುದು ಸರಿಯಾಗಿ ಎರಡು ಹುಬ್ಬುಗಳ ನಡುವೆ ಕೊಂಚ ಮೇಲೆ ಇರುವುದಾಗಿದ್ದು, ಅದು ತನ್ನನ್ನು ತಾನು ಮೂರು ಆಯಾಮಗಳೊಡನೆ ಸಂಬಂಧಿಸಿಕೊಂಡಿರುವುದಿದೆ. ಈ ಮೂರು ಆಯಾಮಾಗಳು ಆದಿ ದೈವಿಕ (ಶಕ್ತಿ ಸ್ತರ) ಪ್ರಕಾರವಾಗಿ ಶಿವನಿಗೆ ಸಂಬಂಧಿಸಿದ್ದೇ ಆಗಿರುವುದಿದೆ. ಆದರೆ ಆದಿ ಭೌತಿಕದ ಸ್ತರದಲ್ಲ ಇವು ಮೂರು ಆಯಾಮಗಳು ಯಾವುದೇ ಸಾಧಕನಿಗೆ ವಿವಿಧ ರೀತಿಯ ಅನುಭವಗಳನ್ನು ಕೊಡಮಾಡುವಂಥಃದ್ದೇ ಆಗಿರುವುದಿದೆ. ಪ್ರಾಜ್ಞಿಕವಾಗಿಯೇ ಆಗಲಿ ಅಥವಾ ಅಪ್ರಾಜ್ಞಿಕತೆಯಿಂದಾಗಲೀ ಮಾಡುವಂಥಃ ಸಕಲ ಭೌತಿಕ ಕಾರ್ಯಗಳು ಹಾಗು ಆಧ್ಯಾತ್ಮಿಕ ಕಾರ್ಯಗಳು ಮೂಲಭೂತವಾಗಿ ಗ್ರಹಿಸುವಿಕೆಯನ್ನು ಅರಿವು ಎಂಬಂಥಃ ಉನ್ನತ ಆಯಾಮದ ಕಡೆಗೆ ಚಲಿಸುವಂಥಃದ್ದೇ ಆಗಿರುವುದಿದೆ. ಅರ್ಥಾತ್, ಸಮಾನ್ಯ ಭೌತಿಕ ಸ್ತರದಿಂದ ಉನ್ನತವಾದ ಅರಿವಿನ ಸ್ತರಕ್ಕೆ ವ್ಯಕ್ತಿಯ ಗ್ರಹಿಕೆಯನ್ನು ಕೊಂಡೊಯ್ಯುವುದೇ ಆಧ್ಯಾತ್ಮಿಕ ಸಾಧನೆಯ ಅತ್ಯುನ್ನತ ಗುರಿಯಾಗಿರುವುದಿದೆ.

ಮೂರನೆ ಕಣ್ಣು ಎಂತೆನ್ನುವುದು ಭೌತಿಕವಾಗಿ ಚಿತ್ರಗೊಂಡಿರುವುದು ಸಾಂಕೇತಿಕವೇ ವಿನಃ, ವಾಸ್ತವಿಕತೆಯಲ್ಲ ಅದು ಅಂತಃಚಕ್ಷುವೇ ಆಗಿರುವುದಿದೆ. ಕುಂಡಿಲಿನಿ ಹಾಗು ಯೋಗ ಶಾಸ್ತ್ರದ ಪ್ರಕಾರದಲ್ಲ ಅದರ ಸ್ಥಾನವು ಲಲಾಟ ಪ್ರದೇಶವೇ ಆಗಿರುವುದಿದ್ದು, ಅದು ಸಾಧಕನು ಇಚ್ಛಿಸಿದಲ್ಲ ಅಂತರ್ಮುಖಿಯಾಗಿಯೂ ಹಾಗು ಬಹಿರ್ಮುಖಿಯಾಗಿಯೂ ಎರಡೂ ರೀತಿಯಲ್ಲ ಕಾರ್ಯವನ್ನು

ಕೈಗೊಳ್ಳುವುದಿದೆ. ಇದರ ಕಾರ್ಯ ವೈಖರಿಯು ಭೌತಿಕ ಕಣ್ಣುಗಳಿಗಿಂತ ಭಿನ್ನವೇ ಆಗಿರುವುದಿದೆ.

ಐಚ್ಛಿಕ ವಿಕಾಸದ ಹಾದಿಯಲ್ಲಿ ಮೂರನೆಯ ಕಣ್ಣು ಎಂತೆಂಬುವುದನ್ನು ಸಾಧಿಸಿಕೊಳ್ಳುವುದು ಬಹಳ ಪ್ರಮುಖವಾದಂಥಃ ಹೆಜ್ಜೆಯೇ ಆಗಿರುವುದಿದೆ. ಹಿಂದಿನ ಹಲವು ವ್ಯಕ್ತಿಗಳ ಸಾಧನೆಯ ಇತಿಹಾಸವನ್ನು ಅವಲೋಕಿಸಿದಾಗ, ಮೂರನೆ ಕಣ್ಣು ಎಂತೆಂಬುವುದನ್ನು ಕೇವಲ ಗ್ರಹಿಕೆ ಮಾತ್ರಕ್ಕೇ ಉಪಯೋಗಿಸದೆ, ಇನ್ನೂ ಹಲವಾರು ತಾಂತ್ರಿಕ ಉದ್ದೇಶಗಳಿಗೆ ಸಾಧಕನು ಉಪಯೋಗಿಸಿರುವುದನ್ನು ಅಧ್ಯಯಿಯು ಕಾಣಬಹುದಾಗಿದೆ. ಒಂದರ್ಥದಲ್ಲಿ ಮೂರನೆ ಕಣ್ಣು ಎಂತೆಂಬುದು ಆದಿ ಭೌತಿಕ ಸ್ತರದಿಂದ ಆಧ್ಯಾತ್ಮಿಕ ಸ್ತರಕ್ಕೆ ಹೋಗುವಂಥಃ ಒಂದು ಮಹಾದ್ವಾರವೇ ಆಗಿರುವುದಿದೆ.

ಮೂಲಾಧಾರದಿಂದ ಹಿಡಿದು ಆಜ್ಞಾ ಚಕ್ರದ ವರೆಗೂ ತಲುಪುವಂಥಃ ರೀತಿನೀತಿಗಳು ಹಲವಾರು ರೀತಿಯಲ್ಲಿ ಹಾಗು ಕ್ರಮಗಳಲ್ಲಿ ಮತ್ತು ಸಂಪ್ರದಾಯಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ದಾಖಲಿಸಿರುವುದನ್ನು ಇಂದೂ ಕೂಡ ಯಾವುದೇ ವ್ಯಕ್ತಿಯು ಕಾಣಬಹುದಾಗಿದೆ. ಹಾಗೆಯೇ, 'ಅಜ್ಞಾ ಚಕ್ರದಿಂದ ಸಹಸ್ರಾರ ಚಕ್ರವನ್ನು ತಲುಪಲಿಕ್ಕೆ ಯಾವುದೇ ರೀತಿಯಾದಂಥಃ ಕ್ರಮವಾಗಲೀ, ದಾರಿಯಾಗಲೀ ಅಥವಾ ಸಂಪ್ರದಾಯವಾಗಲೀ ಇರುವುದಿಲ್ಲವಾಗಿದೆ' ಎಂತೆಂಬುದು ತಂತ್ರಜ್ಞರ ಅನುಭವ ಆಧಾರವಾದಿಂದ ಜನಿತವಾದಂಥಃ ಖಚಿತವಾದ ನಿರ್ಧಾರವೂ ಕೂಡ ದಾಖಲೆಗಳಲ್ಲಿ ಇರುವುದಾಗಿದೆ. ವಾಸ್ತವದಲ್ಲಿಯೂ ಕೂಡ ಯಾವುದೆ ರೀತಿಯಾದ ಮಾರ್ಗವು ಇರುವುದಿಲ್ಲವಾಗಿದೆ, ಏಕೆಂದರೆ, ಸಹಸ್ರಾರ ಎಂತೆಂಬುದು ವ್ಯಕ್ತಿಯ ಶಿರದ ನೆತ್ತಿಯ ಭಾಗದಿಂದ ಸ್ವಲ್ಪ ಮೇಲೆ ಅರ್ಥಾತ್, ಭೌತಿಕ ದೇಹದ ಹೊರ ಭಾಗದಲ್ಲಿ ಇರುವುದೇ ಬಹುಶಃ ಕಾರಣವಾಗಿರಬಹುದಾಗಿದೆ.

ಮೊದಲಿಂದಲೂ ಸಾಧಕನ ಅನುಭವದ ಗ್ರಹಿಕೆ ಹಾಗು ಅದರ ದಾಖಲಾತಿಯು ಆಜ್ಞಾ ಚಕ್ರದವರೆಗೆ ಮಾತ್ರವೇ ಇರುವುದಾಗಿದೆ. ಈ ಹಂತದವರೆಗೆ ತಲುಪಿಕೊಂಡಂಥಃ ವ್ಯಕ್ತಿಗಳು ಶಾಂತಿ, ಸಮಾಧಾನ, ಸ್ಥಿರ ಚಿತ್ತ ಹೀಗೆ ಹತ್ತು ಹಲವಾರು ಮಾನವನ ಸ್ಥಿತಿಗತಿಗಳ ಬಗೆಗೆ ಮಾತನಾಡುವುದಿದೆ. ಆದರೆ, ಸಹಸ್ರಾರವನ್ನು ತಲುಪಿದ ವ್ಯಕ್ತಿಯು ಯಾವುದರ ಬಗ್ಗೆಯೂ ಮಾತನಾಡದಿರುವುದಿದೆ. ಏಕೆಂದರೆ, ಅಜ್ಞಾ ಚಕ್ರದಿಂದ ಮುಂದಕ್ಕೆ ಸಕಲ ರೀತಿಯ ಮಾರ್ಗಗಳನ್ನೂ, ಸಕಲ ಸಂಪ್ರದಾಯಗಳನ್ನೂ ಹಾಗು ಮಾರ್ಗದರ್ಶನಗಳನ್ನೂ, ಒಟ್ಟಾರೆಯಾಗಿ ಸಕಲ ರೀತಿಯ ಜ್ಞಾನವನ್ನು ಅವನು ಸಂಪೂರ್ಣವಾಗಿ ತ್ಯಜಿಸಿದ ನಂತರವೇ ಮುಂದಕ್ಕೆ ಚಲಿಸಬೇಕಾಗಿರುವುದು ಬಹುಶಃ ಕಾರಣವಾಗಿರಬಹುದಾಗಿದೆ. ವಾಸ್ತವದಲ್ಲಿ, ಸಹಸ್ರಾರ ಎಂತೆನ್ನುವುದು ಒಂದು ವಿಚಾರವಾಗಲೀ ಅಥವಾ ವಸ್ತುವಾಗಲೀ ಆಗಿಲ್ಲದಿರುವುದಿದೆ, ಇದು ಕೇವಲ 'ಶೂನ್ಯ' ಮಾತ್ರವೇ ಆಗಿರುವುದಿದೆ.

ಹೀಗೆ ಮುಂದುವರೆದಂಥಃ ವ್ಯಕ್ತಿಯಲ್ಲಿನ ಶಕ್ತಿಗೆ ಐಚ್ಛಿಕವಾಗಿ ಸಹಸ್ರಾರ ಚಕ್ರದ ಸಂಧಿಯನ್ನು ತಲುಪಿಕೊಳ್ಳಲು ಕೇವಲ ಎರಡು ಸಂಭವನೀಯತೆಗಳು ಮಾತ್ರವೇ ಇರುವುದಾಗಿದೆ. ಒಂದೋ, ಏನಾದರಾಗಲೀ ಎಂತೆಂಬ ಆತ್ಮ ವಿಶ್ವಾಸದಿಂದ ಅದರೊಳಕ್ಕೆ ನೆಗೆದುಬಿಡುವುದು ಅಥವಾ ಅನನ್ಯ ಅನುಭಾವಿಕ ಗುರುವಿನ ಆಜ್ಞಾ ಮಾತ್ರಣದಿಂದಲೇ ಧುಮುಕುವುದು ಮಾತ್ರವೇ ಇರುವುದಾಗಿದೆ. ಮೂರನೆಯ ಕಣ್ಣನ್ನು ಒಳಮುಖವಾಗಿ ತಿರುಗಿಸಿಕೊಂಡು ನೋಡಿದಾಗ ವ್ಯಕ್ತಿಗೆ ಅರ್ಥವಾಗುವುದೇನೆಂದರೆ, ಅನ್ಯ ಮಾರ್ಗವಿಲ್ಲದ ಕಾರಣ ಸಹಸ್ರಾರಕ್ಕೆ ನೆಗೆಯುವುದೇ ಒಂದೇ ಒಂದು ವಿಧಾನವಾಗಿ ಉಳದುಕೊಂಡಿರುವುದಿದೆ ಎಂತೆಂಬುದಾಗಿದೆ. ಪ್ರಸಕ್ತದಲ್ಲಿ 'ನೆಗೆಯುವುದು' ಅಥವಾ 'ಧುಮುಕುವುದು' ಎಂಬ ಪದದ ಪ್ರಯೋಗವು ಏಕೆ ಮಾಡಲಾಗಿದೆ ಎಂತೆಂದರೆ, ಸಹಸ್ರಾರಕ್ಕೆ 'ಪ್ರಯಾಣಿಸುವುದು' ಎಂತೆಂಬ ಸಂಭನೀಯತೆಯೇ ಇಲ್ಲದಿರುವ ಕಾರಣದಿಂದಾಗಿಯೆ. ಈ ರೀತಿಯಲ್ಲಿ ಸಹಸ್ರಾರವನ್ನು ದಕ್ಕಿಸಿಕೊಂಡಂಥಃ ವ್ಯಕ್ತಿಯು ಕೇವಲ ಆನಂದ ಮಾತ್ರದಲ್ಲೇ ಇರುವುದಿದೆ. ಈ ರೀತಿಯಾದಂಥಃ ಆನಂದಕ್ಕೆ ಯಾವುದೇ ರೀತಿಯ ಕಾರಣಗಳು ಅಥವಾ ಕಾರ್ಯಗಳ ಅವಶ್ಯಕತೆಯು ಇರುವುದಿಲ್ಲದಿದೆ. ಜೊತೆಗೆ, ಹೊರ ಅಥವಾ ಒಳ ಜಗತ್ತಿನ ಯಾವುದೇ ರೀತಿಯ ಉದ್ದೀಪನಗಳ ಅವಶ್ಯಕತೆಯು ಅಂಥಃ ವ್ಯಕ್ತಿಗೆ ಇರುವುದಿಲ್ಲದಿದೆ.

ಜೀವ ಎಂತೆನ್ನುವುದು ಅಸ್ತಿತ್ವ ಎಂತೆಂಬುವುದಕ್ಕೆ ಮೂಲಭೂತ ಪದಾರ್ಥವೇ ಆಗಿರುವುದಿದೆ. ಮೂರನೆಯ ಕಣ್ಣು ಎಂತೆನ್ನುವುದು ಯಾವುದೇ ಜೀವಕ್ಕೆ ಅದರ ಜೀವನದ ಬಗೆಗೆ ಸ್ಪಷ್ಟವಾದಂಥಃ ದೃಷ್ಟಿಯನ್ನು ಕೊಡಮಾಡುವುದಿದೆ. ಹಾಗೆಯೇ, ಜೀವದ ಪ್ರಕ್ರಿಯೆಗಳ ಬಗೆಗೂ ಕೂಡ ಅಂತಃಚಕ್ಷಸ್ಸು ಸುಸ್ಪಷ್ಟವಾದಂಥಃ ಚಿತ್ರಣವನ್ನು ಸಾಧಕನಿಗೆ ಕೊಡಮಾಡುವುದಿದೆ. ಜೀವನ ಎಂತೆಂದರೆ, ಕೇವಲ ಭೌತಿಕ ಸ್ತರವಷ್ಟೇ ಆಗಿರದೆ, ಅದರ ಉಳದಂಥಃ ಹಲವಾರು ಮಜಲುಗಳ ಬಗೆಗೂ ಆಗಿರುವುದಿದೆ. ಐಚ್ಛಿಕ ವಿಕಾಸದ ಹಾದಿಯಲ್ಲಿ ಅಂತಃಚಕ್ಷಸ್ಸು ಎಂತೆಂಬುವುದನ್ನು ಪಡೆದರೆ ಮಾತ್ರವಷ್ಟೇ ಸಾಧಕನಿಗೆ ಮುಂದಿನ ಹಾದಿಯು ಸ್ಪಷ್ಟವಾಗಿ ಗೋಚರವಾಗುದಿದೆಯೇ ವಿನಃ, ಇಲ್ಲದಿದ್ದಲ್ಲಿ, ವಿಕಾಸವು ಕೇವಲ ಬೌದ್ಧಿಯ ಆಯಾಮದ ತಾರ್ಕಿಕ ಸ್ತರದಲ್ಲಷ್ಟೇ ಉಪಯೋಗಕರವಾಗುವುದಿದೆ.

ಪಟ್ಟಿ :

ಸಂಧಿಸ್ಥಾನ	ಸ್ತರ	ವ್ಯಕ್ತಿಯ ಪ್ರಧಾನ ನಡತೆ	ತೀವ್ರತೆ
ಮೂಲಾಧಾರ	ಸ್ವಯಂ ಸಂರಕ್ಷಣೆ	ಆಹಾರ ಹಾಗು ನಿದ್ರೆ	ಸಂಪಾದನೆ
ಸ್ವಾಧಿಷ್ಠಾನ	ಸ್ವಯಂ ಸಂರಕ್ಷಣೆ	ಸಂತೋಷ ಅರಸುವಿಕೆ	ಉನ್ಮಾದ
ಮಣಿಪುರಕ	ಸ್ವಯಂ ಸಂರಕ್ಷಣೆ	ಅತಿಯಾದ ಚಟುವಟಿಕೆ	ತೃಪ್ತಿ
ಅನಾಹತ	ಸ್ವಯಂ ಸಂರಕ್ಷಣೆ+ಅರಿವು	ಸೃಜನಶೀಲತೆ	ಶಾಂತಿ
ವಿಶುದ್ಧಿ	ಅರಿವಿನೆಡೆಗೆ	ಶಕ್ತಿಯುತ, ಪ್ರಭಲ	ನೆಮ್ಮದಿ

ಆಜ್ಞಾ	ಅರಿವಿನೆಡೆಗೆ	ಬಲಯುತ, ಸ್ಪಷ್ಟ ನೋಟ	ಜ್ಞಾನ
ಸಹಸ್ರಾರ	ಅರಿವಿನೆಡೆಗೆ	ಸಾಮಾನ್ಯ	ಆನಂದ

ಆಧಾರ: ಕುಂಡಲಿನಿ ಶಾಸ್ತ್ರ ; ನಾಡಿ ಶಾಸ್ತ್ರ ; ಮನಃಶಾಸ್ತ್ರ

ಸರ್ವಮೌಲ್ಯಗಳ ಸಾರ್ವಕಾಲಿಕ ಭಂಡಾರ ವಚನ ಸಾಹಿತ್ಯ

ಅನೀಲ್ ಅಪ್ರಾಳ್
ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ, ಎಲ್.ವಿ.ಡಿ ಪದವಿ ಮಹಾವಿದ್ಯಾಲಯ, ರಾಯಚೂರು.

ಮಾನವ ಜನ್ಮ ಭಗವಂತನ ಅತ್ಯುತ್ತಮವಾದ ಸೃಷ್ಟಿ. ಈ ಮಾನವ ಮಾನವನಾಗಿಯೇ ಇಡೀ ತನ್ನ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಅದೇ ಅವನ ಬದುಕಿನ ಗುರಿಯಾಗಬೇಕು. ಆದರೆ ಇಂದು ವಿಜ್ಞಾನದ ಸಹಾಯದಿಂದ ಚಂದ್ರಲೋಕಕ್ಕೆ ಏರಿರುವ ಮನುಷ್ಯ ಮಾನವತೆಯ ಶಿಖರ ಏರುವತ್ತ ಗಮನ ಹರಿಸದೇ ಜೀವನದ ಸುಖ-ಶಾಂತಿಗಳನ್ನು ಕಳೆದುಕೊಂಡು ಹೆಚ್ಚೆ ಹೆಚ್ಚೆಗೂ ಬಿಡ್ಡಿಗ್ನತೆಗೆ ಬಲಿಯಾಗುತ್ತಿದ್ದಾನೆ. ಇದಕ್ಕೆ ಕಾರಣ ನಾವು ಭಾರತೀಯರು, ನಮ್ಮ ಶ್ರೇಷ್ಠ ಪರಂಪರೆಯ ಬಗ್ಗೆ ಅವಜ್ಞಾರಾಗಿರುವುದು. ಇಂದೀ ವಿಶ್ವವೇ ಬೆರಗಿನಿಂದ ಮೆಚ್ಚುವಂತಹ ಉನ್ನತ ಸಂಸ್ಕೃತಿ, ಪರಂಪರೆಗಳು ನಮ್ಮವಾಗಿವೆ ! ವಿಜ್ಞಾನದಿಂದ ಹಿಡಿದು, ಸಂಗೀತ-ಸಾಹಿತ್ಯ ವೊದಲಾಗಿ ಲಲಿತ ಕಲೆಗಳವರೆಗೆ ನಮ್ಮ ಭಾರತದ ಸಂಪತ್ತು ಅಮೂಲ್ಯ, ಅನರ್ಘವಾಗಿವೆ. ಅವುಗಳ ಅಧ್ಯಯನ, ಮನನ ಮಾಡಿದಲ್ಲಿ ಮನುಷ್ಯ ಸರ್ವೋನ್ನತ ಮಟ್ಟವನ್ನು ತಲುಪುವುದರಲ್ಲಿ ಲಿಯಾವ ಸಂಶಯವೂ ಇಲ್ಲ. ಸುಮಾರು 8ನೇ ಶತಮಾನದಿಂದ ಪ್ರಾರಂಭಗೊಂಡು 12ನೇ ಶತಮಾನದಲ್ಲಿ ಅತ್ಯುನ್ನತ ಮಟ್ಟಕ್ಕೆ ತಲುಪಿ ಇಂದಿಗೂ ತನ್ನ ಕಂಪು-ಸೊಂಪನ್ನು ಬೀರುತ್ತಿರುವ "ವಚನ ಸಾಹಿತ್ಯ" ಇದಕ್ಕೆ ಸಾಕ್ಷಿಯಾಗಿವೆ. ವಚನಗಳು ಅಂದಿಗೂ, ಇಂದಿಗೂ, ಮತ್ತೆಂದೆಂದಿಗೂ ಅನ್ವಯಿಸುವಂತಿದ್ದು ಅನುಕರಣಾ ಲೀಯೋಗ್ಯವಾಗಿವೆ. ಸರ್ವ ಕಾಲಕ್ಕೂ-ಸರ್ವ ದೇಶಕ್ಕೂ-ಸರ್ವ ಜನರಿಗೂ ವಚನಗಳಲ್ಲಿನ ವಿಚಾರಗಳು ಅನುಸರಣೀಯವಾಗಿರುವುದು ವಚನಗಳ ಅತಿ ಮುಖ್ಯ ವಿಶೇಷತೆಯಾಗಿವೆ. ಧಾರ್ಮಿಕವಷ್ಟೇ ಅಲ್ಲದೆ ಸಾಮಾಜಿಕ, ಆರ್ಥಿಕ, ಸಾಹಿತ್ಯಕ-ಹೀಗೆ ವಚನಗಳ ಹರಹು ಬಹು ವಿಶಾಲವಾಗಿದೆ. ಉನ್ನತ ಸಂಸ್ಕೃತಿಗೆ ಹೆಸರಾದ ಭಾರತ ಇಂದು ಧರ್ಮ-ಜಾತಿ-ಮೇಲು-ಕೀಳೆಂಬ ಅನಾಗರಿಕತೆಗೆ ಬಲಿಯಾಗಿ ಒಬ್ಬರು ಇನ್ನೊಬ್ಬರನ್ನು ದ್ವೇಷಿಸುವ, ನಾಶ ಮಾಡುವ ಮಟ್ಟಕ್ಕೆ ಇಳಿದಿದೆ ! ಇಂಥ ಅಜ್ಞಾನಿಗಳಿಗೆ ಜ್ಞಾನದ ಬಲವನ್ನಿತ್ತು "ದೇವನೊಬ್ಬ ನಾಮ ಹಲವು" ಎಂಬ ಸತ್ಯದ ಬೆಳಕನ್ನು ತೋರಿ ಧರ್ಮ ಲಿಯಾವುದೇ ಇರಲಿ. "ದಯೆಯೇ ಅವರ ಮೂಲ" ಎಂಬ ಮೌಲಿಕ ತತ್ವವನ್ನು ಸಾರುತ್ತವೆ ವಚನಗಳು.ಕನ್ನಡ ಸಾರಸ್ವತ ಲೋಕದ ಅಪೂರ್ವ ಪ್ರಕಾರ ಹಾಗೂ ಅಮೂಲ್ಯ ನಿಧಿಯಾದ "ವಚನ ಸಾಹಿತ್ಯ" ಶಿವಶರಣರ ಕೊಡುಗೆ ಎಂದರೆ ಅತಿಶಯೋಕ್ತಿಯಲ್ಲ. ಶರಣರು ಕಂಡುಕೊಂಡ ಅಧ್ಯಾತ್ಮಿಕ ಮಾರ್ಗ, ಅವರ ಜೀವನ ದರ್ಶನ, ಅವರ ಸಾಧನೆ, ಅನುಭಾವ, ಸಿದ್ಧಿಗಳನ್ನೊಳಗೊಂಡ ಉಪದೇಶದ ನುಡಿಮುತ್ತುಗಳೇ ವಚನಗಳು. ತನು, ಮನ, ಆಚಾರ, ವಿಚಾರ, ನುಡಿ ಶುದ್ಧವಾದ ಒಂದು ಹೃದಯದಿಂದ ಹೊರಟ ಮಾತು ನೇರವಾಗಿ ಇನ್ನೊಂದು ಹೃದಯವನ್ನು ಹೊಕ್ಕು ಪ್ರಭಾವ ಬೀರಿದಾಗ ಉಂಟಾಗುವ ಪರಿಣಾಮ ಅದ್ಭುತವಾದುದು. ಇಂತಹ ಅಪೂರ್ವ ಪ್ರಭಾವವನ್ನು ವಚನಗಳು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹೊಂದಿವೆ. ಸರಳವಾದ ಆಡುಭಾಷೆಯಿಲ್ಲಿರುವ ವಚನಗಳ ಸಾಮಾನ್ಯ ಜನಜೀವನಕ್ಕೆ ಬಹು ಹತ್ತಿರವಾಗಿವೆ.

ತಮ್ಮ ತಮ್ಮ ತನು-ಮನಗಳನ್ನು ಶುದ್ಧವಾಗಿ, ಸುಚಿತವಾಗಿ ಇಟ್ಟುಕೊಂಡಾಗ ಇಡೀ ಸಮಾಜವೇ ಸುಂದರವಾಗುತ್ತದೆ. ಇಲ್ಲಿ ಪರೋಪಕಾರ ಮಾಡಬಾರದೆಂಬುದು ಬಸವಣ್ಣನವರ ಅಭಿಪ್ರಾಯವಲ್ಲ. ಪರರಿಗೆ ಉಪಕಾರ ಮಾಡುವ ಭರದಲ್ಲಿ ತನ್ನ ಹಾಗೂ ತನ್ನವರನ್ನು ಕಡೆಗಣಿಸಬಾರದೆಂಬುದು ಅವರ ಹೇಳಿಕೆಯ ಅರ್ಥ.

ನಾವೆಲ್ಲ ಇರುವ ಈ ಪ್ರಪಂಚವೇ ಮನುಷ್ಯ ಲೋಕ. ದೇವಲೋಕವೆಂಬುದು ಆದಾಶದಲ್ಲೆಲ್ಲೋ ಇಲ್ಲ. ಈ ಎರಡೂ ಲೋಕಗಳೂ ಒಂದೇ ಹೇಗೆಂದರೆ ಮನುಷ್ಯರಲ್ಲ ಸತ್ಯವಂತರಾಗಿ, ಮಾನವೀಯತೆಯಿಂದ ಬಾಳಿದರೆ ಸಮಾಜದಲ್ಲಿ ಯಾವ ದುಷ್ಪ್ರವೃತ್ತಿಗಳು ಇಲ್ಲದೆ ಸುಖ-ಶಾಂತಿ ತುಂಬಿರುತ್ತದೆ. ಇಂಥ ಸುಖ-ಶಾಂತಿಗಳಿಂದ ತುಂಬಿದ ತಾಣವೇ ಸ್ವರ್ಗ. ಇದೇ ಮನುಷ್ಯರು ಸುಳ್ಳು, ವಂಚನೆಗಳಿಂದ ದುರ್ಮಾರ್ಗಿಗಳಾದರೆ ಅಸಾಂತಿ ಸಂಕಷ್ಟಗಳಿಂದ ಇದೇ ತಾಣ ನರಕವಾಗುತ್ತದೆ. ಅಂತರಂಗ-ಬಹಿರಂಗ ಶುದ್ಧರಾಗಿ ಸದಾಚಾರಿಗಳಾಗಿ "ಸಕಲ ಜೀವಾತ್ಮರಿಗೂ ಲೇಸನೇ ಬಯಸುವ" ಜನರೆಲ್ಲಿರುತ್ತಾರೋ ಅದೇ ಸ್ವರ್ಗ, ದುರಾಚಾರಿಗಳಾಗಿ ಜನರಿಗೆ ತೊಂದರೆ ಉಂಟು ಮಾಡುವ ಜನರಿರುವ ಜಾಗವೇ ನರಕ. ಇದಕ್ಕೆ ಆ ದೇವರೇ ಸಾಕ್ಷಿ ಎಚಿದ ಬಸವಣ್ಣನವರು ನಮ್ಮ ನಮ್ಮ ಆಚಾರ-ವಿಚಾಗಳಿಂದಾಗಿ ಸ್ವರ್ಗ ನರಕಗಳೆರಡನ್ನೂ ನಾವೇ ಈ ಪ್ರಪಂಚದಲ್ಲೇ ಸೃಷ್ಟಿ ಮಾಡಿಕೊಳ್ಳುತ್ತೇವಲ್ಲದೆ ಅವು ಬೇರಲ್ಲೂ ಇಲ್ಲ. ಪಾಪ-ಪುಣ್ಯಗಳು ನಮ್ಮದೇ ಇಷ್ಟ ಎಂಬುದು ಸುಲಭವಾಗಿ ಮನದಟ್ಟಾಗುವಂತೆ ತಿಳಿಸಿದ್ದಾರೆ.

ಮೇಲು-ಕೀಳು ಭಾವನೆಯನ್ನು ತೊಡೆದು ಹಾಕಲು ಸಮಾಜದಲ್ಲಿ ಕೀಳೆಂದು ಕಾಣಲ್ಪಡುತ್ತಿದ್ದ ಜನರೊಂದಿಗೆ ಬೆರೆತು ಅವರನ್ನೂ ಸಂಸ್ಕಾರವಂತರನ್ನಾಗಿ ಮಾಡಿದರು ಬಸವಣ್ಣನವರು. ವಿದ್ಯೆ-ಸಂಸ್ಕಾರಗಳು ಮೇಲ್ಜಾತಿಯವರ ಸ್ವತ್ತು ಮಾತ್ರವೆಂದು ದಬ್ಬಾಳಿಕೆ ನಡೆಸುತ್ತಿದ್ದ ಕಾಲದಲ್ಲಿ ಅವರು ಮಾಡಿದ ಕಾರ್ಯ ಮಾನವ ಕುಲದ ಏಳಿಗೆಯತ್ತ ಬಸವಣ್ಣನವರಿಟ್ಟ ಒಂದು ದಿಟ್ಟ ಹೆಜ್ಜೆಯೇ ಸರಿ. ಅದಕ್ಕೆ ಅವರು ಕ್ರಾಂತಿ ಪುರುಷರೆನ್ನಿಸಿದ್ದಾರೆ. ಸಮಾಜದಲ್ಲಿ ಅತ್ಯಂತ ಕೀಳಾಗಿ ಕಾಣಲ್ಪಡುತ್ತಿದ್ದ ಸ್ತ್ರೀಯರಿಗೂ ಪುರುಷ ಸಮಾನವಾದ ದೀಕ್ಷೆ-ಸಂಸ್ಕಾರಗಳನ್ನು ನೀಡಿ ಧಾರ್ಮಿಕ-ಸಮಾಜಿಕ ವಿಧಿಗಳಲ್ಲಿ ಅವರೂ ಪಾಲುಗೊಳ್ಳುವ ಸ್ವಾತಂತ್ರ್ಯ ದೊರಕಿಸಿಕೊಟ್ಟ ಹೆಗ್ಗಳಿಕೆ ಬಸವಣ್ಣನವರದಾಗಿದೆ. ಆದರೆ ಅವರು

ಸ್ತ್ರೀಯರಿಗಿತ್ತ ಸಮಾನತೆ–ಗೌರವಗಳನ್ನು ಉಳಿಸಿಕೊಂಡು ಹೋಗದಿರುವುದು ನಮ್ಮ ನಾಗರಿಕತೆಯ ಹಿನ್ನಡೆಯೆನ್ನಬಹುದು. ಅದರ ಫಲವೇ ತಮ್ಮ ಹಕ್ಕು–ಬಾಧ್ಯತೆಗಳಾಗಿ, ಸಮಾನತೆಗಾಗಿ ಇಂದಿಗೂ ಹೋರಾಡುತ್ತಿರುವ ಮಹಿಳೆಯರ ಕೂಗು !

ಕುಳಿತು ತಿನ್ನುವ ಹಕ್ಕು ಯಾರಿಗೂ ಇಲ್ಲವೆಚಿದ ಬಸವಣ್ಣನವರು ಪ್ರತಿಯೋಬ್ಬರು ದುಡಿಯಬೇಕೆನ್ನುವ, ದೇಶವನ್ನೇ ಪ್ರಗತಿಯತ್ತ ಕೊಂಡೊಯ್ಯುವ ದಿವ್ಯ ಮಂತ್ರ – "ಕಾಯಕವೇ ಕೈಲಾಸ"ವನ್ನು ಸಾರಿದ್ದಾರೆ. ಹೀಗೆ ಗೃಹಸ್ಥರಾಗಿದ್ದುಕೊಂಡು ಪರಸತಿ–ಪರಧನಗಳಿಗೆ ಆಸೆ ಪಡದೆ, ಸುಸಂಸ್ಕೃತ ಆಚಾರ–ವಿಚಾರವಚಿತರಾಗಿ ಬದುಕು ಸಾಗಿಸಿದಲ್ಲಿ ಯಾರು ಬೇಕಾದರೂ ದೇವನೊಲುಮೆಗಳಸಬಹುದು, ಮಹಾ ವ್ಯಕ್ತಿಗಳಾಗಬಹುದೆಂದು ಬಸವಣ್ಣನವರು ಹೇಳಿದ್ದಾರೆ. ಅದಕ್ಕೆ ಅವರ ಜೀವನವೇ ಸಾಕ್ಷಿಯಾಗಿದೆ.

ಮಾನವ ಜನ್ಮ ಭಗವಂತನ ಅತ್ಯುತ್ತಮವಾದ ಸೃಷ್ಟಿ. ಈ ಮಾನವ ಮಾನವನಾಗಿಯೇ ಉಳದು ತನ್ನ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಅದೇ ಅವನ ಬದುಕಿನ ಗುರಯಾಗಬೇಕು. ಆದರೆ ಇಂದು ವಿಜ್ಞಾನದ ಸಹಾಯದಿಂದ ಚಂದ್ರಲೋಕಕ್ಕೆ ಏರಿರುವ ಮನುಷ್ಯ ಮಾನವತೆಯ ಶಿಖರ ಏರುವತ್ತ ಗಮನ ಹರಿಸದೇ ಜೀವನದ ಸುಖ–ಶಾಂತಿಗಳನ್ನು ಕಳೆದುಕೊಂಡು ಹೆಜ್ಜೆ ಹೆಜ್ಜೆಗೂ ಉದ್ವಿಗ್ನತೆಗೆ ಬಲಿಯಾಗುತ್ತಿದ್ದಾನೆ. ಇದಕ್ಕೆ ಕಾರಣ ನಾವು ಭಾರತೀಯರು, ನಮ್ಮ ಶ್ರೇಷ್ಠ ಪರಂಪರೆಯ ಬಗ್ಗೆ ಅವಜ್ಞರಾಗಿರುವುದು. ಇಡೀ ವಿಶ್ವವೇ ಬೆರಗಿನಿಂದ ಮೆಚ್ಚುವಂತಹ ಉನ್ನತ ಸಂಸ್ಕೃತಿ, ಸಭ್ಯತೆಗಳು ನಮ್ಮವಾಗಿವೆ ! ವಿಜ್ಞಾನದಿಂದ ಹಿಡಿದು, ಸಂಗೀತ–ಸಾಹಿತ್ಯ ಮೊದಲಾಗಿ ಲಲಿತ ಕಲೆಗಳವರೆಗೆ ನಮ್ಮ ಭಾರತದ ಸಂಪತ್ತು ಅಮೂಲ್ಯ, ಅನಂತವಾಗಿವೆ. ಅವುಗಳ ಅಧ್ಯಯನ, ಮನನ ಮಾಡಿದಲ್ಲಿ ಮನುಷ್ಯ ಸರ್ವೋನ್ನತ ಮಟ್ಟವನ್ನು ತಲುಪುವುದರಲ್ಲಿ ಯಾವ ಸಂಶಯವೂ ಇಲ್ಲ. ಸುಮಾರು 8ನೇ ಶತಮಾನದಿಂದ ಪ್ರಾರಂಭಗೊಂಡು 12ನೇ ಶತಮಾನದಲ್ಲಿ ಅತ್ಯುನ್ನತ ಮಟ್ಟಕ್ಕೆ ತಲುಪಿ ಇಂದಿಗೂ ತನ್ನ ಕಂಪು–ಸೊಂಪನ್ನು ಬೀರುತ್ತಿರುವ "ವಚನ ಸಾಹಿತ್ಯ" ಇದಕ್ಕೆ ಸಾಕ್ಷಿಯಾಗಿದೆ.

ಕನ್ನಡ ಸಾರಸ್ವತ ಲೋಕದ ಅಪೂರ್ವ ಪ್ರಕಾರ ಹಾಗೂ ಅಮೂಲ್ಯ ನಿಧಿಯಾದ "ವಚನ ಸಾಹಿತ್ಯ" ಶಿವಶರಣರ ಕೊಡುಗೆ ಎಂದರೆ ಅತಿಶಯೋಕ್ತಿಯಲ್ಲ. ಶರಣರು ಕಂಡುಕೊಂಡ ಅಧ್ಯಾತ್ಮಿಕ ಮಾರ್ಗ, ಅವರ ಜೀವನ ದರ್ಶನ, ಅವರ ಸಾಧನೆ, ಅನುಭಾವ, ಸಿದ್ಧಿಗಳನ್ನೊಳಗೊಂಡ ಉಪದೇಶದ ನುಡಿಮುತ್ತುಗಳೇ ವಚನಗಳು. ತನು, ಮನ, ಆಚಾರ, ವಿಚಾರ, ನುಡಿ ಶುದ್ಧವಾದ ಒಂದು ಹೃದಯದಿಂದ ಹೊರಟ ಮಾತು ನೇರವಾಗಿ ಇನ್ನೊಂದು ಹೃದಯವನ್ನು ಹೊಕ್ಕು ಪ್ರಭಾವ ಬೀರಿದಾಗ ಉಂಟಾಗುವ ಪರಿಣಾಮ ಅದ್ಭುತವಾದುದು. ಇಂತಹ ಅಪೂರ್ವ ಪ್ರಭಾವವನ್ನು ವಚನಗಳು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹೊಂದಿವೆ. ಸರಳವಾದ ಆಡುಭಾಷೆಯಲ್ಲಿರುವ ವಚನಗಳ ಸಾಮಾನ್ಯ ಜನಜೀವನಕ್ಕೆ ಬಹು ಹತ್ತಿರವಾಗಿವೆ.

ವಚನಗಳು ಅಂದಿಗೂ, ಇಂದಿಗೂ, ಮತ್ತೆಂದೆಂದಿಗೂ ಅನ್ವಯಿಸುವಂತಿದ್ದು ಅನುಕರಣಾ ಯೋಗ್ಯವಾಗಿವೆ. ಸರ್ವ ಕಾಲಕ್ಕೂ–ಸರ್ವ ದೇಶಕ್ಕೂ–ಸರ್ವ ಜನರಿಗೂ ವಚನಗಳಲ್ಲಿನ ವಿಚಾರಗಳು ಅನುಸರಣೀಯವಾಗಿರುವುದು ವಚನಗಳ ಅತಿ ಮುಖ್ಯ ವಿಶೇಷತೆಯಾಗಿದೆ. ಧಾರ್ಮಿಕವಷ್ಟೇ ಅಲ್ಲದೆ ಸಾಮಾಜಿಕ, ಆರ್ಥಿಕ, ಸಾಹಿತ್ಯಕ–ಹೀಗೆ ವಚನಗಳ ಹರಹು ಬಹು ವಿಶಾಲವಾಗಿದೆ. ಉನ್ನತ ಸಂಸ್ಕೃತಿಗೆ ಹೆಸರಾದ ಭಾರತ ಇಂದು ಧರ್ಮ–ಜಾತಿ–ಮೇಲು–ಕೀಳೆಂಬ ಅನಾಗರಿಕತೆಗೆ ಬಲಿಯಾಗಿ ಒಬ್ಬರು ಇನೊಬ್ಬರನ್ನು ದ್ವೇಷಿಸುವ, ನಾಶ ಮಾಡುವ ಮಟ್ಟಕ್ಕೆ ಇಳದಿದೆ ! ಇಂಥ ಅಜ್ಞಾನಿಗಳಿಗೆ ಜ್ಞಾನದ ಬಲವನ್ನಿತ್ತು "ದೇವನೊಬ್ಬ ನಾಮ ಹಲವು" ಎಂಬ ಸತ್ಯದ ಬೆಳಕನ್ನು ತೋರಿ ಧರ್ಮ ಯಾವುದೇ ಇರಲಿ. "ದಯಯೇ ಅದರ ಮೂಲ" ಎಂಬ ಮೌಲಿಕ ತತ್ವವನ್ನು ಸಾರುತ್ತವೆ ವಚನಗಳು.

ದೈವ ಸಾನ್ನಿಧ್ಯ ಪಡೆಯಲು ಯಾವ ಜಪ, ತಪ, ವ್ರತ, ನೇಮಗಳನ್ನೂ ಮಾಡಬೇಕಾಗಿಲ್ಲ. ಸಂಸಾರ ತೊರೆದು ಸನ್ಯಾಸಿಗಳೂ ಆಗಬೇಕಾಗಿಲ್ಲ. ಸತ್ಯ. ಶುದ್ಧ ಕಾಯಕ ಮಾಡಿ. ಸದಾಚಾರವಂತರಾಗಿ ಬಾಳಿದರೆ ಯಾರು ಬೇಕಾದರೂ ದೇವನೊಲುಮೆಯನ್ನು ಗಳಸಬಹುದು ಎಂಬ ಸರಳ ತತ್ವವನ್ನು ವಚನಗಳಲ್ಲಿ ಕಾಣಬಹುದು. ಸ್ವರ್ಗ–ನರಕಗಳೆಂಬ ಕಲ್ಪನೆ ಪ್ರಾಚೀನ ಕಾಲದಿಂದಲೂ ಬಂದಿರುವ ಒಂದು ನಂಬಿಕೆ. ಆದರೆ ಈ ಸ್ವರ್ಗ–ನರಗಳೆಂಬ ಲೋಕಗಳು ದೂರ ಆಕಾಶದಲ್ಲೆಲ್ಲೋ ಇಲ್ಲ. ಅವು ಇಲ್ಲೇ ನಮ್ಮ ನಡುವೆಯೇ ಇವೆ. ನಮ್ಮ ನಮ್ಮ ನಡುವೆ ಸೃಷ್ಟಿಮಾಡಿಕೊಳ್ಳುತ್ತೇವೆ ಎಂಬ ಸಹಜ ಸತ್ಯವನ್ನು ಮನವರಿಕೆ ಮಾಡಿಕೊಡುತ್ತವೆ ವಚನಗಳು. ಅಂತೆಯೇ ಪಾಪ–ಪುಣ್ಯ ನಮ್ಮಿಷ್ಟ ಎಂದಿದ್ದಾರೆ ಬಸವಣ್ಣನವರು. ಜಾತಿ–ಮೇಲು–ಕೀಳುಗಳನ್ನು ನಮ್ಮ ನಮ್ಮ ಸುಸಂಸ್ಕೃತಿ ಅಥವಾ ಕುಸಂಸ್ಕೃತಿಯಿಂದ ಗುರುತಿಸಬೇಕೇ ಹೊರತು ಹುಟ್ಟಿನಿಂದಲ್ಲ ಎಂಬ ಮಾತನ್ನು ಒತ್ತಿ ಹೇಳವೆ ವಚನಗಳು.

ಪ್ರಪಂಚದ ಎಲ್ಲಾ ಆಗುಹೋಗುಗಳಿಗೆ ಹಾಗೂ ಅವ್ಯವಸ್ಥಿತ ಸಮಾಜಕ್ಕೆ ಹೆಣ್ಣು, ಹೊನ್ನು, ಮಣ್ಣುಗಳು ಮೂಲ ಕಾರಣಗಳಾಗಿವೆ. ಇತಿಹಾಸದ ಪುಟ ಪುಟವೂ ಇದಕ್ಕೆ ಸಾಕ್ಷಿಯಾಗಿದೆ. ಹೆಣ್ಣಿಗಾಗಿ ರಾಮಾಯಣ, ಮಣ್ಣಿಗಾಗಿ ಮಹಾಭಾರತ, ಹೊನ್ನಿಗಾಗಿ ಕೊಲೆ, ಸುಲಿಗೆ,ದರೋಡೆಗಳು ನಡೆದಿರುವುದನ್ನೂ ನಡೆಯುತ್ತಿರುವು ದನ್ನೂ ನೋಡುತ್ತಲೇ ಇದ್ದೇವೆ. ಮನುಷ್ಯನನ್ನೂ ಸಮಾಜವನ್ನೂ ಪತನದ, ಅಧರ್ಮದ ಹಾದಿಗೆ ಕೊಂಡೊಯ್ಯಲು ಕಾರಣಗಳಾದ ಪರಸ್ತ್ರೀ, ಪರಧನ, ಪರರದೆಂಬ ಯಾವ ವಸ್ತುವೇ ಆಗಲಿ ಅದರಿಂದ ದೂರವರಬೇಕೆಂದು ಎಚ್ಚರಿಕೆಯನ್ನು ಪದೇ ಪದೇ ನೀಡುತ್ತವೆ ವಚನಗಳು.

ಆರ್ಥಿಕ ಕ್ಷೇತ್ರ ಯಾವುದೇ ರಾಷ್ಟ್ರದ ಪ್ರಗತಿಯ ಮೂಲ ಸ್ರೋತ. ಈ ಕ್ಷೇತ್ರ ಸರಿಯಾದ ನೆಲಗಟ್ಟನ್ನು ಹೊಂದಿದ್ದರೆ ಮಾತ್ರ ದೇಶದ ಏಳಗೆ ಭದ್ರವಾಗಿರುತ್ತದೆ. ಇದಕ್ಕೆ ಮೂಲವಾಗಿ "ಕಾಯಕವೇ ಕೈಲಾಸ"ವೆಂಬ ಮಹಾಮಂತ್ರವನ್ನು ಬೋಧಿಸುವ ವಚನಗಳು ಸಾಹಿತ್ಯದ ದೃಷ್ಟಿಯಿಂದ ನೋಡಿದರೆ ವಚನಗಳಲ್ಲಿ ಬರುವ ಉಪಮಾನಗಳು, ಸಾದೃಶ್ಯಗಳು, ರೂಪಕಗಳು ಅತ್ಯಂತ ಮನೋಹರವಾಗಿವೆ. "ಏನಿ ಬಂದರಿ ಹದುಳದ್ದರೆಂದರೆ ನಿಮ್ಮ

ಮೈಸಿರಿ ಹಾರಿ ಹೋಹುದೇ?" ಎಂಬಂಥ ಕಟು ಟೀಕೆಗಳು, "ನೀರ ಕಂಡಲ್ಲಿ ಮುಳುಗುವರು, ಮರಕಂಡಲ್ಲಿ ಸುತ್ತುವರು," "ಕಲ್ಲನಾಗರ ಕಂಡರೆ ಹಾಲನೆರೆ ಎಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ" ಎಂಬಲ್ಲಿ ವ್ಯಂಗ್ಯ ಇವುಗಳಲ್ಲಿ ಮನುಷ್ಯರ ತಪ್ಪು ಮೂಢನಂಬಿಕೆಗಳ ಬಗ್ಗೆ ಎಚ್ಚರಿಕೆಯ ಮಾತುಗಳವೆ. "ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ," 'ಆರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆಯಿಲ್ಲ" ಎಂಬ ಗಾದೆ ಮಾತುಗಳನ್ನು ಬಳಸಿರುವಲ್ಲಿ ಜನ ಜೀವನ ಹಾಸು ಹೊಕ್ಕಾಗಿ. ಜನರಿಗೆ ಅತ್ಯಂತ ಹತ್ತಿರವಾಗಿರುವುದನ್ನು ಕಾಣುತ್ತೇವೆ. ಚುಟುಕಗಳಲ್ಲಿ ಅಪಾರ ಅರ್ಥವನ್ನು ಅಡಗಿಸಿರುವ ವಚನಗಳು ಅಪೂರ್ವ ಪ್ರಕಾರವಾಗಿದ್ದು ಕನ್ನಡ ಭಾಷೆಯನ್ನು ಶ್ರೀಮಂತ, ಶಕ್ತಿಯುತ ಹಾಗೂ ಆಕರ್ಷಕವನ್ನಾಗಿ ಮಾಡಿವೆ. ಅಲಂಕಾರಗಳನ್ನು ಬಳಸಿರುವ ಸಹಜ ರೀತಿ ಮೆಚ್ಚುವಂಥದ್ದಾಗಿದೆ. ರೂಪಕ ಹಾಗೂ ಉಪಮಾಲಂಕಾರಗಳನ್ನು ಯಥೇಚ್ಚವಾಗಿ ಬಳಸಲಾಗಿದೆ. ದೃಷ್ಟಾಂತ ಅಲಂಕಾರಗಳಂತೂ ವಚನಗಳ ಜೀವನಾಡಿಯಾಗಿವೆಯೆಂದರೆ ತಪ್ಪಾಗಲಾರದು.

"ಧರ್ಮವು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನತೆಯನ್ನುದ್ಧರಿಸುವ ಜೀವಂತ ಶಕ್ತಿಯಾಗಿ ಪರಿಣಮಿಸಿದುದು ಭರತ ಖಂಡದ ಧರ್ಮದ ಇತಿಹಾಸದಲ್ಲಿ ಬಹುಶ: ಇನ್ನೆಲ್ಲಿಯೂ ಸಿಕ್ಕದು" ಎಂಬ ಶರಣ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದಂಥ ಮಾನ್ಯ ಡಾ: ತಿಪ್ಪೇರುದ್ರಸ್ವಾಮಿಯವರ ಮಾತು ಅಕ್ಷರಶ: ಸತ್ಯವಾದುದು. ಈ ದೃಷ್ಟಿಯಿಂದ ವಚನ ಸಾಹಿತ್ಯದ ಅಧ್ಯಯನ ಚಿಂತನ ಹಾಗೂ ಮನನಗಳು ಇಂದು ಹೆಚ್ಚು ಹೆಚ್ಚು ಅವಶ್ಯಕ ಹಾಗೂ ಅನ್ವಯಿಕವಾಗಿದೆ. ಮಾನವರನ್ನು ವಿಗತಿಯಿಂದ ಪ್ರಗತಿಯತ್ತ ಸಾಗಿಸುವಂಥದ್ದಾಗಿವೆ.

"ಆದರ್ಶ ಪುರುಷ ಬಸವಣ್ಣ"

ಇಂದು ಜಗತ್ತಿನ ಎಲ್ಲಾ ಕಡೆಯೂ ಮನುಷ್ಯ ಸಮಷ್ಟಿಯನ್ನು ಮರೆತು ವ್ಯಷ್ಟಿಯಲ್ಲಿ ಸಂಕುಚಿತಗೊಂಡಿದ್ದಾನೆ. ಅದರಲ್ಲೂ ಲೆಕ್ಕವಿಲ್ಲದಷ್ಟು ಜಾತಿ–ಭಾಷೆಗಳ ತವರಾದ ಭಾರತ ದೇಶದಲ್ಲಿ ಈ ಜಾತಿ–ಭಾಷೆಯ ವಿಷಯವಾಗಿ ಕ್ಷುಲ್ಲಕವಾಗಿ ವರ್ತಿಸುತ್ತ ಪರಿಸ್ಪರ ಅಸಹನೆ–ದ್ವೇಷಗಳ ದಳ್ಳುರಿಯಲ್ಲಿ ಜನ ಏಯುತ್ತಿದ್ದಾರೆ. ಆದರೆ ಶ್ರೇಷ್ಠ ಪರಂಪರೆ–ಸಭ್ಯತೆಗಳುಳಳ ನಮ್ಮೀ ಭಾರತದಲ್ಲಿ ಅನೇಕ ಮಹಾ ಪುರುಷರು ನಮಗಷ್ಟೇ ಅಲ್ಲ ಇಡೀ ಜಗತ್ತಿನ ಜನತೆಗೆ ದಿವ್ಯ ಜೀವನ ಹಾಗೂ ಸುಖ–ಶಾಂತಿಯುತ ಸಮಾಜಕ್ಕೆ ಬೇಕಾದ ಮಾರ್ಗದರ್ಶನ ಮಾಡಿದ್ದಾರೆ. ಆ ಬಗ್ಗೆ ಕೇಳಿದರೆ ವಿಶ್ವಮಾನವತೆಯ ಸಂದೇಶ ಸಾರಿದ ನಾಡಿನವರಾದ ನಮ್ಮಲ್ಲಿ ಬಹುಪಾಲು ಜನರಿಗೆ ಏನೂ ಗೊತ್ತಿಲ್ಲ. ಕಾರಣ ನಾವು ಭಾರತೀಯರು ಕುರುಡರಾಗಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅನುಸರಿಸಿ ನಮ್ಮ ಸಭ್ಯತೆಯನ್ನು ಮರೆತಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಆತ್ಮೋದ್ಧಾರದ ಮೂಲಕ ಮಾನವ ಕುಲದ ಉದ್ಧಾರಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟ ಮಹಾತ್ಮರ ಬಗ್ಗೆ ತಿಳಿದು ನಡೆದುಕೊಳ್ಳುವುದು ಅಗತ್ಯವಾಗಿದೆ. ಅಂಥ ಆದರ್ಶ ಪುರುಷರಲ್ಲಿ 12ನೇ ಶತಮಾನದಲ್ಲಿದ್ದ ಬಸವಣ್ಣನವರು ಒಬ್ಬರು.

ತಮ್ಮ ಅಚಾರ–ವಿಚಾರಗಳಿಂದ ಸರ್ವರಿಗೂ, ಸರ್ವಕಾಲಕ್ಕೂ ಆದರ್ಶಪ್ರಾಯರಾಗಿರುವ ಬಸವಣ್ಣನವರು "ಭಕ್ತಿ ಭಂಡಾರ" "ಜಗಜ್ಯೋತಿ" "ಕ್ರಾಂತಿಪುರುಷ" ಎಂದು ಮುಂತಾದ ಕರೆಸಿಕೊಂಡಿದ್ದಾರೆ. ತಮ್ಮ ನಡೆ ನುಡಿ–ಉಪದೇಶಗಳಿಂದ ಜನಮನಗಳನ್ನು ಗೆದ್ದ ಬಸವಣ್ಣನವರು ಈ ಕಾರಣದಿಂದಾಗಿಯೇ ೮೦೦ ವರ್ಷಗಳ ನಂತರವೂ ನಿತ್ಯ ಸ್ಮರಣೀಯರಾಗಿದ್ದಾರೆ. ವಿಶೇಷವಂದರೆ ಬಸವಣ್ಣನವರು ಸಾಧು ಸಂತರಾಗಿಲೀ ಸನ್ಯಾಸಿಗಳಾಗಲೇ ಆಗಿರದೆ ನಮ್ಮ–ನಿಮ್ಮಂತೆ ಸಂಸಾರಿಗಳಾಗಿದ್ದರು. ಅಂತೆಯೇ ಅವರು ಎಲ್ಲರ "ಅಣ್ಣ"ನಾಗಿ ಜನಪ್ರಿಯರಾಗಿದ್ದಾರೆ.

ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಬಸವಣ್ಣನವರು ಆ ಧರ್ಮದ ಆಚರಣೆಗಳನ್ನು ಒಪ್ಪದೆ ವೀರಶೈವ ಧರ್ಮವನ್ನು ಅವಲಂಬಿಸಿ ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಅದರ ಪ್ರಚಾರ ಮಾಡಿದ್ದಾರೆ. ಯಾವ ಸನ್ಯಾಸ ದೀಕ್ಷೆಯನ್ನೂ ತೆಗೆದುಕೊಳ್ಳದ, ಯಾವ ಕಠಿಣ ವ್ರತ ನಿಯಮಗಳನ್ನೂ ಆಚರಿಸದೆ ಹೇಗೆ ಆತ್ಮೋದ್ಧಾರ ಮಾಡಿಕೊಳ್ಳಬಹುದು, ಆ ಮೂಲಕ ಹೇಗೆ ಲೋಕೋದ್ಧಾರ ಸಾಧಿಸಬಹುದು ಎಂಬುದನ್ನು ಅವರ ಜೀವನಾಧರ್ಶಗಳಿಂದ ತಿಳಿದಕೊಳ್ಳಬಹುದು. ಬಸವಣ್ಣನವರ ವಿಚಾರಗಳ ಪ್ರತಿರೂಪಗಳಾದ ವಚನಗಳಿಂದ ಅವರು ನಮ್ಮಲ್ಲೇ ಒಬ್ಬರಾಗಿದ್ದರು. ತಮ್ಮ ಉತ್ತಮಿಕೆಯಿಂದ, ದೈವಾಂಶ ಗುಣಗಳಿಂದ ಅವತಾರ ಪುರುಷರೆನ್ನಿಸಿದೊಂಡಿದ್ದಾರೆ ಎಂಬುದು ತಿಳಿಯುತ್ತದೆ. ಅಲ್ಲದೆ ಆ ಮಟ್ಟಕ್ಕೇರುವ ಪ್ರಯತ್ನವನ್ನು ಯಾರು ಬಕಾದರೂ ಮಾಡಬಹುದು, ಅದಕ್ಕೆ ಜಾತಿ ಭೇದವಿಲ್ಲ, ಮೇಲು–ಕೀಳೆಂಬುದಿಲ್ಲ. ಪಂಡಿತ–ಪಾಮರ ತಾರತಮ್ಯವಿಲ್ಲ ಎಂಬ ಸತ್ಯ ಗೋಚರವಾಗುತ್ತದೆ.

ಮನೆಗೆ ಬಂದವರನ್ನು ದೇವರೆಂದು ತಿಳಿದು ಆದರಿಸುವುದು ನಮ್ಮ ಸಂಸ್ಕೃತಿ. ಅದನ್ನು ಬಿಟ್ಟು ಹಣದ ಮದದಿಂದಲೇ, ಅಧಿಕಾರದ ಗರ್ವದಿಂದಲೋ ಅಥವಾ ಇನ್ನಾವುದೇ ಕಾರಣದಿಂದ ಮನೆಗೆ ಬಂದವರೊಡನೆ ಕೀಳಾಗಿ ನಡೆದುಕೊಳ್ಳುವುದು ಉತ್ತಮರ ಲಕ್ಷಣವಲ್ಲ. ಅಂಥವರ ಕೀಳು ಸಂಸ್ಕೃತಿಯನ್ನು ಬಸವಣ್ಣನವರು ಕಟುವಾಗಿ ಟೀಕಿಸುತ್ತಾರೆ. ಏನಿ ಬಂದಿರಿ? ಹದುಳದ್ದಿರಂದರೆ ನಮ್ಮ ಮೈಸಿರಿ ಹಾರಿ ಹೋಗಿಹುದೇ?

ಕುಳ್ಳಿರೆಂದರೆ ನೆಲ ಕುಳೀ ಹೋಹುದೆ ?
ಒಡನೆ ನುಡಿದರೆ ಶಿರ–ಹೊಟ್ಟೆಯೊಡವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದರೆ ತಲೆಗೆಡಹಿ
ಮೂಗಕೊಯ್ಯದೆ ಮಾಬನೆ, ಕೂಡಲ ಸಂಗಮದೇವ.

ಮನುಷ್ಯರ ದಿನನಿತ್ಯದ ಬದುಕಿನಲ್ಲಿ ಅತ್ಯವಶ್ಯವಾದ ಮುಖ್ಯ ಸಂಪರ್ಕ ಸಾಧನ–ಮಾತು. ಸಮಾಜದಲ್ಲಿ, ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳುವಲ್ಲಿ, ಅರ್ಥಮಾಡಿಕೊಳ್ಳುವಲ್ಲಿ ಮಾತು ಬಹುಮುಖ್ಯ ಪಾತ್ರ ವಹಿಸುತ್ತದೆ. ಆದರೆ "ಮಾತು ಮನೆಕೆಡಿಸಿತು.." ಎನ್ನುವ ಹಾಗೆ ಇದೇ ಮಾತು ಅನೇಕ ತಪ್ಪು ತಿಳುವಳಿಕೆ, ಅನಾಹುತಗಳಿಗೂ ಕಾರಣವಾಗಬಹುದು. ಒಳತು ಕೆಡುಕು ಎರಡನ್ನೂ ಉಂಟುಮಾಡುವ ಶಕ್ತಿಯುಳ್ಳ ಈ ಮಾತು ಹೇಗುರಬೇಕೆಂದು ಬಸವಣ್ಣನವರು ವಿವರಿಸಿದ್ದಾರೆ –

ನುಡಿದರೆ ಮುತ್ತಿನಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು,
ನುಡಿದರೆ ಲಿಂಗವ್ಮೆಚ್ಚಿ ಅಹುದಹುದೆನಬೇಕು,
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಚಿತೊಲಿವನಯ್ಯ ?

ಒಂದರ ಪಕ್ಕ ಒಂದರಂತೆ ಓರಣವಾಗಿ ಪೋಣಿಸಿದ ಮುತ್ತಿನಹಾರ ಹೇಗೆ ನೋಡುವರ ಕಣ್ಣಿಗೆ ಸುಂದರವಾಗಿ ಕಾಣುತ್ತದೆಯೋ ಹಾಗಯೇ ಒಪ್ಪವಾಗಿ, ಸಮಯ-ಸಂದರ್ಭಕ್ಕೆ ತಕ್ಕಂತೆ ನಾವಾಡುವ ಮಾತೂ ಸಹ ಮನಸ್ಸಿಗೆ ಆನಂದ ಉಂಟುಮಾಡುತ್ತದೆ. ಆ ರೀತಿ ನಮ್ಮ ಮಾತಿರಬೆಕು, ಕಿರಿಕಿರಿ ಉಂಟುಮಾಡುವುದಲ್ಲದೆ ಅಪಹಾಸ್ಯಕ್ಕೂ ಗುರಿಮಾಡುತ್ತವೆ.

ಮನುಷ್ಯನೆಂದ ಮೇಲೆ ಯಾರೂ ಸಂಪೂರ್ಣರಲ್ಲ. ಎಲ್ಲರಲ್ಲೂ ಏನಾದರೂ ಲೋಪ-ದೋಷಗಳಿರುವುದು ಸಹಜ. ಆದರೆ ತಮ್ಮ ಎಡೆಯಲ್ಲಿ ಕತ್ತೆ ಸತ್ತು ಬಿದ್ದಿದ್ದರೂ ಇನ್ನೊಬ್ಬರ ಎಡೆಯ ಮೇಲಿನ ನೊಣ ಓಡಿಸಲು ದ್ಯುಕ್ತರಾಗುವುದೂ ಅಷ್ಟೇ ಸಹಜವಾದ ಅನೇಕರ ಸ್ವಭಾವವೂ ಹೌದು.

ಹೀಗೆ ತಮ್ಮಲ್ಲಿನ ತಪ್ಪುಗಳನ್ನು ಒಪ್ಪ ಮಾಡಿಕೊಳ್ಳದೆ ಇನ್ನೊಬ್ಬರ ತಪ್ಪುಗಳನ್ನು ಎತ್ತಿ ಆಡುವವರನ್ನು ಕಂಡು ಬಸವಣ್ಣ ಹೇಳುತ್ತಾರೆ.

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದು:ಖಕ್ಕೆ ಅಳುವವರ ಮೆಚ್ಚ
ನಮ್ಮ ಕೂಡಲಸಂಗಮ ದೇವ.

ವಿಭಾಗ:–3

ಭಾರತೀಯಮ್

ಸಮಾಜಸಾಂಸ್ಕೃತಿಕವನ್ನೊಳಗೊಂಡ ಕಲೆ, ಸಂಗೀತ ಮತ್ತು ನಾಟ್ಯಶಾಸ್ತ್ರ ವಿಜ್ಞಾನಗಳು

BHARATEEYAM

Sociocultural Sciences, Arts, Music & Natyasastra

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಸರ್ವಮೌಲ್ಯಗಳ ಸಾರ್ವಕಾಲಿಕ ಭಂಡಾರ ವಚನ ಸಾಹಿತ್ಯ	ಅನೀಲ್ ಅಪ್ರಾಳ್	66 – 69
2.	ಮಾಂಗ–ಗಾರೂಡಿ ಸಮುದಾಯದ ವಾಗೆ–ಮುರಳಿ ಪದ್ಧತಿಯ ವಿಶ್ಲೇಷಣೆ	ಡಾ.ಭಾಗ್ಯಶ್ರೀ ಹ.ದೊಡಮನಿ ಡಾ. ಲಕ್ಷ್ಮಿದೇವಿ ವಾಯ್ ರಜೀಯಾ ನದಾಫ್ ಗಿರಿಜಾ ಅಕ್ಕಿ	69 – 72
3.	ಜನಪದರಲ್ಲಿ ಮಳೆಯ ಆಚರಣೆಗಳು	ಗೀತಾಬಾಯಿ ಬಡಿಗೇರ	72 – 75
4.	ಕುಮಾರವ್ಯಾಸ ಭಾರತದಲ್ಲಿ ಬಹುಪತಿತ್ವದ ಜಿಜ್ಞಾಸೆ	ಪುಷ್ಪ ಪಿ	75 – 77
5.	ಬುಟ್ಟಿ ಹೆಣೆಯುವಿಕೆ: ಪರಂಪರೆ ಮತ್ತು ಅಧುನಿಕತೆ	ಮುತ್ತುಶೆಟ್ಟಿ	78 – 81
6.	ಬಾಲ ವೈಧವ್ಯ: ಒಂದು ಅವಲೋಕನ	ಡಾ. ಭಾಗ್ಯಶ್ರೀ ಹ. ದೊಡಮನಿ ಶ್ರೀಮತಿ ಶಾಂತಾದೇವಿ ಪಾಟೀಲ	81 – 83
7.	ಬುಡಕಟ್ಟು ಜನರ ಆರ್ಥಿಕ ಪರಿಸ್ಥಿತಿ: ಒಂದು ಸಮಾಜಶಾಸ್ತ್ರೀಯ ಅಧ್ಯಯನ (ಹೆಗ್ಗಡದೇವನಕೋಟೆ ತಾಲೂಕಿಗೆ ಸಂಬಂಧಿಸಿದಂತೆ)	ರವಿಕುಮಾರ.ಎಸ್ ಡಾ. ಎಸ್. ಯಶೋಧ	83 – 88
8.	ಶ್ರೀ ನುಂಕೇಮಲೆ ಸಿದ್ದೇಶ್ವರಸ್ವಾಮಿ ಜಾತ್ರೆ	ಡಾ. ಗೌಡಪ್ಪ. ಜಿ. ಇ	88 – 91
9.	"ಬದುಕು" ಕಾದಂಬರಿಯಲ್ಲಿ ಸ್ತ್ರೀ ಸಂವೇದನೆ	ಡಾ. ಪತ್ರೆಮ್ಮ ಧಾರವಾಡ	91 – 94
10.	ನೋಂಪಿಯ ವಿವೇಚನೆ	ಉಮೇಶ ಕ ಪಾಟೀಲ	95 – 97
11.	ಪ್ರಾಚೀನ ದೃಶ್ಯಮಾಧ್ಯಮ ನಾಟಕ ಹಾಗೂ ಅದರ ಪ್ರಸ್ತುತತ್ತೆ	ಹೆಚ್. ವಿ. ಕಾಶಿನಾಥಶಾಸ್ತ್ರಿ	97 – 99
12.	ವಲಸೆ ಮತ್ತು ಮಹಿಳೆಯರ ಬದಕು	ಭುವನೇಶ್ವರಿ ಕಾಂಬಳೆ	99 – 105

"ಅ ನ ಕೃ ಕಥೆಗಳ ಅವಲೋಕನ"

ಶ್ರೀ ಶಾಂತಪ್ಪ. ಸಂಗಪ್ಪ
ಸಂಶೋಧನ ವಿದ್ಯಾರ್ಥಿ(ಪಿಎಚ್.ಡಿ), ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕ.ವಿ.ವಿ.ಧಾರವಾಡ-೫೮೦೦೦೩,
Email : shantappa22@gmail.com

ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ಅ.ನ.ಕೃ ಎಂಬ ಮೂರು ಅಕ್ಷರಗಳಿಂದ ಕನ್ನಡ ಸಾರಸ್ವತ ಪ್ರಪಂಚಕ್ಕೆ ಪರಿಚಿತರಾದ ಅರಕಲಗೂಡು ನರಸಿಂಗರಾವ್ ಕೃಷ್ಣರಾಯರು, ಬದುಕಿದ ಅರವತ್ಮೂರು (1908-1971) ವರ್ಷಗಳಲ್ಲಿ ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಜೀವನಚರಿತ್ರೆ, ಅನುವಾದ ಸಾಮಾಜಿಕ, ಐತಿಹಾಸಿಕ, ಕೌಟುಂಬಿಕ, ಹೀಗೆ ಹಲವಾರು ಪ್ರಕಾರಗಳಲ್ಲಿ ಕೆಲಸ ಮಾಡಿ, ಕನ್ನಡ ಕಾದಂಬರಿಯ ಸಾರ್ವಭೌಮರೆನಿಸಿಕೊಂಡರು, ಅವರು ಓರ್ವ ಕಾದಂಬರಿಕಾರರಷ್ಟೇ ಅಲ್ಲ, ಉತ್ತಮ ಕಥೆಗಾರರು ಸಹಿತ. 1928 ರಿಂದ 1960ರ ವರೆಗೆ ಎಂಟು ಕಥಾಸಂಕಲನದಲ್ಲಿ ಒಟ್ಟು 69 ಕಥೆಗಳನ್ನು ಪ್ರಕಟಿಸಿರುವರು. ಅವರ ಕಥೆಗಳಲ್ಲಿ ಸ್ವತಃ ಬರೆದದ್ದು, ಅನುವಾದಿಸಿದ್ದು ಹಾಗೂ ಸಂಪಾದಿಸಿದ್ದು ಹೀಗೆ ಮೂರು ಭಾಗೆಯಾಗಿ ಕಂಡುಬರುವುದು.

'ಮಿಂಚು', 'ಕಿಡಿ', 'ಕಾಮನ ಸೋಲು', 'ಶಿಲ್ಪಿ', 'ಪಾಪ-ಪುಣ್ಯ', 'ಕಣ್ಣುಮುಚ್ಚಾಲೆ', 'ಅಗ್ನಿಕನ್ಯೆ', 'ಸಮರಸುಂದರಿ' ಕಥಾ ಸಂಕಲನಗಳಾಗಿ ಮೂಡಿಬಂದರೆ 'ಕಾಮನಬಿಲ್ಲು' ಭಾಗ ಒಂದು ಮತ್ತು ಎರಡು ಕಥಾ ಸಂಪಾದನೆಗಳಾಗಿವೆ. 'ನೀರಾರೋಹಣ ಮತ್ತು ಇತರ ಕಥೆಗಳು' ಎನ್ನುವುದು ಮಾರ್ಟಿನ್ ಗಾರ್ಕಿ ಅವರ ಕಥೆಗಳ ಅನುವಾದವಾಗಿವೆ. ಕೃಷ್ಣ ರಾಯರ ಕಥೆಗಳು ಶ್ರಮಿಕರ, ನಿರ್ಗತಿಕರ, ಬಡವರ, ನೋವುಂಡವರ ಪರವಾಗಿ ರಚನೆಯಾದವು ಹಾಗೆಯೇ ಜೀವನದಲ್ಲಿ ಎಷ್ಟು ವೈವಿಧ್ಯವಿದೆಯೋ ಕೃಷ್ಣರಾಯರ ಕಥೆಗಳಲ್ಲಿ ಅಷ್ಟು ವೈವಿಧ್ಯವಿದೆ. ಅ.ನ.ಕೃ ಅವರ ಕಥೆಗಳ ಕರೆಯು ಕನ್ನಡಿಯಲ್ಲಿ ಬಾಳಿನ ಸಪ್ತ ಸಾಗ್ರ ವರ್ಣಗಳೂ ಬಿಂಬಿತವಾಗಿವೆ. ಜೀವನಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಗಳನ್ನು ಕೃಷ್ಣರಾಯರು ತಮ್ಮ ಕರೆಯ ಕಣ್ಣಿನಲ್ಲಿ ಕಂಡಿದ್ದಾರೆ. ಮಾನವನ ಜೀವನವನ್ನು ಅಲುಗಿಸುವ ಎಲ್ಲಾ ರಾಗಗಳು, ಭಾವಗಳು, ಬಯಕೆಗಳು, ಅತೃಪ್ತಿಗಳನ್ನು ತಮ್ಮ ಕಥೆಗಳಲ್ಲಿ ವಿವರಿಸಿದ್ದಾರೆ, ವಿಶ್ಲೇಷಿಸಿದ್ದಾರೆ, ವಿಮರ್ಶಿಸಿದ್ದಾರೆ. ಜೀವನದ ನಗೆ, ನೋವು, ಹಾಸ್ಯ, ವಿಷಾದಗಳನ್ನು ವಾಸ್ತವವಾಗಿ ಚಿತ್ರಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿಯ ವಸ್ತು ವಿಷಯ, ರೂಪ, ನಿರೂಪಣೆ ದೃಷ್ಟಿ, ಧೋರಣೆಗಳ ವಿಷಯದಲ್ಲಿ ಮಹತ್ತರವಾದ ಬದಲಾವಣೆಗಳುಂಟಾದವು. ಇದರಲ್ಲಿ 'ಸಣ್ಣಕಥೆ' ಆಧುನಿಕ ಯುಗದ ಕೊಡುಗೆ ಎಂದು ಹೇಳಬಹುದು. ಈ ಕೊಡುಗೆಗೆ ಶ್ರಮಿಸಿದ ಕಥೆಗಾರರು ಹಲವರು. ಅದರಲ್ಲಿ ಅ.ನ.ಕೃ ಎಂಬ ಮೂರು ಅಕ್ಷರಗಳಿಂದ ಕನ್ನಡ ಸಾರಸ್ವತ ಪ್ರಪಂಚಕ್ಕೆ ಪರಿಚಿತರಾದ ಅರಕಲಗೂಡು ನರಸಿಂಗರಾವ್ ಕೃಷ್ಣರಾಯರೂ ಓರ್ವರು. ಅವರು ಬದುಕಿದ ಅರವತ್ಮೂರು (1908-1971) ವರ್ಷಗಳಲ್ಲಿ ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಜೀವನಚರಿತ್ರೆ, ಅನುವಾದ, ಸಾಮಾಜಿಕ, ಐತಿಹಾಸಿಕ, ಹೀಗೆ ಹಲವಾರು ಪ್ರಕಾರಗಳಲ್ಲಿ ಕೆಲಸ ಮಾಡಿ ಕನ್ನಡ ಕಾದಂಬರಿಯ ಸಾರ್ವಭೌಮರೆನಿಸಿಕೊಂಡರೂ ಅವರು ಓರ್ವ ಕಾದಂಬರಿಕಾರರಷ್ಟೇ ಅಲ್ಲ, ಉತ್ತಮ ಕಥೆಗಾರರು ಸಹಿತ.

ಸಾಹಿತ್ಯದ ವಲಯದಲ್ಲಿ ಅ.ನ.ಕೃ ಅವರನ್ನು ಕಾದಂಬರಿಕಾರರಾಗಿಯೇ, ಗುರುತಿಸಲಾಗುತದೆ ವಿನ: ಅವರು ಓರ್ವ ಕಥೆಗಾರರಾಗಿರುವವರು ಎನ್ನುವುದನ್ನು ಓದುಗರ ವರ್ಗ ಮರೆತ ಹಾಗೆ ಕಾಣುತದೆ. ಅಷ್ಟೆ ಅಲ್ಲದೇ ಅವರ ಕಥೆಗಳ ಕುರಿತಾಗಿ ಪ್ರಸ್ತಾಪಿಸುವಾಗ, ಅವರೂ ಕಥೆಗಳನ್ನು ಬರೆದಿದ್ದಾರೆಯೇ?... ಎನ್ನುವ ಪ್ರಶ್ನೆಯೊಂದಿಗೆ ಬರೆದರೂ ಬರೆದಿರಬೇಕು ಎಲ್ಲೋ ಒಂದಿಷ್ಟು, ಎನ್ನುವ ಉದ್ಗಾರ....!ದೊಂದಿಗೆ ಏನೇ ಹೇಳಿದರು, ಅವರು ಒಬ್ಬ ಶ್ರೇಷ್ಠ ಕಾದಂಬರಿಕಾರರು ಎನ್ನುವ ಮಾತು ಸೇರಿಕೊಳ್ಳುತ್ತದೆ. ಈ ಮಾತಿಗೆ ಪ್ರತಿಯಾಗಿ ಅವರನ್ನು ಕಥೆಗಾರರಾಗಿ ನೋಡಿದಾಗ ಸುಮಾರು 'ಎಂಟು' ಕಥಾಸಂಕಲನ, ಅನುವಾದ, ಕಥೆಗಳ ಸಂಪಾದಕರಾಗಿ, ಕೆಲಸ ಮಾಡಿದ್ದಾರೆ. ಇಷ್ಟೆಲ್ಲ ಇದ್ದರು ಅವರ ಒಟ್ಟು ಕಥೆಗಳ ಕುರಿತಾಗಿ ಅವಲೋಕನ ಮಾಡಿ ನೋಡಿದಾಗ, ಬಿಡಿ ಬಿಡಿ ಲೇಖನಗಳು ಪ್ರಕಟವಾಗಿವೆಯೇ ಹೊರತು ಸಮಗ್ರ ಕಥೆಗಳ ಕುರಿತಾಗಿ ಗಂಭೀರವಾದ ಅಧ್ಯಯನ ಕಂಡುಬರುವುದಿಲ್ಲ. ಹಾಗೆಯೇ ಕಥೆಗಳಿಗೆ ದೊರೆಯಬೇಕಾದಷ್ಟು ಸ್ಥಾನ ದೊರೆತಿಲ್ಲ. ಆ ಕೊರತೆಯನ್ನು ತುಂಬಿ ಕೊಡುವುದೇ ಈ ಲೇಖನದ ಉದ್ದೇಶ.

ಕೃಷ್ಣರಾಯರು ನಾಟಕ ರಚನೆಯ ಮೂಲಕ (1924-ಮದುವೆಯೋ ಮನೆಹಾಳೋ) ಸಾಹಿತ್ಯ ರಚನೆಗೆ ತೊಡಗಿ. ಮಯಂದೆ ಕಾದಂಬರಿಯ ಸಾರ್ವಭೌಮರೆನಿಸಿಕೊಂಡರು. ನಾಟಕ ರಚನೆಯ ಮೂಲಕ ಆರಂಭಿಸಿ ಕಾದಂಬರಿ ಕ್ಷೇತ್ರದಲ್ಲಿ ಶ್ರೇಷ್ಟ ಸಾದನೆ ಮಾಡಿದರೂ ಸಹಿತ; ಕಥಾ ಸಾಹಿತ್ಯದ ಮೇಲೆ ಅವರಿಗೆ ವಿಶೇಷ ಒಲವು, ಅದಕ್ಕೆ ಅವರು ಬರೆದ ಕಥೆಗಳೇ ಕೈಗನ್ನಡಿ.

ಅ.ನ.ಕೃ ಅವರು ಕಥಾ ರಚನೆಯನ್ನು 1928ರಲ್ಲಿ ಅಂದರೆ ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೇ ಸಣ್ಣ ಕಥೆಗಳಿಗೆಂದೆ ಮಿಸಲಾದ 'ಕಥಾಂಜಲಿ' ಎನ್ನುವ ಮಾಸ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದರು. ಹಾಗೆಯ ಅವರ ಮೊದಲ ಕಥೆಯ ಕಾಲವನ್ನು ಕುರಿತು ಗಮನಹರಿಸಿದಾಗ, ಅವರು ತಮ್ಮ ಮೊದಲ ಕಥಾಸಂಕಲನ 'ಮಿಂಚು'(1930) ಹೊರತರುವ ಮೊದಲು ಸಣ್ಣಕಥೆಗಳನ್ನು ಬರೆದಿದ್ದರು. ಆದರೆ "ಮೊದಲ ಕಥೆ ಬರೆದದ್ದು ಯಾವಾಗ? ಆ ಕಥೆ ಯಾವುದು? ತಿಳಿಯದು"1 ಎನ್ನುವ ಡಾ.ಎಸ್.ವಿದ್ಯಾಶಂಕರವರ, ಈ ಮಾತನ್ನು ಅವರ ಸಾಹಿತ್ಯದ ಮೂಲಕ ಇನ್ನೂ ಪರಿಶೀಲಿಸಬೇಕಾಗಿದೆ.

1928 ರಿಂದ 1960ರ ವರೆಗೆ ಎಂಟು ಕಥಾಸಂಕಲನದಲ್ಲಿ 'ಮಿಂಚು', (1930) 'ಕಿಡಿ',(1931) 'ಕಾಮನ ಸೋಲು',(1942) 'ಪಾಪ-ಪುಣ್ಯ',(1943) 'ಕಣ್ಣು ಮುಚ್ಚಾಲೆ',(1945) 'ಅಗ್ನಿಕನ್ಯೆ',(1947) 'ಶಿಲ್ಪಿ',(1949) 'ಸಮರಸುಂದರಿ'(1963) ಒಟ್ಟು 69 ಕಥೆಗಳು ಅವರ ಬರವಣಿಗೆಯಿಂದ ಮೂಡಿ ಬಂದರೆ.

(ವೀರೇಗೌಡರು ಅ.ನ.ಕೃ ಅವರ 'ಕಥಾ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ' ಎಂಬ ಲೇಖನದಲ್ಲಿ ಕೃಷ್ಣರಾಯರು ಸುಮಾರು ನೂರು ಕಥೆಗಳನ್ನು ಬರೆದಿದ್ದಾರೆ ಎಂದು ಉಲ್ಲೇಖಿಸಿದ್ದಾರೆ (ರಸಚೇತನ), ಆದರೆ ಅದನ್ನು ಇನ್ನೂ ನಿರೂಪಿಸಬೇಕಾಗಿದೆ. 'ನೀಲಾಲೋಚನೆ ಮತ್ತು ಇತರ ಕಥೆಗಳು' ಎನ್ನವುದು 'ಮಾರ್ಕ್ಸಿಂ ಗಾರ್ಕಿ' ಅವರ ಕಥೆಗಳ ಅನುವಾದವಾಗಿದೆ. 'ಕಾಮನಬಿಲ್ಲು' ಭಾಗ ಒಂದು ಮತ್ತು ಎರಡು ಕಥಾ ಸಂಪಾದನೆಗಳಾಗಿವೆ. ಸಾಗರ ಪ್ರಕಾಶನ ಬೆಂಗಳೂರುದಿಂದ ಒಂದೇ ಸಂಪುಟದಲ್ಲಿ ಪ್ರಕಟವಾಗಿದೆ. ಇದರಲ್ಲಿ ವಿಶ್ವಕಥಾ ಸಾಹಿತ್ಯ, ಭಾರತೀಯ ಕಥಾಸಾಹಿತ್ಯ, ಕನ್ನಡ ಸಾಹಿತ್ಯದ ಕುರಿತು ಸಿಂಹಾವಲೋಕನ ಮಾಡಿದ್ದಾರೆ. ಹಾಗೆಯೇ ಕನ್ನಡ ಕಥೆಗಳ ರೂಪರೇಷಿಳ ಬಗ್ಗೆ ಚರ್ಚಿಸಿದ್ದಾರೆ.

'ಮಿಂಚು' ಅ.ನ.ಕೃ ಅವರ ಮೊದಲ ಕಥಾ ಸಂಕಲನವಾಗಿದೆ. ಇದರಲ್ಲಿ ಬರುವ 'ನನ್ನ ಮುದ್ದು ಸರೋಜ', 'ಅವಳ ಬಾಳು', 'ಮುಂದೆನು ಗತಿ', 'ಸಾವಿತ್ರಿಯ ಸೌಭಾಗ್ಯ', ಕಥೆಗಳಲ್ಲಿ ಹೆಣ್ಣಿನ ಬದುಕಿನ ದಾರುಣ ಚಿತ್ರವನ್ನು ಮುಂದಿಟ್ಟರೆ. '೨.೩೦ ಘಂಟೆ'ಯಂತಹ ಕತೆಯು ಬದುಕಿನಲ್ಲಿ ನಡೆಯುವ ಅನಿರಿಕ್ಷಿತ ಘಟನೆಯ ಕುರಿತು ತಿಳಿಸುತ್ತದೆ. ಅ.ನ.ಕೃ ಅವರ ಕಥೆಗಳಲ್ಲಿ ಹೆಣ್ಣು ಒಂದಲ್ಲ ಒಂದು ರೂಪದಲ್ಲಿ ಕಾಣಿಸಿ ಕೊಳ್ಳುತ್ತಾರೆ. ವಿಧವೆಯರು, ವೇಶ್ಯೆಯರು, ಗೃಹಸ್ಥೆಯರು, ಗರತಿಯರು, ಹೆಜ್ಜೆ ತಪ್ಪಿದವರು, ಭಿಕ್ಷುಕರು, ಬಂಜೆಯರು, ಹೊಟ್ಟೆ ಪಾಡಿನಲ್ಲಿ ದಿಕ್ಕು ತಪ್ಪಿದವರು, ಶೋಷಿತ ವರ್ಗದಿಂದ ಶೋಷಿತವಾದವರು. ಹೀಗೆ ಮಹಿಳೆಯ ಜೀವನದ ಕಥೆ–ವ್ಯಥೆಯನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತಾರೆ. ಮಹಿಳೆಯನ್ನು ಗಂಡು, ಗಂಡೆಂಬ ಅಧಿಕಾರದಿಂದ ತನ್ನ ಕಾಮೋಪಭೋಗಕ್ಕೆ ಮಾತ್ರವಲ್ಲ, ತನ್ನ ಇತರ ಸ್ವಾರ್ಥ ಸಾಧನೆಗೂ

1.ಅ.ನ.ಕೃ ಬದುಕು–ಬರಹ–ಪುಟ–76

ಬಳಸಿಕೊಳ್ಳುತ್ತಾನೆ ಎನ್ನುವುದು 'ಅವಳ ಬಾಳು', ಕಥೆ. ಕಮಲಾಳ ಗಂಡ ತನ್ನ ಚಾಕರಿಯಲ್ಲಿ ಬಡತಿ ಪಡೆಯಲು ಅವಳನ್ನು, ಇಚ್ಛೆಗೆ ವಿರುದ್ಧವಾಗಿ ಮೇಲಾಧಿಕಾರಿಗೆ ಒಪ್ಪಿಸುತ್ತಾನೆ. ಇದರಿಂದ ಮನಃ ನೊಂದ ಅವಳು ಮನೆ ಬಿಟ್ಟು ಹೊರಡುತ್ತಾಳೆ. ಹೊದ ಸಮಯದಲ್ಲಿ ಪರಸ್ಥಿತಿಯ ಒತ್ತಡದಿಂದ ವೇಶ್ಯಾ ವೃತ್ತಿಗಿಳಿದು ಹೊರ ಬರಲು ಪ್ರಯತ್ನಿಸಿದರೂ, ಸಮಾಜ ಅವಳ ಮೇಲೆ ಕೊಲೆಯ ಅಪರಾದ ಹೊರೆಸುತ್ತದೆ. ಅವಳನ್ನು ಬಹುಕಾಲದಿಂದ ಹಿಂಬಾಲಿಸುತ್ತಿದ್ದ ಮಾಧು ಅವಳನ್ನು, ಹೆಜ್ಜೆ ಹೆಜ್ಜೆಗೆ ಕಾಪಾಡಿ ಆಶ್ರಯ ನೀಡುತ್ತಾನೆ. ಕೊನೆಯಲ್ಲಿ ಅವಳನ್ನು ಕೊಲೆಯ ಅಪಾದನೆಯಿಂದ ಮುಕ್ತಮಾಡಿ. ತನ್ನ ಮನೆಗೆ ಕರೆದುಕೊಂಡು ಹೋಗುವನು ಅಲ್ಲಿ "ಅಮ್ಮ ನಿನಗೊಂದು ಭೀಕ್ಷೆ ತಂದಿರುವೆನು ಕಮಲಾ"2 ಎಂದು ತಾಯಿಯ ಮಡಿಲಿಗೆ ಒಪ್ಪಿಸುವನು. ಆಗ ತಾಯಿಯು "ಹೆಣ್ಣು ಮಕ್ಕಳಿಲ್ಲವಲ್ಲಾಂತಿದ್ದೆ ದೇವರೇ ನಿನ್ನ ಕೊಟ್ಟ"3 ಎಂದು ಸ್ವೀಕರಿಸುತ್ತಾಳೆ. ಕಥೆಯನ್ನು ಓದಿ ಮುಗಿಸಿದಾಗ, ಕಥೆಯು ಹೃದಯ ಸ್ಪಷಿಯಾಗುತ್ತದೆ. ಇಂತಹದ್ದೆ ಇನ್ನೊಂದು ಕಥೆಯ ವಸ್ತುವನ್ನು 'ಜ್ವಾಲೆ'ಯಲ್ಲಿ ಕಾಣಬಹುದು.

ಉದ್ದೇಶಿತವಾಗಿ ಕೆಲವು ಘಟನೆ ನಡೆದರೆ ಅನಿರಿಕ್ಷಿತವಾಗಿಯೂ ಕೆಲವು ಘಟನೆಗಳು ನಡೆಯುತ್ತವೆ. ಅಂತಹ ಒಂದು ಚಿತ್ರವನ್ನೊಳಗೊಂಡ ಚಿತ್ರಣ '೨.೩೦ ಘಂಟೆ'ಯ ಕಥೆಯಲ್ಲಿದೆ. ಇದರ ವಸ್ತು ಅನಿರಿಕ್ಷಿತವಾದ ಸಾವು. ಕಥೆಯು ಡೌಲಾ ಸ್ಟೇಷನ್ನಿನಿಂದ ಬೆಜವಾಡ ಸ್ಟೇಷನ್‌ವರಗೆ ರೈಲು ಮುಟ್ಟುವವರೆಗೆ ಬೆಳೆಯುತ್ತದೆ. ಪ್ರಕಾಶರಾವ್ ಕೆಲಸದ ನಿಮಿತ್ತ ಕಲ್ಕಾತ್ತಾಕ್ಕೆ ಬಂದಿದ್ದು, ಬಹುದಿನಗಳ ನಂತರ ಊರಿಗೆ ಮರುಳುತ್ತಿದ್ದಾನೆ. ರೈಲಿನಲ್ಲಿ ಹೊಗುವಾಗ ಅವನಿಗೆ ಪ್ರತಿ ಕ್ಷಣ ಕ್ಷಣಕ್ಕೂ ಸಮಾದಾನವಿಲ್ಲ. ಕಾರಣ ಹೆಂಡತಿ ಮಕ್ಕಳನ್ನು ಕಾಣುವವರೆಗೆ ಅವನ ಜೀವನಕ್ಕೆ ಸಮಾದನವಿಲ್ಲ. ಪ್ರತಿ ಸ್ಟೇಷನ್ನಿನಲ್ಲಿ ಇಳದು ತಾನು ಇಷ್ಟು ಇಷ್ಟು ಸಮೀಪ ಬಂದೆ ಎಂದು ಹೆಚಿಡತಿ, ಮಕ್ಕಳಿಗೆ, ಹೇಳುತ್ತಾನೆ. ಹಾಗೆಯ ಹೆಂಡತಿಯನ್ನು ಪ್ರತಿಕ್ಷಣಕ್ಕೂ ಸ್ಮರಿಸುತ್ತಿರುತ್ತಾನೆ. ಕೊನೆಗೆ ತನ್ನ ಸ್ಟೇಷನ್‌ನಲ್ಲಿ ರೈಲಿನ ಬಾಗಿಲಲ್ಲಿ ನಿಂತು ಇಳಿಯುವ ಆತೂರದಲ್ಲಿದ್ದಾನೆ. ಅದೇ ಹೊತ್ತಿಗೆ ಪಕ್ಕದ ಹಳಿಯಲ್ಲಿ ಮತ್ತೊಂದು ರೈಲು ಹಾದು ಹೋಗಿರುತ್ತದೆ. 'ಯಾವುದೋ ಪದರ್ಥ ಬಿದ್ದಹಾಗಾಯಿತು' ರೈಲು ನಿಂತಾಗ ಜನ ಸೇರಿರುತ್ತಾರೆ. ಪ್ರಕಾಶರಾವ್‌ನ ಮೇಲೆ ರೈಲು ಹಾದು ಹೋಗಿರುತ್ತದೆ.

ಕಥೆ ಆರಂಭದಿಂದಲು ಕೂತುಹಲ, ಉದ್ವೇಗ, ಹಂಬಲವನ್ನು, ಉಳಿಸಿಕೊಳ್ಳುತ್ತದೆ. ಇಂತಹ ಕೆಲವು ಕಥೆಗಳನ್ನು ಗಮನಿಸಿದಾಗ, ಕೃಷ್ಣರಾಯರ ಕಥೆಗಳ ಕೊನೆಯಲ್ಲಿ ಹೊಸ ತಿರುವು ಪಡೆಯುತ್ತವೆ. ಓದುಗನ ಕೂತುಹಲ ಕೆರಳಿಸುತ್ತ ಬೆಳೆಯುತ್ತವೆ. ಜೀವನದ ನಿಗೂಡ ಸತ್ಯಗಳನ್ನು ಹುಡುಕುವ ಪ್ರಯತ್ನ ಅವರ ಕಥೆಗಳಲ್ಲಿ ವಿರಾಮವಾಗಿಯಾದರು, ಒಮ್ಮೊಮ್ಮೆ ನಡೆದಿದೆ ಎನ್ನುವುದಕ್ಕೆ '೨.೩೦ ಘಂಟೆ'ಯಂತಹ ಕಥೆಗಳೇ ನಿದರ್ಶನವಾಗಿವೆ. ಎಂದು ವಿಮರ್ಶಕರಾದ ಪ್ರೋ.ಜಿ.ಎಸ್.ಆಮೂರ ಅವರು ಹೇಳಿದ್ದಾರೆ.

ಕೃಷ್ಣರಾಯರ ಕಥಾ ಸಂಕಲನದಲ್ಲಿ 'ಕಿಡಿ'ಯೂ ಒಂದು. ಇದರಲ್ಲಿ 'ಕರುಳಿನ ಕೂಗು', 'ರಾಮೋತ್ಸವ',

2.ಅವಳ ಬಾಳು(ಮಿಂಚು) ಪುಟ–74
3.ಅವಳ ಬಾಳು(ಮಿಂಚು) ಪುಟ–74

'ಮುಗಿಯದ', ಕಥೆ' 'ಗೆದ್ದವರು ಯಾರು', ಹೀಗೆ ಆರು ಕಥೆಗಳನ್ನು ಒಳಗೊಂಡಿದೆ. ಚಿತ್ರಕಲಾವಿದರ, ಸಂಗೀತಗಾರರ, ನಾಟಕಕಾರರ, ಸಾಹಿತಿಯ, ಹೀಗೆ ಕಲಾವಿದರ ಜೀವನ ಚರಿತ್ರೆ ಕುರಿತು ಹಲವಾರು ಕೃತಿಗಳನ್ನು ಕೃಷ್ಣರಾಯರು ರಚಿಸಿದ್ದಾರೆ. ಅಂತಹ ಒರ್ವ ಕಲಾವಿದನ ಚರಿತ್ರೆ ಒಳಗೊಂಡ ಕಥೆ 'ರಾಮೋತ್ಸವ'. ಆನಂದರಾಯ ಎನ್ನುವ ಸಂಗೀತಗಾರನು ವೇಶ್ಯಾಪುತ್ರಿಗೆ ಸಂಗೀತ ಕಲಿಸಿ, ವಿದ್ವತ್ತು, ಬೆಳಸಿ ಅವಳ ಮೇಲಿನ ಮೊಹದಿಂದ ಗುರುದಕ್ಷೇಣೆ ರೂಪದಲ್ಲಿ ಅವಳನ್ನು ತಾವೇ ಮದುವೇ ಯಾಗುತ್ತಾರೆ. ಮದುವೆಯಾದ ಎರಡೆ ವರ್ಷ ಸುಂದರಿ ಬದುಕಿದ್ದುದು. ಆದರೆ ಅವಳು 'ರಾಮು' ಎನ್ನುವ ಮಗುವಿಗೆ ಜನ್ಮ ಕೊಟ್ಟು ಹೋಗುತ್ತಾಳೆ. ರಾಯರು 'ರಾಮು'ಗೆ ತಬ್ಬಲಿಯಂದು ತಾವು ಸಾಕಿ, ಸಲಹಿ, ಹಗಲಿರುಳು ಅವನ ಶ್ರೇಯಸ್ಸನ್ನೇ ಕೋರಿ, ತಮ್ಮಲ್ಲಿದ್ದ ವಿದ್ಯೆಯನ್ನು ದಾರೆಯರೆದು ಘನ ವಿದ್ವಾಂಸನ್ನನಾಗಿ ರೂಪಿಸುತ್ತಾರೆ. ಅಂದಿನ ಅವನ ಸಂಗೀತ ಕೇಳಿ ಸಂತೋಷ ಪಡುತ್ತಾರೆ. ಕಥೆಯಲ್ಲಿನ "ಕ್ರಿಯೇ ಸಂಪೂರ್ಣವಾಗಿ ಆಂತರಿಕವಾಗಿರುವದರಿಂದ

ಮನೋವೈಜ್ಞಾನಿಕ ಕಥಾ ಸಾಹಿತ್ಯದಲ್ಲಿ ಇದು ಮೊದಲ್ಲಿನ ಪ್ರಯೋಗಗಳಲ್ಲಿ ಒಂದಾಗಿದೆ"4 ಎಂದು ವಿಮರ್ಶಕರು ಗುರ್ತಿಸಿದ್ದಾರೆ.

ಒಂದು ಕಾಲದಲ್ಲಿ ಪ್ರೀತಿ ವಿಶ್ವಾಸದಿಂದ ಇದ್ದ ಹಿಂದೂ–ಮುಸ್ಲಿಂ ಕುಟುಂಬಗಳು. ಕಾಲ ಕಾಲಕ್ಕೂ ಬದಲಾದಂತೆ ಧರ್ಮದ ಹೆಸರಿನಲ್ಲಿ ಕೋಮುವಾರು ಘಟನೆಗಳಿಂದ ಹೇಗೆ ಸಂಘರ್ಷವಾಗುತ್ತದೆ ಎಂಬುದನ್ನು ತಿಳಿಸುವ ಕಥೆಯೇ 'ಅಗ್ನಿಕನ್ಯೆ'. ಇದು ಐವತ್ತರ ದಶಕದ ಒಂದು ವಾಸ್ತವ ಘಟನೆಯನ್ನಾದರಿಸಿದ ಕಥೆ. ಅ.ನ.ಕೃ ಅವರು ಈ ಹೆಸರಿನಲ್ಲಿಯೇ ಕಥಾಸಂಕಲನ ಹೊರತಂದಿರುವರು. ಕಥೆಯಲ್ಲಿ ಅನ್ಯೋನ್ಯವಾಗಿದ್ದು ಎರಡು ಕುಟುಂಬಗಳು ಜಾತೀಯವಾದಕ್ಕೆ ಬಲಿಬಿದ್ದು. ತಮ್ಮ ಮಾನವಿಯತೆಯನ್ನು ಕಳೆದು ಕೊಳ್ಳುತ್ತಾರೆ ಎನ್ನುವುದಕ್ಕೆ ಸುನೀಲಬಾಬು, ಹಮ್ಮೀದ ಇಬ್ಬರು ಪ್ರಾಣ ಸ್ನೇಹಿತರು. ಇಬ್ಬರು ಸೇರಿ ಬೀಡಿ ಫ್ಯಾಕ್ಟರಿ ಆರಂಭಿಸುತ್ತಾರೆ. ಕ್ರಮೇಣ ಹಮ್ಮೀದನಲ್ಲಿ ಬದಲಾವಣೆಯಾಗುತ್ತದೆ. ಅದರಿಂದ ಬೇರೆಯಾಗಿ 'ಪಾಕಿಸ್ತಾನ ಬೀಡಿ' ಆರಂಭಿಸುತ್ತಾನೆ. ಸರ್ಧೀಸಿ ಸೋಲುತ್ತಾನೆ. ಇದರಿಂದ ಕುಪಿತಗೊಂಡು ಸುನೀಲನ ಮಗಳನ್ನು ಕೊಚ್ಚಿ ಹಾಕುತ್ತಾರೆ. ಅವನ ತಾಯಿಯನ್ನು ಮಾನಭಂಗ ಮಾಡುತ್ತಾರೆ. ಸುನೀಲನನ್ನು ಕೊಲ್ಲುತ್ತಾರೆ. ತಂಗಿಯಂತಿದ್ದ ಬೀಣಾಳನ್ನು ಕಟ್ಟಿಹಾಕಿ, ಕುಂಕುಮ ಒರಸಿ, ಬಳೆ ಒಡೆದು, ಮೌಲ್ವಿಯ ಮೂಲಕ ಬಲತ್ಕಾರದಿಂದ ಮದುವೆ ಮಾಡಿಕೊಳ್ಳುತ್ತಾನೆ. ಈ ಘಟನೆಯನ್ನು ತಿಳಿದರೆ ಕೋಮುವಾದ, ಮನುಷ್ಯನನ್ನು ಎಷ್ಟು ಮತಿಯನನ್ನಾಗಿ ಮಾಡುತ್ತದೆ. ಅದರಿಂದ ಎತಂಹ ಅನಾಹುತ ಘಟಿಸುತ್ತದೆ ಎನ್ನುವುದಕ್ಕೆ ಈ ಕಥೆಯ ಅಂತ್ಯದಲ್ಲಿ ನಡೆಯುವ ಭೀಕರ ದುರಂತವೆ ಉತ್ತಮ ಉದಾಹರಣೆ. ಇದೊಂದು ಮೈನೆವರೇಳಿಸುವ ಕಥೆಯಾಗಿದೆ. ಇಂತಹದೆ ಮುಸ್ಲಿಂ ಸಂವೇದನೆಯ ವಸ್ತುವನ್ನೊಳಗೊಂಡ ಕಥೆ 'ಮೃತ್ಯುಶಾಂತಿ'.

ಹಿಂದೂ–ಮುಸ್ಲಿಮರ ದ್ವೇಷ ಎಷ್ಟು ಅಲ್ಪಕಾರಣದ ಬೀಜದಿಂದ ಹುಟ್ಟಿ ಅದು ದುರಂತಕ್ಕೆ ಕಾರಣ ವಾಗುವುದನ್ನು 'ಅಗ್ನಿಕನ್ಯೆ' ಕಥೆಯಲ್ಲ ಕಂಡರೆ. ದೇಶದಲ್ಲಿ ಹಿಂದೂ–ಮುಸ್ಲಿಮರು ಎಷ್ಟರ ಮಟ್ಟಿಗೆ ಬೇರೆತು ಹೋಗಿದಾರೆ ಎನ್ನುವ ಚಿತ್ರ ಮೃತ್ಯುಶಾಚಿತಿ ಕಥೆಯಲ್ಲದೆ. ಹಾಗೇ ಈ ಎರಡು ಕಥೆಗಳ ಮದ್ಯದ ಇನ್ನೊಂದು ಮುಖದ ಕಥೆಯ ವಸ್ತುವೇ. ಅಂದರೆ ಒಬ್ಬರಿಗೆ ಒಬ್ಬರು ಹೇಗೆ ಸಹಾಯ ಸಹಕಾರದ ಜೀವನ ನಡೆಸುತ್ತಾರೆ ಎನ್ನುವುದನ್ನು ತಿಳಿಸುವುದೇ 'ಬೂಬಮ್ಮ' ಕಥೆಯ ವಸ್ತು.

4.ಅ.ನ.ಕೃ ಸಾಹಿತ್ಯ ಶ್ರೇಣಿ ಸಂಪುಟ2–ಸಂಪಾದಕೀಯ ನುಡಿ–XVI

ಬೂಬಮ್ಮ ಮುಸಲ್ಮಾನೀಯ ಹೆಣ್ಣಾದರೂ ಬ್ರಾಹ್ಮಣ ಕುಟುಂಬದ ಹೆಣ್ಣಿಗೆ ಕಷ್ಟ ಕಾಲದಲ್ಲಿ ನೇರವಾಗುತ್ತಾಳೆ. ಈ ಉಪಕಾರ ಸ್ವೀಕರಿಸಿದ ಶ್ರೀವೈಷ್ಣವ ಶಠಗೋಪ, ಆಂಡಾಳ್ ದಂಪತಿ ತಮಗೆ ಹುಟ್ಟಿದ ಮಗಳಿಗೆ 'ರಾಬಿಯಾ' ಎಂದು ಹೆಸರಿಡುವುದರ ಮೂಲಕ ಸದಾ ಸ್ಮರಿಸಿಕೊಳ್ಳುತ್ತಾರೆ. "ಮತ ಮಾನವತೆಯನ್ನು ಮೀರಿದುದಲ್ಲ. ಎಲ್ಲಾ ಧರ್ಮವೂ ಅಂತಃಕರಣಕ್ಕೆ ಅಡಿಯಾಳು".5 ಎನ್ನುವುದು ಇಲ್ಲಿಯ ಎದ್ದು ಕಾಣುತ್ತದೆ. ಇದು ನಮ್ಮ ದೇಶದಲ್ಲಿ ನೆಲಸಿದ ನೆಲಸುತ್ತಿರುವ, ಹಿಂದೂ–ಮಸ್ಲಿಮರಲ್ಲಿ ನೆಲೆಸಿರು ಮೈತ್ರೀಯ ಸುಂದರ ಚಿತ್ರ.

'ಜೈ ಹಿಂದ್' ಕಥೆಯು ಸಮರ ಸುಂದರಿ ಕಥಾಸಂಕಲನದಲ್ಲಿಯ ಒಂದು ಕಥೆ. ಈ ಕಥೆಯು ದೇಶಕ್ಕೆ ಸ್ವಾತಂತ್ರ್ಯ ಪಡೆಯಲು ನಡೆಸುವ ಹೋರಾಟದಲ್ಲಿ ಕೆಲವರು ಪ್ರಾಣವನ್ನು ತೆತ್ತರೆ, ಇನ್ನೂ ಕೆಲವರು ಅದನ್ನು ತಮ್ಮ ಸ್ವಾರ್ಥದ ಸಾಧನೆಗೆ ಹೇಗೆ ಬಳಸಿಕೊಂಡರು ಎಂಬುದನ್ನು ತಿಳಿಸುತ್ತದೆ. ಮೊದಲನೆಯ ವರ್ಗದ ಪ್ರತಿನಿಧಿ ಚಂದ್ರಣ್ಣ. ನಿಸ್ವಾರ್ಥಮನಸ್ಸಿನಿಂದ ತನಗಿರುವ ಮೇಸ್ಟರರ ಉದ್ಯೋಗಕ್ಕೆ ರಾಜೀನಾಮೆ ನೀಡಿ, ಜೈಲು ಸೇರಿ ಬಿಡುಗಡೆ ಯಾಗುತ್ತಾನೆ. ನಂತರ ವಿದ್ಯಾರ್ಥಿಗಳ ಚಳುವಳಿಯ ಮುಖಂಡತ್ವ ವಹಿಸಿ ಪೋಲೀಸರ ಗುಂಡಿಗೆ ಬಲಿಯಾಗಿ, ದೇಶಕ್ಕಾಗಿ ಪ್ರಾಣ ನೀಡುತ್ತಾನೆ.

ಆದರೆ ಎರಡನೇಯ ವರ್ಗದ ಪ್ರತಿನಿಧಿ ಸ್ವಾರ್ಥಸಾದನೆಯ, ತಂತ್ರದ ರಾಜಕಾರಣಿ ಗುರುಲಿಂಗಯ್ಯ ಸಂಘಟನೆಯ ಹೆಸರಿನಲ್ಲಿ ಜೈಲಿನ ಹೊರಗೆ ಉಳಯುವನು. ಚಂದ್ರಣ್ಣ ಜೈಲಿನಲ್ಲಿರುವಾಗ ಹೆಂಡತಿಯಾದ ಗಿರಿಜಾ ಮಹಿಳೆಯರ ಚಳುವಳಿಯ ಜೊತೆ ತಾನೂ ಜೈಲಿಗೆ ಹೊಗಲು ಬಯಸುವಳು. ಗುರುಲಿಂಗಯ್ಯ ಅವಳನ್ನು ತನ್ನ ವಶ ಮಾಡಿಕೊಳ್ಳಲು ನಯವಾದ ಮಾತಿನಿಂದ ಮರುಳು ಮಾಡಿ ಹಾದಿತಪ್ಪುವಂತೆ ಮಾಡುತ್ತಾನೆ. ಕಥೆಯ ಕೊನೆಯಲ್ಲಿ ದೇಶಕ್ಕೆ ಸ್ವಾತಂತ್ರ್ಯ ಘೋಷಣೆ ಯಾಗುತ್ತದೆ. ಗಿರಿಜಮ್ಮ ಮಹಿಳೋದ್ದಾರ ಸಮಿತಿಯ ಅಧ್ಯಕ್ಷಳಾಗುವಳು. ಕಥೆಯ ಹಂದರವನ್ನು ಗಮನಿಸಿದಾಗ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಸಿದವರ ಭ್ರಷ್ಟಾಚಾರದ ಕುರಿತು ಅ.ನ.ಕೃ ಅವರ ತೀಕ್ಷ್ಣ ವ್ಯಂಗ್ಯಕ್ಕೆ ಈ ಘಟನೆಯು ಗುರಿಯಾಗಿದೆ. ಹಾಗೆಯ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಪ್ರಾಣಾರ್ಪಣೆ ಮಾಡಿದ ವೀರರ, ತ್ಯಾಗ ಬಲಿದಾನದ ಚಿತ್ರಣ ಅ.ನ. ಕೃ ಅವರ ಕಥೆಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಇಂತಹದೇ ವಸ್ತುವನ್ನಾದರಿಸಿದ ಚಿತ್ರವನ್ನು 'ಅನ್ನದ ಕೂಗು' 'ಗಿರಿಜವ್ವನ ರೊಟ್ಟಿ' ಅಂತಹ ಕಥೆಗಳಲ್ಲಿ ಕಾಣಬಹುದು.

ಅ.ನ.ಕೃ ಅವರು '೨.೩೦ ಘಂಟೆ', 'ಗಂಗವ್ವನ ಆಶೆ', 'ಅನ್ನದ ಕೂಗು', 'ಗಿರಿಜವ್ವನ ರೊಟ್ಟಿ', 'ಮುಗಿಯದ ಕಥೆ', 'ಮಣ್ಣಿನ ಮಗ', ಇಂತಹ ಶ್ರೇಷ್ಟ ಕಥೆಗಳ ಜೋತೆಗೆ ಕೆಲವು ಸಾಮಾನ್ಯ ರೀತಿಯ ಕತೆಗಳನ್ನು 'ಮುದ್ದು ಸರೋಜ', 'ಶ್ರೀಪತಿಯ ಕಲ್ಯಾಣ', 'ಅಗಸರ ರಂಗ', 'ದಾಸಿ',ಯಂತಹ ಕಥೆಗಳು ಕಂಡುಬರುತ್ತವೆ.

ಅದೆನೇ ಇರಲಿ "ನಮ್ಮ ಸಣ್ಣಕಥೆಗಳ ವ್ಯಾಪ್ತಿಯನ್ನು ವಿಸ್ತಾರ ಪಡಿಸುವದರಲ್ಲಿ ಅ.ನ.ಕೃಷ್ಣರಾಯರು ಶ್ಲಾಘ್ಯವಾದ ಕೆಲಸವನ್ನು ಮಾಡಿದ್ದಾರೆ".6 ಎನ್ನುವ ಎಚ್.ಎಸ್.ಪಾರ್ವತಿಯವರ ಮಾತಿನಲ್ಲಿ ಸತ್ಯ ವಿದೆ.

5.ಅ.ನ.ಕೃ– ತ ರಾ ಸು ಪುಟ–112
6.ಅಮರಚೇತನ (ಸಂ) ಶಾ.ಮಂ.ಕೃಷ್ಣರಾಯ–ಪುಟ–416

ಅವರ ಸಾಹಿತ್ಯದ ನಿರರ್ಗಳವಾದ ಬರವಣಿಗೆಯಿಂದ ಓದುಗನ

ಮನಸ್ಸನ್ನು ಹಿಡಿದಿಡಬಲ್ಲರು. ಪ್ರತಿಯೊಂದು ಘಟನೆಟನ್ನು ವಿವರವಾಗಿ ಕೊಡುವುದು ಮತ್ತು ನಿರಂತರವಾಗಿ ಓದಿಸಿಕೊಂಡು ಹೋಗುವ ಶೈಲಿ ಎಲ್ಲಾ ಕೃತಿಗಳಲ್ಲೂ ಕಾಣುವಂತಹದ್ದು. ಅದರ ಜೋತೆಗೆ ಸಮಾಜದಲ್ಲಿ ಕಾಣುವ ನೀತಿಭ್ರಷ್ಟರ, ಸೋಗಲಾಡಿಗಳ ಬಗ್ಗೆ ಆಕ್ರೋಶವಿದೆ, ಲಘುವಾದ ಹಾಸ್ಯವಿದೆ, ಆದರ್ಶವಾದದ ಒಲವಿದೆ, ಅವರು ತಂತ್ರ ಕೌಶಲಗಳತ್ತ ಹೆಚ್ಚಿನ ಒತ್ತು ಕೊಡಲಿಲ್ಲ ಆದರೆ ಶೈಲಿಯಲ್ಲಿ ಹೊಸತನದ ಜೊತೆಗೆ ಚುರುಕುತನ ತಂದು ಭಾಷಯ ಲಾಲಿತ್ಯ ಬೆಳಸಿದರು.

"ನನ್ನ ಕಥೆಗಳಲ್ಲಿ ಕಾಣಬರುವ ವಿಚಾರ, ತಂತ್ರ ಹಾಗೂ ಕಲೆಗಾರಿಕೆಯನ್ನು ಅವುಗಳ ಮಾನದಂಡದಿಂದ ಅಳೆಯ ಬೇಕಲ್ಲದೆ. ಪರಂಪರಾಗತವಾದ ಮಾನದಂಡದಿಂದಾಗಲಿ ಅಳೆಯ ಬಾರದು"7,ಎಂದು ಅವರೆ ಹೇಳಿದ್ದಾರೆ. ಅವರ ಕಥೆಗಳ ಕರಿತು ವಿಮರ್ಶಕರ ಒಂದು ಮಾತನ್ನು ಗಮನಿಸುವುದಾದರೆ. "ಅ.ನ.ಕೃರು ಎಂಬತ್ತಕ್ಕಿಂತಲೂ ಹೆಚ್ಚು ಕಥೆಗಳನ್ನು ಬರೆದರೂ ಅವುಗಳಲ್ಲಿ ಯಾವುದಕ್ಕೂ ಅಗ್ರ ಪಂಕ್ತಿಯಲ್ಲಿ ಸ್ಥಾನ ಸಿಗದೆ ಇದ್ದರು ಈ ಪ್ರಕಾರದ ಆದ್ಯರಲ್ಲೊಬ್ಬರೆಂದು ಅ.ನ.ಕೃಗೆ ಮನ್ನಣೆ ಸಲ್ಲಬೇಕು. ಸಣ್ಣಕಥೆಗೆ ಅಸಂಖ್ಯೆ ಓದುಗರನ್ನು ಒದಗಿಸಿಕೊಟ್ಟವರಲ್ಲದೆ, ಅವರು ಮುಂಬರುವವರಿಗೆ ಅನೇಕ ಬಾಗಿಲುಗಳನ್ನು ತೆರೆದರು"8 ಎಂದು ಡಾ. ಜಿ.ಎಸ್.ಆಮೂರರು ಹೇಳಿದ್ದಾರೆ.

ಅದು ಏನೇ ಇದ್ದರು ಅ.ನ.ಕೃ ಅವರ ಕಥೆಗಳ ಕುರಿತಾಗಿ 'ಜೀವನದಲ್ಲಿ ಎಷ್ಟು ವೈವಿದ್ಯೆ ವಿದೆಯೋ ಕೃಷ್ಣರಾಯರ ಕಥೆಗಳಲ್ಲಿ ಅಷ್ಟು ವೈವಿದ್ಯೆ ವಿದೆ. ಇವರ ಕಲೆಯ ಕನ್ನಡಿಯಲ್ಲಿ ಬಾಳನ ಸಪ್ತ ಸಹಸ್ರ ವರ್ಣಗಳೂ ಬಿಂಬಿತವಾಗಿವೆ. ಜೀವನಕ್ಕೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಕೃಷ್ಣರಾಯರು ತಮ್ಮ ಕಲೆಯ ಕಣ್ಣಿನಲ್ಲಿ ಕಂಡಿದ್ದಾರೆ. ಮಾನವನ ಜೀವನವನ್ನು ಅಲುಗಿಸುವ ಎಲ್ಲಾ ರಾಗಗಳು, ಭಾವಗಳು, ಬಯಕೆಗಳು, ಅತೃಪ್ತಿಗಳನ್ನು ಕೃಷ್ಣರಾಯರು ತಮ್ಮ ಕಥೆಗಳಲ್ಲಿ ವಿವರಿಸಿದ್ದಾರೆ, ವಿಶ್ಲೇಷಿಸಿದ್ದಾರೆ, ವಿಮರ್ಶಿಸಿದ್ದಾರೆ. ಜೀವನದ ನಗೆ, ನೋವು, ಹಾಸ್ಯ, ವಿಷಾದಗಳನ್ನು ವಾಸ್ತವವಾಗಿ ಚಿತ್ರಿಸಿದ್ದಾರೆ', ಎನ್ನುವ ತ.ರಾ.ಸು. ಅವರ ಮಾತು ಒಂದೇ ಕೊನೆಯಲ್ಲಿ ಉಳಿಯುದು.

7.ಪಾಪ ಪುಣ್ಯ–ಮುನ್ನುಡಿ
8.ಕನ್ನಡ ಕಥನ ಸಾಹಿತ್ಯ: ಸಣ್ಣಕಥೆ–ಪುಟ–100

ಪರಾಮರ್ಶನ ಗ್ರಂಥಗಳು

1. ಡಾ.ಜಿ.ಎಸ್.ಆಮೂರ–ಕನ್ನಡ ಕಥನ ಸಾಹಿತ್ಯ: ಸಣ್ಣಕಥೆ.
2. ಡಾ.ಎಚ್.ಆರ್.ತಿಮ್ಮೇಗೌಡ–ಕನ್ನಡ ಪ್ರಗತಿಶೀಲ ಸಾಹಿತ್ಯದ ಸಣ್ಣ ಕಥೆಗಳು.
3. ಕನ್ನಡ ಮತ್ತು ಸಂಸ್ಕೃತಿ ಇಲಾಖೆ–ಅ.ನ.ಕೃ ಸಾಹಿತ್ಯ ಶ್ರೇಣಿ ಸಂಪುಟ2.
4. ಡಾ.ಎಸ್.ವಿದ್ಯಾಶಂಕರ–ಅ.ನ.ಕೃ ಬದುಕು–ಬರಹ.
5. ಶಾ.ಮಂ.ಕೃಷ್ಣರಾಯ(ಸಂ)–ಅಮರಚೇತನ.
6. ತ ರಾ ಸು – ಅ.ನ.ಕೃ.

ಮಾಂಗ–ಗಾರೂಡಿ ಸಮುದಾಯದ ವಾಗೆ–ಮುರಳಿ ಪದ್ಧತಿಯ ವಿಶ್ಲೇಷಣೆ

ಡಾ.ಭಾಗ್ಯಶ್ರೀ ಹ.ದೊಡಮನಿ*, ಡಾ. ಲಕ್ಷ್ಮಿದೇವಿ ವಾಯ್*, ರಜೀಯಾ ನದಾಫ್**, ಗಿರಿಜಾ ಅಕ್ಕಿ**
* ಸಹಾಯಕ ಪ್ರಾಧ್ಯಾಪಕಿ, ** ಸಂಶೋಧನಾ ಸಹಾಯಕರು, ಮಹಿಳಾ ಅಧ್ಯಯನ ಕೇಂದ್ರ, ಕ. ರಾ. ಮ. ವಿ. ವಿ. ವಿಯಪುರ

ಮಾಂಗ–ಗಾರೂಡಿ ಎಲಿಖುಮು ಪರಿಶಿಷ್ಟ ಜಾತಿಗೆ ಸೇರಲ್ಪಟ್ಟ ಒಂದು ಸಮುದಾಯ. ಈ ಸಮುದಾಯವು ಮೂಲತಃ ಮರಾಠಾ ಸಮುದಾಯಕ್ಕೆ ಸೇ–ರಿದ್ದು. ಆದರೆ ಇವರು ಈ ಮುಂಚೆ ಕಳ್ಳತನ, ದರೋಡೆ, ಕೊಲೆ (ಸುಪಾರಿಕಿಲ್ಲರ್ಸ್) ಮುಂತಾದ ವೃತ್ತಿಗಳನ್ನು ತಮ್ಮ ಉಪಜೀವನಕ್ಕಾಗಿ ರೂಢಿಸಿಕೊಂಡಿದ್ದರು. ಇವರು ಅಲೆಮಾರಿಗಳು. ಸಾಕಷ್ಟು ಬಾರಿ ಕಾರಾಗೃಹ ವಾಸಿಗಳಾಗಿದ್ದರು. ಬ್ರಿಟೀಷರು ಇವರನ್ನು ಸೆಟಲ್‌ಮೆಂಟ್‌ಗಳಲ್ಲಿ ಇರಿಸಿ ಕಾವಲು ಕಾಯುತ್ತಿದ್ದರು. ಈ ಸಮುದಾಯದ ಹಲವಾರು ಪದ್ಧತಿ, ಆಚರಣೆಗಳಲ್ಲಿ ವಾಗೆ–ಮುರಳಿ ಪದ್ಧತಿಯೂ ಕೂಡ ಒಂದು. ಪುರುಷ ಮತ್ತು ಮಹಿಳೆ ಇಬ್ಬರನ್ನು ಸೇವರ ಹೆಸರಿಗೆ ಬಿಡಲಾಗುತ್ತದೆ. ಈ ಪದ್ಧತಿಯು ಸಾಮಾನ್ಯವಾಗಿ ದೇವದಾಸಿ ಪದ್ಧತಿಯಂತೆಯೇ ಇದ್ದರೂ ಹೇಗೆ ಭಿನ್ನವಾಗಿದೆ ಎಂಬುದನ್ನು ತಿಳಿಸುವುದೇ ಈ ಪ್ರಬಂಧದ ಮೂಲ ಉದ್ದೇಶವಾಗಿದೆ.

ಪ್ರವೇಶಿಕೆ: ಮಾಂಗ–ಗಾರೂಡಿ ಎಂಬುದು ಪರಿಶಿಷ್ಟ ಜಾತಿಗೆ ಸೇರಲ್ಪಟ್ಟ ಒಂದು ಸಮುದಾಯ. ಈ ಸಮುದಾಯವು ಮೂಲತಃ ಮರಾಠಾ ಸಮುದಾಯಕ್ಕೆ ಸೇರಿದ್ದು. ಆದರೆ ಇವರು ಈ ಮುಂಚೆ ಕಳ್ಳತನ, ದರೋಡೆ, ಕೊಲೆ (ಸುಪಾರಿಕಿಲ್ಲರ್ಸ್) ಮುಂತಾದ ವೃತ್ತಿಗಳನ್ನು ತಮ್ಮ ಉಪಜೀವನಕ್ಕಾಗಿ ರೂಢಿಸಿಕೊಂಡಿದ್ದರು. ಇವರು ಅಲೆಮಾರಿಗಳು. ಸಾಕಷ್ಟು ಬಾರಿ ಕಾರಾಗೃಹ ವಾಸಿಗಳಾಗಿದ್ದರು. ಈ ಸಮುದಾಯದ ಹಲವಾರು ಪದ್ಧತಿ, ಆಚರಣೆಗಳಲ್ಲಿ ವಾಗೆ–ಮುರಳಿ ಪದ್ಧತಿಯೂ ಕೂಡ ಒಂದು. ಈ ಪದ್ಧತಿಯು ಸಾಮಾನ್ಯವಾಗಿ ದೇವದಾಸಿ ಪದ್ಧತಿಯಂತೆಯೇ ಇದ್ದರೂ ಹೇಗೆ ಭಿನ್ನವಾಗಿದೆ ಎಂಬುದನ್ನು ತಿಳಿಸುವುದೇ ಈ ಪ್ರಬಂಧದ ಮೂಲ ಉದ್ದೇಶವಾಗಿದೆ. ಈ ಮೊದಲು ಮಾಂಗ–ಗಾರೂಡಿಯವರು ಅಪರಾಧಿಗಳಾಗಿದ್ದು ಬರಬರುತ್ತಾ ಬದಲಾವಣೆಯಾದವರು. ಇವರು ಅಲಾಮಾರಿಗಳಾಗಿದ್ದು ಸ್ವಾತಂತ್ರ್ಯ ಪೂರ್ವದಲ್ಲಿಯೇ ಇವರು ವಿಜಯಪುರಕ್ಕೆ ಬಂದು ಒಂದು ಕಡೆ ನೆಲೆನಿಂತರು. ಇವರನ್ನು ಅಧ್ಯಯನಕ್ಕೆ ಒಳಪಡಿಸಿದಾಗ ವಿಶೇಷವಾಗಿ ಕಂಡದ್ದು ಅವರಲ್ಲಿರುವ ವಾಗೆ – ಮುರಳಿ ಪದ್ಧತಿ.

ಅಧ್ಯಯನದ ಉದ್ದೇಶಗಳು:

1. ಈ ಪದ್ಧತಿಯ ಆಚರಣೆಯ ಕುರಿತು ಆಳವಾಗಿ ತಿಳಿಯುವುದು.
2. ಮಾಂಗ–ಗಾರೂಡಿಯವರ ಈ ವಾಗೆ–ಮುರಳಿ ದೇವರಿಗೆ ಬಿಡುವ ಪದ್ಧತಿಯಾಗಿದ್ದರೂ ಹೇಗೆ ಭಿನ್ನವಾಗಿದೆ ಎಂಬುದನ್ನು

ಗುರ್ತಿಸುವುದು.
೩. ಇಲ್ಲಿ ಮಹಿಳೆ ಮತ್ತು ಪುರುಷರ ಮೇಲೆ ಹೇರಲಾಗಿರುವ ನಿರ್ಬಂಧಗಳನ್ನು ಅರಿಯುವುದು.
4.ವಾಗೆ–ಮುರಳಿಯರ ಸಮಸ್ಯೆಗಳನ್ನು ತಿಳಿಯುವುದು.

ಅಧ್ಯಯನದ ಕ್ಷೇತ್ರ: ಮಾಂಗ–ಗಾರೋಡಿಯವರು ಮೂಲತಃ ಮಹಾರಾಷ್ಟ್ರದವರು. ಆದರೆ ಭಾರತದ ವಿವಿಧ ರಾಜ್ಯಗಳಾದ ಪ್ರಮುಖವಾಗಿ ಮಹಾರಾಷ್ಟ್ರ, ಮಧ್ಯಪ್ರದೇಶ, ಕರ್ನಾಟಕ, ಛತ್ತೀಸಗಢ, ತೆಲಂಗಾಣ, ಗುಜರಾತ, ರಾಜಸ್ಥಾನ, ಗೋವಾ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ವಾಸವಾಗಿದ್ದಾರೆ. ಈ ಅಧ್ಯಯನಕ್ಕೆ ವಿಜಯಪುರ ಜಿಲ್ಲೆಯ ವಿಜಯಪುರ ತಾಲ್ಲೂಕಿನ ನಗರ ಪ್ರದೇಶದ ರಾಣಿ ಬಗೀಚ(ದರ್ಬಾರ ಹೈಸ್ಕೂಲ್‌ಎದುರಿಗೆ)ನ ಮಾಂಗ–ಗಾರೂಡಿ ಓಣಿಯನ್ನು ಅಧ್ಯಯನ ಕ್ಷೇತ್ರವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದೊಂದು ಕೊಳಚೆ ಪ್ರದೇಶ, ಹಂದಿಗಳ ಬೀಡು ಪ್ರದೇಶ ಎಂದೇ ಹೆಸರುವಾಸಿಯಾಗಿದೆ.

ರಾಣಿ ಬಗೀಚ ಮಾಂಗ–ಗಾರೂಡಿ ಓಣಿ

ವೈಧಾನಿಕತೆ: ಮಾಂಗ–ಗಾರೂಡಿಯರಲ್ಲಿ ಒಟ್ಟು ೩೦ ವಾಗೆಯರಿದ್ದರೆ, ೨೦ ಮಹಿಳೆಯರು ಮುರಳಿಯರಾಗಿದ್ದಾರೆ. ಈ ಅಧ್ಯಯನಕ್ಕಾಗಿ ಅವಲೋಕನ, ಸಂದರ್ಶನ, ಗುಂಪು ಚರ್ಚೆ ಮುಖಾಂತರ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಮಾಂಗ–ಗಾರೂಡಿ : ಈ ಜಾತಿಗೆ ಸೇರಿದವರನ್ನು ಮಾಜಿ ಅಪರಾಧಿಗಳೆಂದು ಕರೆಯುತ್ತಾರೆ. ಬ್ರಿಟೀಷರ ಕಾಲದಲ್ಲಿ ಸಾಕಷ್ಟು ಜನರನ್ನು ಅವರ ವೃತ್ತಿಗಳಾದ ಕೊಲೆ, ಸುಲುಗೆ, ಕಳ್ಳತನದ ಅಪರಾಧದಲ್ಲಿ ಕಾರಾಗೃಹಕ್ಕೆ ಹಾಕಲಾಗುತ್ತಿತ್ತು. ಚಿಕ್ಕ–ದೊಡ್ಡ ಗುಂಪುಗಳಾಗಿ ಕಳ್ಳತನ ಸುಲುಗೆ ಮಾಡಲು ಹೋಗುತ್ತಿದ್ದರು. ಹೆಂಗಸರು ಗಂಡಸರು ಇಬ್ಬರೂ ಕಳ್ಳತನ ಮಾಡುವುದನ್ನು ರೂಢಿಸಿಕೊಂಡಿದ್ದರು. ಹೆಂಗಸರು ಹಗಲಲ್ಲಿ ಕಳ್ಳತನ ಮಾಡಿದರೆ ಗಂಡಸರು ರಾತ್ರಿಯಲ್ಲಿ ಹೆಚ್ಚಾಗಿ ಕಳ್ಳತನ ಮಾಡುತ್ತಿದ್ದರು.

ಹೀಗಾಗಿ ಬ್ರಿಟಿಷರು ಇವರನ್ನು ಸೆಟಲ್‌ಮೆಂಟ್ ಎರೀಯಾಗಳಲ್ಲಿ ಇರಿಸಿ ಅವರ ಮೇಲೆ ಕಣ್ಣಿಡುತ್ತಿದ್ದರು. ಅವರ ಮೂಲ ವೃತ್ತಿಯನ್ನು ಬಿಟ್ಟು ಸುಧಾರಿಸಿ ಒಳ್ಳೆ ಜೀವನ ನಡೆಸಲಿ ಎಂದು ಅವಕಾಶವನ್ನು ನೀಡಲಾಗಿತ್ತು. ನಂತರ ಇವರು ಕಡು ಬಡವರಾಗಿದ್ದರಿಂದ ಬ್ರಿಟಿಷರು ಈ ಜಾತಿಯನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಿದರು. ಅಂದಿನಿಂದ ಮಾಂಗ–ಗಾರೂಡಿ ಎಂಬುದು ಎಸ್.ಸಿ ಆಗಿ ಗುರ್ತಿಸಲ್ಪಡುತ್ತಿದೆ. ಪರಿಶಿಷ್ಟ ಜಾತಿಯವರಿಗೆ ದೊರೆಯುವ ಎಲ್ಲಾ ಸವಲತ್ತನ್ನು ಇವರನ್ನು ಪಡೆಯಬಹುದಾಗಿದೆ.

ವಾಗೆ–ಮುರಳಿ ಪದ್ಧತಿ:

ಜೆಜೂರಿ ಖಂಡೋಬಾ ದೇವಸ್ಥಾನ

ವಾಗೆ ಎಂದರೆ ಗಂಡು ಮಕ್ಕಳನ್ನು ದೇವರಿಗೆ ಬಿಡುವುದು, ಮುರಳಿಯೆಂದರೆ ಹೆಣ್ಣು ಮಕ್ಕಳನ್ನು ದೇವರಿಗೆ ಬಿಡುವುದು ಎಂದರ್ಥ. ಮಾಂಗ–ಗಾರೂಡಿ ಯವರ ಮನೆ ದೇವರು ಖಂಡೋಬಾ ಮತ್ತು ಅಂಬಾಭವಾನಿ. ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರೂ ಎರಡು ದೇವರನ್ನು ಪೂಜಿಸಬಹುದಾಗಿದೆ. ಯಾರ ಮನೆಯಲ್ಲಿ ಸಾಂಪ್ರದಾಯಿಕವಾಗಿ ಈ ಪದ್ಧತಿಯನ್ನು ಆಚರಿಸಿಕೊಂಡು ಬರುತ್ತಿದ್ದಾರೋ ಮತ್ತು ದೇವರಿಗೆ ಹರಿಕೆ ಹೊತ್ತವರು ತಮ್ಮ ಮನೆಯ ಹೆಣ್ಣು–ಗಂಡು ಮಕ್ಕಳನ್ನು ದೇವರಿಗೆ ಬಿಡುತ್ತಾರೆ.

ಆಚರಣೆ: ವಾಗೆ – ಮುರಳಿಗೆ ಒಂದೇ ರೀತಿಯ ಆಚರಣೆ ಇರುತ್ತದೆ. ಮಹಾರಾಷ್ಟ್ರದ ಪೂಣೆಯಿಂದ 48 ಕಿ.ಮೀಟರ್ ದೂರದಲ್ಲಿರುವ ಗುಡ್ಡದ ಜೆಜೂರಿ ಖಂಡೋಬಾ ದೇವರಿಗೆ ನಡೆದುಕೊಳ್ಳುತ್ತಾರೆ.

ಖಂಡೋಬಾ ಮಾರ್ತಾಂಡಾ ಭೈರವ, ಮಲ್ಹಾರ ಎಂದೇ ಪ್ರಸಿದ್ಧಿ ಪಡೆದಿದೆ. ಪ್ರತಿ ವರ್ಷ ಎಪ್ರೀಲ್ 2 ರಂದು ಅಲ್ಲಿ ಪೂಜೆಗೆ ಮಾಂಗ–ಗಾರೂಡಿ ಯವರು ಹೋಗುತ್ತಾರೆ. ವರ್ಷದಲ್ಲಿ 6 ಬಾರಿ ಜಾತ್ರೆ ನಡೆಯುತ್ತದೆ. ಇವರು ಯಾವಾಗಾದರೂ ಹೋಗಿ ದರ್ಶನ ತೆಗೆದುಕೊಂಡು ಹೋಗಬಹುದು.

ಪೂಜೆಯ ವಿಧಿ: ಜೆಜೂರಿಗೆ ಹೋಗುವಾಗ ಯಾರು ವಾಗೆ, ಮುರಳ ಆಗುವವರಿರುತ್ತಾರೋ ಅವರು ಬೆಳ್ಳ ಖಂಡೋಬಾ ಮತ್ತು ಕುದುರೆಯನ್ನು ತೆಗೆದುಕೊಂಡು ಹೋಗಬೇಕು. ಜೆಜೂರಿಯಲ್ಲಿ ೨ ಲಕ್ಷ ಮೆಟ್ಟಿಲುಗಳಿವೆ.



ದೇವಸ್ಥಾನಕ್ಕೆ ಹೋಗುವುದಕ್ಕಿಂತ ಮುಂಚೆ ಕರಮಾಯಿ ಎಂಬ ಕೆರೆಯಲ್ಲಿ ಸ್ನಾನ ಮಾಡಿಕೊಂಡು ಪೂಜೆಗೆ ಹೋಗಬೇಕು. ಹಳೆಯ ಮತ್ತು ಹೊಸ ಗುಡ್ಡದಲ್ಲಿ ಪೂಜೆಗಳು ನಡೆಯುತ್ತವೆ. ವಾಗೆ ಆಗಲಿ ಮುರಳ ಆಗಲಿ ದೇವಸ್ಥಾನದಲ್ಲಿರುವ ಪೂಜಾರಿ ಹತ್ತಿರ ಹೋಗಿ ಪೂಜೆ ಮಾಡಿ, ಮುರಳ (ಹೆಣ್ಣು)ಯರು ಆ ಪೂಜಾರಿ (ಅವರ ಗುರು) ಕಡೆಯಿಂದ ದೇವರ ಹೆಸರಿನ ಮೇಲೆ ಮಾಂಗಲ್ಯ ಕಟ್ಟಲಾಗುತ್ತದೆ. ವಾಗ್ಯಾರಿಗೆ ಬೆಳ್ಳಿಯ ಹಾರವನ್ನು ಕೊರಳಲ್ಲಿ ಹಾಕುತ್ತಾರೆ. ಅಂದಿನಿಂದ ಅವರು ವಾಗೆ ಮುರಳ ಆಗುತ್ತಾರೆ.

ಮುರಳ

ವಾಗೆ (ವಾಗ್ಯಾ)

ಪೂಜೆಯ ನಂತರ ಗುಡಿಯ ಮುಂದೆ ನಿಂತು ಭಂಡಾರ ಮತ್ತು ಕೊಬ್ಬರಿಯನ್ನು ಹಾರಿಸಲಾಗುತ್ತದೆ. ೩ ದಿನ ಪೂಜೆ ನಡೆಯುತ್ತದೆ. ವಾಗೆ ಮುರಳಯರು ೭ ದಿನ ಪೂಜೆಗೆ ಗುಡ್ಡ ಹತ್ತಿ ಹೋಗಬೇಕಾಗುತ್ತದೆ. ಅಲ್ಲಿಂದ ಬಂದ ಮೇಲೆ ರವಿವಾರದಂದು ಮನೆಯ ಮುಂದೆ ಪೂಜೆ ಇಟ್ಟುಕೊಳ್ಳುತ್ತಾರೆ. ಹನುಮಾನ ಜಯಂತಿ ದಿನ ಪೂಜೆ ಮಾಡಿಸುತ್ತಾರೆ.

ಖಂಡೋಬಾ ದೇವರ ಪೂಜೆ ಮಾಡಿಸಿ ಜನರಿಗೆ ಊಟ ಹಾಕಿಸುತ್ತಾರೆ. ಯಾರೂ ವಾಗೆ ಆಗಿರುತ್ತಾರೋ ಅವರು ಒಂದು ವರ್ಷ ಬಿಟ್ಟು ವರ್ಷ ಜಾಗರಣಾ ಎಂಬ ಕಾರ್ಯಕ್ರಮ ಮಾಡುತ್ತಾರೆ. ಆ ದಿನದಂದು ವಾಗೆ ಮುರಳ ಇಬ್ಬರೂ ಪೂಜೆಯಲ್ಲಿ ಭಾಗವಹಿಸುತ್ತಾರೆ. ರಾತ್ರಿ ಇಡೀ ವಾಗೆ ಮುರಳ ಎಲ್ಲರೂ ಒಟ್ಟು ಗೂಡಿ ಹಾಡು, ನೃತ್ಯ, ಗೊಂದಲಾ ಹಚ್ಚಿಕೊಂಡು ಎಚ್ಚರವಿರುತ್ತಾರೆ. ಮುರುದಿನ ಬೆಳಗ್ಗೆ ಸೂರ್ಯ ಹುಟ್ಟುವುದಕ್ಕಿಂತ ಮುಂಚೆನೇ ವಾಗೆ ಆದವರು ದಪ್ಪದಾದ ಕಬ್ಬಿಣದ ಚೈನನ್ನು ನೆರೆದ ಎಲ್ಲ ಜನರೆದುರಿಗೆ ಜಗ್ಗಬೇಕಾಗುತ್ತದೆ. ಜಗ್ಗಿದಾಗ ಆ ಕಬ್ಬಿಣದ ಚೈನು ಕಟ್ಟಾಗಬೇಕು.

ಮುರಳಯಾದವರು ಇಂತಹ ಯಾವ ಪ್ರಯೋಗಗಳಿಗೆ ಒಳಪಡುವುದಿಲ್ಲ. ಪೂಜೆಯ ನಂತರ ೫ ಮನೆಗಳಿಗೆ ದೇವರ ಹೆಸರ ಮೇಲೆ ಬೇಡಬೇಕಾಗುತ್ತದೆ. ಜೋಗ ಬೇಡುವಾಗ ಏಳ ಕೋಟಿ ಜೈ ಮಲ್ಹಾರ ಎಂದು ಕೂಗಿ ಬೇಡುತ್ತಾರೆ. ಇದರ ನಂತರ ಅವರು ಜೋಗ ಬೇಡಬಹುದು ಅಥವಾ ಬಿಡಬಹುದು. ಗಂಡಸರು ರವಿವಾರ ಜೋಗ ಬೇಡೋಕೆ ಹೋಗುತ್ತಾರೆ.

ಮಾಂಗ–ಗಾರೂಡಿಯರಲ್ಲಿ ವಾಗೆ–ಮುರಳ ಇಬ್ಬರಿಗೂ ಮದುವೆಯಾಗುವ ಅವಕಾಶ ನೀಡಲಾಗಿದೆ. ಮದುವೆಗೆ ಮುಂಚೆ ಜೆಜೋರಿಗೆ ಹೋಗಿ ಗುರುಗಳ ಪರವಾನಗಿ ಪಡೆದು ತನಗೆ ಇಷ್ಟ ಬಂದ ಹುಡುಗನನ್ನು ಮದುವೆಯಾಗಬಹುದು.

ಇವರನ್ನು ಯಾರೂ ಕೀಳಾಗಿ ಕಾಣುವಂತಿಲ್ಲ. ಬೇರೆ ಜಾತಿಯ ಹುಡುಗನನ್ನು ಮದುವೆಯಾದರೆ ಮಾತ್ರ ಈ ಸಮುದಾಯದಲ್ಲಿ ಒಪ್ಪಿಕೊಳ್ಳುವುದಿಲ್ಲ. ಹಾಗೆ ಮದುವೆಯಾಗುವ ಯಾರೇ ಆದರೂ ಅವರನ್ನು ಕೀಳಾಗಿ ಕಾಣಲಾಗುತ್ತದೆ. ಹಾಗೂ ಸಮುದಾಯದ ಯಾವುದೇ ಕಾರ್ಯಗಳಲ್ಲಿ ಅವರು ಭಾಗವಹಿಸುವಂತಿಲ್ಲ. ದೂರ ನಿಂತು ವೀಕ್ಷಿಸಬಹುದಷ್ಟೇ. ಹುಡುಗ ಅಥವಾ ಹುಡುಗಿ ಬೇರೆ ಜಾತಿಗೆ ಸೇರಿದವರಾಗಿದ್ದು ಮಾಂಗ-ಗಾರೂಡಿ ಜಾತಿಗೆ ಸೇರಿಸಿಕೊಳ್ಳುತ್ತಾರೆ. ನಂತರ ಅವರ ಎಲ್ಲ ವಿಧಿ ವಿಧಾನಗಳಲ್ಲೂ ಪಾಲುಗೊಳ್ಳಲು ಅವಕಾಶ ನೀಡಲಾಗುತ್ತದೆ.

ಅಧ್ಯಯನದ ಫಲಿತಗಳು:

* ವಾಗೆ – ಮುರಳಿ ಪದ್ಧತಿಯೂ ದೇವರಿಗೆ ಬಿಡುವ ಪದ್ಧತಿಗಿಂತ ಭಿನ್ನವಾಗಿದೆ.

* ಪೂಜೆಗೆ, ಜೋಗ ಬೇಡುವುದಕ್ಕೆ ಯಾವುದೇ ರೀತಿಯ ಒತ್ತಾಯ ಹೇರುವುದಿಲ್ಲ.

* ಇಲ್ಲಿ ಯಾರುನೂ ಜಡೆ ಬಿಟ್ಟುಕೊಂಡಿಲ್ಲ.

* ಮದುವೆಗೆ ಅವಕಾಶವಿದೆ. ಆದರೆ ಎಷ್ಟೋ ಮಹಿಳೆಯರು ಮದುವೆಯಾಗದೆ ಇರುವುದು ಕಂಡುಬಂದಿದೆ.

* ಮುರಳಿ ವಾಗೆ ಎನ್ನುವಂತಹದು ಒಂದು ಸಂಪ್ರದಾಯವಾಗಿ ಆಚರಿಸುತ್ತಿದ್ದಾರೆ ಬಿಟ್ಟರೆ ಒತ್ತಾಯವಿಲ್ಲ.

* ಈಗಾಗಲೇ ಸಾಕಷ್ಟು ಮರು ಮದುವೆಗಳಾಗಿ ಉತ್ತಮ ಜೀವನ ನಡೆಸಿಕೊಂಡು ಹೋಗುತ್ತಿದ್ದಾರೆ.

* ವಿಧವಾ ಪುನರ್ ವಿವಾಹಕ್ಕೆ ಅವಕಾಶವಿದೆ. ಇದನ್ನು ಮೋತುರ ಎಂದು ಕರೆಯಲಾಗುತ್ತದೆ.

ಉಪಸಂಹಾರ: ಈ ಪದ್ಧತಿ ತುಂಬಾ ಭಿನ್ನವಾಗಿದ್ದು ಮಹಿಳೆಯರು ಆಸಕ್ತಿ ಇದ್ದರೆ ಮಾತ್ರ ಆಚರಿಸಲು ಅವಕಾಶ ನೀಡಲಾಗಿದೆ. ಇಲ್ಲಿ ಯಾವುದೇ ರೀತಿಯ ದುರುಪಯೋಗಕ್ಕೆ ಅವಕಾಶವಿಲ್ಲದಿರುವುದು ಸಂತೋಷದ ವಿಷಯವಾಗಿದೆ. ಇವರು ಸರ್ಕಾರಿ ಉದ್ಯೋಗವನ್ನು ಪಡೆದುಕೊಂಡಿದ್ದರೂ ಅವರ ಬದುಕು ಮಾತ್ರ ಅಷ್ಟೊಂದು ಬದಲಾವಣೆ ಕಂಡುಬಂದಿಲ್ಲ. ಊರೆಲ್ಲಾ ಸ್ವಚ್ಛ ಮಾಡುವ ಇವರು ತಮ್ಮ ಮನೆಯ ಎದುರಿಗೆ ಮಾತ್ರ ಕಸ ತೆಗೆಯುವುದಿಲ್ಲ. ತುಂಬಾ ಕಸ ಕಡ್ಡಿ, ನೀರು ಹರಿ ಬಿಡುವುದು, ಅದೇ ಕೊಳಚೆಯಲ್ಲಿಯೇ ಮಕ್ಕಳು ಊಟ ಮಾಡುತ್ತವೆ, ಆಟನೂ ಆಡುತ್ತವೆ. ಈ ಚಿತ್ರಣ ನೋಡಿದಾಗ ಯಾರಿಗಾದರೂ ಸಂಕಟವಾಗಬಹುದು. ಎಷ್ಟೋ ಜನರಿಗೆ ಸರ್ಕಾರದ ಸವಲತ್ತುಗಳು ಕೈಗೆಟುಕದೆ ಬಡವರಾಗಿಯೇ ಬದುಕುತ್ತಿದ್ದಾರೆ. ಇಲ್ಲಿಯೂ ಸ್ವ-ಸಹಾಯ ಗುಂಪುಗಳಿವೆ, ಯುವಕರ ಸಂಘಟನೆಗಳಿವೆ. ಇವುಗಳ ಸಹಾಯದಿಂದ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಇಡೀ ಊರನ್ನು ಹಸನು ಮಾಡುವ ಇವರ ಬದುಕು ಹಸನಾಗಲೂ ಎಲ್ಲರ ಪ್ರಯತ್ನ ಮುಖ್ಯವಾಗಿದೆ.

ಜನಪದರಲ್ಲಿ ಮಳೆಯ ಆಚರಣೆಗಳು

ಗೀತಾಬಾಯಿ ಬಡಿಗೇರ
ಸಂಶೋಧನಾ ವಿದ್ಯಾರ್ಥಿನಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ- 583276

ನೀರು ಎಲ್ಲಿಯು ಜನಪದರ ಜೀವಾಳ ಅದು ಸಕಲ ಚರಾಚರಗಳ ಸೃಷ್ಟಿಯ ಸಲಕೇತವು ಆಗಿದೆ. ಪ್ರಪಂಚದೊಲಿಯು ಜೀವಿಯು ಹುಟ್ಟು ಬೆಳವಣಿಗೆಯಲ್ಲಿ ನೀರು ಅತಿ ಮಹತ್ವದ ಪಾತ್ರ ಪಡೆದಿದೆ. ನೀರು ಭೂಮಿಯ ಮೇಲಿನ ಜೀವ ದ್ರವ್ಯವಾದರೆ ಮಳೆ ಆಕಾಶದಿಂದ ಭೂಮಿಗೆ ಬರುವ ಜೀವ ದ್ರವ್ಯವಾಗಿದೆ. ಒಂದರದು ಊರ್ಧ್ವಮುಖ ಚಲನೆಯಾದರೆ ಮತ್ತೊಂದರದು ಅಧೋಮುಖ ಚಲನೆಯಾಗಿದೆ. ಇವು ಎರಡರ ಸಲಿಯೋಗವೇ ಭಾರತೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಸಾಲಿಸ್ಕೃತಿಕ ನಡೆಗಳನ್ನು ನಿರ್ಧರಿಸುತ್ತವೆ.

'ಮಳೆ' ಎಲ್ಲಿಯು ಈ ಅರ್ಥದಲ್ಲಿ ಜನಪದರಲ್ಲಿ ಹಲವು ಆಚರಣಾತ್ಮಕ ರೂಪಗಳಲ್ಲಿ ಮೈದಾಳಿದೆ. ಮಳೆ ಆಚರಣೆ ಮತ್ತು ಬೆಳೆಗೂ ಭೂಮಿಗೂ ಮತ್ತು ಹೆಣ್ಣಿಗೂ ಒಂದು ಜೈವಿಕ ಸಾತತ್ಯ ಇರುವುದು ಗಮನಿಸುವಂತಹದ್ದು ಮಳೆಯ ಕಾರಣದಿಂದಾಗಿ ಭೂಮಿಯ ಮೇಲಿನ ಮನುಷ್ಯ, ಮೃಗ, ಪಶು, ಪಕ್ಷಿಗಳಿಗೆ ಅನ್ನ, ಆಹಾರಗಳು ದೊರಕುತ್ತವೆ. ಇಂತಹ ವಿಸ್ಮಯಗಳನ್ನು ಜನಪದರು ಆಚರಣಾತ್ಮಕ ರೂಪಗಳಲ್ಲಿ ಆಚರಿಸುತ್ತ ಬಂದಿದ್ದಾರೆ. ಇವುಗಳಲ್ಲಿ ಪ್ರಧಾನವಾಗಿ ಮಣ್ಣೆತ್ತಿನ ಪೂಜೆ, ಹುತ್ತದ್ದಪ್ಪನ ಪೂಜೆ, ಗುಳ್ಳವ್ವನ ಪೂಜೆ, ಸೀಗಿ, ಗೌರಿ, ಚೋಕುಮಾರ, ಗಣೇಶ ಇಂಥ ಹಲವು ಆಚರಣೆಗಳು ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತವೆ. ಇವುಗಳ ಕುರಿತು ಸಾಮಾಜಿಕ ಹಾಗೂ ಸಾಲಿಸ್ಕೃತಿಕ ಹಾಡುಕಾಟ ನನ್ನ ಈ ಪ್ರಬಂಧದ ಉದ್ದೇಶವಾಗಿದೆ. ಮಳೆ, ಭೂಮಿ, ಮನುಷ್ಯ, ಪ್ರಾಣಿ, ಸಸ್ಯ, ಹೀಗೆ ಇಡಿ ಮೃಗಗಳ ನೆಲ್ಲ ಜೀವಜಾಲವೇ ಮಳೆಯಿಂದಾಗಿ ಕ್ರಿಯಾಶೀಲವಾಗುತ್ತದೆ. ಇದೊಂದು ಜೈವಿಕ ವಿಸ್ಮಯವಾಗಿದೆ ಎಲ್ಲಿಯು ವಿಶಿಷ್ಟ ಸಲಗತಿ.

ಮಳೆಯ ಆಚರಣೆಗಳು: ಜೈತ್ರ ಮಾಸದ ಮೊದಲ ದಿನ ಯುಗಾದಿ ಪಾಡ್ಯ ಹೊಸ ಯುಗದ ಆರಂಭ ಹೊಸ ಸಲಿವತ್ಸರ ಅರವತ್ತು ಸಲಿವತ್ಸರಗಳು ಹೊರಳಿ ಹೊರಳಿ, ಮರಳಿ, ಮರಳಿ ಬರುವ ಯುಗದ ಆದಿಯಿಯು ಯುಗಾದಿ ಈ ದಿನದಂದು ವಸಂತ ಮಾಸ ಆಗಮನ ಜೈತ್ರದ ಚಿಗುರಿಗೆ ವಸಂತ ಮಾಸದ ಶಿಲಿಗಾರ ಸೌಂದರ್ಯಗಳು ಸಿರಿತನ ಭೂಮಿ ತಾಯಿ ಮಡಿಲಿಗೆ ಹಸಿರು ಹೊನ್ನಿನ ಸೀರೆಯು ಉಡಿಸಿ ತೊಡುಗೆಯು ಸಲಭ್ರಮ ಹೊಸ ಯುಗದ ಆದಿ ಎಂದು ಹೇಳುವರು. ಯುಗಾದಿಯು ಪಾಡ್ಯದ ದಿನದಂದು ಹೊಸ ಮಳೆಗಳು ಆರಂಭವಾಗುವು ಒಟ್ಟು 27 ನಕ್ಷತ್ರಗಳದ್ದು ಅವುಗಳನ್ನೆ ಮಳೆ ಹೆಸರಿನಿಂದ ಸಾಂಪ್ರದಾಯಿಕವಾಗುತ್ತವೆ. ಈ ದಿನ ಮೊದಲ ಮಳೆಯಾದ ಅಶ್ವಿನಿ ಮಳೆ ಆರಂಭವಾಗುವುದು.

ತುಂಬಿದ ಕೊಡ ಪೂಜೆ : ಉತ್ತರಕರ್ನಾಟಕದ ಭಾಗದಲ್ಲಿ ಯಾವ ಮಳೆ ಹೆಚ್ಚು ಬರುತ್ತೆ ಯಾವ ಮಳೆ ಕಡಿಮೆ ಪ್ರಮಾಣದಲ್ಲಿ ಬರುತ್ತದೆ ಎಂದು ಮೊದಲ ವಿವಿಧ ರೀತಿಯ ಭವಿಷ್ಯ ಸೂಚನೆಗಳ ಮೂಲಕ ತಿಳಿದುಕೊಳ್ಳುತ್ತಾರೆ. ತಮ್ಮ ಊರಿನ ದೇವರ ಜಾತ್ರೆ, ಪಲ್ಲಕ್ಕಿ, ಉತ್ಸವ ನೆರವೇರುವ ಸಂದರ್ಭದಲ್ಲಿ ಐದು ಮಂದಿ ಮುತ್ತೈದೆಯರು ತುಂಬಿದ ಕೊಡದ ಮೇಲೆ ತೆಂಗಿನಕಾಯಿ ಇರಿಸಿ ಕೊಡದ ಕಂಠಕ್ಕೆ ಎಲ್ಲ ತರದ ಕೊರಳ ಸರಗಳನ್ನು ಹಾಕಿ ಸಿಂಗರಿಸುತ್ತಾರೆ. ಕುಂಕುಮ, ವಿಭೂತಿ ಹಚ್ಚಿ, ಐದು ಜನ ಮುತ್ತೈದೆಯರು ಪೂಜಾ ವಿಧಿವಿಧಾನಗಳನ್ನು ಮುಗಿಸುತ್ತಾರೆ. ನಂತರ ಮುತ್ತೈದೆಯರು ಒಬ್ಬೊಬ್ಬರಾಗಿ ಕೊಡದ ಕಂಠವನ್ನು ಹಿಡಿದು ತಿರುವಿದಾಗ ಕೊಡ ತನ್ನ ಮೈಸುತ್ತ ಐದು ಸುತ್ತು ಬಿಡದೆ ಸುತ್ತು ಹಾಕಿದರೆ ಐದು ದಿನಗಳಲ್ಲಿ ಮಳೆಯಾಗುವುದು1 ಖಂಡಿತ ಎಂದು ಜನಪದರು ಹೇಳುತ್ತಾರೆ.

ಕಾರ ಹುಣ್ಣಿಮೆ ಮಣ್ಣು ಪೂಜೆ : ಉತ್ತರ ಕರ್ನಾಟಕದಲ್ಲಿ ಗ್ರಾಮೀಣ ಹಬ್ಬಗಳು ಮಣ್ಣು ಪೂಜೆಗೆ ಅಗ್ರ ಸ್ಥಾನ ನೀಡಿವೆ. ಮಳೆಗಾಲವು ಹಬ್ಬಗಳ ತವರು ಮನೆ. ಕಾರಹುಣ್ಣಿಮೆ, ಮಣ್ಣು ಪೂಜೆಯ ಮೊದಲ ಹಬ್ಬ. ಭೂ ತಾಯಿಯ ಮಡಿಲು ತೊಯ್ಯುವ ಕಾಲ ಕಾರ್ಮೋಡ ಮುಗಿಲಲ್ಲಿ ಕಾರ್ಮಳೆ, ನೆಲದಲ್ಲಿ ಕಾರ ಹುಣ್ಣಿಮೆ ಬಂತು. ಜಗದಲ್ಲಿ ಮೊದಲ ಮುಂಗಾರು ಮಳೆಯ ಮೊದಲ ಹಬ್ಬ ಮಣ್ಣು ಕೆಸರಾಗುವ ಕಾಲ. ಎತ್ತುಗಳನ್ನು ಸಿಂಗರಿಸಿ ಮೈ ತುಂಬ ಗುಲ್ಲಕೊಟ್ಟು, ಗೆಜ್ಜೆ ಹಾಕಿ, ಕೊಂಬಿಗೆ ಬಣ್ಣ ಹಚ್ಚಿ ಮೆರವಣಿಗೆ ಮಾಡುವ ಹಬ್ಬ. ಬಿಳಿ ಎತ್ತು ಮತ್ತು ಕೆಂದೆತ್ತುಗಳನ್ನು ಕರಿ ಹರಿಯುವ ಮೂಲಕ ಬೆಳೆಯ ಭವಿಷ್ಯ ನಿರ್ಧರಿಸುವುದಾಗಿದೆ. ಕೆಂದೆತ್ತು ಗೆದ್ದರೆ, ಮುಂಗಾರಿ, ಬೆಳೆಗಳು ಬಿಳಿಯೆತ್ತು ಗೆದ್ದರೆ ಹಿಂಗಾರಿ ಬೆಳೆಗಳು2 ಚೆನ್ನಾಗಿ ಬೆಳೆಯುವು ಎಂಬುದು ಗ್ರಾಮೀಣ ಜನತೆಯ ನಂಬಿಕೆಯಾಗಿದೆ.

ಗುಳ್ಳವ್ವನ ಆಚರಣೆ : ಗುಳ್ಳವ್ವ ಭೂಮಿ ತಾಯಿಯ ಪ್ರತೀಕವಾಗಿದ್ದಾಳೆ. ಮಣ್ಣೆತ್ತಿನ ಅಮವಾಸ್ಯೆಯಿಂದ ನಾಲ್ಕು ಮಂಗಳವಾರ ದಂದು ಬಾಲಮುತ್ತೈದೆಯರು, ಮುತ್ತೈದೆಯರೂ ಗುಂಪು ಗುಂಪಾಗಿ ಊರ ಮುಂದಿನ ಹೊಳೆ, ಹಳ್ಳ, ಕೆರೆ, ಅಥವಾ ಹೊಲಕ್ಕೋ ಹೋಗುತ್ತಾರೆ. ಹೋಗುವಾಗ ಕುರುಪಿ, ಬುಟ್ಟಿ, ಅಳ್ಳು, ಕಡ್ಲಿ, ಮುಂತಾದ ಪೂಜಾ ಸಾಮಗ್ರಿಗಳನ್ನು ಮತ್ತು ತಿಂಡಿ ತಿನಿಸುಗಳನ್ನು ಕಟ್ಟಕೊಂಡು ಹೋಗುತ್ತಾರೆ. ಮಣ್ಣಿಗೆ ನೀರು ಹಾಕಿ ಮಿಜ್ಜಿ ಉಂಡೆಯಾಕಾರ ಮಾಡಿ ಅದಕೆ ಜಾಲಿಹೂ, ಗುಲಗಂಜಿ, ಕುಸುಬಿ ಕಾಳನ್ನು ಚುಚ್ಚಿ ಸಿಂಗರಿಸುತ್ತಾರೆ. ಪೂಜೆ ಮಾಡಿ ಈ ಉಂಡೆಗಳನ್ನು ಬುಟ್ಟಿಯಲ್ಲಿ ಇಟ್ಟುಕೊಂಡು ಹಾಡುತ್ತ ಮನೆಗೆ ಬರುತ್ತಾರೆ. ಉತ್ತರ ಕರ್ನಾಟಕದಲ್ಲಿ ಜನಪ್ರಿಯತೆ ಗಳಿಸಿರುವ ಹಬ್ಬ ಇದಾಗಿದೆ.3

ಮಳೆಯಪ್ಪನ ಮೆರವಣಿಗೆ : ಹುಡುಗರೆಲ್ಲರೂ ಸೇರಿ ಜೇಡಿ ಮಣ್ಣಿನಿಂದ ಮಳೆರಾಯನ ವಿಗ್ರಹವನ್ನು ಮಾಡಿ, ಅದನ್ನು ಹಲಗೆ ಮೇಲಿಟ್ಟು ಅರಿಶಿನ ಕುಂಕುಮವಿಟ್ಟು ಕಣಗಲೆ, ಮಲ್ಲಿಗೆ ಹೂವುಗಳಿಂದ ಅಲಂಕರಿಸಿ ಪೂಜೆ ಮಾಡುತ್ತಾರೆ. ಒಬ್ಬ ಬಾಲಕ ಮಳೆರಾಯನ ವಿಗ್ರಹವನ್ನು ಹೊತ್ತು ಕೊಳ್ಳುತ್ತಾನೆ. ಇವನ ಹಣೆಗೂ ಅರಿಶಿನ ಕುಂಕುಮ ಹಚ್ಚಿ ಕೊರಳಿಗೆ ಹೂ ಮಾಲೆಯನ್ನು ಹಾಕಿರುತ್ತಾರೆ. ಹೀಗೆ ಹೆಚ್ಚಿನ ಸಂಖ್ಯೆಯಲ್ಲಿ ಹುಡುಗರೆಲ್ಲರೂ ಸೇರಿಕೊಂಡು ವಿವಿಧ ಹಾಡುಗಳನ್ನು ಹಾಡುತ್ತ ಮಳೆಯಪ್ಪನ ವಿಗ್ರಹವನ್ನು ಹೊತ್ತು ಬಾಲಕನ ಜೊತೆಯಲ್ಲಿ ಮನೆ ಮನೆ ಬಾಗಿಲಿಗೆ ಹೋಗುತ್ತಾರೆ. ಪ್ರತಿಯೊಂದು ಮನೆ ಬಾಗಿಲಿಗೆ ಹೋದಾಗಲೂ ಮನೆಯ ಹೆಣ್ಣು ಮಕ್ಕಳು ಮಳೆಯಪ್ಪನಿಗೆ ನೀರು ಸುರಿದು ಅರಿಶಿನ ಕುಂಕುಮ ಹಚ್ಚಿ ಹೂವಿಟ್ಟು ದವಸ ಧಾನ್ಯ ಅಥವಾ ಹಣದ ರೂಪದ ಕಾಣಿಕೆಯನ್ನು ನೀಡುತ್ತಾರೆ.4

ಊರನ್ನೆಲ್ಲ ಸುತ್ತಿದ ಬಳಿಕ ಸಂಗ್ರಹಿಸಿದ ದವಸ ಧಾನ್ಯವನ್ನೆಲ್ಲ ಮಾರಿ ಬಂದ ಹಣದಿಂದ ಬೆಲ್ಲ, ಕಾಯಿ, ಕರ್ಪೂರ ಊದುಬತ್ತಿಗಳನ್ನು ತಂದು ಊರ ಹೊರಗಿನ ಕೆರೆ, ಇಲ್ಲವೆ ಬಾವಿಯ ಹತ್ತಿರ ಹೋಗಿ ಮಳಯಪ್ಪನ ಪೂಜೆ ಮಾಡಿ ಬಂದವರಿಗೆಲ್ಲ ಪ್ರಸಾದ ಹಂಚಿ ಬಾವಿ ಅಥವಾ ಕೆರೆಯಲ್ಲಿ ಮಳೆರಾಯನನ್ನು ಬಿಟ್ಟು ಬರುತ್ತಾರೆ.

ಗುರ್ಜಿ ಆಚರಣೆ :ಹುಡುಗನೊಬ್ಬನ ತಲೆ ಮೇಲೆ ಹಂಚನ್ನು ದಬ್ಬಾಕಿ ಅದರ ಮೇಲೆ ಸಗಣಿಯ ಉಂಡಿಯನ್ನಿಟ್ಟು ಅದರ ಮೇಲೆ ಕರಿಕೆಯ ಗರಿಯನ್ನು ಚುಚ್ಚುತ್ತಾರೆ. ಆ ಹುಡುಗನನ್ನು ಮನೆ ಮನೆಗೆ ಕರೆದುಕೊಂಡು ಹೋಗುತ್ತಾರೆ. ಊರಿನ ಜನರು ಆ ಹುಡುಗನ ಮೇಲೆ ಒಂದು ಬಿಂದಿಗಿ ತಣ್ಣೀರು ಹಾಕುತ್ತಾರೆ. ಹುಡುಗ ತಿರುಗುತ್ತಾನೆ. ಇನ್ನು ಹಿಂದೆ ಉಳಿದ ಹುಡುಗರು ಹಾಡನ್ನು ಪ್ರಾರಂಭಿಸುತ್ತಾರೆ.

ಗುರ್ಜಿ ಗುರ್ಜಿ
ಎಲ್ಯಾಡಿ ಬಂದಿ
ಹಳ್ಳ ಕೊಳ್ಳ
ತಿರಿಗ್ಯಾಡಿ ಬಂದಿ
ಜಾಲಿಗಿಡ್ಕ ಜೊತ್ಯಾಡಿ ಬಂದಿ
ಮಾವಿನ ಗಿಡ್ಕ ಮುತ್ಯಾಡಿ ಬಂದಿ
ಗುರ್ಜವ್ವ ಗುರ್ಜವ್ವ ೨

ಹೀಗೆ ಹಾಡುತ್ತ ಬಂದು ಓಣಿಯಿಂದ ಮತ್ತೊಂದು ಓಣಿಗೆ ಹೋದಾಗ ಈ ರೀತಿಯಾದ ಪದ ಹಾಡುವರು.

'ಕಾರ ಮಳಯೇ ಕಪ್ಪಟ ಮಳೆಯೇ
ಹಳ್ಳ ಕೊಳ್ಳ ತುಂಬಿಸು ಮಳೆಯೇ
ಸುಣ್ಣಾ ಕೊಡತಿನು ಸುರಿಮಳೆಯೇ
ಹಗ್ಗ ಕೊಡಲೇನು ಜಗ್ಗು ಮಳೆಯೇ
ಇಟ್ಟು ಕೊಡತಿನಿ ಕುಟ್ಟು ಮಳೆಯೇ

ಹೀಗೆ ಐದು ದಿನ ಊರಾಡಿ ನಂತರ ಬಂದ ಜೋಳವನ್ನು ಅನ್ನ ಮಾಡಿ ಪ್ರಸಾದ ರೂಪದಲ್ಲಿ ಎಲ್ಲ ಜನರಿಗೆ ವಿನಿಮಯ ಮಾಡಲಾಗುತ್ತದೆ.

ಭಿಕ್ಷಾಟನೆ :ಉತ್ತರ ಕರ್ನಾಟಕದ ಕೆಲಭಾಗಗಳಲ್ಲಿ ಮಳೆ ಬಾರದಿದ್ದಾಗ ಓಣಿ, ಓಣಿ ತಿರುಗಿ ಭಿಕ್ಷೆ ಎತ್ತಲಾಗುತ್ತದೆ. ಯುವಕನೊಬ್ಬ ಹೆಣ್ಣು ವೇಷ ಹಾಕಿ ಬಗಲಲ್ಲಿ ಮಗುವನ್ನು

ಎತ್ತಿಕೊಂಡು 'ಯವ್ವ ನೀಡವ್ವ ಯಕ್ಕ ನೀಡವ್ವ ಮಕ್ಕಳು ಮರಿ ಹಸಗೊಂಡಾವೆ, ಎಂಬಿತ್ಯಾದಿಯಾಗಿ ಬೇಡುತ್ತ ಹೋಗುತ್ತಾನೆ. ಇಲ್ಲಿ ಗಮನಿಸುವ ಅಂಶ ಎಂದರೆ ಒಂದೊಂದು ಮನೆಯಲ್ಲಿ ಮಳೆ ವಾಸವಾಗಿರುತ್ತದೆನ್ನುವ ನಂಬಿಕೆ 'ಅಶ್ವಿನಿಯು ಹೊಗಾರ ಮನೆಯಲ್ಲಿ, ಕೃತಿಕೆಯ ತಳವಾರರ ಮನೆಯಲ್ಲಿ, ಭರಣಿ ಅಗಸರ ಮನೆಯಲ್ಲಿ, ರೋಹಿಣಿ ಬಣಜಗರ ಮನೆಯಲ್ಲಿ, ಮೃಗಶಿರ ವೈಶ್ಯರ ಮನೆಯಲ್ಲಿ ವಾಸವಾಗಿರುತ್ತದೆ. ಯುವಕರ ಗುಂಪು ಆ ಮನೆಗಳಿಗೆಲ್ಲ ಹೋಗಿ ಭಿಕ್ಷೆ ಎತ್ತುತ್ತವೆ. ಇಲ್ಲಿ ಪ್ರಸ್ತಾಪವಾಗುವ ವಿಷಯ ನೀರು ಹಸಿವು ಮತ್ತು ಅನ್ನ ನಿಲ್ಲದಿದ್ದರೆ ಎಂಥ ಸಮೃದ್ಧಿಯು ಸಾಧ್ಯವಾಗದು.6

ಗುಂಡು ಎತ್ತಿ ಮಳೆ ಕೇಳುವುದು : ತಮ್ಮ ಊರಿನ ಬಸವಣ್ಣನ ದೇವಸ್ಥಾನಕ್ಕೆ ಹೋಗಿ ಅಲ್ಲಿ ದೇವಸ್ಥಾನದಲ್ಲಿ ಇರುವಂತ ಒಂದು ಕರಿ ಗುಂಡನ್ನು ಊರಿನ ಯುವಕ ಎತ್ತಿ ದೇವರಲ್ಲಿ ಮಳೆ ಬೇಡುತ್ತಾನೆ. ಮಳೆ ಬರುವ ಸೂಚನೆ ಇದ್ದರೆ ಗುಂಡು ಆ ವ್ಯಕ್ತಿ ಕೈಯಲ್ಲಿ ಸರಳವಾಗಿ ಬರುತ್ತದೆ. ಮಳೆ ಬರುವ ಸಾಧ್ಯತೆ ಕಡಿಮೆ ಇದ್ದರೆ ಆ ಗುಂಡು ಬಾರವಾಗಿ ಬರುತ್ತದೆ ಎಂಬುದು ನಮ್ಮ ಜನಪದರ ನಂಬಿಕೆಯಾಗಿದೆ.7

ಹೂವುಕಟ್ಟಿ ಮಳೆ ಕೇಳುವುದು : ಉತ್ತರ ಕರ್ನಾಟಕದ ಕೆಲವು ಗ್ರಾಮೀಣ ರೈತರು ತಮ್ಮ ಊರಿನ ಹೆಣ್ಣು ದೇವರಿಗೆ ಹೂ ಕಟ್ಟಿ ಪೂಜೆ ಮಾಡಿ ಮಳೆಯನ್ನು ಕೇಳುತ್ತಾರೆ. ರೈತರು ಆ ದೇವತೆಯಲ್ಲಿ 'ತಾಯಿ ಮಳೆ ಬರುವುದಾದರೆ ಬಲಕಿನ ಹೂ ಕೊಡು ಎಂದು' ಬೇಡಿಕೊಳ್ಳುತ್ತಾರೆ. ಮಳೆ ಬರುವುದಾದರೆ ಬಲಕಿನ ಕೈಯಿಂದ ಹೂ ಉದುರುತ್ತದೆ. ಆಗ ರೈತರು ಸಂತೋಷಪಡುತ್ತಾರೆ. ಒಂದು ವೇಳೆ ಮಳೆ ಬರುವ ಸಾಧ್ಯತೆ ಇಲ್ಲದೆ ಇದ್ದಲ್ಲಿ ಯಾವ ಹೂ ಉದುರುವುದಿಲ್ಲ. ಆವಾಗ ರೈತರು ಈ ವರ್ಷ ನಮಗೆ ಬರಬಂದಿದೆ. ಮಳೆ ಕಡಿಮೆ ಎಂದು ರೈತರು ತಿಳಿದುಕೊಳ್ಳುವರು.8

ಕಂಬಳ ಬೀಸುವುದು : ಮಳೆಯ ಅಭಾವ ತೀವ್ರವಾಗಿ ಕಂಡುಬಂದಾಗ ಗ್ರಾಮಸ್ಥರು ಮಳೆರಾಯನನ್ನು ಕರೆಯುವ ಕಾರ್ಯಕ್ರಮವನ್ನು ಅದೊಂದು ದಿನ ನಿಗದಿಪಡಿಸುತ್ತಾರೆ. ಊರ ಪ್ರಮುಖರು ಶುದ್ಧ ಮನಸ್ಸಿನಿಂದ ಭಕ್ತಿ ಭಾವದಿಂದ ಮಳೆರಾಯನನ್ನು ಕರೆಯಲು ಊರ ಬಯಲು ದಿಬ್ಬದ ಮೇಲೆ ಏರಿ ಆಕಾಶಕ್ಕೆ ಮುಖ ಮಾಡಿ ಕೈ ಜೋಡಿಸಿ, ನಿಲ್ಲುತ್ತಾರೆ. ಹಾಲುಮತದ ವ್ಯಕ್ತಿಯೊಬ್ಬ ತನ್ನ ಕಂಬಳಿಯನ್ನು ಬೀಸಿ ಮಳೆ ಕರೆಯುತ್ತಾರೆ. ಹೀಗೆ ಐದು ಸಲ ಕಂಬಳಿ ಬೀಸಿ ಮರಳಿ ಮನೆಗೆ ಬರುವಷ್ಟರಲ್ಲಿ ಮಳೆ ಬೀಳುತ್ತದೆಂದು ಈಗಲೂ ನಂಬುತ್ತಾರೆ.9 ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಈ ಪದ್ಧತಿ ಇನ್ನೂ ಆಚರಣೆಯಲ್ಲಿದೆ.

ಕಪ್ಪೆ-ಒನಕೆ ಮೆರವಣಿಗೆ : ಹುಡುಗರೆಲ್ಲರೂ ಸೇರಿ ಊರಿನ ಕೆರೆಯೊಂದರಲ್ಲಿ ಹೋಗಿ ಇಬ್ಬರು ಚಿಕ್ಕ ಹುಡುಗರಿಗೆ ಸ್ನಾನ ಮಾಡಿಸುತ್ತಾರೆ. ಒನಕೆ ಹಾಗೂ ಜೀವ ಇರುವ ಕಪ್ಪೆಗೆ ಪೂಜೆ ಮಾಡಿ, ಒನಕೆಯನ್ನು ಒಂದೊಂದು ತುದಿಯಲ್ಲಿ ಹೊತ್ತು ನಿಲ್ಲುತ್ತಾರೆ. ಆ ಒನಕೆಯ ಮೇಲೆ ಕಪ್ಪೆಯನ್ನು ಕಟ್ಟಿ ಇಡುತ್ತಾರೆ. ಇದನ್ನು ಹೊತ್ತು ಊರಿನ ಎಲ್ಲಾ ಮನೆಯ ಮನೆ ಮುಂದೆ ಹೋಗುತ್ತಾರೆ. ಆಗ ಅವರಿಗೆ ಒಂದೊಂದು ಕೊಡ ನೀರನ್ನು ತಲೆಯ ಮೇಲೆ ಸುರಿದು ಹಾಗೂ ದವಸಧಾನ್ಯವನ್ನು ಕೊಡುವರು. ಕೊನೆಯಲ್ಲಿ ಕಪ್ಪೆಯನ್ನು ಕೆರೆಯಲ್ಲಿ ಬಿಡುವರು. ಬಂದಂತ ದವಸಧಾನ್ಯವನ್ನು ಪ್ರಸಾದ ಮಾಡಿ ಪೂಜೆ ಮಾಡಿ ಊಟ ಮಾಡುತ್ತಾರೆ. 10

ಗೊಂಬೆ ಪೂಜೆ : ಉತ್ತರ ಕರ್ನಾಟಕದ ಹಲವಾರು ಗ್ರಾಮಗಳಲ್ಲಿ ಬಾಲ ಮುತ್ತೈದೆಯರು ಈ ಆಚರಣೆಯಲ್ಲಿ ತೊಡಗುತ್ತಾರೆ. ಈ ಸಣ್ಣ ಮಕ್ಕಳು ಆಟ ಆಡುವಂತೆ ಗೊಂಬೆಗೆ ಹಳೆ ಬಟ್ಟೆಯಿಂದ ಸೀರಿ ಉಡಿಸಿ ಹೂ ಮುಗುತಿ, ಕುಂಕುಮ ಇಟ್ಟು ಅಲಂಕರಿಸಿ ಒಂದು ಚಿಕ್ಕ ಮರದಲ್ಲಿ ಗೊಂಬೆಯನ್ನು ಇಟ್ಟುಕೊಂಡು ಎಲ್ಲಾ ಮನೆ ಮನೆಗಳಿಗೆ ಹೋಗಿ ಗೊಂಬವ್ವ ಬಂದಾಳ, ಗೊಂಬೆ ಜೋಳ ನೀಡಿರಿ ಎಂದು ಹಾಡುತ್ತ ಹೋಗುತ್ತಾರೆ. ಬಂದಂತ ದವಸಧಾನ್ಯಗಳನ್ನು ಮಾರಿ ಬಂದ ದುಡ್ಡಿನಲ್ಲಿ ಕಾಯಿ ಕರ್ಪೂರ, ಊದುಬತ್ತಿ, ಎಣ್ಣೆ, ತಗೊಂಡು ಜೋಳದ ಅನ್ನ(ಸೊಂಕ್ಟಿ) ಮಾಡಿ ಊರ ದೇವರ ಕಟ್ಟೆಗೆ ಹೋಗಿ ಪೂಜೆ ಮಾಡಿ ಎಲ್ಲರೂ ಪ್ರಸಾದ ತಗೊಂಡ ಮೇಲೆ ಮನೆಗೆ ಹಿಂದಿರುಗುವ ಸಂದರ್ಭದಲ್ಲಿ 'ನುಚ್ಚು ಉಂಡೆವೆ ನೀರು ಇಲ್ಲ, ನುಚ್ಚು ಉಂಡಿವಿ ನೀರು ಇಲ್ಲ' ಎಂದು ಹಾಡುತ್ತ ಅಗಸಿ ಸುತ್ತಾಕಿ ಬರುತ್ತಾರೆ. ಚಿಕ್ಕ ಮಕ್ಕಳಲ್ಲಿ ಸಹ ಮಳೆಯನ್ನು ಕರೆಯುವ ಬೇಡಿಕೆ ಇದೆ.

ಮಾರಮ್ಮನ ಗಡಿದಾಟಿಸುವ ಕೆಲಸ : ಬಯಲು ಸೀಮೆಯಲ್ಲಿ ಮಾರಮ್ಮ ಹೆಸರಿನ ಬೊಂಬೆ ಮಾಡಿ ಕೈಗಾಡಿಯ ಮೇಲೆ ಕೂಡ್ರಿಸಿ ಸೀರೆ ಬಳೆ, ಕುಂಕುಮ ಭಂಡಾರ, ಮೂಗುತಿ, ಹೂವುಗಳಿಂದ ಅಲಂಕರಿಸಿ ಪೂಜೆ ಮಾಡಿ ಕಳಸ ಮತ್ತು ಡೊಳ್ಳು ಮೆರವಣಿಗೆಯ ಮೂಲಕ ತಮ್ಮೂರ ಸೀಮೆ ದಾಟಿಸಿ ಬಂದರೆ ಮಳೆಯಾಗುತ್ತದೆನ್ನುವ ನಂಬಿಕೆಯಿದೆ.

ನವಧಾನ್ಯದ ಪೂಜೆ : ಕೆಲವು ಕಡೆ ಮಳೆರಾಯನನ್ನು ಕುರಿತ ಇಂತ ಆಚರಣೆ ರೂಢಿಯಲ್ಲಿದೆ. ಮಳೆ ಬಾರದ ಸಮಯದಲ್ಲಿ ಹಳ್ಳಿಯ ಜನ ಒಂದೆಡೆ ಸೇರಿ ನವಧಾನ್ಯಗಳನ್ನು ರಾಶಿ ಮಾಡಿ ನೆನೆಸುತ್ತಾರೆ. ಅದರ ಮೇಲೆ ಹೊಸ ಮಡಿಕೆ ಒಂದನ್ನು ಇಟ್ಟು ಪೂಜೆ ನೈವೇದ್ಯ ಮಾಡಿ ಐದು, ಆರು ವರ್ಷದ ಮೂವರು ಮಕ್ಕಳನ್ನು ಆ ಮಡಿಕೆಯ ಮೇಲೆ ಕೈ ಇರಿಸುವಂತೆ ಹೇಳುತ್ತಾರೆ. ಆಗ ಆ ಹೊಸ ಮಡಕೆ ಸುತ್ತಲೂ ಕೋಲಾಟವೂ ನಡೆಯುತ್ತವೆ. ಈ ಆಚರಣೆ ನಡೆದ ಒಂದು ತಿಂಗಳಿಗೆ ಸರಿಯಾಗಿ ಮಳೆ ಬರುವುದಾಗಿ ನಂಬುತ್ತಾರೆ. ಈ ಪೂಜೆ ಹುಣ್ಣಿಮೆಯಲ್ಲಿ ಮಾತ್ರ ನೆರವೇರುತ್ತದೆ. ಪೂಜೆ ನಡೆಯುವ ಸಂದರ್ಭದಲ್ಲಿ ಜನರು ನಿಶ್ಯಬ್ಧವಾಗಿರುತ್ತಾರೆ. ಪೂಜಿಸಿದ ದವಸಧಾನ್ಯಗಳನ್ನು ಊರಿನ ಕುಂಬಾರ, ತಳವಾರ, ಅಗಸ ಆಯಗಾರರಿಗೆ ದಾನ ಮಾಡುತ್ತಾರೆ.

ಹೀಗೆ ಜನಪದರು ಉತ್ತರ ಕರ್ನಾಟಕದ ಭಾಗ ಬಹುತೇಕ ಮಳೆಗಾಗಿ ಹಪಹಪಿಸುವ ಪ್ರದೇಶವಾದ್ದರಿಂದ ವಿಶೇಷವಾಗಿ ಇಂತ ಆಚರಣೆಗಳ ಮೂಲಕ ಮಳೆರಾಯನನ್ನು ಪ್ರಾರ್ಥಿಸಿಕೊಳ್ಳುವರು. ಮಳೆ ಮೂಲಭೂತ ಅಗತ್ಯಗಳನ್ನು ಪೂರೈಸುವ ಒಂದು ಮಹತ್ವದ ದೈವ, ಸಕಲಕ್ಕೆ ಮಳೆಯಾದರೆ ಬೆಳೆ ಬೆಳೆಯಾದರೆ ಬದುಕು. ಆದರೆ ಮಳೆಗಾಲ ಸಮೀಪಿಸಿಯೂ ಮಳೆ ಬಾರದೇ ಹೋದರೆ ಕಂಗಾಲಾದ ರೈತರು ಮಳೆರಾಯನಿಗೆ ಈ ಆಚರಣೆಯ

ಮೂಲಕ ಮೊರೆ ಹೋಗುತ್ತಾರೆ. ಕೃಷಿಯನ್ನೆ ನಂಬಿದ ರೈತರು ಅದಕ್ಕಾಗಿ ಇಂತ ಆಚರಣೆಗಳನ್ನು ಮಾಡಿದ್ದುಂಟು. ಮಣ್ಣು ಸಗಣಿ, ಗರಿಕೆಗಳು, ಸಮೃದ್ಧತೆಗೂ ಅಕ್ಷಯಗುಣಕ್ಕೂ ಸಂಕೇತವಾಗಿ ಜನಪದರ ಬದುಕಿನ ಹಾಸುಹೊಕ್ಕಾಗಿರುವುದನ್ನು ಇವು ಸಂಕೇತಿಸುತ್ತೇವೆ.

ಕೊನೆ ಟಿಪ್ಪಣಿಗಳು

1. ಮಾಹಿತಿ ನೀಡಿದವರು, ರತ್ನಾಬಾಯಿ ಬಡಿಗೇರ (ವ.46)
2. ಮಾಹಿತಿ ನೀಡಿದವರು, ಡಾ. ಸಿದ್ದು ದಿವಾಣ (ವ.70)
3. ಡಾ. ವೀರೇಶ ಬಡಿಗೇರ, ಗುಳ್ಳವ್ವ, ಪು.6; 1999
4. ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜನಪದ ಕಲೆಗಳ ಕೋಶ, ಪು.165
5. ಮಾಹಿತಿ ನೀಡಿದವರು, ಸಿದ್ದಪ್ಪ ಮಾದರ (ವ.45)
6. ಡಾ. ವೀರೇಶ ಬಡಿಗೇರ, ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಸಿ ವಿವೇಕ, ಪು.58, 2015
7. ಮಾಹಿತಿ ನೀಡಿದವರು, ಚಂದಪ್ಪ ಬಡಿಗೇರ, (ವ.75)
8. ಮಾಹಿತಿ ನೀಡಿದವರು, ರತ್ನಾಬಾಯಿ ಬಡಿಗೇರ (ವ.46)
9. ಮಾಹಿತಿ ನೀಡಿದವರು, ನಿಂಗಪ್ಪ ಕುರುಬರ (ವ.64)
10. ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜನಪದ ಕಲೆಗಳ ಕೋಶ, ಪು.166
11. ಡಾ. ವೀರೇಶ ಬಡಿಗೇರ, ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಸಿ ವಿವೇಕ, ಪು.59, 2015

ಕುಮಾರವ್ಯಾಸ ಭಾರತದಲ್ಲಿ ಬಹುಪತಿತ್ವದ ಜಿಜ್ಞಾಸೆ

ಪುಷ್ಪ ಪಿ
ಸಂಶೋಧನಾ ವಿದ್ಯಾರ್ಥಿ, ಕನ್ನಡ ಭಾರತಿ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ. pushpap.bdvt@gmail.com.

ಕುಮಾರವ್ಯಾಸ ವಿಶಿಷ್ಟ ಶಕ್ತಿಯ ಸ್ವತಂತ್ರ ಕವಿ. 15ನೇಯ ಶತಮಾನದಲ್ಲಿ ವೈಷ್ಣವಭಕ್ತಿ ರೂಪದಲ್ಲಿ ಪುನರುತ್ಥಾನವಾದ ರಾಜಸ್ಥಾರ್ಥಿ ಎಲಿದರೇ ಕುಮಾರವ್ಯಾಸ ಖರುವಿನ ಗದುಗಿನ ನಾರಾಣಪ್ಪ, ಈತನ ಕೃತಿಯಾದ ಕುಮಾರವ್ಯಾಸ ಭಾರತ ವ್ಯಾಸರನ್ನೇ ಹಿರಿಖಾಲಿಸಿಕೊಂಡು ಹೊರಟಿರಿಸ್ಥರೂ ಕೆಲವು ಪರ್ವಗಳಲ್ಲಿ ತನ್ನ ದಾರಿಯನ್ನು ತಾನೆ ಹಿಡಿದುಕೊಂಡು ಹೋಗುತ್ತಾನೆ. ಪರಿಪ ಕತೆವರ ಕಾಮಭೇನು. ಆದರೆ ಕುಮಾರವ್ಯಾಸ ಕತೆಯದವರಿಗೂ ಕಾಮಭೇನು. ಕುಮಾರವ್ಯಾಸನ ಹಾಡಿಬನೆಂದರೇ ಕತೆಯುಗ, ದ್ವಾಪರವಾಗುವುದು, ಭಾರತ ಕಣ್ಣಲ್ಲಿ ಕುಣಿಯುವುದು, ಎಂಬುದು ಆತನ ಕಾವ್ಯ ಶಕ್ತಿಗೆ ಸಾಕ್ಷಿ ಎಂಬಂತಿದೆ. ಪ್ರಸ್ತುತ ವಿಷಯ ಕುಮಾರವ್ಯಾಸ ಭಾರತದಲ್ಲಿ ಚರ್ಚಿತವಾಗಿರುವ ದ್ರೌಪದಿ ಬಹುಪತಿತ್ವವನ್ನು ಕುರಿತದ್ದಾಗಿದ್ದು, ಕುಮಾರವ್ಯಾಸ ಭಾರತದಲ್ಲಿ ಪಾತ್ರಗಳು, ಪ್ರಸಂಗಗಳು ದ್ರೌಪದಿ ಬಹುಪತಿತ್ವವನ್ನು ಪರೀಕ್ಷಿಸುವ, ಚರ್ಚೆಗೆ ಒಳಪಡಿಸುವ ನಿರ್ನಿವೇಶ ಹಾಗೂ ನಿರಿಭರ್ಭಗಳನ್ನು ವಿವರಿಸುವ ಉದ್ದೇಶ ಈ ಲೇಖನದ್ದಾಗಿದೆ.

ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ರೂಪಿಸುವಲ್ಲಿ ರಾಮಾಯಣ, ಮಹಾಭಾರತಗಳು ವಹಿಸಿದ ಪಾತ್ರ ಅಸದೃಶವಾದುದು. ಜನಪದ ಸಮುದಾಯದಿಂದ ಹಿಡಿದು ಶಿಷ್ಟ ಸಮುದಾಯದವರೆಗೆ ಹಬ್ಬಿ ಹರಡಿರುವ ಅವುಗಳ ಕಥಾನಕಗಳೇ ಇದನ್ನು ಸ್ಪಷ್ಟಪಡಿಸುತ್ತದೆ. ಇವುಗಳು ಆರ್ಯ –ದ್ರಾವಿಡ ಸಂಕೀರ್ಣ ಸ್ವರೂಪದ ಸಾಂಸ್ಕೃತಿಕ ಜಟಿಲತೆಯನ್ನು ತಮ್ಮ ಕಥಾಗಂಟುಗಳಲ್ಲಿ ಹೊಂದಿವೆ. ಅವುಗಳಲ್ಲಿ ಮಹಾಭಾರತ ರಾಮಾಯಣಕ್ಕಿಂತ ವಿಸ್ತಾರವಾಗಿದ್ದು, ಪ್ರಾಚೀನಕಾಲದಲ್ಲಿ ನಡೆದಿರಬಹುದಾದ ರಾಜವಂಶದ ಎರಡು ಬಣಗಳ ನಡುವಿನ ಯುದ್ಧವನ್ನು ಹಾಗೂ ಅದಕ್ಕಿರುವ ದೀರ್ಘ ಕಾಲದ ಕಾರಣವನ್ನು ಹೇಳುವಂತದ್ದು. ಮಹಾಭಾರತವು ಆರ್ಯ ಮತ್ತು ಸಮೂಹ ಸಂಸ್ಕೃತಿಯ ವಾಸ್ತವಿಕ ನೆಲೆಯನ್ನು ಹೊಂದಿದ್ದು ಮಹಾಭಾರತ ಜನ ಸಾಮಾನ್ಯರ ಕಥೆಯೇ ಎನ್ನುವ ಮಟ್ಟಿಗೆ ಇದು ಬೆರೆತು ಹೋಗಿರುವುದ್ದನ್ನು ಕಾಣಬಹುದು. ಯಾವುದೇ ಮಹಾಕಥನದ ಆರಂಭ ಸಂತಾನ ಕೋರಿಕೆಯಿಂದ ಆಗಿ ತದನಂತರ ಅರಮನೆಯಲ್ಲಿ ಸಮಸ್ಯೆಗಳು ಸೃಷ್ಟಿಗೊಂಡು ಪಾತ್ರಗಳು ಅರಣ್ಯದ ಕಡೆ ನಡೆಯುತ್ತವೆ. ಅಲ್ಲಿ ಅನೇಕರ ಸಹಾಯದಿಂದಾಗಿ ಶಕ್ತಿ ಸಂಚಲನ ಮಾಡಿಕೊಳ್ಳುತ್ತವೆ. ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುತ್ತಾ, ಬಗೆಹರಿಸಿಕೊಳ್ಳುತ್ತಾ ಕಥೆ ಸುಖಾಂತ್ಯ ಕಾಣುತ್ತದೆ. ಇದೇ ವೇಳೆ ಮಹಾಭಾರತ ಕಥೆ ಒಂದು ಅರಮನೆಯ ಕಥೆಯಾಗಿರುವಂತೆ'ಯೂ ಅದೊಂದು ಬುಡಕಟ್ಟು ಸಮೂಹದಲ್ಲಿ ನಡೆದಿರಬಹುದಾದ ಕಥೆಯಾಗಿರುವಂತೆ ಅದರ ಒಳವಿವರಗಳಿಂದ ಕಂಡುಬರುತ್ತದೆ. ಮಹಾಭಾರತದ ಎರಡು ಮುಖ್ಯ ಪಂಗಡಗಳ ಕುಲಮೂಲ ದೇವತೆ ಸೂರ್ಯ. ಬಹುತೇಕ ಭಾರತದ ಎಲ್ಲ ಬುಡಕಟ್ಟುಗಳ ಕುಲಮೂಲ ದೇವತೆಗಳು ಸೂರ್ಯ ಚಂದ್ರರಾಗಿರುವುದು ತಿಳಿದುಬರುತ್ತದೆ. ಅಲ್ಲದೇ ನಾವು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೇ ಒಬ್ಬ ಹೆಣ್ಣುಮಗಳು ಅಣ್ಣ ತಮ್ಮಂದಿರನ್ನೆಲ್ಲ ವಿವಾಹವಾಗುವ ಕ್ರಮ ಬುಡಕಟ್ಟು ಪದ್ಧತಿಯಾಗಿದ್ದು ಮಹಾಭಾರತದ ದ್ರೌಪದಿಯ ಬಹುಪತಿತ್ವವನ್ನು ನೆನಪಿಸುತ್ತದೆ. ವಿಷಯ ಚರ್ಚೆ ಬಹುಪತಿತ್ವವನ್ನು ಕುರಿತದ್ದಾಗಿರುವುದರಿಂದ ಅದರ ಹಿನ್ನಲೆಯನ್ನು ತಿಳಿಯುವುದು ಅಗತ್ಯವಾಗಿದೆ.

ಬಹುಪತಿತ್ವ ಪದ್ಧತಿಯು ಒಂದು ಕಾಲದಲ್ಲಿ ಭಾರತೀಯ ಬುಡಕಟ್ಟು ಸಮುದಾಯಗಳಲ್ಲಿ ಆಚರಣೆಯಲ್ಲಿದ್ದ ಪದ್ಧತಿಯಾಗಿತ್ತು. ಸ್ತ್ರೀಯರ ಕೊರತೆ, ಕುಟುಂಬದಲ್ಲಿಯೇ ಆಸ್ತಿಯನ್ನುಳಿಸಿಕೊಳ್ಳಬೇಕೆಂಬ ಬಯಕೆ, ದುಬಾರಿ ಕನ್ಯಾಶುಲ್ಕ , ಬಡತನ , ಪುರುಷರ ನಿರ್ವೀರ್ಯತೆ ಮುಂತಾದ ಅಂಶಗಳು ಬಹುಪತಿತ್ವಕ್ಕೆ

ಪೂರಕವಾಗಿತ್ತು ಎನ್ನಬಹುದು. ಸಮುದಾಯದಲ್ಲಿನ ಪುರುಷರು ಬಹುಪತಿತ್ವದಿಂದ ಮಾತ್ರ ನಿಯಮಬದ್ಧವಾಗಿ ಲೈಂಗಿಕ ತೃಪ್ತಿ ಪಡೆಯುವುದು ಸಾಧ್ಯ ಎನ್ನುವ ಉದ್ಧೇಶದಿಂದ ಈ ಪದ್ಧತಿ ಜಾರಿಯಲ್ಲಿದ್ದಂತೆ ತೋರುತ್ತದೆ. ಅಲ್ಲದೇ ಸ್ತ್ರೀಯೊಬ್ಬಳು ಎಲ್ಲಾ ಸಹೋದರರ ಮಡದಿಯಾಗುವ ಸೋದರ ಬಹುಪತಿತ್ವ ಪದ್ಧತಿ ಹಾಗೂ ಸ್ತ್ರೀಯೊಬ್ಬಳು ಪರಸ್ಪರ ಸಹೋದರರಲ್ಲದ ಅನೇಕ ಪರಪುರುಷರನ್ನು ವಿವಾಹವಾಗುವ ಸೋದರೇತರ ಬಹುಪತಿತ್ವ ಪದ್ಧತಿಯೊಂದು ಬುಡಕಟ್ಟು ಸಮುದಾಯಗಳಲ್ಲಿತ್ತೆಂಬುದನ್ನು ಕಾಣಬಹುದು. ಹಿಮಾಲಯದ ತಪ್ಪಲಿನ ಟಿಬೇಟಿಯನ್ನರು ದಕ್ಷಿಣ ಭಾರತದ ತಿಯಾನ್ ಹಾಗೂ ತೊಡವರು , ಕೋಟ ಜನರು, ಖಾಸಾ ಜನರು ಮತ್ತು ಲಡಖೀ ಬೋಟಾ ಜನರು, ಪೋಲಿನೀಶಿಯಾದ ಮಾರ್ಕ್ವಿಸಾನ್ ದ್ವೀಪದ ನಿವಾಸಿಗಳು , ಆಫ್ರಿಕಾದ ಬಾಹಮಾ ಜನರು , ಮಲಬಾರಿನ ಇರವಾನರಲ್ಲಿನ ಬುಡಕಟ್ಟುಗಳಲ್ಲಿ ಬಹುಪತಿತ್ವ ಆಚರಣೆಯಲ್ಲಿದೆ. ಮಹಾಭಾರತದ ದ್ರೌಪದಿ ಪಂಚಪತಿತ್ವ ಪದ್ಧತಿಯು ಬುಡಕಟ್ಟು ಸಮುದಾಯದಲ್ಲಿ ಈಗಾಗಲೇ ಇದ್ದಂತಹ ಸೋದರ ಬಹುಪತಿತ್ವವನ್ನು ನೆನಪಿಸುತ್ತದೆ. ಸೋದರ ಬಹುಪತಿತ್ವದಲ್ಲಿ ಹೆಣ್ಣು ಪರ್ಯಾಯ ಕ್ರಮಾನುಸಾರವಾಗಿ ದೇಹ ಸಂಬಂಧವಿರಿಸಿಕೊಳ್ಳುತ್ತಾಳೆ. ಪತ್ನಿಯು ಒಬ್ಬಾತನೊಂದಿಗಿರುವಷ್ಟು ಸಮಯ ಇತರ ಗಂಡಂದಿರಿಗೆ ಆಕೆಯ ಮೇಲೆ ಯಾವ ಅಧಿಕಾರವೂ ಇರುವುದಿಲ್ಲ. ಪಾಂಡವರು ಕೂಡ ಈ ನಿಯಮದಂತೆಯೇ ದ್ರೌಪದಿಯೊಂದಿಗೆ ತಮ್ಮ ಲೈಂಗಿಕ ಸಂಬಂಧ ಹೊಂದಿದ್ದರೆಂದು ನಂಬಲಾಗಿದೆ. ಪ್ರಸ್ತುತ ವಿಷಯ ಶಿಷ್ಟ ಸಾಹಿತ್ಯ ರಚನೆಯಾದ ಕುಮಾರವ್ಯಾಸ ಭಾರತದಲ್ಲಿ ದ್ರೌಪದಿಯ ಬಹುಪತಿತ್ವವನ್ನು ಕುರಿತಂತೆ ಪಾತ್ರಗಳು ಹಾಗೂ ಸನ್ನಿವೇಶಗಳು ನಡೆಸುವಂತ ಚರ್ಚೆಯನ್ನು ಕುರಿತಂತೆ ವಿವರಿಸುವ ಪ್ರಯತ್ನವಾಗಿದೆ.

ಕುಮಾರವ್ಯಾಸ ವಿಶಿಷ್ಟ ಶಕ್ತಿಯ ಸ್ವತಂತ್ರ ಕವಿ. ಅವನ ಕಾವ್ಯವೂ ಸಹ ಹಾಗೆಯೇ ವಿಶಿಷ್ಟ ಸ್ವತಂತ್ರ.. 15ನೇಯ ಶತಮಾನದಲ್ಲಿ ವೈಷ್ಣವ ಭಕ್ತಿರೂಪದಲ್ಲಿ ಪುನುರುತ್ಥಾನವಾದ ರಸಸ್ಫೂರ್ತಿ ಎಂದರೇ, ಕುಮಾರವ್ಯಾಸ ಬಿರುದಿನ ಗದುಗಿನ ನಾರಾಣಪ್ಪ. ಕನ್ನಡದ ಆದಿಕವಿ ಎಂದೇ ಖ್ಯಾತಿಯನ್ನು ಪಡೆದ ಪಂಪನು 'ವ್ಯಾಸಮುನೀಂದ್ರರುಂದ್ರ ವಚನಾಮೃತ ವಾರ್ಧಿಯಂನೀಸುವೇ ಕವಿವ್ಯಾಸನೆಂಬ ಗರ್ವ ಎನಗಿಲ್ಲ' ಎಂದರೆ, ಕುಮಾರವ್ಯಾಸ ತಾನು ವ್ಯಾಸನ ಕುಮಾರ ಎಂಬ ನಿಕಟ ಸಂಬಂಧವನ್ನು ಹೊಂದುವುದರ ಮೂಲಕ ತನ್ನನ್ನು ಕುಮಾರವ್ಯಾಸ ಎಂದು ಕರೆದುಕೊಳ್ಳುತ್ತಾನೆ. ಪಂಪ ಕಲಿತವರ ಕಾಮಧೇನು. ಆದರೆ ಕುಮಾರವ್ಯಾಸ ಕಲಿಯದವರಿಗೂ ಕಾಮಧೇನು. ಕಾವ್ಯಕ್ಕೆ ಗುರು ಈತನ ಕೃತಿ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಇದಕ್ಕೆ ಸಾಕ್ಷಿಯೆಂಬಂತೆ ಆತನು ಬರೆದ ಕುಮಾರವ್ಯಾಸ ಭಾರತ ಕೃತಿಯಲ್ಲಿ ಭಾರತವನ್ನು ಕಣ್ಣಲ್ಲಿ ಕುಣಿಯುವಂತೆ ಮಾಡಿದ್ದಾನೆ. ಕುಮಾರವ್ಯಾಸ ಭಾರತ ವ್ಯಾಸರನ್ನೇ ಹಿಂಬಾಲಿಸಿಕೊಂಡು ಹೊರಟಂತಿದ್ದರೂ ಕೆಲವು ಪರ್ವಗಳಲ್ಲಿ ತನ್ನ ದಾರಿಯನ್ನು ತಾನು ಹಿಡಿದುಕೊಂಡು ಹೋಗುತ್ತಾನೆ. ಕುಮಾರವ್ಯಾಸನ ಪಾತ್ರಗಳಲ್ಲಿ ಅದ್ಭುತಶಕ್ತಿಯ ಸಂಚಾರವಿದ್ದು, ಜಿಗುಟಿದರೆ ರಕ್ತ ಸೋರುವ ಮಟ್ಟಿಗೆ ಪಾತ್ರಗಳಿಗೆ ಜೀವವನ್ನು ತುಂಬಿದ್ದಾನೆ. ಅವುಗಳಲ್ಲಿ ದ್ರೌಪದಿ ಪಾತ್ರವು ಸಹ ಮುಖ್ಯವಾಗಿದ್ದು ಆಕೆಯ ಬಹುಪತಿತ್ವವನ್ನು ಕುರಿತಂತೆ ವಿವರಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಮಹಾಭಾರತದ ಸ್ತ್ರೀಯೆಂದಾಕ್ಷಣ ನೆನಪಾಗುವವಳು ದ್ರೌಪದಿ. ಕುಮಾರವ್ಯಾಸನಲ್ಲಿ ಮೂಡಿದ ಅವಳ ಚಿತ್ರ ವೀರಕ್ಕೂ , ಕರುಣಕ್ಕೂ, ಶೃಂಗಾರಕ್ಕೂ ಬರೆದ ವ್ಯಾಖ್ಯಾನವಾಗಿದೆ. ದ್ರೌಪದಿ ಪಾಂಚಾಲ ರಾಜ ದ್ರುಪದನ ಪುತ್ರಿ. ದ್ರುಪದನು ಮಾಡಿದ ಪುತ್ರಕಾಮೇಷ್ಠಿಯಾಗದ ಯಜ್ಞಕುಂಡದಿಂದ ಜನಿಸಿದವಳೇ ದ್ರೌಪದಿ ತನ್ನನ್ನು ಅವಮಾನಿಸಿದ ದ್ರೋಣನನ್ನು ಕೊಲ್ಲಲು ದ್ರುಷ್ಟದ್ಯುಮ್ನನ್ನನ್ನು ಹಾಗೂ ಅರ್ಜುನನ್ನನ್ನು ಅಳಯನನ್ನಾಗಿ ಮಾಡಿಕೊಳ್ಳುವ ಉದ್ಧೇಶದಿಂದ ದ್ರೌಪದಿಯನ್ನು ಅಗ್ನಿಯಿಂದ ಪಡೆಯುತ್ತಾನೆ. ದ್ರೋಣ ದ್ರುಪದನನ್ನು ಹಿಡಿದು ತರಿಸದಿದ್ದರೆ, ದ್ರುಪದ ದ್ರೌಪದಿಯನ್ನು ಯಜ್ಞದಿಂದ ಪಡೆಯದಿದ್ದರೆ ಮಹಾ ಭಾರತ ಯುದ್ಧಕ್ಕೆ ಕಾರಣವೇ ಇರುತ್ತಿರಲ್ಲಿಲ್ಲ. ಮಹಾಭಾರತ ಯುದ್ಧಕ್ಕೆ ಮೂಲ ಕಾರಣ, ದ್ರೌಪದಿಯ ಪಾತ್ರ ಎಂಬುದು ಕೆಲವರ ಅಭಿಪ್ರಾಯವಾಗಿದೆ. ದ್ರೌಪದಿ ಇಂದಿಗೂ ಕಾವ್ಯದೊಳಗೆ ವಿಶೇಷವೆನಿಸುವುದು ಆಕೆ ನಿರ್ವಹಿಸಿದ ಪಂಚಪತಿತ್ವ ನಿರ್ವಹಣೆಯ ಕಾರಣದಿಂದಾಗಿ ಎನ್ನಬಹುದು. ದ್ರೌಪದಿಯ ಪಾತ್ರವನ್ನು ನಿರ್ವಹಿಸುವಾಗ ಸಾಂಪ್ರದಾಯಿಕ ಭಾರತೀಯ ಮನೋಧರ್ಮಕ್ಕೆ ಒಂದು ನುಂಗಲಾರದ ತುತ್ತಾಗುವುದು ದ್ರೌಪದಿಯ ಪಂಚಪತಿತ್ವ. ಒಂದು ಕಾಲದಲ್ಲಿ ಭಾರತೀಯ ಸಮಾಜದಲ್ಲಿ ಆಚರಣೆಯಲ್ಲಿದ್ದ ಪದ್ಧತಿಗೆ ಅನುಗುಣವಾಗಿ ಬಹುಪತಿತ್ವ ಆಕೆಗೆ ಪ್ರಾಪ್ತವಾದಂತೆ ತೋರುತ್ತದೆ. ದ್ರೌಪದಿ ಮಾತೃ ವಚನಕ್ಕೆ ಕಟ್ಟುಬಿದ್ದೋ ಅಥವಾ ಪೂರ್ವ ಕರ್ಮದ ಕಾರಣದಿಂದಲೋ ಬಹುಪತಿತ್ವಕ್ಕೆ ಒಳಗಾಗಬೇಕಾಯಿತು. ಒಂದು ರೀತಿಯಲ್ಲಿ ಇದು ದ್ರುಪದನ ಅಪೇಕ್ಷೆಗೆ ಮೀರಿದ, ದ್ರೌಪದಿಗೆ ಅನಿರೀಕ್ಷಿತವಾಗಿ ಬಂದೊದಗಿದ ಸಂಗತಿ. ಆಕೆ ಒಪ್ಪಿಕೊಂಡಿದ್ದು ಸೋದರ ಬಹುಪತಿತ್ವ ಇದು ಅಪೇಕ್ಷಣೀಯವೋ ಅಥವಾ ಅನಪೇಕ್ಷಣೀಯವೋ ತನಗೆ ಪ್ರಾಪ್ತವಾದ ಈ ಪರಿಸ್ಥಿತಿಯನ್ನು ಜೀವನದುದ್ದಕ್ಕೂ ಸಮರ್ಥವಾಗಿ ನಿರ್ವಹಿಸುವುದನ್ನು ಕಾಣಬಹುದು. ದ್ರೌಪದಿಯ ಪಂಚಪತಿತ್ವದ ತೊಡಕನ್ನು ಕುಮಾರವ್ಯಾಸ ಒಂದು ಪುನರ್ಜನ್ಮದ ಕಥೆಯ ಮೂಲಕ ಪರಿಹರಿಸಿಕೊಂಡಿದ್ದಾನೆ. ದ್ರೌಪದಿ ಹಿಂದಿನ ಜನ್ಮದಲ್ಲಿ ಕುಷ್ಠರೋಗ ಪೀಡಿತನಾದ ಮುನಿಯ ಪತ್ನಿಯಾಗಿದ್ದು ಆಕೆಯ ಪತಿಭಕ್ತಿಗೆ ಮೆಚ್ಚಿ ಆಕೆಗೆ ಬೇಕಾದ ವರವನ್ನು ಕೇಳುವಂತೆ ಮುನಿ ಹೇಳಿದಾಗ ಅವಳು ದಿವ್ಯರೂಪವನ್ನು ಧರಿಸಿ ತನ್ನನ್ನು ಕೂಡುವಂತೆ ಕೇಳುತ್ತಾಳೆ. ಅದರಂತೆ ಮುನಿ ಅವಳೊಂದಿಗೆ ಬೆರೆಯುತ್ತಾನೆ. ಇದರಿಂದ ತಣಿಯದ ಪತ್ನಿ ಪುನಃ ಪತಿಯ ಸೆರಗು ಹಿಡಿದಾಗ ಮುನಿ ನೀನು ಮರುಜನ್ಮದಲ್ಲಿ ಕ್ಷತ್ರಿಯ ಹೆಣ್ಣಾಗಿ ಹುಟ್ಟು ಎಂದು ಶಪಿಸುತ್ತಾನೆ. ನಂತರ ಆಕೆ ಶಿವನನ್ನು ಕುರಿತು ಘೋರ ತಪಸ್ಸು ಮಾಡಿ ಐದು ಬಾರಿ ಪತಿ ಬೇಕೆಂದು ಬೇಡುತ್ತಾಳೆ. ಈ ಕಾರಣದಿಂದಾಗಿ ಮುಂದೆ ದ್ರೌಪದಿಯಾಗಿ ಜನಿಸಿ ಐದು ಜನರ ಸತಿಯಾಗುತ್ತಾಳೆ. ಸ್ವತಃ ಶಂಕರನಿಂದ ಅವಳಿಗೆ ಪಂಚಪತಿತ್ವದ ವರ ಸಿದ್ಧಿಸಿದೆ ಎಂದು ದ್ರುಪದನಿಗೆ ವೇದವ್ಯಾಸರು ಈ ವೃತ್ತಾಂತವನ್ನು ಹೇಳಿ ಅವನನ್ನು ವಿವಾಹಕ್ಕೆ ಒಪ್ಪಿಸುತ್ತಾರೆ. (ಆದಿಪರ್ವ 16, 43, 58).

ದ್ರೌಪದಿಯ ಬಹುಪತಿತ್ವವನ್ನು ಕುರಿತಂತೆ ಕುಮಾರವ್ಯಾಸ

ಭಾರತದಲ್ಲಿ ಕೆಲವೊಂದು ಸನ್ನಿವೇಶ,ಪಾತ್ರಗಳು ಆಕೆಯ ಪಾತಿವ್ರತ್ಯ ಧರ್ಮವನ್ನು ಪರೀಕ್ಷೆಗೆ ಒಡ್ಡುವಂತಹ ಪ್ರಯತ್ನವನ್ನು ಮಾಡುತ್ತವೆ. ಪಾಂಡವರು ಪಂಚಪಾಂಡವರೆಂದು ಪ್ರತೀತಿಯೇ ಆದರೂ ನಿಜವಾಗಿಯೂ ಅವರು ಆರುಮಂದಿ. ಹಾಗಾದರೆ ಕರ್ಣ ಮತ್ತು ದ್ರೌಪದಿಯ ಸಂಬಂಧ ಎಂತಹುದು ಎನ್ನುವ ಪ್ರಶ್ನೆಯೊಂದು ಮನಸ್ಸಿನೊಳಗಿಂದ ಮೂಡುತ್ತದೆ. ಅದಕ್ಕೆ ಉತ್ತರವೇ ಕಣ್ವಾಶ್ರಮದ ಜಂಬೂಫಲ ಪ್ರಸಂಗ. ದ್ರೌಪದಿಯ ಪಾತಿವ್ರತ್ಯದ ಹಿನ್ನಲೆಯಲ್ಲಿ ಜಂಬೂಫಲ ಪ್ರಸಂಗ ವಿಶೇಷ ಮಹತ್ವವವನ್ನು ಪಡೆಯುತ್ತದೆ. ಪಾಂಡವರು ಹಸಿವಿನಿಂದ ಕಂಗಾಲಾದಾಗ ಕಣ್ವಾಶ್ರಮದಲ್ಲಿ ಬೆಳೆದಿದ್ದ ಜಂಬುನೇರಳೆಹಣ್ಣನ್ನು ಭೀಮನು ಕಿತ್ತು ತರುವನು. ಅದರ ಆಕಾರ ಮತ್ತು ರಮ್ಯತೆಗೆ ಬೆರಗಾದ ಧರ್ಮರಾಯ ಅದು ಸಾಮಾನ್ಯ ಹಣ್ಣಲ್ಲವೆಂದು ಆತಂಕಿತನಾಗುವನು. ಪಾಂಡವರು ಇದ್ದಲಿಗೆ ಆಗಮಿಸಿದ ಕೃಷ್ಣ ಅದರ ಪೂರ್ವಾಪರವನ್ನು ತಿಳಿಸುವನು. ಇದು ವರ್ಷಕ್ಕೆ ಒಂದು ಸರ್ತಿ ಮಾತ್ರ ಬಿಡುವಂಥದೆಂದೂ, ತಪಸ್ಸಿನಿಂದ ಎದ್ದ ಕಣ್ವ ಮಹಾಋಷಿಗೆ ಆಹಾರವಾಗುವಂಥದೆಂದೂ, ಸಮಯಕ್ಕೆ ಸರಿಯಾಗಿ ಅದು ಕಾಣದಿದ್ದರೆ ಆ ಋಷಿ ಶಾಪ ಕೊಡುವನೆಂದೂ ಕೃಷ್ಣ ವಿವರಿಸುವನು. ಮತ್ತೆ ಆ ಹಣ್ಣನ್ನು ಮರಕ್ಕೆ ಸೇರಿಸುವುದೊಂದೇ ಅದಕ್ಕಿರುವ ಪರಿಹಾರ. ಅದನ್ನು ಹಾಗೆ ಸೇರಿಸಬೇಕಾದರೆ ಪಾಂಡವರು ತಮ್ಮ ಅಂತರಂಗದ ನೆಲೆಯನ್ನು ಮುಚ್ಚುಮರೆಯಿಲ್ಲದೆ ಹೇಳಬೇಕೆಂದು ಕೃಷ್ಣ ಆದೇಶಿಸುವನು. ಆ ಪ್ರಕಾರ ಪಾಂಡವರು ಐವರೂ ತಮ್ಮ ತಮ್ಮ ಅಂತರಾಳವನ್ನು ಹೇಳುತ್ತಾ ಹೋದಂತೆ , ಮರದ ಮೇಲಿನ ಕಡೆಗೆ ಹಣ್ಣು ಏರುತ್ತಾ ಹೋಯಿತು. ಆದರೆ ದ್ರೌಪದಿ ಹೇಳದ ಕೂಡಲೆ ಅದು ಕೆಳಕ್ಕೆ ಬಿದ್ದುಹೋದುದು ವಿಶೇಷ . ಇದರಿಂದ ಅವಳು ತನ್ನ ಅಂತರಂಗವನ್ನು ಸರಿಯಾಗಿ ಹೇಳಲಿಲ್ಲ ಎನ್ನುವುದು ಪರಿಸ್ಥಿತಿಯ ನಿರ್ಣಯ. ಹಾಗೆ ನೋಡಿದರೆ ಅವಳು ಹೇಳಿದ್ದರಲ್ಲಿ ತಪ್ಪೇನು ಇರಲಿಲ್ಲ. ಪತಿಗಳೈವರ ನಡುವೆ ಭೇದವೆಣಿಸಲಿಲ್ಲವೆಂದೂ, ಪರಪುರುಷರ ಮೇಲೆ ಮೋಹವಿರಲಿಲ್ಲವೆಂದೂ ಅವಳ ಅಂತರಂಗದ ವಿವರಣೆಯಾಗಿತ್ತು. ಈ ಸಂದರ್ಭದಲ್ಲಿ ದ್ರೌಪದಿಯ ಪಾತಿವ್ರತ್ಯ ಧರ್ಮದ ಪರೀಕ್ಷೆಯಾದಂತೆ ಕಾಣುತ್ತದೆ. ದ್ರೌಪದಿಯು ಪರಿಶುದ್ಧ ಮನಸ್ಸಿನಿಂದ ಮನಸ್ಸಿನ ದೌರ್ಬಲ್ಯ ಎಲ್ಲರಿಗೂ ಸಹಜವಾದ ಸಾರ್ವತ್ರಿಕ ಸತ್ಯ ಎಂಬುದನ್ನು ಸ್ಪಷ್ಟಪಡಿಸಿ ಪರಿಶುದ್ಧಳಾಗಿಯೇ ಉಳಿಯುತ್ತಾಳೆ. ಈ ಸಂದರ್ಭವನ್ನು ಬೇರೊಂದು ರೀತಿಯಲ್ಲೂ ಚರ್ಚಿಸಲು ಸಾಧ್ಯವಿದೆ. ಒಂದೇ ಕುಟುಂಬದ ಎಲ್ಲರನ್ನು ಮದುವೆಯಾಗುವ 'ಸೋದರ ಬಹುಪತಿತ್ವ' ದಲ್ಲಿ ಕುಂತಿಯ ಮಗನೇ ಆದ ಕರ್ಣನೂ ಸೇರುತ್ತಾನೆಂಬುದರ ಆಧಾರದ ಮೇಲಿನ ಸಾಧ್ಯತೆ ಇದೆ. ಆದರೆ ದ್ರೌಪದಿಗೆ ಇದು ಗೊತ್ತಿರದ ವಿಷಯವಾದ್ದರಿಂದ ಅಕಳಂಕಿತಳಾದ ದ್ರೌಪದಿಗೂ,ಹಣ್ಣಿನ ವರ್ತನೆಗೂ ಸಂಬಂಧ ಕಲ್ಪಿಸಿರುವುದು ಅಸಮರ್ಪಕ. ಬಹುಪತಿತ್ವ ಸ್ವೀಕರಣೆಯೊಳಗೆ ಪುರುಷ ಪ್ರಧಾನ ಲೋಕ ಹೇಗೆ ಆಕೆಯನ್ನು ಚರ್ಚೆಗೆ ಒಳಗು ಮಾಡುತ್ತದೆ ಎಂಬುದ್ದನ್ನು ಗಮನಿಸಬಹುದಾಗಿದೆ.

ಕುಮಾರವ್ಯಾಸ ಭಾರತದ ಅರಣ್ಯಪರ್ವದಲ್ಲಿ ನಡೆದ ದ್ರೌಪದಿ ಹಾಗೂ ಸತ್ಯಭಾಮೆಯರ ನಡುವಿನ ಸಂಭಾಷಣೆ ಮತ್ತೊಮ್ಮೆ ಆಕೆಯ ಬಹುಪತಿತ್ವವನ್ನು ಪ್ರಶ್ನಿಸಿದಂತಿದೆ. ಒಮ್ಮೆ ದ್ರೌಪದಿ ಹಾಗೂ ಸತ್ಯಭಾಮೆಯರ ನಡುವೆ ಸರಸ ಸಲ್ಲಾಪವೊಂದು ಜರುಗುತ್ತದೆ. ವಿರಾಮಕ್ಕಾಗಿ ಉಭಯ ಕುಶಲೋಪರಿಗಾಗಿ ಏರ್ಪಡಿಸಿಕೊಂಡ ಆ ಸಮಾಗಮದಲ್ಲಿ ಸತ್ಯಭಾಮೆ ದ್ರೌಪದಿಯನ್ನು ಕುರಿತು ದ್ರೌಪದಿ ನೀನು ಐವರ ಗಂಡಂದಿರ ಸತಿ, ಪತಿಗಳ ಚಿತ್ತವನ್ನು ಹೇಗೆ ಅರಿತು ಒಂದಾಗಿರುವೆ ಎಂಬ ಸಹಜ ಪ್ರಶ್ನೆಯನ್ನು ಕುತೂಹಲದಿಂದ ಕೇಳುತ್ತಾಳೆ (ಅರಣ್ಯ ಪರ್ವ, ಪದ್ಯ 22, ಪುಟ 217). ಆಗ ದ್ರೌಪದಿ ಸತ್ಯಭಾಮ ದೇವಿಯರು ಮುಗುದೆಯರಲ್ಲ, ನಾನು ಯಾವ ಮಂತ್ರವನ್ನು ಬಲ್ಲವಳು? ಭಾವಶುದ್ಧಿಯಿಂದ ಅವರವರ ಚಿತ್ತದ ಭಾವವನ್ನು ಅರಿತು ಉಪಚರಿಸುವೆನು ಚತುರತೆಯಿಂದ ಎಂದು ಆಕೆ ತನ್ನ ಬಹುಪತಿತ್ವ ನಿರ್ವಹಣೆಯನ್ನು ಪಾತಿವ್ರತ್ಯದ ಹಿನ್ನಲೆಯಲ್ಲಿ ನಿರ್ವಹಿಸಿ ಉತ್ತರಿಸುವ ಬಗೆಯನ್ನು ಕುಮಾರವ್ಯಾಸ ಮನೋಜ್ಞವಾಗಿ ಚಿತ್ರಿಸಿದ್ದಾನೆ (ಅರಣ್ಯ ಪರ್ವ, ಪದ್ಯ–23.ಪು217.). ಹಾಗೂ ಹರಿಯ ಹದಿನಾರು ಸಾವಿರ ಶಶಿಮುಖಿಯರು ಹರಿಯ ಪ್ರೀತಿ ಬಯಸುವವರೇ , ಹದಿನಾರು ಸಾವಿರ ಸತಿಯರಲ್ಲಿ ಕೃಷ್ಣನ ಜೀವಶ್ರಮ ರತಿ ಎಂದು ದ್ರೌಪದಿ ಹೇಳುತ್ತಾಳೆ. ಇಲ್ಲಿ ದ್ರೌಪದಿ ಕೇಳುವ ಸತ್ಯಭಾಮೆಯ ಅನುಭವ ಕೇಂದ್ರಿತ ಪ್ರಶ್ನೆ ಚತುರೋಕ್ತಿಯದು (ಅರಣ್ಯಪರ್ವ, ಪದ್ಯ 25, ಪು. 217) ಎನಿಸುತ್ತದೆ.

ಹೀಗೆ ಕುಮಾರವ್ಯಾಸಭಾರತ ಕಾವ್ಯದೂದ್ದಕ್ಕೂ ದ್ರೌಪದಿಯು ತನ್ನ ಬಹುಪತಿತ್ವವನ್ನು ಕುರಿತಂತೆ ಅನೇಕ ಸಂದರ್ಭಗಳನ್ನು ಎದುರಿಸುವುದನ್ನು ಕಾಣಬಹುದಾಗಿದೆ. ಹಾಗೂ ಪಂಚಪತಿತ್ವದ ನೆಲೆಯೊಳಗೆ ಪತಿವ್ರತೆಯಾಗಿ ಉಳಯುವ ಗುಣಗಳು ಒಲವನ್ನು ಅನುಸರಿಸಬೇಕಾದ ಸ್ಥಿತಿಯನ್ನು ಕುಮಾರವ್ಯಾಸ ದ್ರೌಪದಿ ಪಾತ್ರದ ಮೂಲಕ ಬಿಂಬಿಸಲು ಪ್ರಯತ್ನಿಸಿದ್ದಾನೆ.

ಪರಾಮರ್ಶನ ಗ್ರಂಥಗಳು

1. ಕುವೆಂಪು ಮತ್ತು ಮಾಸ್ತಿ (ಸಂ.) – ಕರ್ನಾಟ ಭಾರತ ಕಥಾಮಂಜರಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1974.

2. ಹೆಗಡೆ ಎಲ್.ಆರ್. – ಕುಮಾರವ್ಯಾಸನ ಪಾತ್ರಸೃಷ್ಟಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

3. ವೆಂಕಟೇಶಮೂರ್ತಿ ಹೆಚ್.ಎಸ್. – ಕುಮಾರವ್ಯಾಸ ಕಥಾಂತರ (ಆದಿಪರ್ವ–ಸಭಾಪರ್ವ), ಅಭಿನವ ಪಬ್ಲಿಕೇಷನ್ಸ್, ಬೆಂಗಳೂರು, 2013.

4. ರಹಮತ್ ತರೀಕೆರೆ – ಕುಮಾರವ್ಯಾಸ ಭಾರತ ಸಾಂಸ್ಕೃತಿಕ ಮುಖಾಮುಖಿ, ಹಂಪಿ ವಿಶ್ವವಿದ್ಯಾಲಯ, ಹಂಪಿ.

5. ಪ್ರಭಾವತಿ ಎಸ್.ವಿ. – ಕನ್ನಡ ಸಾಹಿತ್ಯದಲ್ಲಿ ದ್ರೌಪದಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1992.

6. ಚ.ನ.ಶಂಕರ್‌ರಾವ್ – ಸಮಾಜಶಾಸ್ತ್ರ ಪರಿಚಯ. ಜೈಭಾರತ ಪ್ರಕಾಶನ, ಮಂಗಳೂರು. 1995_1996.

ಬುಟ್ಟಿ ಹೆಣೆಯುವಿಕೆ: ಪರಂಪರೆ ಮತ್ತು ಅಧುನಿಕತೆ

ಮುತ್ತುಶೆಟ್ಟಿ
ಸಂಶೋಧನಾರ್ಥಿ, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ
e-mail: muthusetty83@gmail.com

ಪ್ರಕೃತಿಯು ಸಕಲ ಜೀವರಾಶಿಗಳ ಅವಾಸಸ್ಥಾನವಾಗಿದ್ದು. ಇರಿಹಾ ಪ್ರಕೃತಿಯ ಮಡಿಲಲ್ಲಿ ಅನೇಕ ಸಮುದಾಮ್ಗಳಿಯಗಳು ವಾಸಮಾಡುತ್ತಿದ್ದು, ಅವುಗಳೆಲ್ಲವು ಜೀವನೋಪಾಯಕ್ಕಾಗಿ ಸುತ್ತಮುತ್ತಲಿನ ವಸ್ತುಗಳನ್ನು ಬಳಸಿಕೊಂಡು ಹಲವಾರು ಕಸುಬು ಮತ್ತು ಉಪಕಸುಬುಗಳನ್ನು ಕೈಗೊಂಡು ಜೀವನಾಗಿಸಲು ಪ್ರಾರಂಭಿಸಿದವು. ಅದೇ ರೀತಿಯಲ್ಲಿ ಅರಣ್ಯದಲ್ಲಿ ಹೆಚ್ಚಾಗಿ ದೊರೆಯುತ್ತಿದ್ದ ಬಿದಿರು, ಬೆತ್ತ, ಇಚಲುಕಡ್ಡಿ ಹಾಗೂ ಬಿತುಲುಗಳು, ಮುರಿತಾದವುಗಳನ್ನು ಬಳಸಿ ಸ್ಥಳೀಯ ಜನರಿಗೆ ಬೇಕಾದ ತಟ್ಟೆಬುಟ್ಟಲುಗಳನ್ನು ತಯಾರಿಸಿ ತಮ್ಮ ಜೀವನ ನಿರ್ವಹಣೆಗೆ ಬೇಕಾದ ಅಗತ್ಯ ವಸ್ತುಗಳಾದ ದವಸ–ಧಾನ್ಯ ಇಲ್ಲವೆ ಹಣ–ಕ್ಕಾಗಿಯೋ ಮಾರಾಟಮಾಡಲು ಮುಂದಾದರು ಈ ರೀತಿಯಾಗಿ ತಮ್ಮ ಬದುಕನ್ನು ನಡೆಸಲು ಒಂದು ಉದ್ಯೋಗ ಮಾರ್ಗವನ್ನು ಕಂಡು ಕೊಂಡರು. ಹೀಗೆ ಬುಟ್ಟಿ ಹೆಣೆಯುವುದನ್ನು ಪ್ರಧಾನವಾಗಿ ಕುಲಕಸುಬನ್ನಾಗಿ ಸ್ವೀಕರಿಸಿದ ಜನಸಮುದಾಯಗಳೆಂದರೆ, ಕೊರಮರು, ಕೊರಚರು, ಮೇದರು, ಕೊರಗರು, ಚೇಂಬಾರುರುಬರು, ನೋಡಗರು ಮೊದಲಾದವರು. ಪ್ರಸ್ತುತ ಪ್ರಬಲಭದಲ್ಲಿ ಕೊರಮರು, ಕೊರಚರು ಮತ್ತು ಮೇದರ ಸಮುದಾಯಗಳ ಬುಟ್ಟಿತಯಾ–ರಿಕೆಯಲ್ಲಿನ ಹಿನ್ನಲೆ, ನಂಬಿಕೆ, ಸಂಪ್ರದಾಯ ಆಚರಣೆಗಳ ಹಾಗೂ ಜ್ಞಾನ ಪರಂಪರೆಯ ಹಿಂದಿರುವ ರೋಕ ದೃಷ್ಟಿಯನ್ನು ಕುರಿತ ಮಾಹಿತಿಯನ್ನು ಕ್ಷೇತ್ರಕಾರ್ಯದ ಮುಖೇನಾ ಸಂಗ್ರಹಿಸಿ ವಿಶ್ಲೇಷಿಸುವುದು ಹಾಗೂ ಪ್ರಸ್ತುತದಲ್ಲಿ ಆಧುನಿಕರಣ ಮತ್ತು ಜಾಗತೀಕರಣದ ಪ್ರಭಾವಗಳಿಂದಾಗಿ ಬುಟ್ಟಿ ಹೆಣೆಯುವ ವೃತ್ತಿಯ ಮೇಲಾಗಿರುವ ಪರಿಣಾಮಗಳನ್ನು ಪರಿಶೀಲಿಸಲಾಗುವುದು. ಈ ಆಧುನಿಕತೆಯಿಭಾವಲಂತ ಹೇಗೆ ಒಂದು ಸಮುದಾಯದ ವೃತ್ತಿ ಬದುಕನ್ನು ಕಸಿದುಕೊಳ್ಳುವುದರ ಮೂಲಕ ಅವನ್ನೆ ನಂಬಿಕೊಂಡಿದ್ದ ಸಮುದಾಯಗಳನ್ನು ಬೀದಿಗೆ ತಂದ ಬಗೆಯನ್ನು ಕುರಿತು ಚರ್ಚಿಸಲಾಗುವುದು. ಇದರೊಂದಿಗೆ ಪಾರಂಪರಿಕವಾಗಿ ಬೆಳೆದು ಬಂದ ವೃತ್ತಿ ಕೌಶಲ್ಯವೊಂದು ಮಾರೆಯಾಗುತ್ತಿರುವುದನ್ನು ಕುರಿತು ವಿಶ್ಲೇಷಿಸಿ. ಈ ವೃತ್ತಿ ಪರಂಪರೆಯನ್ನು ಕಾಯ್ದುಕೊಂಡು ಹೋಗಲು ಹಾಗೂ ಅವನ್ನೇ ಕಸುಬನಾಗಿಸಿಕೊಂಡಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಬದುಕನ್ನು ಸುಧಾರಿಸುವ ಮತ್ತು ರಕ್ಷಿಸುವಲ್ಲಿ ಬೇಕಾದ ಅಗತ್ಯ ಕಾರ್ಯಗಳ ಬಗ್ಗೆ ವಿವೇಚಿಸಲಾಗುವುದು.

ಕೊರಮರ ಬುಟ್ಟಿ ತಯಾರಿಕೆಯ ಹಿನ್ನೆಲೆ :– ವಿಶ್ವದ ಮತ್ತು ಮಾನವನ ಉಗಮ ವಿಕಾಸದ ಬಗೆಗೆ ಚಿಂತನಾ ಮಂಥನಗಳು ನಡೆದಿವೆ. ಮಾನವನಿಗೆ ಪ್ರಕೃತಿಯ ನಿಗೂಢತೆಗಳಿಗೆ ಉತ್ತರ ಸಿಗದೇ ಇದ್ದಾಗ ಆ ಎಲ್ಲವನ್ನೂ ದೇವರು ಧರ್ಮದ ಹೆಸರಿನಲ್ಲಿ ನಂಬಿ ಅದರ ನೆರಳನಲ್ಲೇ ಬದುಕಲು ಆರಂಭಿಸಿ ಭಯ, ಭಕ್ತಿ, ನಂಬಿಕೆಗಳನ್ನು ಬೆಳೆಸಿಕೊಂಡರು. ಈ ನಂಬಿಕೆಗಳೇ ಮುಂದೆ ಹಲವು ರೂಪದ ಕಥೆ, ಕಾವ್ಯಗಳಾಗಿ ರೂಪುಗೊಂಡವು. ಅದೇ ರೀತಿಯಲ್ಲಿ ಕೊರಮರ ಬುಟ್ಟಿ ತಯಾರಿಕೆಯ ಹಿನ್ನೆಲೆ ಈ ರೀತಿ ಇದೆ. "ಹಿಂದೆ ದಶರಥ ಮತ್ತು ಕೌಶಲ್ಯ ದೇವಿಯರಿಗೆ ಮಕ್ಕಳಿರಲಿಲ್ಲ. ಅವರು ಮಕ್ಕಳಾಗಿ ಹಗಲಿರುಳು ಪರಿತಪಿಸುತ್ತಿದ್ದರು. ಶಿವ–ಪಾರ್ವತಿಯರ ಪ್ರಾರ್ಥನೆಯಲ್ಲಿಯೇ ಕಾಲ ಕಳೆಯುತ್ತಿದ್ದರು. ಇವರ ಭಕ್ತಿಯ ಮೊರೆ ಕೈಲಾಸದವರೆಗೂ ಮುಟ್ಟಿತು. ಶಿವ–ಪಾರ್ವತಿಯರು ಭೂಲೋಕದ ಕಡೆ ಹೊರಟರು. ಅಯೋಧ್ಯೆಗೆ ಬರುವಾಗ ಶಿವನು ಕೊರಮನ ವೇಷವನ್ನು, ಪಾರ್ವತಿಯು ಕೊರವಂಜಿಯ ವೇಷವನ್ನೂ ಧರಿಸಿ ಬಂದರು. ಪಟ್ಟಣದವರೆಗೆ ಬಂದು ಮರದಡಿಯಲ್ಲಿ ಶಿವನನ್ನು ಬಿಟ್ಟು ತಾನೊಬ್ಬಳೇ ತಲೆಯ ಮೇಲೆ ಬಿದಿರಿನ ಗೂಡೆಯೊಂದನ್ನು ಹೊತ್ತು ಮಂತ್ರದ ಕೋಲನ್ನು ಕೈಯಲ್ಲಿ ಹಿಡಿದು, ಪಟ್ಟಣದ ರಾಜಬೀದಿಯಲ್ಲಿ ಕಣಿ ಹೇಳುತ್ತೇನೆಂದು ಸಾರುತ್ತಾ ಬಂದಳು. ಆಕೆಯನ್ನು ನೋಡಿದ ರಾಜಪರಿವಾರದವರು ಅರಮನೆಗೆ ಕರೆದುಕೊಂಡು ಬಂದರು. ಆಗ ಕೊರವಂಜಿಯು ಕೌಶಲ್ಯದೇವಿಯ ಕೈ ನೋಡಿ ಕಣಿ ಹೇಳ ಮಕ್ಕಳ ಫಲ ಕೊಟ್ಟು ಹೊರಟಳು. ಮಹಾರಾಣಿ ಮುತ್ತು, ರತ್ನ, ವಜ್ರ, ವೈಢೂರ್ಯಗಳನ್ನೆಲ್ಲಾ ಕೊಡಲು ಹೋದರು. ಆಕೆ ಅವನ್ನೆಲ್ಲಾ ತಿರಸ್ಕರಿಸಿ, 'ಅಮ್ಮಾ ಮುತ್ತು–ರತ್ನ–ವಜ್ರ ವೈಢೂರ್ಯವೆಲ್ಲ ನಮ್ಮ ಮನೆಯ ಹುಳುಕು ಜೋಳ ಇದೆಲ್ಲ ನನಗೆ ಬೇಡ ನಿನ್ನಲ್ಲಿಯೇ ಇರಲಿ ಮಕ್ಕಳ ಫಲ ಆದ ನಂತರ ಕೊಡೆವೆಯಂತೆ' ಎಂದು ಹೇಳಿ ಹೊರಟಳಂತೆ. ಅದೇ ಸಮಯಕ್ಕೆ ಪರಮೇಶ್ವರ ಒಂದು ಬಿದಿರು ದಬ್ಬೆಯನ್ನು ಹೆಗಲ ಮೇಲಿಟ್ಟುಕೊಂಡು ಮಚ್ಚನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡು 'ಸಿಂಗಿ ಓ ಸಿಂಗೀ' ಎಂದು ಕೂಗುತ್ತಾ ಪಟ್ಟಣದ ಬೀದಿಗಳಲ್ಲಿ ಕೊರವಂಜಿಯನ್ನು ಹುಡುಕುತ್ತಾ ಬಂದು ಆಕೆಯನ್ನು ಕೂಡಿಕೊಂಡು ಕೈಲಾಸದತ್ತ ಹೋಗುವಾಗ ಪಾರ್ವತಿ ಶಿವನನ್ನು ಕುರಿತು ಸ್ವಾಮಿ ನಾವು ಈ ವೇಷ ಧರಿಸಿದ್ದಕ್ಕೆ ಗುರುತು ಉಳಸಬೇಕು ಎಂದು ಕೇಳಿಕೊಂಡಂತೆ. ಅದಕ್ಕೆ ಶಿವನು ಇಬ್ಬರು ಮಕ್ಕಳನ್ನು ಸೃಷ್ಟಿಸಿ, ತನ್ನ ಸೊಂಟದಲ್ಲಿದ್ದ ಮಚ್ಚನ್ನು ತೆಗೆದು ಆ ಮಚ್ಚಿಗೆ ಗೆಜ್ಜೆ ಕಟ್ಟಿ ಅಂಗೈ ಮೇಲೆ ಕುಣಿಸುತ್ತಾ ಆ ಮಕ್ಕಳಿಗೆ ಮಚ್ಚು ಹಿಡಿಯಲು ಹೇಳಿದನಂತೆ. ಒಬ್ಬನು ಮಚ್ಚಿನ ಮೇಲ್ಭಾಗವನ್ನು ಹಿಡಿದರೆ, ಮತ್ತೊಬ್ಬನು ಕೆಳಭಾಗವನ್ನು ಹಿಡಿದನಂತೆ. ಅದರಂತೆ ತನ್ನ ಹೆಗಲ ಮೇಲಿನ ಬಿದಿರು ದಬ್ಬೆಯನ್ನು ಹಿಡಿಯಲು ಹೇಳಿದಾಗ ಮಚ್ಚಿನ ಮೇಲ್ಭಾಗ ಹಿಡಿದ ಹುಡುಗ ದಬ್ಬೆಯ ತುದಿಯನ್ನು ಇನ್ನೊಬ್ಬ ದಬ್ಬೆಯ ಬುಡದ ಭಾಗವನ್ನು ಹಿಡಿದನಂತೆ. ಮಚ್ಚಿನ ಕೆಳ ಹಿಡಿಯ ಭಾಗವನ್ನು ಹಿಡಿದವನಿಗೆ ಗೌರಿಯ ಮಗನಾಗು ಎಂದು, ಮಚ್ಚಿನ ತುದಿ ಭಾಗವನ್ನು ಹಿಡಿದ ದವನಿಗೆ ಗಂಗೆ ಮಗನಾಗು ಎಂದು ವರವನ್ನು ಕೊಟ್ಟು ಇಬ್ಬರು ಹೆಣ್ಣು ಮಕ್ಕಳನ್ನು ಸೃಷ್ಟಿಸಿ, ಅವರಿಬ್ಬರಿಗೆ ಒಬ್ಬೊಬ್ಬರನ್ನು ಒಪ್ಪಿಸಿ, ಗೌರಿಯ ಮಗ ಕೊರಮನಾಗಲಿ, ಗಂಗೆಯ ಮಗ ಮೇದಾರನಾಗಲಿ ಎಂದು ಹರಸಿದನಂತೆ".

ಗೌರಿಯ ಮಕ್ಕಳು, ಗಂಗೆ ಮಕ್ಕಳು ಅಂದಿನಿಂದ ಬಿದಿರಿನ ಕೆಲಸ ಮಾಡುತ್ತಾ ಬಂದಿದ್ದಾರೆ. ಗಂಗೆಯ ಮಗ ಮೇದಾರ ಮಚ್ಚಿನ ಮೇಲ್ಭಾಗ ಹಿಡಿದಿದ್ದರಿಂದ ಅವನ ಮಚ್ಚಿಗೆ ಇಂದಿಗೂ ಹಿಡಿ ಇಲ್ಲ. ಕೊರಮರು ಬಳಸುವ ಮಚ್ಚಿಗೆ ಹಿಡಿ ಇದೆ. ಮೇದಾರರು ಬಿದಿರನ್ನು ತುದಿಯಿಂದ ಸೀಳಿದರೆ, ಕೊರಮರು, ಕೊರಚರು ಬುಡದಿಂದ ಸೀಳುತ್ತಾರೆ. ಈ ಮೇಲಿನ ಹುಟ್ಟಿನ ಹಿನ್ನೆಲೆಯನ್ನು ಗಮನಿಸಿದರೆ,

ತಮ್ಮ ಜಾತಿಯ ಹುಟ್ಟಿನ ಬಗೆಗೆ ಹಲವು ರೂಪದ ಕಥೆಗಳನ್ನು ರೂಪಿಸಿಕೊಂಡು ಸಾಮಾಜಿಕವಾಗಿ ಉತ್ತಮ ಸ್ಥಾನವನ್ನು ಗಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಇದರ ಜೊತೆಗೆ ಕೊರಮ, ಮೇದಾರ ನಡುವೆ ಯಾವುದೇ ರೀತಿಯ ಅನ್ಯೋನ್ಯ ಸಂಬಂಧಗಳಾಗಲೀ, ಒಂದೇ ಸಾಂಸ್ಕೃತಿಕ ಆಚರಣೆಗಳಾಗಲೀ ಕಂಡುಬರುವುದಿಲ್ಲ.

ಮೇದರ ಹುಟ್ಟಿಗೆ ಸಂಬಂಧಿಸಿದ ನಂಬಿಕೆಗಳು :– ಮೇದರು ಮಹೇಂದ್ರಾಚಲ ಪರ್ವತದಿಂದ ಬಂದವರಾದ್ದರಿಂದ ಮೇದರೆನ್ನುತ್ತಾರೆ. ಶಿವನ ಆಭರಣವಾದ ಹಾವುಗಳೇ ಬಿದಿರುಗಳಾಗಿವೆ ಎಂಬ ನಂಬಿಕೆ ಇವರಲ್ಲಿದೆ. ಆದ್ದರಿಂದ ನಾಗರಾಧನೆ ರೂಢಿಯಲ್ಲಿದೆ. ತಾವು ಪಾರ್ವತಿಗಾಗಿ ಬಿದಿರು ಕಡಿದು ಮೊರ ಮಾಡುವ ಶಿವಭಕ್ತರು. ಹಾಗಾಗಿ ಶಕ್ತಿಯ ಆರಾಧನೆ ಮಾಡುತ್ತೇವೆ ಎಂದು ನಂಬಿದ್ದಾರೆ.

ಕೊರಮರ, ಕೊರಚರ, ಮೇದರ ವೃತ್ತಿಗೆ ಸಂಬಂಧಿಸಿದ ನಂಬಿಕೆಗಳು:– ಕೊರಮರಲ್ಲಿ ಬಿದಿರು ಕಡಿಯುವ ಆಯುಧಗಳನ್ನು ಪೂಜೆ ಮಾಡಿಯೇ ಬಿದಿರು ಕಡಿಯಬೇಕು ಎಂಬ ನಂಬಿಕೆ ಇದೆ. ಇದರ ಹಿಂದಿನ ಆಶಯವೆಂದರೆ ಯಾವುದೇ ತೊಂದರೆಗಳಾಗುವುದಿಲ್ಲ ಎಂಬುದಾಗಿದೆ. ಅದೇ ರೀತಿಯಲ್ಲಿ ಮೇದರರಲ್ಲಿ ಎಳೆಯ ಬಿದಿರನ್ನು ಕಡಿದರೆ ಸಂತಾನಕ್ಕೆ ಧಕ್ಕೆಯಾಗುತ್ತದೆ ಎಂಬ ನಂಬಿಕೆ ಇದೆ. ಇದರ ಹಿಂದಿನ ಲೋಕದೃಷ್ಟಿ ಎಂದರೆ ಎಳೆಯ ಬಿದಿರು ಯಾವುದೇ ಉಪಯೋಗಕ್ಕೆ ಬರುವುದಿಲ್ಲ ಜೊತೆಗೆ ಬಿದಿರಿನ ಬೆಳವಣಿಗೆಯಾಗದೆ ನಾಶವಾಗುತ್ತದೆ. ಬಿದಿರನ್ನು ಕಾಪಾಡಿಕೊಂಡು ಹೋಗುವ ಕಾಳಜಿಯನ್ನು ಇಲ್ಲಿ ಗಮನಿಸಬಹುದಾಗಿದೆ.

ಮೇದರರಲ್ಲಿ ಅಮಾವಾಸ್ಯೆಯ ದಿನ ಬಿದಿರು ಕೆಲಸಗಳನ್ನು ಮಾಡಕೂಡದು ಎಂಬ ನಂಬಿಕೆ ಇದ್ದರೆ, ಕೊರಮರಲ್ಲಿ ಅಮಾವಾಸ್ಯೆಯ ದಿನ ಬಿದಿರನ್ನು ಕಡಿದರೆ ಆ ಬಿದಿರಿನಲ್ಲಿ ಕುಟ್ಟಿ ಹುಳ ಸೇರುತ್ತದೆ ಎಂಬ ನಂಬಿಕೆ ಇದೆ. ಕೊರಚರಲ್ಲಿ ಮೊದಲ ಸಲ ಬಿದಿರು ಕಡಿಯುವಾಗ ದೇವತೆಗಳ ಹೆಸರಿನಲ್ಲಿ ಬಲಿ ಕೊಟ್ಟು ನಂತರ ಕಡಿಯಬೇಕು ಎಂಬ ನಂಬಿಕೆ ಇದೆ. ಇದರಿಂದ ಯಾವುದೇ ತೊಂದರೆಗಳು ಸಂಭವಿಸುವುದಿಲ್ಲ. ಹೀಗೆ ತಮ್ಮದೇ ಆದ ನಂಬಿಕೆಗಳನ್ನು ಹೊಂದಿದ್ದಾರೆ.

ಕೊರಮರ, ಕೊರಚರ, ಮೇದರ ಬುಟ್ಟಿ ತಯಾರಿಕೆಯ ಸಾಂಸ್ಕೃತಿಕ ಆಚರಣೆಗಳು:– ಮೇದರು ನವೆಂಬರ್ ಅಥವಾ ಡಿಸೆಂಬರ್ ತಿಂಗಳನಲ್ಲಿ ಬಿದಿರು ಕಡಿಯುವ ಮೊದಲು ಕತ್ತಿ ಹಬ್ಬವನ್ನು ಆಚರಿಸುತ್ತಾರೆ. ಒಂದು ವರ್ಷದಲ್ಲಿ ಬಿದಿರು ಬೊಂಬುಗಳು ಬಲಿತ ನಂತರ ಅದನ್ನು ಕತ್ತರಿಸುವ ಮೊದಲು ನಡೆಸುವ ಆಯುಧಗಳ ಪೂಜೆಯೇ ಕತ್ತಿ ಹಬ್ಬವಾಗಿದೆ. ಬಿದಿರನ್ನು ತರುವ ಮೊದಲು ಊರಿನ ಯಜಮಾನನ ಮುಂದೆ ಕತ್ತಿಗಳನ್ನು ತಂದಿಡಬೇಕು. ಅದನ್ನು ಬಿದಿರಿನ ಗಳಗಳಂತೆ ಇಟ್ಟು ಪೂಜೆ ಮಾಡಿ ಬಲಿ ನೀಡಿದ ಮೂರು ದಿನಗಳ ನಂತರ ಕತ್ತಿಯನ್ನು ತೆಗೆದುಕೊಳ್ಳುತ್ತಾನೆ. ಆದರೆ ಕೊರಮ, ಕೊರಚರಲ್ಲಿ ಈ ಹಬ್ಬವನ್ನು ಆಚರಿಸುವುದಿಲ್ಲ. ಇದರ ಬದಲು ದಸರಾ ಹಬ್ಬದಂದು ತಾವು ಬುಟ್ಟಿ ಹೆಣೆಯಲು ಉಪಯೋಗಿಸುವ ಎಲ್ಲಾ ಆಯುಧಗಳನ್ನು ತೊಳೆದು ಅರಿಶಿಣ, ಕುಂಕುಮ ಇಟ್ಟು ಪೂಜೆ ಮಾಡಿ ಬಲಿ ಕೊಟ್ಟ ನಂತರ ರಾತ್ರಿ ಹಿರಿಯರ ಹಬ್ಬ ಆಚರಿಸುವಾಗ ಅವುಗಳನ್ನು ಎಡೆಯ ಪಕ್ಕದಲ್ಲಿಟ್ಟು ಪೂಜೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಕೊರಮರು ಮದುವೆ ಶುಭ ಸಮಾರಂಭಕ್ಕೆ ಬೇಕಾದ ಮೊರ, ಬೀಸಣಿಗೆ, ಹೆಡಿಗೆ ಇತರೆ ಬುಟ್ಟಿಗಳನ್ನು ತಯಾರಿಸಿಕೊಟ್ಟ ಸಂದರ್ಭದಲ್ಲಿ ಕಾಯಿ, ಹಣ್ಣು, ಎಲೆ, ಅಡಿಕೆ, ಅರಿಶಿಣ ಕುಂಕುಮ, ಹಣ, ಧಾನ್ಯಗಳನ್ನು 'ಹಕ್ಕುಪಡಿ' ರೂಪದಲ್ಲಿ ಪಡೆಯುವ ಸಂಪ್ರದಾಯ ರೂಢಿಯಲ್ಲಿದೆ. ಇದರಿಂದ ನವ ವಧುವರರಿಗೆ ಶುಭವಾಗುತ್ತದೆ. ಅದೇ ರೀತಿಯಲ್ಲಿ ತೊಟ್ಟಿಲು ಹೆಣೆದು ಕೊಟ್ಟ ಸಂದರ್ಭದಲ್ಲಿ ಕಡಲೆ ಸಕ್ಕರೆ, ಅರಿಶಿಣ, ಕುಂಕುಮ, ಬಳೆ, ಎಲೆ, ಅಡಿಕೆ ಕಾಣಿಕೆಯನ್ನು ಮಗುವಿನ ತಾಯಿಯ ಕೈಯಿಂದ ಕೊಡಿಸುವ ಸಂಪ್ರದಾಯವಿದೆ. ಇದರಿಂದ ಮಗುವಿನ ಆಯಸ್ಸು ವೃದ್ಧಿಯಾಗುತ್ತದೆ ಎಂದು ನಂಬಿದ್ದಾರೆ.

ಬುಟ್ಟಿ ತಯಾರಿಕೆಯಲ್ಲಿನ ಕೌಶಲಗಳು ಮತ್ತು ವ್ಯತ್ಯಾಸ :– ಬುಟ್ಟಿ ತಯಾರಿಕೆಯು ಪ್ರದೇಶದಿಂದ ಪ್ರದೇಶಕ್ಕೆ ಜನಾಂಗದಿಂದ ಜನಾಂಗಕ್ಕೆ ಪರಿಕರಗಳ ಬಳಕೆಯಲ್ಲಿ ತಯಾರಿಕೆಯ ವಿಧಾನದಲ್ಲಿ ಬುಟ್ಟಿಗಳ ವೈವಿಧ್ಯತೆಯಲ್ಲಿ ವ್ಯತ್ಯಾಸವಿರುವುದನ್ನು ಕಾಣಬಹುದಾಗಿದೆ. ಕೊರಮರು ಬುಟ್ಟಿಗಳನ್ನು ತಯಾರಿಸುವ ಸಂದರ್ಭದಲ್ಲಿ ಬಿದಿರಿನ ಆಯ್ಕೆಯು ಪ್ರಮುಖವಾಗಿರುತ್ತದೆ. ಬಿದಿರನ್ನು ತರಲು ಸಾಮಾನ್ಯವಾಗಿ ಪುರುಷರೇ ಹೋಗುತ್ತಾರೆ. ಮಹಿಳೆಯರು ಇವರ ಸಹಾಯಕ್ಕೆ ಇರುತ್ತಾರೆ. ಬಿದಿರಿನಲ್ಲಿ ಪ್ರಮುಖವಾಗಿ ಎರಡು ಪ್ರಕಾರಗಳಿರುತ್ತವೆ ಕಿರಿ ಬಿದಿರು ಮತ್ತು ಹೆಬ್ಬಿದಿರು. ಇದರಲ್ಲಿ ಕಿರಿ ಬಿದಿರು ಬುಟ್ಟಿ ತಯಾರಿಸಲು ಅನುಕೂಲವಾಗಿರುವುದರೊಂದಿಗೆ ದೀರ್ಘಕಾಲದವರೆಗೆ ಬಾಳಿಕೆ ಬರುತ್ತವೆ. ಬಿದಿರನ್ನು ಕಡಿಯುವ ಸಂದರ್ಭದಲ್ಲಿ ಅತಿ ಎಳಸಲ್ಲದ ಮತ್ತು ಬಲಿತವಾಗದ ಬಿದಿರುಗಳನ್ನು ಆಯ್ಕೆ ಮಾಡಿಕೊಂಡು ಕಡಿದು ತರುತ್ತಾರೆ. ಬಿದಿರನ್ನು ಸಿಗಿಯುವ ಸಂದರ್ಭದಲ್ಲಿ ತಾವು ಮೊದಲೇ ಯಾವ ಬುಟ್ಟಿ ಸಾಧನಗಳನ್ನು ತಯಾರಿಸಿಕೊಳ್ಳಬೇಕೆಂದು ನಿರ್ಧರಿಸಿ ನಂತರ ಅನುಕೂಲಕ್ಕೆ ತಕ್ಕಂತೆ ಸಿಗಿಯುತ್ತಾರೆ. ತಾವು ತಯಾರಿಸಬೇಕಾದ ಬುಟ್ಟಿಯ ಸಾಧನಕ್ಕೆ ಬೇಕಾಗಬಹುದಾದ ಅಗಲ, ಕಿರು ಅಚ್ಚೆಗಳು, ಐರು, ಗುಂಡು, ದಬ್ಬೆಗಳು ಮೊದಲಾದವುಗಳನ್ನು ಸೂಕ್ಷ್ಮ ಕೌಶಲದಿಂದ ತಯಾರಿಸಿಕೊಳ್ಳುತ್ತಾರೆ. ಬಣ್ಣ ಹಚ್ಚಬೇಕಾದ ಮೊದಲೇ ಹಚ್ಚಿ ನಂತರ ಹೆಣೆಯುತ್ತಾರೆ. ಗ್ರಾಹಕರ ಅವಶ್ಯಕತೆಗೆ ಅನುಗುಣವಾಗಿ ಚಿಕ್ಕದೊಡ್ಡ ಗಾತ್ರದ ಬುಟ್ಟಿಗಳನ್ನು ತಯಾರಿಸುತ್ತಾರೆ. ಇವರು ತಯಾರಿಸಿದ ಬುಟ್ಟಿಗಳು ದೀರ್ಘ ಕಾಲದವರೆಗೆ ಬಾಳಿಕೆ ಬರುತ್ತವೆ. ಇವರ ಬುಟ್ಟಿ ತಯಾರಿಕೆಯು ತುಂಬಾ ನಿಧಾನವಾಗಿರುತ್ತದೆ. ದೀರ್ಘ ಕಾಲದವರೆಗೂ ಇವರು ಊರಿಂದ ಊರಿಗೆ ಕಾಲ್ನಡುಗೆ ಮುಖಾಂತರ ತೆರಳಿ ವ್ಯಾಪಾರ ಮಾಡಿ, ದವಸ ಧಾನ್ಯ ಹಣವನ್ನು ಪಡೆದು ಜೀವನ ಸಾಗಿಸುತ್ತಾ ಬಂದಿದ್ದಾರೆ.

ಕೊರಚರು ಹೆಚ್ಚಾಗಿ ಈಚಲು ಕಡ್ಡಿ ಮತ್ತು ಬಿದಿರನ್ನು ಬಳಸಿಕೊಂಡು ಬುಟ್ಟಿಗಳನ್ನು ತಯಾರಿಸುತ್ತಾರೆ. ಇವರು ತಯಾರಿಸಿದ ಬುಟ್ಟಿಗಳು ತುಂಬಾ ಹೊರಟಾಗಿದ್ದು, ದೀರ್ಘಕಾಲದವರೆಗೆ ಬಾಳಿಕೆ ಬರುತ್ತವೆ. ಮೇದರು ಬಿದಿರು ಮತ್ತು ಬೆತ್ತದ ಸಹಾಯದಿಂದ ಬುಟ್ಟಿಗಳನ್ನು ತಯಾರಿಸುತ್ತಾರೆ. ಇವರು ಬುಟ್ಟಿಗಳನ್ನು ತಯಾರಿಸುವ ಸಂದರ್ಭದಲ್ಲಿ ಬಿದಿರು ದಬ್ಬೆಗಳನ್ನು ತುಂಬಾ ಚಿಕ್ಕಚಿಕ್ಕದಾಗಿ

ಭಾಗ ಮಾಡಿಕೊಂಡು ಬಹಳ ವೇಗವಾಗಿ ಮತ್ತು ಸುಂದರವಾಗಿ ಬುಟ್ಟಿಗಳನ್ನು ತಯಾರಿಸುತ್ತಾರೆ. ಇವರು ಬುಟ್ಟಿಗಳನ್ನು ಮಾರುವಾಗ ಚಿಕ್ಕ ಚಿಕ್ಕ ಮಳಿಗೆಗಳನ್ನು ಇಟ್ಟುಕೊಂಡು ಇಲ್ಲವೇ ತಮ್ಮ ಸಮುದಾಯದವರಿಂದ ಕೊಂಡುಕೊಂಡು ಮಾರುತ್ತಾರೆ. ಇವರು ತಯಾರಿಸುವ ಬುಟ್ಟಿಗಳು ದೀರ್ಘಕಾಲದವರೆಗೆ ಬಾಳಿಕೆ ಬರುವುದಿಲ್ಲ. ಕಾರಣ ತಯಾರಿಕೆಯ ಸಂದರ್ಭದಲ್ಲಿ ಬಿದಿರನ್ನು ಚಿಕ್ಕಚಿಕ್ಕ ಭಾಗವಾಗಿ ಮಾಡಿಕೊಳ್ಳುವುದರಿಂದ ಬಹು ಬೇಗನೆ ಕಳಚಿಕೊಂಡು ಹಾಳಾಗುತ್ತವೆ.

ಕೊರಮರು, ಕೊರಚರು, ಮೇದರು ಬುಟ್ಟಿ ಹೆಣೆಯುವಾಗ ಬಳಸುವ ಸಾಧನಗಳೆಂದರೆ ಮಚ್ಚು, ಕೊಡಲಿ, ಕತ್ತಿ, ಸೀಬು ಎರೆಯುವ ಕತ್ತಿ, ಹಂಬು, ಚಾಕು, ಕುಡುಗೋಲು ಇನ್ನೂ ಮುಂತಾದವು. ಇದರ ಜೊತೆಗೆ ಇವರು ಯಾವುದೇ ರೀತಿಯ ಟೇಪು ಅಥವಾ ಸ್ಕೇಲ್ ಇತ್ಯಾದಿ ಆಧುನಿಕ ಸಾಧನಗಳ ಬದಲು ತಮ್ಮ ಕೈ ಬೆರಳಿನ ಗೇಣು ಮೊಳದ ಸಹಾಯದಿಂದ ಸುಂದರವಾದ ಮೊರ, ಗೂಡೆ, ಮಂಕರಿ, ಹೆಡಿಗೆ, ತೊಟ್ಟಿಲು, ದೇವರ ಪೆಟ್ಟಿಗೆ, ಧಾನ್ಯದ ಕಣಜ, ಮೀನು ಮಂಕರಿ, ಅಡಿಕೆ ಕೈ ತಟ್ಟೆ, ಕಾಯಿ ಕುಕ್ಕೆ, ಕೋಳಿ ಪಂಜರ, ಏಣಿ ಮೊದಲಾದವುಗಳನ್ನು ಬೇಡಿಕೆಗೆ ಅನುಸಾರವಾಗಿ ಸಿದ್ಧಪಡಿಸುತ್ತಾರೆ. ಇದರ ಜೊತೆಗೆ ಹಿಂದೆ ಉಪಯೋಗಿಸುತ್ತಿದ್ದ ಬಿದಿರಿನಿಂದ ತಯಾರಿಸಿದ ಲೋಟ, ಚಮಚ, ಹೂಜಿ, ಹಾವು, ಸೇರು, ಕೊಟ್ಟ, ಬಟ್ಟೆ ನೇತು ಹಾಕುವ ಸಾಧನ, ಕಾಳುಗಳನ್ನು ತುಂಬಲು ಬಳಸುತ್ತಿದ್ದ ಬಿದಿರು ಕೊಳವೆಗಳು, ರೈಲುಬುಟ್ಟಿ, ಪೆಟ್ಟಿಗೆಗಳನ್ನು ತಯಾರಿಸುತ್ತಿದ್ದರು. ಇವುಗಳು ಇಂದು ಕಣ್ಮರೆಯಾಗಿವೆ. ಆದರೆ ಇಂದು ಕೈ ಬುಟ್ಟಿ ಬಣ್ಣ ಬಣ್ಣದ ಹೂದಾನಿಗಳು, ಹೂ ಕುಂದಗಳು ಅಲಂಕಾರಿಕ ವಸ್ತುಗಳನ್ನು ವೈವಿಧ್ಯತೆಗಳಂದ ಕೂಡಿದ ಕಲಾತ್ಮಕ ವಸ್ತುಗಳನ್ನು ಬಿದಿರು ಮತ್ತು ಬೆತ್ತದ ಸಹಾಯದಿಂದ ಹೆಣೆಯುವುದನ್ನು ರೂಢಿಸಿಕೊಂಡಿದ್ದಾರೆ.

ಆಧುನಿಕತೆಯ ಪ್ರಭಾವ :– ಕೊರಮ, ಕೊರಚ, ಮೇದರ ಸಮುದಾಯಗಳು ಪ್ರಕೃತಿ ಪ್ರಿಯರಾಗಿದ್ದು, ಪ್ರಕೃತಿಯೊಡನೆ ಹೊಂದಾಣಿಕೆ ಮಾಡಿಕೊಂಡು ಬದುಕುತ್ತಿದ್ದರು. ತಮ್ಮ ಮೂಲ ಕಸುಬು ಬುಟ್ಟಿ ಹೆಣೆಯಲು ಬೇಕಾದ ಬಿದಿರು, ಬೆತ್ತ, ಈಚಲು ಕಡ್ಡಿಗಳನ್ನು ಅರಣ್ಯದಲ್ಲಿ ಬೇಕಾ ಬಿಟ್ಟಿ ಕಡಿಯದೆ ತಮಗೆ ಬೇಕಾದಷ್ಟು ಮಾತ್ರ ಕಡಿದು ಅವು ಮುಂದಿನ ದಿನಗಳಲ್ಲಿ ಸಮೃದ್ಧವಾಗಿ ಬೆಳೆಯುವಂತೆ ಜಾಗ್ರತೆ ವಹಿಸುತ್ತಿದ್ದರು. ಆದರೆ ನಂತರದ ದಿನಗಳಲ್ಲಿ ಸರ್ಕಾರ ಜಾರಿಗೆ ತಂದ ಅರಣ್ಯ ಸಂರಕ್ಷಣಾ ಕಾಯಿದೆಯು ಇವರ ಹಕ್ಕನ್ನು ಕಿತ್ತುಕೊಂಡಿತು. ಹೊಸ ಆರ್ಥಿಕ ನೀತಿಯಿಂದ ಕೃಷಿ, ತೋಟಗಾರಿಕೆ, ಗಣಿಗಾರಿಕೆ, ಅರಣ್ಯ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾದ ಕಾರಣದಿಂದಾಗಿ ಸಮೃದ್ಧ ಅರಣ್ಯವೆಲ್ಲಾ ನಾಶವಾಯಿತು. ಇದರಿಂದ ಕಚ್ಚಾ ಸಾಮಗ್ರಿಗಳ ಕೊರತೆ ಉಂಟಾಯಿತು. ಪಾರಂಪರಿಕ ಜ್ಞಾನವನ್ನು ಕದ್ದು ಆಧುನಿಕತೆಗೆ ತಕ್ಕ ಹಾಗೆ ಬಂಡವಾಳಗಾರರು ಬಳಸಿಕೊಂಡರು. ಆಗ ಬಿದಿರಿನ ಬುಟ್ಟಿಗಳ ಜಾಗದಲ್ಲಿ ಪ್ಲಾಸ್ಟಿಕ್ ಮತ್ತು ಪೈಬರ್‌ನಂತಹ ಮೊರ, ಮಂಕರಿ, ಗೂಡೆ ಇತ್ಯಾದಿಗಳು ಅನುಕರಿಸಿ ಬಂದವು. ಇದರಿಂದಾಗಿ ಬಿದಿರಿನ ಬುಟ್ಟಿಗಳಿಗೆ ಬೆಲೆಯೇ ಇಲ್ಲದಂತಾಯಿತು. ಒಂದು ಕಡೆ ಬುಟ್ಟಿ ಹೆಣೆಯಲು ಬೇಕಾಗುವ ಪರಿಕರಗಳ ಕೊರತೆಯಾದರೆ, ಮತ್ತೊಂದು ಕಡೆ ಪ್ಲಾಸ್ಟಿಕ್‌ನ ಹಾವಳಿಯಿಂದಾಗಿ ಇದನ್ನೆ ತಮ್ಮ ಮೂಲ ಕಸುಬನ್ನಾಗಿ ನಂಬಿಕೊಂಡಿದ್ದ ಕೊರಮ, ಕೊರಚ, ಮೇದರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಜೀವನದ ಮೇಲೆ ದುಷ್ಪರಿಣಾಮವುಂಟಾಯಿತು. ಇದರಿಂದ ಜೀವನ ನಡೆಸಲು ಬೇರೆ ವ್ಯಾಪಾರ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇನ್ನು ಕೆಲವರು ನಗರ ಪ್ರದೇಶದತ್ತ ಪ್ರಯಾಣ ಬೆಳೆಸಿದರು. ಪ್ಲಾಸ್ಟಿಕ್ ಪೈಬರ್‌ನಿಂದ ತಯಾರಿಸುವ ಬುಟ್ಟಿಯ ರೂಪಾಂತರಗಳ ಮೇಲೆ ಜನರ ಒಲವು ಹೆಚ್ಚಾಗಿರುವುದರಿಂದ ಬಿದಿರಿನ ಬುಟ್ಟಿಗಳಿಗೆ ಬೇಡಿಕೆ ಕಡಿಮೆಯಾಗಿದೆ. ಕೇವಲ ಮದುವೆ, ಶುಭ ಸಮಾರಂಭಗಳ ಸಂದರ್ಭದಲ್ಲಿ ಮಾತ್ರ ಬೇಡಿಕೆ ಇದೆ. ಆದರೆ ಇಂತಹ ಪ್ಲಾಸ್ಟಿಕ್ ವಸ್ತುಗಳನ್ನು ಬಳಸುವುದು ಆರೋಗ್ಯದ ದೃಷ್ಟಿಯಿಂದಲೂ ಅಪಾಯಕಾರಿಯಾಗಿದೆ.

ಪರಿಹಾರೋಪಾಯಗಳು :– ಕೊರಮರ, ಕೊರಚರ ಮತ್ತು ಮೇದರ ಬುಟ್ಟಿ ಹೆಣೆಯುವ ಕೌಶಲ್ಯವೊಂದನ್ನು ಉಳಿಸಿಕೊಳ್ಳಬೇಕಾದರೆ ಆಧುನಿಕತೆಗೆ ಅನುಗುಣವಾಗಿ ನೂತನ ರೂಪದ ಬುಟ್ಟಿಗಳನ್ನು ತಯಾರಿಸಿ, ಗ್ರಾಹಕರನ್ನು ಆಕರ್ಷಿಸಬೇಕು. ಸರ್ಕಾರವು ಗುಡ್ಡಗಾಡು ಪ್ರದೇಶ, ಮಳೆಯಾಶ್ರಿತ ಪ್ರದೇಶಗಳಲ್ಲಿ ಬಿದಿರನ್ನು ಹೆಚ್ಚಾಗಿ ಬೆಳೆಸಿ, ಮಾರುಕಟ್ಟೆಯ ಮೂಲಕ ನಿರಂತರವಾಗಿ ದೊರೆಯುವಂತೆ ವ್ಯವಸ್ಥೆ ಕೈಗೊಳ್ಳಬೇಕು. ಬಿದಿರಿನ ವಸ್ತುಗಳ ಬಳಕೆಗೆ ಜನರಲ್ಲಿ ಜಾಗೃತಿ ಪ್ರಚಾರ ಮಾಡಬೇಕು. ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಗೊಂಡ ಬುಟ್ಟಿ ತಯಾರಿಕೆಯನ್ನು ಉಳಿಸಿಕೊಂಡು ಹೋಗಲು ಪ್ರೋತ್ಸಾಹಿಸಬೇಕು. ಬಿದಿರನ್ನು ಹೆಚ್ಚಾಗಿ ಕಾಗದ ತಯಾರಿಕೆಯಲ್ಲಿ ಬಳಸುವುದನ್ನು ಕಡಿಮೆ ಮಾಡಬೇಕು. ಆಧುನಿಕತೆಗೆ ಅನುಗುಣವಾಗಿ ಗ್ರಾಹಕರ ಅವಶ್ಯಕತೆಯನ್ನು ಅರಿತು, ನವೀನ ರೂಪದ ಬುಟ್ಟಿಗಳನ್ನು ತಯಾರಿಸಲು ತರಬೇತಿಗೊಳಿಸಬೇಕಾಗಿದೆ. ಆ ಮೂಲಕ ಪಾರಂಪರಿಕ ಜ್ಞಾನವನ್ನು ಉಳಿಸಿ ಬೆಳೆಸಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಕ್ಷೇತ್ರ ಕಾರ್ಯದ ಮಾಹಿತಿ

ವಕ್ಕಲಿಗರು

ಹೆಸರು	ವಯಸ್ಸು	ವೃತ್ತಿ	ವಿಳಾಸ
ವೆಂಕಟಮ್ಮ	೬೮	ಬುಟ್ಟಿ ಹೆಣೆಯುವುದು	ಮಾಗನೂರು, ಮಂಡ್ಯ ಜಿಲ್ಲೆ
ಕಮಲಮ್ಮ	೬೦	ಕೂಲಿ	ಕೂನನಪುರ, ಮಂಡ್ಯ ಜಿಲ್ಲೆ
ಮರಮ್ಮ	೬೩	ಬುಟ್ಟಿ ಹೆಣೆಯುವುದು	ಮಂಡ್ಯ
ಚಂದ್ರಪ್ಪ	೫೫	ಬುಟ್ಟಿ ಹೆಣೆಯುವುದು	ಗೋಪಾಳ

ಪರಾಮರ್ಶನ ಗ್ರಂಥಗಳು

1. ಎಚ್.ಜೆ. ಲಕ್ಕಪ್ಪಗೌಡ (ಸಂ.), "ಕರ್ನಾಟಕದ ಬುಡಕಟ್ಟುಗಳು", ಸಂಪುಟ–1, 2, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 2000.

2. ಬಿ.ಪಿ. ರಾಮಯ್ಯ, "ದಕ್ಷಿಣ ಕರ್ನಾಟಕದ ಕೊರಮರು: ಒಂದು ಸಾಂಸ್ಕೃತಿಕ ಅಧ್ಯಯನ", ಮಾನಸ ಪ್ರಕಾಶನ, ಕುಮುಟ, ಉತ್ತರ ಕ'ನ್ನಡ, 2013.

3. ಎಂ.ವಿ. ರವಿ, "ಹಾಸನ ಜಿಲ್ಲೆಯ ಕೊರಮರ ಸಾಂಸ್ಕೃತಿಕ ಅಧ್ಯಯನ", ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2000.

4. ಅಂತರ್‌ಜಾಲದ ಮಾಹಿತಿ.

ಬಾಲ ವೈಧವ್ಯ: ಒಂದು ಅವಲೋಕನ

ಡಾ. ಭಾಗ್ಯಶ್ರೀ ಹ. ದೊಡಮನಿ[1], ಶ್ರೀಮತಿ ಶಾಂತಾದೇವಿ ಪಾಟೀಲ[2]
[1]ಸಹಾಯಕ ಪ್ರಾಧ್ಯಾಪಕರು, [2] ಯೋಜನಾ ಸಹಾಯಕರು, ಮಹಿಳಾ ಅಧ್ಯಯನ ವಿಭಾಗ, ಕ. ರಾ. ಮ. ವಿ. ವಿ. ವಿಜಯಪುರ

ಬೆನ್ನಿನ ಮೇಲೆ ಪುಸ್ತಕ ಹೊತ್ತು ನಗುಮೊಗವಿ ಶಾಲೆಗೆ ಹೋಗಬೇಕಾದ ವಯಸ್ಸಿಗೆ ಹೆಣಿಗೆ ವಿವಾಹವೇ ಅರಿತಿಮ, ಇಲ್ಲವಿದ್ದರೆ ಆತ್ಮವಾಗಿ ಅಸ್ಪಾಶಬೇಕಾಗುತ್ತವೆ ಎಂಬ ನಂಬಿಕೆಯನ್ನು ಹುಟ್ಟು ಹಾಕಿ ಕನ್ಯಾಪೆರೆಯಂಬಿದ ಖಿಡುಗಡೆ ಹೊಂದಬೇಕೆಂಬ ಅವಸರದಲ್ಲಿ ಪಾಲಕರು ಖಾಯಿಲೆ ಆಗಿ ತಮ್ಮ ಮಗಳನ್ನು ಸೆರೆವಾಸ ಅನುಭವಿಸುವಂತೆ ಮಾಡುತ್ತಾ ಖರಿದಿದ್ದಾರೆ. ವಿಧವಾ ಪುನರ್ ವಿವಾಹ ಕಾನೂ ಜಾರಿಯಲ್ಲಿ ಖರುವುದಕ್ಕಿಂತ ಮುಂಚೆ ಬಾಲ ವಿಧವೆಯರು ಚೀವನಪೂರ್ತಿ ವಿಧವೆತನದ ಕರಾಳ ಮುಖದ ದರ್ಶನ ಮಾಡಿಕೊಂಡಿಸೇ ಸಾಯಬೇಕಾಗುತ್ತಿತ್ತು. ಹಾಗೆಂದ ಮಾತ್ರಕ್ಕೆ ಈಗ ವಿಧವೆಯರ ಪುನರ್ ವಿವಾಹಕ್ಕೆ ಸಮಾಚದಲ್ಲಿ ಮಾನ್ಯತೆ ಇದೆ ಎಂದು ಅರ್ಥವಲ್ಲ.

ಹೆಣ್ಣು ಕನಸು ಮನಸ್ಸಿನಲ್ಲೂ ಯೋಚಿಸಿರದಂಥ ಕೆಟ್ಟ ಘಟನೆ ಪತಿಯ ಅಗಲಿಕೆ, ಜೀವನದುದ್ದುಕ್ಕೂ ಜೀವನ ಸಂಗಾತಿಯಾಗಿರುವೆವು ಎಂಬ ಕನಸ್ಸುಗಳ ನಡುವೆ ಮರೆಯಾಗಿ ಹೋದರೆ ಭವಿಷ್ಯದ ಗತಿಯೇನು ಎಂದು ಆ ಮುಗ್ಧ ಬಾಲೆಗೆ ಕರುಳು ಕತ್ತರಿಸಿದಷ್ಟು ಅಸಹನೀಯ ನೊವು.

ನಮ್ಮ ಸಮಾಜದಲ್ಲಿರುವ ಸಾಮಾಜಿಕ ಮೌಲ್ಯಗಳ ಅಚ್ಚು ಲಿಂಗಾಧಾರಿತ ಸಾಮಾಜೀಕರಣದ ಪ್ರಕ್ರಿಯೆ ಮೂಲಕ ಚಾಚು ತಪ್ಪದೇ ನಡೆದು ಬಂದಿದೆ ಎನ್ನುವುದಕ್ಕೆ ವಿಧವೆಯರು, ಚಿಕ್ಕ ವಯಸ್ಸಿನವರು, ಇನ್ನೂ ಮಕ್ಕಳಲ್ಲದವರು, ವಿಧವೆಯರಾಗಿಯೇ ಜೀವನ ಸಾಗಿಸುತ್ತಿರುವುದೇ ಸಾಕ್ಷಿಯಾಗಿದೆ. ಹಿಂದಿನ ಕಾಲದಲ್ಲಿ ಎಷ್ಟೋ ಬಾರಿ ತಮ್ಮ ತಮ್ಮ ಪತಿಯಂದಿರ ಮುಖವನ್ನೇ ನೋಡದೇ ವಿಧವಾಪಟ್ಟವನ್ನು ಧರಿಸಿದವರಾಗಿದ್ದಾರೆ. ಇನ್ನೂ ಜಗತ್ತನ್ನೇ ಅರಿಅಯದ ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿಲ್ಲದವರನ್ನು, ವಿವಾಹವೆಂದರೆ ಎನು? ಎಂಬುದೇ ಗೊತ್ತಲ್ಲದ ಬಾಲಕಿಯರನ್ನು ವಿವಾಹ ಅನ್ನುವ ಸಂಸ್ಥೆಯ ನೊಗ ಹೊರೆಸಿ ಸಂಸಾರಕ್ಕೆ ತಳ್ಳ ಹಾಕಲಾಗುತ್ತಾ ಬಂದಿದೆ. ಇದು ಕೂಡಾ ಪುರುಷಪ್ರಧಾನ ವ್ಯವಸ್ಥೆಯ, ಮಹಿಳೆಯರ ಮೇಲೆನ ದೌರ್ಜನ್ಯದ ಇನ್ನೊಂದು ಸ್ವರೂಪವಷ್ಟೇ. ಈಗಲೂ ಸಹ ಬಾಲ್ಯ ವಿವಾಹಗಳು ಪ್ರಚಲಿತದಲ್ಲಿವೆ. ವಿವಾಹದ ಕುರುತು ಅದರಲ್ಲಿ ಹೆಣ್ಣಿಗೆ ವಿವಾಹವೆಂಬುದು ಅನಿವಾರ್ಯವೆಂಬುದರ ಕುರಿತು ಸಮಾಜದಲ್ಲಿ ಬಿತ್ತಲಾದ ಜೀಜ ತನ್ನ ಬೇರುಗಳನ್ನು ಪಸರಿಸುತ್ತಲೇ ಹೋಗುತ್ತಿದೆ.

ಆಡುವ ಮಗುವನ್ನು ತಂದು ಸಂಸಾರಕ್ಕೆ ದೂಡಿದರೆ ಹೇಗಾಗಲಿಕ್ಕಿಲ್ಲ ಎಂದು ಯೋಚಿಸದ ಸಮಾಜ, ಮಕ್ಕಳು ಸಂಸಾರಕ್ಕೆ ಬಿದ್ದ ಮೇಲೆ ಎಲ್ಲ ಕಲಿತುಕೊಳ್ಳುತ್ತಾರೆ. ಸರಿ ಹೋಗುತ್ತದೆ ಅಥವಾ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ ಎಂಬ ವಿಶ್ವಾಸದ ಮಾತುಗಳನ್ನು ತಲೆ ತುಂಬಿಸಿ ತಿಳಿಸುವ ಅದೇ ಸಮಾಜ ಅವಲ ಬದುಕಿನ ಜವಾಬ್ದಾರಿಯನ್ನು ತಾನು ಹೊರಲು ತಯಾರಿಲ್ಲ. ಆ ಬಾಲ ವೈಧವ್ಯಕ್ಕೆ ಆ ಮಗುನೇ ಕಾರಣ. ಹಿಂದಿನ ಜನ್ಮದ ಪಾಪದ ಪಲ. ಕೆಟ್ಟ ನಕ್ಷತ್ರದಲ್ಲಿ ಹುಟ್ಟಿರುವವಳು, ಹಣೆಬರಹ ಚಿನ್ನಾಗಿರಲಿಲ್ಲ, ಕಾಲ್ಗುಣ ಚೆನ್ನಾಗಿಲ್ಲ ಎಂಬ ನೆಪವೊಡ್ಡಿ ತಪ್ಪೆಲ್ಲಾ ಆ ಮಗುವಿನದ್ದೇ ಎಂದು ಹೇಳಿ ಅಪರಾಧಿ ಪ್ರಜ್ಞೆಯ ಮನೋಭಾವ ಹೊತ್ತು ಬದುಕುವಂತೆ ಮಾಡಿದೆ. ಹೆಣ್ಣೊಂದು ವಿಧವೆಯ ಪಟ್ಟ ಹೊತ್ತು ಅಪಮಾನವನ್ನು ಸಹಿಸಿಕೊಳ್ಳುತ್ತಾ ದೈಹಿಕ, ಮಾನಸಿಕ ಹಿಂಸೆಗೆ ಗುರಿಯಾಗಬೇಕಾಗುತ್ತದೆ.

ಹಿಂದಿ 'ಸತಿ ಪದ್ಧರಿ' ಆಚರಣೆಯಲ್ಲಿ ಪ್ರಮುಖ ಪಾತ್ರ ಮಹಿಳೆಯರದ್ದಿತ್ತು. ಅವರು ಸ್ವ ಇಚ್ಛೆಯಿಂದ ಸತಿ ಹೋಗುತ್ತಿದ್ದರು ಎಂಬ ವಿಚಾರವನ್ನು ಗಮನಿಸಿದರೆ ವಿಧವೆತನದ ಜೀವನ ಎಷ್ಟು ಆಸಹನೀಯವಾಗಿರುತ್ತಿತ್ತು ಎಂದು ಗೊತ್ತಾಗುತ್ತದೆ. ಸಮಾಜದಲ್ಲಿ ವಿಧವೆಯರ ಮೇಲೆ ಹೇರಲಾಗುತ್ತಿದ್ದ ನಿರ್ಬಂಧಗಳು, ಅವರೊಂದಿಗೆ ವ್ಯವಹರಿಸುವ ರೀತಿ, ಮಡಿ–ಮೈಲಿಗೆ ನಂಬಿಕೆ, ಒಂದೋ ಎರಡೋ ವಿಧವೆ ಎಂದಾಕ್ಷಣವೇ ಯಾರಿಗೂ ಇಂತಹ ಸ್ಥಿತಿ ಬರಬಾರದು ಎಂದು ದೇವರಲ್ಲಿ ಎಲ್ಲರೂ ಮೊರೆ ಹೋಗುವಂತಹ ಕಾಲ, ಅವರನ್ನು ಒಂದು ರೀತಿ ಪ್ರತ್ಯೇಕಿಸಿಯೇ ಬಿಡಲಾಗಿತ್ತು ಇದು ಒಂದು ರೀತಿಯಾದರೆ ಇನ್ನೊಂದು ರೀತಿಯಲ್ಲಿ ಗಂಡನಿಲ್ಲದೇ ಹೆಂಡತಿಗೆ ಸಮಾಜದಲ್ಲಿ ಯಾವ ಗೌರವನೂ ಇಲ್ಲ ಎಂಬ ಮಾನಸಿಕ ಹಿಂಸೆ ಅವರನ್ನು ಕುಗ್ಗುವಂತೆ ಮಾಡುತ್ತಿತ್ತು. ಇಷ್ಟೆಲ್ಲಾ ಹಿಂಸೆಯನ್ನು ಸಾವಯವವರೆಗೂ ಅನುಭವಿಸುತ್ತಾ ಇರುವುದರ ಬದಲಾಗಿ ಒಂದೇ ಬಾರಿಗೆ ಸತಿ ಹೋಗುವುದು ಎಷ್ಟೋ ವಾಸಿ ಎಂಬ ನಿರ್ಧಾರಕ್ಕೆ ಮಹಿಳೆಯರು ಬರುತ್ತಿದ್ದರು ಎಂದರೆ ವಿಧವೆತನ ಎಂಬುದು ಶೋಷಣೆಯ

ಅತಿರೇಕ ಎಂದು ಅರಿವಾಗುತ್ತದೆ.

ಪತಿಯೊಂದಿಗೆ ಸ್ವಲ್ಪ ದಿನ ಜೀವನ ಸಾಗಿಸಿ ಬಂದ ಬಾಲವಿಧವೆಯರದ್ದು ಒಂದು ರೀತಿಯಾದರೆ, ಚಿಕ್ಕ ವಯಸ್ಸಿನಲ್ಲಿ ಮಕ್ಕಳನ್ನು ಪಡೆದು ವಿಧವೆಯಾಗಿದ್ದರವರದು ಇನ್ನೊಂದು ರೀತಿ, ಬಾಲವಿಧವೆ ಜೊತೆಗೆ ಮಕ್ಕಳನ್ನು ಹೊಂದಿದ್ದರೆ / ಹೊಂದಿರದಿದ್ದರೆ ಅದು ಇನ್ನೊಂದು ರೀತಿ, ಹೀಗೆ ವಿಧವೆಯರಲ್ಲಿ ಅನೇಕ ರೀತಿಯ ವಿಧವೆಯರನ್ನು ಕಾಣಬಹುದು. ಎಲ್ಲವೂಗಳು ಕ್ರೌರ್ಯತೆಯ ವಿವಿಧ ಸ್ವರೂಪಗಳೇ.

ಹೆಣ್ಣಿಗೆ ವಿವಾಹವೇ ಅಂತಿಮ ಎಂದು ಸಾರುತ್ತಾ ಬಂದಿರುವು ವ್ಯವಸ್ಥೆ ಅವಸರವಸರದಲ್ಲಿ ವಿವಾಹ ಮಾಡಿ ಕೊನೆಗೆ ವಿಧವಾ ಪಟ್ಟ ಕಟ್ಟಿ, ತಲೆ ಬೋಳಿಸಿ ಕತ್ತಲೆ ಜಗತ್ತಿಗೆ ತಳ್ಳುತ್ತಾ ಬಂದಿದೆ. ಇದು ಈಗಲೂ ಮುಂದೆವರೆದಿರುವುದು ನಾಗರೀಕತೆಯ ದುರಂತವೇ ಸರಿ.

ಅಪ್ರಾಪ್ತ ವಯಸ್ಸಿನಲ್ಲಿ ವಿವಾಹ ಮಾಡುವುದರಿಂದಾಗುವ ಪರಿಣಾಮಗಳು;

1. ಆಡುವ ಕೂಸಿಗೆ ಕಾಡುವ ಕೂಡು ಎಂಬಂತೆ ಪದೇ ಪದೇ ತಾಯ್ತನವನ್ನು ಹೊರುವುದು

2. ರಕ್ತಹೀನತೆಯಿಂದ ದೈಹಿಕವಾಗಿ ಕುಗ್ಗಿ ಹೋಗುವುದು

3. ಮಾನಸಿಕವಾಗಿ ಖಿನ್ನತೆಗೆ ಒಳಗಾಗುವುದು

4. ಆರ್ಥಿಕ ಅಭದ್ರತೆ

5. ಮಕ್ಕಳ ಜವಾಬ್ದಾರಿ

6. ಮಹಿಳೆಯರ ಮೇಲೆ ತ್ರಿಭಾರದ ದುಡಿಮೆ

7. ಸಮಾಜದ ಅಮಾನವೀಯ ಅಪಮಾನಕರ ವರ್ತನೆಗೆ ಗುರಿಯಾಗಬೇಕಾಗುತ್ತದೆ

8. ಯಾವುದೇ ಶುಭ ಕಾರ್ಯಗಳಿಗೆ ವಿಧವೆಯರೆಂದರೆ ಅಮಂಗಲಕರ ಎಂದು ಭಾವಿಸುತ್ತಾರೆ.

9. ಕೆಲವೊಂದು ಸಾರಿ ಚಿಕ್ಕ ಮಕ್ಕಳನ್ನು ಕೂಡ ಮುಟ್ಟುವಂತಿರಲ್ಲ

10. ಮುತ್ತೈದೆಯರ ಮುಂದೆ ವಿಧವೆಯರು ಬರುವಂತಿಲ್ಲ

11. ಮದುವೆಯ ಹಲವಾರು ಕಾರ್ಯಗಳಲ್ಲಿ ವಿಧವೆಯರು ಭಾಗವಹಿಸುವಂತಿಲ್ಲ.

ಈ ರೀತಿಯ ಮಾನಸಿಕ, ದೈಹಿಕ ತೊಂದರೆಗಳಿಗೆ ಸಿಲುಕಿಕೊಳ್ಳುವುದು ಒಂದು ಕಡೆ ಆದರೆ, ಇನ್ನೊಂದು ಕಡೆಯಿಂದ ಆ ಹೆಣ್ಣು ತನ್ನ ಪತಿಯೊಂದಿಗಿರುವ ಅಂತರದಿಂದಾಗಿ ಭಿನ್ನಾಭಿಪ್ರಾಯ, ಚಿಕ್ಕ ವಯಸ್ಸಿನಲ್ಲಿ ವಿಧವೆ ಎಂಬ ಹಣೆ ಪಟ್ಟಿ ಇನ್ನೊಂದು ಕಡೆ ಹಾಗೂ ಮೇಲೆ ಹೇಳಿದ ಮನೋದೈಹಿಕ ತೊಂದರೆಗಳಿಗೆ ಬಲಿಯಾಗಬೇಕಾಗುತ್ತದೆ. ಅವಳ ದುಡಿಮೆ ನಿರಂತರವಾಗಿ ಚಕ್ರದಂತೆ ಸಾಗುತ್ತಿರುತ್ತದೆ.

ಬದುಕಿನ ಬಗೆಗೆ ನುರಾರು ಕನಸು ಕಂಡ ಸ್ವತಂತ್ರ ಹಕ್ಕಿಯನ್ನು ವಿವಾಹವೆಂಬ ಪಂಜರದಲ್ಲಿ ಹಾಕಿದ ಹಾಗಾಗುತ್ತದೆ. ಚಿಕ್ಕ ವಯಸ್ಸಿನಲ್ಲಿ ಬದುಕು ಏನೆಂದು ಅರಿಯದ ಮುಗ್ಧ ಬಾಲೆಯರನ್ನು ವಿವಾಹವೆಂಬ ಕೂಪಕ್ಕೆ ತಳ್ಳಿ ಸಮಸ್ಯೆಗಳ ಸರಮಾಲೆಯಾಗಿಸಿ ಬದುಕುವ ಹಕ್ಕನ್ನು ಕಸಿದುಕೊಳ್ಳಲಾಗುತ್ತದೆ. ಒಂದು ಕಡೆ ಪತಿಯನ್ನು ಕಳೆದುಕೊಂಡು ಮಾನಸಿಕವಾಗಿ ನೊಂದು ಹೊಗಿರುವ ಹೆಣ್ಣಿಗೆ ಸಮಾಜದಲ್ಲಿ ಮಾಡುವ ಅಪಮಾನಗಳು ಅಷ್ಟಿಷ್ಟಲ್ಲ. ಒಟ್ಟಾರೆ ಅವಳನ್ನು ಮತ್ತಷ್ಟು ಕುಗ್ಗುವಂತೆ ಮಾಡುತ್ತವೆ. ಅವಳನ್ನು ಅಮಂಗಳಕರ ಎಂದು ತಿಳಿಯಲಾಗಿ ಯಾವುದೇ ಶುಭಕಾರ್ಯಗಳಿಗೆ ಅವಕಾಶ ನೀಡದೇ ನೆರೆಹೊರೆಯವರೊಂದಿಗೆ ಅಷ್ಟಾಗಿ ಬೆರೆಯಲು ಬಿಡದೇ ಹೊರಜಗತ್ತಿನ ಸಂಪರ್ಕ ಕಡಿದು ಹಾಕಲಾಗುತ್ತದೆ. ಇದರಿಂದ ವಿಚಾರ ಮಾಡುವ ಶಕ್ತಿಯನ್ನು ಕಳೆದುಕೊಂಡು ಜೀವನದಿಂದ ಜಿಗುಪ್ಸೆ ಹೊಂದುವಂತೆ ಮಾನಸಿಕವಾಗಿ, ದೈಹಿಕವಾಗಿ ಕುಗ್ಗಿಹೋಗುತ್ತಾರೆ.

ಅಂತಹದರಲ್ಲಿ ಚಿಕ್ಕ ವಯಸ್ಸಿನಲ್ಲಿ ತಾಯ್ತನವನ್ನು ಅನುಭವಿಸಿದ ಬಾಲೆಯರು ಮಕ್ಕಳ ಲಾಲನೆ – ಪಾಲನೆಯ ಜವಾಬ್ದಾರಿಯನ್ನು ತಾನಿನ್ನೂ ಬಾಲೆಯಿದ್ದಾಗಲೇ ಅನುಭವಿಸುವಂತಾಗಬೇಕಾಗುತ್ತದೆ. ಆಡುವ ಕಾಡುವ ಕೂಸು ಎಂಬಂತೆ ಮಕ್ಕಳ. ಕುಟುಂಬದ ವೃದ್ಧರ ಅರೈಕೆ ಮಾಡಬೇಕಾಗುತ್ತದೆ. ಶಿಕ್ಷಣ ಪಡೆಯಬೇಕಾದ ಸಮಯದಲ್ಲಿ ಜೀವನದ ಕರಾಳ ಬದುಕಿನ ಪಾಠ ಕಲಿಸಿದಂತಾಗುತ್ತದೆ. ಅಜ್ಞಾನ, ಅಂಧಕಾರದ ಕೂಪಕ್ಕೆ ಹೆಣ್ಣನ್ನು ತಳ್ಳಿ ಆರೋಗ್ಯವಂತ ಸ್ತ್ರೀ ಸಮುದಾಯಕ್ಕೆ ತಡೆಯನ್ನುಂಟು ಮಾಡಿದಂತಾಗುತ್ತದೆ.

ಎಳೆ ವಯಸ್ಸಿನಲ್ಲಿ ವಿವಾಹವೆಂಬ ಸಂಸ್ಥೆಗೆ ಹಿರಿಯರ ಸಮ್ಮುಖದಲ್ಲಿ ಕಾಲಿಡುವ ಆ ಬಾಲೆ ತನ್ನ ಬದುಕು ಬಿಸಿತುಪ್ಪ ಎಂದು ಭಾವಿಸಿರುವುದಿಲ್ಲ. ಅದೊಂದು ಅಮೋಘಗಳಿಗೆ, ಎಲ್ಲರ ಜೀವನದಲ್ಲಿ ಬಂದಂತೆ ತನ್ನ ಜೀವನದಲ್ಲೂ ಬಂದಿದೆ ಎಂದು ತಿಳಿದು ಆ ಬಾಲೆ ನಗುನಗುತ್ತಾ ನವಸಂಸಾರಕ್ಕೆ ಕಾಲಿಟ್ಟಾಗ ಪತಿ ಸತ್ತ ಕಾಲಕ್ಕೆ ಅಳುತ್ತ ಹೊರಬರಲು ಆಗದೆ ಅಲ್ಲಿಯೇ ಬೇಯಬೇಕಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ವೈಧವ್ಯದ ಕುರಿತು ಬಿ. ಎಸ್. ವೆಂಕಟಲಕ್ಷ್ಮೀ ಹಿಗೆ ಹೇಳುತ್ತಾರೆ. 'ಅನೇಕ ಕುಟುಂಬಗಳಲ್ಲಿನ ಸದಸ್ಯರು ಪ್ರಗತಿಪರ ಮನೋಭಾವದವರಾಗಿರುತ್ತಾರೆ. ಆಧುನಿಕತೆಗೆ ಮನಸೋತಿರುತ್ತಾರೆ. ಅದರೆ ಅವರ ಮನೆಗಳಲ್ಲಿ ಹೆಣ್ಣೊಬ್ಬಳು ವಿಧವೆಯಾದಾಗ ಸಂಪ್ರದಾಯದ ಬಗ್ಗೆ ಅವರ ಅಸಡ್ಡೆ ಹೇಳಹೆಸರಿಲ್ಲದಂತೆ ಮಾಯವಾಗುತ್ತದೆ. ಶಕ್ತಿ ಕಳೆದುಕೊಂಡತೆ, ಮೂಕರಾದಂತೆ, ನೆರೆದ ಜನ ಪುರೋಹಿತರು ಹೇಳಿದ್ದಕ್ಕೆಲ್ಲ ಹೂಂಗುಟ್ಟುತ್ತ ಎಲ್ಲ ವಿದಿಗಳನ್ನೂ ಚಾಚು ತಪ್ಪದೇ ನಡೆಸುತ್ತಾರೆ. ಸ್ತ್ರೀಯರ ಮುನ್ನಡೆಗಾಗಿ, ಅವರ ಸುಧಾರನೆಗಾಗಿ ಹೋರಾಡಿದ ಮಹಿಳೆಯರೂ ಸಹ, ತಾವೇ ಈ ಸಂದರ್ಭವನ್ನೆದುರಿಸಬೇಕಾದಾಗ, ಬಲಿಪಶುಗಳಂತೆ ಎಲ್ಲದಕ್ಕೂ ಶರಣಾಗುತ್ತಾರೆ. ಹೆಣ್ಣನ್ನು ಗೌರವಿಸಬೇಕು. ಸಂಸ್ಕೃತಿ ಹಾಗೆನ್ನುತ್ತದೆ. ಹೀಗೆನ್ನುತ್ತದೆ ಎನ್ನುವ ಜನ ವಿಧಿವತ್ತಾಗಿ

ನಡೆಸುವ ಈ ಹಿಂಸಾತ್ಮಕ ಕ್ರಿಯೆಯನ್ನು ಅಂಧವಾಗಿ ಮುನ್ನಡೆಸುವ ಬದಲು, ಪ್ರಸ್ತುತದಲ್ಲಿ ಅದಕ್ಕಿರುವ ಬೆಲೆಯನ್ನು ಹುಡುಕಬೇಕಲ್ಲವೇ?" ಎಂದು ಹೇಳುತ್ತಾರೆ.

ವಿಧವೆಯಾದವಳು ಚಿಕ್ಕವಳು, ದೊಡ್ಡವಳು ಎಂದು ನೋಡದೇ ಮಗುವಿದ್ದಾಗಲೂ ಸಹ ಅವಳು ಕುಂಕುಮವನ್ನು ಅಳಸಿಕೊಳ್ಳುವಂತೆ ಹೇಳುವುದು ಅಥವಾ ಇನ್ನೊಬ್ಬ ವಿಧವೆ ಬಂದು ಅದನ್ನು ಅಳಸುವುದು, ಕೈ ಬಳೆ ಒಡೆಯುವುದು, ತಲೆ ಮೇಲೆ ನೀರು ಸುರಿಯುವುದು, ತಲೆ ತುಂಬ ಹೂ ಹಾಕಿ ಹರಿಯುವುದು, ಗಂಡ ಸತ್ತ ಮೇಲೆ ಅದಷ್ಟು ಹೆಣ್ಣನ್ನು ಅವಲಕ್ಷಣಗೊಳಿಸಿ, ಅವಳು ಆಕರ್ಷಕವಾಗಿ ಕಾಣದಂತೆ ನೋಡಿಕೊಳ್ಳುತ್ತಾರೆ. ಇವೆಲ್ಲ ನೋಡಿದವರಿಗೆ ಎಷ್ಟೊಂದು ಅಮಾನವೀಯ ಎಂದೆನಿಸುವ ಸಂದರ್ಭದಲ್ಲಿ ಅದನ್ನು ಅನುಭವಿಸುವ ಆ ಹೆಣ್ಣಿನ ಮನಸ್ಸಿನ ಮೇಲೆ ಯಾವ ರೀತಿಯ ಪರಿಣಾಮ ಬೀರಲಿಕ್ಕಿಲ್ಲ? ಕೊನೆಯವರೆಗೂ ಪತಿಯ ನೆನಪಲ್ಲೇ ಕಾಲ ಕಳೆಯಬೇಕಾಗುತ್ತದೆ. ಹೆಂಡತಿ ಸತ್ತ ನಾಲ್ಕೇ ದಿನಕ್ಕೆ ವಿದುರನಾದ ಗಂಡ ಹೊಸ ಮದುಮಗನಂತೆ ತಯಾರಿ ನಡೆಸಿ ಎಲ್ಲವನ್ನೂ ಮರೆತ್ಗು ಮರುಮದುವೆಯಾಗಿ ಬಿಡುತ್ತಾನೆ. ಆದರೆ ಅದೇ ಕಣ್ಣಿಗೆ ಅಂತಹ ಅಲೋಚನೆಯೇ ಸಲ್ಲದು ಎಂದು ವ್ಯವಸ್ಥೆ ಹೇಳಕೊಡುತ್ತದೆ.

ಮದುವೆ ನಂತರ ಬರುವ ತಾಳಿ, ಕಾಲುಂಗರ ಬೇಕೆಂದರೆ ಕಿತ್ತಿಡಬಹುದು ಆದರೆ ತಾನು ಹುಟ್ಟಿದಾಗಿನಿಂದ ಹಚ್ಚಿಕೊಂಡೇ ಬರುವ ಕುಂಕುಮ, ಹೂ, ಬಳೆಯನ್ನು ಏಕೆ ತೆಗೆಯಬೇಕೆಂದು ಕೇಳುವ ಧೈರ್ಯ ಮಾಡಲ್ಲ. ಹಾಗೆ ಹೇಳದರೂ ನೆರೆದ ಜನರೆಲ್ಲಾ ರೊಚ್ಚಿಗೆದ್ದು, ಇದ್ದ ಮನಸ್ಥಿತಿಯನ್ನು ಸಹ ಹಾಳು ಮಾಡಿ ಬಿಡುತ್ತಾರೆ. ಹೆಣ್ಣಿಗೆ ಮದುವೆಯಾಗಿದೆ ಎನ್ನುವುದಕ್ಕೆ ಸಾಕ್ಷಿ ಎಂಬಂತೆ ತಾಳಿಯನ್ನು ಕಟ್ಟಿಕೊಳ್ಳಬೆಕು. ಆದರೆ ವಿಧವೆಯಾದ ಮೇಲೆ ತಾಳಿ ತೆಗೆದರೆ ಅವಳೇನು ಅವಿವಾಹಿತೆಯೇನೊ ಅಗಿಬಿಡಲ್ಲ. ಈ ಸಂಪ್ರದಾಯಗಳೆಲ್ಲ ಹೆಣ್ಣಿನ ಬದುಕಿನ ಹಕ್ಕನ್ನು ಕಸಿದುಕೊಳ್ಳುವ ಹುನ್ನಾರಗಳೇ ಬಿಟ್ಟರೆ ಮತ್ತೇನೂ ಇಲ್ಲ. ಸಂಪ್ರದಾಯಗಳೆಲ್ಲವನ್ನು ಹೆಣಿನ ತಲೆಗೆ ಕಟ್ಟಿ ವ್ಯವಸ್ಥೆ ನೆಮ್ಮದಿಯಿಂದ ಬದುಕುತ್ತಿದೆ.

ಸಮಾರೋಪ:– ಪತಿ ಸತ್ತ ಮಾತ್ರಕ್ಕೆ ಹೆಣ್ಣೊಂದು ತನ್ನ ಆಸೆ ಅಕಾಂಕ್ಷೆಗಳನ್ನು ಬದಿಗೊತ್ತಿ ಬದುಕಬೇಕೆಂಬ ಒತ್ತಾಯ ಹೇರುವುದು ಅನ್ಯಾಯ, ಎಷ್ಟೋ ಸಂದರ್ಭದಲ್ಲಿ ಚಿಕ್ಕ ವಯಸ್ಸಿನ ಪತ್ನಿಯರು ಬೇರೆಯವರ ಮನೆಯ ಮುಸುರೆ ತಿಕ್ಕಿಯಾದರೂ ಏನೂ ದುಡಿಯದ ಪತಿಯ ಆಹಾರ, ಬಟ್ಟೆ, ಅರೈಕೆಯನ್ನು ಮಾಡುತ್ತಾರೆ. ಅಂತಹ ಸಮಯದಲ್ಲಿ ವಿಧವೆಯಾದ ಮಾತ್ರಕ್ಕೆ, ಜಾಸ್ತಿ ಖಾರಾ ತಿನ್ನಬಾರದು, ಅದು – ಇದು ತಿನ್ನಬಾರದು ಎಂದು ಹೇಳ ಬದುಕಿನ ಮೂಲಭೂತ ಅಗತ್ಯತೆಯಿಂದ ವಂಚಿತರನ್ನಾಗಿ ಮಾಡುತ್ತಾರೆ. ಇಂತಹ ಅಮಾನವೀಯ ಕೃತ್ಯಗಳಿಗೆ ಕೊನೆ ಹೇಳುವುದು ಸುಲಭದ ವಿಚಾರವಲ್ಲ. ಅದರೆ ಪ್ರಯತ್ನಪಟ್ಟರೆ ಖಂಡಿತ ಬದಲಾವಣೆ ತರಲು ಸಾಧ್ಯವಾಗುತ್ತದೆ.

ಸಮಾಜದಲ್ಲಿರುವ ಮೂಢನಂಬಿಕೆ, ಅಸಂಬದ್ಧ ಸಂಪ್ರದಾಯ, ಆಚರಣೆಗಳನ್ನು ತೊಲಗಿಸಬೇಕು. ವಿಧವೆಯರಿಗೂ ಮರುವಿವಾಹಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು, ಅದರಲ್ಲೂ ಅಮಾಯಕತೆ, ಅನಕ್ಷರತೆ ತುಂಬಿರುವ ಗ್ರಾಮೀಣ ಪ್ರದೇಶಗಳಲ್ಲಿ ಬದುಕುತ್ತಿರುವ ಹೆಣ್ಣಿಗೆ ಈ ಶಿಕ್ಷೆ ನಿರಂತರವಾಗಿದೆ. ವ್ಯವಸ್ಥೆ ಹೆಣ್ಣನ್ನು ಅದರಲ್ಲೂ ಬಾಲ ವಿಧವೆಯನ್ನು ಮಾನವರಂತೆ ಕಾಣುವಂತಾಗಬೇಕು. 'ಅಮಾನುಷ' ಕೃತ್ಯಗಳು ಕೊನೆಗೊಳ್ಳಬೇಕು. ಸಮಾಜದಲ್ಲಿ ಅಡಗಿರುವ ಲಿಂಗತಾರತಮ್ಯ ನಿರ್ಮೂಲನೆ ಆಗಿ ಸಮಾನತೆಯ ಸಮಾಜ ಸೃಷ್ಟಿಯಾಗಬೇಕು. ಅಂದಾಗ ಮಾತ್ರ ಸ್ತ್ರೀ ಸಮುದಾಯ ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ. ಎಲ್ಲಕ್ಕಿಂತ ಮೊದಲು ನಮ್ಮೆಲ್ಲರ ಮನಸ್ಸುಗಳು ಇಂತಹ ಸಮಾಜ ನಿರ್ಮಿತ ಅಮಾನವೀಯ ಪದ್ಧತಿಗಳ ವಿರುದ್ಧ ಪ್ರಶ್ನೆ ಮಾಡುವ ಹಾಗೂ ದಿನನಿತ್ಯ ನರಳುತ್ತಿರುವ ಇಂತಹ ಮನಸ್ಸುಗಳ ಪರವಾಗಿ ನಿಲ್ಲಲ್ಲು ಬದಲಾಗಬೇಕಿದೆ.

ಬುಡಕಟ್ಟು ಜನರ ಆರ್ಥಿಕ ಪರಿಸ್ಥಿತಿ: ಒಂದು ಸಮಾಜಶಾಸ್ತ್ರೀಯ ಅಧ್ಯಯನ

(ಹೆಗ್ಗಡದೇವನಕೋಟೆ ತಾಲೂಕಿಗೆ ಸಂಬಂಧಿಸಿದಂತೆ)

*ರವಿಕುಮಾರ.ಎಸ್, **ಡಾ. ಎಸ್. ಯಶೋಧ. ಎಂಎ, ಪಿಹೆಚ್.ಡಿ
*ಸಂಶೋಧಕರು, **ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಆಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು

1.1 **ಪ್ರಸ್ತಾವನೆ**: ಭಾರತವು ಬುಡಕಟ್ಟು ಸಮುದಾಯಗಳ ತವರೂರು. ಇಲ್ಲಿ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ಜೀವನದ ನೆಲೆಗಳನ್ನು ಕಂಡುಕೊಂಡಿವೆ. ಅನಾದಿಕಾಲದಿಂದ ಹಿಡಿದು ಪ್ರಸ್ತುತ ದಿನದವರೆಗೂ ವಿಶ್ವದ ಉಗಮದಲ್ಲಿ ಮಾನವಜೀವಿ ಸೃಷ್ಟಿಯಾಗಿ, ಈ ಸೃಷ್ಟಿಯ ಮೂಲ ಜೀವಿಗಳೆಂದು ಗುರುತ್ತಿಸಲ್ಪಡುವವರೆಂದರೆ ಆದಿವಾಸಿಗಳು. ಇಂದು ವಿಶ್ವದ ಉದ್ದಗಲಕ್ಕೂ ಇವರನ್ನು ಕಾಣಬಹುದು. ಅದರಲ್ಲೂ ಭಾರತವು ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ದೇಶವಾದರೂ ಕೂಡ, ತನ್ನ ಒಡಲಲ್ಲಿ ಅನೇಕ ಬುಡಕಟ್ಟು ಸಮುದಾಯಗಳನ್ನು, ಅವರ ವಿಭಿನ್ನ ಸಂಸ್ಕೃತಿ, ಆಚಾರ–ವಿಚಾರ, ರೂಢಿ–ಸಂಪ್ರದಾಯ, ಉಡುಗೆ– ತೊಡುಗೆ, ಕಲೆ ಮುಂತಾದವುಗಳನ್ನು ಮೈಗೊಡಿಸಿಕೊಂಡು ಬದುಕುತ್ತಿರುವುದು ಕಂಡುಬಂದಿದೆ. ಭಾರತದಲ್ಲಿ ಒಟ್ಟು 790 ಬುಡಕಟ್ಟುಗಳಿರುವುದು ಕಂಡುಬಂದಿದೆ. ಇವರ ಒಟ್ಟು ಜನಸಂಖ್ಯೆ 2011 ರ ಜನಗಣತಿಯ ಅಂಕಿಅಂಶಗಳ ಪ್ರಕಾರ 10,42,81,034 ಇದ್ದು ಒಟ್ಟು ಜನಸಂಖ್ಯೆಯ ಶೇ 8.6 ಇದರ ಪ್ರಮಾಣವಾಗಿದೆ. ಇವರಲ್ಲಿ ಒಟ್ಟು 75 ಬುಡಕಟ್ಟುಗಳನ್ನು 'ಪ್ರಾಚೀನ ಮೂಲನಿವಾಸಿಗಳು' (Primitive Tribes) ಎಂದು ಗುರುತಿಸಲಾಗಿದೆ.

ಈ ಬುಡಕಟ್ಟು ಸಮುದಾಯಗಳು ನಾಗರೀಕ ಜನಸಮುದಾಯ ಗಳಿಂದ ಪ್ರತ್ಯೇಕಿತರಾಗಿ ಜೀವನ ಸಾಗಿಸುತ್ತಿದ್ದು, ಈ ದೇಶದ ಮೂಲನಿವಾಸಿಗಳಾದ ಇವರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಇಂದಿಗೂ ಎದುರಿಸುತ್ತಿದ್ದಾರೆ. ಇವರನ್ನು ಈ ಸಮಸ್ಯೆಗಳಿಂದ ಮುಕ್ತಗೊಳಿಸಲು ಮತ್ತು ನಾಗರೀಕ ಸಂಪರ್ಕ ಕಲ್ಪಿಸಲು, ಇವರನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಅನೇಕ ಸಂವಿಧಾನಿಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಆದರೂ ಪ್ರಸ್ತುತ ಬುಡಕಟ್ಟು ಜನರು ಆರ್ಥಿಕವಾಗಿ ಅತ್ಯಂತ ಹಿಂದುಳಿದಿರುಹುದು ಕಂಡುಬಂದಿದೆ. ಆದ್ದರಿಂದ ಪ್ರಸ್ತುತ ಅಧ್ಯಯನವು ಬುಡಕಟ್ಟು ಜನರ ಆರ್ಥಿಕ ಪರಿಸ್ಥಿತಿಯ ಬಗ್ಗೆ ತಿಳಿಯುವುದಾಗಿದೆ.

1.2 ಆದಿವಾಸಿಗಳ ಅರ್ಥ: ಅಳವಿನ ಅಂಚಿನಲ್ಲಿರುವ ಆದಿವಾಸಿಗಳು ಐತಿಹಾಸಿಕ ಮತ್ತು ಪಾರಂಪರಿಕ ಕಾರಣಗಳಿಂದಾಗಿ ಇಂದಿಗೂ ತೀರಾ ಹಿಂದುಳಿದಿವೆ. ಇನ್ನೂ ನಾಗರೀಕತೆಯ ಬದುಕನ್ನೆ ಕಾಣದೆ, ಶೋಷಣೆಗೊಳಪಟ್ಟು, ಅಸಹಾಯಕರಾಗಿ, ನಾಗರೀಕ ಸಮಾಜದ ಮುಖ್ಯವಾಹಿನಿಯ ಸಂಪರ್ಕವನ್ನೆ ಕಾಣದ ಬುಡಕಟ್ಟು ಜನರು ಭಾರತದಲ್ಲಿದ್ದಾರೆ. ಹೀಗೆ "ನಾಗರೀಕತೆಯಿಂದ ದೂರ ಉಳಿದು ಕಾಡು, ಮೇಡು, ಬೆಟ್ಟಗುಡ್ಡ, ಕಣಿವೆಯಂತಹ ಪ್ರದೇಶಗಳಲ್ಲಿ ತಮ್ಮದೆ ಆದ ಭಾಷೆ, ಆಚಾರ–ವಿಚಾರ, ರೂಢಿ, ಸಂಪ್ರದಾಯಗಳನ್ನು ಮೈಗೂಡಿಸಿಕೊಂಡು ಬದುಕುತ್ತಿರುವ ಜನರನ್ನು ಸಾಮಾನ್ಯವಾಗಿ ಆದಿವಾಸಿ"ಗಳೆನ್ನುತ್ತಾರೆ.

ಪ್ರಸಿದ್ಧ ಮಾನವಶಾಸ್ತ್ರಜ್ಞ ಕ್ರೋಬರ್ ರವರು "ಬುಡಕಟ್ಟು ಜನಾಂಗವು ಒಂಟಿಯಾದ ಹಾಗೂ ಒಂದಕ್ಕೊಂದು ಹೆಣೆದಂತಿರುವ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸಂಬಂಧಗಳನ್ನು ಅಳವಡಿಸಿಕೊಂಡು ವ್ಯವಸ್ಥಿತವಾಗಿ ರಚಿತವಾಗಿರುವ ಸಮಾಜ" ಎಂದು ಗುರುತಿಸಿದ್ದಾರೆ.

ಇಂತಹ ಸಮುದಾಯಗಳ ಅಭಿವೃದ್ಧಿಗೆ ಭಾರತ ಸರ್ಕಾರವು ಸ್ವಾತಂತ್ರ್ಯ ನಂತರದ ದಿನದಿಂದ ವಿಶೇಷ ಗಮನ ಹರಿಸಿದೆ. ಅದು ತನ್ನ ರಾಜ್ಯಾಂಗದ ಘಟಕದಲ್ಲಿ ಈ ವಿಷಯಕ್ಕೆ ಪ್ರಾಮುಖ್ಯತೆ ನೀಡಿ, ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಪರಿಶಿಷ್ಟಜಾತಿ ಮತ್ತು ಪಂಗಡಗಳಿಗೆ ಅತ್ಯಗತ್ಯವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತಂದು ಅವರ ಅಭಿವೃದ್ಧಿಯನ್ನು ಬಲಪಡಿಸುತ್ತಿದೆ.

1.3 ಅಧ್ಯಯನ ಕ್ಷೇತ್ರ: –ಮೈಸೂರು ಜಿಲ್ಲೆಯ 7 ತಾಲೂಕುಗಳಲ್ಲಿ ಹೆಗ್ಗಡದೇವನಕೋಟೆ ತಾಲೂಕು ಒಂದು. ಇದು ಅತ್ಯಂತ ಹಿಂದುಳಿದ ತಾಲ್ಲೂಕು ಆಗಿದ್ದು, ದಟ್ಟವಾದ ಅರಣ್ಯ ಪ್ರದೇಶದಲ್ಲಿ ಜೇನುಕುರುಬ, ಕಾಡು ಕುರುಬ, ಸೋಲಿಗ, ಯರವ, ಹಕ್ಕಿ–ಪಿಕ್ಕಿ ಮುಂತಾದ ಬುಡಕಟ್ಟು ಸಮುದಾಯಗಳು ಅಲ್ಲಲ್ಲಿ ಹಾಡಿಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಇದು ಹೆಚ್ಚಾಗಿ ಅದಿವಾಸಿ (ಬುಡಕಟ್ಟು) ಜನರನ್ನು ಹೊಂದಿರುವ ತಾಲೂಕಾಗಿದೆ. ಈ ತಾಲೂಕಿನ ಒಟ್ಟು 116 ಹಾಡಿಗಳಲ್ಲಿ ಆದಿವಾಸಿಗಳು ವಾಸಿಸುತ್ತಿದ್ದು, ಅವರ ಒಟ್ಟು ಜನಸಂಖ್ಯೆ 24,840 ಆಗಿದ್ದು, ಅವರಲ್ಲಿ ಪುರುಷರು 13,130 ಮಹಿಳೆಯರು 11,710 ಇದ್ದಾರೆ. ಇವರು ಕನ್ನಡ, ಜೇನುನುಡಿ, ಕಾಡು ಭಾಷೆ, ಮಲೆಯಾಳಂ ಭಾಷೆಗಳನ್ನು ಮಾತನಾಡುವುದು ಕಂಡುಬಂದಿದೆ.

1.4 ಅಧ್ಯಯನದ ಉದ್ದೇಶಗಳು

1. ಬುಡಕಟ್ಟು ಜನರ ಅಭಿವೃದ್ಧಿಗೆಯ ಬಗ್ಗೆ ತಿಳಿಯುವುದು.

2. ಬುಡಕಟ್ಟು ಜನರ ಪ್ರಸ್ತುತ ಆರ್ಥಿಕ ಪರಿಸ್ಥಿತಿಯನ್ನು ವಿಶ್ಲೇಷಿಸುವುದು.

1.5 ಅಧ್ಯಯನದ ಮಹತ್ವ: – ಆದಿವಾಸಿ ಜನಾಂಗಗಳ ಮೇಲೆ ಕೆಲವು ಅಧ್ಯಯನಗಳು ನಡೆದಿವೆ. ಆದರೆ ಅವುಗಳ ಅಧ್ಯಯನದ ಸ್ವರೂಪವು ವಿಭಿನ್ನತೆಯಿಂದ ಕೂಡಿವೆ. ಕೆಲವು ಅಧ್ಯಯನಗಳು ಇವರ ಜೀವನದ ಬಗ್ಗೆ ತಿಳಿಸುತ್ತವೆ. ಇನ್ನೂ ಕೆಲವು ಅಧ್ಯಯನಗಳು ಅವರ ಸಂಸ್ಕೃತಿ, ವಿವಾಹಪದ್ಧತಿ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾಗಿ ನಡೆದಿವೆ. ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಕಂಡುಬರುವ ಜೇನುಕುರುಬರ, ಕಾಡುಕುರುಬ, ಸೋಲಿಗ, ಯರವ ಬುಡಕಟ್ಟು ಸಮುದಾಯಗಳ ಇಂದಿನ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಪ್ರಸ್ತುತ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

1.6 ಅಧ್ಯಯನದ ವಿಧಾನ: –ಪ್ರಸ್ತುತ ಅಧ್ಯಯನದ ಕ್ಷೇತ್ರವು ಹೆಗ್ಗಡದೇವನಕೋಟೆ ತಾಲೂಕಿಗೆ ಸಂಬಂಧಿಸಿದ್ದಾಗಿದೆ. ಈ ತಾಲ್ಲೂಕಿನಲ್ಲಿ ಜೇನುಕುರುಬ, ಕಾಡುಕುರುಬ, ಸೋಲಿಗ, ಯರವ ಆದಿವಾಸಿ ಸಮುದಾಯಗಳು ಕಂಡುಬಂದಿವೆ. ಎಲ್ಲಾ ಸಮುದಾಯಗಳಿಂದ 80ಜನರನ್ನು ವಿಭಜಿತ ಮಾದರಿಯನ್ನು ಅನುಸರಿಸಿ ಪ್ರತಿ ಸಮುದಾಯದಿಂದ ತಲಾ 20 ರಂತೆ ಒಟ್ಟು 80 ಜನರಿಂದ ಮಾಹಿತಿ ಸಂಗ್ರಹಿಸಲಾಗಿದೆ.

1.7 ಮಾಹಿತಿ ಮೂಲಗಳು:– ಈ ಅಧ್ಯಯನಕ್ಕೆ ಎರಡು ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

1. **ಪ್ರಾಥಮಿಕ ಮಾಹಿತಿ ಮೂಲಗಳು**: ಪ್ರಾಥಮಿಕ ಮಾಹಿತಿ ಮೂಲಗಳಾದ ಸಂದರ್ಶನ, ಅನುಸೂಚಿ, ಅವಲೋಕನ ಮತ್ತು ಪ್ರಶ್ನಾವಳಿ ವಿಧಾನಗಳ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

2. **ಮಾಧ್ಯಮಿಕ ಮಾಹಿತಿ ಮೂಲಗಳು** : ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮಾಹಿತಿ ಮೂಲಗಳಷ್ಟೆ ಅಲ್ಲದೆ ಮಾಧ್ಯಮಿಕ ಮಾಹಿತಿ ಮೂಲಗಳಾದ ಗ್ರಂಥಗಳು, ಪುಸ್ತಕಗಳು, ಲೇಖನಗಳು, ದಿನ ಪತ್ರಿಕೆಗಳು, ಪಿಹೆಚ್.ಡಿ ಮಹಾ ಪ್ರಬಂಧಗಳು ಹಾಗೂ ಅಂತರ್ ಜಾಲಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

1.8 ಬುಡಕಟ್ಟು ಜನರ ಆರ್ಥಿಕ ಜೀವನ: ಬುಡಕಟ್ಟು ಜನರು ಹೆಚ್ಚಾಗಿ ಕಾಡಿನಲ್ಲಿ ವಾಸಿಸುತ್ತಿದ್ದು, ಆರ್ಥಿಕವಾಗಿ ಬಹಳ ಹಿಂದುಳಿದಿದ್ದು, ಕಾಡುಗಳಲ್ಲಿ ಸಿಗುವ ಜೇನುತುಪ್ಪ, ಗೆಡ್ಡೆ–ಗೆಣಸು, ಹಣ್ಣು–

ಹಂಪಲುಗಳನ್ನು ಸಂಗ್ರಹಿಸುವುದು ಇವರ ಸಾಂಪ್ರದಾಯಿಕ ಕಸುಬಾಗಿದೆ. ಇವರು ಹೆಚ್ಚಾಗಿ ದಿನಗೂಲಿ ಕಾರ್ಮಿಕರಾಗಿದ್ದು, ಕೆಲವರಿಗೆ ಮಾತ್ರ ಅಲ್ಪ-ಸ್ವಲ್ಪ ಜಮೀನಿದ್ದು, ಇವರು ಕಾಡು ಪ್ರಾಣಿಗಳನ್ನು ಹಿಡಿದು ಅವುಗಳನ್ನು ಪಳಗಿಸುವುದರಲ್ಲಿ ನಿಪುಣರಾಗಿದ್ದಾರೆ. ಪ್ರಸ್ತುತ ಅರಣ್ಯ ಹಕ್ಕು ಕಾಯ್ದೆ-2005 ಜಾರಿಯಲ್ಲಿರುವುದರಿಂದ ಇವರನ್ನು ಕಾಡಿನಿಂದ ಒಕ್ಕಲೇಬಿಸಿ, ಪರ್ಣವಸತಿ ಎಂಬ ಹೆಸರಿನಲ್ಲಿ ಇವರಲ್ಲಿ ಕೆಲವರಿಗೆ ಕಾಡಚಿಂನ ಪ್ರದೇಶಗಳಲ್ಲಿ ಮನೆ ಮತ್ತು ಜಮೀನು ನೀಡಿದೆ. ಇನ್ನೂ ಕೆಲವರು ಇವ್ಯಾವು ಇಲ್ಲದೆ ಜೀವನ ಕಳೆಯುತ್ತಿರುವುದು ಕ್ಷೇತ್ರ ಕಾರ್ಯದ ಅಧ್ಯಯನದಿಂದ ತಿಳಿದು ಬಂದಿದೆ.

ಪರ್ಣವಸತಿ ಎಂಬ ಹೆಸರಿನಲ್ಲಿ ಕಾಡಿನಿಂದ ಬುಡಕಟ್ಟು ಜನರನ್ನು ಹೊರ ತಂದ ಸರ್ಕಾರ ಕೆಲವರಿಗೆ ಜಮೀನು, ಮನೆಗಳನ್ನು ನೀಡಿದರೂ, ತಮ್ಮ ಹೆಸರಿನ ಬಗ್ಗೆ ಯಾವುದೆ ಆರ್.ಟಿ.ಸಿ, ಪಹಣಿ ಪತ್ರಗಳನ್ನು ನೀಡಿಲ್ಲ. ಹಾಡಿಗಲ್ಲ ಸರಿಯಾದ ರಸ್ತೆಗಳು, ಚರಂಡಿ, ಕುಡಿಯುವ ನೀರು, ವಿದ್ಯುತ್ ಸಂಪರ್ಕಗಳಿಲ್ಲದೆ ಈ ಆಧುನಿಕ ವ್ಯವಸ್ಥೆಗೆ ಒಗ್ಗಿಕೊಳ್ಳಲು ಬುಡಕಟ್ಟು ಜನರು ಪರದಾಡುತ್ತಿದ್ದಾರೆ. ಸರ್ಕಾರ ಈ ಜನರಿಗೆ ಜಮೀನುಗಳನ್ನು ನೀಡಿದ್ದರೂ ಇವರಿಗೆ ಆಧುನಿಕ ಬೇಸಾಯ ಪದ್ಧತಿ ಬಗ್ಗೆ ತಿಳುವಳಿಕೆ ಇಲ್ಲದೆ ಪರದಾಡುತ್ತಿದ್ದಾರೆ. ಅಲ್ಲದೆ ವ್ಯವಸಾಯಕ್ಕೆ ಬೇಕಾದ ನೇಗಿಲು, ಕುಂಟೆ, ಹಗ್ಗ, ಎತ್ತು, ಬಿತ್ತನೆ ಬೀಜಗಳನ್ನು ನೀಡಿಲ್ಲ ಎಂದು ಕ್ಷೇತ್ರ ಕಾರ್ಯದ ಸಮಯದಲ್ಲಿ ತಿಳಿಸಿದ್ದಾರೆ.

ಈ ಸಮಸ್ಯೆಗಳಿಂದ ಇವರು ಅಕ್ಕ ಪಕ್ಕದ ಗ್ರಾಮಗಳಲ್ಲಿ ನೆಲೆಸಿರುವ ರೈತ ಸಮುದಾಯಗಳಿಗೆ ದಿನ ಕೂಲಿ ಆಳುಗಳಾಗಿ ಅವರ ಹೊಲ, ಗದ್ದೆ, ತೋಟಗಳಲ್ಲಿ ವ್ಯವಸಾಯ ಮತ್ತು ಇನ್ನಿತರ ಕಸುಬುಗಳಿಗೆ ಸಂಬಂಧಿಸಿದ ಕೆಲಸ ಮಾಡಿ ದವಸ-ಧಾನ್ಯ ಅಥಾವ ಹಣವನ್ನು ಪಡೆಯುತ್ತಾರೆ. ಕೆಲವರು ಸರ್ಕಾರದಿಂದ ನೀಡಿರುವ ಜಮೀನುಗಳಲ್ಲಿ ವ್ಯವಸಾಯಮಾಡಿ ಬೆಳೆಯನ್ನು ಬೆಳೆಯುತ್ತಿರುವುದು ಕಂಡುಬಂದಿದೆ. ಪ್ರಸ್ತುತ ದಿನಗಳಲ್ಲಿ ಇವರು ಅರಣ್ಯ ಇಲಾಖೆಯಲ್ಲಿ ಗಾರ್ಡ್,ವಾಚರ್, ಮಾವುತ ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಿರುವುದನ್ನು ಕಾಣಬಹುದು. ಇವರು ತೀವ್ರ ಬಡತನದಿಂದ ನರಳುತ್ತಿದ್ದು, ದಿನಕ್ಕೆ ಕನಿಷ್ಠ 150 ರಿಂದ 200 ರೂಪಾಯಿಗಳನ್ನು ಸಂಪಾದಿಸುತ್ತಿದ್ದು, ಇದು ಇವರ ಜೀವನ ನಿರ್ವಹಣೆಗೆ ಸಾಕಾಗುತ್ತಿಲ್ಲ. ಅರಣ್ಯ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ಅರಣ್ಯ ಇಲಾಖೆಯವರು ಇವರನ್ನು ಕಾಡಿಗೆ ಬಿಡುವುದಿಲ್ಲ. ಆದರೆ ಇಲ್ಲ ಜೇನುಕುರುಬರಿಗೆ ಮಾತ್ರ ಕಾಡನ್ನು ಪ್ರವೇಶಿಸಲು ಅವಕಾಶವಿದ್ದು ಇವರು ಸಂಗ್ರಹಿಸಿದ ಅರಣ್ಯ ಕಿರು ಉತ್ಪನ್ನಗಳಿಗೆ ಸರಿಯಾದ ಬೆಲೆಯೂ ಸಿಗುತ್ತಿಲ್ಲದಿರುವುದರಿಂದ ಆರ್ಥಿಕವಾಗಿ ಇವರು ತುಂಬಾ ಹಿಂದುಳಿದಿರುಹುದು ಕಂಡುಬಂದಿದೆ.

2.0 ಮಾಹಿತಿ ವಿಶ್ಲೇಷಣೆ

2.1 ಬುಡಕಟ್ಟು ಜನರ ಆದಾಯದ ಮಟ್ಟ:

ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಯಾವುದೊ ಒಂದು ಮೂಲದಿಂದ ಆದಾಯ ಗಳಿಸುತ್ತಿರುತ್ತಾರೆ. ಆ ಆದಾಯವು ಅವರ ಜೀವನ ನಿರ್ವಹಣೆ ತಕ್ಕಂತೆ ಇರುತ್ತದೆ. ಹಾಗೆಯೇ ಈ ಬುಡಕಟ್ಟು ಜನರ ಆದಾಯದ ಮಟ್ಟ ಯಾವ ರೀತಿ ಇದೆ ಎಂಬುದನ್ನು ಈ ಕೋಷ್ಟಕವು ವಿವರಿಸುತ್ತದೆ.

ಕೋಷ್ಟಕ 2.1 ಬುಡಕಟ್ಟು ಜನರ ಆದಾಯ ಮಟ್ಟವನ್ನು ಸೂಚಿಸುತ್ತಿದ್ದು,ಜೇನುಕುರುಬರಲ್ಲಿ 5-10 ಸಾವಿರ ಆದಾಯವನ್ನು ಶೇ. 45 ರಷ್ಟು, 10-20 ಸಾವಿರ ಆದಾಯವನ್ನು ಶೇ. 30 ರಷ್ಟು, 20-30 ಸಾವಿರ ಆದಾಯವನ್ನು ಶೇ. 15 ರಷ್ಟು, 30-40 ಸಾವಿರ ಆದಾಯವನ್ನು ಶೇ. 10 ರಷ್ಟು ಜನ ಹೊಂದಿದು, 40-50 ಸಾವಿರ ಆದಾಯವನ್ನು ಯಾರು ಗಳಿಸಿಲ್ಲದಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಕಡಿಮೆ ಆದಾಯವನ್ನು ಹೊಂದಿದ್ದು, ಇವರಿಗೆ ಜಮೀನು ಮತ್ತು ಬೇಸಾಯ ಪದ್ಧತಿಗಳು ಗೊತ್ತಿಲ್ಲದಿರುವುದು ಕಾರಣವಾಗಿದೆ.

ಬೆಟ್ಟಕುರುಬರಲ್ಲಿ 5-10 ಸಾವಿರ ಆದಾಯವನ್ನು ಶೇ. 50 ರಷ್ಟು, 10-20 ಸಾವಿರ ಆದಾಯವನ್ನು ಶೇ. 20 ರಷ್ಟು, 20-30 ಸಾವಿರ ಆದಾಯವನ್ನು ಶೇ. 15 ರಷ್ಟು, 30-40 ಸಾವಿರ ಆದಾಯವನ್ನು ಶೇ. 10 ರಷ್ಟು, 40-50 ಸಾವಿರ ಆದಾಯವನ್ನು ಶೇ. 05 ರಷ್ಟು ಜನ ಗಳಿಸಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಕಡಿಮೆ ಆದಾಯವನ್ನು ಹೊಂದಿದ್ದು, ಇವರಿಗೆ ಜಮೀನು ಮತ್ತು ಇತರೆ ಯಾವುದೆ ಆದಾಯದ ಮೂಲಗಳಿರುವುದಿಲ್ಲ ಕಾರಣವಾಗಿದೆ.

ಕೋಷ್ಟಕ-2.1

ಆದಾಯ	ಜೇನುಕುರುಬ	ಬೆಟ್ಟಕುರುಬ	ಸೋಲಿಗ	ಯರವ	ಒಟ್ಟು
05-10 ಸಾವಿರ	09 (45%)	10 (50%)	08 (40%)	11 (55%)	38 (47.5%)
10-20 ಸಾವಿರ	06 (30%)	04 (20%)	07 (20%)	04 (20%)	21 (26.25%)
20-30 ಸಾವಿರ	03 (15%)	03 (15%)	02 (10%)	02 (10%)	10 (12.5%)
30-40 ಸಾವಿರ	02 (10%)	02 (10%)	01 (05%)	01 (05%)	06 (7.5%)
40-50 ಸಾವಿರ	00 (00%)	01 (05%)	02 (10%)	02 (10%)	05 (6.25%)
ಒಟ್ಟು	20 (100%)	20 (100%)	20 (100%)	20 (100%)	80 (100%)

ಸೋಲಿಗರಲ್ಲಿ 5–10 ಸಾವಿರ ಆದಾಯವನ್ನು ಶೇ. 40 ರಷ್ಟು, 10–20 ಸಾವಿರ ಆದಾಯವನ್ನು ಶೇ. 35 ರಷ್ಟು, 20–30 ಸಾವಿರ ಆದಾಯವನ್ನು ಶೇ. 10 ರಷ್ಟು, 30–40 ಸಾವಿರ ಆದಾಯವನ್ನು ಶೇ. 05 ರಷ್ಟು, 40–50 ಸಾವಿರ ಆದಾಯವನ್ನು ಶೇ. 10 ರಷ್ಟು ಜನ ಗಳಿಸಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಕಡಿಮೆ ಆದಾಯವನ್ನು ಹೊಂದಿದ್ದು, ಇವರನ್ನು ಕಾಡಿನಿಂದ ಒಕ್ಕಲೆಬ್ಬಿಸಿರುವುದು ಮತ್ತು ಇವರಿಗೆ ಇದೂವರೆಗು ಸಾಗುವಳಿ ಜಮೀನು ನೀಡದಿರುವುದು ಇವರು ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿದೆ.

ಯರವರಲ್ಲಿ 5–10 ಸಾವಿರ ಆದಾಯವನ್ನು ಶೇ. 55 ರಷ್ಟು, 10–20 ಸಾವಿರ ಆದಾಯವನ್ನು ಶೇ. 20 ರಷ್ಟು, ಹಾಗೆ 20–30 ಸಾವಿರ ಆದಾಯವನ್ನು ಶೇ. 10 ರಷ್ಟು, 30–40 ಸಾವಿರ ಆದಾಯವನ್ನು ಶೇ. 05 ರಷ್ಟು, 40–50 ಸಾವಿರ ಆದಾಯವನ್ನು ಶೇ. 10 ರಷ್ಟು ಜನ ಗಳಿಸಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಕಡಿಮೆ ಆದಾಯವನ್ನು ಹೊಂದಿದ್ದು, ಪುನರ್ವಸತಿ ಹೆಸರಿನಲ್ಲಿ ಇವರನ್ನು ಸ್ಥಳಾಂತರಿಸಿದ್ದು ಇವರಿಗೆ ಅಭಿವೃದ್ಧಿಯ ಸೌಲಭ್ಯಗಳು ಇದುವರೆಗು ಆದ್ದರಿಂದ ಇವರು ಪ್ರಸ್ತುತವೂ ಆರ್ಥಿಕವಾಗಿ ಹಿಂದೂಳಿದ್ದಾರೆ.

ಒಟ್ಟಾರೆಯಾಗಿ ಎಲ್ಲಾ ಬುಡಕಟ್ಟು ಸಮುದಾಯಗಳಿಂದ 5–10 ಸಾವಿರ ಆದಾಯವನ್ನು ಶೇ. 47.50 ರಷ್ಟು, 10–20 ಸಾವಿರ ಆದಾಯವನ್ನು ಶೇ. 26.25 ರಷ್ಟು, 20–30 ಸಾವಿರ ಆದಾಯವನ್ನು ಶೇ. 12.50 ರಷ್ಟು, 30–40 ಸಾವಿರ ಆದಾಯವನ್ನು ಶೇ. 7.50 ರಷ್ಟು, 40–50 ಸಾವಿರ ಆದಾಯವನ್ನು ಶೇ. 6.25 ರಷ್ಟು ಜನ ಗಳಿಸಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಕಡಿಮೆ ಆದಾಯವನ್ನು ಹೊಂದಿದ್ದು, ಇವರಿಗೆ ಜಮೀನು ಮತ್ತು ಇತರೆ ಯಾವುದೆ ಆದಾಯದ ಮೂಲಗಳಿರುವುದಿಲ್ಲ ಕಾರಣವಾಗಿದೆ.

2.2 ಜಮೀನಿನ ವಿವರ: ಪ್ರತಿಯೊಬ್ಬ ಮಾನವನಿಗೂ ತಮ್ಮದೆ ಆದ ಭೂಮಿ, ಅಸ್ತಿ–ಅಂತಸ್ಥನ್ನು ಹೊಂದಬೇಕು ಎಂಬ ಬಯಕೆ ಸಹಜವಾದದ್ದು. ಎಲ್ಲರಿಗೂ ಭೂ– ಒಡೆತನದ ಆಸೆ ಇದ್ದೆ ಇರುತ್ತದೆ. ಹಾಗೆಯೆ ಈ ಬುಡಕಟ್ಟು ಜನರಲ್ಲಿ ಯಾರಿಗೆ ಎಷ್ಟು ಜಮೀನಿದೆ ಎಂಬುದನ್ನು ಈ ಕೆಳಗಿನ ಕೊಷ್ಟಕವು ತಿಳಿಯಪಡಿಸುತ್ತದೆ.

ಕೋಷ್ಟಕ– 2.2

ಜಮೀನು	ಜೇನುಕುರುಬ	ಕಾಡುಕುರುಬ	ಸೋಲಿಗ	ಯರವ	ಒಟ್ಟು
ಇದೆ	12 (60%)	10 (50%)	08 (40%)	09 (45%)	39 (48.75%)
ಇಲ್ಲ	08 (40%)	10 (50%)	12 (60%)	11 (55%)	41 (51.25%)
ಒಟ್ಟು	20 (100%)	20 (100%)	20 (100%)	20 (100%)	80 (100%)

ಕೋಷ್ಟಕ 2.2 ಬುಡಕಟ್ಟು ಜನರ ಜಮೀನಿನ ವಿವರವನ್ನು ಸೂಚಿಸುತ್ತಿದ್ದು, ಜೇನುಕುರುಬರಲ್ಲಿ ಶೇ. 60 ರಷ್ಟು ಜಮೀನನ್ನು ಹೊಂದಿದ್ದರೆ, ಶೇ. 40 ರಷ್ಟು ಜಮೀನು ಹೊಂದಿಲ್ಲದಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಜಮೀನು ಹೊಂದಿರುವುದು ಕಂಡುಬಂದಿದೆ. ಇದಕ್ಕೆ ಕಾರಣ ಸರ್ಕಾರ ಇವರಿಗೆ ಜಮೀನು ನೀಡಿರುವುದು, ಇವರಲ್ಲಿ ಮತ್ತು ಹೆಚ್ಚಿನ ಜನರಿಗೆ ಪಿತ್ರಾರ್ಜಿತ ಆಸ್ತಿ ಇರುವುದು ಕಂಡುಬಂದಿದೆ.

ಬೆಟ್ಟಕುರುಬರಲ್ಲಿ ಶೇ. 50 ರಷ್ಟು ಜನರು ಜಮೀನನ್ನು ಹೊಂದಿದ್ದರೆ, ಶೇ. 50 ರಷ್ಟು ಜಮೀನು ಹೊಂದಿಲ್ಲದಿರುವುದು ಕಂಡುಬಂದಿದೆ. ಇವರಲ್ಲಿ ಅರ್ಧ ಜನರಿಗೆ ಜಮೀನು ಇದ್ದರೆ ಇನ್ನರ್ಧ ಜನರಿಗೆ ಜಮೀನು ಇಲ್ಲದಿರುವುದು ಕಂಡುಬಂದಿದೆ ಇದಕ್ಕೆ ಕಾರಣ ಹೆಚ್ಚಿನ ಜನರಿಗೆ ಪಿತ್ರಾರ್ಜಿತ ಆಸ್ತಿಯ ಜೊತೆಗೆ ಸರ್ಕಾರವೂ ಜಮೀನು ನೀಡಿರುವುದು ಕಂಡುಬಂದಿದೆ.

ಸೋಲಿಗರಲ್ಲಿ ಶೇ. 40 ರಷ್ಟು ಜನರು ಜಮೀನನ್ನು ಹೊಂದಿದ್ದರೆ, ಶೇ. 60 ರಷ್ಟು ಜಮೀನು ಹೊಂದಿಲ್ಲದಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಜಮೀನು ಹೊಂದಿಲ್ಲದಿರುವು ಕಂಡುಬಂದಿದೆ ಇದಕ್ಕೆ ಕಾರಣ ಇವರು ಬೇರೆ ಕಡೆಯಿಂದ ವಲಸೆ ಬಂದವರಾಗಿದ್ದು, ಸರ್ಕಾರ ಕೊಡಲಾಗುವ ಭೂ ಸಾಗುವಳಿ ಪರವಾನಗಿ ಇವರಿಗೆ ಇನ್ನೂ ಲಭ್ಯವಾಗಿಲ್ಲ.

ಯರವರಲ್ಲಿ ಶೇ. 45 ರಷ್ಟು ಜನರು ಜಮೀನನ್ನು ಹೊಂದಿದ್ದರೆ, ಶೇ. 55 ರಷ್ಟು ಜಮೀನು ಹೊಂದಿಲ್ಲದಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಜಮೀನು ಹೊಂದಿಲ್ಲದಿರುವು ಕಂಡುಬಂದಿದೆ ಇದಕ್ಕೆ ಕಾರಣ ಸರ್ಕಾರದಿಂದ ಯಾವುದೇ ಜಮೀನನ್ನು ಇವರಿಗೆ ಇದುವರೆಗು ನೀಡಿಲ್ಲ.

ಒಟ್ಟಾರೆಯಾಗಿ ಎಲ್ಲಾ ಬುಡಕಟ್ಟು ಸಮುದಾಯದಿಂದ ಶೇ. 48.75 ರಷ್ಟು ಜಮೀನನ್ನು ಹೊಂದಿದ್ದರೆ, ಶೇ. 51.25 ರಷ್ಟು ಜಮೀನು ಹೊಂದಿಲ್ಲದಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಜಮೀನು ಹೊಂದಿಲ್ಲದಿರುವು ಕಂಡುಬಂದಿದೆ ಇದಕ್ಕೆ ಕಾರಣ ಸರ್ಕಾರದಿಂದ ಈ ಬುಡಕಟ್ಟು ಸಮುದಾಯದ ಕೆಲವರಿಗೆ ಪ್ರಸ್ತುತವು ಯಾವುದೇ ಜಮೀನನ್ನು ನೀಡಿಲ್ಲದಿರುವುದು ಹಾಗೂ ಅರಣ್ಯ ನೀತಿಗಳು ಪ್ರಮುಖ ಕಾರಣಗಳಾಗಿದೆ.

2.3 ಉದ್ಯೋಗ:ಪ್ರತಿಯೊಬ್ಬ ಮನುಷ್ಯನಿಗೂ ಒಂದೊಂದು ಉದ್ಯೋಗ ವಿರುತ್ತದೆ. ಅದು ಅವರ ಜೀವನದ ಮೇಲೆ ಅವಲಂಬಿತವಾಗಿರುತ್ತದೆ. ಕೆಲವರಿಗೆ ಸರ್ಕಾರಿ, ಇನ್ನೂ ಕೆಲವರಿಗೆ ಅರೆ ಸರ್ಕಾರಿ ಮತ್ತೇ ಕೆಲವರಿಗೆ ಅವರು ಅವಲಂಬಿಸಿರುವ ವೃತ್ತಿಯ ಮೇಲೆ ಅವಲಂಬಿತರಾರುತ್ತಾರೆ. ಹಾಗೆ ಬುಡಕಟ್ಟು ಸಮುದಾಯದ ಜನರು ಯಾವ ಯಾವ ವೃತ್ತಿಯನ್ನು ಅವಲಂಬಿಸಿದ್ದಾರೆ ಎಂಬುದನ್ನು ಈ ಕೋಷ್ಟಕದಿಂದ ತಿಳಿದುಕೊಳ್ಳಬಹುದು.

ಕೋಷ್ಟಕ-2.3

ಉದ್ಯೋಗ	ಜೇನುಕುರುಬ	ಕಾಡುಕುರುಬ	ಸೋಲಿಗ	ಯರವ	ಒಟ್ಟು
ಸರ್ಕಾರಿ ಕೆಲಸ	01 (05%)	02 (10%)	02 (10%)	01 (05%)	06 (7.5%)
ಜಮೀನು ಕೂಲಿ ಕೆಲಸ	08 (40%)	07 (35%)	09 (45%)	10 (50%)	34 (42.5%)
ಇತರೆ ಕೂಲಿ ಕೆಲಸ	06 (30%)	05 (25%)	04 (20%)	05 (25%)	20 (25%)
ವಲಸೆ ಕೂಲಿ ಕೆಲಸ	05 (25%)	06 (30%)	05 (25%)	04 (20%)	20 (25%)
ಒಟ್ಟು	20 (100%)	20 (100%)	20 (100%)	20 (100%)	80 (100%)

ಕೋಷ್ಟಕ 2.3 ಬುಡಕಟ್ಟು ಜನರ ಉದ್ಯೋಗದ ಬಗ್ಗೆ ತಿಳಿಸುತ್ತಿದ್ದು, ಜೇನುಕುರುಬರಲ್ಲಿ ಸರ್ಕಾರಿ ಕೆಲಸವನ್ನು ಶೇ. 05ರಷ್ಟು ಜನ ಪಡೆದರೆ, ಜಮೀನು ಕೂಲಿ ಕೆಲಸದಲ್ಲಿ ಶೇ. 40ರಷ್ಟು, ಇತರೆ ಕೂಲಿ ಕೆಲಸಕ್ಕೆ ಶೇ. 30ರಷ್ಟು ಹಾಗೂ ವಲಸೆ ಕೂಲಿ ಕೆಲಸಕ್ಕೆ ಶೇ. 25ರಷ್ಟು ಜನರು ತೊಡಗಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಜಮೀನು ಮತ್ತು ಬೇಸಾಯ ಕೆಲಸದಲ್ಲಿ ತೊಡಗಿದ್ದಾರೆ.

ಬೆಟ್ಟಕುರುಬರಲ್ಲಿ ಸರ್ಕಾರಿ ಕೆಲಸವನ್ನು ಶೇ. 10ರಷ್ಟು ಜನ ಪಡೆದರೆ, ಜಮೀನು ಕೂಲಿ ಕೆಲಸದಲ್ಲಿ ಶೇ. 35ರಷ್ಟು, ಇತರೆ ಕೂಲಿ ಕೆಲಸಕ್ಕೆ ಶೇ. 25ರಷ್ಟು ಹಾಗೂ ವಲಸೆ ಕೂಲಿ ಕೆಲಸದಲ್ಲಿ ಶೇ. 30ರಷ್ಟು ಜನರು ತೊಡಗಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಜಮೀನು ಮತ್ತು ಬೇಸಾಯ ಕೆಲಸದಿಂದ ಜೀವನ ನಿರ್ವಹಿಸುತ್ತಿದ್ದಾರೆ.

ಸೋಲಿಗರಲ್ಲಿ ಸರ್ಕಾರಿ ಕೆಲಸವನ್ನು ಶೇ. 10ರಷ್ಟು ಜನ ಪಡೆದರೆ, ಜಮೀನು ಕೂಲಿ ಕೆಲಸದಲ್ಲಿ ಶೇ. 45ರಷ್ಟು, ಇತರೆ ಕೂಲಿ ಕೆಲಸಕ್ಕೆ ಶೇ. 20ರಷ್ಟು ಹಾಗೂ ವಲಸೆ ಕೂಲಿ ಕೆಲಸದಲ್ಲಿ ಶೇ. 25ರಷ್ಟು ಜನರು ತೊಡಗಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಜಮೀನು ಮತ್ತು ಬೇಸಾಯ ಕೆಲಸವನ್ನು ತಮ್ಮ ಜೀವನಾದಾರವಾಗಿ ಕಂಡುಕೊಂಡಿದ್ದಾರೆ..

ಯರವರಲ್ಲಿ ಸರ್ಕಾರಿ ಕೆಲಸವನ್ನು ಶೇ. 05ರಷ್ಟು ಜನ ಪಡೆದರೆ, ಜಮೀನು ಕೂಲಿ ಕೆಲಸದಲ್ಲಿ ಶೇ. 50ರಷ್ಟು, ಇತರೆ ಕೂಲಿ ಕೆಲಸಕ್ಕೆ ಶೇ. 25ರಷ್ಟು ಹಾಗೂ ವಲಸೆ ಕೂಲಿ ಕೆಲಸದಲ್ಲಿ ಶೇ. 20ರಷ್ಟು ಜನರು ತೊಡಗಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಜಮೀನು ಮತ್ತು ಬೇಸಾಯ ವೃತ್ತಿಯಿಂದ ಜೀವನ ಸಾಗಿಸುತ್ತಿದ್ದಾರೆ.

ಒಟ್ಟಾರೆ ಎಲ್ಲಾ ಬುಡಕಟ್ಟು ಸಮುದಾಯಗಳಿಂದ ಸರ್ಕಾರಿ ಕೆಲಸವನ್ನು ಶೇ. 7.5ರಷ್ಟು ಜನ ಪಡೆದರೆ, ಜಮೀನು ಕೂಲಿ ಕೆಲಸದಲ್ಲಿ ಶೇ. 42.5ರಷ್ಟು, ಇತರೆ ಕೂಲಿ ಕೆಲಸದಿಂದ ಶೇ. 25ರಷ್ಟು ಹಾಗೂ ವಲಸೆ ಕೂಲಿ ಕೆಲಸಕ್ಕೆ ಶೇ. 25ರಷ್ಟು ಜನರು ಜೀವನ ನಿರ್ವಹಿಸುತ್ತಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನ ಜನರು ಜಮೀನು ಮತ್ತು ಬೇಸಾಯ ಕೆಲಸವನ್ನು ಇಮ್ಮ ಜೀವನಾದಾರಿತ ವೃತ್ತಿಯನಾಗಿಸಿಕೊಂಡಿದ್ದಾರೆ.

2.4 ಅಧ್ಯಯನದ ಫಲಿತಗಳು:

1. ಬುಡಕಟ್ಟು ಜನರು ಇಂದಿಗೂ ಆರ್ಥಿಕವಾಗಿ ಹಿಂದುಳಿದಿರುವುದು ಕಂಡುಬಂದಿದೆ.

2. ಎಲ್ಲಾ ಬುಡಕಟ್ಟು ಜನರು ಕಡಿಮೆ ಆದಾಯ ಮಟ್ಟವನ್ನು ಹೊಂದಿರುವುದು ಅಧ್ಯಯನದಿಂದ ಕಂಡುಬಂದಿದೆ.

3. ಅರ್ಧಕ್ಕಿಂತಲು ಹೆಚ್ಚಿನ ಬುಡಕಟ್ಟು ಜನರಿಗೆ ಜಮೀನು ಇಲ್ಲದಿರುವುದು ಕಂಡುಬಂದಿದೆ.

4. ಹೆಚ್ಚಿನ ಜನರು ಜಮೀನು ಕೂಲಿ, ಇತರೆ ಕೂಲಿ ಕೆಲಸದಾಳುಗಳಾಗಿ ದುಡಿಯುತ್ತಿರುವುದು ಕಂಡುಬಂದಿದೆ.

2.5 ಅಧ್ಯಯನದ ಸಲಹೆಗಳು:

1. ಸರ್ಕಾರ ಬುಡಕಟ್ಟು ಜನರಿಗೆ ಅವರು ಇರುವ ಸ್ಥಳಗಳಲ್ಲಿಯೇ ಬುದುಕುವ ಅಕಾಶವನ್ನು ಕಲ್ಪಿಸಿಕೊಡಬೇಕು.

2. ಎಲ್ಲಾ ಬುಡಕಟ್ಟು ಜನರಿಗೂ ಜಮೀನು, ಮನೆಗಳು, ಅಂಗನಾವಾಡಿ ಮತ್ತು ಶಾಲೆ ಮತ್ತಿತರ ಸೌಲಭ್ಯಗಳನ್ನು ಅವರು ವಾಸಿಸುವ ಸ್ಥಳದಲ್ಲಿಯೇ ಒದಗಿಸಿಕೊಡಬೇಕು.

3. ಆರ್ಥಿಕ ಸಬಲೀಕರಣಕ್ಕೆ ಹೆಚ್ಚು ಹೊತ್ತುನ್ನು ನೀಡಬೇಕು.

2.6 ಉಪಸಂಹಾರ: ಭಾರತವು ಬುಡಕಟ್ಟು ಸಮುದಾಯಗಳ ತವರೂರು. ಅನಾದಿಕಾಲದಿಂದ ಹಿಡಿದು ಪ್ರಸ್ತುತ ದಿನದವರೆಗೂ ವಿಶ್ವದ ಉಗಮದಲ್ಲಿ ಮಾನವಜೀವಿ ಸೃಷ್ಟಿಯಾಗಿ, ಈ ಸೃಷ್ಟಿಯ ಮೂಲ ಜೀವಿಗಳೆಂದು ಗುರುತ್ತಿಸಲ್ಪಡುವವರೆಂದರೆ ಆದಿವಾಸಿಗಳು. ಬುಡಕಟ್ಟು ಸಮುದಾಯಗಳು ನಾಗರೀಕ ಜನಸಮುದಾಯಗಳಿಂದ ಪ್ರತ್ಯೇಕಿತರಾಗಿ ಜೀವನ ಸಾಗಿಸುತ್ತಿದ್ದು, ಈ ದೇಶದ ಮೂಲನಿವಾಸಿಗಳಾದ ಇವರು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಇಂದಿಗೂ ಎದುರಿಸುತ್ತಿದ್ದಾರೆ. ಇವರು ಪ್ರಸ್ತುತ ಆರ್ಥಿಕವಾಗಿ ಹಿಂದುಳಿದಿದ್ದು, ಅರಣ್ಯ ಹಕ್ಕು ಕಾಯ್ದೆ-2005 ಜಾರಿಯಲ್ಲಿರುವುದರಿಂದ ಇವರನ್ನು ಕಾಡಿನಿಂದ ಒಕ್ಕಲೆಬಿಸಿ, ಪರ್ಯವಸತಿ ಎಂಬ ಹೆಸರಿನಲಿ ಇವರಿಗೆ ಮನೆ, ಜಮೀನು ನೀಡಿದರೂ ವ್ಯವಸಾಯದ ಬಗ್ಗೆ ಯಾವುದೇ ತರಬೇತಿಗಳನ್ನು ನೀಡಿಲ್ಲ ಮತ್ತು ಇವರು ಜಮೀನು ಕೂಲಿ ಕೆಲಸ, ವಲಸೆ ಕೂಲಿ ಕೆಲಸಗಳಿಂದ ದಿನಕ್ಕೆ 150ರಿಂದ 200ರೂ ಸಂಪಾದಿಸುತ್ತಿದ್ದು ಈ ಹಣವು ಇವರ ಜೀವನ ನಿರ್ವಹಣೆಗೆ ಸಾಕಗುತ್ತಿಲವಾದ್ದರಿಂದ ಇವರು

ಇಂದಿಗೂ ಆರ್ಥಿಕ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇಂತಹ ಬುಡಕಟ್ಟು ಸಮುದಾಯದವರಿಗೆ ಸರ್ಕಾರ ಮನೆ, ಜಮೀನು, ಅಂಗನವಾಡಿ, ಶಾಲೆ ಮತ್ತಿತರ ಸೌಲಭ್ಯಗಳನ್ನು ಅವರು ವಾಸಿಸುವ ಸ್ಥಳದಲ್ಲಿಯೇ ಒದಗಿಸಿಕೊಡಬೇಕು. ಅಲ್ಲದೆ ಇವರ ಆರ್ಥಿಕ ಸಬಲೀಕರಣಕ್ಕೆ ಹೆಚ್ಚು ಹೊತ್ತುನ್ನು ನೀಡಿದರೆ ಮಾತ್ರ ಈ ಬುಡಕಟ್ಟು ಸಮುದಾಯಗಳು ಆರ್ಥಿಕವಾಗಿ ಮುಂದೆ ಬರಲು ಸಾಧ್ಯವಾಗುತ್ತದೆ.

2.7 ಆಧಾರ ಗ್ರಂಥಗಳು:

1. ನಂಜಮ್ಮಣಿ.ಎಂ 'ಭಾರತೀಯ ಸಾಮಾಜಿಕ ಸಂಸ್ಥೆಗಳು' ಕನ್ನಡ ಅಧ್ಯಯನ ಸಂಸ್ಥೆ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.(1982)

2. ಬೋರಲಿಂಗಯ್ಯ. ಹಿ.ಚಿ 'ಬುಡಕಟ್ಟು ಅಧ್ಯಯನ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ (2007)

3. ಡಾ. ಮಧು ಗುಂಡ್ಲುಪೇಟೆ 'ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ' ಅಕ್ಷತ ಪ್ರಕಾಶನ, ಮೈಸೂರು(2002)

4. ಡಾ.ತಾರಿಹಳ್ಳಿ ಹನುಮಂತಪ್ಪ (ಸಂಪಾದಕರು) 'ಕರ್ನಾಟಕ ಬುಡಕಟ್ಟು ಸಮುದಾಯಗಳು' ಪ್ರಾಸರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ (2010)

5. Censes of India-2011

6. Ghurya G.S 'Caste and Race in India' Popular prakasha Bambay .(1990)

ಶ್ರೀ ನುಂಕೇಮಲೆ ಸಿದ್ದೇಶ್ವರಸ್ವಾಮಿ ಜಾತ್ರೆ

ಡಾ. ಗೌಡಪ್ಪ. ಜಿ. ಇ
ಚನ್ನಮ್ಮನಾಗತಿಹಳ್ಳೀ, ಗ್ರಾಮ (ಅಂಚೆ), ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ–577 538

ಜಾತ್ರೆಗಳು ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ, ಖಪರಾಗಿ ವಿಶ್ವದ ಎಲ್ಲಾ ಜನ ಸಮುದಾಯಿಗಳು ಸುಖ, ದುಃಖ, ನೆಮ್ಮದಿ ನಾಳೆಯ ಕನಸುಗಳು ನನಸಾಗಲು ಇತ್ಯಾದಿ ಒಂದಿಲ್ಲೊಂದು ಬೇಡಿಕೆಗಳ ಈಡೇರಿಕೆಗಾಗಿ ಜನಗತ್ತಿನೆಲ್ಲೆಡೆ ಜಾತ್ರೆಗಳು ನಡೆಯುತಿವೆ. ಪಾಶ್ಚಾತ್ಯ ರಾಷ್ಟ್ರಗಳಾದ ಅರೇಬಿಯ, ಮೆಸಪಟೋಮಿಯ, ಪ್ಯಾಲಸ್ಟೈನ್, ಸಿರ್ಯಾ, ಈಜಿಪ್ಟ್ ಮುಂತಾದ ದೇಶಗಳಲ್ಲಿಯೂ ಜಾತ್ರೆಗಳು ಆಚರಣೆಯಲ್ಲಿವೆ. ಇಂತಹ ಜಾತ್ರೆಯ ಉತ್ಸವಗಳು ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿರದೆ ಅವುಗಳನ್ನು ವಿವಿಧ ಜನ ಸಮುದಾಯಿಗಳು ವೈವಿಧ್ಯಮಯವಾಗಿ ಆಚರಿಸುತ್ತಾರೆ. ಈ ರೀತಿಯ ಆಚರಣೆಗಳಿಲದ ಭಾರತವೂ ಹೊರತಾಗಿಲ್ಲ.

ಭಾರತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆ ಶ್ರೀಮಂತವಾಗಿರುವುದು ಜಾತ್ರೆ, ಹಬ್ಬ ಉತ್ಸವಗಳ ಮೂಲಕ ಧಾರ್ಮಿಕ ನೆಲೆಗಿಲಿತ ಜೀವಾಧಾರಿತ ಮತ್ತು ವೃತ್ತಿ ಆಧಾರಿತ ನೆಲೆಗಳು ಇಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಖಖಂಡಿತ ಭಾರತದಲಿತೂ ಖಖಂಡಿತ ಸಂಸ್ಕೃತಿ ರಾಷ್ಟ್ರದಲ್ಲಿ ಮಾತ್ರ, ಕಾಣಬೊರೆಯುವ ಈ ಖಗೆಯ ಜೀವನ ವಿಧಾನಕ್ಕೆ ಪಾರಂಪರಿಕ ದೇಣಿಗೆಗಳು ಅಪಾರ.

ಜಾತ್ರೆಗಳು ಸಮಾಜದ ಸರ್ವ ಸದಸ್ಯರ ಹಾಗೂ ಎಲ್ಲಾ ವಯೋಮಾನದವರ ಸಹಜವಾದ ಸಾಮಾಜಿಕ ಬಯಕೆಗಳನ್ನು ಈಡೇರಿಸುತ್ತವೆ. ಉದಾ:– ಮಕ್ಕಳಿಗೆ ಮನರಂಜನೆ, ಸಿಹಿತಿಂಡಿ, ಆಟಿಕೆಗಳನ್ನು ಪ್ರೇಮಿಗಳಿಗೆ ಉತ್ಸಾಸದ ಸಂಭ್ರಮವನ್ನು ವೃದ್ಧರಿಗೆ ದೇವರ ದರ್ಶನದಿಲದ ಪುಣ್ಯಪ್ರಾಪ್ತಿಯನ್ನು ನೀಡುತ್ತವೆ. ಜಾತ್ರೆಯ ನೆಪದಿಲದ ಬಂಧು–ಭಾಂಧವರು, ಮಿತ್ರರು ಒಂದೆಡೆ ಸೇರಿ ಪರಸ್ಪರ ಕಷ್ಟ – ಸುಖಗಳ ವಿಚಾರ ವಿನಿಮಯ ಮಾಡಿಕೊಳ್ಳಲು, ಹೊಸಬರ ಜೊತೆಯಲ್ಲಿ ಸ್ನೇಹ–ಸೌಹರ್ದ ಬೆಸೆಯಲು ಹಾಗೂ ಕೆಲವೊಮ್ಮೆ ವಧು–ವರರ ಆಯ್ಕೆಯ ವೇದಿಕೆಗಳಾಗಿಯೂ ಕಾರ್ಯ ನಿರ್ವಹಿಸುತ್ತವೆ. ಹೀಗೆ ಎಲ್ಲರ ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸುವ ಕೆಲಸವನ್ನು ಜಾತ್ರೆಗಳು ಸಮರ್ಪಕವಾಗಿ ನಿರ್ವಹಿಸಿಕೊಂಡು ಬರಿದಿವೆ.

ಜಾತ್ರೆ: ಪದ ನಿಷ್ಪತ್ತಿ:– ಎಲ್ಲಾ ಜಾತಿ ಜನ ವರ್ಗದವರು ಸೇರಿ ಜಾತ್ರೆಯನ್ನು ಮಾಡುವಲ್ಲಿ ಕಾಣುವ ಭಾವೈಕ್ಯತೆ ಅದ್ಭುತವಾದದ್ದು, ಯಾವುದೇ ವ್ಯಕ್ತಿ ತನ್ನ ಜೀವನದಲ್ಲಿ ಹಣಗಳಿಸುವುದು ಮಾತ್ರ ಮುಖ್ಯವಲ್ಲ ಜೊತೆಗೆ ತನ್ನೊಬ್ಬನ ಸುಖಕ್ಕಿಂತ ಮಿಗಿಲಾದುದುಯಿದೆ ವ್ಯಕ್ತಿಯ ಹಿತಕ್ಕಿಂತ ಸಮಷ್ಠಿಯ ಹಿತ ಮುಖ್ಯ ಎಂಬುದನ್ನು ಜಾತ್ರೆಯ ಆಚರಣೆಗಳು ತಿಳಿಸಿಕೊಡುತ್ತವೆ.

ಜಾತ್ರೆ ಎನ್ನುವುದು 'ಯಾತ್ರಾ' ಎಂಬ ಸಂಸ್ಕೃತ ಪದದಿಂದ ಬಂದಿದೆ. ಸಂಸ್ಕೃತದ 'ಯಾತ್ರೆ' ಕನ್ನಡದಲ್ಲಿ ಜಾತ್ರೆಯಾಯಿತು. ಜಾತ್ರೆಯ ಮೂಲ ಪದವಾದ ಯಾತ್ರೆಗೆ ಚಲನೆ, ಪ್ರಯಾಣ, ತೀರ್ಥಯಾತ್ರೆ, ಹಬ್ಬ ಮೆರವಣಿಗೆ, ಮನರಂಜನೆ ಎಂಬ ಅರ್ಥಗಳಿವೆ. ಸಮಾಜದಲ್ಲಿ 'ಜಾತ್ರೆ' ಮತ್ತು 'ಯಾತ್ರೆ' ಎಂಬ ಪದಗಳನ್ನು ಒಂದೇ ಎಂಬರ್ಥದಲ್ಲಿ ಜನಸಾಮಾನ್ಯರು ಬಳಸುತ್ತಿದ್ದು ಇವೆರಡರ ಮೂಲ ಉದ್ದೇಶಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.

ದಿನ ನಿತ್ಯದ ಕೆಲಸಗಳಿಂದ ವಿಶ್ರಾಂತಿ ಹೊಂದಲು ಮತ್ತು ದಣಿದ ಮನಸಿಗೆ ಕೊಂಚ ಮನರಂಜನೆಯಿಂದ ಮನತಣಿಸಲು ಹಾಗೂ ಸುಗ್ಗಿ ಮುಗಿದ ಫಲ ಕೈಸೇರಿದ ಖುಷಿಗಾಗಿ ದೇವರಿಗೆ ವಿಶೇಷ ಎಡೆಮಾಡಿ ಒಪ್ಪಿಸಿ ನೀ ಕೊಟ್ಟ ಕೃಪೆಯಿಂದ ಅಥವಾ ಫಲದಿಂದ ನಾವು ಧನ್ಯರಾದೆವೆಂದು ತಮ್ಮ ಭಕ್ತಿ ಪ್ರಧಾನ ಮಾಡುವುದರ ಜೊತೆಗೆ ತಾವು ಸೌಖ್ಯ ಭೋಜನವನ್ನುಂಡು ತಮ್ಮ ಬಂಧು

ಮಿತ್ರರೊಂದಿಗೆ ತಮ್ಮ ಅಸರಿಕೆ ಬೇಸರಿಕೆಯನ್ನು ತೀರಿಸಿಕೊಳ್ಳುವ ಸಮಯಗಳೇ ಜಾತ್ರೆಗಳಾಗಿವೆ.

ಮೊಳಕಾಲ್ಮೂರು ನುಂಕಿಮಲೆ ಸಿದ್ದೇಶ್ವರಕ್ಷೇತ್ರ ಇತಿಹಾಸ ಪ್ರಸಿದ್ಧ ಪ್ರದೇಶವಾಗಿದೆ. ಈ ಕ್ಷೇತ್ರವು ಮೊಳಕಾಲ್ಮೂರು ತಾಲ್ಲೂಕು ಕೇಂದ್ರದಿಂದ ಕಾಲುದಾರಿಯಲ್ಲಿ ಸಾಗಿದರೆ 3 ಕಿ.ಮೀ. ವಾಹನದಲ್ಲಿ ಸಾಗಿದರ 9 ಕಿ.ಮೀ ದೂರದಲ್ಲಿ ಕ್ಂಡು ಬರುವ ನಿಸರ್ಗ ತಾಣವೇ ಶ್ರೀ ನುಂಕಿಮಲೆ ಸಿದ್ದೇಶ್ವರ ಕ್ಷೇತ್ರ, ಕರ್ನಾಟಕದಲ್ಲಿ ಪ್ರಮುಖವಾಗಿ ಎರಡು ಕಾಲಬೈರವ ದೇವಾಲಯಗಳು ಕಂಡು ಬರುತ್ತವೆ. ಇವುಗಳಲ್ಲಿ ಮೊದಲನೆಯದು ಆದಿಚುಂಚನಗಿರಿ ಎರಡನೆಯದು ನುಂಕಿಮಲೆ. "ಆದಿಚುಂಚನಗಿರಿಯನ್ನು ಬಿಟ್ಟರೆ ಇದು ಕರ್ನಾಟಕದಲ್ಲಿ ಸಿಗುವ 2ನೇಯ ಕಾಲಬೈರವನ ಅವಾಸಸ್ಥಾನ" ಕ್ರಿ.ಶ. 10ನೇ ಶತಮಾನದ ಕಾಲಮಾನದಲ್ಲಿ ಈ ಕ್ಷೇತ್ರ ಪ್ರವರ್ದಮಾನಕ್ಕೆ ಬಂದಿರುವುದು ಇತಿಹಾಸದಿಂದ ತಿಳಸು ಬರುತ್ತದೆ. "ಕದಂಬರ ಒಂದು ಶಾಖೆಯು ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ನುಂಕೆ 70 ಸೇನೆಯನ್ನು ಆಳ್ವಿಕೆ ಮಾಡಿದ ಬಗ್ಗೆ ಇಲ್ಲಿಯ ಕದಂಬರ ಕಾಲದ ಎರಡು ಶಾಸನಗಳು ತಿಳಸುತ್ತವೆ.

ನುಂಕಿಮಲೆ ಕ್ಷೇತ್ರದ ಅಧಿನಾಯಕ ಕಾಲಭೈರವ, ಆದಿಮಲ್ಲಿಕಾರ್ಜುನ, ತುಪ್ಪದಮ್ಮ, ಸಿದ್ದೇಶ್ವರ ಮೊದಲಾದ ದೇವತೆಗಳು ಇಲ್ಲಿ ನೆಲೆಸಿದ್ದ ಈ ಭಾಗದ ಜನರ ದೈವಿಕ ಭಕ್ತಿಯನ್ನು ಹೆಚ್ಚಿಸಿವೆ. "ಉತ್ತರದ ನಾಥಪಂಥದ ಗೋರಕ್ಷನಾಥ ಸನ್ಯಾಸಿಗಳ ಸಂರಕ್ಷಣೆಯ ಕ್ಷೇತ್ರ ಇಲ್ಲಿದೆ. ಗೋಸಾಯಿಗಳ ಕೇಂದ್ರ ಮಂಗಳೂರಿನ ಸಮೀಪವಿರುವ ಕದ್ರಿಮಠ, ಇಲ್ಲಿರುವ ಸನ್ಯಾಸಿಗಳು ಅಲ್ಲಿಂದಲೇ ನಿಯುಕ್ತಿ ಗೊಂಡವರಾಗಿರುತ್ತಾರೆ ಪ್ರಸ್ತುತ ಗೋಸಾಯಿ ಶ್ರೀ ಮಂಗಲನಾಥ ಅವರು ಈ ಕ್ಷೇತ್ರವನ್ನು ವಹಿಸಿಕೊಂಡಿದ್ದಾರೆ".

ಸಮುದಾಯಗಳನ್ನು ಉದ್ದರಿಸಲು ದೈವವೇ ಮನುಷ್ಯನಾಗಿ ಕೆಲಮೊಮ್ಮೆ ಮನುಷ್ಯನೇ ದೇವರ ಸ್ವರೂಪವಾಗಿ ರೂಪಗೊಂಡ ಅನೇಕ ಕಥ, ಪುರಾಣ, ಐತಿಹ್ಯಗಳು ಇಂದಿಗೂ ಗ್ರಾಮೀಣ ಜನಜೀವನದ ಒಂದು ಭಾಗವಾಗಿ ಆಚರಣೆಗಳಲ್ಲವೆ. ಇಂತಹ ಅತಿಮಾನುಷ ಪುರುಷರನ್ನು ಸಾಂಸ್ಕೃತಿಕ ನಾಯಕರನ್ನಾಗಿ ಬಿಂಬಿಸುವುದು ಎಲ್ಲಾ ಜಾತಿ, ಜನಾಂಗಗಳಲ್ಲೂ ಕಂಡು ಬರುತ್ತದೆ. ಇಂತಹ ಸಾಂಸ್ಕೃತಿಕ ನಾಯಕರಲ್ಲಿ ನುಂಕಿಮಲೆ ಭೈರವನು ಒಬ್ಬ "ದಕ್ಷಿಣ ಕಾಶಿಯೆನಿಸಿದ ನುಂಕಿಮಲೆ ಬೆಟ್ಟದ ಮೇಲೆ ಭಕ್ತರ ಬಂಧುವೆನೆಸಿದ ಶ್ರೀ ನುಂಕಿಮಲೆ ಸಿದ್ದೇಶ್ವರ ಸ್ವಾಮಿ" ಎಂಬ ಸಾಂಸ್ಕೃತಿಕ ನಾಯಕ ನೆಲೆಸಿದ್ದಾನೆ.

ನುಂಕೇಮಲೆ ಸಿದ್ದೇಶ್ವರ ಪದನಿಷ್ಪತ್ತಿ:– ಶ್ರೀ ನುಂಕೇಮಲೆ ಸಿದ್ದೇಶ್ವರ ಸ್ವಾಮಿಅಯ ಕುರಿತಾದ ಮೌಖಿಕ ಸಾಹಿತ್ಯವನ್ನು ಅವಲೋಕಿಸಿದಾಗ ರಸಸಿದ್ದನ ಸಂಹಾರದ ನಂತರ ಕರ್ಪೂರದಮ್ಮನ ಅಣತಿಯಂತೆ ಭೈರವ ನುಂಕೇಮಲೆ ಪ್ರದೇಶದಲ್ಲಿ ನೆಲೆಸಿದ. ರಸಸಿದ್ದನ ಸಂಹಾರದ ನಂತರ ಅವನ ದಾಸಿಯರಾದ ನುಂಕವ್ವ ಮತ್ತು ಮಲಿಯವ್ವರು ಪಾತಾಳಕ್ಕಿಳಯಲು ಹವಣಿಸುತ್ತಾರೆ. ಪಾತಾಳಕ್ಕಿಳಯುವ ಸಮಯದಲ್ಲಿ ದೇಹದ ಭಾಗವು ಭೂಮಿಯೊಳಗೆ ಸೇರಿ ತಲೆಭಾಗ ಮಾತ್ರ ಭೂಮಿಯ ಮೇಲ್ಭಾಗದಲ್ಲಿ ನಿಲ್ಲುತ್ತದೆ. ಆ ಸಮಯದಲ್ಲಿ ಭೈರವನು ನುಂಕವ್ವ ಮತ್ತು ಮಲಿಯವ್ವರನ್ನು ಕುರಿತು ರಸಸಿದ್ದನ ಸಂಹಾರಕ್ಕಾಗಿ ನನಗೆ ಸಹಕಾರ ನೀಡಿದ್ದಕ್ಕೆ ನಿಮಗೆ ನನ್ನ ಧನ್ಯವಾದಗಳು. ಈ ಕಾರಣಕ್ಕಾಗಿ ನನ್ನಿಂದ ನಿಮಗೆ ಏನು ಬೇಕು ಕೇಳ ಕೊಡುವೆನು ಎಂದನು. ಆ ಸಮಯದಲ್ಲಿ ನುಂಕವ್ವನ ಹೆಸರಿನಿಂದ "ನುಂಕೆ" ಮತ್ತು ಮಲ್ಲಿಯವ್ವನ ಹೆಸರಿನಿಂದ "ಮಲೆ" ಹಾಗೂ ರಸಾಸಿದ್ದನ ಹೆಸರಿನಿಂದ "ಸಿದ್ದ" ಎಂಬ ಪದಗಳೊಂದಿಗೆ ಶಿವನ ಶ್ರೀ ರಕ್ಷೆಯ ಸಂಕೇತದ ಕುರುಹಾಗಿ "ಈಶ್ವರ" ಎಂಬ ಹೆಸರನ್ನು ಸೇರಿಸಿ ಶ್ರೀ ನುಂಕೇಮಲೆ ಸಿದ್ದೇಶ್ವರ ಎಂಬ ಹೆಸರಿನಿಂದ ಈ ಪ್ರದೇಶದಲ ನೆಲೆಗೊಂಡು ಈ ಪ್ರದೇಶವನ್ನು ಉದ್ದರಿಸಿ ಎಂದು ಬೇಡಿಕೊಂಡು ತಮ್ಮ ಕೋರಿಕೆಯನ್ನು ಭೈರವನ ಮುಂದಿಟ್ಟರು. ನುಂಕವ್ವ ಮತ್ತು ಮಲಿಯವ್ವರೆಂಬ ರಸಸಿದ್ದನ ದಾಸಿಯರ ಈ ಬೇಡಿಕೆಯನ್ನು ಈಡೇರಿಸಲು ಬೈರವನು ಶ್ರೀ ನುಂಕೆಮಲೆಸಿದ್ದೇಶ್ವರ ಎಂಬ ಹೆಸರಿನಿಂದ ಈ ಪ್ರದೇಶದಲ್ಲಿ ನೆಲೆಗೊಂಡು ಪ್ರಸಿದ್ಧಿ ಪಡೆದನು ಎಂಬುದು ಕ್ಷೇತ್ರಾಧ್ಯಯನದಿಂದ ತಿಳದು ಬಂದಿದೆ. ಅಲ್ಲದೆ ಇವರನ್ನು ಈ ಭಾಗದ ಜನರು ನುಂಕಪ್ಪ, ಕಾಲಭೈರವ, ನುಂಕಮಲೆ ಭೈರವ, ನುಂಕೆಮಲೆ, ಸಿದ್ದೇಶ್ವರ ಎಂಬ ಹೆಸರುಗಳಂದ ಕರೆಯುವುದು ಕಂಡು ಬರುತ್ತಿದೆ.

ಜಾತ್ರಾ ಮಹೋತ್ಸವ:– ಮೊಳಕಾಲ್ಮೂರು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಕಾಲುದಾರಿಯಲ್ಲಿ ಸಾಗಿದರೆ ಅಲ್ಲಿಯ ಬೆಟ್ಟಗಳ ಮಧ್ಯದ ನಿಸರ್ಗ ತಾಣದಲ್ಲಿ ಸಿಗುವ ದೇವಾಲಯವೇ ಶ್ರೀ ನುಂಕೇಮಲೆ ಸಿದ್ದೇಶ್ವರಸ್ವಾಮಿ ದೇವಾಲಯ, ಈ ದೇವಾಲಯದಲ್ಲಿ ಯುಗಾದಿ ಕಳೆದು ಮೂರು ತಿಂಗಳ ನಂತರ ಬರುವ ಅಮವಾಸ್ಯೆ ಕಳೆದ ತರುವಯ ಬರುವ ಐದನೇ ದಿನದ ವೈಶಾಖ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ಈ ಜಾತ್ರೆಯು ಪ್ರಮುಖವಾಗಿ ನಾಲ್ಕು ದಿನಗಳ ಕಾಲ ನಡೆಯುತ್ತದೆ. ಜಾತ್ರೆಯ ಪ್ರಮುಖ ಆಚರಣೆಗಳೆಂದರೆ.

1) ಕಂಕಣ ಕಟ್ಟುವುದು

2) ರಥೋತ್ಸವ

3) ಸಿಡಿ ಉತ್ಸವ

4) ಸಿದ್ಧಭುಕ್ತಿ

ಜಾತ್ರೆ ಇನ್ನೂ ಒಂದು ವಾರವಿರುವಂತೆ ಭಕ್ತರು ಶ್ರೀ ನುಂಕೇಮಲೆ ಸಿದ್ದೇಶ್ವರ ಸ್ವಾಮಿಯ ಪೂಜೆಗೆಂದು ಪಕ್ಕದ ಊರುಗಳ ಮನೆ ಮನೆಗೂ ತೆರಳಿ ಹುರುಳಯನ್ನು ಸಂಗ್ರಹಿಸಿ ಗುಗ್ಗರಿಹಬ್ಬವನ್ನು ಆಚರಿಸುವರು. ಅಲ್ಲದೇ ಗುಗ್ಗರಿಯ ಪ್ರಸಾದವನ್ನು ಮನೆಮನೆಗೂ ಹಂಚುವ ಮೂಲಕ ಶ್ರೀ ನುಂಕೆಮಲೆ ಸಿದ್ದೇಶ್ವರ ಸ್ವಾಮಿ ಜಾತ್ರೆ ಆರಂಭವಾಗುವುದೆಂಬುದರ ಸಂಕೇತವಾಗಿ ಈ ಆಚರಣೆ ಜಾರಿಯಲ್ಲಿದೆ. ಗುಗ್ಗರಿ ಹಬ್ಬ ನಾಯಕ ಬುಡಕಟ್ಟು ಸಂಸ್ಕೃತಿಯನ್ನು ಬಿಂಬಿಸುತ್ತದೆ. ಮೊಳಕಾಲ್ಮೂರು ತಾಲ್ಲೂಕು ಹಾನಗಲ್ ಗ್ರಾಮಸ್ಥರು ಹಾಗೂ ಸುತ್ತಲಿನ 33 ಹಳ್ಳೀಯ ಭಕ್ತಾದಿಗಳು, ಮಥಾಧಿಪತಿ ಮಂಗಲ್‌ನಾಥ ಮತ್ತು ಭಕ್ತಾದಿಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸುವರ್ಣ ಸಿದ್ಧ ಸಿಂಹಾಸನದ ರಾಜಯೋಗ ಸಂದ್ಯಾನಾಥ ಭಾವಾಜಿ ಅವರ ಅಧ್ಯಕ್ಷತೆ ಮತ್ತು ಮಾರ್ಗದರ್ಶನದಂತೆ ಜಾತ್ರೆಯ ಪೂರ್ವ ಸಿದ್ಧತೆಗಳು ಹಾಗೂ ಜಾತ್ರೆಯ ಕಾರ್ಯಕ್ರಮಗಳು ನಡೆಯುವವು.

ಕಂಕಣಧಾರಣೆ:– ಕಂಕಣಧಾರೆ ಆಚರಣೆಯು ಶ್ರೀ ನುಂಕೇಮಲೆ ಸಿದ್ದೇಶ್ವರಸ್ವಾಮಿ ಜಾತ್ರೆಯ ಮೊದಲ ದಿನದ ಕಾರ್ಯ. ಅಂದು ಸಂಜೆ ೨ ಗಂಟೆಯ ಸಮಯಕ್ಕೆ ಕೊಮ್ಮನಪಟ್ಟ ಮತ್ತು ಪೂಜಾರಹಟ್ಟಿಯ ಶ್ರೀನುಂಕೇಮಲೆ ಸಿದ್ದೇಶ್ವರ ಸ್ವಾಮಿಯ ಪೂಜಾರಿಗಳು ಹಾಗೂ ಮಠದ ಪೂಜಾರಿಗಳು, ಸ್ವಾಮಿಗಳೂ ಸೇರಿ ಬೆಳೆ, ಬೆಲ್ಲ ಉತ್ತುತ್ತಿ, ಎಲೆ, ಅಡಿಕೆ ಮೊದಲದ ಪೂಜಾ ಸಾಮಗ್ರಿಗಳನ್ನು ಇಟ್ಟು ದೇವರಿಗೆ ಗಂಗಾ ಪೂಜೆಯನ್ನು ಮಾಡಲಾಗುತ್ತದೆ. ನಂತರ ಶ್ರೀ ನುಂಕೇಮಲೆ ಸಿದ್ದೇಶ್ವರ, ತುಪ್ಪದಮ್ಮ ಹಾಗೂ ಜಾತ್ರೆಯ ಸಿಡಿ ಉತ್ಸವದಲ್ಲಿ ಸಿಡಿಯಾಡುವ ಸಿಡಿ ಪೂಜಾರಿಗೆ ಕಂಕಣವನ್ನು ಕಟ್ಟಲಾಗುತ್ತದೆ. ಈ ಆಚರಣೆಯು ಜಾತ್ರೆಯ ಮುನ್ಸೂಚನೆಯ ಸಂಕೇತವಾಗಿದ್ದು ಜಾತ್ರೆಯ ಕಾರ್ಯಕಲಾಪಗಳಿಗೆ ಶುಭಾರಂಭವನ್ನು ಸೂಚಿಸುತ್ತದೆ. ಇದರೊಂದಿಗೆ ಜಾತ್ರೆಯ ಮೊದಲ ದಿನದ ಕಾರ್ಯಕ್ರಮಗಳು ಮುಗಿಯುತ್ತವೆ.

ರಥೋತ್ಸವ:– ಕಂಕಣಧಾರಣೆಯ ನಂತರದ ಆರನೆಯ ದಿನ ಶ್ರೀ ನುಂಕೇಮಲೆ ಸಿದ್ದೇಶ್ವರ ಸ್ವಾಮಿ ಜಾತ್ರೆಯ ವಿಶೇಷ ಆಚರಣೆ ರಥೋತ್ಸವ ಕಾರ್ಯಕ್ರಮ ಜರುಗುತ್ತದೆ. ಅಂದು ಮಧ್ಯಾಹ್ನ ವಾಲ್ಮೀಕಿ ನಾಯಕ ಜನಾಂಗದವರು ರಥಕ್ಕೆ ನೀರನ್ನು ಹಾಕಿ ಸುದ್ದಿಗೊಳಿಸುತ್ತಾರೆ. ಹರಳಯ್ಯನ ವಂಶಸ್ಥರು ತೇರಿನಗಾಲಿಗೆ ಎಣ್ಣೆ ಹಾಕಿ ಬಾಳೆಯ ಹಣ್ಣನ್ನು, ಸದರಿ ಬೊಮ್ಮಲಿಂಗನಹಳ್ಳಿ ಬಡಿಗೇರರು, ಕಾಟವನಹಳ್ಳಿಕಾವಲಾರರು, ಕೆಳಗಳಹಟ್ಟಿಯವರು, ಮತ್ತು ಬಡಿಗೇರರು ಸೇರಿ ರಥವನ್ನು ಅಲಂಕರಿಸಿ ರಥೋತ್ಸವಕ್ಕೆ ಸಿದ್ದಗೊಳಿಸುತ್ತಾರೆ. ನಂತರ ಶ್ರೀ ನುಂಕೇಮಲೆ ಸಿದ್ದೇಶ್ವರ ಸ್ವಾಮಿ ಮತ್ತು ಗೋರಕ್ಷನಾಥ ಸ್ವಾಮಿಯವರ ಉತ್ಸವ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಪೂಜಿಸಿ ನಂತರ ಪಲ್ಲಕ್ಕಿಯ ಮೆರವಣಿಗೆ ಮೂಲಕ ಉತ್ಸವ ಮೂರ್ತಿಗಳನ್ನು ಕರೆ ತಂದು ಅಲಂಕೃತ ರಥದಲ್ಲಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ಈ ಕಾರ್ಯದ ನಂತರ ಅಪಾರ ಭಕ್ತ ಸಮುದಾಯದ ಮಧ್ಯೆ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವ ರಥವನ್ನು ಮಲ್ಲಿಕಾರ್ಜುನಸ್ವಾಮಿ ದೇವಾಲಯದವರೆಗೆ ಎಲ್ಲಾ ಜನರು ಜಾತಿಭೇದವ ಮರೆತು ಎಳೆದು ತರುತ್ತಾರೆ. ಗಜಗಾಂಭೀರ್ಯದಿಂದ ರಥವನ್ನು ಎಳೆಯುವ ಸಮಯ್ದಲ್ಲಿ ಭಕ್ತರು ದವನ, ಬಾಳೆಹಣ್ಣು, ಮಂಡಕ್ಕಿ, ಸೂರಬೆಲ್ಲ, ಎಲೆ ಇತ್ಯಾದಿಗಳನ್ನು ರಥದ ಮೇಲೆಸೆದು ತಮ್ಮ ಹರಕೆಯನ್ನು ತೀರಿಸುತ್ತಾರೆ.

ಸಿಡಿಉತ್ಸವ:– ಶ್ರೀ ನುಂಕೇಮಲೆ ಸಿದ್ದೇಶ್ವರಸ್ವಾಮಿ ಜಾತ್ರೆಯ ಮೂರನೇ ದಿನದ ವಿಶೇಷ ಆಚರಣೆ ಸಿಡಿಉತ್ಸವ. ಈ ಆಚರಣೆಯನ್ನು ನಡೆಸಿ ಕೋಡುವವರು ಕೊಮ್ಮನಪಟ್ಟಯ ಪೂಜಾರಿ ನಾಯಕರು, ಸಿಡಿ ಎಂದರೆ ಗ್ರಾಮದೇವತೆಗೆ ಸಲ್ಲಿಸುವ ಒಂದು ಬಗೆಯ ಸೇವೆ. ಸಿಡಿಯಾಡುವ ವ್ಯಕ್ತಿ ಶ್ರೀ ನುಂಕೇಮಲೆ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಕಂಕಣವನ್ನು ಕಟ್ಟಿದಂದಿನಿಂದ ಉಪವಾಸ ವ್ರತವಿದ್ದು ಹಾಲು ಹಣ್ಣುಗಳನ್ನು ಮಾತ್ರ ಸೇವಿಸಿರುತ್ತಾನೆ. ಇವನನ್ನು ಮದುವೆ ಗಂಡು ಎಂದು ಈ ದೇವರ ಭಕ್ತರು ಕರೆಯುವರು. ಸಿಡಿಯಾಡುವ ಸಿಡಿ ಪೂಜಾರಿ (ವ್ಯಕ್ತಿ) ಯನ್ನು ಸಿಡಿಗಂಬಕ್ಕೆ ಕಟ್ಟುವ ಮೊದಲು ಅವನನ್ನು ಮದುಮಗನಂತೆ ಸಿಂಗರಿಸಿ ತಲೆಗೆ ರುಮಾಲು (ಪೇಟ) ಸುತ್ತಿ ಅದಕ್ಕೆ ಹೊಂಬಾಳೆಯನ್ನು ಸಿಕ್ಕಿಸಿ ಸಿಡಿಮರದ ಬಳಿ ಕರೆತರಲಾಗುತ್ತದೆ. ನಂತರ ಅವನನ್ನು ಪೂಜಿಸಿ ಅವನ ಬೆನ್ನಿಗೆ ಗಂದವನ್ನಚ್ಚಿ ಬೆನ್ನಿಗೆ ಉಕ್ಕಿನಿಂದ ತಯಾರಿಸಿದ ಕೊಕ್ಕೆ ಕೊಂಡಿಗಳನ್ನು ಹಾಕಿ ನಂತರ ಸಿಡಿ ಮರಕ್ಕೆ ಅವನನ್ನು ಕಟ್ಟಲಾಗುತ್ತದೆ. ನಂತರ ಸಿಡಿಗಂಬವನ್ನು ನಿಧಾನವಾಗಿ ಮೇಲಕ್ಕೆ ಎತ್ತಲಾಗುತ್ತದೆ. ಆ ಸಮಯದಲ್ಲಿ ಸಿಡಿಯಾಡುವ ವ್ಯಕ್ತಿ ಕೂತುತ್ತ ಸುತ್ತಲೂ ಕೈಕಾಲುಗಳನ್ನು ತಿರುಗಿಸುತ್ತ ಅರಿಸಿನ ಪುಡಿ ಮತ್ತು ಬೇವಿನ ಎಲೆಗಳನ್ನು ಚೆಲ್ಲುತ್ತಾ ಒಂಬತ್ತು ಸುತ್ತು ಸುತ್ತುತ್ತಾ ಸಿಡಿಯಾಡುವನು. ಈ ಸಿಡಿ ಉತ್ಸವವನ್ನು ನೋಡಲು ಸುಮಾರು ೮೦ ಸಾವಿರದಿಂದ ಒಂದು ಲಕ್ಷ ಜನ ಸೇರುತ್ತಾರೆ.

ಸಿದ್ಧಬುಕ್ತಿ (ಭಕ್ತಿ):– ಶ್ರೀ ನುಂಕೇಮಲೆ ಸಿದ್ದೇಶ್ವರ ಸ್ವಾಮಿ ಜಾತ್ರೆಯ ಸಿಡಿ ಉತ್ಸವದ ನಂತರದ ದಿನ (ಮರುದಿನ) ಅಂದರೆ ಜಾತ್ರೆಯ ನಾಲ್ಕನೇಯ ದಿನದ ವಿಶೇಷ ಆಚರಣೆಯೇ ಸಿದ್ಧಬುಕ್ತಿ. ಈ ಆಚರಣೆಯನ್ನು ಶ್ರೀ ನುಂಕೇಮಲೆ ಸಿದ್ದೇಶ್ವರಸ್ವಾಮಿಯ ಗುರುಗಳಾದ ಗೋರಕ್ಷನಾಥ ಸಿದ್ಧಪುರುಷರ ಜ್ಞಾಪಕಾರ್ಥವಾಗಿ ಆಚರಿಸಲಾಗುತ್ತದೆ. ಅಂದು ಬೆಳಿಗಿನ ಸಮಯ ಉತ್ಸವ ಮೂರ್ತಿಯನ್ನು ದೇವಾಲಯದ ಪಕ್ಕದಲ್ಲಿರುವ ಹೊಂಡದ ಬಳಿ ಗಂಗಾಸ್ನಾನ ಮಾಡಿಸಿ ಪೂಜೆ ಸಲ್ಲಿಸಿ ಮಠಕ್ಕೆ ಮೆರವಣಿಗೆಯ ಮೂಲಕ ಕರೆತರುವ ಸಮಯದಲ್ಲಿ ಉತ್ಸವ ಮೂರ್ತಿಗೆ ಬಿಳ ಬಟ್ಟೆಯಿಂದ ತೆರೆಕಟ್ಟಿ ನಾಯಕ (ವಾಲ್ಮೀಕಿ) ಜನಾಂಗದವರು ಕುರಿಯೊಂದನ್ನು ಬಲಿ ನೀಡುತ್ತಾರೆ. ಈ ಬಲಿ ಆಚರಣೆಯನ್ನು ಸಿದ್ಧಬುಕ್ತಿ ಎಂದು ಕರೆಯುವರು.

ಜಾತ್ರೆಯ ವೈಶಿಷ್ಟ್ಯತೆಗಳು:– ಶ್ರೀ ನುಂಕೇಮಲೆ ಸಿದ್ದೇಶ್ವರಸ್ವಾಮಿ ಜಾತ್ರೆಯು ವೈಶಿಷ್ಟತೆಗಳಿಂದ ಕೂಡಿದೆ. ಈ ವೈಶಿಷ್ಟ್ಯತೆಗಳೆ ಈ ಜಾತ್ರೆಯನ್ನು ಬುಡಕಟ್ಟು ಪ್ರಧಾನ ಜಾತ್ರೆ ಎಂಬುದನ್ನು ತಿಳಿಸಿಕೊಡುತ್ತದೆ. ಶ್ರೀ ನುಂಕೇಮಲೆ ಸಿದ್ದೇಶ್ವರ ಸ್ವಾಮಿ ಜಾತ್ರೆಯ ಸಮಯದಲ್ಲಿ ಆಚರಿಸಲಾಗುವ ವಿಶಿಷ್ಟ ಆಚರಣೆಗಳಲ್ಲಿ ಸಿದ್ಧಬುಕ್ತಿಯೂ ಒಂದು. ಈ ಆಚರಣೆಯನ್ನು ಪ್ರಧಾನವಾಗಿ ಹಟ್ಟಿ ಸಂಸ್ಕೃತಿಯನ್ನು ಒಳಗೊಂಡಿರುವ ನಾಯಕ ಜನಾಂಗದವರು ಆಚರಿಸುತ್ತಾರೆ. ಇವರನ್ನು ಅನುಸರಿಸಿ ಇತರೆ ಜಾತಿಯ ಭಕ್ತರು ಈ ಆಚರಣೆಯನ್ನು ಮಾಡುವುದು ಕಂಡು ಬರುತ್ತದೆ.

ಕಾರಹುಣ್ಣಿಮೆಯ ಸಮಯದಲ್ಲಿ ಆಚರಿಸಲ್ಪಡುವ ಈ ಆಚರಣೆಯ ಸಮಯದಲ್ಲಿ ದೇವರಿಗೆ ಹೆಣ್ಣು ಪ್ರಾಣಿಗಳ ಬಲಿಯ ಮಾಂಸದ ಎಡೆಯನ್ನು ಅರ್ಪಿಸುವುದು ಇಲ್ಲಿ ನಿಷಿದ್ಧ. ಅಲ್ಲದೇ ಮಾಂಸದ ಎಡೆ ಪಟ್ಟಲಿ (ಟಗರು) ಮತ್ತು ಓತ (ಗಂಡು ಮೇಕೆ) ಗಳದ್ದು ಮಾತ್ರವಾಗಿರುತ್ತದೆ. ಇವುಗಳ ಹೊರತಾಗಿ ಬೇರೆ ಪ್ರಾಣಿಗಳನ್ನು ಬಳಸುವಂತಿಲ್ಲ. ಇವುಗಳ ಬಲಿಯೊಂದಿಗೆ ಗೋರಕ್ಷನಾಥರಿಗೆ ಸಿದ್ಧಬುಕ್ತಿ ಎಂಬ ಆಚರಣೆಯನ್ನು ನೆರವೇರಿಸಲಾಗುತ್ತದೆ. ಈ ಆಚರಣೆ ಬುಡಕಟ್ಟು ಸಮುದಾಯದವರಾದ ನಾಯಕ ಜನಾಂಗದವರು ತಮ್ಮ ಹರಕೆ ತೀರಿಸುವ ಸಲುವಾಗಿ ಬಳಕೆಯಲ್ಲದೆ. ಕೆಲವೊಮ್ಮೆ ಈ ಸಮುದಾಯದವರೆಲ್ಲರು ಒಟ್ಟಾಗಿ ಸೇರಿ ಪರವು ಮಾಡುವುದುಂಟು.

ಸಿದ್ಧಬುಕ್ತಿ ಆಚರಣೆಯ ಬಲಿಗೂ ಮುನ್ನ ಉತ್ಸವ ಮೂರ್ತಿಯನ್ನು

ತಂಗಟೆ ಗಿಡದ ಬುಡದಲ್ಲಿ ಕರಿಕಂಬಳಿಯ ಗದ್ದುಗೆ ಹಾಕಿ ಪ್ರತಿಷ್ಠಾಪಿಸುತ್ತಾರೆ. ನಂತರ ಹರಕೆಯ ಓತಗಳನ್ನು ಉತ್ಸವ ಮೂರ್ತಿಯ ಎದುರು ಬಲಿಕೊಡುತ್ತಾರೆ. ನಂತರ ಅವುಗಳ ಮಾಂಸದ ತುಂಡುಗಳನ್ನು ಹಸಿ ತಂಗಟೆ ಗಿಡದ ಕಡ್ಡಿಗೆ ಚುಚ್ಚಿ ಬೆಂಕಿಯಲ್ಲಿ ಸುಟ್ಟು ಗದ್ದುಗೆಯ ಮೇಲಿಟ್ಟು ಅದರಲ್ಲಿ ಅಕ್ಕಿ, ರಾಗಿ, ಜೋಳಗಳ ಧಾನ್ಯಗಳನ್ನು ಮತ್ತು ಹಣ್ಣು ಕಾಯಿ ಹಾಗೂ 101 ರೂ. ಕಾಣಿಕೆಯನ್ನಿಟ್ಟು ಮಾಂಸಾಹಾರವನ್ನು ಎಡೆಯಾಗಿ ಅರ್ಪಿಸಿ ಪೂಜಿಸಲಾಗುತ್ತದೆ. ನಂತರ ರಕ್ಕಸನನ್ನು ಸಂಹರಿಸಲು ನಾಯಿಗಳು ಸಹಕರಿಸಿದ್ದರ ಸಂಕೇತವಾಗಿ ನಾಯಿಗಳಿಗೆ 101 ಎಡೆಗಳನ್ನು ಅರ್ಪಿಸಿ ಪೂಜಿಸಲಾಗುತ್ತದೆ. ನಂತರ ಕಾವಲರು, ಗೊರವರು, ಗೊಲ್ಲರು ಮಡಿವಾಳರು ಮತ್ತು ಕುಂಬಾರ ಜನಾಂಗದವರು ಸಹ ಭೋಜನ ಮಾಡುವರು ಸಿದ್ಧಬುಕ್ತಿಯ ಸಮಯದಲ್ಲಿ ಎಲ್ಲಾ ಜಾತಿ ಮತ್ತು ಜನಾಂಗದವರು ಸಹಭೋಜನ ಮಾಡುವುದು ಸಮೈಕ್ಯ ಸಮಾಜದ ಸಂಕೇತವಾಗಿದೆ.

ಆಧಾರ ಗ್ರಂಥಗಳು:-

1) ಚಿತ್ರದುರ್ಗ ಜಿಲ್ಲಾದರ್ಶನ ಐತಿಹಾಸಿಕ ಮತ್ತು ಪ್ರವಾಸಿ ತಾಣಗಳ ಕಿರು ಚಿತ್ರ – ಚಿನ್ಮೂಲಾದ್ರಿ ಕ್ರಿಯೇಷನ್ಸ್, ಚಿತ್ರದುರ್ಗ

2) ಶ್ರೀ ನುಂಕೇಮಲೆ ಸಿದ್ದೇಶ್ವರಸ್ವಾಮಿ (ಕಾಲಭೈರವೇಶ್ವರ) ಚರಿತ್ರೆ, ಜಿ. ಎಸ್. ವಸಂತ ಮಾಸ್ತರು – ನುಂಕೇಮಲೆ ಸಮಾಚಾರ – ಕನ್ನಡ ಪಾಕ್ಷಿಕ ಪತ್ರಿಕೆ 25-10-2010 ಪುಟ-2

3) ಸಂಕ್ಷಿಪ್ತ ಕನ್ನಡ ನಿಘಂಟು – ಕನ್ನಡ ಸಾಹಿತ್ಯ ಪರಿಷತ್ತು 2010 ಪುಟ 1296

"ಬದುಕು" ಕಾದಂಬರಿಯಲ್ಲಿ ಸ್ತ್ರೀ ಸಂವೇದನೆ

ಡಾ. ಪತ್ರೆಮ್ಮ ಧಾರವಾಡ
ಪಿಡಿಎಫ್, ಡಾ.ಆರ್.ಸಿ ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.,
Email: salagatti@gmail.com

ದಲಿತ ಸಾಹಿತ್ಯವೆಲಿಬುವು ಅನೇಕ ವರ್ಷಗಳಿಂದ ಮೇಲ್ವರ್ಗದವರಿಂದ ಶೋಷಣೆ ಮತ್ತು ಅವಮಾನಗಳಿಗೆ ಒಳಗಾದ ಸಾಮಾಜಿಕ ವರ್ಗವೊಂದು ತನಗಾದ ನೋವುಗಳಿಗೆ ಅಕ್ಷರ ರೂಪದಲ್ಲಿ ಆ ನೋವನ್ನು ಹಂಚಿಕೊಂಡಿದುದರ ಪರಿಣಾಮವಾಗಿ ದಲಿತ ಸಾಹಿತ್ಯ ಬೆಳಕಿಗೆ ಬಂದಿದೆ. ಶೋಷಣೆಗೆ ಒಳಗಾದ ದಲಿತ ವರ್ಗದ ನೆನಪುಗಳು ನೋವಿನಿಂದ ಕೂಡಿರುವುದು ಸಹಜವಾಗಿದೆ. ಹಾಗಾಗಿ ಆಧುನಿಕ ಕಾಲದ ಕಾದಂಬರಿ ಪ್ರಕಾರಗಳಲ್ಲಿ ದಲಿತರ ನೋವುಗಳನ್ನು ಚಿತ್ರಿಸುವ ಪ್ರಯತ್ನವನ್ನು ಮಾಡಲಾಗಿದೆ. ದಲಿತರ ಕುರಿತು ಬರೆಯುವ ಲೇಖಕರು ದಲಿತರೇ ಆಗಿದ್ದಾಗ ತಾವು ಕಂಡು ಕೇಳಿದ ಅನುಭವಗಳನ್ನು ನೇರವಾಗಿ ಅಭಿವ್ಯಕ್ತಿಸಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡ ಗೀತಾ ನಾಗಭೂಷಣರ "ಬದುಕು" ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಒಂದು ಅತ್ಯುತ್ತಮ ಕೃತಿಯಾಗಿದೆ. ಅಲಕ್ಷಿತ ಸಮುದಾಯವೊಂದರ ಬದುಕಿನ ಚಿತ್ರಣವನ್ನು ವಿಶಿಷ್ಟ ಭಾಷೆಯಲ್ಲಿ ರಚಿಸಿರುವ ಇವರು ಸ್ತ್ರೀಪರ ನಿಲುವು, ಜಾತಿವೈಶಮ್ಯತೆ, ಮೇಲ್ವರ್ಗ ಕೆಳವರ್ಗಗಳ ರೀತಿ ರಿವಾಜು, ಆಚಾರ ವಿಚಾರ ಇವುಗಳು ಅತ್ಯಂತ ವಿಶಿಷ್ಟ ರೀತಿಯಲ್ಲಿ ಕಾದಂಬರಿಯಲ್ಲಿ ಚಿತ್ರಿತವಾಗಿವೆ.

ಇಲ್ಲಿ ಸ್ತ್ರೀಯು ತನ್ನೆಲ್ಲ ಮನಸ್ಸಿನ ತೊಳಲಾಟವನ್ನು ಅಮುಮಿಟ್ಟುಕೊಂಡು ಅನುಭವಿಸಿದ ನೋವನ್ನು ಕಾದಂಬರಿಯಲ್ಲಿ ಕಾಣಬಹುದು. ಕೆಳವರ್ಗದ ಹೆಣ್ಣಿನ ಅಸಹಾಯಕ ಸ್ಥಿತಿ, ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಭಿಲಿಯಾಗುವ ಮತ್ತು ಆಕೆ ಧರ್ಮಪರಿಕಟಕ್ಕೆ ಒಳಗಾಗುವರಿತಹ ಪರ್ನಿವೇಶಗಳನ್ನು ಕಾದಂಬಿ-ರಿಯಲ್ಲಿ ನೋಡಬಹುದು. ಅದೇ ಹೆಣ್ಣು ಆಧುನಿಕ ಜಗತ್ತಿನ ಪರಿಚಲಿಯುದೊಂದಿಗೆ ಈ ಕೆಟ್ಟ ಸಮಾಜದ ವಿರುದ್ಧ ಪ್ರತಿಭಟಿಸುವ ಚಿತ್ರಣವನ್ನು ರೇಖಕಿ ಕಾದಂಬರಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿಯಲ್ಲಿ ಶಿವಕ್ಕಲಿಯು ಕೆಳಗೇರಿಯಲ್ಲಿ ತಲಿವೆ ತಾಲಿಯುಗಳೇ ತಮ್ಮ ಹಿರೆಯಿವ ಹೆಣ್ಣು ಮಕ್ಕಳನ್ನು ದೇವರಿಗೆ ಬಿಡುವ ಪದ್ಧತಿ ಕರಿಡುಬರುತ್ತವೆ. ರೈೋಪಪಡಪಟ್ಟಲಿಯ ಜನ ಅಜ್ಞಾನವಿಲಿಂದ ಮೂಢನಂಬಿಕೆಲಿಯ ನರಿಪ್ರವಾಲಿಯದಲ್ಲಿ ತಮ್ಮ ಹಿರೆಯಿವ ಹೆಣ್ಣು ಮಕ್ಕಳನ್ನು ತಲಿವೆ ತಾಲಿಯುಗಳು ದೇವಿಲಿಯ ಹಿರಕೆ ಎಲಿಯು ಅವರನ್ನು ಜೋಗತಿಲಿಯರನ್ನಾಗಿ ಮಾಡುವುದನ್ನು ನಿರೂಪಿಸಿದ್ದಾರೆ. ಈ ಕಾದಂಬರಿ ಜನಜೀವನದ ಬದುಕಿನಲ್ಲಿ ಗಾಢವಾಗಿರುವ ಕಾಮ ಮತ್ತು ಲೈಂಗಿಕ ಪ್ರಕ್ರಿಲಿಯೆಗಳು ಸಹಜವೆಲಿಬಲಿತೆ ನಡೆಯುತ್ತವೆ. ದಲಿತರ ಕೆಳವರ್ಗದ ಜನರ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ರೇಖಕಿ ಈ ಕಾದಂಬರಿಲಿಯ ಮೂಲಕ ಸಾಹಿತ್ಯ ರೋಕಕ್ಕೆ ಸಮರ್ಪಿಸಿದ್ದಾರೆ. ಹೀಗೆ 'ಬದುಕು' ಕಾದಂಬರಿಲಿಯಲ್ಲಿಯು ಸ್ತ್ರೀ ಸಂವೇದನೆಲಿಯನ್ನು ಕುರಿತ ಪ್ರಬಲಿಧವನ್ನು ಮಲಿಡಿಸಲಾಗುವುದು.

ಅನೇಕ ವರ್ಷಗಳಿಂದ ಮೇಲ್ವರ್ಗದವರಿಂದ ಶೋಷಣೆ ಮತ್ತು ಅವಮಾನಗಳಿಗೆ ಒಳಗಾದ ಸಾಮಾಜಿಕ ವರ್ಗವೊಂದು ತನಗಾದ ನೋವುಗಳಿಂದ ಅಕ್ಷರ ರೂಪದಲ್ಲಿ ಆ ನೋವನ್ನು ಹಂಚಿಕೊಂಡಿದುದರ ಪರಿಣಾಮವಾಗಿ ದಲಿತ ಸಾಹಿತ್ಯ ಬೆಳಕಿಗೆ ಬಂದಿದೆ. ಶೋಷಣೆಗೆ ಒಳಗಾದ ದಲಿತ ವರ್ಗದ ನೆನಪುಗಳು ನೋವಿನಿಂದ ಕೂಡಿರುವುದು ಸಹಜವಾಗಿದೆ. ಹಾಗಾಗಿ ಆಧುನಿಕ ಕಾಲದ ಅನೇಕ ಕಾದಂಬರಿಗಳಲ್ಲಿ ದಲಿತರ ನೋವುಗಳನ್ನು ಚಿತ್ರಿಸುವ ಪ್ರಯತ್ನವನ್ನು ಹಲವಾರು ಲೇಖಕರು ಮಾಡಿದ್ದಾರೆ. ದಲಿತರ ಕುರಿತು ಬರೆಯುವ ಲೇಖಕರು ದಲಿತರೇ ಅಗಿದ್ದಾಗ ತಾನು ಕಂಡ ಕೇಳಿದ ಅನುಭವಗಳನ್ನು

ನೇರವಾಗಿ ಅಭಿವ್ಯಕ್ತಿಸಲು ಸಾಧ್ಯವಾಗುತ್ತದೆ. ಲೇಖಕರು ತಮ್ಮ ಸುತ್ತಮುತ್ತಲಿನ ಪರಿಸರ ಪ್ರದೇಶಗಳನ್ನೆ ಕಾದಂಬರಿಯ ವಸ್ತುವನ್ನಾಗಿ ಆಯ್ಕೆಮಾದಿಕೊಳ್ಳುತ್ತಾರೆ. ಅಲ್ಲಿಯ ಜನರೊಡನೆ ಸ್ಥಳದೊಡನೆ ಬೆರೆತು ಅವರ ಜೀವನದ ಸುಖದುಃಖಗಳನ್ನು ಅನುಭವಿಸಿದುದರಿಂದ ಲೇಖಕರ ಬರಹ ಹೆಚ್ಚು ಶ್ರೇಷ್ಠವೆನಿಸುತ್ತದೆ. ಗ್ರಾಮೀಣ ಜೀವನವನ್ನು ಆಯ್ಕೆಮಾಡಿಕೊಳ್ಳುವ ಲೇಖಕರು ಕಥೆ ನಡೆದ ಪ್ರದೇಶವನ್ನು ನಿಖರವಾಗಿ ಗುರುತಿಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡ ಗೀತಾ ನಾಗಭೂಷಣರ "ಬದುಕು" ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಒಂದು ಅತ್ಯುತ್ತಮ ಕೃತಿಯಾಗಿದೆ. ಕೆಳವರ್ಗದ ಜನರ ಜೀವನವನ್ನು ಅರ್ಥಪೂರ್ಣವಾಗಿ "ಬದುಕು" ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಅಲಕ್ಷಿತ ಸಮುದಾಯವೊಂದರ ಬದುಕಿನ ಚಿತ್ರಣವನ್ನು, ಕಲಬುರ್ಗಿ ಪರಿಸರದ ಭಾಷೆಯಲ್ಲಿ ನೇರವಾಗಿ ಅಭಿವ್ಯಕ್ತಿಸಿದ್ದಾರೆ. ಸ್ತ್ರೀಪರ ನಿಲುವು, ಜಾತಿಮೌಢ್ಯತೆ, ಮೇಲ್ವರ್ಗ ಕೆಳವರ್ಗಗಳ ರೀತಿ ರಿವಾಜು, ಆಚಾರ ವಿಚಾರ ಇವುಗಳು ಅತ್ಯಂತ ವಿಶಿಷ್ಟ ರೀತಿಯಲ್ಲಿ ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಕಾದಂಬರಿಯಲ್ಲಿ ಸ್ಥಳೀಯ ಭಾಷೆಯಲ್ಲಿಯೇ ಅಲ್ಲಿಯ ಕೆಳವರ್ಗದ ಜನರ ಶೋಷಣೆಯ ವಿಭಿನ್ನ ಮುಖಗಳನ್ನು, ಹೆಣ್ಣಿನ ಗೋಳನ್ನು, ಅತೀಯಾದ ಕಾಮವನ್ನು, ಹಣದ ಆಸೆ ಅಥವಾ ಮತ್ಯಾವುದೋ ಹರಕೆಗಾಗಿ ತಂದೆ ತನ್ನ ಮಗಳನ್ನು ಜೋಗತಿ ಮಾಡುವ ವಂಚಕ ಬುದ್ಧಿಯನ್ನು ಲೇಖಕಿ ನೇರವಾಗಿ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಗೀತಾ ನಾಗಭೂಷಣ ಅವರ "ಬದುಕು" ಕಾದಂಬರಿಯಲ್ಲಿ ಸ್ತ್ರೀಪಾತ್ರಗಳು ಎಲ್ಲಿಯೂ ಕೂಡ ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳದೇ ಪ್ರತಿಭಟಿಸುತ್ತವೆ. ಬದುಕು ಕಾದಂಬರಿಯ ಕೇಂದ್ರ ವ್ಯಕ್ತಿಯಾದ ಜಮಾದಾರ ಮಲ್ಲಪ್ಪನ ಕುಟುಂಬದಲ್ಲಾಗುವ ಅನೇಕ ಸಮಸ್ಯೆಗಳನ್ನು ಲೇಖಕಿ ನಿರೂಪಿಸಿದ್ದಾರೆ. ಮಲ್ಲಪ್ಪನ ಎರಡನೇ ಮಗಳು ಕಾಶಮ್ಮ ಮೇಲ್ಜಾತಿಯ ಲಿಂಗರಾಜನನ್ನು ಪ್ರೀತಿಸುತ್ತಿದ್ದಾಳೆ ಎಂಬುದು ಗೊತ್ತಾದಾಗ ತಂದೆ ತಾಯಿಗಳಿಗೆ ಸಿಟ್ಟುಬಂದು ಮೇಲ್ಜಾತಿಯ ಜನಗಳ ರಂಡೆಯಾಗಬಾರದೆಂದು ಆಕೆಯನ್ನು ಸೊಲ್ಲಾಪುರಕ್ಕೆ ಮದುವೆಮಾಡಿಕೊಡುತ್ತಾರೆ. ದೇಹ ಒಬ್ಬರಿಗೆ ಮನಸ್ಸು ಒಬ್ಬರಿಗೆ ಕೋಡಬಾರದೆಂದು ಕಾಶಮ್ಮ ಮತ್ತು ಲಿಂಗರಾಜ ಮತ್ತೆ ಸೇರುತ್ತಾರೆ. ಆದರೆ ಪ್ರೀತಿಯ ಆರಂಭದಲ್ಲಿ ಮದುವೆಯಾಗುತ್ತೇನೆಂದು ಹೇಳಿದಾ ಲಿಂಗರಾಜ ಅವಳನ್ನು ಗಂಡನ ಮನೆಯಿಂದ ಓಡಿಸಿಕೊಂಡು ಬಂದು ಅವಳಿಗೆ ತಾಳಿ ಕಟ್ಟದೇ ಊರಹೊರಗೆ ಅವನ ತೋಟದ ಮನೆಯಲ್ಲಿ ಇಟ್ಟುಕೊಳ್ಳುವುದು ಮೇಲ್ವರ್ಗ ಕೆಳವರ್ಗ ಎಂಬ ವರ್ಗಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ. ಈ ವಿಷಯ ತಿಳಿದ ತಂದೆ ಅವಮಾನ ತಾಳದೇ ಹೊಳೆಹಾರಿ ಸಾವನ್ನಪ್ಪುತ್ತಾನೆ. ತಾಯಿ ಹುಚ್ಚಿಯಂತಾಗುತ್ತಾಳೆ.

ಕಾದಂಬರಿಯಲ್ಲಿ ಕಾಶಮ್ಮನ ಪ್ರಕರಣ ಮೇಲ್ವರ್ಗ ಕೆಳವರ್ಗವರ ನಡುವೆ ದಾಂಧೆಲೆಯನ್ನೆಬ್ಬಿಸುತ್ತದೆ. ಮೇಲ್ವರ್ಗದ ಜನ ಕೆಳಗೇರಿಯ ಹೆಣ್ಣನ್ನು ಇಟ್ಟುಕೊಂಡವಳಾಗಿ ನೋಡುತ್ತಾರೆಯೇ ಹೊರತು ತಮ್ಮ ಹೆಂಡತಿಯನ್ನಾಗಿ ಅಲ್ಲ. ಅವರು ತಮ್ಮ ಕೌಟಂಬಿಕ ಬದುಕಿಗೆ ಯಾವುದೇ ಧಕ್ಕೆ ತಂದುಕೊಳ್ಳುವುದಿಲ್ಲ. ಇಲ್ಲಿ ವರ್ಗವ್ಯವಸ್ಥೆಯ ಕ್ರೂರ ಮುಖಗಳು ಕಾಣಿಸಿಕೊಳ್ಳುತ್ತವೆ. 'ಬದುಕು' ಕಾದಂಬರಿಯಲ್ಲಿ 'ಜೋಗತಿ' ಸಂಪ್ರದಾಯವನ್ನು ಗೀತಾ ನಾಗಭೂಷಣ ಅವರು ಎಳೆ ಎಳೆಯಾಗಿ ತೆರೆದಿಡುತ್ತಾರೆ. ಜೋಗತಿ ಮಾಡುವ ಪದ್ಧತಿ ಕೇವಲ ದಲಿತರಲ್ಲಿ ಮಾತ್ರ ಕಂಡುಬರುತ್ತದೆ. ಮೇಲ್ವರ್ಗದವರೆನ್ನಿಸಿಕೊಂಡ ಗೌಡ, ಕುಲಕರ್ಣಿ, ಸಾಹುಕಾರರು ಗ್ರಮವ್ಯವಸ್ಥೆಯ ಆಡಳಿತಗಾರರಾಗಿ ಕೆಳವರ್ಗದ ಹೆಂಗಸರ ಚೆಲುವಿಗೆ ಮಾರು ಹೋಗಿ ಜೋಗತಿ ಸಂಪ್ರದಾಯದ ಹೆಸರಿನಲ್ಲಿ ಮೇಲ್ವರ್ಗದ ಜನರು ಅವರನ್ನು ಹರೆಯದ ದಿನಗಳಲ್ಲಿ ಬಳಸಿಕೊಂಡು ನಂತರ ಅವರನ್ನು ಬಿಸಾಡಿಬಿಡುವ ಕ್ರೂರ ಮುಖಗಳ ಚಿತ್ರಣವನ್ನು ಕಾದಂಬರಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಮೇಲ್ವರ್ಗದ ಜನರು ಕೊಡುವ ಹಣದ ಆಸೆಗೆ ಬಲಿಯಾಗಿ ಅವರು ಹೇಳಿದಂತೆ ಕೇಳುವ ಕೆಳವರ್ಗದವನೇ ಆದ ಪೂಜಾರಪ್ಪ ತಮ್ಮ ಕೇರಿಯ ಹಣ್ಣು ಮಕ್ಕಳನ್ನು ಜೋಗತಿ ಮಾಡುವುದು. ಇದು ದೇವಿಯ ಆಜ್ಞೆ ಎಂದು ಮುಗ್ಧಜನರನ್ನು ಬಲಿಪಶುಮಾಡುವುದು ಕಾದಂಬರಿಯಲ್ಲಿ ಹೃದಯ ವಿದ್ರಾವಕವಾಗಿ ಲೇಖಕಿ ವ್ಯಕ್ತಪಡಿಸಿದ್ದಾರೆ.

ಕಾಶಮ್ಮನ ಬಗ್ಗೆ ಊರ ಜನ ನಾನಾ ರೀತಿಯಲ್ಲಿ ಮಾತಾಡಿಕೊಳ್ಳುತ್ತಿದ್ದನ್ನು ಕೇಳಿ ಕಲ್ಯಾಣಿ ಒಂದು ದಿನ ಕುಡಿಯಲಿಕ್ಕೆ ಹೋದಾಗ ಜಂಬಗಿ ಮುಕುಡಪ ಆಡಿದನ್ನು ಕೇಳಿ ಸಿಟ್ಟಿನಲ್ಲಿ ಅವನಿಗೆ ಹೊಡೆದುದಕ್ಕೆ ಕಲ್ಲು ಬಡಿದು ಆತ ಸತ್ತೆ ಹೋಗುತ್ತಾನೆ. ಕಲ್ಯಾಣಿಗೆ ಹದಿನಾಲ್ಕು ವರ್ಷ ಜೈಲುವಾಸ ಅನುಭವಿಸಬೇಕಾಗುತ್ತದೆ. ಕಲ್ಯಾಣಿ ಜೈಲು ಸೇರಿದಾಗ ಆತನ ಹೆಂಡತಿ ಬೆಳ್ಳಿ ಅನೇಕ ಸಂಕಟಕ್ಕೀಡಾಗುವಳು. ಹರೆಯದ ಬೆಳ್ಳಿಯ ಮೇಳೆ ಮೇಲ್ಜಾತಿಯ ಗಂಡಸರು ಕಣ್ಣುಹಾಕಿದ್ದು ಅವರಿಂದ ಆಕೆ ಪ್ರತಿಭಟಿಸಿ ಗಂಡನ ಬರುವಿಕೆಗಾಗಿಯೇ ಸಂಸ್ಕಾರವನ್ನು ಸಾಗಿಸುತ್ತಿರುತ್ತಾಳೆ. ಬೆಳ್ಳಿ ಪಟ್ಟ ಕಷ್ಟವನ್ನು ಲೇಖಕಿ ಮನಕರಗುವಂತೆ ಚಿತ್ರಿಸಿದ್ದಾರೆ.

ಮದುವೆಯ ಚೌಕಟ್ಟಿನೊಳಗೆ ಅತೀ ಕಾಮುಕದೃಷ್ಟಿಯಲ್ಲಿ ಹೆಂಡತಿಯನ್ನು ಆರು ತಿಂಗಳಿನಲ್ಲಿ ಗರ್ಭವತಿಯನ್ನಾಗಿಸುವ ಮುಕ್ಯಾನ ಹೆಂಡತಿಯ ವೇದನೆಯನ್ನು ನೋಡಿದರೆ ಕಾಮವೆನ್ನುವುದು ಲಂಗುಲಗಾಮಿಲ್ಲದ ಕುದುರೆಯಂತೆ ಅದನ್ನು ಹಿಡಿತದಲ್ಲಿಟ್ಟುಕೊಂಡು ಬದುಕಬೇಕಾಗುತ್ತದೆ. ತುಂಬು ಬಸುರಿಯಾದ ಕಲ್ಲವ್ವ ಆಗಲೇ ಆರು ಮಕ್ಕಳ ತಾಯಿ. ಮುಕ್ಯಾ ದಿನವೂ ಕುಡಿದು ಬಂದು ಅವಳ ಮೇಲೆ ಅತ್ಯಾಚಾರವೆಸಗುತ್ತಿರುತ್ತಾನೆ. ಸಾವಿನ ಹಿಂದಿನ ದಿನವೂ ಅವಳ ಬಳೀಗೆ ಹೋದಾಗ ಅವಳು ಅರ್ತಳಾಗಿ "ಬ್ಯಾಡೋ ಇದೆಲ್ಲಾ.. ನನ್ನ ಕೈಲಿಂದ ತಾಳ್ಕೋಳ್ಳಕ್ಕಾಗಂಗಿಲ್ಲೆವ್ವೋ.. ಎಂಟು ತಿಂಗಳ ತುಂಬ್ಯಾದ ನನಗ.. ಇಂದಾ ನಾಳೀಗೆ ಬಾಣತನ ಆಫಾ ದಿನಾಗೋಳು ಅವ..ಕೂಸಿನ ನೆತ್ತಿ ಅಂಬಾದು ನನ್ನ ಕಿಪ್ಪಡ್ಯಾಗ ಬಂದು ಕಲ್ಲಕುಂತಂಗಾಗ್ಯಾದೋ.. ನಾ ಸತ್ತೆ ಹೋಗ್ತಿನೀ..ನಿನ್ ಕಾಲಿಗೆ ಬಿದ್ದು ಕೈ ಮುಗೀತೀನೋ..ಯಾ ಜೋಗಣಿ ಹಾಸಗಿಗರೆ ಹೋಗೋ ಮಾರಾಯಾ.. ನನ್ ಕೈಲಿಂದಾಗಲ್ಲೋ.. " (ಬದುಕು– 285) ಅಂತ ಅವಳು ಎಷ್ಟು ಗೋಗರೆದರೂ ಬಿಡುವುದಿಲ್ಲ. ಆತನಿಂದ ಬಿಡಿಸಿಕೊಳ್ಳಲು ನೆರೆಹೊರೆಯವರನ್ನು ಕೂಗಿಕರೆಯುತ್ತಾಳೆ. ನಡುರಾತ್ರಿಯಲ್ಲಿ ಯಾರ ಸಹಾಯವು ಅವಳಿಗೆ ದೊರೆಯದಿದ್ದಾಗ ಅವಳು ಗಂಡನ ಆಕ್ರಮಣದಿಂದಲೇ ಸಾವನ್ನಪ್ಪುತ್ತಾಳೆ. ಹೀಗೆ ಮಹಿಳೆಗೆ ಶೋಷಣೆ ಮಾಡುವುದು

ಕಾದಂಬರಿಯುದ್ದಕ್ಕೂ ಕಂಡುಬರುತ್ತದೆ. ಲೈಂಗಿಕ ದೌರ್ಜನ್ಯದ ಹಲವು ಮುಖಗಳು ಕಾದಂಬರಿಯಲ್ಲಿ ಬರುತ್ತದೆ.

'ಬದುಕು' ಸ್ತ್ರೀ ಕೇಂದ್ರಿತ ಕಾದಂಬರಿಯದರೂ ಅದರಲ್ಲಿ ಬರುವ ಗಂಡು ಪಾತ್ರಗಳು ವ್ಯವಸ್ಥೀಗೆ ಹೊಂದಿಕೊಂಡು ಹೋದರೂ ಕೆಲವು ಸಲ ಮಲ್ಲಪ್ಪ, ಕಲ್ಯಾಣಿ ಪ್ರತಿಭಟಿಸಿದ್ದು ಕಂಡುಬಂದರೂ ಸ್ತ್ರೀಯರಂತೆ ಗಟ್ಟಿಯಾಗಿ ದಲಿತ ಬಂಡಾಯದ ಚಳುವಳಿಯ ಹೋರಾಟದ ಸ್ವರವೆತ್ತಿದ್ದು ತೀರ ಕಡಿಮೆ.

ಉದಾಹರಣೆಗೆ;

* ಲಿಂಗರಾಜನ ತಂದೆ ಸಾವ್ಕಾರ ಗುರುಲಿಂಗಪ್ಪ ಮಲ್ಲಪ್ಪನ್ನು ಕರೆಕಳಿಸಿ ಅವನಿಗೆ ಒಮ್ಮೆಲೆ ಬಯಲು ಶುರುಮಾಡಿದ. "ನಿನಗೇನು ಗೊತ್ತಿಲ್ಲಂತಿಯೇನೋ ಕಾಟಗಾ... ಹ್ಯಾಂಗ ಹೊತ್ತಾಗ್ರದೋ ನಿನಗ? ನಿನ್ ಮಗಳಿಗೆ ಚುಂಚೂರು ಮಾಪುರ ತಾಯಿಗೆ ಜೋಗಣಿ ಬಿಟ್ಟಿದ್ದೇನೋ ಮಲ್ಲಾ ್ಯ? ಬಸವಿ ಬಿಟ್ಟಿಯೆನು?" ಸಾವ್ಕಾರನ ಮಾತುಗಳು ಸಿಡಿಲಿನಂತೆ ಮಲ್ಲಪ್ಪನ ನೆತ್ತಿಗಪ್ಪಳಿಸಿದವು. ಅಲಲಲಾ ಅಂತ ಅವನೆದೆಯಲ್ಲಿ ಒಮ್ಮೆ ರಕ್ತ ಕುದ್ದು ಉಕ್ಕಿದಾಗಾಯ್ತು.

"ಏನಂದ್ಯೂ ಸೂಳ್ಯಾ ಮಗನೇ ಸಾವ್ಕಾರಾ.. ನಿನ್ನ ನಾಲಿಗೆ ಬಿಳಿ ಹಿಡ್ಡು ಮಾತಾಡು.. ನನ್ ಮಗಳ ಹೆಸರಿಗಿ ಬಂದೆಂದ್ರ ನಿನ್ನ ನಾಲಿಗಿ ಸೀಳಿ ಹಾಕ್ತಿನಿ ಭೋಸಡೀಕೇ .. ಸಾವ್ಕಾರಂತ ಮಾರ್ವಾದಿ ಕೊಟ್ಟರ ನನ್ ಕುಂಡ್ಯಾಗೆ ಬಿಸಿನೀರ ಬಿಡ್ಲಕ್ಕ ಹೊಂಡಿದ್ದಾ ್ಯ.." ಮಲ್ಲಪ್ಪ ಸಿಟ್ಟಿನಿಂದ ಕಣ್ಣು ಕೆಂಪಗೆ ಮಾಡಿ ಒದರ್ಯಾಡಿದನು. (ಬದುಕು– 104)

* ಮಲ್ಲಪ್ಪ ಸತ್ತ ಸುದ್ದಿ ತಿಳಿದಿ ಕಾಶಮ್ಮ ಲಿಂಗರಾಜನ ತೋಟದ ಮನೆಯಿಂದ ಓಡಿಬಂದಾಗ ದೂರದಿಂದಲೇ ಅವಳನ್ನು ನೋಡಿದ ಕಲ್ಯಾಣಿ ಓಡಿ ಹೋಗಿ ಅಂಗಳದ ತುದಿಯಲ್ಲೇ ಅವಳನ್ನು ತಡೆದ. ಅವಳ ಕುತ್ತಿಗೆಗೆ ಕೈ ಹಾಕಿ ನೂಕಿದ ರಭಸಕ್ಕೆ ಆಟು ದೂರ ರಸ್ತೆಗೋಗಿ ಬಿದ್ದಳೂ! "ನಮ್ಮಪ್ಪನ ಹೆಣದ ಬಲ್ಲ ಬಂದರ ನಿನ್ ಕಾಲು ಮುರ್ದು ಒದ್ದಾಕ್ತಿನೀ.. ನೀನೇ ಅವನ ಜಿಂವಾತಗೊಂಡು, ರಾಗಸೇಸಾಗಿ ಮತ್ತಿಲ್ಲಗಿ ಬರ್ತ್ಯಾ.. ನಡಿಯಿಲ್ಲಂದ.. ಹೂಂ.. " ಅಂತ ಒದರ್ಯಾಡಿದನು . (ಬದುಕು– 319)

ಕಾದಂಬರಿಯಲ್ಲಿ ಬರುವ ಪುರುಷ ಪಾತ್ರಗಳು ಜಾಸ್ತಿ ಎಲ್ಲಿಯೂ ಪ್ರತಿಭಟನೆ ಮಾಡಿದ್ದು ಕಂಡುಬರುವುದಿಲ್ಲ. ದಲಿತ ಬಂಡಾಯದ ಪ್ರಜ್ಞೆ ಪುರುಷ ಪಾತ್ರಗಳಲ್ಲಿ ಸಾಂದರ್ಭಿಕವಾಗಿ ಕೆಲವು ಕಡೆ ಕಂಡು ಬಂದರೂ ಮೇಲ್ವರ್ಗಗಳ ಹಿಂಸೆಗೆ, ಶೋಷಣೆಗೆ ಬಲಿಯಾಗುವ ಹೆಣ್ಣು ಮಕ್ಕಳಲ್ಲಿ ನೀಲವ್ವ, ತುಳಜವ್ವ, ಬೆಳ್ಳಿ ಇವರ ಪ್ರತಿಭಟನೆ ದೊಡ್ಡ ಪ್ರಮಾಣದಲ್ಲಿ ಪ್ರಭಾವ ಬೀರುತ್ತುದೆ. ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣ್ಣು ಯಾವ ರೀತಿಯಲ್ಲಿ ಹೋರಾಡುತ್ತಾಳೆ ಎಂಬುದನ್ನು ಈ ಕಾದಂಬರಿ ಮುಖಾಂತರ ತಿಳದುಕೊಳ್ಳಬಹುದು. ತಮ್ಮ ಮೇಲೆ ನಡೆಯುವ ದೌರ್ಜನ್ಯ ದಬ್ಬಾಳಿಕೆ ವಿರುದ್ಧ ಪ್ರತಿಭಟಿಸಿ ತಿರುಗಿ ಎದುರೇಟು ಕೊಟ್ಟಿದ್ದು ದಲಿತ ಬಂಡಾಯ ಪ್ರಜ್ಞೆಗೆ ಸಾಕ್ಷಿಯಾಗಿದೆ ಎಂದು ಹೇಳಬಹುದು. ಉದಾಹರಣೆಗೆ:

* ಜಮಾದಾರ ಮಲ್ಲಪ್ಪನ ದೊಡ್ಡಿ ಹೊಲ್ಯಾ ಭರಮ್ಯಾನ ಮಗಳು ನೀಲವ್ವ ಜೋಗಣಿ ಆಗೋದಕ್ಕೆ ಪ್ರತಿಭಟಿಸಿದ್ದು, ಅವಳು ಎಷ್ಟೇ ಬೇಡವೆಂದರೂ ಕೇಳದೇ ತಂದೆ ತಾಯಿಗಳು ಅವಳನ್ನು ಜೋಗಣಿ ಮಾಡುತ್ತಾರೆ. "ನಾ ಒಲ್ಲಪ್ಪೋ. . ನಾ ಜೋಗಣಿ ಆಗಂಗಿಲ್ಲೋ ಯಪ್ಪಾ ನಾನು ಬ್ಯಾರೆ ಹೆಂಗಸರಂಗೆ ಮದಿಮಾಡ್ಕೊಂಡು ಒಬ್ಬ ಗಂಡನ ಹೆಣ್ತಾ ್ಯಗಿ ಗರತ್ಯಾಗಿ ಬಾಳ್ಯಾ ಮಾಡ್ತೀನೋ ಯಪ್ಪಾ.. ನಾ ದೇವರ ಹೆಸರಿನ ಮ್ಯಾಲ ಸೂಳಧಂದಾ ಮಾಡಂಗಿಲ್ಲೇ ಯವಾ.. ನನಗಿದೆಲ್ಲಾ ಪಸಂದಿಲ್ಲೇ ಹಡದವ್ವಾ.. ನೀ ಅರೆ ಅಪ್ಪಗೆ ಹೇಳೇ ಎವ್ವಾ" (ಬದುಕು–62) ಇಷ್ಟೆಲ್ಲಾ ನೀಲವ್ವ ಕೇಳಿಕೊಂಡರೂ ಆಕೆಯ ಮಾತನ್ನು ಯಾರು ಕೇಳದೇ ಅವಳನ್ನು ಜೋಗತಿಯನ್ನಾಗಿ ಮಾಡುತ್ತಾರೆ. ತಾನೂ ಪ್ರೀತಿಸಿದ ಹುಡುಗನೂ ಸಹ ಅವಳನ್ನು ತಿರಸ್ಕರಿಸಿದಾಗ ಅವಳು ಬಾವಿಗೆ ಬಿದ್ದು ಸಾಯುತ್ತಾಳೆ.

ವ್ಯವಸ್ಥೆಯ ಸುಳಿಯಲ್ಲಿ ಸಿಕ್ಕ ಹೆಣ್ಣುಮಕ್ಕಳು ಕೊನೆಗೆ ಅದರಿಂದ ಬಿಡುಗಡೆಗೊಳ್ಳುವುದು ಸಾವಿನ ಸನ್ನಿಧಾನದಲ್ಲಿಯೇ ಎಂಬುದು ನೀಲವ್ವನ ಪಾತ್ರದ ಮುಖಾಂತರ ಕಂಡುಬರುತ್ತದೆ.

* ಪರಪ್ಪನ ಮಗಳು ತುಳಜಾ ಜೋಗತಿ ಆಗಿದ್ದರೂ ಸಹ ಹುಸೇನಪ್ಪನ ಜೊತೆಗೆ ಮದುವೆಮಾಡಿಕೊಂಡಿರುತ್ತಾಳೆ. ತುಳಜಾ ತನ್ನ ಗಂಡ ಕೂಸಿನೊಂದಿಗೆ ಊರಿಗೆ ಬಂದಾಗ ಊರ ಜನರು ಎಲ್ಲಾ ಸೇರಿ ಅವಳಿಗೆ ಮತ್ತು ಅವಳ ತಂದೆಗೆ ಬಹಿಷ್ಕಾರ ಹಾಕಬೇಕಾಗುತ್ತದೆ ಎಂದಾಗ ತುಳಜವ್ವ ಹೇಳುವ ಮಾತುಗಳು ಸಿಡಿಲು ಬಡಿದಂಗಿವೆ. "ದೈವದವರೇ.. ನೀವೂ ಒಂದೀಟು ನನ್ನ ಫೈಸಲಾನೂ ಕೇಳಿ ಹೋಗ್ರೀ. ನೀವು ಕೊಟ್ಟ ತೀರ್ಮಾಣ ನಮಗ ಒಪ್ಪಗಿಯಿಲ್ಲ. ಏಕತರಫಾ ನ್ಯಾಯ ನಿಮ್ದು. ನಾವೇನೂ ತಪ್ಪು ದಂಡಾ ಕುಡಂಗಿಲ್ಲ. ಹಾಂಗ ಕುಡ್ಲಕ್ಕ ನಾವೇನೂ ತಪ್ಪು ಕೆಲಸಾ ಮಾಡಿಲ್ಲ! ನೀವು ನಮ್ಮಪ್ಪಗೇನೂ ಕುಲದಲಂದ, ಕೇರಿಲಂದ ಹೊರಗಿಡ್ಡೀರಿ? ನಾನೇ ನಮ್ಮ ಅಪ್ಪಾ ಅವ್ವಗ ಈ ಊರ ಕೇರಿಲಂದ ದೂರ ಮಾಡಿ ನನ್ ಜೋಡಿ ಕರ್ಕೋಂಡು ಹೋಗ್ನೀನಿ.. ನಿಮಗಾ ನಿಮ್ಮ ನ್ಯಾಯಕ್ಕ ದೊಡ್ಡ ನಮಸಗಾರ್ರೀ ಯಪ್ಪಾ.." ಅಂದವಳೇ ಅವ್ವ ಅಪ್ಪನನ್ನು ಕರೆದುಕೊಂಡು ಹಂಗೇ ಕೇರಿಲಂದ ಊರಿನಿಂದ ಹೊರನಡೆದಳು. ಹುಸನಪ್ಪ ಮಗುವನ್ನೆತ್ತಿಕೊಂಡು ಜೊತೆಗೂಡಿದ. ಮಂದೆಲ್ಲಾ ಕಂಗಾಲಾಗಿ, ದಂಗಾಗಿ ಅವರು ಕೇರಿಬಿಟ್ಟು ಹೋಗಿತ್ತಿರುವುದನ್ನೇ ನೋಡುತ್ತ ಚಿತ್ತಾರದ ಗೊಂಬೆಗಳಂತೆ ನಿಂತುಬಿಟ್ಟರು (ಬದುಕು– 225) ಕೆಳಗೇರಿ ಸಮಾಜಕ್ಕೆ ಒಂದು ಪಿಡುಗಿನಂತೆ ಅಂಟಿಕೊಂಡಿರುವ ಮೇಲ್ವರ್ಗದ ಜನ ಮತ್ತು ಪೂಜಾರಿಗಳು ನಡೆಸಿರುವ ಹಾದರವನ್ನು ತುಳಜಾ ಬಯಲಿಗೆಳೆದಳು. ಊರ ಜನರಿಗೆ ಮತ್ತು ಪೂಜಾರಿಗೆ ತುಳಜಾಳ ಪ್ರತಿಭಟನೆಯ ಮಾತುಗಳು ಸಮಾಜದ ಮುಂದಿನ ಪೀಳಿಗೆ ಎಚ್ಚಿತ್ತುಕೊಳ್ಳಲಿ ಎಂಬ ಪ್ರತಿಭಟನಾತ್ಮಕ ಧ್ವನಿ ಅವಳಲ್ಲಿ ಕಂಡುಬರುತ್ತದೆ.

* ಕಲ್ಯಾಣಿ ಜೈಲು ಸೇರಿದ ನಂತರ ಬೆಳ್ಳಿಯ ಮೇಲೆ ಬಹಳ ಜನರ ಕಣ್ಣು ಬಿತ್ತು. ಗೌಡ ಇರಪಾಗಸಪ್ಪನ ಕುಂಟಲತನ ಮಾಡಲು ಬಂದ ಜೋಗಣಿ ಮುರಗವ್ವನಿಗೆ ಬೆಳ್ಳಿ ಆಡಿದ ಮಾತುಗಳೂ ಸಿಡಿಲು ಬಡಿದಂಗಿದ್ದವು. "ನೋಡು ಮುರುಗವ್ವ.. ಈ ಗೌಡ ಬೆಳ್ಳಿ ಬಂಗಾರ ಕೊಟ್ಟರ ನನ್ ಬಡತನ ಹಿಂಗಂಗಿಲ್ಲ. ಈ ನರಮನುಸ್ಯಾ ನನಗ ಕೊಟ್ಯಾನೇಟು ಬಿಟ್ಟಾನೇಟು? ಆ ದೇವರ ಕೊಟ್ಟರ ನಂದೆಲ್ಲಾ ಬಡತನ ನೀಗತದ. ಆ

ಮಾತು ಬಿಡು. ನಾ ನಿನ್ನ ಮಗಳಿದ್ದಂಗಿದ್ದೀನಿ ಅಂದೆಲ್ಲ. ಈಗ ಯಾ ತಾಯಿಯರೆ ತನ್ನ ಮಗಳಿಗಿ ನಿನ್ನಂಗ ಹಾದರಕ್ಕ ಇಳಸ್ತಾಳೇನು? ರೊಕ್ಕದ ಆಸೀಗಿ ನೀ ಹಿಂತಾ ಕುಂಟಲತನ ಧಂಧಾ ಮಾಢಬಾರ್ದು ಮುರುಗವ್ವ.. ಇದು ಪಾಪದ ಕೆಲಸಾ. ನೀ ಈಗ ಬಂದಕ್ಕೀ ಬಂದೀದೀ.. ಏನೋ ದೇವರ ಹೆಸರಿನ ಮ್ಯಾಲ ಜೋಗಾ ಅಂತೇಳ ಬಿಕ್ಕಿ ಬೇಡ್ಲಕ್ಕ ಬಂದೀದೆಂತ ನಾನೂ ನಿನಗ ಕೂಡಂತೇಳ ಜೋಗಾ ನೀಡೀನೀ.. ಅದರ ಇನ್ನ ಮುಂದ ನೀ ನನ್ನ ಮನ ಅಂಗಳಕ್ಕೆ ಕಾಲಿಟ್ಟ ಅಂದರ ಮೆಟ್ಟಲಂದ ನಿನಗ ಹೊಡ್ದು ಹೊರಗಟ್ಟಬೇಕಾಗ್ತದ ನೋಡು.. ಹುಂ.. ಏಳ್ಲಿಂದ.." ಅಂತ ಗದರಿಸಿದಳು. (ಬದುಕು– 449) ಮೇಲ್ವರ್ಗ ಜನರ ಕಾಮುಕತೆಗೆ ದಲಿತರೇ ಆಧಾರವಾಗುತ್ತಿರುವುದು ವಿಪರ್ಯಾಸ.

ಈ ಮೂರು ಸ್ತ್ರೀ ಪಾತ್ರಗಳು ನಿಜವಾದ ದಲಿತ ಬಂಡಾಯ ಚಳುವಳಿಯ ಹೋರಾಟಗಾರ್ತಿಯರಾಗಿದ್ದಾರೆ. ಇವರು ಎಲ್ಲಿಯೂ ಪರಿಸ್ಥಿತಿಯೊಂದಿಗೆ ರಾಜೀ ಮಾಡಿಕೊಳ್ಳುವುದಿಲ್ಲ. ಅವರು ತಮಗಾದ ಅನ್ಯಾಯದ ವಿರುದ್ಧ ನಿಂತು ಪ್ರತಿಭಟಿಸುತ್ತಾರೆ. ತುಳಜವ್ವನಿಗೆ ಮತ್ತೆ ಊರ ಜನ ಜೋಗಣಿ ಆಗಲು ಹೇಳಿದ್ದು, ಅವಳ ತಂದೆಗೆ ಬಹಿಷ್ಕಾರ ಹಾಕಿದ್ದು ಇವೆಲ್ಲವನ್ನು ತಿರಸ್ಕರಿಸಿ ಅವಳು ತಂದೆ–ತಾಯಿ ಗಂಡ ಕೂಸಿನೊಂದಿಗೆ ಊರು ಬಿಟ್ಟು ಹೋಗುವ ಧೈರ್ಯ ನಿಜವಾಗಲೂ ಮೆಚ್ಚಬೇಕಾದದ್ದೇ. ಹೀಗೆಯೇ ಬಿಟ್ಟರೇ ಎಲ್ಲ ಜೋಗಣಿಯರು ಮದುವೆ ಮಾಡಿಕೊಳ್ಳುತ್ತಾರೆಂದು ಮತ್ತು ತಮ್ಮ ಭೋಗಕ್ಕೆ ಹೆಣ್ಣುಗಳು ಸಿಗುವುದಿಲ್ಲವೆಂದು ಮೇಲ್ವರ್ಗದ ಜನ ಪಂಚಾಯ್ತು ಏರ್ಪಡಿಸುತ್ತಾರೆ. ಆ ಪಂಚಾಯ್ತಿಯಲ್ಲಿ ತುಳಜಾ ಜೋಗಣಿ ಪದ್ಧತಿಯ ಮೋಸಗಳನ್ನು ಬಯಲಿಗೆಳೆದು ಧಿಕ್ಕರಿಸಿ ನಿಲ್ಲುತ್ತಾಳೆ. ದೇವರು ಧರ್ಮಗಳ ಹೆಸರಿನಲ್ಲಿ ಮೇಲ್ವರ್ಗದ ಜನ ಪೂಜಾರಿಗೆ ಹಣ. ಹೆಂಡದ ಆಸೆ ತೋರಿಸಿ ಕೆಳವರ್ಗದ ಜನರನ್ನು ಶೋಷಣೆ ಮಾಡುವುದು ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಹದಿನಾಲ್ಕು ವರ್ಷ ಗಂಡ ಕಲ್ಬುರ್ಗಿ ಜೈಲನಲ್ಲಿದ್ದಾಗಲೂ ಮೇಲ್ವರ್ಗದವರ ಕಾಮುಕತೆ, ಆಸೆ ಆಮಿಷಗಳಿಗೆ ಒಳಗಾಗದೇ ಅವರನ್ನು ಧಿಕ್ಕರಿಸಿ ಅವರೆದುರೇ ಗಟ್ಟಿಗಿತ್ತಿಯಾಗಿ ಗರತಿ ಗಂಗಮ್ಮನಾಗಿ ಬಾಳುವೆ ಮಾಡಿದ ಬೆಳ್ಳಿ ಅಂಜದೇ ಎದೆಗಾರ್ತಿಯಾಗಿ ಕಾದಂಬರಿಯಲ್ಲಿ ಒಂದು ಅಧ್ಭುತ ಪಾತ್ರವಾಗಿ ಕಂಡುಬರುತ್ತಾಳೆ. ದಲಿತ ಹೆಂಗಸರನ್ನು ಮೇಲ್ವರ್ಗದ ಪುರುಷರು ಶೋಷಿಸುತ್ತ ಬಂದಿರುವುದು. ಕೆಳವರ್ಗ'ದ ಪುರುಷರು ಸಹ ಅದೇ ಜನಾಂಗದ ಮಹಿಳೆಯರನ್ನು ತಿಳಿದೋ ತಿಳಿಯದಯೋ ಶೋಷಿಸುತ್ತ ಬಂದಿದ್ದಾರೆ. ಮೇಲ್ವರ್ಗದ ಸಾವ್ಕಾರ ಲಿಂಗರಾಜನ ಹೆಂಡತಿ ನೀಲಮ್ಮ ಕೂಡ ಶೋಷಿತಳೇ, ಒಟ್ಟಿನಲ್ಲಿ ಮಹಿಳೆಯರಿಗೆ ಅನ್ಯಾಯವಾಗಿರುವುದು ಕಂಡುಬಂದಿದೆ. ಹೆಣ್ಣು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ನ್ಯಾಯ ಪಡೆಯಲು ನಾನಾ ವಿಧದ ಹೋರಾಟಗಳನ್ನು ಮಾಡಬೇಕಾಗುತ್ತದೆ.

ಸಮಾಜದಲ್ಲಿ ಜೋಗತಿ ಪದ್ಧತಿಯಿಂದ ನೊಂದುಬೆಂದ ಕೆಳವರ್ಗದ ಜನರ ಅಜ್ಞಾನ, ಮುಗ್ಧಬಡಜನರ ಪ್ರತಿಭಟನೆ ಇದ್ದರೂ ಸಹ ಅದನ್ನು ಪ್ರತಿಭ್ಟಟಿಸದೇ ಒಳಗೊಳಗೆ ಸಹಿಸಿಕೊಂಡಿದ್ದರು. ಕೆಳವರ್ಗದ ಹೆಣ್ಣು ಹೆಚ್ಚು ಶೋಷಿತಳಾಗುತ್ತಾಳೆ ಎಂಬುದಕ್ಕೆ ಮೇಲ್ವರ್ಗದ ಗಂಡಸರೇ ಇದಕ್ಕೆ ಕಾರಣೀಭೂತರಾಗುತ್ತಾರೆ ಎಂಬುದನ್ನು ಗಮನಿಸಬೇಕಾದ ಅಂಶವಾಗಿದೆ. "ಬದುಕು" ಕಾದಂಬರಿ ಅಂದಿನ ಸಮಾಜದಲ್ಲಿ ವ್ಯಕ್ತಗೊಂಡಿರುವ ಅಂಶಗಳನ್ನು, ಹೆಣ್ಣು ಅನುಭವಿಸಿದ ನೋವು ಯಾತನೆಗಳನ್ನು, ಮೇಲ್ವರ್ಗದ ಜನರ ದಬ್ಬಾಳಿಕೆಗಳನ್ನು, ಧರ್ಮದ ಹೆಸರಿನ ಮೇಲೆ ನಡೆಯುತ್ತಿರುವ ಅನ್ಯಾಯ ಅತ್ಯಾಚಾರಗಳನ್ನು ಸ್ಪಷ್ಟವಾಗಿ ತೆರೆದಿಡುತ್ತದೆ.

ಹೆಣ್ಣು ಆರಂಭದ ಕಾಲದಿಂದಲೂ ಶೋಷಣೆಗೆ ಒಳಗಾಗಿದ್ದಾಳೆ. ಹೆಣ್ಣು ಯಾವುದೇ ಜಾತಿಯಲ್ಲಿ ಜನಿಸಿದರು ಸಹ ಅವಳಿಗೆ ನಿರ್ಬಂಧನೆಗಳೂ, ಸಂಪ್ರದಾಯದ ಹೆಸರಿನಲ್ಲಿ ಅನೇಕ ಶೋಷಣೆಗಳು ನಡೆಯುತ್ತಾಯಿತ್ತು. ಸ್ತ್ರೀ ಮತ್ತು ಶೂದ್ರರನ್ನು ಕೀಳಾಗಿ ನೋಡುವ ಮನೋಭಾವ ಮೇಲ್ವರ್ಗದಲ್ಲಿ ಮತ್ತು ಕೆಲವು ಸಲ ಕೆಳವರ್ಗದಲ್ಲಿಯೂ ನೋಡುತ್ತೇವೆ. ದಲಿತ ಹಾಗೂ ಅತೀಶೂದ್ರ ಜಾತಿಯ ಮಹಿಳೆಯರು ಮೇಲುಜಾತಿಯ ಪುರುಷರ ಭೋಗವಸ್ತುಗಳೆಂದು ಧರ್ಮಶಾಸ್ತ್ರಗಳು ಅಂಗೀಕರಿಸಿರುವುದರಿಂದ ಸಾಮಾಜಿಕ ನ್ಯಾಯದಿಂದ ದಲಿತ ಮಹಿಳೆಯರೇ ಹೆಚ್ಚು ಶೋಷಿತರಾಗಿರುವುದನ್ನು ಕಾಣಬಹುದಾಗಿದೆ. "ಬದುಕು" ಕಾದಂಬರಿಯಲ್ಲಿ ಬರುವ ನೀಲವ್ವ, ತುಳಜವ್ವ, ಬೆಳ್ಳಿಯರಂಥ ಪಾತ್ರಗಳು ಅಂಬೇಡ್ಕರರ, ಬಸವ, ಗಾಂಧಿ, ಕಾರ್ಲ್‌ಮಾಕ್ಸರನ್ನು ಓದದೇ ತಮ್ಮ ಮೇಲೆ ನಡೆಯುತ್ತಿರುವ ಶೋಷಣೆ, ದೌರ್ಜನ್ಯ, ಹಿಂಸೆಯಿಂದ ತಪ್ಪಿಸಿಕೊಳ್ಳಲು ಅವರು ಪ್ರತಿಭಟಿಸಿದ್ದು ನಿಜವಾದ ದಲಿತ ಬಂಡಾಯ ಪ್ರಜ್ಞೆಗೆ ಸಾಕ್ಷಿಯಾಗಿದೆ. ಈ ಮೂವರ ವಿಚಾರಗಳು ಮಹಿಳಾ ಹೋರಾಟಕ್ಕೆ ಪುಷ್ಟಿಯನ್ನು ನೀಡುತ್ತವೆ.

ಭೂಮಿಯನ್ನು ಹೊಂದಿರುವ ಮೇಲ್ವರ್ಗದ ಜನರು ಭೂಮಿಯಿಲ್ಲದ ಕೆಳವರ್ಗದ ಜನರನ್ನು ಶೋಷಣೆಮಾಡುವುದು ಕಾದಂಬರಿಯಲ್ಲಿ ಕಂಡು ಬರುವ ಅಂಶವಾಗಿದೆ. ಹಣ ಮತ್ತು ಅಧಿಕಾರದ ಬಲದಿಂದ ಮೆರೆಯುವ ಮೇಲ್ವರ್ಗಗಳು ಕೆಳವರ್ಗಗಳ ಜನರ ಶೋಷಣೆಯನ್ನು ಮಾಡುತ್ತಾಬಂದಿವೆ. ಕೆಳವರ್ಗದ ಜನರ ಬಡತನ, ಮೌಢ್ಯ ದೇವರು ಧರ್ಮಗಳ ಮೇಲೆ ಅಪಾರವಾದ ನಂಬಿಕೆ, ಹಾದರ, ಕೊಲೆ, ಸುಲಿಗೆ, ಕುಡಿತ ಇವೆಲ್ಲದರಲ್ಲಿ ಬದುಕುವ ದಲಿತರ ಚಿತ್ರಣ "ಬದುಕು" ಕಾದಂಬರಿಯಲ್ಲಿ ಕಂಡುಬರುತ್ತದೆ. ಕೆಳವರ್ಗದ ದಲಿತ ಜನರ ಬದುಕು ವಾಸ್ತವಿಕ ನೆಲೆಯಲ್ಲಿ ಕಾದಂಬರಿಯಲ್ಲಿ ಚಿತ್ರಣಗೊಂಡಿದೆ.

ಪರಾಮರ್ಶನ ಗ್ರಂಥಗಳು:

1) ಬದುಕು : ಗೀಟಾ ನಾಗಭೂಷಣ

2) ಗೀತಾ ನಾಗಭೂಷಣ : ಡಾ. ಎನ್. ಗಾಯತ್ರಿ

3) ದಲಿತ ಸಾಹಿತ್ಯ ಸಂಚಯ : (ಸಂ) ಡಾ. ಅರ್ಜುನ ಗೊಳಸಂಗಿ

4) ಗೀತಾ ನಾಗಭೂಷಣ ಕಲಬುರ್ಗಿಯ ಸ್ಪಂದನ : (ಸಂ) ಡಾ. ಸರಸ್ವತಿ ಚಿಮ್ಮಲಗಿ

5) ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ : ವಿವಿಧ ಲೇಖಕರು.

ನೋಂಪಿಯ ವಿವೇಚನೆ

* ಉಮೇಶ ಕ ಪಾಟೀಲ
ಸಂಶೋಧನ ವಿದ್ಯಾರ್ಥಿ, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ., ಕ.ವಿ.ವಿ ಧಾರವಾಡ.

ನಮ್ಮ ಪೂರ್ವಾಚಾರ್ಯರು ಭಕ್ತಿಭಾವವನ್ನು ಪ್ರಾದರ್ಶಿಸಲು ಅನೇಕ ನೋಂಪಿ ವ್ರತಗಳ ಆಚರಣೆಯನ್ನು ಹೇಳಿದ್ದಾರೆ. ನೋಂಪಿಯನ್ನು ಆಚರಣೆ ಮಾಡಬೇಕಾದರೆ ನಾಲ್ಕು ಹಂತಗಳನ್ನು ಅನುಸರಿಸಿದ್ದು ತಿಳಿದು ಬರುತ್ತದೆ; ಆರಂಭ, ಕಥಾಭಾಗ, ಆಚರಣಾ ವಿಧಾನ, ಅಂತ್ಯ ಈ ನಾಲ್ಕು ಹಂತಗಳನ್ನು ಇಟ್ಟುಕೊಂಡು ನೋಂಪಿ ಕಥೆಗಳನ್ನು ಹೇಳಲಾಗುತ್ತದೆ. ಈ ನೋಂಪಿಗಳು ಹಬ್ಬ ಹುಣ್ಣಿಮೆಗಳ ಹೆಸರಿನಲ್ಲಿ ಪ್ರಸಿದ್ಧವಾಗುವದರ ಜೊತೆಗೆ, ಸಾಧ್ಯವಿದ್ದಷ್ಟು ಪ್ರತಿದಿನ ಯಾವುದೋ ಒಂದು ನೋಂಪಿಯನ್ನು ಶ್ರಾವಕನಾದವನು ಆಚರಿಸಲಿ ಎಂಬ ಉದ್ದೇಶದಿಂದ ಸುಮಾರು ಮೂರುನೂರಕ್ಕೂ ಹೆಚ್ಚು ನೋಂಪಿಗಳು ರಚನೆಯಾಗಿದ್ದು ಕಂಡು ಬರುತ್ತದೆ. ಅವುಗಳನ್ನು ಆಚರಿಸುವ ವಿಧಾನಗಳನ್ನು ಅದರಲ್ಲಯೇ ಹೇಳುವುದರ ಜೊತೆಗೆ ಅದರ ಶುಭ ಫಲಗಳನ್ನು ಪಡೆದ ಮಹಾಪುರುಷರ, ಪುಣ್ಯಾತ್ಮರ ಕಥೆಗಳನ್ನು ನೋಂಪಿಗಳ ಜೊತೆಗೆ ಹೇಳಲಾಗಿದೆ. ಉದಾ॥ ಅನಂತನ ನೋಂಪಿ, ಶುಕ್ರವಾರದ ನೋಂಪಿ, ದೀಪಾವಳಿ ನೋಂಪಿ. ನೋಂಪಿಯ ಕಥೆಗಳು ಜೈನ ಧರ್ಮ ಪಾಲಿಸ ಪರಿಚಾಣುವ್ರತಗಳ ಹಿರಿಮೆ ಮತ್ತು ಚಕಾರ್ಣಿಸ ದಾನಗಳ ಮಹತ್ವವನ್ನೇಎತ್ತಿಹಿಡಿದಿವೆ.

ಯಾವುದೇ ಒಂದು ಸಂಸ್ಕೃತಿಯಲ್ಲಿ ಕಂಡುಬರುವ ವೈಶಿಷ್ಟವನ್ನು ತಿಳಿಯಲು ಕಥಾ ಮಾಧ್ಯಮ ಒಂದು ಪ್ರಮುಖ ಸಾಧನವಾಗಿದೆ. ಭಾರತೀಯ ಕಥಾಸಾಹಿತ್ಯದಲ್ಲಿ ಸಿಂಹಪಾಲು ಸಂದಿರುವದು ಜೈನರ, ಬೌದ್ಧರ ಕಥೆಗಳ ರಾಶಿಗೆ. ಇವುಗಳಲ್ಲಿ ಗುಣದಲ್ಲೂ, ಗಾತ್ರದಲ್ಲೂ ಜೈನ ಕಥೆಗಳಿಗೆ ಅಗ್ರಸ್ಥಾನವಿದೆ, ನಂತರ ಸ್ಥಾನ ಬೌದ್ಧರಿಗೆ ಸಲ್ಲುತ್ತದೆ. ಜೈನ ಸಾಹಿತ್ಯ ಪ್ರಾಕೃತ, ಸಂಸ್ಕೃತ, ಕನ್ನಡ, ತಮಿಳು ಹಿಂದಿ, ಮುಂತಾದ ಭಾಷೆಗಳಲ್ಲಿ ಸಿಗುವ ಜೈನ ಕಥಾಸಾಹಿತ್ಯವು ಸಮೃದ್ಧವಾಗಿದೆ. ತ್ರಿಷಷ್ಟಿಶಲಾಕಾಪುರುಷರ ಕಥೆಗಳು, ಆರಾಧನ ಕಥೆಗಳು, ಸಮ್ಯಕ್ತ್ವ ಕೌಮುದಿ ಕಥೆಗಳು, ಉಪಸರ್ಗಕೇವಲಿಗಳ ಕಥೆಗಳು, ಅನುಪ್ರೇಕ್ಷಿಯ ಕಥೆಗಳು, ಸ್ತ್ರೀ ಕಥೆಗಳು, ಕಾಮದೇವರ ಕಥೆಗಳು, ಪಂಚತಂತ್ರದ ಕಥೆಗಳು, ನೋಂಪಿಯ ಕಥೆಗಳು ಹೀಗೆ ನೂರಾರು ಕಥೆಗಳ ತವನಿಧಿಯ ಬಾಗಿಲು ತೆರೆಯುತ್ತದೆ, ಇದು ಜೈನ ಕಥಾ ಪ್ರಪಂಚ. ಈ ಲೇಖನದಲ್ಲಿ ನೋಂಪಿಯ ಕಥೆಗಳ ಆಚರಣೆಗಳ ಬಗ್ಗೆ ಚರ್ಚಿಸಲಾಗಿದೆ.

ಭೂಮಂಡಲದಲ್ಲಿ ಯಾರು ಯಾರನ್ನು ಉದ್ಧಾರ ಮಾಡಲಾರರು, ತಮ್ಮನ್ನು ತಾವೇ ಕಾಪಾಡಿ ಕೊಳ್ಳಬೇಕು ಎಂಬ ಮಾತು ಜನಸಾಮಾನ್ಯರಲ್ಲಿದೆ. ತಮಗೆ ಕಷ್ಟ ಬಂದಾಗ ಜೈನೇತರರು ಶಕ್ತಿದೇವತೆಗಳ ಪೂಜೆ, (ಮಾರಮ್ಮ, ಕರೆಮ್ಮಾ, ಕಾಳಿ, ದುರ್ಗೆ,) ಮಂತ್ರತಂತ್ರಗಳು, ವ್ರತ, ಪ್ರಾಣಿಬಲಿ ಕೊಡುವುದು, ಆರಾಧನೆ, ಉಪಾಸನೆಯಿಂದ ದೇವತೆಗಳನ್ನು ಪ್ರಾರ್ಥಿಸಿ ಫಲಪಡೆಯುತ್ತಿರುವದು ನಮ್ಮ ಜೈನೇತರರ ಪುರಾಣಗಳಿಂದ, ಕಥೆಗಳಿಂದ, ಶಾಸ್ತ್ರಗಳಿಂದ ತಿಳಿದು ಬರುತ್ತದೆ. ಇಂತಹ ಪರಿಸರದಲ್ಲಿ ಜೈನಧರ್ಮ ಪರಮ ಆದರ್ಶ ಜೀವನ ತತ್ವಗಳು, ಕರ್ಮತತ್ವಗಳು ಅಸಾಮಾನ್ಯ ಜನತೆಗೆ ಕಠಿಣವಾಗಿ ಕಂಡವು. ದೇವ–ದೇವತೆಗಳ ಪೂಜೆ ಪುನಸ್ಕಾರಗಳಿಂದ ಬೇಕಾದದನ್ನು ಪಡೆಯಬಹುದೆಂಬ ತಮ್ಮ ನೆರೆಹೊರೆಯವರಿಂದ ಆಕರ್ಷಿತರಾಗಿ ಜೈನರಲ್ಲೂ ವ್ರತಗಳ ಆಚರಣೆ ಅನಿವಾರ್ಯವಾಗಿ ಬಂದು ಸೇರಿದೆ. ಉದಾ– ಜನ್ನ ಕವಿಯ ಯಶೋಧರ ಚರಿತ್ರೆಯಲ್ಲಿ ತಾಯಿ ಮಾತನ್ನು ನೆರವೇರಿಸಲು ಹಿಟ್ಟಿನ ಕೋಳಿಯನ್ನು ಬಲಿಕೊಟ್ಟಿದ್ದು ಇಂತಹ ವ್ರತಗಳಿಗೆ ಸಾಕ್ಷಿ. ಇಂತಹ'ದನ್ನು ತಿಳಿದುಕೊಂಡು ಜೈನ ಆಚಾರ್ಯರು ಜೈನ ಭಾಂದವರಿಗೆ, ಶ್ರಾವಕರಿಗೆ ವ್ರತಗಳ ಆಚರಣೆಗೆ ಒಂದು ಅವಕಾಶ ಮಾಡಿಕೊಟ್ಟದ್ದು ಕಂಡುಬರುತ್ತದೆ.

ಸಂಸ್ಕೃತದ 'ವ್ರತ'' ಎಂಬ ಶಬ್ದಕ್ಕೆ ಸಮನಾರ್ಥಕವಾಗಿ ಕನ್ನಡದಲ್ಲಿ 'ನೋಂಪಿ' ಎನ್ನುವರು. ನೋಂಪಿಯ ರೂಪನಿಷ್ಪತ್ತಿ, 'ನೋನ್' ಎಂದಾಗುವದು. ನೋನ್ ಎಂದರೆ ವ್ರತಕ್ಕೈಕೊಳ್ಳೂವುದು, ನಿಯಮ ಪಾಲಿಸುವುದು, ಧಾರ್ಮಿಕ ಕಟ್ಟಳೆಗಳನ್ನು ವಿಧಿಪೂರ್ವಕವಾಗಿ ಮಾಡುವುದು ಎಂದಾಗುವುದು.

ಈ ಕಥಾ ಸಾಹಿತ್ಯದಲ್ಲಿ ನೋಂಪಿ ಕಥಾ ಸಾಹಿತ್ಯ ಪ್ರಮುಖವೂ ಪ್ರತ್ಯೇಕವಾದ ಒಂದು ಪ್ರಕಾರ. ಜೈನ ಸಮಾಜ ಭಾಂಧವರಲ್ಲಿ ನೋಂಪಿಯ ಕಥನಗಳು ಬಹುಜನಮನ್ನನೆ ಪಡೆದಿವೆ. ಇವು ವಿಶಿಷ್ಟವಾದ ಸಾಹಿತ್ಯ ಪ್ರಕಾರವಾಗಿವೆ. ಜೈನ ಸಮಾಜದ ಧಾರ್ಮಿಕ, ಸಾಮಾಜಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಬದುಕಿನ ಪದರನ್ನು ಆಪ್ತವಾಗಿ ಬಿಂಬಿಸುತ್ತವೆ. ಮುಂದೆ ಅವೇ ನೋಂಪಿಗಳು ಜನಪದ ಸಾಹಿತ್ಯದ ಮೈಪಡೆದುಕೊಂಡು ಕುತೂಹಲಕಾರಿ ನೆಲೆಗಳ ಕಡೆಗೆ ನಮ್ಮನ್ನು ಕರೆದುಕೊಂಡು ಹೋಗುತ್ತವೆ.

ಮಾನವನ ಆತ್ಮೋನ್ನತಿಗೆ ವ್ರತಗಳು, ಪೂಜೆಗಳು ಅವಶ್ಯಕವೆಂದು ಕೆಲವು ಜೈನ ಹಿರಿಯ ಆಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ಸದ್ಭಾವನೆಯಿಂದ ತೊಡಗಿರುವ ಆರಾಧನೆ, ಉಪಾಸನೆ, ಅಭಿಷೇಕ, ಪೂಜಾವಿಧಾನಗಳು ಒಳ್ಳೆಯ ಪರಿಣಾಮವನ್ನು ಬೀರುತ್ತವೆ ಎಂದು ಹೇಳಿದರು. ಈ ನೋಂಪಿಗಳು ಹಬ್ಬ ಹುಣ್ಣಿಮೆಗಳ ಹೆಸರಿನಲ್ಲಿ ಪ್ರಸಿದ್ಧವಾಗುವದರ ಜೊತೆಗೆ, ಸಾಧ್ಯವಿದ್ದಷ್ಟು ಪ್ರತಿದಿನ ಯಾವುದೋ ಒಂದು ನೋಂಪಿಯನ್ನು ಶ್ರಾವಕನಾದವನು ಆಚರಿಸಲಿ ಎಂಬ ಉದ್ದೇಶದಿಂದ ಸುಮಾರು ಮೂರುನೂರಕ್ಕೂ ಹೆಚ್ಚು ನೋಂಪಿಗಳು ರಚನೆಯಾಗಿದ್ದು ಕಂಡು ಬರುತ್ತದೆ. ಅವುಗಳನ್ನು ಆಚರಿಸುವ ವಿಧಾನಗಳನ್ನು ಅದರಲ್ಲಯೇ ಹೇಳುವುದರ ಜೊತೆಗೆ ಅದರ ಶುಭ ಫಲಗಳನ್ನು ಪಡೆದ ಮಹಾಪುರುಷರ, ಪುಣ್ಯಾತ್ಮರ ಕಥೆಗಳನ್ನು ನೋಂಪಿಗಳ ಜೊತೆಗೆ ಹೇಳಲಾಗಿದೆ.

ಜೈನ ಸಮಾಜದಲ್ಲಿ ಅವರವರ ಶಕ್ತಿಗನುಗುಣವಾಗಿ ನೋಂಪಿಗಳನ್ನು ಆಚರಿಸಬೇಕೆಂಬ ನಂಬಿಕೆಯಿದೆ. ಕನ್ನಡ ನಾಡಿನಲ್ಲಿ ನೋಂಪಿಯ ಆಚರಣೆ ಸುಮಾರು ಹತ್ತನೆಯ ಶತಮಾನದಲ್ಲಿ ಬಂದಿದೆ ಎಂದು ತಿಳಿಯಲು ಆಧಾರಗಳಿವೆ. ಉದಾ – ಪದ್ಮಪುರಾಣ, ಆದಿಪುರಾಣ, ರತ್ನಕರಂಡ ಶ್ರಾವಕಾಚಾರ,

ವಡ್ಡಾರಾಧನೆ, ಮೊದಲಾದ ಕಥೆಗಳಲ್ಲಿ ನೋಂಪಿಗಳ ಪ್ರಸ್ತಾಪ ಬರುತ್ತದೆ. ನೋಂಪಿಗಳು ಮೊದಲು ಕಡಿಮೆ ಇದ್ದವು ನಂತರದ ಕಾಲದಲ್ಲಿ ಹೇರಳವಾಗಿ ರಚನೆಯಾಗಿದ್ದು ಕಂಡುಬರುತ್ತದೆ. ನೋಂಪಿಯನ್ನು ಆಚರಣೆ ಮಾಡಬೇಕಾದರೆ ನಾಲ್ಕು ಹಂತಗಳನ್ನು ಅನುಸರಿಸಿದ್ದು ತಿಳಿದು ಬರುತ್ತದೆ– 1)ಆರಂಭ, 2)ಕಥಾಭಾಗ, 3)ಅಚರಣಾ ವಿಧಾನ, 4)ಅಂತ್ಯ ಎಂದು ವಿಂಗಡಿಸಲಾಗಿರುತ್ತವೆ.

ನೋಂಪಿಯ ಆರಂಭವು ಸಂಸ್ಕೃತ ಇಲ್ಲವೆ ಕನ್ನಡದಲ್ಲಿ ರಚಿತವಾದ ಜಿನಸ್ತುತಿ ಪದ್ಯದಿಂದ ಆರಂಭವಾಗುತ್ತದೆ; ಅವು ಹೆಚ್ಚಾಗಿ ಕಂದ ಪದ್ಯದಲ್ಲಿ ಇದ್ದದು ಕಂಡು ಬರುತ್ತವೆ.

"ಶ್ರೀ ವೀರ ವರ್ಧಮಾನ ಜಿ

ನಾವಳಗೊಲಿದರೆಗಿ ಭಕ್ತಿಯಿಂ ವಿರಚಿಸುವೆಂ

ಭೂವಳಯದೊಳತಿಶಯ ಶೋ

ಭೌವಹ ಸೌಭಾಗ್ಯದೊಂದು ನೋಂಪಿಯ ಕಥೆಯ"

(ಸೌಭಾಗ್ಯದ ನೋಂಪಿ)

ಹೀಗೆ ಪ್ರಾರಂಭದಲ್ಲಿ ಜಿನಸ್ತುತಿಯ ಪದ್ಯಗಳಿಂದ ಆರಂಭವಾಗುವ ವಾಡಿಕೆಯಿದೆ. ಅವು ಕಂದ, ವೃತ್ತದಲ್ಲಿ ಹೆಚ್ಚಾಗಿ ಇರುವುದು ಕಂಡುಬರುತ್ತವೆ. ಅವೇ ಮುಂದೆ ಜಂಬೂದ್ವೀಪದ ಭರತಕ್ಷೇತ್ರದ ಒಂದು ದೇಶದ ರಾಜರಾಣಿ ಮಂತ್ರಿ ವಿಚಾರಗಳಿಂದ ಆರಂಭವಾಗಿರುವುದನ್ನು ಕಾಣುತ್ತೆವೆ.

ಎರಡನೆಯದಾಗಿ ಕಥಾಭಾಗದಲ್ಲಿ ಪ್ರತಿಯೊಂದು ನೋಂಪಿಗೂ ಒಂದು ಆಧಾರ ಇದ್ದೆ ಇರುತ್ತದೆ. ಅದಕ್ಕಾಗಿ ಪವಿತ್ರವೂ ಗಂಭೀರವೂ ಆದ ಆವರಣ ಪ್ರವೇಶವನ್ನು ಕಲ್ಪಿಸಲಾಗುತ್ತದೆ. ಸಾಮಾನ್ಯವಾಗಿ ವಿಪುಲಾಚಲ ಬೆಟ್ಟದಲ್ಲಿ ಕೊನೆಯ ತೀರ್ಥಂಕರನಾದ ಭಗವಾನ ಮಹಾವೀರರು ಸಮವಸರಣದಲ್ಲಿ ವಿರಾಜಮಾನವಾಗಿರುವುದನ್ನು ಪ್ರಸ್ತಾಪಿಸಲಾಗುತ್ತದೆ. ಹಿಂದೆ ಮುನಿಗಳು ಬಂದ ಶುಭವಾರ್ತೆಯನ್ನು ರಾಜರಿಗೆ ಮುಟ್ಟಿಸಿದವರಿಗೆ ಅವರು ಉಡುಗೊರೆಯನ್ನು ನೀಡುತ್ತಿದ್ದರು, ಅದಕ್ಕಾಗಿ ಇಂಥ ಶುಭವಾರ್ತೆಯನ್ನು ಮೊದಲು ರಾಜರಿಗೆ ತಿಳಿಸುತ್ತಿದ್ದರು, ನಂತರ ರಾಜ್ಯದಲ್ಲಿ ಡಂಗುರ ಸಾರಲಾಗುತ್ತಿತ್ತು. ರಾಜನು ಪಟ್ಟದ ಆನೆಯನ್ನು ಏರಿಕೊಂಡು, ಪಂಚ ವಾದ್ಯಗಳೊಂದಿಗೆ ರಾಜಪರಿವಾರ ಸಮೇತ ಮುನಿಗಳ ಹತ್ತಿರ ಹೋಗುತ್ತಿದ್ದರು. ರಾಜರು ಮೂರು ಪ್ರದಕ್ಷಣ ಹಾಕಿದ (ವಸ್ತುಸ್ತವ, ರೂಪಸ್ತವ, ಗುಣಸ್ತವ) ನಂತರ ಮುನಿಗಳ ಹತ್ತಿರ ಹೋಗುತ್ತಾರೆ. ನಂತರ ರಾಜ–ರಾಣಿಯರು ಮುನಿಗಳನ್ನು ಕುರಿತು "ಅನಂತ ಸುಖಕ್ಕೆಕಾರಣವಾಗುವ ಯಾವುದಾದರೂ ಒಂದೂ ನೋಂಪಿಯನ್ನು ಬೆಸಸಿರಿ" ಎಂದು ಬೇಡುತ್ತಾರೆ. ಆಗ ಮುನಿಗಳು ಒಂದು ನೋಂಪಿಯನ್ನು ಹೇಳಿ, ಅದನ್ನು ಈ ಹಿಂದೆ ಆಚರಿಸಿ ಮೋಕ್ಷಹೊಂದಿದವರ ಕಥೆಯನ್ನು ಪ್ರಸ್ತುತಪಡಿಸುತ್ತಿದ್ದರು.

ಮೂರನೆಯ ಹಂತ ಆಚರಣಾ ವಿಧಾನ, ಇದು ನೋಂಪಿಯಲ್ಲಿ ಪ್ರಮುಖ ಘಟ್ಟವಾಗಿದೆ. ನೋಂಪಿಯ ಆಚರಣೆಯನ್ನು ಯಾವ ರೀತಿಯಾಗಿ ಮಾಡಬೇಕು ಹಾಗೂ ಅದರಲ್ಲಿ ಯಾವ–ಯಾವ ನಿಯಮಗಳನ್ನು ಪಾಲಿಸಬೇಕಾಗುತ್ತದೆ ಎಂಬ ಮಾಹಿತಿಯು ಆಯಾ ನೋಂಪಿಯಲ್ಲಿಯೇ ಉಲ್ಲೇಖ ಕಂಡು ಬರುತ್ತದೆ. ನೋಂಪಿಯ ಪಠನ ಮಾಡುವವರು ಗಣಧರರು, ಮುನಿಗಳು, ಪಂಡಿತರು. ಹಾಗೆ ಆಯಾ ನೋಂಪಿಯನ್ನು ಆಚರಿಸುವ ಧಾರ್ಮಿಕ ವಿಧಿವಿಧಾನಗಳನ್ನು ಮತ್ತು ಆಚರಣೆಯಲ್ಲಿ ಯಾವ ಯಾವ ಪದಾರ್ಥಗಳನ್ನು ಬಳಕೆಮಾಡಿಕೊಳ್ಳಬೇಕೆಂಬುವದನ್ನು ಶ್ರಾವಕರಿಗೆ ಅವರೇ ಹೇಳುತ್ತಾರೆ. ನೋಂಪಿಯನ್ನು ವರ್ಷದ ಯಾವ ಋತುವಿನಲ್ಲಿ ಆಚರಿಸಬೇಕೆಂಬುವದರ ಬಗ್ಗೆ ಶಾಸ್ತ್ರದಲ್ಲಿ ವಿವರಣೆಯಿದೆ. ಒಂದೊಂದು ನೋಂಪಿಗೂ ನಿರ್ದಿಷ್ಟವಾದ ಮಾಸ, ತಿಥಿ, ನಕ್ಷತ್ರಗಳನ್ನು ಹೇಳಿಸಿದ್ದಾರೆ, ಇದನ್ನು ಸಾಮಾನ್ಯವಾಗಿ ಆಯಾ ನೊಂಪಿಯಲ್ಲೇ ಹೇಳರುವುಂಟು. ನೋಂಪಿಗಳ ಆಚರಣೆ ಹೆಚ್ಚಾಗಿ ಬರುವುದು ಆಷಾಢ, ಶ್ರಾವಣ, ಬಾದ್ರಪದ ಮತ್ತು ಅಶ್ವೀಜ ಮಾಸಗಳಲ್ಲಿ. ಇದನ್ನು ಚಾತುರ್ಮಾಸವೆಂದು ಕರೆಯುತ್ತಾರೆ. ಇದು ಮಳೆಗಾಲ ಆದ್ದರಿಂದ ಜೈನ ಮುನಿಗಳು ಧರ್ಮ ವಿಹಾರವನ್ನು ನಿಲ್ಲಿಸಿ, ಒಂದೆ ಕಡೆ ತಂಗುತ್ತಾರೆ. ಆಗ ಅವರು ಆಭ್ಯಾಸ, ಉಪವಾಸ, ಧ್ಯಾನ, ಉಪದೇಶ ಇವುಗಳಲ್ಲಿ ತೊಡಗುತ್ತಾರೆ. ಈ ಚಾತಿರ್ಮಾಸವನ್ನೇ ಹೆಚ್ಚಾಗಿ ನೋಂಪಿಗಳ ಆಚರಣೆಗೆ ಆರಿಸಿಕೊಂಡಿರವುದರ ಉದ್ದೇಶ ಇದರಿಂದ ಸ್ಪಷ್ಟವಾಗುತ್ತದೆ. ನೋಂಪಿಗಳನ್ನು ಆಚರಿಸುವ ತಿಥಿಯ ವಿಚಾರದ ಬಗ್ಗೆ ಹೀಗೆ ಹೇಳಲಾಗಿದೆ:

ತ್ರಿಮುಹೂರ್ತೇಷು ಯತ್ರಾರ್ಕ:ಉದಯಾಸ್ತಮಯೇ ತಥಾ।

ಸಾತಿಥಿಸ್ಯಕರಾಜ್ಞೆಯಂ ಪ್ರಾಯೋ ಧರ್ಮಕಥಾಸು ಚ॥

ಸೂರ್ಯೋದಯ ಹಾಗೂ ಅಸ್ತಮದಲ್ಲಿ ಮೂರು ಮುಹೂರ್ತವಿದ್ದರೆ ಅದರಲ್ಲಿ ನೋಂಪಿ ಆಚರಿಸಬಹುದು, ಅದಕ್ಕೆ ಧರ್ಮ ತಿಥಿತೆಂದು ಹೆಸರು. ಶ್ರಾವಕರು ಆವರ ಶಕ್ತ್ಯಾನುಸಾರವಾಗಿ ಹಾಗೂ ಅನುಕೂಲಗಳಿಗೆ ಅನುಸಾರವಾಗಿ ವರ್ಷಕಾಲವು ಆಚರಣೆ ಮಾಡಿದರೆ ಅದರ ಫಲಾಧಿಕ್ಯವನ್ನೂ ಪಡೆಯುತ್ತಾರೆ.

ಇನ್ನೂ ಕೊನೆಯ ಘಟ್ಟ, ನೋಂಪಿಯ ಅಂತ್ಯ: ಪ್ರತಿಯೊಂದು ನೋಂಪಿಯನ್ನು ಆಚರಣೆ ಮಾಡುವುದರಿಂದ ಸಿಗುವ ಫಲವನ್ನು ಆಯಾ ನೋಂಪಿಯ ಕಥೆಯಲ್ಲಿಯೇ ಕಾಣುತ್ತೆವೆ. ನೋಂಪಿಯನ್ನು ಹಿಂದೆ ಯಾರು ಆಚರಣೆ ಮಾಡಿದರು, ಅದರಿಂದ ಅವರಿಗೆ ಯಾವ ಫಲಗಳು ದೊರಕಿದವು ಎಂಬುವದನ್ನು ಕಥೆಯ ಕೊನೆಯಲ್ಲಿ ಹೇಳಲಾಗುತ್ತದೆ.

ಯಿಕಥೆಯಂ ಕೇಳಿ ಮುದಮಂ ತಾಳಿದವರುಂ

ನಾಕಾದಿಸುಖವ ಪಡೆವರು

ಲೋಕೈಕರುಮನಿಸಿ ಕಡೆಗೆ

ಮೋಕ್ಷವ ಪಡೆವರುಮಿಂತೀ ॥

–ಶುಕ್ರವಾರ ನೋಂಪಿ.

ಈ ನೋಂಪಿಯಂ ಅನಂತವೀರ್ಯ್ಯರ್ ಅಪರಾಜಿತರ್

ನೋಂತು ಚಕ್ರವರ್ತ್ತಿಯ ಪದವಿಯಂ ಪಡೆದರು

ವಿಜಯಕುಮಾರಂ ನೋಂತು ಚಕ್ರವರ್ತ್ತಿಗೆ ಸೇನಾಪತಿ
ಪದವಿಯಂ ಪಡೆದನ್

–ನಂದೀಶ್ವರ ನೋಂಪಿ.

ನೋಂಪಿಯ ಕೊನೆಯಲ್ಲಿ ಎರಡು ಹಂತಗಳು ಕಂಡು ಬರುತ್ತವೆ. ಮೊದಲನೆಯದು ನೋಂಪಿಯ ವಿಸರ್ಜಿಸುವದು, ಎರಡನೆಯದು ಫಲಭಾಗಿನವನ್ನು ಕೊಡುವುದನ್ನು ಕಾಣುತ್ತವೆ. ಅಂದರೆ ನೋಂಪಿಯ ಆಚರಣೆಯ ವಿಸರ್ಜಜನೆಯ ನಂತರ ತಮ್ಮ ಸಂಬಂದಿಕರಿಗೆ ಎಲೆ, ಅಡಿಕೆ, ತೆಂಗಿನಕಾಯಿ, ಉತ್ತತ್ತಿ ಹೀಗೆ ಐದು ತರಹ ಫಲಹಾಕಿ ಬಾಳೆ ಎಲೆಯಲ್ಲಿ ಸುತ್ತಿ ಕೊಡುತ್ತಾರೆ. ಇದನ್ನು ಫಲಭಾಗಿನವೆಂದು ಕರೆಯುತ್ತಾರೆ. ಇಂಥ ಕಥೆಯನ್ನು ಹೇಳಿದವರನ್ನು ಹಾಗೂ ಕೇಳಿದವರನ್ನು ಗೌರವಿಸುವದು ನೋಂಪಿಯ ಅಂತ್ಯದಲ್ಲಿ ನಾವು ಕಾಣುತ್ತವೆ.

ನೋಂಪಿಯ ಕಥೆಗಳು ಜೈನ ಧರ್ಮ ಸಾರಿದ ಪಂಚಾಣುವ್ರತಗಳ ಹಿರಿಮೆ ಮತ್ತು ಚತುರ್ವಿದ ದಾನಗಳ ಮಹತ್ವವನ್ನೇ ಎತ್ತಿಹಿಡಿದಿವೆ. ಕಳ್ಳತನ ಮಾಡದ, ಸುಳ್ಳು ಹೇಳದ, ಹಿಂಸೆ ಮಾಡದ, ಪರನಾರೀ ಮತ್ತು ಪುರುಷರನ್ನು ಸೋದರಿ, ಸೋದರರಂತೆ ಕಾಣುವದು. ಆವಶ್ಯಕತೆಗಿಂತಲೂ ಹೆಚ್ಚು ವಸ್ತುಗಳನ್ನು ಸಂಗ್ರಹಿಸದೆ ಇರುವ ಈ ಪಂಚ ಅಣುವ್ರತಗಳು ಜೈನಧರ್ಮ ಕೊಟ್ಟ ಮಹತ್ವದ ಕಾಣಿಕೆಯಾಗಿದೆ. ಅದೇ ರೀತಿ ಆಹಾರದಾನ, ಅಭಯದಾನ, ಔಷದಿದಾನ, ಶಾಸ್ತ್ರದಾನ ಇವುಗಳೂ ಸಹ ಮನುಷ್ಯನ ಸ್ವಸ್ಥ ಜೀವನಕ್ಕೆ ಎಷ್ಟು ಅಗತ್ಯ ಎನ್ನುವದನ್ನು ನೋಂಪಿಯ ಕಥೆಗಳಲ್ಲಿ ತಿಳಿಸಲಾಗಿದೆ.

ಕನ್ನಡ ಕಥಾ ಸಾಹಿತ್ಯದಲ್ಲಿ ಶ್ರೀ ಪಂಚಮಿ ನೋಂಪಿ ಕಥೆ, ನಾಗಕುಮಾರ ನೋಂಪಿ ಕಥೆ, ಶುಕ್ರವಾರ ನೋಂಪಿಯ ಕಥೆಗಳು ಹೆಚ್ಚು ಆಚರಣೆಯಲ್ಲಿ ಇದ್ದದು ಕಾಣುತ್ತೇವೆ. ಸುಮಾರು ಮೂರನೂರಕ್ಕೂ ಹೆಚ್ಚು ನೋಂಪಿ ಕಥೆಗಳು ದೊರೆತರೂ ಅವುಗಳೆಲ್ಲ ಕನ್ನಡದಲ್ಲಿಯೇ ರಚನೆಯಾದವು ಎಂದು ಹೇಳಲು ಯಾವುದೇ ಆಧಾರಗಳಿಲ್ಲ ಇಂದು ಇಂಥ ನೋಂಪಿಗಳ ಆಚರಣೆಯಿಂದ ವರ್ಣಸಂಕರ, ಸಪ್ತವ್ಯಸನ, ಕ್ಷಾಮಡಾಮರಗಳು ಅಳಿದು, ರಾಷ್ಟ್ರಕ್ಕೆ ಮಹಾಶಾಂತಿ ದೊರೆಯುವ ವಿಶ್ವಾಸವಿದೆ, ಇಂಥ ಆಸೆಯು ಈಡೇರಿದರೆ ಇಹವೇ ಸ್ವರ್ಗವಾಗುವದು, ಇಂತಹ ಸಂಸ್ಕೃತಿಯನ್ನು ಆಚರಣೆಗೆ ತಂದ ಜೈನಧರ್ಮಕ್ಕೆ ಪ್ರತಿಫಲಸಿಕ್ಕಂತಾಗುತ್ತದೆ.

ಆಧಾರ ಗ್ರಂಥಗಳು

1) ಡಾ. ಬಿ.ಎಸ್. ಕುಲಕರ್ಣಿ; ಸಂ. ಇಪ್ಪತ್ತು ನೊಂಪಿಯ ಕಥೆಗಳು. ಕನ್ನಡ ಸಂಶೋಧನ ಸಂಸ್ಥೆ, ಕ.ವಿ. ಧಾರವಾಡ. 1984

2) ಡಾ. ಹಂಪಾ ನಾಗರಾಜಯ್ಯ; ನೋಂಪಿಯ ಕಥೆಗಳು. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–2001

3 ನಾಡೋಜ ಪ್ರೋ. ಕಮಲಾ ಹಂಪನಾ; ಭೂಮಿಕಾ ಸಂಪುಟ 1. ಸಪ್ನ ಬುಕ್ ಹೌಸ್. ಬೆಂಗಳೂರ 2012

ಪ್ರಾಚೀನ ದೃಶ್ಯಮಾಧ್ಯಮ ನಾಟಕ ಹಾಗೂ ಅದರ ಪ್ರಸ್ತುತತ್ತೆ

ಹೆಚ್. ವಿ. ಕಾಶಿನಾಥಶಾಸ್ತ್ರಿ
ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಸಹ್ಯಾದ್ರಿ ಕಾಲೇಜು, ಆವರಣ, ಶಿವಮೊಗ್ಗ–5677 203 E-mail: panditaradya@gmail.com

ಪ್ರಪಂಚದ ಅತ್ಯಂತ ಪ್ರಾಚೀನ ಸಾಹಿತ್ಯವಾದ ಸಂಸ್ಕೃತ ಸಾಹಿತ್ಯವನ್ನು ವೈದಿಕ ಹಾಗೂ ಲೌಕಿಕವೆಂದು ವಿಭಾಗಿಸಲಾಗುತ್ತದೆ. ಇದರಲ್ಲಿನ ಲೌಕಿಕ ಸಾಹಿತ್ಯವನ್ನು ಶ್ರವ್ಯ, ದೃಶ್ಯವೆಂದುಮಾಗಿ ಪುನರ್ವಿಭಾಗಿಸಿ ಅಧ್ಯಯನ ಮಾಡಲಾಗುತ್ತದೆ. ಇದರಲ್ಲಿನ ದೃಶ್ಯಸಾಹಿತ್ಯವು ಅತ್ಯಂತ ಪರಿಣಾಮಕಾರಿ ಹಾಗೂ ಆಕರ್ಷಕವಾಮದು. ಏಕೆಂದರೆ ದೃಶ್ಯಸಾಹಿತ್ಯದಲ್ಲಿನ ನಾಟಕಾದಿ ಪ್ರಕಾರಗಳು ಶ್ರವ್ಯಸಾಹಿತ್ಯಕ್ಕಿಂತ ಹೆಚ್ಚು ಪ್ರಭಾವಯುತವಾಮದು. ಹಾಗಾಗಿಯೇ ದೃಶ್ಯಮಾಧ್ಯಮವು ಇಂದಿಗೂ ಕೂಡ ಪ್ರಭಾವೀ ಮಾಧ್ಯಮವಾಗಿ ಬಳಗೊಳ್ಳುತ್ತಿರುವುದು.

ದೃಶ್ಯವನ್ನು ನಾಟ್ಯವೆಂದು ಕರೆಯುತ್ತಾರೆ. ನಾಟ್ಯವೆಂಬ ಪದವು 'ನಟ' ಎಂಬ ಧಾತುವಿನಿಂದ ನಿಷ್ಪನ್ನವಾಮದು, ಇದ್ದರಿಂದ ನೃತ್ಯ, ನೃತ್ತ, ನಾಟ್ಯ, ನಾಟಕ ಇವೆಲ್ಲವುಗಳ ಅರ್ಥವೆಂದೇ, ಸಂಗೀತ, ಸಾಹಿತ್ಯ, ಅಭಿನಯಗಳೊಡಗೂಡಿ ಕುತೂಹಲವೆಂದರ್ಥ, ನಾಟ್ಯಕ್ಕೆ ಜಲವಾರು ಲಕ್ಷಣ ಗ್ರಂಥಗಳಿವೆ. ನಾಟ್ಯವು ಒಂದು ಶಾಸ್ತ್ರವಾಗಿ ಹಾಗೂ ಅರವತ್ನಾಲ್ಕು ವಿದ್ಯೆಗಳಲ್ಲಿ ಪ್ರಮುಖ ವಿದ್ಯೆಯಾಗಿರುವ ಒಂದು ಅಪೂರ್ವ ಕಲೆ.

ಇದು ಸಮಾಜದ ಬದಲಾವಣೆಗೆ ಹೇಗೆ ಸಹಕಾರಿಯಾಗುತ್ತದೆ ಹಾಗೂ ಇದರ ಲಕ್ಷಣಗಳನ್ನು ಇಂದಿನ ದೃಶ್ಯ ಮಾಧ್ಯಮಗಳಲ್ಲಿ ಅಳವಡಿಸಿಕೊಂಡಿಲ್ಲ ಆಗುವ ರಾಭಗಳೇನೆಂಬುದನ್ನು ಪ್ರಸ್ತುತ ಪ್ರಬಂಧದಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗುತ್ತದೆ.

ಪ್ರಪಂಚದ ಅತ್ಯಂತ ಪ್ರಾಚೀನ ಸಾಹಿತ್ಯವಾದ ಸಂಸ್ಕೃತ ಸಾಹಿತ್ಯವನ್ನು ವೈದಿಕ ಹಾಗೂ ಲೌಕಿಕವೆಂದು ವಿಭಾಗಿಸಲಾಗುತ್ತದೆ. ಇದರಲ್ಲಿನ ಲೌಕಿಕ ಸಾಹಿತ್ಯವನ್ನು ಶ್ರವ್ಯ, ದೃಶ್ಯವೆಂಬುದಾಗಿ ಪುನರ್ವಿಭಾಗಿಸಿ ಅಧ್ಯಯನ ಮಾಡಲಾಗುತ್ತದೆ. ಇದರಲ್ಲಿನ ದೃಶ್ಯಸಾಹಿತ್ಯವು ಅತ್ಯಂತ ಪರಿಣಾಮಕಾರಿ ಹಾಗೂ ಆಕರ್ಷಕವಾದುದು. ಏಕೆಂದರೆ ದೃಶ್ಯಸಾಹಿತ್ಯದಲ್ಲಿನ ನಾಟಕಾದಿ ದಶರೂಪಕಗಳು ಶ್ರವ್ಯಸಾಹಿತ್ಯಕ್ಕಿಂತ ಹೆಚ್ಚು ಪ್ರಭಾವಯುತವಾದುದು. ಹಾಗಾಗಿಯೇ ದೃಶ್ಯಮಾಧ್ಯಮವು ಇಂದಿಗೂ ಕೂಡ ಪ್ರಭಾವೀ ಮಾಧ್ಯಮವಾಗಿ ಬಲಗೊಳ್ಳುತ್ತಿರುವುದು.

ದೃಶ್ಯವನ್ನು ನಾಟ್ಯವೆಂದು ಕರೆಯುತ್ತಾರೆ. ನಾಟ್ಯವೆಂಬ ಪದವು 'ನಟ್' ಎಂಬ ಧಾತುವಿನಿಂದ ನಿಷ್ಪನ್ನವಾದುದು. ಆದ್ದರಿಂದ ನೃತ್ಯ, ನೃತ್ತ, ನಾಟ್ಯ, ನಾಟಕ ಇವೆಲ್ಲವುಗಳ ಅರ್ಥವೊಂದೇ. ಸಂಗೀತ, ಸಾಹಿತ್ಯ, ಅಭಿನಯಗಳೊಡಗೂಡಿ ಕುಣಿಯುವ ಕುಣಿತವೆಂದರ್ಥ. ನಾಟ್ಯಕ್ಕೆ ಹಲವಾರು ಲಕ್ಷಣ ಗ್ರಂಥಗಳಿವೆ. ನಾಟ್ಯವು ಒಂದು ಶಾಸ್ತ್ರವಾಗಿ ಹಾಗೂ ಅರವತ್ನಾಲ್ಕು ವಿದ್ಯೆಗಳಲ್ಲಿ ಪ್ರಮುಖ ವಿದ್ಯೆಯಾಗಿರುವ ಒಂದು ಅಪೂರ್ವ ಕಲೆ.

ನಾಟ್ಯವೆನ್ನಲು ಅದರಲ್ಲಿರಬೇಕಾದ ಮೂಲಾಂಶಗಳಾವುವು ಎಂಬುದನ್ನು ಭರತ ಮಹರ್ಷಿ ಕೆಳಕಂಡಂತೆ ತಿಳಿಸಿದ್ದಾನೆ.

ರಸಾ ಭಾವಾಹ್ಯಭಿನಯಾಃ ಧರ್ಮೀವೃತ್ತಿ ಪ್ರವೃತ್ತಯಃ ।

ಸಿದ್ಧಿಸ್ವರಾಸ್ತಥಾತೋದ್ಯಂ ಗಾನಂ ರಂಗಶ್ಚ ಸಂಗ್ರಹಃ ॥

– ನಾಟ್ಯಶಾಸ್ತ್ರ 6–10

ರಸ, ಭಾವ, ಅಭಿನಯ, ಧರ್ಮ ವೃತ್ತಿ ಪ್ರವೃತ್ತಿ ಸಿದ್ಧಿ ಸ್ವರ, ಆತೋದ್ಯ, ಗಾನ (ಇವು ಸಂಗೀತಕ್ಕೆ ಸಂಬಂಧಿಸಿದವುಗಳು) ಇವುಗಳನ್ನು ಒಳಗೊಂಡಿರುವುದೇ ನಾಟ್ಯವೆಂದಾಗುತ್ತದೆ.

ನಾಟಕದ ಪಾತ್ರಧಾರಿಗಳಿಗೆ ನಟರೆಂದು ಕರೆಯುವುದು ನಮಗೆ ತಿಳಿದೇ ಇದೆ. ನಾಟಕದಲ್ಲಿ ಸೂತ್ರಧಾರನೇ ನಾಟಕದ ಮುಖ್ಯಸ್ಥ. ಇಂದು ನಾವು ಇವರನ್ನು ನಿರ್ದೇಶಕರೆಂದು ಸಂಬೋಧಿಸುತ್ತೇವೆ. ಭರತನ ಪ್ರಕಾರ ಸೂತ್ರಧಾರ ಹಾಗೂ ನಟರಿಗೆ ಹಲವು ಶಾಸ್ತ್ರಗಳ ಪರಿಚಯವಿರಬೇಕೆಂದು ತಿಳಿಸಿದ್ದಾನೆ. ಯಾರು ಸಚ್ಚಾರಿತ್ರ್ಯವನ್ನು ಕಾಪಾಡಿಕೊಂಡಿರುತ್ತಿದ್ದರೋ ಅಂತಹವರಿಗೆ ಮಾತ್ರ ಪ್ರಧಾನ ಪಾತ್ರಗಳನ್ನು ಕೊಡಬೇಕೆಂಬ ನಿಯಮವಿತ್ತು. ಚಾರಿತ್ರ್ಯಹೀನರಿಗೆ ನೀಚ ಪಾತ್ರಗಳನ್ನು ಕೊಡಬೇಕೆಂದು ಭರತನು ತಿಳಿಸಿದ್ದಾನೆ. ಅಂದು ನಟರ ಅರ್ಹತೆ ನೈತಿಕ ಯೋಗ್ಯತೆಗನುಗುಣವಾಗಿ ಪಾತ್ರಗಳನ್ನು ನಿರ್ಧರಿಸಲಾಗುತ್ತಿತ್ತು. ಇದರಿಂದ ಉದಾತ್ತವಾದ ಸಂದೇಶವನ್ನು ಸಮಾಜಕ್ಕೆ ಕೊಟ್ಟಾಗ ಸಮಾಜ ಅದನ್ನು ಸ್ವೀಕರಿಸುತ್ತಿತ್ತು. ಆದರೆ ಇಂದು ಪರಿಸ್ಥಿತಿ ವಿರುದ್ಧವಾಗಿದೆ. ಇಂದಿನ ಚಿತ್ರರಂಗದ ಬಹುಪಾಲು ನಟರು ಅಪರಾಧ ಹಿನ್ನಲೆ ಹೊಂದಿದ್ದರೂ, ಚಾರಿತ್ರ್ಯಹೀನನಾಗಿದ್ದರೂ ಅವರನ್ನೇ ನಾಯಕನನ್ನಾಗಿ ಮಾಡಲಾಗುತ್ತದೆ. ಆತನ ಸಂಭಾಷಣೆಯೂ ಕೂಡ ವಿಕೃತ ಮನೋಭಾವದಿಂದ ಕೂಡಿರುತ್ತದೆ. ಇದನ್ನೇ ನಾವೂ ಕೂಡ ನೋಡಿ ಆಸ್ವಾದಿಸುವ ಪರಿಸ್ಥಿತಿ ಬಂದಿರುವುದರಿಂದ ಸಹಜವಾಗಿ ಸಮಾಜವೂ ಕೂಡ ಕಲುಷಿತಗೊಳ್ಳುತ್ತಿದೆ.

ನಾಟಕಗಳು ಸಮಾಜದಮೇಲೆ ನೇರವಾದ ಪರಿಣಾಮವನ್ನು ಬೀರುತ್ತಿದ್ದರಿಂದ ಅಂದಿನ ನಾಟಕಗಳು ಹೆಚ್ಚಾಗಿ ಉತ್ತಮವಾದ, ಸಮಾಜದ ಹಿತಕಾಪಾಡುವ ಕಥಾಭಾಗವನ್ನು ಹೊಂದಿರುತ್ತಿತ್ತು. ಹಾಗೂ ಶ್ರೇಷ್ಠ ವ್ಯಕ್ತಿತ್ವವುಳ್ಳಂತಹ, ಉತ್ತಮ ಹಿನ್ನಲೆಯನ್ನು ಹೊಂದಿರುವವರನ್ನೇ ನಟರನ್ನಾಗಿ ಆಯ್ದುಕೊಳ್ಳಲಾಗುತ್ತಿತ್ತು. ಹಾಗೂ ನಾಯಕನಟನ ಲಕ್ಷಣವನ್ನು ರಂಗದ ಮೇಲೆ ತರುವಾಗ ಈ ಕೆಳಕಂಡ ಸಾಮಾನ್ಯ ಲಕ್ಷಣಗಳರಬೇಕೆಂದು ತಿಳಿಸಿದ್ದಾರೆ. –

ನೇತಾ ವಿನೀತೋ ಮಧುರಸ್ತ್ಯಾಗೀ ದಕ್ಷಃ ಪ್ರಿಯಂವದಃ ।

ರಕ್ತಲೋಕಃ ಶುಚಿರ್ವಾಗ್ಮೀ ರೂಢವಂಶಃ ಸ್ಥಿರೋ ಯುವಾ ॥

ಬುದ್ಧ್ಯುತ್ಸಾಹಸ್ಮೃತಿಪ್ರಜ್ಞಾಕಲಾಮಾನಸಮನ್ವಿತಃ ।

ಶೂರೋ ದೃಢಶ್ಚ ತೇಜಸ್ವೀ ಶಾಸ್ತ್ರಚಕ್ಷುಶ್ಚ ಧಾರ್ಮಿಕಃ ॥

ಅಂದರೆ ನಾಯಕನು ವಿನಯಶಾಲಿಯೂ, ಮಧುರನೂ, ತ್ಯಾಗಿಯೂ, ದಕ್ಷನೂ, ತ್ಯಾಗಿಯೂ, ಪ್ರಿಯವಾಗಿ ಮಾತನಾಡುವವನೂ, ಲೋಕಪ್ರಿಯನೂ, ಶುಚಿಯೂ, ಮಾತುಗಾರನೂ, ಕುಲೀನನೂ, ಅಚಲನೂ, ತರುಣನೂ, ಬುದ್ಧಿ ಉತ್ಸಾಹ, ಸ್ಮೃತಿ, ಪ್ರಜ್ಞೆ, ಕಲೆ, ಮಾನವಂತನೂ, ಶೂರನೂ, ದೃಢನೂ, ಶಾಂತಿಯುಕ್ತನೂ, ಶಾಸ್ತ್ರವೇತ್ತನೂ, ಧಾರ್ಮಿಕನೂ ಆಗಿರಬೇಕೆಂದು ಧನಂಜಯನ ದಶರೂಪಕದಲ್ಲಿದೆ. ಇದು ಪಾತ್ರದ ಸ್ವರೂಪವೂ ಹೌದು ಹಾಗೂ ಆ ನಟನ ಅರ್ಹತೆಯೂ ಹೌದು. ಆದರೆ ಇಂದಿನ ಸಾಮಾಜಿಕ ನಾಟಕಗಳಲ್ಲಿ ಅದಕ್ಕಿಂತಲೂ ಹೆಚ್ಚಾಗಿ ಚಲನಚಿತ್ರಗಳಲ್ಲಿ ನಾಯಕನ ದುರಾಚಾರಗಳನ್ನೇ ವೈಭವೀಕರಿಸಿ ತೋರಿಸುತ್ತಿರುವುದರಿಂದ ಯುವಜನತೆ ಅದನ್ನೇ ಸರಿಯೆಂದು ಭಾವಿಸಿ ಅನುಕರಿಸುತ್ತಿರುವುದು ಖೇದದ ಸಂಗತಿ.

ಇನ್ನು ಪ್ರೇಕ್ಷಕರೂ ಕೂಡ ಹೀಗೆಯೇ ಇರಬೇಕೆಂಬ ಲಕ್ಷಣವನ್ನು ಹಿಂದಿನ ನಾಟಕ ಶಾಸ್ತ್ರಕಾರರು ತೋರಿಸಿಕೊಟ್ಟಿದ್ದಾರೆ.

ಅವ್ಯಗ್ರೈರಿಂದ್ರಿಯೈಃ ಶುದ್ಧ ಊಹಾಪೋಹವಿಕಾರದಃ ।

ವ್ಯಕ್ತಾದೋಷಾನುರಾಗೀ ಚ ಸ ನಾಟ್ಯೇ ಪ್ರೇಕ್ಷಕಃ ಸ್ಮೃತಃ ॥
(ನಾ.ಶಾ 27–51)

ಪ್ರೇಕ್ಷಕರಾದವರು ಊಹಾಪೋಹ ವಿಶಾರದರಾಗಿರಬೇಕು. ಒಂದೇ ಮನಸ್ಸಿನಿಂದಲೂ ಅತ್ಯಂತ ಇಚ್ಛೆಯಿಂದ ನೋಡುವವರಾಗಬೇಕು. ಯಾವ ಭಾವವನ್ನು ಪ್ರದರ್ಶಿಸಿದರೂ ಆ ಭಾವವನ್ನು ಇವರೂ ಸಹ ಅನುಭವಿಸುವಂತಾಗಬೇಕು. ಅಂತಹ ಮನಸ್ಥಿತಿಯವರನ್ನು ಪ್ರೇಕ್ಷಕರೆನ್ನುವರು. ಅಂದರೆ

ಯಸ್ತುಷ್ಟೇ ತುಷ್ಟಿ ಮಾಯಾತಿ ಶೋಕೇ ಶೋಕಮುಪೈತಿ ಚ ।

ದೈನ್ಯೇ ದೀನತ್ವಮಭ್ಯೇತ ಸ ನಾಟ್ಯೇ ಪ್ರೇಕ್ಷಕಃ ಸ್ಮೃತಃ ॥
(ನಾ.ಶಾ 27–52)

ರಂಗದಮೇಲೆ ಸಂತೋಷವಾದಾಗ ಸಂತೋಷವನ್ನು

ಅನುಭವಿಸಬೇಕು. ದುಃಖವಾದಾಗ ದುಃಖವನ್ನು ಅನುಭವಿಸಬೇಕು. ದಯನೀಯ ಸ್ಥಿತಿಯಲ್ಲಿ ಮರುಕವುಂಟಾಗಬೇಕು. ಹೀಗೆ ರಂಗದ ಮೇಲಿನ ಭಾವಕ್ಕೆ ತಕ್ಕಂತೆ ನೋಡುಗನ ಭಾವವೂ ಬದಲಾಗುತ್ತಿದ್ದರೆ ಅವನೇ ನಿಜವಾದ ಪ್ರೇಕ್ಷಕನೆಂದು ಭರತನು ತಿಳಿಸಿದ್ದಾನೆ.

ಈ ಮೇಲ್ಕಂಡ ವಿಶಿಷ್ಟಾಂಶಗಳ ಜೊತೆಗೆ ನಾಟಕದ ಉದ್ದೇಶ ಸಾಧನೆಯಾದ ಮೇಲೆ ಕೊನೆಗೆ ಎಲ್ಲರಿಗೂ ಒಳಿತನ್ನು ಬಯಸುವ ಭರತವಾಕ್ಯದೊಂದಿಗೆ ನಾಟಕವು ಅಂತ್ಯವಾಗುತ್ತದೆ. ನಾಂದಿಯಿಂದ ಪ್ರಾರಂಭವಾಗಿ ಸನ್ನಿವೇಶವೈವಿಧ್ಯವನ್ನು ಸೃಷ್ಟಿಸಿ ಮುಖ್ಯೋದ್ದೇಶಸಾಧನೆ ಮತ್ತು ಭರತವಾಕ್ಯಗಳಿಂದ ಮುಕ್ತಾಯವಾಗುವ ಈ ವಸ್ತುರಚನೆಯು ಸಂಸ್ಕೃತ ನಾಟಕದ ವೈಶಿಷ್ಟ್ಯಗಳಲ್ಲೊಂದು. ಸಂಸ್ಕೃತ ನಾಟಕಗಳಲ್ಲಿ ಸುಖಾಂತ ಹಾಗೂ ದುಃಖಾಂತವೆಂದು ಇರುವುದಿಲ್ಲ. ಭಾಸನ ಊರುಭಂಗವೆಂಬ ನಾಟಕವನ್ನು ಹೊರತುಪಡಿಸಿ ಸಂಸ್ಕೃತದ ಉಳಿದೆಲ್ಲ ನಾಟಕಗಳು ಕೂಡ ಸುಖಾಂತ್ಯ ನಾಟಕಗಳೆಂಬುದು ಮತ್ತೊಂದು ವಿಶೇಷ. ಜೊತೆಗೆ ಈ ಎರಡು ಭಾಷೆಗಳಲ್ಲಿ ನಾಟಕಗಳಿರುವುದು ಸಂಸ್ಕೃತ ನಾಟಕಗಳಲ್ಲ. ಅವು ಸಂಸ್ಕೃತ ಹಾಗೂ ಪ್ರಾಕೃತ. ಹೀಗೆ ಹಲವಾರು ವೈಶಿಷ್ಟ್ಯಗಳೊಂದಿಗೆ ಅತ್ಯಂತ ಪರಿಣಾಮಕಾರಿ ದೃಶ್ಯಮಾಧ್ಯಮವಾಗಿ ಉತ್ತಮ ಸಮಾಜವನ್ನು ನಿರ್ಮಿಸುವಲ್ಲಿ ನಾಟಕಗಳ ಪಾತ್ರ ಮಹತ್ವದ್ದಿದೆ. ಅವುಗಳನ್ನು ಸರಿಯಾಗಿ ಅಧ್ಯಯನ ಮಾಡಿ ಇಂದಿನ ದೃಶ್ಯಮಾಧ್ಯಮಗಳಲ್ಲಿ ಅಳವಡಿಸಿಕೊಂಡಿದ್ದೇ ಆದಲ್ಲಿ ಸಮಾಜದ ಹಿತ ಕಾಪಾಡುವಲ್ಲಿ ಅವುಗಳೂ ಸಹ ಪರಿಣಾಮಕಾರಿಯಾದ ಪ್ರಭಾವವನ್ನು ಬೀರುತ್ತವೆ ಎನ್ನುವಲ್ಲಿ ಸಂಶಯವಿಲ್ಲ.

ಪರಾಮರ್ಶನ ಗ್ರಂಥಗಳು

1. ಸಂಸ್ಕೃತ ನಾಟಕ – ಎ.ಆರ್.ಕೃಷ್ಣಶಾಸ್ತ್ರಿ – ಹೇಮಂತ ಸಾಹಿತ್ಯ, ಬೆಂಗಳೂರು.

2. ಸಂಸ್ಕೃತ ಸಾಹಿತ್ಯ ಪರಂಪರೆ – ಡಾ.ಎಂ.ಶಿವಕುಮಾರಸ್ವಾಮಿ – ಭಾರವಿ ಪ್ರಕಾಶನ

3. ಸಂಸ್ಕೃತ ನಾಟಕಗಳಲ್ಲಿ ಸಂವಹನ ಕೌಶಲ –ಸಂ– ಗಣಪತಿ ಆರ್ ಭಟ್ – ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಶೋಧ ಪ್ರಬಂಧ

4. ಸಂಸ್ಕೃತ ಕಾವ್ಯ – ಡಾ.ಕೆ.ಕೃಷ್ಣಮೂರ್ತಿ – ವಿದ್ಯುತ್ ಪ್ರಕಾಶನ, ಮೈಸೂರು

5. ಸಂಸ್ಕೃತ ಸಾಹಿತ್ಯ ಚರಿತ್ರೆ – ಎಸ್. ಸಂಪತ್ತೈಂಗಾರ್ – ಹಂಸಧ್ವನಿ ಪ್ರಕಾಶನ, ಬೆಂಗಳೂರು

ವಲಸೆ ಮತ್ತು ಮಹಿಳೆಯರ ಬದುಕು

ಭುವನೇಶ್ವರಿ ಕಾಂಬಳೆ
ಸಂಶೋಧನಾ ವಿದ್ಯಾರ್ಥಿನಿ, ಮಹಿಳಾ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ

ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಗ್ರಾಮೀಣ ಭಾಗದಲ್ಲಿ ಜನರ ಜೀವಾಳವೇ ಕೃಷಿ. ಈ ಕ್ಷೇತ್ರದಲ್ಲಿ ಹಗಲಿರುಳು ಶ್ರಮಿಸಿದರು ಅನಿಶ್ಚಿತ, ಅಕಾಲಿಕ ಮಳೆಯಿಂದಾಗಿ ವರ್ಷದ ಕೆಲವು ತಿಂಗಳಲ್ಲಿ ಮಾತ್ರ ಕೆಲಸವಿರುತ್ತದೆ. ಉಳಿದ 6–7 ತಿಂಗಳವರೆಗೂ ಕೆಲಸವಿರುವುದಿಲ್ಲ. ಅಲ್ಲದೇ ಬೇಸಿಗೆಕಾಲದಲ್ಲಿ ಜನ–ಜಾನುವಾರುಗಳಿಗೂ ನೀರಿಲ್ಲದೆ ಪರದಾಡುತ್ತಾರೆ. ಸಕಾಲ ಬರದ ಪರಿಸ್ಥಿತಿ ನಿರ್ಮಾಣವಾಗಿ ದೇಶದ ಬೆನ್ನೆಲುಬು ಎನಿಸಿದ್ದ ಉತ್ಪಾದಕ ವರ್ಗವೇ ಆತ್ಮಹತ್ಯೆ ಹಾದಿಯಿತ್ತ ಸಾಗಿದೆ. ಇನ್ನೊಂದು ಕಡೆ ರೈತರ ಹೊಲಗಳನ್ನೇ ಅವಲಂಬಿಸಿ ದಿನಗೂಲಿ ಕೆಲಸ ಮಾಡಿ ಬದುಕು ನಡೆಸುವವರ ಸ್ಥಿತಿ ಚಿಂತಾಜನಕವಾಗಿದೆ. ತಮ್ಮ ಬದುಕು ನಿರ್ವಹಣೆಗಾಗಿ ಕುಟುಂಬ ಸಮೇತವಾಗಿ ವಲಸೆ ಹೋಗುವುದನ್ನು ಕಾಣಬಹುದು. ವಲಸೆ ಹೋದ ಪ್ರದೇಶದಲ್ಲಿ ಇವರೆಲ್ಲರೂ ಸರಕಾರದ ಅಭಿವೃದ್ಧಿ ಭಾಗವಾಗಿರುವ ಕೆಲಸಗಳನ್ನು ಮಾಡುತ್ತಾರೆ. ಯಾವುದೇ ಸೌಲಭ್ಯಗಳಿಲ್ಲದ ಅಸುರಕ್ಷಿತ ಸ್ಥಳದಲ್ಲಿ ಅಭದ್ರವಾದ ಬದುಕನ್ನು ನಡೆಸುತ್ತಾರೆ. ಅವರಲ್ಲೂ ವಲಸೆ ಕಾರ್ಮಿಕ ಮಹಿಳೆಯರ ಬದುಕು ಅತ್ಯಂತ ಭಾರವಾಗಿದೆ. ಬಿಡುವಾಗಲಾಗಲಿ ಮತ್ತು ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳಿಂದಾಗಿ ಇವರ ಬದುಕು ಸಾಮಾಜಿಕವಾಗಿ, ಆರ್ಥಿಕವಾಗಿ, ಶಾರೀರಿಕವಾಗಿ ಶೋಷಣೆಗೆ ಒಳಗಾಗಿಕೊಂಡಿದೆ. ಪ್ರಸ್ತುತ ಪ್ರಬಂಧವು ವಲಸೆ ಮಹಿಳೆಯರ ಬದುಕಿನ ಕುರಿತಾಗಿದ್ದು, ಪ್ರಸ್ತುತ ಸಂದರ್ಭದಲ್ಲಿ ಈ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಮಹಿಳಾ ದೃಷ್ಟಿಕೋನದಿಂದ ಅರಿಯುವುದು ಮುಖ್ಯವಾಗಿದೆ. ಕಾರಣ ಈ ಪ್ರಬಂಧವು ವಲಸೆ ಮಹಿಳೆಯರ ಸಮಸ್ಯೆಗಳ ಮೇರೆ ಬೆಳಕನ್ನು ಚೆಲ್ಲುತ್ತದೆ.

ಪ್ರಸ್ತಾವನೆ:– ಪ್ರಕೃತಿಯ ಮೇಲೆ ಜೀವಿಸುವ ಎಲ್ಲಾ ಜೀವಿ ಸಂಕುಲಗಳಿಗೆ ಬದುಕಲು ಅತಿ ಅವಶ್ಯಕವಾಗಿ ಬೇಕಾಗಿರುವುದು ನೀರು, ಆಹಾರ, ವಸತಿ ಇವುಗಳನ್ನು ಅರಸುತ್ತಾ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುವುದು ಮನುಷ್ಯ ಕುಲದ ಹುಟ್ಟಿನಿಂದಲೂ ನಡೆದು ಬಂದಿದೆ. ಪ್ರಾಣಿಗಳನ್ನು ಬೇಟೆಯಾಡಿ ಮಾಂಸ, ಗೆಡ್ಡೆ–ಗೆಣಸುಗಳನ್ನು ತಿನ್ನುತ್ತಾ ಅಲೆಯುತ್ತಿದ್ದರು. ಅವುಗಳ ಆಭಾವವಾದಾಗ ಆ ಪ್ರದೇಶವನ್ನು ಬಿಟ್ಟು ಇನ್ನೊಂದು ಪ್ರದೇಶಕ್ಕೆ ಹೋಗುತ್ತಿದ್ದರು. ಹೀಗೆ ಅಲೆಮಾರಿ ಜೀವನದಿಂದ ಆರಂಭವಾದ ಮಾನವರ ಬದುಕು ಆಹಾರ ಹುಡಿಕಿಕೊಂಡು ಹೋಗುವ ಉದಾಹರಣೆಗಳು ಇತಿಹಾಸದ ಉದ್ದಕ್ಕೂ ನಡೆದಿವೆ.

ಬ್ರಿಟೀಷರ ಆಡಳಿತ ಅವಧಿಯಲ್ಲಿ ಭಾರತ ದೇಶಕ್ಕೆ ಹಲವಾರು ವಿದೇಶಿ ಉತ್ಪಾದಕರು ಬಂದು ನೆಲೆಸಿದ ನಂತರ ಇಲ್ಲಿ ದೇಶಿಯ ಗುಡಿ ಕೈಗಾರಿಕೆಗಳು ನಾಶವಾಗಿ ಹೊದವು. ಅದಷ್ಟೆ ಅಲ್ಲದೆ ಬ್ರಿಟಿಷರು ಭೂಕಂದಾಯ ಪದ್ಧತಿಯನ್ನು ಜಾರಿಗೆ ತಂದು ಕಂದಾಯ ಕಟ್ಟದೆ ಇರುವ ಕೃಷಿಕರ ಜಮಿನುಗಳನ್ನು ವಶಪಡಿಸಿಕೊಳ್ಳಲಾರಂಭಿಸಿದರು. ಇದರ ಪರಿಣಾಮವಾಗಿ

ಬಹಳಷ್ಟು ಜನ ಭೂರಹಿತ ಕಾರ್ಮಿಕರಾಗಿ ಬ್ರಿಟಿಷ ಆಂಗ್ಲ ರಾಜ್ಯಗಳಿಗೆ ಹಾಗು ಇನ್ನಿತರ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ವಲಸೆ ಹೋಗಲು ಪ್ರಾರಂಭಿಸಿದರು. ಸಹಸ್ರಾರು ಜನ ನೆರೆ ದೇಶಗಳಲ್ಲಿ ಕಷ್ಟ ಕಾಲ ಬಂದಾಗ ಅಥವಾ ಯುದ್ಧವಾದಾಗ ಜನ ನಮ್ಮ ದೇಶಕ್ಕೆ ರಕ್ಷಣೆಗಾಗಿ ಬಂದಿದ್ದಾರೆ. ಉದಾಹರಣೆಗೆ ಬಾಂಗ್ಲಾ ವಿಮೋಚನಾ ಯುದ್ಧ ನಡೆದಾಗ ಅಲ್ಲಿಂದ ವಲಸೆ ಬಂದ ಲಕ್ಷಾಂತರ ಜನ ನಮ್ಮ ದೇಶದಲ್ಲೇ ಖಾಯಂ ಆಗಿ ಉಳದುಕೊಂಡಿದ್ದಾರೆ. ಶ್ರೀಲಂಕಾದಿಂದ ಬಂದ ನಿರಾಶ್ರಿತರು ಕೂಡಾ ಇಲ್ಲೆ ಇದ್ದಾರೆ. ಇದು ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಬಡತನ ಹೆಚ್ಚು ಇರುವ ದೇಶಗಳಲ್ಲಿ ಅಲ್ಲದೆ ಕೆಲವು ಮುಂದುವರೆದ ದೇಶಗಳಲ್ಲೂ ಕಾಣಬಹುದು, ವಲಸೆಯಲ್ಲಿನ ಆಡೆತಡೆ ನಿವಾರಣೆಗಾಗಿ 1983ರಲ್ಲಿ ವಲಸೆ ಕಾಯ್ದೆ ಜಾರಿಗೆ ತರಲಾಗಿದೆ. ಇಂಥವರ ಸಮಸ್ಯೆಗಳನ್ನು ಅಲಿಸುವ, ನಿವಾರಿಸುವ ಹಿನ್ನಲೆಯಲ್ಲಿ ವಿಶ್ವಸಂಸ್ಥೆ ಡಿಸೆಂಬರ್ 18ರ ದಿನವನ್ನು 'ಅಂತರಾಷ್ಟ್ರೀಯ ವಲಸಿಗರ ದಿನ' ಎಂದು ಘೋಷಿಸಿದೆ.

ಸ್ವತಂತ್ರ ಭಾರತದ ಸಂವಿಧಾನದ ಅನ್ನ, ಸೂರು,ಆರೋಗ್ಯ ಇವುಗಳನ್ನು ಮೂಲಭೂತ ಹಕ್ಕುಗಳೆಂದು ಘೋಷಿಸಿದೆ. ಆದರೆ ಈ ದೇಶದಲ್ಲಿ ಶ್ರೇಣೀಕೃತ ವ್ಯವಸ್ಥೆಯು ಜೀವಂತವಿದ್ದು ಜಾತಿ ಕಾರಣವಾಗಿಯೇ ದಲಿತ, ಹಿಂದುಳದ ಮತ್ತು ಮಹಿಳೆಯರ ನಿರುದ್ಯೋಗವು ಹೆಚ್ಚಾಗಿದೆ, ಇದು ಜಾತಿ ತಾರತಮ್ಯವೆಂಬುದರ ವಿಕಾರ ಸ್ವರೂಪದ ಅನಾವರಣವಾಗಿದೆ. ಗ್ರಾಮೀಣ ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿದ್ದರೂ ಸಹ ಗ್ರಾಮೀಣ ಜನತೆ ವಲಸೆ ಹೋಗುವುದನ್ನು ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ಜನರಿಗೆ ಸ್ಥಳೀಯವಾಗಿ ಉದ್ಯೋಗ ನೀಡುವ ದೃಷ್ಟಿಯಿಂದ ಬಹುಮುಖ ಉದ್ದೇಶದ ಉದ್ಯೋಗ ಖಾತ್ರಿ ಕಾಯಿದೆಯನ್ನು ಜಾರಿಗೆ ತಂದಿದ್ದರೂ ಸಮರ್ಪಕವಾಗಿ ಅದರ ಅನುಷ್ಠಾನವಾಗುತ್ತಿಲ್ಲ. ಅನುಷ್ಠಾನ ಮಾಡುವ ಸಂಸ್ಥೆಗಳು ತಮ್ಮ ಜವಾಬ್ದಾರಿಯನ್ನು ಮರೆತು ಜನರನ್ನು ಶೋಷಣೆ ಮಾಡುತ್ತಿವೆ. ಈ ಕಾಯಿದೆ ಕುರಿತು ಜನರಿಗೆ ತಿಳುವಳಿಕೆ ನೀಡಿಲ್ಲ. ಈ ಎಲ್ಲಾ ಹಿನ್ನಲೆಯಲ್ಲಿ ರೈತರು ಮತ್ತು ಕೃಷಿಕಾರ್ಮಿಕರು ಗುಳೆ ಹೋಗುವಂತೆ ಮಾಡಲಾಗುತ್ತಿದೆ. ಜನರ ವಲಸೆ ಕೇವಲ ಬಡತನ, ಜೀವನ ನಿರ್ವಹಣೆ ಮಾತ್ರವಲ್ಲದೇ ಜೀವನದ ಅವಶ್ಯಕತೆಯ ಪೂರೈಕೆಗಾಗಿ, ಉನ್ನತಮಟ್ಟದ ಆಸೆಗಳ ಪೂರೈಕೆ ಮುಂತಾದ ಕಾರಣಗಳಿಂದಾಗಿ ಇಂದಿಗೂ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಕೈಗೊಳ್ಳುತ್ತಿದ್ದಾರೆ.

ಅರ್ಥ ಮತ್ತು ವ್ಯಾಖ್ಯಾನಗಳು:– ಜೋಶಿ ಎಸ್. ಪಿ (1994) ರವರು ವಲಸೆ ಎನ್ನುವದು 'ಭೌಗೋಳಿಕ ಚಲನೆ' ಎಂದು ಹೇಳುತ್ತಾರೆ. 'ವಲಸೆ' ಎಂಬ ಪದವು ಲ್ಯಾಟಿನ ಭಾಷೆಯ 'ಮೈಗ್ರೇರ' ಎಂಬ ಪದದಿಂದ ಉತ್ಪತ್ತಿಹೊಂದಿದೆ. ಮೈಗ್ರೇರ ಎಂದರೆ ಮನೆಯನ್ನು ಬದಲಾಯಿಸು ಎಂದು ಅರ್ಥ ನೀಡುತ್ತದೆ.

ನ್ಯೂವೆಬಸ್ಟರ್ಸ ನಿಘಂಟಿನ ಪ್ರಕಾರ ಎಂದರೆ 'ಒಬ್ಬ ವ್ಯಕ್ತಿಯ ದೇಶ, ವಲಯ ಅಥವಾ ಯಾವುದೇ ಸ್ಥಳಕ್ಕೆ ಸಂದರ್ಭನುಸಾರವಾಗಿ ಕೆಲಸವನ್ನು ಹುಡಿಕೊಂಡು ಹೋಗುವದು" ಎಂದರ್ಥ.

ವಲಸೆ ಎಂದರೆ ಒಬ್ಬ ವ್ಯಕ್ತಿ ಇಲ್ಲವೇ ಒಂದು ಕುಟುಂಬ ಹೊಟ್ಟೆಪಾಡಿಗಾಗಿ, ಜೀವನ ನಿರ್ವಹಣೆಗಾಗಿ ಕೆಲಸ ಅರಸಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವದು ಎಂದರ್ಥ.

ವಲಸೆ ಎನ್ನುವದು ಒಂದು ಅತಂತ್ರದ ಬದಕು, ಹೊಟ್ಟೆಪಾಡಿಗಾಗಿ ಗ್ರಾಮಗಳಿಂದ ನಗರಗಳಿಗೆ ಕುಟುಂಬ ಸಮೇತವಾಗಿ ಕೆಲಸ ಹುಡುಕಿಕೊಂಡು ತಂಡೋಪ–ತಂಡವಾಗಿ ವಲಸೆ ಹೋಗುತ್ತಾರೆ. ಬಡವರು, ಭೂಹೀನರು, ದಲಿತ ಕೂಲಿ ಕಾರ್ಮಿಕರು ಮತ್ತು ಅಂಚಿಗೆ ತಳ್ಳಲ್ಪಟ್ಟವರು ವಲಸಿಗರಲ್ಲಿ ಹೆಚ್ಚಾಗಿದ್ದಾರೆ. ಕೈಗಾರಿಕಾ ಘಟಕಗಳ ಸ್ಥಾಪನೆಯಿಂದ ಜನರ ವಲಸೆ ಹೆಚ್ಚು ತೀವ್ರತೆಯನ್ನು ಪಡೆದುಕೊಂಡಿದೆ. ಕೈಗಾರಿಕರಣ ವಲಸೆ ಬೆಳವನಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಬಡತನ, ಬರಗಾಲ, ಬೆಳೆಯ ವೈಫಲ್ಯ, ನಿರುದ್ಯೋಗ, ಆರ್ಥಿಕ ಮುಗ್ಗಟ್ಟು, ನೈಸರ್ಗಿಕ ವಿಕೋಪ, ಪರಸ್ಥಳದಲ್ಲಿ ಉತ್ತಮ ಕೂಲಿಯಿಂದಾಗಿ ವಲಸೆ ಹೊಗುತ್ತಾರೆ. ವಲಸೆಯ ಕಾರನದಿಂದಾಗಿ ಕೌಟಂಬಿಕ ವಿಘಟನೆ. ರೋಗ–ರುಜಿನಗಳು, ಹುಡಿಗಿಯರ ಅನೈತಿಕ ಸಾಗಾಣಿಕೆ ಆಗುತ್ತಿವೆ.

ಪ್ರಸ್ತುತ ಅಧ್ಯಯನವು ವಲಸೆ ಮತ್ತು ಮಹಿಳೆಯರ ಬದುಕು ಕುರಿತಾಗಿದೆ. ಈ ಅಧ್ಯಯನ ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿಭಾಗದ ವಿಜಯಪುರ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಸೀಮಿತಗೊಳಿಸಲಾಗಿದೆ. ಇಲ್ಲಿಯ ಗ್ರಾಮೀಣ ಜನರು ಬಹುತೇಕ ಕೃಷಿ ಭೂಮಿಯನ್ನು ಅವಲಂಬಿಸಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಕೈಗಾರಿಕೆಗಳ ಬೆಳವಣಿಗೆ ಮಾಡುತ್ತಿರುವುದರಿಂದ ಇದ್ದ ನೀರಿನ ಮೂಲಗಳು ಕಲುಷಿತಗೊಳ್ಳುತ್ತಿವೆ. ಇದರಿಂದ ಪರಿಸರದ ಮೇಲೆ ನಾನಾ ಬಗೆಯ ಪರಿಣಾಮಗಳು ಒದಗಿಬರುತ್ತಿವೆ. ಕೆರೆ, ಬಾವಿ, ಹಳ್ಳ ಮುಂತಾದ ನೀರಿನ ಮೂಲಗಳು ಅನಾದಿಕಾಲದಿಂದಲೂ ಆಯಾ ಪ್ರದೇಶದಲ್ಲಿ ಉಳದುಕೊಂಡಿದವು. ದೇಶದಲ್ಲಿರುವ ಕೃಷಿಯೊಂದೇ ಲಕ್ಷಾಂತರ ಜನರಿಗೆ ಉದ್ಯೋಗ ಒದಗಿಸುವಷ್ಟು ಸಾಮರ್ಥ ಹೊಂದಿದೆ. ಆದರೆ, ಅದರ ಸಮರ್ಪಕ ಬಳಕೆ ಮಾಡಿಕೊಳ್ಳುತ್ತಿಲ್ಲ. ಜಾಗತಿಕ ತಾಪಮಾನ ಹಾಗೂ ಹವಾಗುಣದ ಏರುಪೇರುದಿಂದಾಗಿ ಕೃಷಿಯ ಮೇಲೆ ಪರಿಣಾಮ ಬೀರುತ್ತಿದೆ. ಕೃಷಿ ಬಿಕ್ಕಟ್ಟಿನ ಪರಿಣಾಮವಾಗಿ ಬಡವರ ಕೆಲಸದ ಮೇಲೆ ನೇರವಾದ ಪರಿಣಾಮ ಬೀರಿ ಜನಸಮುದಾಯದ ವಲಸೆ ನಡಿತಾನೇ ಇದೆ,

ಅಸ್ಪೃಶ್ಯ ಭೂ ಹಿಡುವಳದಾರರು ದಿನೆ–ದಿನೇ ಕಡಿಮೆಯಾಗುತ್ತಿದ್ದಾರೆ. ನಗರಗಳಲ್ಲಿ ಅಸಂಘಟಿತ ವಲಯದ ಕೆಲಸಗಳಲ್ಲಿ ತೋಡಗುತ್ತಿದ್ದಾರೆ. ವಲಸೆ ಹೋಗುವ ಮಹಿಳೆಯರು ಒಂದೇ ರೀತಿಯ ಕೆಲಸದಲ್ಲಿ ತೋಡಗುವದಿಲ್ಲ. ಬೇರೆ–ಬೇರೆ ರೀತಿಯ ಅತ್ಯಂತ ಶ್ರಮದಾಯಕ ಕೆಲಸಗಳಲ್ಲಿ ತೋಡಗುತ್ತಾರೆ. ಅವುಗಳನ್ನು ವಿವರವಾಗಿ ನೋಡುವದಾದರೆ.

* ಕಬ್ಬಿನ ಗದ್ದೆ ಕೆಲಸ (ಕಬ್ಬಿನತೋಡಿ);– ಕಬ್ಬು ಇದೊಂದು ವಾಣಿಜ್ಯ ಬೆಳೆ ಆರ್ಥಿಕವಾಗಿ ಬಹುದೊಡ್ಡ ಲಾಭವನ್ನು ದೇಶಕ್ಕೆ ಕೊಡುತ್ತದೆ. ಕಬ್ಬಿನಗದ್ದೆಯಲ್ಲಿ ನಸುಕಿನ 4 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ಪುರುಷರು ಕಬ್ಬು ಕಡಿಯುತ್ತಾರೆ. ಮಹಿಳೆಯರು ಕಡಿದು ಹಾಕಿದ ಕಬ್ಬುಗಳನ್ನು ಪೆಂಡಿ ಕಟ್ಟುತ್ತಾರೆ. ಕಬ್ಬಿನ ಗದ್ದೆಯಲ್ಲಿ ಕೌಲಿ, ಭೋದಿಗಳ ನಡುವೆ ನಿರಂತರವಾಗಿ ಬೆನ್ನು

ಬಗ್ಗಿಸಿ ಕೆಲಸ ಮಾಡುತ್ತಾರೆ. ಬರಡಾಗಿರುವ ಕಬ್ಬಿನ ವಾಡಿಯಿಂದ ಕೈ–ಮೈಯೆಲ್ಲ ತೆರಚು ಗಾಯಗಳಾಗುತ್ತವೆ. 20–25 ಕಿ.ಲೋ. ಗ್ರಾಂ ತೂಕವಿರುವ ಪೆಂಡಿಗಳನ್ನು ತಲೆ ಮೇಲೆ ಹೊತ್ತಿಕೊಂಡು ಗಾಡಿಯೊಳಗೆ ಹೇರುತ್ತಾರೆ, ಇವರ ಕಷ್ಟದ ಕೆಲಸಕ್ಕೆ ದೊರೆಯುವ ಕೂಲಿ ಪ್ರತಿದಿನ 1 ಜೋಡಿಗೆ 400 ರೂಪಾಯಿ ಮಾತ್ರ.

* **ಇಟ್ಟಿಗೆ ತಯಾರಿಸುವ ಕೆಲಸ (ಇಟಂಗಿಭಟ್ಟಿ);**– ಇಟ್ಟಿಗೆಗಳನ್ನು ಕಟ್ಟಡ ನಿರ್ಮಾಣ ಮಾಡಲು ಬಳಸುತ್ತಾರೆ. ಈ ಕೆಲಸದಲ್ಲಿ ಮಹಿಳೆಯರು ಮತ್ತು ಮಕ್ಕಳು ಹೆಚ್ಚಾಗಿರುತ್ತಾರೆ. ಪುರುಷರು ಇಟ್ಟಿಗೆ ತಯಾರು ಮಾಡಲು ಮಣ್ಣು ಕಲಸಿಕೊಡುತ್ತಾರೆ. ಮಹಿಳೆಯರು ಸಾಚಾದೊಳಗೆ ಕೆಸರುಹಾಕಿ ನೆಲಕ್ಕೆ ಬಡಿಯುತ್ತಾರೆ ಮತ್ತು ತಯಾರಾದ ಇಟ್ಟಿಗೆಗಳನ್ನು ಸ್ಥಳಾಂತರಿಸಿ ಇಡುತ್ತಾರೆ. ರಾತ್ರಿ 1 ಗಂಟೆಯಿಂದ ಬೆಳಗ್ಗೆ 10 ಗಂಟೆಯವರೆಗೆ ನಿದ್ರೆಗೆಟ್ಟು ಈ ಕೆಲಸಮಾಡುತ್ತಾರೆ. ಪ್ರತಿದಿನಕ್ಕೆ ಸಾವಿರ ಇಟ್ಟಿಗೆಗಳನ್ನು ತಯಾರಿಸುತ್ತಾರೆ 1 ಕುಟುಂಬಕ್ಕೆ 500 ರೂಪಾಯಿ ಸಿಗುತ್ತದೆ.

* **ಕಲ್ಲೋಡಿಯುವ ಕೆಲಸ:**– ಸಾತಾರ, ಜತ್ತಗಳಂತಹ ಹೊರ ರಾಜ್ಯಗಲ ಗುಡ್ಡ–ಗಾಡು ಪ್ರದೇಶಗಳಿಗೆ ಹೋಗಿ, ಹೋಲಹಾಕಿ ಕಲ್ಲುಗಳನ್ನುರುಳಿಸಿ, ಸಾತಕಲ್ಲು ಬೇರೆ, 12 ಅಳತೆ ಕಲ್ಲು ಬೇರೆ, ಚಿಪುಗಲ್ಲು, ಖಡಿ ಕಲ್ಲುಗಳನ್ನು ಬೇರೆ–ಬೇರೆ ಮಾಡಿ ಒಡೆಯುತ್ತಾರೆ. ಈ ಕೆಲಸವನ್ನು ಮಹಿಳೆಯರು ಪುರುಷರು ಕೂಡಿಯೆ ಮಾಡುತ್ತಾರೆ. ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೂ ಸತತವಾಗಿ ಕೆಲಸಮಾಡುತ್ತಾರೆ. ದಿನಕ್ಕೆ 10 ಜೋಡಿಗಳು ಸೇರಿ 20 ಟ್ಯಾಕ್ಟರ ಕಲ್ಲುಗಳನ್ನು ಕಳುಹಿಸುತ್ತಾರೆ. 1 ಜೋಡಿಗೆ 400 ರೂಪಾಯಿ ದೊರೆಯುತ್ತದೆ.

* **ಕಾಲುಜೆ ನಿರ್ಮಾಣ ಕೆಲಸ (ಕೆನಲ):**– ನದಿ ನೀರು ಹರಿದುಕೊಂಡು ಹೋಗುವದಕ್ಕೆ ಮಾಡುವ ನೀರಿನ ಕಾಲುವೆ, ಈ ಕಾಲುವೆ ನಿರ್ಮಾಣ ಕೆಲಸಕ್ಕೆ ಮೊದಲು ಮಹಿಳೆಯರಿಗೆ ತೆಗೆದುಕೊಳ್ಳುತ್ತಿದ್ದರು. ಕಾಂಕ್ರೆಟ ಯಂತ್ರ ಬಂದ ನಂತರ ಈ ಕೆಲಸಕ್ಕೆ ತೆಗೆದುಕೊಳ್ಳುವದಿಲ್ಲ. ಅದರ ಬದಲಾಗಿ ಕಾಲುವೆ ನಿರ್ಮಾಣವಾದ ಕಟ್ಟಡಕ್ಕೆ ನೀರು ಹೊಡೆಯಲು ಹೊಗುತ್ತಾರೆ, ಕೆಲವರು ಕಾಲುವೆ ನಿರ್ಮಾಣದ ಕೆಲಸದಲ್ಲಿ ತೊಡಗಿದವರಿಗೆ ಅಡುಗೆಮಾಡಲು ಹೋಗುತ್ತಾರೆ. ದಿನಕ್ಕೆ ನೂರು–ನೂರು ರೊಟ್ಟಿ ಮಾಡುತ್ತಾರೆ. ಟೀ, ಕಾಫಿ, ಕಾಯಿಪಲ್ಯ ಸೋಸುವದು, ಜೋಳ–ಕಾಳಗಳನ್ನು ಸ್ವಚ್ಚಗೊಳಿಸುವದು, ಅಡುಗೆಮಾಡಿ ಬಡಿಸುವದು, ಪಾತ್ರೆ ತೋಳೆಯುವದು ಮಾಡುತ್ತಾರೆ, ಬೆಳಗ್ಗೆ 6 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಪ್ರತಿದಿನ 200 ರೂಪಾಯಿ ಕೂಲಿಯಂತೆ ದುಡಿಯುತ್ತಾರೆ.

ಈ ಎಲ್ಲಾ ಕೆಲಸಗಳು ಅತ್ಯಂತ ಕಠಿಣ ಕಲಸಗಳಾಗಿವೆ. ಇವರು ದೇಶದ ಅಭವೃದ್ಧಿಯ ಕೆಲಸವನ್ನು ಮಾಡುತ್ತಿದ್ದಾರೆ. ವಲಸೆ ಹೋಗಿ ಮಾಡುವ ಕೆಲಸದ ಕೂಲಿಯಿಂದ ಬದುಕು ಉತ್ತಮಗೊಳ್ಳುವ ಭರವಸೆಯು ಇರುವದಿಲ್ಲ. ಹೊಸ ಸ್ಥಳದೊಂದಿಗೆ ಹೊಂದಾಣಿಕೆಯಾಗಬೇಕು. ಅಲ್ಲಿಯ ಭಾಷೆ ಅಹಾರ ಎಲ್ಲವು ಬೇರೆಯಾಗಿರುತ್ತದೆ. ಯವದೇ ಸೌಲಭ್ಯವಿಲ್ಲದೆ ಅಸುರಕ್ಷಿತ ವಾತಾವರಣದಲ್ಲಿ ಬದುಕು ನಿರ್ವಹಿಸಬೇಕಾಗುತ್ತದೆ. ವಲಸೆ ಹೋಗುವ ನಿರ್ಧಾರ ಪುರುಷರು ತೆಗೆದುಕೊಳ್ಳುವದರಿಂದ ಮಹಿಳೆಯರು ಹೆಚ್ಚು ಕಷ್ಟ ಅನುಭವಿಸಬೇಕಾಗುತ್ತದೆ. ಕುಟುಂಬಕ್ಕೆ ಸಂಬಧಪಟ್ಟ ಎಲ್ಲ ಜವಾಬ್ದಾರಿ ಮಹಿಳೆಯರ ಮೇಲಿದೆ. ವಲಸೆ ಹೋದ ಪ್ರದೇಶದಲ್ಲಿ ಮಹಿಳೆಯರಿಗೆ ಸ್ಥಳದ ಅಭಾವ, ಸ್ನಾನದಕೋಣೆ, ಶೌಚಾಲಯ ಇರುವುದಿಲ್ಲ. ಇಂತಹ ಸಮಸ್ಯಗಳ ಜೊತೆಗೆ ಮಹಿಳೆಯರ ಆರೋಗ್ಯಕ್ಕೆ ಸಂಬಂಧಿಸಿದ ತಿಂಗಳ ಋತುಚಕ್ರವಾದಾಗ ವಾತಾವರನದ ಬದಲಾವಣೆಯಾಗಿ ಮುಟ್ಟಿನಲ್ಲಿ ಏರುಪೇರಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಋತುಚಕ್ರಕ್ಕೆ ಉಪಯೋಗಿಸುವಂತಹ ಬಟ್ಟೆಗಳನ್ನು ತೊಳೆದು ಪುರುಷರಿಗೆ ಕಾಣದಂತೆ ಒಣಗಿಸುವದು. ಹೊಲಸುಧೂಳೆನ್ನದೆ ಒಣಗಿಸಿದ ಬಟ್ಟೆಯನ್ನು ಮತ್ತೆ ಮುಂದಿನ ಋತುಚಕ್ರಕ್ಕೆ ಉಪಯೋಗಿಸಿ ಅನೆಕ ರೋಗಗಳಿಗೆ ಮಹಿಳೆಯರು ಗೊತ್ತಾಗದೆ ಆಹ್ವಾನ ನೀಡುತ್ತಾರೆ, ಇಂತಹ ಕೆಲವೊಂದು ಅಂಶಗಳು ಮಹಿಳೆಯರ್ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಇಂತಹ ಸಂದರ್ಭಗಳಲ್ಲಿ ಮಹಿಳೆಯರು ಆತಂಕಕ್ಕೆ ಒಳಗಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಬರ, ವಲಸೆ, ಬಡತನ ನಿರುದ್ಯೋಗದಂತಹ ಸಮಸ್ಯೆಗಳು ಮಹಿಳೆಯರನ್ನು ಬಾದಿಸುತ್ತಿವೆ. ಇಂತಹ ಪರಿಸ್ಥಿತಿಗಳನ್ನು ಎದುರಿಸುತ್ತಿರುವ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯದ ಸಮಸ್ಯೆಗಳನ್ನು ತಿಳಿಯಲು ಈ ಅಧ್ಯಯನ ಮಾಡುವದು ತುರ್ತಾಗಿದೆ.

ಅಧ್ಯಯನದ ಉದ್ದೇಶಗಳು:

1) ವಲಸೆಗಿರುವ ಕಾರಣಗಳನ್ನು ತಿಳಿಯುವದು

2) ವಲಸೆ ಹೋಗುವಂತಹ ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಮಟ್ಟದ ಹಿನ್ನಲೆಯನ್ನು ಅರಿಯುವದು.

3) ವಲಸೆ ಹೋದಂತಹ ಮಹಿಳೆಯರ ಆರೋಗ್ಯ ಮಟ್ಟವನ್ನು ತಿಳಿಯುವದು.

4) ವಲಸೆಯನ್ನು ತಡೆಯಲು ಸರ್ಕಾರ ಕೈಗೊಂಡ ಯೋಜನೆಗಳಾವವು, ಅವುಗಳ ಸಫಲತೆ ಮತ್ತು ವಿಫಲತೆಗೆ ಕಾರಣಗಳಾವವು ಎಂಬುದನ್ನು ವಿಮರ್ಶಿಸುವದು.

ಅಧ್ಯಯನದ ಮಹತ್ವ:– ಪ್ರಸ್ತುತ ಅಧ್ಯಯನವು ವಿಜಯಪುರ ಜಿಲ್ಲೆಯ ಗಡಿ ಭಾಗದ ಗ್ರಾಮೀಣ ಪ್ರದೇಶದ ವಲಸೆ ಮಹಿಳೆಯರ ಬದುಕು ಕುರಿತಾಗಿದೆ. ದೇಶದ ಆರ್ಥಿಕತೆಗೆ ಬಹುದೊಡ್ಡ ಕೊಡುಗೆಯನ್ನು ನೀಡುತ್ತಿರುವದು ಅಸಂಘಟಿತ ವಲಯ. ಈ ಅಸಂಘಟಿತ ವಲಯದಲ್ಲಿ ವಲಸೆ ಕಾರ್ಮಿಕರ ಸಂಖ್ಯೆ ಬಹುದೊಡ್ಡದಿದೆ. ಈ ಕಾರ್ಮಿಕರಿಗೆ ಯಾವುದೇ ಮೂಲಭೂತ ಸೌಕರ್ಯಗಳಲ್ಲದೇ ಜೀವನ ಸಾಗಿಸುತ್ತಿರುತ್ತಾರೆ. ಇವರಿಗೆ ಸಂವಿಧಾನ ಕೂಡ ಮಾಡಿರುವ ಯಾವ ಹಕ್ಕುಗಳನ್ನು ನೀಡದೇ ಅತ್ಯಂತ ಅತಂತ್ರವಾದ, ಅಭದ್ರವಾದ ಬದುಕನ್ನು ಇವರು ನಡೆಸುತ್ತಾರೆ, ಅದರಲ್ಲೂ ವಲಸೆ ಕಾರ್ಮಿಕ ಮಹಿಳೆಯರ ಬದುಕು ಅತ್ಯಂತ ಧಾರುಣವಾಗಿದೆ. ನೀರು, ಶೌಚಾಲಯ, ಸ್ನಾನದಕೋಣೆ ಇಲ್ಲದೇ ಪರದಾಡುತ್ತಾರೆ. ಇದಕ್ಕೆ ಕಾರಣವಾಗಿರುವದು ನಮ್ಮ

ದೇಶದ ಆರ್ಥಿಕ ನೀತಿ, ಬಡತನ, ನಿರುದ್ಯೋಗ ಮುಂತಾದವು.

ಗ್ರಾಮೀಣ ಭಾಗದಲ್ಲಿ ಜನರ ಜೀವಾಳವೆ ಕೃಷಿ, ಕೃಷಿ ಕಾರ್ಮಿಕ ಮಹಿಳೆಯರು ಕೃಷಿ ಕೆಲಸದ ಜೊತೆಗೆ ಹಳ್ಳಿಯಲ್ಲಿ ದೊರಕುವ ಇತರ ಕೆಲಸಗಳಲ್ಲಿ ತೊಡಗಿರುತ್ತಾರೆ. ಈ ಕ್ಷೇತ್ರದಲ್ಲಿ ಹಗಲಿರಳು ಶ್ರಮಿಸಿದರು ಅನಿಶ್ಚಿತ, ಅಕಾಲಿಕ ಮಹಿಳೆಯಿಂದಾಗಿ ವರ್ಷದ ಕೆಲವು ತಿಂಗಳಲ್ಲಿ ಮಾತ್ರ ಕೆಲಸವಿರುತ್ತದೆ. ಉಳಿದ 6–7 ತಿಂಗಳವರೆಗೂ ಕೆಲಸವಿರುವದಿಲ್ಲ. ಅಲ್ಲದೇ ಬೇಸಿಗೆಕಾಲದಲ್ಲಿ ಜನ–ಜಾನುವಾರುಗಳಿಗೂ ನೀರಿಲ್ಲದೆ ಪರದಾಡುತ್ತಾರೆ. ಸತತ ಬರದ ಪರಿಸ್ಥಿತಿ ನಿರ್ಮಾಣವಾಗಿ ದೇಶದ ಬೆನ್ನೆಲಬು ಎನಿಸಿದ್ದ ಉತ್ಪಾದಕ ವರ್ಗವೇ ಆತ್ಮಹತ್ಯೆ ಹಾದಿಯತ್ತ ಸಾಗಿದೆ. ಇನ್ನೊಂದು ಕಡೆ ರೈತರ ಹೊಲಗಳನ್ನೇ ಅವಲಂಬಿಸಿ ದಿನಗೂಲಿ ಕೆಲಸ ಮಾಡಿ ಬದುಕು ನಡೆಸುವವರ ಸ್ಥಿತಿ ಚಿಂತಾದಾಯಕವಾಗಿದೆ. ತಮ್ಮ ಬದುಕು ನಿರ್ವಹನೆಗಾಗಿ ಕುಟುಂಬ ಸಮೇತವಾಗಿ ವಲಸೆ ಹೋಗುವದನ್ನು ಕಾಣಬಹುದು. ವಲಸೆ ಹೋದ ಪ್ರದೇಶದಲ್ಲಿ ಇವರೆಲ್ಲರೂ ಸರ್ಕಾರದ ಅಭಿವೃದ್ಧಿ ಭಾಗವಾಗಿರುವ ಕೆಲಸಗಳನ್ನು ಮಾಡುತ್ತಾರೆ. ಯಾವುದೇ ಸೌಲಭ್ಯಗಳಿಲ್ಲದ ಅಸುರಕ್ಷಿತ ಸ್ಥಳದಲ್ಲಿ ಅಭದ್ರವಾದ ಬದುಕನ್ನು ನಡಿಸುತ್ತಾರೆ. ಬಂಡವಾಳಶಾಹಿ ಮತ್ತು ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳಿಂದಾಗಿ ಇವರ ಬದುಕು ಸಾಮಾಜಿಕವಾಗಿ, ಆರ್ಥಿಕವಾಗಿ, ಸಂಕಟಕ್ಕೆ ಸಿಕ್ಕಿಹಾಕಿಕೊಂಡಿದೆ. ಪ್ರಸ್ತುತ ಪ್ರಬಂದವು ವಲಸೆ ಮಹಿಳೆಯರ ಬದುಕಿನ ಕುರಿತಾಗಿದ್ದು, ಈ ಮಹಿಳೆಯರು ಎದುರಿಸುತ್ತಿರುವ ಸಮಸ್ಯಗಳನ್ನು ಮಹಿಳಾ ದೃಷ್ಟಿಕೋನದಿಂದ ಅರಿಯುವುದು ಮುಖ್ಯ ಉದ್ದೇಶವಾಗಿದೆ. ಜೊತೆಗೆ ಮಹಿಳೆಯರ ಸಮಸ್ಯೆಗಲ ಮೇಲೆ ಈ ಪ್ರಬಂಧವು ಬೆಳಕನ್ನು ಚೆಲ್ಲುತ್ತದೆ.

ಅಧ್ಯಯನದ ಕ್ಷೇತ್ರ:– ಕರ್ನಾಟಕ ರಾಜ್ಯದ ವಿಜಯಪುರ ಜೆಲ್ಲೆಯ ಐತಿಹಾಸಿಕವಾಗಿ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ ಮತ್ತು ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ. ಈ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 10541 ಚದರ ಕಿ.ಲೋ.ಮೀ, ಭೌಗೋಳಿಕವಾಗಿ ಈ ಜಿಲ್ಲೆಯು ಒಣ ಹವೆಯನ್ನು ಹೊಂದಿದೆ. ಬಯಲು ಸೀಮೆಯ ನಾಡಾಗಿದೆ. ಪಂಚನದಿಗಳ ಹೊಂದಿದ್ದರೂ ಬರದ ನಾಡೆಂದು ಕರೆಸಿಕೊಳ್ಳುತ್ತದೆ. ಹವಾಗುಣದ ಪ್ರಕಾರ ಬೇಸಿಗೆ ಕಾಲದಲ್ಲಿ ಅತಿ ಬಿಸಿಲು ಇರುತ್ತದೆ. ಏಪ್ರಿಲ್ – ಮೇ ತಿಂಗಳಲ್ಲಿ 40 ರಿಂದ 43 ಸೆಲ್ಸಿಯಸ್ ವರೆಗೂ ಇರುತ್ತದೆ. ದೇಶದಲ್ಲಿ ಹೆಚ್ಚು ಬರ ಕಂಡ ಜಿಲ್ಲೆಗಳ ಪಟ್ಟಿಯಲ್ಲಿ ವಿಜಯಪುರ ಜಿಲ್ಲೆ ಮೊದಲನೆಯ ಸಾಲಿನಲ್ಲಿ ಬರುತ್ತದೆ. ಬೇಸಿಗೆ ಕಾಲದಲ್ಲಿ ಕುಡಿಯಲು ನೀರಿರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ದುಡಿಯುವವರಿಗೆ ಕೆಲಸವಿಲ್ಲದೆ ಕೆಲಸ ಅರಸಿ 8–10 ತಿಂಗಳು ಬೇರೆ ಬೇರೆ ರಾಜ್ಯಗಳ ಕಡೆಗೆ ವಲಸೆ ಹೊಗುತ್ತಿದ್ದಾರೆ.

ಪ್ರಸ್ತುತ ಅಧ್ಯಯನವು ವಿಜಯಪುರ ಜಿಲ್ಲೆಯ ಗಡಿ ಭಾಗದ ಗ್ರಾಮೀಣ ಪ್ರದೇಶದ ವಲಸೆ ಮಹಿಳೆಯರ ಕುರಿತಾಗಿದೆ. ಕರ್ನಾಟಕದಲ್ಲಿಯೇ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕವೆಂದು ವರ್ಗೀಕರಣಗೊಂಡಿದೆ. ಕರಾವಳ ಕರ್ನಾಟಕ, ಹಳೆಯ ಮೈಸೂರು ಕರ್ನಾಟಕ, ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ ಹೀಗೆ ವಿಂಗಡಿಕರಣ ಒಂದು ರೂಪವಾಗಿ ಬೆಳೆದು ಬಂದಿದೆ. ಇವುಗಳೊಂದಿಗೆ ಮಹಾರಾಷ್ಟ್ರ, ತೆಲಂಗಾಣ, ಹೈದರಾಬಾದ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ ಮತ್ತು ಗೋವಾಗಳ ಗಡಿ ರೇಖೆಯೊಂದಿಗೆ ಕರ್ನಾಟಕ ಹೊಂದಿಕೊಂಡಿದೆ. ಭೌಗೋಳಿಕವಾಗಿ ಗುರುತಿಸಿ 'ಗಡಿನಾಡು' ಎಂದು ಕರೆದು ಅಲ್ಲಗೊಂದು ವಿಶೇಷ ಕಾಳಜಿ ತೋರುವ ನೆಲ, ಜಲ, ಶಿಕ್ಷಣ, ಸಂಸ್ಕೃತಿಯ ಬಗ್ಗೆ ಮಾತನಾಡುವಾಗ ಗಡಿನಾಡು ಎಂದು ವಿಶೇಷ ಶೀರ್ಷಿಕೆ ಕೂಡಿಸಿಕೊಂಡು ಮಾತನಾಡುತ್ತೇವೆ. ಸರ್ಕಾರದ ಮಟ್ಟದಲ್ಲೂ ಶಾಸನಾತ್ಮಕ ರೂಪ ತಾಳಿ ಸೌಕರ್ಯ ಅಭಿವೃದ್ಧಿ ಮಾತು ಬಂದಾಗಲೆಲ್ಲ ಗಡಿನಾಡಿನ ಭಾಗವನ್ನು ಪ್ರತ್ಯೇಕವಾಗಿಯೇ ಪರಿಗಣಿಸುವ ಸಂದರ್ಭಗಳು ಪ್ರಸ್ತುತ ರೂಡಿಯಲ್ಲಿವೆ.

ಕರ್ನಾಟಕದಲ್ಲಿ ಒಟ್ಟು 52 ತಾಲ್ಲೂಕುಗಳನ್ನು ಗಡಿ ತಾಲ್ಲೂಕುಗಳೆಂದು ಕರ್ನಾಟಕ ಸರ್ಕಾರವೇ ಗುರುತಿಸಿದೆ. ಪ್ರಸ್ತುತ ಅಧ್ಯಯನಕ್ಕೆ ವಿಜಯಪುರ ಮತ್ತು ಇಂಡಿ ತಾಲ್ಲೂಕು ಗಡಿ ತಾಲ್ಲೂಕುಗಳಾಗಿವೆ. ವಿಜಯಪುರ ತಾಲ್ಲೂಕು 118 ಹಳ್ಳಿಗಳನ್ನು ಮತ್ತು 46 ಗ್ರಾಮ ಪಂಚಾಯತಿಗಳನ್ನು ಹೊಂದಿದೆ. ಇಂಡಿ 129 ಹಳ್ಳಿಗಳನ್ನು ಮತ್ತು 44 ಗ್ರಾಮ ಪಂಚಾಯತಿಗಳನ್ನು ಹೊಂದಿದೆ. ಕರ್ನಾಟಕದ ಉತ್ತರದ ಗಡಿಯಲ್ಲಿರುವ ಇಂಡಿ ತಾಲ್ಲೂಕಿನ ಉತ್ತರಕ್ಕೆ ಮಹಾರಾಷ್ಟ್ರದ ಸೋಲ್ಲಾಪುರ ಜಿಲ್ಲೆಯಿದೆ. ಪಶ್ಚಿಮಕ್ಕೆ ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯಿದೆ. ಈ ಗಡಿ ಭಾಗವು ಗ್ರಾಮೀಣ ಪ್ರದೇಶದಿಂದ ಕೂಡಿದೆ. ಈ ಭಾಗದ ಜನರು ಬಡವರಾಗಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಸುಮಾರು 75% ಜನರು ಕೆಲಸ ಮಾಡುತ್ತಾರೆ ಕೇವಲ 15% ಭೂಮಿ ನೀರಾವರಿ ಹೊಂದಿದೆ. ಉಳಿದ 85% ಭೂಮಿ ಮಳೆಯನ್ನೇ ಅವಲಂಬಿಸಿದೆ. ಇಲ್ಲಿಯ ವ್ಯವಸಾಯವು ಮಳೆಯ ಮೇಲೆ ಅವಲಂಬಿತವಾಗಿದೆ. ಪ್ರತಿ ವರ್ಷ 300–600 ಮಿ. ಮಿ. ಗಳಷ್ಟು ಮಳೆ ಆಗುತ್ತದೆ. ಕುಡಿಯುವ ನೀರಿನ ತೀವ್ರ ಕೊರತೆ ಇಲ್ಲಿ ಕಂಡು ಬರುತ್ತದೆ. ಮಳೆಯ ಅನಿಶ್ಚಿತತೆಯಿಂದಾಗಿ ಬರಗಾಲ, ವಲಸೆ, ನಿರುದ್ಯೋಗಗಳಂತಹ ಸಾಕಷ್ಟು ಸಮಸ್ಯೆಗಳು ಇಲ್ಲಿ ಕಂಡು ಬರುತ್ತವೆ.

ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ನಡುವೆ ಭೀಮಾ ನದಿ ಹರಿದಿದೆ. ಈ ನದಿಯು ಗಡಿ ಭಾಗದ ಗ್ರಾಮೀಣ ಪ್ರದೇಶದ ಜನರ ಜೀವನದಿಯಾಗಿದೆ. ಕೃಷ್ಣಾ ನದಿಯ ಬಹುದೊಡ್ಡ ಉಪನದಿಯಾದ ಭೀಮಾ ನದಿಯು, ಮಹಾರಾಷ್ಟ್ರದಲ್ಲಿಯ ಸಹ್ಯಾದ್ರಿ ಪರ್ವತ ಶ್ರೇಣಿಗಳಲ್ಲಿ ಪುಣೆ ಜಿಲ್ಲೆಯ ಭೀಮಾಶಂಕರ ಎಂಬಲ್ಲಿ ಹುಟ್ಟಿ ಸುಮಾರು 866 ಕಿ.ಮೀ. ಹರಿದು ಕರ್ನಾಟಕ–ಆಂಧ್ರದ ಗಡಿಯಲ್ಲಿ ಕೃಷ್ಣಾ ನದಿಗೆ ಕೂಡುತ್ತದೆ. ಸುಮಾರು 486 ಕಿ. ಮೀ. ನಷ್ಟು ಮಹಾರಾಷ್ಟ್ರದಲ್ಲಿ ಹರಿಯುತ್ತದೆ. ಸುಮಾರು 83 ಕಿ. ಮೀ. ಗಳಷ್ಟು ಅಂತರವನ್ನು ಕರ್ನಾಟಕ–ಮಹಾರಾಷ್ಟ್ರ ಉಭಯ ರಾಜ್ಯಗಳ ಗಡಿಗಳಿಗೆ ಹೊಂದಿ ಹರಿದು ಉಭಯ ರಾಜ್ಯಗಳ ನೈಸರ್ಗಿಕ ಗಡಿಯನ್ನು ನಿರ್ಮಿಸಿದೆ, ಭೀಮಾ ನದಿಯ ಒಟ್ಟಾರೆ ಜಲಾಯನ ಪ್ರದೇಶ 1,78, 87,960 ಎಕರೆಗಳಷ್ಟಿದೆ, ಅದರಲ್ಲಿ 1,20,83,200 ಎಕರೆ ಮಹಾರಾಷ್ಟ್ರದಲ್ಲಿ 47,43,680 ಎಕರೆ ಕರ್ನಾಟಕದಲ್ಲಿ ಉಳಿದ 6,22,080 ಎಕರೆ ಆಂಧ್ರಪ್ರದೇಶದಲ್ಲಿ ಬರುತ್ತದೆ. ಭೀಮಾ ನದಿಯು 351 ಟಿಎಂಸಿ ನೀರಿನ ಸಾಮರ್ಥವನ್ನು ಹೊಂದಿದೆ. ಅದರಲ್ಲಿ 300.6

ಟಿಎಂಸಿ ಮಹಾರಾಷ್ಟ್ರಕ್ಕೆ, 45.3 ಟಿಎಂಸಿ ಕರ್ನಾಟಕಕ್ಕೆ ಮತ್ತು ಉಳಿದ 5.1 ಟಿಎಂಸಿ ನೀರನ್ನು ಆಂಧ್ರಪ್ರದೇಶಕ್ಕೆ ನಿಗದಿ ಮಾಡಿದೆ.

ತನಗೆ ನಿಗದಿಪಡಿಸಿದ ಭೀಮಾನದಿಯ ನೀರಿನಲ್ಲಿ ಮಹಾರಾಷ್ಟ್ರ ರಾಜ್ಯವು 90 ಟಿಎಂಸಿ ನೀರಿಗಿಂತ ಅಧಿಕ ನೀರನ್ನು ಭೀಮಾ ನದಿಯ ಮುಖ್ಯ ವಾಹಿನಿಯಿಂದ ಬಳಸಬಾರದು. ಅದರಂತೆ ಕರ್ನಾಟಕಕ್ಕೂ ಭೀಮಾ ನದಿಯ ನೀರಿನಲ್ಲಿ 15 ಟಿಎಂಸಿ ಗಿಂತ ಅಧಿಕ ನೀರು ಬಳಸಬಾರದೆಂದು ನ್ಯಾಯ ಮೂರ್ತಿ ಬಚಾವತರ್ ಅಧ್ಯಕ್ಷತೆಯ ಕೃಷ್ಣಾ ಜಲವಿವಾದ ಪೀಠವು ಸ್ಪಷ್ಟ ಸೂಚನೆ ನೀಡಿದೆ.

ಮಹಾರಾಷ್ಟ್ರ ಸರ್ಕಾರವು ಭೀಮಾ ನದಿಗೆ ಅಡ್ಡಲಾಗಿ 322 ಕಿ.ಮೀ ಅಂತರದಲ್ಲಿ 'ಉಜನಿ' ಎಂಬಲಿ ಬಹುದೊಡ್ಡ ಅಣೆಕಟ್ಟನ್ನು ಕಟ್ಟಿದೆ. ಜೊತೆಗೆ 90.20 ಟಿಎಂಸಿ ನೀರಿನ ಬಳಕೆಯ ಉಜನಿ ಅಣೆಕಟ್ಟಿನ ಎತ್ತರವನ್ನು ಅಧಿಕಗೊಳಿಸಿ ಮತ್ತೆ 7 ಟಿಎಂಸಿ ನಿರಿನ ಸಂಗ್ರಹದ ಸಾಮರ್ಥವನ್ನು ಹೆಚ್ಚಿಸಿಕೊಂಡಿದೆ. ಉಜನಿ ಅಣೆಕಟ್ಟನ್ನು ಮೂರು ಮೀಟರು ಎತ್ತರಗೊಳಿಸಿದ್ದರಿಂದ ಭೀಮಾ-ಸೀನಾನದಿಯ ಜೋಡಣೆಯ ಕೆಳಗಡೆ 30 ಕ್ಕಿಂತ ಅಧಿಕ ಬ್ಯಾರೇಜುಗಳನ್ನು ಕಟ್ಟಿ ನೀರು ನಿಲ್ಲುಸುವದರಿಂದ ಮಹಾರಾಷ್ಟ್ರದ ಗಡಿ ದಾಟಿ ನೀರು ಬರುತ್ತಿಲ್ಲ. ಅದರೆ ಮಹಾರಾಷ್ಟ್ರವು ಭೀಮಾ ನದಿ ತಟದ (ವಿಜಯಪುರ) ಉಳಿದ ಜನರಿಗೆ ಅನ್ಯಾಯವಾಗುವಂತೆ ನೀರಿನ ಬಳಕೆಯನ್ನು ವ್ಯವಸ್ಥಿತಗೊಳಿಸಿರುವದು ಇಂದು ಎಲ್ಲಿಲ್ಲದ ಅಂತಕ್ಕೆ ಕಾರಣವಾಗಿದೆ.

ಕರ್ನಾಟಕದಲ್ಲಿ ಭೀಮಾನದಿಯ ಉಪನದಿಗಳ ಮೇಲೆ ಕರ್ನಾಟಕ ಸರ್ಕಾರವು ನೀರಾವರಿ ಯೋಜನೆಗಳನ್ನು ರೂಪಿಸಿದೆ. ಆದರೆ ಯಾವ ಯೋಜನೆಗಳೂ ಈ 50 ವರ್ಷಗಳಲ್ಲಿ ಪೂರ್ಣಗೊಂಡಿಲ್ಲ. ಕಳೆದ 10 ವರ್ಷಗಳಿಂದ ಭೀಮಾನದಿ ಬತ್ತಿ ಹೋಗಿದೆ ಮಳೆಗಾಲದಲ್ಲೂ ನೀರು ಹರಿಯುವದು ಕಷ್ಟವಾಗಿದೆ. ಭೀಮಾನದಿಯ ಸಣ್ಣ-ಪುಟ್ಟ ನದಿ-ತೊರೆಗಳು ಬತ್ತಿ ಹೋಗಿ ಇಲ್ಲಿಯ ಜನ ತುಂಬಾ ಕಷ್ಟ ಪಡುತ್ತಿದ್ದಾರೆ. ಗಡಿ ವಿವಾದದಿಂದಾಗಿ, ನೀರಿನ ವಿವಾದದಿಂದಾಗಿ, ಮೂಲಸೌಕರ್ಯಗಳಲ್ಲದೆ ಗಡಿ ಪ್ರದೇಶಗಳ ಜನರನ್ನು ಸರ್ಕಾರ ನಿರ್ಲಕ್ಷಿಸುತ್ತಿದೆ. ರಾಜಕಾರಣಿಗಳು, ಅಧಿಕಾರಿಗಳು ಜನಸಾಮಾನ್ಯರ ನೋವು, ಕಷ್ಟ ಸಮಸ್ಯೆಗಳ ಬಗ್ಗೆ ನಿರ್ಲಕ್ಷವಹಿಸುತ್ತಿದ್ದಾರೆ. ಚುನಾವಣೆಗಳು ಬಂದಾಗ ಮಾತ್ರ ವಲಸೆ ಹೋದವರು ನೆನಪಾಗುತ್ತಾರೆ. ಇಂತಹ ಪರಿಸ್ಥಿತಿಗಳನ್ನು ಏದುರಿಸುತ್ತಿರುವ ಗಡಿ ಪ್ರದೇಶದ ವಲಸೆ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯದ ಸಮಸ್ಯೆಗಳನ್ನು ತಿಳಿದುಕೊಳ್ಳಲು ಈ ಭಾಗವನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಳ್ಳುತ್ತೇನೆ.

ಪ್ರಕರಣ ಅಧ್ಯಯನ;

1) ಸುಮಿತ್ರಾಳ ಬದುಕು:- ಇವರು ಮೂಲತಃ ಇಂಡಿ ತಾಲ್ಲೂಕಿನ ಸಾವಲಸಂಗ ಗ್ರಾಮದವರು. ಐದು ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳಲ್ಲಿ ಸುಮಿತ್ರಾ ಆರನೇಯವಳು, ತುಂಬಾ ಬಡತನವಿರುವ ಕುಟುಂಬದಲ್ಲಿ ಜನಿಸಿದಳು, ತಾಯಿ ಇಟಾಬಾಯಿ ತಂದೆ ಭೀಮಪ್ಪ ಊರಿನ ಗೌಡರ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಬರುವ ಅದಾಯ ಜೀವನ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಮಕ್ಕಳಗೂ ಕೆಲಸಕ್ಕೆ ಕರೆದುಕೊಂಡು ಹೋಗಿ ಬದುಕು ಕಟ್ಟಿಕೊಂಡಿದ್ದರು. ಹಾಗಾಗಿ ಮಕ್ಕಳ್ಳಗ್ಯಾರಿಗೂ ಶಿಕ್ಷಣ ಕೊಡಿಸಲಿಲ್ಲ. ಹಿರಿಯ ಮಗನಿಗೆ ಇಟಾಬಾಯಿಯ ತವರು ಮನೆಯವರು ಕರೆದುಕೊಂಡು ಹೋಗಿ ಶಾಲೆಗೆ ಕಳುಹಿಸಿ ಎಸ್.ಎಸ್.ಎಲ್.ಸಿ ವರೆಗೆ ಓದಿಸಿದ್ದರು. ಇಟಾಬಾಯಿಯ ಗಂಡ ದಿನಾಲು ಹೊಡೆಯುವದು, ಬಡೆಯುವದು ಜಗಳ ತೆಗೆಯುವದು ಮಾಡುತ್ತಿದ್ದ. ಇದೂ ಯಾವಾಗಲೂ ಇದ್ದುದ್ದು ಎಂದು ತೆಲೆಕೆಡಿಸಿಕೊಳ್ಳದೇ, ಶ್ರಮ ಪಟ್ಟು ಕೆಲಸ ಮಾಡಿ ದುಡ್ಡು ಮಾಡಿಕೊಂಡು ಎಲ್ಲಾ ಮಕ್ಕಳಗೂ ಮದುವೇ ಮಾಡುತ್ತಾಳೆ. ಸುಮಿತ್ರಾಳನ್ನು ಅವರ ಊರಿನ ಸಮೀಪದ ಗ್ರಾಮ ಹಂಜಗಿಗೆ ಸೋದರ ಮಾವನ ಮಗನಿಗೆ ಮಾದುವೆ ಮಾಡಿಕೊಡುತ್ತಾರೆ.

ಆಗ ಅವಳಿಗೆ 15 ವರ್ಷ, ಇಲ್ಲಿಯವರೆಗೆ ಅಕ್ಕ-ತಂಗಿಯರ ಜೊತೆ ಖುಷಿಯಾಗಿದ್ದ ಸುಮಿತ್ರಾ ಹೋಗಿ ಐದಾರು ತಿಂಗಳಾಗಿಲ್ಲ ಅವಳ ಗಂಡ ಹಿಂಸೆಕೊಡಲು ಪ್ರಾರಂಭಿಸಿದ ಅಕ್ಕ-ತಂಗಿಯರ ಗಂಡಂದಿರ ಮೇಲೆ ಅನುಮಾನ ಪಡುವದು, ನಾನು ಇನ್ನೊಂದು ಮದುವೆ ಅಗ್ತಿನಿ ಅಂಥ ಹೊಡೆದು-ಬಡೆದು ತವರು ಮನೆಗೆ ಓಡಿಸುತ್ತಿದ್ದ. ಹೀಗೆ ಜೀವನ ಸಾಗುತ್ತಿತ್ತು ಕೆಲವು ದಿನಗಳ ನಂತರ ಜಗಳವಾಡಿ ಊರಿಗೆ ಬರುತ್ತಾಳೆ. ಆಗ ಸುಮಿತ್ರಾ ತುಂಬು ಗರ್ಭಿಣಿಯಾಗಿದ್ದಳು, ಹೆರಿಗೆಯಾದ ನಂತರ ಎಲ್ಲರೂ ಸೇರಿ ಪಂಚಾಯತಿ ಮಾಡಿ ಜಗಳವನ್ನು ರಾಜಿ ಮಾಡಿ ಕಳುಹಿಸುತ್ತಾರೆ. ಚೊಚ್ಚಲ ಮಗು ಹೆಣ್ಣಾಗಿರುವ ಕಾರಣ ಅತ್ತೆ-ಮಾವ ಕೂಡಾ ಸೇರಲಾರದೇ ಅವಳನ್ನು ನಮ್ಮ ಮಾತು ಕೇಳುವದಿಲ್ಲ ಅಂತ ಕಿರುಕುಳ ಕೊಡಲು ಶುರುಮಾಡಿದರು. ಇದೆಲ್ಲವನ್ನು ಸಹಿಸಿಕೊಂಡು ಸಾಕಾಗಿ ತವರು ಮನೆಗೆ ಬರಬೇಕೆಂದರೆ ಅಲ್ಲಿಯ ಪರಿಸ್ಥಿತಿ ಸರಿಯಾಗಿಲ್ಲ. ಅನಾರೋಗ್ಯದಿಮ್ದ ಅಣ್ಣ ತೀರಿಹೋಗಿದ್ದ. ಅವನ ಚಿಂತೆಯಲ್ಲಿ ತಾಯಿ ಕೊರಗುತ್ತಿದ್ದಾಳು. ಹಿರಿಯ ಅಣ್ಣ ಕುಡಿತದ ಚಟಕ್ಕೆ ಬಲಿಯಾಗಿದ್ದಾನೆ. ಇದೆಲ್ಲವನ್ನು ನೆನಪಿಸಿಕೊಂಡು ಸುಮ್ಮನೆ ಇರುತ್ತಿದ್ದಳು. ಎರಡನೇ ಮಗುವಿಗೆ ಗರ್ಭಿಣಿ ಇದ್ದಾಗ ಗಂಡ ಮಾವನ ಜೊತೆ ಜಗಳಾಗಿ ಎಲ್ಲರೂ ಸೇರಿ ಹೊಡೆದು ಹೊರಗೆ ಹಾಕುತ್ತಾರೆ. ವಿಧಿ ಇಲ್ಲದೇ ತವರು ಮನೆಗೆ ಬರುತ್ತಾಳೆ. ವಿದವೆಯಾದ ಹಿರಿಯ ಅಕ್ಕನ ಜೊತೆ ಸೇರಿ ಕೆನಲ ಕೆಲಸಕ್ಕೆ ಮೈಸೂರಿಗೆ ವಲಸೆ ಹೋಗಲು ತಯಾರಾಗುತ್ತಾಳೆ.

ಮುಂಚಿತವಾಗಿ 5000 ಹಣ ತೆಗೆದುಕೊಂಡು ಜೋಳ, ಬೆಳೆ-ಕಾಳು ಬದುಕಿಗೆ ಬೇಕಾದುದುನೆಲ್ಲ ತೆಗೆದುಕೊಂಡು ವಲಸೆ ಹೋಗುತ್ತಾಳೆ. ಹಾಳು ಬಿದ್ದ ಬೇನಾಮಿ ಜಾಗದೊಳಗೆ ಜೋಪಡಿ ಹಾಕಿಕೊಂಡು ಇರುತ್ತಾರೆ. ಕಟ್ಟಡಗಳಿಗೆ ನೀರು ಹೊಡೆಅಲು 150 ರೂಪಾಯಿ ಕೂಲಿಯಂತೆ ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ಹೋಗುತ್ತಾಳೆ. ಮೂರು ತಿಂಗಳಾದನಂತರ ವಲಸೆ ಹೋದ ಪ್ರದೇಶದಲ್ಲಿಯೇ ಹೆರಿಗೆಯಾಗುತ್ತದೆ. ಸರಿಯಾದ ಚಿಕಿತ್ಸೆ ದೊರೆಯದ ಕಾರಣ ಅವತ್ತು ತಾಯಿ ಮಗು ಇಬ್ಬರು ಮರಣಹೊಂದುವ ಸಾಧ್ಯತೆ ಇತ್ತು. ಆದರೆ ಮಗು ಬದುಕಲಿಲ್ಲ. ಸ್ವಲ್ಪ ದಿನಗಳು ಕಳೆದ ನಂತರ ಸುಮಿತ್ರಾಳನ್ನು ಮತ್ತೆ ಎಲ್ಲರೂ ಸೇರಿ ಹಂಜಗಿಗೆ ಕರೆದುಕೊಂಡು

ಹೋಗಿ ಸಮಾಧಾನ ಮಾಡಿ ಬಿಟ್ಟು ಬರುತ್ತಾರೆ.

ಆದರೆ ಇಟಾಬಾಯಿ ಮಗಳಿಗೆ ಕಳುಹಿಸಲು ಎಷ್ಟೇ ವಿರೋಧಪಡಿಸಿದರು ಅವಳ ಮಾತು ಯಾರು ಕೇಳುವುದಿಲ್ಲ. 'ನನ್ನ ಮಗಳು ನನ್ನ ಹತ್ರನೇ ಇರಲಿ ನನಗ ಅಕಿ ವಜ್ಜಿ ಅಲ್ಲ' ಅಂತ ಹೇಳಿದರು ಯಾರು ಅವಳ ಮಾತು ಕೇಳುವುದಿಲ್ಲ. ಸ್ವಲ್ಪ ದಿನಗಳೂ ಕಳೆದ ನಂತರ ಮತ್ತೆ ಗರ್ಭಿಣಿಯಾಗುತ್ತಾಳೆ ದಿನಾಲೂ ನಿಲ್ಲದ ಕಿರುಕುಳ ಸಾಕಾಗಿ 2 ವರ್ಷದ ಮಗಳನ್ನು ಕರೆದುಕೊಂಡು ೫೦,೦೦೦ ರೂಪಾಯಿ ಕಬ್ಬಿನ ತೊಡಿ ಕೆಲಸದ ಇಸಾರ ತೆಗೆದುಕೊಂಡು ಮಹಾರಾಷ್ಟ್ರದ ಸಾತಾರಕ್ಕೆ ಕಬ್ಬಿನ ತೋಡಿ ತಂಡದ ಜೊತೆ ಹೋಗಿ ಆರು ತಿಂಗಳು ಕೆಲಸ ಮಾಡಿ ಬರುತ್ತಾಳೆ. ಅಷ್ಟರಲ್ಲಿ ಅವಳ ಗಂಡ ಬೇರೊಬ್ಬಳನ್ನು ಮದುವೆಯಾದ ಸುದ್ದಿ ಮುಟ್ಟಿರುತ್ತದೆ. ಆದರೂ ಯಾರು ಏನು ಹೇಳಲಿಲ್ಲ. ಕ್ರಮೇಣ ಅವಳ ತವರೂರಲ್ಲೆ ಸರ್ಕಾರಿ ಜಾಗದೊಳಗೆ ಪತ್ರಾಸದಿಂದ ಆಶ್ರಮ ಮಾಡಿಕೊಂಡು ಮನೆಗೆ ಬೇಕಾದ ಎಲ್ಲಾ ವಸ್ತುಗಳನ್ನು ಪಾತ್ರೆಗಳನ್ನು ಒಂದೊಂದಾಗಿ ತೆಗೆದುಕೊಳ್ಳುತ್ತಾಳೆ. ಅವಲ ಹೆರಿಗೆಯಾದ ನಂತರ ತಾಯಿ ಇಟಾಬಾಯಿ ಇವಳ ಜೊತೆನೇ ಇದ್ದು ಅಡ್ಯೆಕೆ ಮಾಡುತಾಳೆ. ತಾಯಿ ಮಗು ಇಬ್ಬರು ಆರೋಗ್ಯದಿಂದ ಇರುತ್ತಾರೆ. ಮಗ ಹುಟ್ಟಿದ ಸುದ್ದಿ ಕಳುಹಿಸಿದರೂ ಯಾಗು ಬಂದು ಹೋಗುವುದಿಲ್ಲ. ಗಂಡನ ಬಗ್ಗೆ ಸುಮಿತ್ರಾ ಕಿಂಚಿತ್ತು ತಲೆಕೆಡಿಸಿಕೊಳ್ಳುವದಿಲ್ಲ. 'ನಾನು ನನ್ನ ಮಕ್ಕಳು ಯಾವುದೇ ಕಿರಿಕಿರಿ ಇಲ್ಲದೇ ಎರಡೊತ್ತು ಊಟಾ ಮಾಡಿ ಆರಾಮಾಗಿ ಇದ್ದಿವಿ ಸಾಕು ಎನ್ನುತ್ತಾಳೆ'. ಮಳೆಗಾಲ ಇರುವರೆಗು ಊರಲ್ಲಿಯೇ ತಾಯಿ ಇಟಾಬಾಯಿ ಮತ್ತು ಸುಮಿತ್ರಾ ಕೂಲಿ ಕೆಲಸ ಮಾಡುತ್ತಾರೆ. ಹೆಸರು ಕಾಳು, ಸೇಂಗಾದ ಕಾಳು, ಜೋಳ ಎಲ್ಲದರ ಸುಗ್ಗಿಕಾಲ ಮುಗಿಸಿಕೊಂಡು, ಆರು ತಿಂಗಳು ಕಬ್ಬಿನ ತೋಡಿ ಮುಗಿಸಿಕೊಂಡು ಬರುತ್ತಾರೆ. ಗಟ್ಟಿ–ಮುಟ್ಟಿಯಾದ ಸುಮಿತ್ರಾ ಗಂಡಸರ ಹಾಗೆ ಕಬ್ಬು ಕಡಿಯುತ್ತಾರೆ ಮತ್ತು ಶ್ರಮ ಪಟ್ಟು ದುಡಿಯುತ್ತಾರೆ.

2) ಪ್ರಭಾವತಿ:– ಇವರು ಮೂಲತಃ ಮಹಾರಾಷ್ಟ್ರದ ರಾಜ್ಯದ ಹತ್ತಿಕಣ್ಣೂಬುಸ್ ನವರು, ಇವರಿಗೆ ಇಂಡಿ ತಾಲೂಕಿಗೆ ಸಾವಳಸಂಗ ಗ್ರಾಮದಲ್ಲಿ ಮದುವೆ ಮಾಡಿಕೊಟ್ಟರು. ಮದುವೆಯಾದ 15 ದಿನದಲ್ಲಿಯೇ ವಲಸೆ ಹೋಗಲು ತಯಾರು ಮಾಡುತ್ತಾರೆ. ವಲಸೆ ಹೋಗಲೆಂದೇ ಮುಂಚಿತವಾಗಿ ಹಣ ತೆಗೆದುಕೊಂಡು ಮದುವೆ ಮಾಡಿದ್ದರು. ಪ್ರಭಾವತಿ ಎರಡು ಮಾತತ್ತನ್ನಾಡದೇ ಸುಮ್ಮನೇ ತಯಾರಾಗುತ್ತಾಳೆ. ತವರೂರಲ್ಲಿ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದ ಪ್ರಭಾವತಿ ಮದುವೆಯಾದ ನಂತರವಾದರೂ ಸುಖವಾಗಿರಬೇಕೆಂದಿದ್ದಳು ಆದರೆ ಆ ಆಶೆ ನೀರಾಸೆಯಾಯಿತು. ಕಬ್ಬಿಣತೋಡಿ, ಕಾಲುವೆ ನಿರ್ಮಾಣ ಕೆಲಸ ಹೀಗೆ ವರ್ಷಪೂರ್ತಿ ಕೆಲಸ ಮಾಡುತ್ತ ಒಂದು ಊರಿನಿಂದ ಇನ್ನೊಂದು ಊರಿಗೆ ವಲಸೆ ಹೋಗುತ್ತಾರೆ.

ಅಷ್ಟರಲ್ಲಿ ಒಂದು ಗಂಡು ಮಗು ಮಗುವಿನ ತಾಯಿಯಾಗುತ್ತಾಳೆ. ಗಂಡ ಸುಖದೇವ ದಿನಾಲೂ ಪ್ರಭಾವತಿಗೆ ಕುಡಿದು ಕಿರುಕುಳ ಕೊಡುತ್ತಿದ್ದ. ಮೈ ತುಂಬಾ ಗಾಯವಾಗುವ ಹಾಗೆ ಹೊಡೆಯುತ್ತಿದ್ದ ಇದೆಲ್ಲವನ್ನು ಸಹಿಸಿಕೊಂಡು ಪ್ರಭಾವತಿ ಸುಮ್ಮನೆ ಇರುತ್ತಿದ್ದಳು. ವಲಸೆ ಹೋದ ಪ್ರದೇಶದಲ್ಲಿ ವ್ಯವಸ್ಥೆ ಇಲ್ಲದ ಕಾರಣ ಮಗು ಅನಾರೋಗ್ಯದಿಂದ ಬಳಲುತ್ತಿತ್ತು. ವಲಸೆ ಹೋದ ಪ್ರದೇಶದಲ್ಲಿ ಹತ್ತಿರ ಯಾವ ಆಸ್ಪತ್ರೆಯು ಇರಲಿಲ್ಲ, ನಗರದೊಳಗೆ ಹೋಗಿ ತೋರಿಸಿಕೊಂಡು ಬರಬೇಕೆಂದರೆ ಕೈಯಲ್ಲಿ ಹಣವಿಲ್ಲದ ಪರಿಸ್ಥಿತಿ. ಸುಖದೇವ ಕುಡಿಯುತ್ತಾನೆಂದು ಯಾರೂ ಹಣ ಕೊಡುತ್ತಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಮಗನನ್ನು ಅತ್ತೆ ಊರಿಗೆ ತಗೊಂಡು ಹೋಗುತ್ತಾಳೆ. ದಿನಾಲೂ ಕೆಲಸ ಮಾಡುತ್ತ ಕಂದನ ನೆನಪು ಕಾಡುತ್ತಿರುತ್ತದೆ. ಆರು ತಿಂಗಳ ಕೆಲಸ ಮುಗಿಸಿ ಊರಿಗೆ ತೆರುಳುತ್ತಾರೆ. ಎರಡನೇ ಮಗುವಿಗೆ ತುಂಬು ಗರ್ಭಿಣಿ ಇದ್ದಾಗ ತವರು ಮನೆಗೆ ಹೋಗುತ್ತಾಳೆ. ಹೆಣ್ಣು ಮಗು ಹುಟ್ಟುತ್ತದೆ.

ಕೆಲವು ದಿನಗಳ ನಂತರ ಮತ್ತೆ ಹೊಸಪೇಟೆ ಕೆನಲ ಕೆಲಸಕ್ಕೆ ಹೋಗುತ್ತಾರೆ. ಆದರೆ ಸುಖದೇವ ಮುಂಚಿತವಾಗಿ ಕೊಟ್ಟ ಹಣವನೆಲ್ಲ ಕುಡಿದು ಹಾಳು ಮಾಡುತ್ತಿದ್ದ. ಅವರ ತಂದೆ–ತಾಯಿ ಹಣ ಕೇಳಿದರೂ ಕೊಡುತ್ತಿರಲಿಲ್ಲ, ಅವರಿಗೂ ಹೊಡೆಯುತ್ತಿದ್ದ. ಎರಡನೇ ಮಗು ಅಂಬಾಗಾಲ ಹಾಕುತ್ತಿತ್ತು ಪ್ರಭಾವತಿ ಮೂರನೇ ಮಗುವಿಗೆ ಗರ್ಭಿಣಿಯಾಗುತ್ತಾಳೆ. ಅದೇ ವರ್ಷ ಕೆನಲ ಕೆಲಸ ಮುಗಿಸಿ ಬಂದ ನಂತರ ಸುಖದೇವ ಸಾತಾರಕ್ಕೆ ಕಬ್ಬಿನತೋಡಿಗೆ ಹೋಗಲು ತಯಾರಾಗುತ್ತಾನೆ. ೫೦,೦೦೦ ಹಣ ಮುಂಚಿತವಾಗಿ ತೆಗೆದುಕೊಳ್ಳುತ್ತಾನೆ. ಪ್ರಭಾವತಿ ನಾನು ಬರುವದಿಲ್ಲ ಅಮ್ಮ ಹೇಳಿದರು ಒತ್ತಾಯ ಮಾಡಿ ಕರೆದುಕೊಂಡು ಹೋಗುತ್ತಾನೆ. 'ನಿನ್ಯಾಕೆ ಬರುವುದಿಲ್ಲ ಅಂತ ಹೇಳ್ದ' ಅಂತ ಜಗಳ ತೆಗೆಯುವದು, ಹೊಡೆಯುವದು, ಮಾಡುತ್ತಿದ್ದ. ಒಂದು ದಿನ ಮುಳ್ಳನ ಕಟ್ಟಗೆಯಿಂದ ಹೊಡೆಯುತ್ತಿದ್ದಂತೆ ಪ್ರಭಾವತಿ ಕಿರಿಚಲು ಶುರುಮಾಡಿದಳು. ಮೈಮೇಲೆ ರಕ್ತ ಹರಿಯುತ್ತಿತ್ತು ಹಾಗೆ ಹೊಡೆಯುತ್ತಾನೆ. ಮಕ್ಕಳನ್ನು ಕಸಿದುಕೊಂಡು ಜೋಪಡಿ ಹೋರಗೆ ಹಾಕುತ್ತಾನೆ. ಮಕ್ಕಳು ಅಳುತ್ತಿದ್ದರು ಹೊರಗೆ ಬಿಡುವದಿಲ್ಲ ಅಕ್ಕ–ಪಕ್ಕದವರು ಹಣ ಕೊಟ್ಟು ನಿಮ್ಮ ಊರಿಗೆ ಹೋಗು ಅವನಿಗೆ ಅವಾಗ ಬುದ್ದಿ ಬರುತ್ತದೆ ಊರಿಗೆ ಹೋಗು ಎನ್ನುತ್ತಾರೆ. ಬೆಳಗಾಗುವವರೆಗೆ ಪಕ್ಕದ ಜೋಪಡಿಯಲ್ಲಿ ಇದ್ದು ನಸುಕಿನಲ್ಲಿ ಬಸ್ಸು ಹತ್ತಿ ತವರಿಗೆ ಹೊಗುತ್ತಾಳೆ. ಆರೇಳು ತಿಂಗಳವರೆಗೂ ಬರುವದಿಲ್ಲ ಹೇರಿಗೆ ನಂತರವು ಅವಳನ್ನು ಕಳುಹಿಸುವದಿಲ್ಲ.

ಸುಖದೇವ ಕಬ್ಬಿನತೋಡಿ ಕೆಲಸ ಬಿಟ್ಟು, ಮಕ್ಕಳನ್ನು ಅವರ ತಾಯಿಯ ಹತ್ತಿರ ಕೊಟ್ಟು ಮಕ್ಕಳ ಕಷ್ಟ–ಸುಖ ಕೇಳದೆ ಕುಡಿದು ಬಸ್ಸು ನಿಲ್ದಾಣದ ಹತ್ತಿರ ತಿತುಗುತ್ತಿದ್ದ. ಕಬ್ಬಿನ ಕೆಲಸ ಮಾಡಲು ಮಾಲಿಕ ಎಷ್ಟು ಸತೆ ಕರೆದರು ಹೋಗುವುದಿಲ್ಲ. ಕೆಲವು ತಿಂಗಳ ನಂತರ ಪ್ರಭಾವತಿಗೆ ಕರೆದುಕೊಂಡು ಬರಲು ಹೋಗುತ್ತಾನೆ. ಅವರ ತಾಯಿ ನನ್ನ ಮಗಳೀಗೆ ಕಳುಹಿಸುವುದಿಲ್ಲ ಎನ್ನುತ್ತಾಳೆ. ಆಗ ಅವರ ತಾಯಿಗೂ ಹೊಡೆದು ಪ್ರಭಾವತಿಗೂ ಹೊಡೆದು ಬರುತ್ತಾನೆ. ಪ್ರಭಾವತಿಯ ತಾಯಿ ಪೋಲಿಸ್ ಸ್ಟೇಷನಿಗೆ ಹೋಗಿ ದೂರು ಕೊಡುತ್ತಾರೆ. ಸುಖದೇವನನ್ನು ಕರೆಸಿ ಪೋಲಿಸರನ್ನು ತನಿಖೆ ಮಾಡುವಾಗ ಅವರಿಗೂ ಸಹ ಅಸಭ್ಯವಾಗಿ ಮಾತನಾಡಿ ಪ್ರಭಾವತಿ ಮತ್ತು ಮಗುವನ್ನು ಕರೆದುಕೊಂಡು ಊರಿಗೆ ಬರುತ್ತಾನೆ.

ಪ್ರಭಾವತಿಗೆ ಜೀವನವೇ ಸಾಕಾಗಿ ಹೋಗಿತ್ತು. ಮಕ್ಕಳ ಮುಖ ನೋಡಿ ಬದುಕಬೇಕು ಅನಿಸುತ್ತಿತ್ತು. ಇನ್ನೊಂದು ಕಡೆ ಕಬ್ಬಿನ ಸಾಲ ೫೦,೦೦೦ ಹಾಗೆ ಉಳಿದಿತ್ತು ಸುಖದೇವನಿಗೆ ಅದರ ಚಿಂತೆಯೇ ಇರಲಿಲ್ಲ. ಊರಲ್ಲಿ ದಿನಾಲೂ ಕಟ್ಟಡ ಕೆಲಸಕ್ಕೆ ಹೋಗ್ತಾ ಇದ್ದ. ಆದರೆ ಬರುವ ಕೂಲಿ ಹಣವೆಲ್ಲ ಅರ್ಧ ಕುಡಿದೇ ಖಾಲಿ ಮಾಡುತ್ತಿದ್ದ ಮನೆಯ ಕಡೆ ಗಮನವೇ ಕೊಡುತ್ತಿರಲಿಲ್ಲ. ಪ್ರಭಾವತಿ ಮತ್ತೆ ನಾಲ್ಕನೇ ಮಗುವಿನ ಜನ್ಮ ನೀಡುತ್ತಾಳೆ ಏಷ್ಟು ಭಾರಿ ಶಸ್ತ್ರ ಚಿಕಿತ್ಸೆ ಮಾಡಿಕೊಳ್ಳುತ್ತೇನೆ ಎಂದರು ಹೊಡೆಯುತ್ತಿದ್ದ ಯಾರ ಮಾತು ಕೇಳುತ್ತಿರಲಿಲ್ಲ. ಕೆಲೌ ದಿನಗಳ ನಂತರ ಕಬ್ಬಿನ ಮಾಲಿಕನ ಹತ್ತಿರ ಹಣ ಕೇಳುತ್ತಾನೆ ಆದರೆ ಅವರು ಹಣ ಕೊಡುವದಿಲ್ಲ. 'ನೀನು ದುಡಿಯುವದಿಲ್ಲ ನಿನ್ನ ಕೈಯಲ್ಲಿ ಹಣ ಕೊಡುವದಿಲ್ಲ್' ಎನ್ನುತ್ತಾರೆ. ಮನೆಗೆ ಬಂದು ಅವರ ತಾಯಿ ಮತ್ತು ಹೆಂಡತಿಗೆ ಒತ್ತಾಯ ಮಾಡಿ ನಾವು ದುಡಿಯುತ್ತೇವೆ ಎಂದು ಹೇಳಿಸಿ ದುಡ್ಡು ತೆಗೆದುಕೊಂಡು ಬರುತ್ತಾನೆ. ಅನಿವಾರ್ಯ ಮನೆಯಲ್ಲಿ ಯಾರು ಇರುತ್ತಿರಲಿಲ್ಲ. ಹಾಗಾಗೆ ಮಕ್ಕಳೀಗೆ ಶಾಲೆಗೆ ಕಳಿಸದೇ ಮಕ್ಕಳನ್ನು ಕರೆದುಕೊಂಡು ಹೋಗುತ್ತಾರೆ.

ಸ್ವಲ್ಪ ದಿನಗಳವರೆಗೆ ಸರಿಯಾಗಿ ಕೆಲಸ ಮಾಡಿದ, ಕುಡಿದು ಬಂದು ಹೊಡೆಯುದು, ಕಿರುಕುಳ ಕೊಡುವದು, ಇದನ್ನು ಸಹಿಸಿಕೊಂಡು ಸಾಕಾಗಿ ಮೂರು ಮಕ್ಕಳನ್ನು ಅಲ್ಲೇ ಬಿಟ್ಟು ಸಣ್ಣ ಕೂಸನ್ನು ಹೊತ್ತಿಕೊಂಡು ತವರಿಗೆ ಹೋಗುತ್ತಾಳೆ. ಸುಖದೇವ ಕೆಲಸ ಬಿಟ್ಟು ಮತ್ತೆ ಊರಿಗೆ ಬಂರುತ್ತಾನೆ. ಅವರ ತಾಯಿಯ ಬೇರೆ ಕಡೆ ವಲಸೆ ಹೋಗಿರುತ್ತಾರೆ. ಮಕ್ಕಳೀಗೆ ಯಾರು ನೋಡಿಕೊಳ್ಳುವದಿಲ್ಲ ಹೊಟ್ಟೇ ಹಸಿವಾಗಿ ಅಮ್ಮ–ಅಮ್ಮ ಎಂದು ಅತ್ತರು ಯಾರು ಊಟ ಕೊಡುತ್ತಿರಲಿಲ್ಲ. ಏಕೆಂದರೆ ಸುಖದೇವ ಕುಡಿದಾಗ ಎಲ್ಲರಿಗೂ ಹೊಲಸು ಬೈಗುಳಗಳಿಂದ ಬೈಯುತ್ತಿದ್ದ, ಜಗಳ ತೆಗೆಯುತ್ತಿದ್ದ ಕುಡಿದು–ಕುಡಿದು ಸುಖದೇವ ಕೊನೆಗೆ ಮನೆಯಲ್ಲಿ ನೇನುಹಾಕಿಕೊಂಡು ಅತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈಗ ಪ್ರಭಾವತಿ ನಾಲ್ಕು ಮಕ್ಕಳನ್ನು ನೋಡಿಕೊಂಡು ಕೂಲಿ ಕೆಲಸ ಮಾಡಿ ಬದುಕುತ್ತಿದ್ದಾಳೆ. ಜೊತೆಗೆ ಸುಖದೇವ ಕುಡಿದು ಮಾಡಿದ ಸಾಲವನ್ನು ಮುಟ್ಟಿಸಬೇಕು.

ಆಧಾರ ಗ್ರಂಥಗಳು:–

1) ನಗರೀಕರಣ – ಕೆ. ಮೋಹನಕೃಷ್ಣ ರೈ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–1997

2) ಜನಸಂಖ್ಯೆಯ ಬೆಳವಣಿಗೆಯ ವಿವಿಧ ಮುಖಗಳು – ಪಿ. ಹನುಮಂತರಾಯಪ್ಪ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು– 2000

3) ಸಾಮಾಜಿಕ ರಚನೆ ಹಾಗೂ ಸಾಮಾಜಿಕ ಬದಲಾವಣೆ –ಎಸ್. ಬಿ. ಜೋಗುರ, ವಿದ್ಯಾನಿಧಿ ಪ್ರಕಾಶನ, ಗದಗ

4) ಭಾರತೀಯ ಸಮಾಜ – ಡಾ. ಅರ್. ಇಂದಿರಾ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ – 1995

5) ಭಾರತದ ಅರ್ಥವ್ಯವಸ್ಥೆಯ ಸಮಸ್ಯೆಗಳು ಮತ್ತು ಪ್ರಗತಿ –ಎಚ್. ಆರ್. ಕೃಷ್ಣಯ್ಯಗೌಡ, ಚೇತನ ಬುಕ್ ಹೌಸ್ ಮೈಸೂರು 1998

6) ಮನೆ, ಸಮಾಜ ಮತ್ತು ಸಂಸ್ಕೃತಿ – ವೀಣಾ. ಎಂ. ಪಿ. ನೆಲಮನೆ ಪ್ರಕಾಶನ 2000

7) ಸಮಕಾಲಿನ ಸಮಾಜಶಾಸ್ತ್ರ – ಪ್ರೋ. ಜಿ. ಸುಬ್ರಮಣ್ಯ, ಸ್ಪಪ್ನ ಬುಕ ಹೌಸ್ ಬೆಂಗಳೂರು

8) ವಿಜಯಪುರ ಜಿಲ್ಲೆ ಮಾನವ ಅಭಿವೃದ್ಧಿ ವರದಿ (2014)

9) Ravender Kumar Kaul - Migretion and Society. Published by, Rawat Publications Jaipur (2005)

10) S. Sundari - Migrant women and urban labour market, Deep-deep Publications LTD New Delhi (2007)

ಗ್ರಂಥ ನಿಯತಕಾಲಿಕೆಗಳು, ಲೇಖನಗಳು, ದಿನಪತ್ರಿಕೆಯಲ್ಲಿ ಬರುವ ಚಿಂತನೆ – ಮಂತನ ಲೇಖನಗಳು, ಅಂತರಜಾಲದ ಸಹಾಯದಿಂದ ಮಾಹಿತಿ ಸಂಗ್ರಹಿಸಲಾಗಿದೆ.

ವಿಭಾಗ:–4

ಕೌಟಿಲೀಯಮ್

ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ

KAUTILYEEYAM

Economics, Political Sciences & Arthasastra

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಮುಂಬಯಿ ಕರ್ನಾಟಕದ ಶೈಕ್ಷಣಿಕ ಸಮೀಕ್ಷೆ [1876–1947]	ಶಂಭುಲಿಂಗಯ್ಯ ವಿರಕ್ತಮಠ	108 – 113
2.	ಆರ್ಥಿಕ ಸಬಲತೆಗಾಗಿ ಪಶುಸಂಗೋಪನೆ ಮತ್ತು ಹೈನುಗಾರಿಕೆ: ಒಂದು ಅವಲೋಕನ	ಪ್ರಸನ್ನ ಕುಮಾರ್. ಎಂ. ಜಿ ಡಾ॥ ವೈ. ಎಂ. ರಾಜು	113 – 114
3.	ಜಲ ಪರಸರ ವ್ಯವಸ್ಥೆ ಮತ್ತು ಮೀನುಗಾರಿಕಾ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ	ಮಿಸ್.ರಮ್ಯಶ್ರೀ.ಎಂ.ಜಿ ಡಾ.ಈಶ್ವರ ಪಿ	114 – 117
4.	ಅರೇಬಿಯಾನ್ ಕೊಲ್ಲಿ ರಾಷ್ಟ್ರಗಳಲ್ಲಿ ಕರಾವಳಿಯ ವ್ಯಾಪಾರ ಸಂಬಂಧ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆ	ಕಿರಣ್ ಕುಮಾರ್	117 – 122
5.	ಗುಲಬರ್ಗಾ ಜಿಲ್ಲೆಯಲ್ಲಿ ಖಾದಿ ಇತಿಹಾಸ ಒಂದು ಅಧ್ಯಯನ	ಗೀತಾ. ಹೆಚ್.ಪಿ	122 – 126
6.	ರೈತರ ಸಮಸ್ಯೆಗಳನ್ನು ಕುರಿತು ಮಹಾತ್ಮಾ ಜ್ಯೋತಿ ಬಾಫುಲೆಯವರ ಚಿಂತನೆಗಳು	ಅಪರ್ಣ ಬಿ	126 – 129
7.	ಮೈಸೂರು ಸಂಸ್ಥಾನದ ಹಿಂದೂಡಿಪ್ರೆಸ್ಡ್‌ಕ್ಲಾಸ್‌ಎಜುಕೇಷನ್ ಮಿಷನ್ ಮತ್ತುದಲಿತರಏಳಿಗೆ	ವಿಂದ್ಯಾ. ಕೆ. ಎಂ	129 – 134
8.	ಬ್ಯಾರಿ ಜನಾಂಗ – ಸಮಾಜ ಮತ್ತು ಸಂಸ್ಕೃತಿ	ಸೋನಿಯ ಶರಹತ್ ಎಂ	134 – 137
9.	ಐತಿಹಾಸಿಕ ಹಿಮವದ್ ಗೋಪಾಲಸ್ವಾಮಿ ಬೆಟ – ಒಂದು ಸಾಂಸ್ಕೃತಿಕ ಅಧ್ಯಯನ	ಶ್ರೀನಿವಾಸ್.ವಿ ಡಾ.ಎಸ್ ಆಂಜನೇಯ	137 – 142
10.	ಇಂದಿನ ನಾಗರಿಕ ಸಮಾಜದಲ್ಲಿ ಮಕ್ಕಳ ಮೇಲಿನ ದೌರ್ಜನ್ಯ	ಕಾವ್ಯ. ಎ. ಎನ್ ಡಾ. ವಿದ್ಯಾಶಂಕರ್. ಎಂ. ಹೆಚ್	143 – 147

ಮುಂಬಯಿ ಕರ್ನಾಟಕದ ಶೈಕ್ಷಣಿಕ ಸಮೀಕ್ಷೆ [1876-1947]

ಶಂಭುಲಿಂಗಯ್ಯ ವಿರಕ್ತಮಠ
ಸಂಶೋದಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.

ಮುಂಬಯಿ ಕರ್ನಾಟಕದ ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳುವ ಮೊದಲು ಧಾರವಾಡ, ಬೆಳಗಾಂ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮುಂಬಯಿ ಕರ್ನಾಟಕದ ಜಿಲ್ಲೆಗಳಾಗಿದ್ದವು. ಇವು ಹೇಗೆ ಭೌಗೋಳಿಕವಾಗಿ ಮತ್ತು ಐತಿಹಾಸಿಕವಾಗಿ ರೂಪುಗೊಂಡಿದವು ಎಂಬುದು ತಿಳಿಯುದು ಅವಶ್ಯಕವಾಗಿದೆ. ಕೃಷ್ಣ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶ ಅಥವಾ ಮರಾಠರ ಭೌಗೋಳಿಕ ಆಡಳಿತ ವಿಭಾಗವಾದ ಕನ್ನಡ ಭಾಷಾ ಪ್ರದೇಶವನ್ನು ರಾಜಕೀಯ ವ್ಯವಹಾರಕ್ಕಾಗಿ ದಕ್ಷಿಣ ಮರಾಠ ದೇಶವೆಂದು ಕರೆಯುತ್ತಾಗುತ್ತಿತ್ತು.ಈ ಪದವನ್ನು ಪ್ರಥಮ ಬಾರಿಗೆ ಸರ್.ಜಿ.ಮಾಲ್ಕಮ್ ಬಳಸಿದ್ದಾನೆ. ಹಾಗೂ 19 ನೇ ಶತಮಾನದ ಪ್ರಾರಂಭದ ಮರಾಠರ ದಂಡಯಾತ್ರೆಗಳ ಸಮಯದಲ್ಲಿ ಈ ಕನ್ನಡ ಭಾಷಾ ಪ್ರದೇಶವನ್ನು 'ನೋ ಅಬ್' ಪ್ರದೇಶವೆಂದು ಕೂಡ ಕರೆಯುತ್ತಾಗುತಿತ್ತು.

1818 ರಲ್ಲಿ ಬ್ರಿಟಿಷರು ಮರಾಠರನ್ನು ಸಂಪೂರ್ಣವಾಗಿ ಸೋಲಿಸಿ ಇಲ್ಲಿನ ಅನೇಕ ಸ್ಥಳಯ ಸಂಸ್ಥಾನಗಳನ್ನು ಒಳಗೊಂಡಂತೆ ಇಡೀ ದಕ್ಷಿಣ ಮರಾಠ ಪ್ರದೇಶವನ್ನು ವಶಪಡಿಸಿಕೊಂಡು ಮುಂಬಯಿ ಪ್ರಾಂತ್ಯವಾಗಿ ಮಾರ್ಪಡಿಸಿದರು.ಈ ಮುಂಬಯಿ ಪ್ರಾಂತ್ಯ ಮೊದಲು ಮೂರು ಗುಜರಾತ್, ಕೊಂಕಣ ಮತ್ತು ಡೆಕ್ಕನ್ ವಿಭಾಗಗಳಾಗಿ, 1848 ರ ನಂತರ ಸಿಂದ್ ಪ್ರದೇಶವು ಮುಂಬಯಿ ಪ್ರಾಂತ್ಯದಲ್ಲಿ ಸೇರುವ ಮೂಲಕ ನಾಲ್ಕು ವಿಭಾಗಗಳಾಗಿ ಗುರ್ತಿಸಿಕೊಂಡವು. ಡೆಕ್ಕನ್ ಭಾಗದ ಮುಖ್ಯ ಸ್ಥಳವು ಪುಣೆಯಾಗಿದ್ದು, ಪ್ರಾರಂಭದಲ್ಲಿ ಧಾರವಾಡ ಪ್ರದೇಶವು ಡೆಕ್ಕನ್ [ಪುಣೆ] ಭಾಗದ ಅಧೀನದಲ್ಲಿತ್ತು. ಈ ಭಾಗಕ್ಕೆ ಮೇಜರ್ ಥ್ಯಾಕರೆ ಎಂಬುವರು ಕಲೆಕ್ಟರ್ ಮತ್ತು ಪೋಲಿಟಿಕಲ್ ಏಜೆಂಟ್‌ರಾಗಿ ಹಾಗೂ ಮೌಂಟ್ ಸ್ಟುವರ್ಟ ಎಲ್ಫಿಸ್ಟನ್ ಎಂಬುವವರು ಮುಂಬಯಿ ಪ್ರಾಂತ್ಯದ ಮೊದಲನೇಯ ಗವ್ಹರ್ನರಾಗಿ ನೇಮಕಗೊಂಡರು.

1799 ರಲ್ಲಿ ಟಿಪ್ಪುಸುಲ್ತಾನನ್ನು ಸೋಲಿಸುವ ಮೂಲಕ ಕೆನಾರ ಪ್ರದೇಶವನ್ನು ವಶಪಡಿಸಿಕೊಂಡ ಬ್ರಿಟಿಷರು ಅದನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಂಡರು.ಮುಂದೆ 1818 ರಲ್ಲಿ ಮರಾಠರನ್ನು ಸಂಪೂರ್ಣವಾಗಿ ಸೋಲಿಸಿ ಅವರ ರಾಜ್ಯವನ್ನು ವಶಪಡಿಸಿಕೊಂಡು ಮುಂಬಯಿ ಪ್ರಾಂತ್ಯವಾಗಿ ಮಾರ್ಪಡಿಸಿದರು.1824 ರಲ್ಲಿ ಕಿತ್ತೂರು ಸಂಸ್ಥಾನವು ಈ ಪ್ರದೇಶದಲ್ಲಿ ಸಮಾವೇಶವಾಯಿತು. 1825 ರ ಒಂದು ದಾಖಲೆಯಂತೆ ಧಾರವಾಡ ಪ್ರದೇಶವು[ಸುಭೆ] ಮೂರು ಉಪ ವಿಭಾಗಗಳನ್ನು ಹೊಂದಿತ್ತು. ಮುಖ್ಯ ಉಪ ವಿಭಾಗದಲ್ಲಿ 12 ತಾಲೂಕುಗಳು: ಧಾರವಾಡ, ಮಿಶ್ರಿಕೋಟೆ, ಪರಸಗಡ, ನವಲಗುಂದ, ಬಾದಮಿ, ಡಮ್ಮಳ, ಬಾಗಲಕೋಟೆ, ಬಂಕಾಪುರ, ಹಾನಗಲ್ಲ, ಹೊಸ ಹುಬ್ಬಳ್ಳಿ, ಪಾದಶಾಪುರ ಮತ್ತು ರೋಣ. ಭೀಮ ನದಿಯ ದಕ್ಷಿಣ ಉಪವಿಭಾಗದಲ್ಲಿ 3 ತಾಲೂಕುಗಳು: ಇಂಡಿ, ಮುದ್ದೇಬಿಹಾಳ, ಹುನಗುಂದ. ಹಾಗೂ ರಾಣೇಬೆನ್ನೂರು ಉಪ ವಿಭಾಗದಲ್ಲಿ 3 ತಾಲೂಕಗಳು: ರಾಣೇಬೆನ್ನೂರು, ಹಾವೇರಿ ಮತ್ತು ಗದಗ. ಹೀಗೆ ಒಟ್ಟಿಗೆ 18 ತಾಲೂಕುಗಳನ್ನು ಈ ಸುಭಾವು ಒಳಗೊಂಡಿತು.ಜೊತಗೆ ಕೆಲವು ಕನ್ನಡ ಭಾಷಾ ಪ್ರದೇಶವು ಸತಾರ ಹಾಗೂ ಸೊಲ್ಲಾಪುರ ಜಿಲ್ಲೆಗಳಿಗೆ ಸೇರಿರುವದನ್ನು ಕಾಣಬಹುದು. ಆಡಳತ ಕೇಂದ್ರವಾಗಿದ್ದ ಧಾರವಾಡದಿಂದ 1836 ರಲ್ಲಿ ಬೆಳಗಾಂ ನ್ನು ಪ್ರತ್ತೇಕಿಸಿ ಹೊಸ ಜಿಲ್ಲೆ ಅಥವಾ ಆಡಳತ ಕೇಂದ್ರವಾಗಿ ಮಾರ್ಪಡಿಸಲಾಯಿತು. ಮುಂದೆ ಕಾರಣಾಂತರಗಳಿಂದ 1862 ರಲ್ಲಿ ಕೆನಾರವನ್ನು ಉತ್ತರ ಕನ್ನಡ ಮತ್ತು ದಕ್ಷಣ ಕನ್ನಡ ಜಿಲ್ಲೆಗಳಾಗಿ ವಿಭಜನೆಗೊಳಿಸಿ ಉತ್ತರ ಕನ್ನಡವನ್ನು ಮುಂಬಯಿ ಪ್ರಾಂತ್ಯಕ್ಕೆ ಸೇರಿಸಿದರು.ತರುವಾಯ ಆಡಳತದ ಅನುಕೂಲತೆಗಾಗಿ 1864 ರಲ್ಲಿ ಸತಾರ-ಸೊಲ್ಲಾಪುರ ಜಿಲ್ಲೆಗಳೊಳಗಿನ ಕನ್ನಡ ಪ್ರದೇಶಗಳ ಜೊತಗೆ ಆಗಿನ ಬೆಳಗಾಂ ಜಿಲ್ಲೆಗಳೊಳಗಿನ ಹುನಗುಂದ, ಬಾದಾಮಿ, ಬಾಗಲಕೋಟೆ ತಾಲೂಕುಗಳನ್ನು ಸೇರಿಸಿ ಕಲಾದಗಿಯನ್ನು ಜಿಲ್ಲೆಯನ್ನಾಗಿ ಮಾಡಲಾಯಿತು. 1884-85 ರಲ್ಲಿ ಈ ಜಿಲ್ಲೆಯ ಮುಖ್ಯಸ್ಥಳವನ್ನು ಕಲಾದಗಿಯಿಂದ ಬಿಜಾಪುರಕ್ಕೆ ವರ್ಗಾಯಿಸಲಾಯಿತು.ಹೀಗೆ ದಕ್ಷಿಣ ಭಾಗವು ಧಾರವಾಡ, ಬೆಳಗಾಂ, ಉತ್ತರ ಕನ್ನಡ ಮತ್ತು ಬಿಜಾಪುರ ಜಿಲ್ಲೆಗಳಿಂದ ಕೂಡಿದ ನಿರ್ಧಿಷ್ಟ ಭಾಗವಾಗಿ ರೂಪುಗೊಂಡಿತು.

ನಿರ್ಧಿಷ್ಟ ಸ್ವರೂಪವನ್ನು ಪಡೆದರು ಕೂಡ ಸಂಪೂರ್ಣ ಪ್ರದೇಶವು ಸಮಗ್ರತೆಯಿಂದ ಕೂಡಿರಲಿಲ್ಲ. ಪೇಶ್ವೆಯವರ ರಾಜ್ಯವನ್ನು ಬ್ರಿಟಿಷರು ವಶಪಡಿಸಿಕೊಂಡರು ಕೂಡ ಪುಣೆಯ ದಕ್ಷಿಣ ಪ್ರದೇಶದಲ್ಲಿ ಎಷ್ಟೋ ಸಣ್ಣ ದೊಡ್ಡ ಸಂಸ್ಥಾನಗಳು ಹಾಗೂ ಸರದಾರರು ಜಹಾಗಿರದಾರರು ಬ್ರಿಟಿಷ ಸರ್ಕಾರದೊಡನೆ ಒಪ್ಪಂದ ಮಾಡಿಕೊಂಡು ತಮ್ಮ ಆಡಳತವನ್ನು ಮುಂದುವರಿಸಿದ್ದರು. ಇವುಗಳಿಗೆ 'ದಕ್ಷಿಣ ಮರಾಠ ಸಂಸ್ಥಾನಗಳು' [Southern marath states] ಎಂದು ಬ್ರಿಟಿಷರು ಕರೆಯುತ್ತಿದ್ದರು.

ಬ್ರಿಟಿಷ ಆಡಳತಕ್ಕೊಳಪಟ್ಟ ಈ ನಾಲ್ಕು ಜಿಲ್ಲೆಗಳ ಪಕ್ಕದಲ್ಲಿಯೆ ಕನ್ನಡ ಪ್ರದೇಶವು ಬೇರೆ ಬೇರೆ ಸುಮಾರು ಹದಿನಾಲ್ಕು ಚಿನ್ನವಾದ ಸಂಸ್ಥಾನಗಳ ಆಡಳತಕ್ಕೆ ಒಳಪಟ್ಟತ್ತು. ಇವು ಮುಂಬಯಿ ಕರ್ನಾಟಕ ಪ್ರದೇಶದಲ್ಲಿನ ದೇಶಿಯ ಸಂಸ್ಥಾನಗಳಾಗಿವೆ. ಪ್ರತಿಯೊಂದು ಜಿಲ್ಲೆಯೊಳಗಿನ ದೇಶಿಯ ಸಂಸ್ಥಾನಗಳು ಈ ಕೆಳಗಿನಂತಿವೆ.

ಧಾರವಾಡಜಿಲ್ಲೆ : ಸವಣೂರು, ಸಂಗಾಲಿ, ಶಿರಹಟ್ಟಿ, ಮಿರಜ, ಲಕ್ಷ್ಮೇಶ್ವರ, ಜಮಖಂಡಿ, ಕುಂದುಗೋಳ ಮತ್ತು ಬುಧಗಾಂವ ಸಂಸ್ಥಾನದ ಗಡಗೇರಿ-ಶಿಗ್ಗಲಿ ಸಂಸ್ಥಾನಗಳು.

ಬೆಳಗಾಂ ಜಿಲ್ಲೆ : ರಾಮದುರ್ಗ, ಕುರಂದವಾಡ, ವಡಗಾಂವ, ಸಾಂಗಲಿ ಸಂಸ್ಥಾನದ ಶಹಾಪುರ-ದೊಡ್ಡವಾಡ ಮತ್ತು ಕೊಲ್ಲಾಪುರ ಸಂಸ್ಥಾನದ ರಾಯಬಾಗ, ತೋರಗಲ್ಲು, ಕಟಗೊಳ.

ಬಿಜಾಪುರ ಜಿಲ್ಲೆ : ಮುಧೋಳ, ಜಮಖಂಡಿ ಸಂಸ್ಥಾನಗಳು,

ಔಂದ್ ಸಂಸ್ಥಾನದ ಗುಣದಾಳ ಮತ್ತು ಸಾಂಗಲಿ ಸಂಸ್ಥಾನದ ತೇರದಾಳ. ಈ ಎಲ್ಲಾ ಸಂಸ್ಥಾನಿ ಪ್ರದೇಶಗಳ ಜನಸಂಖ್ಯೆ 1882 ರ ವರದಿಯಲ್ಲಿ ನಮೂದಿಸಿದಂತೆ 5,07,975 ಇದ್ದು,ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ಕಾಣಿಸಿದ ಎಲ್ಲಾ ಸಂಸ್ಥಾನಗಳು ವಿಲೀನವಾದವು.ಅಂದರೆ ಈ ಎಲ್ಲಾ ಹದಿನಾಲ್ಕು ವಿಭಿನ್ನ ಆಡಳಿತ ಕ್ಷೇತ್ರಗಳು ಒಂದುಗೂಡಿ ಮುಂಬಯಿ ಕರ್ನಾಟಕ ಪ್ರದೇಶವು ಸಮಗ್ರ ರೂಪವನ್ನು ತಾಳಿತು ಹಾಗೂ ಭಾಷಾವಾರು ರಾಜ್ಯರಚನೆ ಕಾಲಕ್ಕೆ [1956] ಏಕೀಕೃತ ಕರ್ನಾಟಕ ರಾಜ್ಯವಾಗಿ ಹೊರಹೊಮ್ಮಿತು.

1818 ರಲ್ಲಿ ಬ್ರಿಟಿಷರ ವಶಕ್ಕೆ ಬಂದ ಈ ಕನ್ನಡ ಭಾಷಾ ಪ್ರದೇಶದಲ್ಲಿ ಮೊದಲ ಹತ್ತು ಹನ್ನೇರಡು ವರ್ಷಗಳು ಬ್ರಿಟಿಷರಗಿಂತಲೂ ಮುಂಚಿನ ಶಿಕ್ಷಣವು ಜಾರಿಯಲ್ಲಿದ್ದ ಕಾರಣ ಅದರ ಗಣತಿಯಲ್ಲಿ ಮತ್ತು ಪರಿಶೀಲನೆಯಲ್ಲಿಯೇ ಸಂದು ಹೋದವು.ಬ್ರಿಟಿಷ ಪೂರ್ವದಲ್ಲಿ ಯಾವ ಮಟ್ಟದ ಶಿಕ್ಷಣವು ಹಿಂದಿನ ಸರ್ಕಾರಗಳ ಆಡಳಿತದ ಪಟ್ಟಿಯಲ್ಲಿ ಇಲ್ಲದ ಕಾರಣ ಮತ್ತು ಶಿಕ್ಷಣದ ಗಣತಿಯಲ್ಲಿ ಕಂಡುಬಂದ ನ್ಯೂನತೆಗಳನ್ನು ಆಧಾರವಾಗಿಟ್ಟುಕೊಂಡು ಬ್ರಿಟಿಷ ಸರ್ಕಾರವು ದೇಶಿಶಿಕ್ಷಣಪದ್ಧತಿಯನ್ನು ಪ್ರೋತ್ಸಾಹಿಸಲು ನಿರಾಕರಿಸಿತು. ಆದರೆ ಬ್ರಿಟಿಷ ಸರ್ಕಾರವು ತನ್ನದೆ ಆದ ಆಡಳಿತ ಕ್ರಮವನ್ನು ಏರ್ಪಡಿಸಿಕೊಂಡು ಹೊಸದಾಗಿ ಶಾಲೆಗಳನ್ನು ತೆರೆಯಲು ಪ್ರಾರಂಭಿಸಿತು.1826 ರಲ್ಲಿ ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಪ್ರಾರಂಭಿಸಿದ ಎರಡು ಶಾಲೆಗಳಂದ ಮೊದಲುಗೊಂಡು 1900 ರ ವೇಳಗೆ 1372 ಶಾಲೆಗಳು ಹೆಚ್ಚಳಗೊಂಡವು ಜೊತಗೆ ಸರ್ಕಾರೇತರ ದೇಶಿಯ ಮತ್ತು ಮಿಶನರಿ ಶಾಲೆಗಳು ಕೂಡ ಈ ಅವಧಿಯಲ್ಲಿ ಹೆಚ್ಚಳಗೊಂಡಿದ್ದನ್ನು ಕಾಣಬಹುದು.

ಮುಂಬಯಿ ಇಲಾಖೆಯಲ್ಲಿ ಮೇ 1854 ರಲ್ಲಿ ಸರ್ಕಾರದ ಶಿಕ್ಷಣ ಇಲಾಖೆಯು ಮೊಟ್ಟಮೊದಲು ಅಸ್ಥಿತ್ವಕ್ಕೆ ಬಂದಿತು. ಮೊದಲು ಡೆಕ್ಕನ್ ಭಾಗದಲ್ಲಿ ಪುಣೆ, ಸತಾರ, ಸೊಲ್ಲಾಪುರ, ಅಹಮ್ಮದನಗರ,ಖಾನದೇಶ ಜಿಲ್ಲೆಗಳ ಜೊತೆಗೆ ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳು ಒಳಗೊಂಡಿದ್ದು ಕಂಡುಬರುತ್ತದೆ. ಮೊದಲಿಗೆ ಸೀವರ್ಡ ಎಂಬುವರು ಡೆಕ್ಕನ್ ಭಾಗಕ್ಕೆ ಡಿವ್ಹಿಜನಲ್ ಇನ್‌ಸ್ಪೆಕ್ಟರ್‌ರಾಗಿಯೂ, ಎಫ್.ಪಿ.ಬೇಕರ್ ಎಂಬುವರು ಧಾರವಾಡ - ಬೆಳಗಾಂ ಹಾಗೂ ಸತಾರ, ಸೊಲ್ಲಾಪುರ ಜಿಲ್ಲೆಗಳೊಳಗಿನ ಕನ್ನಡ ಪ್ರದೇಶಕ್ಕೆ ಡೆಪ್ಯೂಟಿ ಇನ್‌ಸ್ಪೆಕ್ಟರ್ ರಾಗಿಯೂ ನೇಮಕಗೊಂಡಿದ್ದರು.ಜುಲೈ 1859 ರಲ್ಲಿ ಡೆಕ್ಕನ್ ಭಾಗದಿಂದ ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳನ್ನು ಬೇರ್ಪಡಿಸಿ ದಕ್ಷಿಣ ಭಾಗವೆಂಬ ಹೊಸ ವಿಭಾಗವನ್ನು ರೂಪಿಸಲಾಯಿತು. ಈ ಭಾಗದ ಶಿಕ್ಷಣಾಧಿಕಾರಿಯ ಆಧೀನಕ್ಕೆ ಸತಾರ-ಸೊಲ್ಲಾಪುರ ಜಿಲ್ಲೆಗಳೊಳಗಿನ ಕನ್ನಡ ಪ್ರದೇಶಗಳನ್ನು ಸೇರಿಸಲಾಯಿತು.

Wood's Despatch [1854] ವರಧಿಯೇ ಭಾರತದಲ್ಲಿ ಬ್ರಿಟಿಷ ಸರ್ಕಾರದ ಶಿಕ್ಷಣದ ಸಂಯೋಜನೆಯಾಗಿತ್ತು. ಮುಂಬಯಿ ಇಲಾಖೆಯಲ್ಲಿ ಸ್ಥಾಪಿತವಾದ ಸಾರ್ವಜನಿಕ ಶಿಕ್ಷಣ ಇಲಾಖೆ[1854] ಮತ್ತು ಉನ್ನತ ಶಿಕ್ಷಣಕ್ಕಾಗಿ ಸ್ಥಾಪನೆಯಾದ ಮುಂಬಯಿ ವಿಶ್ವವಿದ್ಯಾಲಯವು[1857] ಶಿಕ್ಷಣ ಕ್ಷೇತ್ರದಲ್ಲಿನ ಬದಲಾವಣೆಗೆ ನಾಂದಿ ಹಾಡಿದವು. 1857 ರ ಸಿಪಾಯಿ ದಂಗೆಯ ಪರಿಣಾಮವಾಗಿ ಸಾಮಾಜಿಕ ಆಭದ್ರತೆ, ಆರ್ಥಿಕ ವ್ಯವಸ್ಥೆಯ ಅಸಮತೋಲನೆ ಹಾಗೂ ಅದೇ ವರ್ಷದಲ್ಲಿ ಸಂಭವಿಸಿದ ಬರಗಾಲದ ಪರಿಣಾಮವಾಗಿ ಭಾರೀ ವಿಪತ್ತುಗಳು ಜನಜೀವನವನ್ನು ಕಂಗಾಲಾಗುವಂತೆ ಮಾಡಿದವು.ಈ ಅವಧಿಯಲ್ಲಿ ಶಿಕ್ಷಣದ ಪ್ರಗತಿಯು ಕುಂಟುತ್ತ ಸಾಗಿತು.1882 ರಲ್ಲಿ ಶಿಕ್ಷಣದ ಬೆಳವಣಿಗೆಯ ವೈಪಲ್ಯಗಳನ್ನು ಕಂಡುಹಿಡಿಯಲು ಹಂಟರ್ ಅಧ್ಯಕ್ಷತೆಯಲ್ಲಿ Indian Eduation Commission ಅನ್ನು ಸರ್ಕಾರವು ನೇಮಿಸಿತು.ಇದು ಮುಂದೆ ಶಿಕ್ಷಣ ಕ್ಷೇತ್ರದಲ್ಲಿನ ಪ್ರಗತಿಯಗೆ ಸಂಬಂಧಿಸಿದಂತೆ ಕುರಿತು ತನ್ನದೇ ಆದ ವರದಿಯನ್ನು ನೀಡಿತು.

1876 ರ ವೇಳಗೆ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಿಕ್ಷಣದ ಜೊತಗೆ ಉನ್ನತ ಶಿಕ್ಷಣಕ್ಕೆ .ಮುಂಬಯಿ ವಿಶ್ವವಿದ್ಯಾಲಯ ಸ್ಥಾಪನೆಯ[1857] ಮೂಲಕ ಚಾಲನೆ ನೀಡಲಾಯಿತು.ಮುಂಬಯಿ ಇಲಾಖೆಯಲ್ಲಿ ಸರ್ಕಾರವು ಸ್ಥಾಪಿಸಿದ ಶಾಲೆಗಳಗೆ ಇಂಗ್ಲಂಡವೇ ಮಾದರಿಯಾಗಿತ್ತು. ಆಗ ಮುಂಬಯಿ ಕರ್ನಾಟಕದಲ್ಲಿ ಎರಡು ಪ್ರಕಾರದ ಶಾಲೆಗಳಿದ್ದವು: 1) ವ್ಹರ್ನ್ಯಾಕ್ಯುಲರ ಶಾಲೆಗಳು (6ನೇ ಇಯತ್ತೆ); 2) ವ್ಹರ್ನ್ಯಾಕ್ಯೂಲರ್ ಹಾಯ್‌ಸ್ಕೂಲುಗಳು. ಕನ್ನಡ ನಾಲ್ಕನೆಯ ಇಯತ್ತೆ ಪಾಸದ ಮೇಲೆಯೇ ಹಾಯ್‌ಸ್ಕೂಲ್‌ಗಳಗೆ ಪ್ರವೇಶವಿತ್ತು. ಮತ್ತು ಅಲ್ಲಿ ಇಂಗ್ಲೀಷ್‌ಮತ್ತು ಸಾಯನ್ಸ್ ವಿಷಯಗಳಿಗೆ ಪ್ರಾಧಾನ್ಯವಾಗಿದ್ದವು.1878 ರ ಸುಮಾರಿಗೆ 1ನೇ ವರ್ಗ 2 ವರ್ಷದ್ದು; ಆ ಮೇಲೆ 6 ವರ್ಗಗಳು.1ನೇ ವರ್ಗದ ಎರಡು ವರ್ಷಗಳ ಅವಧಿಯನ್ನು ಮುಂದೆ 1 ವರ್ಷ ಜಿನ್ ಇಯತ್ತೆ+1ವರ್ಷ 1ನೇ ಇಯತ್ತೆ ಹೀಗೆ ವರ್ಗೀಕರಿಸಲಾಯಿತು. ಹಾಯಸ್ಕೂಲ್ ಶಿಕ್ಷಣದ ಅವಧಿ 7 ವರ್ಷ; ಅಲ್ಲಿಂದ ಮೆಟ್ರಿಕ್ಯೂಲೇಶನ್ ಪರೀಕ್ಷೆಯನ್ನು ಮುಂಬಯಿ ವಿಶ್ವವಿದ್ಯಾಲಯದಿಂದ ನಡೆಸಲಾಗುತ್ತಿತ್ತು.

1864ರಲ್ಲಿ ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳನ್ನು ಮುಖ್ಯವಾಗಿ ಒಳಗೂಂಡಿದ್ದ ಸದನ್ ಡಿವಿಜನ್ ಗೆ 'ವಿಲಿಯಮ್ ಅಲೆನ್ ರಸೆಲ್', ಶಿಕ್ಷಣಾಧಿಕಾರಿಯಾಗಿ ನೇಮಕಗೂಂಡು ಸುಮಾರು 20 ವರ್ಷಗಳ ಕಾಲ ಈ ಭಾಗದ ಶೈಕ್ಷಣಿಕ ಬೆಳವಣಿಗೆಗೆ ಪ್ರೋತ್ಸಾಹ ನೀಡಿದನು. ಮತ್ತು ಇವರ ಪ್ರಯತ್ನದ ಫಲವಾಗಿ ಈ ಭಾಗದಲ್ಲಿ ಕನ್ನಡ ಭಾಷೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು.ಕ್ರಿ.ಶ. 1856 ರಂದು ನುರಿತ ಶಿಕ್ಷಕರನ್ನು ತಯಾರಿಸಲು ಧಾರವಾಡದಲ್ಲಿ ಸ್ಥಾಪಿಸಿದ ಮೊದಲ ನಾರ್ಮಲ ಸ್ಕೂಲ್ (ಶಿಕ್ಷಕರ ಟ್ರೇನಿಂಗ್ ಕಾಲೇಜು) ಉತ್ತರಕರ್ನಾಟಕದಲ್ಲಿ 'ಕರ್ನಾಟಕ ಕಾಲೇಜು'[ಧಾರವಾಡ] ಆರಂಭವಾಗುವವರೆಗೆ (1917) ಇದೂಂದೆ ಮಹತ್ವಪೂರ್ಣ ಕಾಲೇಜಾಗಿತ್ತು.

ಕ್ರಿ. ಶ 1881-82 ರ ಪ್ರಕಾರ ಮುಂಬಯಿ ಕರ್ನಾಟಕ ಪ್ರಾಂತ್ಯದಲ್ಲಿನ ಶಾಲಾಕಾಲೇಜುಗಳ ವಿವರ ಜಿಲ್ಲಾವಾರು ನೋಡುವುದಾದರೆ

ಧಾರವಾಡ: ಟ್ರೇನಿಂಗ್ ಕಾಲೇಜು 1, ಹಾಯಸ್ಕೂಲ್ 1, ಆಂಗ್ಲೋವರ್ನ್ಯಾಕ್ಯೂಲರ್ 10, ದೇಶಭಾಷೆಯ ಶಾಲೆ341, ಉದ್ಯೋಗಶಾಲೆ 1, ಪೋಲಿಸ್ ತುರಂಗ್ ಶಾಲೆ 2. ಮೇಲಿನ

ಎಲ್ಲಾಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ. 29711 ಕಂಡುಬರುತ್ತದೆ. ಇಲ್ಲಿಹಿಂದೂ ಮುಸ್ಲಿಂ, ಇತರೆ ಇಲ್ಲಾ ವರ್ಗದ ವಿದ್ಯಾರ್ಥಿಗಳು ಒಳಗೂಂಡಿದ್ದಾರೆ. ಮತ್ತು ಇಲ್ಲಿ ಉರ್ದು ಹಾಗೂ ಮರಾಠಿ ಶಾಲೆಗಳು ಒಳಗೊಂಡಿವೆ.

ಬೆಳಗಾವಿ: ಹಾಯಸ್ಕೂಲ್1, ಆಂಗ್ಲೋವರ್ನ್ಯಾಕ್ಯೂಲರ 9, ದೇಶಭಾಷೆ ಶಾಲೆಗಳು 177. ಎಲ್ಲಾ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ.16380- ಎಲ್ಲಾವರ್ಗದ ವಿದ್ಯಾರ್ಥಿಗಳು, ಒಳಗೂಂಡಿದ್ದಾರೆ.

ಬಿಜಾಪುರ:ಆಂಗ್ಲೋವರ್ನ್ಯಾಕ್ಯೂಲರ 9, ದೇಶಭಾಷೆಯವು 150, ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 10181. ಇವುಗಳಲ್ಲಿ 141 ಕನ್ನಡ ಗಂಡು ಮಕ್ಕಳ ಶಾಲೆ, 1 ಕನ್ನಡ ಹೆಣ್ಣು ಮಕ್ಕಳ ಶಾಲೆ, 1 ಇಂಗ್ಲಿಷ ಕಲಿಸುವ ಹೆಣ್ಣು ಮಕ್ಕಳ ಶಾಲೆ, 3 ಮರಾಠಿ ಮತ್ತು 4 ಉರ್ದು ಶಾಲೆಗಳು ಒಳಗೊಂಡಿವೆ. ಇವಲ್ಲದೆ 25 ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು.

ಕಾನಡಾ: ಹಾಯ್‌ಸ್ಕೂಲ್ 1, ಆಂಗ್ಲೊವರ್ನಕ್ಯುಲರ್ 5, ದೇಶಭಾಷೆಯವು 100, ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 6511. ಅಷ್ಟೇ ಅಲ್ಲದೆ ಬಾಸೆಲ್ ಮಿಷನ್ ವಿದ್ಯಾಸಂಸ್ಥೆಯು ಕ್ರಿ.ಶ. 1853 ರ ವೇಳಗೆ 50 ಪ್ರಾಥಮಿಕ ಶಾಲೆಗಳನ್ನು ಮತ್ತು 8 ಹಾಯಸ್ಕೂಲ್ ಗಳನ್ನು ನಡೆಸುತ್ತಿತ್ತು. ಇವು ಮುಂಬಯಿ ಕರ್ನಾಟಕ ಪ್ರಾಂತ್ಯವಲ್ಲದೆ ಇತರ ಪ್ರಾಂತ್ಯಗಳಲ್ಲಿಯೂ ಕಂಡುಬರುತ್ತಿದ್ದವು.ಸರ್ಕಾರಿ ಮತ್ತು ಮಿಷನರಿ ಶಾಲೆಗಳನ್ನು ಹೊರತು ಪಡಿಸಿ ಹಿಂದಿನಿಂದಲು ನಡೆದುಕೊಂಡು ಬಂದ ಗ್ರಾಮ್ಯಶಾಲೆಗಳು ಕೂಡ ಮುಂದುವರೆದಿದ್ದವು. ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳಾದ ಹಾಗೆ ಗ್ರಾಮ್ಯಶಾಲೆಗಳು ದಿನದಿನಕ್ಕೆ ಕಡಿಮೆಯಾಗತೊಡಗಿದವು.

ಇದೇ ಅವಧಿಯಲ್ಲಿ ಜಮಖಂಡಿ, ಮುಧೋಳ, ಸವಣೂರು, ಲಕ್ಷ್ಮೇಶ್ವರ ಮತ್ತು ರಾಮದುರ್ಗ ದೇಶೀಯ ಸಂಸ್ಥಾನಗಳಲ್ಲಿ 47 ಶಾಲೆಗಳಿದ್ದು ಅವುಗಳಲ್ಲಿ 2048 ವಿದ್ಯಾರ್ಥಿಗಳು ಇದ್ದರು. ಬಾಗಲಕೋಟೆ ಮತ್ತು ಸಂಸ್ಥಾನವಾದ ಮುಧೋಳದಲ್ಲಿ ಒಂದೊಂದು ಸರ್ಕಾರಿ ರಾತ್ರಿ ಶಾಲೆಗಳು ಇದ್ದವು ಇಲ್ಲಿ ಅನುಕ್ರಮವಾಗಿ 45 ಮತ್ತು 34 ವಿದ್ಯಾರ್ಥಿಗಳಿದರು. ಇವುಲ್ಲದೆ ದಾಖಲಾತಿಗೆ ಸೇರದಿದ್ದ 574 ದೇಶಿಯ[ಗಾಂವಟಿ] ಶಾಲೆಗಳು 4 ಜಿಲ್ಲೆಗಳಲ್ಲಿದ್ದವು. ಅದೇ ಮಾದರಿಯ 63 ಶಾಲೆಗಳು ದೇಶೀಯ ಸಂಸ್ಥಾನಗಳಲ್ಲಿದ್ದವು.

ಸ್ತ್ರೀ ಶಿಕ್ಷಣದಲ್ಲಿ ನಮಗೆ ಮೊದಲು ಕಂಡುಬರುವುದು ಗುಳೇದಗುಡ್ಡದಲ್ಲಿ ಮಿಷನರಿಯಿಂದ ಸ್ಥಾಪಿಸಲ್ಪಟ್ಟ [1854] ಮಹಿಳಾ ಶಾಲೆ, 1866-67 ರ ವರೆಗೆ ಇದೊಂದೆ ಮುಂಬಯಿ ಪ್ರಾಂತ್ಯದಲ್ಲಿ ಮಹಿಳಾ ಶಾಲೆಯಾಗಿತ್ತು. 1867 ರ ನಂತರ ಧಾರವಾಡದಲ್ಲಿ 1, ಮಹಿಳಾ ಶಾಲೆ ಪ್ರಾರಂಭವಾಯಿತು.1882-83 ರ ವೇಳೆಗೆ ಧಾರವಾಡ ವಿಭಾಗದಲ್ಲಿ 26 ಹೆಣ್ಣು ಮಕ್ಕಳ ಶಾಲೆಗಳನ್ನು ಮತ್ತು 4309 ವಿದ್ಯಾರ್ಥಿನಿಯರ ದಾಖಾಲಾತಿಯನ್ನು ಕಾಣುತ್ತೇವೆ. ಇದೇ ಅವಧಿಯಲ್ಲಿಯೇ ಬೆಳಗಾಂ ವಿಭಾಗದಲ್ಲಿ 9, ಮಹಿಳಾ ಶಾಲೆಗಳು ಮತ್ತು 512 ವಿದ್ಯಾರ್ಥಿನಿಯರ ದಾಖಾಲಾತಿಯನ್ನು ಮತ್ತು ಬಿಜಾಪುರ ಜಿಲ್ಲೆಯಲ್ಲಿ 1873-74 ರಲ್ಲಿ 10 ಮಹಿಳಾ ಶಾಲೆಗಳು ಕಂಡುಬಂದರೆ, 1881-82 ರಲ್ಲಿ 8 ಶಾಲೆಗಳಿರುವುದು ಕಂಡುಬರುತ್ತದೆ ಇಲ್ಲಿ ಶಾಲಾ ಸಂಖ್ಯಾ ಬೆಳವಣಿಗೆಯ ಕಡಿಮೆಯಾಗಿರುವುದು ತಿಳಿದುಬರುತ್ತದೆ. ಹಾಗೆಯೆ ಇಲ್ಲಿ 997 ವಿದ್ಯಾರ್ಥಿನಿಯರ ದಾಖಾಲಾತಿ ಕಂಡುಬರುತ್ತದೆ.ಹಾಗೂ ಕಾನಾಡ ಜಿಲ್ಲೆಯಲ್ಲಿ 4 ಶಾಲೆಗಳು ಅಲ್ಲಿ 208 ವಿದ್ಯಾರ್ಥಿನಿಯರು ಕಂಡುಬರುತ್ತಾರೆ.

1882 ರ ಮುಂಬಯಿ ಪ್ರಾಂತ್ಯದ ಆಡಳಿತದ ವರದಿ ಪ್ರಕಾರ ದಕ್ಷಿಣ ಪ್ರಾಂತ್ಯಗಳಲ್ಲೆಧಾರವಾಡ ಜಿಲ್ಲೆ ಶೈಕ್ಷಣಿಕವಾಗಿ ಮುಂದುವರೆದಿತ್ತು. ಈ ಅವಧಿಯಲ್ಲಿ ಧಾರವಾಡ, ಲಕ್ಷ್ಮೇಶ್ವರ, ಸವಣೂರುಗಳಲ್ಲಿ 150 ವಿದ್ಯಾರ್ಥಿನಿಯರ 2 ಹೆಣ್ಣು ಮಕ್ಕಳ ಶಾಲೆಗಳಿದ್ದು, ಇವು ಇಡೀ ಪ್ರಾಂತ್ಯದಲ್ಲೆ ಉತ್ತಮ ಶಾಲೆಗಳಾಗಿದ್ದವು. 1883 ರಲ್ಲಿ ಬೆಳಗಾವಿಯಲ್ಲಿ ರಾತ್ರಿ ಶಾಲೆಯೊಂದು ಪ್ರಾರಂಭಯಾಯಿತು ಇದರಲ್ಲಿ 25 ಹಿಂದುಳದ ವರ್ಗದ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ. 1884 ರಲ್ಲಿ ಹಂಟರ್ ಆಯೋಗದ ವರದಿ[1882]ಯನ್ನು ಆದರಿಸಿ ಕೇಂದ್ರ ಸರ್ಕಾರದವುರು 'ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ ಆಕ್ಟ' ಪಾಸು ಮಾಡಿತು. ಮತ್ತು ಪ್ರತಿಯೊಂದು ಜಿಲ್ಲೆಗೊಂದು ಲೊಕಲ್ ಬೋರ್ಡ ಸ್ಥಾಪಿಸಿದರು. ಹಾಗೂ ಆಯೋಗದ ಶಿಪಾರಸ್ಸಿನ ಮೇರೆಗೆ ಆಯಾ ಜಿಲ್ಲೆಯಲ್ಲಿನ ಎಲ್ಲಾ ಶಾಲೆಗಳನ್ನು ಬೋರ್ಡಿನವರಿಗೆ ಒಪ್ಪಿಸಿದರು. 1884 ರ ತರುವಾಯ ಈ ಭಾಗದಲ್ಲಿ ಲೋಕಲ್ಬೋರ್ಡ ಮತ್ತು ಮುನಿಸಿಪಲ್ ಬೋರ್ಡ ಶಾಲೆಗಳು ಹೆಚ್ಚಾಗಿ ಬೆಳೆಯ ಹತ್ತಿದವು.

ಕೇವಲ 9 ವಿದ್ಯಾರ್ಥಿನೀಯರೊಂದಿಗೆ 1895 ರಲ್ಲಿ ಶಿಕ್ಷಿಕಿಯರ ತರಬೇತಿ ಸಂಸ್ಥೆಯ ಧಾರವಾಡದಲ್ಲಿ ಪ್ರಾರಂಭವಾಯಿತು. ಇದು ಮುಂದೆ 1903 ರಲ್ಲಿ 'ಫಿಮೇಲ್ ನಾರ್ಮಲ್' ಸ್ಕೂಲ್ ಎಂಬ ಹೆಸರು ಪಡೆಯಿತು.ಇಲ್ಲಿ ಕನ್ನಡ ಮಾತ್ರವಲ್ಲದೆ ಉರ್ದು ಶಿಕ್ಷಕಿಯರಿಗೂ ತರಬೇತಿಯನ್ನ ನೀಡಲಾಗುತ್ತಿತ್ತು. 1880 ರಲ್ಲಿ ಗದಗ, ಬೆಟಗೇರಿ, ಸಿದ್ದನಬಾವಿ, ಗಮ್ಮಗೋಳದಲ್ಲಿ ಕೃಷಿ ತರಬೇತಿ ಕೇಂದ್ರಗಳು ಸ್ಥಾಪಿಸಲ್ಪಟ್ಟಿದ್ದವು.ಅಷ್ಟೇ ಅಲ್ಲದೆ ತಮ್ಮ ಸಮಾಜದ ಏಳಿಗೆಗಾಗಿ ಹಲವಾರು ಸಂಘ ಸಂಸ್ಥೆಗಳು ಹುಟ್ಟಿಕೊಂಡುವು 1883 ರಲ್ಲಿ ಲಿಂಗಾಯತ ಅಭಿವೃದ್ಧಿ ಸಂಸ್ಥೆ, 1893 ರಲ್ಲಿ ಮರಾಠ ವಿದ್ಯಾಪ್ರಸಾರ ಮಂಡಳಿ ಸ್ಥಾಪನೆಯಾದವು. ಹೀಗೆ ಮುಂತಾದ ಸಂಘ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಊಟ ವಸತಿ ನಿಲಯಗಳನ್ನು ಸ್ಥಾಪಿಸಿ, ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಮುಖಾಂತರ ಶೈಕ್ಷಣಿಕ ಬೆಳವಣಿಗೆಗೆ ಕಾರಣವಾಗಿವೆ.

ಮುಂಬಯಿ ಸರ್ಕಾರವು 1918 ರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಕಾನೂನನ್ನು ಜಾರಿಗೆ ತಂದಿತು. ಇದರ ಪ್ರಕಾರ ಕೆಲವು ಕ್ಷೇತ್ರಗಳಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಲಾಯಿತು. ಇದು ವಿದ್ಯಾಭ್ಯಾಸದ ತೀವೃತರ ಬೆಳವಣಿಗೆಗೆ ಕಾರಣವಾಯಿತು. 1911 ರಿಂದ 1947 ರ ವರೆಗಿನ ಶಾಲೆಗಳ ಬೆಳವಣಿಗೆಯನ್ನು ಈ ಕೆಳಗಿನಂತೆ ಕಾಣಬಹುದು.

ಜಿಲ್ಲೆಗಳು	1910–11	1921–22	1931–32	1941–42	1946–47
ಧಾರವಾಡ :					1
ಬಾಲಕರು	624	724	822	1230	107
ಬಾಲಕಿಯರು	72	103	115	140	147
ಬೆಳಗಾವಿ :					
ಬಾಲಕರು	390	479	778	1104	1066
ಬಲಕಿಯರು	43	49	81	90	93
ಉತ್ತರ ಕನ್ನಡ:					
ಬಾಲಕರು	259	300	317	546	525
ಬಾಲಕಿಯರು	17	24	30	45	49
ಒಟ್ಟು:					
ಬಾಲಕರು	1712	2099	2392	3926	3709
ಬಾಲಕಿಯರು	168	229	278	363	402
ಒಟ್ಟು :	**1880**	**2258**	**2679**	**4289**	**4111**

ಈ ಮೇಲಿನ ಅಂಕಿ ಸಂಖ್ಯೆಗಳು ನಮಗೆ ಸಂಪೂರ್ಣ ಪ್ರಾಥಮಿಕ ಶಾಲಾ ಬೆಳವಣಗೆಯ ಮಾಹಿತಿಯನ್ನು ಕೊಡುತ್ತದೆ.

ಬಿಜಾಪುರ ಜಿಲ್ಲೆಯಲ್ಲಿ 1900 ರ ವೇಳೆಗೆ ಒಟ್ಟು 207 ಪ್ರಾಥಮಿಕ ಶಾಲೆಗಳು[194 ಕನ್ನಡ ಗಂಡು ಮಕ್ಕಳ ಶಾಲೆ, 07 ಕನ್ನಡ ಹೆಣ್ಣು ಮಕ್ಕಳ ಶಾಲೆ, 09 ಉರ್ದು ಮತ್ತು 10 ಮರಾಠಿ ಶಾಲೆ] ಕಾರ್ಯನಿರ್ವಹಿಸುತ್ತಿದ್ದವು. 1910 ರ ವೇಳೆಗೆ 342 ಆಗಿದ್ದವು. ಒಂದು ದಶಕದ ಅವಧಿಯಲ್ಲಿ 135 ಹೊಸ ಶಾಲೆಗಳು ಶೈಕ್ಷಣಿಕವಾಗಿ ಹಿಂದುಳದ ಪ್ರದೇಶಗಳಲ್ಲಿ ಪ್ರಾರಂಭವಾಗಿರುವುದು ತಿಳದು ಬರುತ್ತದೆ.

ಈ ಎಲ್ಲಾ ಶಾಲೆಗಳಲ್ಲಿ ಸಮಾಜದ ಎಲ್ಲಾ ವರ್ಗದ ಜನರಿಗೂ ಮುಕ್ತ ಅವಕಾಶವಿತ್ತು. ಆದರೆ ಮೊದಮೊದಲು ಸಾರ್ವಜನಿಕ ಶಾಲೆಗಳಿಗೆ ಹಿಂದುಳದ ಜನಾಂಗಗಳ ಮಕ್ಕಳನ್ನು ಸೇರಿಸಲು ಪ್ರತಿಬಂಧಕ ವಿತ್ತಾದರೂ ಕ್ರಮೇಣ ಆ ಭಾವನೆ ಶಿಥಿಲವಾಯಿತು. ಮತ್ತು ಇದು ಶಿಕ್ಷಣದಲ್ಲಿ ಹಿಂದುಳದ ವರ್ಗಗಳಿಗೆ ಶಿಕ್ಷಿತರಾಗಲು ಅನುಕೂಲವಾಯಿತು.

1930 ರ ಒಂದು ವರದಿ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಸರ್ಕಾರವು ಖರ್ಚು ಮಾಡುತಿದ್ದ ವೆಚ್ಚ ಹೀಗಿದೆ. ಬಂಗಾಲ ಸರ್ಕಾವು ರೂ 1–50, ಮದ್ರಾಸ್ ಸರ್ಕಾರವು ರೂ 4–90, ಮುಂಬಯಿ ಸರ್ಕಾರವು ರೂ 11–11 ಪೈಸೆ ಖರ್ಚು ಮಾಡುತ್ತಿತ್ತು. ಈ ಮೇಲಿನ ದಾಖಲೆಗಳನ್ನು ನೋಡಿದರೆ ದೇಶದ ಬೇರೆ ಬೇರೆ ಪ್ರಾಂತ್ಯಗಳಲ್ಲಿಯೇ ಮುಂಬಯಿ ಸಕಾರವು ಆ ಕಾಲಕ್ಕೆ ಅಧಿಕ ಹಣ ಖರ್ಚು ಮಾಡುವ ಮೂಲಕ ತನ್ನ ಶಿಕ್ಷಣದ ಧೋರಣೆಯನ್ನು ಮುಂದುವರೆಸಿತ್ತು ಎಂಬುದು ಮನಗಾಣಬಹುದು.

ಪ್ರಾಥಮಿಕ ಶಾಲೆಗಳು ಮಾತ್ರವಲ್ಲದೇ 1882 ರಲ್ಲಿ ಈ ಪ್ರಾಂತ್ಯದಲ್ಲಿ 1 ಮಿಷನರಿ, 4 ಪ್ರೌಢ ಶಾಲೆಗಳಿದ್ದವು. ಬೆಳಗಾವಿಯಲ್ಲಿ ಸರ್ಕಾರದ ಅನುದಾನ ಪಡೆಯುತ್ತಿದ್ದ 1 ಮಿಷನರಿ ಶಾಲೆ ಹಾಗೂ ಧಾರವಾಡದಲ್ಲಿ 1848 ರಲ್ಲಿಯೂ, ಬೆಳಗಾವಿಯಲ್ಲಿ 1850 ರಲ್ಲಿಯೂ ಅದರಂತೆ ಬಿಜಾಪುರದಲ್ಲಿಯೂ 1890 ರಲ್ಲಿ ಮತ್ತು ಕಾರವಾರದಲ್ಲಿ ಒಂದೊಂದು ಸರ್ಕಾರಿ ಪ್ರೌಢ ಶಾಲೆಗಳಾದವು. ಮತ್ತು ಖಾಸಗಿ ಮಿಷನರಿ ಸಂಸ್ಥೆಗಳು ಕೂಡ ಹೆಚ್ಚು ಪ್ರೌಢ ಶಾಲೆಗಳನ್ನು ಪ್ರಾರಂಭಿಸಿದವು. 1921–22 ರ ಹೊತ್ತಿಗೆ 19 ಪ್ರೌಢ ಶಾಲೆಗಳಾದವು. 1956 ರ ಹೊತ್ತಿಗೆ 128 ಪ್ರೌಢ ಶಾಲೆಗಳಿದ್ದವು. ಇಲ್ಲಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಒಟ್ಟು ಸಂಖ್ಯೆ 41,571 ಇವುಗಳಲ್ಲಿ 9 ಮಾತ್ರ ಸರ್ಕಾರಿ ಪ್ರೌಢ ಶಾಲೆಗಳಿದ್ದವು.

ಶಿಕ್ಷಣ ಮಾಧ್ಯಮವನ್ನು ನೋಡುವದಾದರೆ 1938 ರ ವರೆಗೆ ಹೈಸ್ಕೂಲ್‌ಗಳಲ್ಲಿ ಇಂಗ್ಲಿಷ ಮಾಧ್ಯಮ ಹೊಂದಿದ್ದು, 1939 ರ ನಂತರ ಪ್ರಾಂತೀಯ ಬಾಷೆಗಳನ್ನು ಶಿಕ್ಷಣ ಮಾಧ್ಯಮವಾಗಿ ಬಳಸಲಾಯಿತು. ಇದೇ ಅವಧಿಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳ ಸ್ಥಾಪನೆಯಾಯಿತು.ಮೊದಲು ವಿಶ್ವವಿದ್ಯಾಲಯದ ಅಧೀನದಲ್ಲಿದ್ದ ಪ್ರೌಢ ಶಾಲೆಗಳನ್ನು ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳಯ ಅಧೀನಕ್ಕೆ ನೀಡಲಾಯಿತು.1947–48 ರಲ್ಲಿ ಬಾಲಕಿಯರಿಗಾಗಿಯೇ 83 ಮಾಧ್ಯಮಿಕ ಶಾಲೆಗಳನ್ನು ಮತ್ತು 61 ಪ್ರೌಢ ಶಾಲೆಗಳನ್ನು ಕೂಡ ಪರೀಕ್ಷಾ ಮಂಡಳಯ ಅಧೀನಕ್ಕೆ ಒಳಪಡಿಸಲಾಯಿತು.1932 ರಲ್ಲಿ ಹಿಂದುಳದ ವರ್ಗದವರೆಗೆ ವಿದ್ಯಾರ್ಥಿ ವೇತನವನ್ನು ಕೊಡಲು ಆರಂಭಿಸಲಾಯಿತು.

1857 ರಲ್ಲಿ ಆರಂಭವಾದ ಮುಂಬಯಿ ವಿಶ್ವವಿದ್ಯಾಲಯು ಬೇರೆ ಬೇರೆ ಪ್ರಾದೇಶಿಕ ವಿಶ್ವವಿದ್ಯಾನಿಲಯಗಳು ಅರಂಭವಾಗುವರೆಗೆ ಅಂದರೆ 1946 ರ ವರೆಗೂ ಈ ಪ್ರಾಂತ್ಯದ ವಿದ್ಯಾಭ್ಯಾಸಕ್ಕೆ ಅನುಕೂಲತೆಯನ್ನು ಒದಗಿಸಿತು.ಕರ್ನಾಟಕ ವಿಶ್ವವಿದ್ಯಾಲಯವು 1949 ರಲ್ಲಿ ಧಾರವಾಡದಲ್ಲಿ ಪ್ರಾರಂಭವಾಯಿತು.ಮತ್ತು ಈ ಭಾಗದಲ್ಲಿ ಸ್ಥಾಪನೆಯಾದ ಎಲ್ಲಾ ಕಾಲೇಜುಗಳು ಇದರ ಆಡಳತ ವ್ಯಾಪ್ತಿಗೆ ಒಳಪಟ್ಟವು. ಅವುಗಳೆಂದರೆ,

ಜಿಲ್ಲೆಗಳು	ಕಾಲೇಜುಗಳು	ಪ್ರಾರಂಭಕಾಲ	ವಿದ್ಯಾರ್ಥಿಗಳ ಸಂಖ್ಯೆ
ಧಾರವಾಡ:	ಕರ್ನಾಟಕ ಸರ್ಕಾರಿ ಕಾಲೇಜು	1917	922
	ಸರ್ಕಾರಿ ವ್ಯವಸಾಯ ಕಾಲೇಜು	1942	-
	ಸರ್ಕಾರಿ ವಾಣಿಜ್ಯ ಕಾಲೇಜು	1942	-
	ಬಾಷೆಲ್ ಮಿಷನ್ ಶಿಕ್ಷಣ ಕಾಲೇಜು	1945	-
	ಕೆ.ಇ.ಮಂಡಳಿಯ ಕಲೆ & ವಿಜ್ಞಾನ ಕಾಲೇಜು	1944	126
ಬೆಳಗಾವಿ:	ಲಿಂಗರಾಜು ಕಾಲೇಜು	1933	1014
	ಲಿಂಗರಾಜು ಮಾಧ್ಯಮಿಕ ತರಬೇತಿ ಕಾಲೇಜು	1939	95
	ರಾಜ ಲಕಮನಗೌಡ ಕಾನೂನು ಕಾಲೇಜು	1939	211
ಬಿಜಾಪುರ:	ಶ್ರೀ ಬಸವೇಶ್ವರ ಕಾಲೇಜು, ಬಾಗಲಕೋಟೆ	1944	220
	ವಿಜಯ ಕಾಲೇಜು, ಬಿಜಾಪುರ	1945	85
	ಸರ್ಕಾರಿ ಶಿಕ್ಷಣ ಕಾಲೇಜು	1945	-

ಈ ಮೇಲಿನ ಕಾಲೇಜುಗಳ ಸ್ಥಾಪನೆಯಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಪುಣೆ ಮತ್ತು ಮುಂಬಯಿಗೆ ಹೋಗುವುದನ್ನು ಕಡಿಮೆಗೊಳಿಸಿತು. ಮತ್ತು ನಗರದ ಶ್ರೀಮಂತ ವರ್ಗ ಮಾತ್ರವಲ್ಲದೆ ಗ್ರಾಮೀಣ ಭಾಗದ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೂ ಉನ್ನತ ಶಿಕ್ಷಣ ಕಲಿಯಲು ಸಹಾಯಕವಾಯಿತು.

1876-1947 ರ ಕಾಲ ಘಟ್ಟದಲ್ಲಿ ಕೇವಲ ಶಾಲಾ ಕಾಲೇಜುಗಳ ಸ್ಥಾಪನೆ ಮಾತ್ರವಾಗಲಿಲ್ಲ ಅವುಗಳ ಜೊತಗೆ ವಿದ್ಯಾಭ್ಯಾಸದ ಬೋಧನ ಕ್ರಮದಲ್ಲಿಯು ಕೂಡ ಸಾಕಷ್ಟು ಬದಲಾವಣೆಗಳಾದವು. ದೇಶಿಯ ಸಾಂಪ್ರದಾಯಿಕ ಶಾಲೆಗಳನ್ನು ಹೊರತುಪಡಿಸಿದರೆ ಸರ್ಕಾರಿ, ಮಿಷನರಿ ಮತ್ತು ಸಂಘ-ಸಂಸ್ಥೆಗಳಿಂದ ಸ್ಥಾಪಿಸಲ್ಪಟ್ಟ ಶಾಲೆಗಳಲ್ಲಿ ಏಕರೀತಿ ವಿದ್ಯಾಭ್ಯಾಸ ಕ್ರಮವನ್ನು ಕಾಣಬಹುದು. ಮಗ್ಗಿ, ಪದ್ಯಗಳ ಕಂಠಪಾಠ ಮೊದಲಾದವುಗಳಲ್ಲದೆ ವ್ಯವಸಾಯ, ವಿಜ್ಞಾನ, ರೇಖಾಚಿತ್ರ, ಮರಗೆಲಸ, ಆರೋಗ್ಯ, ಚರಿತ್ರೆ ಮತ್ತು ಭೂಗೋಳ ಮೊದಲಾದ ವಿಷಯಗಳನ್ನೊಳಗೊಂಡ ವಿದ್ಯಭ್ಯಾಸ ಕ್ರಮವು ಜಾರಿಗೆ ಬಂದಿತು.ಶಿಕ್ಷಣ ಬೋಧನ ಭಾಷಾ ವಿಷಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಮರಾಠಿ, ಕನ್ನಡ, ಉರ್ದು, ಸ್ಥಳೀಯ ಬಾಷೆಗಳನ್ನು ಮತ್ತು ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಮೊದಲು ಇಂಗ್ಲೀಷ ಭಾಷೆಯಲ್ಲಿ ಬೋಧನೆ ಮಾಡಲಾಗುತ್ತಿತ್ತು ನಂತರ ಕನ್ನಡ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಬೋಧಿಸಲು ಪ್ರಾರಂಭಿಸಿದರು.

ಶೈಕ್ಷಣಿಕ ಪಠ್ಯ ಪುಸ್ತಕಗಳಲ್ಲಿಯೋ ಅನೇಕ ಮಹನೀಯರ ಪ್ರಯತ್ನದ ಫಲವಾಗಿ ಮುಂಬಯಿ ಕರ್ನಾಟಕ ಮಾತ್ರವಲ್ಲದೆ ಇಡೀ ಮುಂಬಯಿ ಪ್ರಾಂತ್ಯದ ನಾಲ್ಕು ವಿಭಾಗಗಳಲ್ಲಿ [ಕೊಂಕಣ, ಡೆಕ್ಕನ್, ಗುಜರಾತ, ಸಿಂಧ್] ಸ್ಥಳೀಯ ಭಾಷೆಗಳಲ್ಲಿ ಪಠ್ಯ ಪುಸ್ತಕಗಳು ರಚನೆಗೊಂಡವು ಉದಾ: ಗುಜರಾತಿ, ಮರಾಠಿ, ಕನ್ನಡ, ಉರ್ದು, ಮುಂತಾದವುಗಳು.ಇದು ಶಿಕ್ಷಕರಿಗೂ ಮತ್ತು ವಿದ್ಯಾರ್ಥಿಗಳಿಗೂ ಶಿಕ್ಷಣದ ಮಾರ್ಗಗಳನ್ನು ಸರಳಗೊಳಿಸಿದವು. ಮುಂಬಯಿ ಕರ್ನಾಟಕ ವಿಭಾಗದಲ್ಲಿ ಶಿಕ್ಷಣ ಇಲಾಖೆಯ 'ಕೆನರೀಸ್ ಟ್ರಾನ್ಸ್‌ಲೇಟರ್' ಕಛೇರಿಯ ಮೂಲಕ ಅನ್ಯ ಭಾಷೆಯ ಹಲವಾರು ಪುಸ್ತಕಗಳು ಕನ್ನಡಕ್ಕೆ ಅನುವಾದಗೊಂಡವು. ಇದು ಮುಂದೆ ಕನ್ನಡ ಭಾಷಾ ಶಾಲೆಗಳ ಅಭಿವೃದ್ಧಿಗೆ ಪೂರಕವಾಯಿತು. ಮತ್ತು ಮಕ್ಕಳ ದಾಖಲಾತಿಯಲ್ಲಿಯೂ ಹೆಚ್ಚಳ ಕಂಡುಬಂದಿತು. ಹಾಗೆಯೆತರಬೇತಿ ಪಡೆದ ನುರಿತ ಶಿಕ್ಷಕರ ಸಂಖ್ಯೆಯು ಹೆಚ್ಚಳಗೊಂಡಿತು. ಹೀಗೆಹಲವಾರುಮಜಲುಗಳಲ್ಲಿ ಮುಂಬಯಿ ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಯನ್ನು ಕಾಣಬಹುದು.

ಟಿಪ್ಪಣಿಗಳು

1. ಹಂದ್ರಾಳ.ಮ.ಗು. ಮತ್ತು ಶಿವಶಂಕರ ಹಿರೇಮಠ [ಸಂ], 'ಕನ್ನಡದ ದೀಪ', ಪ್ರಕಾಶಕರು, ಡೆಪ್ಯೂಟಿ ಚನ್ನಬಸಪ್ಪನವರ ಶತಮಾನೋತ್ಸವ ಸಮೀತಿ, ಧಾರವಾಡ, 1982, ಪು.117.

2. ಹಾವನೂರು ಶ್ರೀನಿವಾಸ, 'ಹೊಸಗನ್ನಡದ ಅರುಣೋದಯ'ಪ್ರಕಾಶಕರು,ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು, 1974, ಪು.76-77.

3. ವೆಂಕಟರಂಗೋಕಟ್ಟೀ[ಅನುವಾದ],ಗ್ಯಾಝೆಟೀಯರ್, ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು [ಧಾರವಾಡ, ಬೆಳಗಾವಿ,ಬಿಜಾಪುರ,ಕಾನಡಾ ನಾಲ್ಕು ಜಿಲ್ಲೆಗಳದು], ಪ್ರಕಾಶಕರು,ಜೆ.ಜೆಟ್ಲಿ ಫಾರ್‌ಎಶಿಯನ್ ಎಜುಕೆಷನಲ್ ಸರ್ವಿಸ್, ನ್ಯೂ ಡೆಲ್ಲಿ, ಮರುಮುದ್ರಣ, 1984, ಪು. 411-412.

4. ಹಾವನೂರು ಶ್ರೀನಿವಾಸ,ಪು.71.

5. ವೆಂಕಟರಂಗೋಕಟ್ಟೀ[ಅನುವಾದ],ಗ್ಯಾಝೆಟೀಯರ್, ಪು. 413.

6. ಕಾಮತ್.ಎಸ್.ಯು [ಸಂ], ಭಾರತದ ಗ್ಯಾಜೆಟೀಯರ್, ಕರ್ನಾಟಕ ರಾಜ್ಯ, ಭಾಗ ಮೂರು, ಪ್ರಕಾಶಕರು, ಕರ್ನಾಟಕ ರಾಜ್ಯ ಸರ್ಕಾರ್, ಬೆಂಗಳೂರು, 1986, ಪು.06.

7. ವೆಂಕಟರಂಗೋಕಟ್ಟೀ[ಅನುವಾದ],ಗ್ಯಾಝೆಟೀಯರ್, ಪು. 409.

8. ಕಾಮತ್.ಎಸ್.ಯು [ಸಂ], ಭಾರತದ ಗ್ಯಾಜೆಟೀಯರ್, ಕರ್ನಾಟಕ ರಾಜ್ಯ, ಧಾರವಾಡ ಜಿಲ್ಲೆ, ಪ್ರಕಾಶಕರು, ಕರ್ನಾಟಕ ರಾಜ್ಯ ಸರ್ಕಾರ್, ಬೆಂಗಳೂರು, 1995, ಪು. 693.

9. ಕಾಮತ್.ಎಸ್.ಯು[ಸಂ], ಕರ್ನಾಟಕ ಸ್ಟೇಟ್ ಗ್ಯಾಜೆಟೀಯರ್, ಬೆಳಗಾಂವ್ ಡಿಸ್ಟ್ರಿಕ್ಟ್, ಪ್ರಕಾಶಕರು, ಕರ್ನಾಟಕ ಸ್ಟೇಟ್ ಗೌರ್ನಮೆಂಟ್, ಬೆಂಗಳೂರು, 1987, ಪು. 698.

10. ಕಾಮತ್.ಎಸ್.ಯು [ಸಂ],ಭಾರತದ ಗ್ಯಾಜೆಟೀಯರ್, ಕರ್ನಾಟಕ ರಾಜ್ಯ, ಧಾರವಾಡ ಜಿಲ್ಲೆ, ಪ್ರಕಾಶಕರು, ಕರ್ನಾಟಕ ರಾಜ್ಯ ಸರ್ಕಾರ್, ಬೆಂಗಳೂರು, 1995, ಪು.

11. 696-697. ಅದೇ, ಪು.709.

12. ಕರ್ನಾಟಕದ ಪರಂಪರೆ, ಸಂಪುಟ 2,ಪ್ರಕಾಶಕರು, ಮೈಸೂರು ರಾಜ್ಯ ಸರ್ಕಾರ್, 1970, ಪು. 399.

13. ಡಾ.ಮುನಿಸ್ವಾಮಿ [ಸಂ], ಭಾರತದ ಗ್ಯಾಜೆಟೀಯರ್, ಕರ್ನಾಟಕ ರಾಜ್ಯ, ವಿಜಾಪುರ ಜಿಲ್ಲೆ [ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ] ಪ್ರಕಾಶಕರು, ಕರ್ನಾಟಕ ರಾಜ್ಯ ಸರ್ಕಾರ್, ಬೆಂಗಳೂರು, 1999, ಪು. 803.

14. ಹಂದ್ರಾಳ.ಮ.ಗು. ಮತ್ತು ಶಿವಶಂಕರ ಹಿರೇಮಠ [ಸಂ], ಪು. 117.

15. ಕಾಮತ್.ಎಸ್.ಯು [ಸಂ], ಭಾರತದ ಗ್ಯಾಜೆಟೀಯರ್, ಕರ್ನಾಟಕ ರಾಜ್ಯ, ಭಾಗ ಮೂರು, ಪ್ರಕಾಶಕರು, ಕರ್ನಾಟಕ ರಾಜ್ಯ ಸರ್ಕಾರ್, ಬೆಂಗಳೂರು, 1986, ಪು. 17.

16. ಕರ್ನಾಟಕದ ಪರಂಪರೆ, ಸಂಪುಟ 2, ಪು. 40.

ಆರ್ಥಿಕ ಸಬಲತೆಗಾಗಿ ಪಶುಸಂಗೋಪನೆ ಮತ್ತು ಹೈನುಗಾರಿಕೆ: ಒಂದು ಅವಲೋಕನ

ಪ್ರಸನ್ನ ಕುಮಾರ್. ಎಂ. ಜಿ*, ಡಾ॥ ವೈ. ಎಂ. ರಾಜು
*ಸಂಶೋಧನಾ ವಿದ್ಯಾರ್ಥಿ, **ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು-574 199

ಪಶುಸಂಗೋಪನೆ ಮತ್ತು ಹೈನುಗಾರಿಕೆ ಭಾರತದ ಆರ್ಥಿಕತೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ರಾಷ್ಟ್ರೀಯ ಆರ್ಥಿಕತೆಯಲ್ಲಿ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಜಾನುವಾರು ಬರ, ಕ್ಷಾಮ, ಮತ್ತು ಇತ್ತಿತ್ತರ ನೈಸರ್ಗಿಕ ವಿಕೋಪಗಳು ಹಾಗೂ ಪ್ರಕೃತಿಯ ಅಸಮತೋಲನ ಈ ಉದ್ಯಮಗಳಿಗೆ ಮಾರಕವಾಗಿದೆ. ಈ ಕ್ಷೇತ್ರಗಳು ಲಕ್ಷಾಂತರ ಜನರ ಅಗ್ಗದ ಪೌಷ್ಟಿಕಾಂಶದ ಆಹಾರ ಒದಗಿಸುವುದರ ಜೊತೆಗೆ ಸಣ್ಣ ಮತ್ತು ಅತೀ ಸಣ್ಣ ರೈತರ ಹಾಗೂ ಮಹಿಳೆಯರ ಕುಟುಂಬದ ಆದಾಯಕ್ಕೆ ಪೂರಕವಾಗಿದೆ. ವಿಶೇಷವಾಗಿ ಗ್ರಾಮೀಣವಲಯದ ಲಾಭದಾಯಕ ಉದ್ಯೋಗವಾಗಿದ್ದು ಸಂಪಾದನೆ ಉತ್ಪಾದಿಸುವಲ್ಲಿ ಗಮನಾರ್ಹ ಪಾತ್ರವನ್ನು ವಹಿಸುತ್ತದೆ.

ಪೀಠಿಕೆ: ಪಶುಸಂಗೋಪನೆ ಮತ್ತು ಹೈನುಗಾರಿಕೆ ಭಾರತದ ಆರ್ಥಿಕತೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಯಿಸುತ್ತದೆ. ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ರಾಷ್ಟ್ರೀಯ ಆರ್ಥಿಕತೆಯಲ್ಲಿ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಜಾನುವಾರು ಬರ, ಕ್ಷಾಮ, ಮತ್ತು ಇತ್ತಿತ್ತರ ನೈಸರ್ಗಿಕ ವಿಕೋಪಗಳು ಹಾಗೂ ಪ್ರಕೃತಿಯ ಅಸಮತೋಲನ ಈ ಉದ್ಯಮಗಳಿಗೆ ಮಾರಕವಾಗಿದೆ. ಈ ಕ್ಷೇತ್ರಗಳು ಲಕ್ಷಾಂತರ ಜನರ ಅಗ್ಗದ ಪೌಷ್ಟಿಕಾಂಶದ ಆಹಾರ ಒದಗಿಸುವುದರ ಜೊತೆಗೆ ಸಣ್ಣ ಮತ್ತು ಅತೀ ಸಣ್ಣ ರೈತರ ಹಾಗೂ ಮಹಿಳೆಯರ ಕುಟುಂಬದ ಆದಾಯಕ್ಕೆ ಪೂರಕವಾಗಿದೆ. ವಿಶೇಷವಾಗಿ ಗ್ರಾಮೀಣವಲಯದ ಲಾಭದಾಯಕ ಉದ್ಯೋಗವಾಗಿದ್ದು ಸಂಪಾದನೆ ಉತ್ಪಾದಿಸುವಲ್ಲಿ ಗಮನಾರ್ಹ ಪಾತ್ರವನ್ನು ವಹಿಸುತ್ತದೆ.

ಪಶುಸಂಗೋಪನೆ ಮತ್ತು ಹೈನುಗಾರಿಕೆಯ ಅಭಿವೃದ್ಧಿ: ಅರ್ಥಿಕತೆ ಮತ್ತು ಕೃಷಿ ವಲಯ ಸೆಂಟ್ರಲ್ ಸ್ಟ್ಯಾಟಿಸ್ಟಿಕಲ್ ಸಂಸ್ಥೆಯ ಪ್ರಕಾರ (ಅಖೌ) ಅಂದಾಜಿಸಿದ ಪ್ರಕಾರ 2007-08ರಲ್ಲಿ ರೂ.2,82,779 ಕೋಟಿ (ರೂ 2,40,601 ಜಾನುವಾರು ವಲಯಕ್ಕೆ, ಕೋಟಿ ರೂ 42,178 ಮೀನುಗಾರಿಕೆ ಕೋಟಿ) ಆದಾಯ ಗಳಸಿತ್ತು. ಇದು ರೂ. 8,94,420 ಔಟ್ಪುಟ್ ಮೌಲ್ಯದ ಶೇಕಡಾ 31.6 ಆಗಿದೆ. 2007-08ರ ಅವಧಿಯಲ್ಲಿ ಈ ಕ್ಷೇತ್ರದಲ್ಲಿ ಒಟ್ಟು ಉಆಕೆ ಕೊಡುಗೆ 5.21% ಆಗಿತ್ತು. ಜಾನುವಾರು ಮತ್ತು ಹೈನುಗಾರಿಕೆ ಕ್ಷೇತ್ರದ 2008-09ರ ಒಟ್ಟು ಉಆಕಯು 4.07% ಕೊಡುಗೆಯಾಗಿ ನೀಡಿತ್ತು ಮತ್ತು ಸುಮಾರು ರೂ. 26,84,000/- ಮೌಲ್ಯದ ಉತ್ಪಾದನೆಯಲ್ಲಿ ಒಟ್ಟು ಕೃಷಿ ಮತ್ತು ಸಂಬಂಧಿತ ಚಟುವಟಿಕೆಯಲ್ಲಿ 11ನೇ ಪಂಚವಾರ್ಷಿಕ ವಲಯಕ್ಕೆ 108.5 ದಶಲಕ್ಷ ಟನ್ ಗಳಷ್ಟು ಹಾಗೂ 55.6 ಶತಕೋಟಿ ಮೊಟ್ಟೆಗಳು, 42.7ದಶಲಕ್ಷ ಕೆ.ಜಿ ಉಣ್ಣೆ ಮತ್ತು 3.8ದಶಲಕ್ಷ ಟನ್ ಮಾಂಸ ಕೊಡುಗೆ ನೀಡಿದೆ.

ಇಂದು ಭಾರತವು ವಿಶ್ವದ ಅತೀ ದೊಡ್ಡ ಡೈರಿ (ಹಸುಗಳು ಮತ್ತು ಎಮ್ಮೆಗಳು) 112.5 ದಶಲಕ್ಷ ಟನ್‌ಗಳಷ್ಟು ಹಾಲು

ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ವಿಶ್ವದ 3ನೆ ಸ್ಥಾನ 180 ದಶಲಕ್ಷ ಮೊಟ್ಟೆಗಳನ್ನು ಪ್ರತಿದಿನ ಉತ್ಪಾದಿಸುತ್ತದೆ. ಹಾಗೂ ಕೋಳಿ ಮಾಂಸದಲ್ಲಿ ವಿಶ್ವದ 6ನೇ ಅತೀ ದೊಡ್ಡ ನಿರ್ಮಾಪಕ. ಭಾರತದ ಪ್ರಾಣಿ ಉತ್ಪನ್ನಗಳು ಸ್ಥಳೀಯವಾಗಿ ಬಳಸಲಾಗುತ್ತದೆ. ಎಮ್ಮೆ ಮಾಂಸ ಜಾಗತಿಕದಲ್ಲಿ ರಪ್ತು ಪ್ರಥಮ ಸ್ಥಾನಗಳಿಸಿದೆ. ಜೊತೆಗೆ ಸೋಯಾ ಊಟ, ಮತ್ತು ಬೆಳೆಸಿದ ಪ್ರಾಣಿಗಳು ವಾಣಿಜ್ಯ ಫೀಡ್ ಪ್ರಮುಖ ಘಟಕಾಂಶವಾಗಿದೆ. 2008ರಲ್ಲಿ ಅಮೇರಿಕಾ ಮೂಲದ ಟೈಸನ್ ಪುಡ್ಸ್ ಗೋದ್ರೆಜ್ ಪ್ರಕಾರ ಒಟ್ಟು ಬಾರತದ ಸಂಘಟಿತ ಪ್ರಾಣಿಗಳ ಆಹಾರ ಮತ್ತು ಕೋಳಿ ಪ್ರಮುಖ ಉತ್ಪಾದನೆಯಲ್ಲಿ 51% ಪಾಲನ್ನು ಪಡೆದುಕೊಂಡಿದ್ದು ಅಂದಾಜು 200 ದಶಲಕ್ಷ ಮೊಟ್ಟೆ ಇಡುವ ಕೋಳಿಗಳು ಬ್ಯಾಟರಿ ಪಂಜರದಲ್ಲಿ ಬೆಳೆಯುತ್ತಿದ್ದು ಅರ್ಧಕ್ಕಿಂತ ಹೆಚ್ಚು 2 ಮಿಲಿಯನ್ + ಮಾಂಸ ಪ್ರತಿವರ್ಷ ಉತ್ಪಾದನೆಯಾಗುತ್ತದೆ. ಕೋಳಿ ಮತ್ತು ಮೊಟ್ಟೆಗಳು ಸಮಗ್ರ ಮತ್ತು ಒಪ್ಪಂದದ ಕೃಷಿಯಲ್ಲಿ ವ್ಯಾಪಕವಾಗಿದೆ. ಹಾಲು ಮತ್ತು ಚೀಸ್ ಕ್ಷೇತ್ರದಲ್ಲಿ ಇನ್ನು ವಿಸ್ತಾರವಾದ ವ್ಯವಸ್ಥೆಗಳು, ಅನೇಕ ಸಣ್ಣ ಪ್ರಮಾಣದ ಉತ್ಪಾದಕರು ಹಾಗೂ ಹಸುಗಳು ಮತ್ತು ಎಮ್ಮೆಗಳು ಒಳಗೊಂಡಿರುತ್ತದೆ.

ಆರ್ಥಿಕ ಸಬಲತೆಗಾಗಿ ಪಶುಸಂಗೋಪನೆ ಮತ್ತು ಹೈನುಗಾರಿಕೆಯ ಕೊಡುಗೆ : ಪಶುಸಂಗೋಪನೆ ಮತ್ತು ಹೈನುಗಾರಿಕೆ ಕೊಡುಗೆಯು ಒಟ್ಟು ದೇಶಿಯ ಉತ್ಪನ್ನದ ಡೈರಿಯ 5.9ರಷ್ಟು 2000–01ರಲ್ಲಿ ಆಗಿತ್ತು. ಇದೇ ಅವಧಿಯಲ್ಲಿ ಜಾನುವಾರು ಮತ್ತು ಹೈನುಗಾರಿಕೆ ಅಂದಾಜು ಲಾಭಾಂಶ 1,70,205 ಕೋಟಿ ಆಗಿತ್ತು. ಇದರಲ್ಲಿ ಹಾಲು ಮಾತ್ರ (ರೂ. 1,01,990 ಕೋಟಿ) ಗೋಧಿಗಿಂತ 47.091ಕೋಟಿಗಿಂತ ಜಾಸ್ತಿಯಾಗಿರುತ್ತದೆ. 1998ರಲ್ಲಿ 4.6 ದಶಲಕ್ಷ ಮಾಂಸ ಉತ್ಪಾದನೆ ಎಂದು ಅಂದಾಜಿಸಲಾಗಿತ್ತು. ಇದರ ಅಭಿವೃದ್ಧಿಗೆ ಕನಿಷ್ಟ ಜಾನುವಾರುಗಳ ತಳ ವೇಗವಾಗಿ ಬೆಳೆಯಬೇಕಿತ್ತು. ಮೇಕೆ ಮತ್ತು ಕುರಿಗಳ ಬ್ರೀಡ್ ಉತ್ಪಾದನೆ ಮತ್ತು ರೋಗಗಳ ತಡೆ ಅವಶ್ಯಕವಾಗಿದೆ. 9ನೇ ಪಂಚವಾರ್ಷಿಕ ಯೋಜನೆಯಲ್ಲಿ 96.49 ದಶಲಕ್ಷ ಹಾಲು ಉತ್ಪಾದನೆ ಸಾಧ್ಯವಾಗಲಲ್ಲ. ಏಕೆಂದರೆ ಒಂದು ಘೋರ ಖಾಯಿಲೆಯಿಂದ ಜಾನುವಾರುಗಳನ್ನು ತಡೆಯಲು 10ನೇ ಪಂಚವಾರ್ಷಿಕ ಯೋಜನೆಯನ್ನು ಹೂಡಲಾಗಿತ್ತು.

ಉಪಸಂಹಾರ: ಜಾನುವಾರು ಕೃಷಿ ವಲಯದಲ್ಲಿ ಸಣ್ಣ ರೈತರು ಮಹಿಳೆಯರು ಭೂರಹಿತ ಕಾರ್ಮಿಕರು ಹಾಗೂ ಕನಿಷ್ಟ ವಿತರಣೆ ರೈತರು ಈ ವಲಯದಲ್ಲಿ ಪ್ರಗತಿಗೆ ಕಾರಣವಾಗಿರುತ್ತಾರೆ. ಜಾನುವಾರುಗಳ ಸಂತಾನಾಭಿವೃದ್ಧಿ ಬಳಕೆಯಲ್ಲಿ ದೇಶಿಯತೆ ತಳ ಅಪ್ಗ್ರೇಡ್ ಇಂತಹ ಸುಧಾರಿತ ತಳಗಳ ಸ್ಟಾಕ್ ಇದೆ. ಕೃಷಿ ಉದ್ಯಮದ ಅಡಿಯಲ್ಲಿ ಕೋಳಿ ಕ್ಷೇತ್ರ ಸ್ವಲ್ಪ ಕಷ್ಟಕರವಾಗಿದ್ದು ಕೋಳಿ ಜ್ವರದಂತಹ ಖಾಯಿಲೆಗಳಿಂದ ಬಳಲುತ್ತಿದೆ. ಇಂತಹ ಉದ್ಯಮಗಳಲ್ಲಿ ಸ್ವಲ್ಪ ಅಸ್ಪಷ್ಟ, ಅನುಭವದ ಕೊರತೆ ಮತ್ತು ಸರಕಾರದ ಅಸಹಕಾರ ಉದ್ದಿಮೆಗಾರರಿಗೆ ಋಣಾತ್ಮಕವಾಗಿದೆ. ಅಧಿಕ ಫೀಡ್ ವೆಚ್ಚ, ಕ್ರೆಡಿಟ್ ಮತ್ತು ಮಾರುಕಟ್ಟೆಯ ಮಾಹಿತಿ, ದೊರಕದಿರುವುದರಿಂದ ಮತ್ತು ಸಣ್ಣ ರೈತರು ಬೇರೆ ಬೇರೆಯಾಗಿ ಮಾರ್ಪಟ್ಟಿದ್ದು ಮಧ್ಯವರ್ತಿಗಳಿಂದ ಮೋಸ ಹೋಗುತ್ತಾರೆ. ಸರಕಾರವು ವಿವಿಧ ಯೋಜನೆಯಗಳ ಮೂಲಕ ಹಾಗೂ ಯಾಂತ್ರೀಕೃತಗಳಿಂದ ಗ್ರಾಮೀಣ ಪ್ರದೇಶದಲ್ಲಿ ಸುಧಾರಣೆ ತರುವುದು ಅತೀ ಅವಶ್ಯಕವಾಗಿದೆ. ಸ್ಥಳೀಯ ಕೋಳಿಗಳ ತಳಗಳು, ಸುದಾರಿತ ತಳಗಳು ಸೇರಿದ್ದಂತೆ ಕಡಿಮೆ ಗುಣಮಟ್ಟದ ಕಚ್ಚಾ ಆಹಾರ ಮತ್ತು ಉತ್ತಮ ರೋಗಗಳ ಪ್ರತಿರೋಗ ಔಷಧಿ ನೀಡುವುದರಿಂದ ನಿರುದ್ಯೋಗ ಯುವಜನಾಂಗ ತಮ್ಮ ಜೀವನವನ್ನು ರೂಪಿಸಿಕೊಳ್ಳುವುದರಲ್ಲಿ ತೊಡಗಬಹುದು.

ಜಲ ಪರಸರ ವ್ಯವಸ್ಥೆ ಮತ್ತು ಮೀನುಗಾರಿಕಾ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ

*ಮಿಸ್.ರಮ್ಯಶ್ರೀ.ಎಂ.ಜಿ, **ಡಾ.ಈಶ್ವರ ಪಿ
* ಸಂಶೋಧನಾ ವಿದ್ಯಾರ್ಥಿನಿ, (ಯು.ಜಿ.ಸಿ ಎಸ್.ಆರ್.ಫ್), ** ಸಂಶೋಧನಾ ಮಾರ್ಗದರ್ಶಕ, ಪ್ರಾಧ್ಯ್ಯಪಕರು, ವಾಣಿಜ್ಯ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ–574199

ಜಲ ಪರಸರ ವ್ಯವಸ್ಥೆಯು ಪ್ರಕೃತಿಯ ಅಲಿಯಮಿತ ಖಜಾನೆಯಾಗಿದೆ. ಪ್ರಾಚೀನ ಕಾಲದಿಂದಲೂ ಮೀನುಗಾರಿಕೆಯು ಮಾನವರಿಗೆ ಒದಗಿಸಿದ ಪ್ರಮುಖ ಆಹಾರದ ಮೂಲ, ಉದ್ಯೋಗ ಹಾಗೂ ಆರ್ಥಿಕ ಪ್ರಯೋಜನಗಳನ್ನೂ ಒದಗಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಕರಾವಳಿ ಮತ್ತು ಒಳನಾಡಿನ ಮೀನುಗಾರಿಕೆಯು ವಿಶ್ವದ ಮೀನುಗಾರಿಕೆ ಆಹಾರದ ಉತ್ಪಾದನ ಗುಣಮಟ್ಟ, ಅಂತರಾಷ್ಟ್ರೀಯ ಬೇಡಿಕೆಗೆ ಪ್ರತಿಕ್ರಿಯೆಯಿಯಾಗಿರುವ ಕಾರ್ಖಾನೆಗಳು, ಖರೀದಾರ ಹೂಡಿಕೆಗಳು, ಮೀನುಗಾರಿಕಾ ಉತ್ಪನ್ನಗಳು ಮತ್ತು ಸರಿಸ್ಕರಣೆ ಮೂಲಕ ಹೊಸ ರಾಖಾದಾಯಕ ಅವಕಾಶವನ್ನು ಸೃಷ್ಟಿಸಿದೆ. ಹಲವು ಕಡೆ ಜಲ ಪರಸರ ವ್ಯವಸ್ಥೆಯಿಲ್ಲಿ ಅಸಮತೋಲನ ತೋರಿಬರುತ್ತಿದೆ. ಈ ನಿಟ್ಟಿನಲ್ಲಿ ಸರಿಶೋಧನೆಯ ಮುಖ್ಯ ಉದ್ದೇಶ ಜಲ ಜೀವಿ ಜೀವನ ವ್ಯವಸ್ಥೆ ಮತ್ತು ಮೀನುಗಾರಿಕಾ ಸರಿಪನ್ಮೂಲಗಳನ್ನು ಸರಿರಕ್ಷಣೆ ಮಾಡುವಲ್ಲಿ ಸರಿಸ್ಥೆಗಳ ಸಾಮಾಜಿಕ ಹೊಣೆಗಾರಿಕೆಯನ್ನು ತಿಳಿಯುವುದಾಗಿದೆ.

ಮುಖ್ಯ ಪದಗಳು: ಜಲ ಪರಸರ ವ್ಯವಸ್ಥೆ, ಮೀನುಗಾರಿಕೆ ಮತ್ತು ಸಾಮಾಜಿಕ ಸಾರಿಸ್ಥಿಕ ಹೊಣೆಗಾರಿಕೆ.

ಪೀಠಿಕೆ:

ಕೊನೆಯ ಮರ ಕಡಿದಾಗ ಮಾತ್ರ;
ಕೊನೆಯ ನದಿ ವಿಷವದಾಗ ಮಾತ್ರ;
ಕೊನೆಯ ಮೀನು ಹಿಡಿದಾಗ ಮಾತ್ರ;
ಆಗ ಮಾತ್ರ ಹಣದಿಂದ ಎನನ್ನೂ ತಿನ್ನಲಾಗುವುದಿಲ್ಲ ಎಂದೂ ತಿಳಿಯುತ್ತದೆ.
–ಕ್ರೀ ಭಾರತೀಯ ಪ್ರವಾದಕ

ಭಾರತದ ಹವಾಮಾನ, ವೈವಿಧ್ಯತೆಯ ಭೂ ಪ್ರದೇಶಗಳು, ಹಲವು ನದಿಗಳು, ಕಾಲುವೆಗಳು, ಕರಾವಳಿ ತೇವಾಂಶವುಳ್ಳ ಜಲ ಆವಾಸ ಸ್ಥಾನಗಳು ಹಾಗೂ ಒಳನಾಡಿನ ಸಮೃದ್ಧ ವೈವಿಧ್ಯತೆಯನ್ನು ಬೆಂಬಲಿಸುವ ಅದರ ಭೌಗೋಳಿಕ ಕಾರಣಗಳು ನಮ್ಮದೇಶ ಭಾರತದ ಆಶೀರ್ವಾದವಾಗಿದೆ. ಭಾರತವು ಸರಿಸುಮಾರು 7500ಕಿ.ಮೀ.ನಷ್ಟು ನದಿ ವ್ಯವಸ್ಥೆ, ಕರಾವಳಿ ತೀರ ಮತ್ತು ಪರ್ವತಗಳನ್ನು ಹೊಂದಿದೆ. ಅದರಲ್ಲಿ 3.6 ಮಿಲಿಯನ್ ಹೆಕ್ಟೇರ್ ಮೀನು ಸಂಸ್ಕೃತಿಗೆ ಸೂಕ್ತವಾಗಿದೆ. ಹಾಗೆನೇ ಕಡಲ ತೀರಕ್ಕೂ ಮತ್ತು ಒಳನಾಡಿನ ನೀರಿನ ಮೂಲ ಆಶಯ ಹೊಂದಿರುವ ನಮ್ಮಕರ್ನಾಟಕ ರಾಜ್ಯವು ಹಲವಾರು ನದಿ, ಸರೋವರ, ಹೊಳ ಹಾಗೂ 320 ಕಿ.ಮೀ. ನಷ್ಟು ಕರಾವಳಿ ತೀರನ್ನು ಹೊಂದಿದೆ.

ಅಧ್ಯಯನದ ಪ್ರಾಮುಖ್ಯತೆ: ಜನಸಂಖ್ಯೆ ಹೆಚ್ಚಳ ಮಾನವನ ಪರಸರದ ಮೇಲೆ ಪರಿಣಾಮ ಬೀರುತ್ತದೆ. ಮೀನುಗಾರಿಕೆಕ್ಷೇತ್ರದ ಪ್ರಮುಖ ಬೆಳವಣಿಗೆ ಮೀನು ಸಂಪನ್ಮೂಲಗಳ ನವೀಕರಣ, ಜನರ ಬೇಡಿಕೆ, ಕಂಪೆನಿಗಳ ಸಾಮಜಿಕ ಕಳಕಳಿ ಮತ್ತು ಜಲ ಪರಿಸರ ವ್ಯವಸ್ಥೆಯ ಸಂರಕ್ಷಣೆ ಈ ಜಲ ಪರಿಸರಅಧ್ಯಯನವನ್ನು ಕೈಗೊಳ್ಳುವಂತೆ ಮಾಡಿದೆ.

ಅಧ್ಯಯನದ ಮೂಲ ಉದ್ದೇಶಗಳು

1) ಜಲ ಪರಿಸರ ವ್ಯವಸ್ಥೆ ಹಾಗೂ ಮೀನೂಗಾರಿಕಾ ಉತ್ಪನ್ನಗಳು ಮತ್ತು ಸೇವೆಗಳ ಕೂಲಂಕುಷ ಅಧ್ಯಯನ ನಡೆಸುವುದು

2) ಜಲ ಪರಿಸರ ವ್ಯವಸ್ಥೆ ಮತ್ತು ಜಲ ಪರಿಸರ ವ್ಯವಸ್ಥೆಯ ನಿರ್ವಹಣೆಯ ಒಟ್ಟುಗೂಡುವಿಕೆಯನ್ನು ಮಾದರಿಯ ಮುಖಾಂತರ ಅರ್ಥೈಸಿಕೊಳ್ಳುವುದು

3) ಅಧ್ಯಯನಕ್ಕೆ ಅನುಕೂಲಕರವಾಗುವಂತೆ ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸಿ ವ್ಯಕ್ತಪಡಿಸುವುದು.

ಮೀನುಗಾರಿಕೆಯ ಪಾತ್ರ: ಸಂಗ್ರಹಿಸುವುದು, ಬೇಟೆ ಮತ್ತು ಮೀನುಗಾರಿಕೆ ಮಾನವಕುಲದ ಪುರಾತನವಾಗಿ ನಡೆದುಕೊಂಡು ಬಂದಿರುವಂತಹದ್ದು.ಜಲ ಪರಿಸರಜೀವಂತ ಸಂಪನ್ಮೂಲಗಳ ಪೋಷಣೆ, ಉದ್ಯೋಗ ಸೃಷ್ಟಿ ಮತ್ತು ವಿದೇಶ ವಿನಿಮಯ ಗಳಿಕೆಗಳು ಪ್ರಪಂಚದಾದ್ಯಂತಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅವುಗಳೆಂದರೆ:

1) ಪ್ರಮುಖ ಕೃಷಿ ಸಂಪನ್ಮೂಲ

2) ವಿದೇಶಿ ವಿನಿಮಯ ಗಳಿಕೆಯ ಒಂದು ಮೂಲ

3) ಒಂದು ಪೌಷ್ಟಿಕಾಂಶ ಆಹಾರದ ಮೂಲ

4) ಮೀನುಗಾರಿಕೆಅಮೂಲ್ಯವಾದ ಪರಿಸರದ ನೈಸರ್ಗಿಕ ಸಂಪನ್ಮೂಲ

5) ಉದ್ಯೋಗದ ಮೂಲ

6) ಸುಸ್ಥಿರ – ಮೀನುಗಾರಿಕೆಅಭಿವೃದ್ಧಿ

ಜಲ ಪರಿಸರ ವ್ಯವಸ್ಥೆ ಮತ್ತು ಮಿನುಗಾರಿಕಾ ಉತ್ಪನ್ನಗಳು ಮತ್ತು ಸೇವೆಗಳು:

1) ಮೀನುಗಾರಿಕೆ ಮಾರ್ಗದ ಪರಿಹಾರ:

ಮೀನುಗಾರಿಕೆ ಮಾರ್ಗಕ್ಕೆ ಸಂಬಂಧಿಸಿದಂತೆ ವಿನ್ಯಾಸ, ನಿರ್ಮಾಣ, ಅನುಷ್ಠಾನ ಮತ್ತು ಪುನರ್ವಸತಿಯನ್ನು ಕಲ್ಪಿಸಿವುದು.

2) ಮೀನು ಮತ್ತು ಜಲವಾಸಿ ಆವಾಸಸ್ಥಾನ ಕ್ಷೇತ್ರ ಸಮೀಕ್ಷೆ:

ಜಲ ಪರಿಸರ ವ್ಯವಸ್ಥೆ ಹಾಗೂ ಮೀನು ಆವಾಸಸ್ಥಾನಗಳು ಪರಿಸರ ನಿರ್ವಹಣೆಯ ಹೊಸ ಯೋಜನೆಗಳು ಮತ್ತು ಮೇಲ್ವಿಚಾರಣೆ.

3)ಮೀನು ಜೀವಶಾಸ್ತ್ರದಕ್ಷೇತ್ರದಲ್ಲಿನ ತನಿಖೆಗಳು:

ಸಿಹಿನೀರು ಮತ್ತುಕಡಲ ತೀರದ ನಿರ್ದಿಷ್ಟಜೈವಿಕ ಅಂಶಗಳ ವಿಸ್ತೃತತನಿಖೆ

4) ನೀರಿನಗುಣಮಟ್ಟದಉಸ್ತುವಾರಿ ಮತ್ತು ಸಂಗ್ರಹಣೆಯೋಜನೆ:

ಭೂಮಿಯ ಮೇಲಿರುವ ನೀರಿನಗುಣಮಟ್ಟದ ನಿರ್ವಹಣೆ

5) ಕಾರ್ಯತಂತ್ರದ ಪರಿಸರಯೋಜನೆ ಮತ್ತುಉಸ್ತುವಾರಿ ಅನುಮೋದನೆಗಳು:

ಸರ್ಕಾರಿ ನಿಯಂತ್ರಕ ಪ್ರಕ್ರಿಯೆಗಳ ವ್ಯಾಪಕ ಹಿನ್ನಲೆಯಲ್ಲಿನಉಪಯುಕ್ತತೆಯನ್ನುಅನುಸರಣೆ ಖಚಿತಪಡಿಸಿಕೊಳ್ಳುವುದು.

6) ಸರಿದೂಗಿಸುವಯೋಜನೆ ಮತ್ತು ವಿಲೇವಾರಿ:

ವ್ಯಕ್ತಿಅಥವಾಕಾರ್ಯತಂತ್ರದ ಸರಿದೂಗಿಸುವ ಯೋಜನೆಗಳಿಗೆ ಸಂಬಂಧಿಸಿದಂತೆ ಮೀನು, ಮೀನು ಅಂಗೀಕಾರದಜಲೀಯ ಆವಾಸ ಸ್ಥಾನಗಳಲ್ಲಿ ನೀರಿನಗುಣಮಟ್ಟವನ್ನು ಸರಿದೂಗಿಸುವುದು.

7) ಪರಿಸರ ನೀತಿ ಮತ್ತು ಪ್ರಕ್ರಿಯೆಗಳು:

ಕೀಟ, ಮೀನು, ಜಲವಾಸಿ ಕಳೆ ಮುತ್ತುಗೊಳ್ಳುವಿಕೆ, ನೀರಿನಗುಣಮಟ್ಟದ ಸಮಸ್ಯೆಗಳು ಸಮಗ್ರಹಣಾಅವನತಿ ಇತ್ಯಾದಿಗಳಿಗೆ ಕಾರ್ಯ ವಿಧಾನಗಳು ಮತ್ತು ಮಾರ್ಗಸೂಚಿಗಳನ್ನು ಒದಗಿಸುವುದು.

8) ಮಧ್ಯಸ್ಥಗಾರಒಪ್ಪಂದ ಮತ್ತು ವಿಸ್ತರಣೆ ಚಟುವಟಿಕೆಗಳು:

ಪ್ರಾದೇಶಿಕ ಮತ್ತು ಮಧ್ಯಸ್ಥಗಾರರ ಸಂಪರ್ಕದೊಂದಿಗೆಜ್ಞಾನ ವರ್ಗಾವಣೆ ಮತ್ತುಇತರತರಬೇತಿಒದಗಿಸುವುದು ಮತ್ತು ಪರಿಸರದ ಫಲಿತಾಂಶಗಳನ್ನು ವೃದ್ಧಿಸುವುದು.



ಕಂಡುಹಿಡುವಿಕೆಗಳು ಮತ್ತು ಸಲಹೆಗಳು:

1) ವ್ಯವಹಾರ ಮತ್ತು ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳ ಮೂಲಕ ಸಮರ್ಥವಾಗಿ ಪರಿಸರ ಸಂರಕ್ಷಣೆಯನ್ನು ಮುಂದುವರಿಸುವುದು.

2) ಒಂದು ಸಮಗ್ರ ಪ್ರತಿಕೂಲ ಹಾಗೂ ಅಪಾಯ ಹೊಂದಬಲ್ಲ ದೃಷ್ಟಿಕೋನವನ್ನು ಇರಿಸಿಕೊಳ್ಳುವುದು.

3) ಮೀನಿನ ಸಂಖ್ಯೆಗಳನ್ನು ಹಳೆಯ ಹಾಗೂ ಸ್ತ್ರೀ ಮೀನು ರಿಂದ ಬೆಳವಣಿಗೆ ರಚನೆಅತ್ಯುತ್ತಮಅದರಜೊತೆಅತಿಯಾದ ಮೀನುಗಾರಿಕೆಯನ್ನುತಡೆಹಿಡಿಯಬೇಕು.

4) ಸಮುದ್ರದಲ್ಲಿ ಮೀನಿನ ನೈಸರ್ಗಿಕ ಪ್ರಾದೇಶಿಕ ರಚನೆ ಮತ್ತು ಸ್ವಾಭಾವಿಕ ಗಡಿಗಳಲ್ಲಿ ನೀತಿ ರಚಿಸಿ, ನಿರ್ವಹಣೆ ಮಾಡುವುದು.

5) ಸಮುದ್ರ ತಳದ ಆವಾಸ ಸ್ಥಾನಗಳಲ್ಲಿ ಖಚಿತವಾಗಿಅತಿ ಹೆಚ್ಚು ಮೀನಿನ ಆಹಾರದಆಶ್ರಯ ಧೃಡಪಡಿಸಿಕೊಂಡು ಮೇಲ್ವಿಚಾರಣೆ ನಡೆಸಬೇಕು.

6) ಅಲ್ಪಾವಧಿ ಹಾಗೂ ಧೀರ್ಘವಾಧಿಎರಡೂ ಚಕ್ರಗಳಿಗೂ ಹೊಂದಿಕೊಳ್ಳುವ ದಶಕಅಥವಾಜಾಗತಿಕ ಹವಾಮಾನ ಹಾಗೂ ಪರಿಸರದ ಬದಲಾವಣೆಯೊಂದಿಗೆಒಂದಾಗಿಸುವುದು.

7) ಮನುಷ್ಯರ ಕ್ರಮಗಳು ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ ಸೇರಿದಂತೆಎಲ್ಲಾ ಸಮೀಕರಣಗಳನ್ನು ಮಾಡುವುದು.

ಉಪಸಂಹಾರ: ಜಗತ್ತಿನಲ್ಲಿ ಪ್ರತಿಯೊಬ್ಬರೂ ಭೂಮಿಯ ಪರಿಸರ, ಆಹಾರ, ನೀರು ಹವಾಮಾನ ನಿಯಂತ್ರಣ, ರೋಗ ನಿರ್ವಹಣೆ, ಆಧ್ಯಾತ್ಮಿಕತೃಪ್ತಿ ಮತ್ತು ಸೌಂದರ್ಯದ ಮನೋರಂಜನೆಯಿಂದಒದಗಿಸುವ ಸೇವೆಗಳ ಮೇಲೆ ಅವಲಂಬಿತವಾಗಿದೆ. ಜಲಪರಿಸರವ್ಯವಸ್ಥೆಹಾಗೂಮೀನೂಗಾರಿಕಾ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಗೆದೇಶದಆರ್ಥಿಕ ನೀತಿ ಸವಲತ್ತುಗಳ ಕಂಪೆನಿಗಳ ಸಾಮಾಜಿಕ ವರ್ತನೆ, ತಂತ್ರಜ್ಞಾನ, ಜ್ಞಾನಾರ್ಜನೆಯ ಅಂಶಗಳು ಗಮರ್ನಾಹ ಬೆಳವಣಿಗೆಯೊಂದಿಗೆ ಅಭಿವೃದ್ಧಿಯನ್ನುಕಾಣಿಸುವಂತೆ ಮಾಡಿದೆ.

ಆಕರಗಳು:

1. ಕಾವ್ಯ ದಶೋರ ಮತ್ತು ವಿ ಕ್ಷೇತ್ರಪಾಲ್ (2014), " ಆಹಾರ ಭದ್ರತೆಯ ಅಂಶವಾಗಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಪುನರ್ ಪರಿಶೀಲನೆ", 'ಇಂಡಿಯನ್ ಜರ್ನಲ್ ಆಫ್ ಅಪ್ಲೈಡ್ ರಿಸರ್ಚ್', 4(7):332–335.

2. ಫೀಶರೀಸ್ ಅಂಡ್ ಅಕ್ವಾಕಲ್ಚರ್: ಸಮರ್ಥನೀಯ ವಿರುದ್ಧ ಜಲವಾಸಿ ದೇಶ ಸಂಪನ್ಮೂಲ ನಿರ್ವಹಣೆ

3. ಎನ್ಸೈಕ್ಲೋಪೀಡಿಯಾ ಆಫ್ ಲೈಫ್ ಸಪೋರ್ಟ್ ಸಿಸ್ಟಮ್ಸ್

4. ಎಸ್.ಎ.ಒ (1999) ಸ್ಟೇಟ್ ಆಫ್ ವರ್ಲ್ಡ್ ಫಿಶರೀಸ್ ಅಂಡ್ ಆಕ್ವಾಕಲ್ಚರ್, 1998, 112 ಪುಟಗಳು ರೋಮ್, ಎಫ್.ಎ.ಒ. [ಈ ವರದಿಯನ್ನು ಆರಂಭಿಕ ಅವಲೋಕನ ಮತ್ತು ವರ್ಲ್ಡ್ ಫೀಶರೀಸ್ ಅಂಡ್ ಆಕ್ವಾಕಲ್ಚರ್ ಪ್ರವೃತ್ತಿಗಳನ್ನು ಒದಗಿಸುತ್ತದೆ].

5. ಪೆಸಿಫಿಕ್ ಆರ್ಥಿಕ ಸಹಕಾರ ಕೌನ್ಸಿಲ್ (1998) ಸರ್ಕಾರದ ಹಣದ ವರ್ಗಾವಣೆಗಳು ಪರಿಣಾಮ ಮೀನುಗಾರಿಕೆ ನಿರ್ವಹಣಾ ಸಂಪನ್ಮೂಲ ಸಂರಕ್ಷಣೆ ಮತ್ತು ಇಂಟರ್ನ್ಯಾಷನಲ್ ಟ್ರೇಡ್. ಫಾರ್ ಪ್ರೊಸೀಡಿಂಗ್ಸ್ ವರದಿ ಱಱಅಅ ಕಾರ್ಯಗಾರ, ಮನಿಲಾ, 17–19 ಆಗಸ್ಟ್ 1998, 124 ಪುಟಗಳು ಸಿಂಗಪುರ್, ಱಱಅಅ [ಈ ಪ್ರೆಸೆಂಟ್ಸ್ ದಾಖಲಿಸುತ್ತದೆ ಮೀನುಗಾರಿಕಾ ಉದ್ಯಮಕ್ಕೆ ಹಣಕಾಸಿನ ಬೆಂಬಲವನ್ನು ಮಾಹಿತಿ].

ಅರೇಬಿಯಾನ್ ಕೊಲ್ಲಿ ರಾಷ್ಟ್ರಗಳಲ್ಲಿ ಕರಾವಳಿಯ ವ್ಯಾಪಾರ ಸಂಬಂಧ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆ

ಕಿರಣ್ ಕುಮಾರ್
ಸಂಶೋಧನ ವಿದ್ಯಾರ್ಥಿ, ಪಶ್ಚಿಮ ಏಷ್ಯಾ ಅಧ್ಯಯನ, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು. E-mail. Kirankumar1mys@yahoo.com

ದಕ್ಷಿಣ ಕನ್ನಡ ಜಿಲ್ಲೆಯು ಡಿ.ಕೆ. ಎಂದು ಕರೆಯಲಾಗುತ್ತದೆ. ಕರ್ನಾಟಕದ ದಕ್ಷಿಣ ಕರಾವಳಿ ಸಾಲಿನಲ್ಲಿ ಇದೆ. ಈ ಜಿಲ್ಲೆಯು ಐತಿಹಾಸಿಕವಾಗಿ ದೂಡ್ಡ ಕೆನರಾ ಪ್ರದೇಶವನ್ನು ಹೊಂದಿದೆ, ಇದು ಉಡುಪಿ ಮತ್ತು ಕಾಸರಗೋಡು (ಈಗ ಕೇರಳದ ಭಾಗ) ಇತರ ಕರಾವಳಿ ಜಿಲ್ಲೆಗಳನ್ನು ಒಳಗೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐದು ತಾಲ್ಲೂಕುಗಳನ್ನು ಹೊಂದಿದೆ. ಒಟ್ಟು ಜನಸಂಖ್ಯೆ ಪ್ರಸ್ತುತ 2011ರ ಅಲಿಕಿಅಲಿಶಗಳ ಪ್ರಕಾರ 2083625 ರಷ್ಟು ಇದೆ, ಇಲ್ಲಿ ಹಿಂದೂಗಳು, ಮುಸ್ಲಿಮರು. ಕ್ರಿಶ್ಚಿಯನ್ನರು ಪ್ರಮುಖವಾಗಿ ಇರುವುದನ್ನು ಗಮನಿಸಬಹುದು. ಮಂಗಳೂರು ದೂಡ್ಡ ನಗರ ಮತ್ತು ಜಿಲ್ಲೆಯ ಆರ್ಥಿಕ ಕೇಂದ್ರವಾಗಿದೆ, 19ನೇ ಶತಮಾನದಿಂದೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯು ವಾಣಿಜ್ಯ ಬೆಳವಣಿಗೆ ಮತ್ತು ನಗರದ ವಿವಿಧ ಕೈಗಾರಿಕ ಕೇಂದ್ರಗಳ ಖಂಡುವಾಗಿದೆ. ಕೃಷಿ ಮತ್ತು ಕೃಷಿ ಉತ್ಪನ್ನಗಳ ವ್ಯಾಪಾರ ಈ ಪ್ರದೇಶದಲ್ಲಿ ಪ್ರಮುಖ ಸಾಂಪ್ರದಾಯಿಕ ಆರ್ಥಿಕ ಚಟುವಟಿಕೆಗಳಾಗಿವೆ. ಭಾರತದ ಅತಿ ದೂಡ್ಡ ಖಂಡತ್ತು ಖಂಡದವುಗಳಲ್ಲಿ ಮಂಗಳೂರಿನ ಖಂಡದವು ಅತಿ ದೂಡ್ಡ ಖಂಡದವಾಗಿದೆ. ನಾವ ಮಂಗಳೂರು ಖಂಡದವು ಭಾರತದ ಕಾಫಿ ರಫ್ತುನಿನಲ್ಲಿ 75 ರಷ್ಟು ಮತ್ತು ಗೇರು ಬೀಚದ ವ್ಯಾಪಾರದಲ್ಲಿ ದೂಡ್ಡ ಭಾಗವನ್ನು ಹೊಂದಿದೆ. ಇದಲ್ಲದೆ ಪ್ರಮುಖ ಕೈಗಾರಿಕಾ ಉದ್ಯಮಗಳು ಕೂಡ ಅಲ್ಲಿ ನೆರೆಗೊಂಡಿದೆ, ಮಂಗಳೂರು ಕೆಮಿಕಲ್ಸ್ ಮತ್ತು ರಾಸಗೊಬ್ಬರ, ಕುದುರೆಮುಖ ಕಬ್ಬಿಣ ಅದಿರು ಕರಖಾನೆ, ಮತ್ತು ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕ್ಲ್ಸ್ ನೇರವಾಗಿ ಇದೆ. ಇದಲ್ಲದೆ ಈ ಪ್ರದೇಶದಲ್ಲಿ ದೂಡ್ಡ ನೇವೆಸ್ಥಿಸುವ ಆರ್ಥಿಕ ಮತ್ತು ಲಯಶಸ್ವಿ ಬ್ಯಾಂಕಿಂಗ್ ಉದ್ಯಮ ಹೊಂದಿದೆ. ಹಲವು ಹಳೆಯ ಕ್ರಿಶ್ಚಿಯನ್ ಮಿಷನರಿ ಶೈಕ್ಷಣಿಕ ಸಂಸ್ಥೆಗಳು ಇವೆ. ಮಂಗಳೂರು ವಿಶ್ವವಿದ್ಯಾನಿಲಯ, ಇಂಜೀನಿಯರಿಂಗ್ ಕಾರೇಜು, ವೈದ್ಯಕೀಯ ಹಾಗೂ ಇತರೆ ವೃತ್ತಿಪರ ಕಾರೇಜುಗಳು ಈ ಪ್ರದೇಶದಲ್ಲಿ ಇದ್ದು ಭಾರತೀಯ ಶಿಕ್ಷಣದ ಕೇಂದ್ರವಾಗಿದೆ. ಈ ಪ್ರದೇಶದಲ್ಲಿ ಉತ್ತಮವಾದ ಆರೋಗ್ಯ ವಲಸಯ ಹೊಂದಿದೆ, ಕಳೆದ ದಶಕದಲ್ಲಿ ಮಂಗಳೂರು ಐ,ಟಿ, ಹಾರಗುತ್ತಿಗೆಯ ಕೇಂದ್ರವಾಗಿ ಹೊರ ಹೊಮ್ಮಿದೆ. ಇನ್ಫೋಸಿಸ್, ವಿಪ್ರೋ, ಇನ್ಫೋಟೆಕ್, ಥಾಮಸ್ ರಾಲಿಟರ್ಸ್ ಇಲ್ಲಿ ಸ್ಥಾಪಿತವಾಗಿದೆ, ಈ ನಗರವನ್ನು ವಿಶೇಷ ಆರ್ಥಿಕ ವಲಯ ಎಂದು ಲೋಜಿಸಲಾಗುತ್ತದೆ. ಈ ಪ್ರದೇಶದಲ್ಲಿ ಆರ್ಥಿಕ ಅಖವೃದ್ಧಿಯು ಕ್ಷಿಪ್ರ ಬೆಳವಣಿಗೆಯಿಲ್ಲಿ ಸಾಗುತ್ತಿದೆ. ಮಂಗಳೂರು ಲೀಯರ್ ಎಸ್ಟೇಟ್‌ಆಗಿ ಪರಿವರ್ತಿತವಾಗುತ್ತಿದೆ. ಮತ್ತು ಇದಲ್ಲದೆ ಖಹಳಷ್ಟು ಪ್ರಮುಖ ಉದ್ದಿಮೆಗಳು ಕರಖಾನೆಗಳು ಇವೆ. ಅದರಲ್ಲಿ ಬ್ಯಾಲಿ ಗ್ರೂಪ್, ಪ್ರೆಸ್ಟೀಜ್, ತುಂಬೆ ಗುಂಪು, ಲಿಮಿನಾಸೋಲಿಯಾ ಗ್ರೂಪ್, ಸ್ಥಳೀಯವಾಗಿ ಬೆಳೆದಿವೆ.. ಮಂಗಳೂರು ಭಾರತದ ಮಂಗಳೂರು ಆರ್ಥಿಕ ಅವಕಾಶಗಳು ಮತ್ತು ಜೀವನ ಶೈಲಿಯ ಅನುಕೂಲಗಳಲ್ಲಿ ಜಾಗತೀಕ ನಗರಗಳಲ್ಲಿ ಮಂಗಳೂರು ಪ್ರಮುಖ ನಗರವಾಗಿದೆ.

ಇಂದು ವ್ಯಾಪಾರವು ವಿಶ್ವವಾದ್ಯಂತ ಅತ್ಯಂತ ವೇಗ ಗತಿಯಲ್ಲಿ ಬೆಳೆಯುತ್ತಿರುವ ವಿದ್ಯಮಾನವಾಗಿದೆ, ಜಾಗತೀಕರಣದ ಪರಿಣಾಮವಗಿ ಇಂದು ವಿಶ್ವವೆ ಒಂದು ಕುಟುಂಬವಾಗಿ ಪರಿವರ್ತನೆಯಾಗಿದೆ, ಇಂದು ನೆರೆಯ ದೇಶ ನಮಗೆ ಪಕ್ಕದ ಮನೆಯಾಗಿ ಪರಿಣಾಮಿಸಿದೆ, ಇದಕ್ಕೆ ಕಾರಣ ವ್ಯಾಪಾರ ವಹಿವಾಟು, ವ್ಯಾಪಾರ ವಹಿವಾಟು ಇಂದು ನೆನ್ನೆಯಿಂದ ವಿಷಯವಲ್ಲ ಕ್ರಿ.ಪೂ. ಒಂದನೆ ಶತಮಾನದಿಂದಲೂ ನಡೆದು ಬರಿದಿರುವ ಪರಂಪರೆಯಾಗಿದೆ, ವಿಶೇಷವಾಗಿ ಅರೇಖಿಯಾನ್ ಕೊಲ್ಲಿ ರಾಷ್ಟ್ರಗಳಲ್ಲಿ ಕರಾಚಳಿಯ ಪರಂಪರೆಯ ಅತ್ಯಂತ ಅವಿನಾಭವ ಪರಂಪರೆ ಹೊಂದಿದೆ, ಇದು ಟಪ್ಪುವಿನಿಂದ ಇಲ್ಲಿನ ಇಂದಿನ ವರೆಗೂ ಕೂಡ ವ್ಯಾಪಾರ ವ್ಯವಹಾರ ಸುಗಮವಾಗಿ ನಡೆಯುತ್ತಿರುವುದನ್ನು ಗಮನಿಸಬಹುದು, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯೊಂದಿಗೆ ಅರೇಖಿಯಾನ್ ಕೊಲ್ಲಿ ರಾಷ್ಟ್ರಗಳ ವ್ಯಾಪಾರ ಪರಂಪರೆ ಅಧಿಕವಾಗಿರುವುದನ್ನು ನಾವು ಗುರುತಿಸಬಹುದಾಗಿದೆ, ಪ್ರತಿಯೊಂದು ಹಂತದಲ್ಲೂ ವ್ಯಾಪಾರವೆ ಕೇಂದ್ರ ಖಂಡುವಾಗಿರುವುದರಿಂದ ಇಲ್ಲಿ "ಕೊಟ್ಟು ತೆಗೆದು ಕೊಳ್ಳುವ" ಪರಂಗತಿ ಮುಖ್ಯವಾಗಿದೆ, ಈ ರೀತಿಯ ಚಟುವಟಿಕೆ ಪ್ರಚೀನ ಕಾಲದಿಂದಲೂ ನಡೆದು ಬರಿದಿರುವುದನ್ನು ಗಮನಿಸಬಹುದು. ಈ ರೀತಿಯ ವ್ಯವಹಾರದಿಂದ ತಮ್ಮಲ್ಲಿರುವ ವಸ್ತುವನ್ನು ಕೊಟ್ಟು ತಮ್ಮಲ್ಲಿ ಇಲ್ಲದಿರುವ ವಸ್ತುವನ್ನು ಪಡೆಯುವ ಪ್ರಕ್ರಿಯೆಯಿಂದ ಇಂದೀ ವ್ಯಾಪಾರ ವ್ಯವಹಾರ ಸುಖಕರವಾಗಿ ನಡೆಯುತ್ತಿದ್ದು ಇದರಿಂದ ಪ್ರಕ್ರಿಯೆ ಪ್ರಕ್ರಮಿತವನ್ನು ಗಮನಿಸಬಹುದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯನ್ನು ಡಿ.ಕೆ. ಎಂದು ಕರೆಯಲಾಗುತ್ತದೆ. ಇದು ಕರ್ನಾಟಕದ ದಕ್ಷಿಣ ಕರಾವಳಿ ಸಾಲಿನಲ್ಲಿ ಇದೆ. ಈ ಜಿಲ್ಲೆಯು ಐತಿಹಾಸಿಕವಾಗಿ ದೂಡ್ಡ ಕೆನರಾ ಪ್ರದೇಶವನ್ನು ಹೊಂದಿದೆ, ಇದು ಉಡುಪಿ ಮತ್ತು ಕಾಸರಗೋಡು (ಈಗ ಕೇರಳದ ಭಾಗ) ಇತರ ಕರಾವಳಿ ಜಿಲ್ಲೆಗಳನ್ನು ಒಳಗೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯು ಐದು ತಾಲ್ಲೂಕುಗಳನ್ನು ಒಳಗೊಂಡಿದ್ದು ಒಟ್ಟು ಜನಸಂಖ್ಯೆ ಪ್ರಸ್ತುತ 2011ರ ಅಂಕಿ ಅಂಶಗಳ ಪ್ರಕಾರ 2083625 ರಷ್ಟು ಇದೆ, ಇಲ್ಲಿ ಹಿಂದೂಗಳು, ಮುಸ್ಲಿಮರು. ಕ್ರಿಶ್ಚಿಯನ್ನರು

ಪ್ರಮುಖವಾಗಿ ಇರುವುದನ್ನು ಗಮನಿಸಬಹುದು. ಮಂಗಳೂರು ದೊಡ್ಡ ನಗರ ಮತ್ತು ಜಿಲ್ಲೆಯ ಆರ್ಥಿಕ ಕೇಂದ್ರವಾಗಿದೆ, 19ನೇ ಶತಮಾನದಿಂದಿಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ವಾಣಿಜ್ಯ ಬೆಳವಣಿಗೆ ಮತ್ತು ನಗರದ ವಿವಿಧ ಕೈಗಾರಿಕ ಕೇಂದ್ರಗಳ ಬಿಂದುವಾಗಿದೆ. ಕೃಷಿ ಮತ್ತು ಕೃಷಿ ಉತ್ಪನ್ನಗಳ ವ್ಯಾಪಾರ ಈ ಪ್ರದೇಶದಲ್ಲಿ ಪ್ರಮುಖ ಸಾಂಪ್ರದಾಯಿಕ ಆರ್ಥಿಕ ಚಟುವಟಿಕೆಗಳಾಗಿವೆ. ಭಾರತದ ಅತಿ ದೊಡ್ಡ ಒಂಬತ್ತು ಬಂದರುಗಳಲ್ಲಿ ಮಂಗಳೂರಿನ ಬಂದರು ಅತಿ ದೊಡ್ಡ ಬಂದರಾಗಿದೆ. ನವ ಮಂಗಳೂರು ಬಂದರು ಭಾರತದ ಕಾಫಿ ರಫ್ತುವಿನಲ್ಲಿ 75 ರಷ್ಟು ಮತ್ತು ಗೇರು ಬೀಜದ ವ್ಯಾಪಾರದಲ್ಲಿ ದೊಡ್ಡ ಭಾಗವನ್ನು ಹೊಂದಿದೆ. ಇದಲ್ಲದೆ ಪ್ರಮುಖ ಕೈಗಾರಿಕಾ ಉದ್ಯಮಗಳು ಕೂಡ ಅಲ್ಲಿ ನೆಲೆಗೊಂಡಿವೆ, ಮಂಗಳೂರು ಕೆಮಿಕಲ್ಸ್ ಮತ್ತು ರಸಗೊಬ್ಬರ, ಕುದುರೆಮುಖ ಕಬ್ಬಿಣ ಆದಿರು ಕಂಪನಿ, ಮತ್ತು ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಲ್ಸ್ ಸೇರಿದಂತೆ ಇವೆ. ಇದಲ್ಲದೆ ಈ ಪ್ರದೇಶದಲ್ಲಿ ದೊಡ್ಡ ಸೇವೆ ಸಲ್ಲಿಸುವ ಆರ್ಥಿಕ ಮತ್ತು ಯಶಸ್ವಿ ಬ್ಯಾಂಕಿಂಗ್ ಉದ್ಯಮ ಹೊಂದಿದೆ. ಹಲವು ಹಳೆಯ ಕ್ರಿಶ್ಚಿಯನ್ ಮಿಷನರಿ ಶೈಕ್ಷಣಿಕ ಸಂಸ್ಥೆಗಳು ಇವೆ. ಮಂಗಳೂರು ವಿಶ್ವವಿದ್ಯಾನಿಲಯ, ಇಂಜೀನಿಯರಿಂಗ್ ಕಾಲೇಜು, ವೈದ್ಯಕೀಯ ಹಾಗೂ ಇತರೆ ವೃತ್ತಿಪರ ಕಾಲೇಜುಗಳು ಈ ಪ್ರದೇಶದಲ್ಲಿ ಇದ್ದು ಭಾರತೀಯ ಶಿಕ್ಷಣದ ಕೇಂದ್ರವಾಗಿದೆ. ಈ ಪ್ರದೇಶದಲ್ಲಿ ಉತ್ತಮವಾದ ಆರೋಗ್ಯ ಸೇವೆ ಹಾಗೂ ವಲಸೆಯನ್ನು ಹೊಂದಿದೆ, ಕಳೆದ ದಶಕದಲ್ಲಿ ಮಂಗಳೂರು ಐ.ಟಿ, ಹೂರಗುತ್ತಿಗೆಯ ಕೇಂದ್ರವಾಗಿ ಹೊರ ಹೊಮ್ಮಿದೆ. ಇನ್ಫೋಸಿಸ್, ವಿಪ್ರೋ, ಇನ್ಫೋಟೆಕ್, ಥಾಮಸ್ ರಾಯಿಟರ್ಸ ಇಲ್ಲಿ ಸ್ಥಾಪಿತವಾಗಿದೆ, ಈ ನಗರವನ್ನು ವಿಶೇಷ ಆರ್ಥಿಕ ವಲಯ ಎಂದು ಯೋಜಿಸಲಾಗುತ್ತದೆ. ಈ ಪ್ರದೇಶದಲ್ಲಿ ಆರ್ಥಿಕ ಅಭಿವೃದ್ಧಿಯು ಕ್ಷಿಪ್ರ ಬೆಳವಣಿಗೆಯಲ್ಲಿ ಸಾಗುತ್ತಿದೆ. ಮಂಗಳೂರು ರೀಯಲ್ ಎಸ್ಟೇಟ್‌ಯಾಗಿ ಪರಿವರ್ತಿತವಾಗುತ್ತಿದೆ. ಮತ್ತು ಇದಲ್ಲದೆ ಬಹಳಷ್ಟು ಪ್ರಮುಖ ಉದ್ದಿಮೆಗಳು ಕಂಪನಿಗಳು ಇವೆ. ಅದರಲ್ಲಿ ಬ್ಯಾರಿ ಗ್ರೂಫ್, ಪ್ರೆಸ್ಟೀಜ್, ತುಂಬೆ ಗುಂಪು, ಯೆನಪೋಯಾ ಗ್ರೂಫ್, ಸ್ಥಳಿಯವಾಗಿ ಬೆಳೆದಿವೆ.. ಮಂಗಳೂರು ಆರ್ಥಿಕ ಅವಕಾಶಗಳು ಮತ್ತು ಜೀವನ ಶೈಲಿಯ ಅನುಕೂಲಗಳಲ್ಲಿ ಜಾಗತೀಕ ನಗರಗಳಲ್ಲಿ ಪ್ರಮುಖ ನಗರವಾಗಿದೆ.

ಇಂದು ವ್ಯಾಪಾರವು ವಿಶ್ವದಾದ್ಯಂತ್ತ ಅತ್ಯಂತ ವೇಗ ಗತಿಯಲ್ಲಿ ಬೆಳೆಯುತ್ತಿರುವ ವಿದ್ಯಾಮಾನವಾಗಿದೆ, ಜಾಗತೀಕರಣದ ಪರಿಣಾಮವಗಿ ಇಂದು ವಿಶ್ವವೆ ಒಂದು ಕುಟುಂಬದಂತ್ತಹದ್ದಾಗಿದೆ, ಇಂದು ನೆರೆಯ ದೇಶ ನಮಗೆ ಪಕ್ಕದ ಮನೆಯಾಗಿ ಪರಿಣಾಮಿಸಿದೆ, ಇದಕ್ಕೆ ಕಾರಣ ವ್ಯಾಪಾರ ವಹಿವಾಟು, ವ್ಯಾಪಾರ ವಹಿವಾಟು ಇಂದು ನೆನ್ನೆಯಾ ವಿಷಯವಲ್ಲ ಕ್ರಿ.ಪೂ. ಒಂದನೆ ಶತಮಾನದಿಂದಲೂ ನಡೆದು ಬಂದಿರುವ ಸಂಗತಿಯಾಗಿದೆ, ವಿಶೇಷವಾಗಿ ಅರೇಬಿಯಾನ್ ಕೊಲ್ಲಿ ರಾಷ್ಟ್ರಗಳಲ್ಲಿ ಕರಾವಳಿಯ ಸಂಬಂಧ ಅತ್ಯಂತ ಅವಿನಾಭವ ಸಂಬಂಧ ಹೊಂದಿದೆ, ಇದು ಟಿಪ್ಪುವಿನಿಂದ ಇಡಿದು ಇಂದಿನ ವರೆಗೂ ಕೂಡ ವ್ಯಾಪಾರ ವ್ಯವಹಾರ ಸುಗಮವಾಗಿ ನಡೆಯುತ್ತಿರುವುದನ್ನು ಗಮನಿಸಬಹುದು, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯೊಂದಿಗೆ ಅರೇಬಿಯಾನ್ ಕೊಲ್ಲಿ ರಾಷ್ಟ್ರಗಳ ವ್ಯಾಪಾರ ಸಂಬಂಧ ಅಧಿಕವಾಗಿರುವುದನ್ನು ನಾವು ಗುರುತಿಸಬಹುದಾಗಿದೆ, ಪ್ರತಿಯೊಂದು ಹಂತದಲ್ಲೂ ವ್ಯಾಪಾರವೆ ಕೇಂದ್ರ ಬಿಂದುವಾಗಿರುವುದರಿಂದ ಇಲ್ಲ "ಕೊಟ್ಟು ತೆಗೆದು ಕೊಳ್ಳುವ" ಸಂಗತಿ ಮುಖ್ಯವಾಗಿದೆ, ಈ ರೀತಿಯ ಚಟುವಟಿಕೆ ಪ್ರಚೀನ ಕಾಲದಿಂದಲೂ ನಡೆದು ಬಂದಿರುವುದನ್ನು ಗಮನಿಸಬಹುದು. ಈ ರೀತಿಯ ವ್ಯವಹಾರದಿಂದ ತಮ್ಮಲ್ಲಿರುವ ವಸ್ತುವನ್ನು ಕೊಟ್ಟು ತಮ್ಮಲ್ಲಿ ಇಲ್ಲದಿರುವ ವಸ್ತುವನ್ನು ಪಡೆಯುವ ಸಹಕಾರದಿಂದ ಇಡೀ ವ್ಯಾಪಾರ ವ್ಯವಹಾರ ಸುಖಕರವಾಗಿ ನಡೆಯುತ್ತಿದ್ದು ಇದರಿಂದ ಸಹಕಾರ ಸಹಮತವನ್ನು ಗಮನಿಸಬಹುದಾಗಿದೆ.

ವಿಶೇಷವಾಗಿ ಹಂಜಮಾನ(ಅಂಜುಮಾನ) ಶಾಸನಗಳೆಂದು ವರ್ಗಿಕೃತವಾದ ವ್ಯಾಪಾರಕ್ಕೆ ಸಂಬಂಧಪಟ್ಟ ಶಾಸನಗಳಲ್ಲಿ ಮಂಗಳೂರು ಕೊಡಿಯಾಲ್‌ನಲ್ಲಿ ಲಭ್ಯವಾದ ಕ್ರಿ.ಶ. 1418ರ ಶಾಸನ ತಿಳಿಸುತ್ತದೆ. ಮೊದಲಿನಿಂದಲೂ ಅರಬರು ನಮ್ಮ ದೇಶದ ಪಶ್ಚಿಮ ಕರಾವಳಿಗೆ ವ್ಯಾಪಾರಕ್ಕಾಗಿ ಬರುತ್ತಿದ್ದರು. ಇಲ್ಲಿಂದ ಕರಿಮೆಣಸು, ಅಕ್ಕಿ, ಮುಂತಾದವುಗಳನ್ನು ಖರೀದಿಸಿ ತಮ್ಮ ದೇಶಕ್ಕೆ ಕೊಂಡು ಹೋಗುತ್ತಿದ್ದರು. ನಮ್ಮ ತುಳು ಕರಾವಳಿಯ ಕುರಿತು ಹೇಳುವಂತೆ ಅವರು ಇಲ್ಲಿಯ ಪ್ರಾಕೃತಿಕ ಲಕ್ಷಣಗಳಾದ ಸುಂದರ ಕರಾವಳಿ ಎಲ್ಲೆಲ್ಲೂ ತೋರುವ ತೆಂಗಿನ ಮರಗಳು, ಅನೇಕ ಸಣ್ಣ ದೊಡ್ಡ ನದಿಗಳು, ಹಚ್ಚ ಹಸುರಾದ ಭತ್ತದ ಬಯಲುಗಳ ದಟ್ಟವಾದ ಅರಣ್ಯ ನೀಲಿ ಆಕಾಶ, ಇತ್ಯಾದಿಗಳಿಂದ ಆಕರ್ಷಿತರಾದರು, ಅವರು ಮರು ಭೂಮಿಯಲ್ಲಿದ್ದು ಯಾವುದೆ ನದಿ, ಮರಮಟ್ಟುಗಳಿಲ್ಲದೆ ಬಂಜರು ಊರಿನಿಂದ ಬಂದು ಇಲ್ಲಿಯ ಪ್ರಾಕೃತಿಕ ಗುಣಗಳಿಗೆ ಸ್ವಾಭಾವಿಕವಾಗಿ ಆಕರ್ಷಿತರಾದರು, ಅವರಿಗೆ ಯಾವುದೇ ರಾಜಕೀಯ ಅಥವಾ ಧಾರ್ಮಿಕ ಪ್ರಚಾರದ ಉದ್ದೇಶವಿರಲಿಲ್ಲ, ಕೇವಲ ವ್ಯಾಪಾರವೆ ಅವರ ಮುಖ್ಯ ಉದ್ದೇಶವಾಗಿತ್ತು, ಈ ತುಳು ನಾಡಿನ ಜನರ ಸಂಸ್ಕೃತಿ, ಜಾತಿ ಪದ್ಧತಿ ಆಚಾರಗಳು, ಅವರಿಗೆ ವಿಚಿತ್ರವಾಗಿ ತೋರುತ್ತಿತ್ತು, ಇಲ್ಲಿಯ ತುಳು ಜನರು ತುಂಬಾ ಸ್ನೇಹಪರರಾಗಿಯೂ ಅತಿಥಿ ಸತ್ಕಾರದ ಸ್ವಭಾವದವರಾಗಿಯೂ ಇದ್ದು ಅವರಿಗೆ ಈ ಪ್ರದೇಶವು ತುಂಬಾ ಇಷ್ಟವಾಗಿರಬೇಕು? ಇಲ್ಲಿಯ ರೇವು ಪಟ್ಟಣಗಳಲ್ಲಿ ಕೆಲವು ಅರಬರು ಸ್ಥಳಿಯ ಮಹಿಳೆಯರನ್ನು ವಿವಾಹವಾಗಿ ಇಲ್ಲೇ ನೆಲೆ ನಿಂತರು(ಪು.ಸಂ.08).

ಅರಬರು ವ್ಯಾಪಾರಕ್ಕಾಗಿ ನಮ್ಮ ದೇಶದ ಪಶ್ಚಿಮ ಕರಾವಳಿಗೆ ಬಂದು ಸ್ಥಳಿಯ ಸ್ತ್ರೀಯರನ್ನು ವಿವಾಹವಾಗುತ್ತಿದ್ದರು, ಕೊಂಕಣದಲ್ಲಿ ಅಲ್ಲಿಯ ಸ್ಥಳಿಯ ಕೊಂಕಣಿ ಸ್ತ್ರೀಯರನ್ನು ಮದುವೆಯಾಗಿ ಅವರ ಸಂತಾನವು "ನವಾಯುತರು" ಮತ್ತು ಕೋಕಣಿಗಳು (ಕೊಂಕಣಿಗಳು) ಅವರು ತಮ್ಮ ತಾಯ್ನುಡಿಯಾದ ಕೊಂಕಣಿ ಭಾಷೆಯನ್ನು ಮಾತೃ ಭಾಷೆಯಾಗಿ ಮಾತಾನಾಡುತ್ತಾರೆ, ಹಾಗೆಯೇ ಕೇರಳಕ್ಕೆ ಬಂದ ಅರಬರು ಅಲ್ಲಿಯ ಸ್ಥಳಿಯ ಸ್ತ್ರೀಯರನ್ನು ಮದುವೆಯಾಗಿ ಅವರಲ್ಲೂಂಟದ ಸಂತಾನವು ಮಾಪ್ಲಾಗಳು ಅವರೂ ತಮ್ಮ ತಾಯ್ನುಡಿಯಾದ ಮಲೆಯಾಳ ಭಾಷೆಯನ್ನು ಮಾತಾನಾಡುವ ಅರಬರು ಮದುವೆಯಾದ ಸ್ತ್ರೀಯರನ್ನು ಇಸ್ಲಾಮ್ ಮತಕ್ಕೆ ಪರಿವರ್ತಿಸುತ್ತಿದ್ದರು ಆದರೆ ಅವರ ಭಾಷೆ ಇತರ ಸಂಸ್ಕೃತಿಗಳಲ್ಲಿ ತಲೆ ಹಾಕುತ್ತಿರಲ್ಲಿ.

ತುಳು ನಾಡಿನೊಡನೆ ಅರಬರ ವ್ಯಾಪಾರ ಸಂಬಂಧ: ಭಾರತ ಮತ್ತು ಪಶ್ಚಿಮ ದೇಶಗಳಿಗೆ ಅತ್ಯಂತ ಪ್ರಾಮುಖ್ಯತೆ ಎಂದರೆ ವ್ಯಾಪಾರ ಮಾರ್ಗ, ಈ ಮಾರ್ಗವು ಬಹುಷಃ ಕೆಂಪು ಸಮುದ್ರದ ಮೂಲಕ ಭಾರತದ ಕರಾವಳಿವರೆಗೆ, ಚಿನ್ನದ ಗಣಿಗಳ ಮತ್ತು ಶ್ರೀಮಂತಿಕೆಯ ಸುವಾಸನೆ ದ್ರವ್ಯವಿರುವ ದಕ್ಷಿಣ ಕನ್ನಡ ಮತ್ತು ಸೌದಿ ಅರೇಬಿಯ ಮಾತ್ರವಲ್ಲದೆ ಈಜಿಪ್ಟ್ ಮತ್ತು ಜೂಡಿಯಾವನ್ನು ಇಂಡಿಯಾ ಜೋಡಿಸಿದೆ. (Phoenician) ಘಟನೆಗಳ ದಾಖಲೆಗಳನ್ನು ನಂಬುವುದಾದರೆ ಕ್ರೈಸ್ತ ಶತಮಾನದ ಹಿಂದಿನ ಮೂರನೆ ಶತಮಾನದಲ್ಲಿ ಸಮುದ್ರ ವ್ಯಾಪಾರಕ್ಕೆ ಮಹಾ ಪ್ರೇರಣೆ ಕೊಡಲಾಗಿತ್ತು.

ಅರಬರು ದ್ರಾವಿಡ ನಾಡಿನ ಬಂದರುಗಳ ಮೂಲಕ ಅಕ್ಕಿಯನ್ನು ಯೂರೋಪಿಗೆ ಕಳುಹಿಸುತ್ತಿದ್ದರು, ಅಲ್ಲದೆ ದಾಲಚೀನಿ,(ದಾಲ್ಚಿನಿ) ಕರಿಮೆಣಸು, ಪಚ್ಚೆ (ರತ್ನ) ಇತ್ಯಾದಿಗಳನ್ನು ಯುರೋಪಿಗೆ ರವಾನಿಸುತ್ತಿದ್ದರು. ಅರಬರಿಗೆ ಕರ್ನಾಟಕದಲ್ಲಿದ್ದ ವ್ಯಾಪಾರಕ್ಕೆ ಕೆಲವು ಸಾಂಪ್ರದಾಯಿಕವುಳ್ಳ ಆಕರಗಳಿವೆ ಅರಬರಿಗೆ ಈ ಪ್ರದೇಶದ ಪ್ರಾಕೃತಿಕ ಗುಣಗಳು ಆಕರ್ಷಿಸಿದವು ಮತ್ತು ಭಾರತದ ಸಂಬಂಧದಲ್ಲಿ ವ್ಯಾಪಾರವೇ ಮುಖ್ಯ ಕಾರಣವಾಗಿದೆ. ಭಾರತದ ಅನೇಕ ಬಂದರುಗಳಲ್ಲಿ ಹಾಗೂ ಅರೇಬಿಯಾದ ಪ್ರದೇಶಗಳಲ್ಲೂ ಅನೇಕ ಕೇಂದ್ರಗಳಿದ್ದವು. ಮುಖ್ಯವಾಗಿ ಮಕ್ಕಾ, ಓಮನ್, ದುಬೈ, ಸನ್ನಾನ್, ಏಡನ್, ಮುಂತಾದವುಗಳು. ಭಾರತದಲ್ಲಿ ಪ್ರಮುಖ ಬಂದರುಗಳು ಎಂದರೆ, ತುಳುನಾಡಿನ ನೀಲೇಶ್ವರ, ಕಾಸರಗೋಡು, ಕುಂಬ್ಲಾ, ಮಂಗಳೂರು, ಮಣೇಲೆ, ಗೋವಾ, ಮುಂತಾದವು ಅರಬರ ವ್ಯಾಪಾರ ಕೇಂದ್ರಗಳಿದ್ದವು, ಅರಬ ವಾಣಿಜ್ಯ ಸರಕುಗಳು, ಖಡ್ಗ, ರೆಷ್ಮೆ, ಬಟ್ಟೆಗಳು, ಮರ, ಶುಂಠಿ, ಕೆಲವು ಬಗೆಯ ಔಷದಿಗಳು, ಉಚ್ಚ ತಳಿಯ ಕುದುರೆಗಳು ಮತ್ತು ಚಿನ್ನ, ತುಳು ಜಾನಪದ ಗೀತೆಗಳು ಮತ್ತು ಕೆಲವು ಕನ್ನಡ ಸಾಹಿತ್ಯಗಳು ಕರ್ನಾಟಕಕ್ಕೂ ಅರಬಿಯಾದೂಡನೆ ವ್ಯಾಪಾರವಿದ್ದ ಸುಳವು ಕೊಡುತ್ತದೆ. "ಪಂಜುರ್ಲಿಯ"ವು ತುಳುವರಿಗೆ ಅರೇಬಿಯಾದೂಡನೆ ವ್ಯಾಪಾರವಿದ್ದುನ್ನು ಸೂಚಿಸುತ್ತದೆ, "ಆಲಿ ಭೂತ ಬಬ್ಬರ್ಯ" ಕೆಲವು ಅರೇಬಿಯಾದ ವ್ಯಾಪಾರಗಳ ಮಂಜೇಶ್ವರ, ಬಸ್ರೂರು ಮುರ್ಡೇಶ್ವರದಲ್ಲಿ ಸ್ಥಳಿಯ ಸ್ತ್ರೀಯರೊಡನೆ ವಿವಾಹ ಸಂಬಂಧವಿದ್ದನ್ನು ತಿಳಿಸುತ್ತದೆ. ಇಸ್ಲಾಮ್‌ನ ಉಗಮಕ್ಕೆ ಮೊದಲೆ ಭಾರತ ಹಾಗೂ ಅರೇಬಿಯಾದ ವ್ಯಾಪಾರ ಸಂಬಂಧವಿತ್ತು (ಪು.ಸಂ 48). ಆದರೆ 1ನೇ ಶತಮಾನದಲ್ಲೇ ಇಲ್ಲಿ ವಸಾಹತುಗಳಿದ್ದವು, ವಸಾಹತುಗಳು ಮಲಬಾರಿನಲ್ಲೂ ಕರಾವಳಿಯಲ್ಲೂ ಸಿಂಹಳದಲ್ಲೂ ಇತ್ತೆಂದು ಪ್ಲೇನಿ ಬರೆದಿದ್ದಾನೆ, ಇಸ್ಲಾಮಿಗೆ ಮೊದಲೇ ವ್ಯಾಪಾರ ಸಂಬಂಧವು ಇಸ್ಲಾಮಿನ ಬಳಿಕವೂ ಮುಂದುವರಿಯಿತು.

ವಿಜಯ ನಗರ ಕಾಲದ ಕೆಲವು ಶಾಸನಗಳು ಮಲಬಾರಿನ ವ್ಯಾಪಾರ ಸಂಘಗಳ ಕುರಿತು ಉಲ್ಲೇಖ ಮಾಡಿದೆ, ಅವರು ಹಂಜಮಾನ್‌ಗಳೆಂದು ಹೆಸರಿಸಿದೆ, ಮುಸ್ಲಿಮರು ಎಲ್ಲಾ ನಾಗರೀಕರಂತೆ ಅನುಕೂಲತೆಗಳನ್ನು ಅನುಭವಿಸುತ್ತಿದ್ದು ಅವರು ಅಭಿವೃದ್ಧಿ ಹೊಂದಿರುವ ಕುದುರೆ ವ್ಯಾಪಾರ, ಆಮದು, ರಪ್ತು ವ್ಯಾಪಾರಗಳಲ್ಲಿ ತಲ್ಲೀನರಾಗಿರುತ್ತಿದ್ದರು. ರಾಬರ್ಟ ಬಾರ್‌ಬೋಸೆ ಈತ 1414ರಲ್ಲಿ ಈ ಪ್ರದೇಶಕ್ಕೆ ಬಂದಿದ್ದು ಮಂಗಳೂರಿನಲ್ಲಿ ಮೂರರು ಮತ್ತು ಜೆಂಟ್ವಾಲ್‌ಗಳಿಲ್ಲಿದ್ದರೆಂದೂ ಅವರು ಏಡನ್‌ಗೆ ಅಕ್ಕಿಯನ್ನು ಮೂರ್ ಹಡಗು (ಅರಬ್ ಹಡಗು) ಗಳಲ್ಲಿ ಸಾಗಿಸುತ್ತಿದ್ದರೆಂದೂ ಬರೆಯುತ್ತಾನೆ. ಮತ್ತು ಇಲ್ಲಿನ ನದೀ ತಟವು ತುಂಬ ಹಸಿರು ಮರಗಳಿಂದಲ್ಲೂ ಸುಂದರವಾಗಿದ್ದುನ್ನು ತಿಳಿಸಿದ್ದಾರೆ. (ಪ್ರವಾಸಿ ಕಂಡ ಇಂಡಿಯಾ. ಸಂಪುಟ ಎರಡು ಡಾ/ ಎಚ್.ಎಲ್. ನಾಗೇಗೌಡ. ಐ ಬಿ ಡಬ್ಲೂ. ಪ್ರಕಾಶನ ಪ್ರಧಾನ ಸಂಪಾದಕರು ಡಾ. ಕೆ.ವಿ. ಪುಟ್ಟಪ್ಪ.) ಕ್ರಿ.ಶ 7ನೇ ಶತಮಾನದಿಂದ ಪರ್ಶಿಯಾದ ಮತ್ತು ಅರಬ್ಬಿನ ವ್ಯಾಪಾರಸ್ಥರು ಈ ಜಿಲ್ಲೆಯ ಮಂಗಳೂರು, ಉಳ್ಳಾಲ, ಮಂಜೇಶ್ವರ, ಕಾಸರಗೋಡು, ಮುಂತಾದ ಬಂದರುಗಳಲ್ಲಿ ನೆಲೆನಿಂತು ಪರದೇಶಗಳ ಸಂಗಡ ವ್ಯಾಪಾರ ನಡೆಸುತ್ತಿದ್ದರು.

ಐಪ್ಪು ಸುಲ್ತಾನ್ ಮತ್ತು ತುಳುನಾಡಿನ ಬ್ಯಾರಿಗಳು :– ಹೈದರಲಿ ಮತ್ತು ಐಪ್ಪು ಸುಲ್ತಾನರು ವ್ಯಾಪಾರಕ್ಕೆ ತುಂಬ ಪ್ರೋತ್ಸಾಹ ಕೊಟ್ಟರು. ವ್ಯಾಪಾರಿ ವರ್ಗದವರಾಗಿದ್ದ ಬ್ಯಾರಿಗಳು ಇದರಿಂದ ತುಂಬ ಪ್ರಯೋಜನ ಪಡೆದರು. ಐಪ್ಪು ಸುಲ್ತಾನ ಮಸ್ಕತ್, ಮತ್ತು ಜಿದ್ದಾದಲ್ಲಿ ಡಿಪೋಗಳನ್ನು ತೆರೆದಿದ್ದು ಇದು ಮಂಗಳೂರಿನ ಅವಿಲ್ದಾರುಗಳ ಕೈ ಕೆಳಗಿತ್ತು, ಐಪ್ಪುವಿನ ಪತ್ರಗಳಂದ ತಿಳಿಯುವುದನೆಂದರೆ ಅರಬರು ಕರಿಮೆಣಸು, ಏಲಕ್ಕಿ ಚಂದನ, ಅಕ್ಕಿ ಮತ್ತು ತೆಂಗಿನ ಕಾಯಿಯನ್ನು ಹೊನ್ನಾವಾರ, ಬಸ್ರೋರು, ಮತ್ತು ಮಂಗಳೂರಿನಿಂದ ಖರೀದಿಸುತ್ತಿದ್ದರು, ಇಲ್ಲಿ ಅಕ್ಕಿ ಮತ್ತು ತೆಂಗಿನ ಕಾಯಿ ಧಾರಾಳವಾಗಿ ಸಿಗುವುದು ಅರಬರಿಗೆ ಬಹು ಪ್ರಮುಖ್ಯವಾಗಿದ್ದು ಅದಕ್ಕಾಗಿ ಅವರು ಇಲ್ಲಿನ ವ್ಯಾಪಾರದಲ್ಲಿ ಉತ್ಸಾಹ ತೋರುತ್ತಿದ್ದರು, ಅರಬರ ವ್ಯಾಪಾರದ ಹಡಗುಗಳಾದ ಬಗಲೆ ಗಲ್ಲಯೆಟ, ಖುರಾಬ್, ಪಟಮೊರ್, ಮಚ್‌ವಗಳು ಕರ್ನಾಟಕದ ಕರಾವಳಿಯಲ್ಲಿ ಧಾರಾಳವಾಗಿ ಗೋಚರಿಸುತ್ತಿತ್ತು. ವ್ಯಾಪಾರಿ ವರ್ಗದವರಾಗಿದ್ದ ಬ್ಯಾರಿಗಳು ಐಪ್ಪು ಸುಲ್ತಾನ ಮತ್ತು ಬ್ರಿಟಿಷರಿಗೆ ಯುದ್ಧವಾಗುತ್ತಿದ್ದಾಗ ತುಳುನಾಡು ಐಪ್ಪು ಸುಲ್ತಾನನ ಅಧೀನವಿರುವುದು ಪ್ರಾಮುಖ್ಯವೆಂದರಿತು, ಆತನಿಗೆ ಸಹಾಯವಾಗಿ ಬ್ರಿಟಿಷರ ವಿರುದ್ಧ ನೀಡುತ್ತಿದ್ದರು. ಆದರೆ ಕೊಡಗಿನ ಅರಸ ವೀರ ರಾಜೇಂದ್ರನು ಬ್ರಿಟಿಷರಿಗೆ ಐಪ್ಪುವಿನ ವಿರುದ್ಧ ಸಹಾಯ ಮಾಡುತ್ತಿದ್ದನು.

ಭಾರತ ಅರಬ್ ರಾಷ್ಟ್ರಗಳೊಂದಿಗೆ ದ್ವಿ ಪಕ್ಷೀಯ ಸಂಬಂಧ ಹೊಂದಿದ್ದು ಇದು ಪ್ರಾಚೀನ ಕಾಲದಿಂದಲೂ ಇದೆ. ಭಾರತ ಮತ್ತು ಅರೇಬಿಯಾದ ನಡುವೆ ವ್ಯಾಪಾರ ಮತ್ತು ಸಂಸ್ಕೃತಿಕ ಕೊಂಡಿಯಾಗಿ ಕ್ರಿ.ಪೂ. 3ನೇ ಶತಮಾನಕಿಂತ್ತೂ ಅಳೆಯಾದಾದ್ದು . ಕ್ರಿ.ಶ. 1000 ದಿಂದ ದಕ್ಷಿಣ ಭಾರತ ಮತ್ತು ಅರೇಬಿಯಾದ ನಡುವಿನ ವ್ಯವಹಾರ ಸಂಬಂಧಗಳ ಬೆಳವಣಿಗೆಯು ಅರೇಬಿಯಾದ ಆರ್ಥಿಕತೆಯ ಬೆನ್ನೆಲುಬುಗಿತ್ತು. ಭಾರತ ಹಾಗೂ ಯುರೋಪಿನ ನಡುವಣ ಯುರೋಪಿನ ಸಾಮ್ರಾಜ್ಯಶಾಹಿ ಉಗಮವಾಗುವವರೆಗೂ ಅರಬ್ ವ್ಯಾಪಾರಿಗಳು ಭಾರತದ ಮಸಾಲೆ ವ್ಯಾಪಾರದ ಮೇಲೆ ಏಕ ಸೌಮ್ಯ ಹೊಂದಿದ್ದರು ಸೌದಿ ಅರೇಬಿಯಾದೊಂದಿಗಿನ ಸಂಬಂಧ ಸ್ಥಾಪಿಸುವಲ್ಲಿ ಭಾರತ ಮೊದಲ ರಾಷ್ಟ್ರಗಳಲ್ಲಿ ಹೊದಾಗಿತ್ತು.

1947ರಲ್ಲಿ ಭಾರತ ಸ್ವಾತಂತ್ಯ ಪಡೆದ ನಂತರ ಸಮಕಾಲಿನ

ಭಾರತ ಮತ್ತು ಸೌದಿ ಅರೇಬಿಯಾದ ನಡುವಿನ ರಾಜತಾಂತ್ರಿಕ ಸಂಬಂಧಗಳು ಸ್ಥಾಪಿಸಲಾಯಿತು, ವ್ಯವಹಾರ ಮತ್ತು ವ್ಯಾಪಾರದಲ್ಲಿನ ಸಹಯೋಗದಿಂದಾಗಿ ಎರಡು ದೇಶಗಳ ನಡುವಿನ ಸಂಬಂಧ ಪ್ರಾದೇಶಿಕವಾಗಿ ಬಲಗೊಂಡಿತು, ಸೌದಿ ಅರೇಬಿಯಾವು ಭಾರತಕ್ಕೆ ದೊಡ್ಡ ಪ್ರಮಾಣದಲ್ಲಿ ತೈಲ ಪೂರೈಕೆ ಮಾಡುವವರಲ್ಲಿ ಒಂದಾಗಿದೆ, ಇತಿಹಾಸದಲ್ಲಿ ಸೌದಿ ಅರೇಬಿಯಾಗೆ ನಾಲ್ಕು ಜನ ಭಾರತೀಯ ಪ್ರಧಾನಿಗಳು ಭೇಟಿ ನೀಡಿದ್ದಾರೆ. ಅಂದರೆ ಜವಾಹರಲಾಲ್ ನೆಹರು 1955. ಇಂದಿರಾಗಾಂಧಿ, 1982. ಮನಮೋಹನ ಸಿಂಗ್, 2010. ನರೇಂದ್ರ ಮೋದಿ,2016.

ಭಾರತ 1947ರ ಸ್ವಾತಂತ್ರ್ಯದ ನಂತರ ಭಾರತ ಮತ್ತು ಸೌದಿ ಅರೇಬಿಯಾ ಈ ಎರಡು ದೇಶಗಳು ಪಶ್ಚಿಮ ಏಷ್ಯಾದ ಬಲವಾದ ನಂಟನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತ ಬಂದಿವೆ, ಪಶ್ಚಿಮ ಏಷ್ಯಾವು ಪ್ರಮುಖ ಪ್ರಾದೇಶಿಕ ಹಾಗೂ ವ್ಯಾಪಾರದ ಮೂಲವಾಗಿದೆ. ಇದಲ್ಲದೆ ನವೆಂಬರ್ 1955ರಲ್ಲಿ ಭಾರತಕ್ಕೆ ಸೌದಿ ಅರೇಬಿಯಾದ ರಾಜ ಸೌದ್ ರವರು ಭೇಟಿ ನೀಡಿದ್ದರು. ಸೌದಿಯಲ್ಲಿ 1.4 ದಶಲಕ್ಷ ಭಾರತೀಯಾ ಕೆಲಸಗಾರರು ಇರುವುದು ಕಂಡುಬಂದಿದೆ.

ಪ್ರಾಚೀನ ಮತ್ತು ಮಧ್ಯಯುಗದ ಕಾಲದಲ್ಲಿ ವ್ಯಾಪಾರ ಸಂಘಗಳು ತಮ್ಮದೆ ಆದ ರೀತಿಯಲ್ಲಿ ವ್ಯವಸ್ಥಿತ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಗಳನ್ನು ಪ್ರೋತ್ಸಾಹಿಸುತ್ತಿದ್ದವು, ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಿಂದ ವ್ಯಾಪಾರ ಮುಕ್ತವಾಗಿತ್ತು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಟ್ಟೆ ಮತ್ತು ಕಬ್ಬಿಣವನ್ನು ಹೊರತು ಪಡಿಸಿ ಮೆಣಸು, ಅಡಿಕೆ, ಸಕ್ಕರೆ, ಮರಗಳು, ಉಪ್ಪು, ಶ್ರೀಗಂಧದ ಮರಗಳು ಹೀಗೆ ಅನೇಕ ರೀತಿಯ ಸ್ಥಳಯ ಉತ್ಪನ್ನಗಳನ್ನು ಹಡಗುಗಳ ಮೂಲಕ ಕೊಲ್ಲಿ ರಾಷ್ಟ್ರಗಳಿಗೆ ಕಳುಹಿಸಲಾಗುತ್ತಿತ್ತು. ಹಾಗೂ ಬ್ರಿಟಿಷ್ ಪೂರ್ವ ಅವಧಿಯಲ್ಲಿ ಸಹ್ಯಾದ್ರಿಗಳ ಮೂಲಕ ಹೋರಿಗಳು ಮತ್ತು ಕತ್ತೆಗಳ ಮೂಲಕ ಸಾಗಿಸುತ್ತಿದ್ದರು, ಈ ಸಮಯದಲ್ಲಿ ಹೈದರ ತಂದೆ ಕಟ್ಟಿಸಿದ ಸೇನಾ ರಸ್ತೆಯು ಸಹಾಯವಾಯಿತು. ಇಂಗ್ಲೀಷರ ಆಡಳತ ಸಂಪರ್ಕದ ಆರಂಭದಲ್ಲಿ ಹೆಚ್ಚು ಸುಧಾರಿತ ಮತ್ತು ಹೊಸ ಉನ್ನತ ರಸ್ತೆಗಳು ಮತ್ತು ಬೆಟ್ಟಗಳ ಮೂಲಕ ಹಾದು ಹೋಗುವಂತೆ ನಿರ್ಮಿಸಲಾಯಿತು. 16 ಮತ್ತು 17ನೇ ಶತಮಾನದಲ್ಲಿ ಕಾರವಾರ ಹೊನ್ನಾವರ ಮತ್ತು ಭಟ್ಕಳ ಸ್ಥಳಗಳಲ್ಲಿ ಅನೇಕ ವಿದೇಶಿ ಪ್ರಯಾಣಿಕರು ಈ ಜಿಲ್ಲೆಯ ಮೆಣಸು, ವ್ಯಾಪಾರದ ಬಗ್ಗೆ ತಮ್ಮ ಬರವಣಿಗೆಯಲ್ಲಿ ಉಲ್ಲೇಖಿಸಿದ್ದಾರೆ, 11ನೇ ಮತ್ತು 12ನೇ ಶತಮಾನಗಳಲ್ಲಿ ಅರೇಬಿಯಾ ಮತ್ತು ಪರ್ಷಿಯಾದಿಂದ ಕುದುರೆಗಳ ಪೂರೈಕೆ ಮಾಡಲಾಗುತ್ತಿತ್ತು. ಈ ಜಿಲ್ಲೆಯ ಬಂದರುಗಳ ಮೂಲಕ ದಕ್ಷಿಣ ಭಾರತದವು ಅತ್ಯಂತ ಗಮನರ್ಹವಾದ ರೀತಿಯಲ್ಲಿ ನವಯುತರು ಭಟ್ಕಳ ಮತ್ತು ಹೊನ್ನಾವರಗಳಲ್ಲಿ ವ್ಯಾಪಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದರು, ಅರಬ್ ವ್ಯಾಪಾರಿಗಳ ಜೊತೆಯಲ್ಲಿ ಈ ಕರಾವಳಯ ಜಿಲ್ಲೆಯು ವಿಜಯ ನಗರದ ಕೈಯಲ್ಲಿ ಸೇರಿದಾಗ ಈ ಬಂದರುಗಳ ವಾಣಿಜ್ಯ ಪ್ರಾಮುಖ್ಯತೆಯನ್ನು ಹೆಚ್ಚಿಸಲಾಯಿತು. ಅದರಲ್ಲೂ ಭಟ್ಕಳವು ಗಮನರ್ಹ ಸಾಗರೋತ್ತರ ವ್ಯಾಪಾರ ಕೇಂದ್ರವಾಗಿತ್ತು ಇಲ್ಲಿಂದ ವಿಜಯ ನಗರಕ್ಕೆ ನೇರ ರಸ್ತೆ ಮಾರ್ಗ ಹೊಂದಿತ್ತು. ಕಬ್ಬಿಣದ ಅದಿರು ಮೆಣಸು, ಮೈರೊಬಲನ್, ಮತ್ತು ಇತರೆ ಮಸಾಲೆ ಪಾದರ್ಥಗಳೊಂದಿಗೆ ಮೂರ್ಸ್(ಅರಬರು) ಭಟ್ಕಳದಿಂದ ತೆಗೆದು ಕೊಂಡು ಹೊಗುತ್ತಿದ್ದರು, ಮತ್ತು ಅವರು ಆ ಬಂದರುಗಳಲ್ಲಿ ಮತ್ತುಗಳು ಮತ್ತು ಕುದುರೆಗಳನ್ನು ತರುತ್ತಿದ್ದರು. ಈ ರೀತಿಯ ವ್ಯಾಪಾರ ಮಾರ್ಗವು ಪೋರ್ಚುಗೀಸರು ಮತ್ತು ಇತರೆ ಯುರೋಪಿಯನ್ನರ ಆಗಮನಕ್ಕೆ ಸುಗಮ ಮಾರ್ಗವಾಯಿತು. ಇದಲ್ಲದೆ 1637ರಲ್ಲಿ ಪೋರ್ಚುಗೀಸರೊಂದಿಗೆ ಕೆಳದಿ ರಾಜ ಭಟ್ಕಳದ ಬಂದರಿನಲ್ಲಿ ಮೆಣಸು ಮತ್ತು ತಾಮ್ರದ ವಿನಿಮಯದ ದಾರಿಯನ್ನು ಕಂಡು ಕೊಂಡಿದ್ದರು. (ಪು.ಸಂ. 477. 478).

ರಾಜ್ಯದಲ್ಲಿ 300ಕ್ಕೂ ಹೆಚ್ಚಿನ ರೇವುಗಳಿದ್ದು ಇವುಗಳ ಮುಖಾಂತರ ಸಾಗರೋತ್ತರ ವ್ಯಾಪಾರ ನಡೆಯುತಿತ್ತೆಂದು ಸಮಕಾಲಿನ ವಿದೇಶಿ ಪ್ರವಾಸಿ ಅಬ್ದುಲ್ ರಝಾಕ್ ತನ್ನ ವರದಿಯಲ್ಲಿ ತಿಳಿಸಿದ್ದು ಇಲ್ಲಿ ಗಮನಿಸಬಹುದು. ಪ್ರಸ್ತುತ ಲೇಖನದಲ್ಲಿ ದಕ್ಷಿಣ ಕನ್ನಡದಲ್ಲಿ ನಡೆದ ಸಾಗರೋತ್ತರ ವ್ಯಾಪಾರದ ಮಾಹಿತಿಯನ್ನು ಪರಿಚಯಿಸಲಾಗಿದೆ, ಶಾಸನಗಳ ಆಧಾರದಿಂದ ತಿಳಿಯುವುದೆನೆಂದರೆ ಕರಾವಳಯಲ್ಲಿ ದಕ್ಷಿಣ ಕನ್ನಡ ಪ್ರಮುಖ ರೇವುಗಳನ್ನು ಹೊಂದಿತ್ತು ಇಲ್ಲಿ ಸಾಗರೋತ್ತರ ವ್ಯಾಪಾರಗಳನ್ನು ವರ್ತಕ ಸಂಘಗಳಾದ ನಖರ, ಹಂಜಮಾನ, ನಾನಾದೇಶಿಯ ವರ್ತಕರು ನಡೆಸುತ್ತಿದ್ದ ಹಲವಾರು ಕಡೆಗಳಲ್ಲಿ ನಾನಾದೇಶೀ, ಮನೆಯೂಳ ವಡ್ಡ ವ್ಯವಹಾರಿ, ನಾನಾದೇಶಿಯ ಹೊರಗಿನವರ ಉಲ್ಲೇಖಗಳಲ್ಲಿ ಕರಾವಳಯ ರೇವುಗಳಲ್ಲಿ ಸಿಕ್ಕ ಕೆಲವು ಶಾಸನಗಳಂದ ತಿಳಿದು ಬರುತ್ತದೆ.

ಸಾಗರೋತ್ತರ ವ್ಯಾಪಾರ ಕೇಂದ್ರಗಳು :– ಕೆಲವು ಐತಿಹಾಸಿ ದಾಖಲೆಗಳಂತೆ ಪಶ್ಚಿಮ ಕರಾವಳೀಯಲ್ಲಿ ಸಾಗರೋತ್ತರ ವ್ಯಾಪಾರ ನಡೆಸುತ್ತಿರುವ ರೇವುಗಳು ಇದ್ದಿದ್ದವು, ಅವುಗಳ ವ್ಯಾಪಾರ ಕ್ಷೇತ್ರವು ಪಶ್ಚಿಮ ಕೆಂಪು ಸಮುದ್ರದಿಂದ ಪೂರ್ವದಲ್ಲಿ ಚೀನಾದವರೆಗೂ ಹಬ್ಬಿತ್ತು, ಚೀನಿಯರ ವಿಶಿಷ್ಟವಾದ ನೌಕೆ 'ಜುಂಕ' ಪಶ್ಚಿಮ ಕರಾವಳಯ ರೇವುಗಳಾದ ಕೊಲ್ಲಂ ಕೂಳಂಗನೂರು, ಕಲ್ಲಿಕೋಟೆ, ವಳ ಪಟ್ಟಣ, ಇಳೀವಾಲೆ, ಮಂಜೇಶ್ವರ, ಮಂಗಳೂರು, ಬಾರಕೂರು, ಬಸ್ರೂರು, ಭಟ್ಕಳ, ಹೊನ್ನಾವರ ಮತ್ತು ಗೋವೆಗಳನ್ನು ಸಂದರ್ಶನ ವ್ಯಾಪಾರದಲ್ಲಿ ನಿರಂತವಾಗಿದ್ದವೆಂದು ಚೀನಿ ಐತಿಹಾಸಿಕ ದಾಖಲೆಗಳು ತಿಳಸುತ್ತವೆ.

ಪಶ್ಚಿಮ ಕರಾವಳಯಿಂದ ಅಕ್ಕಿ ಜೀನಸು, ಬಟ್ಟೆಗಳು ಕಾಯಿ, ಇವುಗಳು ಬಂದರಿನಿಂದ ರಫ್ತುಗುತಿತ್ತು. ಕ್ರಿ.ಶ, 1406ರಲ್ಲಿ ದಾಖಲೆಯಂತೆ ಬಹ್ಮನಿ ಸುಲ್ತಾನ ವಾರ್ಷಿಕವಾಗಿ ಹಡಗುಗಳನ್ನು ಈ ರೇವಿಗೆ ಕಳುಹಿಸಿ ಇಲ್ಲಿಂದ ತನ್ನ ರಾಜ್ಯಕ್ಕೆ ಬೇಕಾಗಿರುವ ವಸ್ತುಗಳನ್ನು, ಆಹಾರ ದಾನ್ಯಗಳನ್ನು ವಿವಿಧ ದೇಶಗಳ ಮುಂಖಾಂತರ ತರಿಸಿಕೊಳ್ಳುತ್ತಿದ್ದನು. ಈ ರೇವುಗೆ ಕರಾವಳ ಕರ್ನಾಟಕದಲ್ಲಿರುವ ರೇವುಗಳೊಂದಿಗೂ ಮತ್ತು ಕೇರಳದಲ್ಲಿರುವ ರೇವುಗಳೂಂದಿಗೂ ನಿಕಟ ವ್ಯಾಪಾರ ನಡೆಯುತ್ತಿತ್ತು, ಇದೆ ರೀತಿಯಲ್ಲಿ ಮಲಬಾರು ಮತ್ತು ಕರಾವಳ ಕರ್ನಾಟಕದ ವ್ಯಾಪಾರಸ್ಥರು ಗೋವೆಯ ವರ್ತಕರೊಂದಿಗೆ ಸಾಗರೋತ್ತಾರ ವ್ಯಾಪಾರ ನಡೆಯುತ್ತಿತ್ತು. "ಈ ರೇವಿನ ಇರುವಿಕೆ ಸಾಗರೋತ್ತರ

ವ್ಯಾಪಾರಕ್ಕೆ ಪ್ರೋತ್ಸಾಹದಾಯವಾಗಿತ್ತು, ಆಪಾನ, ಸೂ ಆಲಬುಕರನ ಪತ್ರದಂತೆ ಈ ರೇವು ಸುತ್ತಲು ಆಳವಾದ ಸಮುದ್ರದಿಂದ ಆವರಿತವಾಗಿತ್ತು ಬಿರುಗಾಳಿ ಮತ್ತು ಇನ್ನಿತರ ಅನಾಹುತಗಳನ್ನು ತಡೆಗಟ್ಟುವ ಸ್ಥಿತಿಯಲ್ಲಿದ್ದಿತು. ಬಂದರಿನಲ್ಲಿರು ನೀರು ಶಾಂತವಾಗಿದ್ದು ಬಂದ ಹಡಗುಗಳಿಗೆ ಸಂರಕ್ಷಣೆ ನೀಡಿತ್ತು, ಇದರಿಂದ ಮಕ್ಕಾ, ಉಡನ, ಬಿರಮಜ್‌ನಿಂದ ಮುಸ್ಲಿಂರ ಹಡಗುಗಳು ಬರುತ್ತಿದ್ದವು ಕ್ಯಾಂಬೆ ಮತ್ತು ಮಲಬಾರಿನ ಹಡಗುಗಳು ಇಲ್ಲ ವ್ಯಾಪಾರ ನಡೆಸಲು ಬರುತ್ತಿದ್ದವು," ಕ್ರಿ.ಶ 1472ರ ನಂತರ ವಿಜಯ ನಗರದ ವ್ಯಾಪಾರವು ಕರಾವಳ ಕರ್ನಾಟಕ ಮತ್ತು ಮಲಬಾರಿನ ಮುಸ್ಲಿಂ ವರ್ತಕರ ವಶಕ್ಕೆ ಬಂದು ಹದಿನಾರನೆ ಶತಮಾನದ ಆರಂಭದಲ್ಲ ಮಿರ್ಜಾನ ಹೊನ್ನಾವರ, ಭಟ್ಕಳ, ಬೈಂದೂರು, ಬಸರೂರು, ಬಾರಕೂರು, ಮಂಗಳೂರು, ಮಂಜೇಶ್ವರ ಮತ್ತು ಕುಂಬಳ ಪ್ರಮುಖ ಸಾಗರೋತ್ತರ ವ್ಯಾಪಾರ ಕೇಂದ್ರಗಳಾಗಿದ್ದವು. ಇದೇ ಶತಮಾನದ ಮಧ್ಯವಧಿಯಲ್ಲ ಉಳ್ಳಾಲ, ಕಾರ್ಣಜೆ, ಮತ್ತು ಅಂಕೋಲಗಳಲ್ಲ ವಿಜಯನಗರದವರ ಮೇಲ್ವಚಾರಣೆಯಲ್ಲ ಸಾಗರೋತ್ತರ ವ್ಯಾಪಾರ ನಡೆಯುತ್ತಿದ್ದವು. ಈ ಹಿಂದೆ ತಿಳಿಸಿದಂತೆ ಚೀನಿಯರೊಂದಿಗೆ ಪಶ್ಚಿಮ ಕರಾವಳಿಯ ರೇವುಗಳೊಂದಿಗೆ ಸಾಗರೋತ್ತರ ವ್ಯಾಪಾರವು ನಡೆಯುತ್ತಿತ್ತು. ಇವರುಗಳ ಪ್ರಮುಖ ವ್ಯಾಪಾರ ಕೇಂದ್ರ ಬಸರೂರು. ಅರಬ. ಪರ್ಶಿಯ. ಯೆಮನ್. ಮತ್ತು ಬರ್ಮಜಗಳ ಹಡಗುಗಳು ಹೋನ್ನಾವರ, ಭಟ್ಕಳ, ಮಂಗಳೂರಿಗೆ ಬಂದು ಈ ರೇವುಗಳಿಂದ ಶುಂಠಿ, ತೆಂಗಿನಕಾಯಿ. ಕತ್ತೆ. ಕರಿಮೆಣಸು, ವಿವಿಧ ತರದ ಕಬ್ಬುಗಳನ್ನು ಹಡಗುಗಳ ಮುಖಾಂತರ ಸಾಗಿಸುತ್ತಿದ್ದರು. ಈ ಹಡಗುಗಳನ್ನು 'ಮೂರರು'(ಮುಸ್ಲಿಂ)ರು ಹೊಂದಿದ್ದರು. ಭಟ್ಕಳದಲ್ಲ ನುರಿತ ವ್ಯಾಪಾರಸ್ಥರಿದ್ದರು, ಇವರು ತಮ್ಮ ಸಂಪತ್ತಿನಿಂದ ಈ ನಗರದ ವ್ಯಾಪಾರ ವೈಭವವನ್ನು ಹೆಚ್ಚಿಸಿದರು ಮತ್ತು ಭವ್ಯವಾದ ಕಟ್ಟಡ ಬಸದಿ ಮತ್ತು ದೇವಾಲಯಗಳನ್ನು ರಚಿಸಿದರು ಎಂದು ಇಲ್ಲಿನ ಭಂಡಾರ ಬಸದಿಯ ಒಂದು ಶಾಸನವು ತಿಳಿಸುತ್ತದೆ. ಇವರ ಕಾಲ 1547, ಅರೇಬಿಯಾ, ಪರ್ಶಿಯಾ, ಬರ್ಮಗಳೀಂದ ಸರಕು ಹೊತ್ತ ಹಡಗುಗಳು ಈ ರೇವಿಗೆ ಬರುತ್ತಿದ್ದು ಇಲ್ಲಿ ಬಿರುಸಿನ ವ್ಯಾಪಾರ ನಡೆಯುತ್ತಿತ್ತು, ವಿಜಯನಗರ ಸಾಮ್ರಜ್ಯದ ಅಂತ್ಯ ಕಾಲದಲ್ಲಿ ಭಟ್ಕಳದ ಕರಿ ಮೆಣಸು ಮತ್ತು ಕುದುರೆಗಳ ಸಾಗರೋತ್ತರ ವಿನಿಮಯ ವ್ಯಾಪಾರ ಕೇಂದ್ರವಾಗಿತ್ತೆಂದು ಕ್ರಿ,ಶ, 1549ರ ಪೋರ್ತುಗೀಸರ ದಾಖಲೆಗಳ ಅಧ್ಯಯನದಿಂದ ವ್ಯಕ್ತವಾಗುತ್ತದೆ.

ವ್ಯಾಪಾರಸ್ಥರು: – ಸ್ಥಳಯ ಮತ್ತು ವಿದೇಶಿಯ ದಾಖಲೆಗಳ ಅಧ್ಯಯನದಿಂದ ತಿಳಿದು ಬರುವ ಮುಖ್ಯ ಸಂಗತಿ ಎಂದರೆ ಸಾಗರೋತ್ತರ ವ್ಯಾಪಾರದಲ್ಲ ಕರಾವಳಿಯಲ್ಲಿದ್ದ ಮುಸ್ಲಿಂ ವರ್ತಕರ ಪಾತ್ರವು ಗಣನೀಯವಾಗಿತ್ತು. ಇವರ ವ್ಯಾಪಾರ ಸಂಸ್ಥೆ 'ಹಂಜಮಾನ್' ಚಟುವಟಿಕೆಗಳು ಉಳ್ಳಾಲ, ಮಂಗಳೂರು, ಬಾರಕೂರು,ಭಟ್ಕಳ, ಕಾಲ್ಕುಣಿ, ಮತ್ತು ರೇವೆಯಲ್ಲಿದ್ದಿದ್ದು ಕಂಡುಬರುತ್ತದೆ. ನಾನಾದೇಶಿ 'ಉಬಯ ನಾನಾದೇಶಿ' ಪರದೇಶಿ ನಕರ, ಮುಂತಾದ ಸಂಘ ಸಂಸ್ಥೆಗಳು ಅಲ್ಲಲ್ಲ ಸಾಗರೋತ್ತರ ವ್ಯಾಪಾರದಲ್ಲ ನಿರತರತಾಗಿದ್ದರು. ವೆಣಚಿಗರು ವಳಂಜಿಯಾದ ಚೆಟ್ಟಿಯರು ಕರಾವಳ ಕರ್ನಾಟಕದಲ್ಲ ಸಾಗರೋತ್ತರ ವ್ಯಾಪಾರ ನಡೆಸಿದ ವಿಚಾರ ತಿಳಿದುಬರುತ್ತದೆ. ತುಳು ವಾಡ್ಡನದಲ್ಲ 'ತಂಡೆಲ'ರ ವಿಚಾರ ಬರುತ್ತದೆ, ಇವರು ಹಡಗುಗಳ ಮುಖ್ಯಸ್ಥನಾಗಿರಬೇಕು. ಆದರೆ ಇವರು ಸ್ವಂತ ಹಡಗು ಹೊಂದಿದ್ದ ಬಗ್ಗೆ ಯಾವ ದಾಖಲೆಗಳು ನಮಗೆ ಸಿಕ್ಕಿಲ್ಲ, ಇವರು ಹಡಗು ನಡೆಸಲು ನುರಿತವಾದ ಕಾರಣ, ಇವರನ್ನು ಹಡಗುಗಳ ಮಾಲೀಕರು ನೇಮಿಸಿ ಕೊಂಡಿದ್ದರು, ಮರಕಾಲ, ದೊಗೆರರು, ಮತ್ತು ಬಾರ್ವಿ ಹರಿಕಂತರು ಸಾಗರ ಯಾನದ ಪರಿಚಯವನ್ನು ಪಡೆದಿದ್ದುದ್ದರಿಂದ ಇವರ ಸಹಾಯವು ಹಡಗು ಮಾಲೀಕರಿಗೆ ಅಗತ್ಯವಿದ್ದಿತ್ತು. ವಿಜಯ ನಗರದ ಕಾಲದ (1565) ಅಂತ್ಯದಲ್ಲ ಗೋವೆಯಿಂದ ವಲಸೆ ಬಂದ ಪ್ರಭು, 'ರೇಣಿ, ಶೆಣೈ ಪಡಿಯಾರ ನಾಮಾಂಕಿತವುಳ್ಳ ಗೌಡ ಸ್ವಾರಸ್ವತರು ಸಾಗರೋತ್ತರ ವ್ಯಾಪಾರದಲ್ಲ ನಿರತರಾಗಲು ಆರಂಭಿಸಿದರೆಂದು ಭಟ್ಕಳದ ಪರಿಸರದ ಶಾಸನಗಳಂದ ತಿಳಿದು ಬರುತ್ತದೆ.

ಸಾಗರೋತ್ತರ ಯಾನದಲ್ಲ ನಿರತರಾದ ವಿವಿಧ ಹೆಸರಿನ ಹಡಗುಗಳ ಪರಿಚಯವು ಕನ್ನಡ, ತುಳು, ಮತ್ತು ಮಲೆಯಾಳ, ಜಾನಪದಗಳ ಅಧ್ಯಯನದಿಂದ ತಿಳಿದು ಬರುತ್ತದೆ, ಕಲ್ಲಡ ಪದವು. ಮರದ ಪಡವು ಹಾಯಿ ಹಡಗು, ಹಾಯಿ ದೋಣಿಗಳನ್ನು ಸಾಗರೋತ್ತರ ವ್ಯಾಪಾರದಲ್ಲ ಉಪಯೋಗಿಸುತ್ತಿದ್ದರು. ಮಂಜಿ ಮಬೆವೆ, ಪಟ್ಟಮಾರು, ಪೇರು ಇತ್ಯಾದಿ ಹೆಸರಿರುವ ಹಡಗುಗಳು ಮಲಬಾರ್ ರೇವಿನಿಂದ ಮಂಗಳೂರು ಭಟ್ಕಳಕ್ಕೆ ಸಾಗರೋತ್ತರ ವ್ಯಾಪಾರ ನಡೆಸಲು ಬರುತ್ತಿದ್ದವು, 'ನಾಕಾದಾ' ಎಂಬ ಅಡ್ಡ ಹೆಸರಿರುವ ಮುಸ್ಲಿಂ ವರ್ತಕರು ವಿಶಿಷ್ಟವಾದ ಹಡಗುಗಳನ್ನು ಹೊಂದಿದ್ದರು.

ಸಮಕಾಲಿನ ದಾಖಲೆಗಳಂತೆ ಕಣ್ಣಾನ್ನೂರಿನಲ್ಲರುವ ವರ್ತಕರು ವಿಜಯನಗರ ಅರಸರ ಕಾರ್ಯಭಾರಿಗಳಾಗಿ ಬರ್ಮಜನಲ್ಲರುವ ವರ್ತಕರೊಂದಿಗೆ ಕುದುರೆ ವ್ಯಾಪಾರ ವ್ಯವಹಾರವನ್ನು ಕುದುರಿಸುತ್ತಿದ್ದರು. ಇದರಿಂದಾಗಿ ಕರಾವಳ ಕರ್ನಾಟಕ ಮತ್ತು ಕೇರಳ ಕರಾವಳಿಯಲ್ಲ ಸಾಗರೋತ್ತರ ವ್ಯಾಪಾರವು ಒಂದು ಹೊಸ ವ್ಯವಸ್ಥೆಯನ್ನು ಕಂಡಿತು, ಇದರಿಂದಾಗಿ ಈ ಕರಾವಳ ವ್ಯಾಪಾರ ಸಂಪನ್ಮೂಲಗಳು ಈ ಪ್ರದೇಶಕ್ಕೆ ಒಂದು ರಾಜಕೀಯ ಆಸ್ತಿಯಾಗಿ ಪರಿಣಮಿಸಿತು ಎಂಬ ವಾದವು ಇದೆ. ಇದರಿಂದಾಗಿ ಮಲಬಾರಿ ಮಾಪಾಳ್ಳ ಮತ್ತು ಇಲ್ಲಿನ ಇನ್ನಿತರ ವರ್ತಕರ ಸಾಗರೋತ್ತರ ವ್ಯಾಪಾರ ಭದ್ರಗೊಂಡು ಇವರು ಮಂಗಳೂರಿನ ಮತ್ತು ಇವರ ದಕ್ಷಿಣಕ್ಕಿರುವ ರೇವುಗಳಲ್ಲ ಭದ್ರವಾಗಿ ನೆಲೆಗೊಂಡು ಇಲ್ಲಿನ ಸಾಗರೋತ್ತರ ವ್ಯಾಪಾರಗಳಲ್ಲ ಏಕ ಸಾಮ್ಯವನ್ನು ಪಡೆದರು.

ಮುಕ್ತಾಯ :– ಪಶ್ಚಿಮ ಕರಾವಳಿಯ ಪ್ರದೇಶದ ವಿದೇಶಿ ವ್ಯಾಪಾರದಲ್ಲ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದ್ದು ಅದರಲ್ಲೂ ವಿಶೇಷವಾಗಿ ದಕ್ಷಿಣ ಕನ್ನಡದ ಬಂದರು ಭಾರತದಲ್ಲ ಪ್ರಮುಖವಾದ ಸ್ಥಾನವನ್ನು ಗಳಿಸಿಕೊಂಡಿದೆ, ಇಲ್ಲ ನಡೆಯುವ ವ್ಯಾಪಾರ ವಿಶ್ವದ ಇತರೆ ದೇಶಗಳಿಗೆ ಹೊಗುವ ಸಂಪರ್ಕದ ಸ್ಥಳವಾಗಿ ಮಾರ್ಪಟ್ಟತ್ತು, ಇದಲ್ಲದೆ ಅರೇಬಿಯಾ ಪರ್ಶಿಯಾದಿಂದ ಚೀನಾದವರೆಗೆ, ಸಾಗರೋತ್ತ ವ್ಯಾಪಾರ ಕ್ಷೇತ್ರವಿತ್ತು ಆದರೆ ಅದರ ಕ್ಷಿಣತೆ ಕಂಡು ಬಂದಿತ್ತು ಕಾರಣ ಪೋರ್ಚುಗೀಸರ ಆಗಮನ ಮತ್ತು ಇವರ ಚಟುವಟಿಕೆಗಳ ಕಾಲದಲ್ಲ ಕಂಡುಬಂದಿತು,

ಪಶ್ಚಿಮ ಕಾರವಳಿಯ ಸಾಗರೋತ್ತರ ವ್ಯಾಪಾರದಿಂದಾಗಿ ಕೆಲವು ವಿದೇಶಿ ಸಮುದ್ರ ನಾವಿಕರು ಕರಾವಳಿ ಪ್ರದೇಶದಲ್ಲಿ ದೈವಗಳಾಗಿ ಮಾರ್ಪಟ್ಟು ಇವರ ಆರಾಧನೆಗಳ ವರ್ಣರಂಜಿತವಾಗಿ ನಡೆಯುಲು ಕಾರಣವಾಯಿತು, ಬೊಬ್ಬರ್ಯ, ಆಲಿಭೂತ, ಬಸ್ತೋರಿನಲ್ಲಿ ಚೀನಿದೈವ, ಮಾಲಾಣದೇವಿ, ಹಟ್ಟಿಯಾಂಗ ಗಡಿಯಲ್ಲಿ ಇವುಗಳನ್ನು ಕಾಣಬಹುದು.

ಗ್ರಂಥಋಣ.

1. Heptalla. Nejma. Indo- West Asian Relations: the nohru era. Allied Publishers. 1991. ISBN. 97881702

2. Spielvogel. Jackson. Western Civilisation: Since 1500. Cengage Learning.2008.ISBN. 9780495502876.

3. Richard. Edmund, india's Pro-Arab Policy: A Study in continuity. Greanwood Publishing group. 1992. ISBN. 9780275940867.

4. www. Wikipidia.com

5. Kostiner, Joseph. The making of Saudi Arabia, 1916-1936: from chieftaincy to monarchical state. Oxford University Press US, 1993. ISBN 9780195074406.

6. ಕ್ವಾರ್ಟರ್ಲಿ ರಿವ್ಯೂ ಆಫ ಹಿಸ್ಟಾರಿಕಲ್ ಸ್ಟಡೀಸ್, ಕಲ್ಕತ್ತಾ, ಏಪ್ರಿಲ್ ಸೆಪ್ಟಂಬರ್ 1997,ನಂ,1-2 ಪು.ಪು 114-118.

7. ಎ. ಅಪ್ಪೋದೂರೈ, 1990, ಎ ಇಕೆನೋಮಿಕ್ ಕಂಡಿಷನ್ ಇನ್ ಸೌಥ್ ಇಂಡಿಯಾ(2ನೇ ಮುದ್ರಣ, ಮದ್ರಸ್,1990) ಪು. 528-591.

8. ಕ್ವಾರ್ಟರ್ಲಿ ರಿವ್ಯೂ ಆಫ ಹಿಸ್ಟಾರಿಕಲ್ ಸ್ಟಡೀಸ್, ಕಲ್ಕತ್ತಾ, ಏಪ್ರಿಲ್ ಸೆಪ್ಟಂಬರ್ 1997,ನಂ,1-2 ಪು.ಪು 114-118.

9. ಎ. ಅಪ್ಪೋದೂರೈ, 1990, ಎ ಇಕೆನೋಮಿಕ್ ಕಂಡಿಷನ್ ಇನ್ ಸೌಥ್ ಇಂಡಿಯಾ(2ನೇ ಮುದ್ರಣ, ಮದ್ರಸ್,1990) ಪು. 528-591.

10. ಆಲಬುಕರ 15-10-1510 ರಂದು ಬರೆದ ಪತ್ರ ನೋಡಿ, ಹೆಚ್, ಕೆ, ಶಿಕ್ವಾಣಿ ಮತ್ತು ಪಿ.ಎಂ, ಜೋಷಿ(ಸಂ) 1971 ಮೀಡಿವಲ್ ಡೆಕ್ಕನ್ ಹೈದರಾಬಾದ್, ಸಂ 1 ಪು. 304.

11. ಟೋಮಿ ಪೆರಿಡ. ಸಮ್ ಒರೀಂಟಲ್ (ತಿರ್. ಅರ್‌ಮೆಂದೂ 1994) ಪು.61. ಬರ್‌ಬೋಸ. ದಿ ಬುಕ್ ಆಫ್ ಡರ್ಟ ಬಾರಬೋಸ, ವ್ಯಲ್ಯು ನಂ. 166.185.215.303.

12. ಬರ್‌ಬೋಸ. ಪೂರ್ವೋಕ್ತ, ಪು. 188-89.

13. ಕೆ.ಜೆ ವಸಂತಮಾಧವ, ವಿಜಯನಗರ ಅರಸರ ಸಾಗರೋತ್ತರ ವ್ಯಾಪಾರ- ಒಂದು ಅಧ್ಯಯನ

14. ವಿಜಯ ನಗರ ಅಧ್ಯಯನ ಸಂಒಉಟ 6. (ಇಡಿ) ಪ್ರೋ. ಎಂ.ವಿ. ಕೃಷ್ಣಪ್ಪ. ಹೆಚ್.ಟಿ. ತಳವಾರ. ಹೊಸಪೇಟೆ.2001.

ಗುಲಬರ್ಗಾ ಜಿಲ್ಲೆಯಲ್ಲಿ ಖಾದಿ ಇತಿಹಾಸ ಒಂದು ಅಧ್ಯಯನ

ಗೀತಾ. ಹೆಚ್.ಪಿ.
ಸಂಶೋಧನಾ ವಿದ್ಯಾರ್ಥಿನಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ
ಮೈಸೂರು-570006. Hp.geethahistory@gmail.com

ಭಾರತ ಸ್ವಾತಂತ್ರ್ಯ ಸಂಗ್ರಾಮ ಆರಂಭವಾಗುತ್ತಿದ್ದಂತೆ ಗಾಂಧೀಜಿಯವರು ಖಾದಿ ಕಾರ್ಯಾವನ್ನು ಪುನರಾವರ್ತನಗೊಳಿಸಿದರು. ಅಲ್ಲದೆ ಖಾದಿಯಿಂದಲೇ ಸ್ವರಾಜ್ಯ ಎಂದೂ ಸಾರಿದರು. ಗಾಂಧೀಜಿಯವರ ವಾಣಿಯನ್ನು ಕೇಳಿ ನಮ್ಮಲ್ಲಿನ ಕಾರ್ಯಕರ್ತರು "ಚರಖಾ ಚಾಲಾ ಚರಾಕೆ ದೇಂಗೆ ಸ್ವರಾಜ್ಯ ದೇಂಗೆ" ಎಂದೇ ಹಾಡಿದೆವು. ಆಗ ಕೆಲವರು ಖಾದಿಗೂ ಸ್ವರಾಜ್ಯಕ್ಕೂ ಏನೂ ಸಂಬಂಧ ಎಂದು ಜೇಷ್ಟೆ ಮಾಡಿ ನಕ್ಕರು. ಆದರೆ ಖಾದಿ ವಿಚಾರದಲ್ಲಿ ಅಷ್ಟಕವಾಗಿರಬಹುದಾದ ಅನೇಕ ಮಹತ್ವದ ವಿಚಾರಗಳು ಅನೇಕರಿಗೆ ಗೊತ್ತಿರಲೇ ಇರಬಹುದು. ಹೈದರಾಬಾದ್ ಕರ್ನಾಟಕದಲ್ಲಿ ಖಾದಿ ಹಾಗೂ ಗ್ರಾಮೋದ್ಯೋಗದ ಕಲ್ಪನೆಯನ್ನು ಗಾಂಧೀಜಿಯವರಿಗಿಂತ ಮುಂಚಿತವೇ ತಿಳಿಸಿದವರೆಂದರೆ ನಿವಂಗತ ಲೋಕಮಾನ್ಯ ಗಂಗಾಧರ ತಿಲಕರು. ಗುಲಬರ್ಗಾ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ತಿಲಕರ ಪ್ರಭಾವ ಅಧಿಕವಾಗಿತ್ತು ಆದರೆ 1920 ರಲ್ಲಿ ಅವರು ಮರಣದ ನಂತರ ಈ ಭಾಗದ ಚಿಂತನೆಯು ಗಾಂಧೀಜಿಯವರ ಪ್ರಭಾವಕ್ಕೆ ಗುರಿಯಾಗಿ ಖಾದಿ ಚಳುವಳಿಯಲ್ಲಿ ಭಾಗವಹಿಸಿದರು. ಅಂದಿನ ದಿನಗಳಲ್ಲಿ ಖಾದಿ, ಕಾಂಗ್ರೇಸ್ ಹಾಗೂ ಕನ್ನಡದ ಪ್ರಚಾರ ಕಾರ್ಯಗಳು ಒಟ್ಟಿಗೆ ನಡೆಯುತ್ತಿದ್ದವು. ಎಂಬುದನ್ನು ಗಮನಿಸಬೇಕು. ಈ ಕಾರಣದಿಂದ ಕೇವಲ ಖಾದಿ ಚಳುವಳಿಯನ್ನೇ ಕೈಗೆತ್ತಿಕೊಂಡವರು ಎಂದು ಹೇಳಲು ಆಗುವುದಿಲ್ಲ. ಈ ಭಾಗದ ಹಿರಿಯ ಮುಂದಾಳಾದ ಕಿಕ್ಕೇರಿ ಕೃಷ್ಣಮೂರ್ತಿರಾಯರು, ಜನಾರ್ದನರಾವ್ ದೇಸಾಯಿ, ಚಂಗಾಲ್ಪರಾವ್ ಇನ್ನು ಮುಂತಾದವರು ಖಾದಿ ಪ್ರಚಾರ ಕೈಗೆತ್ತಿಕೊಂಡ ಇನ್ನೂ ಮುಂತಾದವರು ಪ್ರಮುಖರು ಎಂದು ಹೇಳಬಹುದು.

1940ಕ್ಕೆ ಮುಂಚೆ ಗುಲಬರ್ಗಾದಲ್ಲಿ "ಖಾದಿ ಭಂಡಾರ" ಇರಲಿಲ್ಲ ನಿವಂಗತ ಶ್ರೀ ಶಿವಶರಣಪ್ಪ ಮಲಶೆಟ್ಟಿ ಎಂಬ ಖಾದಿ ದಾಲಿಗರು 1932-1933 ರ ಸುಮಾರಿಗೆ ಖಾಸಗಿಯಾಗಿ ಖಾದಿ ಪ್ರಚಾರ ಪ್ರಾರಂಭಿಸಿದರು. ಮುಂದೆ ಕರ್ನಾಟಕ ಗ್ರಾಮ ಸೇವಾ ಸಂಘ ಹೈದರಾಬಾದ್ ಖಾದಿ ಸಮಿತಿ, ಹೈದರಾಬಾದ್ ಕರ್ನಾಟಕ ಗ್ರಾಮ ಸೇವಾ ಸಂಘದಿಂದ ಗುಲಬರ್ಗಾದಲ್ಲಿ ಒಂದು ಪ್ರಾರಂಭಿಕ ಕಾರ್ಯಾಲಯ ತೆರೆಯಿ ಚರಖಾಗಳನ್ನು ಮಾರಾಟಮಾಡಿತು. ಅಂದಿನ ಚರಖಾ ಕೇಂದ್ರಗಳು, ಸಿಂದನೂರ ಖಾದಿ ಗ್ರಾಮೋದ್ಯೋಗ, ಆಳಂದ ಖಾದಿ ಗ್ರಾಮೋದ್ಯೋಗ ಸಂಘದ ಸದಸ್ಯರು, ಮುಖ್ಯವಾಗಿದ್ದು. ಖಾದಿ ಚಳುವಳಿ ಆರಂಭದ ನಂತರ ಗಾಂಧೀಜಿಯವರ ಪ್ರಭಾವ ಹಾಗೆಯೇ ಹೈದರಾಬಾದ್ ಕರ್ನಾಟಕ ಚಿಂತನೆಗೆ ಉದ್ಯೋಗ, ನಿರುದ್ಯೋಗಿಗಳ ನಿವಾರಣೆ, ವಿಶೇಷ ಬಟ್ಟೆಗಳ

ಮಾರಾಟ ನಿಷೇಧ ಗುಲಬರ್ಗಾ ಜಿಲ್ಲೆಯ ಜನತೆ ಖಾದಿ ಉದ್ಯಮವನ್ನು ಉಸಿರಾಡುವ ರೀತಿ ಬೆಳೆಸಿಕೊಳ್ಳುತ್ತಿದ್ದರು. ಕೊನೆಯದಾಗಿ ತುರಿಗಳ್ಳಾ ಕಾಲುವೆಗೆ ನೀರು ಬರಿದಿದ್ದರಿಂದ ನೀರಾವರಿ ಕೆಲಸ ಜೋರಾಗಿ ನಡೆಯಿತು. ಇದರಿಂದ ಗುಲಬರ್ಗಾ ಜಿಲ್ಲೆ ಖಾದಿ ಚಳುವಳಿಯ ಅನುಕೂಲ ಮತ್ತು ಅನಾನುಕೂಲಗಳನ್ನು ಗಮನಿಸಬಹುದು.

ಒಟ್ಟಾರೆಯಾಗಿ ಈ ಪ್ರದೇಶದಲ್ಲಿ ಖಾದಿ ಉತ್ಪಾದನೆಗೆ ಹೆಚ್ಚು ಅವಲಂಬನೆಯಾಗಿದ್ದನ್ನು ನಾವು ನೋಡಬಹುದು. ಖಾದಿ ಪ್ರಚಾರ ಮತ್ತು ಚಳುವಳಿಯನ್ನು ನಾವು ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಖಾದಿ ಚಳುವಳಿಯು ದೇಶಾದಾದ್ಯಂತ ಚಳುವಳಿ ಪ್ರಾರಂಭಗೊಂಡು ಈ ನಿಟ್ಟಿನಲ್ಲಿ ಗುಲಬರ್ಗಾ ಜಿಲ್ಲೆಯ ಸುತ್ತ–ಮುತ್ತ ಖಾದಿ ಗ್ರಾಮಾದ್ಯೋಗ ಪ್ರಾರಂಭಗೊಂಡವು.

ಖಾದಿ ಎಂದರೇನು? ಭಾರತದಾದ್ಯಂತ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಪಡೆದುಕೊಳ್ಳಲು ಹಲವಾರು ಹೋರಾಟಗಳು, ಚಳವಳಿಗಳು ನಡೆದವು. ಅದರಲ್ಲಿ ಮುಖ್ಯವಾಗಿ ಖಾದಿ ಚಳವಳಿಯು ಪ್ರಮುಖವಾದದ್ದು. ಹಾಗಾದರೆ ಖಾದಿ ಎಂದರೇನು? ಖಾದಿ ಚಳವಳಿಯೂ ಇಂದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇದರಲ್ಲಿ ಅಡಕವಾಗಿರುವ ಅನೇಕ ಮಹತ್ವದ ವಿಚಾರಗಳು ಅನೇಕರಿಗೆ ಗೊತ್ತಿರದೇ ಇರಬಹುದು, 'ಖಾದಿ'ಯು ಕೇವಲ ಒಂದು ಬಟ್ಟೆಯ ಪ್ರಶ್ನೆಯಲ್ಲ, ಬದಲಾಗಿ ಸ್ವದೇಶಿತನವನ್ನು ಪ್ರತಿನಿಧಿಸುವ ಅದೊಂದು ವಿಚಾರಧಾರೆಯಾಗಿತ್ತು. ಖಾದಿಯನ್ನು ಕೈಯಿಂದ ತಯಾರಿಸಿದ ಹಂಚಿಯಿಂದ ತೆಗೆಯಲಾದ ನೂಲಿನಿಂದ ಕೈಮಗ್ಗದಲ್ಲಿಯೇ ತಯಾರಿಸಿದ ಬಟ್ಟೆಗೆ ಖಾದಿ ಎಂದು ಕರೆಯುತ್ತಾರೆ.1 ಒಂದನೊಂದು ಕಾಲದಲ್ಲಿ ಖಾದಿಯನ್ನು ನಿರ್ಲಕ್ಷಭಾವದಿಂದ ನೋಡಲಾಗುತ್ತಿತ್ತು. ಆದರೆ ಕಾಲ ಸರಿದಂತೆ, ಸಭ್ಯತೆಯ ಕುರುಹಾಗಿ ಬೆಳೆಯಿತು. ಅಲ್ಲದೇ ಬ್ರಿಟಿಷರ ಆಡಳಿತ ಆರಂಭಗೊಂಡ ಸಂದರ್ಭದಲ್ಲಿ ಕೇವಲ ಬಟ್ಟೆಗೆಂದೇ ಪರದೇಶಕ್ಕೆ ಹರಿದು ಹೋಗುತ್ತಿದ್ದ ಹಣದ ಹೊಳೆಯನ್ನು ತಡೆಗಟ್ಟಿತ್ತು. ಖಾದಿ, ಇಂದು ಸ್ವಾತಂತ್ರ್ಯದ, ಸ್ವಾಭಿಮಾನದ, ಅಹಿಂಸೆಯ, ಆಶೋಷಣೆಯ ಕುರುಹು ಆಗಿದೆ. ಖಾದಿ ಜಗತ್ತಿನಲ್ಲಿರುವ ಕರಾಳ ಸ್ವರೂಪದ ಆರ್ಥಿಕ ವ್ಯವಸ್ಥೆಯ ಕುಂದು ಕೊರತೆಗಳನ್ನು ನೀಗಿಸಬಲ್ಲ ಹಾಗೂ ಸಕಲರಿಗೂ ಕಲ್ಯಾಣವಾಗಬಲ್ಲ ಸದೃಢ ಆರ್ಥಿಕ ವ್ಯವಸ್ಥೆಯ ಸಾಧನವಾಗಿದೆ.

ರಾಷ್ಟ್ರೀಯ ಹೋರಾಟದಲ್ಲಿ ಖಾದಿ ಚಳವಳಿಯು ಸೇರ್ಪಡೆಯಾದಂತೆ ಆರ್ಥಿಕತೆಯನ್ನು ಪುನರ್‌ನಿರ್ಮಾಣ ಮಾಡುವುದು ಕೂಡ ಗಾಂಧೀಜಿಯವರ ದೃಷ್ಟಿಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿತ್ತು. ಹಾಲಪ್ಪನವರು ಹೇಳುವಂತೆ: ಖಾದಿ ಆಂದೋಲನವು ರಾಷ್ಟ್ರೀಯವಾದಿ ಹೋರಾಟದಲ್ಲಿ ಅತ್ಯಂತ ವಿನೂತವೂ ಕ್ರಾಂತಿಕಾರಕವೂ ಆದ ಒಂದು ತಂತ್ರವಾಗಿದೆ. ಸ್ವಾತಂತ್ರ್ಯಗಳಸಲು ರಾಜಕೀಯವಾಗಿ ಸತ್ಯಾಗ್ರಹ ಸಹಕಾರಿಯಾದಂತೆ ಗಾಂಧೀಜಿಯವರಿಗೆ ಖಾದಿ ಆಂದೋಲನ ಆರ್ಥಿಕವಾದ ಬಿಡುಗಡೆಗೆ ಬೀಜಮಂತ್ರವಾಗಿತ್ತು. ಖಾದಿಯು ರಾಷ್ಟ್ರಪ್ರೇಮದ ಸಂಕೇತವಾಗಿ ಗೋಚರಿಸಿತು, ಹಾಗೆಯೇ ಖಾದಿಧರಿಸಿದವರು ಸ್ವಾತಂತ್ರ್ಯ ಹೋರಾಟಗಾರರೆಂಬ ಗೌರವಕ್ಕೆ ಭಾಜನರಾದರು.2

ಖಾದಿ ಇತಿಹಾಸ ಹಾಗೂ ಪ್ರಚಾರ :– ಭಾರತ ಸ್ವಾತಂತ್ರ್ಯ ಸಂಗ್ರಾಮ ಆರಂಭವಾಗುತ್ತಿದ್ದಂತೆ ಕ್ರಿ.ಶ. 1800ನೇ ಸಾಲಿನವರೆಗೆ ಭಾರತ ದೇಶವು ಚರಕದಿಂದ ನೂಲು ತೆಗೆದು ದೇಶದ ಮಾನವನ್ನು ಕಾಪಾಡುತ್ತಿತ್ತಲ್ಲದೆ ಕೋಟ್ಯಾಂತರ ರೂಪಾಯಿಗಳನ್ನು ವಿಲಾಯತಿಗೂ, ಯುರೋಪ್ ಖಂಡಕ್ಕೂ ಕಳುಹಿಸುತ್ತಿತ್ತು. 1840ನೇಯ ಸಾಲಿನಲ್ಲಿ ಕೂಡಾ ಐದು ಕೋಟಿಗಿಂತ ಕಡಿಮೆ ಮತ್ತು 1879 ರಲ್ಲಿ ಏಳುಕೋಟಿಗೆ ಮಿರಿದಷ್ಟು ಬಟ್ಟೆಯ ಆಮದಾಗಿ ಬಂತು ಆದರೂ ಇಂಗ್ಲೀಷ್ ಗಿರಣಿ ಬಟ್ಟೆಯು ಹಿಂದೂ ದೇಶದ ಕೈಮಗ್ಗದ ಬಟ್ಟೆಯೊಂದಿಗೆ ಸ್ಪರ್ಧಿಸಲಾರದೇ ಹೋಯಿತು. 1920 ರಲ್ಲಿ ಗಾಂಧೀಜಿಯವರು ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದರು. 1931–32 ರಲ್ಲಿ ಇಂಗ್ಲೆಂಡಿನಲ್ಲಿ ದುಂಡುಮೇಜಿನ ಪರಿಷತ್ತು ನಡೆಯುತ್ತಿದ್ದ ಅವಧಿಯಲ್ಲಿ ದಿವಂಗತ ಜನಾರ್ಧನ ದೇಸಾಯಿಯವರು ತಮ್ಮ ಗೆಳೆಯರೊಂದಿಗೆ ಹೈದರಾಬಾದಿನಲ್ಲಿ ಖಾದಿ ಪ್ರಚಾರವನ್ನು ಹಾಗೂ ಪರದೇಶಿ ಬಟ್ಟೆಗಳ ಬಹಿಷ್ಕಾರವನ್ನು ಭರದಿಂದ ಸಾಗಿಸಿದರು. ಹೈದರಾಬಾದ್ ರಾಜಕೀಯ ಅಧಿವೇಶನಗಳಲ್ಲಿಯೂ ಕೂಡ ಭಾಗವಹಿಸಿದ್ದರು. ಹಾಗೆಯೇ ಕಾಂಗ್ರೇಸ್ ಸಂಸ್ಥೆ ನಿಜಾಂ ಕರ್ನಾಟಕ ಪರಿಷತ್‌ಗಳನ್ನು ರಚಿಸುವಲ್ಲಿ ಇವರ ಪಾತ್ರ ಆಗಾಧ, ಹೈದರಾಬಾದ್ ಕರ್ನಾಟಕ ಚರಖಾ ಸಂಘ ನಂತರದ ಕರ್ನಾಟಕ ಗ್ರಾಮ ಸೇವಾ ಸಂಘಗಳಲ್ಲಿ ಸಕ್ರೀಯ ಸೇವೆ ಸಲ್ಲಿಸಿದ ಪ್ರಮುಖರಲ್ಲಿ ಜನಾರ್ಧನ ದೇಸಾಯಿವರು ಒಬ್ಬರು. 1929 ರಲ್ಲಿ ಗಾಂಧಿಯನ್ನು ಕಂಡ ಪ್ರೋ. ವಿ. ಜಿ. ದೇವಳ್ಗಾಂವಕರು, 1930ರ ದಂಡೀಯಾತ್ರೆಯ ಪ್ರಭಾವದಿಂದ ಖಾದಿಧಾರಿಗಳಾದರು.3 ಅಂದಿನಿಂದ ಇಂದಿನವರೆಗೂ ಖಾದಿ ಭಕ್ತರಾಗಿಯೇ ಉಳಿದಿದ್ದಾರೆ. ಶ್ರೀಯುತರು ಆಳಂದ ಖಾದಿ ಭಂಡಾರ, ಕಲಬುರ್ಗಿ ಖಾದಿ ಭಂಡಾರ ಹಾಗೂ ರಾಯಚೂರಿನ ಖಾದಿ ಸಂಘಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ.

ಖಾದಿ ಚಳುವಳಿ:– ಕರ್ನಾಟಕದಲ್ಲಿ ಖಾದಿ ಚಳವಳಿಯ ಪ್ರಭಾವ ಬಹಳ ದಟ್ಟವಾಗಿತ್ತು. ಸ್ವದೇಶಿ ಚಳವಳಿಯ ಸಂಕೇತವಾದ ಖದ್ದರ್ ಕರ್ನಾಟಕದಲ್ಲಿ ಪ್ರಾರಂಭದಿಂದಲೂ ಕಾಣಿಸಿಕೊಂಡಿತ್ತು. ಖಾದಿ ಆಂದೋಲನದ ಪರಿಣಾಮವಾಗಿ ವಿದೇಶಿ ವಸ್ತುಗಳನ್ನು ಕರ್ನಾಟಕದ ಎಲ್ಲ ಕಡೆ ಬಹಿರಂಗವಾಗಿ ಸುಟ್ಟರು. ಹರ್ಡೀಕರ್ ಮಂಜಪ್ಪನವರು ಗಾಂಧೀಜಿಯವರ ಕಟ್ಟಾ ಅನುಯಾಯಿಯಾಗಿದ್ದರಲ್ಲದೆ ಅವರನ್ನು 'ಕರ್ನಾಟಕದ ಗಾಂಧಿ' ಎಂದು ಕೂಡ ಕರೆಯುತ್ತಿದ್ದರು. ಹರ್ಡೀಕರ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಮೊಟ್ಟ ಮೊದಲ ಕರ್ನಾಟಕ ಖಾದಿ ಸಮ್ಮೇಳನವು ಧಾರವಾಡದಲ್ಲಿ 26, ಮೇ 1928ರಂದು ಜರುಗಿತು.4 ಹುಕ್ಕೇರಿಕರ್, ಎಚ್. ಆರ್. ವೆಂಕಟರಾಮಯ್ಯ ಹಾಗೂ ಜಾಲಿಹಾಳ್ ಅನಂತರಾವ್ ಅವರ ಸಂಯುಕ್ತ ಪ್ರಯತ್ನದ ಫಲವಾಗಿ 1930ರ ದಶಕದಲ್ಲಿ ಅಖಿಲ ಕರ್ನಾಟಕ ಸ್ವದೇಶಿ ಸಭಾ ಪ್ರಾರಂಭವಾಗಿ ಖಾದಿ ಸಹಕಾರ ಸಂಘಗಳ ಸ್ಥಾಪನೆಗೆ ಆರಂಭಿಕ ಹೆಜ್ಜೆಗಳನ್ನು ಇಟ್ಟರು. ವಿದೇಶಿ ವಸ್ತುಗಳ ಮಾರಾಟದ ವಿರುದ್ಧ ಮುಷ್ಕರ ಮಾಡಿ ವ್ಯಾಪಾರಿಗಳ ಸಂಘವು

ಪ್ರತಿಭಟನೆ ವ್ಯಕ್ತಪಡಿಸಿದವು.5

1920 ರಲ್ಲಿ ವಿದೇಶೀ ಬಟ್ಟೆಗಳಿಗೆ ಬಹಿಷ್ಕಾರ ಹಾಕಲಾಯಿತು. ಇದರಿಂದಾಗಿ ದೇಶದಲ್ಲಿನ ಮಹಾನಗರಗಳಲ್ಲಿ ವಿದೇಶೀ ವಸ್ತ್ರಗಳ ಹೋಳಿ ಉಗ್ರವಾಗಿ ಜರುಗಿತು. ಈ ವಿದೇಶೀ ಬಟ್ಟೆಯ ಬಹಿಷ್ಕಾರದಿಂದಾಗಿ ಕೈನೂಲಿನ ಖಾದಿಗೆ ಅಧಿಕ ಬೇಡಿಕೆ ಒದಗಿತು. ಖಾದಿ ಪ್ರಚಾರ ಹಾಗೂ ಅಸಹಕಾರ ಆಂದೋಲನ ದೇಶಾದಾದ್ಯಂತ ಹರಡಿ ಯುವಕರು ಶಾಲೆ ಕಾಲೇಜುಗಳನ್ನು ತೊರೆದರು. ಸಾಬರಮತಿ ಆಶ್ರಮದಲ್ಲಿ ಗಾಂಧಿಯವರ ಸಮ್ಮುಖದಲ್ಲಿ ನೂಲುವ ಹಾಗೂ ನೇಯ್ಗೆಯ ಕಾರ್ಯ ಆರಂಭವಾಯಿತು. ಇದೇ ಮಾದರಿಯಲ್ಲಿ ದೇಶದ ಇತರ ಪ್ರಾಂತಗಳಲ್ಲಿಯೂ ಈ ಕಾರ್ಯಕ್ರಮ ಜಾರಿಯಲ್ಲಿ ಬಂದಿತು. ಬಿಹಾರದಲ್ಲಿ ರಾಜೇಂದ್ರಪ್ರಸಾದರೂ, ತಮಿಳುನಾಡಿನಲ್ಲಿ ರಾಜಗೋಪಾಲಾಚಾರ್ಯರೂ, ಕರ್ನಾಟಕದಲ್ಲಿ ಗಂಗಾಧರರಾವ್ ದೇಶಪಾಂಡೆಯವರು, ಬೆಳಗಾವಿಯ ಬಳಿಯಲ್ಲಿ ಕುಮರಿ ಅಥವಾ ಕಮರಿ ಆಶ್ರಮವನ್ನೇ ತೆರೆದರು. ನಂತರ ಇದೇ ಅವಧಿಯಲ್ಲಿ ವಿಜಾಪುರದಲ್ಲಿ ಲೋಕಮಾನ್ಯ ವಸ್ತ್ರಾಲಯವನ್ನು ತೆರೆಯಲಾಯಿತು.6

ಹಾಗೆಯೇ ಗುಲಬರ್ಗಾ ಜಿಲ್ಲೆಯಲ್ಲಿ ಖಾದಿ ಚಳವಳಿ ಭಾಗವಹಿಸಿದವರು. ಶ್ರೀಮಾನ್ ದಿ. ಎಮ್. ಜಿ. ಕುಲಕರ್ಣಿ, ಶ್ರೀಮಾನ್ ಸಿ.ಕೆ. ದೇಶಪಾಂಡೆ, ಶ್ರೀ ಜಿ.ಎಲ್. ಕುಲಕರ್ಣಿ, ಆರ್. ಈ. ಖಾಸನೀಸ, ಆರ್. ಜಿ. ಕುಲಕರ್ಣಿ, ಶ್ರೀಮಾನ್ ಎಮ್. ವಿ. ಕುಲಕರ್ಣಿ, ಬಿ. ಆರ್. ಕುಲಕರ್ಣಿ, ಮಹಾದೇವ ವೆಂಡು, ಶಹಬುದ್ದೀನ ನಾಗೂರ, ಶ್ರೀಮಾನ ರುಕುಮಯ್ಯಾ ಸಂಕ್ಲಾಪುರ, ಭೀಮಾಚಾರ್ಯ ಮಠದ, ಬಿ.ಬಿ. ಜೋಶಿ, ದಿ. ಎಮ್. ವಿ. ತೊಳಮಟ್ಟಿ, ಎಂ. ರಂಗಾರಾವ. ಇನ್ನೂ ಮುಂತಾದ ಪ್ರಮುಖರು ಭಾಗವಹಿಸಿದ್ದರು. ಖಾದಿ ಚಳವಳಿ ಅನ್ನುವುದು ಗುಲಬರ್ಗಾ ಜಿಲ್ಲೆಗೆ ಸೀಮಿತವಾಗಿರಲಿಲ್ಲ ಅದು ದೇಶಾದಾದ್ಯಂತ ಖಾದಿ ಚಳುವಳಿ ಪ್ರಾರಂಭಗೊಂಡಿತ್ತು.7 ಅದರಲ್ಲಿ ಗುಲಬರ್ಗಾಕ್ಕೆ ಸೀಮಿತವಾಗಿದ್ದಂತೆ ಖಾದಿ ಚಳವಳಿ ನಾಯಕರನ್ನು ಬಿಂಬಿಸಿದ್ದೇನೆ. ಇಷ್ಟೇ ಅಲ್ಲದೆ ಇನ್ನೂ ಪ್ರಮುಖರನ್ನು ನಾವು ನೋಡಬಹುದು.

ಗುಲಬರ್ಗಾದಲ್ಲಿ ಖಾದಿ ಪ್ರಚಾರ :– ಭಾರತ ಸ್ವಾತಂತ್ರ್ಯ ಸಂಗ್ರಾಮ ಆರಂಭವಾಗುತ್ತಿದ್ದಂತೆ ಗಾಂಧೀಜಿಯವರು ಖಾದಿ ಕಾರ್ಯವನ್ನು ಪುನರಾವರ್ತನಗೊಳಿಸಿದರು. ಅಲ್ಲದೆ ಖಾದಿಯಿಂದಲೇ ಸ್ವರಾಜ್ಯ ಎಂದೂ ಸಾರಿದರು. ಗಾಂಧೀಜಿಯವರ ವಾಣಿಯನ್ನು ಕೇಳಿ ನಮ್ಮಂಥ ಕಾರ್ಯಕರ್ತರು "ಚರಖಾ ಚಲಾ ಚಲಾಕೆ ಲೇಂಗೆ ಸ್ವರಾಜ್ಯ ಲೇಂಗೆ" ಎಂದೇ ಹಾಡಿದೆವು. ಆಗ ಕೆಲವರು ಖಾದಿಗೂ ಸ್ವರಾಜ್ಯಕ್ಕೂ ಏನೂ ಸಂಬಂಧ ಎಂದು ಚೇಷ್ಟೆ ಮಾಡಿ ನಕ್ಕರು. ಆದರೆ ಖಾದಿ ವಿಚಾರದಲ್ಲಿ ಅಡಕವಾಗಿರಬಹುದಾದ ಅನೇಕ ಮಹತ್ವದ ವಿಚಾರಗಳು ಅನೇಕರಿಗೆ ಗೊತ್ತಿರದೇ ಇರಬಹುದು.

ಹೈದರಾಬಾದ್ ಕರ್ನಾಟಕದಲ್ಲಿ ಖಾದಿ ಹಾಗೂ ಗ್ರಾಮೋದ್ಯೋಗದ ಕಲ್ಪನೆಯನ್ನು ಗಾಂಧೀಜಿಯವರಿಗಿಂತ ಮುಂಚಿಯೇ ತಿಳಿಸಿದವರೆಂದರೆ ದಿವಂಗತ ಲೋಕಮಾನ್ಯ ಗಂಗಾಧರ ತಿಲಕರು. ಗುಲಬರ್ಗಾ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ತಿಲಕರ ಪ್ರಭಾವ ಅಧಿಕವಾಗಿತ್ತು ಆದರೆ 1920 ರಲ್ಲಿ ಅವರು ಮರಣದ ನಂತರ ಈ ಭಾಗದ ಜನತೆಯು ಗಾಂಧೀಜಿಯವರ ಪ್ರಭಾವಕ್ಕೆ ಗುರಿಯಾಗಿ ಖಾದಿ ಚಳವಳಿಯಲ್ಲಿ ಭಾಗವಹಿಸಿದರು.8 ಅಂದಿನ ದಿನಗಳಲ್ಲಿ ಖಾದಿ, ಕಾಂಗ್ರೇಸ್ ಹಾಗೂ ಕನ್ನಡದ ಪ್ರಚಾರ ಕಾರ್ಯಗಳು ಒಟ್ಟಿಗೆ ನಡೆಯುತ್ತಿದ್ದವು, ಎಂಬುದನ್ನು ಗಮನಿಸಬೇಕು. ಈ ಕಾರಣದಿಂದ ಕೇವಲ ಖಾದಿ ಚಳವಳಿಯನ್ನೇ ಕೈಗೆತ್ತಿಕೊಂಡವರು ಎಂದು ಹೇಳಲು ಆಗುವುದಿಲ್ಲ. ಹೈದರಾಬಾದ್ ಕರ್ನಾಟಕದ ಖಾದಿ ಕಾರ್ಯಕರ್ತರು ಸ್ವಾಮಿ ರಮಾನಂದ ತೀರ್ಥರು, ಜಿ.ಎಸ್. ಮೇಲುಕೋಟೆ, ಅಡವಿರಾವ ಪಡ್ನೀಸ್, ಸಿರೂರು ವೀರಭದ್ರಪ್ಪನವರು, ಇನ್ನೂ ಮುಂತಾದ ಕಾರ್ಯಕರ್ತರು ಪ್ರಮುಖರಾಗಿದ್ದಾರೆ. ಈ ಭಾಗದ ಹಿರಿಯ ದುರೀಣರಾದ ಕಕ್ಕೇರಿ ಹನುಮಂತರಾಯರು, ಜನಾರ್ದನರಾವ್ ದೇಸಾಯಿ, ಚಂದ್ರಿಕೆ ಜಗನ್ನಾಥರಾವ್ ಇನ್ನೂ ಮುಂತಾದವರು ಖಾದಿ ಪ್ರಚಾರ ಕೈಗೆತ್ತಿಕೊಂಡವರಲ್ಲಿ ಪ್ರಮುಖರು ಎಂದು ಹೇಳಬಹುದು.

ಕರ್ನಾಟಕ ಗ್ರಾಮ ಸೇವಾ ಸಂಘವು ಈ ಕಾರ್ಯವನ್ನು ಕೈಗೆತ್ತಿಕೊಂಡ ಸಂದರ್ಭದಲ್ಲಿ ಹೈದರಾಬಾದ ಖಾದಿ ಸಮಿತಿಯ ಅಧ್ಯಕ್ಷರಾಗಿದ್ದ ಸ್ವಾಮಿ ರಮಾನಂದತೀರ್ಥರು ಈ ಭಾಗದಲ್ಲಿ ಖಾದಿ ಕಾರ್ಯವನ್ನು ಅಧಿಕಗೊಳಿಸಬೇಕೆಂಬ ಉದ್ದೇಶದಿಂದ ಹಲವಾರು ಸಮಿತಿಗಳನ್ನು ರಚಿಸಿದರು. ನಿಜಾಮ ಸರ್ಕಾರವು ಸ್ಟೇಟ್ ಕಾಂಗ್ರೇಸಿನ ಮೇಲೆ ಹೇರಲಾಗಿದ್ದ ಪ್ರತಿಬಂಧನೆಯನ್ನು 1942ರಲ್ಲಿ ತೆಗೆದುಹಾಕಿತು. ಆಗ ಕಲಬುರ್ಗಿಯ 12 ತರುಣರು ಸಂಪೂರ್ಣವಾಗಿ ಈ ಕಾರ್ಯವನ್ನು ಮಾಡುತ್ತಿದ್ದ ಕಾನಿಹಾಳ ನಾರಾಯಣರಾವ್ ದೇವಳಗಾಂವಕರ ಮತ್ತು ಶ್ರೀ ಸೀತಾರಾಂ ಜೋಷಿಯರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿ ಸಂಪೂರ್ಣ ವೇಳೆಯ ಕಾರ್ಯಕರ್ತರಾದರು. ಹೈದರಾಬಾದ್ ಕರ್ನಾಟಕ ಗ್ರಾಮ ಸೇವಾ ಸಂಘದಿಂದ ಗುಲಬರ್ಗಾದಲ್ಲಿ ಒಂದು ಸರಂಜಾಮ ಕಾರ್ಯಾಲಯವನ್ನು ತೆರೆದು ಚರಖಾಗಳನ್ನು ಮಾಡಲಾಯಿತು. ಚಿತ್ತಾಪುರದ ಶಂಕರರಾವ್ ವಾಂಯ್ಕು ಅವರು ಕಾರ್ಯಾಲಯವನ್ನು, ಶ್ರೀ ದಿವಾನಜೀ ಹಾಗೂ ತ್ರಿಲೋಚನ ದೀಕ್ಷಿತ್ ಅವರು ಖಾದಿ ಭಂಡಾರದ ಮೇಲ್ವಿಚಾರಕರಾಗಿದ್ದರು.9

1940ಕ್ಕೆ ಮುಂಚೆ ಗುಲಬರ್ಗಾದಲ್ಲಿ "ಖಾದಿ ಭಂಡಾರ" ಇರಲಿಲ್ಲ ದಿವಂಗತ ಶ್ರೀ ಶಿವಶ'ರಣಪ್ಪ ಮಂಡಾಳ ಎಂಬ ಖಾದಿ ದಾರಿಗಳು 1932–1933 ರ ಸುಮಾರಿಗೆ ಖಾಸಗಿಯಾಗಿ ಖಾದಿ ಪ್ರಚಾರ ಪ್ರಾರಂಭಿಸಿದರು.10 ಹೈದರಾಬಾದ್ ಸ್ಟೇಟ್ ಕಾಂಗ್ರೇಸ್ ಮುಖಂಡರಾದ ದಿವಂಗತ ಶ್ರೀ ರಾಮಕೃಷ್ಣ ಅವದತ್ ಗುಲಬರ್ಗಾಕ್ಕೆ ಬಂದಿದ್ದರು. ಮುಂದೆ ಕರ್ನಾಟಕ ಗ್ರಾಮ ಸೇವಾ ಸಂಘ ಹೈದರಾಬಾದ್ ಖಾದಿ ಸಮಿತಿ, ಹೈದರಾಬಾದ್ ಕರ್ನಾಟಕ ಗ್ರಾಮ ಸೇವಾ ಸಂಘದಿಂದ ಗುಲಬರ್ಗಾದಲ್ಲಿ ಒಂದು ಸರಂಜಾಮ ಕಾರ್ಯಾಲಯ ತೆರೆಯ ಚರಖಾಗಳನ್ನು ಮಾಡಲಾಯಿತು. ಅಂಬರ ಚರಖಾ ಕೇಂದ್ರಗಳು, ಸಿಂದನೂರ ಖಾದೀ ಗ್ರಾಮೋದ್ಯೋಗ, ಆಳಂದ ಖಾದೀ ಗ್ರಾಮೋದ್ಯೋಗ ಸಂಘದ ಸದಸ್ಯರು, ಮುಖ್ಯವಾಗಿದ್ದು. ಖಾದಿ ಚಳವಳಿ ಆರಂಭದ ನಂತರ ಗಾಂಧೀಜಿಯವರ ಪ್ರಭಾವ ಹಾಗೆಯೇ ಹೈದರಾಬಾದ್ ಕರ್ನಾಟಕ ಜನತೆಗೆ ಉದ್ಯೋಗ, ನಿರುದ್ಯೋಗಿಗಳ ನಿವಾರಣೆ, ವಿದೇಶಿ ಬಟ್ಟೆಗಳ ಮಾರಾಟ ನಿಷೇದ ಗುಲಬರ್ಗಾ

ಜಿಲ್ಲೆಯ ಜನತೆ ಖಾದಿ ಉದ್ಯಮವನ್ನು ಯಾವ ರೀತಿ ಬಳಕೆ ಮಾಡಿಕೊಳ್ಳುತ್ತಿದ್ದರು. ಕೊನೆಯದಾಗಿ ತುಂಗಭದ್ರಾ ಕಾಲುವೆಗೆ ನೀರು ಬಂದಿದ್ದರಿಂದ ನೀರಾವರಿ ಕೆಲಸ ಜೋರಾಗಿ ನಡೆಯಿತು. ಇದರಿಂದ ಗುಲಬರ್ಗಾ ಜಿಲ್ಲೆ ಖಾದಿ ಚಳವಳಿಯ ಅನುಕೂಲ ಮತ್ತು ಅನಾನೂಕೂಲಗಳನ್ನು ಗಮನಿಸಬಹುದು.

1947 ರಲ್ಲಿ ಭಾರತಕ್ಕೆ ಸ್ವತಂತ್ರ್ಯ ದೊರಕಿತು. ಆದರೆ ಹೈದರಾಬಾದ ಸಂಸ್ಥಾನದ ಆಳರಸನಾದ ನಿಜಾಂ ಭಾರತದಲ್ಲಿ ಸೇರ್ಪಡೆಯಾಗಲು ನಿರಾಕರಿಸಿದ ಇದರಿಂದಾಗಿ ಹೈದರಾಬಾದ್ ವಿಮೋಚನೆಗೆ ಸ್ವಾಮಿ ರಮಾನಂದರು ಕರೆಕೊಟ್ಟಿದ್ದರಿಂದ ಅನೇಕ ಕಾರ್ಯಕರ್ತರು ಆಂದೋಲನದಲ್ಲಿ ಭಾಗವಹಿಸಿ ಸೆರೆಮನೆ ಸೇರಿದರು. ಖಾದಿ ಕಾರ್ಯ ಮೂಲೆಗುಂಪಾದುದಲ್ಲದೆ. ಸರಂಜಾಮ ಕಾರ್ಯಾಲಯವನ್ನು ಜಪ್ತ್ ಮಾಡಲಾಯಿತು. ಹೀಗಾಗಿ 1947–49 ರಲ್ಲಿ ಖಾದಿ ಕಾರ್ಯ ಸ್ಥಗಿತಗೊಂಡಿತ್ತು ಎಂದೇ ಹೇಳಬಹುದು. ರಜಾಕಾರರ ದಾಳಿಯಿಂದ ಸಂಸ್ಥಾನವು ವಿಮೋಚನೆಗೊಂಡ ಮೇಲೆ ಸಂಸ್ಥಾನದಲ್ಲಿ ಕಾಂಗ್ರೇಸ್ಸಿನ ನಡುಗಾಲ ಸರಕಾರ ಬಂದುದ್ದರಿಂದ ಖಾದಿ ಕಾರ್ಯವನ್ನು ಮತ್ತೆ ಕೈಗೆತ್ತಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಅಳಂದ ಖಾದಿ ಭಂಡಾರವು ಹೈದರಾಬಾದ್ ಖಾದಿ ಸಮಿತಿಯನ್ನು ನಿಜಾಂರ ರಾಜ್ಯದಲ್ಲಿ 15 ಏಪ್ರೀಲ್ 1941 ರಲ್ಲಿ ಸ್ಥಾಪಿಸಲಾಯಿತು. ಸ್ವಾಮಿರಮಾನಂದ ತೀರ್ಥರು ಇದರ ಪ್ರಮುಖ ಸೂತ್ರಧಾರಿಗಳಾಗಿದ್ದರು. ಪ್ರಥಮವಾಗಿ 1931 ರಲ್ಲಿ ನೆಹರು ಅವರು ಹಸ್ತದಲ್ಲಿ ಖಾದಿಭಂಡಾರ ಸ್ಥಾಪಿಸಲಾಯಿತು. ಹೈದರಾಬಾದ್ ಖಾದಿ ಸಮಿತಿಯ ಒಂದು ಚಿಕ್ಕ ಕೇಂದ್ರ ಆಳಂದದಲ್ಲಿತ್ತು. ಅಲ್ಲಿ ಕೆಲವು ಅಂಬರ ಚರಖಾಗಳಿದ್ದವು. ಆರಂಭದಲ್ಲಿ ಕಾನಿಹಾಳ್ ನಾರಾಯಣರಾವ್ ಹಾಗೂ ಗುರ್ಜರರು ಇಲ್ಲಿಯ ಕಾರ್ಯಕರ್ತರು ಪ್ರಾಯಶಃ ಹೈದರಾಬಾದ್ ಖಾದಿ ಸಮಿತಿಯ ಕೇಂದ್ರವಾಗಿಯೇ ಕಾರ್ಯನಿರ್ವಹಿಸಿದಂತೆ ಕಂಡುಬರುತ್ತದೆ. ಹೈದರಾಬಾದ್ ವಿಭಜನೆಯಾದ ನಂತರ ಇದನ್ನು ಉಸ್ಮಾನಾಬಾದದಿಂದ ಗುಲಬರ್ಗಾ ವಿಭಾಗಕ್ಕೆ ವರ್ಗಾಯಿಸಲಾಯಿತು.

ಖಾದಿ ಚಳವಳಿಯ ಉದ್ದೇಶಗಳು

1. ಖಾದಿ ಬಟ್ಟೆಯನ್ನು ದೇಶಾದ್ಯಂತ ಉತ್ಪಾದಿಸಬೇಕು. ಈ ಉತ್ಪಾದನೆಯಿಂದ ಉದ್ಯೋಗದಿಂದ ವಂಚಿತರಾದವರಿಗೆ ಉದ್ಯೋಗ ನೀಡುವುದು. ಹಾಗೆಯೇ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದು.

2. ಖಾದಿ ವಸ್ತ್ರ ವಿನ್ಯಾಸವನ್ನು ಭಾರತದಾದ್ಯಂತ ಎಲ್ಲರೂ ಮೈಮೇಲೆ ಮೆರೆಯಬೇಕು.

3. ವಿದೇಶೀ ವಸ್ತ್ರಕ್ಕೆ ಮಾರು ಹೋಗಿದ್ದ ಜನರಿಗೆ ಖಾದಿಯ ಮಹತ್ವ ತಿಳಿಯಬೇಕು. ಹಾಗೆಯೇ ಖಾದಿ ಬಟ್ಟೆಯು ಭಾರತದಾದ್ಯಂತ ಎಲ್ಲರೂ ಧರಿಸಬೇಕು ಹಾಗೆಯೇ ವಿದೇಶೀ ಬಟ್ಟೆಯನ್ನು ಬಹಿಷ್ಕಾರಿಸುವುದರಿಂದ ಖಾದಿ ಉತ್ಪಾದನೆ ಭಾರತಾದಾದ್ಯಂತ ಹೆಚ್ಚಾಗಬೇಕು.

4. ಖಾದಿ ಉತ್ಪಾದನೆಯಿಂದ ಬಡವರಿಗೆ ಊಟ ಮತ್ತು ಬಟ್ಟೆ ದೊರೆಯುವಂತೆ ಮಾಡುವುದು. ಪ್ರತಿಯೊಂದು ಗ್ರಾಮವೂ ತನ್ನ ಹಾಗೂ ವಸ್ತ್ರದ ಬಗೆಗೆ ಸಂಪೂರ್ಣವಾಗಿ ಸ್ವಾವಲಂಬಿಯಾಗಬೇಕು. ಖಾದಿ ಬಟ್ಟೆ ತೊಡುವವರೆಲ್ಲರೂ ಒಂದೇ ಕುಟುಂಬದ ಸದಸ್ಯರೆಂದು ತಿಳಿದುಕೊಂಡು ಸಹಜೀವನವನ್ನು ನಡೆಸಲು ಸಹಕಾರಿಗಳಾಗಬೇಕು.

5. ಬಡವರಿಗೆ ಉಪಜೀವನಕ್ಕೆ ನೆರವಾಗಬಲ್ಲ ಪೂರ್ಣ ಅಥವಾ ಅರೆಕಾಲೀನ ಉದ್ಯೋಗ ನೆರವು ನೀಡಬೇಕು. ಅವರಿಗೆ ಸಾಧ್ಯವಾದಷ್ಟು ಜೀವನ ವೇತನ ನೀಡಬೇಕು.

6. ಬರಗಾಲ ಮತ್ತು ಆಪತ್ತಿನ ಸಮಯದಲ್ಲಿ ಅವರಿಗೆ ನೂಲುವ ಸಾಮಾಗ್ರಿಗಳನ್ನು ಒದಗಿಸಬೇಕು. ಅಸ್ವದವಿದ್ದಲ್ಲಿ ಅವರಿಗೆ ಶಿಕ್ಷಣ ಮತ್ತು ಔಷಧೊಪಚಾರ ನೀಡಬೇಕು.

7. ಖಾದಿ ಗ್ರಾಮೋದ್ಯೋಗಕ್ಕೆ ನೂಲುವ ಮತ್ತು ನೇಯುವ ವಿದ್ಯೆ ಕಲಿಸಲು ವಿದ್ಯಾಲಯಗಳನ್ನು ಹಾಗೂ ತರಬೇತಿ ಕೇಂದ್ರಗಳನ್ನು ತೆರೆಯಬೇಕು.12

ಭಾರತಾದಾದ್ಯಂತ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಹೋರಾಟವು ಆರಂಭವಾಗಿದ್ದವು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಸಹಕಾರ ಚಳುವಳಿ, ಸ್ವದೇಶಿ ಚಳುವಳಿ, ಹಾಗೂ ಕನ್ನಡಪರ ಚಳುವಳಿಗಳು ಪ್ರಾರಂಭವಾಗಿದ್ದವು. ಈ ಸಂದರ್ಭದಲ್ಲಿ ಜೊತೆ ಜೊತೆಯಾಗಿ ಖಾದಿ ಚಳುವಳಿಯು ಪ್ರಾರಂಭಗೊಂಡಿತ್ತು. ಖಾದಿಯನ್ನು ಪ್ರಚಾರಗೊಳಿಸಲು ಬಡವರಿಗೆ ಊಟ ಮತ್ತು ಬಟ್ಟೆಯನ್ನು ಕೊಡುವುದು, ಸ್ವರಾಜ್ಯದ ಅಗತ್ಯಕ್ಕಿಂತ ಬಡತನ ನಿರ್ಮೂಲನೇ ಪ್ರಮುಖವಾದ ಅಂಶವಾಗಿತ್ತು. ಖಾದಿಯನ್ನು ವ್ಯಾಪಕವಾಗಿ ಬಳಸುವುದರಿಂದ ಮಾತ್ರ ಸ್ವರಾಜ್ಯವು ಸಾಧ್ಯವಾಗಿತ್ತು. ಭಾರತೀಯ ಕುಶಲತೆ ಹಾಗೂ ಪರಿಸ್ಥಿತಿಗೆ ಒಗ್ಗೂವಂತ ತಂತ್ರಗಾರಿಕೆಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಗಾಂಧೀಜಿ ಖಾದಿಗೆ ಅಷ್ಟು ಒತ್ತುಕೊಟ್ಟರು.13 ನಾವು ಗಮನಿಸಬೇಕಾದ ಅಂಶವೆಂದರೆ ಖಾದಿ ಚಳುವಳಿಗೂ ಸ್ವಾತಂತ್ರ್ಯ ಹೋರಾಟಕ್ಕೂ ಯಾವ ರೀತಿ ಸಂಬಂಧ ಇತ್ತು. ಎಂಬುದನ್ನು ನಾವು ನೋಡಬಹುದಾಗಿದೆ. ಇದು ಕೂಡ ವಿದೇಶಿ ಬಟ್ಟೆಗಳಿಂದ ಸಾಕಷ್ಟು ನಷ್ಟ ಉಂಟಾಗುತ್ತಿತ್ತು ವಿದೇಶೀ ವಸ್ತ್ರವಿನ್ಯಾಸಗಳಿಗೆ ಆಕರ್ಷಿತರಾಗಿದ್ದರು ಇದನ್ನು ಗಮನದಲ್ಲಿಟ್ಟುಕೊಂಡು ಗುಲಬರ್ಗಾ ಜಿಲ್ಲೆಯಲ್ಲಿ ತಿಲಕರು ಖಾದಿ ಆರಂಭಿಸಿದರು. ಅವರ ಮರಣದ ನಂತರ ಗಾಂಧೀಜಿಯವರ ಪ್ರಭಾವಿತಕ್ಕೆ ಒಳಗಾದರು. ಹಾಗೆಯೇ ಖಾದಿ ಪ್ರಚಾರ ಭರದಿಂದ ಸಾಗಿತ್ತು, ಗುಲಬರ್ಗಾ ಜಿಲ್ಲೆಯಲ್ಲೂ ಕೂಡ ಖಾದಿ ಚಳುವಳಿ, ಪ್ರಚಾರಕ್ಕೆ ಮುಂದಾದರು. ಖಾದಿ ಸಮಿತಿ, ಸಂಘಸಂಸ್ಥೆಗಳು, ಖಾದಿ ಭಂಡಾರ, ಖಾದಿ ಗ್ರಾಮೋದ್ಯೋಗ, ಉದ್ಯಮ, ಕೈಗಾರಿಕೆಗಳು ಪ್ರಚಲಿತಗೊಂಡವು.

ಆಧಾರ ಗ್ರಂಥಗಳು

1) ಎಂ. ಬಿ. ಪಾಟೀಲ(ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, "ಗುಲಬರ್ಗಾ ಜಿಲ್ಲೆ (ಕಲಬುರಗಿ ಜಿಲ್ಲೆ) ಪರಿಷ್ಕೃತ ಆವೃತ್ತಿ" : ಕಾವೇರಿ ಭವನ ಬೆಂಗಳೂರು, 1997. ಪು.1–3.

2) ಎಂ.ಧ್ರುವನಾರಾಯಣ, "ಹೈದರಾಬಾದ್‌ಕರ್ನಾಟಕದಲ್ಲಿನ

ಖಾದಿ ಇತಿಹಾಸ"; ಕರ್ನಾಟಕ ಗ್ರಾಮ ಸೇವಾ ಸಂಘ ಹಾಗೂ ಖಾದಿ ಗ್ರಾಮೋದ್ಯೋಗ ಸಂಘ, ರಾಯಚೂರು, ಪು.45.

3) ಅದೇ. 4.

4) ಪ್ರೊ. ಬಿ. ಷೇಕ್‌ಅಲಿ, "ಕರ್ನಾಟಕ ಚರಿತ್ರೆ (ಸಂ.7)"; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಪು.44.

5) ಅದೇ. 45.

6) ಎಂ.ಧ್ರುವನಾರಾಯಣ, "ಹೈದರಾಬಾದ್‌ಕರ್ನಾಟಕದಲ್ಲಿನ ಖಾದಿ ಇತಿಹಾಸ"; ಕರ್ನಾಟಕ ಗ್ರಾಮ ಸೇವಾ ಸಂಘ ಹಾಗೂ ಖಾದಿ ಗ್ರಾಮೋದ್ಯೋಗ ಸಂಘ, ರಾಯಚೂರು. ಪು. 12.

7) ಅದೇ. 72.

8) ಅದೇ. 70.

9) ಅದೇ. (viii)–40.

10) ಅದೇ. 77.

11) ಬಿ.ಸಿ.ಮಹಾಬಲೇಶ್ವರಪ್ಪ, "ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು"; ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, 1997. ಪು.30.

12) ಅದೇ. 50.

13) ಪ್ರೊ. ಬಿ. ಷೇಕ್‌ಅಲಿ, "ಕರ್ನಾಟಕ ಚರಿತ್ರೆ (ಸಂ.7)"; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ. ಪು.45.

ರೈತರ ಸಮಸ್ಯೆಗಳನ್ನು ಕುರಿತು ಮಹಾತ್ಮಾ ಜ್ಯೋತಿ ಬಾಫುಲೆಯವರ ಚಿಂತನೆಗಳು

ಅಪರ್ಣ ಬಿ
ಸಂಶೋಧನಾ ವಿದ್ಯಾರ್ಥಿನಿ, ಇತಿಹಾಸ ಅಧ್ಯಾಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, aparnab471@gmail.com

ಮಹಾತ್ಮಾ ಜ್ಯೋತಿ ಬಾಫುಲೆಯವರು ರೈತರ ಸಮಸ್ಯೆಗಳನ್ನು ಕೇವಲ ಆರ್ಥಿಕ ದೃಷ್ಟಿಕೋನದಿಂದ ಮಾತ್ರ ಪರಿಶೀಲಿಸಿ ನೋಡಲಿಲ್ಲ. ಅವರು ಯಾವ ವಿಷಯಗಳನ್ನು ಗಮನಿಸಿದ್ದರೆಂದರೆ, ರೈತರಿಗೆ ಒಂದು ವೇಳೆ ಸ್ವಾತಂತ್ರ್ಯವನ್ನು ನೀಡಬೇಕಾಗಿದ್ದರೆ ಅವರ ಸಮಸ್ಯೆಗಳನ್ನು ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮಗ್ಗುಲಗಳಿಂದಲೂ ಪರೀಕ್ಷಿಸಿ ನೋಡಬೇಕಾಗುತ್ತದೆ. ಈ ವರ್ಗವನ್ನು ಬ್ರಾಹ್ಮಣರು ಎಲ್ಲ ಮಗ್ಗುಲಗಳಿಂದಲೂ ಶೋಷಣೆ ಮಾಡಿದ್ದಾರೆ. ಹಾಗೂ ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ರೈತರಿಗೆ ಎಲ್ಲಿಯವರೆಗೆ ಅವರ ಆತ್ಮವು ಒಪ್ಪಿಕೊಳ್ಳುವ ಎಲ್ಲ ಸುಖ ಸಂತೋಷಗಳು ಸಿಗುವುದಿಲ್ಲವೋ ನಾವು ದೂರು ಎಂಬುದನ್ನು ಎಲ್ಲಿಯವರೆಗೆ ಸಂಪೂರ್ಣವಾಗಿ ಅವರು ತಿಳಿದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಅವರ ಶೋಷಣೆ ಮುಂದುವರೆಯುತ್ತಲೇ ಇರುತ್ತದೆ. ಜ್ಯೋತಿ ಬಾಫುಲೆಯವರು ರೈತರ ಸ್ವಾತಂತ್ರ್ಯವನ್ನು ಅವರು ಶೋಷಣೆಯಿಂದ ಮುಕ್ತರಾಗುವ ಮಾರ್ಗದಲ್ಲಿ ಕರೆದುಕೊಂಡರು.

ಕೃಷಿ ವಿಕಾಸಕ್ಕೆ ನೀರಿನ ಅವಶ್ಯಕತೆ ತುಂಬ ಇದೆ. ರೈತರಿಗೆ ನೀರು ಇದ್ದರೆ ಎಲ್ಲವೂ ಇದ್ದಂತೆ. ಅವರಿಗೆ ನೀರು ಸಿಕ್ಕರೆ ಎಂತಹ ಭೂಮಿಯಿಂದಲೂ ಬೆಳೆ ತೆಗೆಯುತ್ತಾರೆ. ಅದರೆ ನೀರು ಹೋಯಿತೆಂದರೆ ಅವರ ಐಶ್ವರ್ಯವೇ ಹೋದಂತೆ. ಸೃಷ್ಟಿ ನಿಯಮದಂತೆ ಒಂದು ಕಡೆಗೆ ಮಳೆಯಾದರೆ ಇನ್ನೊಂದು ಕಡೆಗೆ ಬರಗಾಲ ಬೀಳುತ್ತದೆ. ಇನ್ನೊಂದು ಕಡೆ ಮಳೆಯಾದರೆ ಮತ್ತೊಂದು ಕಡೆಗೆ ಮಳೆಯಾಗುವುದಿಲ್ಲ ಇದರಿಂದ ರೈತರು ಆಹಾರ ಧಾನ್ಯ ಮತ್ತು ನೀರಿಗಾಗಿ ಪರದಾಡಬೇಕಾಗುತ್ತದೆ. ಅದಕ್ಕಾಗಿ ಹನ್ನೆರಡು ತಿಂಗಳು ಕಾಲುವೆಗಳ ಮುಖಾಂತರ ಅವರಿಗೆ ನೀರು ಪೂರೈಸಿದರೆ ಉತ್ತಮವಾಗುತ್ತದೆ.

ಫುಲೆಯವರು 'ರೈತನ ಬಾರಕೋಲು' ಎಂಬ ಗ್ರಂಥದಲ್ಲಿ ಎಲ್ಲ ಕೃಷಿಕರು ಒಂದೇ ಗುಣವಾಗಿದ್ದಾರೆಂದು ಹೇಳಿದ್ದಾರೆ. ಸನ್ನ, ದೊಡ್ಡ ಸರ್ವರೀತಿಯ ರೈತರು ಅಜ್ಞಾನದಿಂದ ನೌಕರಶಾಹಿ ಮತ್ತು ಭಟ್ಟಶಾಹಿಗಳ ಹಿಂಸೆಗಳಿಂದ, ಸಾಮ್ರಾಜ್ಯಶಾಹಿಯ ಶೋಷಣೆಯಿಂದ ಕರುಣಾಜನಕ ಸ್ಥಿತಿಯನ್ನು ತಲುಪಿದ್ದಾರೆ. ಕೃಷಿಕರಲ್ಲಿ ಮೂರು ವರ್ಗಗಳಿವೆ. ಈ ಭೇದಗಳಿಗೆ ಒಕ್ಕಲುತನವೆಲ್ಲದೆ ಬೇರೆ ಕಾರಣಗಳು ಇಲ್ಲ. ಪ್ರಾರಂಭದಲ್ಲಿ ಭೂಮಿಯನ್ನು ಯಿತ್ತಿ ಬಿತ್ತಿ ಜೀವನ ಸಾಗಿಸಿದವರು ಒಕ್ಕಲಿಗರಾದರು. ತೋಟವನ್ನು ಮಾಡಿದವರು ಮಾಳಿಗಳಾದರು. ಹೀಗೆ ರೈತರ ಪರಿಸ್ಥಿತಿಯನ್ನು ಫುಲೆಯವರು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಈ ಲೇಖನದಿಂದ ತಿಳಿದುಕೊಳ್ಳಬಹುದು.

ಮಹಾತ್ಮಾ ಜ್ಯೋತಿ ಬಾಫುಲೆಯವರ ಕಾಲದ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಮಹಾರಾಷ್ಟ್ರದಲ್ಲಿ ರೈತರ ಪರಿಸ್ಥಿತಿ ಹೇಗಿತ್ತು ಎಂಬುದನ್ನು ನಾವು ತಿಳಿಯುವುದಾದರೆ, ಫುಲೆಯವರು ಒಕ್ಕಲುತನದಿಂದ ದೂರ ಇರಲಿಲ್ಲ. ಅವರಿಗೆ ಕೃಷಿ ಮತ್ತು ರೈತರ ಬಗ್ಗೆ ಸಂಪೂರ್ಣವಾದ ತಿಳುವಳಿಕೆ ಇತ್ತು. ರೈತರು ಸ್ವಾತಂತ್ರ್ಯ ಪಡೆಯಬೇಕಾದರೆ ಮೊದಲು ಅವರು ಶೋಷಣೆಯಿಂದ ಮುಕ್ತರಾಗುವ ಮಾರ್ಗವನ್ನು ಕಂಡುಕೊಳ್ಳಬೇಕಾಗಿತ್ತು. ಆದರೆ ದೇಶದ ಶೂದ್ರ ಕೃಷಿಕರು ಅನೇಕ ಪ್ರಕಾರದ ಶೋಷಣೆಗಳಿಂದ ಜರ್ಜರಿತರಾಗಿದ್ದರು. ಕೃಷಿಕರ ಪರಿಸ್ಥಿತಿ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕವಾಗಿ, ಶೋಷಣೆಗೆ ಒಳಗಾಗಿತ್ತು. ಶ್ರೀಮಂತರು, ನೌಕರರು, ಸಾಮ್ರಾಜ್ಯ ಶಾಹಿಗಳು ಅವರನ್ನು ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು. ಜ್ಯೋತಿ ಬಾಫುಲೆಯವರ 'ಗುಲಾಮಗಿರಿ' ಮತ್ತು 'ರೈತನ ಬಾರಕೋಲು' ಪುಸ್ತಕಗಳಲ್ಲಿ ರೈತರು ಅನುಭವಿಸಿದಂತಹ ಕಷ್ಟಗಳನ್ನು ವಿವಿಧ ಭಂಗಿಯಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ.

ಧಾರ್ಮಿಕ ಶೋಷಣೆ :– ಜೋತಿ ಬಾಫುಲೆಯವರು ಬ್ರಾಹ್ಮಣರು ರೈತರನ್ನು ಧಾರ್ಮಿಕವಾಗಿ ಯಾವ ರೀತಿಯಾಗಿ ಶೋಷಣೆ ಮಾಡುತ್ತಿದ್ದರೆಂದು ಅವರ 'ಬ್ರಾಹ್ಮಣರ ಕುಯುಕ್ತಿ' ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ. ಮೂಲಭೂತವಾಗಿ ಕೃಷಿಕರು ಧಾರ್ಮಿಕರಾಗಿದ್ದು, ಅವರ ಧಾರ್ಮಿಕ ಪ್ರವೃತ್ತಿಯಲ್ಲಿ ಅಂಧ

ಶ್ರದ್ಧೆಗಳು ಅಡಗಿಕೊಂಡಿದ್ದವು, ಆ ಅಂಧಶ್ರದ್ಧೆಗಳನ್ನು ಮತ್ತು ದೈವ ಭಾವನೆಯ ಮುಗ್ಧತೆಯನ್ನು ಬಳಸಿಕೊಂಡು ಬ್ರಾಹ್ಮಣರು ಅವರ ಮುಂದೆ ಬೇರೆ ಬೇರೆ ವ್ರತ ಮತ್ತು ಆಚರಣೆಗಳನ್ನು ಮೂಡಿಸುತ್ತಾ ಬಂದಿದ್ದರು. ಈ ಎಲ್ಲ ವ್ರತ ಆಚರಣೆಗಳ ಮುಖ್ಯ ಉದ್ದೇಶವೆಂದರೆ ಬಡರೈತರಿಂದ ದಕ್ಷಿಣೆಯನ್ನು ಲಪಟಾಯಿಸುವುದು, ನಗದು, ದಕ್ಷಿಣೆ, ಧಾನ್ಯ, ಆಡಿಕೆ, ಬದಾಮು, ವಸ್ತ್ರ ಇತ್ಯಾದಿ ವಸ್ತುಗಳನ್ನು ಶೂದ್ರ ರೈತರಿಂದ ಧರ್ಮದ ಹೆಸರಿನಲ್ಲಿ ಬ್ರಾಹ್ಮಣನು ಅಪಹರಿಸುತ್ತಿದ್ದನು.1

ರೈತರು ಈ ದೇಶದ ಬೆನ್ನೂ ಮೂಳೆಯಂತೆ, ಅವರು ಬೆವರು ಸುರಿಸಿ ಸರ್ಕಾರದ ಬೊಕ್ಕಸವನ್ನು ತುಂಬುತ್ತಿದ್ದರೂ, ಆ ಬೊಕ್ಕಸದ ಲಾಭ ಕುಳತುಕೊಂಡು ತಿನ್ನುವವರಿಗೆ ಮಾತ್ರ ದಕ್ಕುತ್ತದೆಂದೂ, ಶ್ರಮಜೀವಿಗಳ ಮಕ್ಕಳಿಗೆ ದೊರೆಯುತ್ತಿಲ್ಲವೆಂದೂ ಅವರು ತಮ್ಮ ಭಾಷಣ ಲೇಖನಗಳಲ್ಲಿ ಸ್ಪಷ್ಟ ಪರಿಸುತ್ತಾರೆ. ದುಡಿಯುವವರನ್ನು ಆಳುವ ಹಕ್ಕು ಅವರ ಸಮುದಾಯದಿಂದ ಬಂದ ಅಧಿಕಾರಿಗಳಿಗೆ ಮಾತ್ರವೇ ಸಲ್ಲಬೇಕೆಂಬುದು ಜ್ಯೋತಿರಾವ್ ಅವರ ಮತ, ರೈತರ ಆಶೋತ್ತರಗಳು ಅವರ ಸಮೂಹದಿಂದ ಮೂಡಿದ ಅಧಿಕಾರಿಗಳಿಗೆ ಸಂವೇದ್ಯವಾಗುವುದರಿಂದ ಸರ್ಕಾರ ಕಾಲಕ್ರಮೇಣ ಅಧಿಕಾರ ಸ್ಥಾನಗಳನ್ನು ಅವರಿಗೆ ನೀಡಬೇಕೆಂದವರು ವಾದಿಸುತ್ತಾರೆ.

ಧಾರ್ಮಿಕ ಶೋಷಣೆಯಿಂದ ರೈತರ ಸಾಂಸ್ಕೃತಿಕ ಶೋಷಣೆಯಾಗುತ್ತದೆ. ಧಾರ್ಮಿಕ ಶೋಷಣೆಯು ಅವರ ಅಜ್ಞಾನದಿಂದಲೇ ಆಗುತ್ತದೆ. ಅದಕ್ಕಾಗಿ ಅವರು ಆತ್ಮಶಾಂತಿ ಹಾಗೂ ತಮ್ಮ ಅಧಿಕಾರಗಳನ್ನು ಗುತುತಿಸಿಕೊಳ್ಳಬೇಕು. ಮಾನವೀಯ ಅಧಿಕಾರಗಳು ಎಲ್ಲರಿಗೂ ನೈಸರ್ಗಿಕವಾಗಿಯೆ ಪ್ರಾಪ್ತವಾಗಿರುತ್ತವೆ, ಅವುಗಳನ್ನು ಉಪಯೋಗಿಸಬೇಕು ಶೂದ್ರರ ಗುಲಾಮಗಿರಿಯ ಮುಖ್ಯ ಕಾರಣವೆಂದರೆ ಅವರ ಅಜ್ಞಾನ, ವಿದ್ಯಾ ನಿರ್ಬಂಧದಿಂದ ಅವರು ಅಜ್ಞಾನಿಗಳಾಗಿದ್ದಾರೆ. ತಮ್ಮ ರೈತನ ಬಾರಕೋಲು ಗ್ರಂಥದ ಪ್ರಸ್ತಾವನೆಯಲ್ಲಿ ಜ್ಯೋತಿರಾವ್ ಬಾಫುಲೆಯವರು ಹೀಗೆ ಹೇಳುತ್ತಾರೆ.

'ವಿದ್ಯೆ ಇಲ್ಲದೆ ಮತಿ ಹೋಯಿತು, ಮತಿ ಇಲ್ಲದೆ ನೀತಿ ಹೋಯಿತು, ನೀತಿ ಇಲ್ಲದೆ ಗತಿ ಹೋಯಿತು, ಗತಿ ಇಲ್ಲದೆ ಸಂಪತ್ತು ಹೋಯಿತು. ಸಂಪತ್ತಿಲ್ಲದೆ ಶೂದ್ರಕುಸಿದ, ಇಷ್ಟು ಅನರ್ಥವನ್ನು ಒಬ್ಬ ಅವಿದ್ಯಾಮತ ಮಾಡಿದ', ಶೂದ್ರರ ಅವಿದ್ಯೆಯಿಂದ ಬ್ರಾಹ್ಮಣರ ಸಾಂಸ್ಕೃತಿಕ ವರ್ಚಸ್ಸು ಬೆಳೆಯಿತು.

ರೈತರನ್ನು ಸಾಂಸ್ಕೃತಿಕ ಗುಲಾಮಗಿತಿಯಿಂದ ರಕ್ಷಿಸಿಬೇಕಾಗಿದ್ದರೆ ಅವರಿಗೆ ವೈಚಾರಿಕ ಶಿಕ್ಷಣವನ್ನು ನೀಡಬೇಕು, ಬಲ ರಾಜ್ಯದ ಸತ್ಯ ದರ್ಶನವನ್ನು ಅವರಿಗೆ ಮಾಡಿಸಬೇಕು ಎಂಬುದು ಜ್ಯೋತಿ ಬಾಫುಲೆಯವರ ಅಭಿಪ್ರಾಯವಾಗಿತ್ತು. ಕೃಷಿಕರು ಬುದ್ಧಿವಂತರಾಗಬೇಕು, ಅಕ್ಷರ ಜ್ಞಾನಿಗಳಾಗಬೇಕು ಮತ್ತು ಸತ್ಯಧರ್ಮದ ತತ್ವಗಳನ್ನು ಆಚರಣೆಯಲ್ಲಿ ತರಬೇಕು ಎಂಬುದು ಜ್ಯೋತಿ ಬಾಫುಲೆಯವರ ಉದ್ದೇಶವಾಗಿತ್ತು.2

ಶ್ರೀಮಂತಶಾಹಿ ಆರ್ಥಿಕ ಶೋಷಣೆ :– ರೈತರನ್ನು ಶೋಷಣೆ ಮಾಡಲು ಶ್ರೀಮಂತರು ಮಂಚೂಣಿಯಲ್ಲಿದ್ದಾರೆ ಎಂದು ಜ್ಯೋತಿ ಬಾಫುಲೆಯವರು ಹೇಳುತ್ತಿದ್ದರು. ಆಂಗ್ಲರ ಆಡಳತದಲ್ಲಿ ಶ್ರೀಮಂತರ ಹಿಂದೆಮುಂದೆ ಅವರ ನ್ಯಾಯಾಲಯ ಮತ್ತು ಪ್ರಭುತ್ವಗಳಿದ್ದವು. ಈ ಶ್ರೀಮಂತರು ಮುಖ್ಯವಾಗಿ ಬ್ರಾಹ್ಮಣ, ಮಾರವಾಡಿ ಮತ್ತು ಗುಜ್ಜ ಜಾತಿಯವರೇ ಇದ್ದರು. ಈ ಆಡಳತದಲ್ಲಿ ಭೂ ಕಂದಾಯ ಮತ್ತು ಇತರ ಖರ್ಚುಗಳನ್ನು ತೂಗಿಸಲು ರೈತರು ಸಾಲ ತೆಗೆಯಬೇಕಾಗುತ್ತಿತ್ತು. ಈ ಕಾಲದಲ್ಲಿ ಕೃಷಿಕರೆಲ್ಲರೂ ತೀರಸಾಲಗಾರರೇ ಆಗಿದ್ದರು. ಬ್ರಿಟಿಷರ ಆಡಳತದಲ್ಲಿ ಹೊಸ ಕಾಯಿದೆಯಗಳಿಂದ ಕಮಿಶನ ಏಜೆಂಟರು ಮತ್ತು ವ್ಯಾಪಾರಿಗಳು ಹುಟ್ಟಿಕೊಂಡರು. ಅವರ ಅಂಗಡಿಗಳು ನಿಜವಾದ ಅರ್ಥದಲ್ಲಿ ಸುಲಿಗೆ ಕೇಂದ್ರಗಳಾಗಿದ್ದವು ಮತ್ತು ಅವರಿಂದ ದಕ್ಕಿದ ಶ್ರೀಮಂತಿಕೆಯಿಂದಾಗಿ ಥಳ ಥಳ ಹೊಳೆಯುತ್ತಿದ್ದವು. ಔದ್ಯೋಗಿಕ ವಸ್ತುಗಳ ಮಾರಾಟಕ್ಕೆ ಹಾಗೂ ಕಚ್ಚಾ ವಸ್ತುಗಳ ಪೂರೈಕೆಗಾಗಿ ಹೊಸ ಮಾರುಕಟ್ಟೆಗಳು ಹುಟ್ಟಿಕೊಂಡವು. ವಸ್ತುಗಳನ್ನು ಕೊಳ್ಳುವ ಮಾರುವವರ ಮದ್ಯೆ ದಲ್ಲಾಳಿಗಳು ತಲೆದೂರಿದರು.3 ಅದನ್ನು ಶ್ರೀಮಂತರೆ ಮಾಡುತ್ತಿದ್ದರು, ತೆರಿಗೆ ತುಂಬಲು, ವ್ಯವಸಾಯ ಮಾಡಲು, ಮುದುವೆ ಮುಂತಾದ ಧಾರ್ಮಿಕ ವಿಧಿಗಳಿಗೆ ತಗಲುವ ಖರ್ಚು, ಎತ್ತುಗಳು, ಕೃಷಿಉಪಕರಣಗಳು ಖರೀದಿಸಲು ರೈತರು ಕೊರತೆ ಬಿದ್ದರೆ, ಗುಜ್ಜರು, ಮಾರವಾಡಿ, ಬ್ರಾಹ್ಮಣ ಶ್ರೀಮಂತರಿಂದ ಬಡ್ಡಿಯಿಂದ ಸಾಲ ಪಡೆಯುತ್ತಿದ್ದರು, ಶೂದ್ರ ರೈತರ ಅಜ್ಞಾನ ಮತ್ತು ಧಾರ್ಮಿಕ ಮುಗ್ಧತೆಯ ಲಾಭ ಪಡೆದು ಆ ಶ್ರೀಮಂತರು ಕೃಷಿ ಭೂಮಿಯಲ್ಲಿರುವ ಬೆಳೆಯ ಮೇಲೆ ಸಾಲ ಕೊಡುತ್ತಿದ್ದರು. ಬಡಗಡಿಯ ಹಣಕ್ಕೆ ಬೆಳೆ ಪಡೆಯುತ್ತಿದ್ದರು. ಮುಂದಿನ ಖರ್ಚುಗಳಿಗೆದುಪ್ಪಟ್ಟು ಬಡ್ಡಿಯಂತೆ ಹಣನೀಡಿ ಒತ್ತೆಯಿಟ್ಟ ಭೂಮಿಯ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸುತ್ತಿದ್ದರು. ಅದೇ ಭೂಮಿಗೆ ಒಡೆಯ ಕೂಲಿ ಆಳಾಗಿ ದುಡಿಯಲು ಹೋಗಬೇಕಾಗುತ್ತಿತ್ತು. ಈ ರೀತಿಯಾಗಿ ಶ್ರೀಮಂತಶಾಹಿಯಿಂದ ಭೂಮಿಯನ್ನು ಕಳೆದುಕೊಂಡವರ ಒಂದು ಬಹುದೊಡ್ಡ ಗುಂಪು ಸಮಾಜದಲ್ಲಿತ್ತು. ಜ್ಯೋತಿರಾವ್ ಅವರು ತಮ್ಮ ಬರವಣಿಗೆಯಿಂದ ರೈತ ಸಾಲಾಗಾರನಾಗಿರುವ ಮತ್ತು ಶ್ರೀಮಂತರಿಂದ ಶೋಷಣೆಗೆ ಒಳಗಾಗುವ ಸತ್ಯಾಸತ್ಯತೆಯನ್ನು ಉಲ್ಲೇಖಿಸಿದ್ದಾರೆ.4

ರೈತರನ್ನು ಲೂಟಿ ಮಾಡಲು ಶ್ರೀಮಂತನ ಬೇರೆ ಬೇರೆ ಮೋಸದ ತಂತ್ರಗಳು ಪರಸ್ಪರ ಕಾದಾಡುತ್ತಿರುತ್ತವೆ. ಆ ಶ್ರೀಮಂತನ ಅಕ್ಷರ ತಿಳಿಯದ ರೈತರಿಗೆ ಹೇಳುತ್ತಾನೆ. "ಸರಕಾರಿ ಕಾಯಿದೆಯ ಪ್ರಕಾರ ಅಡವಿನ ಮೇಲೆ ನಿಮಗೆ ಸಾಲ ಕೊಡಲು ಬರುವುದಿಲ್ಲ. ಒಂದು ವೇಳೆ ನೀವು ನಿಮ್ಮ ಹೊಲವನ್ನು ಖರೀದಿ ಬರೆದು ನಿಮ್ಮ ಸ್ವಾದೀನಕ್ಕೆ ಒಪ್ಪಿಸಲಾಗುತ್ತದೆ." ಹೀಗೆ ತನ್ನದು ನ್ಯಾಯಮಾರ್ಗವೆಂದು ಹೇಳಿ ಅವರನ್ನು ಮರಳು ಮಾಡುತ್ತಾನೆ. ಮುಗ್ಧ ರೈತರಿಗೆ ಅವರ ಕುತುಂತ್ರಗಳ ಅರಿವು ಆಗುವುದಿಲ್ಲ. ಅವರಿಗೆ ಮರಳಿ ಜಮೀನು ಸಿಗುವುದು ನಿಜವೆ. ರೈತರಿಗೆ ಓದಲು ಬರೆಯಲು ಬರುವುದಿಲ್ಲವಾದುದರಿಂದ ಸಾಲದ ಬಡ್ಡಿಯು ಅವನ ಮನಸೇಚ್ಛ ವೃದ್ಧಿಯಾಗುತ್ತಿರುತ್ತದೆ. ಆ ಶ್ರೀಮಂತರಿಗೆ ಬ್ರಾಹ್ಮಣ ನೌಕರನು ಸಹಾಯ ಮಾಡಿರುತ್ತಾನೆ. ಲಂಚ ತಿನ್ನುತ್ತಾನೆ, ರೈತರನ್ನು ಮುಳುಗಿಸುತ್ತಾನೆ ಎಂಬುದು ಫುಲೆಯವರ ವಾದವಾಗಿತ್ತು.5

ಶ್ರೀಮಂತರ ಹಿಂಸೆಯು ರೈತರ ಜೀವನವನ್ನು ದುಸ್ಥಿತಿಗೆ ತಳ್ಳುತ್ತದೆ.

ಅದೇ ರೀತಿ ಶ್ರೀಮಂತರೊಂದಿಗೆ ಕೈ ಚೋಡಿಸುವ ಬ್ರಾಹ್ಮಣ ನೌಕರರು ಎಲ್ಲ ಪ್ರಕಾರವಾಗಿ ಅವರನ್ನು ಜರ್ಜರುತಗೊಳಸುತ್ತಾರೆ. ಅದಕ್ಕಾಗಿ ಆ ಕಾಲದ ಭಾರತದಲ್ಲ ಯುರೋಪಿ ನೌಕರಶಾಹಿ, ಸ್ವದೇಶಿ ನೌಕರಶಾಹಿ ಎಂಬ ಎರಡು ಅಧಿಕಾರಿ ವರ್ಗಗಳಿದ್ದವು. ಆಂಗ್ಲ ಅಧಿಕಾರಿಗಳು ಅಧಿಕ ಸಂಬಂಳವನ್ನು ಪಡೆದು ಐಷರಾಮದಲ್ಲ ಇರುತ್ತಿದ್ದರು ಹಾಘೂ ಕರ್ತವ್ಯವನ್ನು ನಿರ್ಲಕ್ಷಿಸುತ್ತಿದ್ದರು. ಇದರಿಂದ ಸ್ವದೇಶಿ ನೌಕರಶಾಹಿಯಾದ ಬ್ರಾಹ್ಮಣ ನೌಕರಿಗೆ ಉತ್ತಮವಾದ ಅವಕಾಶ ಸಿಗುತ್ತಿತ್ತು. ಅವರು ಶೂದ್ರರ ಅಜ್ಞಾನ ಮತ್ತು ಅನಕ್ಷರತೆಯ ಲಾಭವನ್ನು ಪಡೆದು ಅವರನ್ನು ಕೊಳ್ಳೆ ಹೊಡೆಯುತ್ತಿದ್ದರು, ಲಂಚ ತಿನ್ನುತ್ತಿದ್ದರು, ತಮ್ಮ ಜಾತಿಯ ಬಂಧುಗಳಿಗೆ ಸಹಾಯಮಾಡುತ್ತಿದ್ದರು.

ಸಾಮಾಜಿಕ ಶೋಷಣೆ :– ಹಳ್ಳಿಗಳಲ್ಲಿ ಕುಲಕರ್ಣಿಯು ರೈತರ ಮೇಲೆ ಅನ್ಯಾಯ ನಡೆಸುತ್ತಾನೆ. ಅಜ್ಞಾನಿ ರೈತರಿಗೆ ಬಡ್ಡಿಯಂತೆ ಸ್ವಲ್ಪ ಹಣವನ್ನು ನೀಡಿ ಅವರ ಜಮೀನನ್ನು ಹೊಡೆದುಕೊಳ್ಳಲು ಸತತ ಪ್ರಯತ್ನ ಮಾಡುತ್ತಿರುತ್ತಾನೆ. ತನ್ನ ಅಕ್ಷರ ಜ್ಞಾನವನ್ನು ಆತ ಈ ರೀತಿ ದುರುಪಯೋಗ ಪಡಿಸಿಕೊಳ್ಳುತ್ತಿರುತ್ತಾನೆ. ಅದಕ್ಕಾಗಿಯೇ ಅತೀ ಸಂತಾಪದಿಂದ ಮಹಾತ್ಮಾ ಫುಲೆಯವರು ಅವನನ್ನು ಗ್ರಾಮ ರಾಕ್ಷಸ ಎಂದು ಕರೆಯುತ್ತಾರೆ. ತಾಲ್ಲೂಕಿನ ಎಲ್ಲ ವ್ಯವಹಾರಗಳಲ್ಲಿ ಆತನ ರಾಜ್ಯವೇ ಇದೆ. ಬ್ರಾಹ್ಮಣ ಅಧಿಕಾರಿಗಳೆಲ್ಲರೂ ಏಕತ್ರವಾಗಿ ಬಂದು ರೈತನ ವಿರುದ್ಧವಾಗಿ ಸುಳ್ಳು ವರದಿ, ಸುಳ್ಳು ತಕರಾರು ಅರ್ಜಿ, ಸುಳ್ಳು ಸಹಿ, ಸುಳ್ಳು ಸಾಕ್ಷಿಗಳನ್ನು ಸಿದ್ದಗೊಳಸುತ್ತಾರೆ. ಶ್ರೀಮಂತರಿಗೆ ಸಹಾಯವನ್ನು ಮಾಡುವುದಕ್ಕಾಗಿ ಈ ಅಧಿಕಾರಿಗಳು ಬ್ರಾಹ್ಮಣ ವಕೀಲನ ಸಹಾಯದಿಂದ ಖಟ್ಲೆಯ ಪೂರ್ಣ ಸ್ವರೂಪವನ್ನು ಬುಡಮೇಲು ಮಾಡುತ್ತಾರೆ. ಈ ಮೋಸದ ಜಾಲದಲ್ಲಿ ರೈತರಿಗೆ ತುಂಬಲಾರದ ಹಾನಿಯಾಗುತ್ತದೆ.6

ಅಧಿಕಾರಿಗಳು ಮಾಡುವ ಹಾನಿಯ ವಿವರಗಳನ್ನು ಜ್ಯೋತಿ ರವರು ಪ್ರಸ್ತಾಪಿಸಿದ್ದಾರೆ.

1. ಭಟ್ಟ ಅಧಿಕಾರಿಗಳ ಕೈಗೆ ಹಣ ಕೊಡದೆ ಹೋದರೆ ಅವರು ಕೆಲಸಕ್ಕೆ ಕೈ ಹಚ್ಚುವುದಿಲ್ಲ.

2. ರಸ್ತೆ ಕೆಲಸದ ಬಿಡಿ ಆಳುಗಳು ನಿರೀಕ್ಷಣಾಧಿಕಾರಿಯಾದ ಭಟ್ಟನ ಕೈ ಬಿಸಿ ಮಾಡದಿದ್ದರೆ ಅವರ ವಿರುದ್ಧ ಮೇಲಾಧಿಕಾರಿಗಳಿಗೆ ಚಾಡಿ ಹೇಳುತ್ತಾನೆ.

3. ಭಟ್ಟ ಮಾಮಲೇದಾರರು ತಮ್ಮ ಜಾತಿ ಬಂಧುಗಳಿ ಕೆಲಸವನ್ನು ಮಾಡಿ ಕೊಡಲು ಪುಣೆಗಳಂತಹ ನಗರಗಳನ್ನು ನಿರಂಕುಶ ತಾಣಗಳನ್ನಾಗಿ ಮಾಡಿಕೊಂಡಿದ್ದಾರೆ.

4. ಭಟ್ಟ ಅಧಿಕಾರಿಗಳು ಕಾಗದ ಪತ್ರಗಳನ್ನು ಮೇಲಾಧಿಕಾರಿಗಳಿಗೆ ಓದಿ ಹೇಳುವಾಗ ಮುಖ್ಯ ಭಾಗಗಳನ್ನು ಬಿಟ್ಟು ಅನ್ಯಾಯ ಮಾಡುತ್ತಾರೆ.

5. ಬಿಳ ಅಧಿಕಾರಿಗೆ ಮರಾಠಿ ಭಾಷೆ ಸರಿಯಾಗಿ ತಿಳಯುವುದಿಲ್ಲ. ಮರಾಠಿಯಿಂದ ಇಂಗ್ಲೀಷಿಗೆ ಅನುವಾದ ಮಾಡಿ ಹೇಳುವಾಗ ಭಟ್ಟ ನೌಕರರು ಅನ್ಯಾಯ ಮಾಡುತ್ತಾರೆ.7

ಜ್ಯೋತಿ ಬಾಫುಲೆಯವರ ಅಭಪ್ರಾಯ ಹೀಗೆ ಇತ್ತು : ಬ್ರಾಹ್ಮಣರ ಗುಲಾಮಗಿರಿಯಿಂದ ರೈತರನ್ನು ಪಾರು ಮಾಡುವ ಆಂಗ್ಲ ಸರಕಾರ ಅವರ ರಕ್ಷಾ ಕವಚವೂ ಆಗಿದೆ. ಭಾರತದಲ್ಲಿ ರಾಣಿಯವರ ಪ್ರಭುತ್ವ ಜಾಗೃತವಾಗಿಲ್ಲ. ನಡೆವ ಅನ್ಯಾಯಗಳಿಗೆ ಇಲ್ಲಿ ಲೆಕ್ಕವಿಲ್ಲದಂತಾಗಿದೆ. ಬ್ರಿಟಿಷರ ಸರಕಾರ ಕರುಡಾಗಿದೆ. ಫುಲೆಯವರಿಗೆ ಎದೆಯ ಮೂಲೆಯಲ್ಲ ಎಲ್ಲೋ ಒಂದು ಕರೆ ಬ್ರಿಟಿಷರ ಬಗ್ಗೆ ನಂಬಿಕೆ ಇದ್ದಂತೆ ಕಾಣುತ್ತದೆ. ಬ್ರಿಟಿಷರು ಜಗತ್ತಿನಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಪುರಸ್ಕರಿಸಿದ್ದಾರೆ. ಬ್ರಿಟಿಷರ ಆಡಳತಕ್ಕೆ ನಿಜವಾದ ಕಳಕಳ ಇದೆಯೆಂದು ಭಾವಿಸಿ ಅವರು ಬರೆಯುತ್ತಾರೆ. ಶೂದ್ರ ರೈತರಿಗೆ ಬ್ರಿಟಿಷರು ಸಹಾಯ ಮಾಡಬೇಕೆಂದು ಫುಲೆಯವರು ವಿನಂತಿಸಿಕೊಂಡಿದ್ದಾರೆ.7

ರೈತರ ಬದುಕು ನೋವು, ಯಾತನೆಗಳಿಂದ ಬರ್ಬರವಾಗಿರುವುದಕ್ಕೆ ಆ ಕಾಲದ ಧಾರ್ಮಿಕ, ಸಾಂಸ್ಕೃತಿಕ, ಬದುಕಿನ ನಿಯಮಗಳು, ಶ್ರೀಮಂತಶಾಹಿ ನೌಕರಶಾಹಿ ಮತ್ತು ಸಾಮ್ರಾಜ್ಯಶಾಹಿ ಶೋಷಣೆಗಳು ಪ್ರಮುಖ ಹೊಣೆಗಾರ ಸಂಗತಿಗಳಾಗಿವೆ. ಫುಲೆಯವರು ಈ ಕಾರಣಗಳ ಹೊರತಾಗಿಯೂ ಬಾರಕೊಲು ಗ್ರಂಥದಲ್ಲ ಸಂಪೂರ್ಣವಾಗಿ ತಿಳಸಿದ್ದಾರೆ.

ಮಹಾತ್ಮಾ ಜ್ಯೋತಿ ಬಾಫುಲೆಯವರು ರೈತರ ಸಮಸ್ಯೆಗಳನ್ನು ಕೇವಲ ಆರ್ಥಿಕ ದೃಷ್ಟಿಕೋನದಿಂದ ಮಾತ್ರ ಪರಿಶೀಲಸಿ ನೋಡಲಲ್ಲ. ಅವರು ಯಾವ ವಿಷಯಗಳನ್ನು ಗಮನಿಸಿದ್ದರೆಂದರೆ, ರೈತರಿಗೆ ಒಂದು ವೇಳೆ ಸ್ವಾತಂತ್ರ್ಯವನ್ನು ನೀಡಬೇಕಾಗಿದ್ದರೆ ಅವರ ಸಮಸ್ಯೆಗಳನ್ನು ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮಗ್ಗುಲಗಳಂದಲೂ ಪರೀಕ್ಷಿಸಿ ನೋಡಬೇಕಾಗುತ್ತದೆ. ಈ ವರ್ಗವನ್ನು ಬ್ರಾಹ್ಮಣರು ಎಲ್ಲ ಮಗ್ಗುಲಗಳಂದಲೂ ಶೋಷಣೆ ಮಾಡಿದ್ದಾರೆ. ಹಾಗೂ ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ರೈತರಿಗೆ ಎಲ್ಲಿಯವರೆಗೆ ಅವರ ಆತ್ಮವು ಒಪ್ಪಿಕೊಳ್ಳುವ ಎಲ್ಲ ಸುಖ ಸಂತೋಷಗಳು ಸಿಗುವುದಿಲ್ಲವೋ ನಾವು ದೂರು ಎಂಬುದನ್ನು ಎಲ್ಲಿಯವರೆಗೆ ಸಂಪೂರ್ಣವಾಗಿ ಅವರು ತಿಳದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಅವರ ಶೋಷಣೆ ಮುಂದುವರೆಯುತ್ತಲೇ ಇರುತ್ತದೆ. ಜ್ಯೋತಿ ಬಾಫುಲೆಯವರು ರೈತರ ಸ್ವಾತಂತ್ರ್ಯವನ್ನು ಅವರು ಶೋಷಣೆಯಿಂದ ಮುಕ್ತರಾಗುವ ಮಾರ್ಗದಲ್ಲ ಕಂಡುಕೊಂಡರು.

ಕೃಷಿ ವಿಕಾಸಕ್ಕೆ ನೀರಿನ ಅವಶ್ಯಕತೆ ತುಂಬ ಇದೆ. ರೈತರಿಗೆ ನೀರು ಇದ್ದರೆ ಎಲ್ಲವೂ ಇದ್ದಂತೆ. ಅವರಿಗೆ ನೀರು ಸಿಕ್ಕರೆ ಎಂತಹ ಭೂಮಿಯಿಂದಲೂ ಬೆಳೆ ತೆಗೆಯುತ್ತಾರೆ. ಅದರೆ ನೀರು ಹೋಯತೆಂದರೆ ಅವರ ಐಶ್ವರ್ಯವೇ ಹೋದಂತೆ.9 ಸೃಷ್ಟಿ ನಿಯಮದಂತೆ ಒಂದು ಕಡೆಗೆ ಮಳೆಯಾದರೆ ಇನ್ನೊಂದು ಕಡೆಗೆ ಬರಗಾಲ ಬೀಳುತ್ತದೆ. ಇನ್ನೊಂದು ಕಡೆ ಮಳೆಯಾದರೆ ಮತ್ತೊಂದು ಕಡೆಗೆ ಮಳೆಯಾಗುವುದಿಲ್ಲ ಇದರಿಂದ ರೈತರು ಆಹಾರ ಧಾನ್ಯ ಮತ್ತು ನೀರಿಗಾಗಿ ಪರದಾಡಬೇಕಾಗುತ್ತದೆ. ಅದಕ್ಕಾಗಿ ಹನ್ನೆರಡು ತಿಂಗಳು ಕಾಲುವೆಗಳ ಮುಖಾಂತರ ಅವರಿಗೆ ನೀರು ಪೂರೈಸಿದರೆ ಉತ್ತಮವಾಗುತ್ತದೆ.

ಪರಾಮರ್ಶಿತ ಆಕರಗಳು

1. ಕೀರ ಧನಂಜಯ್ಯ : ಜ್ಯೋತಿರಾವ್ ಫುಲೆ ಆಮಚ್ಯಾ ಸಮಾಜ

ಕ್ರಾಂತಿ ಚೆ ಜನಕ, ಪಾಪ್ಯೂಲರ್ ಪ್ರಕಾಶನ, ಮುಂಬಾಯಿ, 1967. ಪು.ಸಂ. 179.

2. ಚೌಸಾಳಕರ ಅಶೋಕ : ಫುಲೆಯಾಂಚೆ ಲೋಕಶಾಹಿ ವಿಷಯಕ ವಿಚಾರ, ಪು. 28–29. ನವಭಾರತ ಪ್ರಕಾಶನ, ಸೆಪ್ಟೆಂಬರ್ 1982.

3. ಪಾಂಡುರಂಗ ಬಾಳಜಿ ರವಡೆ : ಮಹಾತ್ಮ ಜ್ಯೋತಿ ಬಾಫುಲೆ (ಮರಾಠಿ), ನಾಂದಗಾವ, 1938.

4. ಮುರಳೀಧರ ಜಗತಾಪ : ಸಮಾಜ ಸುಧಾರಕ ಮಹಾತ್ಮ ಫುಲೆ ನವಕರ್ನಾಟಕ, ಬೆಂಗಳೂರು 1994.

5. ಎ.ಪಿ.ಸತೀಶ್ : ಜ್ಯೋತಿರಾವ್ ಫುಲೆ, ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು

6. ಡಾ.ಎಂ.ಪಿ.ಭುವನೇಶ್ವರ ಪ್ರಸಾದ್ : ಹರಿಜನೋದ್ಧಾರಕ ಜ್ಯೋತಿ ಬಾಫುಲೆ, ಕಲಾ ಪ್ರಕಾಶನ, 2002

7. collected works of Mahatma Joti Rao Phule, Vol I, Translated by Prof. P.G. Patil.

8. The Universal religion of truth.

9. Santhosh Kumar V – Social Justice and the Politics of reservation in India – Mithal Publications New Delhi, 2008.

10. Rosaliad o'Hanlon – South Asian Studies, Caste conflict and ideology, Mahathma Jothi Rao Phule and Low Caste Protest in nintheenth Century western India, 1985.

ಮೈಸೂರು ಸಂಸ್ಥಾನದ ಹಿಂದೂಡಿಪ್ರೆಸ್ಡ್‌ಕ್ಲಾಸ್‌ಎಜುಕೇಷನ್ ಮಿಷನ್ ಮತ್ತುದಅತರಏಳಿಗೆ

ವಿಂದ್ಯಾ. ಕೆ. ಎಂ.
ಸಂಶೋಧನಾ ವಿದ್ಯಾರ್ಥಿನಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,
ಮೈಸುರು–570 006 k.m.vindhya1009@gmail.com

A)BRIEF DESCRIPTION OF THE TOPIC OF THIS ARTICLE: ಮೈಸೂರು ಸಂಸ್ಥಾನದ ಸಾಮಾಜಿಕ ವ್ಯವಸ್ಥೆಯಲ್ಲಿ ಭಾಗಗಳಲ್ಲೊಂದಾಗಿದ್ದ ದಅತಜನಾಂಗವು ಸರ್ಕಾರದಯದಾರ ನೆರವಿನಿಂದ ಸುಧಾರಣೆಗೊಂಡು ಅನೇಕ ವ್ಯಕ್ತಿಗಳು ಮತ್ತು ಸಂಘಸಂಸ್ಥೆಗಳ ನಾಯಕತ್ವದಲ್ಲಿಜಾಗೃತಗೊಂಡುಅಭಿವೃದ್ಧಿಯೆಡೆಗೆ ಸಾಗಿದಮಹತ್ವಾರ್ಹ ಸಂಗತಿ.ಈ ನೆರೆಯಲ್ಲಿ ಹಿಂದೂಡಿಪ್ರೆಸ್ಡ್‌ಕ್ಲಾಸ್‌ಎಜುಕೇಷನ್ ಮಿಷನ್‌ಎಂಬುದುಆಧುನಿಕ ಮೈಸೂರು ಸಂಸ್ಥಾನದಲ್ಲಿದಅತರ ಸುಧಾರಣೆಯಉದ್ದೇಶದ ಹಿನ್ನೆಲೆಯಲ್ಲಿ ಸ್ಥಾಪಿತವಾದಒಂದು ಸರ್ಕಾರೇತರ ಸಂಘ.ಇದು ಸಂಸ್ಥಾನದ ಸಾಮಾಜಿಕ ವ್ಯವಸ್ಥೆಯಕೊನೆಯ ಸ್ಥರದಲ್ಲಿಅತ್ಯಂತತಳೆ ೋಚನೀಯವಾದ,ಹೀನಾಯಜೀವನವನ್ನು ಸಾಗಿಸುತ್ತಿದ್ದಂತಹದಅತಜನಾಂಗವನ್ನು ಜಾಗೃತಗೊಳಿಸಲು ಹಾಗೂ ಅವರಅಭಿವೃದ್ಧಿಗಾಗಿಯೇನಿ,ಎನ್',ನರಸಿಂಹ ಅಯ್ಯಂಗಾರ್ ಎಂಬ ದಅತೇತರ ವ್ಯಕ್ತಿಯಅಧ್ಯಕ್ಷತೆಯಲ್ಲಿ 1903ರಲ್ಲಿ ಸ್ಥಾಪಿತವಾದ ಸಂಘ,ಈ ಸಂಘವು ಮೈಸೂರು ಸರ್ಕಾರದ ಸಹಾಯ ಹಾಗೂ ಸಾಹಕಾರದೊಂದಿಗೆದಅತಾಭಿವೃದ್ಧಿಗೆ ಸಂಘಟಿಸಿದಂತೆ ಹಲವಾರುಯಶಸ್ವಿಯುಕ್ತ ಕಾರ್ಯಗಳನ್ನು ಕೈಗೊಂಡಿತ್ತಲ್ಲದೆ,ದಅತರ ಏಳಿಗೆಗೆ ಅಗತ್ಯವಾದ ಶೈಕ್ಷಣಿಕ ಯೋಜನೆಗಳು ಹಾಗೂ ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಯುಕ್ತಮಗೊಳಿಸುವ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳುತ್ತಿತ್ತು.ಈ ಸಂಘದ ಅನೇಕ ಶಾಖೆಗಳು ಸಂಸ್ಥಾನದ ಹಲವು ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು,ಇದರಕೇಂದ್ರಕಛೇರಿಯು ಮೈಸೂರು ಮತ್ತು ಬೆಂಗಳೂರು ನಗರಭಾಗಗಳಲ್ಲಿತ್ತು.ಈ ಸಂಘವು ಕೈಗೊಂಡಸಂತಹದಅತೋದ್ಧಾರ ಕಾರ್ಯಚಟುವಟಿಕೆಗಳು ಸಂಸ್ಥಾನದಾದ್ಯಂತದಅತರಲ್ಲೇ ಖಾಯಸಂಖ್ಯಾತರಾಗಿದ್ದ ಸಂಘಮರನ್ನೇ ಕೇಂದ್ರೀಕರಿಸಿರುವುದು ಗಮನಾರ್ಹ ಸಂಗತಿ.

ಹೀಗೆ ಸಂಸ್ಥಾನದ ಸಾಮಾಜಿಕಚರಿತ್ರೆಯಲ್ಲೇದಅತರ ಏಳಿಗೆಯನ್ನೆ ಗುರಿಯಾಗಿಸಿಕೊಂಡು ಸ್ಥಾಪಿತವಾದ ಈ ಸಂಘವು ದಅತಾಭಿವೃದ್ಧಿಯಲ್ಲಿಕಾರ್ಯಪ್ರವೃತ್ತವಾದ ಪ್ರಕ್ರಿಯೆಯು ಬಗೆಗೆ ಬೆಳಕುಬೀರುವುದೇ ಈ ಯೋಜಿತ ವಿಷಯವಉದ್ದೇಶ.

B)MAIN OBJECTIVE OF THE STUDY:

* ಈ ಲೇಖನವು ಹೆಚ್ಚಿನಐತಿಹಾಸ ಸಂಶೋಧಕರಿಂದ ನಿರ್ಲಕ್ಷ್ಯಕ್ಕೊಳಗಾಗಿರುವ ಈ ದಅತಜನಾಂಗದ ಸುಧಾರಣೆಗೆ ಸಂಘಟಿಸಿದಂತೆ ಅದುಕಾರ್ಯಪ್ರವೃತ್ತವಾಗಿದ್ದ ಈ ಸಂಸ್ಥೆಯಐತಿಹಾಸದ ಬಗೆಗೆ ಚರ್ಚಿಸುತ್ತದೆ,

* ಈ ಸಂಘವು ದಅತೋದ್ಧಾರದ ನಿಟ್ಟಿನಲ್ಲಿ ರೂಪಿಸಿದ ಯೋಜನೆಗಳನ್ನು ಬೆಳಕುಬೀರುವುದು,

* ಈ ಸಂಘದದಅತೋದ್ಧಾರಕಾರ್ಯದಲ್ಲಿಇವರಿಗೆ ನೆರವು ನೀಡಿದ ಮೈಸೂರು ಸಂಸ್ಥಾನ ಹಾಗು ಇತರ ಸಂಸ್ಥೆಗಳ ಬಗೆಗೆ ಬೆಳಕುಬೀರುವುದು.

C)METHODOLOGY:

* ಐತಿಹಾಸಿಕ ಸಂಶೋಧನ ವಿಧಾನದಅನುಸಾರವಾಗಿ । ಸಂಘದಐತಿಹಾಸವನ್ನು ಬೆಳಕುಬೀರಲ್ಲಿ ಅಗತ್ಯ ಮಾಹಿತಿಗಳನ್ನು ಬೆಳಕುಬೀರಲಿತಹ ಪ್ರಾಥಮಿಕ ಹಾಗು ದ್ವಿತೀಯ ಆಕರಗಳಿಂದ ಮಾಹಿತಿಯನ್ನು ಪಡೆಯಲಾಗುತ್ತದೆ,

ಈ ಬಗೆಗೆ ಸಮಕಾಲೀನ ಪತ್ರಿಕೆಗಳಲ್ಲಿ ಸೊರಕುವ ಮಾಹಿತಿಯನ್ನು ಆಧರಿಸಿ ವಿಷಯವನ್ನು ಪ್ರಸ್ತುತಪಡಿಸಲಾಗುವುದು.

ಸಮಾಜವನ್ನು ರೂಪಿಸುವಲ್ಲಿ 'ಶಿಕ್ಷಣ'ದ ಪಾತ್ರ ಅಗ್ರಮಾನ್ಯವಾದದ್ದು. ಆಧುನಿಕ ಪ್ರಪಂಚದಲ್ಲಿ ಶಿಕ್ಷಣವನ್ನು ಸಾಮಾಜಿಕ ಪರಿವರ್ತನೆಯ ಬಹು ಪರಿಣಾಮಕಾರಿ ಸಾಧನವೆಂದೇ ಪರಿಗಣಿಸಲಾಗಿದೆ.1 ಇಂತಹ ಶಿಕ್ಷಣವು ಸಹಸ್ರಾರು ಶತಮಾನಗಳ ಕಾಲ ಅಸಮಾನತೆಯ ಅಂಧಕಾರದಲ್ಲಿದ್ದ ಶೋಷಿತ ಜನಸಮುದಾಯವನ್ನು ಸುಧಾರಣೆಯೆಡೆಗೆ ಹೊಯ್ದ ಚಾಲಕಶಕ್ತಿ ಹಾಗೂ ದಲಿತ ಚಳವಳಿಯ ಮೊದಲ ತಲೆಮಾರಿನ ನಾಯಕತ್ವವು ದಲಿತರ ಸುಧಾರಣೆಯ ನಿಟ್ಟಿನಲ್ಲಿ ಬಳಸಿದ ಶಕ್ತಿಯುತ ಮಾನದಂಡ. ಇಂತಹ ಶಿಕ್ಷಣವನ್ನು ಅರ್ಥಪೂರ್ಣಗೊಳಿಸುವುದರಲ್ಲಿ ಶೈಕ್ಷಣಿಕ ಸಂಘಟನೆಗಳು ಮೌಲ್ಯಯುತ ಕೊಡುಗೆಗಳನ್ನು ನೀಡಿವೆ. ಮೈಸೂರು ಸಂಸ್ಥಾನದ ಶೈಕ್ಷಣಿಕ ಸಂಘಟನೆಗಳಿಗೂ ಈ ಮಾತು ಅನ್ವಯಿಸುತ್ತದೆ. ಪ್ರಸ್ತುತ ಲೇಖನವು ಮನದಟ್ಟುಮಾಡಿಕೊಡಲೆತ್ನಿಸುವುದು ಇದನ್ನೆ. ಈ ಲೇಖನದ ಕೇಂದ್ರಿತ ಸಾರಾಂಶವೇ ಆಧುನಿಕ ಮೈಸೂರು ಸಂಸ್ಥಾನದ ದಲಿತೋದ್ಧಾರದ ಪ್ರಕ್ರಿಯೆಯಲ್ಲಿ ನಿರತವಾಗಿದ್ದ 'ಹಿಂದೂ ಡಿಪ್ರೆಸ್ಡ್‌ಕ್ಲಾಸ್ ಎಜುಕೇಷನ್ ಮಿಷನ್' ಸಂಸ್ಥೆಯ ಪರಿಶ್ರಮ ಹಾಗೂ ಅವುಗಳಿಂದುಂಟಾದ ಫಲಿತಾಂಶಗಳನ್ನು ಅವಲೋಕಿಸುವುದು.

ಬಹಳ ಕಾಲದಿಂದಲೂ ಜೀತಗಾರಿಕೆ, ಸಾಮಾಜಿಕ ಅವಮಾನಗಳು, ತೋರಿಕೆಯ ಉದಾರತೆ–ಯೊಳಗೆ ಅಸಹಾಯಕರಾಗಿ ಮತ್ತು ಉತ್ತಮ ಭವಿಷ್ಯದಲ್ಲಿ ನಂಬಿಕೆಯೆ ಇಲ್ಲದ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದ ಬಹುಸಂಖ್ಯಾತ ಜನಸಮುದಾಯವು2 'ಪಂಚಮ', 'ಕೀಳ್ವಟ್ಟ ಜಾತಿ'(Depressed class)3', 'ಹರಿಜನ' (ಪ್ರಸ್ತುತ ಲೇಖನದಲ್ಲಿ ಈ ಪದಗಳಿಗೆ ಪರ್ಯಾಯವಾಗಿ 'ದಲಿತ' ಎಂಬ ಪದವನ್ನು ಬಳಸಲಾಗಿದೆ) ಎಂಬ ಪದಗಳಿಂದ ಗುರುತಿಸಲ್ಪಟ್ಟಿತ್ತು. ಇಂತಹ ಜನವರ್ಗದ ಏಳಿಗೆಯ ನೆಲೆಗಟ್ಟಿನ ಇತಿಹಾಸವನ್ನು ನೋಡುವುದಾದರೆ 20ನೇ ಶತಮಾನದ ಆರಂಭದ ಕಾಲವು ದಲಿತೋದ್ಧಾರದ ಪರ್ವಕಾಲವೆಂದೇ ಹೇಳಬಹುದು. ಈ ಅವಧಿಯಲ್ಲಿ ಭಾರತದಾದ್ಯಂತ ದಲಿತರ ಸಾಮಾಜಿಕ, ಶೈಕ್ಷಣಿಕ ಮತ್ತು ನೈತಿಕತೆಯ ಸುಧಾರಣಾ ಕಾರ್ಯಕ್ರಮಗಳಲ್ಲಿ ಆಸಕ್ತರಾದ ಮೇಲ್ವರ್ಗದ ಕೆಲವು ಹಿಂದೂ ಜನರು ದಲಿತರ ಬಗೆಗೆ ಸಹಾನೂಭೂತಿ ಮತ್ತು ಸಹಕಾರವನ್ನು ತೋರುವುದರ ಮೂಲಕ ಅವರಲ್ಲಿ ಆದರ್ಶ ಹಾಗೂ ಉದಾತ್ತಭಾವನೆಗಳ ಬೆಳವಣಿಗೆಯ ಪ್ರಕ್ರಿಯೆಯು ಆರಂಭವಾಯಿತು.4 ಈ ಬಗೆಯ ವಾತಾವರಣವು ಭಾರತದ ಪ್ರಮುಖ ಸಂಸ್ಥಾನಗಳಲ್ಲೊಂದಾಗಿದ್ದ ಮೈಸೂರಿನಲ್ಲೂ ಬೆಳೆಯತೊಡಗಿದ್ದ ಪರಿಣಾಮವಾಗಿ ಸಂಸ್ಥಾನದಲ್ಲೂ ಕೆಲವು ಉದಾರವಾದಿ ಬ್ರಾಹ್ಮಣ ವ್ಯಕ್ತಿಗಳು ಇಂತಹ ಕಾರ್ಯಗಳೆಡೆಗೆ ತಮ್ಮ ಗಮನವನ್ನು ಕೇಂದ್ರಿಕರಿಸಲು ಪ್ರಾರಂಭಿಸಿದುದರ ಫಲವೇ ಈ ಹಿಂದೂ ಡಿಪ್ರೆಸ್ಡ್‌ಕ್ಲಾಸ್ ಎಜುಕೇಷನ್ ಮಿಷನ್ ಎಂಬ ಸಂಸ್ಥೆಯ ಸ್ಥಾಪನೆ.

ಹಿಂದೂ ಡಿಪ್ರೆಸ್ಡ್‌ಕ್ಲಾಸ್ ಎಜುಕೇಷನ್ ಮಿಷನ್‌ನ ಸ್ವರೂಪ: ಮಹಾರಾಷ್ಟ್ರದ ಪ್ರಸಿದ್ಧ ಸಮಾಜ ಸುಧಾರಕರಾದ ವಿಠಲ್‌ರಾಮ್ ಶಿಂಧೆಯವರು ದಲಿತವರ್ಗ ದವರಿಗೆ ಶಿಕ್ಷಣವನ್ನು ನೀಡುವ ಪ್ರಧಾನ ಉದ್ದೇಶದಿಂದ 1906 ಅಕ್ಟೋಬರ್ 18ರಲ್ಲಿ 'ಡಿಪ್ರೆಸ್ಡ್‌ಕ್ಲಾಸ್ ಮಿಷನ್' ಎಂಬ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ರಾಷ್ಟ್ರಮಟ್ಟದಲ್ಲಿ ಅಸ್ಪೃಶ್ಯತಾ ವಿರೋಧಿ ಆಂದೋಲನವನ್ನು ರೂಪಿಸಿ, ಈ ಬಗೆಗೆ ಪ್ರಚಾರವನ್ನು ಕೈಗೊಂಡರು. ಕ್ರಮೇಣ 1912ರಲ್ಲಿ ಮೈಸೂರು ಸಂಸ್ಥಾನದ ಕೇಂದ್ರ ಭಾಗವಾದ ಬೆಂಗಳೂರಿನಲ್ಲಿ ಆಯೋಜಿತವಾಗಿದ್ದ ಸಮ್ಮೇಳನದಲ್ಲಿ ತಮ್ಮ ಸಂಸ್ಥೆಯ ಗುರಿಯ ಬಗೆಗೆ ಸ್ಥಳೀಯರಲ್ಲಿ ಅರಿವನ್ನು ಮೂಡಿಸಿದರು.5 ಇದರ ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ 1913 ಜೂನ್ 1 ರಂದು ಮೈಸೂರಿನ ಹಿರಿಯ ಸಮಾಜ ಸುಧಾರಕರೆನಿಸಿದ್ದ ವಿ.ಎನ್.ನರಸಿಂಹ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಹಿಂದೂ ಡಿಪ್ರೆಸ್ಡ್‌ಕ್ಲಾಸ್ ಎಜುಕೇಷನ್ ಮಿಷನ್ ಎಂಬ ಸರ್ಕಾರೇತರ ಸಂಸ್ಥೆಯು ಸ್ಥಾಪನೆಗೊಂಡಿತು. ಸಂಸ್ಥಾನದ ಮಹಾರಾಣಿಯವರಾದ ಶ್ರೀ ವಾಣಿವಿಲಾಸ ಸನ್ನಿಧಾನರವರು ಈ ಸಂಸ್ಥೆಯ ಪೋಷಕರಾದರೆ, ಯುವರಾಜರಾದ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್‌ರವರು ಇದರ ಉಪಪೋಷಕರಾಗಿದ್ದರು. ಎ.ನರಸಿಂಹ ಅಯ್ಯಂಗಾರ್ (ಉಪಾಧ್ಯಕ್ಷ), ಜಿ.ವಿರೂಪಾಕ್ಷ (ಕಾರ್ಯದರ್ಶಿ), ಎಂ.ವೆಂಕಟಕೃಷ್ಣಯ್ಯ, ವಿ.ಎಲ್. ಮಾನ್ಕರ್, ಟಿ.ಹನುಮಂತರಾವ್, ಜಿ.ವನಜಮ್ಮ, ಎಂ.ಜಿ.ಶಾಮಯ್ಯಂಗಾರ್, ಮುಂತಾದ ಪ್ರಮುಖರು ಈ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು.6

ಶತ–ಶತಮಾನಗಳಿಂದಲೂ ಮೇಲ್ವರ್ಗದವರು ಮತ್ತು ಪಂಚಮರ ನಡುವೆ ಅಗಾಧ ಅಂತರವಿದ್ದರೂ ಕೂಡ ಪಂಚಮರು ಹಿಂದೂ ಜನಾಂಗದ ಒಂದು ಭಾಗವೆಂಬುದಾಗಿಯೇ ಪರಿಗಣಿಸಲಾಗಿತ್ತು. ಹೀಗಿದ್ದಾಗ ಪಂಚಮರು ತಮ್ಮ ಸುಧಾರಣೆಗಾಗಿ ಮತಾಂತರದಲ್ಲಿ ಆಸಕ್ತಿಯನ್ನು ತೋರಿದ್ದರು. ಈ ಎಲ್ಲಾ ಪರಿಸ್ಥಿತಿಗಳ ಮುಂದುವರಿಕೆಯನ್ನು ಸಮರ್ಥವಾಗಿ ತಡೆದು, ದಲಿತರ ಶೈಕ್ಷಣಿಕ ಮತ್ತು ನೈತಿಕ ಬೆಳವಣಿಗೆಗೆ ವಿಷೇಶವಾಗಿ ಮಹಿಳೆಯರ ಪುನರುಜ್ಜೀವನಕ್ಕಾಗಿ, ದೇಶದ ಕೈಗಾರಿಕಾ ಬೆಳವಣಿಗೆಗಾಗಿ ಮತ್ತು ಈ ನಿಟ್ಟಿನಲ್ಲಿ ರಾಜ್ಯವು ಕೈಗೊಳ್ಳುತ್ತಿದ್ದ ನಾಗರೀಕ ಮತ್ತು ಸಾಮಾಜಿಕ ಚಟುವಟಿ–ಕೆಗಳಲ್ಲಿ ಸಹಕರಿಸುವುದು ಹಾಗೂ ಅವುಗಳನ್ನು ಪ್ರಚುರಪಡಿಸುವಂತಹ ಉದ್ದೇಶಿತ ಗುರಿಗಳ ಹಿನ್ನೆಲೆಯಲ್ಲಿ ಈ ಸಂಸ್ಥೆಯು ಪ್ರಾರಂಭವಾಯಿತು.

ಮೊದಲಿಗೆ ಮೈಸೂರು ಸಂಸ್ಥಾನದ ನಗರ ಭಾಗದಲ್ಲಿ ಸ್ಥಾಪನೆಯಾದ ಈ ಸಂಸ್ಥೆಯು ನಂತರದಲ್ಲಿ ಕಂಡ ಉತ್ತಮ ಪ್ರಗತಿಯಿಂದಾಗಿ ಇದರ ವತಿಯಿಂದ' ಅನೇಕ ಉಪಶಾಖೆಗಳು ಸಂಸ್ಥಾನದ ಹಲವು ಭಾಗಗಳಿಗೆ ವಿಸ್ತರಿಸಲ್ಪಟ್ಟು, ಹಲವಾರು ಶೈಕ್ಷಣಿಕ ಮತ್ತು ಕೈಗಾರಿಕಾ ಸಂಸ್ಥೆಗಳನ್ನು ಕಟ್ಟಿ ನಿರ್ವಹಿಸುತ್ತಿತ್ತು. ಇದರ ಉಪಶಾಖೆಗಳೆಂದರೆ 1917ರಲ್ಲಿ ಪ್ರಾರಂಭವಾದ ರಾಮಮೂರ್ತಿ ಭಜನಾಮಂದಿರ ಶಾಖೆ, ಕೆಸ್ತೂರು ಇಂಡಸ್ಟ್ರಿಯಲ್ ಇನ್‌ಸ್ಟಿಟ್ಯೂಟ್ ಶಾಖೆ, ಮೇಲುಕೋಟೆ ಶಾಖೆ, ಬೇಲೂರು ಶಾಖೆಗಳು.7 1922ರ ವೇಳೆಗೆ ಈ ಸಂಸ್ಥೆಯ ಕಾರ್ಯಕಾರಿ ಸಮಿತಿಯು ತನ್ನ ಕಾರ್ಯಕ್ಕನುಗುಣವಾಗಿ ಮೈಸೂರು ಮತ್ತು ಬೆಂಗಳೂರುಗಳಲ್ಲಿ 2 ವಿಭಾಗಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿತ್ತು. ಮೈಸೂರಿನ ನಗರ ಸಮಿತಿಗೆ ಎನ್.ಎಸ್. ಸುಬ್ಬರಾವ್‌ರವರು ಹಾಗೂ ಬೆಂಗಳೂರಿನ ಸಮಿತಿಗೆ ಎಂ.ಶಾಮರಾವ್‌ರವರು ಅಧ್ಯಕ್ಷರಾಗಿದ್ದರು.8 ಎಂ.ವೆಂಕಟ

ಕೃಷ್ಣಯ್ಯನವರಿಂದ 1910 ರಲ್ಲಿ ಆರಂಭಗೊಂಡಿದ್ದ 'ಪಂಚಮ ಎಜುಕೇಷನ್ ಲೀಗ್' ಮತ್ತು ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ 1896ರಲ್ಲಿ ಕೋಲ್ ಹೆನ್ರಿ ಓಲ್ಕಾಟ್‌ರವರಿಂದ ಸ್ಥಾಪಿತವಾಗಿದ್ದ 'ಹಿಂದೂ ಮಿಷನ್(ಆರ್ಯ ಬಾಲ ಸಮಾಜ)'ಗಳು ಈ ಸಂಸ್ಥೆಯೊಂದಿಗೆ ಸಂಯೋಜನೆಗೊಂಡವು.

ಈ ಸಂಸ್ಥೆಗೆ ಮೈಸೂರು ಸಂಸ್ಥಾನದ ಮಹಾರಾಜರು, ಜೊತೆಗೆ ಗ್ವಾಲಿಯಾರ್, ಆಳ್ವಾರ್ ಸಂಸ್ಥಾನಗಳ ಮಹಾರಾಜರೂ, ಪ್ರಜ್ಞಾವಂತ ನಾಗರೀಕರು ಹಾಗೂ ಅನೇಕ ಖಾಸಗಿ ಸಂಸ್ಥೆಗಳು ಆರ್ಥಿಕ ನೆರವನ್ನು ನೀಡುತ್ತಿದ್ದರು. ಅಲ್ಲದೆ ದಲಿತೋದ್ಧಾರದ ನಿಟ್ಟಿನಲ್ಲಿ ಸೇವಾಕಾರ್ಯವನ್ನು ಕೈಗೊಳ್ಳುವಂತಹ ಸ್ವಯಂ ಸೇವಕರನೇಕರನ್ನು ಈ ಸಂಸ್ಥೆ ಹುಟ್ಟು ಹಾಕಿತ್ತು.9

ದಲಿತೋದ್ಧಾರದ ನಿಟ್ಟಿನಲ್ಲಿ ಕೈಗೊಂಡ ಕಾರ್ಯಚಟುವಟಿಕೆಗಳು

* **ಶೈಕ್ಷಣಿಕ ಸುಧಾರಣೆ**: ತಲತಲಾಂತರದಿಂದ ಶಿಕ್ಷಣದಿಂದ ವಂಚಿತರಾಗಿದ್ದ ಈ ಜನಸಮುದಾಯಕ್ಕೆ ಪ್ರಥಮವಾಗಿ ಕ್ರೈಸ್ತಮಿಷನರಿಗಳು ಶೈಕ್ಷಣಿಕ ಆಶ್ರಯವನ್ನು ನೀಡಿದರೆ, ಕ್ರಮೇಣ ಮೈಸೂರು ಸರ್ಕಾರವು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಯಿತು. ಅಲ್ಲದೆ ಈ ಬಗೆಯ ಕಾರ್ಯಗಳಲ್ಲಿ ತೊಡಗಿದ ಖಾಸಗಿ ಸಂಸ್ಥೆಗಳಿಗೂ ಸಹಕಾರವನ್ನು ನೀಡುತ್ತಿತ್ತು. ಇಂತಹ ಅನುಕೂಲವನ್ನು ಪಡೆದ ಈ ಸಂಸ್ಥೆಯ ವತಿಯಿಂದ ಮೊದಲಿಗೆ 1913 ರಲ್ಲಿ ಮೈಸೂರು ಸಂಸ್ಥಾನದ ನಗರ ಭಾಗದಲ್ಲಿ, ಅದರಲ್ಲೂ ಬಹುಸಂಖ್ಯಾತ ಹೊಲೆಯರು ವಾಸವಾಗಿದ್ದಂತಹ ದೊಡ್ಡಹೊಲಗೇರಿ(ಈಗಿನ ಅಶೋಕಪುರಂ) ಎಂಬಲ್ಲಿ ಶಾಲೆಯೊಂದನ್ನು ಸ್ಥಾಪಿಸಲಾಯಿತು. ನಂತರದಲ್ಲಿ ಮೈಸೂರು ನಗರದ ದಲಿತ ಕೇರಿಗಳಾದ ಜಲಪುರಿ, ಮೋಚಿಕೇರಿ, ಜಲಗಾರಕೇರಿಯಲ್ಲಿ ಹಾಗೂ ಬೆಂಗಳೂರು ನಗರದ ಕಾಡುಗೊಂಡನ ಹಳ್ಳಿ, ಕಡೂರಿನ ಶಿವಾನೆ ಮತ್ತು ಚಿತ್ರದುರ್ಗದಲ್ಲಿ ಈ ಸಂಸ್ಥೆಯ ಶಾಲೆಗಳು ಸ್ಥಾಪನೆಗೊಂಡವು. ನಂತರದಲ್ಲಿ ಪಂಚಮರ ಕೂಲಿಕಾರ್ಮಿಕರಿಗಾಗಿ ಹಲವು ಶಾಲೆಗಳಲ್ಲಿಯೇ ವಿಶೇಷವಾಗಿ ರಾತ್ರಿ ತರಗತಿಗಳನ್ನು ಪ್ರಾರಂಭಿಸಲಾಯಿತು. ಇದು ಕ್ರಮೇಣ ಉತ್ತಮ ಫಲಿತಾಂಶವನ್ನೆ ನೀಡಿತು.

ಹೀಗೆ ಸುಮಾರು 9 ಶಾಲೆಗಳಿಂದ ಪ್ರಾರಂಭವಾದ ಈ ಸಂಸ್ಥೆಯು 1921-22ರ ಅವಧಿಯಲ್ಲಿ ಸುಮಾರು 40 ರಿಂದ 45 ಶಾಲೆಗಳನ್ನು ನಿರ್ವಹಿಸುತ್ತಿದ್ದು, ಈ ಸಂಸ್ಥೆಯ ಎಲ್ಲ ಶಾಲೆಗಳಲ್ಲೂ ಕಲಿಯು ತ್ತಿದ್ದ ಮಕ್ಕಳ ಸಂಖ್ಯೆಯಲ್ಲಿ 130 ಬಾಲಕರು, 642 ಬಾಲಕಿಯರಿದ್ದರು('ದಲಿತರಿಗೆ ಪ್ರಾರಂಭಿಕ ಹಂತದಲ್ಲಿ ಸರ್ಕಾರವು ಶೈಕ್ಷಣಿಕವಾಗಿ ಅನೇಕ ಸವಲತ್ತುಗಳನ್ನು ನೀಡುತ್ತಿದ್ದರೂ ಅವರು ಶಿಕ್ಷಣವನ್ನು ಕಲಿಯುವಲ್ಲಿ ಉತ್ಸುಕರಾಗಿರಲಿಲ್ಲ'ವೆಂಬ ಅಭಿಪ್ರಾಯಗಳು ಅಂದು ವ್ಯಕ್ತವಾಗುತ್ತಿದ್ದವು. ಇಂತಹ ಹೇಳಿಕೆಗಳ ನಡುವೆ ಈ ಶಾಲೆಗಳಲ್ಲಿ ಕಲಿಯುತ್ತಿದ್ದ ಹೆಣ್ಣುಮಕ್ಕಳ ಸಂಖ್ಯೆಯನ್ನು ಗಮನಿಸಿದಾಗ ಅನಕ್ಷರತೆಯ ಲೋಕದಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣದಲ್ಲಿ ತಳೆಯುತ್ತಿದ್ದ ಆಸಕ್ತಿಯು ಗಮನಾರ್ಹವಾದ ಅಂಶವೆಂದೇ ಹೇಳಬಹುದು). 1920-21 ರ ಅವಧಿಯಲ್ಲಿ ಮೇಲ್ವರ್ಗದ ಸುಮಾರು 13 ಜನ ಶಿಕ್ಷಕರು ವಿವಿಧ ಪಂಚಮ ಶಾಲೆಗಳಲ್ಲಿ ಸೇವೆಸಲ್ಲಿಸುತ್ತಿದ್ದರು. ಈ ಸಂಸ್ಥೆಯು ತನ್ನ ಶಾಲೆಗಳ ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ಉನ್ನತ ವಿದ್ಯಾಭ್ಯಾಸವನ್ನು ಪಡೆದ ಅರ್ಹರನ್ನು ಶಿಕ್ಷಕರನ್ನಾಗಿ ದಾಖಲುಮಾಡಿಕೊಂಡಿತ್ತು. 10

ಈ ಶಾಲೆಗಳಲ್ಲಿ ಕ್ರಮವಾಗಿ ಚಾಪೆಹೆಣಿಗೆ (Rattan work), ನೇಯ್ಗೆ, ರೇಷ್ಮೆ ವ್ಯವಸಾಯ, ಪಾದರಕ್ಷೆಗಳ ತಯಾರಿಕೆ, ಕೃಷಿ ಚಟುವಟಿಕೆಗಳು, ಕಸೂತಿ ಕೆಲಸ, ಬಡಗಿ ಕೆಲಸ ಹೀಗೆ ಪ್ರಾಥಮಿಕ ಶಾಲೆಯ ಹಂತದಲ್ಲಿ ಹಲವು ಗೃಹಕೈಗಾರಿಕೆ ಮತ್ತು ಅದರ ತಂತ್ರಜ್ಞಾನಗಳ ಬಗೆಗೆ ತರಬೇತಿ ನೀಡಲಾಗುತ್ತಿತ್ತು. ಈ ತರಬೇತಿಯು ಭವಿಷ್ಯತ್ತಿನಲ್ಲಿ ಉಪಯುಕ್ತ ಉದ್ಯೋಗದತ್ತ ಸಂಪರ್ಕ ಕಲ್ಪಿಸುವಲ್ಲಿ ಪಂಚಮರಿಗೆ ನೆರವಾಯಿತು. ಇಲ್ಲಿನ ಮಕ್ಕಳಿಗೆ ಬಾಲ್ಯದಲ್ಲಿಯೇ ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಹಾಗೂ ಉತ್ತಮ ನಡವಳಿಕೆಯನ್ನು ರೂಪಿಸಿ ಕೊಳ್ಳುವಲ್ಲಿ ಅಗತ್ಯವಾದ ನೈತಿಕತೆಯಾಧಾರಿತ ಶಿಕ್ಷಣವನ್ನು ಬೋಧಿಸಲಾಗುತ್ತಿತ್ತು. ಪ್ರಾರಂಭದಲ್ಲಿ ಕನ್ನಡ ಭಾಷೆಯಲ್ಲಿ ಶಿಕ್ಷಣವನ್ನು ನೀಡುತ್ತಿದ್ದ ಈ ಸಂಸ್ಥೆ ತದನಂತರದಲ್ಲಿ ಇಲ್ಲಿನ ವಿದ್ಯಾರ್ಥಿಗಳು ಭವಿಷ್ಯತ್ತಿನ ಜಗತ್ತಿನಲ್ಲಿ ತಮ್ಮನ್ನು ಸದೃಢಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯವಾದ ಇಂಗ್ಲಿಷ್ ಶಿಕ್ಷಣವನ್ನು ನೀಡಲು ಪ್ರಾರಂಭಿಸಿತು.11 ಆ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಅಗತ್ಯವಾದ ಸಾಮಾನ್ಯ ಶಿಕ್ಷಣವನ್ನು ನೀಡಲಾರಂಭಿಸಿ, ಈ ವರ್ಗಗಳ ಏಳಿಗೆಯ ಬಗೆಗೆ ಒಂದು ಭರವಸೆಯನ್ನು ಹುಟ್ಟು ಹಾಕಿತ್ತು. ಇಲ್ಲಿ ಗಮನಾರ್ಹವಾದ ಅಂಶವೆಂದರೆ ಪ್ರಾರಂಭದಲ್ಲಿ ಈ ಜನಸಮುದಾಯಕ್ಕೆ ನೀಡುತ್ತಿದ್ದ ಶಿಕ್ಷಣದ ಸ್ವರೂಪವು ಪ್ರಾಯೋಗಿಕ ರೂಪದಲ್ಲಿದ್ದು, ನಂತರದಲ್ಲಿ ಸಾಹಿತ್ಯಿಕ ನೆಲೆಗಟ್ಟಿನ ರೂಪವನ್ನು ಪಡೆಯಿತು.

* **ಆರ್ಥಿಕ ಸುಧಾರಣೆ**: ಈ ಮಿಷನ್ 1920ರ ವೇಳೆಗೆ ನಡೆಸುತ್ತಿದ್ದ ಒಟ್ಟು 6 ಕೋ-ಆಪರೇಟಿವ್ ಸೊಸೈಟಿ ಗಳಲ್ಲಿ 4ನ್ನು ಪ್ರತ್ಯೇಕವಾಗಿ ಪಂಚಮರಿಗಾಗಿಯೆ ಸ್ಥಾಪಿಸಲಾಗಿದ್ದು, ಇವುಗಳು ದೊಡ್ಡಹೊಲಗೇರಿ, ಈರನಗೆರೆ, ಈಡಿಗ ಎಕ್ಸ್‌ಟೆನ್ಸನ್, ನಜ಼ರ್‌ಬಾದ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. 1921 ರಲ್ಲಿ ಪಂಚಮರು ಮತ್ತು ಇತರ ಡಿಪ್ರೆಸ್ಡ್‌ಕ್ಲಾಸ್‌ಗಳಿಗೆ ಅಗತ್ಯವಾದ ದಾಸ್ತಾನುಗಳನ್ನು ಕಡಿಮೆ ಹಾಗೂ ಸೂಕ್ತ ಬಡ್ಡಿದರದಲ್ಲಿ ನೀಡಲು "ಸಹಕಾರಿ ಮಳಿಗೆ"ಗಳನ್ನು ಸ್ಥಾಪಿಸಲಾಯಿತು.

ರಾಜ್ಯದಲ್ಲಿ ವಾಸವಾಗಿದ್ದ ಬಹುಸಂಖ್ಯಾತ ಪಂಚಮರು ತಮ್ಮ ಜೀವನೋಪಾಯದ ಮಾರ್ಗವಾಗಿ ಕೃಷಿಯನ್ನೇ ಅವಲಂಬಿಸಿದ್ದರು. ಹಲವರು ಚಿಕ್ಕ-ಚಿಕ್ಕ ಭೂಮಿಗಳನ್ನು ಹೊಂದಿದ್ದು, ಇದರ ನಿರ್ವಹಣೆಯು ಕಷ್ಟಸಾಧ್ಯವಾದ ಪರಿಣಾಮವಾಗಿ, ಶತಶತಮಾನಗಳ ಕಾಲ ಹಳ್ಳಿಯ ಶ್ರೀಮಂತ ಭೂಒಡೆಯರ ಹಾಗೂ ಬಡ್ಡಿ ವ್ಯವಹಾರಸ್ಥರ ಅಧೀನದಲ್ಲಿ ಸ್ವತಂತ್ರಹೀನ ಜೀತದಾಳುಗಳಾಗಿ ಬದುಕುತ್ತಿದ್ದು, ಆರ್ಥಿಕವಾಗಿ ಶೋಷಿಸಲ್ಪಟ್ಟಿದ್ದರು. ಇಂತಹ ಪರಿಸ್ಥಿತಿಯಿಂದ ದೂರವಿದ್ದ ಪಂಚಮರ ಸಂಖ್ಯೆ ವಿರಳವಾಗಿತ್ತು. ಈ ಸಂದರ್ಭದಲ್ಲಿ ಸಂಸ್ಥೆಯು ಹೀಗೆ ಆರ್ಥಿಕವಾಗಿ ಕೆಳಮಟ್ಟದಲ್ಲಿದ್ದ ಪಂಚಮರಿಗಾಗಿಯೆ ಪ್ರಥಮವಾಗಿ ಮಳವಳ್ಳಿಯಲ್ಲಿ ಪ್ರಯೋಗಾತ್ಮಕವಾಗಿ ಒಂದು ಕೋ-ಆಪರೇಟಿವ್ ಬ್ಯಾಂಕನ್ನು ತೆರೆದು, ಆ ಮೂಲಕ

ಸ್ಥಳೀಯ ಪಂಚಮರ ಸಾಲದ ಸ್ಥಿತಿಗತಿಗಳ ಬಗೆಗೆ ಸ್ಥೂಲ ಸಮೀಕ್ಷೆಯನ್ನು ಕೈಗೊಂಡು, ಅವರನ್ನು ಸಾಲದಭಾದೆಯಿಂದ ಋಣಮುಕ್ತರನ್ನಾಗಿಸುವಲ್ಲಿ ಸಮಂಜಸವಾದ ಕಂತುಗಳ ಮೂಲಕ ಸಾಲಸೌಲಭ್ಯವನ್ನು ನೀಡುವ ಮುಖಾಂತರ ಅವರು ಆರ್ಥಿಕವಾಗಿ ಸ್ವತಂತ್ರ ಜೀವನವನ್ನು ಸಾಗಿಸುವಲ್ಲಿ ನೆರವನ್ನು ಒದಗಿಸಿತು. ಜೊತೆಗೆ ಮಿತವ್ಯಯ ಮತ್ತು ಉಳಿತಾಯದ ಬಗೆಗೆ ಸಲಹೆಗಳನ್ನು ನೀಡಿದುದರ ಪರಿಣಾಮವಾಗಿ ಹಲವಾರು ಜನರು ಸ್ವತಂತ್ರ ದುಡಿಮೆಯಲ್ಲಿ ತೊಡಗುವಂತಾದರು. ಅಂತೆಯೆ ಪಂಚಮ ವಿದ್ಯಾರ್ಥಿಗಳಿಗೆ ಕೈಗಾರಿಕಾ ಶಾಲೆಗಳನ್ನು ಸ್ಥಾಪಿಸಿ ಗೃಹಕೈಗಾರಿಕೆಗಳಲ್ಲಿ ತರಬೇತಿಯನ್ನು ನೀಡುತ್ತಿದ್ದರು. ಆ ಮೂಲಕ ಅವರು ಮುಂದಿನ ಜೀವನದಲ್ಲಿ ತಾವು ಪಡೆದ ತರಬೇತಿಯ ಜ್ಞಾನವನ್ನು ಬಳಸಿಕೊಂಡು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವಲ್ಲಿ ಸಹಾಯಕವಾಗುತ್ತದೆ ಎಂಬುದಾಗಿ ಭಾವಿಸಲಾಯಿತು. ಆದರೆ ಈ ಸಂದರ್ಭದಲ್ಲಿ ಅವರಿಗೆ ಅಗತ್ಯವಾದ ಆರ್ಥಿಕ ನೆರವಿನ ಕೊರತೆಯಿತ್ತು.

* **ಸಾಮಾಜಿಕ ಸುಧಾರಣೆ**: ಒಂದು ಶೈಕ್ಷಣಿಕ ಸಂಸ್ಥೆಯಾಗಿ ಪ್ರಾರಂಭವಾದ ಈ ಸಂಸ್ಥೆಯು ಕ್ರಮೇಣ ಸಾಮಾಜಿಕ ಸುಧಾರಣ ಪ್ರಕ್ರಿಯೆಯಲ್ಲೂ ತೊಡಗುವ ಮೂಲಕ ದಲಿತರ ಏಳಿಗೆಗೆ ಶ್ರಮಿಸಿತು. ಹಬ್ಬ ಹರಿದಿನಗಳು ಹಾಗೂ ಶಾಲೆಗೆ ರಜೆಯಿದ್ದ ಸಮಯವನ್ನು ಸದುಪಯೋಗಪಡಿಸಿಕೊಂಡ ಸಂಸ್ಥೆಯು ಪಂಚಮರ ವಾಸಸ್ಥಾನಗಳಿಗೆ ತೆರಳಿ, ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿ, ಅವರಲ್ಲಿದ್ದ ಅನೇಕ ದುರಭ್ಯಾಸಗಳ ದುಷ್ಪರಿಣಾಮಗಳ ಬಗೆಗೆ ಎಚ್ಚರಿಸಿ, ಅವರ ಮನವೊಲಿಸಿ, ಇಂದಿನ ಅವರ ಈ ದುಸ್ಥಿತಿಗೆ ಕಾರಣವಾದ ದುರ್ಗುಣಗಳನ್ನು ತ್ಯಜಿಸುವಂತೆ ತಿಳಹೇಳುತ್ತಿದ್ದರು. ಪರಿಣಾಮವಾಗಿ 1920–21ರ ವರದಿಯ ಪ್ರಕಾರ ಸುಮಾರು 4,000 ಪಂಚಮರು ಕುಡಿತ ಮತ್ತು ಇತರ ದುರ್ಗುಣಗಳನ್ನು ತ್ಯಜಿಸುವುದಾಗಿ ಪ್ರತಿಜ್ಞೆಯನ್ನು ಕೈಗೊಂಡರು. ಹೀಗೆ ಪಂಚಮ ಸಮುದಾಯದ ಧನಾತ್ಮಕ ಪ್ರತಿಕ್ರಿಯೆಯು ಈ ಸಂಸ್ಥೆಯ ಸಂಘಟಕರು ಭವಿಷ್ಯದಲ್ಲಿ ಮತ್ತಷ್ಟು ಉತ್ತಮ ಕಾರ್ಯಗಳನ್ನು ಕೈಗೊಳ್ಳುವತ್ತ ಅವರಿಗೆ ಸ್ಫೂರ್ತಿಯನ್ನು ನೀಡುತ್ತಿತ್ತು.

ಈ ಸಂಸ್ಥೆಯು ಪಂಚಮ ಸಮುದಾಯದ ವಿವಿಧ ಒಳಪಂಗಡಗಳ ನಡುವೆ ಹೊಂದಾಣಿಕೆ ಹಾಗೂ ಉತ್ತಮ ಸಂಬಂಧವನ್ನೇರ್ಪಡಿಸುವ ಸಲುವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ 65 ಭಜನಾ ಮಂದಿರಗಳನ್ನು ನಿರ್ಮಿಸಿತ್ತು. ಇಲ್ಲಿ ಧಾರ್ಮಿಕ ವಿಷಯಗಳ ಜೊತೆಗೆ ಇನ್ನಿತರ ನೈತಿಕ ಅಂಶಗಳನ್ನೊಳಗೊಂಡ ವಿಷಯಗಳ ಬಗೆಗೆ ಉಪನ್ಯಾಸಗಳನ್ನು ನೀಡಲಾಗುತ್ತಿತ್ತು. ಈ ಭಜನಾ ಕೂಟಗಳನ್ನು ಏರ್ಪಡಿಸುವುದರ ಉದ್ದೇಶ ಪಂಚಮರನ್ನು ಧಾರ್ಮಿಕತೆಯಲ್ಲಿ ಭಾವಪರವಶರನ್ನಾಗಿಸಿ, ಶಕ್ತಿಹೀನರನ್ನಾಗಿ ಮಾಡುವುದಾಗಿರಲಿಲ್ಲ. ಬದಲಾಗಿ ಅವರಲ್ಲಿ ಆಧ್ಯಾತ್ಮಿಕ ಹಾಗೂ ನೈತಿಕ ಶಕ್ತಿಯನ್ನು ಜಾಗೃತಗೊಳಿಸಿ, ಲೌಕಿಕವಾಗಿ ಪರಂಪರಾನುಗತವಾಗಿ ನಡೆದು ಬರುತ್ತಿದ್ದ ದೌರ್ಜನ್ಯವೆಂಬ ಸಾಮಾಜಿಕ ರೋಗವು ತರುವ ದುರ್ಬಲತೆಯನ್ನು ಎದುರಿಸುವ ಶಕ್ತಿಯನ್ನು ಅವರಲ್ಲಿ ತುಂಬುವುದಾಗಿತ್ತು. ಜೊತೆಗೆ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳ ಸರಣಿಯಲ್ಲಿ ಹಲವಾರು 'ಸಾಮಾಜಿಕ ಕೂಟ'ಗಳನ್ನು ಏರ್ಪಡಿಸುತ್ತಿದ್ದು, ಇದರೊಂದಿಗೆ ನೈರ್ಮಲ್ಯ ಮತ್ತು ಆರೋಗ್ಯಕರವಾದ ವಿಷಯಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಪ್ರದರ್ಶಿಸುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ತಮ್ಮ ಸಂಘದ ಕಾರ್ಯಪ್ರಗತಿಯ ಬಗೆಗೆ ಮುಕ್ತವಾಗಿ ಚರ್ಚಿಸಿ, ಸ್ಥಳೀಯರಿಂದ ಅವರ ಸಮಸ್ಯೆಗಳ ಅಹವಾಲುಗಳನ್ನು ಸ್ವೀಕರಿಸಿ, ಅಗತ್ಯವಾದ ಸಲಹೆ ಮತ್ತು ಸಹಕಾರಗಳನ್ನು ನೀಡುತ್ತಿದ್ದರು. ಸಂಸ್ಥೆಯ ಇಂತಹ ಅನೇಕ ಚಟುವಟಿಕೆಗಳಿಗೆ ಸರ್ಕಾರವು ತನ್ನೆಲ್ಲ ಸಹಕಾರಗಳನ್ನು ನೀಡುತ್ತಿತ್ತು.

ಪಂಚಮರನ್ನು ಮುಟ್ಟಿಸಿಕೊಳ್ಳುವುದಿರಲಿ, ಅವರನ್ನು ನೋಡುವುದೇ ಅಶುಭವೆಂಬುದಾಗಿ ಭಾವಿಸಿದ್ದ ಮೇಲ್ವರ್ಗದ ಮನಸ್ಥಿತಿಗಳ ನಡುವೆ ಪಂಚಮರ ವಾಸಸ್ಥಾನಗಳಿಗೆ ತೆರಳಿ ಅವರ ಸಾಮಾಜಿಕ ಹಾಗೂ ನೈತಿಕ ಉತ್ತಮೀಕರಣಕ್ಕೆ ತನ್ಮೂಲಕ ಸಾಧ್ಯವಾಗಬಹುದಾದ ಕ್ರಮಗಳನ್ನು ಕೈಗೊಂಡಂತಹ ಈ ಸಂಸ್ಥೆಯ ಪ್ರಯತ್ನವು 'ಮಾದರಿ ಮೈಸೂರು' ಎಂಬ ಪರಿಕಲ್ಪನೆಗೆ ಇಂಬುಕೊಡುವಂತಹದ್ದು.

ಪಂಚಮ ಸಮ್ಮೇಳನಗಳು; ಈ ಸಂಸ್ಥೆಯು ಆರಂಭದಿಂದಲೂ ಪಂಚಮರ ಸಮಸ್ಯೆ ಹಾಗೂ ಸುಧಾರಣೆಯನ್ನು ಪ್ರತಿನಿಧಿಸುವ ಮತ್ತು ಅವಲೋಕಿಸುವಂತಹ ಹಲವಾರು ಸಮ್ಮೇಳನಗಳ ಆಯೋಜನೆಗೆ ಅಸ್ಥಿಭಾರವನ್ನು ಹಾಕಿತ್ತು. ಈ ಸಮ್ಮೇಳನಕ್ಕೆ ಮೈಸೂರಿನ ಮಹಾರಾಜರು 100 ರೂಪಾಯಿಗಳ ಕೊಡುಗೆಯನ್ನು ನೀಡುತ್ತಿದ್ದರು. ಈ ಸಂಸ್ಥೆಯು 1913–1923ರವರೆಗಿನ ಕಾಲಾವಧಿಯಲ್ಲಿ ಸಂಸ್ಥಾನದಾದ್ಯಂತ ಸುಮಾರು 26ಕ್ಕೂ ಹೆಚ್ಚಿನ ಪಂಚಮ ಸಮ್ಮೇಳನಗಳನ್ನು ಆಯೋಜಿಸಿತ್ತು. ಈ ಸಂಸ್ಥೆಯು ತನ್ನ ಮೊದಲ ವರ್ಷದಲ್ಲಿ(1913) ಮೇಲುಕೋಟೆಯಲ್ಲಿ ಆಯೋಜಿಸಿದ್ದ ಪಂಚಮರ ಸಮ್ಮೇಳನಕ್ಕೆ ಮೈಸೂರಿನ ಘನತೆವೆತ್ತ ಮಹಾರಾಜರವರು ಭೇಟಿನೀಡಿದ್ದು ಹೆಮ್ಮೆಯ ಸಂಗತಿಯಾಗಿತ್ತು. ಈ ಸಂಸ್ಥೆಯು 1916 ರಿಂದ ಮೈಸೂರು 'ಸಿವಿಕ್ ಅಂಡ್ ಸೋಷಿಯಲ್ ಪ್ರೋಗ್ರೆಸ್ ಅಸೋಸಿಯೇಷನ್'ನ ಸಹಯೋಗದೊಂದಿಗೆ ಅನೇಕ ಪಂಚಮ ಸಮ್ಮೇಳನಗಳನ್ನು ಆಯೋಜಿಸಿತ್ತು.

ಈ ಮಿಷನ್‌ನ ಅಧ್ಯಕ್ಷರು ಮತ್ತು ಆಜೀವ ಸದಸ್ಯರೂ ಆಗಿದ್ದ ವಿ.ಎನ್.ನರಸಿಂಹ ಅಯ್ಯಂಗಾರ್‌ರವರು 1920ರಲ್ಲಿ ತಮ್ಮ ಅನಾರೋಗ್ಯದ ಸಮಯದಲ್ಲೂ ಕೂಡ ಹಾಸನ, ಕಡೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದ ದಲಿತ ಕೇರಿಗಳಿಗೆ ತೆರಳಿ ಅನೇಕ ಉಪನ್ಯಾಸಗಳನ್ನು ನೀಡಿದ್ದರು. ಅಲ್ಲದೆ ಇದೇ ವೇಳೆಗೆ ಬೇಲೂರಿನಲ್ಲಿ ಪಂಚಮರ ಸಮ್ಮೇಳನವನ್ನು ಸಂಘಟಿಸಿದ್ದರು. ಇವರು ಮೈಸೂರಿನ ರಂಗಾಚಾರ್ಲು ಮೆಮೋರಿಯಲ್ ಹಾಲ್‌ನಲ್ಲಿ ನಡೆದ ಸಮ್ಮೇಳನದಲ್ಲಿ 'ಡಿಪ್ರೆಸ್ಡ್‌ಕ್ಲಾಸ್ ಜನರ ಅಭಿವೃದ್ಧಿಗಾಗಿ ಸರ್ಕಾರವು ಹೆಚ್ಚಿನ ಉಪಯುಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು' ತಮ್ಮ ಸಂಸ್ಥೆಯ ವತಿಯಿಂದ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸುತ್ತಾರೆ.12 ಇಂತಹ ಸಮ್ಮೇಳನಗಳಲ್ಲಿ ಪಂಚಮರಿಗಾಗಿ ಬಾವಿಗಳನ್ನು ನಿರ್ಮಿಸುವುದು, ವಾಸಿಸುವ

ಮನೆಗಳ ನಿರ್ಮಾಣಕ್ಕಾಗಿ ನಿವೇಶನಗಳನ್ನು ನೀಡುವುದು, ಕೃಷಿಗಾಗಿ ಭೂಮಿಯನ್ನು ನೀಡುವುದು ಮತ್ತು ಪಂಚಮರ ಮಕ್ಕಳಗಾಗಿ ಶಾಲೆಗಳನ್ನು ತೆರೆಯುವುದರ ಬಗೆಗೆ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ಮತ್ತು ಸಂಬಂಧಿಸಿದ ಇತರ ಇಲಾಖಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸುವುದರ ಮೂಲಕ ಪಂಚಮರ ಸುಧಾರಣೆಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರದ ನೆರವನ್ನು ಕೋರಿದರು. ಪ್ರತಿಫಲವಾಗಿ 1920ರ ವೇಳೆಗೆ ಪಂಚಮರಿಗಾಗಿ ಸಂಸ್ಥೆಯು ಸ್ಥಾಪಿಸಿದ್ದ 2 ಶಾಲೆಗಳ ನಿರ್ವಹಣೆಯನ್ನು ಸರ್ಕಾರದ ಇಲಾಖೆಯು ವಹಿಸಿಕೊಂಡಿತು. ಅಲ್ಲದೆ 3 ಬಾವಿಗಳನ್ನು ನಿರ್ಮಿಸ ಲಾಯಿತು. ಹಾಗೆಯೇ ಕಡೂರಿನ ಅನೇಕ ಹಳ್ಳಗಳಲ್ಲಿ ಈ ಜನರಿಗೆ ಅಗತ್ಯವಾದ ಮನೆಗಳ ನಿರ್ಮಾಣಕ್ಕಾಗಿ ಸೂಕ್ತ ನಿವೇಶನಗಳನ್ನು ನೀಡಲಾಯಿತು. ಮೈಸೂರು ಮತ್ತು ಬಾಣಾವರದಲ್ಲಿ ಪಂಚಮ ಕಾಲೋನಿಗಳನ್ನು ನಿರ್ಮಿಸಲಾಯಿತು.

ಹೀಗೆ ಈ ಮಿಷನ್‌ನ ಸದಸ್ಯರೆಲ್ಲರೂ ಸಂಸ್ಥಾನದ ಎಲ್ಲ ಕಡೆಗಳಲ್ಲೂ ಪಂಚಮರ ಸಮ್ಮೇಳನ ಗಳನ್ನೇರ್ಪಡಿಸಿ ಅಲ್ಲಿನ ಜನರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ಬೌದ್ಧಿಕ ಸುಧಾರಣೆಯನ್ನು ಪ್ರೋತ್ಸಾಹಿಸುವಲ್ಲಿ ನೆರವಾಗುವ ಅನೇಕ ಉಪನ್ಯಾಸಗಳನ್ನು ನೀಡುತ್ತಿದ್ದರು. ಅಲ್ಲದೆ ಕೆಲವು ಸದಸ್ಯರು ಸ್ಥಳೀಯ ಕೆಳವರ್ಗಗಳಲ್ಲಿದ್ದ ಪರಸ್ಪರರ ಖಾಸಗಿ ಘರ್ಷಣೆಗಳು ಮತ್ತು ಕೌಟುಂಬಿಕ ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸಿದಂತಹ ಉದಾಹರಣೆಗಳವೆ. ಈ ಸಮ್ಮೇಳನಗಳಲ್ಲಿ ಭಾಗವಹಿಸಿದ್ದ ಪಂಚಮರಿಂದ ಗೋಹತ್ಯೆ ಮಾಡದಿರುವುದು, ವರ/ವಧುದಕ್ಷಿಣೆ ಅಥವ ತೆರ ಪದ್ಧತಿಯನ್ನು ಬಿಡುವುದು ಹಾಗೂ ಕುಡಿತವನ್ನು ತ್ಯಜಿಸುವುದಾಗಿ ಮುಚ್ಚಳಿಕೆಯನ್ನು ಪಡೆದುಕೊಳ್ಳುವುದಲ್ಲದೆ, ಕೆಲವು ಕಡೆ ಅನೇಕ ಪಂಚಮರಿಗೆ ಸಾಮೂಹಿಕ ವಿವಾಹವನ್ನು ಮಾಡಿಸಲಾಗುತ್ತಿತ್ತು. ಈ ನಡುವೆ 1921 ಆಗಸ್ಟ್ 1 ರಲ್ಲಿ ಮಹಾರಾಷ್ಟ್ರದ ವಿಠ್ಠಲ್‌ರಾಮ್ ಶಿಂಧೆಯವರು ಮೈಸೂರು ಸಂಸ್ಥಾನದೊಳಗೆ ವಸಂತ ಪೇಟೆ ಎಂಬಲ್ಲಿ ನಡೆದ ಪಂಚಮರ ಸಮ್ಮೇಳನದಲ್ಲಿ ತಿಲಕರ ಜೀವನದ ಬಗೆಗೆ ವಿಶೇಷ ಉಪನ್ಯಾಸವನ್ನು ನೀಡಿದ್ದರು. ಹಾಗೆಯೆ 1922 ರಲ್ಲಿ ನಡೆದ ಪಂಚಮರ ಸಮ್ಮೇಳನಕ್ಕೆ ವಿಶೇಷ ಅತಿಥಿಗಳಾದ ರವೀಂದ್ರನಾಥ ಟಾಗೂರ್‌ರಂತಹ ಅನೇಕ ರಾಷ್ಟ್ರಮಟ್ಟದ ಮಹನೀಯರುಗಳು ತಮ್ಮ ಮೌಲ್ಯಯುತವಾದ ನೈತಿಕ ಬೆಂಬಲವನ್ನು ನೀಡಿದ್ದರು.

'ಸಾಮಾಜಿಕ ಸುಧಾರಣೆಯೆ ಸಾಮಾಜಿಕ ನ್ಯಾಯದ ಮೂಲ'ವೆಂಬುದರಲ್ಲಿ ಭರವಸೆಯನ್ನೊಂದಿದ್ದ ಮೈಸೂರು ಸಂಸ್ಥಾನದ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1922 ಜನವರಿ 21 ರಂದು ಹೆಚ್.ಆರ್.ಹೆಚ್ ಪ್ರಿನ್ಸ್ ಆಫ್ ವೇಲ್ಸ್‌ರವರೊಂದಿಗೆ ಈ ಮಿಷನ್‌ಗೆ ಭೇಟಿನೀಡಿ ಇಲ್ಲಿನ ಕಾರ್ಯ ವೈಖರಿಯ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಶುಭಹಾರೈಸಿದ್ದರು. ಈ ಸಂಸ್ಥೆಯ ಎಲ್ಲ ಶಾಖೆಗಳಲ್ಲೂ ಮಹಾರಾಜರ ಜನ್ಮದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ಪಂಚಮ ವಿದ್ಯಾರ್ಥಿಗಳಿಗಾಗಿ ಹಲವು ಕ್ರೀಡೆ ಮತ್ತು ಮನರಂಜನಾ ಕೂಟಗಳನ್ನೇರ್ಪಡಿಸಿ, ಇವುಗಳಲ್ಲಿ ಗೆದ್ದವರಿಗೆ ಸೂಕ್ತ ಬಹುಮಾನಗಳನ್ನು ನೀಡಲಾಗುತ್ತಿತ್ತು. ಹೀಗೆ ಪ್ರಾರಂಭದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದ ಈ ಸಂಸ್ಥೆಯು 1923ರ ವೇಳೆಗೆ ತನ್ನ ಆರ್ಥಿಕ ದುಸ್ಥಿತಿ ಮತ್ತು ಸಮರ್ಥ ನಿರ್ವಹಣೆಯ ಕೊರತೆಯಿಂದಾಗಿ ಸಮಾಜದಲ್ಲಿ ತನ್ನ ಪ್ರಭಾವವನ್ನು ಕಳೆದುಕೊಳ್ಳತೊಡಗಿತ್ತು.13

ಒಟ್ಟಾರೆಯಾಗಿ ಈ ಸಂಸ್ಥೆಯ ಕಾರ್ಯವೈಖರಿಗಳ ಬಗೆಗೆ ಅವಲೋಕಿಸಿದಾಗ ತಿಳಿದುಬರುವಂತಹ ಗಮನಾರ್ಹ ಅಂಶವೆಂದರೆ; ಶಿಕ್ಷಣವು ಒಬ್ಬ ವ್ಯಕ್ತಿಯ ಬೌದ್ಧಿಕ ಬೆಳವಣಿಗೆಯ ಸಾಧನವೂ ಹೌದು, ಆತನನ್ನು ಇತರರಿಗೆ ಮಾದರಿಯಾಗಿಸಬಲ್ಲ ಪ್ರೇರಣಾ ಶಕ್ತಿಯೂ ಹೌದು. ದಲಿತರನ್ನು ಶೈಕ್ಷಣಿಕವಾಗಿ ಸುಧಾರಿಸುವ ಉದ್ದೇಶದಿಂದಲೇ ಪ್ರಾರಂಭವಾದ ಈ ಸಂಸ್ಥೆಯು ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಸಮಾಜ ಸೇವೆಯ ನೆಲೆಗೂ ವಿಸ್ತರಿಸುವ ಮೂಲಕ ವಿವಿಧ ಆಯಾಮಗಳಲ್ಲಿ ದಲಿತೋದ್ಧಾರದ ಕಾರ್ಯಚಟುವಟಿಕೆಗಳೊಳಗೆ ಬಹಳಕಾಲದವರೆಗೂ ಚಲಿಸಿ, ಈ ಜನಸಮುದಾಯವನ್ನು ಪ್ರಗತಿಯ ಹಾದಿಗೆ ಕರೆದೊಯ್ಯುವಲ್ಲಿ ಪೂರಕವಾದ ವಾತಾವರಣವನ್ನು ರೂಪಿಸಿತ್ತು. ಈ ನಿಟ್ಟಿನಲ್ಲಿ ಸಾಧ್ಯವಾದಷ್ಟು ದೂರ ಅವರನ್ನು ಕರೆತಂದು, ತನ್ನ ಉದ್ದೇಶಿತ ಗುರಿಯನ್ನು ಕ್ರಮಿಸುವಲ್ಲಿ ಪ್ರಯತ್ನಿಸಿ, ಕಾಲಾಂತರದಲ್ಲಿ ತನ್ನ ಆಂತರಿಕವಾದ ಸಮಸ್ಯೆಗಳ ನಡುವೆ ಬಳಲಿತು. ಆದರೂ ಸಂಸ್ಥಾನದಲ್ಲಿ ಗಾಂಧೀಜಿಯವರ ಪ್ರಭಾವವು ಪ್ರವೇಶಿಸುವುದಕ್ಕೂ ಮುಂಚೆಯೇ ರಚನಾತ್ಮಕ ಕಾರ್ಯಗಳ ಪರಿಕಲ್ಪನೆಯ ಮಾನದಂಡವನ್ನು ದಲಿತರ ಸುಧಾರಣಾ ಪ್ರಕ್ರಿಯೆಯಲ್ಲಿ ಪ್ರಯೋಗಿಸಿ, ಸುಮಾರು ಒಂದು ದಶಕಕ್ಕೂ ಹೆಚ್ಚಿನ ಕಾಲಾವಧಿಯಲ್ಲಿ ಮೇಲ್ವರ್ಗದ ಈ ಸಾಂಘಿಕ ಪ್ರಯತ್ನವು ಸಲ್ಲಿಸಿದ ಸೇವೆಯು ದಲಿತ ಚರಿತ್ರೆಯ ನೆಲೆಯಲ್ಲಿ ಸ್ಮರಣಾರ್ಹ ಸಂಗತಿ.

ಪರಾಮರ್ಶಿತ ಆಕರಗಳು

1. ಅನಿತಾ ಎಂ.ಎಸ್: "ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್" :ಪ್ರಿಯದರ್ಶಿನಿ ಪ್ರಕಾಶನ, ಮೈಸೂರು;2012: ಪುಟ.248.

2. ಗೌರ್ಮೆಂಟ್ ಆಫ್ ಮೈಸೂರು: "ರಿಪೋರ್ಟ್ ಆಫ್ ಹಿಂದೂ ಡಿಪ್ರೆಸ್ಡ್‌ಕ್ಲಾಸ್ ಎಜುಕೇಷನ್ ಮಿಷನ್ ಮೈಸೂರು": ಗೌರ್ಮೆಂಟ್ ಪ್ರೆಸ್, ಬೆಂಗಳೂರು: 1923; ಪುಟ.1.

3. ಗೌರ್ಮೆಂಟ್ ಆಫ್ ಮೈಸೂರು: "ದಿ ಮೈಸೂರು ಗೆಜೆಟ್– ಆಗಸ್ಟ್ ,1904" : ಗೌರ್ಮೆಂಟ್ ಪ್ರೆಸ್,ಬೆಂಗಳೂರು: 1904;ಪುಟ.372.

4. ರಿಪೋರ್ಟ್ ಆಫ್ ಹಿಂದೂ ಡಿಪ್ರೆಸ್ಡ್‌ಕ್ಲಾಸ್ ಎಜುಕೇಷನ್ ಮಿಷನ್ ಮೈಸೂರು; ಪೂರ್ವೋಕ್ತ, (ದಿ ಪ್ರೆಸಿಡೆನ್ಸಿಯಲ್ ಅಡ್ರೆಸ್).

5. ಕರ್ನಾಟಕ ಇತಿಹಾಸ ಅಕಾಡೆಮಿ: " ಇತಿಹಾಸ ದರ್ಶನ(ಸಂ.17)– "ಅಸ್ಪೃಶ್ಯತಾ ನಿವಾರಣೆ ಮತ್ತು ವಿಠಲ್‌ರಾಮ್ ಶಿಂಧೆ– ಲೀಲಾ.ಬಿ" :ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು;2012:ಪುಟ.338.

6. ಗೌರ್ಮೆಂಟ್ ಆಫ್ ಮೈಸೂರು: "ದಿ ಹಿಂದೂ ಡಿಪ್ರೆಸ್ಡ್‌ಕ್ಲಾಸ್ ಎಜುಕೇಷನ್ ಮಿಷನ್ ಮೈಸೂರು–ಪ್ರೋಗ್ರೆಸ್ ರಿಪೋರ್ಟ್ (1920–22)" : ಗೌರ್ಮೆಂಟ್ ಪ್ರೆಸ್,ಬೆಂಗಳೂರು: 1923; (ಈ ಮಾಹಿತಿಯನ್ನು ಪೀಠಿಕೆಯ ಭಾಗದಿಂದ ತೆಗೆದು ಕೊಳ್ಳಲಾಗಿದೆ).

7. ಅದೇ, ಪುಟ. 7–20.

8. ಅದೇ, ಪುಟ. 8–15.

9. ಅದೇ, ಪುಟ. 20–29

– ಗೌರ್ಮೆಂಟ್ ಆಫ್ ಮೈಸೂರು: ಸ್ಪೆಶಲ್ ರಿಪೋರ್ಟ್ ಆಫ್ ದಿ ಫಸ್ಟ್ ಮೈಸೂರು ಸಿವಿಕ್ ಅಂಡ್ ಸೋಷಿಯಲ್ ಕಾನ್ಫರೆನ್ಸ್: ಗೌರ್ಮೆಂಟ್ ಪ್ರೆಸ್,ಬೆಂಗಳೂರು: 1918: ಪುಟ.8–15.

10. ಅದೇ, ಪುಟ.17–25.

11. ಸ್ಪೆಶಲ್ ರಿಪೋರ್ಟ್ ಆಫ್ ದಿ ಫಸ್ಟ್ ಮೈಸೂರು ಸಿವಿಕ್ ಅಂಡ್ ಸೋಷಿಯಲ್ ಕಾನ್ಫರೆನ್ಸ್: ಪೂರ್ವೋಕ್ತ, ಪುಟ. 20–23.

12. ಚಿನ್ನಸ್ವಾಮಿ ಸೋಸಲೆ.ಎನ್: "ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು" : ಪ್ರಸಾರಾಂಗ, ಕನ್ನಡ ವಿ.ವಿ.,ಹಂಪಿ;2013:ಪುಟ.29.

13. "ದಿ ಹಿಂದೂ ಡಿಪ್ರೆಸ್ಡ್‌ಕ್ಲಾಸ್ ಎಜುಕೇಷನ್ ಮಿಷನ್ ಮೈಸೂರು–ಪ್ರೋಗ್ರೆಸ್ ರಿಪೋರ್ಟ್(1920–22)", ಪೂರ್ವೋಕ್ತ, ಪುಟ. 20–26 ಮತ್ತು 74–75.

– ಗೌರ್ಮೆಂಟ್ ಆಫ್ ಮೈಸೂರು: "ದಿ ವರ್ಕಿಂಗ್ ಆಫ್ ದಿ ಹಿಂದೂ ಡಿಪ್ರೆಸ್ಡ್‌ಕ್ಲಾಸ್ ಎಜುಕೇಷನ್ ಮಿಷನ್– ಮೈಸೂರು" : ಗೌರ್ಮೆಂಟ್ ಪ್ರೆಸ್,ಬೆಂಗಳೂರು: 1923: ಪುಟ. 4–5.

ಬ್ಯಾರಿ ಜನಾಂಗ – ಸಮಾಜ ಮತ್ತು ಸಂಸ್ಕೃತಿ

ಸೋನಿಯ ಶರಹತ್ ಎಂ.
ಸಂಶೋಧನಾ ವಿದ್ಯಾರ್ಥಿನಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ. ಮಾನಸಗಂಗೋತ್ರಿ
ಮೈಸೂರು–570006. msoniya30@gmail.com

ದಕ್ಷಿಣ ಕನ್ನಡ ಜಿಲ್ಲೆಯ ವಿಶಿಷ್ಠ ಜನಾಂಗಗಳಲ್ಲಿ ಒಂದು ಬ್ಯಾರಿ ಜನಾಂಗ, ಕ್ರಿ.ಶ. 644ರಲ್ಲಿ ಅರಬ್‌ನಿಂದ ಬಂದ ಅನೇಕ ಶ್ರೀಮಂತ ವ್ಯಾಪಾರಿಗಳಲ್ಲಿ ಸೇರಿದ್ದ ಬ್ಯಾರಿ ಜನಾಂಗಿಯರು ದಕ್ಷಿಣ ಕರಾವಳಿಯ ಮಂಜೇಶ್ವರಕ್ಕೆ ಮೊದಲ ಹೆಜ್ಜೆ ಇಟ್ಟರು. ನಂತರ ಅಲ್ಲಿಂದ ಮಲಬಾರ್‌ಗೆ ಹೋಗಿ ಮಾಲಿಕ್ ದಿನಾರ್ ಎಂಬ ಮೊದಲ ಮಸೀದಿಯನ್ನು ನಿರ್ಮಿಸಿದರು. ಅರಬ್ ಮಿಷನರಿ "ಮಾಲಿಕ್ ಬಿನ್ ದೀನಾರ್" ವ್ಯಾಪಾರಕ್ಕಾಗಿ ಮಂಗಳೂರಿಗೆ ಬಂದು ಬಂದರು ಪ್ರದೇಶದಲ್ಲಿ ಜನಪ್ರಿಯ ಜಮ್ಮಾ ಮಸೀದಿ "ಜೀನತ್ ಬಕ್ಷ್"ನ್ನು ಸ್ಥಾಪಿಸಿದರು. ಅನೇಕ ಸಂಪ್ರದಾಯ ಹಾಗೂ ವಿಶಿಷ್ಟ ಸಂಸ್ಕೃತಿಯನ್ನು ಬ್ಯಾರಿ ಸಮುದಾಯ ಹೊಂದಿತ್ತು. ಸಾಂಪ್ರದಾಯಿಕವಾಗಿ ಕುಪ್ಪಾಲಿಯ ಮತ್ತು ತುಳು ಉಟ್ಟವರನ್ನು ಬ್ಯಾರಿ ಮಹಿಳೆ ಎನ್ನಲಾಗುತ್ತದೆ. ಬ್ಯಾರಿ ಎಂಬ ಪದವು ತುಳು ಭಾಷೆಯ ಬ್ಯಾರ (ವ್ಯಾಪಾರ) ದಿಂದ ಬಂದಿದೆ ಎಂಬ ಉಲ್ಲೇಖಗಳಿದ್ದರೂ ಕೆಲವೊಂದು ದಾಖಲೆಗಳು ಬ್ಯಾರಿ ಎಂಬ ಪದವು ಅರೇಬಿಕ್‌ನ ಪದ ಎಂಬ ಉಲ್ಲೇಖಗಳಿವೆ. ಬ್ಯಾರಿ ಭಾಷೆಯನ್ನು "ನಕ್ಕ ನಿಕ್ಕ" ಎಂದು "ಬ್ಯಾರಿ ಪಲಕ" ಎಂದು ಕರೆಯುತ್ತಾರೆ. ಬ್ಯಾರಿಗಳ ಮುಖ್ಯ ಕಸುಬು ವ್ಯಾಪಾರವಾಗಿದ್ದು, 1891 ರ ಸಂದರ್ಭದಲ್ಲಿ 97.3% ಬ್ಯಾರಿಗಳು ವ್ಯಾಪಾರಿಗಳಾಗಿದ್ದರು, ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆ ಮುಸ್ಲಿಂ ಜನಸಂಖ್ಯೆಯಲ್ಲಿ 80% ಬ್ಯಾರಿಗಳಿದ್ದಾರೆ. ಇವರು ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ, ಬ್ಯಾರಿಗಳು ನವಾಯಿತ್ ಹಾಗೂ ಕೇರಳದಲ್ಲಿ ಮಾಪಿಳ್ಳ ಎಂಬ ಹೆಸರಿನಿಂದ ಗುರುತಿಸಲ್ಪಡುತ್ತಾರೆ. ಕ್ರಿ.ಶ. 1ನೇ ಶತಮಾನದಿಂದಲೇ ಮಲಬಾರ್, ತುಳುನಾಡ ಕರಾವಳಿಗೂ ಅರಬರಿಗೂ ವ್ಯಾಪಾರ ಸಂಬಂಧವಿದ್ದ ನೆಲೆಯು ಇದ್ದಿತು. ಅರಬರು ಸ್ಥಳೀಯ ಮಹಿಳೆಯರನ್ನು ಮದುವೆಯಾಗಿ ನೆಲೆಸಿದ್ದ ಜನವರ್ಗವೇ ಬ್ಯಾರಿ ಅರಬರು ಕರಾವಳಿಯಲ್ಲಿ ಸೋರ್ಸುಗೀಪರು ಅಧಿಕಾರ ಹಿಡಿದ ತನಕ ವ್ಯಾಪಾರಗಳಲ್ಲಿ ಹಿಡಿತ ಸಾಧಿಸಿದ್ದರು. ಬ್ಯಾರಿ ಭಾಷೆಯಾಡುವವರು ಬ್ಯಾರಿಗಳೆಂದು ಮಲಬಾರಿನ ಮಲಯಾಳಿ ಮಾತನಾಡುವವರು ಮಾಪಿಳ್ಳೆಯಿವರು. ಕೋರ ಮಲಬಾರ ಪ್ರದೇಶದ ತಮಿಳು ಮುಸ್ಲಿಮರು ಲಬ್ಬೈಗಳೆಂದು ಕರೆಯಲ್ಪಟ್ಟರು. ಕರಾವಳಿಯ ತಲಮೂಲ ಸಮುದಾಯಗಳಾದ ಬಿಲ್ಲವ, ಮೊಗವೀರ, ಮುಕ್ವ, ಆರ್ಥಿಕವಾಗಿ ಹಿಂದುಳಿದಿರುವ ಹೈಂದವ ಅರಬ್ಬು ಮುಸ್ಲಿಮರ ಆರ್ಥಿಕ ಬಲ ಹಾಗೂ ಆ ಧರ್ಮದ ಜಾತಿ ನಿರಪೇಕ್ಷ ಹಾಗೂ ಭ್ರಾತೃತ್ವದ ಉದಾರತೆಗೆ ಮನಸೋತು ಮತಾಂತರಗೊಂಡರು. ಬ್ಯಾರಿ ಎಂಬ ಪದ, ಬಹಾರಿ ಎಂಬ ಪದದಿಂದಲ್ಲ, ಆದರೆ ಕೆಲ ಮೂಲಗಳು ಬ್ಯಾರಿ ಪದಗಳಲ್ಲಿ ಶೇ. 50 ಕ್ಕೂ ಹೆಚ್ಚು ಪದಗಳು ತುಳುವಿನಿಂದ ಬಂದಿವೆ ಎಂಬುದಕ್ಕೆ ದಾಖಲೆಗಳಿವೆ.

ಒಟ್ಟಾರೆ ಹೇಳುವುದಾದರೆ, ಬ್ಯಾರಿಗಳು ತಮ್ಮದೇ ಆದ ವಿಶೇಷ ಸಂಸ್ಕೃತಿಯನ್ನು ಹೊಂದಿದ್ದಾರೆ ಎನ್ನಬಹುದು. ಒಬ್ಬೊಮ್ಮೆ ಬ್ಯಾರಿ ಎಂದು ಕರೆಸಿಕೊಳ್ಳುವುದನ್ನು ಅವಮಾನ ಎಂದು ಪರಿಗಣಿಸುತ್ತಿದ್ದ ಬ್ಯಾರಿಗಳು ಇಂದು ತಾನೊಬ್ಬ ಬ್ಯಾರಿ ಎಂದು ಅಭಿಮಾನದಿಂದ ಹೇಳಿಕೊಳ್ಳುವ ಹಾಗೆ ಆಗಿರುವುದು ಸಾಧಾರಣ ಬೆಳವಣಿಗೆಯೇನೂ ಅಲ್ಲ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ಹೊಂದುತ್ತಿರುವ ಬ್ಯಾರಿಗಳು ತಮ್ಮ ಸಮಾಜ ಮತ್ತು ಸಂಸ್ಕೃತಿಯನ್ನು ಕೂಡ ಉಳಿಸಿ, ಬೆಳೆಸಿಕೊಂಡು ಹೋಗುವ ಹಾಗೆ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಸಾಕಷ್ಟು ಮಾಡುತ್ತಿರುವುದು ಅಭಿನಂದನೀಯ.

ಸಮುದಾಯ ಹೊಂದಿತ್ತು. ಸಾಂಪ್ರದಾಯಿಕವಾಗಿ ಕುಪ್ಪಾಯ ಮತ್ತು ತುಣಿ ಉಟ್ಟವರನ್ನು ಬ್ಯಾರಿ ಮಹಿಳೆ ಎನ್ನಲಾಗುತ್ತದೆ.

ಬ್ಯಾರಿ ಎಂಬ ಪದವು ತುಳು ಭಾಷೆಯ ಬ್ಯಾರ (ವ್ಯಾಪಾರ) ದಿಂದ ಬಂದಿದೆ ಎಂಬ ಉಲ್ಲೇಖಗಳಿದ್ದರೂ ಕೆಲವೊಂದು ದಾಖಲೆಗಳು ಬ್ಯಾರಿ ಎಂಬ ಪದವು ಅರೇಬಿಕ್‌ನ ಪದ ಎಂಬ ಉಲ್ಲೇಖಗಳಿವೆ. ಬ್ಯಾರಿ ಭಾಷೆಯನ್ನು "ನಕ್ಕ್ ನಿಕ್ಕ್" ಎಂದು "ಬ್ಯಾರಿ ಪಲಕ" ಎಂದು ಕರೆಯುತ್ತಾರೆ. ಬ್ಯಾರಿಗಳ ಮುಖ್ಯ ಕಸುಬು ವ್ಯಾಪಾರವಾಗಿದ್ದು, 1891 ರ ಸಂದರ್ಭದಲ್ಲಿ 97.3% ಬ್ಯಾರಿಗಳು ವ್ಯಾಪಾರಿಗಳಾಗಿದ್ದರು.

ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆ ಮುಸ್ಲಿಂ ಜನಸಂಖ್ಯೆಯಲ್ಲಿ 80% ಬ್ಯಾರಿಗಳಿದ್ದಾರೆ. ಇವರು ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ, ಬ್ಯಾರಿಗಳು ನವಾಯತ್ ಹಾಗೂ ಕೇರಳದಲ್ಲಿ ಮಾಪಿಳ್ಳ ಎಂಬ ಹೆಸರಿನಿಂದ ಗುರುತಿಸಲ್ಪಡುತ್ತಾರೆ. ಕ್ರಿ.ಶ. 1ನೇ ಶತಮಾನದಿಂದಲೇ ಮಲಬಾರ್, ತುಳುನಾಡ ಕರಾವಳಿಗೂ ಅರಬರಿಗೂ ವ್ಯಾಪಾರ ಸಂಬಂಧದ ನಂಟು ಇದ್ದಿತು. ಅರಬರು ಸ್ಥಳೀಯ ಮಹಿಳೆಯರನ್ನು ಮದುವೆಯಾಗಿ ಏರ್ಪಟ್ಟ ಜನವರ್ಗವೇ ಬ್ಯಾರಿ ಅರಬರು ಕರಾವಳಿಯಲ್ಲಿ ಪೋರ್ಚುಗೀಸರು ಅಧಿಕಾರ ಹಿಡಿದ ತನಕ ವ್ಯಾಪಾರಗಳಲ್ಲಿ ಹಿಡಿತ ಸಾಧಿಸಿದ್ದರು. ಬ್ಯಾರಿ ಭಾಷೆಯಾಡುವವರು ಬ್ಯಾರಿಗಳೆಂದು ಮಲಬಾರಿನ ಮಲಯಾಳಂ ಮಾತನಾಡುವವರು ಮಾಪಿಳ್ಳೆಯವರು. ಕೋರ ಮಂಡಲ ಪ್ರದೇಶದ ತಮಿಳು ಮುಸ್ಲಿಮರು ಲಬ್ಬೈಗಳೆಂದು ಕರೆಯಲ್ಪಟ್ಟರು. ಕರಾವಳಿಯ ತಲಮೂಲ ಸಮುದಾಯಗಳಾದ ಬಿಲ್ಲವ, ಮೊಗವೀರ, ಮುಕ್ಕವ, ಆರ್ಥಿಕವಾಗಿ ಹಿಂದುಳಿದಿರುವ ಜೈನರು ಅರಬ್ಬ ಮುಸ್ಲಿಮರ ಆರ್ಥಿಕ ಬಲ ಹಾಗೂ ಆ ಧರ್ಮದ ಜಾತಿ ನಿರಸನ ಹಾಗೂ ಭ್ರಾತೃತ್ವದ ಉದಾರತೆಗೆ ಮನಸೋತು ಮತಾಂತರಗೊಂಡರು. ಬ್ಯಾರಿ ಎಂಬ ಪದ, ಬಹಾರಿ ಎಂಬ ಪದದಿಂದಲ್ಲ, ಆದರೆ ಕೆಲ ಮೂಲಗಳು ಬ್ಯಾರಿ ಪದಗಳಲ್ಲಿ ಶೇ. 50 ಕ್ಕೂ ಹೆಚ್ಚು ಪದಗಳು ತುಳುವಿನಿಂದ ಬಂದಿದೆ ಎಂಬಂತಹ ದಾಖಲೆಗಳಿವೆ.

ಬ್ಯಾರಿಗಳು ಲಾಗಾಯ್ತಿನಿಂದ ಮಲಯಾಳ ಲಿಪಿಗಿಂತ ಬೇರೆಯಾದ ಬಟ್ಟೆ ಲಿಪಿಯನ್ನು ಬಳಸುತ್ತಿದ್ದರು. ಹೆಚ್ಚಿನ ವ್ಯಾಪಾರಿಗಳು ಬ್ಯಾರಿಗಳಾಗಿದ್ದ ಕಾರಣ ಇಡೀ ಸಮುದಾಯಕ್ಕೆ ಈ ಹೆಸರು ಬ್ಯಾರಿ ಎಂದು ಹೆಸರು ಬಂತು. ಮುಸ್ಲಿಮರು ಅರವ್ ಮತ್ತು ಪರ್ಷಿಯನ್ ಮೂಲದಿಂದ ಬಂದಿದ್ದರಿಂದ ಅವರ ಸಾಮಾನ್ಯ ಕಸುಬು ವ್ಯಾಪಾರವಾಗಿತ್ತು. ಕೆನರಾ ಜಿಲ್ಲೆಯ ನದಿ ಮತ್ತು ತೊರೆಗಳ ಜಾಲವನ್ನು ಹೊಂದಿದ ದೋಣಿಯ ಹೊರತಾಗಿ ಅವರಿಗೆ ಯಾವುದೇ ಸಂಪರ್ಕ ಸಾಧನಗಳು ಲಭ್ಯವಿರಲಿಲ್ಲ. ಹುಟ್ಟು ಹಾಕುವುದು ಮುಸ್ಲಿಮರ ಸಾಮಾನ್ಯ ಕಸುಬಾಗಿತ್ತು. ಹಾಗಾಗಿ ವ್ಯಾಪಾರದ ಮೇಲೆ ಅವರ ಸ್ವಾಮ್ಯವಿತ್ತು. ಮುಸ್ಲಿಮ್ ವರ್ತಕರ ಸಂಘವನ್ನು ಹಂಜುಮನ್‌ಗಳು ಎಂದು ಕರೆಯಲಾಗುತ್ತಿದ್ದು. ಹಂಜುಮಾನ್ ಎಂದರೆ ಅಪಭ್ರಂಶ ಸಂಘ. ಕ್ಲಬ್, ಸೊಸೈಟಿ ಎಂಬ ಅರ್ಥವು ಇದೆ. ಬಾರ್ಕೂರು ಮತ್ತು ಮಂಗಳೂರಿನಲ್ಲಿ ಎರಡು ವರ್ತಕ ಸಂಘಗಳಿದ್ದವು. ಶಿಲಾಫಲಕಗಳಲ್ಲಿ ಹಂಜುಮಾನ್‌ಗಳನ್ನು ನಖರಾ ಹಂಜುಮಾನ್‌ಗಳೆಂದು ಉಲ್ಲೇಖಿಸಲಾಗಿದೆ. ಕ್ರಿ.ಶ. 1427 ರಲ್ಲಿ ಉತ್ತರ ಕೆನರಾ ಜಿಲ್ಲೆಯ ಕಾಯ್ಕಿಣಿ ಎಂಬಲ್ಲಿ ದೊರೆತ ಶಿಪಾಫಲಕದ ಪ್ರಕಾರ ಉಮರ ಮರ್ಕಲ ಎಂಬುವರು ವರ್ತಕರ ಸಂಘದ ಮುಖ್ಯಸ್ಥರಾಗಿದ್ದರು. ಆರಂಭದ ಕಾಲದಲ್ಲಿ ಮುಸ್ಲಿಮರು ಕೆಳ ಜಾತಿಯಿಂದ ಮತಾಂತರ ಗೊಂಡವರಾಗಿದ್ದು. ಪ್ರದೇಶದ ಇತರ ಜನರೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡಿದ್ದರು. ಸ್ಥಳೀಯರೊಂದಿಗೆ ಬ್ಯಾರಿಗಳು ಹೊಂದಿದ್ದ ಸಂಬಂಧದ ಬಗ್ಗೆ ಪಾಡ್ದನಗಳಲ್ಲಿ ಉಲ್ಲೇಖವಿದೆ.

ಬ್ಯಾರಿಗಳು ವರ್ತಕ ಸಮುದಾಯದವರಾಗಿದ್ದರಿಂದ ನದಿ ತೀರದಲ್ಲಿ ಹಾಗೂ ಹಿನ್ನೀರಿಗೆ ಅಂಟಿಕೊಂಡು ಇವರು ಕರಾವಳಿ ಪ್ರದೇಶದಲ್ಲಿ ನೆಲಸಿದರು. ದಕ್ಷಿಣ ಕನ್ನಡದ ಮುಸ್ಲಿಮರಲ್ಲಿ ಸುಮಾರು 80 ರಷ್ಟು ಬ್ಯಾರಿಗಳಿದ್ದು ಇವರು ತುಳುನಾಡಿನ ಸಂಸ್ಕೃತಿಯಿಂದ ಬೆರೆತಿದ್ದಾರೆ. ಇವರು ಇಸ್ಲಾಮಿನ ಜೀವನ ಶೈಲಿಯನ್ನು ಸ್ವೀಕರಿಸಿದವರಾಗಿದ್ದು, ಮಲಬಾರಿನ ದೀನಾರ್ ಶಾಲೆಯಲ್ಲಿ ತಮ್ಮ ಇಸ್ಲಾಮೀ ಚಟುವಟಿಕೆಯನ್ನು ನಡೆಸುತ್ತಿದ್ದರು. ಮೌಲ್ವಗಳು ಇವುಗಳಿಗೆ ನಾಯಕತ್ವವನ್ನು ನೀಡುತ್ತಿದ್ದರು. ಬ್ಯಾರಿಗಳ, ಮಾಪಿಳ್ಳರ ಮೇಲಿನ ಅವಲಂಬನೆಯು ಈ ಮಾಪಿಳ್ಳರು ತುಳುನಾಡಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುವಂತಾಯ್ತು. ಜಮಾತ್ ಮತ್ತು ಸಂಪ್ರದಾಯ ಮತ್ತು ಇಸ್ಲಾಮೀ ಆಚರಣೆಗಳು ಈ ಮಾಪಿಳ್ಳೆಗಳ ಮಾರ್ಗದರ್ಶನದಿಂದ ಪಡೆಯುತ್ತಿದ್ದರು.

ಬ್ಯಾರಿಗಳ ಆಚರಣೆಗಳು ಸಾಹಿತ್ಯ ಹಾಗೂ ಧಾರ್ಮಿಕ ವಿಧಿಗಳು ಮಾಪಿಳ್ಳ ಶೈಲಿಯಲ್ಲಿದ್ದವು. ಆದರೆ ಈ ರೀತಿಯ ಸಾಂಸ್ಕೃತಿಕ ಸಮ್ಮಿಲನವು ಬ್ಯಾರಿಗಳಿಗೆ 20ನೇ ಶತಮಾನದಲ್ಲೂ ಇಷ್ಟವಾಗಿರಲಿಲ್ಲ. ಬ್ಯಾರಿಗಳಲ್ಲಿ ಇಲ್ಲಮ್ ಎಂಬ ಒಂದು ಪದ್ಧತಿಯಿದ್ದು, ಈ ಪದ್ಧತಿಯು ಇಲ್ಲಿನ ಪ್ರಾಂತೀಯ ಜಾತಿಗಳಲ್ಲಿ ಬಲಿ ಅಥವಾ ಬರಿ ಎಂದು ಪ್ರಸಿದ್ಧಿ ಪಡೆದಿತ್ತು. ಮಲಬಾರಿನಲ್ಲಿ ಈ ಮಾತೃ ವಂಶಸ್ಥ ಸಂಪ್ರದಾಯವು ಉತ್ತರದ ಮಲಬಾರಿನ, ಮುಸ್ಲಿಮರಲ್ಲಿ ಮತ್ತು ಲಕ್ಷದ್ವೀಪ ಮತ್ತು ಅಮಿನ್ ದೇವಿ ದ್ವೀಪಗಳಲ್ಲಿ ಕಾಣಸಿಗುತ್ತಿತ್ತು. ಅರಕ್ಕೋಲ್ ರಾಜವಂಶಸ್ಥರು ಇದಲ್ಲೆ ಮುಖ್ಯ ಸಾಕ್ಷಿಯಾಗಿದೆ. ಬ್ಯಾರಿಗಳನ್ನು ಹಲವು ಇಲ್ಲಮ್‌ಗಳಿದ್ದು ಪ್ರತಿಯೊಂದು ಇಲ್ಲಮ್ ಗುಣ ಒಂದೊಂದು ದರ್ಜೆ ಇರುತ್ತದೆ. ಇಲ್ಲಮ್‌ನ ದರ್ಜೆಯನ್ನು ಅಳೆಯುವ ಮಾಪನವೆಂದರೆ ಮದುವೆ ಸಂದರ್ಭದಲ್ಲಿ ತಮ್ಮ ಮಕ್ಕಳಿಗೆ ಎಷ್ಟು ಮೆಹರನ್ನು ನಿಗದಿ ಪಡಿಸುತ್ತಾರೆ ಎಂಬ ವಿಚಾರದಲ್ಲಿ ಆಗಿತ್ತು. ಆರಂಭದ ದಿನಗಳಲ್ಲಿ ಅಕ್ಕಿಯು ಬ್ಯಾರಿಗಳ ಪ್ರಮುಖ ವ್ಯಾಪಾರ ಸರಕಾಗಿತ್ತು. ಮಲಬಾರ್, ಮೂಳ್ಕ, ಮುಂಬಾಯಿ, ಕುಂಬಳೆ, ಮಂಗಳೂರು, ಮೊದಲಾದ ಪ್ರಮುಖ ಬಂದರುಗಳಾಗಿದ್ದವು. ಹಲವಾರು ಮುಸ್ಲಿಮರು ಅಕ್ಕಿ ವ್ಯಾಪಾರದಿಂದಾಗಿ ಬೆಳೆದು ಬಂದವರಾಗಿದ್ದು, ದೊಡ್ಡ ದೊಡ್ಡ ಬಂಡಸಾಲೆಗಳನ್ನು ಹೊಂದಿದ್ದರು.

ದಕ್ಷಿಣ ಕನ್ನಡದ ಇತಿಹಾಸದಲ್ಲಿ ಬ್ಯಾರಿಗಳ ಮಾಹಿತಿ ಅಸ್ಪಷ್ಟ "ಕ್ರ.ಶ. 926ರ ರಾಷ್ಟ್ರಕೂಟ ದೊರೆ ಮೂರನೇ ಇಂದ್ರರಾಜನ ಕಾಲದ ಚಿಂಚಣಿ ತಾಮ್ರ ಪತ್ರವು ತಾಜೇಕ ಮಧುಮತ "ಮಹಮ್ಮದ್ "

ಎಂಬಾತನು ಸಾಗರತಟದ ದೊರೆಯನ್ನು ಸೋಲಿಸಿ ಕೃಷ್ಣರಾಜನ ಕೃಪೆಗೆ ಪಾತ್ರನಾದನು ಎಂದು ಹೇಳುತ್ತದೆ" ಎಂದು ಬ್ಯಾರಿ ಭಾಷಾ ಸಂಶೋಧಕ ಪ್ರೊ.ಇಚ್ಲಂಗೋಡು ಅವರು ಬರೆದಿದ್ದಾರೆ. ಆ ಕಾಲದಲ್ಲಿ ಕರಾವಳಿಯಲ್ಲಿ ಇದ್ದ ಮುಸಲ್ಮಾನರೆಂದರೆ ಬ್ಯಾರಿಗಳೇ ಆಗಿರಬೇಕು. ಹಾಗಾಗಿ ಬ್ಯಾರಿಗಳ ಇತಿಹಾಸ ಅದಕ್ಕೂ ಹಿಂದಿನದೆಂದು ಹೇಳಬಹುದು. ಕರಾವಳಿಯಲ್ಲಿ ಕ್ರಿ.ಶ.634–645ರ ಅವಧಿಗಿಂತ ಮುನ್ನ ಇಸ್ಲಾಮ್ ಧರ್ಮ ಭಾರತದಲ್ಲಿ ಕಾಲೂರಿದ್ದು ಸಂಶಯವೆಂದು ಇತಿಹಾಸಕಾರರು ಹೇಳುತ್ತಾರೆ. ಆದರೆ ಇಸ್ಲಾಮ್ ಧರ್ಮವು ಸ್ಥಾಪನೆಯಾದ ಕೆಲವೇ ದಶಕಗಳಲ್ಲಿ ಅರಬರೊಂದಿಗೆ ಪ್ರಾಚೀನಕಾಲದಿಂದಲೂ ವ್ಯವಹಾರ ನಡೆಸುತ್ತಿದ್ದ ಭಾರತದ ದಕ್ಷಿಣ ಕಾರವಳಿಯಲ್ಲಿ ಕಾಲಿಟ್ಟಿರಬಹುದಾದ ಕಾರಣ ಆ ಸಂದರ್ಭದಲ್ಲಿಯೇ ಬ್ಯಾರಿಗಳು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದಿರಲೂ ಬಹುದು. ಅಂದರೆ ಬ್ಯಾರಿ ಜನಾಂಗದ ಉದಯ ಕ್ರಿ.ಶ. ಪೂರ್ವದಲ್ಲಿಯೇ ಆಗಿದ್ದಿರಬೇಕೆಂದು ಪ್ರೊ.ಇಚ್ಲಂಗೋಡು ಅಭಿಪ್ರಾಯ ಪಡುತ್ತಾರೆ.

ಬ್ಯಾರಿಗಳು ಇಸ್ಲಾಮಿನ ಮುಖ್ಯ ಪಂಗಡಗಳಲ್ಲೊಂದಾದ ಶಾಫಿ ಪಂಗಡಕ್ಕೆ ಸೇರಿದವರು. ಕರ್ನಾಟಕದ ಭಾಗವೇ ಆಗಿದ್ದರೂ, ತುಳುನಾಡ ಪರಿಸರದಲ್ಲಿದ್ದರೂ, ಬ್ಯಾರಿ ಸಮುದಾಯ ಸಾಂಸ್ಕೃತಿಕವಾಗಿ ತನ್ನತನವನ್ನು ಉಳಸಿಕೊಂಡು ಬಂದಿದೆ. ಎಲ್ಲ ಸಮುದಾಯಗಳಲ್ಲೂ ಹಳೆಯ ಸಂಪ್ರದಾಯ, ಪರಂಪರೆ, ಆಚಾರ ಪದ್ಧತಿಗಳು ಕಾಲಕ್ರಮೇಣ ಸಹಜವಾಗಿಯೇ ಬದಲಾಗುತ್ತಾ ಹೊಸತನವನ್ನು ಅಪ್ಪಿಕೊಳ್ಳುವ ಸಂದರ್ಭದಲ್ಲಿ ಹಳೆಯವುಗಳು ಮರೆಯಾಗುತ್ತ ಬಂದಂತೆ ಬ್ಯಾರಿ ಸಂಸ್ಕೃತಿಯೂ ಬದಲಾವಣೆಗೆ ಒಳಗಾಗಿದೆ.

ಹಿಂದಿನ ಕಾಲದಲ್ಲಿ ಮದುವೆ ಸಂದರ್ಭದಲ್ಲಿ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದ 'ತಾಲ' ಆಚರಣೆ ಈಗ ತನ್ನ ಸ್ವರೂಪವನ್ನೇ ಕಳೆದುಕೊಂಡುಬಿಟ್ಟಿದೆ. ಮದುವೆಯ ಸಂಭ್ರಮಕ್ಕೆ ಕಳೆ ನೀಡುತ್ತಿದ್ದ ಒಪ್ಪನೆ ಪಾಟ್ ಈಗ ಔಟ್ ಡೇಟೆಡ್ ಆಗಿದೆ. ಮಕ್ಕಳಿಗೆ ಅಜ್ಜಿಯರು ಹೇಳುತ್ತಿದ್ದ ಮಸಲೆಗಳು ಅಂದರೆ ಅಜ್ಜಿಕತೆಗಳು ಅಜ್ಜಿಯರ ಸಂಪರ್ಕವೇ ಇಲ್ಲದ ಕಾರಣ ಮಕ್ಕಳಿಗೆ ಮರೀಚಿಕೆಯಾಗಿವೆ. ಅಮ್ಮಂದಿರ ಲಾಲಿ ಹಾಡು ಕೇಳುವ ಭಾಗ್ಯ ಎಷ್ಟು ಮಕ್ಕಳಿಗೆ ದಕ್ಕುತ್ತಿದೆಯೋ ಗೊತ್ತಿಲ್ಲ.

ಹಿಂದೆ ಬ್ಯಾರಿ ಹೆಣ್ಣುಮಕ್ಕಳು ವಿವಿಧ ರೀತಿಯ ಆಭರಣಗಳನ್ನು ಧರಿಸುತ್ತಿದ್ದರು. ತಲೆಯನ್ನು ಸಿಂಗರಿಸುತ್ತಿದ್ದ ತಲೆ ಸಿಂಗಾರ, ಕೇದಗೆ, ಕೊಕಟ್ಟ್, ಜಡೆಪೊಲ್ಲ, ಕುರಿ, ಚೌರಿ, ಕಿವಿಗಳಲ್ಲಿ ಜೋತಾಡುತ್ತಿದ್ದ ಕೊಪ್ಪು ಸರಪೊಲಿ, ಅಲಿಕಾತ್, ಆರೊಲಿ, ಕುಡುಕ, ಕೈಗಳಲ್ಲಿ ಹೊಳೆಯುತ್ತಿದ್ದ ಎದರ್ ಒಲೆ, ಸುರ್ಗಿಪಿರಿ ಮುರ್ಗಿಪಿರಿ, ಎಡಬಲೆ, ತಟ್ಟ್ ಬಲೆ, ಕತ್ತಿನಲ್ಲಿ ಎದ್ದು ಕಾಣಿತ್ತಿದ್ದ ತಾಳಮಾಲೆ, ಮಿಸಿರಿಡೊ ಮಾಲೆ, ಪೊಮಾಲೆ, ಒಟ್ಟು ಉರುಕು, ಚಾವಡ ನಡುವಿಗೆ ಕಟ್ಟುತ್ತಿದ್ದ ನಡುಪಟ್ಟಿ, ಅರಞನ, ಅರಪಟ್ಟಿ, ಇತ್ಯಾದಿ ಆಭರಣಗಳ ಪೈಕಿ ಬಹುತೇಕ ಆಭರಣಗಳ ಹೆಸರುಗಳೇ ಈಗ ನೆನಪಾಗುತ್ತಿಲ್ಲ.

ಬ್ಯಾರಿ ಹೆಣ್ಣುಮಕ್ಕಳು ತಲೆಗೆ ಧರಿಸುವ ಬಟ್ಟೆ ಕೊಡುವ ಮಹಿಳೆಯರ ತಲೆವಸ್ತ್ರದ ರೀತಿಯಲ್ಲೇ ಇತ್ತು ಎಂಬುದು ಗಮನಾರ್ಹ, ಎದುರು ಭಾಗದಲ್ಲಿ ಕುಸುರಿ ಕೆಲಸ ಮಾಡಲಾದ ಉದ್ದ ತೋಳಿನ ಕುಪ್ಪಾಯ, ಮುಂದಿನಂತೆ ಸುತ್ತಿಕೊಂಡ ಸೀರೆ ಸಾಮಾನ್ಯ ಉಡುಪಾಗಿತ್ತು. ಮದುವೆ ಮತ್ತಿತರ ವಿಶೇಷ ಸಂದರ್ಭದಲ್ಲಿ ರೇಷ್ಮೆ ಸೀರೆ ಉಡುತ್ತಿದ್ದರು. ಗಂಡಸರು ಬಣ್ಣ ಬಣ್ಣದ ಚೌಕಗಳಿರುವ ಮುಂಡು ಅಥವಾ ಪಂಚೆ ಹಾಗೂ ಶರಟು ಹಾಕಿಕೊಂಡು ಮೇಲೆ ಕೋಟನ್ನು ಹಾಕಿಕೊಳ್ಳುತ್ತಿದ್ದರು. ತಲೆಗೆ ರುಮಾಲು ಅಥವಾ ಬೇರೆ ಬೇರೆ ರೀತಿಯ ಟೊಪಿಗಳನ್ನು ಇಟ್ಟುಕೊಳ್ಳುತ್ತಿದ್ದರು.

ಶಿಕ್ಷಣದ ಬಗ್ಗೆ ಕಳೆದ ಐದಾರು ದಶಕಗಳ ಹಿಂದೆ ಬ್ಯಾರಿಗಳಿಗೆ ಏನೇನೊ ಆಸಕ್ತಿ ಇರಲಿಲ್ಲ. ಲೋವರ್ ಸೆಕೆಂಡರಿವರೆಗೆ ಓದಿದವರ ಸಂಖ್ಯೆಯೇ ಕಡಿಮೆ ಇತ್ತು. ಮುಂದಿನ ದಿನಗಳಲ್ಲಿ ಬಡತನ ನಿವಾರಣೆಗಾಗಿ ಕೆಲಸ ಹುಡುಕಿಕೊಂಡು ಗಲ್ಫ್ ರಾಷ್ಟ್ರಗಳಿಗೆ ಹೋದ ಬ್ಯಾರಿಗಳು ತಮ್ಮ ಮಕ್ಕಳಿಗೆ ಹೆಚ್ಚಿನ ಶಿಕ್ಷಣ ಕೊಡಿಸುವಲ್ಲಿ ಆಸಕ್ತಿ ತೋರುತ್ತಾ ಬಂದರು. ಇದು ಇತರ ಸ್ಥಳೀಯ ಬ್ಯಾರಿಗಳಿಗೂ ಪ್ರೇರಣೆ ನೀಡಿದ ಕಾರಣ ಇತ್ತೀಚಿನ ವರ್ಷಗಳಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಹೆಣ್ಣು ಮಕ್ಕಳು ಕೂಡ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆಯುತ್ತಿದ್ದಾರೆ. ಬ್ಯಾರಿ ಯುವಜನರು ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣದಲ್ಲೂ ಮುಂದೆ ಬರುತ್ತಿದ್ದಾರೆ. ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿಕೊಳ್ಳುತ್ತಿದ್ದಾರೆ. ಹೆಚ್ಚಿನ ಬ್ಯಾರಿ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುತ್ತಿರುವುದು ಮಾತ್ರವಲ್ಲದೆ ರ್‍ಯಾಂಕ್ ಕೂಡ ಗಳಸುತ್ತಿರುವುದು ಈ ಜನಾಂಗ ಶಿಕ್ಷಣಕ್ಕೆ ನೀಡುತ್ತಿರುವ ಮಹತ್ವಕ್ಕೆ ಸಾಕ್ಷಿ ಎನ್ನಬಹುದು.

ಸುಮಾರು ೩೦ ಲಕ್ಷದಷ್ಟು ಜನಸಂಖ್ಯೆ ಹೊಂದಿರುವ ಹಾಗೂ ಮುಸ್ಲಿಮ್ ಸಮುದಾಯದ ಪೈಕಿ ಒಂದು ಜನಾಂಗವಾಗಿರುವ ಬ್ಯಾರಿಗಳು. ಮೊದಲು ಕೇರಳದ ಚಂದ್ರಗಿರಿ ನದಿ ತೀರದಿಂದ ಕರ್ನಾಟಕದ ಬಾರ್‌ಕೂರ್‌ವರೆಗೆ ವ್ಯಾಪಿಸಿದ್ದರೂ, ಈಗ ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ, ಮಡಿಕೇರಿ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಬೆಂಗಳೂರು, ಪೋರ್‌ಬಂದರ್ ಮುಂಬೈ, ಚೆನ್ನೈ, ಹೈದರಾಬಾದ್ ಇತ್ಯಾದಿ ಪ್ರದೇಶಗಳಲ್ಲಿ ವಾಸಿಸುವುದಲ್ಲದೆ ಗಲ್ಫ್ ರಾಷ್ಟ್ರಗಳು, ಇಂಗ್ಲೆಂಡ್ ಅಮೇರಿಕಾ, ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್ ಇತ್ಯಾದಿ ರಾಷ್ಟ್ರಗಳಲ್ಲಿ ಕೂಡಾ ಉದ್ಯೋಗದಲ್ಲಿದ್ದಾರೆ. ಬ್ಯಾರಿ ಜನಾಂಗ, ಬ್ಯಾರಿ ಸಂಸ್ಕೃತಿಯ ಇತಿಹಾಸ ಮತ್ತು ಅವು ಬೆಳೆದು ಬಂದ ವಿವರಗಳ ಬಗ್ಗೆ ಹೆಚ್ಚಿನ ಬ್ಯಾರಿಗಳು ತಿಳಿದು ಕೊಂಡಿರುವುದು ಕಡಿಮೆ. ದಕ್ಷಿಣ ಭಾರತದ ಮುಸಲ್ಮಾನರು ಅಂದರೆ ಬ್ಯಾರಿ ಮುಸಲ್ಮಾನರು ಹೆಚ್ಚಾಗಿ ಇವುಗಳಲ್ಲಿ ಎರಡನೆಯ ಹಾಗೂ ಮೂರನೆಯ ವರ್ಗಕ್ಕೆ ಸೇರಿದವರು, ಹೀಗಾಗಿ ಇಸ್ಲಾಂ ಧರ್ಮಾನುಯಾಯಿಗಳಾಗಿದ್ದರೂ ಇಲ್ಲಿನ ಮುಸಲ್ಮಾನರು ಸ್ಥಳೀಯ ಸಂಸ್ಕೃತಿಯ ಹಲವಾರು ಅಂಶಗಳನ್ನು ಪೋಷಿಸಿಕೊಂಡು ಬಂದಿದ್ದಾರೆ.

ಸಂಸ್ಕೃತಿಯ ತಾಯಿ ಬೇರುಗಳನ್ನು ತಡಕುತ್ತಾ ಹೋದಂತೆ ಬ್ಯಾರಿ ಸಮುದಾಯದ ಹಲವು ಕುತೂಹಲಕರ ಸಾಂಸ್ಕೃತಿಕ ವಿವರಗಳು ನನ್ನ ಗಮನಕ್ಕೆ ಬಂತು. ಅದರಲ್ಲಿ ಬಹುತೇಕ

ವಿವರಗಳು ಕರಾವಳಿಯ ತೌಳದ ಸಂಸ್ಕೃತಿಯ ಜತೆಗೆ ತಳುಕು ಹಾಕಿಕೊಂಡಿರುವುದೂ ಗಮನಾರ್ಹ.

ಸಾಕಷ್ಟು ಬ್ಯಾರಿ ಕುಟುಂಬಗಳು ಹಿಂದೆ ಕೃಷಿ ಪ್ರಧಾನ ಕುಟುಂಬಗಳಾಗಿದ್ದವು. ಕೃಷಿ ಕೇಂದ್ರಿತ ಬ್ಯಾರಿ ಕುಟುಂಬಗಳ ಅಂಗಳವನ್ನು ಸೆಗಣಿಯಿಂದ ಗುಡಿಸಿ ಸಾರಿಸಲಾಗುತ್ತಿತ್ತು. ಅಂಗಳದ ಮೂಲೆಯಲ್ಲಿ ಇರುತ್ತಿದ್ದ ಕೊಟ್ಟಗೆ ತುಂಬಾ ದನಗಳು, ಎಮ್ಮೆಗಳು, ಕೋಣಗಳನ್ನು ಸಾಕುವುದು ಮಾಮೂಲಾಗಿತ್ತು. ಕೃಷಿ ಮಾಡದ ಬ್ಯಾರಿ ಕುಟುಂಬಗಳೂ ದನಗಳನ್ನು ಹಾಲಿಗಾಗಿ ಸಾಕುತ್ತಿದ್ದುದು ಮಾಮೂಲಾಗಿತ್ತು. ನನ್ನದೂ ಕೃಷಿ ಮೂಲದ ಕುಟುಂಬ. ಹಿಂದೆಲ್ಲ ನಮ್ಮ ಪಕ್ಕದ ಮನೆಯ ತುಳುವರು ಬಲಿಯೇಂದ್ರನ ಪರ್ಬ ಮಾಡುತ್ತಿದ್ದುದು ನನಗೆ ಇನ್ನೂ ನೆನಪಿದೆ. ಗದ್ದೆಯಲ್ಲಿ ಭತ್ತದ ಹೊಸ ಬೆಳೆ ಬರುವಾಗಿನ ಸಂಭ್ರಮವದು. ನಾವೂ ಗದ್ದೆಗೆ ಹೋಗಿ ಹೊಸ ಭತ್ತದ ಕೊರಳನ್ನು ತಂದು ಚಾವಡಿಯ ಜಂತಿಗೆ ಕಟ್ಟುತ್ತಿದ್ದೆವು. ಅವತ್ತು ಪುದಿಯೂ ಅರಿಯ ಚಕ್ಕರೆ ಚೋರು, ತೆಂಗಿನ ಹಾಲಿನ ಅನ್ನ ಮಾಡುತ್ತಿದ್ದರು. ಹಾಗೆಯೇ ದೀಪಾಳಿಯ ಸಂದರ್ಭದಲ್ಲಿ ದನಕರುಗಳನ್ನು ಚೆನ್ನಾಗಿ ತಿಕ್ಕಿ ತೊಳೆದು ಸ್ನಾನ ಮಾಡಿಸಿ, ಬೇಲಿಯಲ್ಲಿ ಸಿಗುತ್ತಿದ್ದ ಮಿಠಾಯಿ ಹೂವಿನ ಮಾಲೆ ಹಾಕುತ್ತಿದ್ದೇವು. ಬೆಳಗ್ಗೆ ದನಕರುಗಳಿಗೆ ಇಡ್ಲಿ ತಿನ್ನಿಸುತ್ತಿದ್ದೆವು. ಹಲವು ಊರುಗಳಲ್ಲಿ ಬಿದಿರಿನಿಂದ ಬಿಳಿಯ ಬಣ್ಣದ ಸೀಲುಗಳನ್ನು ಹಾಕಿ ಅಲಂಕಾರ ಮಾಡಿ ಸಂಭ್ರಮಿಸುತ್ತಿದ್ದರು. ಮೇಕೆ, ಕುರಿಗಳ ಕುರಿತು ಬ್ಯಾರಿಗಳ ವಿಶೇಷ ಮೋಹಕ್ಕೆ ಒಂದು ಧಾರ್ಮಿಕ ಎಳೆಯೂ ಇದೆ.

ಕೃಷಿ ಭೂಮಿಯಲ್ಲಿ ದುಡಿಯವವರು ಇಲ್ಲವಾಗಿದ್ದಾರೆ. ಮೀಸೆ ಮೊಳೆಯುತ್ತಿದ್ದಂತೆಯೇ ಕೊಲ್ಲಿ ದೇಶಗಳ ಕಡೆಗೆ ಮುಖ ಮಾಡುವ ಬ್ಯಾರಿ ಯುವಜನರಿಂದಾಗಿ ಬಹುತೇಕ ಕುಟುಂಬಗಳು ಹೊಲ ಗದ್ದೆಗಳನ್ನು ಮಾರಾಟ ಮಾಡಿವೆ, ಮಾಡುತ್ತಿವೆ.

ಬ್ಯಾರಿಗಳ ಜನಸಾಂದ್ರತೆ ಹೆಚ್ಚಿರುವ ಕೆಲವು ಪ್ರದೇಶಗಳಲ್ಲಿ ದರ್ಗಾಗಳು ಇರುವುದೂ, ಅಲ್ಲಿ ಉರುಸ್ ನಡೆಯುವುದೂ ಸಾಮಾನ್ಯ. ಪರ್ಷಿಯಾ, ಅರೇಬಿಯಾ, ಅಫ್ಘಾನ್ ಮುಂತಾದ ದೂರ ದೇಶಗಳಿಂದ ಬಂದ ಸೂಫಿ ಸಂತರು ಇಲ್ಲಿ ನೆಲೆಸಿ ಇಲ್ಲಿನ ಜನಸಾಮಾನ್ಯರ ಮನಸ್ಸು ಗೆದ್ದು ಸುಖ ದುಃಖಗಳಲ್ಲಿ ಭಾಗಿಯಾಗಿ ಮೃತರಾದ ನಂತರವೂ ಗೌರವಾರ್ಹವಾಗಿರುವುದು ಬ್ಯಾರಿ ಪ್ರದೇಶಗಳ ಸಾಂಸ್ಕೃತಿಕ ಬದುಕಿನಲ್ಲಿ ಬಹು ಮುಖ್ಯವಾದ ಅಂಶ.

ಒಟ್ಟಾರೆ ಹೇಳುವುದಾದರೆ, ಬ್ಯಾರಿಗಳು ತಮ್ಮದೇ ಆದ ವಿಶೇಷ ಸಂಸ್ಕೃತಿಯನ್ನು ಹೊಂದಿದೆ ಎನ್ನಬಹುದು. ಒಂದೊಮ್ಮೆ ಬ್ಯಾರಿ ಎಂದು ಕರೆಸಿಕೊಳ್ಳುವುದು ಅವಮಾನ ಎಂದು ಪರಿಗಣಿಸುತ್ತಿದ್ದ ಬ್ಯಾರಿಗಳು ಇಂದು ತಾನೊಬ್ಬ ಬ್ಯಾರಿ ಎಂದು ಅಭಿಮಾನದಿಂದ ಹೇಳಿಕೊಳ್ಳುವ ಹಾಗೆ ಆಗಿರುವುದು ಸಾಧಾರಣ ಬೆಳವಣಿಗೆಯೇನೂ ಅಲ್ಲ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ಹೊಂದುತ್ತಿರುವ ಬ್ಯಾರಿಗಳು ತಮ್ಮ ಸಮಾಜ ಮತ್ತು ಸಂಸ್ಕೃತಿಯನ್ನು ಕೂಡ ಉಳಿಸಿ, ಬೆಳೆಸಿಕೊಂಡು ಹೋಗುವ ಹಾಗೆ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಸಾಕಷ್ಟು ಮಾಡುತ್ತಿರುವುದು ಅಭಿನಂದನೀಯ.

ದಕ್ಷಿಣ ಕನ್ನಡದ ಮುಸಲ್ಮಾನರಲ್ಲಿ ಸುಮಾರು ೮೦% ರಷ್ಟು ಬ್ಯಾರಿಗಳಿದ್ದಾರೆ. ಅರಬರು ವ್ಯಾಪಾರ ಕುದುರಿಸುವ ನಿಟ್ಟಿನಲ್ಲಿ ಈ ಪ್ರದೇಶಕ್ಕೆ ಬರುತ್ತಿದ್ದರು. ಅವರಿಂದ ಪ್ರಭಾವಿತರಾಗಿ ಇಸ್ಲಾಮ್ ಮತಾನುಯಾಯಿಗಳಾಗಿ ಪರಿಣಮಿಸಿದ ಇಲ್ಲಿನ ಸ್ಥಳೀಯ ಮುಸ್ಲಿಮರಾದ ಬ್ಯಾರಿಗಳಲ್ಲಿ ತಮ್ಮ ಪೂರ್ವಿಕರಾದ ಇತರ ಧರ್ಮಾನುಯಾಯಿಗಳ ಸಂಸ್ಕೃತಿಯ ಪ್ರಭಾವ ಅತ್ಯಂತ ಹೆಚ್ಚಾಗಿರುವುದು ಕಂಡು ಬರುತ್ತದೆ. ತಮಗೆ ಪರಿಚಿತವಿರುವ ಸ್ಥಳೀಯ ಭಾಷೆಗಳನ್ನು ಆಡುತ್ತಿದ್ದ ಇವರು ತಮ್ಮ ಪ್ರದೇಶದಲ್ಲಿದ್ದ ಜೀವನ ಶೈಲಿ ಹವ್ಯಾಸಗಳನ್ನು ಕೊಡಿಸಿಕೊಂಡು ಒಂದು ಹೊಸ ವರ್ಗವಾಗಿ ರೂಪುಗೊಂಡರು.

ಗ್ರಂಥಋಣ

1. ತುಳುನಾಡ ಬ್ಯಾರಿಗಳು – ಪ್ರೊ.ಬಿ.ಎಂ.ಇಷ್ಲಗೋಡು

2. ಬಿ.ಎ.ಷಂಶುದ್ದೀನ್, ಮಡಿಕೇರಿ ಇವರು ಬರೆದಿರುವ ಲೇಖನ

3. ನೂರಿಅಹ್ಮದ್ (2010) ಮೈಕಲ, ಬ್ಯಾರಿ ಸಾಹಿತ್ಯ ಅಕಾಡೆಮಿ

4. ಸುಶೀಲಾ ಉಪಾಧ್ಯಾಯ (2011) ಬ್ಯಾರಿ ಭಾಷೆ, ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು

5. ತುಳುನಾಡ ಬ್ಯಾರಿಗಳು – ಡಾ. ಮಹಾಬ್ ದೊಡ್ಡಮನೆ

6. ಬ್ಯಾರಿ ಆಂದೋಲನದ ಹೆಜ್ಜೆಗಳು – ಬಿ.ಎ.ಮಹಮ್ಮದ್ ಹನೀಫ್

7. ಹಝ್ ಮಲಾರ್ – ಬ್ಯಾರಿ ಮುಸ್ಲಿಮರು

8. ಡಾ.ವಹಾಬ್ ದೊಡ್ಡಮನೆ –ಮುಸ್ಲಿಮ್ಸ್ ಇನ್ ದಕ್ಷಿಣ ಕನ್ನಡ (1993)

ಐತಿಹಾಸಿಕ ಹಿಮವದ್ ಗೋಪಾಲಸ್ವಾಮಿ ಬೆಟ – ಒಂದು ಸಾಂಸ್ಕೃತಿಕ ಅಧ್ಯಯನ

*ಶ್ರೀನಿವಾಸ್.ವಿ. , ** ಡಾ.ಎಸ್ ಆಂಜನೇಯ
*ಸಂಶೋಧನ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ ಮೈಸೂರು. ಇ ಮೇಲ್– srinivasvhistory@gmail.com **ಸಹ ಪ್ರಾಧ್ಯಾಪಕರು ಮೈಸೂರು ವಿಶ್ವವಿದ್ಯಾನಿಲಯ, ಸಂಜಯ ಕಾಲೇಜು, ಮೈಸೂರು

ಚಾ.ರಾ.ನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಶ್ರೀ ಹಿಮವದ್ ಗೋಪಾಲಸ್ವಾಮಿ ಬೆಟ್ಟವು ಪ್ರಮುಖವಾಗಿ ಜನರ ಕಣ್ಮನ ಸೆಳೆಯುವ ಪ್ರೇಕ್ಷಣೀಯ ಸ್ಥಳವಾಗಿದೆ. ಕಾರಣ ಇಲ್ಲಿರುವ ನೈಸರ್ಗಿಕ ಸೊಬಗು ಐತಿಹಾಸಿಕ ದೇವಾಲಯ, ಹೆಸರೇ ಹೇಳುವಂತೆ ಸದಾ ಹಿಮದಿಂದ ಆವೃತವಾಗಿರುತ್ತದೆ ಅದ್ದರಿಂದ ಈ ಬೆಟ್ಟವನ್ನು ಕರ್ನಾಟಕದ ಊಟಿ ಎಂದು ಕರೆಯಲಾಗುತ್ತದೆ.

ಕೇರಳ ಮತ್ತು ತಮಿಳುನಾಡು ರಾಜ್ಯಗಳ ಗಡಿ ಭಾಗದಲಿ ಇರುವ ಈ ಬೆಟ್ಟವು ಬಂಡೀಪುರ ರಾಷ್ಟ್ರೀಯ ಉದ್ಯಾನಕ್ಕೆ ಸೇರಿಕೊಂಡಿದೆ ಸಾಂಸ್ಕೃತಿಕವಾಗಿ ಐತಿಹಾಸಿಕ ಸ್ಥಳವಾಗಿರುವ ಹಿಮವದ್ ಗೋಪಾಲಸ್ವಾಮಿ ಬೆಟ್ಟವು ಎಲ್ಲಾ ಕಾಲದಲ್ಲಿಯೂ ತನ್ನ ಆಕರ್ಷಣೆಗೆ ಹೆಸರುವಾಸಿಯಾಗಿದೆ.ಈ ಬೆಟ್ಟವು ಚಳಗಾಲದಲ್ಲಿ ಪೂರ್ಣ ಪ್ರಮಾಣದ ಹಿಮದಿಂದ ಆವೃತವಾಗಿರುತ್ತದೆ ಮತ್ತು ಮಳೆಗಾಲದಲ್ಲಿ ಸಂಪೂರ್ಣವಾಗಿ ಹಿಮದಿಂದ ಆವೃತವಾಗಿರುವುದಲ್ಲದೆ ಬೇಸಿಗೆಯಲ್ಲೂ ಕೂಡ ಅಲ್ಪ ಪ್ರಮಾಣದಲ್ಲಿ ಹಿಮದಿಂದ ಆವೃತವಾಗಿರುತ್ತದೆ. ಈ ಪ್ರದೇಶವು ಸಮುದ್ರ ಮಟ್ಟದಿಂದ 11ಸಾವಿರ ಎತ್ತರದ ಸ್ಥಳದಲ್ಲಿರುವುದರಿಂದ ಪರಿಸರ ಪ್ರೇಮಿಗಳಿಗೆ ಆನಂದ, ಆಶ್ಚರ್ಯ, ಕುತೂಹಲ ಉಂಟುಮಾಡುವುದರ ಜೋತೆಗೆ ಹಿಮದಿಂದ ಆವೃತ್ತವಾಗಿರುವ ಸನ್ನಿವೇಶವನ್ನು ನೋಡುತ್ತಿದ್ದರೆ ಆಕಾಶವೇ ಬಾಗಿ ಭೂಮಿಯನ್ನು ಚುಂಬಿಸುತ್ತಿರುವಂತೆ ಕಾಣುತ್ತದೆ. ಅಂತಹ ಸಮಯದಲ್ಲಿ ಬೀಸುವ ತಣ್ಣನೆ ಗಾಳಿಯಿಂದ ಸ್ವರ್ಗವೇ ನಮ್ಮೆದುರು ಬರುವಂತೆ ಬಾಸವಾಗುತ್ತದೆ.

ಬೆಟ್ಟದ ಮಧ್ಯ ಭಾಗದಲ್ಲೂಂದು ನದಿಯೊಂದು ಇದ್ದು ಅದು ಬೆಟ್ಟದ ಸೌದಂರ್ಯವನ್ನು ಹಿಮ್ಮಡಿಗೋಳಿಸಿದೆ, ಈ ನದಿಯಿಂದ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ವರ್ಷಕ್ಕೆ ಎರಡು ಜಾತ್ರೆಗಳು ನಡೆಯುತ್ತವೆ. ಮತ್ತು ಹಲವಾರು ಪೂಜ ವಿದಿ–ವಿಧಾನಗಳು ನಡೆಯುತ್ತವೆ. ಈ ಜಾತ್ರೆಗಳಲ್ಲಿ ವಿವಿಧ ರೀತಿಯ ಜಾನಪದ ದೇವರ ಉತ್ಸವ, ಹರಕೆ, ಕುಣಿತ ಇವು ಪ್ರಮುಖ ಆಕರ್ಷಣೆಯ ಅಂಶಗಳಾಗಿವೆ. ಈ ಜಾತ್ರೆಯಲ್ಲಿ ಸಾಮೂಹಿಕ ವಿವಾಹವು ನಡೆಯುತ್ತವೆ. ಇದಲ್ಲದೇ ಇಲ್ಲಿಯ ಸೌಂದರ್ಯ ತಾಯಿಯ ಮಡಿಲಿನ ಆಕರ್ಷಣೆಯಿಂದಾಗಿ ಹಲವಾರು ಕೋಟೆ ಕೊತ್ತಲಗಳಿಂದ ಕೂಡಿದ್ದು, ಬೆಟ್ಟಕ್ಕೆ ಬರುವಾಗ ನಾಲ್ಕು ತಿರುಹುಗಳಿವೆ, ಈ ತಿರುಹುಗಳಲ್ಲಿ ಬರುವುದೇ ಪ್ರವಾಸಿಗರಿಗೆ ರೋಮಾಂಚನ'ವೆನಿಸುತ್ತದೆ.

ಗೋಪಾಲಸ್ವಾಮಿ ಬೆಟ್ಟದ ಸಾಲಿನಲ್ಲಿ ಪ್ರಮುಖವಾಗಿ ಕಲ್ಲುಮುರಿ ಬೆಟ್ಟ, ಮಾದಗಿತ್ತಿ ಬೆಟ್ಟ ಪ್ರಮುಖವಾದವು. ಈ ಬೆಟ್ಟಗಳ ಮೇಲೆ ನಿಂತು ನೋಡಿದರೆ ಪಕ್ಕದ ರಾಜ್ಯದಲ್ಲಿ ಹರಿಯುವ ವೈನಾಡು ನದಿಯು ಕಾಣುವುದು, ಇದು ನೋಡುಗರ ಕಣ್ಮನ ಸೆಳೆಯುತ್ತದೆ. ಇದರ ಇಳಜಾರಿಗೆ ಹೋದಂತೆ ದಟ್ಟ ಕಾಡು ಇದ್ದು, ಶ್ರೀಗಂಧ ಮರಗಳಿಂದ ಕೂಡಿದೆ. ಇದು ಪ್ರವಾಸಿಗರಿಗೆ ಅಪರೂಪದ ದೃಶ್ಯವಾಗಿದೆ, ಹಾಗೆಯೇ ಅಪಾಯವೂ ಇದೆ, ಏಕೆಂದರೆ ಇಲ್ಲಿ ಆನೆಗಳು ಸಾಲು ಸಾಲಾಗಿ ವಿಹಾರಿಸುವುದು ಸಾಮಾನ್ಯ ಮತ್ತು ಅಲ್ಲಲ್ಲಿ ಹುಲಿ, ಚಿರತೆ,ಕರಡಿ ಇತರೆ ಕಾಡು ಪ್ರಾಣಿಗಳ ದರ್ಶನವೂ ಆಗುತ್ತದೆ. ಬೆಟ್ಟದ ಸಾಲಿನಲ್ಲಿರುವ ಕೊಳ ತಂಪಾದ ನೀರಿನಿಂದ ಕೂಡಿದ್ದು ಜನರು ಈ ಕೊಳಗಳಿಗೆ ಬೇಟಿ ನೀಡಿ ನೀರನ್ನು ತೆಗೆದುಕೊಂಡು ಹೋಗುತ್ತಾರೆ. ಇದಕ್ಕೆ ಐತಿಹಾಸಿಕ ಹಿನ್ನೆಲೆಯು ಸಹಾ ಇದೆ ಹಾಗೆಯೇ ಪ್ರಮುಖ ಕೊಳಗಳಲ್ಲಿ ಸ್ನಾನ ಮಾಡಿ ಮಡಿಯಾಗಲು ಅವಕಾಶವಿದ್ದು ಪ್ರವಾಸಿಗರನ್ನು ಸೆಳೆಯುವ ಗುಣವನ್ನು ಹೊಂದಿದೆ, ಸೂರ್ಯಸ್ತಮವು ಎರಡು ಬೆಟ್ಟಗಳನ್ನು ಸೀಳಿ ಮುಳುಗುವ ದೃಶ್ಯ ನೋಡುಗರ ಕಣ್ಣಿಗೆ ಅತ್ಯಂತ ರಮಣೀಯ ದೃಶ್ಯವಾಗಿದೆ.

ಪ್ರವಾಸಿಗರನ್ನು ಹಾಗೂ ಸಂಶೋಧಕರನ್ನೂ ಆಕರ್ಷಣೆ ಮಾಡಲು ಮತ್ತೊಂದು ಕಾರಣ ಗೋಪಾಲಸ್ವಾಮಿ ಬೆಟ್ಟದ ತೀರ ಪ್ರದೆಶದಲ್ಲಿ ವಾಸಿಸುವ ಸೋಲಿಗ ಮತ್ತು ಜೇನು ಕುರುಬಸಮುದಾಯದವರು ಬೆಟ್ಟದ ತಪ್ಪಲಿನಲ್ಲಿರುವ ಹಗ್ಗದ ಹಳ್ಳ ಎಂಬ ಗ್ರಾಮದಲ್ಲಿ ವಾಸಿಸುತ್ತಾರೆ. ಈ ಜನರ ಆಚಾರ–ವಿಚಾರ ಸಂಪ್ರದಾಯಗಳು ಪ್ರವಾಸಿಗರ ಮತ್ತು ಸಂಶೋಧಕರನ್ನೂ ತನ್ನತ್ತ ಸೆಳೆಯುತ್ತಿದೆ ಬುಡಕಟ್ಟು ಸಮುದಾಯದವರಿಗೂ ವಿಸೇಷವಾಗಿ ಬೆಟ್ಟಕ್ಕೂ ಅವಿನಾಭಾವ ಸಂಬಂಧವಿದೆ, ಗೋಪಾಲಸ್ವಾಮಿ ಬೆಟ್ಟದ ಆಸುಪಾಸಿನಲ್ಲಿ ಕೆರೆಗಳಿದ್ದು ಅವು ವಿವಿಧ ಬಗೆಯ ಪಕ್ಷಿಗಳ ಆವಾಸಸ್ಥಾನವಾಗಿದೆ. ಇದು ಪ್ರವಾಸಿಗರಿಗೆ ಆಕರ್ಷಣೆಯ ದೃಶ್ಯವಾಗಿದ್ದು ಇದನ್ನು ನೋಡಲು ಪ್ರವಾಸಿಗರು ಬರುತ್ತಾರೆ ಇಲ್ಲಿ ಪ್ರಮುಖವಾಗಿ ಹಿರಿಕೆರೆಗೆ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಾರೆ ಇಲ್ಲಿ ಸ್ಥಳೀಯರು ಪ್ರವಾಸಿಗರಿಗೆ ಮಾಹಿತಿ ನೀಡುತ್ತಿದ್ದು ಉತ್ತಮ ಸ್ನೇಹ ಸಂಬಂಧವನ್ನು ಸಂಪಾದಿಸಿದ್ದಾರೆ, ಈ ಭಾವನಾತ್ಮಕ ಸಂಬಂಧವು ಪ್ರವಾಸಿಗರನ್ನು ಉತ್ತೇಜಿಸುತ್ತಿದೆ.

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮ ಉತ್ತೇಜನಾ ಉದ್ದೇಶದಿಂದ ಅಂತರ್ ಜಾಲದಲ್ಲಿ ಮಾಹಿತಿಯನ್ನು ಹಾಗೂ ರಸ್ತೆ ಬದಿಯಲ್ಲಿನ ಮಾಹಿತಿ ಫಲಕಗಳನ್ನೂ ಹಾಕಲಾಗಿದೆ ಈ ಮೂಲಕ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲಾಗಿದೆ. ಮೈಸೂರು, ಊಟಿ ರಸ್ತೆಯ ಹಂಗಳ ಗ್ರಾಮದಲ್ಲಿ ಆಕರ್ಷಣೆಯವಾದ ಗೋಪುರಗಳನ್ನು ನಿರ್ಮಿಸುವ ಮೂಲಕ ಬೆಟ್ಟಕ್ಕೆ ದಾರಿಯನ್ನು ತೋರಿಸುತ್ತದೆ, ಇದು ಸರ್ಕಾರಕ್ಕೆ ಆದಾಯದ ಮೂಲವಾಗಿದ್ದು ಬೆಟ್ಟದ ಪ್ರವೇಶ ದ್ವಾರದಲ್ಲಿ ವಾಹನಗಳ ಗಾತ್ರದ ಆಧಾರದ ಮೇಲೆ ಪ್ರವೇಶ ಶುಲ್ಕವನ್ನು ವಿಧಿಸಲಾಗುತ್ತದೆ. ಇದು ಸರ್ಕಾರಕ್ಕೆ ಪ್ರತ್ಯೇಕವಾಗಿ ಸಂದಾಯವಾಗುವ ಆದಾಯವಾಗಿದೆ. ಇದರಿಂದಾಗಿ ಶ್ರೀ ಹಿಮವದ್ ಗೋಪಾಲಸ್ವಾಮಿ ದೇವಾಲಯವು ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ.

ಗೋಪಾಲಸ್ವಾಮಿಯನ್ನು ಕುರಿತು ಪೌರಾಣಿಕ ಹಿನ್ನೆಲೆ : ಪುರಾಣಗಳು ನಮ್ಮ ಸಂಸ್ಕೃತಿಯ ಎಲ್ಲಾ ಮುಖಗಳನ್ನು ತೆರೆದು ತೋರಿಸುತ್ತವೆ. ಎಂದು ಹೇಳಬಹುದು. ಗೊಪಾಲಸ್ವಾಮಿ ಬಗೆಗೆ ಐತಿಹ್ಯಗಳ ಒಂದು ಕಥೆಯ ಪ್ರಕಾರ ಶ್ರೀ ಹಿಮವದ್ ಗೋಪಾಲಸ್ವಾಮಿಯು ಮೊದಲು ಒಬ್ಬ ದಾಸಯ್ಯ ವೇಷದಾರಿಯಾಗಿ ಕೇರಳ ಪ್ರದೆಶದಿಂದ ಹೊರಟು ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಪ್ರಾಚೀನ ಕಾಲದ ವಿಜಯಪುರದ ಸಮೀಪವಿರುವ ಒಂದು ಗುಡ್ಡದಲ್ಲಿ ನೆಲೆಸಲು ನಿಶ್ಚಯಿಸಿದನು. ಆ ದಾಸಯ್ಯ ಗುಡ್ಡದ ಮೇಲೆ ತನ್ನ ಒಂದು ಪಾದವನ್ನಿಡಲು ಈ ಗುಡ್ಡವು ಎರಡು ಭಾಗಗಳಾಗಿ ಬೇರ್ಪಟ್ಟಿತು, ಆನಂತರ ಅಲ್ಲಿಂದ ಗೋಪಾಲಪುರದ ಸಮೀಪದಲ್ಲಿರುವ ಒಂದು ಬೆಟ್ಟದಲ್ಲಿ ನೆಲೆಸಲು ಹೋದನಂತೆ, ಆ ಬೆಟ್ಟದಲ್ಲಿ ರಾಕ್ಷಸರು ವಾಸವಾಗಿದ್ದರು, ಈ ದಾಸಯ್ಯನ ವೇಷದಾರಿಯಾದ ಗೋಪಾಲಸ್ವಾಮಿಯನ್ನು ಕಂಡು ರಾಕ್ಷಸರು, " ನೀನು ಯಾರು?

ನೀನು ಇಲ್ಲಗೇಕೆ ಬಂದೆ? ನಿನ್ನನ್ನು ತಿಂದುಬಿಡುತ್ತೇವೆ." ಎನ್ನಲು ದಾಸಯ್ಯನ ವೇಷಧಾರಿಯಾದ ಗೋಪಾಲನು ತನ್ನ ನಿಜರೂಪವನ್ನು ತೋರಿಸಿ ನನ್ನ ಹೆಸರು ಗೋಪಾಲ ನಾನು ಈ ದೇಶವನ್ನು ಹಾಗೂ ಇಲ್ಲಿನ ಜನರನ್ನು ಉದ್ದರಿಸಲು ಬಂದಿದ್ದೇನೆ ಎನ್ನುತ್ತಾನೆ. ಗೋಪಾಲನ ನಿಜರೂಪವನ್ನು ಕಂಡ ರಾಕ್ಷಸರು ಅಲ್ಲಿಂದ ದೂರ ಓಡಿ ಹೋಗುತ್ತಾರೆ, ರಾಕ್ಷಸರು ಹೋದ ನಂತರ ಗೋಪಾಲ ಆ ಬೆಟ್ಟದಲ್ಲಿ ನೆಲೆಸಲು ನಿಶ್ಚಯಿಸುತ್ತಾನೆ. ಆದರೆ ಅಲ್ಲೊಬ್ಬ ಅಂಜೆ ಎಂಬ ಮುದುಕಿ ವಾಸವಾಗಿದ್ದಳು ಆಕೆಯನ್ನು ಕಂಡು ಗೋಪಾಲನ ಅಜ್ಜಿ ನಾನು ಇಲ್ಲಿಯೆ ನೆಲೆಸಬೇಕೆಂದು ಮಲೆಯಾಳ ದೇಶದಿಂದ ಇಲ್ಲಿಗೆ ಬಂದಿದ್ದೇನೆ. ಅದಕ್ಕಾಗಿ ನಾನು ಇಲ್ಲಿ ನೆಲೆಸಲು ಅನುಮತಿಯನ್ನು ಕೊಡಬೇಕು ಎಂದಾಗ ಆಕೆ " ನೀನು ಯಾರು ನಿನೇಕೆ ಇಲ್ಲಿಗೆ ಬಂದೆ" ? ಎಂದು ಕೆಳದಾಗ ಗೋಪಾಲನು " ಅಜ್ಜಿ ನಾನೊಬ್ಬ ದಾಸಯ್ಯ ನನಗೆ ಇಲ್ಲಿ ನೆಲೆಸಬೇಕೆಂಬ ಬಯಕೆಯಾಗಿದೆ, ಅದಕ್ಕೆ ಇಲ್ಲಿಗೆ ಬಂದೆ" ಎನ್ನುತ್ತಾನೆ ಅಂಜೆಯು ಈತನ ಕೋರಿಕೆ ಮೇರೆಗೆ "ು ಒಂದು ಪಾದ ಇಡುವಷ್ಟು ಜಾಗವನ್ನು ಮಾತ್ರ ಕೊಡುತ್ತೇನೆ". ಎನ್ನುತ್ತಾಳೆ ಅದಕ್ಕೊಪ್ಪಿ ಗೋಪಾಲನು ತನ್ನ ಒಂದು ಪಾದವನ್ನು ಅಲ್ಲೇ ಊರುತ್ತಾನೆ,ಹೀಗೆ ಕೆಲವು ದಿನಗಳು ಕಳೆಯುತ್ತವೆ, ಹೀಗಿರುವಾಗ ಗೋಪಾಲನು ಅಂಜೆಯನ್ನು ಕುರಿತು " ನಾನು ಎಷ್ಟು ದಿವಸ ಅಂತ ಹೀಗೆ ಒಂಟಿಕಾಲಲ್ಲಿ ನಿಲ್ಲಲಿ? ನನ್ನ ಇನ್ನೊಂದು ಪಾದವಿಡಲು ಜಾಗ ಕೊಡು ತಾಯಿ" ಎಂದು ಕೇಳದಾಗ ಆ ಮುದುಕಿಗೆ ಗೋಪಾಲನ ಬಗ್ಗೆ ಕರುಣೆ ಉಂಟಾಗಿ ಆತನ ಇನ್ನೊಂದು ಪಾದಕ್ಕೂ ಜಾಗ ಕೊಡುತ್ತಾಳೆ. ಆದರೆ ಗೋಪಾಲನು ದಿನೇದಿನೇ ತನ್ನ ವಾಸಸ್ಥಾನವನ್ನು ವೃದ್ಧಿಸಿಕೊಂಡು ಹೋಗುತ್ತಿರುತ್ತಾನೆ. ಇದನ್ನು ಕಂಡ ಮುದುಕಿಯು " ಏಯ್ ದಾಸಯ್ಯ ಹೋಗಲಿ ಪಾಪ ಅಂತ ಜಾಗ ಕೊಟ್ಟೆ ನಾನು, ಆದರೆ ನೀನು ನನ್ನ ಸ್ಥಳವನ್ನೆಲ್ಲ ಆಕ್ರಮಿಸಿಕೊಳ್ಳುತ್ತಿದಿಯಲ್ಲ" ಎಂದು ಗೋಪಾಲನನ್ನು ದೂಡುತ್ತಾಳೆ. ಈ ಮಾತುಗಳನ್ನು ಕೇಳಿದ ಗೋಪಾಲನು ಅಜ್ಜಿಗೆ ತನ್ನ ನಿಜರೂಪ ತೋರಿಸಬೇಕೆಂದುಕೊಂಡು ತನ್ನ ದಾಸಯ್ಯನ ವೇಷವನ್ನು ಕಳಚಿ ನಿಲ್ಲುತ್ತಾನೆ, ದಾಸಯ್ಯನ ನಿಜರೂಪವಾದ ಗೋಪಾಲನ ಕಂಡು ಮುದುಕಿಯು ದಿಗ್ಭಮೆಯಿಂದ "ತಂದೆಯೇ ನೀನು ಇಲ್ಲೇ ಇರು" ಎಂದು ಆತನ ಪಾದಗಳಿಗೆ ನಮಸ್ಕರಿಸುತ್ತಾಳೆ ಗೋಪಾಲನು ಅಜ್ಜಿಯ ಭಕ್ತಿಯನ್ನು ಕಂಡು " ಅಜ್ಜಿ ನೀನು ನನ್ನ ಸನಿಹದಲ್ಲಿ ಇರುವ ಹಾಗೂ ನನ್ನ ಭಕ್ತಾದಿಗಳು ಹಾದುಬರುವ ದಾರಿಯನ್ನು ದಾಸನ ಕೊಳವೆಂಬ ಒಂದು ಕೊಳವಿದೆ. ನೀನು ಅಲ್ಲಿಗೆ ಹೋಗಿ ನೆಲೆಸು ಅಲ್ಲಿಗೆ ನನ್ನ ಭಕ್ತರು ಬಂದು ನಿನಗೆ ಮೊದಲನೆ ಪೂಜೆ ಸಲ್ಲಿಸುತ್ತಾರೆ, ಅನಂತರ ನನಗೆ ಪೂಜೆ ಸಲ್ಲಿಸಲಿ" ಎನ್ನುತ್ತಾನೆ. ಅಂದಿನಿಂದ ಈ ಮುದುಕಿಯು ಶ್ರೀ ಹಿಮವದ್ ಗೋಪಾಲಸ್ವಾಮಿಯ ಆಜ್ಞೆಯಂತೆ ದಾಸನ ಕೊಳದ ಹತ್ತಿರ ನೆಲೆಸುತ್ತಾರೆ. ಆಕೆಗೆ ಇಂದಿಗೂ ಗೋಪಾಲಸ್ವಾಮಿಯ ಭಕ್ತಾದಿಗಳು ಪೂಜೆ ಸಲ್ಲಿಸುತ್ತಿದ್ದಾರೆ.

ಹೀಗೆ ಶ್ರೀ ಹಿಮವದ್ ಗೋಪಾಲಸ್ವಾಮಿಯು ಅಂಜೆ ಮುದುಕಿಯ ನೆಲೆಯಲ್ಲಿ ನೆಲೆಸಿರಲು ಈತನ ಸಮೀಪದಲ್ಲೇ ಒಂದು ಏಳುಸುತ್ತಿನ ಕೋಟೆ ಇರುತ್ತದೆ. ಆ ಏಳು ಸುತ್ತಿನ ಕೋಟೆಯ ಮಧ್ಯದಲ್ಲಿ ಮಾಧರ ಮತ್ತು ಮಾದಗಿತ್ತಿ ಎಂಬ ಅಸ್ಪೃಶ್ಯ ದಂಪತಿಗಳು ವಾಸವಾಗಿದ್ದರು. ಮಾದರನು ದಿನನಿತ್ಯ ಕಾಡಿಗೆ ಹೋಗಿ ಭೇಟಿಯಾಡಿ ಬರುತ್ತಿರುತ್ತಾನೆ, ಮಾದಗಿತ್ತಿಯು ಗಂಡ ಬರುವವರೆಗೂ ಕೋಟೆಯಲ್ಲಿ ಇದ್ದು ಆತನಿಗೆ ಅಡಿಗೆ ಮಾಡಿ ಉಣಬಡಿಸಿ ಸಂತೋಷವಾಗಿ ಕಾಲಕಳೆಯುತ್ತಿರುತ್ತಾರೆ, ಹೀಗೆ ಪ್ರತಿನಿತ್ಯವು ಮಾದಗಿತ್ತಿಯು ರಾಗಿಯ ಬಸಿದು ಆತನಂತರ ಕೈಯಲ್ಲಿಯೇ ರಾಗಿಯನ್ನು ಬೀಸುತ್ತಿರುತ್ತಾಳೆ, ಆಕೆಯು ರಾಗಿಯನ್ನು ಬಸಿದು ಅಂದರೆ ರಾಗಿಯಲ್ಲಿದ್ದ ಕಲ್ಲು ಮಣ್ಣುಗಳನ್ನು ಬೇರ್ಪಡಿಸಿ ಕೋಟೆಯ ಹೊರಗಡೆ ಸುರಿಯುತ್ತಿರುತ್ತಾಳೆ ಆಕೆ ದಿನನಿತ್ಯ ಸುರಿಯುತ್ತಿದ್ದ ಕಲ್ಲು ಮಣ್ಣು ಒಂದು ಬೆಟ್ಟವಾಗಿ ಮಾರ್ಪಾಡಾಯಿತು. ಈ ಬೆಟ್ಟವನ್ನು ಜನರು ಇಂದು ಮಾನಕನ ಬೆಟ್ಟ ಎಂದು ಕರೆಯುತ್ತಾರೆ. ಹೀಗೆ ಒಂದು ದಿನ ಗೋಪಾಲನು ಬೆಟ್ಟವನ್ನು ಬಳಸುತ್ತಿರುವಾಗ ಪ್ರತಿನಿತ್ಯದಂತೆ ಮಾಧುರನ ಹೆಂಡತಿ ಮಾದಗಿತ್ತಿಯು ತನ್ನ ಕೋಟೆಯ ಸಮೀಪದಲ್ಲಿರುವ ಅಣ್ಣಾಕೆರೆ ಎಂಬಲ್ಲಿಗೆ ನೀರನ್ನು ಕೊಂಡೊಯ್ಯಲು ಮಡಿಕೆಯೊಂದಿಗೆ ಬರುತ್ತಾಳೆ ಈಕೆಯನ್ನು ಕಂಡ ಗೋಪಾಲನು ಯಾರಿರಬಹುದು ಈ ಸುಂದರಿ? ಒಂಟಿಯಾಗಿ ಎಲ್ಲಿಗೆ ನೀರನ್ನು ತೆರೆದು ಕೊಂಡು ಹೋಗುತ್ತಿದ್ದಾಳೆಂದುಕೊಂಡು ಆಕೆಯನ್ನು ಸಮೀಪಿಸಿ " ನೀನು ಯಾರು? ನೀರನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀಯಾ? ಎನ್ನುತ್ತಾನೆ, ಮಾದಗಿತ್ತಿಯು ಭಯದಿಂದ ನಾಚಿಕೆಯಿಂದ ಗೋಪಾಲನನ್ನು ನೋಡಿ ಆತನ ಸೌಂದರ್ಯಕ್ಕೆ ಬೆರಗಾಗಿ ಆತನಿಗೆ ಮನಸೋತು ಮಾತನಾಡದೆ ಕಣ್ಣುರೆಪ್ಪೆಯನ್ನು ಬಡಿಯದೆ ನೋಡುತ್ತ ನಿಂತಿರುತ್ತಾಳೆ. ಇದನ್ನು ಕಂಡ ಗೋಪಾಲನು "ಯಾರು ನೀನು" ಎಂದು ಗದರಿಸುತ್ತಾನೆ, ಮಾದಗಿತ್ತಿಯು ಬೆಚ್ಚಿ " ನಾನು ... ನಾನು ... ಈ .... ಈ .... ಏಳು ಸುತ್ತಿನ ಕೋಟೆಯ ಮಧ್ಯದಲ್ಲಿ ನೆಲೆಸಿದ್ದೇನೆ. ನನ್ನ ಹೆಸರು ಮಾದಗಿತ್ತಿ ನನ್ನ ಗಂಡನ ಹೆಸರು ಮಾಧುರ ಎನ್ನುತ್ತಾಳೆ. ನಾನು ನಮ್ಮ ಕೋಟೆಗೆ ದಿನನಿತ್ಯ ನೀರನ್ನು ತೆಗೆದುಕೊಂಡು ಹೋಗಲು ಇಲ್ಲಿಗೆ ಬರುತ್ತೇನೆ, ನೀನು ಯಾರು? ಎನ್ನುತ್ತಾಳೆ, ಅದಕ್ಕುತ್ತರವಾಗಿ ಗೋಪಾಲನು " ನಾನು ಈ ಕೋಟೆಯ ಹೊರಗಡೆ ನೆಲೆಸಿದ್ದೇನೆ ನಿನಗೇನಾದರೂ ಸಹಾಯ ಬೇಕೆಂದರೆ ನನ್ನನ್ನು ಕೂಗು ಬರುತ್ತೇನೆ ನನ್ನ ಹೆಸರು ಗೋಪಾಲ" ಎನ್ನುತ್ತಾನೆ. ಒಂದು ದಿನ ಮಾದಗಿತ್ತಿಯು ಅಣ್ಣಾಕೆರೆಯ ಬಳ "ಗೋಪಾಲ" ಎಂದು ಕೂಗಿಕೊಳ್ಳುತ್ತಾಳೆ. ಈಕೆಯ ಕೂಗನ್ನು ಕೇಳಿದ ಕೂಡಲೇ ಗೋಪಾಲ ಸ್ವಾಮಿಯು ಅಣ್ಣಾಕೆರೆ ಬಳಗೆ ಬರುತ್ತಾನೆ ಬಂದು ಮಾದಗಿತ್ತಿಯನ್ನು ಕಂಡು " ಏಕೆ ಏನಾಯಿತು ಕೂಗಿದೆಯಲ್ಲಾ" ಎನ್ನಲು ಮಾದಗಿತ್ತಿಯು ಮೌನವಾಗಿ ಆತನನ್ನು ನೋಡುತ್ತಲೇ ಕೂಗುತ್ತಾ ಕೂಗುತ್ತಾ ಅವರಲ್ಲಿ ಸ್ನೇಹ ಅಂಕುರಿಸಿ ಪ್ರೇಮ ಉಂಟಾಗುತ್ತದೆ. ನಂತರ ಗೋಪಾಲನು ಕೆರೆಯಿಂದ ಅವಳ ಮನೆ ಬಳಗೆ ನೀರನ್ನು ತಂದುಕೊಡುತ್ತಿರಲು ಆಕೆ ಬೇಗ ಬೇಗ ಕೋಟೆ ಸೇರುತ್ತಿರುತ್ತಾಳೆ. ಪ್ರತಿನಿತ್ಯವು ಆಕೆ ಇಷ್ಟು ಬೇಗ ಹೇಗೆ ನೀರನ್ನು ತರುತ್ತಾಳೆ ಎಂದು ಅನುಮಾನ ಹುಟ್ಟಿಕೊಂಡ ಮಾದಗಿತ್ತಿಯ ಗಂಡ ಮಾಧುರ ಒಂದು ದಿನ ಅವಳನ್ನು ಹಿಂಬಾಲಿಸಿಕೊಂಡು ಬರುತ್ತಾನೆ. ಒಂದು ಕೆರೆ ಸಮೀಪದ ಪೊದೆಯಲ್ಲಿ ಅವಿತುಕೊಂಡು ಕುಳತುಕೊಳ್ಳುತ್ತಾನೆ, ಆ ವೇಳೆಗೆ ಮಾದಗಿತ್ತಿಯು "ಗೋಪಾಲ" ಎಂದು ಕೂಗುತ್ತಾಳೆ, ಆ ಕೂಗನ್ನು ಕೇಳಿದ ಗೋಪಾಲಸ್ವಾಮಿಯು ಕೆರೆಯ ಬಳಗೆ ಬರುತ್ತಾನೆ ಬಂದು

ಅವಳ ಮಡಕೆಯನ್ನು ತೆಗೆದುಕೊಂಡು ಹೋಗಿ ಕೆರೆಯಿಂದ ನೀರನ್ನು ತಂದುಕೊಡುತ್ತಾನೆ ಗೋಪಾಲನಲ್ಲಿ ಮೋಹಗೊಂಡ ಮಾದಗಿತ್ತಿಯು ಗೋಪಾಲನನ್ನು ತಬ್ಬಿಕೊಂಡು ನಿಲ್ಲುತ್ತಾಳೆ ಹೀಗೆ ಒಬ್ಬರನ್ನೊಬ್ಬರು ಮೋಹಿಸುತ್ತಿರಲು ಮಾಧುರನು ತನ್ನ ಬಳಯಲ್ಲಿದ್ದ ಬಿಲ್ಲಿನಿಂದ ಇವರಿಬ್ಬರಿಗೆ ಬಾಣವನ್ನು ಬಿಡುತ್ತಾನೆ. ಆ ಬಾಣವು ಮಾದಗಿತ್ತಿಯ ಕಿವಿಯಲ್ಲಿ ನುಗ್ಗಿ ಆ ಅಣ್ಣಾಕೆರೆಯನ್ನು ಸೀಳಿ ಮುಂದೆ ಒಂದು ಕಲ್ಲಾಗಿ ಕೆರೆಯ ಬಳಯಲ್ಲಿಯೇ ನಿಲ್ಲುತ್ತದೆ. ಅಂದಿನಿಂದ ಈ ಬಾಣವು ನುಗ್ಗಿದ ದಾರಿಯನ್ನು ಜನರು ಇಂದಿಗೂ ಬಿಲ್‌ಕಲ್ಲು ದಾರಿ ಎಂದು ಕರೆಯುತ್ತಾರೆ. ಗೋಪಾಲನು ತನ್ನನ್ನು ಕೊಲ್ಲಲ್ಲು ಬಂದಿದ್ದ ಮಾಧುರನ್ನು ಕುರಿತು " ನೀನು ಕಲ್ಲಾಗಿ ಹೋಗು" ಎಂದು ಶಾಪಕೊಡುತ್ತಾನೆ ಅಂದಿನಿಂದ ಆತ ಕಲ್ಲಾಗಿಬಿಡುತ್ತಾನೆ. ಇಂದಿಗೂ ಆ ಕಲ್ಲನ್ನು ಜನರು ನರಮನುಷ್ಯರ ಕಲ್ಲು ಎಂದು ಕರೆಯುತ್ತಾರೆ. ಇದು ಗೋಪಾಲಸ್ವಾಮಿಯನ್ನು ಕುರಿತು ವ್ಯಕ್ತಿಗಳು ಹೇಳುವ ಪುರಾಣ ಕಥೆಯಾಗಿದೆ.

ಐತಿಹ್ಯ:– ಐಹಿತ್ಯದ ಪ್ರಕಾರ ಅಗಸ್ತ್ಯರು ವಿಂದ್ಯ ಪರ್ವತದ ಬೆಳವಣಿಗೆಯನ್ನು ನಿಲ್ಲಿಸಿ, ದಕ್ಷಿಣದೇಶವನ್ನು ಪವಿತ್ರಗೊಳಿಸಲು ಹೊರಟರು. ಅವರು ಗೋಪಾಲಸ್ವಾಮಿಯ ಬೆಟ್ಟಕ್ಕೆ ಬಂದು ಸ್ವಾಮಿಯನ್ನುಕುರಿತು ತಪಸ್ಸು ಮಾಡಿದರು ಗೋಪಾಲಸ್ವಾಮಿಯು ಅವರ ಮುಂದೆ ಪ್ರತ್ಯಕ್ಷನಾದನು ಅಗಸ್ತ್ಯಸ್ವಾಮಿಯನ್ನು ಕಮಲಾಚಲಕ್ಕೆ ಅಂದರೆ ಗೋಪಾಲಪುರದ ಸಮೀಪದ ಒಂದು ಬೆಟ್ಟಕ್ಕೆ ಬಂದು ನೆಲಸಬೇಕೆಂದು ಕೋರಿಕೊಂಡರು ಅಂತೆಯೇ ಗೋಪಾಲಸ್ವಾಮಿಯು ರುಕ್ಮಿಣಿ, ಸತ್ಯಭಾಮೆಯರೊಂದಿಗೆ ಇಲ್ಲಿಯೆ ನೆಲೆಸಿದರು. ಅಗಸ್ತ್ಯರು ಉತ್ತರದ ಕಡೆಯಿಂದ ಬರುವಾಗ ಪುಣ್ಯನದಿ, ಪುಣ್ಯವೃಕ್ಷ ಪುಣ್ಯ ಆಶ್ರಮ ಮೊದಲಾದ ಪುಣ್ಯಕರ ವಸ್ತುಗಳನ್ನು ಕಮಲಾಚಲಕ್ಕೆ ತಂದರು. ಶ್ರೇಷ್ಠ ಋಷಿಗಳು ಆಗಮಿಸಿದರು. ಕಮಲಾಚಲದ ಆಗ್ನೇಯದಲ್ಲಿ ಕೌಂಡಿನ್ಯ ಋಷಿ ನೆಲೆಸಿದರು. ಇದರಿಂದಾಗಿ ಆಶ್ರಮದಲ್ಲಿ ಒಂದು ನದಿ ಉದ್ಭವಿಸಿತು. ಅದು ಮುಂದೆ ಕೌಂಡಿನ್ಯ ನದಿಯಾಗಿ ಗುಂಡ್ಲುಪೇಟೆ ತಾಲ್ಲೂಕಿನ ಕೆಲವು ಭಾಗಗಳನ್ನು ಹಸಿರುಗೊಳಿಸಿತು. ದಕ್ಷಿಣ ದಿಕ್ಕಿನಲ್ಲಿ ಜಮದಗ್ನಿ, ನೈರುತ್ಯದಲ್ಲಿ ಭೃಗು, ಪಶ್ಚಮದಲ್ಲಿ ಕಪಿಲ, ವಾಯುವ್ಯದಲ್ಲಿ ಕಣ್ವ, ಉತ್ತರದಲ್ಲಿ ವಿಶ್ವಾಮಿತ್ರ, ಈಶಾನ್ಯದಲ್ಲಿ ಕಶ್ಯಪ, ಪೂರ್ವದಲ್ಲಿ ಮಾಂಡವ್ಯ ಋಷಿಯ ಆಶ್ರಮವಿತ್ತೆಂದು ಪುರಾಣದಲ್ಲಿ ಉಲ್ಲೇಖವಾಗಿದೆ. ಹಂಸತೀರ್ಥದ ಮೇಲೆ ಇರುವ ಗವಿಯಲ್ಲಿ ಅಗಸ್ತ್ಯರು ತಪಸ್ಸು ಮಾಡಿದರೆಂದು ನಂಬಿಕೆಯಿದೆ ಹೀಗೆ ಪುರಾಣಕಾರರು ಅಗಸ್ತ್ಯನು ಸ್ಥಾಪಿಸಿದುದೆಂದು ಹೇಳಿ ಗೋಪಾಲಸ್ವಾಮಿ ಬೆಟ್ಟಕ್ಕೆ ದೈವಿಕ ಆವರಣವನ್ನು ಕಟ್ಟಿಸಿದ್ದಾರೆ. ಆದರೆ ವಾಸ್ತವವಾಗಿ ಗೋಪಾಲಸ್ವಾಮಿ ಪ್ರತಿಷ್ಠಾಪನೆ ಮಾಧವ ದಣ್ಣಾಯಕನಿಂದ ಆಯಿತು. ಈತ ಕ್ರಿ.ಶ 1315 ರಲ್ಲಿ ಗೋಪಾಲಸ್ವಾಮಿಯನ್ನು ಪ್ರತಿಷ್ಠಾಪನೆ ಮಾಡಿ ದೇವರ ಅಂತರಂಗ ಭೋಗಕ್ಕೆ "ತಿರುವಳಯಾಟಕ್ಕೆ ಬಲ್ಲಾಳ ದೇವರ ರಸರಿಂದ ಕಂಡುಗಣದೊಳಗಣ ಕಣ್ಣವಗಾಲವನ್ನು ದತ್ತಿಬಿಟ್ಟನೆಂದು ಶಾಸನಗಳು ನಿರೂಪಿಸುತ್ತವೆ. ಗೋಪಾಲಸ್ವಾಮಿ ದೇವಸ್ಥಾನಕ್ಕೆ ಐತಿಹಾಸಿಕವಾಗಿ 700 ವರ್ಷಗಳ ಪ್ರಾಚೀನತೆಯಿದೆ.

ಹಿಮವದ್ ಗೋಪಾಲಸ್ವಾಮಿ ಸ್ಥಳನಾಮ:– ಒಂದು ನಿರ್ದಿಷ್ಠ ಸ್ಥಳಕ್ಕೆ ಕರೆಯಲಾಗುವ ಅಂಕಿತವನ್ನು ಸ್ಥಳನಾಮವೆಂದು ಕರೆಯಲಾಗುತ್ತದೆ. ಜಾನಪದ ಸಂಸ್ಕೃತಿಯಲ್ಲಂತೂ ಸ್ಥಳನಾಮಗಳು ಬರಲು ಹಲವಾರು ಕಾರಣಗಳಿವೆ ಎಂಬುದನ್ನು ಕಾಣಬಹುದು, ಅದು ಐತಿಹ್ಯ ಅಥವಾ ಪುರಾಣಗಳಿಂದ, ಅಧಿಕವಾಗಿ ನಿರ್ಣಯವಾಗುತ್ತದೆ. ಕೆಲವು ವೇಳೆ' ಸ್ಥಳನಾಮಕ್ಕೆ ಕೇವಲ ರಾಜಿಕೀಯ ಸಾಮಾಜಿಕ ಕಾರಣಗಳಲ್ಲದೇ ಅಲ್ಲಿನ ಭೌಗೋಳಿಕ ಪರಿಸರವನ್ನು ಅನುಸರಿಯೂ ಸಹ ನಾಮಾಂಕಿತ ಮಾಡುವುದುಂಟು ಹಾಗೆಯೇ ಗೋಪಾಲಸ್ವಾಮಿ ಬೆಟ್ಟಕ್ಕೆ ಈ ಹೆಸರು ಬರಲು ಹಲವು ಕಾರಣಗಳು ಜನರ ನಡುವೆ ಪ್ರಚಲಿತದಲ್ಲಿವೆ, ಅವು ಪುರಾಣದ ಐತಿಹ್ಯದ ಹಿನ್ನೆಲೆಯಾಗಿರಬಹುದು ಅಥವಾ ಸ್ಥಳೀಯ ನಾಯಕನನ್ನು ಸ್ಮರಿಸುವುದಕ್ಕೋಸ್ಕರ ಅವರುಗಳ ಹೆಸರನ್ನು ಸೂಚಿಸಿರಬಹುದು, ಈ ಹಿನ್ನೆಲೆಯಿಂದ ಪ್ರತಿಯೊಂದು ಸ್ಥಳಕ್ಕೂ ಅದರದೇ ಆದ ಹೆಸರಿರುವಂತೆ ಈ ಸ್ಥಳಕ್ಕೂ ಈ ರೀತಿಯ ಹೆಸರು ಬಂದಿರಬಹುದು ಎಂಬುದನ್ನು ನೋಡಬಹುದು.

ಒಂದು ಸ್ಥಳದ ಮೂಲವನ್ನು ತಿಳಯಲು ಯತ್ನಿಸಬೇಕಾದುದು ಬಹಳ ಮುಖ್ಯ ಏಕೆಂದರೆ ಒಂದು ನಿದಿಷ್ಟ ಕಾಲದಲ್ಲಿ ತಲೆಯೆತ್ತಿದ್ದ ಸ್ಥಳನಾಮಗಳ ಹೆಸರನ್ನು ಆ ಸ್ಥಳದ ಭೂ ವಿಶೇಷತೆ ಅಚ್ಚೊತಿದ್ದು ಇನ್ನೊಂದು ಸ್ಥಳದ ಹೆಸರನ್ನು ಪ್ರತ್ಯೇಕಿಸಲು ಅವಕಾಶ ಮಾಡಿಕೊಡುವಂತಾಗುತ್ತದೆ. ಈ ಪ್ರಧಾನ ಅಂಶವೇ ಸ್ಥಳ ನಾಮದ ಹುಟ್ಟಿಗೆ ಕಾರಣವಾಗುತ್ತದೆ. ಎಂದು ಹೇಳಬಹುದು.

ಗೋಪಾಲಸ್ವಾಮಿ ಬೆಟ್ಟಕ್ಕೆ ಕಮಲಾಚಲ, ಕಂಜಗಿರಿ, ಗೋವರ್ಧನಗಿರಿ, ಹಿಮವದ್ ಗೋಪಾಲಸ್ವಾಮಿ ಬೆಟ್ಟ ಎಂದು ಹಲವು ಹೆಸರುಗಳಿವೆ, ದಾಳಗಳಂತಿರುವ ಎಂಟು ಪರ್ವತಗಳಿಂದ ಸುತ್ತುವರಿದು ಕಮಲದ ಆಕೃಯಲ್ಲಿ ಈ ಬೆಟ್ಟವು ಕಂಡುಬರುವುದರಿಂದ ಇದನ್ನು ಕಮಲಾಚಲ ಬೆಟ್ಟ ಎಂತಲೂ ಎತ್ತರದ ಗೋವರ್ಧನಗಿರಿ ಪ್ರಸಿದ್ಧಿಯಿಂದಾಗಿ ಗೋಪಾಲಸ್ವಾಮಿ ಬೆಟ್ಟಕ್ಕೆ ಈ ಹೆಸರಿನ ಪ್ರಾಶಸ್ತ್ಯವಿದೆ. ಇದು ದಕ್ಷಿಣದಿಂದ ಉತ್ತರಾಭಿಮುಖವಾಗಿ ಶಿರಸ್ಸನೊಂದಿಗೋವಿನ ಆಕಾರದಲ್ಲಿ ಕಂಡುಬರುತ್ತದೆ. ಆದ್ದರಿಂದ ಗೋವರ್ಧನಗಿರಿ ಎಂದು ಹೆಸರು ಯಥಾರ್ಥವಾಗಿದೆ. ಕಂಜಗಿರಿ ಎಂದರೂ ಕಮಲ ಬೆಟ್ಟ ಎಂತಲೇ ಅರ್ಥ, ಈ ಬೆಟ್ಟವು ವರ್ಷದ ಬಹುಕಾಲ ಹಿಮದಿಂದ ಮುಚ್ಚಿಕೊಂಡಿರುತ್ತದೆ. ಈ ಕಾರಣದಿಂದಾಗಿ ಈ ಬೆಟ್ಟವನ್ನು ಹಿಮವದ್ ಗೋಪಾಲಸ್ವಾಮಿ ಬೆಟ್ಟ ಎಂದು ಕರೆಯುತ್ತಾರೆ. ಪುರಾಣಗಳಲ್ಲಿ ಕಮಲಾಚಲ ಎಂಬ ನಾಮಾಂಕಿತವೇ ಹೆಚ್ಚು ಪ್ರಚಾರದಲ್ಲಿದ್ದರೆ, ಇಂದು ಶ್ರೀ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಎಂಬ ಹೆಸರೇ ಜನರ ಬಾಯಲ್ಲಿ ಹೆಚ್ಚು ಪ್ರಸಿದ್ಧವಾಗಿದೆ.

ಹಿಮವದ್ ಗೋಪಾಲಸ್ವಾಮಿ ದೇವಾಲಯ:– ಭೊಗೋಳವು ಮಾನವನು ವಾಸಿಸುತ್ತಿರುವ ಭೂಮಿಯನ್ನು ಕುರಿತು ತಿಳಸುತ್ತದೆ. ಆದರೆ ಇತಿಹಾಸವು ಭೂಮಿ ಮೇಲೆ ವಾಸಿಸುವ ಮಾನವರ ವಿಷಯವನ್ನು ತಿಳಸುತ್ತದೆ. ಇತಿಹಾಸ ಎಂಬ ಪರಿಕಲ್ಪನೆಯೇ ಅತ್ಯಂತ ಪ್ರಾಚೀನವಾದುದ್ದು ಇದು ಆದಿ ಮಾನವನಿಂದ ಪ್ರಾರಂಭವಾಗಿ ಪ್ರಸ್ತುತ ಸಮಾಜದವರೆಗೂ ವಿಸ್ತರಿಸಿದೆ.

ಪ್ರಾರಂಭದಲ್ಲಿ ಇತಿಹಾಸ ರಚನೆ, ಕಲೆ, ಜಾತಕ ಕತೆಗಳು, ಕವನ,ಕಥನ ಮೂಲಕ ನಿರೂಪಿತವಾಗುತ್ತಿತ್ತು. ಕ್ರಮೇಣ ಶಾಸ್ತ್ರೀಯ ರೂಪವನ್ನು ಪಡೆದು ಕ್ರಿ.ಶ ೩ನೇ ಶತಮಾನದ ಮಧ್ಯದಲ್ಲಿ ಹೆರೋಡೋಟಸ್ ಎಂಬುವವನು ಪರ್ಶಿಯನ್ ಯುದ್ಧಗಳು ಎಂಬುದನ್ನು ದಾಖಲೆಯಾಗಿ ಬರೆದಂದಿನಿಂದ ಇತಿಹಾಸಕ್ಕೆ ಒಂದು ಸ್ವರೂಪ ದೊರೆತಂತಾಯಿತು. ಅಂದಿನಿಂದ ಭಾರತವು ಸಹ ಇತಿಹಾಸ ರಚನಾ ಕಲೆಗೆ ಪ್ರೋತ್ಸಾಹಕ ರಾಷ್ಟ್ರವಾಯಿತು. ಹಾಗಾಗಿ ಪ್ರತಿಯೊಂದು ಸ್ಥಳವು ತನ್ನದೆ ಆದ ಚರಿತ್ರೆಯನ್ನೊಂದಿದೆ ಎಂದು ಹೇಳಬಹುದು.

ಗೋಪಾಲಸ್ವಾಮಿ ಬೆಟ್ಟವು ಚಾರಿತ್ರಿಕವಾಗಿ ಬೆಟ್ಟದ ಕೋಟೆ ಎಂಬ ಪ್ರಸಿದ್ಧಿಯನ್ನು ಒಂದು ಕಾಲದಲ್ಲಿ ಪಡೆದಿತ್ತು. ಒಂದು ಕಾಲದಲ್ಲಿ ಬೆಟ್ಟದ ಕೋಟೆ ರಾಜ ವೈಭವದಿಂದ ಮೆರೆದ ತಾಣ, ಗತಕಾಲದ ಜೀವನದ ವೈಭವಕ್ಕೆ ಸಾಕ್ಷಿಯಾಗಿ ಇಂದಿಗೂ ಕೋಟೆಯ ಅವಶೇಷಗಳಿವೆ, ಬೆಟ್ಟದ ಕೋಟೆಯ ಕೈಪಿಡಿ ಮತ್ತು ಬೆಟ್ಟದ ಕೋಟೆ ವಂಶಾವಳಿಗಳಿಂದ ಇಲ್ಲಿನ ರಾಜಮನೆತನಗಳ ಬಗ್ಗೆ ಹಲವು ಮಾಹಿತಿಗಳು ದೊರೆತಿವೆ. ಬೆಟ್ಟದ ಕೋಟೆ ರಾಜಮನೆತನದ ಮೂಲಪುರುಷರು ಹೊಯ್ಸಳರ ದಂಡನಾಯಕರು ಬಲ್ಲಾಳನ ಆಶ್ರಿತವಾದ ಡಣ್ಣಾಯಕರು ಹೊಯ್ಸಳ ರಾಜರ ಆಸರೆಯಲ್ಲಿ ಕೆಲವು ರಾಜ್ಯಗಳನ್ನು ಆಳುತ್ತಿದ್ದರು. ಕೇಶವ ಡಣಾಯಕ ನಾಗಪುರಿ (ಹೆಡತಲೆ) ಯನ್ನು ರಾಜಧಾನಿ ಮಾಡಿಕೊಂಡು ಸುಮಾರು 1270 ರಲ್ಲಿ ಈ ಪ್ರದೆಶವನ್ನು ಆಳುತ್ತದ್ದನೆಂದು ತಿಳಿದು ಬರುತ್ತದೆ. ಇವನ ಅನಂತರ ಬಂದವನು ಮಾಧವ ಡಣಾಯಕ, ಬಳಿಕ ಮಾಧವನ ಮಗ ಪೆರುಪಾಳೆ ಡಣಾಯಕ ಬಂದನು ಈತ ಸ್ತ್ರೀ ಲೋಲನಾಗಿ ರಾಜ್ಯವನ್ನು ಕಳೆದುಕೊಂಡು ದಕ್ಷಿಣಾಭಿಮುಖವಾಗಿ ಹೊರಟು ಗೋಪಾಲಸ್ವಾಮಿಯತ್ತ ಬಂದನು. ಅಂದಿನ ರಾತ್ರಿ ಗೋಪಾಲ ಸ್ವಾಮಿ ಆತನಿಗೆ ಕನಸಿನಲ್ಲಿ ಕಾಣಿಸಿಕೊಂಡು ಬೆಟ್ಟವನ್ನು ಈಶಾನ್ಯ ದಿಕ್ಕಿನಿಂದ ಆರೋಹಣ ಮಾಡಲು ಹೇಳಿದನು, ಅದರಂತೆ ಆತ ಮರುದಿನ ಬೆಟ್ಟಕ್ಕೆ ಏರಿದಾಗ ಶಿವಯೋಗಿಯೊಬ್ಬ ಕಾಣಿಸಿಕೊಂಡು ಬೆಟ್ಟದ ಮಹಿಮೆಯನ್ನು ಹೇಳಿ ಅಲ್ಲಿನ ತೀರ್ಥಗಳು ಸಿದ್ಧರಸದ ಬಾವಿ ಮೊದಲಾದವನ್ನು ತೋಡಿಸಿದನು. ಪೆರುಮಾಳ ಡಣಾಯಕ ಅಲ್ಲಿಯೇ ನಿಂತನು, ರಸಸಿದ್ಧಿಯಿಂದ ಕಬ್ಬಿನವನ್ನು ಚಿನ್ನಮಾಡಿ ಬಂದ ಐಶ್ವರ್ಯದಿಂದ ಏಳು ಸುತ್ತಿನಕೋಟೆ ಅರಮನೆ ಮೊದಲಾದವನ್ನು ಕಟ್ಟಿಸಿದನು.

ಈತ ಕಂದಾಯಕ್ಕೆ ಬದಲು ಕೊಂಮ ಗುಳವನ್ನು ಪ್ರಜೆಗಳಿಂದ ಸಂಗ್ರಹಿಸಿ ಅದನ್ನು ಚಿನ್ನವಾಗಿ ಪರಿವರ್ತಿಸುತ್ತಿದ್ದನೆಂದು ಕಥೆಗಳಿವೆ. ಈಗಲೂ ಗದತೀರ್ಥದ ಬಳಿ ಸಿದ್ಧರಂದ್ರಗಳಿವೆ ಎಂದು ನಂಬಿಕೆ, ಈ ಕಥೆಯ ಸತ್ಯಾಸತ್ಯತೆ ಏನೇ ಇರಲಿ ಡಣಾಯಕನ ಕಾಲದಲ್ಲಿ ಇಲ್ಲಿಯ ಕೋಟೆ ಮತ್ತು ಅರಮನೆಗಳು ನಿರ್ಮಾಣವಾದವೆಂದು ತಿಳಿಯಬಹುದು. ಪೆರಮಾಳ ಡಣಾಯಕ, ಗೋವಿಂದ ಡಣಾಯಕ ಮಂಚಣ್ಣ ಡಣಾಯಕ ಮೊದಲಾದ ೨ ಮಂದಿ ಸಹೋದರರೊಡನೆ ರಾಜ್ಯವನ್ನು ನಿರ್ವಹಿಸುತ್ತಿದ್ದನು.

ಎರಡನೆಯ ಘಟ್ಟ :- ಡಣಾಯಕರ ಮಗಳಿಗೂ ಶಿವನ ಸಮುದ್ರದ ರಾಜನ ಮಗನಿಗೂ ವಿವಾಹ ಏರ್ಪಟ್ಟಿತು. ಮದುವೆಯ ಊಟದಲ್ಲಿ ಗಂಡಿನ ಕಡೆಯವರಿಗೆ ಸಂಡಿಗೆ ಬಡಿಸಲಿಲ್ಲವೆನ್ನುವುದರ ಕಾರಣ ಮಾಡಿಕೊಂಡು ಶಿವನ ಸಮುದ್ರದ ರಾಜರು ಜಗಳ ತೆಗೆದರು, ಇದು ಕದನಕ್ಕೆ ನಾಂದಿಯಾಯಿತು, ಈ ಯುದ್ಧದಲ್ಲಿ ಮಂಚಣ್ಣ ಡಣಾಯಕನು ಕಮರಿಗೆ ಬಿದ್ದು ಸತ್ತನು, ಬೊಕ್ಕಸವೆಲ್ಲಾ ವೈರಿಗಳ ವಶವಾಯಿತು. ಇದನ್ನು ನೋಡುತ್ತಿದ್ದ ನುಗ್ಗವ್ವ ತಂದೆಯ ಮನೆಯು ನಾಶವಾದುದ್ದಕ್ಕೆ ದುಃಖಪಟ್ಟು ಬೆಟ್ಟದ ಸಮೀಪದಲ್ಲಿದ್ದ ಕೊಳದಲ್ಲಿ ಸ್ನಾನ ಮಾಡಿ ಅಗ್ನಿಗೆ ಆಹುತಿಯಾದಳು ಅಂದಿನ ಯುದ್ದದ ಗುರುತಾಗಿ ನುಗ್ಗವ್ವನ ಕೊಳ ಎಂದಿದೆ. ಹಾಗೂ ಡಣಾಯಕನ ಕಮರಿ ಈಗಲೂ ಬೆಟ್ಟದ ಕೋಟೆಯಲ್ಲಿದೆ. ಈ ಕದನದ ಬಳಿಕ ಹಲವು ಕಾರಣಗಳಿಂದಾಗಿ ಡಣಾಯಕ ಕುಟುಂಬದವರು ನಾಗಪುರ (ಹೆಡತಲೆ) ನಿಂಗಪಟ್ಟಣ (ಪಿರಿಯಾಪಟ್ಟಣ) ಕೆರಗೋಡು, ನೀಲಗಿರಿ ಮೊದಲಾದ ಕಡೆಗಳಿಗೆ ಚದುರಿಹೋದಂತೆ ತೋರುತ್ತದೆ. ಇದು ಬೆಟ್ಟದ ಕೋಟೆ ವಂಶಾವಳಿಯಲ್ಲಿ ವಿಕ್ತವಾಗಿದೆ, ಕಾಲಾಂತರದಲ್ಲಿ ಬೆಟ್ಟದ ಕೋಟೆ ಮೈಸೂರು ರಾಜರ ಪ್ರಾಬಲ್ಯದಿಂದಾಗಿ ಮೈಸೂರು ದೊರೆಗಳ ಆಡಳಿತ ವಲಯಕ್ಕೆ ಒಳಪಟ್ಟಿತು ಅದರಂತೆ ಇಮ್ಮಡಿರಾಜ ಒಡೆಯರು ನಂಜರಾಜ ಒಡೆಯರ ದೇವರಾಜ ಒಡೆಯರ ಗೋಪಣ್ಣ ಒಡೆಯರು ಹೀಗೆ ಇವರ ಆಡಳಿತವು ಮುಂದುವರಿದಿದೆ ಬೆಟ್ಟದ ಕೋಟೆ ರಾಜರ ವಂಶವು ಬೆಳೆದು ಬಂದಿರುವುದು ಬಹುಮಟ್ಟಿಗೆ ಹೆಣ್ಣು ಮಕ್ಕಳಿಂದಲೇ ಮೈಸೂರು ರಾಜಮನೆತನದಲ್ಲಿ ಗಂಡು ಮಕ್ಕಳಿಲ್ಲದಿರುವಾಗ ಗೋಪಾಲ ಸ್ವಾಮಿ ಬೆಟ್ಟದ ಮನೆತನದಿಂದ ದತ್ತು ಸ್ವೀಕರಿಸುತ್ತಿದ್ದರು. ನವರಾತ್ರಿ ಕಾಲದಲ್ಲಿ ಮೈಸೂರು ಅರಮನೆಯಲ್ಲಿ ಆಯುಧ ಪೂಜೆ ಮಾಡಿ ಆಯುಧವನ್ನು ಮೈಸೂರು ರಾಜರ ಕೈಗೆ ಕೊಡುತ್ತಿದ್ದರು, ಬೆಟ್ಟದ ಕೋಟೆ ಅರಸುಗಾರ, ಹಾಗೆಯೇ ಮೈಸೂರು ರಾಜರು ಸಿಂಹಾಸನ ಏರುವಾಗ ಬೆಟ್ಟದ ಕೋಟೆ ಅರಸರು ಅಸ್ತಲಾಘವ ಮಾಡುತ್ತಿದ್ದರು. ಹೀಗೆ ಬೆಟ್ಟದ ಕೋಟೆ ಅರಸರಿಗೆ ಮೈಸೂರು ಅರಮನೆಯಲ್ಲಿ ಗೌರವಯುತ ಸ್ಥಾನವಿತ್ತು.

ಬೆಟ್ಟದ ಕೋಟೆ ವಂಶದಲ್ಲಿ ಸಾಹಸಮಯ ವ್ಯಕ್ತಿತ್ವಕ್ಕೆ ಕೊರತೆ ಇರಲಿಲ್ಲ ಮೈಸೂರು ರಾಜ್ಯಕ್ಕೂ ಅಪಾಯಕರ ಸನ್ನಿವೇಶ ಒದಗಿ ಬಂದಾಗಲೆಲ್ಲಾ ಬೆಟ್ಟದ ಕೋಟೆ ಮನೆತನದವರು ಅವರಿಗೆ ಬೆಂಬಲವಾಗಿ ನಿಂತು ಬಿಕ್ಕಟ್ಟನ್ನು ಪರಿಹರಿಸುತ್ತಿದ್ದರು. ಮೈಸೂರು ರಾಜ್ಯವನ್ನು ಉಳಿಸಿದವರಲ್ಲಿ ಬೆಟ್ಟದ ಕೋಟೆಯ ಕತ್ತಿ ಗೋಪಾಲರಾಜೇ ಅರಸುರವರು ಮುಖ್ಯವಾದವರು ಇವರು ಹೈದರ್ ಮತ್ತು ಟಿಪ್ಪು ಹೂಡಿದ ಸಂಚನ್ನು ಬುಡಮೇಲು ಮಾಡಿ ಮೈಸೂರು ರಾಜ್ಯವನ್ನು ರಕ್ಷಿಸಲು ಧೈರ್ಯದಿಂದ ಹೋರಾಡಿದರು, ಕತ್ತಿ ಗೋಪಾಲರಾಜೇ ಅರಸು ರವರು ಪತ್ನಿ ಕೊತ್ತೆಗಾಲದ ಕೃಷ್ಣಯ್ಯನವರ ಮಗಳಾದ ಚಂದರಾಜಮ್ಮಣಿ ಇವರ ಮಗಳು 1 ನೇ ಲಕ್ಷಮ್ಮಣ್ಣಿಯನ್ನು ಮೈಸೂರಿನ ಇಮ್ಮಡಿ ರಾಜ ಒಡೆಯರಿಗೆ ವಿವಾಹ ಮಾಡಿಕೊಟ್ಟಿದ್ದರು. ಮೈಸೂರು ರಾಜ್ಯವನ್ನು ಉಳಿಸಿದವರಲ್ಲಿ ಈಕೆಯದು ಪ್ರಮುಖ ಪಾತ್ರ ಒಟ್ಟಿನಲ್ಲಿ ಮೈಸೂರು ರಾಜ್ಯದ ರಾಜಕೀಯ ಚರಿತ್ರೆಗೆ ಬೆಟ್ಟದ ಕೋಟೆ ಅರಸರು ಗಮನಾರ್ಹವಾದ ಕೊಡುಗೆಯನ್ನು ನೀಡಿದ್ದಾರೆ.

ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಮೇಲಿನ ದೇವಸ್ಥಾನ

ಒಟ್ಟಾರೆ ಹೇಳುವುದಾದರೆ ಗುಂಡ್ಲುಪೇಟೆ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ಸು. 18 ಕಿ.ಮೀ ದೂರದಲ್ಲಿರುವ ಗೋಪಾಲಸ್ವಾಮಿ ಬೆಟ್ಟವು ಪ್ರಸಿದ್ಧಿ ಪಡೆದ ಧಾರ್ಮಿಕ ಕ್ಷೇತ್ರವಾಗಿ, ಪ್ರವಾಸಿ ಕೇಂದ್ರ ಮತ್ತು ಪ್ರಮುಖ ಚಾರಣ ಕೇಂದ್ರವಾಗಿ ರೂಪುಗೊಂಡಿದೆ. ಪುರಾಣಗಳು, ಶಾಸನಗಳು ಹಾಗೂ ಕೈಫಿಯತ್ತುಗಳಲ್ಲಿ ತಿಳಿಸಿರುವಂತೆ ಐತಿಹಾಸಿಕ/ಧಾರ್ಮಿಕ ಪ್ರಸಿದ್ಧಿ ಪಡೆದ ಗೋಪಾಲಸ್ವಾಮಿ ಬೆಟ್ಟಕ್ಕೆ ದಕ್ಷಿಣ ಗೋವರ್ಧನಗಿರಿ, ಕಂಜಗಿರಿ, ಕಮಲಾಚಲ, ಬೆಟ್ಟದ ಕೋಟೆ, ಮೂಡಣ ಕೋಟೆಗಳೆಂದು ಬೇರೆ ಬೇರೆ ಹೆಸರುಗಳಿರುವುದು ಕಂಡು ಬರುತ್ತದೆ.

ಇತಿಹಾಸ ಪ್ರಸಿದ್ಧವಾಗಿರುವ ಗೋಪಾಲಸ್ವಾಮಿ ಬೆಟ್ಟವು ಕರ್ನಾಟಕ ರಾಜ್ಯದದಕ್ಷಿಣದತುತ್ತುದಿಯಲ್ಲಿದಕ್ಷಿಣ-ಪಶ್ಚಿಮಾಭಿಮುಖವಾಗಿ ತಮಿಳುನಾಡು, ಕೇರಳ ರಾಜ್ಯ ಗಡಿಭಾಗದಲ್ಲಿ ನಿತ್ಯ ಹಸಿರಿನಿಂದ ಕೂಡಿದ ವನಸಂಪತ್ತಿನಿಂದ ಕಂಗೊಳಿಸುತ್ತದೆ. ಈ ಬೆಟ್ಟವು ಸದಾ ಹಿಮದಿಂದ ಆವರಿಸಿರುವುದರಿಂದ ಮತ್ತು ದೇವಸ್ಥಾನದ ಗರ್ಭಗುಡಿಯ ಹೊಸ್ತಿಲು ಹಿಮದಿಂದ ತೊಟ್ಟಿಕ್ಕುವುದರಿಂದ ಇದಕ್ಕೆ "ಹಿಮವದ್ ಗೋಪಾಲಸ್ವಾಮಿ ಬೆಟ್ಟ"ವೆಂದು ಕರೆಯುತ್ತಾರೆ. ಕ್ರಿ.ಶ. 15-17 ನೆಯ ಶತಮಾನಗಳಲ್ಲಿ ಇದು 'ಕೋಟೆಸೀಮೆ' ಎಂಬ ಪಾಳೆಯಪಟ್ಟಿನ ಮುಖ್ಯಸ್ಥಳವಾಗಿದ್ದು ಗೋಪಾಲಸ್ವಾಮಿಯ ಪ್ರತಿಸ್ಥಾಪನೆ ಕ್ರಿ.ಶ. 1315 ರಲ್ಲಿ ಮಾಧವದಣಾಯಕನಿಂದ ನಿರ್ಮಾಣಗೊಂಡಿತು. ನಂತರದಲ್ಲಿ ಮೈಸೂರು ದೊರೆಗಳ ಆಳ್ವಿಕೆಯ ಕ್ರಿ.ಶ. 1504 ರ ನಡುವೆ ಆಳ್ವಿಕೆ ನಡೆಸಿದ ಬೆಟ್ಟದ ಕೋಟೆ ಅರಸರ ಉಲ್ಲೇಖವಿದ್ದು ಅದರಂತೆ ಇಮ್ಮಡಿ ರಾಜ ಒಡೆಯರ್, ನಂಜರಾಜ ಒಡೆಯರ್ (1489), ದೇವರಾಜ ಒಡೆಯರ್ (1503), ಗೋವಣ್ಣ ಒಡೆಯರ್ (1504) ಆಳ್ವಿಕೆ ನಡೆಸಿರುತ್ತಾರೆ. ಬೆಟ್ಟದ ಕೋಟೆ ಮತ್ತು ಮೈಸೂರು ಒಡೆಯರ ನಡುವೆ ರಾಜವಂಶತನಗಳ ಸಂಬಂಧವಿತ್ತು. ಹೀಗೆ ಗೋಪಾಲಸ್ವಾಮಿ ಬೆಟ್ಟವು ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದ್ದು ಒಂದು ಸಾಂಸ್ಕೃತಿಕ ನೆಲೆಯಾಗಿ ಗುರುತಿಸಿಕೊಂಡಿದೆ.

ಆಧಾರ ಗ್ರಂಥಗಳು:

1. ಹಯವದನ್ ರಾವ್.ಸಿ., ಮೈಸೂರು ಗಿಜಿಟಿಯರ್, ಸಂಪುಟ-5, ಬೆಂಗಳೂರು, 1930, ಪುಟ ಸಂಖ್ಯೆ-653.

2. ರಾಮಕೃಷ್ಣ ಆರ್. ಚಾಮರಾಜನಗರ ತಾಲ್ಲೂಕು ದರ್ಶನ, 1987, ಪುಟ-11.

3. ಕನ್ನಡ ವಿಷಯ ವಿಶ್ವಕೋಶ, ಪುಟ-514.

4. ವೈ.ಸಿ.ಭಾನುಮತಿ, ಗೋಪಾಲಸ್ವಾಮಿ ಬೆಟ್ಟ, ಇಲ್ಲಿ ಹೊನ್ನುಹೊಳೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2007, ಪುಟ 22-24

5. .ಜಿ.ಮಂಜುನಾಥ್, ಕೌಂಡಿನ್ಯ, ಗುಂಡ್ಲುಪೇಟೆ ತಾಲ್ಲೂಕು ವಿದ್ಯಾರ್ಥಿ ವೃಂದ, ಮೈಸೂರು, 1977, ಪುಟ-21.

6. ಕರ್ನಾಟಕ ಸ್ಟೇಟ್ ಗೆಜೆಟಿಯರ್, ಮೈಸೂರು ಡಿಸ್ಟ್ರಿಕ್ಟ್, ಗವರ್ನಮೆಂಟ್ ಪಬ್ಲಿಕೇಷನ್, ಬೆಂಗಳೂರು, 1988, ಪುಟ ಸಂಖ್ಯೆ-843.

7. ಡಾ.ಪಳನಿಸ್ವಾಮಿ, ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ, ಸ್ಕಂದಶ್ರೀ ಪ್ರಕಾಶನ, ಮೂಡುಗೂರು, 2011, ಪುಟ-135.

8. ಟಿ.ಎನ್ ನಾಗರತ್ನ, ಸಾಂಸ್ಕೃತಿಕ ರಾಜಧಾನಿ- ತೆರಕಣಾಂಬಿ, ಇನ್ ಹೊನ್ನುಹೊಳೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2007, ಪುಟ-20.

9. ಎಪಿಗ್ರಫಿ ಆಫ್ ಕರ್ನಾಟಕ., ಸಂ-3, ಗುಂಡ್ಲುಪೇಟೆ, ಪುಟ ಸಂಖ್ಯೆ 115, 120.

ಇಂದಿನ ನಾಗರಿಕ ಸಮಾಜದಲ್ಲಿ ಮಕ್ಕಳ ಮೇಲಿನ ದೌರ್ಜನ್ಯ

*ಕಾವ್ಯ. ಎ. ಎನ್, ** ಡಾ. ವಿದ್ಯಾಶಂಕರ್. ಎಂ. ಹೆಚ್
* ತೃತೀಯ, ಬಿ. ಎಸ್ಸಿ, ಸಹ ಪ್ರಾಧ್ಯಾಪಕರು, ಸಾಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ

ಅಂದು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮಕ್ಕಳನ್ನು ದೇವರಿಗೆ ಹೋಲಿಸಲಾಗಿತ್ತು. ಆದರೆ ಇಂದಿನ ಆಧುನಿಕ ಸಮಾಜದಲ್ಲಿ ಮಕ್ಕಳೆಂದರೆ ಕೆಲವರಿಗೆ ತಿರಸ್ಕಾರದ ಭಾವನೆ ಬಂದಿದೆ. ಅದರಲ್ಲೂ ಹೆಣ್ಣು ಮಕ್ಕಳ ಮೇಲೆ ಇದರ ಪರಿಣಾಮ ಹೆಚ್ಚಾಗಿ ಬೀರುತ್ತಿದೆ. ಕಾಲಕ್ರಮೇಣ ಮನುಷ್ಯ ಆಧುನಿಕ ಜಗತ್ತಿನೆಡೆಗೆ ಸಾಗುತ್ತಿದ್ದಂತೆಯೇ ಅವನಲ್ಲಿ ಅನೇಕ ಬದಲಾವಣೆ ಆಗುತ್ತಿದೆ. ಇದರ ಪರಿಣಾಮವಾಗಿ ಮಕ್ಕಳ ಮೇಲಿರುವ ಪ್ರೀತಿ, ವಾತ್ಸಲ್ಯ ಕಡಿಮೆಯಾಗುತ್ತಿದೆ. ಹೀಗೆ ಮಕ್ಕಳು ಮೊದಲನೆಯದಾಗಿ ತಮ್ಮ ಪೋಷಕರಿಂದಲೇ ದೌರ್ಜನ್ಯಕ್ಕೊಳಗಾಗುತ್ತಿದ್ದಾರೆ. ಮನೆಯಲ್ಲಿಯೇ ಪೋಷಕರು ತಮ್ಮ ಮಕ್ಕಳಲ್ಲಿ ಗಂಡು, ಹೆಣ್ಣು ಎಂಬ ಭೇದ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೇ ಗಂಡು ಮಕ್ಕಳಿಗಿರುವ ಸ್ಥಾನಮಾನ ಹೆಣ್ಣಿಗೆ ದೊರೆಯುತ್ತಿಲ್ಲ. ಇದರೊಂದಿಗೆ ಮಕ್ಕಳು ಸಮಾಜದ ಜನರ ನಡುವೆ ಅತಿಘೋರವಾದ ಸವಾಲುಗಳನ್ನು ಎದುರಿಸುತ್ತಿದ್ದಾರೆ.

ಮಕ್ಕಳ ಮೇಲಿನ ದೌರ್ಜನ್ಯ

ಮಾನಸಿಕವಾಗಿ, ದೈಹಿಕವಾಗಿ ಹಾಗೂ ಲೈಂಗಿಕವಾಗಿ, ಶೈಕ್ಷಣಿಕವಾಗಿ ಮಕ್ಕಳೀಗೆ ಕಿರುಕುಳ ನೀಡುವುದು

ಮಾನಸಿಕ ಕಿರುಕುಳ:– ಮಕ್ಕಳ ಮನಸ್ಸು ತುಂಬಾ ಸೂಕ್ಷ್ಮವಾದುದು, ಅವರ ಮನಸ್ಸಿಗೆ ಘಾಸಿಯಾಗುವ ಯಾವುದೇ ಮಾತುಗಳನ್ನಾಡುವುದು ಅಷ್ಟು ಸಮಂಜಸವಲ್ಲ. ಉದಾ: ಅಶ್ಲೀಲಪದಗಳಿಂದ ಬೈಯುವುದು, ಚುಚ್ಚು ಮಾತಾನಾಡುವುದು ಮಕ್ಕಳ ಮನಸ್ಸಿನ ಮೇಲೆ ತುಂಬಾ ಪ್ರಭಾವ ಬೀರುತ್ತದೆ.

ಪರಿಣಾಮ

* ಮಕ್ಕಳ ಮಾನಸಿಕ ಸ್ಥಿರತೆ ಕುಂದುವುದರಿಂದ ಕೆಲವು ಬಾರಿ ಮಾನಸಿಕ ರೋಗಿಯಾಗುತ್ತಾರೆ.

* ಮನಸ್ಸಿಗೆ ನೋವಾಗುವುದರಿಂದ ಪ್ರಾಣಕ್ಕೆ ಹಾನಿ ಮಾಡಿಕೊಳ್ಳ ಬಹುದು.

ನಿಯಂತ್ರಣ

* ಮಕ್ಕಳನ್ನು ಕಠೋರ ಮಾತುಗಳೀಂದ ಬೈಯುವುದರ ಬದಲು ಆದಷ್ಟು ಅವರೋಡನೇ ಪ್ರೀತಿಯಿಂದ ವರ್ತಿಸಬೇಕು.

ಶೈಕ್ಷಣಿಕ ದುರ್ಬಳಕೆ (ಕಿರುಕುಳ):– ಶೈಕ್ಷಣಿಕವಾಗಿ ಮಕ್ಕಳನ್ನು ಮಾನಸಿಕವಾಗಿ ಹಿಂಸಿಸಿ ಮಗುವಿನ ಸರ್ವೋತೋಮುಖ ಬೆಳವಣಿಗಿಗೆ ಅಡ್ಡಿಪಡಿಸುವುದು ಮತ್ತು ಮಕ್ಕಳಿಗೆ ಸರಿಯಾದ ಶಿಕ್ಷಣ ದೊರಕಿಸದಿರುವುದು.

ಪರಿಣಾಮ

* ಮಕ್ಕಳು ಅವರ ಆಯ್ಕೆಯ ಶಿಕ್ಷಣದಿಂದ ವಂಚಿತರಾಗುವುದು

* ಸಮಗ್ರವಾದ ಶಿಕ್ಷಣ ದೊರಕದೆ ಮಕ್ಕಳಿಗೆ ಸಮಾಜದಲ್ಲಿ ಸ್ಥಾನಮಾನ ಕಡಿಮೆಯಾಗುತ್ತದೆ.

2012–13 ಮುಂಬೈನ ಪಿ. ಯು ವಿದ್ಯಾರ್ಥಿಯು ತಾನು 98% ಶೇ ಪಡೆದಿದ್ದರೂ ಪೋಷಕರು ವಿದಿಸಿದ ಶೇಕಡವಾರಿಗೆ ಪೂರೈಸಲು ಸಾಧ್ಯವಾದದಿದ್ದಾಗ ವಿದ್ಯಾರ್ಥಿನಿಯು ರೈಲ್ವೆ ಹಳಗೆ ತನ್ನ ತಲೆಯನ್ನು ಕೊಟ್ಟು ಆಕೆಯು ಪ್ರಾಣ ಕಳೆದುಕೊಂಡದ್ದು ಜೀವಂತ ಸಾಕ್ಷಿಯಾಗಿದೆ.

ನಿಯಂತ್ರಣ

* ಪ್ರತೊಯೊಬ್ಬ ಮಕ್ಕಳೀಗೆ ಸರಿಯಾದ ಶಿಕ್ಷಣ ದೊರಕಿಸಬೇಕು ಮತ್ತು ಅವರ ಇಚ್ಚೆಯ ಶಿಕ್ಷಣ ಆಯ್ಕೆ ಮಾಡಲು ಪ್ರೋತ್ಸಾಯಿಸುವುದು ಉತ್ತಮ

ದೈಹಿಕ ಕಿರುಕುಳ

ಮಕ್ಕಳು ತುಂಬಾ ದುರ್ಬಲರು ನಿರ್ಬಲರು ಅಂತಹವರ ಮೇಲೆ ದೌರ್ಜನ್ಯ ಮಾಡುವುದು ಪೌರುಷತ್ವವಲ್ಲ. ಅವರಿಗೆ ವಿನಃ ಕಾರಣ ಒಡೆಯುವುದು, ಬರೆ ಹಾಕುವುದು, ಕಟ್ಟಿ ಹಾಕುವುದು, ಕತ್ತಲು ಕೊಣೆಯಲ್ಲಿ ಬಂದಿದುವುದು ಇದೆಲ್ಲಾ ದೈಹಿಕ ದುರ್ಬಳಕೆಯಾಗುತ್ತದೆ.

ಪರಿಣಾಮ

* ಇದರಿಂದ ಅವರಿಗೆ ದೈಹಿಕವಾಗಿ ನೋವಾಗುವುದರೊಂದಿಗೆ ಮಾನಸಿಕವಾಗಿ ಹಿಂಸೆಯಾಗುತ್ತದೆ.

* ದೈಹಿಕವಾಗಿ ದುರೆಬಲರಾಗುತ್ತಾರೆ.

ನಿಯಂತ್ರಣ

* ಮಕ್ಕಳು ಮಾಡಿದ ಸಣ್ಣ ಪುಟ್ಟಾ ತಪ್ಪುಗಳಿಗೆ ಶಿಕ್ಷೆ ನೀಡುವುದೇ ಸರಿಯಾದ ಉತ್ತರವಲ್ಲ

* ಅದರ ಬದಲು ಅವರಿಗೆ ತಿದ್ದಿ ಬುದ್ದಿವಾದ ಹೇಳಿದರೆ ಬೇಗ ಅರ್ಥ ಮಾಡಿಕೊಳ್ಳುತ್ತಾರೆ. ಒಳ್ಳೆ ಮಾತುಗಳನ್ನು ಕೇಳುವುದರಿಂದ ಅವರಿಗೆ ಶಿಕ್ಷೆಯ ಅಗತ್ಯವಿರುವುದಿಲ್ಲ.

ಲೈಂಗಿಕ ಕಿರುಕುಳ:–

ಮಕ್ಕಳ ಮೇಲಿನ ಲೈಂಗಿಕ ದುರ್ಬಳಕೆಯು ಹಿಂದಿನಿಂದಲೂ ಸಮಾಜದಲಿದೆ. ಮಕ್ಕಳ ಮೇಲಿನ ಲೈಂಗಿಕ ದುರ್ಬಳಕೆಯ ಅಪಾಯ ಎಲ್ಲಾ ಲಿಂಗ, ಜಾತಿ, ಕುಲ, ವರ್ಗಗಳಲಿ, ನಗರ ಮಾತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಿಸಿದೆ. ಅದರಲ್ಲೂ ಮಾನಸಿಕ ಮತ್ತು ದೈಹಿಕ ವಿಕಲತೆ ಇರುವವರು ಇನ್ನೂ ಹೆಚ್ಚಿನ ಅಪಾಯಕ್ಕೆ ಈಡಾಗುತ್ತಿದ್ದಾರೆ.

ದುರ್ಬಳಕೆಯ ವಿಧಾನ

* ಮಗಿವಿನ ದೇಹದ ಯಾವುದೇ ಭಾಗವನ್ನು ನೇರವಾಗಿ ಇಲ್ಲವೇ ಪರೋಕ್ಷವಾಗಿ ಲೈಂಗಿಕ ತೃಪ್ತಿ ಪಡೆಯಲು ಮುಟ್ಟುವುದು

* ಲೈಂಗಿಕ ಬಣ್ಣವಿರುವ ಮಾತನಾಡುವುದು ಅಥವಾ ಅಸಭ್ಯ ಮತ್ತು ಅಶ್ಲೀಲ ಬೈಗುಳಗಳನ್ನು ಮಗುವಿನ ಮೇಲೆ ಬಳಸುವುದು

* ಮಕ್ಕಳನ್ನು ಅಶ್ಲೀಲತೆಗೆ ಒಡ್ಡುವುದು ಇಲ್ಲವೇ ಅಶ್ಲೀಲ ಸಾಮಗ್ರಿ ತಯಾರಿಕೆಗೆ ಬಳಕೆ ಮಾಡುವುದು

* ಮಕ್ಕಳನ್ನು ಲೈಂಗಿಕ ಕ್ರಿಯೆಯಲ್ಲಿ ತೊಡಗುವಂತೆ ಬಲವಂತ ಮಾಡುವುದು

* ಕೆಲವು ಸಂದರ್ಭಗಳಲ್ಲಿ ಮಗುವಿನ ಅತಿ ಸಮೀಪದ ವ್ಯಕ್ತಿಯೇ ಅದ ತಂದೆ – ಅಣ್ಣ – ಚಿಕ್ಕಪ್ಪ – ಮಾವ ಹಾಗೂ ನೆರೆಮನೆಯವರಿಂದ ದುರ್ಬಳಕೆ ನೆಡೆಯುತ್ತದೆ.

* ಬಾಲಕೀಯರು ಈ ದುರ್ಬಳಕೆಗೆ ಬೇಗ ಒಳಗಾಗುವರೆಂಬ ನಂಬಿಕೆ ಇದ್ದರೂ ಬಾಲಕರು ಸಹ ಲೈಂಗಿಕ ದುರ್ಬಳಕೆಗೆ ಬಲಿಯಾಗುತ್ತಿದ್ದಾರೆ.

ಲೈಂಗಿಕ ದುರ್ಬಳಕೆಯ ಪರಿಣಾಮ

* ಮಕ್ಕಳು ಅನೇಕ ಸಲ ತಪ್ಪಿತಸ್ಥ ಭಾವನೆ, ಖಿನ್ನತೆ, ಆತಂಕ ಮತ್ತು ಲೈಂಗಿಕ ದುರ್ಬಲತೆಯಿಂದ ಬಳಲುವುದರೊಂದಿಗೆ ಕುಟುಂಬದಿಂದ ಸಾವಕಾಶದಿಂದ ದೂರವಾಗುವುದು.

* ಹಲವು ಮಕ್ಕಳು ವಯಸ್ಕ ಸಬಂಧಗಳಲ್ಲಿ ಲೈಂಗಿಕ ಸಮಸ್ಯೆ ಎದುರಿಸುವುದು

* ಲೈಂಗಿಕ ದುರ್ಬಳಕೆಯಿಂದ ಖಿನ್ನತೆಗೊಳಗಾಗಿ ಕೆಲವು ಬಾರಿ ಆತ್ಮಹತ್ಯೆ ಮಾಡಿಕೊಳ್ಳುವ ಸಾದ್ಯತೆ ಇದೆ.

ನಿಯಂತ್ರಣ

* ಮಕ್ಕಳೀಗೆ ಲೈಂಗಿಕತೆ ಪರಿಣಾಮದ ಬಗ್ಗೆ ಅರಿವು ಮೂಡಿ ಸುವುದು.

* ಮಕ್ಕಳೀಗೆ ಲೈಂಗಿಕ ಶಿಕ್ಷಣದ ಬಗ್ಗೆ ಮಾಹಿತಿ ನೀಡುವುದು

ಬಾವಾನಾತ್ಮಕ ಕಿರುಕುಳ



ಮಕ್ಕಳು ತುಂಬಾ ಆಶಾ ಬಾವನೆ, ಆಸೆ ಮತ್ತು ಕನಸುಗಳನ್ನು ಇಟ್ಟುಕೊಂಡಿರುತ್ತಾರೆ, ಅಂತಹ ಮಕ್ಕಳ ಬಾವನೆಗೆ ಬೆಲೆ ಕೊಡದೆ ಅವರ ಬಾವನೆಯೊಂದಿಗೆ ಆಟವಾಡುವುದು ಬಾವನಾತ್ಮಕ ದುರ್ಬಳಕೆಯಾಗುತ್ತದೆ.

ಪರಿಣಾಮ

* ಇದರ ಪರಿಣಾಮವಾಗಿ ಮಕ್ಕಳ ಆಶಾಗೊಪುರ ಕೆಡವಿದಂತಾ ಗುತ್ತದೆ.

* ಅವರ ಕನಸ್ಸು ಮತ್ತು ಭಾವನೆಗಳಿಗೆ ದಕ್ಕೆ ಬರುವುದರಿಂದ ಮತ್ತೆ ಅವರು ಕನಸು ಕಾಣುವುದನ್ನು ನಿಲ್ಲಿಸಬಹುದು

ನಿಯಂತ್ರಣ

* ಅದ್ದರಿಂದ ಅದಷ್ಟು ಎಲ್ಲರೂ ಎಲ್ಲಾ ವಿಷಯದಲ್ಲೂ ಮಕ್ಕಳನ್ನು ಪ್ರೋತ್ಸಾಯಿಸುವುದು ಉತ್ತಮ.

* ಮಕ್ಕಳ ಭಾವನೆ ಮತ್ತು ಕನಸ್ಸುಗಳಿಗೆ ಬೆಲೆ ನೀಡುವುದು ಅಗತ್ಯವಾಗುತ್ತದೆ.

ಬಾಲ ಕಾರ್ಮಿಕ ಪದ್ಧತಿ

ಮಕ್ಕಳ ದಿನ ನಿತ್ಯದ ಹಾಗೂ ದೀರ್ಘಾವಧಿ ದುಡಿಮೆಯ ಉದ್ಯೋಗವನ್ನು ಬಾಲ ಕಾರ್ಮಿಕತ್ವ ಎಂದು ಕರೆಯಲಾಗುತ್ತದೆ. ಈ ಅಭ್ಯಾಸವನ್ನು ಹಲವು ಅಂತರರಾಷ್ಟ್ರೀಯ ಸಂಘಗಳು ಮತ್ತು ಹಲವಾರು ದೇಶಗಳಲ್ಲಿ ಶೋಷಣೆಯ ಎಂದು ಪರಿಗಣಿಸಿದೆ. ಇತಿಹಾಸದಲ್ಲಿ ಬಾಲ ಕಾರ್ಮಿಕ ಪದ್ಧತಿಯು ವಿವಿಧ ಅರ್ಥಗಳಲ್ಲಿ ಉಪಯೋಗಿಸಲ್ಪಟ್ಟಿದೆ.

ಐತಿಹಾಸಿಕ

* ಹಿಂದೆ ಕೈಗಾರಿಕ ಕ್ರಾಂತಿಯ ಸಮಯದಲ್ಲಿ ನಾಲ್ಕು ವರ್ಷದ ಮಕ್ಕಳನ್ನು ಕಾರ್ಖಾನೆಗಳ ಅಪಾಯಕಾರಿ ಹಾಗೂ ಮಾರಕ ದುಡಿಮೆಯ ಸ್ಥಿತಿಗಳಲ್ಲಿ ದುಡಿಸಿಕೊಳ್ಳಲಾಗುತ್ತಿತ್ತು ಎಂದು ತಿಳಿದು ಬಂದಿದೆ. ಕೈಗಾರಿಕಾ ಕ್ರಾಂತಿಯ ಕಾಲದಲ್ಲಿನ ಆರ್ಥಿಕ ಸಂಕಷ್ಟದಿಂದಾಗಿ ಬಾಲ ಕಾರ್ಮಿಕ ಪದ್ಧತಿಯೂ ಪ್ರಮುಖ ಪಾತ್ರವನ್ನುವಹಿಸಿತ್ತು.

* ಕೈಗಾರಿಕ ಕ್ಷೇತ್ರದಲ್ಲಿ ಚಿಮಣಿಯನ್ನು ಶುದ್ಧಿಕರಿಸಲು ಚುರುಕಾದ ಹುಡುಗರನ್ನು ಕಲ್ಲಿದ್ದಲು ಗಣಿಗಳಲ್ಲಿ ಚಿಕ್ಕ ಮಕ್ಕಳನ್ನು ಕೆಲಸ ಮಾಡಲು ಉಪಯೋಗಿಸಿಕೊಳ್ಳುತ್ತಿದ್ದರು. ಅಷ್ಟೆ ಅಲ್ಲದೆ ಮಕ್ಕಳು ಸಂದೇಶವಾಹಕವಾಗಿ ಗುಡಿಸುವವರಾಗಿ, ಬೂಟ್ ಪಾಲೀಷ್ ಮಾಡುವವರಾಗಿ, ಅಥವಾ ಹೂ, ಕಡ್ಡಿ ಪೆಟ್ಟಿಗೆ ಮತ್ತು ಇತರೆ ಚಿಲ್ಲರೆ ಸರಕುಗಳನ್ನು ಮಾರುವ ಕೆಲಸ ಮಾಡುತ್ತಿದ್ದರು.

* ಅದಲಲ್ದೆ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಮಕ್ಕಳೂ ವೇಶ್ಯ ವೃತ್ತಿಯಲ್ಲೂ ದುಡಿಯುತ್ತಿದ್ದರು.

* ಕೆಲವು ಮುಂದುವರೆದ ದೇಶಗಳಲ್ಲಿ ನಿಗದಿತ ವಯಸ್ಸಿಗಿಂತ ಅಂದರೆ 18 ವರ್ಷದೊಳಗಿನ ಮಕ್ಕಳನ್ನು ದುಡಿಸಿಕೊಳ್ಳುವುದು ಶೋಷಣೆ ಎಂದು ಪರಿಗಣಿಸಿದೆ.

* ವಿಶ್ವ ಬ್ಯಾಂಕ್ ವರದಿಯ ಪ್ರಕಾರ ಪ್ರಪಂಚದಲ್ಲಿ 1960 ರಿಂದ 2003 ರ ಮಧ್ಯದಲ್ಲಿ ಬಾಲ ಕಾರ್ಮಿಕ ಘಟನೆಗಳು ಶೇ 25 ರಿಂದ 10 ಕ್ಕೆ ಇಳಿದಿದೆ.

* ಬಾಲ ಕಾರ್ಮಿಕ ಪದ್ಧತಿಯು ಪ್ರಪಂಚದ ಕೆಲವು ಭಾಗಗಳಲ್ಲಿ ಇಂದಿಗೂ ಸಾಮಾನ್ಯವಾಗಿದೆ ಅವುಗಳಲ್ಲಿ ಕಾರ್ಖಾನೆ ಕೆಲಸ, ಗಣಿಗಾರಿಗೆ, ವೇಶ್ಯ ವೃತ್ತಿ ಕಲ್ಲು ಹೊಡೆಯುವ ಕೆಲಸ, ಕೃಷಿ ಮತ್ತು ಇತರ ವ್ಯವಹಾರಗಳಲ್ಲ ಪೋಷಕರಿಗೆ ಸಹಾಯ ಮಾಡುವುದು. ಮತ್ತು ತಮ್ಮದೇ ಆದ ಸಣ್ಣ ವ್ಯವಹಾರ ಹೊಂದಿರುವುದು ಸಹ ಸೇರಿದೆ.

* ಯುನಿಸೆಫ್ ನ ಪ್ರಕಾರ ಪ್ರಪಂಚಾದ್ಯಂತ 5 ರಿಂದ 14 ವಯಸ್ಸಿನ ಒಳಗಿನ ಬಾಲ ಕಾರ್ಮಿಕರು ಸುಮಾರು 250 ಮಿಲಿಯನ್‌ಗಳಷ್ಟು ಇದ್ದಾರೆಂದು ಅಂದಾಜು ಮಾಡಲಾಗಿದೆ.

* ಸಿ. ಎಸಿ. ಎಲ್ ಅಂದಾಜಿನಂತೆ ಸುಮಾರು 70 ರಿಂದ 80 ಮಿಲಿಯನ್ ಬಾಲಕಾರ್ಮಿಕರುಗಳು ಭಾರತದಲ್ಲಿ ಇದ್ದಾರೆ ಎಂದು ತಿಳಿದು ಬಂದಿದೆ.

* ಬಾಲ ಕಾರ್ಮಿಕ ಪದ್ಧತಿಯು ಲೆಕ್ಕಾಚಾರದ ಪ್ರಕಾರ ಏಷ್ಯಾ ಖಂಡದಲ್ಲಿ ಶೇ 22 ರಷ್ಟು ಆಫ್ರೀಕದಲ್ಲಿ ಶೇ 32 ರಷ್ಟು ಲ್ಯಾಟೀನ್ ಅಮೇರಿಕದಲ್ಲಿ ಶೇ 17 ರಷ್ಟು ಹಾಗೂ ಅಮೇರಿಕ ಕೆನಾಡ, ಯುರೋಪ್ ಮತ್ತು ಇತರೆ ಶ್ರೀಮಂತ ರಾಷ್ಟ್ರಗಳಲ್ಲಿ ಶೇ 1 ರಷ್ಟು ಇದೆ. ಎಂದು ಪರಿಗಣಿಸಲಾಗಿದೆ.

ಬಾಲ ಕಾರ್ಮಿಕ ರಕ್ಷಣೆ

* 19ನೇ ಶತಮಾನ ಪೂರ್ವಾರ್ಧದಲ್ಲಿ ಬ್ರಿಟನ್‌ನಲ್ಲಿ ಬಾಲ ಕಾರ್ಮಿಕರ ವಿರುದ್ದದ ಮೊದಲನೆಯ ಸಾಮಾನ್ಯ ರಕ್ಷಣ ಕಾಯಿದೆಯನ್ನು ಜಾರಿಗೊಳಿಸಲಾಯಿತು.

* ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಬಾಲ ಕಾರ್ಮಿಕರಿಂದ ತಯಾರಿಸಲ್ಪಟ್ಟ ಉತ್ಪಾದನೆಗಳನ್ನು ಕೊಂಡುಕೊಳ್ಳುವ ಸಾರ್ವಜನಿಕರ ನೈತಿಕತೆಯನ್ನು ಪ್ರಶ್ನಿಸುವುದರೊಂದಿಗೆ ಮಕ್ಕಳ ಬಗ್ಗೆ ಕಾಳಜಿ ವಹಿಸಿದ್ದಾರೆ ಉದಾ: ಯುನಿಸೆಫ್‌ನ ಅಧ್ಯಯನ ಕಂಡುಕೊಂಡಂತೆ ಯುಎಸ್‌ನಲ್ಲಿ Child Labour Diterence act ಅನ್ನು ಜಾರಿಗೊಳಿಸಿದ ಮೇಲೆ ಬಾಂಗ್ಲಾದೇಶದ ಸಿದ್ಧ ಉಡುಪುಗಳ ಕೈಗಾರಿಕೆಯಲ್ಲಿ ಕೆಲಸದಲ್ಲಿ ತೊಡಗಿರುವ ಸುಮಾರು ೫೦,೦೦೦ ಮಕ್ಕಳನ್ನು ಕೆಲಸದಿಂದ ಮುಕ್ತಗೊಳಿಸಲಾಯಿತು.

* Concern for working children ಎಂಬುದು ಬಾಲ ಕಾರ್ಮಿಕ ಪದ್ಧತಿಯನ್ನು ತಡೆದು ಹಾಕುವುದರ ಪರವಾಗಿ ಕೆಲಸ ಮಾಡುತ್ತಿರುವ ಭಾರತೀಯ ಮೂಲಕ ಪರೋಪಕಾರ ಸಂಸ್ಥೆಯಾಗಿದೆ 1992 ರಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘವು International programe on the elimination of child labout (IPEC) ಎಂಬ ಕಾರ್ಯಕ್ರಮವನ್ನು ಹುಟ್ಟು ಹಾಕಿದ್ದು ಇದು ಸದ್ಯದ ೪೪ ರಾಷ್ಟ್ರಗಳಲ್ಲಿ ಕಾರ್ಯಚರಣೆ ನೆಡೆಸುತ್ತಿದ್ದು ವಿಶ್ವಮಟ್ಟದ ಬೃಹತ್ ಕಾರ್ಯಕ್ರಮವೆಂದು ಹೆಸರು ಪಡೆದಿದೆ. ಇದರಡಿಯಲ್ಲಿ ಬಾಲಕಾರ್ಮಿಕ ಪದ್ಧತಿಯ ವಿರುದ್ಧ ವಿಶ್ವದಾದ್ಯಂತ ಆಂದೋಲನವನ್ನು ಪ್ರೋತ್ಸಾಯಿಸಲಾಗಿದೆ.

ಬಾಲ್ಯ ವಿವಾಹ

ಭಾರತೀಯ ಸಮಾಜದಲ್ಲಿ ಬಾಲ್ಯ ವಿವಾಹ ಪದ್ಧತಿಯು ಒಂದು ಸಾಮಾನ್ಯ ಸಂಗತಿಯಾಗಿದೆ. ಇದರಲ್ಲಿ ಎರಡು ವಿಧದ ಪದ್ಧತಿ ಇದೆ. ಮೊದಲನೇ ವಿಧದ ಪದ್ಧತಿಯಲ್ಲಿ ಚಿಕ್ಕ ವಯಸ್ಸಿನ ಮಕ್ಕಳೀಗೆ ವಯಸ್ಸಾದವರೊಂದಿಗೆ ಮದುವೆ ಮಾಡುವುದು. ಎರಡನೇ ವಿಧದ ಪದ್ಧತಿಯಲ್ಲಿ ತಂದೆ ತಾಯಿಗಳು ಬಾಲ್ಯದಲ್ಲಿಯೇ ಗಂಡು ಮತ್ತು ಹೆಣ್ಣು ಶಿಶುವನ್ನು ಭವಿಷ್ಯದಲ್ಲಿ ಬಾಲ್ಯ ವಿವಾಹ ಮಾಡಿಸುವಂತೆ ಒಪ್ಪಂದ ಮಾಡಿಕೊಂಡಿರುತ್ತಾರೆ. ಕಾನೂನಿನ ಪ್ರಕಾರ ಪುರುಷರಿಗೆ ಮದುವೆಯಾಗುವ ಪ್ರಾಪ್ತ ವಯಸ್ಸು 21 ಹಾಗೂ ಹೆಣ್ಣು ಮಕ್ಕಳೀಗೆ 18 ವರ್ಷಗಳು.

ಬಾಲ್ಯ ವಿವಾಹಕ್ಕೆ ಕಾರಣಗಳೂ

* ಬಡತನ

* ಹೆಣ್ಣು ಮಕ್ಕಳ ಕಡಿಮೆ ಶಿಕ್ಷಣ

* ಹೆಣ್ಣು ಮಕ್ಕಳನ್ನು ಆರ್ಥಿಕವಾಗಿ ಹೊರೆ ಎಂದು ಬಾವಿಸುವುದರಿಂದ ಹೆಣ್ಣು ಮಕ್ಕಳಿಗೆ ಕಡಿಮೆ ಸ್ಥಾನಮಾನ

* ಸಮಾಜಿಕ ಪದ್ಧತಿ ಮತ್ತು ಗೊಡ್ಡು ಸಂಪ್ರದಾಯ

ಬಾಲ್ಯ ವಿವಾಹದ ದುಷ್ಪರಿಣಾಮಗಳು

* ಎಳೆ ವಯಸ್ಸಿನಲ್ಲಿ ಮದುವೆಯಾಗಿರುವುದರಿಂದ ಹೆಣ್ಣು ಮಕ್ಕಳಿಗೆ ಇನ್ನೂ ದೈಹಿಕವಾಗಿ ಬಲ ಹೊಂದಿಲ್ಲದೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದರಿಂದ ತಾಯಿ ಮತ್ತು ಶಿಶು ಮರಣ ಪ್ರಮಾಣ ಹೆಚ್ಚುತ್ತಿದೆ.

* ಬಾಲ್ಯದಲ್ಲಿಯೇ ಮದುವೆಯಾಗುವ ಕಾರಣದಿಂದ ಶಿಕ್ಷಣದ ಕೊರತೆಯುಂಟಾಗಿ ಸಮರ್ಪಕ ಉದ್ಯೋಗ ಸಿಗದೆ ದೀರ್ಘಕಾಲದ ಬಡತನಕ್ಕೆ ತುತ್ತಾಗುತ್ತಾರೆ.

* ಸ್ಥಾನಮಾನದ ಅರಿವಿರದ, ಸಬಲರಾಗಿಲ್ಲದ ಮತ್ತು ಇನ್ನೂ ಪ್ರೌಢವಸ್ಥೆ ಹೊಂದಿಲ್ಲದ, ಚಿಕ್ಕ ಮಕ್ಕಳು ಮನೆಯಲ್ಲಿ ಲೈಂಗಿಕ ಶೋಷಣೆ ಮತ್ತು ಸಾಮಾಜಿಕ ಪ್ರತ್ಯೇಕತೆಗೆ ಗುರಿಯಾಗುವುದು.

ಬಾಲ್ಯ ವಿವಾಹ ರಕ್ಷಣೆ ಸರ್ಕಾರ ಕೈಗೊಂಡಿರುವ ಕ್ರಮಗಳು:

* ಬಾಲ್ಯ ವಿವಾಹದ ವಿರುದ್ಧದ ಕಾನೂನನ್ನು ರಚಿಸುವುದು

* ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ದೊರಕುವಂತೆ ಮಾಡುವುದು ಮತ್ತು ಮಾರಕವಾದ ಸಾಮಾಜಿಕ ಪದ್ಧತಿ ಮತ್ತು ಸಂಪ್ರದಾಯಗಳನ್ನು ಬದಲಾಯಿಸುವುದು.

ಶಿಕ್ಷೆ ಮತ್ತು ಕಾಯಿದೆ

ಬಾಲ್ಯ ವಿವಾಹದ ಸಂಗತಿ ಎಂದರೆ ನಮ್ಮನ್ನು ಆಳುತ್ತಿದ್ದ ಪರಕೀಯರಿಗೆ ಇದು ಅಸಹ್ಯವಾಗಿ ತೊರಿದ್ದರಿಂದ ಅವರು 1929 ರಲ್ಲಿಯೇ ಬಾಲ್ಯ ವಿವಾಹ ತಡೆಗಟ್ಟುವ ಕಾನೂನ್ನು ತಂದರು ಆನಂತರ ಭಾರತ ಸರ್ಕಾರವು ಈ ಕಾನೂನನ್ನು 2006 ರಲ್ಲಿ ತಿದ್ದುಪಡಿಮಾಡಿ ಬಾಲ್ಯ ವಿವಾಹವನ್ನು ನಿಷೇಧಿಸಿದೆ. ಈ ಕಾಯಿದೆಯನ್ವಯ ಹುಡುಗನಿಗೆ 21 ವರ್ಷ ವಯಸ್ಸು ಹುಡುಗಿಗೆ 18 ವರ್ಷ ವಯಸ್ಸು ಆಗಿದ್ದಲ್ಲಿ ಮಾತ್ರ ಮದುವೆ ಮಾಡಬೇಕು ಈ ನಿಯಮ ಮೀರಿ ಮದುವೆ ಮಾಡಿದರೆ ಅಪ್ರಾಪ್ತ ವಯಸ್ಸಿನ ಮದುವೆಯೆಂದು ಪರಿಗಣಿಸಿ ಪಾಲಕರಿಗೆ 1929 ಮತ್ತು 2006 ನೇ ಕಾನೂನು ತಿದ್ದುಪಡಿ ಅನ್ವಯ Criminal law (Sec 375 Indian Pinal Court 1860) ಅಡಿಯಲ್ಲಿ ಸಾವಿರಾರು ರೂಪಾಯಿ ದಂಡಗಳು ಹಾಗೂ 2 ವರ್ಷ ಕಾರಾಗೃಹ ಶಿಕ್ಷೆ ವಿಧಿಸಲಾಗುತ್ತದೆ. ಈ ಕಾನೂನಿಂದಾಗಿ ಮತ್ತು ಆಧುನಿಕ ಶಿಕ್ಷಣ ಸುಧಾರಣೆಯಿಂದಾಗಿ ಈಗ ಬಾಲ್ಯ ವಿವಾಹಗಳು ಅಷ್ಟಾಗಿ ಜರುಗುತ್ತಿಲ್ಲಾವಾದರೂ ಅವು ಪೂರ್ತಿ ನಿಂತಿವೆ ಎಂದು ಹೇಳುವಂತಿಲ್ಲ.

ಉಪಸಂಹಾರ:– ನಾವಿಂದು 21 ನೇ ಶತಮಾನದ, ಆಧುನಿಕ ಜಗತ್ತಿನ, ನಾಗರೀಕ ಸಮಾಜದ, ನಾಗರೀಕರಾಗಿದ್ದರೂ ನಮಗಿನೂ ನಾಗರೀಕತೆ, ಮಾನವೀಯತೆ ಎಂಬುದು ಅಷ್ಟಾಗಿ ಬಂದಿಲ್ಲ ದಿನನಿತ್ಯ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ನೋಡದಿರೂ ಅದರ ಬಗ್ಗೆ ಯಾರಲ್ಲೂ ಕಾಳಜಿಯಿಲ್ಲ ನಮ್ಮ ಮಕ್ಕಳಷ್ಟೆ ಚೆನ್ನಾಗಿದ್ದರೆ ಸಾಕು ಎನ್ನುವವರು ಕೆಲವರಾದರೆ, ಬೇರೆಯವರ ಮಕ್ಕಳ ವಿಷಯ ನಮಗೇತಕೆ ಎನ್ನುವ ಜನರು ಇದ್ದಾರೆ. ಇಂತಹ ಸಮಾಜದ ನಡುವೆ ಮಕ್ಕಳಿಗೆ ಆಗಿರುವ ಅನ್ಯಾಯದ ವಿರುದ್ಧ ನ್ಯಾಯ ದೊರಕಿಸಿಕೊಡುವ ಹಾಗೂ ಅವರ ಕಣ್ಣೀರನ್ನು ಒರೆಸುವ ಸಲುವಾಗಿ ಈ ಪ್ರಬಂಧವನ್ನು ನಿಮ್ಮ ಮುಂದೆ ಮಂಡಿಸಿದ್ದೇನೆ. ಇನ್ನು ಮುಂದಾದರೂ ಎಲ್ಲರಿಗೂ ಪ್ರತಿಯೊಬ್ಬ ಮಕ್ಕಳ ಮೇಲೆ ಕಾಳಜಿಯಿರಬೇಕು, ಅವರನ್ನು ಈ ನರಕದಿಂದ ರಕ್ಷಣೆ ಮಾಡಿ ಎಂದು ಕೇಳ ಕೊಳ್ಳುತ್ತೇನೆ.

ವಿಭಾಗ:–5

ಧನ್ವಂತರೀಯಮ್

ಆಯುರ್ವೇದ ಮತ್ತು ಆರೋಗ್ಯ ವಿಜ್ಞಾನಗಳು

DHANVANTAREEYAM

Health, Medical Sciences & Ayurveda

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಸಂಸ್ಕೃತ ಸಾಹಿತ್ಯದಲ್ಲಿ ಚಿತ್ತಸ್ವಾಸ್ಥ್ಯವಿಚಾರ	ಡಾ॥ ಎಂ. ಎ. ಶೃತಿಕೀರ್ತಿ	150 – 154
2.	ಆರೋಗ್ಯ ಮತ್ತು ಆನಂದಕ್ಕಾಗಿ ಹಸ್ತ ಮುದ್ರೆ	ಶ್ರೀಮತಿ. ಪಿ. ಬಿ. ರುದ್ರಾಕ್ಷಿ	154 – 158
3.	"ಬೆನ್ನು ಮೂಳೆ ರೋಗದಲ್ಲಿ ಆಯುರ್ವೇದ ಮತ್ತು ಪಂಚಕರ್ಮ ಚಿಕಿತ್ಸೆಯ ಪ್ರಾಮುಖ್ಯೆ"	ಡಾ॥ ಶಿಲ್ಪಾ ರಾಗಾ	158 – 160
4.	ಆರೋಗ್ಯ ಪಾಲನೆಯ ಸೂತ್ರಗಳು	ಡಾ॥ ನಾಗರಾಜ ಗಂ, ಮೂಲಿಮನಿ	160 – 163
5.	ದೈನಂದಿನ ಜೀವನದಲ್ಲಿ ಗೋಮೂತ್ರದ ಪ್ರಾಮುಖ್ಯತೆ	ವಿದ್ಯಾಶಂಕರ ಎಂ.ಹೆಚ್ ಪ್ರಿಯಾಂಕ ಎಸ್.ಆರ್ ಮೇಘನ ಟಿ.ಯು ವರ್ಷ ಎಂ ಮದ್ದಿನ್	164 – 168

ಸಂಸ್ಕೃತ ಸಾಹಿತ್ಯದಲ್ಲಿ ಚಿತ್ತಸ್ವಾಸ್ಥ್ಯವಿಚಾರ

ಡಾ॥ ಎಂ. ಎ. ಶೃತಿಕೀರ್ತಿ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಂಸ್ಕೃತ ವಿಭಾಗ, ಕುವೆಂಪು ವಿ. ವಿ. ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ–577 203,
E.Mail-mashruthikeerti@gmail.com

ಮನುಷ್ಯನ ಆರೋಗ್ಯಕ್ಕೆ ಸಂಸ್ಕೃತಸಾಹಿತ್ಯ ಅತ್ಯಂತ ಪ್ರಮುಖಪಾತ್ರವಹಿಸಿ, ಜಾಗರೂಕತೆಯನ್ನು ಮೂಡಿಸಿದೆ. ಸದೃಢ ದೇಹದಿ ಸದೃಢ ಮನಸ್ಸು ಎಂಬ ವಿಚಾರ ಸ್ಪಷ್ಟ. ದೋಷಗಳ ಸಮಾನತೆ, ಅಗ್ನಿ, ಧಾತು, ಮಲ, ಕ್ರಿಯೆಗಳ ಸಮಾನತೆ, ಆತ್ಮ, ಇಂದ್ರಿಯ, ಮನಸ್ಸುಗಳ ಪ್ರಸನ್ನತೆಗಳುಳ್ಳವನೇ ಸ್ವಸ್ಥನೆನಿಸುವನು. ಮನುಷ್ಯರ ಭಾವಖಂಡ ಅಥವಾ ಮೋಕ್ಷಗಳಿಗೆ ಅವರವರ ಮನಸ್ಸುಗಳೇ ಮೂಲಕಾರಣ. ಪರಿಜ್ಞಾನೇಂದ್ರಿಯ, ಪರಿಜ್ಞಕರ್ಮೇಂದ್ರಿಯ, ಮನಸ್ಸು ಈ ಹನ್ನೊಂದು ಇಂದ್ರಿಯಗಳಲ್ಲಿ ಮನಸ್ಸು ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಎರಡೂ ಆಗಿ, ಅತೀಂದ್ರಿಯವಾಗಿದೆ. ಮನಸ್ಸು ಎಲ್ಲ ಇಂದ್ರಿಯಗಳ ವಿಷಯವೊಂದಿಗೆ ಸಂಖಂಡ ಹೊಂದಿರುತ್ತದೆ. ಮನಸ್ಸು ಪರಿಶುದ್ಧವಾದಷ್ಟೂ ಅವರ ನಿಯಂತ್ರಣ ಸುಲಭಸಾಧ್ಯ. ನಿರಂತರವಾದ ಧ್ಯಾನದಿಂದ ಮನೋನಿಗ್ರಹಕ್ಕೆ ಮತ್ತು ಮನೋನಿಗ್ರಹದಿಂದ ಧ್ಯಾನಕ್ಕೆ ಸಹಾಯಿಯೊದಗುತ್ತದೆ. ಮನುಷ್ಯ ಜೀವನದ ಸಮಸ್ತ ಶುಭಾಶುಭ ಕಾರ್ಯಗಳು, ಜನ್ಮ ಮತ್ತು ಮುಕ್ತಿಗೆ ಮನಸ್ಸೇ ಕಾರಣವಾಗಿದೆ ಎಂದಿದ್ದಾರೆ. ಮಾನಸಿಕ ವ್ಯಾಧಿಯು ಆಶ್ರಯವು ಮನಸ್ಸಾಗಿದೆ. ರಜ ಮತ್ತು ತಮ ಮನಸ್ಸಿನ ದೋಷಗಳಾಗಿವೆ. ಮನಸ್ಸು ತನ್ನ ಅಭಿನವಾಗಿದ್ದು, ಪಾಪರಹಿತ ಋಣ್ಣಿಯಿದ್ದು, ತತ್ತ್ವಜ್ಞಾನ, ತಪ, ಯೋಗದಲ್ಲಿ ತತ್ಪರವಾಗಿರುವುದೇ ಒಳಿತಾದ ಗುಣಗಳಿರುವ ಪುರುಷರಿಗೆ ರೋಗ ಋಣವಿಲ್ಲ. ನವಸ್ರವ್ಯಸ ಮಧ್ಯದಲ್ಲಿ ಮನಸ್ಸು ಒಂದು ದ್ರವ್ಯವಾಗಿದ್ದು, ಅಚೇತನವಾಗಿದ್ದರೂ ಮಾನವನ ಗರ್ಭಧಾರಣಾ ಕಾಲದಿಂದ ಹಿಡಿದು ಮೃತ್ಯುವಿನವರೆಗೆ ಮನುಷ್ಯನ ಸಮಸ್ತ ಕಾರ್ಯಗಳ ಸಂಚಾಲಕವಾಗಿದೆ. ಐದು ವಿಧ ಶೋಕಗಳ ಪೈಕಿ ಮುಖ್ಯವಾದ ಮನಃಶೋಕದಿಂದ ಮನುಷ್ಯನು ಸ್ವರ್ಗ ನೇರುತ್ತಾನೆ. ವಿವಿಧ ಶೋಕಗಳನ್ನು ವಿವರಿಸುತ್ತಾ, ವಿವಿಧ ಮಣ್ಣು ಮತ್ತು ಜಲಗಳಿಂದ ಆಗುವುದು ಖಾಸ್ಯ, ಮನಶ್ಶುದ್ಧಿಯೇ ಆಶ್ಯಂತರಶೌಚ ಎಂದೂ ಧರ್ಮ ಮತ್ತು ಆಧ್ಯಾತ್ಮವಿದ್ಯೆಗಳಿಂದ ಮನಶ್ಶುದ್ಧಿಯೆಂದು ತಿಳಿಯಬೇಕು ಎನ್ನಲಾಗಿದೆ. ಮನುಷ್ಯರಿಗೆ ಮನಃಶುದ್ಧಿಯಿಂದಲೇ ನಿಜವಾದ ಶುದ್ಧಿ ಎಂಬಲ್ಲಿ ಯಾವ ಸಂದೇಹವೂ ಇಲ್ಲ. ಮತ್ತೊಬ್ಬರ ಸಂಪತ್ತನ್ನು ಅಪಹರಿಸುವ ದುರಾರೋಚನೆ, ಮನಸ್ಸಿನಿಂದ ಇತರರಿಗೆ ಕೆಟ್ಟದ್ದನ್ನೇ ಬಯಸುತ್ತಿರುವುದು, ಸದಾ ಸುಳ್ಳನ್ನೇ ಆರೋಚಿಸುತ್ತಿರುವುದು ಈ ಮೂರು ಮಾನಸಪಾಪಗಳು. ಮನಸ್ಸಿನಲ್ಲೂ ಮಾತಿನಲ್ಲೂ ಕರ್ಮದಲ್ಲೂ ಒಂದೇ ಸ್ವಭಾವವುಳ್ಳವರೇ ಮಹಾತ್ಮರು. ಪುರಾತ್ಮರಿಗಾದರೋ ಮನಸ್ಸಿನಲ್ಲೇ ಒಂದು, ಮಾತಿನಲ್ಲಿ ಇನ್ನೊಂದು, ಕ್ರಿಯೆಯಲ್ಲಿ ಮತ್ತೊಂದು ಸ್ವಭಾವವಿರುತ್ತದೆ. ಈ ರೀತಿ ಮನಸ್ಸಿನ ವಿವಿಧ ಪ್ರಕ್ರಿಯೆಯನ್ನು ವಿವರಿಸಲಾಗಿದೆ. ಸುಪ್ತಪ್ರಜ್ಞೆಯನ್ನು ಹತೋಟಿಯಲ್ಲಿರಿಸಿಕೊಳ್ಳದ ಹೊರತು, ಮನಸ್ಸನ್ನು ನಿಯಂತ್ರಿಸಲಾರೆವು. ಸುಪ್ತಪ್ರಜ್ಞೆಯನ್ನು ನಿಯಂತ್ರಿಸುವುದರಿಂದ ಸುಪ್ತವಾಗಿರುವ ಕುಂಡಲಿನೀಶಕ್ತಿಯು ಜಾಗೃತವಾಗುತ್ತದೆ. ಮನಸ್ಸನ್ನು ನಿಗ್ರಹಿಸುವ ವಿಧಾನವೆಂದರೆ ಭಗವತ್‌ಪ್ರೇಮವೊಂದೇ. ಸೇವೆಯಲ್ಲಿ ನಂಬಿಕೆಯಿಲ್ಲದವರೂ ಸ್ವಪ್ರಯತ್ನಗಳಿಂದ ಮನೋನಿಗ್ರಹವನ್ನು ಗಳಿಸಿಕೊಳ್ಳಬಹುದು. ಮನಸ್ಸುಮಾಡಿದಿಯ ವಿಷಯವನ್ನು ಪ್ರಸ್ತಾಪಿಸುವ ಸಂಸ್ಕೃತಸಾಹಿತ್ಯ ಅನೇಕ ರೋಗಗಳಿಗೆ ಮನಸ್ಸೇ ಮೂಲ ಎಂಬ ಸತ್ಯ ಇಂದಿನವರಿಗೂ ಅರಿವಾಗಿದೆ. ಮನೋರೋಗಕ್ಕಾದರೋ ಚಿಂತೆ, ಭಯ, ಖಿನ್ನತೆ, ಆತಂಕ, ಅಸ್ಥಿರತೆ ಮೂಲವಾದರೆ, ಮನಸ್ಸುಮಾಡಿದಿಯೇ ರೋಗನಿರೋಧಕ. ಮನಸ್ಥಿರತೆಯಿದ್ದರೆ ಪ್ರಜ್ಞಾಪರಾಧವೇ ಒದಗಿದ ಖಾಯಿಲೆಯನ್ನು ತಕ್ಕಮಟ್ಟಿಗಾದರೂ ಹತೋಟಿಯಲ್ಲಿಡಬಹುದು ಎಂಬುದು ಮಹತ್ವದ ವಿಚಾರ.

ಪೀಠಿಕೆ: ಸಂಸ್ಕೃತ ಸಾಹಿತ್ಯ ನಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅನಿವಾರ್ಯವಾದ ಶಾರೀರಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಗಳನ್ನು ಕುರಿತಾದ ಮಾಹಿತಿ, ಮಾರ್ಗದರ್ಶನಗಳನ್ನು ನೀಡುತ್ತಲೇ ಬಂದಿದೆ. ಮಹಾಕವಿ ಕಾಳಿದಾಸನು ತನ್ನ 'ಕುಮಾರಸಂಭವ' ಮಹಾಕಾವ್ಯದಲ್ಲಿ 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂದರೆ ಧರ್ಮ ಸಾಧನೆ ಮನುಷ್ಯ ಜೀವನದ ಗುರಿ; ಶರೀರ ಅದಕ್ಕೆ ಸಾಧನ; ಆದ್ದರಿಂದ ಶರೀರ ರಕ್ಷಣೆ ಅತಿಮುಖ್ಯ ಎಂದು ಹೇಳಿದ್ದಾನೆ. ಹಾಗಾಗಿ ಮನುಷ್ಯನ ಆರೋಗ್ಯಕ್ಕೆ ಸಂಸ್ಕೃತಸಾಹಿತ್ಯ ಅತ್ಯಂತ ಪ್ರಮುಖ ಪಾತ್ರವಹಿಸಿ, ಜಾಗರೂಕತೆಯನ್ನು ಮೂಡಿಸಿದೆ. 'ನೂರ್ಕಾಲ ಬಾಳಬೇಕು; ನೂರು ಹೇಮಂತ, ವಸಂತಗಳನ್ನು ಕಾಣಬೇಕು' ಎಂಬ ಋಗ್ವೇದದ ನುಡಿಯಿದೆ. ನಮ್ಮ ದೇಹವು ಪವಿತ್ರವಾದುದು ಎಂಬುದನ್ನು ಇದೂ ಸಹ ನಿರೂಪಿಸುತ್ತದೆ. ಎಂಟು ಚಕ್ರ ಹಾಗೂ ನವದ್ವಾರ ಗಳಿಂದ ಆದಂತಹ ಅಯೋಧ್ಯೆಯೆಂಬ ನಗರಿ. ಅಲ್ಲಿ ಜ್ಯೋತಿಸ್ವರೂಪದಿಂದ ಆವೃತವಾದ, ಸ್ವರ್ಣಮಯ ಸ್ವರ್ಗರೂಪವಾದ ಹಾಗೂ ಹೃದಯಸ್ಥವಾದ ಕೋಶವು ಮನಸ್ಸೆನಿಸಿದೆ. ಅಂತೆಯೇ ಈ ಶರೀರವನ್ನು ಒಂದು 'ದೇವನಗರಿ' ಎನ್ನಲಾಗಿದೆ. ಬ್ರಹ್ಮಚರ್ಯ–ಯೋಗಗಳ ಮೂಲಕ ಶರೀರದ ರಕ್ಷಣೆ ಬಲಾಢ್ಯವಾದರೆ ರೋಗಾದಿ ಶತ್ರುಗಳು ಪ್ರವೇಶಿಸಲು ಅಸಾಧ್ಯವಾಗುತ್ತದೆ. ಸದೃಢ ದೇಹದಿ ಸದೃಢ ಮನಸ್ಸು ಎಂಬ ವಿಚಾರ ಸ್ಪಷ್ಟ. ಮಾನವನ ಶರೀರದಲ್ಲಿ ದೇವನ ಅಂಶಾವತಾರವನ್ನು ಈ ರೀತಿ ಗುರುತಿಸಲಾಗಿದೆ–ಅಗ್ನಿಯೇ 'ವಾಕ್' ಆಗಿ ಮುಖವನ್ನು ಪ್ರವೇಶಿಸಲಿ. ವಾಯುವು ಪಂಚಪ್ರಾಣದ ರೂಪದಲ್ಲಿ ಮೂಗನ್ನು ಪ್ರವೇಶಿಸಲಿ. ಆದಿತ್ಯನು 'ಕಣ್ಣಿನ ತೇಜಸ್ಸಿಗಾಗಿ' ಕಣ್ಣನ್ನು ಪ್ರವೇಶಿಸಲಿ. ಚಂದ್ರನು ಮನಸ್ಸಾಗಿ ಹೃದಯವನ್ನು ಪ್ರವೇಶಿಸಲಿ. ಜಲವು ರೇತಸ್ಸಾಗಿ ಶಿಶ್ನವನ್ನು ಪ್ರವೇಶಿಸಲಿ. ದೈವಮಯವಾಗಿರುವುದರಿಂದ ಇವೆಲ್ಲವನ್ನು ಧರಿಸಿರುವ ಪವಿತ್ರವಾದ ದೇಹವೂ ಸಹ ಮಹತ್ವವಾದದ್ದು; ಅಮೃತತತ್ತ್ವದ ಆತ್ಮವು ಮೃತ್ಯುಗೀಡಾಗುವ ಶರೀರವನ್ನೇ ಆವಾಸಸ್ಥಾನವನ್ನಾಗಿ ಮಾಡಿಕೊಂಡಿರುವುದು. ಈ ಕಾರಣದಿಂದಲೇ ಜ್ಞಾನಿಯಾದವನು 'ಆತ್ಮನನ್ನೇ' ಬ್ರಹ್ಮನೆಂದು ತಿಳಿಯುತ್ತಾನೆ ಎಂದಿದ್ದಾರೆ.

ಶೀತ, ಉಷ್ಣ ಮತ್ತು ವಾಯು ಎಂಬ ಶರೀರ ಸಂಬಂಧವಾದ ಮೂರು ಗುಣಗಳ ಸಾಮ್ಯವೇ ಸ್ವಾಸ್ಥ್ಯ ಅರ್ಥಾತ್ ಆರೋಗ್ಯ. ಸುಶ್ರುತ ಮಹರ್ಷಿಗಳು– ದೋಷಗಳ ಸಮಾನತೆ, ಅಗ್ನಿ, ಧಾತು, ಮಲ, ಕ್ರಿಯೆಗಳ ಸಮಾನತೆ, ಆತ್ಮ, ಇಂದ್ರಿಯ, ಮನಸ್ಸುಗಳ ಪ್ರಸನ್ನತೆಗಳುಳ್ಳವನೇ ಸ್ವಸ್ಥನೆನಿಸುವನು ಎಂದಿದ್ದಾರೆ. ಎಲ್ಲ ಪರುಷಾರ್ಥಗಳಿಗೂ ಆರೋಗ್ಯವೇ ಮೂಲ ಕಾರಣ. ಮನುಷ್ಯನು ತನ್ನ ಮನಸ್ಸಿನಲ್ಲಿ ಏನು ದೃಢ ಸಂಕಲ್ಪ ಮಾಡುವನೋ ಹಾಗೆಯೇ ಆಗುವನು. ಪುರುಷನು ಶ್ರದ್ಧಾ

ಸ್ವರೂಪನು. ಮನುಷ್ಯರ ಭವಬಂಧ ಅಥವಾ ಮೋಕ್ಷಗಳಿಗೆ ಅವರವರ ಮನಸ್ಸುಗಳೇ ಮೂಲ ಕಾರಣವಾಗಿರುತ್ತದೆ. ಮನಸ್ಸು ಶುದ್ಧವಾಗಿದ್ದರೆ ಶತ್ರುವೂ ಮಿತ್ರರಾಗುತ್ತಾರೆ. ತಾಯಿಗಿಂತ ಮಿಗಿಲಾಗಿ ಶರೀರವನ್ನು ಪೋಷಿಸುವವರಿಲ್ಲ, ಮನಸ್ಸಿಗೆ ಸಂತೋಷವಾಗಲು ಪೂಜೆಗಿಂತ ಮಿಗಿಲಾದ ಕಾರ್ಯವಿಲ್ಲ, ಶರೀರಕ್ಕೆ ವಿದ್ಯೆಗಿಂತ ಮಿಗಿಲಾದ ಅಲಂಕಾರವಿಲ್ಲ, ಹಾಗೆಯೇ ಚಿಂತೆಗೆ ಸಮನಾದ ಶರೀರಶೋಷಣೆ ಎಂಬುದಿಲ್ಲ ಎನ್ನಲಾಗಿದೆ. ಯಾವುದರ ಮೂಲಕ (ಏನನ್ನಾದರೂ) ಅರಿಯಲಾಗುತ್ತದೆಯೋ ಅದಕ್ಕೆ; ಮನನ ಮಾಡುವ ಸಾಮರ್ಥ್ಯವಿರುವುದರಿಂದ, ಇದಕ್ಕೆ ಮನಸ್ಸು ಎಂದು ಕರೆಯಲಾಗಿದೆ. ಚಿತ್ತ, ಚೇತ, ಹೃದಯ, ಸ್ವಾಂತ, ಹೃತ್, ಮಾನಸ, ಸತ್ತ್ವ ಮತ್ತು ಮನಗಳೆಂಬುವವು ಪರ್ಯಾಯವಾಚಿಗಳಾಗಿವೆ. ಹೀಗೆ ಹಲವು ರೀತಿಗಳಲ್ಲಿ ಮನಸ್ಸನ್ನು ವ್ಯಾಖ್ಯಾನಿಸಲಾಗಿದೆ.

ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಮನಸ್ಸು ಇವು ಹನ್ನೊಂದು ಇಂದ್ರಿಯಗಳಾಗಿವೆ. ಇವುಗಳಲ್ಲಿ ಮನಸ್ಸು ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಎರಡೂ ಆಗಿ, ಅತೀಂದ್ರಿಯವಾಗಿದೆ ಎಂದು ಚರಕರು ಹೇಳಿದ್ದಾರೆ. ಮನಸ್ಸು ಎಲ್ಲ ಇಂದ್ರಿಯಗಳ ವಿಷಯದೊಂದಿಗೆ ಸಂಬಂಧ ಹೊಂದಿರುತ್ತದೆ. ಯಾವ ಇಂದ್ರಿಯದೊಂದಿಗೆ ಮನಸ್ಸು ಸಂಬಂಧ ಹೊಂದುವುದೋ ಆ ಇಂದ್ರಿಯವು ವಿಷಯವನ್ನು ಗ್ರಹಿಸಲು ಆರಂಭಿಸುವುದು ಮತ್ತು ವಿಷಯ ಗ್ರಹಣ ಸಾಮರ್ಥ್ಯವನ್ನು ಪಡೆಯುವುದು. ಅನೇಕ ವಿಷಯಗಳೊಂದಿಗೆ ಒಮ್ಮೆಲೇ ಜ್ಞಾನವಾಗದಿರುವಿಕೆ ಮನಸ್ಸಿನ ಲಕ್ಷಣ. ಸುಖ–ದುಃಖದ ಜ್ಞಾನದ ಸಾಧನವಾದ ಇಂದ್ರಿಯವು ಮನಸ್ಸಾಗಿದೆ. ಅದು ಪ್ರತ್ಯೇಕ ಜೀವಾತ್ಮದ ಜೊತೆಗೆ ನಿಯತ್ತಿನಿಂದಿರುವ ಅನಂತ, ಪರಮಾಣು ರೂಪವಾಗಿದೆ ಮತ್ತು ನಿತ್ಯವಾಗಿದೆ. ಅಣುವಾಗುವುದು ಮತ್ತು ಒಂದೇ ಆಗುವುದು – ಈ ಎರಡೂ ಗುಣಗಳು ಮನಸ್ಸಿಗಿವೆ. ಅರ್ಥಸಂಜ್ಞಕ ಮನಸ್ಸಿನ ವಿಷಯಗಳೆಂದರೆ ನಾನಾ ವಿಷಯದ ಚಿಂತನೆ, ಗುಣದೋಷದ ವಿವೇಚನೆ, ಸಂಭಾವನೆಯ ಆಧಾರದ ಮೇರೆಗೆ ತರ್ಕ ಮಾಡುವಿಕೆ, ಏಕಾಗ್ರ ಮನಸ್ಸಿನಿಂದ ಧ್ಯಾನಿಸುವಿಕೆ, ಮನಸ್ಸಿನಿಂದ ಮಾಡಬೇಕಾದ / ಮಾಡಬಾರದ ಕರ್ತವ್ಯ, ಗುಣದೋಷಗಳ ಧ್ಯಾನವನ್ನು ಕಲ್ಪನೆ ಮಾಡುವಿಕೆ, ಸುಖ – ದುಃಖಾದಿ, ಇಚ್ಛಾ– ದ್ವೇಷಾದಿಗಳೆಲ್ಲವೂ ಒಳಗೊಂಡಿದೆ ಎಂದರ್ಥ.

ಮನಸ್ಸಿನ ಕರ್ಮವನ್ನು ಹೀಗೆ ವಿವೇಚಿಸಲಾಗಿದೆ– ತಂತಮ್ಮ ವಿಷಯಗಳಲ್ಲಿ ಇಂದ್ರಿಯಗಳನ್ನು ಪ್ರೇರಿಸುವುದು, ಮನಸ್ಸಿನ ನಿಗ್ರಹ ಮಾಡುವುದು, ಶಾಸ್ತ್ರಾದಿ ಅರ್ಥಗಳನ್ನು ಯುಕ್ತಿಪೂರ್ವಕ ವಿಚಾರಿಸುವುದು – ಹೀಗೆ ಯಾವುದೇ ವಿಷಯದ ಮೇಲೆ ವಿಚಾರಾದಿಗಳನ್ನು ಮಾಡಿದ ಮೇಲೆ ಆ ಮೂಲಕ ಮಾಡಬೇಕಾದ, ಮಾಡಬಾರದ ಬುದ್ಧಿ, ಜ್ಞಾನ ಉತ್ಪನ್ನವಾಗುತ್ತದೆ, ಕರ್ಮ ಪ್ರವೃತ್ತವಾಗುತ್ತದೆ. ಆತ್ಮ, ಮನಸ್ಸು, ಇಂದ್ರಿಯ ಮತ್ತು ಇಂದ್ರಿಯ ವಿಷಯಗಳು ಈ ನಾಲ್ಕೂ ಪರಸ್ಪರ ಸನ್ನಿಕರ್ಷವಾದರೆ ಜ್ಞಾನದ ಭಾವ ಅಥವಾ ಅಭಾವವಾಗುವುದು – ಮನಸ್ಸಿನ ಲಕ್ಷಣವಾಗಿದೆ. ಜ್ಞಾನವುಂಟಾಗಬೇಕಾದರೆ ಮನಸ್ಸಿನ ಸಾನ್ನಿಧ್ಯ ಮತ್ತು ಸಂಯೋಗವು ಅತ್ಯಗತ್ಯವಾಗಿದೆ, ಉಳಿದೆಲ್ಲವೂ ವ್ಯರ್ಥ. ಜ್ಞಾನವು ಒಂದು ಕಾಲದಲ್ಲಿ ಒಂದೇ ಇಂದ್ರಿಯದಿಂದಾಗುತ್ತದೆ. ವಿಕಾರವನ್ನುಂಟುಮಾಡುವ ಕಾರಣಗಳಿದ್ದಾಗಲೂ ಚಿತ್ತವಿಕಾರವನ್ನು ಪಡೆಯದಿರುವವರೇ ನಿಜವಾದ ಧೀರರು. ಎಂಥ ಧೀರರಿಗೂ ಮನೋನಿಗ್ರಹ ಎಂಬುದು ಯಾವಗಲೂ ಪ್ರಯಾಸದ ಕೆಲಸವಾಗಿದೆ. ಆದರೆ ಅದು ಅಸಾಧ್ಯವಾದುದೇನೂ ಅಲ್ಲ. ಅದಕ್ಕಾಗಿಯೇ ಕೆಲವು ಕ್ರಮಬದ್ಧವಾದ ವಿಧಾನಗಳಿವೆ. ಮನೋನಿಗ್ರಹದ ರಹಸ್ಯವು ಶ್ರೀಕೃಷ್ಣನು ಹೇಳುವ 'ಅಭ್ಯಾಸ' ಮತ್ತು 'ವೈರಾಗ್ಯ' ಎಂಬ ಎರಡು ಮಾತುಗಳಲ್ಲಿದೆ. ಈ ಎರಡನ್ನೂ ನಮ್ಮ ದೈನಂದಿನ ಬದುಕಿನ ಒಂದು ಭಾಗವನ್ನಾಗಿ ಮಾಡಿಕೊಳ್ಳಬೇಕಾದರೆ, ನಾವು ಮನೋನಿಗ್ರಹಕ್ಕೆ ಅಗತ್ಯವಾದ ದೃಢವಾದ ಸಂಕಲ್ಪಶಕ್ತಿಯನ್ನು ವರ್ಧಿಸಿಕೊಳ್ಳಬೇಕು ಮತ್ತು ಈ ಕುರಿತು ಕೆಲವು ತಂತ್ರಗಳನ್ನು ಅರಿತು, ಅವುಗಳನ್ನು ಅನುಸರಿಸಬೇಕು. ನಮ್ಮ ಸಂಕಲ್ಪಶಕ್ತಿಯನ್ನು ದೃಢಪಡಿಸಿಕೊಳ್ಳಬೇಕಾದರೆ, ನಾವು ವಿಷಯ ಸುಖಾಪೇಕ್ಷೆಗಳನ್ನು ಹಿಂದಿಕ್ಕಿ, ಮನೋನಿಗ್ರಹದ ಸಮಸ್ತ ಪರಿಕರಗಳನ್ನು ತಿಳಿದುಕೊಳ್ಳಬೇಕು.

ಮನೋನಿಗ್ರಹಕ್ಕೆ ಎರಡು ಬಗೆಯ ಆಂತರಿಕ ಶಿಸ್ತುಗಳು ಅಗತ್ಯವಾಗಿವೆ – ಮನಸ್ಸನ್ನು ಸರಿಯಾದ ದಾರಿಯಲ್ಲಿ ನಿರ್ದೇಶಿಸುವುದು; ಎಂತಹ ತುರ್ತುಸ್ಥಿತಿಯಲ್ಲಿಯೂ ನಮ್ಮನ್ನು ನಾವು ಕಾಯ್ದುಕೊಳ್ಳುವುದು. ಮನಸ್ಸು ಪರಿಶುದ್ಧವಾದಷ್ಟೂ ಅದರ ನಿಯಂತ್ರಣ ಸುಲಭಸಾಧ್ಯ. ಆದಕಾರಣ ಮನಸ್ಸಿನ ಶುದ್ಧೀಕರಣಕ್ಕೆ ಸುಲಭೋಪಾಯವೆಂದರೆ ಸತ್ಸಂಗವೇ ಆಗಿದೆ. ವೇದಾಂತದಲ್ಲಿ ಹೇಳಲಾಗಿರುವ ವಿಧಾನಗಳ ಜೊತೆಗೆ ಪತಂಜಲಿಯ ಯೋಗಸೂತ್ರಗಳಲ್ಲಿರುವ ಸೂಚನೆಗಳನ್ನು ರೂಢಿಸಿಕೊಳ್ಳಬೇಕು. ಜೊತೆಗೆ ಅಭ್ಯಾಸವೂ ಮುಂದುವರೆಯಬೇಕು. ಯಾವಾಗ ಮನಸ್ಸು ನಮ್ಮ ವಶವರ್ತಿಯಾಗುವುದೋ ಆಗ ನಮ್ಮ ಕರಣಗಳು ಲೋಕವಸ್ತುಗಳ ಸಂಸರ್ಗಕ್ಕೆ ಅಂಟಿಕೊಳ್ಳದಂತೆ ಮನಸ್ಸನ್ನು ಅನುಸರಿಸುತ್ತವೆ. ಪದಾರ್ಥವಿಜ್ಞಾನದ ಅನುಸಾರ ಬಾಹ್ಯಜ್ಞಾನದ (ಕಾರಣದಿಂದ) ಚಕ್ಷುರಾದಿ ಇಂದ್ರಿಯಗಳನ್ನು ಅತಿಕ್ರಮಣ ಮಾಡುವುದರಿಂದ ಮನಸ್ಸು ಅತೀಂದ್ರಿಯ. ಒಂದು ವೇಳೆ ಚಕ್ಷುರಾದಿಗಳನ್ನು ಅತೀಂದ್ರಿಯವೆಂದು ಕರೆದರೂ ಮನಸ್ಸು ಮಾತ್ರ ಅತ್ಯಂತ ಸೂಕ್ಷ್ಮತರವಾಗಿದೆ. ಚಕ್ರಪಾಣಿಯು ಮನಸ್ಸನ್ನು ವಿಶ್ಲೇಷಿಸುತ್ತಾ ಮನಸ್ಸಿನ ವಿಷಯವು ಆತ್ಮಸಂಪತ್ತಿಯ ಅಧೀನವಾಗಿದೆ. ಚೇಷ್ಟೆಯು ಅದರ ವ್ಯಾಪಾರ. ಚಕ್ಷುರಾದಿ ಇಂದ್ರಿಯಗಳ ಪ್ರವರ್ತಕ ಮನಸ್ಸೇ ಆಗಿದೆ. ಕಾರ್ಯದಲ್ಲಿ ತೊಡಗುವ ಪ್ರವೃತ್ತಿಯು ಮೊದಲು ಮನಸ್ಸಿನಲ್ಲಿಯೇ ಹುಟ್ಟುತ್ತದೆ. ಇಂದ್ರಿಯಗಳೊಂದಿಗೆ ಮನಸ್ಸು ಸ್ವತಃ ಸಂಬಂಧ ಹೊಂದುತ್ತದೆ, ಮತ್ತು ಆ ಕಾರ್ಯವನ್ನು ಮಾಡಿಸುತ್ತದೆ ಎಂದು ನಮೂದಿಸಿರುತ್ತಾರೆ. ಶರೀರದಲ್ಲಿ ಮನಸ್ಸು ವಸ್ತುತಃ ಒಂದೇ ಆಗಿದ್ದರೂ ಉಪಾಧಿ ಭೇದದಿಂದ ಅನೇಕವಾಗಿದೆ. ಮನಸ್ಸು ಒಂದಾಗಿದೆ (ಏಕವಾಗಿದೆ) ಮತ್ತು ಅದು ಅಣುವಾಗಿ ಒಬ್ಬ ಪುರುಷನಲ್ಲಿರುತ್ತದೆ. ಹಾಗೆಯೇ ಅನೇಕ ವಿಷಯಗಳು ವಸ್ತುವಾಗುತ್ತವೆ. ಹೀಗಾಗಿ ಅದು ಸತ್ತ್ವ, ರಜಸ್ ಮತ್ತು ತಮೋ ಗುಣದಿಂದಾಗಿ ಬೇರೆ ಬೇರೆ ಅವಸ್ಥೆಗಳು ವ್ಯಭಿಚಾರ ರೂಪ ತಾಳುತ್ತದೆ. ಮನಸ್ಸು ಒಂದೇ ಆಗಿದ್ದರೂ ಅನೇಕ ಭ್ರಾಂತಿಗಳಿಂದ ಕೂಡಿದೆ. ಸತ್ತ್ವಗುಣ ವೃದ್ಧಿಯಿಂದ ಶಾಂತ, ಸಮಾಧಾನತೆಯನ್ನು

ತಾಳದರೆ, ರಜೋಗುಣ ವೃದ್ಧಿಯಿಂದ ಕ್ರೋಧಯುಕ್ತವಾಗುತ್ತದೆ ಮತ್ತು ತಮೋ ಗುಣದ ವೃದ್ಧಿಯಿಂದ ಅಜ್ಞಾನ ಭಯಾದಿ ಯುಕ್ತವಾಗುತ್ತದೆ. ಪುರುಷನ ಶರೀರದಲ್ಲಿ ಅನೇಕ ಮನಸ್ಸುಗಳು ಇದ್ದಿದ್ದರೆ ಅನೇಕ ರೂಪಗಳು ಕಂಡುಬರುತ್ತಿದ್ದವು. ಅವು ಒಂದೇ ಸಮಯದಲ್ಲಿ ಎಲ್ಲ ಇಂದ್ರಿಯಗಳಲ್ಲಿ ಸಮ್ಮಿಳಿತವಾಗುತ್ತಿದ್ದವು. ಆದರೆ ಒಂದೇ ಸಮಯದಲ್ಲಿ ಎಲ್ಲ ಇಂದ್ರಿಯಗಳೂ ಪ್ರವೃತ್ತವಾಗಲಾರವು. ಸತ್ವಗುಣದ ಆಧಿಕ್ಯದಿಂದ ಮನಸ್ಸು ಸತ್ವಯುಕ್ತವಾದವನು ಸಾತ್ವಿಕ ಪುರುಷ. ಅದರಂತೆ ಉಳಿದ ಗುಣಗಳ ಪುರುಷರು ಆಯಾ ಕರ್ಮಗಳನ್ನು ಮಾಡುತ್ತಾರೆ ಮತ್ತು ಆಯಾ ಗುಣಗಳನ್ನು ಪಡೆಯುತ್ತಾರೆ.

ನಿರಂತರವಾದ ಧ್ಯಾನದಿಂದ ಮನೋನಿಗ್ರಹಕ್ಕೆ ಮತ್ತು ಮನೋನಿಗ್ರಹದಿಂದ ಧ್ಯಾನಕ್ಕೆ ಸಹಾಯವೊದಗುತ್ತದೆ. ಪತಂಜಲಿಯ ಪ್ರಕಾರ ಮನಸ್ಸನ್ನು ಆರೋಗ್ಯಕರವಾದ ಹವ್ಯಾಸಗಳಲ್ಲಿ ತೊಡಗಿಸುವುದು, ಅದು ವಿಷಣ್ಣತೆಗೆ ಒಳಗಾಗದಂತೆ ಕಾಯ್ದುಕೊಳ್ಳುವುದು, ಪ್ರತಿಪಕ್ಷವಾಗಿ ವರ್ತಿಸುವಂತಹ ಭಾವನೆಗಳನ್ನು ಎದುರೊಡ್ಡುವುದು, ನಿರಂತರ ನಾಮ ಜಪಮಾಡುವುದು, ಮತ್ತು ಭಗವಂತನಲ್ಲಿ ಶರಣುಹೋಗುವುದು – ಇವೇ ಆ ನಿರೋಧಕಗಳು. ಮನುಷ್ಯ ಜೀವನದ ಸಮಸ್ತ ಶುಭಾಶುಭ ಕಾರ್ಯಗಳು, ಜನ್ಮ ಮತ್ತು ಮುಕ್ತಿಗೆ ಮನಸ್ಸೇ ಕಾರಣವಾಗಿದೆ ಎಂದು ಶಾಸ್ತ್ರಕಾರರು, ಸಾಹಿತ್ಯಕಾರರು ಮತ್ತಿತರ ದಾರ್ಶನಿಕರು ಹೇಳಿದ್ದಾರೆ. ಮನಸ್ಸಿನ ಚೇತನವೇ ಆತ್ಮ. ಅದು ಬಹಳ ಚಂಚಲ. ಅರ್ಜುನನು ಭಗವಾನ್ ಶ್ರೀ ಕೃಷ್ಣನನ್ನು ಕುರಿತು ಕೇಳಿದ್ದಾನೆ – ಮನಸ್ಸು ಬಹಳ ಚಂಚಲ, ಪ್ರಮಾಥಿ, ಬಲ ಮತ್ತು ದೃಢವಾಗಿದೆ. ಅದರ ನಿಗ್ರಹ ಮಾಡುವುದೆಂದರೆ, ವಾಯುವನ್ನು ನಿಗ್ರಹಿಸುವಷ್ಟು ಕಷ್ಟಕರವೆಂದು ಭಾವಿಸುವೆನು ಎಂದು. ಶ್ರೀಕೃಷ್ಣನು ಅದನ್ನು ಒಪ್ಪಿಕೊಂಡು ಇದರಲ್ಲಿ ಯಾವ ಸಂದೇಹವೂ ಇಲ್ಲ, ಮನಸ್ಸಿನ ನಿಗ್ರಹ ಬಹು ಕಷ್ಟಕರ ಎಂದಿದ್ದಾನೆ.

ವ್ಯಾಧಿಸ್ಥಾನಗಳು ಶರೀರ ಮತ್ತು ಮನಸ್ಸು ಎಂದು ಎರಡಾಗಿವೆ. ಮಾನಸಿಕ ವ್ಯಾಧಿಯ ಆಶ್ರಯವು ಮನಸ್ಸಾಗಿದೆ. ರಜ ಮತ್ತು ತಮ ಮನಸ್ಸಿನ ದೋಷಗಳಾಗಿವೆ. ಮನಸ್ಸು ತನ್ನ ಅಧೀನವಾಗಿದ್ದು, ಪಾಪ ರಹಿತ ಬುದ್ಧಿಯಿದ್ದು, ತತ್ವಜ್ಞಾನ, ತಪ, ಯೋಗದಲ್ಲಿ ತತ್ಪರವಾಗಿರುವುದೇ ಮೊದಲಾದ ಗುಣಗಳಿರುವ ಪುರುಷನಿಗೆ ರೋಗ ಬರುವುದಿಲ್ಲ ಎನ್ನಲಾಗಿದೆ. ಜೀವವನ್ನು ಸ್ಪರ್ಶಿಸುವುದರಿಂದ 'ಜೀವಸ್ಪ್ವಕ್' ಮತ್ತು 'ಶುಕ್ರಶೋಣಿತಾತ್ಮಕ' ಗರ್ಭ ಶರೀರವಾಗಿದೆ. ಗರ್ಭಾಶಯದಲ್ಲಿಯೇ ಜೀವಾತ್ಮ ಮತ್ತು ಶುಕ್ರಶೋಣಿತಾತ್ಮಕ ಗರ್ಭಶರೀರದ ಪ್ರಪ್ರಥಮ ಸಂಬಂಧವುಂಟಾಗುತ್ತದೆ. ಸತ್ವವೂ ಒಂದು ಉತ್ಪಾದಕ ಘಟಕವಾಗಿ,ಶರೀರದೊಂದಿಗೆತನ್ನನ್ನುಸಂಯೋಜಿಸಿಕೊಳ್ಳುತ್ತದೆ. ಯಾಕೆಂದರೆ ಆತ್ಮವು ನಿಷ್ಕ್ರಿಯವಾಗಿರುತ್ತದೆ. ಗರ್ಭ ಶರೀರದಲ್ಲಿ ಆತ್ಮವಾದ ಜೀವಾತ್ಮವು ಸತ್ವದ ಮೂಲಕವೇ ಬರುತ್ತದೆ. ಅದರ ದೇಹಾಂತರಗಮನವಾದ ಮೇಲೆ ಮರಣವನ್ನಪ್ಪಿದ ಶರೀರದ ಸ್ವಭಾವ ವಿಪರೀತವಾಗುತ್ತದೆ, ಇಚ್ಛಾ ವಿಪರೀತವಾಗುತ್ತದೆ, ಸಕಲ ಇಂದ್ರಿಯಗಳು ವ್ಯರ್ಥವೆನಿಸುತ್ತದೆ, ಬಲವು ಕುಂದುವುದು, ವ್ಯಾಧಿಗಳು ಉಲ್ಬಣಗೊಳ್ಳುವವು. ಎಲ್ಲವುಗಳಿಂದ ಪರಿತ್ಯಕ್ತನಾದ ಪುರುಷನು ಪ್ರಾಣದ ಪರಿತ್ಯಾಗ ಮಾಡುವನು. ಇಷ್ಟೇ ಅಲ್ಲ ಮೋಕ್ಷಪ್ರಾಪ್ತಿಯ ಸಾಧನವು ಮನಸ್ಸೇ ಆಗಿದೆ. ಈ ರೀತಿ ನವದ್ರವ್ಯದ ಮಧ್ಯದಲ್ಲಿ ಮನಸ್ಸು ಒಂದು ದ್ರವ್ಯವಾಗಿದ್ದು, ಅಚೇತನವಾಗಿದ್ದರೂ ಮಾನವನ ಗರ್ಭಧಾರಣಾ ಕಾಲದಿಂದ ಹಿಡಿದು ಮೃತ್ಯುವಿನವರೆಗೆ ಮನುಷ್ಯನ ಸಮಸ್ತ ಕಾರ್ಯಗಳ ಸಂಚಾಲಕವಾಗಿದೆ.

ಸ್ವಾಮಿ ಆದಿದೇವಾನಂದರು ಆತ್ಮನನ್ನು ರಥಿಯೆಂದೂ, ಶರೀರವನ್ನು ರಥವೆಂದೂ, ಬುದ್ಧಿಯನ್ನು ಸಾರಥಿಯೆಂದೂ, ಮನಸ್ಸನ್ನು ಕಡಿವಾಣವೆಂದೂ, ಇಂದ್ರಿಯಗಳನ್ನು ಕುದುರೆಗಳೆಂದು ಹೇಳುತ್ತಾರೆ, ವಿಷಯಗಳನ್ನು ಇಂದ್ರಿಯಗಳ ಮಾರ್ಗಗಳೆಂದು ; ಶರೀರ, ಇಂದ್ರಿಯ, ಮನಸ್ಸು – ಇವುಗಳಿಂದ ಕೂಡಿದ (ಆತ್ಮನನ್ನು) ಸಂಸಾರಿ ಎಂದು ವಿವೇಕಿಗಳು ಹೇಳುತ್ತಾರೆ. ಯಾವನು ಯಾವಾಗಲೂ ಅಯುಕ್ತ, ಅಸಮಾಹಿತವಾದ ಮನಸ್ಸಿನಿಂದ ಕೂಡಿ, ಅನಿಪುಣನಾಗಿರುವನೋ, ಪ್ರವೃತ್ತಿಯಲ್ಲೂ, ನಿವೃತ್ತಿಯಲ್ಲಿಯೂ ವಿವೇಕವಿಲ್ಲದೇ ಇರುವನೋ, ಅವನ ಇಂದ್ರಿಯಗಳು; ಕೌಶಲವಿಲ್ಲದ, ಪಳಗಿಸದ, ತುಂಟ ಕುದುರೆಗಳಂತೆ ಬುದ್ಧಿಯೆಂಬ ಸಾರಥಿಯ ವಶವಾಗದೇ ಇರುವವು. ಯಾವನು ಯಾವಾಗಲೂ ಜ್ಞಾನವಿಲ್ಲದವನಾಗಿ, ನಿಗ್ರಹಿಸದ ಮನಸ್ಸುಳ್ಳವನಾಗಿ, ಅಶುಚಿಯಾಗಿರುವನೊ ಅವನು ನಾಶರಹಿತವಾದ ಆ ಪರಮಪದವನ್ನು ಹೊಂದುವುದಿಲ್ಲ, ಜನ್ಮಮರಣರೂಪವಾದ ಸಂಸಾರವನ್ನು ಹೊಂದುತ್ತಾನೆಂಬುದು ತಿಳಿಯುತ್ತದೆ. ಯಾವನು ಯಾವಾಗಲೂ ಜ್ಞಾನವುಳ್ಳವನಾಗಿ, ನಿಗ್ರಹಿಸಿದ ಮನಸ್ಸುಳ್ಳವನಾಗಿ ಶುಚಿಯಾಗಿರುವನೊ (ಮನಸ್ಸನ್ನು ನಿಗ್ರಹಿಸಿದ ಕಾರಣದಿಂದ ಯಾವಾಗಲೂ ಶುಚಿಯಾಗಿರುತ್ತಾನೆ), ಅವನು ಆ ಪರಮಪದವನ್ನು ಹೊಂದುತ್ತಾನೆ, ಹೊಂದಿದ ಪರಮಪದದಿಂದ ಪುನಃ ಹುಟ್ಟುವುದಿಲ್ಲ. ಯಾವ ಮನುಷ್ಯನು ವಿಜ್ಞಾನವೆಂಬ ಸಾರಥಿಯುಳ್ಳವನೊ, ಮನಸ್ಸೆಂಬ ಕಡಿವಾಣವನ್ನು ಹಿಡಿದಿರುವನೊ ಅವನು ಸಂಸಾರಗತಿಯ ಕೊನೆಯನ್ನು ಹೊಂದುತ್ತಾನೆ; ಅದೇ ವಿಷ್ಣುವಿನ ಪರಮಪದ. ಇಂದ್ರಿಯಗಳಿಗಿಂತ ವಿಷಯಗಳು ಶ್ರೇಷ್ಠ, ವಿಷಯಗಳಿಗಿಂತ ಮನಸ್ಸು ಶ್ರೇಷ್ಠ, ಮನಸ್ಸಿಗಿಂತ ಬುದ್ಧಿ ಶ್ರೇಷ್ಠ, ಬುದ್ಧಿಗಿಂತ ಮಹತ್ ಎಂಬ ಆತ್ಮನು ಶ್ರೇಷ್ಠನು. ಎಲ್ಲ ಪ್ರಾಣಿಗಳಲ್ಲಿಯೂ ಗೂಢನಾಗಿರುವ ಈ ಆತ್ಮನು ಪ್ರಕಾಶಿಸುವುದಿಲ್ಲ; ಆದರೆ ಸೂಕ್ಷ್ಮದರ್ಶಿಗಳು ಏಕಾಗ್ರವಾದ, ಸೂಕ್ಷ್ಮವಾದ ಬುದ್ಧಿಯಿಂದ (ಆತ್ಮನನ್ನು) ನೋಡುತ್ತಾರೆ. ಕಠೋಪನಿಷತ್ತಿನಲ್ಲಿ ಆತ್ಮನನ್ನು ಅರಿಯುವುದಕ್ಕೆ ಸಾಧನವನ್ನು ಈ ರೀತಿ ಹೇಳಿದೆ – ಹಿರಣ್ಯಗರ್ಭಬುದ್ಧಿಯಲ್ಲಿ; ಎಂದರೆ ಹಿರಣ್ಯಗರ್ಭಬುದ್ಧಿಯಂತೆ ತನ್ನ ಬುದ್ಧಿಯನ್ನು ಸ್ವಚ್ಛವಾಗಿ ಮಾಡಿಕೊಳ್ಳಬೇಕು, ಲಯಮಾಡಿಕೊಳ್ಳಬೇಕು; ಮಹತ್ ಆತ್ಮನನ್ನು ಶಾಂತನಾದ ಆತ್ಮನಲ್ಲಿ ಸರ್ವವಿಶೇಷಗಳೂ ಪ್ರತ್ಯಸ್ತವಾದ ಸ್ವರೂಪವುಳ್ಳ, ಅವಿಕ್ರಿಯವಾದ, ಸರ್ವಾಂತರವಾದ, ಸರ್ವಬುದ್ಧಿಪ್ರತ್ಯಯಗಳಿಗೂ ಸಾಕ್ಷಿಯಾದ ಮುಖ್ಯವಾದ ಆತ್ಮನಲ್ಲಿ ಲಯಮಾಡಿಕೊಳ್ಳಬೇಕು. ಮನಶ್ಶುದ್ಧಿಯಿಲ್ಲದ ಆಧ್ಯಾತ್ಮಿಕಜೀವನ ಎಂಬುದು ಇಲ್ಲವೇ ಇಲ್ಲ. ಆಹಾರಶುದ್ಧಿಯಿಂದ ಮನಶ್ಶುದ್ಧಿ, ಮನಶ್ಶುದ್ಧಿಯಿಂದ ಸತ್ಯದ ಸ್ಥಿರ ಸ್ಮೃತಿಯುಂಟಾಗಿ, ಹೃದಯದ ಎಲ್ಲ ಗ್ರಂಥಿಗಳೂ ನಾಶವಾಗುವವು. ಶುದ್ಧ ಮನಸ್ಸು ಮಾತ್ರ ನಿರಂತರ ಬ್ರಹ್ಮನನ್ನು ಚಿಂತಿಸಬಲ್ಲದು. ಇಲ್ಲಿ ಆಹಾರವೆಂದರೆ

ಇಂದ್ರಿಯ ಸಂಪರ್ಕಕ್ಕೆ ಬರುವ ಎಲ್ಲವೂ. ಕಣ್ಣು, ಕಿವಿ, ಮೂಗು, ಚರ್ಮ ಎಲ್ಲಕ್ಕೂ ನಾವು ಶುದ್ಧ ಆಹಾರವನ್ನು ಒದಗಿಸಬೇಕು. ಹೊಟ್ಟೆಗೆ ಮಾತ್ರ ಶುದ್ಧ ಆಹಾರವನ್ನು ತೆಗೆದುಕೊಂಡು ಬೇರೆ ಇಂದ್ರಿಯಗಳಿಗೆ ಶುದ್ಧ ಆಹಾರವನ್ನು ಒದಗಿಸದಿದ್ದರೆ ಏನೂ ಪ್ರಯೋಜನವಿಲ್ಲ.

ಯಾಜ್ಞ್ಯವಲ್ಕ್ಯಸ್ಮೃತಿಯಲ್ಲಿ ಅಹಿಂಸೆ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ದಮ, ಧ್ಯಾನ, ದಯೆ ಮತ್ತು ಕ್ಷಾಂತಿ – ಇವು ಧರ್ಮಸಾಧನೆಗಳೆಂದು ಹೇಳಲಾಗಿದೆ. ಯಾವನು ಶುಚಿತ್ವಸಂಪನ್ನನೋ, ಅವನು ಸಾಕ್ಷಾತ್ ವೈಶ್ವಾನರ ಎನಿಸುವನು. ಆದರೆ ಯಾವನು ಅಶುಚಿತ್ವವುಳ್ಳವನೋ ಅಂತಹವನು ಶ್ವಾನರೂಪೀ ಮನುಷ್ಯನೆನಿಸುವನು ಎಂದು ವಿಶ್ಲೇಷಿಸುವುದು ಗಮನಾರ್ಹವಾಗಿದೆ. ಪಂಚಶೌಚಗಳೆಂದರೆ ಮನಃಶೌಚ, ಕರ್ಮಶೌಚ, ಕುಲಶೌಚ, ಶರೀರಶೌಚ ಮತ್ತು ವಾಕ್‌ಶೌಚವೆಂದು ಮಹಾಭಾರತದಲ್ಲಿ ವ್ಯಾಖ್ಯಾನಿಸಲಾಗಿದೆ. ಈ ಐದು ವಿಧ ಶೌಚಗಳ ಪೈಕಿ ಮುಖ್ಯವಾದ ಮನಃಶೌಚದಿಂದ ಮನುಷ್ಯನು ಸ್ವರ್ಗ ಸೇರುತ್ತಾನೆಂಬುದು ಗಮನಾರ್ಹ. ವಶಿಷ್ಠಸಂಹಿತೆಯ ವ್ಯಾಖ್ಯಾನದಲ್ಲಿ ಬಾಹ್ಯ ಮತ್ತು ಅಭ್ಯಂತರ ಎಂದು ದ್ವಿವಿಧ ಶೌಚಗಳನ್ನು ವಿವರಿಸುತ್ತಾ, ವಿವಿಧ ಮಣ್ಣು ಮತ್ತು ಜಲಗಳಿಂದ ಆಗುವುದು ಬಾಹ್ಯ, ಮನಶ್ಶುದ್ಧಿಯೇ ಅಭ್ಯಂತರಶೌಚ; ಧರ್ಮ ಮತ್ತು ಆಧ್ಯಾತ್ಮವಿದ್ಯೆಗಳಿಂದ ಮನಃಶುದ್ಧಿಯೆಂದು ತಿಳಿಯಬೇಕು ಎನ್ನಲಾಗಿದೆ. ಮನುಸ್ಮೃತಿಯಲ್ಲಿ ಜ್ಞಾನ, ತಪಸ್ಸು, ಆಹಾರ, ಮೃತ್, ಮನಸ್ಸು, ವಾರಿ, ಉಪಾಂಜನ, ವಾಯು, ಕರ್ಮ, ಅರ್ಕ ಮತ್ತು ಕಾಲ ಇವು ಮನುಷ್ಯರ ಶುದ್ಧಿಗೆ ಕಾರಣಗಳೆಂದು ಹೇಳಿದೆ. ಶುದ್ಧಾಶುದ್ಧವಿವೇಕವನ್ನು ಮನುವು ವ್ಯಾಖ್ಯಾನಿಸುತ್ತಾ – ನೀರಿನಿಂದ ಶರೀರ, ಸತ್ಯದಿಂದ ಮನ, ವಿದ್ಯೆ ಮತ್ತು ತಪಸ್ಸುಗಳಿಂದ ಆತ್ಮ ಮತ್ತು ಜ್ಞಾನದಿಂದ ಬುದ್ಧಿಯು ಶುದ್ಧಿಯಾಗುತ್ತದೆಂದು ವಿಶ್ಲೇಷಿಸಲಾಗಿದೆ. ಅಂತರಾತ್ಮದ ಶುದ್ಧಿಯನ್ನು ಮಹಾಭಾರತದಲ್ಲಿ ಹೀಗೆ ಹೇಳಲಾಗಿದೆ – ಎಲೈ ಪಾಂಡುಪುತ್ರನೇ! ಪರಿಪೂರ್ಣ ಇಂದ್ರಿಯ ನಿಗ್ರಹ ಎಂಬ ಸ್ನಾನಘಟ್ಟವನ್ನುಳ್ಳ, ಸತ್ಯವೆಂಬ ಜಲರಾಶಿಯನ್ನುಳ್ಳ, ಶೀಲವೆಂಬ ತೀರವನ್ನುಳ್ಳ, ದಯೆಯೆಂಬ ಅಲೆಗಳನ್ನುಳ್ಳ, ಆತ್ಮ ಜ್ಞಾನವೆಂಬ ನದಿಯಲ್ಲಿ ನೀನು ಸ್ನಾನ ಮಾಡು, ಕೇವಲ ನೀರಿನಿಂದ ಆತ್ಮ ಶುದ್ಧಿಯಾಗುವುದಿಲ್ಲ ಎಂದು. (ದುಷ್ಟ)ಭಾವನೆಗಳಿಂದ ನಷ್ಟಚೇತನನಾದ ದುರಾಚಾರಿಯು ನೂರಾರು ಪುಣ್ಯತೀರ್ಥಗಳಿಂದಾಗಲೀ, ಸಹಸ್ರಸಂಖ್ಯೆಯ ಪುಣ್ಯಪ್ರದ ಮೃತ್ತಿಕೆಗಳಿಂದಾಗಲೀ ಶುದ್ಧಿ ಹೊಂದಲಾರ ಎಂದು ಬೃಹಸ್ಪತಿಯ ವಾದವಾಗಿದೆ. ಕ್ಷಾರವುಳ್ಳ ನೀರು ವಸ್ತ್ರದಿಂದ ಶುದ್ಧಿಗೊಳ್ಳುವಂತೆ ಶ್ರೀಕೃಷ್ಣನ ಪಾದಕಮಲದ ಭಕ್ತಿಯಿಂದಲ್ಲದೆ ಬೇರಾವುದರಿಂದಲೂ ಅಂತರಾತ್ಮನ ಶುದ್ಧಿಯಾಗದು ಎಂಬುದೇ ತಾತ್ಪರ್ಯವಾಗಿದೆ. ಮನುಷ್ಯರಿಗೆ ಮನಃಶುದ್ಧಿಯಿಂದಲೇ ನಿಜವಾದ ಶುದ್ಧಿ ಎಂಬಲ್ಲಿ ಯಾವ ಸಂದೇಹವೂ ಇಲ್ಲ. ಉತ್ತರರಾಮಚರಿತದಲ್ಲಿ – ಸೀತೆಯು ಹುಟ್ಟು ಮೊದಲುಗೊಂಡೇ ಪರಿಶುದ್ಧಳು, ಇವಳ ಪರಿಶುದ್ಧತೆಯನ್ನು ಪರೀಕ್ಷಿಸುವ ಅಗ್ನ್ಯೇತ್ಯಾದಿಗಳು ನಿಷ್ಪ್ರಯೋಜಕಗಳು, ಏಕೆಂದರೆ ಪವಿತ್ರತೀರ್ಥ ಮತ್ತು ಅಗ್ನಿಗಳು, ಬೇರೆ ಯಾವ ವಸ್ತುವಿನಿಂದಲೂ ಶುದ್ಧಿಗೊಳ್ಳತಕ್ಕವಲ್ಲ. ಇವು ಹೇಗೆ ಸ್ವಯಂ ಪರಿಶುದ್ಧಗಳೋ ಸೀತೆ ಹಾಗೇ ಸ್ವಯಂ ಪರಿಶುದ್ಧಳೆಂದು ಶುದ್ಧಾಶುದ್ಧದ ವಿವೇಚನೆಯನ್ನು ತಿಳಿಸಲಾಗಿದೆ. ಮಹರ್ಷಿ ಮನುವು – ಯೋಗ್ಯಕಾಲದಲ್ಲಿ ಕತ್ತರಿಸಲ್ಪಟ್ಟ ಕೇಶ, ನಖ, ಗಡ್ಡ (ಮುಖಕ್ಷೌರ)ಗಳುಳ್ಳವನು, ಇಂದ್ರಿಯನಿಗ್ರಹಿ ಮತ್ತು ಶುಭ್ರವಸ್ತ್ರಧಾರಿ ಇವನು ಶುದ್ಧನು; ಆದರೆ, ಎಷ್ಟೇ ಐಶ್ವರ್ಯವಿದ್ದರೂ, ಹರಿದ ಮತ್ತು ಕೊಳೆಯಾದ ವಸ್ತ್ರ ಧರಿಸಿದವನು ಶುಚಿಯಲ್ಲ ಎಂಬ ಸಂಸ್ಕಾರವನ್ನು ಹೇಳಿದ್ದಾನೆ.

ವಾಸ್ತುಶಾಸ್ತ್ರದಲ್ಲಿ ವಿವರಿಸುವಂತೆ ಮನಸ್ಸಿಗೆ ಮತ್ತು ನೇತ್ರಕ್ಕೆ ಎಲ್ಲಿ ಸಂತೋಷವಾಗುತ್ತದೋ ಆ ಸ್ಥಳದಲ್ಲಿ ಮಾತ್ರ ಎಲ್ಲರೂ ಮನೆ ಕಟ್ಟಿಸಬೇಕೆಂಬುದು ಗರ್ಗಾದಿ ಮುನಿಗಳ ಅಭಿಪ್ರಾಯ. ಮನೆ ನೆಮ್ಮದಿಯ ಸ್ಥಾನವಾಗಲೆಂದು ಆಶಿಸುವುದು ವಿಶಿಷ್ಟವಾದುದು. ಮಾನವನ ಅಂತಃಶೌಚದಿಂದ ಸತ್ತ್ವಶುದ್ಧಿ, ಸುಮನಸ್ಕತೆ, ಏಕಾಗ್ರತೆ, ಇಂದ್ರಿಯಜಯ, ಆತ್ಮದರ್ಶನ – ಇವುಗಳನ್ನು ಹೊಂದುವ ಯೋಗ್ಯತೆ ಬರುತ್ತದೆ ಎಂಬುದೇ ಯೋಗಸೂತ್ರದ ಸಾರ. ಮತ್ತೊಬ್ಬರ ಸಂಪತ್ತನ್ನು ಲಪಟಾಯಿಸುವ ದುರಾಲೋಚನೆ, ಮನಸ್ಸಿನಿಂದ ಇತರರಿಗೆ ಕೆಟ್ಟದ್ದನ್ನೇ ಬಯಸುತ್ತಿರುವುದು, ಸದಾ ಸುಳ್ಳನ್ನೇ ಆಲೋಚಿಸುತ್ತಿರುವುದು – ಈ ಮೂರು ಮಾನಸ ಪಾಪಗಳು. ದಡ್ಡನಿಗೆ ಶಾಸ್ತ್ರವೇ ಭಾರ, ರಾಗವುಳ್ಳವನಿಗೆ ಜ್ಞಾನವೇ ಭಾರ, ಅಶಾಂತನಿಗೆ ಮನಸ್ಸೇ ಭಾರ, ಅಜ್ಞಾನಿಗೆ ತನ್ನ ಶರೀರವೇ ಭಾರ. ಆದ್ದರಿಂದ ಮಾನವನು ಶಾಸ್ತ್ರಗಳನ್ನು ಅಭ್ಯಸಿಸಿ ವಿವೇಕಿಯಾಗಬೇಕು. ಮನಸ್ಸಿನಲ್ಲೂ, ಮಾತಿನಲ್ಲೂ, ಕರ್ಮದಲ್ಲೂ ಒಂದೇ ಸ್ವಭಾವವುಳ್ಳವರೇ ಮಹಾತ್ಮರು. ದುರಾತ್ಮರಿಗಾದರೋ ಮನಸ್ಸಿನಲ್ಲೇ ಒಂದು, ಮಾತಿನಲ್ಲಿ ಇನ್ನೊಂದು, ಕ್ರಿಯೆಯಲ್ಲಿ ಮತ್ತೊಂದು ಸ್ವಭಾವವು ಇರುತ್ತದೆ. ಈ ರೀತಿ ಮನಸ್ಸಿನ ದ್ವಿವಿಧ ಪ್ರಕ್ರಿಯೆಯನ್ನು ವಿವರಿಸಲಾಗಿದೆ. ಮನಸ್ಸು, ವಾಕ್ಕು, ಕೃತಿಗಳಲ್ಲಿ ಒಂದೇ ಸ್ವಭಾವವುಳ್ಳ ಮಹಾತ್ಮರು ನೇರವಾದ ಸ್ವಭಾವವುಳ್ಳವರಾಗಿರುತ್ತಾರೆ. ಮಹಾತ್ಮರ ಸಂಗದಿಂದ ಸುಖಶಾಂತಿಗಳು ಲಭಿಸುತ್ತವೆ, ಮನಸ್ಸು ಶುದ್ಧವೂ ಆಗುತ್ತದೆ. ಇದಕ್ಕೆ ವಿರುದ್ಧವಾಗಿರುವವರು ದುರಾತ್ಮರು. ಆದ್ದರಿಂದ ಮಹಾತ್ಮರುಗಳ ಸಹವಾಸವನ್ನು ಮಾಡಬೇಕು, ದುಷ್ಟರ ಸಹವಾಸವನ್ನು ಎಂದೆಂದಿಗೂ ಮಾಡಲೇಬಾರದು. ಮನಸ್ಸು, ಜೇನುಹುಳ, ಮೋದ, ಹೆಂಗಸು, ಕಾಮ, ಗಾಳ, ಲಕ್ಷ್ಮಿ, ಮದ, ಕೋತಿ ಮತ್ತು ಮೀನುಗಳಲ್ಲಿ ಮತ್ಸ್ಯ, ಮರ್ಕಟಾದಿಗಳಿಗಿಂತಲೂ ಮಾನವನ ಮನಸ್ಸೇ ಅತ್ಯಂತ ಚಂಚಲವಾಗಿರುವುದು ಕಂಡು ಬರುತ್ತದೆ. ಆದ್ದರಿಂದ ವಿವೇಕಿಯಾದ ಮಾನವನು ಸ್ಥಿರಚಿತ್ತನಾಗಿರಬೇಕು. ಅಹಂಕಾರದಿಂದ ಹೆಚ್ಚಿನ ದುಃಖ, ಮಾನಸಿಕ ರೋಗಗಳು, ಆಪತ್ತುಗಳು, ಆದ್ದರಿಂದ ಅಹಂಕಾರವೇ ಮಹಾ ಶತ್ರು. ಅಹಂಕಾರಕ್ಕಿಂತ ದೊಡ್ಡ ಶತ್ರು ಇಲ್ಲ ಎಂಬುದನ್ನು ನೋಡಿದಾಗ ವಿವೇಕಿಯಾದ ಮಾನವನು ಇನ್ನೇನನ್ನೂ ಹೊಸದಾಗಿ ಮಾಡಬೇಕಾಗಿಲ್ಲ. ಸಕಲ ಆಪತ್ತುಗಳಿಗೂ ದುಃಖಗಳಿಗೂ ಮೂಲವಾದ ಅಹಂಕಾರವನ್ನು ಬಿಟ್ಟು ಸುಖಿಯಾಗಿರುವುದನ್ನು ಕಲಿಯಬೇಕು ಎಂದು ತಿಳಿದು ಬರುತ್ತದೆ.

ಉಪಸಂಹಾರ: ನಮ್ಮ ಮನಸ್ಸಿನೊಳಗಿನ ಆಲೋಚನೆಗಳನ್ನು ಕ್ರಮಬದ್ಧವಾಗಿ ನಿಯಂತ್ರಣಕ್ಕೆ ತರುವುದು ಮನೋನಿಗ್ರಹದ ಬಹುದೊಡ್ಡ ರಹಸ್ಯವಾಗಿದೆ. ನಮ್ಮ ಸುಪ್ತಪ್ರಜ್ಞೆಯನ್ನು ಹತೋಟಿಯಲ್ಲಿರಿಸಿಕೊಳ್ಳದ ಹೊರತು, ಮನಸ್ಸನ್ನು ನಾವು

ನಿಯಂತ್ರಿಸಲಾರೆವು. ಸುಪ್ತಪ್ರಜ್ಞೆಯನ್ನು ನಿಯಂತ್ರಿಸುವುದರಿಂದ ಸುಪ್ತವಾಗಿರುವ ಕುಂಡಲಿನೀಶಕ್ತಿಯು ಜಾಗೃತವಾಗುತ್ತದೆ. ಮನಸ್ಸನ್ನು ನಿಗ್ರಹಿಸುವ ಅತ್ಯಂತ ಸರಳವೂ, ಖಚಿತವೂ ಆದ ವಿಧಾನವೆಂದರೆ ಭಗವತ್‌ಪ್ರೇಮವೊಂದೇ. ದೇವರಲ್ಲಿ ನಂಬಿಕೆ ಇಲ್ಲದವರೂ ಸಹ ತಮ್ಮ ಸ್ವಪ್ರಯತ್ನಗಳಿಂದ ಗುಣಾತೀತರಾಗುವುದರ ಮೂಲಕ ಮನೋನಿಗ್ರಹವನ್ನು ಗಳಿಸಿಕೊಳ್ಳಬಹುದು. ಮನೋನಿಗ್ರಹವು ಅತ್ಯಂತ ಮೌಲಿಕವಾದುದು. ಯಾಕೆಂದರೆ ಅದು ಆತ್ಮಾನಂದದಂತಹ ಅತ್ಯುನ್ನತವಾದ ಧನ್ಯತೆಯ ನೆಲೆಗೆ ಮಾರ್ಗವಾಗಿದೆ. ಮನಸ್ಸಮಾಧಿಯ ವಿಷಯವನ್ನು ಪ್ರಸ್ತಾಪಿಸುವ ಸಂಸ್ಕೃತ ಸಾಹಿತ್ಯ, ಆಯುರ್ವೇದ ಹಾಗೂ ಭಾರತೀಯ ವಿಜ್ಞಾನ ವಾಙ್ಮಯ ಅನೇಕ ರೋಗಗಳಿಗೆ ಮನಸ್ಸೇ ಮೂಲ ಹಾಗೂ ಮುಖ್ಯ ಕಾರಣ ಎಂದಿವೆ. ಈ ಸತ್ಯ ಇಂದಿನ ಯುಗದವರಿಗೂ ಅರಿವಾಗಿದೆ. ಮನೋರೋಗಕ್ಕಾದರೋ ಚಿಂತೆ, ಭಯ, ಖಿನ್ನತೆ, ಆತಂಕ, ಅಸ್ಥಿರತೆ ಮೂಲವಾದರೆ, ಮನಸ್ಸಮಾಧಿಯೇ ರೋಗನಿರೋಧಕ ಎಂಬ ಸತ್ಯವನ್ನು ಮಾನಸಿಕ ತಜ್ಞರು, ವಿಜ್ಞಾನಿಗಳು ಕಂಡುಕೊಂಡ ಪರಿಹಾರ. ಮನಸ್ಥಿರತೆ ಇದ್ದರೆ ಪ್ರಜ್ಞಾಪರಾಧವೇ ಮೊದಲಾದ ಖಾಯಿಲೆಯನ್ನು ತಡೆಗಟ್ಟಬಹುದು ಎಂಬುದು ಮಹತ್ವದ ವಿಚಾರ.

ಪರಾಮರ್ಶನ ಗ್ರಂಥಗಳು

1. ವೈಯಾಕರಣ ಸಿದ್ಧಾಂತಕೌಮುದೀ- ಕೃಷ್ಣದಾಸ ಅಕಾಡೆಮಿ, ಚೌಖಂಬಾ ಪ್ರೆಸ್, ವಾರಾಣಸೀ – 1987

2. ಕಾಳಿದಾಸಾಸ್ ಕುಮಾರಸಂಭವಮ್ – ಎಸ್. ಆರ್. ನೆಹೆಗಲ್, ಜಾಲಂಧರಸ್ಥಿತ ನವಯುಗ ಪ್ರಕಾಶನ ಸಂಸ್ಥಾನಮ್ – 1959

3. ಶಬ್ದಾರ್ಥ ಕೌಸ್ತುಭಃ (ಶಬ್ದಕೋಶ) – ಸಂಪುಟ 1 –6, ವಿ. ಚಕ್ರವರ್ತಿ ಶ್ರೀನಿವಾಸಗೋಪಾಲಾಚಾರ್ಯ ಬಾಪ್ಟೋ ಪ್ರಕಾಶನ, ಬೆಂಗಳೂರು ಪ್ರೆಸ್, ಬೆಂಗಳೂರು – 2003

4. ಅಮರಕೋಶ – ಸಂಪಾದನೆ –ಲೂಯಿರೈಸ್, ಪ್ರಸಾರಾಂಗ, ಮೈ.ವಿ.ವಿ. ಮೈಸೂರು – 1989

5. ಶ್ರೀಮದ್ಭಗವದ್ಗೀತೆ – ತತ್ತ್ವ ವಿವೇಚನಿ ಟೀಕೆ, ಗೀತಾ ಪ್ರೆಸ್, ಗೋರಖ್‌ಪುರ – 2010

6. ಶಿವಸಂಹಿತಾ–ಅನು: ಡಾ॥ ಸಿ. ಎಸ್. ನಾಯ್ಕರ್, ಕುಲಸಚಿವರು, ಸಂಸ್ಕೃತವಿಶ್ವವಿದ್ಯಾಲಯ, ಬೆಂಗಳೂರು

7. ಮನ್ತಸ್ಮೃತಿಃ – ಸಂಪಾದಕರು – ಪ್ರೊ ॥ ಜೆ. ಎಲ್. ಶಾಸ್ತ್ರಿ, ಮೋತಿಲಾಲ್ ಬನಾರಸೀದಾಸ್ ಪಬ್ಲಿಷರ್ಸ್ ಪ್ರೈ. ಲಿ., ವಾರಾಣಾಸಿ. 1990

8. ಕೃಷ್ಣಯಜುರ್ವೇದ, ಸಂಪುಟ–1, ಕನ್ನಡ ಪ್ರಕಾಶನ, ಜ್ಯೋತಿಸಾಂಸ್ಕೃತಿಕಪ್ರತಿಷ್ಠಾನ,ಬೆಂಗಳೂರು, 1988

9. ಸಂಸ್ಕೃತ ಸಾಹಿತ್ಯ ಪರಿಚಯ – ಒ. ಓ. ಜೋಷಿ, ರೂಪಾ ಪಬ್ಲಿಕೇಶನ್, ಧಾರವಾಡ – 2002

10. ವೈದ್ಯಕೀಯಸುಭಾಷಿತ ಸಾಹಿತ್ಯಂ. ಡಾ। ಭಾಸ್ಕರಗೋವಿಂದ ಘಾಣೇಕರ್, ಚೌಕಾಂಬಾ ಪಬ್ಲಿಕೇಷನ್ ವಾರಾಣಸಿ – 2003

11. ಸ್ವಾಸ್ಥ್ಯಸಂಬಂಧಿಸುಭಾಷಿತಾವಳಿ, ಉಪೇಂದ್ರಭೂಪಾಲ, ಆರ್ಯಸಮಾಜ, ಬೆಂಗಳೂರು–2006

12. ಆರೋಗ್ಯದರ್ಪಣ, ಶ್ರೀ ಮೃತ್ಯುಂಜಯಮಹಾದೇವ, ವಿನಯ್ ಪ್ರಕಾಶನ, ಬೆಂಗಳೂರು–2011

13. ಪ್ರಕೃತಿ ಸಂಜೀವಿನಿ, ಸ್ವಾಮಿ ನಾರಾಯಣ ತೀರ್ಥ, ವಾಸನ್ ಪಬ್ಲಿಕೇಷನ್–2011

14. ಆರೋಗ್ಯ ಪ್ರದೀಪಿಕೆ, ಮಹಾಂತನ ಗೌಡ ಪಾಟೀಲ, ಪಾರು ಪ್ರಕಾಶನ, ಗದಗ–2012

15. ನಿಮ್ಮಕೈಗಳಲ್ಲಿ ಆರೋಗ್ಯ, ಡಾ.ದೇವೇಂದ್ರವೋರಾ, ಎನ್‌ಎವಿನೀಟ್‌ಪಬ್ಲಿಕೇಷನ್, ಗುಜರಾತ್ 1982

16. ದೀರ್ಘಾಯುದರ್ಶನ–ಡಾ.ಎಂ.ಗೋಪಾಲಕೃಷ್ಣರಾವ್, ದೀರ್ಘಾಯುಪ್ರಕಾಶನಸಮಿತಿ, ಬೆಂಗಳೂರು 1994

17. ನವೀನದೈಹಿಕ ಮತ್ತು ಆರೋಗ್ಯಶಿಕ್ಷಣ, ಎಂ.ಗಂಗಪ್ಪ, ವರ್ಣ್ ಮತ್ತು ರಮೇಶ್‌ಪ್ರಕಾಶನ, ಹರಪನಹಳ್ಳಿ–2009

ಆರೋಗ್ಯ ಮತ್ತು ಆನಂದಕ್ಕಾಗಿ ಹಸ್ತ ಮುದ್ರೆ

ಶ್ರೀಮತಿ. ಪಿ. ಬಿ. ರುದ್ರಾಕ್ಷಿ
ಮುಖ್ಯಸ್ಥರು, ಪ್ರಾಣಿಶಾಸ್ತ್ರ ವಿಭಾಗ, ಬಸವೇಶ್ವರ ವಿಜ್ಞಾನ ಕಾಲೇಜು, ಬಾಗಲಕೋಟೆ–587 101 Email: parwatishirol@gmail.com

ದೇಹವನ್ನು ಸ್ವಾಸ್ಥಗೊಳಿಸುವಲ್ಲಿ ಆರೋಗ್ಯವರ್ಧನಾರ್ಥಿಗೆ ಆನಂದವನ್ನೀಯಲು ಮುದ್ರೆಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ದೇಹವೊಂದು ಅದ್ಭುತವಾದ ಯಂತ್ರವಾಗಿದ್ದು ಅದು ಮಸ್ತಿಷ್ಕದ ನಿಯಂತ್ರಣದಲ್ಲಿರುವುದು. ದೇಹದ ಕೆಲ ಮರ್ಮ ಸ್ಥಾನಗಳಿಗೆ ಕೊಡುವ ಸ್ಪರ್ಶ ಅಥವಾ ಒತ್ತು ಮೆದುಳಿನ ಕೇಂದ್ರಗಳನ್ನು ಸಚೇತನ ಗೊಳಿಸುವುದು. ಆದ್ದರಿಂದ ದೇಹದ ಅನೇಕ ಸಮಸ್ಯೆಗಳು ದೂರಾಗುವವು. ಮುದ್ರೆಗಳು ಬಹಳ ತರಹವಾಗಿ ವಿಂಗಡಿಸಲಾಗಿದೆ. ಅವರಲ್ಲಿ ಚಿಕಿತ್ಸಾ ಮುದ್ರೆಗಳು, ಹಠಯೋಗ ಮುದ್ರೆಗಳು, ನರ್ತನ ಮುದ್ರೆಗಳು, ಆಧ್ಯಾತ್ಮಿಕ ಮುದ್ರೆಗಳು, ಚೈತನ್ಯವಾಯೀ ಮುದ್ರೆಗಳು, ಧ್ಯಾನ ಮುದ್ರೆಗಳು, ಪೂಜಾ ಮುದ್ರೆಗಳು ಇತ್ಯಾದಿಗಳು ಇರುವವು. ಈ ಎಲ್ಲ ಮುದ್ರೆಗಳು ಒಂದಲ್ಲ ಒಂದು ರೀತಿಯಲ್ಲಿ ಸಹಾಯ ಮಾಡುತ್ತವೆ. ಈಗ ತಂತ್ರಜ್ಞಾನ ಹೆಚ್ಚಾದಂತೆ ಮುದ್ರೆಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತೀ ಅವಶ್ಯಕ.

ಮುದ್ರೆ ಕೇವಲ ಆರೋಗ್ಯಕ್ಕಾಗಿಯೇ ಅಲ್ಲ. ಮುದ್ರೆ ಜೋತಿಷ್ಯಶಾಸ್ತ್ರ ಮತ್ತು ವಾಸ್ತುಶಾಸ್ತ್ರದಲ್ಲಿಯೂ ಪ್ರಚಲಿತವಿದೆ. ಪೂಜೆ ಮಾಡುವ ವಿಧಿವಿಧಾನಗಳಲ್ಲಿಯು ಮುದ್ರೆಯನ್ನು ಉಪಯೋಗಿಸುತ್ತೇವೆ. ಗಂಟಾನಾದ ಮಾಡುವುದಕ್ಕೆ ಶಿಖರ ಮುದ್ರೆಯನ್ನು ಉಪಯೋಗಿಸುತ್ತೇವೆ. ಆರತಿ ಮಾಡುವಾಗ ಚತುರ ಮುದ್ರೆಯನ್ನು ಉಪಯೋಗಿಸುತ್ತೇವೆ. ಹೀಗೆ ಹಲವಾರು ಮುದ್ರೆಗಳನ್ನು ಗೊತ್ತೊ ಅಥವಾ ಗೊತ್ತಿಲ್ಲದೆಯೋ ದಿನ ನಿತ್ಯ ಧಾರಣ ಮಾಡುತ್ತೇವೆ. ಜೋತಿಷ್ಯಶಾಸ್ತ್ರದಲ್ಲಿ ಗ್ರಹಗಳಿಗೆ ಶಾಂತಿ ಮಾಡಲು ಮುದ್ರೆಗಳು ಇವೆ. ನಮ್ಮ ಹಸ್ತದಲ್ಲಿ ಉಂಗುರ ಬೆರಳ ಬಡ್ಡಿಯಲ್ಲಿ ಸೂರ್ಯ, ಅದರ ನೇರವಾಗಿ ವಿರುದ್ಧದಲ್ಲಿ ಚಂದಿರ, ಮಂಗಳ ಹಸ್ತದ ಮಧ್ಯಭಾಗದಲ್ಲಿದ್ದಾನೆ ಅಕ್ಕ–ಪಕ್ಕದಲ್ಲಿ ಉಚ್ಚ ಮಂಗಳ (ರಾಹು) ಹೆಬ್ಬರಳನ ಕಡೆ, ನೀಚ–ಮಂಗಳ (ಕೇತು) ಕಿರುಬೇರಳನ ಕಡೆಗೆ, ಕಿರುಬೇರಳನ ಬುಡಕ್ಕೆ ಬುಧ, ತೋರು ಬೇರಳನ ಬುಡಕ್ಕೆ ಗುರು, ಮಧ್ಯದ ಬೆರಳನ ಬುಡಕ್ಕೆ ಶನಿ ವಾಸಿಸುತ್ತಾನೆ. ಹೆಬ್ಬಟ್ಟಿನ ಬುಡಕ್ಕೆ ಶುಕ್ರ ಇರುತ್ತಾನೆ.

ಸೂರ್ಯಾಯಾ ಚಂದ್ರಾಯಾ ಮಂಗಳಾಯಾ ಬುಧಾಯಜ ಗುರು ಶುಕ್ರ ಶನಿ ರಾಹು ಕೇತು ನಮ್ಮ ಹಸ್ತದಲ್ಲಿಯೇ ಒಂಬತ್ತು ಗ್ರಹಗಳು ವಾಸವಾಗಿವೆ. ಬೆರಳಿನ ತುದಿಯಿಂದ ಅದುಮಿದಾಗ ಆಯಾ ಗ್ರಹಳಳಿಗೆ ಶಾಂತಿಸಿಗುತ್ತದೆ. ನಮ್ಮ ಹಸ್ತದಲ್ಲಿಯೇ 12 ದ್ವಾದಶ ರಾಶಿಗಳು ಇವೆ 27 ನಕ್ಷತ್ರಗಳವೆ. ಎರಡು ಅಂಗೈಗಳನ್ನು ಜೋಡಿಸಿ ತೀಡಿದಾಗ ಎಲ್ಲಾ ಗ್ರಹಗಳಿಗೂ ಶಾಂತಿಯಾಗುವುದು. ಇದಕ್ಕೆ ಪತಾಕ ಹಸ್ತ ಮುದ್ರೆ ಎನ್ನುವರು. ಗಿ ಡಿಜಿಥಿ ಪ್ರಕೃತಿಗೆ ಬರುವಾಗ ನಮ್ಮ ದೇಹದಿಮದ ಮುದ್ರೆ ಮಾಡುವಾಗ ಬರುವ Energy, Electro mechanical energy, Electro magnetic energy, Mechanical energy, Chemical energy F Energy, UV rays ಜೊತೆ ಸೇರಿಕೊಂಡಾಗ ಮನೆಯಲ್ಲಿ ಇರುವಂತಹ ವಾಸ್ತು ದೋಷವು ನಿವಾರಣೆ ಆಗುವವು, ವಾಸ್ತು ಮುದ್ರೆಯನ್ನು ಧಾರಣೆ ಮಾಡುವದರಿಂದ, 15 ರಿಂದ 20 ನಿಮಿಷ ಯಾವುದಾದರು ಒಂದು ಮುದ್ರೆ ಧಾರಣೆ ಮಾಡಿ, ಅದಕ್ಕೆ ಸಂಬಂಧಪಟ್ಟ ಮಂತ್ರ ಹೇಳಿದರೆ Sound therapy eÉÆvÉ Mudra therapy ಆಗುವದರಿಂದ ನಮಗೆ ಆರೋಗ್ಯ ಪ್ರಾಪ್ತಿಯಾಗುವುದು. ದೇಹದ ಅಂಗಗಳಿಂದ ಶಕ್ತಿ ಕಿರಣಗಳು ಹೊರ ಚಿಮ್ಮುತ್ತಿರುತ್ತವೆ. ಹೊರ ಚಿಮ್ಮುತ್ತಿರುವ ಆ ಶಕ್ತಿ ಕಿರಣಗಳನ್ನು ಮುದ್ರೆಗಳ ಮೂಲಕ ತಡೆದು ವ್ಯರ್ಥವಾಗಿ ಹೊರಟಿರುವ ಚೈತನ್ಯವನ್ನು ವಾಪಸ್ಸು ದೇಹದೊಳಗೆ ಹಿಂದಿರುಗಿಸುವ ತಂತ್ರಗಾರಿಕೆಯೇ ಮುದ್ರೆ. ಹಸ್ತ ಮತ್ತು ಬೆರಳುಗಳನ್ನು ಸೇರಿಸಿ ಮಾಡುವದೇ ಮುದ್ರೆ. ಮನುಷ್ಯನ ಜೀವನಕ್ಕೆ ಊಟ, ನಿದ್ರೆ ಎಷ್ಟು ಮುಖ್ಯವೋ ಅಷ್ಟೇ ಹಸ್ತ ಬೆರಳುಗಳಿಂದ ಮಾಡುವ ಮುದ್ರೆಗಳು ಮುಖ್ಯ. ಮುದ್ರೆಗಳು ಆರೋಗ್ಯ ಸುಖ ಶಾಂತಿಯನ್ನು ಒದಗಿಸಬಲ್ಲವು. ದೈಹಿಕವಾಗಿ, ಮಾನಸಿಕವಾಗಿ ಸದೃಢಗೊಳಿಸುವವು. ಆದ್ದರಿಂದ ಮುದ್ರೆಗಳು ಅನ್ನೋದು ಒಂದು ವಿಜ್ಞಾನ.

ಮುದ್ರೆ ಬೆರಳುಗಳಲ್ಲಿ ಅಗ್ನಿ, ವಾಯು, ಆಕಾಶ, ಪೃಥ್ವಿ, ಜಲ ಎಂಬ ಪಂಚ ತತ್ವಗಳು ಇರುವವು ಈ ಐದು ತತ್ವಗಳು ನಿಯಮಿತ ಪ್ರಮಾಣದಲ್ಲಿ ಮಾನವನ ದೇಹದಲ್ಲಿ ಸಮ್ಮಿಲಿತಗೊಂಡಿರುವವು ಅವುಗಳಲ್ಲಿ ಸ್ವಲ್ಪ ವ್ಯತ್ಯಾಸವಾದರೂ ವ್ಯಾಧಿಗ್ರಸ್ಥನಾಗುವನು. ಮುದ್ರೆಗಳಿಂದ ಪಂಚತತ್ವಗಳನ್ನು ಶರೀರದಲ್ಲಿ ಸಮತೋಲನಕ್ಕೆ ತರಲು ಸಾಧ್ಯವಾಗುವದು. ದೇಹದ ಅನ್ನಮಯ ಕೋಶ ಪ್ರಾಣಮಯಕೋಶ, ಮನೋಮಯ ಕೋಶ ಜ್ಞಾನ ಮಯಕೋಶ ಮತ್ತು ಆನಂದಮಯ ಕೋಶ ಚೈತನ್ಯಗೊಳ್ಳುವುದಲ್ಲದೆ ದೇಹದಲ್ಲಿರುವ 72000 ನಾಡಿಗಳಿಂದ ಸಂಯೋಜನೆಗೊಂಡಿರುವ ಸಪ್ತ ಚಕ್ರಗಳೂ ಪ್ರಚೋದನೆಗೊಳ್ಳುವವು. ಪ್ರತೀ ನರ ನಾಡಿಗಳು ನಮ್ಮ ಕೈಬೆರಳು, ಕಾಲ್ಬೆರಳುಗಳಲ್ಲಿ ಅಂತ್ಯಗೊಳ್ಳುತ್ತವೆ. ಆ ನರನಾಡಿಗಳನ್ನು ಬೆರಳುಗಳ ತುದಿಯಿಂದ ಒತ್ತುವ ವಿಧಾನವೇ ಮುದ್ರೆ.

ಕೈಗಳ ಬೆರಳುಗಳಲ್ಲಿ ಪಂಚತತ್ವಗಳು ಕೆಳಗಿನಂತೆ ಇರುವವು

1. ಹೆಬ್ಬೆರಳಲ್ಲಿ ಅಗ್ನಿ ತತ್ವವಿದ್ದು ಅದು ಕಣ್ಣನ್ನು (ರೂಪವನ್ನು) ನಿಯಂತ್ರಿಸುವದು.

2. ತೋರು ಬೆರಳಲ್ಲಿ ವಾಯುತತ್ವವಿದ್ದು ಅದು ಮೂಗನ್ನು (ವಾಸನೆಯನ್ನು) ನಿಯಂತ್ರಿಸುವದು.

3. ಮಧ್ಯ ಬೆರಳಲ್ಲಿ ಆಕಾಶ ತತ್ವವಿದ್ದು ಅದು ಕಿವಿಯನ್ನು (ಶಬ್ದವನ್ನು) ನಿಯಂತ್ರಿಸುವದು.

4. ಉಂಗುರ ಬೆರಳಲ್ಲಿ ಪೃಥ್ವಿ ತತ್ವವಿದ್ದು ಅದು ಚರ್ಮವನ್ನು (ಸ್ಪರ್ಶವನ್ನು) ನಿಯಂತ್ರಿಸುವದು.

5. ಕಿರು ಬೆರಳಲ್ಲಿ ಜಲತತ್ವವಿದ್ದು ಅದು ನಾಲಗೆಯನ್ನು (ರುಚಿಯನ್ನು) ನಿಯಂತ್ರಿಸುವದು.

ಅಗ್ನಿ ತತ್ವದ ಹೆಬ್ಬೆರಳಿನ ತುದಿಗೆ ಮಿಕ್ಕ ನಾಲ್ಕು ತತ್ವಗಳ ಬೆರಳುಗಳ ತುದಿಯನ್ನು ಒಂದೊಂದಾಗಿ ಸ್ಪರ್ಶಿಸಿದರೆ ಅನುಭವವಾಗುವ ಹೃದಯದ ಬಡಿತದ ಸ್ಪಂದನವನ್ನು ನಾವು ಗಮನಿಸಬಹುದು. ಆ ಸ್ಪಂದನದಿಂದ ಪ್ರಸರಣಗೊಳ್ಳುವ ವಿದ್ಯುದಯಸ್ಕಾಂತದ ಅಲೆಗಳು ನೇರವಾಗಿ ಮೆದುಳನ್ನು ಮುಟ್ಟುವವು ಆ ಅಲೆಗಳ ವಿಶಿಷ್ಟ ಶಕ್ತಿಯೇ ಮೆದುಳಿನ ವಿವಿಧ ಭಾಗಗಳನ್ನು ಉದ್ದೀಪನಗೊಳಿಸಿ ಶರೀರದ ನಿರ್ದಿಷ್ಟ ಅಂಗಗಳಿಗೆ ತಲುಪಿ ಅವುಗಳಲ್ಲಿ ಚೈತನ್ಯ ತುಂಬುವದು.

ಮುದ್ರೆಗಳು ಅತ್ಯಂತ ಸರಳ ಮತ್ತು ಬಹಳ ಪರಿಣಾಮಕಾರಿಗಳಾಗಿರುವವು. ಈ ವಿಧಾನದಲ್ಲಿ ಔಷಧಿಗಳನ್ನು ಬಳಸುತ್ತಿದ್ದರೂ ಯಾವ ಅಡ್ಡ ಪರಿಣಾಮಗಳ ಭಯವೂ ಇಲ್ಲ. ದೇಹದ ಪ್ರಕೃತಿಯನ್ನು ನೋಡಿಕೊಂಡು ಎಷ್ಟು ಮುದ್ರೆಗಳು ಅವಶ್ಯವಾಗಿಯೋ ಅಷ್ಟನ್ನು ಆಯ್ದು ಅಭ್ಯಾಸಕ್ಕೆ ತೊಡಗಬೇಕು ಅನೇಕ ತರಹದ ಮುದ್ರೆಗಳು ಇರುವವು. ಕೆಲವನ್ನು ಆಯ್ದುಕೊಂಡು ಆಚರಣೆಗೆ ತೊಡಗಬೇಕು ಸುಖಾಸನದಲ್ಲಿ ಅಥವಾ ಪದ್ಮಾಸನದಲ್ಲಿ ಕುಳಿತು ಕನಿಷ್ಟ 40–45 ನಿಮಿಷಗಳ ವರೆಗೆ ಮುದ್ರೆಗಳನ್ನು ಮಾಡಬೇಕು ಯಾವುದೇ ಔಷಧಿ ಚಿಕಿತ್ಸೆ ನಡೆಯುತ್ತಿದ್ದರೂ ಮಧ್ಯದಲ್ಲಿ ನಿಲ್ಲಿಸಬಾರದು. ದಿನಂಪ್ರತಿ ಮಾಡಲೇಬೇಕು. ಮುದ್ರೆಯ ಆಚರಣೆ ನಂತರ ಕನಿಷ್ಟ 10–15 ನಿಮಿಷ "ಪ್ರಾಣ ಮುದ್ರೆ" ಯನ್ನು ತಪ್ಪದೇ ಮಾಡಬೇಕು.

ಮುದ್ರೆಗಳನ್ನು ಮಂತ್ರ ಜಪಿಸುತ್ತ ಮಾಡಿದರೆ ಅದರ ಫಲ ತೀವ್ರ ದೊರಕುವದು ಉದಾಹರಣೆಗೆ ವಿತ್ತೇಶ್ವರ ಮುದ್ರೆ ಈ ಮುದ್ರೆಯನ್ನು ಆಚರಿಸುವಾಗ ಹೆಬ್ಬೆರಳು ತೋರಬೆರಳು ಮತ್ತು

ಮಧ್ಯದ ಬೆರಳುಗಳ ತುದಿಗಳನ್ನು ಜೋಡಿಸಬೇಕು ಎರಡು ಕೈಗಳಲ್ಲಿ ಜೋಡಿಸಿದಂಥ ಮೂರು ಬೆರಳುಗಳ ತುದಿಗಳನ್ನು ಇನ್ನೊಂದು ಮೂರು ಬೆರಳುಗಳನ್ನು ಸ್ಪರ್ಶಿಸಬೇಕು. ಇನ್ನೆರಡು ಬೆರಳಗಳನ್ನು ಅಂದರೆ ಪೃಥ್ವಿ ತತ್ವದ ಅನಾಮಿಕಾ ಬೆರಳನ್ನು ಮತ್ತು ಜಲತತ್ವದ ಕಿರು ಬೆರಳನ್ನು ಆಯಾ ಕೈಗಳ ಹೆಬ್ಬೆರಳಿನ ಬುಡಕ್ಕೆ ಹಚ್ಚಬೇಕು.

ನಾವು ಬಹಳಷ್ಟು ಜನರಿಗೆ ಹಣದ ಸಹಾಯವನ್ನು ಮಾಡಿರುತ್ತೇವೆ ಹಣ ಇಸಿದುಕೊಂಡವರು ನಾಳೆ ಕೊಡುತ್ತೇವೆ, ನಾಳೆ ಕೊಡುತ್ತೇವೆ ಎಂದು ಹೇಳಿ ಕಳುಹಿಸುತ್ತಾರೆ. ನೀವು (ಕೊಟ್ಟವರು) ಹಣದ ತೊಂದರೆಯಿಂದ ಬಳಲುತ್ತೀರಿ ಆದರೂ ಅವರು ಕೊಡುವದಿಲ್ಲ. ಕೊಡುತ್ತೇವೆ ಎಂದೇ ಹೇಳಿ ಕಳುಹಿಸುತ್ತಾರೆ. ಅವಾಗ ಈ ವಿತ್ತೇಶ್ವರ ಮುದ್ರೆಯನ್ನು ಉತ್ತರ ದಿಕ್ಕಿನಲ್ಲಿ ಕುಳಿತು ಮಂತ್ರವನ್ನು 108 ಬಾರಿ ಜಪಿಸಿ ಆಚರಿಸಿದ್ದೆ ಆದರೆ ನಿಮಗೆ ಹಣ ಮರಳಿ ಸಿಗುವದು. ಮಂತ್ರವು

ಓಂ ಶ್ರೀಂ

ಓಂ ಹ್ರೀಂ

ಶ್ರೀಂ ಹ್ರೀಂ

ಕ್ಲೀಂ ಶ್ರೀಂ ಕ್ಲೀ ಹ್ರೀಂ

ವಿತ್ತೇಶ್ವರಾಯ ನಮಃ ಎಂದು ಇರುವದು.

ಶಂಖ ಮುದ್ರೆಯನ್ನು ಮಾಡುವ ಕ್ರಮ ಹೀಗಿರುವದು ಅಗ್ನಿತತ್ವವದ ಎಡ ಹೆಬ್ಬೆಟ್ಟನ್ನು ಬಲ ಅಂಗೈ ಮಧ್ಯದಲ್ಲಿಡಿ, ಬಲಗೈನ ನಾಲ್ಕೂ ಬೆರಳುಗಳನ್ನು ಹೆಬ್ಬೆಟ್ಟಿನ ಸುತ್ತಮಡಿಸಿ ಮೃದುವಾಗಿ ಅದುಮಿ ಎಡಗೈನ ನಾಲ್ಕೂ ಬೆರಳುಗಳನ್ನು ಮೇಲಕ್ಕೆತ್ತಿ ಬಲಗೈಯ ಮಡಿಸಿದ ಬೆರಳುಗಳ ಮೇಲಿರಿಸಿ ಎಡಗೈನ ತೋರು ಬೆರಳು ಮತ್ತು ಬಲಗೈನ ಹೆಬ್ಬೆಟ್ಟಿನ ತುದಿಯನ್ನು ಸ್ಪರ್ಶಿಸಿ ಮಿಕ್ಕ ಮೂರು ಬೆರಳುಗಳು ಬಲಗೈನ ಮುಚ್ಚಿದ ಬೆರಳುಗಳನ್ನು ಮೃದುವಾಗಿ ಅಮುಕುತ್ತಿರಬೇಕು. ಆಗ ಕೈಗಳು ಶಂಖಾಕೃತಿಯಂತೆ ಕಾಣುತ್ತವೆ. ಇದೇ ಮುದ್ರೆಯನ್ನು ಎಡಗೈನಿಂದ ಸಹ ಮಾಬೇಕು. ಬಲಗೈನಲ್ಲಿ ಆಚರಿಸಿದ ಮುದ್ರೆಗೆ ದಕ್ಷಿಣಶಂಖ ಮುದ್ರಾ ಎಂದು, ಎಡಗೈನಲ್ಲಿ ಆಚರಿಸಿದ ಮುದ್ರೆಗೆ ವಾಮಶಂಖ ಮುದ್ರಾ ಎಂದು ಉಲ್ಲೇಖವಿದೆ. ಈ ಮುದ್ರೆಯು

ನಮ್ಮ ದೇಹದಲ್ಲಿರುವ 72000 ನಾಡಿಗಳನ್ನು ಬಲಪಡಿಸುತ್ತದೆ. ಶ್ವಾಸಕೋಶಗಳಲ್ಲಿ ಹೇರಳವಾಗಿ ರಕ್ತ ಸಂಚಾರವಾಗಿ, ಶ್ವಾಸ ಕೋಶಗಳು ಬಲಿಷ್ಟವಾಗುವವು. ಶ್ವಾಸಕೋಶಕ್ಕೆ ಸಂಬಂಧಿಸಿದಂಥ ಅಸ್ಥಮಾ, ಆಯಾಸಗಳು ದೂರವಾಗಿ ಥೈರಾಯಿಡ್, ಪ್ಯಾರಾಥೈರಾಯಿಡ್ ಗ್ಲಾಂಡಗಳು ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡುವವು. ಅನ್ನನಾಳದಲ್ಲಿ ಜೀರ್ಣಶಕ್ತಿ ಹೆಚ್ಚಾಗುವುದುದರಿಂದ ಒಳ್ಳೆಯ ಹಸಿವುಂಟಾಗುವುದು ಶಂಖ ಮುದ್ರೆಯನ್ನು ಪ್ರಾರ್ಥನೆ ಮಾಡಲು ಮತ್ತು ಧ್ಯಾನ ಮಾಡಲು ಉಪಯೋಗಿಸುತ್ತಾರೆ. ಶ್ಲೋಕವನ್ನು ಹೇಳುತ್ತಾ ಆಚರಿಸಿದರೆ ಬಹಳ ಒಳ್ಳೆಯದು. ಶ್ಲೋಕ ಹೀಗಿದೆ.

ವಿಷ್ಣೋರ್ಮುಖೋತ್ಥಾನಿಲ ಪೂರಿತಸ್ಯ

ಯಸ್ಯ ಧ್ವನಿಃ ದಾನವ ದರ್ಪಹಂತಾ।

ತಂ ಪಾಂಚ ಜನ್ಯಂ ಶಶಿಕೋಟಿ ಶುಭ್ರಂ

ಶಂಖಂ ಸದಾಹಂ ಶರಣ ಪ್ರಪದ್ಯೇ॥

ಸಹಜಶಂಖ ಮುದ್ರೆಯನ್ನು ಎರಡೂ ಹಸ್ತಗಳ ಬೆರಳುಗಳನ್ನು ಒಂದಕ್ಕೊಂದು ಹೊಸೆದುಕೊಂಡು (Inter lock) ಎರಡೂ ಹಸ್ತಗಳನ್ನು ಅಮುಕುತ್ತ ಎರಡೂ ಹೆಬ್ಬೆಟ್ಟುಗಳನ್ನು ಒಂದಕ್ಕೊಂದು ಸೇರಿಸಿ ಮೇಲಕ್ಕೆತ್ತಿ ಮಾಡಬೇಕು. ಈ ಮುದ್ರೆಯಿಂದ ಜೀರ್ಣಶಕ್ತಿ ಹೆಚ್ಚಾಗಿ ಪಚನಾಂಗಗಳು ಸದೃಢಗೊಳ್ಳುತ್ತವೆ. ಶಾರೀರಿಕ ಮತ್ತು ಮಾನಸಿಕ ವೃದ್ಧಿಯಾಗುತ್ತದೆ. ವಿಶೇಷವಾಗಿ ಗಾಯಕರು, ಸಂಗೀತಗಾರರು ತಮ್ಮ ಧ್ವನಿಯನ್ನು ಮಧುರಗೊಳಿಸಲು ಈ ಮುದ್ರೆಯನ್ನು ಆಚರಿಸುತ್ತಾರೆ.

ಸೂರ್ಯ ಮುದ್ರೆಯನ್ನು ಆಚರಿಸುವಾಗ ಪೃಥ್ವಿ ತತ್ವ ಪ್ರತೀಕವಾದ ಅನಾಮಿಕ (ಉಂಗುರದ) ಬೆರಳನ್ನು ಅಗ್ನಿತತ್ವದ ಬುಡಕ್ಕೆ ಹಚ್ಚಿ ಹೆಬ್ಬೆರಳನ್ನು ಅನಾಮಿಕ ಬೆರಳಿನ ಮೇಲೆ ಅದುಮ ಬೇಕು. ಕಿರುಬೆರಳು, ಮಧ್ಯದ ಬೆರಳು ಮತ್ತು ತೋರ ನೇರವಾಗಿರ ಬೇಕು. ಅಂಗೈ ಮೇಲ್ಮುಖವಾಗಿಟ್ಟು ಕೊಂಡು ಆಚರಿಸಬೇಕು. ಹೆಬ್ಬೆರಿಳಿನ ತುದಿಯಲ್ಲಿರುವ ಪಿಟ್ಯುಟರಿ ಮತ್ತು ಪೀನಿಯಲ್ ಗ್ರಂಥಿಗಳ ನರಬಿಂದುಗಳು ಅದುಮಲ್ಪಟ್ಟು ಥೈರಾಯಿಡ್ ಮತ್ತು ಪ್ಯಾರಾಥೈರಾಯಿಡ್ ಗ್ರಂಥಿಗಳ ಮೇಲೆ ಪರಿಣಾಮ ಬೀರುವದು, ಬೊಜ್ಜನ್ನು ನಿರ್ಮಿಸುವ ಪೃಥ್ವಿ ತತ್ವವು ಕಡಿಮೆಯಾಗಿ ಬೊಜ್ಜು ಕರಗುವದು ಹೀಗಾಗಿ ದೇಹದ ತೂಕ ಕಡಿಮೆಯಾಗುವದು ಇದನ್ನು ಅಭ್ಯಾಸಿಸುವಾಗ ಮಂತ್ರವನ್ನು ಜಪಿಸಿದರೆ ಒಳ್ಳೆಯ ಫಲ ಸಿಗುವದು.

ಓಂ ಭಾಸ್ಕರಾಯ ವಿದ್ಮಹೇ।

ದ್ಯುತಿಕರಾಯ ಧೀಮಹಿ।

ತನ್ನೋ ಸೂರ್ಯಃ ಪ್ರಚೋದಯಾತ್॥

ವರುಣ ಮುದ್ರೆಯನ್ನು ಭುದಿ ಮುದ್ರೆ ಎಂದು ಕರೆಯುವರು. ಯಾಕೆಂದರೆ ಕಿರುಬೆರಳಿನ ಬುಡದಲ್ಲಿ ಭುದ ಗ್ರಹ ವಾಸವಾಗಿರುತ್ತಾನೆ. ಅಗ್ನಿತತ್ವ ಪ್ರತೀಕವಾದ ಹೆಬ್ಬೆರಳು ಜಲ ತತ್ವ ಪ್ರತೀಕವಾದ ಕಿರುಬೆರಳುಗಳ ತುದಿಯನ್ನು ಒತ್ತಿ, ಮಿಕ್ಕ ಮೂರು ಬೆರಳುಗಳು ನೇರವಾಗಿರಬೇಕು. ನಮ್ಮ ದೇಹದಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದ್ದಂತೆ ಚರ್ಮಸುಕ್ಕು ಗಟ್ಟುವದು ಸುಂದರತೆ ಕಡಿಮೆಯಾಗುವದು. ಬೇಗನೆ ವಯಸ್ಸಾದಂತೆ ಕಾಣಿಸುವರು. ಇವೆಲ್ಲವುಗಳ ನಿವಾರಣೆಗಾಗಿ ವರುಣ ಮುದ್ರೆಯನ್ನು ಆಚರಿಸಬೇಕು. ಚರ್ಮವ್ಯಾಧಿಗಳಾದ ಕಜ್ಜಿ, ಗಜಕರ್ಣ, ಮೊಡವೆಗಳನ್ನು ಕೂಡಾ ವಾಸಿಮಾಡುವದು ಇದನ್ನು ಕೆಳಗೆ ಹೇಳಿದ ಮಂತ್ರದೊಂದಿಗೆ ಮಾಡಿದರೆ ಬಹಳ ಅನುಕೂಲವಾಗುವದು.

ಓಂ ಸೌಮ್ಯರೂಪಾಯ ವಿದ್ಮಹೇ।

ಚಂದ್ರಪುತ್ರಾಯ ಧೀಮಹೀ।

ತನ್ನೋ ಭುಧಃ ಪ್ರಚೋದಯಾತ್॥

ಅಪಾನ ಮುದ್ರೆಯನ್ನು ಅಗ್ನಿತತ್ವ ಪ್ರತೀಕವಾದ ಹೆಬ್ಬೆರಳು ಪೃಥ್ವೀತತ್ವ ಪ್ರತೀಕವಾದ ಅನಾಮಿಕಾ, ಆಕಾಶ ತತ್ವ ಪ್ರತೀಕವಾದ ಮಧ್ಯದ ಬೆರಳುಗಳ ತುದಿಗಳನ್ನು ಕೂಡಿಸಬೇಕು. ಮಿಕ್ಕ ಕಿರುಬೆರಳು ಮತ್ತು ತೋರ ಬೆರಳುಗಳನ್ನು ನೇರವಾಗಿಡಬೇಕು. ಅಂಗೈಗಳೆರಡೂ ಮೇಲ್ಮುಖವಾಗಿರಬೇಕು. ಈ ಮುದ್ರೆಯನ್ನು ಮಾಡುವದರಿಂದ ಸಕ್ಕರೆ ಕಾಯಿಲೆ ಹತೋಟಿಗೆ ಬರುವದು ಮತ್ತು ಪ್ರಾರಂಭದಲ್ಲಿದ್ದರೆ ಪೂರ್ತಿ ನಿವಾರಣೆಯಾಗಿ ಹೋಗುವ ಲಕ್ಷಣಗಳು ಇರುವವು. ರಕ್ತ ಶದ್ಧಿಗೊಂಡು ರಕ್ತ ಸಂಚಲನೆ ರಕ್ತನಾಳಗಳಲ್ಲಿ ಸರಿಯಾಗಿ ಆಗುವದು.

ಅಪಾನವಾಯು ಮುದ್ರೆಯನ್ನು "ಹೃದಯ ಮುದ್ರೆ" ಮತ್ತು ಮೃತ ಸಂಜೀವಿನಿ ಮುದ್ರೆ ಎಂದು ಕರೆಯುತ್ತಾರೆ. ಹೃದಯಾಘಾತದ ಲಕ್ಷಣಗಳಾದ ಎದೆಯಲ್ಲಿ ನೋವು, ಒತ್ತಡ, ಭಳಕು, ಬೆವರು, ಆಯಾಸ ಇತ್ಯಾದಿಗಳು ಕಂಡರೆ ಈ ಮುದ್ರೆ ಹೃದಯಾಘಾತವಾಗದಂತೆ ನೋಡಿಕೊಳ್ಳುತ್ತದೆ. ಹೆಚ್ಚು ರಕ್ತದೊತ್ತಡ ಇರುವವರು ಈ ಮುದ್ರೆಯನ್ನು ಆಚರಿಸಿದರೆ Blood pressure ಹತೋಟಿಗೆ ಬರುತ್ತದೆ. ವಾಯು ಪ್ರತೀಕವಾದ ತೋರಬೆರಳನ್ನು ಅಗ್ನಿ ಪ್ರತೀಕದ ಹೆಬ್ಬರಳ ಬುಡಕ್ಕೆ ತಗಲಿಸಬೇಕು ಹೆಬ್ಬೆಟ್ಟನ್ನು ತೋರಬೆರಳ ಮೇಲೆ ತೆಗೆದುಕೊಂಡು ಮಧ್ಯ ಬೆರಳು, ಅನಾಮಿಕ ಬೆರಳುಗಳ ತುದಿಗಳನ್ನು ಒತ್ತಬೇಕು. ಕಿರುಬೆರಳನ್ನು ನೇರವಾಗಿ ಮುಂದೆ ಚಾಚಬೇಕು. ಇಪ್ಪತ್ತರಿಂದ ಇಪ್ಪತ್ತೈದು ನಿಮಿಷಗಳ ಕಾಲ ಆಚರಿಸಬೇಕು.

ವ್ಯಾನ ಮುದ್ರೆಯನ್ನು ಕುಬೇರ ಮುದ್ರೆ ಎಂದು ಕರೆಯುತ್ತಾರೆ. ಏಕೆಂದರೆ ಶುಕ್ರ, ಗುರು, ಶನಿ ಶಕ್ತಿಗಳ ಸಮ್ಮಿಲನದಿಂದ ಏನೂ ಬೇಕಾದರೂ ಸಾಧಿಸಲು ಸಾಧ್ಯವಾಗುವದು. ಆದ್ದರಿಂದ ವ್ಯಾನ ಮುದ್ರೆಯನ್ನು ಕುಬೇರ ಮುದ್ರೆ ಎಂದು ಕರೆಯುವರು. ಈ ಮುದ್ರೆಯನ್ನು ಆಚರಿಸುವಾಗ ಅಗ್ನಿ ಪ್ರತೀಕದ ಹೆಬ್ಬೆರಳನ್ನು ವಾಯು ಪ್ರತೀಕದ ತೋರಬೆರಳು ಆಕಾಶ ಪ್ರತೀಕದ ಮಧ್ಯ ಬೆರಳನ್ನು ಸ್ಪರ್ಶಿಸಬೇಕು. ಇದರಿಂದ ರಕ್ತದೊತ್ತಡ ಹೆಚ್ಚಾಗಿದ್ದರೆ ಕಡಿಮೆಯಾಗುತ್ತದೆ. ರಕ್ತದೊತ್ತಡ ಕಡಿಮೆಯಾಗಿದ್ದರೆ ಹೆಚ್ಚಾಗುತ್ತದೆ. ಹೀಗೆ ಒತ್ತಡ ಸಮನಾಗುವದರಿಂದ ಹೃದಯದಿಂದ ರಕ್ತವು ಸರಿಯಾಗಿ ರಕ್ತನಾಳಗಳಲ್ಲಿ ಸಂಚಲನವಾಗುವದು. ನಲವತ್ತೈದರಿಂದ ಐವತ್ತು ನಿಮಿಷಗಳವರೆಗೆ ಮಾಡಬೇಕು.

ಈ ಮೇಲಿನ ಮುದ್ರೆಗಳಾದ ಅಪಾನಮುದ್ರೆ ಅಪಾನವಾಯು ಮುದ್ರೆ ಮತ್ತು ವ್ಯಾನ ಮುದ್ರೆಯನ್ನು ಮಾಡುವಾಗ ಕುಜ ಮಂತ್ರವನ್ನು ಜಪಿಸಬೇಕು.

ಓಂ ಶಕ್ತಿ ಹಸ್ತಾಯ ವಿದ್ಮಹೇ।

ಭೂಮಿ ಪುತ್ರಾಯ ಧೀಮಹೀ।

ತನ್ನೋ ಕುಜಃ ಪ್ರಚೋದಯಾತ್॥

ಚಿನ್ಮುದ್ರೆ ಅಥವಾ ಜ್ಞಾನ ಮುದ್ರೆಯನ್ನು ಮುದ್ರೆಗಳ ರಾಜನೆಂದು ಕರೆಯುತ್ತಾರೆ. ಅಗ್ನಿ ಪ್ರತೀಕ ಹೆಬ್ಬೆರಳು ಮತ್ತು ವಾಯು ಪ್ರತೀಕದ ತೋರಬೆರಳುಗಳ ಸಂಯೋಗದಿಂದ ಮನಸ್ಸು ಮತ್ತು ಶರೀರಗಳು ಒಂದಾಗಿ ಅದ್ಭುತ ಶಕ್ತಿ ಉಂಟಾಗುವದು. ಶುಕ್ರ ಗ್ರಹ ಮತ್ತು ಗುರು ಗ್ರಹಗಳ ಸಮ್ಮಿಲನದಿಂದ ಮೆದುಳು ಪ್ರಭಾವಿತಗೊಳ್ಳುವದು. ಈ ಮುದ್ರೆಯು ಸತ್ ರಜತ್ ಮತ್ತು ತಮಸ್‌ನ ಪ್ರತೀಕವಾದ ನೇರವಾಗಿರುವ ಮೂರು ಬೆರಳುಗಳು ಸೇರಿ ಮನಸ್ಸಿನ ಆವೇಗ, ಅಶಾಂತಿ, ರಕ್ತದೊತ್ತಡವನ್ನು ನಿಯಂತ್ರಿಸುವದು. ಈ

ಮುದ್ರೆಯನ್ನು ಮಾಡುವಾಗ ಶುಕ್ರ ಗಾಯತ್ರೀ ಮಂತ್ರ ಜಪವನ್ನು ಆಚರಿಸಬೇಕು.

ಓಂ ಶುಕ್ರಾಚಾರ್ಯಾಯ ವಿದ್ಮಹೇ।

ಭಕ್ತಿ ಭೂತಾಯ ಧೀಮಹಿ।

ತನ್ನೋ ಶುಕ್ರಃ ಪ್ರಚೋದಯಾತ್॥

ಆಕಾಶ ಮುದ್ರೆಯನ್ನು ಶನೈಶ್ಚರ ಮುದ್ರೆ ಎಂದು ಕರೆಯುತ್ತಾರೆ ಯಾಕೆಂದರೆ ಮಧ್ಯದ ಬೆರಳಿನ ಮೂಲದಲ್ಲಿ ಶನೈಶ್ಚರನ ವಾಸಸ್ಥಾನವಿದೆ. ಭಯದಿಂದ ಬರುವ ಹೃದಯ ರೋಗಗಳು ನಿವಾರಣೆಯಾಗುವವು. ಹೆಬ್ಬೆರಳಿನ ತುದಿ ಮತ್ತು ಮಧ್ಯದ ಬೆರಳಿನ ತುದಿಗಳು ಸ್ಪರ್ಶವಾಗಬೇಕು ಅವಾಗ ಆಕಾಶ ಮುದ್ರೆ ಆಗುವದು. ಈ ಮುದ್ರೆಯನ್ನು ಮಾಡುವಾಗ ಶನಿಗಾಯತ್ರೀ ಜಪವನ್ನು ಮಾಡಬೇಕು.

ಓಂ ಕಾಕಧ್ವಜಾಯ ವಿದ್ಮಹೇ।

ಸೂರ್ಯ ಪುತ್ರಾಯ ಧೀಮಹೀ।

ತನ್ನೋ ಮಂದಃ ಪ್ರಚೋದಯಾತ್॥

ಪ್ರಾಣ ಮುದ್ರೆ ಅತೀ ಮುಖ್ಯವಾದ ಮುದ್ರೆ. ಯೋಗಾಸನಗಳ ನಂತರ ಶವಾಸನ ಎಷ್ಟು ಮುಖ್ಯವೋ ಅಷ್ಟೇ ಎಲ್ಲ ಮುದ್ರೆಗಳ ಆಚರಣೆ ನಂತರ ಪ್ರಾಣ ಮುದ್ರೆ ಆಚರಣೆ ಮುಖ್ಯ. ಈ ಮುದ್ರೆ ಅಗ್ನಿ, ಜಲ, ಪೃಥ್ವಿಗಳ ಸಂಯೋಗದಿಂದಾಗಿದೆ. ಹೆಬ್ಬೆರಳನ್ನು ಕಿರುಬೆರಳು ಮತ್ತು ಉಂಗುರ ಬೆರಳುಗಳ (ಅನಾಮಿಕ) ಮಧ್ಯದಲ್ಲಿ ಸ್ಪರ್ಶಿಸಬೇಕು. ಈ ಮುದ್ರೆಯಿಂದ ರೋಗನಿರೋಧಕ ಶಕ್ತಿ ಬರುವದು. ಕಣ್ಣಿನ ದೋಷ ನಿವಾರಣೆಯಾಗುವದು. ಈ ಮುದ್ರೆಯನ್ನು ಮಾಡುವಾಗ ರಾಹು ಗಾಯತ್ರೀ ಜಪವನ್ನು ಆಚರಿಸಬೇಕು.

ಓಂ ಶಿರೋ ರೂಪಾಯ ವಿದ್ಮಹೇ।

ಅಮೃತೇಶಾಯ ಧೀಮಹಿ।

ತನ್ನೋ ರಾಹುಃ ಪ್ರಚೋದಯಾತ್॥

ದೇಹದಲ್ಲಿ ಉಂಟಾಗುವ ಅಸಮತೋಲನಗಳನ್ನು ನಿಯಂತ್ರಿಸಿ ಸಮತೋಲನಕ್ಕೆ ತಂದಾಗ ವ್ಯಾಧಿಗಳು ನಶಿಸುತ್ತವೆ. ಈ ಪ್ರಾಣ ನಿಯಂತ್ರಣಕ್ಕಿರುವ ಸುಲಭ ಸಾಧನವೇ ಮುದ್ರೆಗಳು. ಪ್ರಾಣ ಸಂಚಾರಗಳನ್ನು ನಿಯಂತ್ರಿಸುವ ಪ್ರಾಣ ಶಕ್ತಿಗಳನ್ನು ಪ್ರಚೋದಿಸುವ, ಅತಿ ಹೆಚ್ಚಾದ ಶಕ್ತಿಗಳನ್ನು ಶಾಂತಗೊಳಿಸುವ ಹಾಗೂ ಪ್ರಾಣ ಶಕ್ತಿಗಳನ್ನು ನಿಶ್ಚಿತ ಸ್ಥಾನಗಳಿಗೆ ಪ್ರವಾಹಿಸುವ ಸೂಕ್ಷ್ಮಶಾಸ್ತ್ರವೇ ಮುದ್ರಾ ವಿಜ್ಞಾನ

"ಬೆನ್ನು ಮೂಳೆ ರೋಗದಲ್ಲಿ ಆಯುರ್ವೇದ ಮತ್ತು ಪಂಚಕರ್ಮ ಚಿಕಿತ್ಸೆಯ ಪ್ರಾಮುಖ್ಯೆ"

ಡಾ॥ ಶಿಲ್ಪಾ ರಾಗಾ, ಎಂ.ಡಿ (ಆಯು)
ಪಂಚಕರ್ಮ ತಜ್ಞೆ ಹಾಗೂ ಉಪನ್ಯಾಸಕಿ, ಪಂಚಕರ್ಮ ವಿಭಾಗ, ಶ್ರೀ ಹಿಂಗುಲಾಂಬಿಕಾ ಆಯುರ್ವೇದಿಕ್ ಮೇಡಿಕಲ್ ಕಾಲೇಜು
ಹಾಗೂ ಸಂಶೋಧನಾ ಕೇಂದ್ರ ಕಲಬುರ್ಗಿ Email- drshilpa.raga1@gmail.com

ಆಯುರ್ವೇದ ಚಿಕಿತ್ಸೆಯು ದೋಷ,ಧಾತು ಮತ್ತು ಮಲ ಸಿದ್ಧಾಂತದ ಆಧಾರದಲ್ಲಿ ನಡೆಯುತ್ತಿರುವುದರಿಂದ ಅದರ ಪರಿಚಯವು ಅವಶ್ಯಕವಾದದು. ಮನುಷ್ಯನ ಹಿತ, ಅಹಿತ, ಸುಖ ಮತ್ತು ದುಃಖಗಳನ್ನು ತಿಳಿದು ಆಯುಷ್ಯನ್ನು ಸುಖವಾಗಿಯೂ ಹೆಚ್ಚಾಗಿ ಇರುವಲ್ಲಿ ಮಾಡುವುದೇ ಆಯುರ್ವೇದದ ಉದ್ದೇಶ "ಕಿತ್ ರೋಗೊಪನಯನೇ" ಎಲ್ಲಿ ಅರ್ಥದಲ್ಲಿ ರೋಗವನ್ನು ಹೋಗಲಾಡಿಸುವ ಕ್ರಮಕ್ಕೆ ಚಿಕಿತ್ಸೆ ಎಲ್ಲಿದು ಹೆಸರು.

ಬೆನ್ನು ಮೂಳೆಯ ತೋಲಿದರೆಗಳು ಇತ್ತೀಚಿಗೆ ಜಗತ್ತಿನ ಎಲ್ಲಾ ದೇಶಗಳ ಆರೋಗ್ಯ ಕ್ಷೇತ್ರದ ಒಂದು ದೊಡ್ಡ ಸಮಸ್ಯೆಯಾಗಿದ್ದು, ಇತ್ತೀಚಿನ ದಿನಮಾನಗುತ್ತೀರುವ ಮನುಷ್ಯನ ಜೀವನ ಶೈಲಿ, ಅವನ ಆಹಾರ ಪದ್ಧತಿ ಇತ್ಯಾದಿ ಇದಕ್ಕೆ ದೊಡ್ಡ ಕಾರಣವಾಗಿದೆ. ಅಹಿತ, ಅಪೌಷ್ಟಿಕ ಆಹಾರ ಸೇವನೆ ಜೊತೆಗೆ ಕದಿಮೆ ದೈಹಿಕ ಶ್ರಮ, ಇವು ದೇಹದಲ್ಲಿ ದೋಷಗಳನ್ನು ವೃದ್ಧಿಸುತ್ತವೆ. ಇದರ ಪರಿಣಾಮವಾಗಿ ಬೆನ್ನು ಮೂಳೆ ಸಮಸ್ಯೆಯು ಕಾಣಿಸಿಕೊಂಡು ಸಾಮಾನ್ಯ ಜನರ ಜೀವನದಲ್ಲಿ ತೊಂದರೆಯನ್ನುಂಟು ಮಾಡುತ್ತವೆ. ಈ ಸಮಸ್ಯೆಗೆ ಆಧುನಿಕ ಚಿಕಿತ್ಸಾ ಪದ್ಧತಿಯಲ್ಲಿ ಪ್ರಭಾವಕಾರಿಯಾಗುವಲಿತೆ ಚಿಕಿತ್ಸೆಯು ಲಭ್ಯವಿಲ್ಲವೆ ಹಾಗೆಯೆ ಶಸ್ತ್ರ ಚಿಕಿತ್ಸೆಯು ಕೂಡ ಅಷ್ಟೊಂದು ಫಲಕಾರಿಯಾಗಿಲ್ಲದ ಕಾರಣ. ಈ ನಿಟ್ಟಿನಲ್ಲಿ ನಾವ್ಮೆ ಪರಿಚಕರ್ಮ ಚಿಕಿತ್ಸೆಗಳು ತುಂಬಾ ಫಲಕಾರಿಯಾಗಿಯು ಯಶಸ್ವಿಯಾಗಿಯೂ ಹೊರಹೊಮ್ಮಿವೆ.

ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ಪರಿಚಕರ್ಮ ಒಂದು ಪ್ರಮುಖ ಅಲಗ ಈ ಚಿಕಿತ್ಸಾ ಪದ್ಧತಿಯಲ್ಲಿ ನಾವು ಶರೀರದಲ್ಲಿ ಹೆಚ್ಚಾಗುವ ದೋಷಗಳನ್ನು ಮೂಲಕ ಹೊರಹಾಕಲು ಸಾಧ್ಯ ಯಾವ ರೀತಿ ಮರದ ಬೇರುಗಳನ್ನು ಕದಿದರೆ ಆ ಮರ ನಶಿಸಿಹೋಗುತ್ತದೆಯೊ ಅದೆ ತರಹ ಪರಿಚಕರ್ಮ ಚಿಕಿತ್ಸೆಯಿಂದ ರೋಗವನ್ನು ಅದರ ಮೂಲಸ್ಥಾನದಲ್ಲಿ ನಾಶಮಾಡಬಹುದು. ಪರಿಚಕರ್ಮ ಇದು ಆಯುರ್ವೇದದ ಒಂದು ಅವಿಭಾಜ್ಯ ಅಲಗವಾಗಿದ್ದು ಅದರಲ್ಲಿ ವಮನ, ವಿರೇಚನ, ಬಸ್ತಿ, ನಸ್ಯ ಮತ್ತು ರಕ್ತಮೋಕ್ಷಣ ಎಲಿದ ಐದು ಮುಖ್ಯ ಕರ್ಮಗಳನ್ನು ಒಳಗೊಂಡಿದೆ. ಕಾರಣ ಇದಕ್ಕೆ ಪರಿಚಕರ್ಮ ಎಲಿದ ಹೆಸರು ಬಂತು. ಈ ಕರ್ಮಗಳಿಂದ ನಾವು ಯಶಸ್ವಿಯಾಗಿ ದೇಹದಿಂದ ದೋಷಗಳನ್ನು ಹೊರ ಹಾಕಿ ಬೆನ್ನು ಮೂಳೆ ಸಮಸ್ಯೆಗಳನ್ನು ಕದಿಮೆಗೊಳಿಸುವುದರ ಜೊತೆಗೆ ಈ

ರೋಗದಿಂದ ಮುಂದೆ ಉಂಟಾಗುವ ಉಪದ್ರವಗಳನ್ನು ಕೂಡ ತಪ್ಪಿಸಬಹುದು.

ಮುಖ್ಯ ಶಬ್ದಗಳು: ಆಯುರ್ವೇದ, ಪಂಚಕರ್ಮ ಹಾಗೂ ಬೆನ್ನು ಮೂಳೆ ರೋಗಗಳು

ಪೀಠಿಕೆ:– ಬೆನ್ನು ಮೂಳೆಯು ಮನುಷ್ಯನ ಶರೀರವನ್ನು ನೇರವಾಗಿ ಹಾಗೂ ಸ್ಥಿರವಾಗಿ ಇರಲು ಸಹಾಯ ಮಾಡುತ್ತದೆ. ಇದರ ಜೋಗೆತೆ ಇದು ಮನುಷ್ಯನ ಶರೀರಕ್ಕೆ ಒಂದು ಆಧಾರಸ್ತಂಭದಂತೆ. ಆದರೆ ಇತ್ತೀಚಿನ ಪರಿಸ್ಥಿತಿಯಲ್ಲಿ ಮನುಷ್ಯನ ಬದಲಾದ ಆಹಾರ ಪದ್ಧತಿ, ಜೀವನ ಶೈಲಿ ಹಾಗೂ ಮಾನಸಿಕ ಒತ್ತಡದಿಂದ ಶರೀರದಲ್ಲಿ ದೋಷಗಳು ವೃದ್ಧಿಸಿ, ಮೂಳೆಗಳ ಸವೆತಕ್ಕೆ ಕಾರಣವಾಗಿದೆ. ಇಂತಹ ಕಾರಣಗಳಿಂದ ಬಹಳಷ್ಟು ಜನರಿಗೆ 40 ರ ವಯಸ್ಸಿನಲ್ಲಿ ಬೆನ್ನುನೋವು ಹಾಗೂ ಬೆನ್ನು ಮೂಳೆಯ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ.

"ಬೆನ್ನು ಮೂಳೆ ನೋವು" ಎನ್ನುವುದು ಬೆನ್ನು ಮೂಳೆಯ ಮಾಂಸಖಂಡಗಳು, ನರಗಳು, ಮೂಳೆಗಳು, ಕೀಲುಗಳು ಅಥವಾ ಬೆನ್ನುಲುಬಿನ ಇನ್ಯಾವುದೇ ರಚನೆಯಿಂದ ಹುಟ್ಟಿ ಬೆನ್ನಿನಲ್ಲಿ ಕಾಣಿಸಿಕೊಳ್ಳುವ ನೋವು. ಆಯುರ್ವೇದ ಈ ಸಮಸ್ಯೆಗಳನ್ನು ತಡಿಗಟ್ಟುವಲ್ಲಿ ಹಾಗೂ ಶಾಶ್ವತವಾಗಿ ದೂರ ಮಾಡುವಲ್ಲಿ ಉತ್ತಮವಾಗಿದೆ. ಹಾಗೆಯೆ ಪಂಚಕರ್ಮ ಒಂದು ಪ್ರಭಾವಕಾರಿಯಾದ ಚಿಕಿತ್ಸೆಯೆಂದು ಇತ್ತೀಚಿನ ಕೆಲ ಸಂಶೋಧನೆಗಳು ನಿಖರಗೋಳಿಸಿದೆ. ಪಂಚಕರ್ಮ ಒಂದು ಶೋಧನ ಚಿಕಿತ್ಸೆಯಾಗಿದ್ದು, ಶರೀರದ ದೋಷಗಳನ್ನು (ವಾತ, ಪಿತ್ತ, ಕಫ್) ಹೋರಹಾಕಿ ರೋಗಕ್ಕೆ ಶಾಶ್ವತ ಪರಿಹಾರ ನೀಡುವಲ್ಲಿ ಯಶಸ್ವಿಯಾಗಿದೆ.

"ತಿಳದು ಕೊಳ್ಳುವ ಅಗತ್ಯತೆ"

ಬೆನ್ನು ಮೂಳೆಯ ಸಮಸ್ಯೆಗಳ ಬಗ್ಗೆ ತಿಳದು ಕೊಳ್ಳುವುದು ಅತಿ ಅವಶ್ಯವಾಗಿದೆ. ಅದು ಏಕೆಂದರೆ ಶೇ 40% ಜನರು ಈ ಸಮಸ್ಯೆಯಿಂದ ಬಳಲುತ್ತಿರಲು, ಪ್ರತಿ ವರ್ಷ ಶೇ.5% ಹೆಚ್ಚುತ್ತಿದೆ. ಯುನೈಟೆಡ್ ಸ್ಟೇಟ್ಸನಲ್ಲಿ ಬೆನ್ನಿನ ಕೆಳಭಾಗ ನೋವಿನ ಆರ್ಥಿಕ ಪರಿಣಾಮ ಏನು ಹೇಳುತ್ತದೆನೆಂದರೆ, 45 ವರ್ಷಕ್ಕಿಂತ ಕೆಳಗಿನವರು ತಮ್ಮ ಚಟುವಟಿಕೆಗಳನ್ನು ಸೀಮಿತಗೊಳಿಸಲು ಮೊದಲ ಕಾರಣ ಬೆನ್ನು ನೋವು, ವೈದ್ಯರ ಬಳಿ ಬರುವ ಎರಡನೇ ಅತಿ ಹೆಚ್ಚು ದೂರು, ಆಸ್ಪತ್ರೆಗೆ ದಾಖಲಾಗಲು ಐದನೆ ಸಾಮಾನ್ಯ ಕಾರಣ, ಮತ್ತು ಶಸ್ತ್ರ ಚಿಕಿತ್ಸೆ ಮಾಡಿಕೊಳ್ಳಲು ಮೂರನೇ ಪ್ರಮುಖ ಕಾರಣವಾಗಿದೆ.

ಮುಖ್ಯ ಕಾರಣಗಳು :– ಬೆನ್ನು ಮೂಳೆ ಸಮಸ್ಯೆಗೆ ಹಲವು ಕಾರಣಗಳಿವೆ, ಆದರೆ ಈ ಕೆಳಕಂಡ ಕಾರಣಗಳು ಪ್ರಮುಖವಾಗಿವೆ–

1) ಅಸಾಮಾನ್ಯ ಕೂಡುವ ಭಂಗಿಗಳು.

2) ಡಿಸ್ಕ ಕಂಪ್ರೇಶನ್.

3) ಮೂಳೆಯ ಸವೆತ (ಡಿಸ್ಕ ಡಿಜನರೇಷನ್).

4) ವಯೋ ಸಹಜ ವಾತ (ಆರ್ತ್ರೈಟಿಸ್).

5) ಅಪಘಾತಗಳಿಂದ ಡಿಸ್ಕ ನಷ್ಟವಾಗುವುದು.

ಪ್ರಕಾರಗಳು :–

1) ಸರ್ವಾಯಿಕಲ್ ಸ್ಪೊಂಡಿಲೋಸಿಸ್.

2) ಲಂಬಾರ್ ಸ್ಪೊಂಡಿಲೋಸಿಸ್.

3) ಸ್ಪೊಂಡಿಲೋಲಾಯಿಸಿಸ್.

4) ಸ್ಪೊಂಡಿಲೋಲಿಸ್ಥೆಸಿಸ್.

5) ಲಂಬಾರ್ ಸ್ಟಿನೊಸಿಸ್.

6) ಸಿಯಾಟಿಕಾ. ಇತ್ಯಾದಿ

ಮುಖ್ಯ ಲಕ್ಷಣಗಳು :– ಲಕ್ಷಣಗಳನ್ನು ಪ್ರಮುಖವಾಗಿ ಎರಡು ವಿಧವಾಗಿ ವಿಂಗಡಿಸಲಾಗುವುದು ಹಾಗೆಯೆ ಚಿಕಿತ್ಸೆಯು ಕೂಡ ಭಿನ್ನವಾಗಿರುತ್ತವೆ, ಮುಖ್ಯವಾದ ಲಕ್ಷಣಗಳು ಈ ಕೆಳಕಂಡಂತಿವೆ.

* ಸ್ವಲ್ಪ ಶ್ರಮಿಸಿದರು ನೋವು ಕಾಣಿಸುವುದು.
* ಕಾಲಿನಲ್ಲಿ ಜೋಮು.
* ಕಾಲಿನಲ್ಲಿ ಉರಿತ.
* ಸ್ಪರ್ಶಜ್ಞಾನ ಕಳೆದುಕೊಳ್ಳುವುದು.
* ಮಲಮೂತ್ರದ ನಿಯಂತ್ರಣದಲ್ಲಿ ಹಿಡಿತವಿಲ್ಲದಿರುವಿಕೆ.
* ಜೀರ್ಣಾಂಶದ ತೊಂದರೆಗಳು. ಇತ್ಯಾದಿ

ಆಯುರ್ವೇದ ಚಿಕಿತ್ಸೆ : – ಇತ್ತಿಚೀನ ದಿನಗಳಲ್ಲಿ ಬೆನ್ನು ನೋವು ಸಮಸ್ಯೆಗೆ ಆಯುರ್ವೇದ ಶಾಸ್ತ್ರವು ಸೂಚಿಸಿದ ಹಲವಾರು ಚಿಕಿತ್ಸಾ ಪದ್ಧತಿಗಳು ಬಹು ಫಲಕಾರಿ ಹಾಗೂ ಯಶಸ್ವಿಯಾಗಿ ಹೊರ ಹೊಮ್ಮಿವೆ. ನಿದಾನ ಪರಿವರ್ಜನೆ, ಶಮನ ಚಿಕಿತ್ಸೆ, ಶೋಧನ ಚಿಕಿತ್ಸೆ ಹಾಗೂ ಉಪಕಲ್ಪನ ಚಿಕಿತ್ಸೆಗಳು ಎಂದು ನಾಲ್ಕು ಪ್ರಕಾರಗಳಿವೆ.

ನಿದಾನ ಪರಿವರ್ಜನ :– ವ್ಯಾಧಿಗೆ ಕಾರಣವಾದ ಆಹಾರ ಹಾಗೂ ವಿಹಾರಗಳನ್ನು ತೊರೆಯುವುದು, ಇದರಿಂದ ದೋಷಗಳು (ವಾತ,ಪಿತ್ತ,ಕಫ್) ವೃದ್ಧಿಸುವುದನ್ನು ತಡೆಯಬಹುದು.

ಶಮನ ಚಿಕಿತ್ಸೆ :– ವ್ಯಾಧಿಗೆ ಕಾರಣವಾದ ದೋಷಗಳನ್ನು ಔಷಧಗಳ ಸೇವನೆಯಿಂದ ಸಮ ಅವಸ್ಥೆಗೆ ತರುವುದು. ಚೂರ್ಣ, ಕಷಾಯ, ಗುಟಿ, ಘೃತ ಹಾಗೂ ತೈಲಗಳನ್ನು ರೋಗಿ ಹಾಗೂ ರೋಗಗಳ ಶಕ್ತಿಗನುಸಾರವಾಗಿ ಕೊಡುವುದು. ಆದರೆ ಕೆಲವೊಮ್ಮೆ ಶಮನ ಚಿಕಿತ್ಸೆಯಿಂದ ರೋಗಗಳು ಮರುಕಳಸುವ ಸಾಧ್ಯತೆ ಇರುತ್ತದೆ, ಅದಕ್ಕೆ ರೋಗದ ತೀವ್ರತೆಗನುಸಾರವಾಗಿ ಶಮನ ಚಿಕಿತ್ಸೆಗೆ ಮೊದಲು ಶೋಧನ ಚಿಕಿತ್ಸೆಗೆ ಆದ್ಯತೆ ನೀಡಬೇಕಾಗುತ್ತದೆ.

ಶೋಧನ ಚಿಕಿತ್ಸೆ :– ಪ್ರಕೋಪಿಸಿದ ದೋಷಗಳನ್ನು (ವಾತ,ಪಿತ್ತ,ಕಫ್) ದೇಹದಿಂದ ಅದರ ಸಮೀಪ ಮಾರ್ಗದಿಂದ ಹೊರಹಾಕುವ ಕ್ರಮ. ಹಾಗೆಯೆ ಈ ಚಿಕಿತ್ಸೆಯಿಂದ ಹೊರ ಹಾಕಿದ ದೋಷಗಳು ಮತ್ತೆ ಮರುಕಳಿಸಲು ಸಾಧ್ಯವಾಗದೆ ರೋಗವನ್ನು ಬೇರು ಸಮೇತ ಹೋರಹಾಕಬಹುದು.

ಪಂಚಕರ್ಮ ಚಿಕಿತ್ಸೆಯ ಲಾಭಗಳು :–

* ಇದು ಶರೀರದಲ್ಲಿ ಅಗ್ನಿ ಬಲ ಹೆಚ್ಚಿಸುತ್ತದೆ ಹಾಗೆಯೆ ರಕ್ತದ ಸಂಚಾರ ಹೆಚ್ಚಿಸಿ ಆಸ್ಥಾನದ ದೋಷಗಳು ವೃದ್ಧಿಯಾಗುವುದನ್ನು ತಡೆಗಟ್ಟುತ್ತದೆ.

* ಸ್ಥಾನಿಕ ಕರ್ಮಗಳು, ಸವೆದುಹೋಗಿರುವ ಮೃದುಲಾಸ್ತಿಗೆ ರಕ್ತ ಸಂಚಾರವನ್ನು ಹೆಚ್ಚಿಸಿ ನೋವಿನ ತೀವ್ರತೆಯನ್ನು ಕಡಿಮೆ ಮಾಡುವುದರಲ್ಲಿ ಬಹಳಷ್ಟು ಉಪಯೋಗಕಾರಿಯಾಗಿದೆ.

* ಶೋಧನ ಕರ್ಮಗಳು ಆಮಾಶಯ, ಪಕ್ವಾಶಯಗಳ ಮೇಲೆ ಪ್ರಭಾವ ಬೀರುವುದರ ಜೋತೆಗೆ ನಾಡಿಕಣದಲ್ಲಿ ಉಂಟಾಗಿದ ದೋಷಗಳನ್ನು ಸರಿಮಾಡಿ ಅದನ್ನು ಬಲಪಡಿಸುತ್ತದೆ.

ನಿರ್ವಹಣೆ :–

* ಬೆನ್ನು ಮೂಳೆ ನೋವಿನ ಚಿಕಿತ್ಸೆಯ ನಿರ್ವಹಣಾ ಧ್ಯೇಯಗಳೆಂದರೆ ಎಷ್ಟಟು ವೇಗವಾಗಿ ಸಾಧ್ಯವಾದರೆ ಅಷ್ಟು ವೇಗವಾಗಿ ನೋವಿನ ತೀವ್ರತೆಯನ್ನು ಕಡಿಮೆ ಮಾಡುವುದು.

* ವ್ಯಕ್ತಿಯ ಕೆಲಸದ ಸಾಮರ್ಥ್ಯವನ್ನು ಮರಳಿಸುವುದು.

* ಚಿಕಿತ್ಸೆಯ ಹಾಗೂ ರೋಗದ ಅಡ್ಡ ಪರಿಣಾಮಗಳನ್ನು ವಿಶ್ಲೇಷಿಸುವುದು.

* ಎಲ್ಲಾ ಚಿಕಿತ್ಸೆಗಳು ಎಲ್ಲಾ ಸಂದರ್ಭದಲ್ಲೂ ಎಲ್ಲರಿಗೂ ಕೆಲಸ ಮಾಡುವುದಿಲ್ಲ, ಅವರವರ ಪ್ರಕೃತಿ ಹಾಗೂ ರೋಗಾನುಸಾರ ಚಿಕಿತ್ಸೆಯ ಬಗ್ಗೆ ಜ್ಞಾನ ಮೂಡಿಸುವುದು ಅವಶ್ಯ.

ತಡೆಗಟ್ಟುವ ವಿಧಾನಗಳು :– ಬೆನ್ನು ಮೂಳೆ ನೋವನ್ನು ತಡೆಗಟ್ಟಲು ಜನರು ತಮ್ಮ ದಿನ ನಿತ್ಯದ ಆಹಾರ ಹಾಗೂ ಚಟುವಟಿಕೆಗಳಲ್ಲಿ ಸ್ವಲ್ಪ ಬದಲಾವಣೆಗಳನ್ನು ತರಬೇಕು. ಪೌಷ್ಟಿಕ ಆಹಾರ ಸೇವನೆ, ಪಂಚಕರ್ಮ ಚಿಕಿತ್ಸೆಗಳು ಹಾಗೂ ಯೋಗ ಧ್ಯಾನ ಮಾಡುವುದರಿಂದ ತಮ್ಮ ಸಮಸ್ಯೆಗಳನ್ನು ದೂರವಿಡಬಹುದು.

ಉಪಸಂಹಾರ :– "ಆಯುರ್ವೇದದಲ್ಲಿ ರೋಗಂ ಆದೌ ಪರೀಕ್ಷೇತ ತತೋ ಅನಂತರಮ್ ಔಷಧಂ"

ರೋಗವನ್ನು ಮೊದಲು ಸಂಪೂರ್ಣವಾಗಿ ಪರೀಕ್ಷಿಸಿ ಅದರ ಕಾರಣಗಳನ್ನು ತಿಳಿದುಕೊಂಡು ನಂತರ ಔಷಧ ಚಿಕಿತ್ಸೆ ಮಾಡುವುದರಿಂದ ಸಮಸ್ಯೆಯನ್ನು ಬುಡಸಮೇತ ತೆಗೆಯಬಹುದು. ಆಯುರ್ವೇದ ಶಾಸ್ತ್ರದಲ್ಲಿ ರೋಗವನ್ನು ಗುಣಪಡಿಸುವುದರ ಜೊತೆಗೆ ಆರೋಗ್ಯವಂತ ವ್ಯಕ್ತಿಯ ಆರೋಗ್ಯವನ್ನು ಕಾಪಾಡುವ ಬಗ್ಗೆಯು ಪ್ರಾಮುಖ್ಯತೆ ಕೊಟ್ಟಿದೆ.

"ಸ್ವಸ್ಥಸ್ಯ ಸ್ವಾಸ್ಥ ರಕ್ಷಣಂ, ಆತುರಸ್ಯ ವಿಕಾರ ಪ್ರಶಮನಮ್"

ಉಲ್ಲೇಖನ:–

1) ಚರಕ ಸಂಹಿತಾ, ಕೆ.ಡಿ. ತ್ರಿಪಾಟಿ, ಕಲ್ಪಸ್ಥಾನ 1ನೇ ಅಧ್ಯಾಯ:ಚಾಖಂಭ ಸಂಸ್ಕೃತ ಭವನ ವಾರಣಾಸಿ.

2) ಪಂಚಕರ್ಮ, ಲೇಖಕ ಕಸ್ತೂರಿ, 1ನೇ ಅಧ್ಯಾಯ:ಚಾಖಂಭ ಸಂಸ್ಕೃತ ಭವನ ವಾರಣಾಸಿ.

3) ಡಬ್ಲೂ.ಡಬ್ಲೂ.ಡಬ್ಲೂ.ಉದಯವಾಣಿ.ಕಾಮ್.

4) ಕನ್ನಡ.ವಿಕಾಸ್ಪಿಡಿಯಾ.ಇನ್.

ಆರೋಗ್ಯ ಪಾಲನೆಯ ಸೂತ್ರಗಳು

ಡಾ॥ ನಾಗರಾಜ ಗಂ, ಮೂಲಿಮನಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಶರೀರ ರಚನಾಶಾಸ್ತ್ರ, ಎನ್.ಕೆ.ಜೆ. ಆಯುರ್ವೇದ ಮೆಡಿಕಲ್ ಕಾಲೇಜು, ಬೀದರ – 585403.

ಭಾರತೀಯ ಸ್ವಾಸ್ಥ್ಯ ಶಾಸ್ತ್ರವಾದ ಆಯುರ್ವೇದದಲ್ಲಿ ಹೆಚ್ಚಿನ ಒತ್ತು ಆರೋಗ್ಯದ ರಕ್ಷಣೆ ಮತ್ತು ರೋಗನಿರೋಧಕ್ಕೆ ಬೇಕಾದ ಸಾಧನೆಯಲ್ಲಿ ದಿನಚರ್ಯೆ ಮತ್ತು ಋತುಚರ್ಯೆಗೆ ಕೊಟ್ಟಿದ್ದಾರೆ. ದಿನಚರ್ಯೆ ಎಂದರೆ ಬೆಳಿಗ್ಗೆ ನಿದ್ದೆಯಿಂದ ಎದ್ದಾಗಿನಿಂದ ಹಿಡಿದು ರಾತ್ರಿ ಮಲಗುವವರೆಗೆ ಅನುಸರಿಸಬೇಕಾದ ಆಚಾರ ಆಹಾರ ವಿಹಾರದ ಬಗ್ಗೆ ತಿಳಿಸಿಕೊಡುವುದು. ಋತುಚರ್ಯೆ ಎಂದರೆ ಬೇರೆ ಬೇರೆ ಋತುಗಳಲ್ಲಿ ನಿಸರ್ಗದಲ್ಲಾಗುವ ಚಲ, ಭೂಮಿ, ಆಕಾಶ ವಸ್ತುಗಳ ಗುಣಗಳಲ್ಲಿ ಉಂಟಾಗುವ ಮಾರ್ಪಾಡುಗಳನ್ನು ತಿಳಿದು ಅವುಗಳಿಂದ ಆರೋಗ್ಯಕ್ಕೆ ಭಾವೆಯಾಗದಂತೆ ಅನುಸರಿಸಬೇಕಾದ ಆಹಾರ ವಿಹಾರ ವಿಷಯದ ತಿಳುವಳಿಕೆಯಾಗಿರುತ್ತದೆ.

ಆಯುರ್ವೇದ ಶಾಸ್ತ್ರದಲ್ಲಿ ರೋಗಗಳ ಚಿಕಿತ್ಸೆಕ್ಕಿಂತ ಮೊದಲು ಅವರು ಹೆಚ್ಚಿನ ತಿಳುವಳಿಕೆಯನ್ನು ಅವುಗಳು ಬರದಂತೆ ಇರಬೇಕಾದರೆ ಏನು ಉಪಾಯ ಮಾಡಬೇಕು ಎನ್ನುವುದಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ.

ಇಂದಿನ ದಿನಮಾನದಲ್ಲಿ ನಾವು ಏನೆಲ್ಲವನ್ನು ಸಾಧಿಸಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೆವೆ ಆದರೆ ಅಷ್ಟೆ ನಾವು ಅಧುನಿಕತೆಗೆ ಮಾರು ಹೋಗಿ ಏನಿಲ್ಲದ ಆರೋಗ್ಯದ ಸಮಸ್ಯೆಗಳನ್ನು ತಂದುಕೊಳ್ಳುತ್ತಿದ್ದೇವೆ ಇದಕ್ಕೆ ಕಾರಣ ಇಷ್ಟೆ ಆಧುನಿಕತೆಯ ಅನುಕರಣೆ. ಇಂತಹ ಪ್ರಗತಿ ಪಥದಲ್ಲಿ ಜೀವಿಸುವವರಾದನಾವು ನೀವೆಲ್ಲರೂ ಕೆಲವು ವಿಷಯಗಳನ್ನು ಅರಿತು ಪಾಲಿಸಿದ್ದೆ ಆದರೆ ಅವರಿಂದ ಖಂಡಾಖಂಡವಾಗುತ್ತದೆ. ಕಾರಣಾಂತರದಿಂದ ಪ್ರಸ್ತುತ ಲೇಖನದಲ್ಲಿ ಉದ್ದೇಶ

ಆರೋಗ್ಯವಾಗಿರಬೇಕಾದರೆ ಪಾಲಿಸಬೇಕಾದ ನಿಯಮಗಳು ಏನು ಎಂಬುದನ್ನು ಸಂಕ್ಷಿಪ್ತವಾಗಿ ತಮ್ಮ ಮುಂದೆ ತೆರೆದಿಡುತ್ತೇನೆ.

ಭಾರತೀಯ ಸಂಸ್ಕೃತಿಯು ರೋಕ ಹಿತದ ಸಾಧನವನ್ನು ವ್ಯಕ್ತಿ ಹಿತದ ಸಾಧನವನ್ನಾಗಿ ಅಂಗೀಕರಿಸಿದೆ ಸ್ವಹಿತವು ಸಮಾಜೋದ್ಧಾರಕ್ಕಾಗಿ, ಸ್ವಾತ್ಮೋದ್ಧಾರಕ್ಕಾಗಿ ಮತ್ತು ರೋಕಹಿತಕ್ಕಾಗಿ. ಹಾಗಾದರೆ ಆರೋಗಿಯಾರು ಮತ್ತು ಅವರಲಕ್ಷಣಗಳೇನು ತಿಳಿಯಬೇಕು.

ಆರೋಗಿ ಯಾರು?

ನಿತ್ಯಂ ಹಿತಾಹಾರವಿಹಾರ ಸೇವಿಃ ಸಮಿಕ್ಷ್ಯಕಾರೀ ವಿಷಯೇಷ್ವಸಕ್ತಃ।
ದಾತಾಸಮಃ ಸತ್ಯಪರಃ ಕ್ಷಮಾವಾನ್ ಆಪ್ತೋಪಸೇವೀ ಚ ಭವತ್ಯರೋಗ್ಯಃ॥

ಆರೋಗ್ಯವಂತನ ಲಕ್ಷಣಗಳೇನು?

'ಸಮದೋಷಃ ಸಮಾಗ್ನಿಶ್ಚ ಸಮಧಾತುಮಲಕ್ರಿಯಃ
ಪ್ರಸನ್ನಾತ್ಮೇಂದ್ರಿಯ ಮನಾಃ ಸ್ವಸ್ಥ ಇತ್ಯಭಿಧೀಯತೆ॥'

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಹಾರದ ವಿಷಯದಲ್ಲಿ ಯೋಚಿಸಬೇಕಾದ ಸಂಗತಿಗಳಾವುವೆಂದರೆ. ಆಹಾರ ಕಾಲ, ಮಾತ್ರಾ, ವಿಧಿ, ದ್ರವ್ಯ, ಸಂಸ್ಕಾರ, ವಿಶ್ರಾಣ, ಪೇಯದ್ರವ್ಯಗಳು ಇತ್ಯಾದಿ.

ವಿಹಾರದ ವಿಷಯದಲ್ಲಿ ಯೋಚಿಸಬೇಕಾದ ಸಂಗತಿಗಳಾವುವೆಂದರೆ.–
ದಿನಚರ್ಯೆ, ಋತುಚರ್ಯೆ, ನಿವಾಸಸ್ಥಾನ, ರೋಗಾಗಮತ್ವಾದಿ, ಜನಪದೋಧ್ವಂಸ ಪ್ರತೀಕಾರ, ಸದ್ವೃತ್ತ.
ಆರೋಗ್ಯವಾಗಿರಬೇಕಾದರೆ ದಿನದಲ್ಲಿ ಪಾಲಿಸಬೇಕಾದ ಆಹಾರ ಮತ್ತು ವಿಹಾರದ ನಿಯಮಗಳ ವಿಷಯದ ಬಗ್ಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದರು ಎಂಬುದು ವ್ಯಕ್ತವಾಗುವುದು. ಈ ಮೇರೆ ಸೂಚಿಸಿದ ಆಹಾರ, ವಿಹಾರಗಳ ಬಗ್ಗೆ ವಿಸ್ತಾರವಾಗಿ ವಿವೇಚಿಸಲಾಗುವುದು.

ಭಾರತೀಯ ಸ್ವಾಸ್ಥ್ಯ ಶಾಸ್ತ್ರವಾದ ಆಯುರ್ವೇದದಲ್ಲಿ ಹೆಚ್ಚಿನ ಒತ್ತು ಆರೋಗ್ಯದ ರಕ್ಷಣೆ ಮತ್ತು ರೋಗನಿರೋಧಕ್ಕೆ ಬೇಕಾದ ಸಾಧನೆಯಲ್ಲಿ ದಿನಚರ್ಯೆ ಮತ್ತು ಋತುಚರ್ಯೆಗೆ ಕೊಟ್ಟಿದ್ದಾರೆ. ದಿನಚರ್ಯೆ ಎಂದರೆ 'ದಿನಯಾಂ ಚರಿತುಂ ಯೋಗ್ಯಂ' ಅಂದರೆ ಬೆಳಗ್ಗೆ ನಿದ್ದೆಯಿಂದ ಎದ್ದಾಗಿನಿಂದ ಹಿಡಿದು ರಾತ್ರಿ ಮಲಗುವವರೆಗೆ ಅನುಸರಿಸಬೇಕಾದ ಆಚಾರ ವಿಚಾರದ ಬಗ್ಗೆ ತಿಳಿಸಿಕೊಡುವುದು. ಋತುಚರ್ಯೆ ಎಂದರೆ 'ಋತುಯಾಂ ಚರಿತುಂ ಯೋಗ್ಯಃ' ಎಂದರೆ ಬೇರೆ ಬೇರೆ ಋತುಗಳಲ್ಲಿ ನಿಸರ್ಗದಲ್ಲಿಯ ಜಲ, ಭೂಮಿ, ಆಹಾರ ವಸ್ತುಗಳ ಗುಣಗಳಲ್ಲಿ ಉಂಟಾಗುವ ಮಾರ್ಪಾಡುಗಳನ್ನು ತಿಳಿದು ಅವುಗಳಿಂದ ಆರೋಗ್ಯಕ್ಕೆ ಬಾಧೆಯಾಗದಂತೆ ಅನುಸರಿಸಬೇಕಾದ ಆಹಾರ ವಿಹಾರ ವಿಷಯದ ತಿಳುವಳಿಕೆಯಾಗಿರುತ್ತದೆ.

ಭಾರತದಲ್ಲಿ ಅನೇಕ ಪ್ರಕಾರದ ಆರೋಗ್ಯ ಶಾಸ್ತ್ರಗಳಿವೆ ಅವುಗಳು ತಮ್ಮದೆ ಆದ ವಿಶೇಷತೆಯನ್ನು ಹೊಂದಿರುತ್ತವೆ ಮತ್ತು ಅದರಲ್ಲಿಯೂ ಕೂಡ ಹಿಂದಿನಿಂದ ಪ್ರಚಲಿತದಲ್ಲಿರುವ ಆಯುಷ್ಯೆ (ಆಯುರ್ವೇದ, ಯುನಾನಿ, ಸಿದ್ಧ, ಯೋಗ) ನಮ್ಮ ದೇಶದಲ್ಲಿಯೆ ಹುಟ್ಟಿ ಪ್ರಚಲಿತದಲ್ಲಿರುತ್ತವೆ ಅದರಲ್ಲಿ ಇಂದು ಹೆಚ್ಚಾನು ಹೆಚ್ಚು ಜನರು ಭಾರತೀಯ ವೈದ್ಯಪದ್ಧತಿಯ ಮೇಲೆ ತುಂಬಾ ವಿಶ್ವಾಸದಿಂದ ನೋಡುತ್ತಿದ್ದಾರೆ. ಆಯುರ್ವೇದ ಶಾಸ್ತ್ರದಲ್ಲಿ ರೋಗಗಳ ಚಿಕಿತ್ಸೆಕ್ಕಿಂತ ಮೊದಲು ಅವರು ಹೆಚ್ಚಿನ ತಿಳುವಳಿಕೆಯನ್ನು ಅವುಗಳು ಬರದಂತೆ ಇರಬೇಕಾದರೆ ಏನು ಉಪಾಯ ಮಾಡಬೇಕು ಎನ್ನುವುದಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ.

ಲೋಕಾಃ ಸಮಸ್ತಾಃ ಸುಖಿನೋಭವಂತು ।

ಲೋಕಹಿತದ ಸಾಧನವನ್ನು ವ್ಯಕ್ತಿ ಹಿತದ ಸಾಧನವನ್ನಾಗಿ ಭಾರತದ ಸಂಸ್ಕೃತಿ ಅಂಗೀಕರಿಸಿದೆ. ಸ್ವ–ಹಿತ ಸಮಾಜೋದ್ಧಾರಕ್ಕಾಗಿ, ಸ್ವಾತ್ಮೋದ್ಧಾರ ಮತ್ತು ಲೋಕಹಿತಕ್ಕಾಗಿ ಅವಶ್ಯಕತೆ ಇರುತ್ತದೆ.

ಆರೋಗ್ಯದ ವ್ಯಾಖ್ಯೆ :

ಸಮದೋಷಃ ಸಮಾಗ್ನಿಶ್ಚ ಸಮಧಾತುಮಲ ಕ್ರೀಯಃ।

ಪ್ರಸನ್ನಾತ್ಮೇಂದ್ರಿಯಮನಾಃ ಸ್ವಸ್ಥ ಇತ್ಯಭಿಧೀಯತೆ ॥

ಸಮದೋಷಾ, ಸಮಾಗ್ನಿ, ಸಮಧಾತು–ಮಲ–ಕ್ರಿಯಃ ಪ್ರಸನ್ನಾತ್ಮೇಂದ್ರಿಯಮನಾಃ ಉಳ್ಳವನಿಗೆ ಆರೋಗ್ಯವಂತ ಎಂದು ಕರೆಯುತ್ತಾರೆ.

ಆರೋಗ್ಯವಾಗಿರಲು ಸಾಧನ ಮಾರ್ಗ ಯಾವದು ?

ನಿತ್ಯಂ ಹಿತಹಾರವಿಹಾರ ಸೇವಿಃ ಸಮೀಕ್ಷ್ಯಕಾರಿ
ವಿಷಯೇಷ್ವಸಕ್ತಃ ।

ದಾತಾ ಸಮಃ ಸತ್ಯ ಪರಃ ಕ್ಷಮಾವಾನ್ ಆಪ್ತೋಪ ಸೇವೀಚ
ಭವತ್ಯ ರೋಗ : ॥

ದಿನಾಲು–ಹಿತಕರವಾದ ಆಹಾರ ವಿಹಾರಗಳ ಸೇವಿಸುವವನು, ಪೂರ್ವಾಪರ ಆಲೋಚಿಸಿ ಕೆಲಸ ಕಾರ್ಯಗಳನ್ನು ಮಾಡುವವನು, ಭೋಗ ವಿಷಯಗಳಲ್ಲಿ ಅನಾಸಕ್ತನು, ದಾನ ಮಾಡುವವನು ದೈನ್ಯರಿಗೆ ಸಹಾಯಕವಾಗಿರುವವನು, ಎಲ್ಲರನ್ನು ಸಮಾನದೃಷ್ಟಿಯಿಂದ ನೋಡುವವನು, ಸತ್ಯ ಶೀಲನು, ಕ್ಷಮಾಗುಣವುಳ್ಳವನು, ಆಪ್ತಮಿತ್ರರ ಹಿತದ ಸೇವೆ ಕಾರ್ಯಗಳಲ್ಲಿ ತೊಡಗುವವನು, ಯಾರು ಪಾಲಿಸುವರೋ ಅವರೆಲ್ಲರೂ ನಿರೋಗಿಯಾಗಿರುತ್ತಾರೆ. (ಆರೋಗ್ಯವಂತರಾಗಿರುತ್ತಾರೆ)

ಆಹಾರದ ವಿಷಯದಲ್ಲಿ ಯೋಚಿಸಬೇಕಾದ ಸಂಗತಿಗಳು ಃ

1) ಆಹಾರ ಕಾಲ 2) ಆಹಾರ ಮಾತ್ರಾ 3) ಆಹಾರ ವಿಧಿ 4) ಆಹಾರ ದ್ರವ್ಯ 5) ಆಹಾರ ಸಂಸ್ಕಾರ 6) ಆಹಾರ ಮಿಶ್ರಣ 7) ಪೇಯದ್ರವ್ಯಗಳು – ಕುಡಿಯುವ ಆಹಾರವಸ್ತುಗಳನ್ನು ಹೇಗೆ ಯಾವಾಗ ಸೇವಿಸಬೇಕು ?

ದಿನಚರ್ಯೆ : ಶರೀರ ಮತ್ತು ಮನಸ್ಸಿನ ಆರೋಗ್ಯವು ತಾನು ಸೇವಿಸುವ ಆಹಾರ ವಿಹಾರಗಳ ಸಾಮಂಜಸ್ಯವನ್ನು ಅವಲಂಬಿಸಿದೆ. ಪ್ರಮುಖವಾಗಿರುವ ದಿನಚರ್ಯೆಗಳ ಬಗ್ಗೆ ಸಂಕ್ಷಿಪ್ತ ವಿವರಣೆ.

ಪ್ರಾತರುತ್ಥಾನ : ಬೆಳಗ್ಗೆ ಬೇಗನೆ ಹಾಸಿಗೆಯಿಂದ ಏಳುವದು 'ಬ್ರಾಹ್ಮೇ' ಮೂಹೂರ್ತ ಉತ್ತಿಷ್ಠೇತ್ ಸ್ವಸ್ಥೋರಕ್ಷಾರ್ಥಮಾಯುಷಃ ಆಯುವಿನ ರಕ್ಷಣೆಗಾಗಿ ಬ್ರಾಹ್ಮೀ ಮೂಹೂರ್ತದಲ್ಲಿ ಏಳಬೇಕು. ಅಂದರೆ ಸೂರ್ಯೋದಯಕ್ಕಿಂತ ಒಂದು ಪ್ರಹರ ಮುಂಚಿನ ಸಮಯ. ಈ ಸಮಯದಲ್ಲಿ ಏಳುವದರಿಂದ ಆನಂದ, ಜ್ಞಾನ, ಆತ್ಮವೈಶಾಲ್ಯಗಳ ಲಾಭವಾಗುವುದು. ಈ ಸಮಯದಲ್ಲಿ ಪ್ರಕೃತಿಯಲ್ಲಿ ಶಾಂತವಾದ ವಾತಾವರಣವಿರುವುದು. ಅದು ಮನಸ್ಸಿಗು ಪ್ರಶಾಂತತ್ವವನ್ನು ಕೊಡುತ್ತದೆ, ಮನವು ಬಲಗೊಳ್ಳುತ್ತದೆ. ವಾತಾವರಣದಲ್ಲಿ ಸೋಮಶಕ್ತಿ ಹೆಚ್ಚಾಗಿರುತ್ತದೆ. ಈ ಕಾಲದಲ್ಲಿ ಓಝೋನ್ ಹೆಚ್ಚು ಕಾರ್ಯಶೀಲವಾಗಿರುವುದು. ಈ ಕಾಲದಲ್ಲಿ ಅಣುಕಿರಣಗಳು ಮತ್ತು ತನುಮನಗಳಲ್ಲಿಯ ರೋಗಾಣುಗಳನ್ನು ನಾಶ ಮಾಡುವ ಶಕ್ತಿ ಇರುವುದು. ಆರೋಗ್ಯವಂತನು ಆಯುಷ್ಯದ ರಕ್ಷಣೆಗಾಗಿ ಬ್ರಾಹ್ಮೀ ಮುಹೋರ್ತದಲ್ಲಿ ಏಳಬೇಕು. ಉದ್ಯನ್ನಾದಿತ್ಯಃ ಕ್ರೀಮೀನ್ ಹಂತಿ । ಎಂದರೆ ಬ್ರಾಹ್ಮೀ ಕಾಲದಲ್ಲಿಯ ಸೂರ್ಯನ ಕಿರಣಗಳು ತನು ಮನಗಳಲ್ಲಿಯ ರೋಗಾಣಗಳನ್ನು ನಾಶಮಾಡುವುದು.

ಮಲಮೂತ್ರ ವಿಸರ್ಜನೆ : ಶರೀರ ಚಿಂತಾ ನಿರ್ವೃತ್ಯ ಕೃತ ಶೌಚವಿಧಿಸ್ತತಃ । ಶರೀರ ಚಿಂತೆಯೆಂದರೆ ಶರೀರದ ಆರೋಗ್ಯಕ್ಕೆ ಬಾಧಕವಾದ ದ್ರವ್ಯಗಳು ಶರೀರದಲ್ಲಿರುವುದರ ಅರಿವು ಅಂದರೆ ಮಲಮೂತ್ರಾದಿಗಳಿಗೆ ಶರೀರ ಚಿಂತೆಗಳೆನ್ನಬಹುದು. ಆದ್ದರಿಂದ ಬೆಳಗ್ಗೆ ಮೊಟ್ಟಮೊದಲು ಬಲಮೂತ್ರ ವಿಸರ್ಜನವು ಅನಿವಾರ್ಯ ಕರ್ತವ್ಯವಾಗಿರುವುದು.

ಶೌಚವಿಧಿ – ಶರೀರವನ್ನು ಶುಚ್ಚಿತ್ವಗೊಳಿಸುವ ವಿಧಿ–ವಿಧಾನಗಳಿಗೆ ಶೌಚವಿಧಿ ಎನ್ನುವರು. ದಂತಧಾವನ – ಹಲ್ಲುಗಳನ್ನು ಶುಚಿಗೊಳಿಸುವುದು. ಜಿಹ್ವಾ ನಿರ್ಲೇಖನ – ನಾಲಗೆಯ ಮೇಲಿನ ಕೊಳೆಯನ್ನು ಕೆರೆದು ತೆಗೆದು ತೊಳೆಯುವುದಕ್ಕೆ ಜಿಹ್ವಾ ನಿರ್ಲೇಖನ ಎನ್ನುವರು. ಗಂಡೂಷ – ಯಾವದೊಂದು ದ್ರವ್ಯವನ್ನು ಬಾಯಿಯಲ್ಲಿ ಸಂಚಾಲಿಸದೆ ಹಿಡಿದು ಕೊಳ್ಳುವುದನ್ನೆ ಗಂಡೂಷ ಮತ್ತು ಮುಕ್ಕಳಿಸುವುದಕ್ಕೆ 'ಕವಲ' ಎಂದು ಹೆಸರು. ಈ ಕ್ರಿಯೆಯಿಂದ ಮುಖದ (ಬಾಯಿಯ) ದುರ್ಗದ ನಿವಾರಣೆಯಾಗುತ್ತದೆ.

ಅಭ್ಯಂಗ – ಎಂದರೆ ಅಭಿ + ಅಂಗ : ಮೈತುಂಬ ಎಣ್ಣೆಯನ್ನು ಹಚ್ಚಿಕೊಳ್ಳುವದು ಎಂದರ್ಥ. ಆರೋಗ್ಯ ರಕ್ಷಣೆಯಲ್ಲಿ ಅಭ್ಯಂಗವು ಮಹತ್ವವಾಗಿರುವುದು. ಅಭ್ಯಂಗ ಮಾಡಿಕೊಳ್ಳುವುದರಿಂದ ಈ ಕೆಳಗಿನ ಆರೋಗ್ಯದ ಲಾಭಗಳಾಗುವವು.

ಅಭ್ಯಂಗ ಮಾಚರೇತ್ ನಿತ್ಯಂ ಸ ಜರಾಶ್ರಮವಾತಹಾ ।

ದೃಷ್ಠಿ ಪ್ರಸಾದ ಪುಷ್ಟ್ಯಾಯು : ಸ್ವಪ್ನ ಸುತ್ವಕ್ತ್ವ ದಾರ್ಢ್ಯಕೃತ್ ॥

ವ್ಯಾಯಾಮ – ಎಂದರೆ ಯಾವ ಕ್ರಿಯೆಯಿಂದ ಶರೀರಕ್ಕೆ ದಣಿವು ಆಗುತ್ತದೆಯೋ ಅವೆಲ್ಲವನ್ನು ವ್ಯಾಯಾಮ ಎನ್ನುವರು. ಈ ವ್ಯಾಯಾಮದಿಂದ ನಮ್ಮ ಶರೀರಕ್ಕೆ ಆಗುವ ಲಾಭಗಳೆಂದರೆ.

ಲಾಘವಂ ಕರ್ಮ ಸಾಮರ್ಥ್ಯ ದೀಪ್ತಾಗ್ನಿರ್ಮೇದಸಃ ಕ್ಷಯಮ್ ।

ವಿಭಕ್ತ ಘನಗಾತ್ರತ್ವಂ ವ್ಯಾಯಾಮಾದುಪಜಾಯತೇ ॥

ವ್ಯಾಯಾಮದಿಂದ ತನು–ಮನಗಳಲ್ಲಿ ಹಗುರತೆಯು, ದಣಿವಿಲ್ಲದೆ ದುಡಿಯುವ ಸಾಮರ್ಥ್ಯವು, ಪಾಚಕಾಗ್ನಿ ಮತ್ತು ಧಾತ್ವಾಗ್ನಿಗಳ ಉದ್ದೀಪನವು ನಿತಿಮೀರಿರುವ ಕೊಬ್ಬಿನ ನಾಶವು ಉಂಟಾಗಿ ಸ್ನಾಯುಗಳನ್ನು ಪ್ರಮಾಣ ಬದ್ಧವಾಗಿ ಬೆಳೆದು ಶರೀರಕ್ಕೆ ಅಚ್ಚು ಕಟ್ಟಾದ ರೂಪಬರುತ್ತದೆ.

ಉದ್ವರ್ತನ (ಮೈತಿಕ್ಕಿಕೊಳ್ಳುವುದು)

ಉದ್ವರ್ತನಂ ಕಫಹರಂ ಮೇದಸಃ ಪ್ರವಿಲಾಯನಮ್ ।

ಸ್ಥಿರೀಕರಣಮಂಗಾನಾಂ ತ್ವಕ್ ಪ್ರಸಾದಕರಂ ಪರಮ್ ॥

ಉದ್ವರ್ತನ ಕ್ರಿಯೆಯಿಂದ ಶರೀರದಲ್ಲೆಲ್ಲ ಸಂಚಿತವಾದ ಕಫದೋಶವು ಪರಿಹಾರವಾಗುವುದು, ಶರೀರದಲ್ಲಿಯ ಮಿತಿಮೀರಿದ ಕೊಬ್ಬು ಕರಗುವುದು. ಅಂಗಾಂಗಳು ದೃಢತೆನ್ನು ಹೊಂದುವವು, ಚರ್ಮಕ್ಕೆ ಕಾಂತಿಯು ಬರುವುದು.

ಸ್ನಾನಃ

ದೀಪನಂ ವೃಷ್ಯಮಾಯುಷ್ಯಂ ಸ್ನಾನ ಮೂರ್ಜಾಬಲ ಪ್ರದಂ ।

ಕಂಡೂಮಲ ಶ್ರಮಸ್ವೇದ ತಂದ್ರಾತೃಟ್ ದಾಹ ಪಾಪಜೀತ್ ॥

ಸ್ನಾನವು ಅಗ್ನಿ ದೀಪಕವಾಗಿಯು, ವೀರ್ಯವರ್ಧಕವಾಗಿಯು ಆಯುವರ್ಧಕವಾಗಿಯು ಮತ್ತು ನೆವೆ, ಮಲ, ಆಯಾಸ, ಬೆವರು, ತೂಕಡಿಕೆ, ಬಾಯಾರಿಕೆ, ಕೆರಳಿಕೆಗಳ ಮತ್ತು ತನುಮನಗಳ ವಿಷಗಳ ಪರಿಹಾರವಾಗಿಯು ಕೆಲಸ ಮಾಡುತ್ತದೆ.

ಆಹಾರ : 'ಆರೋಗ್ಯಂ ಭೋಜನಾಧೀನಂ' – ನಮ್ಮ ಆರೋಗ್ಯವು ಆಹಾರ ಸೇವನೆಯ ಮೇಲೆ ಅವಲಂಬಿತವಾಗಿರುತ್ತದೆ. ಊಟ ಬಲ್ಲವನಿಗೆ ರೋಗವಿಲ್ಲ ಎನ್ನುವಂತೆ ಯಾರು ಆಹಾರ ಕ್ರಮದ ಬಗ್ಗೆ ಜ್ಞಾನವಿದ್ದು ಅದರಂತೆ ಪಾಲಿಸುವವರಿಗೆ ರೋಗ ಬರುವುದಿಲ್ಲ. ಮಾತುಬಲ್ಲವರಿಗೆ ಯಾತರಿಂದ ಜಗಳ ಬರುತ್ತದೆ, 'ಪಥ್ಯೇ ಸತಿ ಕಿಂ ಔಷಧಂ' – ಪಥ್ಯದಿಂದಿರುವವರಿಗೆ ಔಷಧಗಳ ಅವಶ್ಯಕತೆಯಾರು ಏನು.

'ಆಹಾರಶುದ್ಧೌ ಸತ್ವಶುದ್ಧಿಃ' ಪರಿಶುದ್ಧವಾದ ಆಹಾರ ಸೇವಿಸುವವರ ಮನಸ್ಸು ಕೂಡ ಒಳ್ಳೆಯ ವಿಚಾರವಾದಿಗಳಾಗಿರುತ್ತಾರೆ.

ಆಹಾರ ವಿಧಿ – ಆರೋಗ್ಯದ ದೃಷ್ಟಿಯಿಂದ ಆಹಾರ ಹೇಗೆ ಸೇವಿಸಬೇಕು. ಈ ಕೆಳಗಿನ ನಿಯಮಗಳನ್ನು ಪಾಲಿಸಬೇಕು.

1. ವೃದ್ಧಿಃ ಸಮಾನೈಃ ಸರ್ವೇಷ್ಣಾಂ – ಮನುಷ್ಯರ ಕೆಲಸ ವಿಶೇಷಕ್ಕನುಸರಿಸಿ ಆಹಾರ ಪೂರೈಸಬೇಕು. ಕೆಲಸಗಳಗನುಗುಣವಾಗಿ ಆಹಾರ ಕ್ರಮವನ್ನು ಪಾಲಿಸಬೇಕು.

2. ವಿವಿಕ್ತಸ್ಥಃ – ಏಕಾಂತದಲ್ಲಿ ಸೇವಿಸಬೇಕು.

3. ತನ್ಮನಾಃ – ಮನಸ್ಸು ಊಟದ ಕಡೆಗೆ ಏಕಾಗ್ರವಾಗಿರಬೇಕು 'ಉಪತಪ್ತೇನ ಭುಕ್ತಂತು ಕಾಮಕ್ರೋಧಕ್ಷುಧಾದಿಭಃ ನಜೀರ್ಯತಿ' – ಎಂದರೆ ಕಾಮ ಕ್ರೋಧಾದಿಉದ್ರೇಕಕರ ಮನೋಭಾವನೆಗಳ ಕಡೆಗೆ ಲಕ್ಷ ಕೊಟ್ಟರೆ ಪಾಚಕಾಗ್ನಿ ದುರ್ಬಲವಾಗಿ ಅಜೀರ್ಣವಾಗುವುದು. ದುರ್ವಿಚಾರಗಳಿಂದ ಆಹಾರ ಗುಣವು ವಿಷಮಯವಾಗುವುದು.

4. ನಾತಿದ್ರುತವಿಲಂಬಿತಂ – ತೀರ ಅವಸರದಿಂದಾಗಲಿ, ಸಾವಕಾಶವಾಗಿಯಾಗಲಿ ಊಟವನ್ನು ಮಾಡಬಾರದು.

5. ಧೌತಪಾದಕರಾನನಃ – ಊಟಕ್ಕೆ ಮುಂಚಿತವಾಗಿ ಕೈಕಾಲು, ಮುಖವನ್ನು ಚೆನ್ನಾಗಿ ಶುಚಿಗೊಳಿಸಿಕೊಂಡಿರಬೇಕು.

6. ಅನಿಂದನ್ ಅಬ್ರುವನ್, ದ್ರವಂ – ನಿಂದಾಭರಿತವಾದ ಅಥವಾ ಮನಸ್ಸಿಗೆ ಹೇಸಿಗೆಬರುವಂತಹ ಮಾತುಗಳನ್ನಾಡದೆ, ತಕ್ಕಮಟ್ಟಿಗೆ ದ್ರವಸ್ವರೂಪದ ಆಹಾರವನ್ನು ಸೇವಿಸಬೇಕು.

7. ಇಷ್ಟಮಿಷ್ಟೈಃ ಸಹಾಶ್ನೀಯಾತ್ ಶುಚಿ ಭಕ್ತಜನಾಹೃತಂ – ತನ್ನ ಮನಸ್ಸಿಗೆ ಇಷ್ಟಾವಾದವರೊಂದಿಗೆ ಕುಳಿತು, ಇಷ್ಟಾವಾದವರಿಂದ ಬಡಿಸಲ್ಪಟ್ಟ (ನೀಡಲ್ಪಟ್ಟ) ಅನ್ನವನ್ನು ಸೇವಿಸಬೇಕು. 'ಭೋಜ್ಜೇಷು ಮಾತಾ' ಹೆಂಡತಿಯಾದವಳು ತಾಯಿಯಂತೆ ಪ್ರೀತಿಯಿಂದ ತನ್ನಗಂಡನಿಗೆ ಉಣಿಬಡಿಸಬೇಕು. 'ಆಹಾರ ಶುದ್ಧೌ ಸತ್ವ ಶುದ್ಧಿಃ' ಆಹಾರವು ಶುದ್ಧವಾಗಿದ್ದರೆ ಅದು ಮನಸ್ಸನ್ನು ಶುದ್ಧಗೊಳಿಸುವದು.

8. ಸ್ಥಿರಂ ಸುಖಮಾಸನಂ – ಸುಖಕರವಾದ, ನೀಟಾದ ಆಸನದಲ್ಲಿ ಕುಳಿತುಕೊಂಡು ಊಟಮಾಡಬೇಕು. ಸಮಾನ ಅಪಾನ ವಾತಗಳ ಸಂಚಾಲನಕ್ಕೆ ಅನುಕೂಲವಾಗಿ ಪಚನವು ಸುಗಮವಾಗುವುದು.

9. ಊಟ ಮಾಡುವ ಸ್ಥಳ ಸಾಕಷ್ಟು ಬೆಳಕಾಗಿಯು, ನೈರ್ಮಲ್ಯವಾಗಿಯು ಇರಬೇಕು.

10. ತರ್ಪಯಿತ್ವಾ ಪಿತೄನ್ ದೇವಾನ್ ಅತಿಥೀನ್ ಬಾಲಕಾನ್ ಗುರೂನ್ – ಮಾತಾ ಪಿತೃಗಳನ್ನು ತೃಪ್ತಿಪಡಿಸಿ ದೇವತೆಗಳಿಗೆ ನೈವೇದ್ಯ ಮಾಡಿ ಗುರುಹಿರಿಯರು, ಚಿಕ್ಕವರು ಆಹಾರ ಸಂತೃಪ್ತವಾದುದನ್ನು ತಿಳಿದುಕೊಂಡು ತಾನು ಊಟ ಮಾಡಬೇಕು.

11. ಸಮೀಕ್ಷ್ಯ ಸಮ್ಯಗಾತ್ಮಾನಂ – ತನಗೆ ಈಗ ಆಹಾರದ ಅವಶ್ಯಕತೆವಿದೇಯೆ? ಚೆನ್ನಾಗಿ ಹಸಿವೆ ಆಗಿದೆಯೇ ? ಎಂದು ತಿಳಿದುಕೊಂಡು ಊಟ ಮಾಡಬೇಕು. ಸಮಯವಾಗಿದೆ ಎಂದು ಅಡುಗೆ ಮನೆಗೆ ಹೋಗದೆ ಹಸಿವೆಯಾಗಿದೆ ಎಂದು ಹೋಗಿ. ಹಿತಭುಕ್, ಮಿತಭುಕ್, ಕ್ಷುತಭುಕ್, ಋತುಭುಕ್ ನತು ರೋಗವಾನ್ ಭವತಿ ಎಂದರೆ ಹಿತವಾದುದನ್ನು ಮಿತವಾಗಿ ಹಸಿವಾದಾಗ, ಧರ್ಮದಿಂದ ಸಂಪಾದಿಸಿದ ಆಹಾರವನ್ನು ಯಾರು ಸೇವಿಸುವರೋ ಅವರು ಎಂದೂ ರೋಗಿಗಳಾಗುವುದಿಲ್ಲ.

ಆಹಾರ ಕಾಲ :

ಯಾಮ ಮಧ್ಯೇನ ಭೋಕ್ತವ್ಯಂ ಯಾಮಯುಗ್ಮಂ ನಲಂಘಯೇತ್ – ಒಮ್ಮೆ ಆಹಾರವನ್ನು ಸೇವಿಸಿದ ನಂತರ ಒಂದು ಯಾಮಕ್ಕಿಂತ ಮುಂಚೆ ಮತ್ತೆ ಆಹಾರವನ್ನು ಸೇವಿಸಬಾರದು ಎರಡು ಯಾಮಕ್ಕಿಂತ ಹೆಚ್ಚಾಗಿ ಉಪವಾಸ ಇರಬಾರದು ಏಕೆಂದರೆ ಯಾಮಮಧ್ಯೇ ರಸೋತ್ಪತ್ತಿಃ ಯಾಮಯುಗ್ಮಾತ್ ಬಲಕ್ಷಯಃ ಅಂದರೆ ಒಂದು ಯಾಮದವರೆಗೆ ಆಹಾರರಸದ ಉತ್ಪತ್ತಿಯಾಗುತ್ತಿರುತ್ತೆ. ಎರಡು ಯಾಮಕ್ಕಿಂತ ಹೆಚ್ಚಿಗೆ ಉಪವಾಸವಿದ್ದರೆ ಧಾತುಕ್ಷಯವಾಗಿ ಅಶಕ್ತತೆ ಉಂಟಾಗುತ್ತದೆ. ಇದು ರಾತ್ರಿ ಸಮಯದಲ್ಲಿ ಅನ್ವಯಸುವದಿಲ್ಲ.

ಆಹಾರ ಪ್ರಮಾಣ :

'ಮಾತ್ರಾ ಪ್ರಮಾಣಂ ನಿರ್ದಿಷ್ಟಂ ಸುಖಂ ಯಾವತ್ ವಿಜೀರ್ಯತಿ' – ಎಂದರೆ ಒಂದು ಸಲ ಸೇವಿಸದ ಆಹಾರವು ಪುನಃ ಮುಂದಿನ ಊಟದ ಸಮಯಕ್ಕೆ ಮುಂಚಿತವಾಗಿ ಪಚನವಾಗುವಷ್ಟು ಸೇವಿಸುವದೇ ಆಹಾರ ಪ್ರಮಾಣ.

ಅನ್ನೇನ ಕುಕ್ಷೇರ್ದ್ವಾವಂಶೌ ಪಾನೇನೈಕಂ ಪ್ರಪೂರಯೇತ್ ।

ಆಶ್ರಯಂ ಹಿ ಪವನಾದೀನಾಂ ಚತುರ್ಥಮವಶೇಷಯೇತ್ ॥

ಎಂದರೆ ಆಮಾಷಯದ ನಾಲ್ಕು ಭಾಗಗಳನ್ನು ಮಾಡಿ ಅವುಗಳಲ್ಲಿ ಎರಡು ಭಾಗ ಘನ, ಆಹಾರಗಳನ್ನು ಸೇವಿಸಬೇಕು. ಒಂದು ಭಾಗ ದ್ರವಗಗಳನ್ನು ಸೇವಿಸಬೇಕು ಮತ್ತು ಉಳಿದ ಇನ್ನೊಂದು ಭಾಗವನ್ನು ಆಹಾರ ಪಚನ ಕ್ರಿಯೆಗೆ ಸಹಾಯವಾಗುವಂತೆ ವಾತಾದಿಗಳು ಕ್ರಿಯೆಶೀಲವಾಗಲು ಅನುಕುಲವಾಗುವಂತೆ ಖಾಲಿ ಬಿಡಬೇಕು. ಅಂದರೆ ಘನ, ದ್ರವ ಆಹಾರ ಸೇರಿಸಿ ಮೂರು ಭಾಗ ಹೊಟ್ಟೆಯನ್ನು ತುಂಬುವಷ್ಟು ಆಹಾರವನ್ನು ಸೇವಿಸಬೇಕು.

ಈ ಎಲ್ಲ ವಿಷಯದ ಬಗ್ಗೆ ಆಯುರ್ವೇದದಲ್ಲಿ ಎಷ್ಟು ಆಳವಾದ, ವಿಶಾಲವಾದ ದೃಷ್ಟಿ ಇತ್ತು ಎಂಬುದು ವ್ಯಕ್ತವಾಗುವುದು. ಈ ಮೇಲೆ ಸೂಚಿಸಿದ ಆಹಾರ, ವಿಹಾರಗಳ ಬಗ್ಗೆ ವಿಸ್ತಾರವಾಗಿ ವಿವೇಚಿಸಿ ಪಾಲಿಸಿಕೊಂಡು ಬರುತ್ತಿದ್ದರುವೆನ್ನುವುದು ವ್ಯಕ್ತವಾಗುವುದು. ಸರ್ವೇಜನಃ ಸುಖನೋಭವಂತು, ಸರ್ವೇ ಸಂತು ನಿರಾಮಯಃ. ನಾವು ನೀವೆಲ್ಲರೂ ನಮ್ಮ ಪ್ರಾಚೀನ ವೈದ್ಯಕೀಯದಲ್ಲಿ ಪರಿಚಯಿಸಿದ ಆರೋಗ್ಯ ಸೂತ್ರಗಳ ಬಗ್ಗೆ ಜನರಲ್ಲಿ ತಿಳುವಳಿಕೆಯನ್ನು ಮೂಡಿಸಿ ಅನುಸರಿಸಿ ನಿರೋಗಿಯಾಗಿ ಬಾಳಲು ಸಹಕರಿಸೋಣ.

ದೈನಂದಿನ ಜೀವನದಲ್ಲಿ ಗೋಮೂತ್ರದ ಪ್ರಾಮುಖ್ಯತೆ

[1] ವಿದ್ಯಾಶಂಕರ ಎಂ.ಹೆಚ್ , [2]ಪ್ರಿಯಾಂಕ ಎಸ್.ಆರ್ [3]ಮೇಘನ ಟಿ.ಯು [4]ವರ್ಷ ಎಂ ಮದ್ದಿನ್
[1] ಸಹಾಯಕ ಪ್ರಾದ್ಯಾಪಕರು, [2] ತೃತಿಯ ವರ್ಷ ಬಿ.ಎಸ್ಸಿ. ವಿದ್ಯಾರ್ಥಿನಿಯರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.

ಗೋವು ನಮ್ಮ ಅತ್ಯಂತ ಪೂಜ್ಯನೀಯವಾದ ಪ್ರಾಣಿ. ಆದರೆ ಇಂದು ಅದರ ಸಲುವಾಗಿಯೇ ಅನೇಕ ಧರ್ಮಸೇನೆಗಳು ಕೆಟ್ಟ ಪರಿಪ್ರಾಣಾಲಿಯಕ್ಕೆ ನಾಂದಿ ಹಾಡುವಂತಹ ವಿಚಾರಗಳು ವಿಮರ್ಶೆಗಳು ನಡೆಯುತ್ತಿವೆ. ಗೋವಿನಿಂದ ಜನ್ಯವಾದ ಎಲ್ಲಾ ವಸ್ತುಗಳು ಮಾನವನ ಔಷಧೋಪಯೋಗಕ್ಕಾಗಿಯೇ ಇವೆ. ಅವರಲ್ಲಿ ಪ್ರಮುಖವಾಗಿ ಹಾಲು, ಗೋಮೂತ್ರ ಮತ್ತು ಗೋಮಯ(ಸಗಣಿ). ಈ ವಸ್ತುಗಳು ನೇರವಾಗಿ ಹಾಗೂ ಪರೋಕ್ಷವಾಗಿ ಮಾನವ ಜನಾಂಗಕ್ಕೆ ತಲುಪುತ್ತಿವೆ. ಇಂದು ಗೋಮೂತ್ರದ ವಿಚಾರಗಳ ಬಗ್ಗೆ ಅನೇಕ ಚರ್ಚೆಗಳು ವಿಚಾರ ಪರಿಕಿರಣಗಳು ಹಾಗೂ ಪರಿಶೋಧನೆಗಳು ನಡೆಯುತ್ತಿವೆ ಕಾರಣ ಗೋಮೂತ್ರವಲ್ಲಿರುವ ಔಷಧೀಯ ಗುಣಗಳು. ಇತ್ತೀಚಿನ ಪರಿಶೋಧನೆಯಲ್ಲಿ ಖಂಡಿತವಾದ ಅಂಶ ಇರುವುದನ್ನು ಗುರುತಿಸಲಾಗಿದ್ದು, ಇದರ ಬಗ್ಗೆ ಹೆಚ್ಚಿನ ಪರಿಶೋಧನೆ ನಡೆಯುತ್ತಿದೆ. ಈ ಪ್ರಸ್ತುತ ಪ್ರಬಂಧದಲ್ಲಿ ನಾವು ಗೋಮೂತ್ರದ ವಿಶೇಷತೆಯನ್ನು ಕುರಿತು ಮಾಹಿತಿಯನ್ನು ನೀಡಲಿದ್ದೇವೆ.

ಗವ್ಯಂ ಪವಿತ್ರಂ ಕರಸ್ಯಂ ರಾಸಾಯನಂ ಕಾ ಪಥ್ಯಾ ಕಾ ಹದ್ಯಮ್ ಬಲಂ ಬುದ್ಧಿ ಸತ್ಯ ಅಯುತ್ಯ ಪ್ರಥಮ್ ರಕ್ತ ವಿಕಾರ್ ತ್ರೀದೋಷ್ ಹರಿದ್ರೋ ವಿಷಾಪಮ್ ಸತ್ಯಂ

ಈ ಶ್ಲೋಕದ ಮೂಲಕ ಗೋಮುತ್ರದ ಪ್ರಾಮುಖ್ಯತೆಯ ಬಗ್ಗೆ ವೇದಗಳಲ್ಲಿ ತಿಳಿಸಲಾಗಿದೆ. ಇದರ ಅರ್ಥ ಹೀಗಿದೆ: ಗೋಮೂತ್ರ ಪಂಚಗವ್ಯ ಒಂದು ಉತ್ತಮ ಸಿದ್ಧರಸ, ಉತ್ತಮ ಆಹಾರ ಹೃದಯಕ್ಕೆ ಉತ್ತಮವಾದ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯ ಹೆಚ್ಚಿಸುವ, ಆಯುಷ್ಯ ಹೆಚ್ಚಿಸುವ, ಪ್ತ್ತವನ್ನು ಸಮತೋಅಲನ್ದಲ್ಲಿರುವ ಶ್ವಾಸ ಮತ್ತು ಮೂಗಿನೊಣಗಳ ಲೋಳೆಗಳನ್ನು ಉತ್ತಮವಾಗಿಸುವ, ಹೃದಯ ತೊಂದರೆಗಳನ್ನು ನಿವಾರಿಸುವ ಮತ್ತು ವಿಷದ ಪರಿಣಾಮವನ್ನು ಕಡಿಮೆಗೊಳಿಸುವ ಶಕ್ತಿಯುಳ್ಳದ್ದಾಗಿದೆ.

ಪುರಣಾಗಳಲ್ಲಿ ತಿಳಿಸಿರುವ ಪ್ರಕಾರ ಹಿಂದಿನ ಜನ್ಮದ ಫಲವನ್ನು ಇಂದಿನ ಜನ್ಮದಲ್ಲಿ ಅನುಭವಿಸಬೇಕಾಗುತ್ತದೆ. ಗೋಮುತ್ರದಲ್ಲಿ ಗಂಗೆ ನೆಲೆಸಿರುತ್ತಾಳೆ ಎಂದು ಪುರಾಣಗಳಲ್ಲಿ ತಿಳಿಸಲಾಗಿದೆ. ಗಂಗೆ ಪಾಪನಾಶಿನಿಯಾಗಿದ್ದಾಳೆ. ಗೋಮೂತ್ರ ಸೇವನೆಯ ಮೂಲಕ ಗಂಗೆಯ ಹಿಂದಿನ ಜನ್ಮದ ಮೂಲಕ ಪಾಪ ಫಲ ಮತ್ತು ವಿವಿಧ ರೋಗಗಳಿಂದ ರಕ್ಷಿಸುತ್ತಾಳೆಂದು ಪುರಾಣಗಳಲ್ಲಿ ತಿಳಿಸಲಾಗಿದೆ.

ಗಂಜಲ:– ಒಂದು ರೀತಿ ನೀತಿಯ ಆಧಾರದ ಮೇಲೆ ಗಂಜಲದ ಸತ್ವ ಮತ್ತು ಆದರ ವಿಸರ್ಜನೆಯ ಪ್ರಮಾಣ ಅವಲಂಬಿತವಾಗುತ್ತವೆ. ಏನೆಲ್ಲಾ ಅಂದರೂ ಪ್ರಾಯಕ್ಕೆ ಬಂದಿರುವಂತಹ ಒಂದು ಹೆಸರು ಅಥವಾ ಎಮ್ಮೆ ದಿನವೊಂದಕ್ಕೆ 10 ಲೀಟರ್‌ನಷ್ಟು ಗಂಜಲವನ್ನು ಕೊಡುತ್ತದೆ. ಚಳಗಾಲ, ಮಳೆಗಾಲದಲ್ಲಿ ಈ ಜಲದ ಪ್ರಮಾಣ ಹೆಚ್ಚಾಗಿರುತ್ತದೆ. ಕುಡಿಯುವ ನೀರು, ತಿನ್ನುವಂತಹ ಹುಲ್ಲು, ನಾವು ಕೊಡುವ ಹಿಂಡಿ, ಬೂಸಾಗಳನ್ನು ಅವಲಂಬಿಸಿ ಗಂಜಲದ ಪ್ರಮಾಣದ ಸತ್ವಾಂಶ ಏರುಪೇರಾಗಬಹುದು. ಪ್ರಾಣಿ ಜನ್ಮವಾದ ಈ ಪದಾರ್ಥವನ್ನು ಕೃಷಿಕರು ಬೆಳೆ ಉತ್ಪಾದನೆಯಲ್ಲಿ ಪರಿಣಾಮಕಾರಿಯಾಗಿ ಮತ್ತು ಲಾಭದಾಯಕವಾಗಿ ಬಳಸಿಕೊಳ್ಳಬಹುದು.

ಗಂಜಲ ಬೆಳೆಗಳಿಗೆ ಬೇಕಾದಂತಹ ಸತ್ವಾಂಶಗಳು ಇರುತ್ತವೆ. ಆದರೆ ಕೆಲವರು ಗಂಜಲವನ್ನು ಬೆಳೆಗಳಿಗೆ ನೇರವಾಗಿ ಸಿಂಪಡಿಸಿದಾಗ ಎಲೆಗಳು ಸುಡುವಂತಹ ಸಾಧ್ಯತೆ ಇರುತ್ತದೆ. ಈ ಕಾರಣಕ್ಕಾಗಿ ಅದನ್ನು ನೀರಿನ ಜೊತೆ ಬೆರೆಸಿಕೊಂಡು ತೆಳು ಮಾಡಿಕೊಂಡು ಈ ಗಂಜಲವನ್ನು ಬೆಳೆಗಳಿಗೆ ಬೆಳಗಿನ ಹೊತ್ತು ಸಿಂಪರಣೆ ಮಾಡಬೇಕಾಗುತ್ತದೆ. ಗಂಜಲದಲ್ಲಿ ಪೋಷಕಾಂಶಗಳು ಮತ್ತು ಔಷಧೀಯ ಗುಣಗಳು ಸೇರಿಕೊಂಡಿರುವುದರಿಂದ ಪೈರುಗಳ ಬೆಳವಣಿಗೆಗೆ ಇದು ಅನುಕೂಲ ಮಾಡಿಕೊಡುತ್ತದೆ. ಒಂದು ರೀತಿಯಲ್ಲಿ ಇದು ಬೆಳೆವರ್ಧಕವಾಗಿ ಕೆಲಸ ಮಾಡುತ್ತದೆ. ಅದೇ ರೀತಿ ಕೆಲವೊಂದು ಕೀಟ ಮತ್ತು ರೋಗಗಳ ನಿಯಂತ್ರಣಕ್ಕೆ ಇದು ಅನುಕೂಲವಾಗುತ್ತದೆ. ದನಕರುಗಳನ್ನು ಕಟ್ಟುವಂತಹ ಕೊಟ್ಟಿಗೆಯಲ್ಲಿ ಗಂಜಲದ ಸಂಗ್ರಹಣೆಗೆ ನಾವು ಒಂದು ಗುಂಡಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಚರಂಡಿಗೆ ಅಥವಾ ತಿಪ್ಪೆಗೆ ಈ

ಗಂಜಲವನ್ನು ಸುರಿಯಬಾರದು. ಅದರ ಬದಲಿಗೆ ಅದನ್ನು ಸಂಗ್ರಹಣೆ ಮಾಡಿಕೊಂಡು ಸರಿಯಾದ ರೀತಿಯಲ್ಲಿ ನಾವು ಬಳಸಿದರೆ ಅದರಿಂದ ಬಹಳಷ್ಟು ಅನುಕೂಲಗಳನ್ನು ನಾವು ಬಳಸಿದರೆ ಅದರಿಂದ ಬಹಳಷ್ಟು ಅನುಕೂಲಗಳನ್ನು ನಾವು ಪಡೆದುಕೊಳ್ಳಬಹುದು. ಗಂಜಲ ತಾಜಾ ಅಗಿದ್ದಲ್ಲಿ ಬಹಳಷ್ಟು ಪರಿಣಾಮಕಾರಿಯಾಗಿರುತ್ತದೆ. ನಾವು ಸಂಗ್ರಹಿಸಿಟ್ಟ ಗಂಜಲ ಕೂಡ ಬಹಳಷ್ಟು ಅನುಕೂಲ ಮಾಡಿಕೊಡುತ್ತದೆ.

ಹಸುವಿನ ಗಂಜಲವನ್ನು ಶೇ. 20 ರ ಪ್ರಮಾಣದಲ್ಲಿ ಸಿಂಪಡಿಸುವುದರಿಂದ ಸಾರಜನಕದ ಪೂರೈಕೆ ಆಗುತ್ತದೆ. ಇದರಲ್ಲಿ ಇತರೆ ಪೋಷಕಾಂಶಗಳು ಕೂಡ ಹೇರಳವಾಗಿವೆ. ಅವೂ ಸಹ ಪೂರೈಕೆಯಾಗುತ್ತವೆ. ರೋಗಗಳ ಹಾಗೂ ಕೀಟಗಳ ಬಾಧೆ ಕಡಿಮೆಯಾಗುತ್ತದೆ. ಸಸ್ಯ ಅರೋಗ್ಯಯುತವಾಗಿದ್ದರೆ ಇಳುವರಿಯಲ್ಲಿ ಹೆಚ್ಚಳ ಆಗುತ್ತದೆ.

ಗಂಜಲದ ಉಪಯೋಗವೆಂದರೆ ಲೀಟರ್ ಗಂಜಲಕ್ಕೆ 10 ಲೀ ನಷ್ಟು ನೀರನ್ನು ಬೆರೆಸಿ ಆ ದ್ರಾವಣದಲ್ಲಿ ಭತ್ತವನ್ನು ಸುಮಾರು ೩೦ ನಿಮಿಷ ನೆನೆಸಿ ಬಿತ್ತನೆ ಮಾಡಿದರೆ ಸಂಪೂರ್ಣ ಎಲೆ ಚುಕ್ಕಿ ರೋಗವನ್ನು ನಿಯಂತ್ರಿಸಬಹುದಾಗಿರುತ್ತದೆ. ನಾಟಿ ಹಸುವಿನ ಗಂಜಲವನ್ನು ಸಸ್ಯಾಮೃತ, ಜೀವಾಮೃತ, ಬೀಜಾಮೃತ ಹೀಗೆ ಇನ್ನಿತರ ಉಪಯೋಗಗಳಿಗೆ ಬಳಸುವುದರಿಂದ ಅದನ್ನು ಕೃಷಿಯ ಅವಿಭಾಜ್ಯ ಅಂಗ ಎಂದು ಹೇಳಿದ್ದರೆ ತಪ್ಪಾಗಲಾರದು.

ಗಂಜಲವನ್ನು ಕಾಳು ಶುಚಿ ಮಾಡುವ ಮೊರಗಳನ್ನು ಹಾಳಾಗದಂತೆ ಮಾಡಲು ಹುಳು ಹತ್ತದಂತೆ ಮರಮುಟ್ಟುಗಳನ್ನು ಕಾಪಾಡಲು ಬಳಸುವುದು ಸಾಮಾನ್ಯ ಹಸಿ ಗಾಯಗಳಿಗೆ ಗಂಜಲ ಹಾಕಿದರೆ ಬೇಗ ವಾಸಿಯಾಗುತ್ತದೆ. ತಲೆಗೆ, ಮೈಗೆ ಹಚ್ಚಿಕೊಂಡು ಸ್ನಾನ ಮಾಡುವ ಅಭ್ಯಾಸವೂ ಅಲ್ಲಲ್ಲಿ ಕಾಣುತ್ತದೆ. ಪಂಚಗವ್ಯದಲ್ಲಿ ಹಸುವಿನ ಗಂಜಲ ಒಂದು ಘಟಕ, ಹಸುವಿನ ಅಥವಾ ಕರುವಿನ ತಜಾ ಗಂಜಲವನ್ನು ಸೇವಿಸುವುದು ಆರೋಗ್ಯಕ್ಕೆ ಒಳ್ಳೆಯದು. ಕೊಟ್ಟಗೆಯಲ್ಲಿ ಗಂಜಲ ಮತ್ತು ಸಗಣಿ ವಾಸನೆಯನ್ನು ಎಳೆದುಕೊಳ್ಳುವುದರಿಂದ ಸಣ್ಣಪುಟ್ಟ ಕಾಯಿಲೆಗಳಂದ ದೂರ ಇರಬಹುದು. ಎಂಬುದು ಹಿರಿಯರ ಹೇಳಿಕೆ, ಬೆಳೆಯ ಬಿತ್ತನೆಯಿಂದ ಹಿಡಿದು ಕೊಯ್ಲಿನವರೆಗೆ ಗಂಜಲದ ಬಳಕೆಯನ್ನು ಮಾಡಿಕೊಳ್ಳಬಹುದು, ಅಲ್ಪಾವಧಿ ಬೆಳೆಗಳಲ್ಲಿ ಇದನ್ನು ವಾರಕ್ಕೊಮ್ಮೆ ಸಿಂಪರಣೆ ಮಾಡುವ ಕ್ರಮ ಒಳ್ಳೆಯ ಪರಿಣಾಮ ಕೊಡುತ್ತದೆ. ಬಹುವಾರ್ಷಿಕ ಬೆಳೆಗಳಲ್ಲಿ ತಿಂಗಳಿಗೊಮ್ಮೆಯಾದರೂ ಅನುಸರಿಸಬೇಕು. ಖುಷ್ಕಿ ಮತ್ತು ನೀರಾವರಿ ಬೆಳೆಗಳಿಗೂ ಇದು ಹಿತ, ಮನುಷ್ಯರಿಗೆ, ಪ್ರಾಣಿ, ಪಕ್ಷಿ, ಕೀಟಗಳಿಗೆ ಮಾರಕವಾಗಿರುವ ಕಾಯಿಲೆಗಳನ್ನು ಉಪಶಮನ ಮಾಡಲು ಗಂಜಲವನ್ನು ಉಪಯೋಗಿಸಿ ಅರೋಗ್ಯವನ್ನು ಗಳಿಸಬಹುದು.

ಅ :– ಅಂಬ್ಲಾಚೇರಿ (ಗೋವಿನ ತಳಿ)

ಅಮೃತ ಮಹಲ್ (ಗೋವಿನ ತಳಿ)

ಒ :– ಓಂಗೋಲ್ (ಗೋವಿನ ತಳಿ)

ಕ :– ಕಂಗಾಯಂ (ಗೋವಿನ ತಳಿ) ಕಂಧಾರಿ (ಗೋವಿನ ತಳಿ)

ಕಾಂಕ್ರೇಜ್ (ಗೋವಿನ ತಳಿ) ಕಾಸರಗೋಡು (ಗೋವಿನ ತಳಿ)

ಕೃಷ್ಣಾ (ಗೋವಿನ ತಳಿ) ಕೇನ್‌ಕಾಥ (ಗೋವಿನ ತಳಿ)

ಖ :– ಖಿಲಾರಿ (ಗೋವಿನ ತಳಿ) ಖೇರಿಗರ್ (ಗೋವಿನ ತಳಿ)

ಗ :– ಗಂಗಾತೀರಿ (ಗೋವಿನ ತಳಿ) ಗೀರ್ (ಗೋವಿನ ತಳಿ)

ಗೌಳವ್ (ಗೋವಿನ ತಳಿ)

ಆ :– ಜವಾರಿ (ಗೋವಿನ ತಳಿ)

ಡ :– ಡಾಂಗಿ (ಗೋವಿನ ತಳಿ)

ಥ :– ಥಾರ್‌ಪಾರ್ಕರ್ (ಗೋವಿನ ತಳಿ)

ದ :– ದೇವನಿ (ಗೋವಿನ ತಳಿ) ನಾಗೋರಿ (ಗೋವಿನ ತಳಿ)

ಇತ್ಯಾದಿ ತಳಿಗಳು ಕಂಡು ಬರುತ್ತವೆ.

ಗೋಮುತ್ರವು ಶೇಕಡ ನೂರರಲ್ಲಿ 95% ರಷ್ಟು ನೀರು 2.5 % ರಷ್ಟು ಯೂರಿಯಾ ಹಾಗೂ 2.5 % ರಷ್ಟು ಖನಿಜಗಳ ಮಿಶ್ರಣ (ಲವಣ) ಹಾರ್ಮೋನ್ಸ್‌ಗಳ ಹಾಗೂ ಎನ್‌ಜೈಮ್ಸ್ ಗೋಮೂತ್ರದಲ್ಲಿ ಇವುಗಳು ರಾಸಾಯನಿಕ ಮಿಶ್ರಣಗಳನ್ನು ಹೊಂದಿದೆ.

1. ರಂಜಕ

2. ಪೋಟಾಷ್

3. ನೈಟ್ರೋಜನ್

4. ಲವಣ

5. ಯೂರಿಕ್ ಆಸಿಡ್

6. ಕ್ಯಾಲ್ಸಿಯಂ

7. ಲ್ಯಾಕ್ಟೋಸ್

8. ಮಿಟಮಿನ್ ಎ, ಬಿ, ಸಿ. ಡಿ, ಇ

9. ಎನ್‌ಜೈಮ್ಸ್

10. ಹೈಪ್ರೋಸಿಕ್ ಅಸಿಡ್

ಒಂದು ಹಸು ಅಥವಾ ಎಮ್ಮೆಯು 25–40 ಲೀ ನೀರನ್ನು ದಿನಕ್ಕ ಕುಡಿಯುವುದುಂಟು ಎತ್ತು ಮತ್ತಿರ ಜಾನುವಾರುಗಳು ಹೆಚ್ಚು ಕಡಿಮೆ ಇಷ್ಟೇ ನೀರನ್ನು ಕುಡಿಯಬಹುದು. ಒಂದು ಅಂದಾಜಿನಂತೆ ಕುಡಿದ ನೀರು ಮುಕ್ಕಾಲುಭಾಗ ಗಂಜಲವಾಗಿ ಪರಿವರ್ತನೆ ಆಗುತ್ತದೆ. ಸರಿಯಾದ ಕ್ರಮಗಳನ್ನು ಅನುಸರಿಸಿದರೆ ಒಂದು ಹಸು ಇಲ್ಲವೇ ಎಮ್ಮೆ ಅಥವಾ ಎತ್ತಿನಿಂದ ದಿನವೊಂದಕ್ಕೆ 10 – 15 ಲೀ ಗಂಜಲವನ್ನು ಸಂಗ್ರಹಿಸಬಹುದು. ಉಷ್ಣತೆ ಕಡಿಮೆ ಇರುವ ದಿನಗಳಲ್ಲಿ ಜಾನುವಾರುಗಳು ಹೆಚ್ಚು ಗಂಜಲವನ್ನು ಹುಯ್ಯುತ್ತವೆ. ಬಹಳ ಕಡೆ ಕೊಟ್ಟಿಗೆಗಳಲ್ಲಿ ಕಲ್ಲು ಅಥವಾ ಗಾರೆಯನ್ನು ಹಾಕದೇ ಇರುವುದರಿಂದ ಅದು ಮಣ್ಣಿನಲ್ಲಿ ಹಿಂಗಿ ವ್ಯರ್ಥವಾಗಿ ಹೋಗುತ್ತದೆ. ಕೆಲವು ಕಡೆ ಗಂಜಲದ ಗುಂಡಿ ಇದ್ದರೂ. ಪ್ರಾಣಿಗಳ ಮೂತ್ರ ಅಥವಾ ಗಂಜಲದಲ್ಲಿ ಇರುವ ಸತ್ವಾಂಶಗಳನ್ನು ಗಮನಿಸಿದರೆ ಶೇ 0.9–1.2 ಸಾರಜನಕ, ರಂಜಕ ಕಡಿಮೆ ಮತ್ತು ಪೊಟ್ಯಾಷಿಯಂ ಶೇ 0.5 – 1 ರಷ್ಟು ಇರುತ್ತದೆ.

500 ಗ್ರಾಂ ಬೆಳ್ಳುಳ್ಳಿ 1.25 ಕಿ. ಗ್ರಾಂ ಒನ ಮೆಣಸಿಕಾಯಿ, 500 ಗ್ರಾಂ ಶುಂಠಿಯನ್ನು ತೆಗೆದುಕೊಂಡು ಪ್ರಮಾಣಕ್ಕೆ ತಕ್ಕಂತೆ ಗಂಜಲವನ್ನು ಸೇರಿಸಿ ಸರಿ ಅಥವಾ ರಾಡಿಯಂತೆ ಮಾಡಿಕೊಳ್ಳಲು ಒರಳನಲ್ಲಿ ಹಾಕಿ ರುಬ್ಬುವುದು ಸರಿ. 500 ಮಿ. ಲೀ. ಬೇವಿನ ಎಣ್ಣೆ. 500 ಮಿ.ಲೀ ತಂಬಾಕಿನ ಕಷಾಯ, 100 ಮಿ. ಲೀ ಹಿಂಗಿನ ಕಷಾಯವನ್ನು ಇದಕ್ಕೆ ಸೇರಿಸಿಕೊಳ್ಳಿ. ಇವೆಲ್ಲವನ್ನೂ 5ಲೀ ಗಂಜಲದಲ್ಲಿ ಚಿನ್ನಾಗಿ ಬೆರೆಸಿ, ಬೇವಿನ ಎಣ್ಣೆ ಕರಗಿಸಲು ಈ ದ್ರಾವಣಕ್ಕೆ 100 ಗ್ರಾಂ ಸೀಗೆಕಾಯಿ ಅಥವಾ ಅಂಟವಾಳದ ಪುಡಿ ಬೆರೆಸಬಹುದು. ಒಟ್ಟು ತಯಾರಾದ ದ್ರಾವಣಕ್ಕೆ 300 – 500 ಲೀ, ನೀರು ಸೇರಿಸಿ ಬೆಳೆಗಳ ಮೇಲೆ ಸಿಂಪಡಿಸುವುದರಿಂದ ಕೀಟ, ರೋಗಗಳ ಬಾಧೆ ಕಡಿಮೆಯಾಗಿ, ಬೆಳೆ ಆರೋಗ್ಯಕರವಾಗಿ ವೃದ್ಧಿಯಾಗುತ್ತದೆ.

ಗಿಡಗಳ ಬುಡಕ್ಕೆ ಗಂಜಲವನ್ನು ನೇರವಾಗಿ ಉಪಯೋಗಿಸಬಹುದು, ಸಸ್ಯಗಳ ಬುಡಕ್ಕೆ ಹಾಕುವಾಗ ಗಂಜಲವನ್ನು ತೆಳುವು ಮಾಡಿಕೊಳ್ಳುವುದು ಬಹಳ ಒಳ್ಳೆಯದು 1 ಭಾಗ ಗಂಜಲಕ್ಕೆ 3 ಭಾಗ ನೀರನ್ನು ಬೆರೆಸಿಕೊಂಡು ತೆಳುವು ಮಾಡಿಕೊಂಡು ಆ ನಂತರ ಅದನ್ನು ಬಳಸಿಕೊಳ್ಳಬೇಕಾಗುತ್ತದೆ.

ಸಾವಯವ ಪರಿಕರಗಳ ತಯಾರಿಕೆಯಲ್ಲಿ ಮುಖ್ಯವಾಗಿ ನಾಟಿ ತಳಗಳ ಸಗಣಿ ಮತ್ತು ಗಂಜಲಗಳ ಬಳಕೆಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿದೆ. ನಾಟಿ ಹಸುಗಳ ಸಗಣಿ ಮತ್ತು ಗಂಜಲಗಳನ್ನು ಬಳಸುವುದರಿಂದ ದೇಶಿ ತಳಗಳ ಹಸುಗಳ ಸಾಕಾಣಿಕೆಗೆ ಒತ್ತನ್ನು ನೀಡಿದಂತಾಗುತ್ತದೆ. ನಮ್ಮ ಸಂಪತ್ತಿನ ರಕ್ಷಣೆ ಕೂಡ ಮಾಡಿದಂತಾಗುತ್ತದೆ.

ಅಂಶಗಳು	**ದೇಶೀ**	**ಸಂಕರಣ ಹಸು**
ಗಂಜಲದ ರಸಸಾರ	7.75 (ತಟಸ್ಥ)	8.94 (ಕ್ಷಾರಿಯ)
ವಿದ್ಯುತ್‌ವಾಹಕತೆ	16.4	52.8
(ಲವಣಾಂಶಗಳ ಪ್ರಮಾಣ)		
ಇಂಗಾಲ	0.62	1.05
ಸಾರಜನಕ (ಶೇ)	0.75	0.92
ರಂಜಕ (ಶೇ)	0.012	0.029
ಪೋಟ್ಯಾಷಿಯಂ (ಶೇ)	0.062	1.5
ಸತು (ಪಿಪಿಎಂ)	3.8	5.2

ಇಂದು ಹೇ ಹಸುವಿನ ಮೂತ್ರ ಚಿಕಿತ್ಸೆ ತೆಗೆದುಕೊಳ್ಳುವ ಅನೇಕ ಏಡ್ಸ್ ರೋಗಕ್ಕೆ ಒಳಗಾದವರು ಪಂಚಗವ್ಯದ ಚಿಕಿತ್ಸೆಯನ್ನು ಪಡೆದು ಉತ್ತಮ ಪರಿಣಾಮವನ್ನು ಪಡೆಯುತ್ತಿದ್ದಾರೆ. ಮೈಗ್ರೈನ್ ತಲೆನೋವು ಮತ್ತು ಇತರೆ ಪ್ರಕಾರದ ತಲೆನೋವಿನಿಂದ ಸುಮಾರು 15 ವರ್ಷಗಳಿಂದ ಬಳಲುತ್ತಿದ್ದವರಿಗೆ ಗೋಮೂತ್ರದ ಚಿಕಿತ್ಸೆಯಿಂದ್ 6 ತಿಂಗಳನಲ್ಲಿಯೇ ಉತ್ತಮ ಪರಿಹಾರ ದೊರಕಿದೆ ಮಾನಸಿಕ ಒತ್ತಡ ಮತ್ತು ಸ್ಮರಣ ಶಕ್ತಿಯನ್ನು ಹೆಚ್ಚಿಸುವ ಶಕ್ತಿಯನ್ನು ಹೊಂದಿದೆ.

ಒಬ್ಬ ವಿಥೀನ್ ಆರು ತಿಂಗಳು ಕಳೆದು ಹದಿನೈದು ವರ್ಷಗಲ ಕಾಲ ಚೇತರಿಸಿಕೊಂಡ ಅಗತ್ಯವಿದೆ. ವೈಗ್ರೇನ್ ಮತ್ತು ತಲೆನೋವು ನರಳುವ ವೇರೇ ಜನರು ಈ ಚಿಕಿತ್ಸೆ ಪಡೆಯುತ್ತಿದೆ ಎಂಬುದನ್ನು ಇದು ಒತ್ತಡವನ್ನು ನಿವಾರಿಸುವ ಮತ್ತು ಮೆಮೊರಿ ವಿದ್ಯುತ್ ಸುಧಾರಣೆ ಸೇರಿಸದ ಪ್ರಶ್ನೆ ಮಾಡಲಾಯಿತು. ಈ ಕಳೆದ ಕೆಲವು ವರ್ಷಗಳಿಂದ ಚಿಕಿತ್ಸೆ ಮತ್ತು ಸಂಶೋಧನಾ ಕೇಂದ್ರ ಹಸುವಿನ ಮೂತ್ರ, ಇಂಡೋರ್ ಹಬ್ ಆಫ್ ಎಲ್‌ಕೆಎಸ್ ಜನರು ಒಂದೂವರೆ ಸಂಸ್ಕರಿಸಿದ ಹೋಯಿತು, ಸೇರಿಸದ ಒಟ್ಟು ರೋಗಿಗಲು ಎಂಬತ್ತೈದು ವೇರೇ ರೋಗಿಗಲು ಕಾನ್‌ಸ್ಟೇಪೇಷನ್ ವಿಶೇಷ ಹಳೆಯ ಸೈನ್ಸ್ ಸ್ಟಕಂ ರೋಗಗಳು ಎಂದು ಕ್ಲೀನ್ ಅರ್ಧ ಗೇಟ್ ಸ್ವಯಂಜಾಲತವಾಗಿ ಅಗೆಯುವ ವಿಭಾಗ ಕ್ರಾಡ್ಲೀಂಗ್ ವೇಳೆ ಆಫ್ ತೊಂಬತ್ತು ಪ್ರತಿಶತ ಇದ್ದರು. ಹಸು ಮೂತ್ರ ಚಿಕಿತ್ಸೆ ರೋಗಿಗಲು ಅನ್‌ಜೋಯಿಂಗ್ ಸೌಂಡ್ ಎಸ್.ವೈ.ಎಸ್ ವಾಟಲ್ ಓ ಆರೋಗ್ಯ ಒಂದು ತಿಂಗಳ ತೆಗೆದುಕೊಳ್ಳುವ ಮತ್ತು ಈ ಬೋವೆಲ್ ಅಸೈಲ್ ವಿಥೇನ್ ಚಿಕಿತ್ಸೆ ಹಾದುಹೋಗುವ.

ಗೋಮೂತ್ರದ ಪ್ರಮುಖ ಉಪಯೋಗಗಳು:–

1. ಹಸು ಮುತ್ರ ಸೂಕ್ಷ್ಮ ಜೀವಿಗಳ ವಿಧಗಳು ಕೊಲ್ಲಲು ಅದ್ಭುತ ರೋಗಾನುಹಾರಕ ಶಕ್ತಿ ಹೊಂದಿದೆ. ಎಲ್ಲಾ ಸೂಕ್ಷ್ಮಾಣು ರಚಿತವಾದ ರೋಗಗಳು ಹೀಗೆ ನಾಶವಾಗುತ್ತವೆ.

2. ಅಯುರ್ವೇದ ಪ್ರಕಾರ ಎಲ್ಲಾ ರೋಗಗಳ ಕಾರಣಗಳು ಮೂರು ದೋಷಗಳು (ತ್ರೀಕೋನ ದೋಸೆ) ಅರ್ಥಾತ್ ಲೋಳೆಯ, ಪಿತ್ತರಸ ಮತ್ತು ಗಾಳಯಲ್ಲಿ ಅಸಮತೋಲನ ಆಗಿದೆ. ಹಸು ಮೂತ್ರ, ತ್ರಿಕೋನ ದೋಸೆ – ಸಮತೋಲನಗೋಳಿಸುತ್ತದೆ ಹೀಗೆ ರೋಗಗಳು ಸಂಸ್ಕರಿಸಿದ ಮಾಡಲಾಗುತ್ತದೆ.

3. ಹಸು ಮೂತ್ರ ಯಕೃತ್ ಕಾರ್ಯ ನಿರ್ವಹಣೆಯ ಸರಿಪಡಿಸುತ್ತದೆ. ಆದ್ದರಿಂದ, ಯಕೃತ್ತು ಆರೋಗ್ಯಕರ ಶುದ್ಧ ರಕ್ತ ಮಾಡುತ್ತದೆ. ಇದು ದೇಹಕ್ಕೆ ರೋಗ ನಿರೋಧಕ ಶಕ್ತಿ ನೀಡುತ್ತದೆ.

4. ಹಸು ಮೂತ್ರ ಇದು ದೈಹಿಕ ಖನಿಜ ಕೊರಗೆ ಪರಿಹಾರ ಅನೇಕ ಧಾತುಗಳು ವಿಶೇಷವಾಗಿ ತಾಮ್ರ, ಬಂಗಾರ ಲವಣಗಳು, ಇತ್ಯಾದಿ ಹೊಂದಿದೆ, ಚಿನ್ನದ ಲವಣಗಳು ಇರುವಿಕೆ ರೋಗಗಳು ದೆಹವನ್ನು ಸಂರಕ್ಷಿಸುತ್ತದೆ.

5. ಮಾನಸಿಕ ಒತ್ತಡ ನರಮಂಡಲದ ನೋವುಂಟು. ಹಸು ಮೂತ್ರ ಮೇಧ್ಯ ಮತ್ತು ಹೈಡ್ರಾ ಕರೆಯಲಾಗುತ್ತದೆ. ಇದು ಅಂದರೆ, ಮಿದುಳು ಮತ್ತು ಹೃದಯದ ಶಕ್ತಿ ನೀಡುತ್ತದೆ. ಹೀಗಾಗಿ ಹಸುವಿನ ಮೂತ್ರ ಮಾನಸಿಕ ಒತ್ತಡ ಉಂಟಾದ ಹಾನಿ ಹೃದಯ ಮತ್ತು ಮೆದುಳನ ರಕ್ಷಿಸುತ್ತದೆ ಮತ್ತು ರೋಗಗಳಿಂದ ಈ ಅಂಗಗಳನ್ನು ರಕ್ಷಿಸುತ್ತದೆ.

6. ಯಾವುದೇ ಔಷಧ ಮಿತಿಮೀರಿದ ಬಳಕೆ ನಮ್ಮ ದೇಹದಲ್ಲಿ ಕೆಲವು ಶೇಷ ಎಲೆಗಲು. ಈ ಶೇಷ ರೋಗಗಳಿಗೆ ಕಾರಣವಾಗುತ್ತದೆ. ಹಸು ಮೂತ್ರ ಶೇಷಗಳ ವಿಷಕಾರಿ ಪರಿಣಾಮಗಳು ಹಾಳು ಮಾಡಿ ದೇಹದ ರೋಗ ಉಚಿತ ಮಾಡುತ್ತದೆ.



7. ವಿದ್ಯುತ್ ಪ್ರಮಾಹವನ್ನು ಪರಿಸರ ಇರುತ್ತದೆ (ಕಿರಣಗಳು) ನಮ್ಮ ದೇಹದ ಆರೋಗ್ಯಕರ ಇರಿಸಿಕೊಳ್ಳಲು ಅತ್ಯಂತ ಸಣ್ಣ ಪ್ರಮಾಣದ ವಿದ್ಯುತ್ ರೂಪದಲ್ಲಿ ಈ ಕಿರಣಗಳು ನಮ್ಮ ದೇಹದ ತಾಮ್ರದ ಮೂಲಕ ನಮ್ಮ ದೇಹದ ನಮುದಿಸಿದ ನಾವು ಹಸು ಮುತ್ರದಿಂದ ಕಾಪರ್ ಪಡೆಯಿರಿ. ಈ ವಿದ್ಯುತ್ ಅಲೆಗಳು ಅಕರ್ಷಿಸಲು ತಾಮ್ರದ ಗುಣ. ಹೀಗಾಗಿ ನಾವು ಆರೋಗ್ಯಕರ.

8. ದೇಹದಲ್ಲಿ ದೆವ್ವ ಪ್ರವೇಶ ಉಂಟಾಗುವ ಕಾಯಿಲೆಗಳನ್ನು ಹಸುವಿನ ಮೂತ್ರ ಸೇವನೆ ಮೂಲಕ ಸಂಸ್ಕರಿಸಿದ ಮಾಡಲಾಗುತ್ತದೆ. ಪ್ರೇತಗಳು ಮಾಸ್ಟರ್ ಶಿವ, ಸಿವ ತನ್ನ ತಲೆಯ ಮೆಲೆ ಗಂಗಾ ಹೊಂದಿದೆ. ಗಂಗಾ ಸಹ ಹಸುವಿನ ಮೂತ್ರ ಆಗಿದೆ. ಹೀಗಾಗಿ ಹಸುವಿನ ಮೂತ್ರ ತೆಗೆದುಕೊಂಡು, ದೆವ್ವ ತನ್ನ ಸ್ನಾತಕೋತ್ತರ ತಲೆಯ ಮೇಲೆ ಗಂಗಾ ನೋಡಲು ಸಿಗುತ್ತದೆ. ಆದ್ದರಿಂದ ಅವರು ಕ್ಲಾಮ್ಡ್ ಮತ್ತು ಶಾಂತಿಯುತ ಆಗಿ ನೀಡಲಾಗುತ್ತದೆ. ಆದ್ದರಿಂದ ಅವರು ದೇಹದ ತೊಂದರೆ ಇಲ್ಲ. ಹೀಗಾಗಿ ಪ್ರೇತಗಳು ಪ್ರವೇಶ ಉಂಟಾಗುವ ಕಾಯಿಲೆಗಳನ್ನು ಸಹ ನಾಶವಾಗುತ್ತವೆ.

9. ನಿಯಮಿತವಾಗಿ ಕಾಯಿಲೆ ಮೊದಲು ಹಸುವಿನ ಮೂತ್ರ ತೆಗೆಯುವುದರಿಂದ ನಾವು ರೋಗಗಳು ಯಾವುದೇ ದಾಳಿ ಹಿಮ್ಮೇಟಸಲಾಯಿತು ಎಂದು ತುಂಬಾ ವಿನಾಯಿತಿ ಪಡೆಯಿರಿ.

ಪಂಚಗವ್ಯ:–

* ಪಂಚಗವ್ಯವು ಗೋವಿನ ಐದು ಅಂಶಗಳಂದ ಕೂಡಿದೆ. ಅವುಗಳೆಂದರೆ:–

1. ಗೋಮೂತ್ರ

2. ಗೋವಿನ ಸಗಣಿ

3. ಗೋವಿನ ಹಾಲು

4. ಗೋವಿನ ಮೊಸರು

5. ಗೋವಿನ ತುಪ್ಪ

* ಪಂಚಗವ್ಯವು ದೊಡ್ಡ ಸ್ಪರ್ಶಮಣಿ, ಸರಿಯಾದ ಆಹಾರ, ಹೃದಯ ಮನಸೂರೆಗೊಳ್ಳುವ, ಮಾನಸಿಕ ಮತ್ತು ದೈಹಿಕ ಶಕ್ತಿ ಕೊಡುವವನು ದೀರ್ಘಾಯುಷ್ಯವು ಹೆಚ್ಚಿಸುತ್ತದೆ. ಇದು ಪಿತ್ತರಸ, ಮ್ಯೂಕಸ್ ಮತ್ತು ಏರ್ಸ್ ಸಮತೋಲನಗೊಳಿಸುತ್ತದೆ. ಹೃದಯ ರೊಗಗಳ ಹೋಗಲಾಡಿಸುತ್ತದೆ ಮತ್ತು ವಿಷದ ಪರಿಣಾಮವನ್ನು ಹೋಗಲಾಡಿಸುತ್ತದೆ.

* ಪಂಚಗವ್ಯದ ಸಮತೋಲನದ ಸೇವನೆಯು, ಮಾನವನ ಆರೋಗ್ಯದ ಸ್ಥಿತಿಯನ್ನು ಸಮತೋಲನದಲ್ಲಿಟ್ಟಿರುವುದಲ್ಲದೇ ಮಧ್ಯಪಾನ ಮತ್ತು ತಂಬಾಕು ಸೇವನೆಗೆ ತುತ್ತಾದ ರೋಗಿಗಳನ್ನು ಗುಣಪಡಿಸುತ್ತದೆ. ಅಲ್ಲದೇ ಇದರ ಸೇವನೆಯಿಂದ ಶಾರೀರಿಕ ಮತ್ತು ಬೌದ್ಧಿಕ ಚಿಂತನೆಯನ್ನು ಹೆಚ್ಚಿಸಿಕೊಳ್ಳಬಹುದು.

ಹೇಗೆ ಗೋಮೂತ್ರ ಬಳಸುವುದು?

ಗೋಮೂತ್ರ ಅಧ್ಯಾತ್ಮಿಕ ಚಿಕಿತ್ಸೆ ಪರಿಹಾರ ಕೆಳಗಿನ ರೀತಿಗಳಲ್ಲಿ ಬಳಸಬಹುದು.

ನೇರ ಪ್ರಯೋಗ:– ನೇರವಾಗಿ ಬಾಧಿತ ದೇಹದ ಕಡೆಯಿಂದ ಕೇಂದ್ರಿಕೃತ ಗೋಮೂತ್ರ ಅನ್ವಯಿಸುವ ಗೊಮೂತ್ರ ಕೆಲವು ಸಿಸಿ ಕುಡಿಯುವ ಅಧ್ಯಾತ್ಮಿಕ ಚಿಕಿತ್ಸೆ ಸಾಧನವಾಗಿ ಸೂಚಿಸಲಾಗುತ್ತದೆ.

ನೀರಿನಲ್ಲಿ ಅದನ್ನು ದುರ್ಬಲಗೊಳಿಸುವ:– ನಿರಿನಲ್ಲಿ ಗೋಮೂತ್ರ ಕೆಲವು ಸಿಸಿ ನೀಡಿದ ನಂತರ, ಇದು ಅಧ್ಯಾತ್ಮಿಕವಾಗಿ ಆವರಣದಲ್ಲಿ ಶುದ್ಧಿಕರಣಕ್ಕೆ ಮನೆಯ ಸುತ್ತ ಚಿಮುಕಿಸಲಾಗುತ್ತದೆ ಮಾಡಬಹುದು. ಪರ್ಯಾಯವಾಗಿ, ನಿರಿನ ಒಂದು ಬಕೆಟ್‌ಪುಲ್‌ರಲ್ಲಿ ಗೋಮೂತ್ರ ಒಂದು ಸಣ್ಣ ಪ್ರಮಾಣದ ಸೇರಿಸಿ ನಂತರ, ಇದು ಸ್ನಾನ ಬಳಸಬಹುದು. ಕೆಳಗೆ ಸ್ನಾನ ನೀರಿನಲ್ಲಿ ಬಳಸಿದಾಗ ಕ್ರಮ ಆಫ್ ಗೋಮೂತ್ರ ಯಾಂತ್ರಿಕ ಒಂದು ಸೂಕ್ಷ್ಮ ನಕ್ಷೆ ಆಗಿದೆ. ಇದು ಶ್ರೀಮತಿ ಯೋಯ್ಯವಲ್ಲಿ, ದೃಷ್ಟಿ ಮುಂದುವರೆದ ಆರನೇ ಅರ್ಥದಲ್ಲಿ ಒಂದು ಅನ್ವೇಷಿ ಎಳೆಯುವ ಮತ್ತು ಅವರ ಹೋಲಿನೆಸ್ ಡಾ. ಜಯಂತ್ ಅಥಾವಳೆ ಪರಿಶೀಲಿಸಿದ ಮಾಡಲಾಗಿದೆ.

ಗಿರ್ ತಳಿ:–

* ಸಂಶೋಧನೆಯ ನಾಲ್ಕು ವರ್ಷಗಳ ನಂತರ ಜುನಗಡ್ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಲ ಗಿರ್ ಹಸುಗಳ ಮೂತ್ರದಲ್ಲಿ ಚಿನ್ನದ ಅಂಶವನ್ನು ಕಂಡು ಹಿಡಿದ್ದಾರೆ.

* ವಿಜ್ಞಾನಿಗಳ ಆಹಾರ ಪರೀಕ್ಷೆ ಲ್ಯಾಬೋರೆಟರಿಯಲ್ಲಿ ಮಾಡಿದ 400 ಗಿರ್ ಹಸುಗಳು ಮೂತ್ರದ ಮಾದರಿಯ ಪ್ರಕಾರ 1 ಲೀಟರ್ ಗಿರ್ ತಳಿಯ ಮೂತ್ರದಲ್ಲಿ 3 ಮಿ.ಗ್ರಾಂ ಚಿನ್ನದ ಅಂಶವಿರುತ್ತದೆ ಎಂದು ವಿಜ್ಞಾನಿಗಳು ಹೇಳಿಕೊಂಡಿದ್ದಾರೆ.

* ಇದಲ್ಲದೆ ಅಮೂಲ್ಯ ಲೋಹಗಳು ಈ ಮೂತ್ರದಲ್ಲಿ ಕಂಡು ಬರುತ್ತವೆ ಇವುಗಳು ನೀರಿನಲ್ಲಿ ಕರಗುತ್ತವೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

* ಗಿರ್ ತಳಿಯ ಮೂತ್ರದಲ್ಲಿ ಚಿನ್ನವಿದೆ ಎಂದು ಗ್ರಂಥಗಳಲ್ಲಿ ಪ್ರಕಟಿಸಲು ಪದೇ ಪದೇ ವೈಜ್ಞಾನಿಕ ಪರೀಕ್ಷೆಯನ್ನು ನಡೆಸಲಾಗಿದೆ.

* ವಿಜ್ಞಾನಿ ಡಾ. ಬಿ. ಎ. ಗೋಲ್ಕಿಯಾ ಪ್ರಕಾರ ಈ ಹಸುವಿನ ಮೂತ್ರದಲ್ಲಿ ಸುಮಾರು 5100 (ಸಂಯುಕ್ತಗಳು) ಕಾಂಪೌಂಡ್ ಇವೆ. ಅವುಗಳಲ್ಲಿ 388 ಕಾಂಪೌಂಡ್ಸ್ ಔಷಧೀಯ ಗುಣಗಳನ್ನು ಹೊಂದಿವೆ.

* ಚಿನ್ನದ ಅಂಶವು ಅವುಗಲ ವಯಸ್ಸು ಮತ್ತು ಅಹಾರದ ಮೇಲೆ ಅವಲಂಬನೆಯಾಗಿರುತ್ತದೆ.

* ಹಸುಗಳ ಸಂಜೆಯ ಮೂತ್ರಕ್ಕಿಂತ ಬೆಳಗಿನ ಮೂತ್ರದಲ್ಲಿ ಉತ್ತಮ ಚಿನ್ನದ ಅಂಶಗಳ ಮಾದರಿ ದೊರಕುತ್ತದೆ.

* ಡಾ. ಬಿ. ಎ. ಗೋಲ್ಕಿಯಾ, ಜಾವನ ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ನೇತೃತ್ವದ ಸಂಶೋಧನಾ ತಂಡದ ಮೂತ್ರ ನಮೂನೆಗಳು ವಿಶ್ಲೇಷಿಸಲು ಬಳಸಲಾಗುತ್ತದೆ. ಅನಿಲ ಕ್ರೋಮ್ಯಾಟೊಗ್ರಫಿ ದೊಡ್ಡ ರೋಹಿತ ವಿಧಾನ (ಜೆ.ಸಿ–ಎಂ. ಎಸ್) ಅವರು ಗಿರ್ ಹಸುವಿನ ಮೂತ್ರದಿಂದ ಚಿನ್ನವನ್ನು ಪಡೆದು ರಾಸಾಯನಿಕ ಮೂಲಕ ಗಟ್ಟಿಗೊಳಿಸಬಹುದು ಎಂದು ಹೇಳಿದ್ದಾರೆ.

* ಪ್ರಾಚೀನ ಗ್ರಂಥಗಳ ವಿಶ್ಲೇಷಣೆಯ ಪ್ರಕಾರ ಮೂತ್ರದಲ್ಲಿ, ಚಿನ್ನದ ಅಂಶವಿದೆ ಮತ್ತು ಔಷಧೀಯ ಗುಣಗಳು ಇದೆ ಎಂದು ಕೇಳಲಾಗಿದೆ.

* ವಿವಿಧ ಪ್ರಾಣಿಗಳ ಮೂತ್ರದಲ್ಲಿ ಈ ಚಿನ್ನದ ಅಂಶ ಇದೆಯೇ ಎಂದು ಪರೀಕ್ಷಿಸಲು ಎಮ್ಮೆ, ಒಂಟೆ, ಕುರಿ, ಆಡು ಈ ಎಲ್ಲಾ ಪ್ರಾಣಿಗಳ ಮೂತ್ರವನ್ನು ಪರೀಕ್ಷಿಸಲಾಯಿತು. ಆದರೆ ಯಾವುದೇ ಪ್ರಾಣಿಗಳ ಮೂತ್ರದಲ್ಲಿ ಈ ಅಂಶವು ಕಂಡು ಬರಲಿಲ್ಲ

* ಬೇರೆ ತಳಿಯ ಹಸುವಿನ ಮುತ್ರದಲ್ಲಿ ಈ ಚಿನ್ನದ ಅಂಶವಿದೇಯೆ ಎಂದು ಪರೀಕ್ಷಿಸಲು ಅನೇಕ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

ವಿಭಾಗ:–6

ಪರಾಶರೀಯಮ್

(ಅ) ಕೃಷಿ; (ಆ) ತೋಟಗಾರಿಕೆ, ಅರಣ್ಯ
(ಕ) ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಜ್ಞಾನಗಳು

PARASHAREEYAM

(A) Agricultural, (B) HOrticultural, Forestry (C) Animal Husbandary & Fisheries Sciences

(ಅ) ಕೃಷಿ

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಪಾರಂಪರಿಕ ಕೃಷಿ ವೈದ್ಯ ಪದ್ಧತಿಗಳು (ಶಿವಮೊಗ್ಗ ಜಿಲ್ಲೆಯ ಭತ್ತದ ಬೆಳೆಗಳಿಗೆ ಸಂಬಂಧಿಸಿದಂತೆ)	ಪುಷ್ಪ. ಪಿ	171 – 174
2.	ಕೃಷಿ ಮತ್ತು ಪಶುವೈದ್ಯಕೀಯ ಶಿಕ್ಷಣದ ಕಾಲಗಣನೆ ಮತ್ತು ಮಹತ್ವ	ಮಂಜುನಾಥ ಪಾಟೀಲ್ ಪ್ರದೀಪ ಕುಮಾರ ಪ್ರಹ್ಲಾದ ಉಬಾಲೆ	174 – 180
3.	ದ್ವಿದಳ ಧಾನ್ಯಗಳಲ್ಲಿ ಸುಧಾರಿತ ಉತ್ಪಾದನಾ ತಾಂತ್ರಿಕತೆ – ಅಳವಡಿಕೆ ಮತ್ತು ಅಡಚಣೆ	ಡಾ. ಚಂದ್ರಶೇಖರ್ ಎಸ್. ವಾಸ್ಟರ್ ಡಾ. ಪ್ರೀತಿ	181 – 184
4.	ಯಾಂತ್ರೀಕೃತ ಭತ್ತದ ಕೃಷಿ–ಮುಂಚೂಣಿ ಪ್ರಾತ್ಯಕ್ಷಿಕೆ ಮುಖಾಂತರ ತಂತ್ರಜ್ಞಾನ ವರ್ಗಾವಣೆ	ಶ್ರೀ ಹರೀಶ್ ಶೆಣೈ	184 – 186
5.	ಕಾಫಿಯ ಮಹಾಮಾರಿ ಎಲೆ ತುಕ್ಕು ರೋಗ	ಸಂತೋಷರಡ್ಡಿ ಮಾಚೇನಹಳ್ಳಿ ಮಧು ಎಸ್ ಗಿರಿ, ರಂಜಿನಿ ಎ ಸುಧಾ ಎಮ್., ಪಿ ದೈವಶಿಖಾಮಣಿ ಎಸ್ ರಘುರಾಮಲು ವಾಯ್	186 – 188
6.	ಕಲ್ಲಂಗಡಿ ಬೆಳೆಯಲ್ಲಿ ರೈತಕ್ಷೇತ್ರ ಪಾಠಶಾಲೆ ಮುಖಾಂತರ ಸಮಗ್ರ ನಿರ್ವಹಣೆ ತಂತ್ರಜ್ಞಾನ ವರ್ಗಾವಣೆ	ಶ್ರೀ ಹರೀಶ್ ಶೆಣೈ	188 – 190

(ಅ) ಕೃಷಿ

ಪಾರಂಪರಿಕ ಕೃಷಿ ವೈದ್ಯ ಪದ್ಧತಿಗಳು

(ಶಿವಮೊಗ್ಗ ಜಿಲ್ಲೆಯ ಭತ್ತದ ಬೆಳೆಗಳಿಗೆ ಸಂಬಂಧಿಸಿದಂತೆ)

ಪುಷ್ಪ. ಪಿ
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ–577 451
E-mail: pushpap.bdvt@gmail.com

ಕೃಷಿ ಮಾನವನ ಬದುಕಿಗೆ ಮೂಲಧಾರ, ಜನರ ಜೀವನದ ಜೀವಾಳ, ಮಾನವ ವಿಕಾಸದ ಪ್ರಾರಂಭದ ದಿನಗಳಲ್ಲಿ ಜೀವನ ಸಾಗಿಸಲು ಆಧಾರವಾಗಿದ್ದು ಇದೇ ಕೃಷಿ ಆಧುನೀಕರಣ, ಜಾಗತೀಕರಣ, ಕೈಗಾರೀಕರಣ ಇತ್ಯಾದಿಗಳ ಸ್ಪರ್ಶ ಜನ ಸಮುದಾಯಕ್ಕೆ ತಗಲುವ ಮುನ್ನ ಕೃಷಿ ಮಾನವನ ಮುಖ್ಯ ಕಸುಬಾಗಿ–ತ್ತು. ಆಹಾರ ಉತ್ಪಾದನೆಗಾಗಿ ಆತ ಕೃಷಿಯಿಯನ್ನು ಅವಲಂಬಿಸಬೇಕಾಯಿತು ಅವಶ್ಯಕವೆನಿಸಿತು. ಸಾಂಪ್ರದಾಯಿಕ ಕೃಷಿ ವಿಧಾನದಲ್ಲಿ ಕೊಳೆತ ಹಸಿರೆರೆ, ಬಗೆ ಬಗೆಯ ಸಗಣಿ, ಕೆರೆಯ ಗೋಡು, ಬೇವಿನ ಸೊಪ್ಪು, ಬೇವಿನ ಬೀಜಗಳು, ಎರೆಹುಳುಗಳನ್ನು ಬಳಸಿ ಕೃಷಿಯಿಯನ್ನು ಮಾಡಲಾಗುತ್ತಿತ್ತು. ನಿನ ಕಳೆದಂತೆ ಕೃಷಿಕ ಸಮುದಾಯ ಆಧುನಿಕತೆಯತ್ತ ಎರೆಹುಳುಗಳನ್ನು ಬಳಸಿ ಕೃಷಿಯಿಯನ್ನು ಮಾಡಲಾಗುತ್ತಿತ್ತು. ನಿನ ಕಳೆದಂತೆ ಕೃಷಿಕ ಸಮುದಾಯ ಆಧುನಿಕತೆಯತ್ತ ಮುಖಮಾಡಿ ರಾಸಾಯನಿಕ ಗೊಬ್ಬರ, ಕೀಟನಾಶಕಗಳು, ತಳಿಯ ಬೀಜಗಳನ್ನು ಬಳಸಿ ಕೃಷಿಯಿಯನ್ನು ಮಾಡುತ್ತಿದ್ದರೆ. ತಂತ್ರಜ್ಞಾನದ ಬಳಕೆಯನ್ನು ಮಾಡಿ ಕಡಿಮೆ ಅವಧಿಯಲ್ಲಿ ಹೆಚ್ಚುವರಿ ಇಳುವರಿ ಪಡೆಯುವ ಉದ್ದೇಶ ಆಧುನಿಕ ಕೃಷಿಕರಾದ್ದಾಗಿದೆ. ಪ್ರಸ್ತುತ ವಿಷಯ ಮುಖ್ಯ ಕೃಷಿ ಬೆಳೆಯಾಗಿರುವ ಭತ್ತದ ಬೆಳೆಗಳಿಗೆ ಸಂಬಂಧಿಸಿದ್ದು, ಭತ್ತದ ಬೀಜ ಸಂರಕ್ಷಣೆಯಿಂದ ಹಿಡಿದು ಫಸಲನ್ನು ಬೆಳೆಯುವವರೆಗೂ ಅನುಸರಿಸುವ ಸಾಂಪ್ರದಾಯಿಕ ವಿಧಾನಗಳನ್ನು ವಿಶ್ಲೇಷಿಸುವುದರೊಂದಿಗೆ ಸಾವಯವ ಕೃಷಿ ವಿಧಾನದ ಮೂಲಕ ಭತ್ತವನ್ನು ಬೆಳೆಯಲು ಪಾರಂಪರಿಕವಾಗಿ ಅನುಸರಿಸುವ ಕೃಷಿ ವೈದ್ಯ ಪದ್ಧತಿಯನ್ನು ವಿವ–ರಿಸುವ ಉದ್ದೇಶ ಈ ಲೇಖನದ್ದಾಗಿದೆ.

ಕೃಷಿ ಮಾನವನ ಬದುಕಿಗೆ ಮೂಲಾಧಾರ, ಜನರ ಜೀವನದ ಜೀವಾಳ. ಮಾನವ ವಿಕಾಸದ ಪ್ರಾರಂಭದ ದಿನಗಳಲ್ಲಿ ಜೀವನ ಸಾಗಿಸಲು ಆಧಾರವಾಗಿದ್ದು ಇದೇ ಕೃಷಿ. ಆಧುನೀಕರಣ, ಜಾಗತೀಕರಣ, ಕೈಗಾರೀಕರಣ ಇತ್ಯಾದಿಗಳ ಸ್ಪರ್ಶ ಜನ ಸಮುದಾಯಕ್ಕೆ ತಗಲುವ ಮುನ್ನ ಕೃಷಿ ಮಾನವನ ಮುಖ್ಯ ಕಸುಬಾಗಿತ್ತು. ಇತಿಹಾಸದ ಪುಟಗಳನ್ನು ತಿರುಗಿಸಿದಾಗ ಮಾನವ ಪ್ರಕೃತಿಯ ಕೂಸಾಗಿದ್ದ. ಒಂದೆಡೆ ನೆಲೆ ನಿಲ್ಲದೇ ಕಾಡು ಮೇಡುಗಳಲ್ಲಿ ಅಲೆಯುತ್ತಾ, ಗೆಡ್ಡೆ –ಗೆಣಸುಗಳನ್ನು ತಿನ್ನುತಾ, ಅರಿವೆಯ ಪರಿವೇ ಇಲ್ಲದಂತೆ ಬಾಳುತ್ತಿದ್ದ ಅವನು ದೈಹಿಕ ಭಾದೆಗಳಾದ ಹಸಿವು, ಬಾಯಾರಿಕೆ ಹಾಗೂ ಕಾಡು ಪ್ರಾಣಿಗಳಿಂದ ರಕ್ಷಣೆ ಪಡೆಯುವ ಉದ್ದೇಶದಿಂದ ಒಂದೆಡೆ ನೆಲೆನಿಂತು ಸಮುದಾಯದಲ್ಲಿ ವಾಸಿಸಲು ಪ್ರಾರಂಭಿಸಿದ ಮೇಲೆ ಆತನಿಗೆ ದೈನಂದಿನ ಜೀವನ ಸಾಗಿಸಲು, ಹೊಟ್ಟೆ ಹೊರೆದುಕೊಳ್ಳಲು ಆತನಿಗೆ ಕೈಹಿಡಿದು ಆಸರೆಯಾದದ್ದು ಕೃಷಿ. ತನ್ನ ಸುತ್ತಲಿನ ಭೂಮಿಯನ್ನೇ ಬಳಸಿಕೊಂಡು ತನಗೆ ಅಗತ್ಯವಿದ್ದಂತಹ ದವಸ ಧಾನ್ಯಗಳನ್ನು ಬೆಳೆಯಲು ಪ್ರಾರಂಭಿಸಿದ . ಹೀಗೆ ಮಂದಗತಿಯಲ್ಲಿ ಪ್ರಾರಂಭವಾದ ಕೃಷಿ ಬಹುಬೇಗನೆ ಸಮುದಾಯದ ಪ್ರಮುಖ ಉದ್ಯೋಗ ವಲಯವಾಗಿ ಬೆಳೆಯಿತು. ಆರಂಭದಲ್ಲಿ ಸಾಂಪ್ರದಾಯಿಕ ಕೃಷಿ ವಿಧಾನದ ಮೂಲಕ ಇಳುವರಿ ಪಡೆಯುತ್ತಿದ್ದ ಕೃಷಿಕ ಸಮುದಾಯ ದಿನಕಳೆದಂತೆ ಆಧುನಿಕತೆಯತ್ತ ಮುಖ ಮಾಡಿ ತಂತ್ರಜ್ಞಾನ ಆಧಾರಿತವಾದ ಪದ್ಧತಿಗಳನ್ನು ತಮ್ಮ ಕೃಷಿಯಲ್ಲಿ ಅಳವಡಿಸಿ ಕಡಿಮೆ ಅವಧಿಯಲ್ಲಿ ಹೆಚ್ಚುವರಿ ಇಳುವರಿ ಪಡೆಯುವಂತಾಯಿತು. ಪ್ರಸ್ತುತ ವಿಷಯ ಮುಖ್ಯ ಕೃಷಿ ಬೆಳೆಯಾಗಿರುವ ಭತ್ತದ ಬೆಳೆಗೆ ಸಂಬಂಧಿಸಿದ್ದು ಸಾವಯವ ಕೃಷಿ ವಿಧಾನದ ಮೂಲಕ ಭತ್ತವನ್ನು ಬೆಳೆಯಲು ಅನುಸರಿಸುವ ಕೃಷಿ ಪದ್ಧತಿಯನ್ನು ವಿವರಿಸುವ ಪ್ರಯತ್ನವಾಗಿದೆ.

ಮೊದಲು ಸಾವಯವ ಕೃಷಿಯ ಬಗ್ಗೆ ತಿಳಿಯುವುದು ಅಗತ್ಯವಾಗಿದೆ. ಸರ್.ಆಲ್ಬರ್ಟ್ ಹೊವಾರ್ಡ್ ಅವರನ್ನು ಸಾವಯವ ಬೇಸಾಯದ ಪಿತಾಮಹಾನೆಂದು ವಿಶೇಷವಾಗಿ ಪರಿಗಣಿಸಲಾಗಿದೆ. ಸಾವಯವ ಚಳುವಳಿ 1930–1940 ರ ದಶಕದಲ್ಲಿ ಬೇಸಾಯ ಕ್ಷೇತ್ರವನ್ನು ಕೃತಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಬಿಸುವುದನ್ನು ಹಿಮ್ಮೆಟ್ಟಿಸುವ ಸಲುವಾಗಿ ಪ್ರಾರಂಭವಾಯಿತು. ಕೃತಕ ಗೊಬ್ಬರಗಳನ್ನು ಮೊದಲು ಸೂಪರ್ ಫಾಸ್ಪೇಟ್ ಆನಂತರ ಅಮೋನಿಯದ ಉತ್ಪನ್ನಗಳಿಂದ ಭಾರಿ ಪ್ರಮಾಣದಲ್ಲಿ 18ನೆಯ ಶತಮಾನದಲ್ಲಿ ಉತ್ಪನ್ನ ಮಾಡಲಾಯಿತು. ಹೀಗೆ ತಯಾರಾದ ಈ ಗೊಬ್ಬರಗಳು ಅಗ್ಗವಾಗಿ ದೊರೆಯುತ್ತಿದ್ದು ಶಕ್ತಿಯುತವಾಗಿಯೂ ಇದ್ದುದಲ್ಲದೆ ಸುಲಭವಾಗಿ ಸಾಗಾಣಿಕೆ ಮಾಡಲಾಗುತ್ತಿತ್ತು. ಇಂತಹುದೇ ಪ್ರಗತಿ 1940 ರ ಸುಮಾರಿನಲ್ಲಿ ರಾಸಾಯನಿಕ ಕೀಟನಾಶಕಗಳಲ್ಲಿಯೂ ಕಂಡುಬಂದಿತು ಆದ್ದರಿಂದ ಈ ದಶಕವನ್ನು 'ಕೀಟನಾಶಕ ಯುಗ'ವೆಂದು ಕರೆಯಲಾಯಿತು. ಮೇಲ್ನೋಟಕ್ಕೆ ಇದು ರೈತನ ಮಿತ್ರನಂತೆ ಕಂಡರೂ ಪರೋಕ್ಷವಾಗಿ ಪರಿಸರ ಹಾಗೂ ಮಾನವನ ಆರೋಗ್ಯದ ಮೇಲೆ ಹಾನಿಕಾರಕ ಪ್ರಭಾವ ಬೀರುವ ಅಂಶಗಳು ಬಹುಬೇಗನೆ ಗೋಚರವಾದವು. ಹತ್ತಿ, ಭತ್ತ, ಎಲೆಬಳ್ಳಿ ಮೊದಲಾದ ಬೆಳೆಗಳ ಮೇಲೆ ಎಂಡೋಸಲ್ಫಾನ್‌ನನ್ನು ಸಿಂಪಡಿಸಿದಾಗ ಅದನ್ನು ಬಳಸುವ ಮನುಷ್ಯನ ಮೇಲೆ ಪ್ರಭಾವ ಬೀರದೇ ಇರಲಿಲ್ಲ. ಈ ನಿಟ್ಟಿನಲ್ಲಿ ರಸಗೊಬ್ಬರ, ಕಳೆನಾಶಕ, ಕೀಟನಾಶಕಗಳಿಂದಾಗುವ ಹಾನಿಯನ್ನು ವಿಜ್ಞಾನಿಗಳು, ಪರಿಸರಪ್ರೇಮಿಗಳು ಅಧ್ಯಯನ ಮಾಡಿ ಜಗತ್ತಿಗೆ ತಿಳಿಸಿದರು. ಡೇವಿಡ್‌ಬೆಲ್ ಎಂಬ ವಿಜ್ಞಾನಿ'ಎ ಗ್ರೋಯಿಂಗ್ ಪ್ರಾಬ್ಲಮ್' ಎಂಬ ಪುಸ್ತಕವನ್ನು ಮತ್ತು ವಿಶ್ವಪರಿಸರಕ್ಕೆ ಆಗುತ್ತಿರುವ ಹಾನಿಯನ್ನು ಸ್ಪಷ್ಟಪಡಿಸಿದರು. ಇಷ್ಟೆಲ್ಲ ಅನಾಹುತಗಳಾದ

ನಂತರ ಕೃಷಿವಲಯಕ್ಕೆ ಸಂಗಾತಿಯಾದದ್ದು ಪರಿಸರಸ್ನೇಹಿ ಸಾವಯವ ಬೇಸಾಯ ಪದ್ಧತಿ. ಇದು ಯಾವುದೇ ರೀತಿಯ ರಾಸಯನಿಕ ಅಂಶವನ್ನು ಒಳಗೊಳ್ಳದ ಸಾಂಪ್ರದಾಯಿಕ ಕೃಷಿ ಬೇಸಾಯ ಪದ್ಧತಿಯಾಗಿದ್ದು ಮಣ್ಣಿನ ಸಂರಕ್ಷಣೆಯನ್ನು ಕಾಪಾಡಲು ಕೊಳೆತ ಹಸಿರೆಲೆ, ದನದ ಸಗಣಿ, ಕೆರೆಯಗೋಡು ಇತ್ಯಾದಿ ತ್ಯಾಜ್ಯಗಳನ್ನು ಒಳಗೊಂಡಂತೆ ಪೂರಕ ಅಂಶಗಳನ್ನು ಕೃಷಿಯಲ್ಲಿ ಬಳಸಲಾಗುತ್ತದೆ.

ಸಾವಯವ ಪದ್ಧತಿಯಲ್ಲಿ ಭತ್ತದ ಬೆಳೆ : ಆಹಾರ ಧಾನ್ಯಗಳಲ್ಲಿ ಭತ್ತ ಪ್ರಮುಖ ಬೆಳೆಯಾಗಿದ್ದು, ಸಾವಯವ ಪದ್ಧತಿಯ ಮೂಲಕ ಕೆಲವೊಂದು ಮುಖ್ಯವಾದ ದೇಶೀಯ ಭತ್ತದ ತಳಗಳಾದ ರತ್ನಚೂಡಿ, ಹೆಚ್.ಎಂ.ಟಿ, ಸಿದ್ಧಸಣ್ಣ, ಗಂಧಸಾಲೆ, ಸೇಲಂಸಣ್ಣ, ಕರಿಗಜವಿಲ, ಕಾಗೆಸಾಳ, ಗಮ್ಮಸಾಲೆ, ಮೈಸೂರು ಮಲ್ಲಿಗೆ, ನವರ, ಸಣ್ಣಗೌರಿ, ಕಳಮೆ, ಕರಿಜಡ್ಡು, ಬಂಗಾರಗುಂಡು, ರಾಜಭೋಗ, ಕರಿಭತ್ತ, ಪೂನಥಡ್, ಜೀರಿಗೆಸಣ್ಣ, ಕಣತುಂಬ ಇತ್ಯಾದಿ ೩೦ಕ್ಕೂ ಹೆಚ್ಚು ತಳಗಳನ್ನು ಬೆಳೆಯಲಾಗುತ್ತದೆ. ಸಾವಯವ ಪದ್ಧತಿಯಲ್ಲಿ ಭತ್ತವನ್ನು ಬೆಳೆಯುವ ವಿಧಾನವನ್ನು ಈ ಕೆಳಕಂಡಂತೆ ವಿವರಿಸಬಹುದಾಗಿದೆ.

* ಭತ್ತದ ಬೀಜವನ್ನು ಆಯ್ಕೆ ಮಾಡುವಾಗ ಹಿಂದಿನ ಇಳುವರಿಯಲ್ಲಿ ಮೊದಲು ಬರುವ ಗೊನೆಗಳನ್ನು ಗುರುತಿಸಿ ಅವುಗಳನ್ನು ಭತ್ತದ ಬೀಜಕ್ಕಾಗಿ ಸಂಗ್ರಹಿಸಲಾಗುತ್ತದೆ. ಹೀಗೆ ಸಂಗ್ರಹಿಸಿದ ಬೀಜಗಳನ್ನು ನೀರಿನಲ್ಲಿ ನೆನೆಹಾಕಿ ಜೊಳ್ಳಾದಂತಹ ಭತ್ತವನ್ನು ಬೇರ್ಪಡಿಸಲಾಗುತ್ತದೆ. ನಂತರ ಉಪ್ಪಿನ ಮೂರುಪಟ್ಟು ಹೆಚ್ಚಿನ ನೀರಿನಲ್ಲಿ ಪುನಃ ಬೀಜವನ್ನು ನೆನೆಹಾಕಲಾಗುತ್ತದೆ. ತಳದಲ್ಲಿ ಶೇಖರಣೆಯಾದ ಭತ್ತದ ಬೀಜವನ್ನು 18 ಗಂಟೆಗಳ ಕಾಲ ಪುನಃ ನೀರಿನಲ್ಲಿ ನೆನೆಸಿಡಲಾಗುತ್ತದೆ. ನಂತರ ನೀರನ್ನು ಬಸಿದು ಗೋಣಿಚೀಲದಲ್ಲಿ ಕಟ್ಟಿ ಮೊಳಕೆ ಬರುವುದಕ್ಕೆ ಇಡಲಾಗುತ್ತದೆ. ಈ ರೀತಿ ಇಟ್ಟ ಭತ್ತ 24 ಗಂಟೆಗಳಲ್ಲಿ ಮೊಳಕೆ ಒಡೆದು ಬೀಜ ಹಾಕಲು ತಯಾರಾಗಿರುತ್ತದೆ.

* ಸಸಿ ಬಿಡುವ ಭೂಮಿಗೆ ಕೊಟ್ಟಿಗೆ ಗೊಬ್ಬರ ಹಾಕಲಾಗುತ್ತದೆ. ನಂತರ ೫ದಿನ ಮುಂಚಿತವಾಗಿಯೇ ಗಂಜಲ, ಸಗಣಿ ನೀರಿನ ಮಿಶ್ರಣದ ದ್ರಾವಣವನ್ನು ಭೂಮಿಗೆ ಸಿಂಪಡಿಸಲಾಗುತ್ತದೆ. ಆನಂತರ ಭತ್ತದ ಬೀಜಗಳನ್ನು ಚೆಲ್ಲಲಾಗುತ್ತದೆ. ಸಸಿ ಬಿಟ್ಟು 20-25 ದಿನದ ನಂತರ ನಾಟಿಗೆ ಸಸಿಗಳು ಸಿದ್ಧವಾಗಿರುತ್ತದೆ.

* ಭತ್ತವನ್ನು ನಾಟಿ ಮಾಡುವ ಮುಖ್ಯ ಭೂಮಿಗೆ ಕಾಂಪೋಸ್ಟ್ ಗೊಬ್ಬರ ಅಂದರೇ ಸಗಣಿ, ೩-೪ ವಿಧದ ಎಲೆಗಳು , ಭತ್ತದ ಹೊಟ್ಟಿನ ಬೂದಿ , ಕಸ-ಕಡ್ಡಿ, ಗಂಜಲ ಹಾಗೂ ಮಣ್ಣನ್ನು ಬೆರೆಸಿ ೯೦ ದಿನಗಳವರೆಗೆ ಕೊಳೆಸಿ ಮುಂಚಿತವಾಗಿಯೇ ತಯಾರು ಮಾಡಿಟ್ಟುಕೊಳ್ಳಬೇಕು. ಇದನ್ನು ಮುಖ್ಯ ಭೂಮಿಗೆ ಹಾಕಿ ಉಳುಮೆ ಮಾಡಲಾಗುತ್ತದೆ. ನಂತರ ಡಯಾಂಚ(ಹಸಿರೆಲೆ ಗೊಬ್ಬರ)ವನ್ನು ಬೆಳೆಸಿ ಅದು ಹೂವಾಡುವ ಸಮಯದಲ್ಲಿ ಟ್ರಾಕ್ಟರ್ ರೋಡ್ ರೀವೆಟರ್‌ನಲ್ಲಿ ಪ್ರತಿ ಎರಡು ದಿನಕೊಮ್ಮೆ ಉಳುಮೆ ಮಾಡಿ ಮೂರು ಬಾರಿ ಮಣ್ಣಿಗೆ ಸೇರಿಸಲಾಗುತ್ತದೆ. ಡಯಾಂಚವನ್ನು ಮಣ್ಣಿಗೆ ಸೇರಿಸುವುದರಿಂದ ಮಣ್ಣಿನ ಸಾರ ಹರಿದು ಹೋಗುವುದನ್ನು ತಡೆಗಟ್ಟಬಹುದು. ಹೀಗೆ ನಾಟಿಗೆ ಸಿದ್ಧವಾದ ಭೂಮಿಯಲ್ಲಿ ಸಸಿಗಳನ್ನು ನಾಟಿ ಮಾಡಲಾಗುತ್ತದೆ.

ಸಾಲು ನಾಟಿ ಪದ್ಧತಿಗಾಗಿ ಉಳುಮೆ

ಸೊಂಪಾಗಿ ಬೆಳೆದಿರುವ ಡಯಾಂಚ

ಕಾಂಪೋಸ್ಟ್ ಗೊಬ್ಬರ

ಡಯಾಂಚವನ್ನು ಉಳುಮೆ ಮಾಡುತ್ತಿರುವುದು

ಪೈರನ್ನು ನಾಟಿ ಮಾಡುತ್ತಿರುವುದು

ನಾಟಿ ಮಾಡಿದ 20-25 ನೇ ದಿನಕ್ಕೆ ಜೀವಾಮೃತ ಅಂದರೇ ಗಂಜಲ, ಸಗಣಿ , ಬೆಲ್ಲ, ದ್ವಿದಳ ಧಾನ್ಯದ ಹಿಟ್ಟು ಮತ್ತು ಬೇಲಿಯ ಪಕ್ಕದ ಮಣ್ಣು ಅಥವಾ ಅರಳಿ ಬುಡದ ಮಣ್ಣನ್ನು ಐದು ದಿನಗಳವರೆಗೆ ನೀರಿನೊಂದಿಗೆ ಬೆರೆಸಿಡಬೇಕು. ಈ 5 ದಿನದ ಪ್ರತಿ ಬೆಳಗ್ಗೆ ಹಾಗೂ ಸಂಜೆ ಅದನ್ನು ಮರದ ಕಡ್ಡಿಯಿಂದ ಕಲಕಬೇಕು. ನಂತರ ಸಸಿಗಳಿಗೆ ಎರಚಬೇಕು. ಅಲ್ಲದೇ ಭೂಮಿಯ ಫಲವತ್ತತೆಗಾಗಿ ಹಸಿರೆಲೆ, ಅಡಿಕೆ ಗರಿ, ಬಾಳೆದಿಂಡು , ಕಸ-ಕಡ್ಡಿ, ತರಕಾರಿ ತ್ಯಾಜ್ಯ , ಸಗಣಿ ಹಾಗೂ ಮಣ್ಣನ್ನು ಬೆರೆಸಿ ಒಂದು ತೊಟ್ಟಿಯಲ್ಲಿ ಶೇಖರಿಸಿ ಎರೆಹುಳುಗಳನ್ನು ಹಾಕಿ ತಯಾರಿಸಿದ ಗೊಬ್ಬರವನ್ನು ಹಾಕಲಾಗುತ್ತದೆ.

ಜೀವಾಮೃತ ತಯಾರಿ

ಬೆಳೆಗೆ ಎರೆಹುಳು ಗೊಬ್ಬರ ಹಾಕುತ್ತಿರುವುದು

* ಬೆಳೆಗಳ ನಡುವೆ ಬೆಳೆಯುವ ಬೇಡವಾದ ಸಸ್ಯ ಅಂದರೇ ಕಳೆಯನ್ನು ತೆಗೆಯಲು ಸಾಲು ನಾಟಿ ಮಾಡಿದ್ದಲ್ಲಿ ಕಳೆ ಕೊಚ್ಚುವ ಯಂತ್ರ (ಕೊನೋವೇಡರ್)ವನ್ನು ಬಳಸಲಾಗುತ್ತದೆ. ಒಂದು ವೇಳೆ ಬೆಳೆಗೆ ರೋಗ ಕಂಡುಬಂದರೆ ಬೇವಿನ ಕಷಾಯವನ್ನು ತಯಾರಿಸಿ ಸಿಂಪಡಿಸಲಾಗುತ್ತದೆ. ಹೀಗೆ ಸಂರಕ್ಷಿಸಿದ ಬೆಳೆಯು 120-130ನೇ ದಿನಕ್ಕೆ ಫಸಲು ಬಂದು ಕಟಾವಿಗೆ ತಯಾರಾಗಿರುತ್ತದೆ.

ಕಳೆ ಕೊಚ್ಚುವ ಯಂತ್ರದ ಮೂಲಕ ಸಾಲು ನಾಟಿಯ ಕಳೆ ತೆಗೆಯುತ್ತಿರುವುದು

ಫಲವತ್ತಾಗಿ ಬೆಳೆದಿರುವ ಫಸಲು

ಈ ರೀತಿಯಾದಂತಹ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸಿ ಯಶಸ್ವಿಯಾದ ಅನೇಕ ಕೃಷಿಕರು ಸಾಧನೆಯ ಹಾದಿಯಲ್ಲಿದ್ದು ಹೊಸ ಹೊಸ ಅಂಶಗಳನ್ನು ತಮ್ಮ ಕೃಷಿಯಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಮಣ್ಣಿನ ಮತ್ತು ಮಣ್ಣಿನ ಜೀವಿಗಳ ಮೇಲಿನ ಜೈವಿಕ ಸಂಶೋಧನೆಯು ಸಾವಯವ ಬೇಸಾಯದ ವ್ಯವಸ್ಥೆಯು ಉಪಯುಕ್ತವೆಂದು ಸಾಬೀತುಪಡಿಸಿದೆ. ಅಲ್ಲದೇ ಸಾವಯವ ಬೇಸಾಯ ಮಾನವನಿಗೆ ಸ್ವಾಭಾವಿಕ ಆಸ್ತಿಯಾಗಿದ್ದು, ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳ

ಮೇಲೆ ಮಾನವನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ. ಗಿಡದ ಹಾಗೂ ಪ್ರಾಣಿಗಳ ತ್ಯಾಜ್ಯವು ಮಣ್ಣನ್ನು ಉತ್ತಮ ಪೌಷ್ಠಿಕಾಂಶವುಳ್ಳ ಮಣ್ಣನ್ನಾಗಿ ಮಾರ್ಪಡಿಸುತ್ತದೆ. ಉತ್ಪಾದಕನು ಇದಕ್ಕೆ ಪ್ರತಿಫಲವಾಗಿ ಆರೋಗ್ಯಕರ ಇಳುವರಿ ಮತ್ತು ಭವಿಷ್ಯದ ಕೃಷಿಗಾಗಿ ಇನ್ನಷ್ಟು ಕೃಷಿಯೋಗ್ಯ ಭೂಮಿಯನ್ನು ಪಡೆಯತ್ತಾನೆ. ಒಂದು ಸಂಶೋಧನೆಯ ಪ್ರಕಾರ ಸಾವಯವ ಆಹಾರಾಭ್ಯಾಸ ಹೊಂದಿರುವವರು ನರದೌರ್ಬಲ್ಯದಂತಹ ಆರೋಗ್ಯ ಅಪಾಯಗಳಿಗೆ ತುತ್ತಾಗುವ ಸಂಭವನೀಯತೆ ಕಡಿಮೆ ಎಂದುಅಂದಾಜಿಸಲಾಗಿದೆ. ವಿಷಪೂರಿತ ಪರಿಸರದ ಇಂದಿನ ಸಮಾಜಕ್ಕೆ ಸಾವಯವ ಕೃಷಿಯ ಅಗತ್ಯತೆಯಿದ್ದು ನಾಳೆಯ ಉತ್ತಮ ಭವಿಷ್ಯಕ್ಕೆ ಅನಿವಾರ್ಯವಾದುದಾಗಿದೆ.

ವಕ್ತೃವಿನ ವಿವರ
ಹೆಸರು: ಜಗದೀಶ್ ನಾಯಕ್.(ಸಾವಯವ ಕೃಷಿಕ).
ಸ್ಥಳ:ಮಲವಗೊಪ್ಪ(ಶಿವಮೊಗ್ಗ ಜಿಲ್ಲೆ)

ಪರಾಮರ್ಶನ ಗ್ರಂಥಗಳು

* ಪರಂಪರಾಗತ ಕೃಷಿ ವಿಕಾಸ ಯೋಜನಾ (ಪಿಕೆವಿವೈ)- www.google.com.

* ಜಾನಪದ ವಿಜ್ಞಾನ ಮೂಲತತ್ವಗಳು ಮತ್ತ ಪ್ರಕಾರಗಳು– ಜಾನಪದ ಮತ್ತು ಕೃಷಿ ವಿಜ್ಞಾನ, ಕುವೆಂಪು ವಿಶ್ವವಿದ್ಯಾನಿಲಯ.

ಕೃಷಿ ಮತ್ತು ಪಶುವೈದ್ಯಕೀಯ ಶಿಕ್ಷಣದ ಕಾಲಗಣನೆ ಮತ್ತು ಮಹತ್ವ

ಮಂಜುನಾಥ ಪಾಟೀಲ್, ಪ್ರದೀಪ ಕುಮಾರ ಮತ್ತು ಪ್ರಹ್ಲಾದ ಉಬಾಲೆ
ಪಿ.ಹೆಚ್.ಡಿ ವಿದ್ಯಾರ್ಥಿ, ಶಸ್ತ್ರಚಿಕಿತ್ಸೆ ಮತ್ತು ಕ್ಷ ಕಿರಣ ವಿಭಾಗ, ಪಶುವೈದ್ಯಕಿಯ ಮಾಹಾವಿದ್ಯಾಲಯ, ನಂದಿನಗರ
ಬೀದರ – 585 401 ಮಿಂಚಂಚೆ : manjunathpatil.2010@rediffmail.com

ಕೃಷಿ ಪ್ರಧಾನವಾಗಿರುವ ಭಾರತ ದೇಶದಲ್ಲಿ ಶೇಕಾಡ 52 ಕ್ಕಿಂತ ಹೆಚ್ಚಿನ ಜನ ತಮ್ಮ ಜೀವನೋಪಾಯಕ್ಕೆ ಕೃಷಿ ಹಾಗೂ ಪಶು ಸಂಗೋಪನೆ ಮೇಲೆ ಅವಲಂಬಿತರಾಗಿರುವುದು ಕಂಡು ಬಂದಿದೆ. ಹಾಗಾಗಿ, ಶಿಕ್ಷಣದ ಪ್ರಾರಂಭಿಕ ಹಂತದಿಂದರೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಿಂದ ಈ ವಿಷಯಗಳ ಬಗ್ಗೆ ತಿಳಿದುಕೊಳ್ಳುವುದು ಅನಿವಾರ್ಯ. ವಿಶ್ವ ಬ್ಯಾಂಕ್ ಸಂಶೋಧನಾ ಫಲಿತಾಂಶದ ಪ್ರಕಾರ, ಭಾರತ ದೇಶದ ಆರ್ಥಿಕತೆಯು ಶೇ. 11.1 ರಾಷ್ಟರಿಗೆ ಏರಿಕೆ ಮಾಡಲು ಶಿಕ್ಷಣ ಸಹಕಾರಿಯಾಗಿದೆ ಎಂದು ಕಂಡುಬಂದಿದೆ. ಹಾಗಾಗಿ, ಕೃಷಿ ಮತ್ತು ಪಶು ಸಂಗೋಪನಾ ಶಿಕ್ಷಣಕ್ಕೆ ಒತ್ತುಕೊಟ್ಟಲ್ಲಿ ಶಿಕ್ಷಣದಿಂದಾಗುವ ಆರ್ಥಿಕತೆ ಪ್ರಮಾಣ ಇನ್ನೂ ಹೆಚ್ಚಿಸಬಹುದಾಗಿದೆ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಗೆ ಸಮತೋಲನ ಆಹಾರ, ಜಾನುವಾರುಗಳಿಗೆ ಮೇವು ಹಾಗೂ ಜೀವನೋಪಾಯಕ್ಕೆ ಬೇಕಾಗುವ ಇತರೆ ಅತ್ಯವಶ್ಯಕ ವಸ್ತುಗಳ ಬೇಡಿಕೆ ಪೂರೈಸಬೇಕಾದಲ್ಲಿ ನಾವು ಯುವ ಪೀಳಿಗೆಗೆ ಕೃಷಿ ಹಾಗೂ ಪಶು ಸಂಗೋಪನಾ ವಿಷಯದಲ್ಲಿ ಪರಿಪೂರ್ಣವಾದ ಶಿಕ್ಷಣ ಕೊಡುವುದು ಪ್ರಸ್ತುತ ಸಂದರ್ಭದಲ್ಲಿ ಅನಿವಾರ್ಯವಾದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ, ನಾವು ದೇಶದ ಕೃಷಿ ಹಾಗೂ ಪಶು ಸಂಗೋಪನಾ ಶಿಕ್ಷಣವು ಬೆಳೆದು ಬಂದ ದಾರಿ ಕುರಿತು ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ.

ನಮ್ಮ ದೇಶದ ಆರ್ಥಿಕತೆಯಲ್ಲಿ ದೇಶದ ಉತ್ಪನ್ನದ ಶೇ. 40 ಹಾಗೂ ಶೇ. 25 ರಷ್ಟು ರಫ್ತು ಮತ್ತು ಅಮದು ಕೂಡ ಇದರಿಂದಾಗಿದೆ. 328.8 ಮಿಲಿಯನ್ ಹೆಕ್ಟರ್ ಭೌಗೋಳಿಕ ಪ್ರದೇಶದಲ್ಲಿ 35 ಮಿಲಿಯನ್ ಹೆಕ್ಟರ ಬೇಸಾಯಿಯ ಭೂಮಿಯಾಗಿದೆ. ಇದರ ಶೇ. 40 ರಷ್ಟು ನೀರಾವರಿ ಸೌಲಭ್ಯ ಹೊಂದಿದ್ದು, 126 ಕೃಷಿ ವಲಯಗಳನ್ನು ಹಾಗೂ 15 ಸಂಪನ್ಮೂಲ ಅಭಿವೃದ್ಧಿ ಪ್ರದೇಶಗಳನ್ನು ಒಳಗೊಂಡಿದೆ. ಅಂಕಿ ಅಂಶಗಳ ಪ್ರಕಾರ 50 ಮಿಲಿಯನ್ ಟನ್ (1950–51) ರಿಂದ 253 (2015–16) ಮಿಲಿಯನ್ ಟನ್ ಕೃಷಿ ಉತ್ಪನ್ನ ಹೆಚ್ಚಳವಾಗಿದ್ದು ಕೃಷಿಯಲ್ಲಿನ ಶಿಕ್ಷಣವೇ ಕಾರಣ.

ಇಷ್ಟೊಂದು ವೈವಿದ್ಯಮಯ ವಿಷಯಗಳನ್ನೊಳಗೊಂಡ ಕೃಷಿಯು ಸುಧಾರಿಸಬೇಕಾದಲ್ಲಿ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ತರುವುದು ಅನಿವಾರ್ಯ. ಶೈಕ್ಷಣಿಕ ವಿದ್ವಾಂಸರಿಂದ ಸಲಹೆ ಮಾಡಿದ ಯೋಜನೆಯ ಪ್ರಕಾರ ಕೃಷಿ ಶಿಕ್ಷಣ ಈ ಕೆಳಕಂಡ ಹಂತಗಳಲ್ಲಿ ನೀಡುವುದು ಕಡ್ಡಾಯವಾಗಿದೆ.

1. **5 ಹಾಗೂ 6 ನೇಯ ತರಗತಿ** : ಕೃಷಿ ಇತಿಹಾಸ, ಬೆಳೆಗಳು, ಬೆಳೆ ಭೂಗೋಳ ಶಾಸ್ತ್ರ, ಕೃಷಿ ಉತ್ಪನ್ನಗಳು ಹಾಗೂ ಅವುಗಳ ಉಪಯೋಗ.

2. **7 ಹಾಗೂ 8 ನೇಯ ತರಗತಿ** : ಕೃಷಿಗೆ ಸಂಬಂಧಿಸಿದ ಮಣ್ಣು, ಬೆಳೆಗಳು, ತೋಟಗಾರಿಕೆ, ಹೈನುಗಾರಿಕೆ ಹಾಗೂ ಮೀನುಗಾರಿಕೆ ಕುರಿತು ವಿಷಯಗಳನ್ನು ಅಳವಡಿಸುವುದು.

3. **9 ಹಾಗೂ 10 ನೇಯ ತರಗತಿ** : ಸಾಮಾನ್ಯ ಕೃಷಿ ವಿಷಯಗಳು ಕಡ್ಡಾಯಗೊಳಿಸಿ ಜೊತೆಗೆ ವಿಶೇಷ ಕೃಷಿ ವಿಜ್ಞಾನ ವಿಷಯವನ್ನು ವಿದ್ಯಾರ್ಥಿಗಳ ಆಯ್ಕೆಗೆ ಬಿಟ್ಟುಕೊಡುವುದು.

4. **11 ಹಾಗೂ 12ನೇಯ ತರಗತಿ** : ಕಡ್ಡಾಯವಾಗಿ ಒಂದು ಕೃಷಿ ವಿಷಯದೊಂದಿಗೆ, ನಾಲ್ಕು ವಿಶೇಷ ವಿಷಯಗಳ ಪೈಕಿ ಒಂದು ಕೃಷಿ ವಿಷಯ ತೆಗೆದುಕೊಂಡಲ್ಲಿ, ಕೃಷಿ/ತೋಟಗಾರಿಕೆ/ಪಶು ಸಂಗೋಪನೆ ಇತ್ಯಾದಿ ಪದವಿಯ ಪ್ರವೇಶಕ್ಕೆ ಅರ್ಹರು.

5. **ಕೃಷಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು** :

ಈ ಪದವಿಯು 2 ವರ್ಷದ ಅವಧಿಯದ್ದಾಗಿರಬೇಕು. ಪದವಿಯ ಅವಧಿಯಲ್ಲಿ ವೃತ್ತಿಪರ ತರಬೇತಿಗೆ ಒತ್ತು ನೀಡಬೇಕು. ಜೊತೆಗೆ ಭೂಮಿ, ಪ್ರಯೋಗ ಶಾಲೆ ಹಾಗೂ ತರಬೇತಿ ಪರಿಕರಗಳ ಪೂರೈಕೆ ಮಾಡಿದ್ದಲ್ಲಿ ವಿದ್ಯಾರ್ಥಿಗಳು ಕೃಷಿಯಲ್ಲಿ ಪಾಲ್ಗೊಂಡು ಪರಿಣಿತರಾಗುವದರಲ್ಲಿ ಸಂದೇಹವಿಲ್ಲ. ಇಂತಹ ಸಂಸ್ಥೆಗಳು ಪ್ರತಿ ಜಿಲ್ಲೆಗೊಂದರಂತೆ ಪ್ರಾರಂಭಿಸಿದಲ್ಲಿ ಅನುಕೂಲ.

6. 4 ವರ್ಷದ ಪದವಿ : ಬಿ.ಎಸ್‌ಸಿ. (ಕೃಷಿ), ಬಿ.ಎಸ್‌ಸಿ (ತೋಟಗಾರಿಕೆ), ಬಿ.ಎಸ್‌ಸಿ (ಅರಣ್ಯ), ಬಿ.ಎಸ್‌ಸಿ (ಗೃಹ ವಿಜ್ಞಾನ), ಬಿ.ವ್ಹಿ.ಎಸ್‌ಸಿ & ಎ.ಎಚ್. (ಐದು ವರ್ಷದ ಪದವಿ).

7. ಕೃಷಿ ಸ್ನಾತಕೋತ್ತರ ಪದವಿ : ಎಂ.ಎಸ್‌ಸಿ. (ಕೃಷಿ), ಎಂ.ವ್ಹಿ. ಎಸ್‌ಸಿ, ಎಂ.ಎಸ್‌ಸಿ. (ಅರಣ್ಯ), ಎಂ.ಎಸ್‌ಸಿ. (ತೋಟಗಾರಿಕೆ) ಹಾಗೂ ಎಂ.ಎಸ್‌ಸಿ. (ಗೃಹ ವಿಜ್ಞಾನ).

8. ಪಿಹೆಚ್.ಡಿ.

9. ಪಿಹೆಚ್.ಡಿ. ನಂತರದ ಪದವಿ

ಈ ಮೇಲ್ಕಂಡ ಶಿಕ್ಷಣ ಪದ್ದತಿ ಜೊತೆಗೆ ಪ್ರಸ್ತುತ 10+2+3 ಶಿಕ್ಷಣ ಪದ್ದತಿಯಲ್ಲಿ ಕೃಷಿ ಶಿಕ್ಷಣವನ್ನು ಈ ಕೆಳಕಂಡಂತೆ ಅಳವಡಿಸುವದು ಅನಿವಾರ್ಯ.

1. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಕೃಷಿ ವಿಷಯಗಳ ಅಳವಡಿಕೆ.

2. 9, 10 ಹಾಗೂ ಪಿ.ಯು.ಸಿ. ತರಗತಿಯಲ್ಲಿ ಕಡ್ಡಾಯ ಕೃಷಿ ವಿಷಯ ಹಾಗೂ ಆಯ್ಕೆಗನುಗುಣವಾಗಿ ಕೃಷಿ ವಿಷಯಗಳ ಅಳವಡಿಕೆ. ಇದರಿಂದ ಕೃಷಿ ಪದವಿ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು.

ಕೃಷಿ ಶಿಕ್ಷಣದ ಬೆಳವಣಿಗೆ : 1905ರಲ್ಲಿ ಕೃಷಿ ಸಂಶೋಧನಾ ಸಂಸ್ಥೆ, ಪುಸಾ, ಬಿಹಾರನಲ್ಲಿ ಪ್ರಾರಂಭವಾಯಿತು. ಆದರೆ, 1936ರಲ್ಲಿ ಆದ ಭೂಕಂಪದ ತೀವ್ರತೆಯಿಂದ ಈ ಸಂಸ್ಥೆಯು ದೆಹಲಿಗೆ ಸ್ಥಳಾಂತರಗೊಂಡು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಧೇಯ್ಯೋದೇಶಗಳು :

01. ಭೋಧನಾ ಹಾಗೂ ಸಂಶೋಧನಾ ವಿಭಾಗಗಳಲ್ಲಿ ಸಮಾನತೆ ಹಾಗೂ ಅದರ ಉಪಯೋಗಗಳನ್ನು ಕೃಷಿ, ಅರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ಗೃಹ ವಿಜ್ಞಾನ ಹಾಗೂ ಇನ್ನಿತರ ವಿಜ್ಞಾನದ ವಿಭಾಗಗಳಲ್ಲಿ ಅಳವಡಿಸಿಕೊಳ್ಳುವುದು.

02. ವಿವಿಧ ವಿಸ್ತರಣಾ ಚಟುವಟಿಕೆಗಳ ಮುಖಾಂತರ ಕೃಷಿ, ಅರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ಗೃಹ ವಿಜ್ಞಾನ ಹಾಗೂ ಇನ್ನಿತರ ವಿಜ್ಞಾನಗಳ ಬಗ್ಗೆ ಪ್ರಚಾರ ಮಾಡುವುದು ಹಾಗೂ ಪ್ರಯೋಗ ಶಾಲೆಯಲ್ಲಾದ ತಂತ್ರಜ್ಞಾನವನ್ನು ರೈತರಿಗೆ ಮುಟ್ಟಿಸುವುದು.

03. ಕೃಷಿ, ಅರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ಗೃಹ ವಿಜ್ಞಾನ ಹಾಗೂ ಇನ್ನಿತರ ವಿಜ್ಞಾನಗಳ ಭೋಧನೆ, ಸಂಶೋಧನೆ ಹಾಗೂ ವಿಸ್ತರಣಾ ವಿಭಾಗಗಳಿಗೆ ಹೆಚ್ಚಿನ ಒತ್ತು ನೀಡುವುದು.

04. ಗ್ರಾಮಗಳಲ್ಲಿ ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಅಭಿವೃದ್ಧಿ ಮಾಡುವುದುಗೊಸ್ಕರ ಈ ಸಂಸ್ಥೆಯು ಇನ್ನಿತರ ಸಂಸ್ಥೆಗಳಾದ ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಪರಿಷತ್ತು, ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತು, ಬಾಬಾ ಅಣು ಸಂಶೋಧನಾ ಕೇಂದ್ರ ಹಾಗೂ ವಿಶ್ವವಿದ್ಯಾಲಯಗಳು ಜೊತೆಯಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸುವುದು.

05. ಸಮಾಜಕ್ಕೆ ಒಳತಾಗುವ ಕಾರ್ಯಗಳನ್ನು ಕೈಗೊಳ್ಳುವುದು.

ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಅನೇಕ ಸಂಸ್ಥೆಗಳನ್ನು ಒಳಗೊಂಡಿದ್ದು, ಇದರಲ್ಲಿ ಕೇಂದ್ರ ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಸಂಶೋಧನಾ ಕೇಂದ್ರ, ಯೋಜನಾ ನಿರ್ದೇಶನಾಲಯ, ರಾಷ್ಟ್ರೀಯ ಕಛೇರಿ, ಭಾರತದ ಸಮಗ್ರ ಸಂಶೋಧನಾ ಯೋಜನೆ, ರಾಜ್ಯ ಹಾಗೂ ಕೇಂದ್ರ ಕೃಷಿ ವಿಶ್ವವಿದ್ಯಾಲಯಗಳು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳನ್ನು ಒಳಗೊಂಡಿದೆ. ಇದಲ್ಲದೆ, ದೇಶದಲ್ಲಿ 567 ಕೃಷಿ ವಿಜ್ಞಾನ ಕೇಂದ್ರಗಳು ಈ ಪರಿಷತ್ತಿನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಭಾರತೀಯ ಕೃಷಿ ಅನುಸಂದಾನ ಶಿಕ್ಷಣ : ಈ ಶಿಕ್ಷಣ ಕೇಂದ್ರವು ನವ್ಹೆಂಬರ 1951ರಲ್ಲಿ ಪ್ರಾರಂಭಗೊಂಡಿತು. ಇದರ ಧೇಯ್ಯೋದೇಶಗಳು ಈ ಕೆಳಕಂಡಂತಿವೆ.

1. ಕೃಷಿ ಹಾಗೂ ಕೃಷಿಗೆ ಸಂಬಂಧಪಟ್ಟಂತಹ (ಪಶು ಸಂಗೋಪನೆ, ತೋಟಗಾರಿಕೆ, ಗೃಹ ವಿಜ್ಞಾನ, ಅರಣ್ಯ, ರೇಷ್ಮೆ, ಇತ್ಯಾದಿ) ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು.

2. ಕಾಲ-ಕಾಲಕ್ಕೆ ವಿದ್ಯಾರ್ಥಿಗಳಗನುಗುಣವಾಗಿ ಪಠ್ಯಕ್ರಮದ ಬದಲಾವಣೆ ಮಾಡುವುದು.

3. ಶಿಕ್ಷಣದ ಜೊತೆಗೆ ತರಬೇತಿ ನೀಡುವುದು.

4. ಕೃಷಿ ಶಿಕ್ಷಣವನ್ನು ಕೃಷಿಗೆ ಸಂಬಂಧಿಸಿದ ಶಿಕ್ಷಣದೊಂದಿಗೆ (ಪಶು ಸಂಗೋಪನೆ) ವಿಲೀನಗೊಳಿಸುವುದು.

ಸದಸ್ಯರುಗಳು :

1. ಕುಲಪತಿಗಳು, ಕೃಷಿ ಹಾಗೂ ಪಶು ಸಂಗೋಪನೆ ವಿಶ್ವವಿದ್ಯಾಲಯ.
2. ಶಿಕ್ಷಣ ನಿರ್ದೇಶಕರು, ಕೃಷಿ ಹಾಗೂ ಪಶು ಸಂಗೋಪನೆ ಮಹಾವಿದ್ಯಾಲಯ.
3. ನಿರ್ದೇಶಕರು, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ಭಾರತೀಯ ಪಶು ವೈದ್ಯಕೀಯ ಸಂಶೋಧನಾ ಸಂಸ್ಥೆ ಹಾಗೂ ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ.
4. ಜಂಟಿ/ಉಪನಿರ್ದೇಶಕರು, ಕೃಷಿ, ಪಶು ಸಂಗೋಪನೆ ಹಾಗೂ ವಿಸ್ತರಣಾ ವಿಭಾಗ.
5. ಸಚಿವರ ಪ್ರತಿನಿಧಿಗಳು, ಆಹಾರ, ಕೃಷಿ, ಶಿಕ್ಷಣ ಹಾಗೂ ಅರಣ್ಯ ಸಚಿವಾಲಯ.

1952ರಿಂದ ತಾಂತ್ರಿಕ ಸಹಕಾರ ಮಿಷನ್ ಸಹಯೋಗದೊಂದಿಗೆ ನಮ್ಮ ಭಾರತ ದೇಶವು ಅಮೇರಿಕ ದೇಶದ ಜೊತೆಗೆ ಶಿಕ್ಷಣ ಮಟ್ಟವನ್ನು ಸುಧಾರಿಸಲು ಒಡಂಬಡಿಕೆ ಮಾಡಿಕೊಂಡಿತು. ಈ ಸಹಕಾರದಿಂದ ಕೆಳಕಂಡ ಬದಲಾವಣೆಗಳಾಗಿವೆ.

1. ಭಾರತದಲ್ಲಿರುವ ಸಂಸ್ಥೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ನುರಿತ ಅಮೇರಿಕನ್ ತಜ್ಞರಿಂದ ಸುಧಾರಿತ ತರಬೇತಿ.

2. ತರಬೇತಿ ಪರಿಕರಗಳು, ಗ್ರಂಥಾಲಯ ಹಾಗೂ ಪ್ರಯೋಗ ಶಾಲೆಗಳು ಅಭಿವೃದ್ಧಿ.

1ನೇ ಎಪ್ರೀಲ್ 1966 ರಂದು ಭಾ.ಕೃ.ಅ.ಪರಿಷತ್ತು ತನ್ನ ನಿಯಂತ್ರಣದಲ್ಲಿ 9 ಸಂಶೋಧನಾ ಕೇಂದ್ರಗಳನ್ನು ತೆಗೆದುಕೊಂಡಿತು. ನಂತರದ ಕೆಲವೇ ವರ್ಷಗಳಲ್ಲಿ ದೇಶದಲ್ಲಿರುವ ಬೇರೆ ಸಂಶೋಧನಾ ಕೇಂದ್ರಗಳನ್ನು ಕೂಡಾ ತನ್ನ ನಿಯಂತ್ರಣದಲ್ಲಿ ತೆಗೆದುಕೊಂಡಿತು.

ಡಾ॥ ಗಜೇಂದ್ರ ಗಡಕರ್ ಕಮೀಟಿಯ ಶಿಫಾರಸ್ಸುಗಳ ಪ್ರಕಾರ, 1972ರಲ್ಲಿ, ಡೇರ್ (ಕೃಷಿ ಸಂಶೋಧನಾ ಹಾಗೂ ಶಿಕ್ಷಣ ವಿಭಾಗ) 1973 ರಲ್ಲಿ ಕೃಷಿ ಮಂತ್ರಾಲಯ, ಭಾರತ ಸರ್ಕಾರದ ಅಧೀನದಲ್ಲಿ ಪ್ರಾರಂಭವಾದವು. ಈ ಕಮೀಟಿಯ ಪ್ರಕಾರ ಭಾ.ಕೃ.ಅ.ಪರಿಷತ್ತು, ಕೇಂದ್ರ ಹಾಗೂ ರಾಜ್ಯ ಸರಕಾರದ ಅಧೀನದಲ್ಲಿ ಬರುವಂತ ಸಂಸ್ಥೆಗಳೊಂದಿಗೆ ಚಟುವಟಿಕೆಗಳನ್ನು ಕೈಗೊಳ್ಳುವುದು ಒಂದಡೆಯಾದರೆ, ಇನ್ನೊಂದಡೆ ಅಂತರ್‌ರಾಷ್ಟ್ರೀಯ ಸಂಸ್ಥೆಗಳ ಜೊತೆಗೆ ಕಾರ್ಯಪ್ರವೃತ್ತಿಯಾಗಬೇಕು. ಕೃಷಿ ವಿಜ್ಞಾನಿಗಳ ನೇಮಕ ಮಾಡಿಕೊಳ್ಳುವ ಸಂಸ್ಥೆಯು ಪ್ರಾರಂಭಗೊಂಡು, ಸ್ವತಂತ್ರವಾಗಿ ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಕೂಡಾ ಹೊಂದಿತು.

1987ರಲ್ಲಿ ಡಾ॥ ಜಿ.ವಿ.ಕೆ. ರಾವ ಅವರ ನೇತೃತ್ವದಲ್ಲಿ ಭಾ.ಕೃ.ಅ.ಪರಿಷತ್ತನಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಕಮೀಟಿಯನ್ನು ರಚಿಸಲಾಯಿತು. ಈ ಕಮೀಟಿಯ ಪ್ರಕಾರ, ಭಾ.ಕೃ.ಅ.ಪರಿಷತ್ತಿನ ಮುಖ್ಯ ಧ್ಯೇಯ ಸ್ವಯಂ ಪ್ರೇರಿತವಾಗಿ ಸಂಶೋಧನೆಯಲ್ಲಿ ತೊಡಗಿ, ದೇಶದ ಕೃಷಿ ಉತ್ಪನ್ನವನ್ನು ಹೆಚ್ಚು ಮಾಡುವುದು. ಹಾಗೆಯೇ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ಮುಖ್ಯ ಧ್ಯೇಯವೇನೆಂದರೆ, ಯಾವ ಸಂಶೋಧನಾ ಕ್ಷೇತ್ರದಲ್ಲಿ ಅಶಕ್ತರಾಗಿದ್ದಾರೋ ಅದನ್ನು ಸರಿಪಡಿಸಿ ಆ ರಾಜ್ಯದಲ್ಲಿನ ಕೃಷಿಯನ್ನು ಅಭಿವೃದ್ಧಿ ಪಡಿಸುವುದು.

ಅಗಷ್ಟ 2004ರಲ್ಲಿ ಡಾ॥ ಆರ್.ಎ. ಮಾಶ್ಯಾಳಕರ್, ಕಾರ್ಯದರ್ಶಿ, ವಿಜ್ಞಾನ ಹಾಗೂ ಕೈಗಾರಿಕೆ ಸಂಶೋಧನಾ ವಿಭಾಗ, ವಿಜ್ಞಾನ ಮತ್ತು ತಾಂತ್ರಿಕತೆ ಸಚಿವರು, ಭಾರತ ಸರ್ಕಾರ ಇವರ ಪ್ರಕಾರ ಭಾ.ಕೃ.ಅ.ಪರಿಷತ್ತಿನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಜ್ಞಾನಿಗಳಿಗೆ ಸ್ವತಂತ್ರತೆಯನ್ನು ನೀಡುವುದು. ವಿಜ್ಞಾನಿಗಳು ಯಾವ ಕ್ಷೇತ್ರದಲ್ಲಿ ಸಂಶೋಧನೆ ತೆಗೆದುಕೊಳ್ಳುವ ಆಸಕ್ತಿ ಹೊಂದಿರುತ್ತಾರೊ ಆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವುದಕ್ಕೆ ಅನುವು ಮಾಡಿಕೊಡುವುದು.

ಅಕ್ಟೋಬರ 2004ರಲ್ಲಿ ಡಾ॥ ಎಂ.ಎಸ್. ಸ್ವಾಮೀನಾಥನ್ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಕೃಷಿ ಸಂಶೋಧನಾ ಪದ್ಧತಿಯಲ್ಲಿ ಬದಲಾವಣೆ ತರುವುದುಗೊಸ್ಕರ ಕಮೀಟಿ ರಚಿಸಲಾಯಿತು. ಇವರ ಪ್ರಕಾರ ಮೂಲ ಹಾಗೂ ಯುಕ್ತಿಯ ಸಂಶೋಧನೆಗಳು ಕೃಷಿ ಕ್ಷೇತ್ರದಲ್ಲಿ ಆಗಬೇಕು. ಹಾಗೆಯೇ ಭಾರತ ಸರ್ಕಾರವು, ಮೂಲ ಕೃಷಿಗೆ ವಿಶೇಷ ಅನುದಾನ ನೀಡಿ ಈ ಅನುದಾನದಲ್ಲಿ ಸಂಶೋಧನೆ ತೆಗೆದುಕೊಳ್ಳಲು ಆದೇಶ ನೀಡಿತು.

ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು : 1949ರಲ್ಲಿ ಡಾ॥ ಎಸ್. ರಾಧಾಕೃಷ್ಣನ್ ರವರ ನೇತೃತ್ವದಲ್ಲಿ ಮೊದಲ ಶಿಕ್ಷಣ ಸಮಿತಿ ಹಾಗೂ ಮೊದಲನೇ ಮತ್ತು ಎರಡನೇ ಇಂಡೋ–ಅಮೇರಿಕನ್ ಟೀಮ್ ಅವರ ಶಿಫಾರಸ್ಸಿನ ಪ್ರಕಾರ ಕೃಷಿ ವಿಶ್ವವಿದ್ಯಾಲಯಗಳು ಸ್ಥಾಪನೆಯಾಗಬೇಕೆಂದು ತಿಳಿಸಿದರು. ಈ ನಿಟ್ಟಿನಲ್ಲಿ, ದೇಶದಲ್ಲಿ ಮೊಟ್ಟ ಮೊದಲ ಕೃಷಿ ವಿಶ್ವವಿದ್ಯಾಲಯ ಜಿ.ಬಿ. ಪಂತ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಉತ್ತರಪ್ರದೇಶ (ಈಗಿನ ಉತ್ತರ ಖಂಡ) ರಾಜ್ಯದ ಪಂತನಗರದಲ್ಲಿ, 1960ರಲ್ಲಿ ಪ್ರಾರಂಭವಾಯಿತು. ಈ ವಿಶ್ವವಿದ್ಯಾಲಯಗಳ ಮುಖ್ಯ ಉದ್ದೇಶವು ಕೃಷಿ ಶಿಕ್ಷಣವನ್ನು ಬಿ.ಎಸ್‌ಸಿ. (ಕೃಷಿ) ಬ್ಯಾಚುಲರ್ ಪದವಿ ಹಾಗೂ ಸ್ನಾತಕೋತರ ಪದವಿ ನೀಡುವುದು. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು, ಶಿಕ್ಷಣ ಪೆನಲ್ (1952), ಸ್ಟ್ಯಾಂಡಿಂಗ್ ಕಮೀಟಿ (1965), ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಪುನರ್‌ರಚನೆ (1966) ಹಾಗೂ ನಾರ್ಮಸ್ ಮತ್ತು ಅಕ್ರಿಡಿಯಷನ್ ಕಮೀಟಿ (1974) ರಚಿಸಲಾಯಿತು. ಸದ್ಯ ದೇಶದಲ್ಲಿ 50 ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಒಂದು ಕೇಂದ್ರ ಕೃಷಿ ವಿಶ್ವವಿದ್ಯಾಲಯ (ಇಂಪಾಲ್) ಇವುಗಳ ಅಡಿಯಲ್ಲಿ 210 ಕೃಷಿ ಮಹಾವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ಭಾರತೀಯ ಪಶು ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ, ಕೇಂದ್ರ ಒಳನಾಡು ಮೀನುಗಾರಿಕೆ ಶಿಕ್ಷಣ ಸಂಸ್ಥೆ ಹಾಗೂ ಅಲಹಾಬಾದ ಕೃಷಿ ಸಂಸ್ಥೆಗಳು ಡೀಮ್ಡ್ ವಿಶ್ವವಿದ್ಯಾಲಯಗಳಾಗಿ ಕಾರ್ಯನಿರ್ವಹಿಸುತ್ತಿವೆ. ಭಾರತೀಯ ತಾಂತ್ರಿಕತೆ ಸಂಸ್ಥೆ, ಕಾರಕಪೂರ ಹಾಗೂ 100ಕ್ಕೂ ಹೆಚ್ಚು ಖಾಸಗಿ ಮಹಾವಿದ್ಯಾಲಯಗಳು ಕೃಷಿ ಹಾಗೂ ಕೃಷಿಗೆ ಸಂಬಂಧಪಟ್ಟ ಶಿಕ್ಷಣವನ್ನು ನೀಡುತ್ತಿವೆ.

ಕೃಷಿ ವಿಸ್ತರಣೆ ಗಣನೆಗೆ ತೆಗೆದುಕೊಂಡಾಗ, ವಿಶ್ವವಿದ್ಯಾಲಯದ ಸಂಶೋಧನಾ ತಂತ್ರಜ್ಞಾನಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸುವುದು. ಡಾ॥ ಮೋಹನಸಿಂಗ ಮೆಹತಾ ಕಮೀಟಿ (1974) ಅವರ ಶಿಫಾರಸ್ಸಿನ ಪ್ರಕಾರ ಪ್ರತಿ ಜಿಲ್ಲೆಗೆ ಒಂದರಂತೆ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುವುದು. ಇದರ ಮುಖ್ಯ ಉದ್ದೇಶವು ರೈತರ ಹೊಲದಲ್ಲಿ ಸಂಶೋಧನೆ, ಮೊದಲ ಸಾಲಿನ ಪ್ರಾತ್ಯಕ್ಷಿಕೆ ಮತ್ತು ರೈತ, ರೈತ ಮಹಿಳೆ ಹಾಗೂ ಗ್ರಾಮೀಣ ಯುವಕರಿಗೆ ತರಬೇತಿ ನೀಡುವುದು. ವೃತ್ತಿಪರ ತರಬೇತಿಗಳನ್ನು ಹಮ್ಮಿಕೊಂಡು ವಿಶ್ವವಿದ್ಯಾಲಯದ ತಾಂತ್ರಿಕತೆಗಳನ್ನು ಗ್ರಾಮೀಣ ಭಾಗಕ್ಕೆ ತಲುಪಿಸುವುದು. ಈ ನಿಟ್ಟಿನಲ್ಲಿ, 1974ರಲ್ಲಿ ಮೊದಲ ಕೃಷಿ ವಿಜ್ಞಾನ ಕೇಂದ್ರ, ಪುದುಚೇರಿಯಲ್ಲಿ ಪ್ರಾರಂಭಗೊಂಡಿತು. ಈಗ ದೇಶದಲ್ಲಿ 567 ಕೃಷಿ ವಿಜ್ಞಾನ

ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 2008ರಲ್ಲಿ ಕೇಂದ್ರ ಸರ್ಕಾರದ ಆದೇಶದ ಪ್ರಕಾರ, ದೊಡ್ಡ ಜಿಲ್ಲೆಗಳಿಗೆ 50 ಹೆಚ್ಚಿನ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಯಿತು.

ಪಶು ಸಂಗೋಪನಾ ಶಿಕ್ಷಣದ ಬೆಳವಣಿಗೆ : ಪಶು ಸಂಗೋಪನಾ ಶಿಕ್ಷಣದಲ್ಲಿ ಪಶು ವೈದ್ಯಕೀಯ, ಹೈನುಗಾರಿಕೆ ಮತ್ತು ಮೀನುಗಾರಿಕೆ ಒಳಗೊಂಡಿರುತ್ತದೆ. ಭಾರತದಲ್ಲಿ ಪಶು ಸಂಗೋಪನಾ ಶಿಕ್ಷಣವು ಪೂರಾತನದಲ್ಲಿ ಪ್ರಾಣಿಗಳನ್ನು ಸಾಕುವುದರೊಂದಿಗೆ ಪ್ರಾರಂಭವಾಯಿತು. ಕಿ.ಪೂ. 1500 ರಿಂದ 500 ರವರೆಗೆ ಹೈನುಗಾರಿಕೆ ಬಗ್ಗೆ ದಾಖಲೆಗಳಿರುವ ಉದಾಹರಣೆಗಳಿವೆ. ಸ್ವಾತಂತ್ರ್ಯ ಸಿಗುವ ಪೂರ್ವದಲ್ಲಿ 18ನೇ ಶತಮಾನದವರೆಗೆ ಪಶು ಸಂಗೋಪನಾ ಶಿಕ್ಷಣಕ್ಕೆ ಅಷ್ಟೊಂದು ಮಹತ್ವ ಕೊಟ್ಟಿರುವುದಿಲ್ಲ. ಸೇನೆಯಲ್ಲಿರುವ ಪಶು ಸಂಗೋಪನಾ ಇಲಾಖೆಯ ಸಿಬ್ಬಂದಿಯವರಿಗೆ ತರಬೇತಿ ನೀಡುವ ಉದ್ದೇಶದಿಂದ 1862ರಲ್ಲಿ ಪಶು ಶಾಲೆ, ಪುನಾದಲ್ಲಿ ಪ್ರಾರಂಭಗೊಂಡಿತು. ಇದಲ್ಲದೆ, ದೇಶದಲ್ಲಿರುವ ಜಾನುವಾರುಗಳಿಗೆ ರೋಗ ಬರುವುದನ್ನು ತಡೆಗಟ್ಟಲು ಹಪೂರ್ (1879), ಅಜ್ಮೀರ್ (1881), ಬಾಂಬೆ (1886) ಮತ್ತು ಶಿಮ್ಲಾ (1888) ದಲ್ಲಿ ಪಶು ಶಾಲೆಗಳು ಪ್ರಾರಂಭಗೊಂಡವು. ಜಾನುವಾರುಗಳಿಗೆ ಬರುವ ರೋಗಗಳನ್ನು ನಿಯಂತ್ರಿಸಲು, 1890ರಲ್ಲಿ ಕೇಂದ್ರ ಸೂಕ್ಮ ಜೀವಿಗಳ ಪ್ರಯೋಗ ಶಾಲೆ ಪ್ರಾರಂಭಗೊಂಡಿತು. ನಂತರ ಈ ಪ್ರಯೋಗ ಶಾಲೆ ಮುಕ್ತೆಶ್ವರಕ್ಕೆ ಸ್ಥಳಾಂತರಗೊಂಡಿತು. ತದನಂತರ, ಸದ್ಯದಲ್ಲಿ ಭಾರತೀಯ ಪಶು ಸಂಶೋಧನೆ ಸಂಸ್ಥೆಯಾಗಿ ಇಜತ್ ನಗರ (ಉತ್ತರಪ್ರದೇಶ) ದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಪಶುವೈದ್ಯಕೀಯ ಮಹಾವಿದ್ಯಾಲಯ, ಬಂಗಾಳ (1892), ಮದ್ರಾಸ ಪಶು ವೈದ್ಯಕೀಯ ಕಾಲೇಜು (1902) ಮತ್ತು ಪಶುವೈದ್ಯಕೀಯ ಮಹಾವಿದ್ಯಾಲಯ, ಪಾಟ್ನಾ (1930) ಪ್ರಾರಂಭಗೊಂಡವು. ಇದಾದ ನಂತರ 1902 ರಲ್ಲಿ ಅಜ್ಮೀರ್ ಪಶು ಶಾಲೆಯು ಲಾಹೋರ ಪಶು ಶಾಲೆಯ ಜೊತೆಗೆ ಕೂಡಿಕೊಂಡು, ಲಾಹೊರ ಪಶು ವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭಗೊಂಡಿತು. 1930-31ರಲ್ಲಿ ಮದ್ರಾಸ ಪಶು ವೈದ್ಯಕೀಯ ಕಾಲೇಜು ಪಠ್ಯಕ್ರಮವನ್ನು ತಿದ್ದುಪಡಿಮಾಡಿ 3 ವರ್ಷದ ಬಿ.ವ್ಹಿ.ಎಸ್ಸಿ. ಪದವಿಯನ್ನು 4 ವರ್ಷಕ್ಕೆ ಸಿಮೀತಗೊಳಿಸಲಾಯಿತು. ಪಶು ಸಂಗೋಪನಾ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡಲು 3 ವರ್ಷ ಡಿಪ್ಲೋಮಾ ಪದವಿಯನ್ನು 4 ವರ್ಷಕ್ಕೆ ಮಾಡಲಾಯಿತು. 1946-47ರಲ್ಲಿ ಡಿಪ್ಲೊಮಾ ಪದವಿಯನ್ನು ಹಿಂದಕ್ಕೆ ತೆಗೆದುಕೊಂಡು ಬಿ.ವ್ಹಿ. ಎಸ್.ಸಿ ಪದವಿಯನ್ನು ಮಾತ್ರ ಉಳಿಸಲಾಯಿತು. ಇದಲ್ಲದೆ, ಪಶು ವೈದ್ಯಕೀಯ ಕಾಲೇಜು, ಪಂಜಾಬ (1942), ಪಶು ವೈದ್ಯಕೀಯ ಕಾಲೇಜು, ಹೈದ್ರಾಬಾದ (1946) ಮತ್ತು ಪಶು ವೈದ್ಯಕೀಯ ಕಾಲೇಜು, ಮಥುರಾ (1947) ಪ್ರಾರಂಭಗೊಂಡವು. 1947ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ ಬಂದಾಗ, 6 ಪಶು ವೈದ್ಯಕೀಯ ಕಾಲೇಜುಗಳು ಇದ್ದು ಪ್ರತಿವರ್ಷ ವಿದ್ಯಾರ್ಥಿಗಳ ಒಳಪ್ರವೇಶವು 300ಕ್ಕೆ ಸಿಮೀತ ಮಾಡಲಾಯಿತು. ದೇಶ ವಿಭಜನೆಗೊಂಡ ನಂತರ ಲಾಹೋರ ಪಶು ವೈದ್ಯಕೀಯ ಕಾಲೇಜು ಪಾಕಿಸ್ತಾನಕ್ಕೆ ಹೊಗಿದ್ದರಿಂದ ಪಂಜಾಬ ಸರ್ಕಾರ ಹಿಸಾರನಲ್ಲಿ ಹೊಸ ಪಶು ವೈದ್ಯಕೀಯ ಕಾಲೇಜನ್ನು (1948) ಪ್ರಾರಂಭ ಮಾಡಿತು.

ದೇಶದಲ್ಲಿ ಆಹಾರ ಉತ್ಪನ್ನ ಹೆಚ್ಚಳವನ್ನು ಮಾಡಬೇಕಾದರೆ, ವೈಜ್ಞಾನಿಕ ತಿಳುವಳಿಕೆಯನ್ನು ರೈತರಿಗೆ ಮುಟ್ಟಿಸುವುದು ಅತ್ಯವಶ್ಯಕ. ಈ ನಿಟ್ಟಿನಲ್ಲಿ ಸರ್ಕಾರವು ಆಸ್ಸಾಂ ಹಾಗೂ ಜಬಲಪೂರ (1948), ಬೀಕಾನರ್ (1954), ತ್ರಿಚೂರ, ತಿರುಪತಿ, ಮೋಹಾಗೂ ಭುವನೇಶ್ವರ (1955)ಗಳಲ್ಲಿ ಹೊಸ ಪಶುವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭಗೊಂಡವು. ಇದರಿಂದ ಪ್ರತಿವರ್ಷ ವಿದ್ಯಾರ್ಥಿಗಳ ಒಳಪ್ರವೇಶವು 1300ಕ್ಕೆ ಏರಿತು. 1955-56ರಲ್ಲಿ 14 ಪಶುವೈದ್ಯಕೀಯ ಮಹಾವಿದ್ಯಾಲಯಗಳು ಇದ್ದು ತದನಂತರ 1960ರ ಆಸುಪಾಸಿನಲ್ಲಿ ಈ ಸಂಖ್ಯೆಯು 17ಕ್ಕೆರಿತು. (ಉದಾ : ಪಶುವೈದ್ಯಕೀಯ ಮಹಾವಿದ್ಯಾಲಯ, ಪಂಥ ನಗರ). ಪಠ್ಯಕ್ರಮದ ಅಳವಡಿಕೆ ಹಾಗೂ ಕಾಲಕ್ಕೆ ತಕ್ಕಂತೆ ಪಠ್ಯಕ್ರಮದ ಬದಲಾವಣೆಯು ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಕೃಷಿ ಅನುಸಂಧಾನ ಶಿಕ್ಷಣದ ಪ್ರಕಾರ ಇರುತ್ತದೆ.

1964ರಲ್ಲಿ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳಿದ್ದು ತರಬೇತಿ ಪಠ್ಯಕ್ರಮ, ಪರೀಕ್ಷಾ ಪದ್ಧತಿ ಒಂದಕ್ಕೊಂದು ಬೇರೆಯಾಗಿದ್ದವು. ಈ ನಿಟ್ಟಿನಲ್ಲಿ, ಕೃಷಿ ವಿಶ್ವವಿದ್ಯಾಲಯಗಳಲ್ಲಿ ಏಕತೆಯನ್ನು ತರಲು ಮೇ 1964ರಲ್ಲಿ ಎನ್.ಕೆ. ಅನಂತರಾವ, ಡೀನ್, ಉತ್ತರ ಪ್ರದೇಶ ಕೃಷಿ ವಿಶ್ವವಿದ್ಯಾಲಯ ಅಧೀನದಲ್ಲಿ ಕಮೀಟಿ ಮಾಡಿತು. ಈ ಕಮೀಟಿಯು 1965ರಲ್ಲಿ ಬಿ.ವಿ.ಎಸ್ಸಿ. ಪದವಿಯನ್ನು 5 ವರ್ಷಕ್ಕೆ ಮಾಡಿ 250 ಕಲಿಕಾ ಅವಧಿ ಒಳಗೊಂಡಿರಬೇಕೆಂದು ತಿಳಿಸಿತು. ಈ ಕಲಿಕಾ ಅವಧಿಗಳಲ್ಲಿ ಪ್ರಾಣಿಗಳ ಚಿಕಿತ್ಸೆ, ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವುದು, ಮಾಂಸವನ್ನು ಪರೀಕ್ಷಿಸುವುದು, ಕೊಟ್ಟಿಗೆಯಲ್ಲಿ ಆಕಳುಗಳ ಸಾಕಾಣಿಕೆಯನ್ನು ನಿರ್ವಹಿಸುವುದು, ತಳ ಸಂಕರಣ ಹಾಗೂ ಅಭಿವೃದ್ಧಿ ಮತ್ತು ಆಹಾರ ಪದ್ಧತಿ ಇರಬೇಕೆಂದು ತಿಳಿಸಿತು. ಈ ಶಿಫಾರಸ್ಸುಗಳು ಸರ್ಕಾರದ ಆದೇಶದಂತೆ ಜಾರಿಗೊಳಿಸಲಾಗಿದೆ.

ಅಗಸ್ಟ, 1976ರಲ್ಲಿ, ಡಾ॥ ಎಂ.ಎಸ್. ರಾಂಡವಾ ಅವರ ನೇತೃತ್ವದಲ್ಲಿ ರಾಂಡವಾ ಕಮೀಟಿ ಶಿಫಾರಸ್ಸಿನ ಪ್ರಕಾರ 5 ವರ್ಷದ ಬಿ.ವಿ.ಎಸ್ಸಿ. ಪದವಿಯಲ್ಲಿ 6 ತಿಂಗಳುಗಳ ಕಾಲ ವೃತ್ತಿ ತರಬೇತಿ ಕಾರ್ಯಕ್ರಮ ಕಡ್ಡಾಯ ಎಂದು ತಿಳಿಸಿತು. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ಸಹಾಯಧನ ಕೂಡಾ ನೀಡಬೇಕು ಎಂದು ತಿಳಿಸಿತು. ಈ ಶಿಫಾರಿಸ್ಸಿನ ಪ್ರಕಾರ ಸರ್ಕಾರದ ಆದೇಶದಂತೆ ಜಾರಿಗೊಳಿಸಲಾಗಿದೆ.

ಭಾರತೀಯ ಪಶು ವೈದ್ಯಕೀಯ ಪರಿಷತ್ತು : ಭಾರತೀಯ ಪಶು ವೈದ್ಯಕೀಯ ಪರಿಷತ್ತಿನ ಉದ್ದೇಶ, ದೇಶದಲ್ಲಿ ಪಶುವೈದ್ಯಕೀಯ ಶಿಕ್ಷಣದ ಗುಣಮಟ್ಟವನ್ನು ಕಾಪಾಡುವುದು ಹಾಗೂ ಕಾಲಕ್ಕೆ ತಕ್ಕಂತೆ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ಬದಲಾಯಿಸಗೋಸ್ಕರ ಪ್ರಾರಂಭ ಮಾಡಲಾಯಿತು. ಈ ನಿಟ್ಟಿನಲ್ಲಿ, 1991 ರಲ್ಲಿ ಭಾರತೀಯ ಪಶು ವೈದ್ಯಕೀಯ ಪರಿಷತ್ತು 3ನೇ ಡೀನ ಕಮೀಟಿ ಮಾಡಿ ಅದರ ಅಧ್ಯಕ್ಷತೆಯನ್ನು ಡಾ॥ ಕೀರ್ತಿಸಿಂಗ್, ಕುಲಪತಿಗಳು, ಹಿಮಾಚಲಪ್ರದೇಶ ಕೃಷಿ ವಿಶ್ವವಿದ್ಯಾಲಯ ರವರನ್ನು ಮಾಡಿತು. ಈ ಕಮೀಟಿಯು

ಬಿ.ವಿ.ಎಸ್‌ಸಿ. ಪದವಿ (5 ವರ್ಷ, 200 ಕಲಿಕಾ ಅವಧಿ), ಹೈನು ತಾಂತ್ರಿಕತೆ ಪದವಿ (4 ವರ್ಷ, 160 ಕಲಿಕಾ ಅವಧಿ), ಮೀನುಗಾರಿಕೆ ಪದವಿ (4 ವರ್ಷ) ಇರಬೇಕು ಎಂದು ತಿಳಿಸಿತು. ಎಲ್ಲಾ ಪದವಿಯಲ್ಲೂ 6 ತಿಂಗಳುಗಳ ಕಾಲ ವೃತ್ತಿ ತರಬೇತಿ ಕಾರ್ಯಕ್ರಮ ಇರಬೇಕೆಂದು ತಿಳಿಸಿತು. ಇದರ ಜೊತೆಗೆ ಬೋಧನೆಯ ಗುಣಮಟ್ಟವನ್ನು ಸುಧಾರಿಸಲು, ಶೇಕಡಾ 50 ಅಂಕಗಳಿಗೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಬಾಹ್ಯ ಪರೀಕ್ಷೆಯನ್ನು ಬರೆಯಬೇಕೆಂದು ಶಿಫಾರಸ್ಸು ಮಾಡಿತು. ಈ ಎಲ್ಲಾ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಿದೆ.

ನಮ್ಮ ಭಾರತ ದೇಶದಲ್ಲಿ ಸದ್ಯಕ್ಕೆ 10 ಹೈನುಗಾರಿಕೆ ತಾಂತ್ರಿಕ ಮಹಾವಿದ್ಯಾಲಯಗಳಿದ್ದು ಪ್ರತಿವರ್ಷ ವಿದ್ಯಾರ್ಥಿಗಳ ಒಳಪ್ರವೇಶವು 300 ಇದೆ. ಹಾಗೆಯೇ, 9 ಮೀನುಗಾರಿಕೆ ಮಹಾವಿದ್ಯಾಲಯಗಳಿದ್ದು, ಪ್ರತಿವರ್ಷ ವಿದ್ಯಾರ್ಥಿಗಳ ಒಳಪ್ರವೇಶವು 350 ಇದೆ. ಸದ್ಯದಲ್ಲಿ, ಪಶು, ಹೈನು ತಾಂತ್ರಿಕತೆ, ಮೀನುಗಾರಿಕೆ ಕಾಲೇಜುಗಳ ವಿವರ, ಪ್ರತಿವರ್ಷ ವಿದ್ಯಾರ್ಥಿಗಳ ಒಳಪ್ರವೇಶದ ಸಂಖ್ಯೆಯ, ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಒಳಗೊಂಡಿರುವ ಸಂಶೋಧನಾ ಸಂಸ್ಥೆಗಳು (ಕೋಷ್ಟಕ 1) ಮತ್ತು ದೇಶದಲ್ಲಿರುವ ಕೃಷಿ ಹಾಗೂ ಪಶು ಸಂಗೋಪನೆ ವಿಶ್ವವಿದ್ಯಾಲಯಗಳ ವಿವರ ಈ ಕೆಳಗಿನಂತಿದೆ (ಕೋಷ್ಟಕ 2).

ಕೋಷ್ಟಕ 1. ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಒಳಗೊಂಡಿರುವ ಸಂಶೋಧನಾ ಸಂಸ್ಥೆಗಳು

ಸಂಸ್ಥೆಗಳು	ರಾಷ್ಟ್ರೀಯ ಸಂಸ್ಥೆ	ಕೇಂದ್ರ ಕಛೇರಿ	ರಾಷ್ಟ್ರೀಯ ಸಂಶೋಧನಾ ಕೇಂದ್ರಗಳು	ಯೋಜನಾ ನಿರ್ದೇಶನಾಲಯ	ರಾಷ್ಟ್ರೀಯ	ಅಖಿಲ ಭಾರತೀಯ ಸಂಯೋಜಿತ ಸಂಶೋಧನಾ ಯೋಜನೆ	ಒಟ್ಟು
ಬೆಳೆ ವಿಜ್ಞಾನ	1	9	2	9	3	26	50
ತೋಟಗಾರಿಕೆ	–	10	07	6	–	11	34
ರಾಷ್ಟ್ರೀಯ ಸಂಪನ್ಮೂಲ ನಿರ್ವಹಣೆ	1	8	1	3	1	11	25
ಕೃಷಿ ತಾಂತ್ರಿಕತೆ	–	6	–	–	–	6	12
ಪಶು ವಿಜ್ಞಾನ	2	5	7	4	1	7	26
ಮೀನುಗಾರಿಕೆ	1	5	–	1	1	–	8
ಕೃಷಿ ವಿಸ್ತರಣೆ	–	–	–	2	–	1	3
ಕೃಷಿ ಶಿಕ್ಷಣ	1	–	–	–	–	–	1
ಸಂಪರ್ಕ ಜಾಲ ಯೋಜನೆಗಳು	–	–	–	–	–	18	18
ಇತರೆ ಯೋಜನೆಗಳು	–	–	–	–	–	8	8
ಒಟ್ಟು	**6**	**43**	**17**	**25**	**6**	**88**	**185**

ಕೋಷ್ಟಕ 2. ದೇಶದಲ್ಲಿರುವ ಕೃಷಿ, ತೋಟಗಾರಿಕೆ, ಅರಣ್ಯ, ಪಶು ಸಂಗೋಪನೆ ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯಗಳು

ಕ್ರ.ಸಂ.	ರಾಜ್ಯ / ಕೇಂದ್ರ ಕೃಷಿ, ತೋಟಗಾರಿಕೆ, ಅರಣ್ಯ ಪಶು ಸಂಗೋಪನೆ ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯಗಳು
1	ಆಚಾರ್ಯ ಎನ್.ಜಿ. ರಂಗ ಕೃಷಿ ವಿಶ್ವವಿದ್ಯಾಲಯ, ಗುಂಟೂರು, ಆಂಧ್ರಪ್ರದೇಶ
2	ಕೃಷಿ ವಿಶ್ವವಿದ್ಯಾಲಯ, ಜೊಧಪೂರ
3	ಕೃಷಿ ವಿಶ್ವವಿದ್ಯಾಲಯ, ಬೋರಖೇರಾ ಕೋಟಾ
4	ಆನಂದ್ ಕೃಷಿ ವಿಶ್ವವಿದ್ಯಾಲಯ, ಆನಂದ್, ಗುಜರಾತ
5	ಅಸ್ಸಾಂ ಕೃಷಿ ವಿಶ್ವವಿದ್ಯಾಲಯ, ಜೋರ್ಹಾಟ್, ಅಸ್ಸಾಂ
6	ಬಿದಾನ ಚಂದ್ರ ಕೃಷಿ ವಿಶ್ವವಿದ್ಯಾಲಯ, ಮೋಹನಪುರ, ನಡಿಯಾ, ಪಶ್ಚಿಮ ಬಂಗಾಳ

7	ಬಿರ್ಸಾ ಕೃಷಿ ವಿಶ್ವವಿದ್ಯಾಲಯ, ಕಣ್ಕೆ, ರಾಂಚಿ, ಜಾರ್ಖಂಡ
8	ಬಿಹಾರ ಕೃಷಿ ವಿವಿ, ಸಬೋರ, ಭಾಗಲಪೂರ
9	ಕೇಂದ್ರ ಕೃಷಿ ವಿಶ್ವವಿದ್ಯಾಲಯ, ಇಂಪಾಲ್, ಮಣಿಪುರ
10	ಚಂದ್ರಶೇಖರ ಆಜಾದ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಕಾನಪುರ, ಉತ್ತರಪ್ರದೇಶ
11	ಚೌಧರಿ ಚರಣಸಿಂಗ ಹರಿಯಾಣ ಕೃಷಿ ವಿಶ್ವವಿದ್ಯಾಲಯ, ಹಿಸ್ಸಾರ, ಹರಿಯಾಣ
12	ಚೌಧರಿ ಸರ್ವನಕುಮಾರ ಹಿಮಾಚಲಪ್ರದೇಶ ಕೃಷಿ ವಿಶ್ವವಿದ್ಯಾಲಯ, ಪಾಲಂಪುರ, ಕಾಂಗ್ರಾ, ಹಿಮಾಚಲಪ್ರದೇಶ
13	ಛತ್ತಿಸಗಡ ಕಾಮಧೇನು ವಿವಿ, ಅಂಜೋರಾ, ದುರ್ಗ, ಛತ್ತಿಸಗಡ
14	ಡಾ॥ ಬಾಳಾ ಸಾಹೇಬ ಸಾವಂತ್ ಕೊಂಕಣ ಕೃಷಿ ವಿದ್ಯಾಪೀಠ, ದಾಪೋಲಿ, ರತ್ನಗಿರಿ, ಮಹಾರಾಷ್ಟ್ರ
15	ಡಾ॥ ಪಂಜಾಬರಾವ ದೇಶಮುಖ ಕೃಷಿ ವಿದ್ಯಾಪೀಠ, ಕೃಷಿ ನಗರ, ಅಕೋಲಾ, ಮಹಾರಾಷ್ಟ್ರ
16	ಡಾ॥ ಯಶ್ವಂತಸಿಂಗ ಪರಮಾರ್ ತೋಟಗಾರಿಕೆ ಮತ್ತು ಅರಣ್ಯ ಕೃಷಿ ವಿಶ್ವವಿದ್ಯಾಲಯ, ಸೋಲನ್, ನವನಿ, ಹಿಮಾಚಲಪ್ರದೇಶ
17	ಡಾ॥ ವಾಯ್.ಎಸ್.ಆರ್ ತೋಟಗಾರಿಗಕೆಗಳ ವಿವಿ, ಪಶ್ಚಿಮ ಗೊದಾವರಿ, ಆಂಧ್ರಪ್ರದೇಶ
18	ಗೋವಿಂದ ಬಲ್ಲಬ ಪಂತ ಕೃಷಿ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಪಂತನಗರ, ಉತ್ತರಾಖಂಡ
19	ಗುರು ಅಂಗದ ದೇವ ಪಶು ವಿಶ್ವವಿದ್ಯಾಲಯ, ಲುದಿಯಾನಾ, ಪಂಜಾಬ್
20	ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾಲಯ, ರಾಯಪುರ, ಛತ್ತಿಸಗಡ
21	ಜವಾಹರಲಾಲ್ ನೆಹರೂ ಕೃಷಿ ವಿಶ್ವವಿದ್ಯಾಲಯ, ಜಬಲ್‌ಪೂರ, ಮಧ್ಯಪ್ರದೇಶ
22	ಜುಂಗದ ಕೃಷಿ ವಿಶ್ವವಿದ್ಯಾಲಯ, ಮೋತಿಬೌಗ ಜುಂಗದ, ಗುಜರಾತ
23	ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ, ಕರ್ನಾಟಕ
24	ಕೇರಳ ಕೃಷಿ ವಿಶ್ವವಿದ್ಯಾಲಯ, ವೇಲ್ಲನಿಕ್ಕರ್, ತ್ರಿಶೂರ್, ಕೇರಳ
25	ಕೇರಳ ಪಶು ವೈದ್ಯಕೀಯ ವಿವಿ, ಪೂಕುಟ್, ವಾಯಿನಾಡ್
26	ಕೇರಳಾ ಮೀನು ಮತ್ತು ಸಾಗರ ಅಧ್ಯಯನ ವಿಶ್ವ ವಿದ್ಯಾಲಯ ಪನಗಂಡ ಕೋಚ್ಚಿ
27	ಲಾಲಾ ಲಜಪತರಾಯ ಪಶು ವೈದ್ಯಕೀಯ ವಿವಿ, ಹಿಸ್ಸಾರ್
28	ಮಾಹಾರಾಣ ಪ್ರತಾಪ ಕೃಷಿ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಉದಯಪುರ, ರಾಜಸ್ತಾನ
29	ಮಹಾರಾಷ್ಟ್ರ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಾಗಪೂರ, ಮಹಾರಾಷ್ಟ್ರ
30	ಮಹಾತ್ಮ ಪುಲೆ ಕೃಷಿ ವಿದ್ಯಾಪೀಠ, ರಾಹುರಿ, ಮಹಾರಾಷ್ಟ್ರ
31	ವಸಂತರಾವ ನಾಯಕ ಮರಾಠವಾಡಾ ಕೃಷಿ ವಿಶ್ವವಿದ್ಯಾಲಯ, ಪರಬಾನಿ, ಮಹಾರಾಷ್ಟ್ರ
32	ಮಾನ್ಯವರ ಶ್ರೀ ಕಾಂಶಿರಾಮಜೀ ಕೃಷಿ ಮತ್ತು ತಾಂತ್ರೀಕ ವಿವಿ, ಭಂದ, ಉತ್ತರಪ್ರದೇಶ
	ಶಾಮ್ ಇಗ್ಗಿನ ಬಾಟಮ್ ಕೃಷಿ ತಾಂತ್ರಿಕ ಮತ್ತು ವಿಜ್ಞಾನಗಳ ಸಂಸ್ಥೆ ಅಲಹಾಬಾದ, ಉತ್ತರಪ್ರದೇಶ
33	ನರೇಂದ್ರದೇವ ಕೃಷಿ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಪೈಜಾಬಾದ, ಉತ್ತರಪ್ರದೇಶ
34	ನಾನಾಜಿ ದೇಶಮುಖ ಪಶುವೈದ್ಯಕೀಯ ವಿವಿ, ಜಬಲಪೂರ , ಮಧ್ಯಪ್ರದೇಶ
35	ನವಸಾರಿ ಕೃಷಿ ವಿವಿ, ನವಸಾರಿ, ಗುಜರಾತ
36	ಓರಿಸ್ಸಾ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಭುವನೇಶ್ವರ, ಓರಿಸ್ಸಾ
37	ಪ್ರೋ. ಜಯಶಂಕರ ತೆಲಂಗಾಣ ರಾಜ್ಯ ಕೃಷಿ ವಿವಿ, ರಾಜೇಂದ್ರ ನಗರ, ಹೈದ್ರಾಬಾದ
38	ಪಂಜಾಬ ಕೃಷಿ ವಿಶ್ವವಿದ್ಯಾಲಯ, ಲುದಿಯನಾ, ಪಂಜಾಬ
39	ರಾಜಸ್ತಾನ ಪಶು ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬಿಕಾನರ್, ರಾಜಸ್ತಾನ
40	ರಾಜಮಾತಾ ವಿಜಯರಾಜೆ ಸಿಂಧಿಯಾ ಕೃಷಿ ವಿವಿ, ಗ್ವಾಲಿಯರ್, ಮಧ್ಯ ಪ್ರದೇಶ
41	ರಾಜೇಂದ್ರ ಕೃಷಿ ವಿಶ್ವವಿದ್ಯಾಲಯ, ಪುಸಾ, ಸಮಸ್ತಿಪುರ, ಬಿಹಾರ
42	ರಾಣಿ ಲಕ್ಷ್ಮೀಬಾಯಿ ಕೇಂದ್ರ ಕೃಷಿ ವಿವಿ, ಝಾನ್ಸಿ, ಉತ್ತರ ಪ್ರದೇಶ
43	ಸರ್ದಾರ ವಲ್ಲಭಾಯಿ ಪಟೇಲ್ ಕೃಷಿ ಮತ್ತು ತಾಂತ್ರಿಕ ವಿವಿ, ಮೀರತ್, ಉತ್ತರಪ್ರದೇಶ

44	ಸರ್ದಾರ ಕೃಷಿ ನಗರ – ಧಾಂತಿವಾಡ ಕೃಷಿ ವಿವಿ, ಸರ್ದಾರ ಕೃಷಿ ನಗರ, ಗುಜರಾತ
45	ಶೇರ್-ಇ-ಕಾಶ್ಮೀರ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಜಮ್ಮು, ಜಮ್ಮು ಮತ್ತು ಕಾಶ್ಮೀರ
46	ಶೇರ್-ಇ-ಕಾಶ್ಮೀರ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಕಾಶ್ಮೀರ, ಜಮ್ಮು ಮತ್ತು ಕಾಶ್ಮೀರ
47	ಶ್ರೀ ಕರಣ ನರೇಂದ್ರ ಕೃಷಿ ವಿವಿ, ಜೋಬ್ನರ್
48	ಶ್ರೀ ವೆಂಕಟೇಶ್ವರ ಪಶುವೈದ್ಯಕೀಯ ವಿವಿ, ತಿರುಪತಿ, ಆಂಧ್ರಪ್ರದೇಶ
49	ಸ್ವಾಮಿ ಕೇಶವಾನಂದ ರಾಜಸ್ತಾನ ಕೃಷಿ ವಿವಿ, ಬಿಕಾನೇರ್, ರಾಜಸ್ತಾನ
50	ತಮಿಳುನಾಡು ಕೃಷಿ ವಿಶ್ವವಿದ್ಯಾಲಯ, ಕೊಯಮತ್ತೂರ, ತಮಿಳುನಾಡು
51	ತಮಿಳುನಾಡು ಮೀನುಗಾರಿಕೆ ವಿವಿ, ನಾಗಪಟ್ಟಣಂ, ತಮಿಳುನಾಡು
52	ತಮಿಳುನಾಡು ಪಶು ವೈದ್ಯಕೀಯ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು
53	ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ
54	ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ
55	ಕೃಷಿ ವಿಶ್ವವಿದ್ಯಾಲಯ, ರಾಯಚೂರ, ಕರ್ನಾಟಕ
56	ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ಕರ್ನಾಟಕ
57	ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ, ಕರ್ನಾಟಕ
58	ಯುಪಿ ಪಂಡಿತ ದೀನ್ ದಯಾಳ ಉಪಾಧ್ಯಾ ಪಶು ಚಿಕಿತ್ಸಾ ವಿಜ್ಞಾನ ವಿವಿ, ಅಥವಾ ಗೋ ಅನುಸಂದಾನ ಸಂಸ್ಥಾನ ಮಥುರಾ, ಉತ್ತರಪ್ರದೇಶ
59	ಉತ್ತರಾಖಂಡ ತೋಟಗಾರಿಕಾ ಮತ್ತು ಅರಣ್ಯ ವಿವಿ, ಪೌರಿ ಫರವಾಲ ಉತ್ತರಾಖಂಡ
60	ಉತ್ತರ ಬಂಗಾ ಕೃಷಿ ವಿವಿ, ಕೋಚ ಬಿಹಾರ, ಪಶ್ಚಿಮ ಬಂಗಾಳ
61	ಪಶ್ಚಿಮ ಬಂಗಾಳ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿವಿ, ಕೋಲ್ಕತ್ತಾ, ಪಶ್ಚಿಮ ಬಂಗಾಳ
62	ಶ್ರೀ ಕೋಂಡ ಲಕ್ಷ್ಮಣ ತೆಲಂಗಾಣ ರಾಜ್ಯ ತೋಟಗಾರಿಕೆ ವಿವಿ, ರಾಜೇಂದ್ರ ನಗರ, ಹೈದ್ರಾಬಾದ
63	ಶ್ರೀ ಪಿ.ವಿ.ಎನ್.ಆರ್ ತೆಲಂಗಾಣ ರಾಜ್ಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿವಿ, ರಾಜೇಂದ್ರ ನಗರ ಹೈದ್ರಾಬಾದ
64	ಕಾಮಧೇನು ವಿವಿ, ಗಾಂಧಿನಗರ್, ಗುಜರಾತ

ಪ್ರತಿ ವರ್ಷವು, ಕೃಷಿ ಭೂಮಿ ಹಾಗೂ ಜಾನುವಾರುಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ, ವೈಜ್ಞಾನಿಕ ಪಶು ಸಂಗೋಪನೆ ಮುಖಾಂತರ ಇದ್ದ ಭೂಮಿಯಲ್ಲಿಯೇ ಕೃಷಿ ಉತ್ಪನ್ನವನ್ನು ಹೆಚ್ಚಿಸಬೇಕಾದರೆ, ವಿಶ್ವವಿದ್ಯಾಲಯದ ತಾಂತ್ರಿಕತೆಗಳು ಬರೀ ಪುಸ್ತಕದಲ್ಲಿರದೇ ರೈತರ ಮನೆ ಬಾಗಿಲಿಗೆ ತಲುಪಿಸಬೇಕಾಗಿರುವುದು ಅನಿವಾರ್ಯದ ಸಂಗತಿ. ಈ ನಿಟ್ಟಿನಲ್ಲಿ, ಭಾರತ ಸರ್ಕಾರವು ಕೃಷಿ ಹಾಗೂ ಪಶು ವಿಶ್ವವಿದ್ಯಾಲಯಗಳಿಗೆ ಇನ್ನೂ ಹೆಚ್ಚಿನ ಆರ್ಥಿಕ ಅನುದಾನದ ಮುಖಾಂತರ ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳಿಗೆ ಒತ್ತು ನೀಡಿದಲ್ಲಿ ಕೃಷಿ ಹಾಗೂ ಪಶು ಸಂಗೋಪನೆಯ ಶಿಕ್ಷಣದ ಗುಣಮಟ್ಟ ಸುಧಾರಿಸುವಲ್ಲಿ ಯಾವುದೇ ಸಂದೇಹವಿಲ್ಲ.

ಉಲ್ಲೇಖಗಳು :

1. ಕೃಷಿ ಕೈಪಿಡಿ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ನವದೆಹಲಿ. 6ನೇ ಆವೃತ್ತಿ, 2009. ಪು. ಸಂ. : 1-23.

2. ಪಶು ಸಂಗೋಪನೆ ಕೈಪಿಡಿ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ನವದೆಹಲಿ. 3ನೇ ಆವೃತ್ತಿ, 2002. ಪು. ಸಂ. : 1033-1047.

3. ಕೃಷಿ ಶಿಕ್ಷಣ ಮತ್ತು ಜೀವನ ವೃತ್ತಿಯ ಸಾದಾವಕಾಶಗಳು. ಚೌಧರಿ ಎಸ್.ಆರ್. ಮತ್ತು ಸುತಾರ ಎಸ್.ಆರ್., 1996. ಕೃಷಿ ಸಸ್ಯ ವಿಜ್ಞಾನ ಪ್ರಕಾಶಕರು, ಭಾರತ. ಪು. ಸಂ. : 13-22

4. www.agricoop.nic.in

5. www.icar.org.in

6. www.dahd.nic.in

7. www.uasd.edu.co.in

ದ್ವಿದಳ ಧಾನ್ಯಗಳಲ್ಲಿ ಸುಧಾರಿತ ಉತ್ಪಾದನಾ ತಾಂತ್ರಿಕತೆ – ಅಳವಡಿಕೆ ಮತ್ತು ಅಡಚಣೆ

ಡಾ. ಚಂದ್ರಶೇಖರ್ ಎಸ್. ವಾಸ್ಟರ್[1] ಮತ್ತು ಡಾ. ಪ್ರೀತಿ[2]
[1.] ಪ್ರಾಧ್ಯಾಪಕರು, ಸಂಶೋಧನಾ ನಿರ್ದೇಶನಾಲಯ, ಕೃ.ವಿ.ವಿ, ಜಿಕೆವಿಕೆ, ಬೆಂಗಳೂರು – 560 065
ಇ–ಮೇಲ್: vaster_siddu@rediffmail.com & vaster.siddu@gmail.com, [2.] ಸಹ ಪ್ರಾಧ್ಯಾಪಕರು, ರೈ–ತಾಂತ್ರಿಕ ವಿಶ್ವವಿದ್ಯಾಲಯ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಈ ಅಧ್ಯಯನವನ್ನು 2015–16ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಬೆಂಗಳೂರು ಗ್ರಾಮೀಣ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ "ದ್ವಿದಳ ಧಾನ್ಯ ಉತ್ಪಾದನಾ ತಾಂತ್ರಿಕತೆ ಅಳವಡಿಕೆ ಮತ್ತು ಅಡಚಣೆ" ಬಗ್ಗೆ ರೈತರಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಈ ಅಧ್ಯಯನದಿಂದ ತಿಳಿದು ಬಂದ ಫಲಿತಾಂಶಗಳೆಂದರೆ: ಬಹುಭಾಗ ಶೇಕಡಾ (45.00%) ರೈತರು ಕೆಳಮಟ್ಟದ ಸುಧಾರಿತ ತಾಂತ್ರಿಕತೆಯನ್ನು ಅಳವಡಿಸಿಕೊಂಡಿರುತ್ತಾರೆ. ಸುಧಾರಿತ ಉತ್ಪಾದನಾ ತಾಂತ್ರಿಕತೆಗಳಾದ ಭೂಮಿ ಸಿದ್ಧತೆ, ಬಿತ್ತುವ ವೇಳೆ, ಬಿತ್ತುವ ಮಾದರಿ ಮತ್ತು ಕೊಟ್ಟಿಗೆ ಗೊಬ್ಬರ ಹಾಕುವಿಕೆ ಇವುಗಳಲ್ಲಿ ಶೇಕಡಾ (66.66, 62.50, 58.33 ಮತ್ತು 56.66) ಕ್ರಮವಾರು ಅಂತರ ಬೇಸಾಯ ವೇಳೆ ಶೇಕಡಾ (52.50) ಮತ್ತು ಕಳೆ ನಿಯಂತ್ರಣ ವೇಳೆ ಶೇಕಡಾ (51.66) ಗಳ ಶಿಫಾರಸ್ಸು ಮಾಡಿದ ಸುಧಾರಿತ ದ್ವಿದಳ ಧಾನ್ಯ ಉತ್ಪಾದನೆ ತಾಂತ್ರಿಕತೆಗಳನ್ನು ಅಳವಡಿಸಿಕೊಂಡಿರುತ್ತಾರೆ. ಕಳೆ ನಾಶಕ ಸಿಂಪರಣೆ, ಸಸ್ಯಗಳ ಖುಷ್ಕಕ್ಕೆ ಮಣ್ಣು ಏರಿಸುವುದು, ಜೀವೋಪಚಾರ, ಸಸ್ಯ ರಕ್ಷಣೆ ಹಾಗೂ ಮಣ್ಣು ಪರೀಕ್ಷೆಗಳ ಕ್ರಮ ಶೇಕಡಾ (0.00, 10.83, 12.50, 15.00 ಮತ್ತು 16.66) ಅತೀ ಕಡಿಮೆ ಪ್ರಮಾಣದಲ್ಲಿ ಸುಧಾರಿತ ಶಿಫಾರಸ್ಸು ಮಾಡಿದ ತಾಂತ್ರಿಕತೆಗಳನ್ನು ಅಳವಡಿಸಿಕೊಂಡಿರುತ್ತಾರೆ.

ಶಿಫಾರಸ್ಸು ಮಾಡಿದ ದ್ವಿದಳ ಧಾನ್ಯ ಉತ್ಪಾದನೆಯ ತಾಂತ್ರಿಕತೆಗಳನ್ನು ಅಳವಡಿಸಲು ಮುಖ್ಯವಾದ ಅಡಚಣೆಗಳೆಂದರೆ "ರೋಗ ಮತ್ತು ಕೀಟಗಳ ಬಾಧೆ", "ಸುಧಾರಿತ ತಳಿಗಳ ಕೊರತೆ", "ಹೆಚ್ಚಿನ ಇಳುವರಿ ನೀಡುವ ತಳಿಗಳಿಗೆ ಹೆಚ್ಚಿನ ಬರ", "ಗ್ರಾಮೀಣ ಪ್ರದೇಶದಲ್ಲಿ ವಿಸ್ತೀರ್ಣ ಕೆಲಸದ ಕೊರತೆ", "ಪರಿಕರಗಳಿಗೆ ಹೆಚ್ಚಿನ ಬರ" ಹಾಗೂ "ತರಬೇತಿ ಕಾರ್ಯಕ್ರಮಗಳು ಸಾಕಷ್ಟು ಇಲ್ಲದಿರುವಿಕೆ" ಇವು ದ್ವಿದಳ ಧಾನ್ಯ ಉತ್ಪಾದನೆಗೆ ಶಿಫಾರಸ್ಸು ಮಾಡಿದ ತಾಂತ್ರಿಕತೆ ಅಳವಡಿಸಿಕೊಳ್ಳುವುದರಲ್ಲಿ ರೈತರಿಗೆ ಮುಖ್ಯವಾದ ಅಡಚಣೆಗಳಾಗಿವೆ.

ಪೀಠಿಕೆ: ಬೇಳೆ ಕಾಳು ಅಥವಾ ದ್ವಿದಳ ಧಾನ್ಯಗಳು ನಮ್ಮ ದಿನನಿತ್ಯದ ಆಹಾರದ ಅವಿಭಾಜ್ಯ ಅಂಗವಾಗಿದ್ದು, ದೇಹದ ಬೆಳವಣಿಗೆಗೆ ಬಹು ಮುಖ್ಯವಾದ ಪ್ರೋಟಿನ್ ಅಂಶ (ಶೇ.20) ರಷ್ಟು ಕೊಡಬಲ್ಲ ಧಾನ್ಯಗಳಾಗಿರುತ್ತವೆ. ಇತರೆ ಏಕದಳ ಧಾನ್ಯಗಳಾದ ಭತ್ತ, ರಾಗಿ, ಗೋಧಿ ಹಾಗೂ ಜೋಳಗಳೊಂದಿಗೆ ದಿನ ನಿತ್ಯದ ಆಹಾರದಲ್ಲಿ ಸಮತೋಲನ ಆಹಾರವನ್ನು ಒದಗಿಸುತ್ತವೆ. ದ್ವಿದಳ ಧಾನ್ಯಗಳು ಏಕದಳ ಧಾನ್ಯಗಳಿಗಿಂತ ಸುಮಾರು ಮೂರು ಪಟ್ಟು ಅಂದರೆ ಶೇ.20 ರಿಂದ 25 ರಷ್ಟು ಸಸಾರಜನಕವನ್ನು ಹೊಂದಿರುವುದರಿಂದ ಅವು ನಮ್ಮ ಆಹಾರದ ಒಂದು ಪ್ರಮುಖ ಅಂಶವಾಗಿದೆ. ಜೊತೆಗೆ ಅವು ಜಾನುವಾರುಗಳಿಗೆ ಮೇವನ್ನು ಒದಗಿಸುವುದರಿಂಧ ಅವುಗಳ ಬೇಸಾಯ ನಮ್ಮ ದೇಶದ ಕೃಷಿ ಪದ್ಧತಿಗಳಲ್ಲಿ ಪ್ರಾಚೀನ ಕಾಲದಿಂದಲೂ ಅಳವಡಿಸಿಕೊಳ್ಳಲಾಗಿದೆ. ಅವಿಭಾಜ್ಯ ಅಂಗವಾಗಿದೆ. ದ್ವಿದಳ ಧಾನ್ಯಗಳ ಆಳವಾದ ಬೇರುಗಳು ಮಣ್ಣಿನ ಆಳದಲ್ಲಿರುವ ತೇವಾಂಶವನ್ನು ಸಮರ್ಥವಾಗಿ ಬಳಸಿಕೊಳ್ಳುವುದರಿಂದ ಮಳೆಯ ಅಭಾವದಲ್ಲೂ ಇಳುವರಿಯನ್ನು ಕೊಡುತ್ತವೆ. ಅಲ್ಲದೆ ಅವುಗಳ ಬೇರುಗಳೊಂದಿಗೆ ಅನ್ಯೋನ್ಯವಾಗಿ ಜೀವಿಸುವ ರೈಜೋಬಿಯಂ ಮತ್ತು ಇತರೆ ಸೂಕ್ಷ್ಮಾಣು ಜೀವಿಗಳು ವಾತಾವರಣದಲ್ಲಿನ ಸಾರಜನಕವನ್ನು ಹೀರಿ ಮಣ್ಣಿನಲ್ಲಿ ಸ್ಥಿರೀಕರಿಸಿ ಗಿಡಕ್ಕೆ ಒದಗಿಸುತ್ತವೆ. ದ್ವಿದಳ ಧಾನ್ಯ ಬೆಳೆಯುವುದರಿಂದ ಭೂಮಿಯ ಫಲವತ್ತತೆ ಹೆಚ್ಚಿಸಲು ಅನುಕೂಲಕರವಾಗಿದೆ. ದ್ವಿದಳ ಧಾನ್ಯಗಳಲ್ಲಿ ಮುಖ್ಯವಾದ ಬೆಳೆಗಳೆಂದರೆ, ಕಡಲೆ, ತೊಗರಿ, ಉದ್ದು, ಹೆಸರು, ಅವರೆ, ಅಲಸಂಧಿ ಮತ್ತು ಹುರುಳಿ.

ರಾಜ್ಯದಲ್ಲಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಕಾಲಗಳಲ್ಲಿ ಬೆಳೆಯುತ್ತಿರುವ ದ್ವಿದಳಧಾನ್ಯ ಬೆಳೆಗಳು ಒಟ್ಟು ವಿಸ್ತೀರ್ಣ 24.91 ಲಕ್ಷ ಹೆಕ್ಟೆಗಳಿದ್ದು ಮತ್ತು ಅವುಗಳ ಉತ್ಪಾದನೆ 16.38 ಲಕ್ಷ ಟನ್‌ಗಳು (2016) ದಿನೇ ದಿನೇ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಬೇಡಿಕೆ ಪೂರೈಸಲು ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿಸುವುದು ಅವಶ್ಯಕವಾಗಿದೆ. ಆದರೆ ಉತ್ಪಾದಕತೆಯು ತುಲನಾತ್ಮಕವಾಗಿ ತುಂಬಾ ಕಡಿಮೆ ಅಂದರೆ ಪ್ರತಿ ಹೆಕ್ಟೆರ್‌ಗೆ 692 ಕಿ.ಗ್ರಾ ಇದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಸುದಾರಿತ ದ್ವಿದಳ ಧಾನ್ಯ ಬೆಳೆ ಉತ್ಪಾದನಾ ತಾಂತ್ರಿಕತೆಯನ್ನು ರೈತ ಸಮುದಾಯದಲ್ಲಿ ಅಳವಡಿಸಿ ಉತ್ಪಾದನೆ ಹೆಚ್ಚಿಸಲು ಈ ಕೆಳಕಂಡ ಉದ್ದೇಶಗಳೊಂದಿಗೆ ಈ ಅಧ್ಯಯನ ಕೈಗೊಂಡು ರೈತರಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಉದ್ದೇಶಗಳು:

1. ಶಿಫಾರಸ್ಸು ಮಾಡಿದ ದ್ವಿದಳ ಧಾನ್ಯ ಬೆಳೆ ಉತ್ಪಾದನಾ ತಾಂತ್ರಿಕತೆಯನ್ನು ರೈತರು ಅಳವಡಿಕೆ ಮಾಡಿದ ಬಗ್ಗೆ ಅಧ್ಯಯನ ಮಾಡುವುದು.

2. ಬೆಳೆ ಉತ್ಪಾದನಾ ತಾಂತ್ರಿಕತೆ ಅಳವಡಿಸಲು ರೈತರಿಗೆ ಎದುರಾಗುವ ಅಡಚಣೆಗಳ ಬಗ್ಗೆ ಅಧ್ಯಯನ ಮಾಡುವುದು

ವಸ್ತುಗಳು ಮತ್ತು ವಿಧಾನಗಳು: ಈ ಅಧ್ಯಯನವನ್ನು 2015–16ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ ಕೈಗೊಳ್ಳಲಾಯಿತು. ಸೊಲೂರು ಮತ್ತು ಕುದೂರು ಹೊಬಳಿಗಳಲ್ಲಿ ಉದ್ದೇಶ ಪೂರ್ವಕವಾಗಿ ದ್ವಿದಳ ಧಾನ್ಯ ಬೆಳೆಯುವ 10 ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಪ್ರತಿ ಗ್ರಾಮದಿಂದ 12 ರೈತರನ್ನು ಗೊತ್ತುಗುರಿಯಿಲ್ಲದ ಮಾದರಿ ಪದ್ಧತಿಯಲ್ಲಿ ಆಯ್ಕೆ ಮಾಡಿಕೊಳ್ಳಲಾಯಿತು. ಮಾಹಿತಿಯನ್ನು

ಸಂದರ್ಶನ ಪಟ್ಟಿಯ ಮೂಲಕ ಸಂಗ್ರಹಿಸಿ, ಸೇನುಗುಪ್ತ (1967) ಅವರ ಕಾರ್ಯವಿಧಾನ ಅನುಸರಿಸಿ ಪ್ರತಿ ರೈತರ ಅಳವಡಿಕೆ ಮಟ್ಟವನ್ನು ಈ ಕೆಳಕಂಡ ಸೂತ್ರದಿಂದ ಅಳತೆಮಾಡಲಾಯಿತು.

$$\text{ಅಳವಡಿಕೆ ಭಾಗಲಬ್ಧ} = \frac{\text{ಅಳವಡಿಕೆಯಲ್ಲಿ ಪ್ರತಿ ರೈತ ಗಳಿಸಿದ ಅಂಕ}}{\text{ಪ್ರತಿ ರೈತರ ಒಟ್ಟು ಅಳವಡಿಕೆ ಅಂಕ}} \times 100$$

ಸಂಗ್ರಹಿಸಿದ ಮಾಹಿತಿಯನ್ನು ಅಂಕಗೊಳಿಸಿ, ಮಾಹಿತಿಯನ್ನು ಕೋಷ್ಟಕ ರೂಪದಲ್ಲಿ ಬರೆದು, ಪ್ರತಿಶತ ಮತ್ತು ಪುನರಾವರ್ತನೆಯೊಂದಿಗೆ ವಿಶ್ಲೇಷಿಸಲಾಯಿತು.

ಫಲತಾಂಶ ಮತ್ತು ಚರ್ಚಿಸುವಿಕೆ / ವಿಚಾರಿಸುವಿಕೆ

ಪ್ರಸ್ತುತ ಅಧ್ಯಯನದ ಫಲತಾಂಶವನ್ನು ಒಟ್ಟು ಅಳವಡಿಕೆ, ಪ್ರತಿಯೊಂದು ಶಿಫಾರಸ್ಸು ಮಾಡಿದ ದ್ವಿದಳ ಧಾನ್ಯಗಳ ಉತ್ಪಾದನಾ ತಾಂತ್ರಿಕತೆ ಅಳವಡಿಕೆ ಮತ್ತು ರೈತರ ಅಳವಡಿಕೆಗೆ ಎದುರಾಗಿರುವ ಅಡಚಣೆಗಳ ಬಗ್ಗೆ ಚರ್ಚಿಸಲಾಯಿತು.

1. **ಒಟ್ಟು ಶಿಫಾರಸ್ಸು ಮಾಡಿದ ಅಳವಡಿಕೆ:** ದ್ವಿದಳ ಧಾನ್ಯ ಉತ್ಪಾದನಾ ತಾಂತ್ರಿಕತೆ ಕೋಷ್ಟಕ–I ರಲ್ಲಿ ತಿಳಿಸಿರುವ ಮಾಹಿತಿ ಪ್ರಕಾರ ಶೇ.45.00 ರಷ್ಟು ರೈತರು ಕೆಳಮಟ್ಟದ ಅಳವಡಿಕೆ ಶೇ.17.50 ರೈತರು ಉನ್ನತ ಮತ್ತು ಶೇ.37.50 ಮಧ್ಯಮ ಅಳವಡಿಕೆ ವರ್ಗಗಳಲ್ಲಿ ಕಂಡು ಬಂದಿರುತ್ತಾರೆ. ಹೆಚ್ಚಿನ ರೈತರು ಕೆಳಮಟ್ಟದ ವರ್ಗದಲ್ಲಿ ಬರಲು ಮುಖ್ಯವಾಗಿ ಅವರ ಕಡಿಮೆ ಆರ್ಥಿಕ ಸಂಪನ್ಮೂಲ ಹೊಂದಿರುವುದು, ತಾಂತ್ರಿಕ ಜ್ಞಾನ ಕಡಿಮೆ, ವಿಸ್ತೀರ್ಣ ವ್ಯಕ್ತಿಗಳ ಜೊತೆ ನೇರ ಸಂಪರ್ಕ ಕಡಿಮೆ ಮತ್ತು ಇತರೆ ಹೊಸಪದ್ಧತಿಗಳು ಅನುಸರಿಸುವುದು ಅತೀ ವಿರಳ.

ಕೋಷ್ಟಕ – I

ರೈತರಿಂದ ಒಟ್ಟು ಸುಧಾರಿತ ದ್ವಿದಳ ಧಾನ್ಯ ಉತ್ಪಾದನಾ ತಾಂತ್ರಿಕತೆ ಅಳವಡಿಕೆ (ಸಂ.120)

ಅಳವಡಿಕೆ ವರ್ಗ	ಒಟ್ಟು ರೈತರ ಸಂಖ್ಯೆ	ಪ್ರತಿಶತ
ಕೆಳ ಮಟ್ಟ	54	45.00
ಮಧ್ಯಮ ಮಟ್ಟ	45	37.50
ಹೆಚ್ಚು	21	17.50
ಒಟ್ಟು	120.00	100.00

2. **ಪ್ರತಿಯೊಂದು ಶಿಫಾರಸ್ಸು ಮಾಡಿದ ದ್ವಿದಳ ಧಾನ್ಯ ಉತ್ಪಾದನಾ ತಾಂತ್ರಿಕತೆ ಅಳವಡಿಕೆ:** ಕೋಷ್ಟಕ–II ರಲ್ಲಿ ಸೂಚಿಸಿದ ಪ್ರಕಾರ ಇಲ್ಲಿ ಗಮನಿಸುವುದೇನೆಂದರೆ, ಎರಡು–ಮೂರು ಅಂಶದಷ್ಟು ರೈತರು (66.660) ಮಡಿಕೆ ಹೊಡಿಯುವುದು ಮತ್ತು ಸಾಗುವಳಿ ಚಟುವಟಿಕೆಗಳನ್ನು ಭೂಮಿ ಸಿದ್ಧತೆ ಪಡಿಸಲು ಅಳವಡಿಸಿರುತ್ತಾರೆ, ಶೇಕಡಾ ಕಡಿಮೆ ಪ್ರಮಾಣದಲ್ಲಿ (33.33) ಬಿತ್ತನೆಗೆ ಬೇಕಾಗುವ ಬೀಜ, (25.00) ಸುಧಾರಿತ ತಳಿ (16.66) ಮಣ್ಣು ಪರೀಕ್ಷೆಗೊತ್ತುವಳಿ, ಹಾಗೂ (15.00) ಶಿಫಾರಸ್ಸು ಮಾಡಿದ ಸಸ್ಯ ನಿಬಿಡತೆಯನ್ನು ಅಳವಡಿಕೆ ಮಾಡಿಕೊಂಡಿರುತ್ತಾರೆ. ಇದಕ್ಕೆ ಮುಖ್ಯ ಕಾರಣ ಈ ಶಿಫಾರಸ್ಸು ಮಾಡಿದ ತಾಂತ್ರಿಕತೆಯು ಮಹತ್ವ

ಕೋಷ್ಟಕ – II ಪ್ರತಿಯೊಂದು ಸುಧಾರಿತ ದ್ವಿದಳ ಧಾನ್ಯ ಉತ್ಪಾದನೆ ತಾಂತ್ರಿಕತೆ ಅಳವಡಿಕೆ:

(ಸಂ.120)

ಕ್ರ. ಸಂ	ತಾಂತ್ರಿಕತೆ/ಪದ್ಧತಿಗಳು	ರೈತರ ಸಂಖ್ಯೆ	ಪ್ರತಿಶತ
1.	ಭೂಮಿ ಸಿದ್ಧತೆ	80	66.66
2.	ಮಣ್ಣು ಪರೀಕ್ಷೆ ಕ್ರಮ	20	16.66
3.	ಸುಧಾರಿತ ತಳಿಗಳು	30	25.00
4.	ಬಿತ್ತುವ ವೇಳೆ	75	62.50
5.	ಬಿತ್ತುಲಕ್ಕೆ ಬೇಕಾಗುವ ಬೀಜ	40	33.33
6.	ಬೀಜೋಪಚಾರ	15	12.50
7.	ಬೀಜ ಬಿತ್ತುವ ಪದ್ಧತಿ	70	58.33
8.	ಕೊಟ್ಟಿಗೆ ಗೊಬ್ಬರ ನೀಡುವುದು	68	56.66
9.	ರಾಸಾಯನಿಕ ಗೊಬ್ಬರ ನೀಡುವುದು(ಎನ್.ಪಿ.ಕೆ)	60	50.00
10.	ಶಿಫಾರಸ್ಸು ಮಾಡಿದ ಸಸ್ಯ ನಿಬಿಡತೆ ಕಾಯ್ದುಕೊಳ್ಳುವುದು	18	15.00
11.	ಅಂತರ ಬೇಸಾಯ ವೇಳೆ	63	52.50
12.	ಕಳೆ ತೆಗೆಯುವ ವೇಳೆ	62	51.66
13.	ಕಳೆ ನಾಶಕಗಳ ಉಪಯೋಗ	0.0	0.00
14.	ಸಸ್ಯಗಳ ಬುಡಕ್ಕೆ ಮಣ್ಣು ಏರಿಸುವುದು	13	10.83
15.	ಸಸ್ಯ ಸಂರಕ್ಷಣಾ ಕ್ರಮ	25	20.83

3. ಬಿತ್ತುವ ವೇಳೆ (62.50%), ಬಿತ್ತುವ ಪದ್ಧತಿ (58.33%) ಕೊಟ್ಟಿಗೆ ಗೊಬ್ಬರ ಹಾಕುವಿಕೆ (56.65%) ಅಂತರ ಬೇಸಾಯ ವೇಳೆ (52.50%) ಕಳೆ ನಿಯಂತ್ರಣ ವೇಳೆ (51.66%) ಶಿಫಾರಸ್ಸು ಮಾಡಿದ ತಾಂತ್ರಿಕತೆಗಳನ್ನು ಅಳವಡಿಸಿಕೊಂಡಿರುತ್ತಾರೆ. ಇದಕ್ಕೆ ಮುಖ್ಯ ಕಾರಣ ತೊಗರಿ ಒಂದೇ ಈ ಪ್ರದೇಶದ ಮುಖ್ಯ ವಾಣಿಜ್ಯ ಬೆಳೆಯಾಗಿರುವುದರಿಂದ ಹೆಚ್ಚಿನ ರೈತರು ಉತ್ಪಾದನೆ ಹೆಚ್ಚು ಪಡೆಯಲು ತಾಂತ್ರಿಕತೆಯಲ್ಲಿ ಅಳವಡಿಸಲು ಹೆಚ್ಚಿನ ಆಸಕ್ತಿಯುಳ್ಳವರಾಗಿದ್ದಾರೆ.

ಕಳೆನಾಶಕ ಉಪಯೋಗ (100%) ಸಸ್ಯಗಳ ಬುಡಕ್ಕೆ ಮಣ್ಣು ಏರಿಸುವಿಕೆ (89.17%) ಬೀಜೋಪಚಾರ (87.50%) ಸಸ್ಯ ಸಂರಕ್ಷಣಾ ಕ್ರಮ (79.17%) ಹೆಚ್ಚಿನ ಪ್ರಮಾಣದ ರೈತರು ಈ ದ್ವಿದಳ ಧಾನ್ಯ ಬೆಳೆ ಉತ್ಪಾದನಾ ತಾಂತ್ರಿಕತೆಗಳು ಅಳವಡಿಸಿಕೊಂಡಿರುವುದಿಲ್ಲ. ಕಾರಣ, ಪರಿಕರಗಳ ದರ ಹೆಚ್ಚಳ ಮತ್ತು ಪರಿಕರಗಳ ಸರಿಯಾದ ವೇಳೆಯಲ್ಲಿ ಲಭ್ಯತೆಯಿರುವುದಿಲ್ಲ, ಕೂಲಿ ಕಾರ್ಮಿಕರು ದರ ಹೆಚ್ಚಾಗಿದ್ದು, ಮತ್ತು ಸರಿಯಾದ

ವೇಳೆಯಲ್ಲಿ ಲಭ್ಯತೆಯಿರುವುದಿಲ್ಲ ಹಾಗೂ ರೋಗ ಮತ್ತು ಕೀಟ ಬಾಧೆ ಗುರುತಿಸುವ ಕೌಶಲ್ಯದ ಕೊರತೆ ಇವು ಅತೀ ಕಡಿಮೆ ಪ್ರಮಾಣದಲ್ಲಿ ಅಳವಡಿಕೆ ಮಾಡಿಕೊಂಡಿರುತ್ತಾರೆ.

ರೈತರಿಗೆ ಎದುರಾಗಿರುವ ಅಡಚಣೆಗಳು: ರೋಗ ಮತ್ತು ಕೀಟ ಬಾಧೆ ಬಹು ಮುಖ್ಯವಾದ ಸಮಸ್ಯೆಯೆಂದು ಸುಮಾರು ಶೇಕಡಾ 71.66 ರೈತರು ಅಭಿಪ್ರಾಯ ಪಟ್ಟಿದ್ದಾರೆ (ಕೋಷ್ಟಕ–ಖಖಖ). ಮುಖ್ಯವಾದ ಕೀಟಗಳೆಂದರೆ ಗೂಡು ಮಾರು ಹುಳ, ಕಾಯಿಕೊರಕ ಹುಳು, ಸೊರಗು ರೋಗ ಮತ್ತು ಬಂಜೆ ರೋಗ ಸಾಮಾನ್ಯವಾಗಿ ತೊಗರಿ ಬೆಳೆಯಲ್ಲಿ ಕಂಡುಬರುತ್ತವೆ. ಮಾರುಕಟ್ಟೆಯಲ್ಲಿ ಫಲಕಾರಿಯಾದ / ಪರಿಣಾಮಕಾರಿಯುಳ್ಳ ಕೀಟ ನಾಶಕ ಲಭ್ಯತೆ ಕೊರತೆ, ಮತ್ತು ಅವುಗಳ ದರ ತುಂಬಾ ಜಾಸ್ತಿ ಹಾಗೂ ಸರಿಯಾದ ಔಷಧಿಯ ಪ್ರಮಾಣವನ್ನು ಸಿಂಪಡಿಸುವ ಪರಿಜ್ಞಾನ ತೀರ ವಿರಳ ಇವು ರೈತರಿಗೆ ಎದುರಾಗಿರುವ ತೊಂದರೆಗಳು. ಸುಧಾರಿತ ತಳಗಳ ಲಭ್ಯತೆಯಿಲ್ಲವೆಂದು ಶೇ. 67.50 ರಷ್ಟು ರೈತರ ಅಭಿಪ್ರಾಯ ಪಡುತ್ತಿದ್ದಾರೆ. ಸ್ಥಳೀಯ ಕೃಷಿ ಕಛೇರಿಗಳಲ್ಲಾಗಲಿ ಅಥವಾ ಕೃಷಿ ಕೇಂದ್ರಗಳಲ್ಲಿ ಸೂಕ್ತ ವೇಳೆಯಲ್ಲಿ ಸುಧಾರಿತ ತಳಗಳ ಲಭ್ಯತೆ ಇಲ್ಲದಿರುವುದು ಮುಖ್ಯತೊಂದರೆಯಾಗಿದೆ.

ಹೆಚ್ಚಿನ ಇಳುವರಿಯ ಸುಧಾರಿತ ತಳಗಳ ಬೀಜದ ದರ ತುಂಬಾ ಹೆಚ್ಚು ಶೇ.65.83 ರಷ್ಟು ರೈತರು ತಮ್ಮ ತೊಂದರೆ ಹಂಚಿಕೊಂಡಿರುತ್ತಾರೆ. ಈ ತಳಗಳು ಸರ್ಕಾರಿ ಆಶ್ರಯದ ಸಂಸ್ಥೆಗಳಲ್ಲಿ ಬೆಳೆಯುವುದರಿಂದ ಮತ್ತು ಅವುಗಳ ಬೀಜೋತ್ಪಾದನೆಗೆ ತಗಲುವ ವೆಚ್ಚ ಹೆಚ್ಚಿಗಿರುವುದರಿಂದ ಅದರಂತೆ ಬೀಜದ ದರ ಹೆಚ್ಚಾಗಿರುವುದೇ ಇದಕ್ಕೆ ಕಾರಣವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪರಿಣಾಮಕಾರಿಯ ವಿಸ್ತೀರ್ಣ ಕೆಲಸದ ಕೊರತೆ ಶೇ.63.33ರಷ್ಟು ಗೋಚರಿಸುವುದು ರೈತಾಪಿ ಜನಗಳಲ್ಲಿ ಮುಖ್ಯ ತೊಂದರೆಯಾಗಿದೆ. ಇದಕ್ಕೆ ಮುಖ್ಯ ಕಾರಣ ಸ್ಥಳೀಯ ವಿಸ್ತೀರ್ಣ ಸಿಬ್ಬಂದಿಯು ರೈತರೊಡನೆ ನಿಕಟ ಸಂಬಂಧವಿಲ್ಲದಿರುವಿಕೆ ಹಾಗೂ ಹೊಸ ತಾಂತ್ರಿಕತೆ ಪರಿಚಯಿಸದೇ ಇರುವುದು.

ಪರಿಕರ ಬೆಲೆಗಳು ತುಂಬಾ ಜಾಸ್ತಿ, ಶೇ.62.50 ರೈತರು ಎದುರಿಸುವ ಒಂದು ಮುಖ್ಯ ತೊಂದರೆಯಾಗಿದೆ. ವರ್ತಕರು ಬೀಜ, ಗೊಬ್ಬರ ಇತ್ಯಾದಿ ಪರಿಕರಗಳನ್ನು ಬಿತ್ತುವ ವೇಳೆಯಲ್ಲಿ ಹೆಚ್ಚಿನ ದರಗಳಿಗೆ ಮಾರಾಟ ಮಾಡುವುದರಿಂದ ರೈತರು ಖರೀದಿಸುವಲ್ಲಿ ವಂಚಿತರಾಗಿರುತ್ತಾರೆ. ಲಕ್ಷ್ಮನಾರಾಯಣ (2003) ರಲ್ಲಿ ನೀಡಿರುವ ವರದಿ ಇದೇ ರೀತಿಯಿದೆ.

ಸಾಕಷ್ಟು ತರಬೇತಿ ಕಾರ್ಯಕ್ರಮಗಳಿಲ್ಲದಿರುವುದು (ಶೇ.58.33) ಪರಿಕರಗಳಿಗೆ ಸಹಾಯಧನ ಇಲ್ಲದಿರುವದು (ಶೇ.57.50) ಸಾಲ ಸೌಲಭ್ಯದ ಕೊರತೆ (ಶೇ.54.16) ಫಸಲು ಮಾರಲು ಮಾರುಕಟ್ಟೆ ಸೌಲಭ್ಯದ ಕೊರತೆ (51.66%) ತಾಂತ್ರಿಕತೆ ಪರಿಜ್ಞಾನದ ಕೊರತೆ (50.00) ಸಂಬಂಧಪಟ್ಟ ತಾಂತ್ರಿಕತೆಗಳ ಲಭ್ಯತೆಯಿಲ್ಲದಿರುವುದು (ಶೆ.49.16) ಹಾಗೂ ಸುದ್ದಿ, ಸಮಾಚಾರ ಸೌಲಭ್ಯದ ಕೊರತೆ (ಶೇ.33.33) ದ್ವಿದಳ ಧಾನ್ಯ ಉತ್ಪಾದನಾ ತಾಂತ್ರಿಕತೆ ಅಳವಡಿಸುವಲ್ಲಿ ರೈತರು ಎದುರಿಸುವ ಪ್ರಮುಖ ಅಡಚಣೆಗಳಾಗಿವೆ.

ಕೋಷ್ಟಕ – III ರೈತರಿಗೆ ಸುಧಾರಿತ ದ್ವಿದಳ ಧಾನ್ಯ ಉತ್ಪಾದನೆಯಲ್ಲಿ ತಾಂತ್ರಿಕತೆ ಅಳವಡಿಸುವಾಗ ಎದುರಾಗಿರುವ ಅಡಚಣೆಗಳು:

(ಸಂ.120)

ಕ್ರ. ಸಂ	ಅಡಚಣೆಗಳು	ರೈತರ ಸಂಖ್ಯೆ	ಪ್ರತಿಶತ	ಶ್ರೇಣಿ
1.	ಸುಧಾರಿತ ತಳಗಳ ಕೊರತೆ	81	67.50	II
2.	ಸುಧಾರಿತ ತಳಗಳ ಬೀಜವು ಹೆಚ್ಚಿನ ದರವುಳ್ಳದ್ದಾಗಿವೆ	79	65.83	III
3.	ರೋಗ ಮತ್ತು ಕೀಟಗಳ ಬಾಧೆ	86	71.66	I
4.	ಪರಿಕರಗಳ ದರ ತುಂಬಾ ಜಾಸ್ತಿ	75	62.50	V
5.	ಸಾಲ ಸೌಲಭ್ಯದ ಕೊರತೆ	65	54.16	VIII
6.	ಪರಿಕರಗಳಿಗೆ ಪ್ರೋತ್ಸಾಹ ಧನದ ಕೊರತೆ	69	87.50	VII
7.	ಸಂಬಂಧಪಟ್ಟ ತಾಂತ್ರಿಕತೆಗಳ ಅಲಭ್ಯತೆ/ಕೊರತೆ	59	49.16	XI
8.	ತಾಂತ್ರಿಕತೆಗಳ ಪರಿಜ್ಞಾನದ ಕೊರತೆ	60	50.00	X
9.	ಗ್ರಾಮೀಣ ಪ್ರದೇಶದಲ್ಲಿ ಪರಿಣಾಮಕಾರಿ ವಿಸ್ತೀರ್ಣ ಶಿಕ್ಷಣದ ಕೊರತೆ	76	63.33	IV
10.	ಸರ್ಕಾರದಿಂದ ಮಂಜೂರಾದ ಯೋಜನೆಗಳ ಸಹಾಯ ಸೌಲಭ್ಯಗಳ ಪರಿಜ್ಞಾನದ ಕೊರತೆ	58	48.33	XII
11.	ತರಬೇತಿ ಕಾರ್ಯ ಕ್ರಮಗಳು ಸಾಕಷ್ಟು ಇಲ್ಲದಿರುವಿಕೆ	70	58.33	VI

12.	ಮಾಹಿತಿ ಸಮಾಚಾರಗಳ ಕೊರತೆ	40	33.33	XIII
13.	ಫಸಲು ಮಾರಾಟ ಮಾಡಲು ಮಾರುಕಟ್ಟೆ ಸೌಲಭ್ಯದ ಕೊರತೆ	62	51.66	IX

ಉಪಸಂಹಾರ / ಉಹೆ: ಹೆಚ್ಚಿನ ಪ್ರಮಾಣದ ರೈತಾಪಿ ಜನರು ಶಿಫಾರಸ್ಸು ಮಾಡಿದ ದ್ವಿದಳ ಧಾನ್ಯ ಉತ್ಪಾದನಾ ತಾಂತ್ರಿಕತೆಗಳನ್ನು ಕೆಳಮಟ್ಟದ ಪ್ರಮಾಣದಲ್ಲಿ ಅಳವಡಿಕೆಯುಳ್ಳವರಾಗಿದ್ದಾರೆ. ಕಳೆನಾಶಕ ಸಿಂಪರಣೆ, ಗಿಡಗಳಿಗೆ ಮಣ್ಣು ಏರಿಸುವಿಕೆ, ಬೀಜೋಪಚಾರ, ಮಣ್ಣು ಪರೀಕ್ಷೆ ಕ್ರಮ, ಸಸ್ಯ ನಿಬಿಡತೆ ಕಾಯ್ದುಕೊಳ್ಳುವುದು ಮತ್ತು ಸಸ್ಯ ಸಂರಕ್ಷಣೆ ಕ್ರಮಗಳನ್ನು ಹೆಚ್ಚಿನ ರೈತರು ಅಳವಡಿಸಿಕೊಂಡಿರುವುದಿಲ್ಲ. ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿಸಲು ಇವು ಕಷ್ಟದಾಯಕ ಮತ್ತು ಅಗತ್ಯವಾಗಿರುವ ತಾಂತ್ರಿಕತೆಗಳಾಗಿವೆ. ವಿಸ್ತೀರ್ಣ ಸಿಬ್ಬಂದಿಯು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಆಸಕ್ತಿ ಹೊಂದಿ ಪರಿಕರ ಪೂರೈಸುವುದು, ಶಿಕ್ಷಣ ಚಟುವಟಿಕೆಗಳು ಕಾರ್ಯಗತಗೊಳಿಸುವುದು, ಅವಶ್ಯಕವಾಗಿದೆ. ಇದರಿಂದ ದ್ವಿದಳ ಧಾನ್ಯ ಉತ್ಪಾದನೆ ರೈತರ ಕೌಶಲ್ಯ ಮತ್ತು ಪರಿಜ್ಞಾನ ಹೆಚ್ಚಾದಾಗ ಶಿಫಾರಸ್ಸು ಮಾಡಿದ ತಾಂತ್ರಿಕತೆಗಳನ್ನು ಅಳವಡಿಸಲು ಅನುಕೂಲವಾಗುತ್ತದೆ. ಇದರಿಂದ ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿ ನಿರೀಕ್ಷಿಸಬಹುದಾಗಿದೆ.

ಆಧಾರ:

1. ಲಕ್ಷ್ಮೀನಾರಾಯಣ. ಎಂ.ಟಿ., 2003 – ರೈತಾಪಿ ಜನರಿಂದ ಸುಸ್ತಿರ ಕಬ್ಬಿನ ತಾಂತ್ರಿಕತೆ ಅಳವಡಿಕೆ – ಮೈಸೂರು ನಿಯತಕಾಲಿಕ ಕೃಷಿ ವಿಜ್ಞಾನ ಪತ್ರಿಕೆ. 39(3); 23-26

2. ಸೇನು ಗುಪ್ತ. ಟಿ: 1967 – ಭತ್ತದ ಹೆಚ್ಚಿನ ಇಳುವರಿಯ ಕಾರ್ಯಕ್ರಮಕ್ಕಾಗಿ ಸುಲಭ ಅಳವಡಿಕೆ ಪ್ರಮಾಣ ರೈತರಿಂದ ಆಯ್ಕೆ ಮಾಡುವುದು. ಭಾರತೀಯ ವಿಸ್ತೀರ್ಣ ಶಿಕ್ಷಣ ನಿಯತಕಾಲಿಕ ಪತ್ರಿಕೆ. 3:107-115

3. ಸಿಂಘ್.ಪಿ ಮತ್ತು ಸಿಂಘ್. ಕೆ, 2002- ಅಗಸೆ ಮತ್ತು ಸಾಸಿವೆ ಸಾಗುವಳಿ ತಾಂತ್ರಿಕತೆಯಲ್ಲಿ ಅಂತರ ಕಂಡುಕೊಳ್ಳುವುದು. ಮಹಾರಾಷ್ಟ್ರ ವಿಸ್ತೀರ್ಣ ಶಿಕ್ಷಣ ನಿಯತಕಾಲಿಕ ಪತ್ರಿಕೆ. 21(1): 55-58

ಯಾಂತ್ರೀಕೃತ ಭತ್ತದ ಕೃಷಿ-ಮುಂಚೂಣಿ ಪ್ರಾತ್ಯಕ್ಷಿಕೆ ಮುಖಾಂತರ ತಂತ್ರಜ್ಞಾನ ವರ್ಗಾವಣೆ

ಶ್ರೀ ಹರೀಶ್ ಶೆಣೈ
ವಿಷಯ ತಜ್ಞರು(ಬೇಸಾಯಶಾಸ್ತ್ರ), ಐಸಿಎಆರ್- ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ, ಕಂಕನಾಡಿ ಮಂಗಳೂರು-575002
ಮಿಂಚಂಚೆ: harish.shenoy1@gmail.com (ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್‌ನ ಅಧೀನದ ಸಂಸ್ಥೆ)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತಪ್ರಮುಖ ಆಹಾರ ಬೆಳೆಯಾಗಿದ್ದು ಸುಮಾರು 55366 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಇತೀಚಿನ ದಿನಗಳಲ್ಲಿ ಕೂಲಿ ಆಳುಗಳ ಸಮಸ್ಯೆಯಿಂದ ಭತ್ತದ ಕೃಷಿ ಕ್ಷೇತ್ರ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದು, ಒಂದು ಆತಂಕಕಾರಿ ಸಂಗತಿಯಾಗಿದೆ. ಸ್ಥಳೀಯ ಆಹಾರ ಸುರಕ್ಷತೆಯ ದೃಷ್ಟಿಯಿಂದ ಇದರಾದ ಸನ್ನಿವೇಶಕ್ಕೆ, ಭತ್ತದ ಕೃಷಿಯಿಲ್ಲಿ ಯಾಂತ್ರೀಕರಣತೆ ಅಳವಡಿಸಿ ಭತ್ತದ ಕೃಷಿಯನ್ನು ಲಾಭದಾಯಕವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಮಂಗಳೂರಿನ ಕೃಷಿ ವಿಜ್ಞಾನ ಕೇಂದ್ರವು 4 ವರ್ಷದ ಅವಧಿಯಲ್ಲಿ(2011-12 ರಿಂದ 2014-15) ಜಿಲ್ಲೆಯ 24 ಗ್ರಾಮಗಳಲ್ಲಿ ರೈತರ ಪಾಲ್ಗೊಗೀತ್ವದಲ್ಲಿ 21.0 ಹೆಕ್ಟೇರ್ ಪ್ರದೇಶದಲ್ಲಿ ಯಾಂತ್ರೀಕೃತ ಭತ್ತದ ಕೃಷಿಯ 44 ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ನಿರ್ವಹಿಸಿತು. ಚಾಪೆನೇಜಿ ಸಸಿ ಮಡಿ ವಿಧಾನ, ಯಾಂತ್ರೀಕೃತ ಭತ್ತದ ನಾಟಿ ಮತ್ತು ಕೋನೋವೀಡರ್ ಬಳಕೆಯ ಕುರಿತು ರೈತರಿಗೆ 06 ತರಬೇತಿಗಳು ಹಾಗೂ 24 ಪದ್ಧತಿ ಪ್ರಾತ್ಯಕ್ಷಿಕೆ ಮುಖಾಂತರ ತಂತ್ರಜ್ಞಾನವನ್ನು ರೈತರಿಗೆ ವರ್ಗಾಯಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 1196 ರೈತರು ಭಾಗವಹಿಸಿ ತಂತ್ರಜ್ಞಾನದ ಪ್ರಯೋಜನವನ್ನು ಪಡೆದುಕೊಂಡರು. ಮುಂಚೂಣಿ ಪ್ರಾತ್ಯಕ್ಷಿಕೆಯ ಪರಿಣಾಮವಾಗಿ ಭತ್ತದಲ್ಲಿ ಶೇಕಡ 19.6 ರಷ್ಟು ಇಳುವರಿ ಹೆಚ್ಚಿಗೆ ಪಡೆಯಲಾಯಿತು ಹಾಗೂ ಸರಾಸರಿ ಕೂಲಿ ವೆಚ್ಚ ರೂ.6362/- ಪ್ರತಿ ಹೆಕ್ಟೇರ್‌ಗೆ ಉಳಿತಾಯವಾದರೆ ಉತ್ಪಾದನಾ ಲಾಭ ಸರಾಸರಿ ರೂ.16694/- ಪ್ರತಿ ಹೆಕ್ಟೇರ್‌ಗೆ ಪಡೆಯಲಾಯಿತು.

ಪೀಠಿಕೆ : ಭತ್ತ ಕರಾವಳಿ ಪ್ರದೇಶದ ಪ್ರಮುಖ ಆಹಾರ ಬೆಳೆಯಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸುಮಾರು 55366 ಹೆಕ್ಟೇರ್ ಪ್ರದೇಶದಲ್ಲಿ(2013-14) ಬೆಳೆಯಲಾಗುತ್ತಿದೆ. ಭತ್ತವನ್ನು ಬೆಟ್ಟು (upland), ಮಜಲು (midand) , ಬಯಲು (lowand) ಮುಂತಾದ ಸನ್ನಿವೇಶದಲ್ಲು ಹಾಗೂ ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ ಬೆಳೆದುಕೊಂಡು ಬರಲಾಗುತ್ತಿದೆ. ಭತ್ತದಲ್ಲಿ ಅಧಿಕ ಇಳುವರಿ ಪಡೆಯಲು ಉತ್ತಮ ಹವಾಮಾನ ವಾರ್ಷಿಕ ಮಳೆ, ಮಣ್ಣು ಮುಂತಾದ ಅನುಕೂಲಕರವಾದ ವಾತಾವರಣವಿದ್ದರೂ ಸಹ ಕೂಲಿ ಕಾರ್ಮಿಕರ ಸಮಸ್ಯೆ, ಹೆಚ್ಚಿನ ಕೂಲಿ, ಏರುತ್ತಿರುವ ಕೃಷಿ ಪರಿಕರಗಳ ಬೆಲೆ , ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ ಮುಂತಾದ ಕಾರಣಗಳಿಂದ ವರ್ಷದಿಂದ ವರ್ಷಕ್ಕೆ, ಭತ್ತದ ಕೃಷಿ ಕ್ಷೇತ್ರ ಕಡಿಮೆಯಾಗುತ್ತಿರುವುದು ಒಂದು ಆತಂಕಕಾರಿ ಸಂಗತಿಯಾಗಿದೆ. ಇದರಿಂದ ಭತ್ತ ದ ಕೃಷಿಯ ಕ್ಷೇತ್ರ 1999-2000 ದಲ್ಲಿದ 66438 ಹೆಕ್ಟೇರ್ ಪ್ರದೇಶ

2011–12 ರಲ್ಲಿ 55166 ಹೆಕ್ಟೇರ್ ಪ್ರದೇಶಕ್ಕೆ ಇಳಿದಿರುತ್ತದೆ. ಇದು ಶೇಕಡ 17 ರಷ್ಟು ಕಡಿಮೆ. ಆದರೆ ಸ್ಥಳೀಯ ಆಹಾರ ಸುರಕ್ಷತೆಯ ದೃಷ್ಟಿಯಿಂದ ಭತ್ತದ ಕೃಷಿಯನ್ನು ಮುಂದುವರಿಸಿಕೊಂಡು ಹೋಗುವುದು ಅನಿವಾರ್ಯ ಮಾತ್ರವಲ್ಲದೆ ಅವಶ್ಯಕತೆಯು ಹೌದು. ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಅಭಿವೃದ್ಧಿಯಾದ ನೂತನ ತಾಂತ್ರಿಕತೆಯನ್ನು ಬಳಸಿ ಸೂಕ್ತ ಬೇಸಾಯ ಕ್ರಮಗಳನ್ನು ಭತ್ತದ ಕೃಷಿಯಲ್ಲಿ ಅಳವಡಿಸುವುದರಿಂದ ಅಧಿಕ ಇಳುವರಿ ಪಡೆಯುವುದು ಮಾತ್ರವಲ್ಲದೆ ಭತ್ತದ ಕೃಷಿಯನ್ನು ಲಾಭದಾಯಕವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿದೆ(ವಿಧಾನ ಸಿಂಗ್ ಮತ್ತು ಇತರರು 2012) ಭತ್ತದ ಕೃಷಿಯಲ್ಲಿ ಯಂತ್ರಗಳನ್ನು ಬಳಕೆ ಮಾಡಿ ಕೂಲಿ ಖರ್ಚಿನ್ನು ಉಳತಾಯ ಮಾಡುವುದಲ್ಲದೆ, ಸಮಯಕ್ಕೆ ಸರಿಯಾಗಿ ಕೃಷಿ ಕಾರ್ಯಗಳನ್ನು ಕೈಗೊಂಡು ಹೆಚ್ಚಿನ ಇಳುವರಿ ಪಡೆದು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರವು ಭತ್ತದ ಕೃಷಿಯಲ್ಲಿ ಸೂಕ್ತ ಯಂತ್ರೋಪಕರಣಗಳನ್ನು ಬಳಕೆಯ ಕುರಿತು ಜಿಲ್ಲೆಯಲ್ಲಿ ಮೂಂಚೂಣಿ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿ ರೈತರಲ್ಲಿ ಜಾಗೃತಿ ಮೂಡಿಸುತ್ತಿದೆ.

ವಸ್ತು ಮತ್ತು ಅನುಷ್ಠಾನದ ವಿಧಾನಗಳು: ಕೃಷಿ ವಿಜ್ಞಾನ ಕೇಂದ್ರವು ರೈತರ ಸಹಭಾಗಿತ್ವದಲ್ಲಿ ಗುಚ್ಚಗ್ರಾಮದಲ್ಲಿ ಭತ್ತದ ಕೃಷಿಯಲ್ಲಿ ಯಂತ್ರೋಪಕರಣಗಳ ಭಳಕೆಯ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿತು. ಸೀಮಿತ ಯಂತ್ರೋಪಕರಣಗಳ ಭಳಕೆಯ ಅಂಗವಾಗಿ ನಾಟಿ ಯಂತ್ರ ಭಳಕೆ ಹಾಗೂ ಕಳೆ ನಿಯಂತ್ರಣಕ್ಕಾಗಿ ಕೋನೊವೀಡರ್ ಯಂತ್ರ ಭಳಕೆ ಕುರಿತು ತಂತ್ರಜ್ಞಾನವನ್ನು ವರ್ಗಾವಣೆ ಮಾಡಿತು. ನಾಲ್ಕು ವರ್ಷದ ಅವಧಿಯಲ್ಲಿ ಅಂದರೆ 2011–12 ರಿಂದ 2014–15 ಸಾಲಿನವರೆಗೆ ಕೃಷಿ ವಿಜ್ಞಾನ ಕೇಂದ್ರವು ದಕ್ಷಿಣ ಕನ್ನಡ ಜಿಲ್ಲೆಯ 24 ಗ್ರಾಮಗಳಲ್ಲಿ ಒಟ್ಟು 44 ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು 21 ಹೆಕ್ಟೇರ ಪ್ರದೇಶದಲ್ಲಿ ಏರ್ಪಡಿಸಿತು. ತಂತ್ರಜ್ಞಾನ ವರ್ಗಾವಣೆಯ ಅಂಗವಾಗಿ ಗುಚ್ಚ ಗ್ರಾಮಗಳ ರೈತರಿಗೆ 6 ತರಬೇತಿಗಳನ್ನು ಏರ್ಪಡಿಸಲಾಗಿತ್ತು. ಚಾಪೆ ನೇಜಿ ವಿಧಾನ ಹಾಗೂ ಯಾಂತ್ರೀಕೃತ ಭತ್ತದ ನಾಟಿಯ ಕುರಿತು 25 ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ರೈತರ ಕೃಷಿ ಕ್ಷೇತ್ರದಲ್ಲಿ ನಡೆಸಲಾಯಿತು. ಕಾಲ ಕಾಲಕ್ಕೆ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಕ್ಷೇತ್ರ ಬೇಟಿ ನೀಡಿ ರೈತರಿಗೆ ಸೂಕ್ತ ಸಲಹೆ ಸೂಚನೆ ನೀಡಿದರು. ಅಂತಿಮವಾಗಿ ಮುಂಚೂಣಿ ಪ್ರಾತ್ಯಕ್ಷಿಕೆ ಕಾರ್ಯಕ್ರಮದಡಿಯಲ್ಲಿ ಬೆಳೆಸಿದ ಭತ್ತದ ಬೆಲೆಯ ಕಟಾವನ್ನು ಯಂತ್ರದ ಮೂಲಕ ನಡೆಸಿ ಕ್ಷೇತ್ರೋತ್ಸವ ಕಾರ್ಯಕ್ರಮದೊಂದಿಗೆ ಸಮಾಪನಗೊಂಡಿತು. ಈ ಎಲ್ಲಾ ಕಾರ್ಯಕ್ರಮದಲ್ಲಿ ಜಿಲ್ಲೆಯ ಒಟ್ಟು 1196 ರೈತಭಾಂದವರು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

ಪರಿಣಾಮ ಮತ್ತು ಚರ್ಚೆ : ಭತ್ತದ ಕೃಷಿಯಲ್ಲಿ ಸೀಮಿತವಾಗಿ ಯಂತ್ರೋಪಕರಣಗಳನ್ನು ಬಳಸುವುದರಿಂದ ಕೃಷಿ ಕಾರ್ಯ ಗಳಾದ ಸಸಿ ನಾಟಿ ಮತ್ತು ಕಳೆ ನಿಯಂತ್ರಣವನ್ನು ಸಮರ್ಪಕವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಮಾಡಲು ಸಾಧ್ಯ ಎಂದು ಮುಂಚೂಣಿ ಪ್ರಾತ್ಯಕ್ಷಿಕೆಯಿಂದ ರೈತರಿಗೆ ಸಾಬೀತಾಯಿತು. ಮುಂಚೂಣಿ ಪ್ರಾತ್ಯಕ್ಷಿಕೆಯ ಪರಿಣಾಮವನ್ನು ಕೋಷ್ಟಕ 1 ರಲ್ಲಿ ವಿವರಿಸಲಾಗಿದೆ. ಅದರಂತೆ ನಾಲ್ಕು ವರ್ಷದ ಅವಧಿಯಲ್ಲಿ ಮುಂಚೂಣಿ ಪಾತ್ಯಕ್ಷಿಕೆಯ ತಾಕಿನಲ್ಲಿ ಭತ್ತದ ಸರಾಸರಿ ಇಳುವರಿ ಸರಾಸರಿ 40.67 ಕ್ವಿಂಟಾಲ್/ಹೆಕ್ಟೇರೆಗೆ ದಾಖಲಾಯಿತು. ಇದು ಸಂಪ್ರಾದಾಯಿಕ ಪದ್ಧತಿಯಲ್ಲಿ ಬೆಳೆಸಿದ ಭತ್ತದ ಇಳುವರಿ (34.0 ಕ್ವಿಂಟಾಲ್/ಹೆಕ್ಟೇರೆಗೆ) ಹೋಲಿಸಿದಾಗ ಶೇಕಡ 19.6ರ ರಷ್ಟು ಹೆಚ್ಚಿಗೆ ಕಂಡು ಬಂತು. ಹೆಚ್ಚಿನ ಇಳುವರಿಯು ಸರಿಯಾದ ಸಮಯಲ್ಲಿ ನಾಟಿ, ಸಸಿಯ ಸರಿಯಾದ ವಯಸ್ಸಿನಲ್ಲಿ ನಾಟಿ ಹಾಗೂ ಸಾಲು ನಾಟಿಯಿಂದ ಕೋನೊವೀಡರ್ ಯಂತ್ರ ಭಳಕೆಯ ಮುಖಾಂತರ ಕಳೆಗಳ ಸಮರ್ಪಕ ನಿಯಂತ್ರಣ ಮುಂತಾದ ಕಾರಣಗಳಿಂದ ಕಂಡುಬಂತು. ಇದೇ ರೀತಿಯ ಪರಿಣಾಮವನ್ನು ಶ್ರೀ ಸಜೀನ ಹಾಗೂ ಇತರರು (2010) ದಾಖಲಿಸಿರುತ್ತಾರೆ. ಮುಂಚೂಣಿ ಪ್ರಾತ್ಯಕ್ಷಿಕೆಯ ಖರ್ಚು ವೆಚ್ಚದ ವಿವರ ಹಾಗೂ ಉಳತಾಯ ಕುರಿತು ಕೋಷ್ಟಕ 2ರಲ್ಲಿ ವಿವರಿಸಲಾಗಿದೆ. ಅದರಂತೆ ಸರಾಸರಿ ಕೂಲಿ ವೆಚ್ಚ ರೂ.6362/– ಪ್ರತಿ ಹೆಕ್ಟೇರ್‌ಗೆ ಉಳತಾಯದೊಂದಿಗೆ ಉತ್ಪಾದನಾ ಲಾಭ ಸರಾಸರಿ ರೂ.16694/– ಪ್ರತಿ ಹೆಕ್ಟೇರ್‌ಗೆ ಪಡೆಯಲಾಯಿತು. ಸಮಯದ ಉಳತಾಯ ಜೊತೆಗೆ ಸಮಯಕ್ಕೆ ಸರಿಯಾಗಿ ಕೃಷಿ ಕಾರ್ಯಕ್ಕೆ ಯಂತ್ರಗಳ ಲಭ್ಯತೆಯಿಂದ ರೈತರಲ್ಲಿ ಆತ್ಮವಿಶ್ವಾಸ ಮೂಡಿಸಿತು.

ಸಾರಂಶ ಮತ್ತು ನಿರ್ಣಯ : ಯಂತ್ರಗಳ ಭಳಕೆಯಿಂದ ಸಮಯಕ್ಕೆ ಸರಿಯಾಗಿ ನಾಟಿ ಕಾರ್ಯ, ಕೂಲಿ ಕಾರ್ಮಿಕರ ಕೊರೆತೆ ನಿವಾರಣೆ, ಉತ್ಪಾದನೆ ಹಾಗೂ ಉತ್ಪಾದಕತೆಯಲ್ಲಿ ಹೆಚ್ಚಳ ಹಾಗೂ ಕ್ಲಪ್ತ ಸಮಯದಲ್ಲಿ ಕೃಷಿ ಚಟುವಟಿಕೆಗಳ ಅನುಷ್ಠಾನ ಭತ್ತದ ಕೃಷಿಯಲ್ಲಿ ಸಾಧ್ಯ ಎಂದು ಮುಂಚೂಣಿ ಪ್ರಾತ್ಯಕ್ಷಿಕೆಗಳಿಂದ ರೈತರಿಗೆ ಸಾಬೀತಾಯಿತು. ಭತ್ತದ ಕೃಷಿಯಲ್ಲಿ ಯಂತ್ರೋಪಕರಣಗಳನ್ನು ಬಳಸುವುದರಿಂದ ಉತ್ಪಾದನಾ ವೆಚ್ಚ ಶೇಕಡ 20–22 ರಷ್ಟು ಕಡಿಮೆಯಾಯಿತು ಹಾಗೂ ಕೂಲಿಯಾಳುಗಳ ಅವಶ್ಯಕತೆ ಶೇಕಡ 30 ರಷ್ಟು ಕಡಿಮೆಯಾಯಿತು. ಜಿಲ್ಲೆಯಲ್ಲಿ ಯಾಂತ್ರೀಕೃತ ಭತ್ತದ ಕೃಷಿಯ ವಿಸ್ತಿರಣವು 2011–12 ರಲ್ಲಿ 65.32 ಹೆಕ್ಟೇರ್ ಪ್ರದೇಶವಿದ್ದುದು 2013–14 ರಲ್ಲಿ 123 ಹೆಕ್ಟೇರ್ ಪ್ರದೇಶಕ್ಕೆ ಏರಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರ ಜೊತೆಗೆ ಗುಡ್ಡಗಾಡು ಪ್ರದೇಶ ಹೊಂದಿರುವುದರಿಂದ ರೈತ ಸ್ನೇಹಿ ಸಣ್ಣ ಹಿಡುವಳಿಗೆ ಹೊಂದುವಂತಹ ಯಂತ್ರಗಳನ್ನು ಅಭಿವೃದ್ಧಿಪಡಿಸಿದಲ್ಲಿ ಜಿಲ್ಲೆಯಲ್ಲಿ ಭತ್ತದ ಕೃಷಿಯ ಯಾಂತ್ರೀಕರಣ ಯಶಸ್ಸು ಸಾಧಿಸಬಹುದಾಗಿದೆ ಹಾಗೂ ಲಾಭದಾಯಕವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿದೆ.

ಉಲೇಖ:

1. ಎಸ್. ಸಜೀನ, ಹಬೀಬರೆಹಮಾನ್, ಜೆ. ದೀಪಾ, ಬೀನಾ ಪತ್ರೋಸ 2010 ಮಲ್ಲಪುರಮ್ ಜಿಲ್ಲೆಯಲ್ಲಿ ಮಹಿಳಾ ಸಬಳೀಕರಣ ಮುಖಾಂತರ ಕೃಷಿ ಯಾಂತ್ರೀಕರಣ: ಒಂದು ವರದಿ ಪ್ರಕಾಶಕರು ಕೆ.ವಿ.ಕೆ ಮಲ್ಲಾಪುರಮ್ ಕೇರಳ
2. ಟಿ. ವಿಧಾನ ಸಿಂಗ,ಅರ್ ಮಹೇಂದ್ರ ಕುಮಾರ್ ಮತ್ತು ಬಿ ಸಿ. ವಿರಕ್ತಮಠ್ 2012. ಭತ್ತದ ಸೀಮಿತ ಯಾಂತ್ರೀಕರಣದಿಂದ ಲಾಭದಾಯಕ ಕೃಷಿ. ತಾಂತ್ರಿಕ ಮಾಹಿತಿ ಪ್ರಕಟಣೆ: ಭತ್ತ ಸಂಶೋಧನಾ ನಿರ್ದೇಶನಾಲಯ, ಹೈದ್ರಾಬಾದ್, ಆಂಧ್ರಪ್ರದೇಶ.

ಕೋಷ್ಟಕ 1. ಯಾಂತ್ರಿಕರಣದಿಂದ ಭತ್ತದ ಇಳವರಿ ಮೇಲೆ ಪರಿಣಾಮ ಮತ್ತು ಲಾಭದ ಲೆಕ್ಕಚಾರ.

ಕ್ರಮ ಸಂಖ್ಯೆ	ವರ್ಷ	ಭತ್ತದ ಇಳುವರಿ (ಕ್ವಿಂಟಾಲ್/ಹೆಕ್ಟೇರಗೆ)		. ಶೇಕಡ ಇಳುವರಿ ಹೆಚ್ಚು	ಹೆಚ್ಚಿನ ಲಾಭ ಪ್ರತಿ ಹೆಕ್ಟೇರೆಗೆ ರೂ. ಪೈ.
		ಮುಂಚೂಣಿ ಪ್ರಾತ್ಯಕ್ಷಿಕೆ ತಾಕು	ಸಂಪ್ರದಾಯಿಕ ಪದ್ದತಿ		
1	2011–12	44.5	38.0	17.0	12298/––
2	2012–13	42.5	35.0	21.4	19500/–
3	2013–14	40.0	32.5	23.0	20125/–
4	2014–15	35.7	30.5	17.0	14853/–
	ಸರಾಸರಿ	**40.67**	**34.0**	**19.6**	**ರೂ.16694/–**

ಕೋಷ್ಟಕ 2. ಆಯ್ದ ಪರಿಮಾಣಾತ್ಮಕ ಸೂಚಕಗಳ ಮೇಲೆ ಪರಿಣಾಮ.

ಕ್ರಮ ಸಂಖ್ಯೆ	ಸೂಚಕಗಳು	ಮುಂಚೂಣಿ ಪ್ರಾತ್ಯಕ್ಷಿಕೆ ತಾಕು	ಸಂಪ್ರದಾಯಿಕ ಪದ್ದತಿ
1	ಇಳುವರಿ ಕ್ವಿಂಟಾಲ್/ ಹೆಕ್ಟೇರ	40.67	34.0
2	ಬೀಜದ ಅವಶ್ಯಕತೆ ಕೆಜಿ / ಹೆಕ್ಟೇರ	18.0	25.0
3	ನಾಟಿ ಕಾರ್ಯಕ್ಕೆ ಕೂಲಿಯಾಳುಗಳ ಅವಶ್ಯಕತೆ / ಹೆಕ್ಟೇರ	5	45
4	ನಾಟಿ ಕಾರ್ಯಕ್ಕೆ ವೆಚ್ಚ/ ಹೆಕ್ಟೇರ	7500/–	12500/–
5	ಕೂಲಿ ವೆಚ್ಚ ಉಳತಾಯ / ಹೆಕ್ಟೇರ	6362/–	–
6	ಉತ್ಪಾದನಾ ವೆಚ್ಚ/ ಹೆಕ್ಟೇರ (ರೂ.)	31712/–	38074/–

ಕಾಫಿಯ ಮಹಾಮಾರಿ ಎಲೆ ತುಕ್ಕು ರೋಗ

ಸಂತೋಷರಡ್ಡಿ ಮಾಚೇನಹಳ್ಳಿ, ಮಧು ಎಸ್ ಗಿರಿ, ರಂಜಿನಿ ಎ. ಸುಧಾ ಎಮ್., ಪಿ., ದೈವಶಿಖಾಮಣಿ ಎಸ್., ಮತ್ತು 1ರಘುರಾಮಲು ವಾಯ್

ಸಸ್ಯ ರೋಗಶಾಸ್ತ್ರ ವಿಭಾಗ, 1 ಸಂಶೋಧನಾ ನಿರ್ದೇಶಕರು, ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆ, ಚಿಕ್ಕಮಗಳೂರು – 577117

ಕಾಫಿಯು ಭಾರತ ದೇಶದ ಪ್ರಮುಖವಾದ ತೋಟಗಾರಿಕೆ ಬೆಳೆಗಳಲ್ಲಿ ಒಂದಾಗಿದೆ. ಕಾಫಿಯನ್ನು ಮುಖ್ಯವಾಗಿ ಎತ್ತರವಾದ ಗಿರಿ ಪ್ರದೇಶಗಳಾದ ಪಶ್ಚಿಮ ಹಾಗೂ ಪೂರ್ವ ಘಟ್ಟ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಕಾಫಿಯಲ್ಲಿ ಮುಖ್ಯವಾಗಿ ಅರೇಬಿಕಾ ಮತ್ತು ರೋಬುಸ್ಟಾ ಎಂಬ ಎರಡು ಪ್ರಜಾತಿಗಳನ್ನು ಬೆಳೆಯಲಾಗುವುದು. ಅರೇಬಿಕಾ ಕಾಫಿಯು ಶ್ರೇಷ್ಠ ಗುಣಮಟ್ಟದ್ದಾಗಿದ್ದು ವಿದೇಶಗಳಲ್ಲಿ ತುಂಬಾ ಬೇಡಿಕೆಯಿದೆ. ಆದರೆ ಅರೇಬಿಕಾ ಕಾಫಿಯಲ್ಲಿ ಎಲೆ ತುಕ್ಕು ರೋಗದಿಂದ ಶೇ 35–40 ರಷ್ಟು ಇಳುವರಿಯಲ್ಲಿ ನಷ್ಟವಾಗುವುದು. ಈ ರೋಗವು ಹೆಮಿಲಿಯಾ ವೆಸ್ಟಾಟ್ರಿಕ್ಸ್ ಎಂಬ ಶಿಲೀಂಧ್ರ ರೋಗಕಾರಕದಿಂದ ಬಾಧೆಯಾಗುವುದು. ಎಲೆ ತುಕ್ಕು ರೋಗದ ಪ್ರಮುಖ ಲಕ್ಷಣಗಳೆಂದರೆ ಮೊದಲಿಗೆ ಎಲೆಗಳ ತಳ ಭಾಗದಲ್ಲಿ ಹಳದಿ ಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಈ ಚುಕ್ಕೆಗಳು ಕ್ರಮೇಣವಾಗಿ ಹಳದಿಯಿಂದ ಕಿತ್ತಳೆ ಬಣ್ಣಕ್ಕೆ ಪರಿವರ್ತನೆಗೊಂಡು ಬುಲಿಡೊಬಿಜಕಣಗಳನ್ನು ಉತ್ಪಾದಿಸುತ್ತವೆ. ರೋಗದ ತೀವ್ರತೆ ಹೆಚ್ಚಾದಂತೆಲ್ಲಾ ರೋಗ ಪೀಡಿತ ಎಲೆಗಳು ಉದುರುತ್ತವೆ ಗಿಡಗಳು ಬರಡಾಗಿ ಕಾಣುತ್ತವೆ. ರೋಗಾಣು ಶಿಲೀಂಧ್ರದ ಬುಲಿಡೊಬಿಜಕಣಗಳು ಗಾಳಿ ಮತ್ತು ಮಳೆಯ ಹನಿಗಳ ಮೂಲಕ ಹರಡುತ್ತವೆ. ಪ್ರಮುಖವಾಗಿ ಜೂನ್‌ನಿಂದ ಸಪ್ಟೆಂಬರ್‌ವರೆಗೆ ಆಗುವ ಮಳೆ ಹಾಗೂ ಮಧ್ಯದಲ್ಲಿ ಬಿಸಿಲಿನ ವಾತಾವರಣ ಅಲ್ಲದೆ, 22ಲಿ ನಿಂದ 24ಅಸೆಲ್ಸಿಯಸ್ ಉಷ್ಣಾಂಶ, ಶೇ. 80 ಕ್ಕಿಂತ ಹೆಚ್ಚು ಆರ್ದ್ರತೆ ಹಾಗೂ ಎಲೆಗಳ ಮೇಲೆ ಇರುವ ತೇವಾಂಶ ರೋಗಾಣುವಿನ ಬೆಳವಣಿಗೆಯನ್ನು ಹೆಚ್ಚಿಸುತ್ತವೆ ಆದರೆ, ಮಳೆಗಾಲದ ನಂತರ ಸಪ್ಟೆಂಬರ್‌ನಿಂದ ನವೆಂಬರ್ ತಿಂಗಳವರೆಗೆ ರೋಗದ ತೀವ್ರತೆ ಹೆಚ್ಚಾಗಿ ಕಾಣಿಸುವುದು. ಕಾಫಿಯ ಎಲೆ ತುಕ್ಕು ರೋಗದ ನಿರ್ವಹಣೆಗಾಗಿ ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನಿಲ್ಲಿರುವ ಭಾರತೀಯ ಕಾಫಿ ಮಂಡಳಿಯ ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆಯಲ್ಲಿ ಅನೇಕ

ಸಂಶೋಧನೆಗಳನ್ನು ಮಾಡುವುದರ ಮೂಲಕ ಕಾಫಿ ತುಕ್ಕು ರೋಗದ ಕೆಳಕಂಡ ಸಮಗ್ರ ರೋಗ ನಿರ್ವಹಣಾ ಕ್ರಮಗಳನ್ನು ಸೂಚಿಸಿರುವರು:

ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆಯಿಂದ ಬಿಡುಗಡೆ ಮಾಡಿದ ತುಕ್ಕು ರೋಗನಿರೋಧಕ ಅರೇಬಿಕಾ ಕಾಫಿ ತಳಿಗಳಾದ ಚಂದ್ರಗಿರಿ, ಸೆಲೆಕ್ಷನ್ 5ಬಿ, ಸೆಲೆಕ್ಷನ್ 6 ಮತ್ತು ಸೆಲೆಕ್ಷನ್ 9 ಗಳನ್ನು ಬೆಳೆಯುವುದು ಸೂಕ್ತ.

ಕಾಫಿ ತೋಟದಲ್ಲಿ ಒಕ್ಕೆಲಿಯ ಮಿತವಾದ ನೆರಳಿರುವಂತೆ ತಾತ್ಕಾಲಿಕ ಹಾಗೂ ನಿರ್ಧಿಷ್ಟಕಾಲ ಇರುವಂತಹ ನೆರಳಿನ ಮರಗಳನ್ನು ಬೆಳೆಸಬೇಕು.

ಫೆಬ್ರುವರಿ – ಮಾರ್ಚ್ ತಿಂಗಳಲ್ಲಿ ಆಗುವ ಹೂಮಳೆಗಿಂತ ಮುಂಚಿತವಾಗಿ ಕಾಫಿಗಿಡಗಳಲ್ಲಿರುವ ಒಣಗಿರುವ ಕೊಂಬೆಗಳನ್ನು, ಅಡ್ಡವಾಗಿ ಬೆಳೆದ ಕೊಂಬೆಗಳನ್ನು ಹಾಗೂ ಮಾಡಬೇಕು.

ಮುಂಗಾರು ಮಳೆ ಆರಂಭಕ್ಕೆ ಮುಂಚಿತವಾಗಿ (ಮೇ–ಜೂನ್) ಶೇ. 0.5 ಬೋರ್ಡೋದ್ರಾವಣವನ್ನು ಎರೆಗಳ ತಳಭಾಗವು ನೆನೆಯುವಂತೆ ಸಿಂಪರಣೆ ಮಾಡಬೇಕು. ಮಳೆಗಾಲದ ಬಿಡುವಿನಲ್ಲಿ ಹೆಕ್ಸಾಕೊನೆಜೋಲ್ (400 ಮಿ.ಲೀ. 200 ಲೀಟರ್ ನೀರಿಗೆ) ಅಥವಾ ಪ್ರೋಪಿಕೊನೆಜೋಲ್ (160 ಮಿ.ಲೀ. 200 ಲೀಟರ್ ನೀರಿಗೆ) ಶಿಲೀಂಧ್ರನಾಶಕವನ್ನು ಸಿಂಪಡಿಸಬೇಕು. ಮಳೆಗಾಲದ ನಂತರ ಸೆಪ್ಟೆಂಬರ್–ಅಕ್ಟೋಬರ್ ತಿಂಗಳಿನಲ್ಲಿ ಶೇ. 0.5 ಬೋರ್ಡೋದ್ರಾವಣವನ್ನು ಸಿಂಪರಣೆ ಮಾಡಬೇಕು.

ಈ ಸಮಗ್ರ ರೋಗ ನಿರ್ವಹಣಾ ಕ್ರಮಗಳನ್ನು ಅಳವಡಿಸುವುದರಿಂದ ಎರೆ ತುಕ್ಕು ರೋಗವನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಬಹುದು.

ಕಾಫಿಯು ಭಾರತ ದೇಶದ ಪ್ರಮುಖವಾದ ತೋಟಗಾರಿಕೆ ಬೆಳೆಗಳಲ್ಲಿ ಒಂದಾಗಿದೆ. ಕಾಫಿಯನ್ನು ಮುಖ್ಯವಾಗಿ ಎತ್ತರವಾದ ಗಿರಿ ಪ್ರದೇಶಗಳಾದ ಪಶ್ಚಿಮ ಹಾಗೂ ಪೂರ್ವ ಘಟ್ಟ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಕಾಫಿಯಲ್ಲಿ ಮುಖ್ಯವಾಗಿ ಅರೇಬಿಕಾ ಮತ್ತು ರೋಬುಸ್ಟಾ ಎಂಬ ಎರಡು ಪ್ರಜಾತಿಗಳನ್ನು ಬೆಳೆಯಲಾಗುವುದು. ಅರೇಬಿಕಾ ಕಾಫಿಯು ಶ್ರೇಷ್ಠ ಗುಣಮಟ್ಟದ್ದಾಗಿದ್ದು ವಿದೇಶಗಳಲ್ಲಿ ತುಂಬಾ ಬೇಡಿಕೆಯಿದೆ. ಆದರೆ ಅರೇಬಿಕಾ ಕಾಫಿಯಲ್ಲಿ ಎಲೆ ತುಕ್ಕು ರೋಗದಿಂದ ಶೇ 35–40 ರಷ್ಟು ಇಳುವರಿಯಲ್ಲಿ ನಷ್ಟವಾಗುವುದು. ಸುಮಾರು 200 ವರ್ಷಗಳ ಇತಿಹಾಸವನ್ನು ಹೊಂದಿರುವ ಕಾಫಿ ಎಲೆ ತುಕ್ಕು ರೋಗವು ಜಗತ್ತಿನ ಏಳು ವಿನಾಶಕಾರಿ ಸಸ್ಯ ರೋಗಗಳಲ್ಲಿ ಒಂದಾಗಿದೆ. ಈ ರೋಗದಿಂದಾಗಿ ಶ್ರೀಲಂಕಾದಲ್ಲಿ ಕಾಫಿ ಬೆಳೆ ಸಂಪೂರ್ಣವಾಗಿ ನಷ್ಟವಾಗಿದ್ದರಿಂದ ಚಹ ಬೆಳೆಯಲು ಪ್ರಾರಂಭಿಸಿದರು ಅಲ್ಲಿಯ ಜನರು ಕಾಫಿ ಸೇವನೆ ನಿಲ್ಲಿಸಿ ಚಹ ಸೇವನೆ ಮಾಡುವದನ್ನು ರೂಡಿಸಿಕೊಂಡರು ಹೀಗೆ ಜನರ ಸಂಪ್ರದಾಯವನ್ನೆ ಬದಲಿಸಿದ ಖ್ಯಾತಿ ಈ ರೋಗಕ್ಕಿದೆ. ಕಾಫಿ ಎಲೆ ತುಕ್ಕು ರೋಗವು 1878 ರಲ್ಲಿ ಭಾರತ ದೇಶಕ್ಕೆ ಶ್ರೀಲಂಕಾದಿಂದ ಆಗಮಿಸಿದೆ. ಕಾಫಿ ಬೆಳೆಯುವ ರಾಜ್ಯಗಳಾದ ಕರ್ನಾಟಕ, ತಮಿಳುನಾಡು ಹಾಗೂ ಕೇರಳದಲ್ಲಿ ಈ ರೋಗವು ಪ್ರಮುಖವಾಗಿ ಕಾಣಿಸುತ್ತಿದೆ. ಕರ್ನಾಟಕದ ಪ್ರಥಮ ಕೃಷಿ ಇಲಾಖೆಯ ನಿರ್ದೇಶಕರಾದ ಎಲ್. ಸಿ. ಕೋಲಮನ್‌ರು ಈ ರೋಗದ ಸಂಶೋಧನೆಗಾಗಿ 1925 ರಲ್ಲಿ ಮೈಸೂರು ಕಾಫಿ ಪ್ರಯೋಗಾಲಯವನ್ನು ಚಿಕ್ಕಮಗಳೂರಿನ ಬಾಳೆಹೊನ್ನೂರಿನಲ್ಲಿ ಪ್ರಾರಂಭಿಸಿದರು, ಈ ಸಂಸ್ಥೆ ಇಂದು ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆಯಾಗಿ ಹತ್ತು ಹಲವಾರು ಕಾಫಿ ಬೆಳೆಯ ಸಂಶೋಧನೆಗಳು ನೆಡೆಯುತ್ತಿದೆ. ಈ ಲೇಖನದಲ್ಲಿ ಕಾಫಿ ಎಲೆ ತುಕ್ಕು ರೋಗದ ಲಕ್ಷಣಗಳು, ರೋಗಾಣು, ರೋಗ ತೀವ್ರತೆಗೆ ಕಾರಣಗಳು ಮತ್ತು ರೋಗ ನಿರ್ವಹಣೆ ಕ್ರಮಗಳನ್ನು ವಿವರಿಸಿದೆ. ರೋಗವು ಹೆಮಿಲಿಯಾ ವೆಸ್ಟಾಟ್ರಿಕ್ಸ್ ಎಂಬ ಶಿಲೀಂಧ್ರ ರೋಗಕಾರಕದಿಂದ ಬಾದೆಯಾಗುವುದು.

ಕಾಫಿ ಎಲೆ ತುಕ್ಕು ರೋಗದ ಪ್ರಮುಖ ಲಕ್ಷಣಗಳು: ಮೊದಲಿಗೆ ಎಲೆಗಳ ತಳ ಭಾಗದಲ್ಲಿ ಹಳದಿ ಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಈ ಚುಕ್ಕೆಗಳು ಕ್ರಮೇಣವಾಗಿ ಹಳದಿಯಿಂದ ಕಿತ್ತಳೆ ಬಣ್ಣಕ್ಕೆ ಪರಿವರ್ತನೆಗೊಂಡು ಯೂರಿಡೊಬಿಜುಕಣಗಳನ್ನು ಉತ್ಪಾದಿಸುತ್ತವೆ. ರೋಗದ ತೀವ್ರತೆ ಹೆಚ್ಚಾದಂತೆಲ್ಲಾ ರೋಗ ಪೀಡಿತ ಎಲೆಗಳು ಉದುರುತ್ತವೆ ಗಿಡಗಳು ಬರಡಾಗಿ ಕಾಣುತ್ತವೆ. ರೋಗಾಣು ಶಿಲೀಂಧ್ರದ ಯುರಿಡೊಬಿಜುಕಣಗಳು ಗಾಳಿ ಮತ್ತು ಮಳೆಯ ಹನಿಗಳ ಮೂಲಕ ಹರಡುತ್ತವೆ.

ರೋಗಾಣು : ಕಾಫಿ ಎಲೆ ತುಕ್ಕು ರೋಗವು ಹೆಮಿಲಿಯಾ ವೆಸ್ಟಾಟ್ರಿಕ್ಸ್ ಎಂಬ ಶಿಲೀಂಧ್ರದಿಂದ ಬಾದೆಯಾಗುವುದು. ಈ ಶಿಲೀಂಧ್ರವು ಯುರಿಡೋ, ಟೀಲಿಯೋ ಹಾಗೂ ಬೆಸಿಡಿಯೋ ಬೀಜುಕಣಗಳನ್ನು ಉತ್ಪತ್ತಿ ಮಾಡುತ್ತದೆ. ಆದರೆ ಯುರಿಡೊಬಿಜುಕಣಗಳು ಮಾತ್ರ ರೋಗವನ್ನುಂಟು ಮಾಡುತ್ತದೆ.

ರೋಗ ತೀವ್ರತೆಗೆ ಕಾರಣಗಳು : ಪ್ರಮುಖವಾಗಿ ಜೂನ್‌ನಿಂದ ಸಪ್ಟೆಂಬರ್‌ವರೆಗೆ ಆಗುವ ಮಳೆ ಹಾಗೂ ಮಧ್ಯದಲ್ಲಿ ಬಿಸಿಲಿನ ವಾತವರಣ ಅಲ್ಲದೆ, 22 – ರಿಂದ 24–ಸೆಲ್ಸಿಯಸ್ ಉಷ್ಣಾಂಶ, ಶೇ. 80 ಕ್ಕಿಂತ ಹೆಚ್ಚು ಆರ್ದ್ರತೆ ಹಾಗೂ ಎಲೆಗಳ ಮೇಲೆ ಇರುವ ತೇವಾಂಶ ರೋಗಾಣುವಿನ ಬೆಳವಣಿಗೆಯನ್ನು ಹೆಚ್ಚಿಸುತ್ತದೆ ಆದರೆ, ಮಳೆಗಾಲದ ನಂತರ ಸಪ್ಟೆಂಬರ್‌ನಿಂದ ನವೆಂಬರ್ ತಿಂಗಳನವರೆಗೆ ರೋಗದ ತೀವ್ರತೆ ಹೆಚ್ಚಾಗಿ ಕಾಣಿಸುವುದು.

ರೋಗ ನಿರ್ವಹಣೆ : ಕಾಫಿಯ ಎಲೆ ತುಕ್ಕು ರೋಗದ ನಿರ್ವಹಣೆಗಾಗಿ ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನಿರಿನಲ್ಲಿರುವ ಭಾರತೀಯ ಕಾಫಿ ಮಂಡಳಿಯ ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆಯಲ್ಲಿ ಅನೇಕ ಸಂಶೋಧನೆಗಳನ್ನು ಮಾಡುವುದರ ಮೂಲಕ ಕಾಫಿ ತುಕ್ಕು ರೋಗದ ಕೆಳಕಂಡ ಸಮಗ್ರ ರೋಗ ನಿರ್ವಹಣಾ ಕ್ರಮಗಳನ್ನು ಸೂಚಿಸಿರುವರು:

ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆಯಿಂದ ಬಿಡುಗಡೆ ಮಾಡಿದ ತುಕ್ಕು ರೋಗನಿರೋಧಕ ಅರೇಬಿಕಾ ಕಾಫಿ ತಳಿಗಳಾದ ಚಂದ್ರಗಿರಿ, ಸೆಲೆಕ್ಷನ್ 5ಬಿ, ಸೆಲೆಕ್ಷನ್ 6 ಮತ್ತು ಸೆಲೆಕ್ಷನ್ 9

ಗಳನ್ನು ಬೆಳೆಯುವುದು ಸೂಕ್ತ.

ಕಾಫಿ ತೋಟದಲ್ಲಿ ಒಳ್ಳೆಯ ಮಿತವಾದ ನೆರಳಿರುವಂತೆ ತಾತ್ಕಾಲಿಕ ಹಾಗೂ ದೀರ್ಘಕಾಲ ಇರುವಂತಹ ನೆರಳಿನ ಮರಗಳನ್ನು ಬೆಳೆಸಬೇಕು.

ಫೆಬ್ರವರಿ – ಮಾರ್ಚ ತಿಂಗಳಲ್ಲಿ ಆಗುವ ಹೂಮಳೆಗಿಂತ ಮುಂಚಿತವಾಗಿ ಕಾಫಿಗಿಡಗಳಲ್ಲಿರುವ ಒಣಗಿರುವ ಕೊಂಬೆಗಳನ್ನು, ಅಡ್ಡವಾಗಿ ಬೆಳೆದ ಕೊಂಬೆಗಳನ್ನು ಚಾಟನಿ ಮಾಡಬೇಕು.

ಮುಂಗಾರು ಮಳೆ ಆರಂಭಕ್ಕೆ ಮುಂಚಿತವಾಗಿ (ಮೇ–ಜೂನ್) ಶೇ. 0.5 ಬೋರ್ಡೋದ್ರಾವಣವನ್ನು ಎಲೆಗಳ ತಳಭಾಗವು ನೆನೆಯುವಂತೆ ಸಿಂಪರಣೆ ಮಾಡಬೇಕು. ಮಳೆಗಾಲದ ಬಿಡುವಿನಲ್ಲಿ ಮತ್ತು ಮಳೆಗಾಲದ ನಂತರ ಹೆಕ್ಸಾಕೊನೆಜೊಲ್ (400 ಮಿ.ಲೀ. 200 ಲೀಟರ್ ನೀರಿಗೆ) ಅಥವಾ ಪ್ರೋಪಿಕೊನೆಜೋಲ್ (160 ಮಿ.ಲೀ. 200 ಲೀಟರ್ ನೀರಿಗೆ) ಶಿಲೀಂಧ್ರನಾಶಕವನ್ನು ಸಿಂಪಡಿಸಬೇಕು. ಈ ಸಮಗ್ರ ರೋಗ ನಿರ್ವಹಣಾ ಕ್ರಮಗಳನ್ನು ಅಳವಡಿಸುವುದರಿಂದ ಎಲೆ ತುಕ್ಕು ರೋಗವನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಬಹುದು.

ಕಲ್ಲಂಗಡಿ ಬೆಳೆಯಲ್ಲಿ ರೈತಕ್ಷೇತ್ರ ಪಾಠಶಾಲೆ ಮುಖಾಂತರ ಸಮಗ್ರ ನಿರ್ವಹಣೆ ತಂತ್ರಜ್ಞಾನ ವರ್ಗಾವಣೆ

ಶ್ರೀ ಹರೀಶ್ ಶೆಣೈ
ವಿಷಯ ತಜ್ಞರು(ಬೇಸಾಯಶಾಸ್ತ್ರ), ಐಸಿಎಆರ್– ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ, ಕಂಕನಾಡಿ ಮಂಗಳೂರು–575002
ಮಿಂಚಂಚೆ: harish.shenoy1@gmail.com

ರೈತ ಕ್ಷೇತ್ರಪಾಠಶಾಲೆಯು ರೈತರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಕೂಡಿರುವ ಪರಿಣಾಮಕಾರಿ ವಿಸ್ತರಣಾ ಪದ್ಧತಿ ಹಾಗೂ ಸುಧಾರಿತ ತಂತ್ರಜ್ಞಾನವನ್ನು ಕಲಿಸುವ ಹಾಗೂ ಸಬಲೀಕರಣಗೊಳಿಸುವ ಅನೌಪಚಾರಿಕ ಶಿಕ್ಷಣ ಪದ್ಧತಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪೊಳಲಿ ಗ್ರಾಮದಲ್ಲಿ ಕಲ್ಲಂಗಡಿ ಬೆಳೆಯನ್ನು ಒಂದು ಆರ್ಥಿಕ ಬೆಳೆಯನ್ನಾಗಿ ಹಲವಾರು ವರ್ಷಗಳಿಂದ ಬೇಸಿಗೆ ಹಂಗಾಮಿನಲ್ಲಿ ಬೆಳೆಯುತ್ತಾರೆ. ಆದರೆ ಇತ್ತೀಚಿಗೆ ಈ ಬೆಳೆಯು ವಿವಿಧ ಬೆಳೆವಣಿಗೆ ಹಂತದಲ್ಲಿಯೇ ಕೀಟ ರೋಗಗಳಿಗೆ ತುತ್ತಾಗಿ ನಿರೀಕ್ಷಿಸಿದ ಇಳುವರಿ ಪಡೆಯಲು ರೈತರು ವಿಫಲರಾದ ಕಾರಣ ಕಲ್ಲಂಗಡಿ ಕೃಷಿಕರು ಕೃಷಿ ವಿಜ್ಞಾನ ಕೇಂದ್ರವನ್ನು ಸಂಪರ್ಕಿಸಿ ತಮ್ಮ ಸಮಸ್ಯೆಗೆ ಪರಿಹಾರ ಸೂಚಿಸುವಂತೆ ಕೋರಿದರು.. ಆದರಂತೆ ಕೆವಿಕೆಯ ವಿಜ್ಞಾನಿಗಳ ತಂಡ ಗ್ರಾಮಕ್ಕೆ ಭೇಟಿ ನೀಡಿ, ಕಲ್ಲಂಗಡಿ ಕೃಷಿಯಲ್ಲಿ ಸಮಸ್ಯೆಗಳನ್ನು ಗುರ್ತಿಸಿ ರೈತ ಕ್ಷೇತ್ರ ಪಾಠಶಾಲೆಯ ಮುಖಾಂತರ ಸಮಗ್ರ ನಿರ್ವಹಣೆ ಕುರಿತು ಸುಧಾರಿತ ತಂತ್ರಜ್ಞಾನವನ್ನು ವರ್ಗಾವಣೆ ಮಾಡಲು ನಿರ್ಧರಿಸಲಾಯಿತು. ಆದರಂತೆ ಕಲ್ಲಂಗಡಿ ರೈತ ಕ್ಷೇತ್ರ ಪಾಠಶಾಲೆಯ ಪಠ್ಯಕ್ರಮವನ ವಿಷಯ, ರೈತ ಅಭ್ಯರ್ಥಿಗಳು ಹಾಗೂ ಸಹಕರ್ತರನ್ನು ಗುರ್ತಿಸಲಾಯಿತು. ಪಠ್ಯಕ್ರಮವಲ್ಲಿ ಕೃಷಿ ಪರಿಸರ ವಿಶ್ಲೇಷಣೆ ಹಾಗೂ ಸುಧಾರಿತ ಬೇಸಾಯ ಕ್ರಮಗಳ ಕುರಿತು ಮಾಹಿತಿ ನೀಡಲಾಯಿತು., ಇದರ ಫಲಿತಾಂಶವೆಂದರೆ ರೈತ ಕ್ಷೇತ್ರ ಪಾಠಶಾಲೆಯಲ್ಲಿ ಬೆಳೆವರಿತಾಂ ತಾಕಿನಲ್ಲಿ ಕಲ್ಲಂಗಡಿ ಇಳುವರಿ 36.75 ಟನ್/ಹೆಕ್ಟೇರ್‌ನಷ್ಟುದಾಖಲೆಯಾಯಿತು. ಇದು ರೈತ ಪದ್ಧತಿಯಲ್ಲಿ ದಾಖಲೆಯಾದ ಇಳುವರಿಗೆ(24 ಟನ್/ಹೆಕ್ಟೇರ್) ಹೋಲಿಸಿದಾಗ ಶೇಕಡ 54 ರಷ್ಟು ಜಾಸ್ತಿ.

ಪೀಠಿಕೆ : ರೈತ ಕ್ಷೇತ್ರ ಪಾಠಶಾಲೆಯು ರೈತರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಕೂಡಿರುವ ಪರಿಣಾಮಕಾರಿ ವಿಸ್ತರಣಾ ಪದ್ಧತಿ. ರೈತರಿಗೆ ಹಾಗೂ ಮಹಿಳೆಯರಿಗೆ ಹೊಸ ಹಾಗೂ ಸುಧಾರಿತ ತಂತ್ರಜ್ಞಾನವನ್ನು ಕಲಿಸುವ ಹಾಗೂ ಸಬಲೀಕರಣಗೊಳಿಸುವ ಅನೌಪಚಾರಿಕ ಶಿಕ್ಷಣ ಪದ್ಧತಿಯಾಗಿದೆ. ಹೊಸ ಹಾಗೂ ಸುಧಾರಿತ ತಂತ್ರಜ್ಞಾನಗಳನ್ನು ಮನನ ಮಾಡಿಕೊಂಡು ರೈತರು ತಾಂತ್ರಿಕವಾಗಿ ಸಬಲರಾಗುತ್ತಾರೆ. ಈ ಪದ್ಧತಿಯು ರೈತರ ಸ್ಥಳೀಯ ಕುಂದು ಕೊರತೆಗಳ / ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ ಅವುಗಳನ್ನು ನಿರ್ವಹಣೆ ಮಾಡಲು ಇರುವ ಹೊಸ ತಂತ್ರಜ್ಞಾನಗಳನ್ನು ಕಲಿಯಲು ಪ್ರೇರೆಪಿಸುವುದರ ಜೊತೆಗೆ ಅವುಗಳನ್ನು ಮನನ ಮಾಡಿಕೊಂಡು ಕೃಷಿ ಮಾಡಲು ಸಹಾಯ ಮಾಡುತ್ತದೆ. (ನೆಲ್ಲವಿ ಮತ್ತು ವಾನಿ, 2006; ಸಿಂಗ್ ಹಾಗೂ ಇತ್ತರರು, 2006). ರೈತ ಕ್ಷೇತ್ರ ಪಾಠಶಾಲೆಯಲ್ಲಿ ರೈತರು ಕೃಷಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸಿ, ಆ ಸಮಸ್ಯೆಗೆ ಪರಿಹಾರ ಮಾರ್ಗೋಪಾಯವನ್ನು ಹುಡುಕಿ, ಅವುಗಳಲ್ಲಿ ಸೂಕ್ತವಾದುದನ್ನು ಆಯ್ಕೆ ಮಾಡಿ ಅದರ ಪ್ರಾಯೋಜನವನ್ನು ತಿಳಿಯಲು ತಮ್ಮ ಕ್ಷೇತ್ರದಲ್ಲಿ ಅಳವಡಿಸುವ ಪ್ರಕ್ರಿಯೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಪೊಳಲಿ ಗ್ರಾಮದಲ್ಲಿ ಕಲ್ಲಂಗಡಿ ಬೆಳೆಯುತ್ತಿರುವ ಕೃಷಿಕರಿಗೆ ಪ್ರತಿ ವರ್ಷ ಕುಂಠಿತವಾಗುತ್ತಿರುವ ಇಳುವರಿಗೆ ಪರಿಹಾರೋಪಾಯವಾಗಿ ಕೃಷಿ ವಿಜ್ಞಾನ ಕೇಂದ್ರವು ರೈತ ಕ್ಷೇತ್ರ ಪಾಠಶಾಲೆ ವಿಸ್ತರಣಾ ಪದ್ಧತಿ ಮುಖಾಂತರ ತಂತ್ರಜ್ಞಾನ ವರ್ಗಾವಣೆ ಮಾಡಿ ಸಮಸ್ಯೆಗೆ ಪರಿಹಾರವನ್ನು ನೀಡಿತು.

ವಸ್ತು ಮತ್ತು ಅನುಷ್ಠಾನ ವಿಧಾನ : ಈ ಅಧ್ಯಯನವು 2011–2012ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಪೊಳಲಿ ಗ್ರಾಮದಲ್ಲಿ ನಡೆಸಲಾಯಿತು. ಗುರುಪುರ ನದಿಯ ತಟದಲ್ಲಿರುವ ಈ ಗ್ರಾಮದಲ್ಲಿ ಬೇಸಿಗೆ ಹಂಗಾಮಿಗೆ ಕಲ್ಲಂಗಡಿಯನ್ನು ಬೆಳೆಯಲಾಗುತ್ತಿದ್ದು, ಇದರ ಕೊಯ್ಲು ಸಮಯದಲ್ಲಿ ಗ್ರಾಮದ ದೇವತೆಯಾದ ಶ್ರೀ ರಾಜರಾಜೇಶ್ವರಿಯ ಜಾತ್ರೆ ಮಹೋತ್ಸವವು ನಡೆಯುತ್ತಿದ್ದು, ಈ ಸಂದರ್ಭದಲ್ಲಿ ಭಕ್ತರು ಕಲ್ಲಂಗಡಿಯನ್ನು ಖರೀಧಿಸಿ ದೇವರ ಪ್ರಸಾದವೆಂದು ಭಕ್ತಿಯಿಂದ ಸೇವಿಸುತ್ತಾರೆ. ಇತ್ತೀಚೆಗೆ ಕಲ್ಲಂಗಡಿ ಬೆಳೆಯುತ್ತಿರುವ ಕೃಷಿಕರು ಕೀಟ ರೋಗದ ಭಾದೆಯಿಂದ ಇಳುವರಿ ಕುಂಠಿತವಾಗುತ್ತಿರುವುದು ಗಮನಿಸಿದರು. ಈ ಹಿನ್ನಲೆಯಲ್ಲಿ ಕಲ್ಲಂಗಡಿ ಕೃಷಿಕರು ಕೃಷಿ ವಿಜ್ಞಾನ ಕೇಂದ್ರವನ್ನು ಸಂಪರ್ಕಿಸಿ ಸಮಸ್ಯೆಗೆ ಪರಿಹಾರವನ್ನು

ಕೋರಿದರು. ಅದರಂತೆ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ತಂಡ ಗ್ರಾಮಕ್ಕೆ ಬೇಟಿ ನೀಡಿ, ಸರ್ವೇಕ್ಷಣೆಯನ್ನು ಕೈಗೊಂಡು ರೈತರೊಡನೆ ಚರ್ಚಿಸಿದರು. ಅದರಂತೆ ಸಮಸ್ಯೆಗೆ ಮೂಲಕಾರಣ ಅಸಮರ್ಪಕ ಬೆಳೆನಿರ್ವಹಣೆ ಎಂದು ತಿಳಿಯಲಾಯಿತು. ರೈತರೊಡನೆ ಚರ್ಚಿಸಿದಾಗ ಕಲ್ಲಂಗಡಿ ಬೆಳೆಯಲ್ಲಿ ಪರಿಪೂರ್ಣ ಇಳುವರಿ ಸಾಮರ್ಥವನ್ನು ಪಡೆಯಲು ಅನುಸರಿಸಬೇಕಾದ ಸಮಗ್ರ ಬೆಳೆ ನಿರ್ವಹಣೆ ಅಳವಡಿಕೆ ಬಗ್ಗೆ ರೈತರಿಗೆ ಮನದಟ್ಟು ಮಾಡುವ ಅವಶ್ಯಕತೆ ಇದೆ ಎಂಬ ಅಭಿಪ್ರಾಯ ಮೂಡಿಬಂತು. ಈ ನಿಟ್ಟಿನಲ್ಲಿ ಕೃಷಿ ವಿಜ್ಞಾನ ಕೇಂದ್ರವು ಪೊಳಲಿಯ ಕಲ್ಲಂಗಡಿ ಬೆಳೆಯುವ ರೈತರಿಗೆ "ಕಲ್ಲಂಗಡಿ ಬೆಳೆಯಲ್ಲಿ ಸಮಗ್ರ ನಿರ್ವಹಣೆ" ಕುರಿತು ರೈತ ಕ್ಷೇತ್ರ ಪಾಠಶಾಲೆ ಅನುಷ್ಠಾನಗೊಳಿಸಲು ನಿರ್ಧರಿಸಲಾಯಿತು. ಆಸಕ್ತ 20 ಜನ ರೈತ ಅಭ್ಯರ್ಥಿಗಳನ್ನು ಕಲಿಕಾರ್ಥಿಯಾಗಿ ಹಾಗೂ ಒಬ್ಬರನ್ನು ಸಹಕರ್ತರಾಗಿ ಗುರುತಿಸಲಾಯಿತು. ಒಂದು ಎಕರೆ ಪ್ರದೇಶದಲ್ಲಿ ಅರ್ಧ ಎಕರೆ ರೈತ ಪದ್ಧತಿಯಲ್ಲಿ ಹಾಗೂ ಅರ್ಧ ಎಕರೆ ಪ್ರದೇಶದಲ್ಲಿ ರೈತರ ಕ್ಷೇತ್ರ ಪಾಠಶಾಲೆಯನ್ನು ವೈಜ್ಞಾನಿಕವಾಗಿ ಮತ್ತು ತುಲನಾತ್ಮಕವಾಗಿ ಫಲಿತಾಂಶವನ್ನು ತೋರಿಸಲು ತಜ್ಞರ ಮಾರ್ಗದರ್ಶನದಲ್ಲಿ ಬೆಳೆಸಲು ಒಪ್ಪಲಾಯಿತು. ಕಲ್ಲಂಗಡಿ ಬೆಳೆಯ ಕೃಷಿಯ ಕುರಿತು ಪಠ್ಯಕ್ರಮವನ್ನು ನಿರ್ಧರಿಸಲಾಯಿತು ಹಾಗೂ ಅಧ್ಯಯನ ಮಾರ್ಗದರ್ಶಿಯನ್ನು ರೂಪಿಸಲಾಯಿತು. ಸಮಗ್ರ ಬೆಳೆ ನಿರ್ವಹಣೆ ಕುರಿತಾಗಿ ಒಟ್ಟು 10 ತರಗತಿಗಳನ್ನು ನಡೆಸಲಾಯಿತು (ಕೋಷ್ಟಕ 1). ಕಲ್ಲಂಗಡಿ ಕೊಯ್ಲು ಹಂತದಲ್ಲಿ ಕ್ಷೇತ್ರೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ರೈತ ಕ್ಷೇತ್ರ ಪಾಠಶಾಲೆ ಮತ್ತು ರೈತ ಪದ್ಧತಿಯಲ್ಲಿ ಬೆಳೆದಂತಹ ಬೆಳೆಯ ಬೆಳವಣಿಗೆ, ರೋಗ ಕೀಟಗಳ ಭಾದೆ, ಇಳುವರಿ ಹಾಗೂ ಬೇಸಾಯದ ಖರ್ಚು ವೆಚ್ಚದ ವ್ಯತ್ಯಾಸಗಳನ್ನು ಸಮೀಕರಿಸಿ ವರದಿಗಳನ್ನು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ರೈತರ ಮುಂದೆ ಮಂಡಿಸಿ ಮನವರಿಕೆ ಮಾಡಿದರು. ಚರ್ಚೆಯಲ್ಲಿ ಭಾಗವಹಿಸಿದ ಕಲಿಕಾರ್ಥಿಗಳು ಹಾಗೂ ಸಹಕರ್ತರು ರೈತ ಕ್ಷೇತ್ರ ಪಾಠಶಾಲೆಯಿಂದ ಕಲಿತಂತಹ ಅನುಭವದ ವಿಷಯಗಳನ್ನು ಇತರ ರೈತರೊಂದಿಗೆ ಹಂಚಿಕೊಂಡರು.

ಪರಿಣಾಮ ಮತ್ತು ಚರ್ಚೆ : ಕಲ್ಲಂಗಡಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ರೈತ ಕ್ಷೇತ್ರ ಪಾಠಶಾಲೆಯ ಫಲಿತಾಂಶವನ್ನು ಕೋಷ್ಠಕ 2 ರಲ್ಲಿ ವಿವರಿಸಲಾಗಿದೆ. ರೈತ ಕ್ಷೇತ್ರ ಪಾಠಶಾಲೆಯಲ್ಲಿ ಬೆಳೆದಂತಹ ಬೆಳೆಯಲ್ಲಿ ಉತ್ತಮ ಗುಣ ಮಟ್ಟದ ಇಳುವರಿ (36.75 ಟನ್ / ಹೆಕ್ಟೇರ್‌ಗೆ) ದಾಖಲಾಗಿದ್ದು, ಇದು ರೈತ ಪದ್ಧತಿಯಲ್ಲಿ ಬೆಳೆದ ಬೆಳೆಯ ಇಳುವರಿ (24.0 ಟನ್ / ಹೆಕ್ಟೇರ್‌ಗೆ) ಗೆ ಹೋಲಿಸಿದಾಗ ಇಳುವರಿ ಮಟ್ಟ ಶೇಕಡ 54ರಷ್ಟು ಹೆಚ್ಚಿಗೆ ಕಂಡು ಬಂತು. ಈ ಹೆಚ್ಚಿನ ಇಳುವರಿ ಬರಲು ಕಲ್ಲಂಗಡಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕ್ರಮಗಳನ್ನು ಅಳವಡಿಸಿರುವುದು ಕಾರಣವಾಯಿತು. ರೈತ ಕ್ಷೇತ್ರ ಪಾಠಶಾಲೆಯ ತಾಕಿನಲ್ಲಿ ಬೆಳೆದ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ. 1,24,000/- ಒಟ್ಟು ಆದಾಯ, ನಿವ್ವಳ ಆದಾಯ ರೂ. 88,000/- ಹಾಗೂ ವ್ಯಯ ಮತ್ತು ಲಾಭದ ಅನುಪಾತವು 1 : 3.44 ದಾಖಲಾಯಿತು. ರೈತ ಪದ್ಧತಿ ತಾಕಿನಲ್ಲಿ ಒಟ್ಟು ಆದಾಯ ರೂ. 72,115/- ನಿವ್ವಳ ಆದಾಯ ರೂ. 45,315/- ಹಾಗೂ ವ್ಯಯ ಮತ್ತು ಲಾಭದ ಅನುಪಾತ 1 : 2.69 ದಾಖಲಾಯಿತು. ಇದೇ ರೀತಿಯ ಫಲಿತಾಂಶವನ್ನು ಮಲ್ಲಿಕಾರ್ಜುನ ಹಾಗೂ ಇತರರು (2012) ಸಹ ದಾಖಲಿಸಿರುತ್ತಾರೆ.

ಸಾರಾಂಶ ಮತ್ತು ನಿರ್ಣಯ : ಕೃಷಿ ವಿಜ್ಞಾನ ಕೇಂದ್ರವು ಪೊಳಲಿ ಗ್ರಾಮದ ಕಲ್ಲಂಗಡಿ ಬೆಳೆಲ್ಲಿ ರೈತ ಕ್ಷೇತ್ರ ಪಾಠಶಾಲೆಯ ಮುಖಾಂತರ ಸಮಗ್ರ ಬೆಳೆ ನಿರ್ವಹಣೆ ತಂತ್ರಜ್ಞಾನವನ್ನು ಸಮರ್ಪಕವಾಗಿ ವರ್ಗಾವಣೆ ಮಾಡಿತು. ಇದರಿಂದ ಸಾಬೀತಾದ ವಿಷಯವೆಂದರೆ ರೈತ ಕ್ಷೇತ್ರ ಪಾಠಶಾಲೆಯನ್ನು ಕ್ರಮಬದ್ಧವಾಗಿ ನಡೆಸಿ ಅನುಷ್ಠಾನಗೊಳಿಸಿದಾಗ ಕಲ್ಲಂಗಡಿ ಬೆಳೆಯಲ್ಲಿ ಕಡಿಮೆ ಖರ್ಚಿನಲ್ಲಿ ಉತ್ತಮ ಗುಣಮಟ್ಟದ ಅಧಿಕ ಇಳುವರಿ ಪಡೆಯುವುದು ಸಾಧ್ಯ ಎಂಬುದು. ಯಾವುದೇ ಉಪಯುಕ್ತ ಕೃಷಿ ತಾಂತ್ರಿಕತೆಯು ರೈತರಿಗೆ ಪರಿಣಾಮಕಾರಿಯಾಗಿ ತಲಪಲು ರೈತ ಕ್ಷೇತ್ರ ಪಾಠಶಾಲೆ ಒಂದು ಅತ್ಯುತ್ತಮ ವಿಸ್ತರಣಾ ಪದ್ಧತಿಯಾಗಿದೆ.

ಉಲೇಖ

1. ಬಿ. ಮಲ್ಲಿಕಾರ್ಜುನ, ಅರ್.ಕೆ. ಸುಬ್ರಮಣಿಯಂ, ಡಬ್ಲೂ. ದಾಮೋದರ ನಾಯ್ಡು, ಟಿ. ವಿ. ಎಸ್. ಶ್ರೀನಿವಾಸ ರಾವ್, ಟಿ ಮೊಗ್ಲಿ, ಪಿ. ಶ್ರೀನಿವಾಸಲು ರೆಡ್ಡಿ ಮತ್ತು ಎಸ್.ಎಮ್.ಹೆಚ್. ಖಾದ್ರಿ, 2012, ರೈತ ಕ್ಷೇತ್ರ ಪಾಠಶಾಲೆ ಮುಖಾಂತರ ರೇಷ್ಮೆ ಕೃಷಿಕರಿಗೆ ತಂತ್ರಜ್ಞಾನ ವರ್ಗಾವಣೆ– ಆಂಧ್ರ ಪ್ರದೇಶದಲ್ಲಿ ಒಂದು ಅನುಭವ.. ಕರ್ನಾಟಕ ಜರ್ನಲ್ ಆಪ್ ಅಗ್ರಿಕಲ್ಚರಲ್ ಸಾಯಿನ್ಸಸ್, 25(3): 403–404

2. ನೆಹವಿ.ಎಫ್. ಎ., ಮತ್ತುವಾನಿ ಜಿ.ಎಮ್ 2006 ಮೆಕ್ಕೆಜೋಳ ಉತ್ಪಾದನೆಯಲ್ಲಿ ತಂತ್ರಜ್ಞಾನ ವರ್ಗಾವಣೆ ಹಾಗೂ ಕ್ಷೇತ್ರ ಮಟ್ಟದಲ್ಲಿ ಅದರ ಪರಿಣಾಮಗಳು. ಅಗ್ರಿಕಲ್ಚರಲ್ ಎಕ್ಸಟೆಶನ್ ರಿವಿಯು 21(1), 42–46.

3. ಸಿಂಗ್ ಎಸ್.ಕೆ.,ರಾಯ್ ಬರ್ಮನ್ ಅರ್., ಮಹಮ್ಮದ ಶಮ್ಮಿಮ್ ಅನ್ಸಾರಿ, ಚೌದರಿ ಅರ್. ಜಿ.,ಮತ್ತು ಸಿಂಗ್ ಕೆ.ಕೆ. 2006 ಮಳೆ ಆಧಾರಿತ ಪ್ರದೇಶದಲ್ಲಿ ದ್ವಿದಳ ಧಾನ್ಯ ಆಧಾರಿತ ಬೆಳೆ ಪದ್ಧತಿಯಲ್ಲಿ ರೈತರ ಭಾಗೀತ್ವದಲ್ಲಿ ಕಡಳೆಬೆಳೆಯಲ್ಲಿ ಸ್ಥಳೀಯ ಅವಶ್ಯಕತೆಯುಳ್ಳ ತಂತ್ರಜ್ಞಾನ ಅಭಿವೃಧಿ ಅಗ್ರಿಕಲ್ಚರಲ್ ಎಕ್ಸಟೆಶನ್ ರಿವಿಯು 18(1): 8–11

ಕೋಷ್ಟಕ: 1 ಕಲ್ಲಂಗಡಿ ಬೆಳೆಯ ಸಮಗ್ರ ನಿರ್ವಹಣೆ ರೈತ ಕ್ಷೇತ್ರ ಪಾಠಶಾಲೆಗೆ ರೂಪಿಸಿದ ಅಧ್ಯಯನ ವಿಷಯಗಳು

ಕ್ರಮ ಸಂಖ್ಯೆ	ವಾರ	ಅಧ್ಯಯನ ವಿಷಯಗಳು
1	ಮೊದಲನೆಯ ವಾರ	ಕೃಷಿ ಪರಿಸರ ವಿಶ್ಲೇಷಣೆ
2	ಎರಡನೆಯ ವಾರ	ಮಣ್ಣು ಪರೀಕ್ಷೆಯ ಮಹತ್ವ
3	ಮೂರನೆಯ ವಾರ	ಸಾವಯವ ಗೊಬ್ಬರಗಳ ಭಳಕೆ ಮತ್ತು ಎರೆ ಗೊಬ್ಬರ

4	ನಾಲ್ಕನೆಯ ವಾರ	ಕಲ್ಲಂಗಡಿಯಲ್ಲಿ ಮುಖ್ಯತಳಗಳು ಹಾಗೂ ಬೀಜೋಪಚಾರ
5	ಐದನೆಯ ವಾರ	ರಸಾಯನಿಕ ಗೊಬ್ಬರ ಭಳಕೆ ಹಾಗೂ ಸಮಗ್ರ ಪೋಷಕಾಂಶ ನಿರ್ವಹಣೆ
6	ಆರನೆಯ ವಾರ	ಸಾಲು ಅಂತರ, ಕಳೆ ನಿರ್ವಹಣೆ ಹಾಗೂ ಇತ್ತರ ಬೇಸಾಯ ಕ್ರಮಗಳು
7	ಏಳನೆಯ ವಾರ	ನೀರು ನಿರ್ವಹಣೆ ಹಾಗೂ ಹನಿ ನೀರಾವರಿ
8	ಎಂಟನೆಯ ವಾರ	ಕಲ್ಲಂಗಡಿಯಲ್ಲಿ ಬರುವ ಪ್ರಮುಖ ಕೀಟಗಳು ಹಾಗೂ ಸಮಗ್ರ ಕೀಟ ನಿರ್ವಹಣೆ
9	ಒಂಬತ್ತನೆಯ ವಾರ	ಕಲ್ಲಂಗಡಿಯಲ್ಲಿ ಬರುವ ಪ್ರಮುಖ ರೋಗಗಳು ಹಾಗೂ ಸಮಗ್ರ ರೋಗ ನಿರ್ವಹಣೆ
10	ಹತ್ತನೆಯ ವಾರ	ಕೊಯ್ಲು ಹಾಗೂ ಕೊಯ್ಲುತ್ತರ ತಂತ್ರಜ್ಞಾನಗಳು

ಕೋಷ್ಟಕ: 2 ರೈತ ಕ್ಷೇತ್ರ ಪಾಠಶಾಲೆ ಹಾಗೂ ರೈತ ಪದ್ಧತಿಯಲ್ಲಿ ಬೆಳೆಸಿದ ಕಲ್ಲಂಗಡಿ ಬೆಳೆಯ ಲಾಭ ಮತ್ತು ಖರ್ಚಿನ ವಿವರ

ಕ್ರಮ ಸಂಖ್ಯೆ	ವಿವರ	ಒಟ್ಟು ಖರ್ಚು/ ಹೆಕ್ಟರೆಗೆ ರೂ. ಪೈ	ಒಟ್ಟು ಆದಾಯ/ ಹೆಕ್ಟರೆಗೆ ರೂ. ಪೈ	ನಿವ್ವಳ ಆದಾಯ/ ಹೆಕ್ಟರೆಗೆ ರೂ. ಪೈ	ವ್ಯಯ:ಖರ್ಚು ಅನುಪಾತ
1.	ರೈತ ಕ್ಷೇತ್ರ ಪಾಠಶಾಲೆ ಕಾರ್ಯಕ್ರಮದಡಿ ಬೆಳೆಸಿದ ಕಲ್ಲಂಗಡಿ ಬೆಳೆಯ ಪ್ರಾತ್ಯಕ್ಷಿಕೆ ತಾಕು	38,000/-	1,24,000/-	88,000/-	1:3.44
2	ರೈತ ಪದ್ಧತಿಯಲ್ಲಿ ಬೆಳೆಸಿದ ಕಲ್ಲಂಗಡಿ ಬೆಳೆಯ ಪ್ರಾತ್ಯಕ್ಷಿಕೆ ತಾಕು	26,800/-	72115/-	45315/-	1:2.69

(ಕ) ಪಶುಸಂದೋಪನೆ ಮತ್ತು ಮೀನುದಾರಿಕೆ

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಗ್ರಾಮೀಣ ರೈತರಆರ್ಥಿಕ ಸುಸ್ಥಿರತೆಗೆ ಲಾಭದಾಯಕ ಸಮಗ್ರ ಮೀನು ಕೃಷಿ	ಡಾ: ವಿಜಯಕುಮಾರ ಎಸ್ ಶ್ರೀ. ಗಣೇಶ್ ಪ್ರಸಾದ್. ಎಲ್	192 – 195
2.	ಕರುಗಳಲ್ಲಿ ಮೂಳೆಮುರಿತಕ್ಕೆ ಚಿಕಿತ್ಸೆ	ನವೀನ್ ಎಮ್ ರವಿರಾಯ್‌ದುರ್ಗ್ ಧನಲಕ್ಷ್ಮಿ ಎಸ್ ಸಂತೋಷ್ ಕೆ ಎಮ್	195 – 198
3.	ಎಮ್ಮೆಗಳಲ್ಲಿ ಈರುಳ್ಳಿ ವಿಷಭಾದೆ ಚಿಕಿತ್ಸಾ ನಿರ್ವಹಣೆ	ಎನ್.ಎ.ಪಾಟೀಲ ಅಜಯ್. ಎಸ್ ಯಲ್ಲಪ್ಪ. ಶ. ಇಂಗಳೆ ಸಂದೀಪ್. ಹೆಚ್	199 – 200
4.	ಬೀದರ ಹಾಗೂ ಸುತ್ತಮುತ್ತ ಪ್ರದೇಶದ ಎಮ್ಮೆಗಳಲ್ಲಿ ಶ್ವಾಸಕೋಶ ಸಂಬಂಧಿತ ರೋಗಗಳ ಪ್ರಮಾಣ	ಯಲ್ಲಪ್ಪ ಶ.ಇಂಗಳೆ ಎನ್.ಎ.ಪಾಟೀಲ ವಿವೇಕ ಆರ. ಕಸರಳಿಕರ ರವೀಂದ್ರ ಬಿ.ಜಿ	200 – 204
5.	ಜಾನುವಾರುಗಳ ಕೆಚ್ಚಲು ಮತ್ತು ಮೊಲೆಗಳ ರೋಗಗಳಿಗೆ ಶಸ್ತ್ರ ಚಿಕಿತ್ಸೆಯು ಭಗವಂತಪ್ಪ ಬ. ರೈತರಿಗೆ ಒಂದು ವರದಾನ	ಶಿವಪ್ರಕಾಶ ಬಿ. ವಿ ದಿಲೀಪ್‌ಕುಮಾರ ಡಿ. ಜಹಾಂಗೀರ ಡಿ	204– 207
6.	ಪ್ಲಾಸ್ಟಿಕ್‌ನ ದುರ್ಬಳಕೆಯಿಂದ ಜಾನುವಾರುಗಳ ಆರೋಗ್ಯದ ಮೇಲೆ ದುಶ್ಪರಿಣಾಮಗಳು	ಮೇಘ ಜಿ.ಕೆ, ದಿಲೀಪಕುಮಾರ, ಡಿ ಶಿವ ಪ್ರಕಾಶ, ಬಿವ್ಹಿ	207 – 210
7.	ಎಮ್ಮೆಗಳಲ್ಲಿ ರಕ್ತವರ್ಣಜನಕ ಮೂತ್ರದ ಪ್ರಯೋಗಾಲಯ ಪರೀಕ್ಷೆ ಮತ್ತು ಚಿಕಿತ್ಸೆ	ಎನ್.ಎ.ಪಾಟೀಲ ಸಂದೀಪ. ಹಲಮಂಡಗೆ ಅಜಯ. ಎಸ್. ಸತಬಿಗೆ ವಿವೇಕ. ಆರ್. ಕಸರಾಳೀಕರ್	211– 213
8.	ಶ್ವಾನದಲ್ಲಿ ಬೆಬೀಶಿಯೊಸಿಸ್ ರೋಗದ ಯಶಸ್ವಿ ಚಿಕಿತ್ಸೆ – ಒಂದು ಚಿಕಿತ್ಸಾ ವರದಿ	ರೂಪಾಲಿ ಬಿ, ಪ್ರಿಯಾಂಕ, ಕೃಷ್ಣಮೂರ್ತಿ,ಸಿ.ಎಂ ವಿವೇಕ್ ಆರ್ ಕಸ್ರಾಳಕರ್ ಎನ್.ಎ. ಪಾಟೀಲ್	213 – 215
9.	ದನ ಮತ್ತು ಎಮ್ಮೆಗಳಲ್ಲಿ ಸೆಟೆ ಅಥವಾ ವಾಯ	ನವೀನ್ ಎಮ್ ದಿಲೀಪ್ ಕುಮಾರ್ ಡಿ ಶಿವಪ್ರಕಾಶ್ ಬಿ. ವಿ.	215 – 221
10.	ವಿದ್ಯಾರ್ಥಿಗಳಿಗೆ ಪಶುವೈದ್ಯಕೀಯ ಶಿಕ್ಷಣದ ಮಾರ್ಗದರ್ಶನ	ಪ್ರದೀಪ ಕುಮಾರ ಮಂಜುನಾಥ ಪಾಟೀಲ್ ಎಂ.ಸಿ. ಪಾಟೀಲ್, ಶ್ರೀಕಾಂತ ತಟ್ಟಿ	221 – 228
11.	ದನಗಳ ಆರೋಗ್ಯದ ಮೇಲೆ ಪ್ಲಾಸ್ಟಿಕ್ ವಸ್ತುಗಳ ಪರಿಣಾಮ	ಎಸ್.ಎಂ. ವಕಾರೆ, ಎನ್.ಎ. ಪಾಟೀಲ ವಿವೇಕ. ಆರ್. ಕಸರಳೀಕರ್	
12.	ದೊಡ್ಡ ಮೆಲುಕುಹಾಕುವ ಜಾನುವಾರುಗಳಲ್ಲಿ ಹಿಂಗಾಲಿನ ಟಿಬಿಯಾ ಮೂಳೆ ಮುರಿತಕ್ಕೆ ಅಸ್ತಿಮಜ್ಜೆ ಕಂಬಿ ಮತ್ತು ಮಳೆಗಳಂದ ಶಸ್ತ್ರಚಿಕಿತ್ಸೆ	ಡಿ.ದಿಲೀಪ ಕುಮಾರ ಡಿ. ದಿಲೀಪಕುಮಾರ್ ಬಿ.ವಿ. ಶಿವಪ್ರಕಾಶ್ ಮಂಜುನಾಥ ಪಾಟೀಲ	229 – 230 230 – 234
13.	ಟೀನಿಯಾ ಸೋಲಿಯಂ ಎಂಬ ಲಾಡಿ ಹುಳು ಮತ್ತು ಮೆದುಳಿನ ನ್ಯೂರೋಸಿಸ್ಟಿಸರ್ಕೋಸಿಸ್	ಕೃಷ್ಣಮೂರ್ತಿ, ಸಿ. ಎಂ	235 – 237

(ಕ) ಪಶುಸಂಗೋಪನೆ ಮತ್ತು ಮೀನುಗಾರಿಕೆ

ಗ್ರಾಮೀಣ ರೈತರಆರ್ಥಿಕ ಸುಸ್ಥಿರತೆಗೆ ಲಾಭದಾಯಕ ಸಮಗ್ರ ಮೀನು ಕೃಷಿ

ಡಾ: ವಿಜಯಕುಮಾರ ಎಸ್[1], ಶ್ರೀ. ಗಣೇಶ್ ಪ್ರಸಾದ್. ಎಲ್[2]
[1] ಸಹಾಯಕಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಭೂತನಾಳ, ವಿಜಯಪುರ.
[2] ಸಹಾಯಕ ಪ್ರಾಧ್ಯಾಪಕರು, ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು

ಕರ್ನಾಟಕ ಸಮೃದ್ಧವಾದ ಒಳನಾಡು ಜಲಸಂಪನ್ಮೂಲಗಳಿಂದ ಕೂಡಿದೆ.ಇಲ್ಲಿಒಟ್ಟು ಸುಮಾರು 4.57 ಲಕ್ಷ ಹೆಕ್ಟೇರಿನಷ್ಟು ಒಳನಾಡು ಜಲಸಂಪನ್ಮೂಲವಿದ್ದು, ಅದರಲ್ಲಿ 2.22 ಲಕ್ಷ ಹೆಕ್ಟೇರು ಜಲಾಶಯಗಳು, 2.35 ಲಕ್ಷ ಹೆಕ್ಟೇರುಕೆರೆ ಹಾಗೂ ಕೊಳಗಳಿಂದ ಕೂಡಿದೆ.ಇದಷ್ಟೇಅಲ್ಲದೆ, ಸುಮಾರು 6,000 ಕಿ. ಮೀ, ಗೂ ಉದ್ದದ ನದಿಗಳು ಮೀನುಗಾರಿಕೆಗೆ ವಿಪುಲ ಅವಕಾಶ ಒದಗಿಸಿವೆ.ಕರ್ನಾಟಕರಾಜ್ಯವು ಒಳನಾಡು ಮೀನು ಉತ್ಪಾದನೆಯಲ್ಲಿನೇಶದಲ್ಲಿ ಹತ್ತನೇ ಸ್ಥಾನದಲ್ಲಿದೆ.

ಈ ಯೋಜನೆಯಲ್ಲಿ ಮೀನು ಸಾಕಣಿಕೆಯನ್ನು ಇತರೆ ಕೃಷಿಗಳೊಂದಿಗೆ ವ್ಯವಸ್ಥಿತ ರೂಪದಲ್ಲಿ ಅಳವಡಿಸಿ ಅನುಪಯುಕ್ತ ಕೃಷಿ ತ್ಯಾಜ್ಯಗಳನ್ನು ಪರಿವರ್ತಿಸಿ ಹೆಚ್ಚುವರಿ ಮೀನು ಮರಿಗಳನ್ನು ಬಿತ್ತನೆ ಮಾಡಿ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ರೀತಿಯ ಆಹಾರ ಉತ್ಪಾದನೆ ಮಾಡುವ ವಿಧಾನವನ್ನು "ಸಮಗ್ರ ಮೀನು ಸಾಕಾಣಿಕೆ" ಎಂದು ಕರೆಯಲಾಗುತ್ತದೆ. ಈ ವಿಧಾನದಲ್ಲಿ ಮೀನು ಸಾಕಣಿಕೆಯನ್ನು ಕೋಳಿ, ಬಾತುಕೋಳಿ, ಹೈನುಗಾರಿಕೆ, ಹಂದಿ ಸಾಕಾಣಿಕೆ ಮತ್ತು ತೋಟಗಾರಿಕೆ ಬೆಳೆಗಳೊಂದಿಗೆ ಕೈಗೊಳ್ಳಬಹುದು. ಗೊಬ್ಬರವನ್ನು ಹಸಿರಿಯಾಗಿ ಕೊಳದಲ್ಲಿ ಉಪಯೋಗಿಸುವುದರಿಂದ ಅದರ ಪೋಷಕಾಂಶಗಳು ವ್ಯರ್ಥವಾಗದೆ, ಕೊಳದಲ್ಲಿ ಮೀನುಗಳಿಗೆ ಬೇಕಾದ ನೈಸರ್ಗಿಕ ಆಹಾರ ಉತ್ಪತ್ತಿಯಾಗಿ ಮೀನಿನ ಬೆಳವಣಿಗೆ ಹಾಗೂ ಇಳುವರಿಯನ್ನು ಹೆಚ್ಚಿಸುತ್ತದೆ. ಪ್ರಾಣಿಗಳು ವಾಸಿಸುವ ಗೂಡನ್ನು ಕೊಳದ ಬದುವಿನ ಮೇಲೆ ಅಥವಾ ಕೊಳದ ಮೇಲೆ ನಿರ್ಮಿಸುವುದರಿಂದ ಸ್ಥಳದ ಉಳತಾಯವಾಗುತ್ತದೆ ಹಾಗೂ ನಿರ್ವಹಣೆ ಮಾಡಲು ಬೇಕಾಗುವ ಜನಗಳ ಸಂಖ್ಯೆ ಕಡಿಮೆ. ಪ್ರಾಣಿಗಳು ತಿನ್ನುವಾಗ ಚೆಲ್ಲಿದ ಆಹಾರವನ್ನು ತಿನ್ನುವುದರಿಂದ ಮೀನಿನ ಬೆಳವಣಿಗೆ ಉತ್ತಮವಾಗಿರುತ್ತದೆ, ಉತ್ಪಾದನಾ ವೆಚ್ಚವೂ ಕಡಿಮೆಯಾಗುತ್ತದೆ.

ಕರ್ನಾಟಕ ಸಮೃದ್ಧವಾದ ಒಳನಾಡು ಜಲಸಂಪನ್ಮೂಲಗಳಿಂದ ಕೂಡಿದೆ. ಇಲ್ಲಿ ಒಟ್ಟು ಸುಮಾರು 4.57 ಲಕ್ಷ ಹೆಕ್ಟೇರಿನಷ್ಟು ಒಳನಾಡು ಜಲಸಂಪನ್ಮೂಲವಿದ್ದು, ಅದರಲ್ಲಿ 2.22 ಲಕ್ಷ ಹೆಕ್ಟೇರು ಜಲಾಶಯಗಳು, 2.35 ಲಕ್ಷ ಹೆಕ್ಟೇರು ಕೆರೆ ಹಾಗೂ ಕೊಳಗಳಿಂದ ಕೂಡಿದೆ. ಇದಷ್ಟೇ ಅಲ್ಲದೆ, ಸುಮಾರು 6,000 ಕಿ. ಮೀ, ಗೂ ಉದ್ದದ ನದಿಗಳು ಮೀನುಗಾರಿಕೆಗೆ ವಿಪುಲ ಅವಕಾಶ ಒದಗಿಸಿವೆ. ಆದರೆ ಇವುಗಳನ್ನು ಮೀನು ಉತ್ಪಾದನೆಗೆ ಸಂಪೂರ್ಣವಾಗಿ ಬಳಸಿಕೊಂಡಿಲ್ಲ. ಆದ್ದರಿಂದ ರಾಜ್ಯದಲ್ಲಿ ಒಳನಾಡು ಮೀನು ಕೃಷಿಗೆ ಉಜ್ವಲ ಭವಿಷ್ಯವಿದೆ. ಇದು ನೀಲಿಕ್ರಾಂತಿಗೆ ದಾರಿಮಾಡಿಕೊಟ್ಟಿದೆ. ಸಿಹಿನೀರು (ಒಳನಾಡು) ಜಲಕೃಷಿಯಲ್ಲಿ ಭಾರತವು ವಿಶ್ವದಲ್ಲಿ 2ನೇ ಸ್ಥಾನದಲ್ಲಿದೆ. ಕರ್ನಾಟಕ ರಾಜ್ಯವು ಒಳನಾಡು ಮೀನು ಉತ್ಪಾದನೆಯಲ್ಲಿ ದೇಶದಲ್ಲಿ ಹತ್ತನೇ ಸ್ಥಾನದಲ್ಲಿದೆ.

ಈ ಯೋಜನೆಯಲ್ಲಿ ಮೀನು ಸಾಕಣಿಕೆಯನ್ನು ಇತರೆ ಕೃಷಿಗಳೊಂದಿಗೆ ವ್ಯವಸ್ಥಿತ ರೂಪದಲ್ಲಿ ಅಳವಡಿಸಿ ಅನುಪಯುಕ್ತ ಕೃಷಿ ತ್ಯಾಜ್ಯಗಳನ್ನು ಪರಿವರ್ತಿಸಿ ಹೆಚ್ಚುವರಿ ಮೀನು ಮರಿಗಳನ್ನು ಬಿತ್ತನೆ ಮಾಡಿ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ರೀತಿಯ ಆಹಾರ ಉತ್ಪಾದನೆ ಮಾಡುವ ವಿಧಾನವನ್ನು "ಸಮಗ್ರ ಮೀನು ಸಾಕಾಣಿಕೆ" ಎಂದು ಕರೆಯಲಾಗುತ್ತದೆ.

ಈ ವಿಧಾನದಲ್ಲಿ ಮೀನು ಸಾಕಣಿಯನ್ನು ಕೋಳಿ, ಬಾತುಕೋಳಿ, ಹೈನುಗಾರಿಕೆ, ಹಂದಿ ಸಾಕಾಣಿಕೆ ಮತ್ತು ತೋಟಗಾರಿಕೆ ಬೆಳೆಗಳೊಂದಿಗೆ ಕೈಗೊಳ್ಳಬಹುದು. ಮೀನು ಸಾಕಣಿಯಲ್ಲಿ ಹೆಚ್ಚಿನ ಉತ್ಪಾದನೆಯನ್ನು ಪಡೆಯಲು ಸಾವಯುವ ಗೊಬ್ಬರ ಮತ್ತು ಕೃತಕ ಆಹಾರಗಳ ಪೂರೈಕೆ ಅತಿ ಮುಖ್ಯ. ಆದರೆ ಗೊಬ್ಬರ ಮತ್ತು ಕೃತಕ ಆಹಾರದ ಪೂರೈಕೆಯಿಂದ ಉತ್ಪಾದನಾ ವೆಚ್ಚ ಶೇಕಡ ೫೦ಕ್ಕಿಂತ ಹೆಚ್ಚಾಗುತ್ತದೆ. ಇಂತಹ ಸಂದರ್ಭದಲ್ಲಿ ಸಮಗ್ರ ಮೀನು ಸಾಕಣಿ ಹೆಚ್ಚು ಲಾಭದಾಯಕ. ಜೊತೆಗೆ ಗೊಬ್ಬರವನ್ನು ಹಸಿಯಾಗಿ ಕೊಳದಲ್ಲಿ ಉಪಯೋಗಿಸುವುದರಿಂದ ಅದರ ಪೋಷಕಾಂಶಗಳು ವ್ಯರ್ಥವಾಗದೆ, ಕೊಳದಲ್ಲಿ ಮೀನುಗಳಿಗೆ ಬೇಕಾದ ನೈಸರ್ಗಿಕ ಆಹಾರ ಉತ್ಪತ್ತಿಯಾಗಿ ಮೀನಿನ ಬೆಳವಣಿಗೆ ಹಾಗೂ ಇಳುವರಿಯನ್ನು ಹೆಚ್ಚಿಸುತ್ತದೆ. ಅಲ್ಲದೆ ಮೀನುಗಳು ಗೊಬ್ಬರದಲ್ಲಿ ಜೀರ್ಣವಾಗದೆ ಉಳಿದಿರುವ ವಸ್ತುಗಳನ್ನು ಆಹಾರವಾಗಿ ಬಳಸಿಕೊಳ್ಳುತ್ತವೆ. ಪ್ರಾಣಿಗಳು ವಾಸಿಸುವ ಗೂಡನ್ನು ಕೊಳದ ಬದುವಿನ ಮೇಲೆ ಅಥವಾ ಕೊಳದ ಮೇಲೆ ನಿರ್ಮಿಸುವುದರಿಂದ ಸ್ಥಳದ ಉಳತಾಯವಾಗುತ್ತದೆ ಹಾಗೂ ನಿರ್ವಹಣೆ ಮಾಡಲು ಬೇಕಾಗುವ ಜನಗಳ ಸಂಖ್ಯೆ ಕಡಿಮೆ. ಪ್ರಾಣಿಗಳು ತಿನ್ನುವಾಗ ಚೆಲ್ಲಿದ ಆಹಾರವನ್ನು ತಿನ್ನುವುದರಿಂದ ಮೀನಿನ ಬೆಳವಣಿಗೆ ಉತ್ತಮವಾಗಿರುತ್ತದೆ, ಉತ್ಪಾದನಾ ವೆಚ್ಚವೂ ಕಡಿಮೆಯಾಗುತ್ತದೆ.

ಸಮಗ್ರ ಮೀನು ಕೃಷಿಯ ಉಪಯೋಗಗಳು

* ಗೊಬ್ಬರ ಹಸಿಯಾಗಿ ಕೊಳದಲ್ಲಿ ಉಪಯೋಗಿಸಲ್ಪಟ್ಟಿರುವುದರಿಂದ ಅದರ ಪೊಶಕಾಂಶಗಳು ವ್ಯರ್ಥವಾಗದೆ, ಕೊಳದಲ್ಲಿ ನೈಸರ್ಗಿಕ ಆಹಾರದ ಉತ್ಪತ್ತಿಯನ್ನು ಹೆಚ್ಚಿಸುತ್ತದೆ.

* ಮೀನುಗಳು ಗೊಬ್ಬರದಲ್ಲಿ ಜೀರ್ಣವಾಗದೆ ಉಳಿದಿರುವ ಆಹಾರವನ್ನು ಮತ್ತು ಪ್ರಾಣಿಗಳು ತಿನ್ನುವಾಗ ಚಲ್ಲಿದ ಆಹಾರವನ್ನು ತಿನ್ನುತ್ತವೆ. ಇದರಿಂದ ಕೃತಕ ಆಹಾರದ ಪ್ರಮಾಣ ಮತ್ತು ವೆಚ್ಚ ಕಡಿಮೆ ಮಾಡಬಹುದು.

* ಸಮಗ್ರ ಮೀನು ಕೃಷಿಯನ್ನು ಕೈಗೊಳ್ಳುವುದರಿಂದ ವಾತವರಣದ ನೈರ್ಮಲ್ಯವನ್ನು ಕಾಪಾಡಿಕೊಳ್ಳುವಲ್ಲಿ ಮತ್ತು

ಗ್ರಾಮೀಣ ಜನತೆಗೆ ಕಡಿಮೆ ದರದಲ್ಲಿ ಉತ್ತಮ ಪೌಷ್ಠಿಕ ಆಹಾರ ಒದಗಿಸುವ ಜೊತೆಗೆ ಉದ್ಯೋಗ ಸೃಷ್ಠಿಸಬಹುದು.

* ಮೀನು ಒಂದು ಉತ್ತಮ ಪೌಷ್ಠಿಕ ಆಹಾರ ಉತ್ತಮ ಪೌಷ್ಠಿಕದಾಯಕ ಸಸಾರಜನದಯುಕ್ತ ಆಹಾರವಾದ ಮೀನಿನ ಬಳಕೆಯಿಂದ ಸುಸ್ಥಿರ ಜೀವನ ಸಾಗಿಸಬಹುದು. ಸಂಶೋಧನೆಗಳ ಪ್ರಕಾರ ಹೃದಯರೋಗ ಹೃದಯಪಾತಗಳು, ಕುರುಡುತನ, ಆತ್ರೈಟಿಸ್ ಮತ್ತಿತರ ಖಾಯಿಲೆಗಳಿಗೆ ಮೀನು ಸೇವಿಸುವುದರಿಂದ ಹಾಗೂ ಸೇವಿಸುವವರಲ್ಲಿ ಅತಿ ಕಡಿಮೆ ಎಂದು ತಿಳಿದು ಬಂದಿದೆ. ಇತ್ತೀಚಿನ ಸಂಶೋದನ ಫಲಿತಾಂಶದ ಪ್ರಕಾರ ಮೆದುಳಿನ ಬೆಳವಣಿಗೆ ಮತ್ತು ಜ್ಞಾಪಕಶಕ್ತಿ ವೃದ್ದಿಗೆ ಸಹಾಯಕಾರಿಯಾಗುತ್ತದೆ ಎಂದು ತಿಳಿದುಬಂದಿದೆ.

ಸಮಗ್ರ ಮೀನು ಕೃಷಿಯ ತಾಂತ್ರಿಕತೆ ಮತ್ತು ನಿರ್ವಹಣೆ : ಒಳನಾಡ ಮೀನು ಸಾಕಣೆಯಲ್ಲಿ ಭಾರತೀಯ ದೊಡ್ಡಗೆಂಡೆ ಮೀನುಗಳಾದ ಕಾಟ್ಲ, ರೋಹು, ಮೃಗಾಲ್ ಮತ್ತು ವಿದೇಶಿ ಗೆಂಡೆ ಮೀನುಗಳಾದ ಸಾಮಾನ್ಯಗೆಂಡೆ, ಬೆಳ್ಳಗೆಂಡೆ ಹಾಗೂ ಹುಲ್ಲುಗೆಂಡೆ ಮೀನುಗಳು ಬಹಳ ಆರ್ಥಿಕವಾಗಿ ಪ್ರಾಮುಖ್ಯತೆ ಪಡೆದಿವೆ.

ಮಣ್ಣಿನ ಗುಣ ಧರ್ಮಗಳು– ಕೃಷಿ ಹೊಂಡಗಳಲ್ಲಿ ನೀರಿನ ಬಸಿಯುವಿಕೆ ಮಣ್ಣಿನ ಗುಣಧರ್ಮಕ್ಕೆ ಅನುಗುಣವಾಗಿರುತ್ತದೆ. ಆದ್ದರಿಂದ ಹಸಿರೆಲೆ ಗೊಬ್ಬರಗಳಿಂದ ಮಣ್ಣಿನ ಫಲವತ್ತತೆ ಹೆಚ್ಚಿಸಲು ಹೊಂಗೆ, ಅಗಸೆ ಸೊಪ್ಪು ಮತ್ತು ಚಂಬೆಗಳನ್ನು ಬಳಸಬಹುದು. ಮಣ್ಣು ಫಲವತ್ತತೆ ಮತ್ತು ರಚನಾ ಸ್ವರೂಪ ಜೇಡಿ ಹಾಗೂ ಕೆಂಪು ಮಣ್ಣಿನ ಮಿಶ್ರಣದಿಂದ ಕೂಡಿರಬೇಕು.

ನೀರಿನ ಗುಣಗಳು – ನೀರಿನ ರಸಸಾರ 6 ರಿಂದ 9

ನೀರಿನಲ್ಲಿ ಕರಗಿರುವ ಆಮ್ಲಜನಕ 6 ರಿಂದ 9 ಪಿ.ಪಿ.ಎಂ

ನೀರಿನಲ್ಲಿ ಕರಗಿರುವ ನೈಟ್ರೇಟ್ – 2ರಿಂದ 3 ಪಿ.ಪಿ.ಎಂ

ನೀರಿನಲ್ಲಿ ಕರಗಿರುವ ಫಾಸ್ಪೇಟ್ – 0.2ರಿಂದ 1.15 ಪಿ.ಪಿ.ಎಂ ಹೂಂದಿರಬೇಕು.

ಹೊಸದಾಗಿ ಕೊಳದ ನಿರ್ಮಾಣ ಮತ್ತು ತಯಾರಿ : ಜಿಗುಟು ಮಣ್ಣಿನಿಂದ ಕೂಡಿದ, ಸಾಕಷ್ಟು ನೀರಿನ ಆಶ್ರಯವಿರುವ, ಪ್ರವಾಹಕ್ಕೊಳಗಾಗದ, ರಸ್ತೆ ಸಮೀಪವಿರುವ ಮತ್ತು ಇಳಜಾರಾದ ತಗ್ಗು ಪ್ರದೇಶವನ್ನು ಮೀನುಸಾಕಣೆಗೆ ಆರಿಸುವುದು ಸೂಕ್ತ. ಉತ್ತಮ ನಿರ್ವಹಣೆ ದೃಷ್ಟಿಯಿಂದ ಆಯುತಾಕಾರದ 0.25 ರಿಂದ 2 ಎಕರೆ ವಿಸ್ತೀರ್ಣದ 40 ಮೀ. ಅಗಲದೊಳಗಿನ ಕೊಳ ಮೀನು ಸಾಕಣೆಗೆ ಯೋಗ್ಯವಾದುದು.

ಕೊಳ ನಿರ್ಮಾಣ ಮಾಡುವಾಗ, ಕೊಳದ ಬದುವಿನ ಮೇಲ್ಬಾಗ 1.5 ರಿಂದ 2.0 ಮೀ. ಅಗಲವಿರುವಂತೆ ಎಚ್ಚರವಹಿಸಬೇಕು. ಕೋಳಕ್ಕೆ ನೀರು ತುಂಬಿಸುವ ತೂಬು ಗರಿಷ್ಠ ನೀರಿನ ಮಟ್ಟಕ್ಕಿಂತ ಅರ್ಧ ಮೀಟರಿನಷ್ಟು ಎತ್ತರದಲ್ಲಿರಬೇಕು. ಕೊಳದಿಂದ ಹೊರಬಿಡುವ ನೀರಿನ ತೂಬು ಕೊಳದ ಇಳಜಾರಿನ ಜಾಗದಲ್ಲಿರಬೇಕು. ಕೊಳದಲ್ಲಿ ಬಿಟ್ಟ ಮೀನುಗಳು ಹೊರಕ್ಕೆ ಹೋಗದಂತೆ ಮತ್ತು ಅನುಪಯುಕ್ತ ಮೀನುಗಳು ಒಳಗೆ ಬಾರದಂತೆ ತಡೆಯಲು ಕೊಳದ ತೂಬುಗಳಿಗೆ ಸಣ್ಣ ಕಣ್ಣಿನ ಜಾಲರಿಯನ್ನು ಅಳವಡಿಸಬೇಕು. ಉತ್ತಮ ಮೀನಿನ ಬೆಳವಣಿಗೆಗೆ ಕೊಳದ ನೀರು ಮತ್ತು ಮಣ್ಣಿನ ರಸಸಾರವನ್ನು ಲಭ್ಯವಿರುವ ಕೊಳಗಳ ತಯಾರಿಯಲ್ಲಿ ತಿಳಿಸಿರುವಂತೆ ಅನುಸರಿಸಬೇಕು. ಇದಾದ ನಂತರ ಬೆರಳುದ್ದದ ಗಾತ್ರದ ಕಾಟ್ಲ, ರೋಹು ಮತ್ತು ಸಾಮಾನ್ಯಗೆಂಡೆ ಮೀನು ಮರಿಗಳನ್ನು ಕ್ರಮವಾಗಿ 4:3:3ರ ಅನುಪಾತದಲ್ಲಿ ಎಕರೆಗೆ 3000 ದಿಂದ 4000 ರವರೆಗೆ ಬಿತ್ತನೆ ಮಾಡಬೇಕು. ಮಣ್ಣು ಮತ್ತು ನೀರು ಆಮ್ಲೀಯವಾಗಿರದೆ ರಸಸಾರ (ಪಿ.ಹೆಚ್.) 6.5 ರಿಂದ 8 ರ ಮಟ್ಟದಲ್ಲಿರಬೇಕು. ಕೊಳದ ನೀರು ಮತ್ತು ಮಣ್ಣು ಆಮ್ಲೀಯವಾಗಿದ್ದರೆ, ಎಕರೆಗೆ 80 ರಿಂದ 100 ಕೆ.ಜಿ.ಗಳಷ್ಟು ಸುಟ್ಟ ಸುಣ್ಣ ಹಾಕಿ ನಂತರ ಕೊಳದ ನೀರಿನ ಮಟ್ಟವನ್ನು 6 ಅಡಿಗೆ ಏರಿಸಬೇಕು. ಸುಣ್ಣ ಹಾಕುವುದರಿಂದ ರಸಸಾರ ಹೆಚ್ಚಾಗುವುದರ ಜೊತೆಗೆ ನೀರನ್ನು ಶುದ್ದಿಗೊಳಿಸಿ ಕೊಳದಲ್ಲಿರುವ ರೋಗಾಣುಗಳ ಸಂಖ್ಯೆಯನ್ನು ತಗ್ಗಿಸುತ್ತದೆ.

ವಿವಿಧ ಸಾಕಣಿಕೆಗಳ ಜೊತೆಗೆ ಮೀನು ಕೃಷಿ ಈ ಕೆಳಕಂಡತ್ತಿರುತ್ತದೆ.

1. ಮೀನು ಮತ್ತು ಬಾತುಕೋಳಿ ಸಾಕಣೆ (ಬಾತುಕೋಳಿ, ಗೌಜಗನಹಕ್ಕಿ ಮತ್ತು ಟರ್ಕಿ)

ಮೀನು ಸಾಕಣೆಯೊಂದಿಗೆ ಸಮಗ್ರ ಕೃಷಿ ಕೈಗೊಳ್ಳಲು ಬಾತುಕೋಳಿ ತುಂಬಾ ಸೂಕ್ತ. ಇದರಿಂದ ಅನೇಕ ಉಪಯೋಗಗಳಿವೆ. ಬಾತುಕೋಳಿಗಳು ಕೊಳದಲ್ಲಿರುವ ಅನುಪಯುಕ್ತವಾದ ಕೀಟಗಳು ಮತ್ತು ಮೀನುಗಳನ್ನು ತಿನ್ನುತ್ತವೆ ಮತ್ತು ಆಹಾರಕ್ಕಾಗಿ ಕೊಳದ ಬದುವಿನ ಮಣ್ಣನ್ನು ಕದಡುವುದರಿಂದ ಮಣ್ಣಿನಲ್ಲಿರುವ ಪೋಷಕಾಂಶಗಳು ಬಿಡುಗಡೆ ಹೊಂದಿ ಕೊಳದ ನೈಸರ್ಗಿಕ ಉತ್ಪಾದನೆ ಹೆಚ್ಚಾಗುತ್ತದೆ. ಜೊತೆಗೆ ಬಾತುಕೋಳಿಗಳು ನೀರಿನಲ್ಲಿ ಓಡಾಡುವಾಗ ಗೊಬ್ಬರ ಹಾಕುವುದರಿಂದ ಗೊಬ್ಬರವು ಕೊಳದ ಎಲ್ಲಾ ಭಾಗಗಳಲ್ಲೂ ಬಿದ್ದು ನೈಸರ್ಗಿಕ ಆಹಾರ ಸದಾ ಉತ್ಪತ್ತಿಯಾಗಿ ಮೀನುಗಳ ಶೀಘ್ರ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

ಒಂದು ಎಕರೆ ನೀರಿನ ಪ್ರದೇಶದಲ್ಲಿ ವೈಜ್ಞಾನಿಕವಾಗಿ ಮೀನು ಸಾಕಣೆ ಮಾಡಲು ಅಗತ್ಯವಾದ ಗೊಬ್ಬರವನ್ನು ಸುಮಾರು 100 ರಿಂದ 150 ಬಾತುಕೋಳಿಗಳಿಂದ ಪಡೆಯಬಹುದು. 5 ರಿಂದ 6 ತಿಂಗಳ ವಯಸ್ಸಿನ ಕಾಕಿ ಕ್ಯಾಂಬಲ್ ತಳಿಯ ಬಾತುಕೋಳಿಗಳನ್ನು ಸಾಕಣೆಗೆ ಬಳಸಬೇಕು. ಬಾತುಕೋಳಿಗಳು ಮೊಟ್ಟೆ ಇಡುವುದಕ್ಕೆ ಮತ್ತು ರಾತ್ರಿ ತಂಗುವುದಕ್ಕೆ ಅನುವಾಗುವಂತೆ ಕೊಳಗಳ ಬದುವಿನ ಮೇಲೆ 500 ಚದರ ಅಡಿ ಗುಡಿಸಲನ್ನು ನಿರ್ಮಿಸಬೇಕು. ಈ ಪದ್ದತಿಯನ್ನು ಅನುಸರಿಸುವಾಗ ಮಾತ್ರ ಎಚ್ಚರಿಕೆಯಿಂದ ಸುಮಾರು 8 ಸೆಂ, ಮೀ. ಉದ್ದದ ಮೀನುಮರಿಗಳನ್ನು ಬಿತ್ತನೆ ಮಾಡಬೇಕು ಇಲ್ಲವಾದಲ್ಲಿ ಬಾತುಕೋಳಿಗಳು ಮೀನುಮರಿಗಳನ್ನು ತಿಂದು ಹಾಕುತ್ತವೆ. ಬಾತುಕೋಳಿಗಳಿಗೆ ಕೊಳದಲ್ಲಿ ನೈಸರ್ಗಿಕವಾಗಿ ದೊರೆಯುವ ಆಹಾರ ಸಾಲದೆ ಇರುವುದರಿಂದ ಮೊಟ್ಟೆ ಕೋಳಿಗಳಿಗೆ ಕೊಡುವ ಆಹಾರ ಮತ್ತು ಅಕ್ಕಿ ತೌಡನ್ನು 1:2ರ ಪ್ರಮಾಣದಲ್ಲಿ ಕೊಡಬೇಕು. 5 ರಿಂದ 6 ತಿಂಗಳ ವಯಸ್ಸಿನ ಬಾತುಕೋಳಿಗಳು ಮೊಟ್ಟೆ ಇಡಲು

ಪ್ರಾರಂಭಿಸಿ ಎರಡು ವರ್ಷಗಳವರೆಗೆ ಲಾಭದಾಯಕವಾಗಿ ಮೊಟ್ಟೆ ಇಡುತ್ತವೆ.

ಹೀಗೆ ಮೀನಿನ ಜೊತೆ ಬಾತುಕೋಳಿಯನ್ನು ಸಮಗ್ರವಾಗಿ ಸಾಕುವುದರಿಂದ ಒಂದು ಎಕರೆ ವಿಸ್ತೀರ್ಣವುಳ್ಳ ಕೊಳದಲ್ಲಿ ಮೀನಿಗೆ ಯಾವುದೇ ಕೃತಕ ಆಹಾರ ಮತ್ತು ಗೊಬ್ಬರವನ್ನು ಕೊಡದೆ 1000 ದಿಂದ 1500 ಕೆ.ಜಿ.ಯಷ್ಟು ಮೀನಿನ ಉತ್ಪನ್ನವನ್ನು ಪಡೆಯಬಹುದು. ಬಾತುಕೋಳಿ ಮೊಟ್ಟೆಗಳ ಮಾರಾಟದಿಂದ ಬಾತುಕೋಳಿ ಆಹಾರಕ್ಕೆ ಬೇಕಾದ ಮತ್ತು ಇತರೆ ದೈನಂದಿನ ಹಣದ ಅವಶ್ಯಕತೆಯನ್ನು ಪೂರೈಸಿಕೊಳ್ಳಬಹುದು.

ಮೊಟ್ಟೆ ಉತ್ಪಾದನೆಯಲ್ಲಿ ಕೋಳಿ ಸಾಕಣೆ ಮೊದಲನೆ ಸ್ಥಾನದಲ್ಲಿದ್ದರೆ ಬಾತುಕೋಳಿ ಸಾಕಣೆ ಎರಡನೆ ಸ್ಥಾನದಲ್ಲಿದೆ. ಬಾತುಕೋಳಿಗಳನ್ನು ಕೇವಲ ಮೊಟ್ಟೆಗಳಷ್ಟೇ ಅಲ್ಲದೆ ಮಾಂಸಕ್ಕಾಗಿಯೂ ಸಾಕಲಾಗುತ್ತದೆ. ಬಾತುಕೋಳಿಯ ಪ್ರಮುಖ ತಳಿಗಳು ಮೊಟ್ಟೆಗಾಗಿ ಬೇಳೆಸುವ ತಳಿಗಳು ಕ್ಯಾಂಬೆಲ್, ಇಂಡಿಯನ್ ರನ್ನರ್, ಮಾಂಸಕ್ಕಾಗಿ ಬೆಳೆಯುವ ತಳಿಗಳು ವೈಟ್ ಪೆಕಿನ್, ಇಂಡಿಯನ್ ರನ್ನರ್.

ಗೌಜಗನ ಹಕ್ಕಿ ಸಾಕಣೆ ತುಂಬಾ ಸರಳ ಮತ್ತು ಎಲ್ಲ ವಾತವರಣಕ್ಕೆ ಹೊಂದಿಕೊಳ್ಳುತ್ತದೆ. ಇವುಗಳನ್ನು ಸಾಕಲು ಅತಿ ಕಡಿಮೆ ಜಾಗ ಸಾಕು ಹಾಗೂ ಕಡಿಮೆ ಅವದಿಯಲ್ಲಿ ಬೇಗನೆ ಬೆಳೆಯುವ ಸಾಮರ್ಥ್ಯ ಹೊಂದಿದೆ.

ಟರ್ಕಿ ಕೋಳಿಗಳು ಕೂಡ ಸಣ್ಣ ಪ್ರಮಾಣದಲ್ಲಿ ಸಾಕಣೆ ಮಾಡಬಹುದು. ಸರಳವಾದ ವಾಸಸ್ಥಳದಲ್ಲಿ ಬೆಳೆಯುತ್ತವೆ. ಆಹಾರ ಮತ್ತು ನೀರನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸಬೇಕು.

2. ಮೀನು ಮತ್ತು ಕೋಳಿ ಸಾಕಣೆ : ಮಾಂಸಕ್ಕಾಗಿ ಮತ್ತು ಮೊಟ್ಟೆಗಳಾಗಿ ಕೋಳಿ ಸಾಕಣೆ ಬಹಳ ಪ್ರಚಲಿತದಲ್ಲಿದೆ. ವಿಶ್ವದ ಇತರೆ ಪ್ರಾಣಿ ಆಹಾರ ಉತ್ಪಾದನೆ ಹೋಲಿಸಿದರೆ ಕೋಳಿ ಆಹಾರ ಉತ್ಪಾದನೆಯದೇ ಸಿಂಹಪಾಲು (ಶೇ 37 ರಷ್ಟು) ಭಾರತದಲ್ಲಿ ಕೋಳಿ ಉದ್ಯಮ ಅಂದಾಜು 16 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿದೆ. ಜೊತೆಗೆ ರಾಷ್ಟ್ರದ ಸಂಪನ್ಮೂಲಕ್ಕೆ ಸುಮಾರು 10.000ಕೋಟಿ ರೂಪಾಯಿ ಗಳಿಸುತ್ತಿದೆ. ಕರ್ನಾಟಕ ರಾಜ್ಯವು ಮಾಂಸ ಮತ್ತು ಮೊಟ್ಟೆ ಉತ್ಪಾದನೆಯಲ್ಲಿ 5ನೇ ಸ್ಥಾನಗಳಿಸಿದೆ. ಕೋಳಿ ಗೊಬ್ಬರವು ಉತ್ತಮ ಪ್ರಮಾಣದಲ್ಲಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪೋಷಕಾಂಶಗಳನ್ನು ಒಳಗೊಡಿರುವುದರಿಂದ ನೈಸರ್ಗಿಕ ಆಹಾರವನ್ನು ಕೊಳದಲ್ಲಿ ಬೇಗನೆ ಉತ್ಪತ್ತಿ ಮಾಡುತ್ತದೆ. ಕೊಳದ ಸಿದ್ದತೆ ಮಾಡಿ ಮೀನುಮರಿಗಳನ್ನು ಕೊಳಕ್ಕೆ ಬಿಡುವ 20 ದಿವಸಗಳ ಮೊದಲು ಕೋಳಿ ಸಾಕಣೆಯನ್ನು ಕೈಗೊಳ್ಳಬೇಕು. ಕೋಳಿ ಸಾಕಣೆಯನ್ನು ಕೊಳದ ಮೇಲ್ಬಾಗದಲ್ಲಿ ಅಥವಾ ಕೊಳದ ಬದುವಿನ ಮೇಲೆ ಕೈಗೊಳ್ಳಬಹುದು. ಕೊಳದ ಮೇಲ್ಬಾಗದಲ್ಲಿ ಕೈಗೊಂಡಾಗ ಸ್ಥಳದ ಉಪಯೋಗ ಮತ್ತು ಕೋಳಿಯಿಂದ ಬೀಳುವ ಗೊಬ್ಬರ ಪರಿಣಾಮಕಾರಿಯಾಗಿ ಉಪಯೋಗವಾಗುವುದಲ್ಲದೆ ಗೊಬ್ಬರವು ನೇರವಾಗಿ ಪ್ರತಿನಿತ್ಯ ಕೊಳಕ್ಕೆ ಬೀಳುವುದರಿಂದ ಶೇಕಡ 15 ರಿಂದ 20 ರಷ್ಟು ಭಾಗ ಮೀನಿಗೆ ನೇರ ಆಹಾರವಾಗುತ್ತದೆ. ಒಂದು ಎಕರೆ ಪ್ರದೇಶದಲ್ಲಿ ಮೀನು ಸಾಕಣೆ ಮಾಡಿದರೆ 5 ರಿಂದ 7 ಟನ್ ಕೋಳಿ ಗೊಬ್ಬರವನ್ನು ಒಂದು ವರ್ಷದಲ್ಲಿ ಪೂರೈಕೆ ಮಾಡಬೇಕಾಗುತ್ತದೆ. ಇಷ್ಟು ಪ್ರಮಾಣದ ಕೋಳಿ ಗೊಬ್ಬರವನ್ನು ಪೂರೈಕೆ ಮಾಡಲು ಸುಮಾರು 150 ರಿಂದ 170 ಮೊಟ್ಟೆ ಕೋಳಿಗಳನ್ನು ಸಾಕಬೇಕು. ಮೊಟ್ಟೆ ಕೋಳಿ ಸುಮಾರು 50 ವಾರಗಳ ಕಾಲ ಲಾಭದಾಯಕವಾಗಿ ಮೊಟ್ಟೆಗಳನ್ನು ಕೊಡುವುದರಿಂದ ಮೀನು ಕೃಷಿಯ ಕಾಲಾವಧಿಗೆ ಸರಿಯಾಗುತ್ತದೆ. ಈ ಪದ್ದತಿಯಿಂದ ಮೀನಿಗೆ ಯಾವುದೇ ಕೃತಕ ಆಹಾರ ಮತ್ತು ಗೊಬ್ಬರವನ್ನು ಕೊಡದೆ 1500 ದಿಂದ 2000 ಕೆ.ಜಿ. ಯಷ್ಟು ಮೀನಿನ ಉತ್ಪನ್ನವನ್ನು ಪಡೆಯಬಹುದು.

3. ಮೀನು ಮತ್ತು ಹಂದಿ ಸಾಕಣೆ : ಹಂದಿಗಳು ಅಮೂಲ್ಯವಾದ ಗೊಬ್ಬರ ಉತ್ಪಾದಿಸುವ ಕಾರ್ಖಾನೆಗಳಿದ್ದಂತೆ. ಕೃಷಿಯ ಉತ್ಪನ್ನ, ಮನೆಯಲ್ಲಿ ಉಳಿದ ಆಹಾರ, ಬಳಸದೇ ಉಳಿದ ಹಣ್ಣು ಮತ್ತು ತರಕಾರಿಗಳ ಭಾಗಗಳ ಜೊತೆ ಅಕ್ಕಿ ತೌಡು, ಕಡಲೇಕಾಯಿ ಹಿಂಡಿ, ಹೋಟೆಲ್‌ನಲ್ಲಿ ಉಳಿದ ಆಹಾರವನ್ನು ಹಂದಿಗಳಿಗೆ ಬಳಸಬಹುದು. ಹಂದಿಗಳಿಂದ ಪಡೆದ ಉತ್ತಮ ಗುಣಮಟ್ಟದ ಗೊಬ್ಬರವನ್ನು ಮೀನು ಕೊಳದ ನೀರಿನ ಫಲವತ್ತತೆ ಹೆಚ್ಚಿಸಲು ಬಳಸಬಹುದು. ಇದಲ್ಲದೆ, ಹಂದಿ ಗೊಬ್ಬರದಲ್ಲಿ ಜೀರ್ಣವಾಗದೆ ಉಳಿಯುವ ಆಹಾರ ಮೀನುಗಳಿಗೆ ಆಹಾರವಾಗುತ್ತದೆ. ಹಂದಿ ಸಾಕುವ ಗೂಡನ್ನು ಕೊಳದ ಬದುವಿನ ಮೇಲೆ ಸ್ವಲ್ಪ ಕೊಳದ ಕಡೆ ಇಳಜಾರಿರುವಂತೆ ನಿರ್ಮಿಸಬೇಕು. ಇದರಿಂದ ಗೂಡಿನ ನೆಲ ತೊಳೆದ ನೀರು ಮತ್ತು ಹಂದಿ ಮೂತ್ರ ಸರಾಗವಾಗಿ ಕೊಳಕ್ಕೆ ಬೀಳುತ್ತದೆ. ಹಂದಿ ಮರಿ ಮಾರಾಟ ಗಾತ್ರಕ್ಕೆ ಬರಲು 6 ತಿಂಗಳ ಕಾಲಬೇಕು. ಆದ್ದರಿಂದ ಹಂದಿ ಮರಿಗಳನ್ನು 2 ಹಂತದಲ್ಲಿ ಸಾಕಿದರೆ ಮೀನು ಸಾಕಣೆಯ ಕಾಲಕ್ಕೆ ಸರಿ ಹೊಂದುತ್ತದೆ. ಒಂದು ಎಕರೆ ನೀರಿನ ಕೊಳಕ್ಕೆ 15 ಹಂದಿಗಳು ಒಂದು ಹಂತದಲ್ಲಿ ಹೀಗೆ ಒಟ್ಟು 30 ಹಂದಿಗಳನ್ನು ಸಾಕಬೇಕಾಗುತ್ತದೆ. ಈ ರೀತಿ ಸಮಗ್ರ ಕೃಷಿ ಮಾಡುವುದರಿಂದ ಮೀನಿಗೆ ಯಾವುದೇ ಕೃತಕ ಆಹಾರ ನೀಡದೇ ಸುಮಾರು 1500 ರಿಂದ 2000 ಕೆ.ಜಿ.ಯಷ್ಟು ಮೀನಿನ ಉತ್ಪಾದನೆಯನ್ನು ಪಡೆಯಬಹುದು.

ನಮ್ಮ ದೇಶದಲ್ಲಿರುವ ಹಂದಿಗಳು ಮಾಂಸಕ್ಕೆ ಮಾತ್ರ ಹೆಸರು ಮಾಡಿವೆ ಇವುಗಳಲ್ಲಿ ಮುಖ್ಯವಾದ ತಳಿಗಳು ದೇಶಿ ಮತ್ತು ಅಂಕಮಾಲಿ, ವಿದೇಶಿ ತಳಿಗಳಾದ ಯಾರ್ಕ್‌ಶೈರ್ (ಲಾರ್ಜ್‌ವೈಟ್), ಲ್ಯಾಂಡರೇಸ್ ಮತ್ತು ಬರ್ಕ್‌ಶೈರ್ ಹಂದಿಗಳು ಪ್ರಮುಖವಾದವು.

4. ಮೀನು ಸಾಕಣೆ ಮತ್ತು ಹೈನುಗಾರಿಕೆ : ದೇಶದಲ್ಲಿ ಕ್ಷೀರ ಕ್ರಾಂತಿಯ ಹಸಿರು ಕ್ರಾಂತಿಯ ನಚಿತರ ಹಾಲು ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ ಕರ್ನಾಟಕದಲ್ಲಿ ಬಳಕೆಯಲ್ಲಿರುವ ಮುಖ್ಯವಾದ ಹೈನು ತಳಿಗಳಾದ ಹೋಲ್‌ಸ್ಟೀನ್ ಫ್ರಿಷಿಯನ್ (ಮೂಲ ಹಾಲೆಂಡ್ ದೇಶ) ಈ ತಳಿಯು ಒಂದು ಸೂಲಿನಲ್ಲಿ 3000ದಿಂದ 6000 ಲೀಟರ್ ಹಾಲು ಉತ್ಪಾದಿಸಬಲ್ಲದು ಜರ್ಸಿ (ಮೂಲ ಬ್ರಿಟನ್ ದೇಶದ ಜರ್ಸಿ ದ್ವೀಪ) ಈ ತಳಿಯು ಒಂದು ಸೂಲಿನಲ್ಲಿ 2000ದಿಂದ 4000 ಲೀಟರ್ ಹಾಲು ಕೊಡುತ್ತದೆ. ಪ್ರಮುಖ ಎಮ್ಮೆ ತಳಿಗಳಲ್ಲಿ ಸುರ್ತಿ (ಮೂಲ

ಗುಜರಾತ್) 1200–1500ಲೀಟರ್, ಮುರ್ರಾ (ಮೂಲ ಹರಿಯಾಣ) 1800–2000 ಲೀ, ಪಂಡರಾಪುರಿ (ಮೂಲ ಮಹಾರಾಷ್ಟ್ರ) 800–1200 ಲೀ, ಧಾರವಾಡ (ಮುಂಡರಗಿ, ಹೊಳೆಸಾಲ್) ಮೂಲ ಉತ್ತರ ಕರ್ನಾಟಕ ಹಾಲು ಉತ್ಪಾದನೆ 500–1500 ಲೀ,

ದನದ ಸಗಣಿಯಲ್ಲಿ ಹೆಚ್ಚಿನ ಪೋಷಕಾಂಶಗಳಿದ್ದು ಮೀನಿನ ಕೊಳಕ್ಕೆ ಸೂಕ್ತ ಸಾವಯುವ ಗೊಬ್ಬರವಾಗಿರುತ್ತದೆ. ದನಗಳನ್ನು ಮೀನಿನ ಕೊಳದ ಬದುವಿನ ಮೇಲೆ ಕೊಠಡಿ ನಿರ್ಮಿಸಿ ಸಾಕಬಹುದು. ಕೊಠಡಿಯನ್ನು ಕೊಳದ ಕಡೆ ಇಳಜಾರಾಗಿ ನಿರ್ಮಿಸಿದರೆ ದನದ ಮಲಮೂತ್ರ ಮತ್ತು ಕೊಠಡಿ ತೊಳೆದ ನೀರು ಸರಾಗವಾಗಿ ಕೊಳಕ್ಕೆ ಬಿದ್ದು ನೈಸರ್ಗಿಕ ಆಹಾರ ಉತ್ಪತ್ತಿಯಾಗಲು ಸಹಕಾರಿಯಾಗಿ ಮೀನಿನ ಬೆಳವಣಿಗೆ ಉತ್ತಮವಾಗಿರುತ್ತದೆ. ಒಂದು ಎಕರೆ ಕೊಳದ ಪ್ರದೇಶಕ್ಕೆ ಗೊಬ್ಬರ ಒದಗಿಸಲು 2 ಎಮ್ಮೆ ಅಥವಾ ಹಸು ಬೇಕಾಗುತ್ತದೆ. ಈ ರೀತಿ ದನಗಳ ಜೊತೆ ಸಮಗ್ರ ಕೃಷಿ ಕೈಗೊಳ್ಳುವುದರಿಂದ ಮೀನಿಗೆ ಯಾವುದೇ ಕೃತಕ ಆಹಾರ ನೀಡದೇ ಸುಮಾರು 1500 ರಿಂದ 2000 ಕೆ.ಜಿ. ಯಷ್ಟು ಮೀನಿನ ಉತ್ಪಾದನೆಯನ್ನು ಪಡೆಯಬಹುದು.

5. ಕುರಿ,ಮೇಕೆ ಮತ್ತು ಮೊಲ ಸಾಕಣಿಯ ಜೊತೆಗೆ ಮೀನು ಕೃಷಿ

ಕುರಿಯಿಂದ ಉತ್ಕೃಷ್ಟವಾದ ಮಾಂಸ, ಹಾಲು ಉಣ್ಣೆ ಹಾಗೂ ಉತ್ತಮ ಗೊಬ್ಬರ ದೊರೆಯುತ್ತದೆ. ಕುರಿಗಳನ್ನು ಆಧುನಿಕ ತಂತ್ರ ಜ್ಞಾನ, ಆಹಾರ ವಿಜ್ಞಾನ ಹಾಗೂ ತಳಿಯ ಅಭಿವೃದ್ಧಿ ವಿಧಾನಗಳನ್ನು ಅಳವಡಿಸಿಕೊಂಡು ಸಾಕಿದರೆ ಹೆಚ್ಚಿನ ಲಾಭಗಳಸಬಹುದು. ಪ್ರಮುಖ ತಳಿಗಳು– ಇವುಗಳಲ್ಲಿ ಮೂರು ವಿಧಗಳು 1) ಉಣ್ಣೆತಳ 2) ಮಾಂಸದ ತಳಿ 3) ಮಾಂಸ ಮತ್ತು ಉಣ್ಣೆ ತಳಿಗಳು ಅವುಗಳಲ್ಲಿ ರ್ಯಾಂಬೋಲೇಟ್, ರೋಮಿನಿ ಮಾರ್ಷ, ಮಂಡ್ಯ (ಬಂಡೂರು), ನೆಲ್ಲೂರು.

ಆಡು/ಮೇಕೆ: ಆಡುಗಳಿಂದ ಉತ್ಕೃಷ್ಟವಾದ ಮಾಂಸ, ಹಾಲು ಹಾಗೂ ಗೊಬ್ಬರ ದೊರೆಯುತ್ತದೆ. ಇವುಗಳನ್ನು 'ಬಡವರ ಆಕಳು' ಎಂದು ಕರೆಯುತ್ತಾರೆ. ಪ್ರಮುಖ ತಳಿಗಳು ಜಮುನಾಪಾರಿ, ಬಾರಬಾರಿ ಮತ್ತು ಮೆಹಾಸಾನ ಆಡುಗಳು ಇತ್ಯಾದಿ.

ಮೊಲ ಸಾಕಣಿ : ಮೊಲಗಳನ್ನು ವಿಶೇಷವಾಗಿ ಮಾಂಸ, ಚರ್ಮ ಮತ್ತು ಉಣ್ಣೆಗಳಿಗಾಗಿ ಸಾಕಲಾಗುತ್ತದೆ. ಸಣ್ಣ ಹಿಡುವಳಿದಾರರು ಆರ್ಥಿಕ ಮಟ್ಟ ಸುಧಾರಿಸುವ ಜೊತೆಗೆ ಉತ್ತಮ ಪೌಷ್ಠಿಕ ಆಹಾರ ಮತ್ತು ವರ್ಷವಿಡೀ ಕೆಲಸಗಳ ಚಟುವಟಿಯಿಂದ ಇರಬಹುದು. ಇವುಗಳ ಪ್ರಮುಖ ತಳಿಗಳು ಫ್ರೆಂಚ್ ಅಂಗೋರ್, ಬ್ರಿಟಿಷ್ ಅಂಗೋರ್, ಜರ್ಮನ್ ಮತ್ತು ರಷ್ಯನ್ ಅಂಗೋರಗಳು ಇತ್ಯಾದಿ.

6. ಮೀನು ಸಾಕಣಿ ಜೊತೆಯಲ್ಲಿ ತೋಟಗಾರಿಕೆ ಬೆಳೆಗಳು

ಮೀನು ಕೊಳಗಳ ಬದುವಿನ ಮೇಲೆ ತೋಟಗಾರಿಕೆ ಬೆಳೆಗಳಾದ ತೆಂಗು, ಬಾಳೆ, ಪಪ್ಪಾಯ, ಹಾಗೂ ಅಲ್ಪಾವಧಿ ತರಕಾರಿ ಬೆಳೆಗಳಾದ ಬೆಂಡೆ, ಬದನೆ, ಸೌತೆ, ನಿಂಬೆ, ಸೊಪ್ಪು ಇತ್ಯಾದಿ ಬೆಳೆಗಳನ್ನು ಬೆಳೆಸಬಹುದು. ಈ ಬೆಳೆಗಳಿಗೆ ಮೀನಿನ ಕೊಳದ ಫಲವತ್ತಾದ ನೀರನ್ನು ಉಪಯೋಗಿಸುವುದರಿಂದ ಬೇಸಾಯದ ಖರ್ಚನ್ನು ಕಡಿಮೆ ಮಾಡಿ ಹೆಚ್ಚಿನ ಆದಾಯ ಪಡೆಯಬಹುದಾಗಿದೆ.

ಹೆಚ್ಚುತ್ತಿರುವ ಜನಸಂಖ್ಯೆಯಿಂದ ಆಗುತ್ತಿರುವ ಸ್ಥಳದ ಅಭಾವವನ್ನು ಪರಿಗಣಿಸಿ ರೈತರು ಸಮಗ್ರ ಕೃಷಿ ಕೈಗೊಳ್ಳುವುದರಿಂದ ಸ್ಥಳವನ್ನು ಪರಿಣಾಮಕಾರಿಯಾಗಿ ಉಪಯೋಗ ಮಾಡಿಕೊಳ್ಳುವುದರ ಜೊತೆಗೆ, ಕೆಲಸದಾಳುಗಳ ಅವಶ್ಯಕತೆ ಕಡಿಮೆಯಾಗಿ ರೈತರು ಹೆಚ್ಚು ಲಾಭಗಳಿಸಿ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಸಹಕಾರಿಯಾಗುತ್ತದೆ.

ಕರುಗಳಲ್ಲಿ ಮೂಳೆಮುರಿತಕ್ಕೆ ಚಿಕಿತ್ಸೆ

ನವೀನ್ ಎಮ್, ರವಿರಾಯ್‌ದುರ್ಗ್ ಧನಲಕ್ಷ್ಮಿ ಎಸ್ ಮತ್ತು ಸಂತೋಷ್ ಕೆ ಎಮ್
ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ಮತ್ತು ಕ್ಷ–ಕಿರಣ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ವಿನೋಬನಗರ,
ಶಿವಮೊಗ್ಗ–577204 Email:naveencspvet@gmail.com

ಮೂಳೆಮುರಿತವು ಕರುಗಳನ್ನು ಕುರಿತುವಲಿತೆ ಮಾಹುತ್ತದೆ. ಇದರಿಂದ ಕರುವಿಗೆ ಮೂಳೆಮುರಿದ ಕಾಲಿನ ಮೇಲೆ ಭಾರಹಿಡರಾಗುವುದಿಲ್ಲ ಮತ್ತು ಅದು ತುರಿಹಾ ನೋವನ್ನು ಅನುಭವಿಸಬೇಕಾಗುತ್ತದೆ. ಮೂಳೆಮುರಿತದಿಂದ ಮೂಳೆಯು ಸುತ್ತಲಿರುವ ಮಾಂಸಕಂಡಗಳಿಗೂ ಹಾನಿಯುಂಟಾಗುತ್ತದೆ. ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ಮತ್ತು ಕ್ಷ–ಕಿರಣ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗದಲ್ಲಿ ಕರುಗಳಲ್ಲಿ ನಾನಾ ರೀತಿಯ ಮೂಳೆಮುರಿತಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಅವುಗಳಲ್ಲಿ ಮೊಳಕಾಲಿನ ಮೂಳೆಮುರಿತ, ಮೊಣಕೈನ ಮೂಳೆಮುರಿತ, ಮುಂಗಾಲಿನ ಮಣಿಕಟ್ಟಿನ ಮೂಳೆಮುರಿತ ಮತ್ತು ಹಿಂಗಾಲಿನ ಮಣಿಕಟ್ಟಿನ ಮೂಳೆಮುರಿತ ಸಾಮಾನ್ಯವಾಗಿ ಕಂಡುಬರುತ್ತವೆ. ಇದಕ್ಕೆ ವಾಹನದ ಅಪಘಾತ ಮತ್ತು ಕಲ್ಲಿನ ಅಥವಾ ಕೋಲಿನ ಹೊಡೆತಗಳು ಪ್ರಮುಖವಾದ ಕಾರಣಗಳು. ಕ್ಷ–ಕಿರಣವನ್ನು ಸಾಧನವಿಲ್ಲದಿಂದ ಮೂಳೆಮುರಿತವನ್ನು ಕಚಿತಪಡಿಸಬಹುದು. ಮಾಡಿಫೈಡ್ ತಾಮಸ್ ಸ್ಪ್ಲಿಂಟ್–ಪೈಬರ್ ಗ್ಲಾಸ್ ಕ್ಯಾಸ್ಟನ್ನು ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ಮತ್ತು ಕ್ಷ–ಕಿರಣ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ ಶಿವಮೊಗ್ಗದಲ್ಲಿ ವಿಶಿಷ್ಟವಾಗಿ ವಿನ್ಯಾಸಗೊಳಿಸಲಾಗಿದೆ ಮತ್ತು ಖಾಸಗೇಕ ಕರುಗಳಲ್ಲಿ ಮೊಳಕಾಲು ಮತ್ತು ಮೊಣಕೈ ಮೂಳೆಮುರಿತದ ಚಿಕಿತ್ಸೆಗೆ ಯಶಸ್ವಿಯಾಗಿ ಖಚಿಸಲಾಗುತ್ತಿದೆ. ಅಪಘಾತಕ್ಕೊಳಗಾದ ಕರುಗಳಲ್ಲಿ ಮೂಳೆಮುರಿತದ ಜೊತೆಗೆ ತೆರೆದಗಾಯವಾಗಿರುತ್ತದೆ. ಇವುಗಳಿಗೆ ಮಾಡಿಫೈಡ್ ತಾಮಸ್ ಸ್ಪ್ಲಿಂಟ್ – ಕ್ಯಾಸ್ಟ್ ಸೂಕ್ತವಲ್ಲ. ಆದ್ದರಿಂದ ಇಂತಹಾ ಕರುಗಳಿಗೆ ಟ್ರಾನ್ಸ್‌ಫಿಕ್ಷೇಶನ್ ವಿಧಾನವನ್ನು ಖಚಿಸಲಾಗುತ್ತದೆ. ಮುಂಗಾಲಿನ ಮಣಿಕಟ್ಟು ಮತ್ತು ಹಿಂಗಾಲಿನ ಮಣಿಕಟ್ಟಿನ ಮೂಳೆ ಮುರಿತವು ಸಾಮಾನ್ಯವಾಗಿ ಅಪಘಾತದಿಂದಾಗಿರುತ್ತದೆ. ಇದರಿಂದ ತೆರೆದ ಗಾಯವಾಗಿರುತ್ತದೆ. ಆದ್ದರಿಂದ ಇದಕ್ಕೆ ಟ್ರಾನ್ಸ್‌ಫಿಕ್ಷೇಶನ್

ವಿಧಾನವನ್ನು ಬಳಸಲಾಗುತ್ತದೆ. ಒಂದುವೇಳೆ ತೆರೆದಗಾಯವಾಗಿಲ್ಲವಾದರೆ ಪೈಬರ್‌ಗ್ಲಾಸ್‌ನ್ನು ಅಳವಡಿಸಲಾಗುತ್ತದೆ. ಪೈಬರ್ ಗ್ಲಾಸ್ ತುರಿಪಾ ಉತ್ತಮವಾದುದ್ದು, ಏಕೆಂದರೆ ಇದು ಹಗುರವಾಗಿರುತ್ತದೆ ಮತ್ತು ಮಳೆನೀರಿನ ಮತ್ತು ಗಲಿಜಲದ ತೇವಾಂಶವನ್ನು ಹಾಳಾಗುವುದಿಲ್ಲ.

ಮೂಳೆಮುರಿತವು ಕರುಗಳನ್ನು ಕುಂಟುವಂತೆ ಮಾಡುತ್ತದೆ. ಇದರಿಂದ ಕರುವಿಗೆ ಮೂಳೆಮುರಿದ ಕಾಲಿನ ಮೇಲೆ ಭಾರಬಿಡಲಾಗುವುದಿಲ್ಲ ಮತ್ತು ಅದು ತುಂಬಾ ನೋವನ್ನು ಅನುಭವಿಸಬೇಕಾಗುತ್ತದೆ. ಮೂಳೆಮುರಿತದಿಂದ ಮೂಳೆಯ ಸುತ್ತಲಿರುವ ಮಾಂಸಕಂಡಗಳಿಗೂ ಹಾನಿಯುಂಟಾಗುತ್ತದೆ. ಕರುಗಳಲ್ಲಿ ಮುಂಗಾಲು ಮಣಿಕಟ್ಟಿನ ಮೂಳೆಮುರಿತ ಮತ್ತು ಮೊಳಕಾಲು ಮೂಳೆಮುರಿತಗಳು ಸಾಮಾನ್ಯವಾಗಿ ಕಂಡುಬರುತ್ತದೆ (ತ್ಯಾಗಿ ಮತ್ತು ಜಿತ್‌ಸಿಂಗ್, 2008). ಹಿಂಗಾಲು ಮಣಿಕಟ್ಟಿನ ಮೂಳೆಮುರಿತಕ್ಕೆ ಹೋಲಿಸಿದರೆ ಮುಂಗಾಲು ಮಣಿಕಟ್ಟಿನ ಮೂಳೆಮುರಿತವು ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ (ಸ್ಟೀನರ್ ಮತ್ತು ಸಹ ಕೆಲಸಗಾರರು, 1996)

ಮೂಳೆಮುರಿತಕ್ಕೆ ನಾನಾ ಕಾರಣಗಳಿವೆ . ಅವುಗಳು ಈ ಕೆಳಗಿನಂತಿವೆ.

ಅ. ನೇರವಾದ ಕಲ್ಲಿನ ಅಥವಾ ಕೋಲಿನ ಹೊಡೆತದಿಂದ ಮತ್ತು ಅಪಘಾತದಿಂದಾಗುವ ಗಾಯವು ಮುಖ್ಯವಾದ ಕಾರಣ.

ಆ. ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಹೋರಿಕರುಗಳನ್ನು ಹಬ್ಬಗಳಲ್ಲಿ ಕ್ರೀಡೆಗಳಿಗೆ ಬಳಸಲಾಗುತ್ತದೆ. ಈ ಕ್ರೀಡೆಗಳಲ್ಲಿ ಕರುಗಳಿಗೆ ಗಂಭೀರವಾಗಿ ಗಾಯಗಳಾಗುತ್ತದೆ ಮತ್ತು ಮೂಳೆಗಳು ಮುರಿಯುತ್ತವೆ.

ಇ. ಕರು ಹುಟ್ಟುವಾಗ ಅದರ ಮುಂಗಾಲಿನ ಮಣಿಕಟ್ಟಿಗೆ ಹಗ್ಗ ಅಥವಾ ಸರಪಳಿಯನ್ನು ಕಟ್ಟಿ ಜೋರಾಗಿ ಎಳೆಯುವುದರಿಂದ ಮೂಳೆಮುರಿಯುವ ಸಾಧ್ಯತೆಯಿರುತ್ತದೆ.

ಇ. ಹಠಾತ್ ಜೋರಾಗಿ ಓಡುವುದರಿಂದ, ನೆಗೆಯುವುದರಿಂದ, ಬೀಳುವುದರಿಂದ ಅಥವಾ ಬೀಳಿಸುವುದರಿಂದ ಮೂಳೆಮುರಿಯ ಬಹುದು.

ಈ. ಸ್ಥಳೀಯವಾದ ಅಥವಾ ಇಡೀ ದೇಹದ ಕೆಲವು ರೋಗಗಳಿಂದ ಮೂಳೆಗಳು ದುರ್ಬಲವಾಗುತ್ತವೆ. ಉದಾಹರಣೆಗೆ ಮೂಳೆಗಳಲ್ಲಿ ನೀರಿನ ಚೀಲದ ಬೆಳವಣಿಗೆ, ಕ್ಯಾನ್ಸರ್, ಮತ್ತು ಕುಬ್ಜವಾತ (ರಿಕೆಟ್ಸ್). ಇವುಗಳಿಂದ ಮೂಳೆಗಳು ಸುಲಭವಾಗಿ ಮುರಿದುಹೋಗುತ್ತವೆ.

ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ಮತ್ತು ಕ್ಷ-ಕಿರಣ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗದಲ್ಲಿ ಕರುಗಳಿಗೆ ನಾನಾ ರೀತಿಯ ಮೂಳೆಮುರಿತಗಳಿಗೆ ಯಶಸ್ವಿಯಾಗಿ ಚಿಕಿತ್ಸೆನೀಡಲಾಗುತ್ತಿದೆ. ಅವುಗಳಲ್ಲಿ ಮೊಳಕಾಲಿನ (ಟಿಬಿಯ) ಮೂಳೆಮುರಿತ, ಮೊಣಕೈನ (ರೇಡಿಯಸ್ ಅಂಡ್ ಅಲ್ನಾ) ಮೂಳೆಮುರಿತ, ಮುಂಗಾಲಿನ ಮಣಿಕಟ್ಟಿನ (ಮೆಟಕಾರ್ಪಲ್) ಮೂಳೆಮುರಿತ ಮತ್ತು ಹಿಂಗಾಲಿನ ಮಣಿಕಟ್ಟಿನ (ಮೆಟಟಾರ್ಸಲ್) ಮೂಳೆಮುರಿತಗಳು ಸಾಮಾನ್ಯವಾಗಿ ದಾಖಲಾಗಿರುತ್ತವೆ. ಇದಕ್ಕೆ ವಾಹನದ ಅಪಘಾತ ಮತ್ತು ಕಲ್ಲಿನ ಅಥವಾ ಕೋಲಿನ ಹೊಡೆತಗಳು ಪ್ರಮುಖವಾದ ಕಾರಣಗಳು.

ಮೊಳಕಾಲು ಮತ್ತು ಮೊಣಕೈನ ಮೂಳೆಮುರಿತದಿಂದ ದಾಖಲಾದ ಕರುಗಳಲ್ಲಿ ಸಾಮಾನ್ಯವಾಗಿ ತೆರೆದ ಗಾಯವಾಗಿರುವುದಿಲ್ಲ. ಆದರೆ ಕೆಲವೊಂದು ಅಪಘಾತಕ್ಕೊಳಗಾದ ಕರುಗಳಲ್ಲಿ ತೆರೆದ ಗಾಯವಾಗಿರುತ್ತದೆ. ಬಹುತೇಕ ದಾಖಲಾದ ಕರುಗಳಲ್ಲಿ ತೆರೆದಗಾಯವಾಗಿರುತ್ತದೆ. ಬಹುತೇಕ ಮೊಳಕಾಲು ಮತ್ತು ಮೊಣಕೈ ಮೂಳೆ ಮುರಿದ ಕರುಗಳಿಗೆ ಮಾಡಿಪೈಡ್ ತಾಮಸ್ ಸ್ಪ್ಲಿಂಟ್-ಕ್ಯಾಸ್ಟ್ ಅಲವಡಿಸುವ ಮೂಲಕ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಗಿದೆ (ಆಡಮ್ಸ್ ಮತ್ತು ಪೆಸ್ಲರ್, 1983 ಮತ್ತು ನಸ್ಸ್ ಮತ್ತು ಸಹ ಕೆಲಸಗಾರರು, 2011). ಅಪಘಾತಕ್ಕೊಳಗಾದ ಕರುಗಳಲ್ಲಿ ಮೂಳೆಮುರಿತದ ಜೊತೆಗೆ ತೆರೆದಗಾಯವಾಗಿರುತ್ತದೆ. ಇವುಗಳಿಗೆ ಮಾಡಿಪೈಡ್ ತಾಮಸ್ ಸ್ಪ್ಲಿಂಟ್ – ಕ್ಯಾಸ್ಟ್ ಸೂಕ್ತವಲ್ಲ. ಆದ್ದರಿಂದ ಇಂತಹಾ ಕರುಗಳಿಗೆ ಟ್ರಾನ್ಸ್‌ಪಿಕ್ಸೇಶನ್ ವಿಧಾನವನ್ನು ಬಳಸಲಾಗುತ್ತದೆ.

ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ಮತ್ತು ಕ್ಷ-ಕಿರಣ ವಿಭಾಗಕ್ಕೆ ದಾಖಲಾದ ಕರುಗಳಲ್ಲಿ ಮುಂಗಾಲಿನ ಮಣಿಕಟ್ಟು ಮತ್ತು ಹಿಂಗಾಲಿನ ಮಣಿಕಟ್ಟಿನ ಮೂಳೆ ಮುರಿತಗಳು ಸಾಮಾನ್ಯವಾಗಿ ಅಪಘಾತದಿಂದಾಗಿರುತ್ತವೆ. ಇದರಿಂದ ತೆಗೆದ ಗಾಯವಾಗಿರುತ್ತದೆ. ಆದ್ದರಿಂದ ಇದಕ್ಕೆ ಟ್ರಾನ್ಸ್‌ಪಿಕ್ಸೇಶನ್ ವಿಧಾನವನ್ನು ಬಳಸಲಾಗುತ್ತದೆ (ಸುಸಾನ್ ಮತ್ತು ಡೇವಿಡ್, 2014). ಒಂದುವೇಳೆ ತೆರೆದಗಾಯವಾಗಿಲ್ಲವಾದರೆ ಪೈಬರ್‌ಗ್ಲಾನ್ನು ಅಳವಡಿಸಲಾಗುತ್ತದೆ.

ಕರುಗಳಲ್ಲಿ ಮೊಳಕಾಲು ಮತ್ತು ಮೊಣಕೈ ಮೂಳೆ ಮುರಿತಕ್ಕೆ ಚಿಕಿತ್ಸೆ

ಮೊಳಕಾಲು ಮತ್ತು ಮೊಣಕೈ ಮೂಳೆ ಮುರಿತವು ಸಾಮಾನ್ಯವಾಗಿ ನೇರವಾದ ಹೊಡೆತದಿಂದಾಗಿರುತ್ತದೆ. ಬಹುತೇಕವಾಗಿ ಮೊಳಕಾಲು ಮತ್ತು ಮೊಣಕೈ ಮೂಳೆಯು ಓರೆಯಾಗಿ ಮುರಿದಿರುತ್ತದೆ ಮತ್ತು ಕೆಲವೊಮ್ಮೆ ಅಡ್ಡವಾಗಿ ಕೂಡ ಮುರಿದಿರುತ್ತದೆ. ಸಾಮಾನ್ಯವಾಗಿ ಇವುಗಳ ಮಧ್ಯ ಅಥವಾ ಕೆಲವೊಮ್ಮೆ ಕೆಳಭಾಗದಲ್ಲಿ ಮೂಳೆ ಮುರಿದಿರುತ್ತದೆ. ಕೆಲವೊಮ್ಮೆ ಮೊಳಕಾಲು ಮುರಿತವು ತ್ರುಟಿತವಾಗಿರುತ್ತದೆ ಮತ್ತು ಮೊಲಕಾಲಿನ ಒಳಭಾಗದಲ್ಲಿ ಮಾಂಸಖಂಡಗಳಲ್ಲದಿರುವುದರಿಂದ ಸುಲಭವಾಗಿ ತೆರೆದಗಾಯವಾಗುತ್ತದೆ.

ಪಶುವೈದ್ಯೆಕೀಯ ಮಹಾವಿದ್ಯಾಲಯದ, ಪಶುವೈದ್ಯೆಕೀಯ ಶಸ್ತ್ರಚಿಕಿತ್ಸಾ ವಿಭಾಗಕ್ಕೆ ದಾಖಲಾದ ಕರುಗಳಿಗೆ ವಿಶಿಷ್ಟವಾದ ಮಾಡಿಪೈಡ್ ತಾಮಸ್ – ಪೈಬರ್ ಗ್ಲಾಸ್ ಕ್ಯಾಸ್ಟನ್ನು ಅಳವಡಿಸಿ ಯಶಸ್ವಿಯಾಗಿ ಚಿಕಿತ್ಸೆನೀಡಲಾಗಿದೆ. ಇದನ್ನು ವಿನ್ಯಾಸಗೊಳಿಸಲು 12-19 ಮಿಲಿ ಮೀಟರ್ ಅಲ್ಯೂಮಿನಿಯಮ್ ರಾಡ್‌ಗಳು ಮತ್ತು ಪೈಬರ್ ಗ್ಲಾಸನ್ನು ಬಳಸಲಾಗುತ್ತದೆ.

ಅಲ್ಯೂಮಿನಿಯಮ್ ರಾಡ್‌ನಿಂದ ಸುರುಳ ಮಾಡಲಾಗುತ್ತದೆ. ಈ ಸುರುಳಯು ಮೊಳಕಾಲಿನ ಮೂಳೆ ಮುರಿತವಾಗಿದ್ದರೆ ಕರುವಿನ

ತೊಡೆಯ ಸಂದಿಗೆ ಅಥವಾ ಮೊಣಕೈ ಮೂಳೆ ಮುರಿತವಾಗಿದ್ದರೆ ಅದರ ಕಂಕುಳಿಗೆ ಹೊಂದಿಕೊಳ್ಳುವಂತಿರಬೇಕು ಮತ್ತು ಇದಕ್ಕೆ ಹತ್ತಿಯಿಂದ ಮೆತ್ತೆಯೊದಗಿಸಲಾಗುವುದು. ಈ ಸುರುಳಿಗೆ ಇನ್ನೆರಡು ಅಲ್ಯೂಮಿನಿಯಮ್ ರಾಡ್‌ಗಳನ್ನು ಪಟ್ಟಿದಾರದಿಂದ ಅಂಟಿಸಲಾಗುವುದು.

ಕರುವನ್ನು ಮುರಿದಕಾಲು ಮೇಲೆಬರುವಂತೆ ಕೆಡವಿ ಪ್ರತಿಬಂಧಿಸಬೇಕು ನಂತರ ಸಿದ್ಧಪಡಿಸಿದ ಅಲ್ಯೂಮಿಲಿಯಮ್ ಸ್ಪ್ಲಿಂಟನ್ನು ತೊಡೆಯಸಂದಿ ಅಥವಾ ಕಂಕುಳಿಗೆ ಅಳವಡಿಸಿ ಕಾಲನ್ನು ಎಳೆದಿಡಿಯಬೇಕು. ಇದಾದನಂತರ ಪೈಬರ್ ಗ್ಲಾಸನ್ನು ಅಲ್ಯೂಮಿನಿಯಮ್ ರಾಡಿಗೆ ಸೇರಿಸಿ ಕಾಲಿಗೆ ಸುತ್ತಬೇಕು (ಚಿತ್ರ 1 ಮತ್ತು ಚಿತ್ರ 2). 5–10 ನಿಮಿಶಗಳಲ್ಲಿ ಪೈಬರ್ ಗ್ಲಾಸ್ ಒಣಗಿ ಗಟ್ಟಿಯಾಗುತ್ತದೆ. ಪ್ರತಿದಿನ ಕರುವಿಗೆ 50–100 ಮಿಲಿ ಲೀಟರ್ ಕ್ಯಾಲ್ಸಿಯಮ್ ಸಿರಪ್ಪನ್ನು 1 ತಿಂಗಳವರೆಗೆ ಕೊಡಲಾಗುವುದು. 1.5 ರಿಂದ 2 ತಿಂಗಳ ನಂತರ ಕ್ಷ–ಕಿರಣ ತೆಗೆಯಲಾಗುವುದು. ಒಂದುವೇಳೆ ಮೂಳೆ ಕೂಡಿದ್ದರೆ ಮಾಡಿಪೈಡ್ ತಾಮಸ್ ಸ್ಪ್ಲಿಂಟ್–ಪೈಬರ್ ಗ್ಲಾಸ್ ಕ್ಯಾಸ್ಟನ್ನು ತೆರೆಯಲಾಗುವುದು.

ಚಿತ್ರ 1: ಎಮ್ಮೆಕರುವಿಗೆ ಮೊಳಕಾಲು ಮುರಿತಕ್ಕೆ ಮಾಡಿಪೈಡ್ ತಾಮಸ್ ಸ್ಪ್ಲಿಂಟ್–ಪೈಬರ್ ಗ್ಲಾಸ್ ಕ್ಯಾಸ್ಟ್ ಅಳವಡಿಕೆ

ಚಿತ್ರ 2: ಎಮ್ಮೆಕರುವಿಗೆ ಮೊಣಕೈ ಮುರಿತಕ್ಕೆ ಮಾಡಿಪೈಡ್ ತಾಮಸ್ ಸ್ಪ್ಲಿಂಟ್–ಪೈಬರ್ ಗ್ಲಾಸ್ ಕ್ಯಾಸ್ಟ್ ಅಳವಡಿಕೆ

ಕರುಗಳಲ್ಲಿ ಮುಂಗಾಲು ಮತ್ತು ಹಿಂಗಾಲು ಮಣಿಕಟ್ಟಿನ ಮೂಳೆಮುರಿತ

ಮುಂಗಾಲು ಮತ್ತು ಹಿಂಗಾಲು ಮಣಿಕಟ್ಟಿನ ಮೂಳೆಮುರಿತವು ಕರುಗಳಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ (ಚಿತ್ರ 3). ಕರು ಹುಟ್ಟುವಾಗ ಅದರ ಮುಂಗಾಲಿನ ಮಣಿಕಟ್ಟಿಗೆ ಹಗ್ಗ ಅಥವಾ ಸರಪಳಿಯನ್ನು ಕಟ್ಟಿ ಎಳೆಯಲಾಗುತ್ತದೆ. ಇದರಿಂದ ಮುಂಗಾಲಿನ ಮಣಿಕಟ್ಟು ಮುರಿಯುವ ಸಾಧ್ಯತೆ ಹೆಚ್ಚಾಗಿರುತ್ತದೆ (ತ್ಯಾಗಿ ಮತ್ತು ಜಿತ್‌ಸಿಂಗ್, 2008). ಮಣಿಕಟ್ಟಿನ ಮೂಳೆಮುರಿಯುವುದರಿಂದ ಕರುವು ಆ ಕಾಲಿನ ಮೇಲೆ ಭಾರ ಬಿಡಲಾಗುವುದಿಲ್ಲ ಮತ್ತು ಕುಂಟುತ್ತದೆ. ಕ್ಷ–ಕಿರಣದ ಸಹಾಯದಿಂದ ಮೂಳೆಮುರಿತವನ್ನು ಕಚಿತಪಡಿಸಬಹುದು (ಟಲ್ಲನರ್, 1986). ಮುಂಗಾಲು ಮತ್ತು ಹಿಂಗಾಲು ಮಣಿಕಟ್ಟಿನ ಮೂಳೆಮುರಿತವನ್ನು ಸುಲಭವಾಗಿ ಚಿಕಿತ್ಸೆನೀಡಿ ಸರಿಪಡಿಸಬಹುದು. ಮೂಳೆಮುರಿತದಿಂದ ತೆರೆದ ಗಾಯವಾಗಿಲ್ಲವಾದರೆ ಆ ಕಾಲಿಗೆ ಪ್ಲಾಸ್ಟರ್ ಆಪ್ ಪ್ಯಾರಿಸ್ ಅಥವಾ ಪೈಬರ್ ಗ್ಲಾಸನ್ನು ಸುತ್ತಬಹುದು. ಇವುಗಳನ್ನು ಸುತ್ತುವಾಗ ಮೂಳೆಮುರಿತದ ಮೇಲಿನ ಮತ್ತು ಕೆಳಗಿನ ಕೀಲುಗಳನ್ನು ಸೇರಿಸಿ ಸುತ್ತಬೇಕು. ಇವೆರಡರಲ್ಲಿ ಪೈಬರ್ ಗ್ಲಾಸ್ ತುಂಬಾ ಉತ್ತಮವಾದದ್ದು. ಏಕೆಂದರೆ ಇದು ಹಗುರವಾಗಿರುತ್ತದೆ ಮತ್ತು ಮಳೆನೀರಿನ ಮತ್ತು ಗಂಜಲದ ತೇವಾಂಶದಿಂದ ಹಾಳಾಗುವುದಿಲ್ಲ. ಇವುಗಳನ್ನು ಮೂಳೆಮುರಿತದ ಕಾಲಿಗೆ ಅಳವಡಿಸಿ ಯಶಸ್ವಿಯಾಗಿ ಚಿಕಿತ್ಸೆ ನೀಡಬಹುದು.

ಒಂದುವೇಳೆ ಮೂಳೆಮುರಿತದಿಂದ ತೆರೆದ ಗಾಯವಾಗಿದ್ದರೆ ಟ್ರಾನ್ಸ್‌ಪಿಕ್ಷೇಶನ್ ವಿಧಾನದಿಂದ ಸರಿಪಡಿಸಲಾಗುತ್ತದೆ. ಈ ವಿಧಾನದಲ್ಲಿ 4 ಇಂಟ್ರಾಮೆಡುಲ್ಲರಿ ಪಿನ್ನುಗಳನ್ನು ಬಳಸಲಾಗುಹುದು. 2 ಪಿನ್ನುಗಳನ್ನು ಮೂಳೆಮುರಿತದ ಮೇಲಿನ ತುಣುಕಿಗೆ ಕೊರೆದುಸೇರಿಸಲಾಗುವುದು. ಇನ್ನೆರಡು ಪಿನ್ನುಗಳನ್ನು ಕೆಳಗಿನ ತುಣುಕಿಗೆ ಕೊರೆದುಸೇರಿಸಲಾಗುವುದು. ನಂತರ ಈ ಪಿನ್ನುಗಳನ್ನು ಎಮ್–ಸೀಲಿನ ಮೂಲಕ ಜೋಡಿಸಲಾಗುವುದು (ಚಿತ್ರ 4, ಚಿತ್ರ 6 ಮತ್ತು ಚಿತ್ರ 7). ಈ ಶಸ್ತ್ರಚಿಕಿತ್ಸೆಗೆ ಎಪಿಡೂರಲ್ ಅರವಳಿಕೆ ವಿಧಾನವನ್ನು ಬಳಸಲಾಗುತ್ತದೆ ಮತ್ತು ಇದಕ್ಕೆ 2% ಲಿಗ್ನೊಕೇನ್ ಐಡ್ರೊಕ್ಲೋರೈಡ್ ಚುಚ್ಚುಮದ್ದನ್ನು ಉಪಯೋಗಿಸಲಾಗುತ್ತದೆ.

ಟ್ರಾನ್ಸಪಿಕ್ಷೇಶನ್ ಶಸ್ತ್ರಚಿಕಿತ್ಸೆ ನಂತರ ಕರುವು ಮುರಿದ ಕಾಲಿನ ಮೇಲೆ ಭಾರ ಬಿಡಬಹುದು, ನಡೆದಾಡಬಹುದು ಮತ್ತು ಅದಕ್ಕೆ ಕೂರಲು ಮತ್ತು ನಿಲ್ಲಲು ತೊಂದರೆಯಾಗುವುದಿಲ್ಲ (ಚಿತ್ರ 7). 8 ರಿಂದ 10 ವಾರಗಳ ನಂತರ ಕ್ಷ–ಕಿರಣದ ಸಹಾಯದಿಂದ ಪರಿಶೀಲಿಸಿ ಮೂಳೆ ಕೂಡಿದ್ದರೆ ಮೂಳೆಮುರಿತಕ್ಕೆ ಅಳವಡಿಸಿದ ಸಾಧನಗಳನ್ನು ತೆಗೆಯಲಾಗುವುದು.

ಚಿತ್ರ 3: ಕರುವಿನಲ್ಲಿ ಎಡಮುಂಗಾಲು ಮಣಿಕಟ್ಟಿನ ಮೂಳೆಮುರಿತ

ಚಿತ್ರ 4: ಎಡಮುಂಗಾಲು ಮಣಿಕಟ್ಟಿನ ಮೂಳೆಮುರಿತಕ್ಕೆ ಟ್ರಾನ್ಸ್‌ಪಿಕ್ಸೇಶನ್ ವಿಧಾನ ಅಳವಡಿಕೆ.

ಚಿತ್ರ 5: ಕರುವಿನಲ್ಲಿ ಬಲಹಿಂಗಾಲು ಮಣಿಕಟ್ಟಿನ ಮೂಳೆಮುರಿತ

ಚಿತ್ರ 6: ಬಲಮುಂಗಾಲು ಮಣಿಕಟ್ಟಿನ ಮೂಳೆಮುರಿತಕ್ಕೆ ಟ್ರಾನ್ಸ್‌ಪಿಕ್ಸೇಶನ್ ವಿಧಾನ ಅಳವಡಿಕೆ

ಚಿತ್ರ 7: ಟ್ರಾನ್ಸ್‌ಪಿಕ್ಸೇಶನ್ ಶಸ್ತ್ರಚಿಕಿತ್ಸೆ ನಂತರ

ಮೇಲೆ ಉಲ್ಲೇಖಿಸಿದ ಚಿಕಿತ್ಸಾ ಕ್ರಮಗಳನ್ನು ಕಡಿಮೆ ಖರ್ಚಿನಲ್ಲಿ ಯಶಸ್ವಿಯಾಗಿ ಅಳವಡಿಸಬಹುದು. ಇವುಗಳು ರೈತರಿಗೆ ಅನುಕೂಲಕರವಾದಂತ ಚಿಕಿತ್ಸಾಕ್ರಮಗಳು ಮತ್ತು ಅಳವಡಿಸಿದ ನಂತರ ಕರುಗಳ ಆರೈಕೆ ಕೂಡ ಸುಲಭವಾಗಿರುತ್ತದೆ. ಮೊಳಕಾಲು ಮತ್ತು ಮೊಣಕೈ ಮೂಳೆಮುರಿತಕ್ಕೆ ಬಳಸಿದ ಮಾಡಿಪೈಡ್ ತಾಮಸ್ ಸ್ಪ್ಲಿಂಟ್-ಪೈಬರ್ ಗ್ಲಾಸ್ ಕ್ಯಾಸ್ಟನ್ನು ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ಮತ್ತು ಕ್ಷ-ಕಿರಣ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ ಶಿವಮೊಗ್ಗದಲ್ಲಿ ವಿಶಿಷ್ಟವಾಗಿ ವಿನ್ಯಾಸಗೊಳಿಸಲಾಗಿದೆ ಮತ್ತು ಚಿಕಿತ್ಸೆಗೆ ಯಶಸ್ವಿಯಾಗಿ ಬಳಸಲಾಗುತ್ತಿದೆ.

ಗ್ರಂಥಸೂಚಿ

ಆಡಮ್ಸ್, ಎಸ್.ಬಿ. ಮತ್ತು ಫೆಸ್ಲರ್, ಜೆ.ಫ. 1983. ಟ್ರೀಟ್ಮೆಂಟ್ ಆಪ್ ರೇಡಿಯಲ್, ಅಲ್ನಾರ್ ಅಂಡ್ ಟಿಬಿಯಲ್ ಫ್ರಾಕ್ಚರ್ಸ್ ಇನ್ ಕ್ಯಾಟಲ್, ಯೂಸಿಂಗ್ ಎ ಮಾಡಿಪೈಡ್ ತಾಮಸ್ ಸ್ಪ್ಲಿಂಟ್ ಕ್ಯಾಸ್ಟ್ ಕಾಂಬಿನೇಶನ್. ಜ.ಅಮ್.ವೆಟ್.ಮೆಡ್.ಅಸೊ. 183: 430.

ನಸ್ಸ್, ಕೆ., ಸ್ವೀಸ್ಸ್, ಎ., ಪೀಸ್ಟ್, ಎಮ್. ಮತ್ತು ಕೋಸ್ಟ್ಲಿನ್, ಆರ್. 2011. ಟ್ರೀಟ್ಮೆಂಟ್ ಆಪ್ ಲಾಂಗ್ ಬೋನ್ ಫ್ರಾಕ್ಚರ್ಸ್ ಇನ್ 125 ನ್ಯೂವ್ ಬಾರ್ನ್ ಕಾವ್ಸ್-ಎ ರಿಟ್ರಾಸ್ಪೆಕ್ಟೀವ್ ಸ್ಟಡಿ. ಟೀರಾರ್ಸ್ಟ್ ಪ್ರಾಕ್ಸ್. 39: 15-26.

ಸ್ಟೀನರ್, ಎ., ಹಿರ್ಸ್‌ಬರ್ನರ್, ಜಿ. ಮತ್ತು ಜೀಸ್‌ಬಹ್ಲರ್. 1996. ಮ್ಯಾನೇಜ್‌ಮೆಂಟ್ ಆಪ್ ಮಾಲ್‌ಯುನಿಯನ್ ಆಪ್ ಮೆಟಾಕಾರ್ಪಸ್ ಇನ್ ಟು ಕಾವ್ಸ್. ಜೆನ್ಟ್ರಾಲ್ ವೆಟರಿನಾರ್ಮೆಡ್ ಎ. 43: 561-671.

ಸುಸಾನ್, ಆರ್.ವಿ. ಮತ್ತು ಡೇವಿಡ್, ಇ.ಎ. 2014. ಎಕ್ಸ್‌ಟರ್ನಲ್ ಸ್ಕೆಲಿಟನ್ ಫಿಕ್ಸೇಶನ್ ಆಪ್ ಫ್ರಾಕ್ಚರ್ಸ್ ಇನ್ ಕೈಟಲ್. ವೆಟ್. ಕ್ಲಿನ್.ಪ್ರುಡ್.ಅನಿಮ್. 30: 127-142.

ಟಲ್ಲನರ್, ಇ.ಪಿ. 1986. ಮೆಟಾಕಾರ್ಪಲ್ ಅಂಡ್ ಮೆಟಾಟಾರ್ಸಲ್ ಫ್ರಾಕ್ಚರ್ಸ್ ಇನ್ ಡೇರಿ ಕ್ಯಾಟಲ್-33 ಕೇಸಸ್ (1979-1985). ಜೆ.ಅಮ್.ವೆಟ್.ಮೆಡ್.ಅಸೊ. 189: 463.

ತ್ಯಾಗಿ, ಆರ್.ಪಿ.ಎಸ್ ಮತ್ತು ಜಿತ್ ಸಿಂಗ್. 2008. ರ್ಯೂಮಿನೆಂಟ್ ಸರ್ಜರಿ, ಸಿಬಿಎಸ್, ದೆಲ್ಲಿ.338-378.

ಎಮ್ಮೆಗಳಲ್ಲಿ ಈರುಳ್ಳಿ ವಿಷಭಾದೆ ಚಿಕಿತ್ಸಾ ನಿರ್ವಹಣೆ

ಎನ್.ಎ.ಪಾಟೀಲ[1], ಅಜಯ್. ಎಸ್[2], ಯಲ್ಲಪ್ಪ. ಶ. ಇಂಗಳೆ[3], ಸಂದೀಪ್. ಹೆಚ್[4]
[1]ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, [2]ಸಹಾಯಕ ಪ್ರಾಧ್ಯಾಪಕರು, [3]ಸ್ನಾತ್ತಕೋತ್ತರ ವಿದ್ಯಾರ್ಥಿ, [4]ಸಹಾಯಕ ಪ್ರಾಧ್ಯಾಪಕರು,
ಪಶುವೈದ್ಯಕೀಯ ಚಿಕಿತ್ಸಾಶಾಸ್ತ್ರ ವಿಭಾಗ, ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ಬೀದರ, ಕರ್ನಾಟಕ-585401. ಮಿಂಚಂಚೆ: napvety@gmail.com

ನಾಲ್ಕರಿಂದ ಒಂಭತ್ತು ವರ್ಷ ವಯಸ್ಸಿನ ವರ್ಗೀಕರಿಸಲಾಗದ 9 ಎಮ್ಮೆಗಳು ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಗೆ, ಕಪ್ಪು ಕಂದು ಬಣ್ಣದ ಮೂತ್ರ ವಿಸರ್ಜನೆ, ಮೇವು ತಿನ್ನದಿರುವುದು, ಸ್ನಾಯುಗಳ ದೌರ್ಬಲ್ಯ, ಜೋಲುತ್ತ ನಡೆಯುವಿಕೆ ಮತ್ತು ಮಾಂದ್ಯತೆಯ ಲಕ್ಷಣಗಳ ದೂರಿನೊಂದಿಗೆ ದಾಖಲಾಗಿವೆ. ಚಿಕಿತ್ಸಾಲಯದ ಪರೀಕ್ಷೆಗಳಿಂದ ಬಿಳಿಚಿಕೊಂಡ ಕಣ್ಣು ಮತ್ತು ಯೋನಿಯ ರೋಳ್ಳರೆ, ಕಾಮಾಲೆ, ಕಾಫಿ ಬಿಕಾಕ್ಷನ್ ಬಣ್ಣದ ಮೂತ್ರ ವಿಸರ್ಜನೆ, ಹೆಚ್ಚಿದ ಶ್ವಾಸೋಚ್ಛಾಸ ಮತ್ತು ಹೃದಯದ ಬಡಿತ ಕಂಡು ಬಂದಿರುತ್ತವೆ. ರಕ್ತವಿಜ್ಞಾನ ಪರೀಕ್ಷೆಯಲ್ಲಿ ಕಡಿಮೆ ಪ್ರಮಾಣದ ಒಟ್ಟು ಕೆಂಪುರಕ್ತಕಣಗಳ ಸಂಖ್ಯೆ (3.42+0.24 ಮಿಲಿಯನ್/ಕ್ಯೂಮಿಮಿ), ಕಡಿಮೆ ಪ್ರಮಾಣದ ರಕ್ತವರ್ಣಜನಕ (4.47+0.29 ಗ್ರಾಂ/ಡೆಲಿ), ಕಡಿಮೆ ಪ್ರಮಾಣದ ಕಟ್ಟಿದ ದ್ರವ್ಯಕೋಶ (19.44+0.96%) ಮತ್ತು ಹೆಚ್ಚಿನ ಪ್ರಮಾಣದ ಬಿಳಿರಕ್ತಕಣಗಳ ಸಂಖ್ಯೆ 10.21+5.16ಥ103/ಮೈಲಿ) ಕಂಡು ಬಂದಿವೆ. ರಕ್ತಸಾರದ ಪರೀಕ್ಷೆ ಮಾಡಲಾಗಿದ್ದು, ಯೂರಿಯಾ ನೈಟ್ರೋಜನ್ ಪ್ರಮಾಣ (8.21+0.58 ಮಿ.ಗ್ರಾಂ/ಡೆಲಿ) ಮತ್ತು ಒಟ್ಟು ಬಿಲಿರುಬಿನ್ ಪ್ರಮಾಣ (0.46+0.08 ಮಿ.ಗ್ರಾಂ/ಡೆಲಿ) ಸಾಮಾನ್ಯ ಮಟ್ಟದಲ್ಲಿರುವುದು ಕಂಡು ಬಂದಿವೆ.

ವಿಷಭಾದೆಗೊಳಗಾದ ಎಮ್ಮೆಗಳಿಗೆ ಇ-ಜೀವಸತ್ವ ಮತ್ತು ಸೆಲೆನಿಯಂ ಮಿಶ್ರಣ ಹೊಂದಿರುವ ರೆಫ್ರಿನಾಲ್ ಔಷಧಿಯನ್ನು ಪ್ರತಿ 25 ಕಿ.ಗ್ರಾಂ. ದೇಹ ತೂಕಕ್ಕೆ ಒಂದು ಮಿ.ಲೀ.ನಂತೆ ನಾಲ್ಕು ಪರ್ಯಾಯ ದಿನಗಳಲ್ಲಿ ಮಾಂಸಖಂಡದೊಳಗೆ ಕೊಟ್ಟು ಉಪಚರಿಸಲಾಯಿತು. ಜೊತೆಗೆ ಡೆಕ್ಟ್ರೋಜ್ 5% ಒಂದು ಲೀಟರ್ ಶಿರನಾಳದಲ್ಲಿ ಮತ್ತು ಬಿ-ಜೀವಸತ್ವ ಜೊತೆಗೆ ಯಕೃತ್ ರಸ ಹೊಂದಿರುವ ಬೆರಾಮಿಲ್ ಹತ್ತು ಮಿ.ಲಿ. ಪ್ರಮಾಣದಲ್ಲಿ ಮಾಂಸಖಂಡದೊಳಗೆ 5 ದಿನಗಳವರೆಗೆ ಇಂಜಕ್ಷನ್ ಕೊಡಲಾಯಿತು. 8 ಎಮ್ಮೆಗಳ ಉಪಚಾರದಿಂದ 5 ದಿನಗಳಲ್ಲಿ ಚೇತರಿಸಿಕೊಂಡವು ಮತ್ತು ರಕ್ತದ ನಿಯತಾಂಕಗಳು 15 ದಿನಗಳಲ್ಲಿ ಸಾಮಾನ್ಯ ಮಟ್ಟಕ್ಕೆ ಕಂಡುಬಂದವು. ಒಂದು ಎಮ್ಮೆ ಮೂರನೇ ದಿನ ಮರಣ ಹೊಂದಿತ್ತು. ಮರಣೋತ್ತರ ಪರೀಕ್ಷೆ ಮಾಡಿದಾಗ ಕಾಮಾಲೆ, ಬಿಳುಚಿಕೊಂಡ ಅಂಗಾಂಶಗಳು, ಕಪ್ಪು ಕಂದು ಬಣ್ಣದ ಮೂತ್ರಪಿಂಡಗಳು ಮತ್ತು ಮೂತ್ರ ಅವಲ್ಲನೆ ಮೆಳಕು ಉದರದಲ್ಲಿ ಈರುಳ್ಳಿಯ ತುಣುಕುಗಳು ಕಂಡು ಬಂದಿರುತ್ತವೆ.

ದನಗಳಲ್ಲಿ ಈರುಳ್ಳಿ ವಿಷಭಾದೆ (ಹೋತಿ ಮತ್ತು ಇತರರು, 1980; ಚಕ್ರಬಾರ್ತಿ ಮತ್ತು ಬಾಸಕ, 1994; ಕಾರ್ಬೆರಿ, 1999; ಕೊಲ್ಕ, 2000; ಬಿಕಾನೆ ಮತ್ತು ಇತರರು 2011) ಮತ್ತು ಎಮ್ಮೆಗಳಲ್ಲಿ (ಬೊರೆಲ್ಲಿ ಮತ್ತು ಇತರರು 2009) ಈರುಳ್ಳಿ ವಿಷಯಭಾದೆಯ ಪ್ರಸಂಗಗಳನ್ನು ದಾಖಲಿಸಿದ್ದಾರೆ. ಸದ್ಯದ ಸಂಶೋಧನಾ ಲೇಖನವು 9 ಎಮ್ಮೆಗಳಲ್ಲಿ ಈರುಳ್ಳಿ ವಿಷಭಾದೆ ಮತ್ತು ಉತ್ಕರ್ಷಣಾನಿರೋಧ ಜೀವಸತ್ವಗಳಿಂದ ಯಶಸ್ವಿ ಚಿಕಿತ್ಸಾ ಕ್ರಮಗಳನ್ನು ದಾಖಲಿಸಿದೆ.

4 ರಿಂದ 9 ವರ್ಷ ವಯಸ್ಸಿನ ವರ್ಗೀಕರಿಸಲಾಗದ 9 ಎಮ್ಮೆಗಳು ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಗೆ ಕಪ್ಪು ಕಂದು ಬಣ್ಣದ ಮೂತ್ರ ವಿಸರ್ಜನೆಯ ಲಕ್ಷಣಗಳ ದೂರಿನೊಂದಿಗೆ ದಾಖಲಾಗಿವೆ. ಅಧಿಕ ಪ್ರಮಾಣದ ಈರುಳ್ಳಿ ಸಸ್ಯವನ್ನು 3 ರಿಂದ 5 ದಿನಗಳವರೆಗೆ ಮೇವಾಗಿ ತಿಂದಿರುವ ಇತಿಹಾಸವಿದ್ದ ಈ ಎಮ್ಮೆಗಳಲ್ಲಿ ಮೇವು ತಿನ್ನದಿರುವುದು, ಸ್ನಾಯುಗಳ ದೌರ್ಬಲ್ಯ, ಜೋಲುತ್ತ ನಡೆಯುವಿಕೆ ಮತ್ತು ಮಾಂದ್ಯತೆ ಕಂಡುಬರುತ್ತವೆ. ಚಿಕಿತ್ಸಾಲಯದ ಪರೀಕ್ಷೆಗಳಿಂದ ಬಿಳಚಿಕೊಂಡ ಕಣ್ಣು ಮತ್ತು ಯೋನಿಯ ಲೋಳ್ಳರೆ, ಕಾಮಾಲೆ, ಕಪ್ಪು ಕಂದು ಬಣ್ಣ ಅಥವಾ ಕಾಫಿ ಡಿಕಾಕ್ಷನ್ ಬಣ್ಣದ ಮೂತ್ರ ವಿಸರ್ಜನೆ, ಹೆಚ್ಚಿದ ಶ್ವಾಸೋಚ್ಛಾಸ ಮತ್ತು ಹೃದಯ ಬಡಿತ ಕಂಡು ಬಂದಿರುತ್ತವೆ. ರಕ್ತ ಪರೀಕ್ಷೆಯಲ್ಲಿ ಯಾವುದೇ ಪ್ರೋಟಾಜೊವಾ ಅಥವಾ ಏಕಾಣುಜೀವಿಯ ಸೋಂಕು ಕಂಡುಬಂದಿರುವುದಿಲ್ಲ. ರಕ್ತ ವಿಜ್ಞಾನ ಪರೀಕ್ಷೆಯಲ್ಲಿ ಕಡಿಮೆ ಪ್ರಮಾಣದ ಒಟ್ಟು ಕೆಂಪುರಕ್ತಕಣಗಳ ಸಂಖ್ಯೆ (3.42+0.24 ಮಿಲಿಯನ್ / ಕ್ಯೂಮಿಮಿ), ಕಡಿಮೆ ಪ್ರಮಾಣದ ರಕ್ತವರ್ಣಜನಕ (4.47+0.29 ಗ್ರಾಂ/ಡೆಲಿ), ಕಡಿಮೆ ಪ್ರಮಾಣದ ಕಟ್ಟಿದ ಜೀವ ದ್ರವ್ಯ ಕೋಶ (19.44+0.96%) ಮತ್ತು ಹೆಚ್ಚಿನ ಪ್ರಮಾಣದ ಬಿಳರಕ್ತಕಣಗಳ ಸಂಖ್ಯೆ (10.24+5.16ಥ03/ಮೈಲಿ) ಕಂಡು ಬಂದಿದೆ. ಕೆಂಪು ರಕ್ತಕಣಗಳ, ಸೂಚ್ಯಾಂಕಗಳ ಲೆಕ್ಕ ಮಾಡಲಾಗಿ ಸಾಮನ್ಯ ಮಟ್ಟದ ಎಮ್.ಸಿ.ವಿ. (59.59+5.58 ಪೈಲಿ), ಕಡಿಮೆ ಪ್ರಮಾಣದ ಎಮ್.ಸಿ.ಎಚ್.ಸಿ. (14.60+1.53 ಗ್ರಾಂ/ಡೆಲಿ) ಕಂಡು ಬಂದಿದೆ. ರಕ್ತಸಾರದ ಪರೀಕ್ಷೆ ಮಾಡಲಾಗಿದ್ದು ಯುರಿಯಾ ನೈಟ್ರೋಜನ್ ಪ್ರಮಾಣ (8.21+0.58 ಮಿಗ್ರಾಂ/ಡೆಲಿ) ಮತ್ತು ಒಟ್ಟು ಬಿಲಿರುಬಿನ್ ಪ್ರಮಾಣ (0.46+0.08 ಮಿಲಿಗ್ರಾಂ/ಡೆಲಿ) ಸಾಮಾನ್ಯ ಮಟ್ಟದಲ್ಲಿರುವುದು ಕಂಡು ಬಂದಿದೆ.

ವಿಷಭಾದೆಯುಕ್ತ ಎಮ್ಮೆಗಳಿಗೆ ಇ-ಜೀವಸತ್ವ ಮತ್ತು ಸೆಲೆನಿಯಂ ಮಿಶ್ರಣ ಹೊಂದಿರುವ ರೆಫ್ರೆನಾಲ್ (ಕ್ಯಾಡಿಲಾ ಫಾರ್ಮಾಸ್ಯುಟಿಕಲ್ಸ್) ಔಷಧಿಯನ್ನು ಪ್ರತಿ 25 ಕಿ.ಗ್ರಾಂ ದೇಹ ತೂಕಕ್ಕೆ ಒಂದು ಮಿಲಿ ಲೀಟರ್‌ನಂತೆ ನಾಲ್ಕು ಪರ್ಯಾಯ ದಿನಗಳಂದು ಮಾಂಸಖಂಡದೊಳಗೆ ಇಂಜಕ್ಷನ್ ಕೊಟ್ಟು ಉಪಚರಿಸಲಾಯಿತು. ಜೊತೆಗೆ ಡೆಕ್ಟ್ರೋಸ್ 5% ಒಂದು ಲೀಟರ್ ಶಿರನಾಳದಲ್ಲಿ ಮತ್ತು ಬಿ-ಜೀವಸತ್ವ ಜೊತೆಗೆ ಯಕೃತ್ತ್ ರಸ ಹೊಂದಿರುವ ಬೆಲಾಮಿಲ್ ಹತ್ತು ಮಿಲಿ ಲೀಟರ್ ಪ್ರಮಾಣದಲ್ಲಿ ಮಾಂಸಖಂಡದೊಳಗೆ 5 ದಿನಗಳವರೆಗೆ ಇಂಜಕ್ಷನ್ ಕೊಡಲಾಯಿತು. 8 ಎಮ್ಮೆಗಳು ಉಪಚಾರದಿಂದ 5 ದಿನಗಳಲ್ಲಿ ಚೇತರಿಸಿಕೊಂಡರೆ, 1 ಎಮ್ಮೆ ಮೂರನೇ ದಿನ ಮರಣ ಹೊಂದಿತು. ಮರಣೋತ್ತರ ಪರೀಕ್ಷೆ ಮಾಡಿದಾಗ ಕಾಮಾಲೆ, ಬಿಳುಚಿಕೊಂಡ ಅಂಗಾಂಶಗಳು, ಕಪ್ಪು ಕಂದು ಬಣ್ಣದ ಮೂತ್ರಪಿಂಡಗಳು ಮತ್ತು

ಮೂತ್ರ ಅಲ್ಲದೆ ಮೆಲಕು-ಉದರದಲ್ಲಿ ಈರುಳ್ಳಿಯ ತುಣುಕುಗಳು ಕಂಡು ಬಂದಿರುತ್ತವೆ.

ಬೇರೆ ಪ್ರಾಣಿಗಳಿಗೆ ಹೋಲಿಸಿದಲ್ಲಿ ದನಗಳು ಹೆಚ್ಚಿನ ಪ್ರಮಾಣದಲ್ಲಿ ಈರುಳ್ಳಿ ವಿಷಭಾದೆಗೊಳಗಾಗುತ್ತದೆ. ಈರುಳ್ಳಿಯ ಸಸ್ಯದ ಬಲಿತ ಕಾಂಡಗಳಲ್ಲಿ ಹಾಗೂ ಬಲಿತ ಈರುಳ್ಳಿಯಲ್ಲಿ ಎನ್-ಪ್ರೊಪೈಲ್ ಡೈಸಲ್ಫೈಡ್ ಎಂಬ ರಾಸಾಯನಿಕ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿರುತ್ತವೆ. ಜೊತೆಗೆ ಎಸ್-ಮಿಥೈಲ್‌ಸಿಸ್ಟಿನ್ ಸಲ್ಫಾಕ್ಸೈಡ್ ವಿಷವಸ್ತು ಹೆಚ್ಚಾಗಿದ್ದು ಮೆಲಕು-ಉದರದಲ್ಲಿ ಸೂಕ್ಷ್ಮಾಣು ಜೀವಿಗಳ ಪ್ರಭಾವದಿಂದ ಸಂವರ್ಧನಗೊಂಡು ಡೈಸಲ್ಫೈಡ್‌ಗಳಾಗಿ ಪರಿವರ್ತನೆಗೊಳ್ಳುತ್ತವೆ. ಈ ಡೈಸಲ್ಫೈಡ್‌ಗಳು ಕೆಂಪುರಕ್ತಕಣಗಳನ್ನು ಕರಗಿಸುತ್ತವಲ್ಲದೆ ರಕ್ತವರ್ಣಜನಕ (ಹಿಮೊಗ್ಲೋಬಿನ್) ವನ್ನು ಬಿಡುಗಡೆಗೊಳಿಸಿ ನಂತರ ಮೂತ್ರಪಿಂಡಗಳ ಮೂಲಕ ಸೋಸಿ ಮೂತ್ರದ ಮುಖಾಂತರ ವಿಸರ್ಜಿಸಲ್ಪಡುತ್ತವೆ. ಇದಲ್ಲದೆ ಹಿಮೊಗ್ಲೋಬಿನ್ ಕರಗಿ ಬಿಲುರುಬಿನ್ ಬಿಡುಗಡೆಯಾಗಿ ಕಾಮಾಲೆ ಉಂಟಾಗುತ್ತದಲ್ಲದೆ, ರಕ್ತಹೀನತೆ ಕಂಡು ಬರುತ್ತದೆ. ಬಿಕಾನೆ ಮತ್ತು ಇತರ ಸಂಶೋಧಕರು (2011) ದನಗಳಲ್ಲಿ ಕಂಡು ಬಂದ ಈರುಳ್ಳಿ ವಿಷಭಾದೆಯನ್ನು ಉತ್ಕರ್ಷಣಾನಿರೋಧಕ ಜೀವಸತ್ವಗಳಾದ ಇ ಮತ್ತು ಸೆಲೆನಿಯ ಔಷಧಿಗಳಿಂದ ಯಶಸ್ವಿಯಾಗಿ ಉಪಚರಿಸಿದ್ದು ದಾಖಲಿಸಲಾಗಿದೆ. ಅದರಂತೆ ಈ ಔಷಧಗಳಿಂದ ಎಮ್ಮೆಗಳಲ್ಲಿ ಈರುಳ್ಳಿ ವಿಷಭಾದೆಯನ್ನು ಯಶಸ್ವಿಯಾಗಿ ಉಪಚರಿಸಲಾಗಿದ್ದು, ಇ ಮತ್ತು ಸೆಲೆನಿಯಂ ಔಷಧಿ ಮಿಶ್ರಣವನ್ನು ಶಿಫಾರಸ್ಸು ಮಾಡಬಹುದಾಗಿದೆ.

ಉಲ್ಲೇಖಗಳು:

1. ಕಾರ್ಬೇರಿ ಜೆ.ಟಿ. (1991) ನ್ಯೂಜಿಲ್ಯಾಂಡ ವೆಟ್.ಜೆ.48:5

2. ಚಕ್ರಭಾರ್ತಿ ಎ ಮತ್ತು ಬಾಸಕ್ ಡಿ.ಎನ್ (1994) ಲೈವ್‌ಸ್ಟಾಕ್ ಅಡವೈಸರ್ 9:36

3. ಹೊತಿ ಡಿ.ಎಸ್, ಅರ್ನೆಜಾ ಜೆ.ಎಸ್. ಮತ್ತು ಚಾವ್ಲಾ ಜೆ.ಎಸ್. (1980) ಇಂಡಿಯನ್ ವೆಟ್. ಜೆ.57:690-692

4. ಕೀರ್ಕ್ ಜೆ.ಹೆಚ್ ಮತ್ತು ಬಲಗಿನ್, ಎಂ.ಎಸ್. (1979), ಅಮೇರಿಕಾ, ಜೆ.ವೆಟ್,ರಿಸರ್ಚ್:40:397

5. ಕೋಲ್ಕ್ ಜೆ.ಹೆಚ್. ವಾಂಡರ್ (2000) ವೆಟ್, ರಿಕಾರ್ಡ್.147:18)

6. ಬಿಕಾನೆ ಎ.ಯು. ಘಾಡ್ಗೆ ಹೆಚ್.ಆರ್ ಮತ್ತು ಹಾಸೆ.ಪಿ.ಬಿ. (2011) ಇಂಡಿಯನ್ ವೆಟ್.ಜೆ.88:61-62.

7. ಬೊರೆಲ್ಲಿ ವಿ.ಲೂಸಿಯೆಲ್ಲಿ, ಜೆ.ಫರಲಾನ್, ಎಫ್.ಹೆಚ್. ಹೋಪರ್ಸ್. ಪಿ.ಜಿ.ರೋವಿದಾ ಜೆ.ಎಫ್. ಟ್ರಾವೆರ್ಸೊ.ಎಸ್.ಡಿ ಮತ್ತು ಗಾವಾ ಎ. (2009) ಜೆ.ವೆಟ್.ಡೈಯಾಗ್ನೋಸ್ಟಿಕ್.ಇನವೆಸ್ಟ್. 21:404-405.

8. ಸಲಗಾಡೂ ಬಿ.ಎಸ್, ಮೋನಟೋರಿಯಾ, ಎಲ್,ಎನ್ ಮತ್ತು ರೋಟಾ ಎನ್.ಎಸ್. 2011 ಜೆ.ವೆನಮ್.ಎನಿಮಲ್. ಟಾಕ್ಸಿಕಾ.ಇನಕ್ಲೂ.ಟ್ಯೋಪಿ.ಡಿಸಿಜ. 17:4-11.

ಬೀದರ ಹಾಗೂ ಸುತ್ತಮುತ್ತ ಪ್ರದೇಶದ ಎಮ್ಮೆಗಳಲ್ಲಿ ಶ್ವಾಸಕೋಶ ಸಂಬಂಧಿತ ರೋಗಗಳ ಪ್ರಮಾಣ

ಯಲ್ಲಪ್ಪ ಶ.ಇಂಗಳೆ*, ಎನ್.ಎ.ಪಾಟೀಲ **, ವಿವೇಕ ಆರ. ಕಸರಳಿಕರ***, ರವೀಂದ್ರ ಬಿ.ಜಿ ****
* ಸ್ನಾತಕೋತ್ತರ ವಿದ್ಯಾರ್ಥಿ, **ಪ್ರಾಧ್ಯಾಪಕರು ಮತ್ತು ಮುಖ್ಯಸ್ತರು ಪಶುವೈದ್ಯಕೀಯ ಔಷಧಶಾಸ್ತ್ರ ವಿಭಾಗ, *** ಪ್ರಾಧ್ಯಾಪಕರು, ಪಶುವೈದ್ಯಕೀಯ ಔಷಧಶಾಸ್ತ್ರ ವಿಭಾಗ, ****ಸಹ ಪ್ರಾಧ್ಯಾಪಕರು, ಪಶುವೈದ್ಯಕೀಯ ಔಷಧಶಾಸ್ತ್ರ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ – 585401
ಮಿಂಚ ಅಂಚೆ: dringalevet@gmail.com

ಮೇ 2006 ರಿಂದ ಎಪ್ರೀಲ್ 2016 ರವರೆಗಿನ 10 ವರ್ಷ ಅವಧಿಯಲ್ಲಿ, ಪಶುವೈದ್ಯಕೀಯ ಬೋಧನಾ ಚಿಕಿತ್ಸಾ ಪರಿಕೀರ್ಣ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಚಿಕಿತ್ಸೆ ನೀಡಲಾದ 3314 ಎಮ್ಮೆಗಳ ರೋಗ ತಪಾಸಣೆ ದಾಖಲಾತಿಗಳನ್ನು ಅಧ್ಯಯನ ಮಾಡಲಾಗಿರುತ್ತು. ಶ್ವಾಸಕೋಶ ಪರಿಖರಿಣಿತ ರೋಗಗಳ ಬಗ್ಗೆ ಪರಿಶೀಲಿಸಿದಾಗ ಒಟ್ಟಾರೆ ಶೇಕಡ 8.53 ರಷ್ಟು ರೋಗದ ಪ್ರಮಾಣ ಕಂಡುಖರಿಯಲಿರುತ್ತದೆ. ಈ ರೋಗದ ಪ್ರಮಾಣವು 2 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಮ್ಮೆಗಳಲ್ಲಿ ಅತೀ ಹೆಚ್ಚಾಗಿ (33.92%) ಕಂಡುಖರಿಯಲಿದ್ದು, 10 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಎಮ್ಮೆಗಳಲ್ಲಿ ಅತೀ ಕಡಿಮೆ (2.47%) ದಾಖಲಾಗಿರುತ್ತದೆ. ಋತುಮಾನಾನುಸಾರವಾಗಿ ಪರಿಶೀಲಿಸಿದಾಗ, ಮಳೆಗಾಲದಲ್ಲಿ ಅತೀ ಹೆಚ್ಚು (52.29%) ತದನಂತರ ಚಳಿಗಾಲದಲ್ಲಿ (37.10%) ಹಾಗೂ ಬೇಸಿಗೆಯಲ್ಲಿ ಅತೀ ಕಡಿಮೆ (10.60%) ಕಂಡುಖರಿಯಲಿರುತ್ತದೆ. ಶ್ವಾಸಕೋಶ ಪರಿಖರಿಣಿಸಿದ ರೋಗಗಳನ್ನು 10 ವರ್ಷದ ಹವಾಮಾನ ನಿಯಿತಾಲಿಕಗಳಾದ ಕನಿಷ್ಠ ತಾಪಮಾನ, ಗರಿಷ್ಠ ತಾಪಮಾನ, ಒಟ್ಟು ಮಳೆ ಪ್ರಮಾಣ, ಬೆಳಿಗ್ಗಿನ ಆರ್ದ್ರತೆ ಹಾಗೂ ಸಾಯಿಂಕಾಲದ ಆರ್ದ್ರತೆ ಜೊತೆ ಪರಸ್ಪರ ಅವರೋಕಿಸಿದಾಗ, ಕನಿಷ್ಠ ತಾಪಮಾನ ಮತ್ತು ಒಟ್ಟಾರೆ ಮಳೆ ಜೊತೆಗೆ ಧನಾತ್ಮಕ ಪರಿಖರಿಣ ಕಂಡುಖರಿಯಲಿರುತ್ತದೆ.

ಪ್ರಸ್ತುತ ಅಧ್ಯಯನವು, ಅಸಿಕೆ ಹಾಕಿದ ಎಮ್ಮೆಗಳಿಗಿಂತ ಅಸಿಕೆ ಹಾಕಿಸಲಿರುವ ಎಮ್ಮೆಗಳಲ್ಲಿ ಈ ರೋಗವು ಹೆಚ್ಚಾಗಿ ಕಂಡುಖರಿಯಲಿರುವುದನ್ನು ಖಚಿತಪಡಿಸುತ್ತದೆ. ಅದಲ್ಲದೆ ಗರ್ಭಾವಸ್ಥೆ, ಕರಾವು, ಸಾಗಾಣಿಕೆ, ಆಕಸ್ಮಿಕ ಹವಾಮಾನ ಖದಲಾವಣೆ ಮುಂತಾದ ಪರಿದರ್ಭಗಳಲ್ಲಿ, ಒತ್ತಡ ಖರಿಂದಾಗಿ ಈ ರೋಗವು ಖಲ್ಲಣಗೊಂಡಿರುವುದು ಕಂಡುಖರಯತ್ತದೆ. ಒಟ್ಟಾರೆ ಶ್ವಾಸಕೋಶ ಪರಿಖರಿಣ ರೋಗಗಳು ಖೀದರ ಹಾಗೂ ಸುತ್ತಮುತ್ತ ಪ್ರದೇಶದ ಎಮ್ಮೆಗಳಲ್ಲಿ ಸಾಮಾನ್ಯವಾಗಿ ಕಂಡುಖರಿಯಲಿದ್ದು ಸೂಕ್ತ ಸಮಯದಲ್ಲಿ ಚಿಕಿತ್ಸೆ, ಮುಂಜಾಗ್ರತೆ ಕ್ರಮ ಕೈಗೊಂಡಲ್ಲಿ ರೈತರ ಆರ್ಥಿಕ ನಷ್ಟಗಳನ್ನು ತಡೆಗಟ್ಟಬಹುದು.

ಪರಿಚಯ :– ಭಾರತವು ಕೃಷಿ ಪ್ರಧಾನವಾದ ಹಾಗೂ ಅತ್ಯಧಿಕ ಪಶು ಸಂಪತ್ತು ಹೊಂದಿದ ದೇಶವಾಗಿದೆ. ಹಾಲು ಉತ್ಪಾದನೆಯಲ್ಲಿ ವಿಶ್ವದಲ್ಲಿಯೇ ಮೊದಲ ಸ್ಥಾನ ಹೊಂದಿದ್ದು, ಇದರ ಬಹು ದೊಡ್ಡ ಪಾಲು ಎಮ್ಮೆಗಳಿಂದ (56.55%) ಬರುವುದು ಉಲ್ಲೇಖನಿಯ. ಪ್ರಯುಕ್ತ ರೋಗ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವ ಉದ್ದೇಶದಿಂದ ಬೀದರ ಹಾಗೂ ಸುತ್ತಮುತ್ತ ಪ್ರದೇಶಗಳ ಎಮ್ಮೆಗಳಲ್ಲಿ ಶ್ವಾಸಕೋಶ ಸಂಬಂಧಿತ ರೋಗಗಳ ಪ್ರಮಾಣ ತಿಳಿಯಲು ಈ ಅಧ್ಯಯನವನ್ನು ಕೈಗೊಳ್ಳಲಾಯಿತು.

ಶ್ವಾಸಕೋಶ ಸಂಬಂಧಿತ ರೋಗಗಳು ಎಮ್ಮೆಗಳ ಪುಪ್ಪಸಗಳ ಮೇಲೆ ವಿಪರೀತ ಪರಿಣಾಮಗಳನ್ನು ಬೀರುವುದರಿಂದ ಉಸಿರಾಡಲು ತೊಂದರೆಯಾಗಿ ಆಕಸ್ಮಿಕ ಸಾವನ್ನಪ್ಪುತ್ತವೆ. ಕೆಲವೊಮ್ಮೆ, ನಿಧಾನವಾಗಿ ಶ್ವಾಸಕೋಶದ ವಿವಿಧ ಭಾಗಗಳಲ್ಲಿ ಬದಲಾವಣೆಗಳನ್ನು ಉಂಟುಮಾಡಿ ಕ್ರಮೇಣ ಎಮ್ಮೆಗಳ ಆರೋಗ್ಯ ಕ್ಷೀಣಿಸುವಂತೆ ಮಾಡುತ್ತವೆ. ಈ ರೋಗಗಳು ಎಮ್ಮೆಗಳಲ್ಲಿ' ಅನಾರೋಗ್ಯ, ಕುಂಠಿತ ಹಾಲಿನ ಇಳುವರಿ, ಕಂದಲು ಹಾಕುವುದು, ಎಮ್ಮೆಗಳಲ್ಲಿ ಸಾವಿನ ಪ್ರಮಾಣ ಹೆಚ್ಚಾಗಿ ರೈತರಿಗೆ ಆರ್ಥಿಕ ನಷ್ಟವನ್ನುಂಟುಮಾಡ ಬಲ್ಲವು. ಹಾಗಾಗಿ ಈ ರೋಗಗಳ ಹತೋಟಿ ಹಾಗೂ ನಿವಾರಣೆ ಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯಕವಾಗಿರುತ್ತದೆ.

ಅಧ್ಯಯನಕ್ಕಾಗಿ ಉಪಯೋಗಿಸಿದ ವಸ್ತುಗಳು ಹಾಗೂ ವಿಧಾನಗಳು

ಈ ಅಧ್ಯಯನವು ಕರ್ನಾಟಕ ಪಶು ವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ ನಂದಿ ನಗರ, ಬೀದರ ಆವರಣದ ಪಶು ವೈದ್ಯಕೀಯ ಮಹಾ ವಿದ್ಯಾಲಯ ಬೀದರನ ಪಶುವೈದ್ಯಕೀಯ ಬೋಧನಾ ಚಿಕಿತ್ಸಾ ಸಂಕೀರ್ಣದ'ಲ್ಲಿ' ಕೈಗೊಳ್ಳಲಾಯಿತು. ಮೇ 2006 ರಿಂದ ಎಪ್ರೀಲ್ 2016 ರವರೆಗೆ ಒಟ್ಟು 10 ವರ್ಷದಲ್ಲಿ ಚಿಕಿತ್ಸೆ ನೀಡಿದ ಎಮ್ಮೆಗಳ' 3314 ದಾಖಲಾತಿ ಪತ್ರಗಳನ್ನು ಪರಿಶೀಲಿಸಿ ಅಧ್ಯಯನ ಮಾಡಲಾಯಿತು. ಈ ದಾಖಲಾತಿ ಪತ್ರಗಳ ವಿವಿಧ ವಿವರಗಳನ್ನು ವಿವಿಧ ವಿಭಾಗಗಳಲ್ಲಿ ವಿಂಗಡಿಸಿ ದಾಖಲಿಸಲಾಯಿತು.

ಫಲಿತಾಂಶ : – ಪ್ರಸ್ತುತ ಅಧ್ಯಯನವು ಪಶು ವೈದ್ಯಕೀಯ ಮಹಾ ವಿದ್ಯಾಲಯ ಬೀದರನ ಪಶು ವೈದ್ಯಕೀಯ ಬೋಧನಾ ಮತ್ತು ಚಿಕಿತ್ಸಾ ಸಂಕೀರ್ಣದಲ್ಲಿ ಚಿಕಿತ್ಸೆ ನೀಡಿದ 3314 ಎಮ್ಮೆಗಳ'ಲ್ಲಿ' ಮೇ 2006 ರಿಂದ ಎಪ್ರೀಲ್ 2016 ರವರೆಗೆ ದಾಖಲಾತಿ ಪತ್ರಗಳನ್ನು ಪರಿಶೀಲಿಸಲಾಯಿತು. ಶ್ವಾಸಕೋಶ ಸಂಬಂಧಿತ ವಿವಿಧ ರೋಗಳಿಗೆ ಚಿಕಿತ್ಸೆ ನೀಡಿದ ಎಮ್ಮೆಗಳ ದಾಖಲಾತಿಗಳನ್ನು ಈ ಕೆಳಕಂಡತೆ ವಿವಿರವಾಗಿ ವಿಂಗಡಿಸಿ ಫಲಿತಾಂಶವನ್ನು ವಿವರಿಸಲಾಗಿದೆ.

ವಾರ್ಷಿಕ ಅನುಸಾರವಾಗಿ ಪ್ರಮಾಣ :– ಒಟ್ಟು 10 ವರ್ಷಗಳ (ಮೇ 2006 ರಿಂದ ಎಪ್ರೀಲ್ 2016 ರವರೆಗೆ) ದಾಖಲಾತಿಗಳನ್ನು ಅಧ್ಯಯನ ಮಾಡಲಾಗಿ ಶ್ವಾಸಕೋಶ ಸಂಬಂಧಿತ ರೋಗಗಳ ಪ್ರಮಾಣವು 2008–2009ರ ಸಾಲಿನಲ್ಲಿ ಅತಿ ಹೆಚ್ಚಾಗಿ ಪ್ರತಿ ಶತ 13.42ರಷ್ಟು, ತದ ನಂತರ 2015–2016 (11.66%), 2014–15 (10.60%), 2013–2014 (10.24%), 2006–2007 (10.24%), 2009–2010 (9.90%), 2011–2012 (9.89%), 2010–2011 (9.18%), 2012–2013 (8.48%), ಹಾಗೂ ಅತಿ ಕಡಿಮೆ 2007–2008ರಲ್ಲಿ ಪ್ರತಿ ಶತ 6.36 ರಷ್ಟು ಕಂಡುಬಂದಿರುತ್ತದೆ. ಈ ವಿವರವನ್ನು ಕೋಷ್ಟಕ (1) ಹಾಗೂ ರೇಖಾ ಚಿತ್ರ (1)ರಲ್ಲಿ ನೀಡಲಾಗಿದೆ.

ಕೋಷ್ಠಕ ಸಂಖ್ಯೆ 1. ಶ್ವಾಸಕೋಶ ಸಂಬಂಧಿತ ರೋಗಗಳ' ವಾರ್ಷಿಕ ಪ್ರಮಾಣ

ವಾರ್ಷಿಕ ಸಾಲು	ಚಿಕಿತ್ಸೆಗಾಗಿ ಹಾಜರು ಪಡಿಸಿದ ಎಮ್ಮೆಗಳ ಸಂಖ್ಯೆ	ಶ್ವಾಸಕೋಶ ಸಂಬಂಧಿತ ರೋಗಗಳಿಗೆ ಚಿಕಿತ್ಸೆ ನೀಡಿದ ಎಮ್ಮೆಗಳ ಸಂಖ್ಯೆ	ಪ್ರತಿಶತ ಪ್ರಮಾಣ
2006–07	278	29	10.25
2007–08	252	18	6.36
2008–09	370	38	13.43
2009–10	351	28	9.90
2010–11	325	26	9.19
2011–12	352	28	9.89
2012–13	264	24	8.48
2013–14	377	29	10.25
2014–15	379	30	10.60
2015–16	366	33	11.66
ಒಟ್ಟು	**3314**	**283**	**100.00**

ರೇಖಾ ಚಿತ್ರ 1. ಶ್ವಾಸಕೋಶ ಸಂಬಂಧಿತ ರೋಗಗಳ' ವಾರ್ಷಿಕ ಪ್ರಮಾಣ



ವಯಸ್ಸಿನನುಸಾರವಾಗಿ ಪ್ರಮಾಣ : – ವಿವಿಧ ವಯಸ್ಸಿನ ಎಮ್ಮೆಗಳಲ್ಲಿ ಈ ರೋಗಗಳ ಪ್ರಮಾಣವನ್ನು ಅಧ್ಯಯನ ಮಾಡಲಾಗಿ, ಶ್ವಾಸಕೋಶ ಸಂಬಂಧಿತ ವಿವಿಧ 2 ವರ್ಷ ಕ್ಕಿಂತ ಕಡಿಮೆ ವಯಸ್ಸಿನ ಎಮ್ಮೆಗಳಲ್ಲಿ ಅತಿ ಹೆಚ್ಚಾಗಿ (33.92%) ತದ ನಂತರ 02–04 (29.70%), 04–06 (17.31%), 06–08 (12.36%), 08–10 (4.21%) ಮತ್ತು 10 ವರ್ಷ ವಯಸ್ಸಿನ ಮೇಲ್ಪಟ್ಟ ಎಮ್ಮೆಗಳಲ್ಲಿ ಅತಿ ಕಡಿಮೆ (2.47%) ಕಂಡು ಬಂದಿರುತ್ತದೆ. ಈ ವಿವರವನ್ನು ಕೋಷ್ಟಕ (2) ಹಾಗೂ ರೇಖಾ ಚಿತ್ರ (2)ರಲ್ಲಿ ನೀಡಲಾಗಿದೆ.

ಕೋಷ್ಟಕ 2. ವಯಸ್ಸಿನ ಅನುಸಾರವಾಗಿ ರೋಗಗಳ ಪ್ರತಿ ಶತ ಪ್ರಮಾಣ

ವಯಸ್ಸು (ವರ್ಷಗಳಲ್ಲಿ)	ಶ್ವಾಸಕೋಶ ಸಂಬಂಧಿತ ರೋಗಗಳಿಗೆ ಚಿಕಿತ್ಸೆ ನೀಡಿದ ಎಮ್ಮೆಗಳ ಸಂಖ್ಯೆ	ಪ್ರತಿ ಶತ ಪ್ರಮಾಣ
02 ಕ್ಕಿಂತ ಕಡಿಮೆ	96	33.92
02 ರಿಂದ04	84	29.7
04 ರಿಂದ 06	49	17.3
06 ರಿಂದ 08	35	12.4
08 ರಿಂದ 10	12	4.21
10 ಮೇಲ್ಪಟ್ಟು	7	2.47
ಒಟ್ಟು	**283**	**100**

ರೇಖಾ ಚಿತ್ರ 2. ವಯಸ್ಸಿನ ಅನುಸಾರವಾಗಿ ರೋಗಗಳ ಪ್ರತಿ ಶತ ಪ್ರಮಾಣ



ಋತುಮಾನಾನುಸಾರವಾಗಿ ರೋಗಗಳ ಪ್ರಮಾಣ

ಎಮ್ಮೆಗಳ ಶ್ವಾಸಕೋಶ ಸಂಬಂಧಿತ ರೋಗಗಳ ಪ್ರಮಾಣ ವಿವಿಧ ಋತುಗಳಲ್ಲಿ ಭಿನ್ನವಾಹಿರುವುದು ಭಿಡಿಲಾಗಿದೆ. ಮೆಳೆಗಾಲದಲ್ಲಿ ಅತಿ ಹೆಚ್ಚಾಗಿ (52.29%) ತದ ನಂತರ ಚಳಗಾಲ (37.10%) ಹಾಗೂ ಬೇಸಿಗೆಗಾಲದಲ್ಲಿ ಅತಿ ಕಡಿಮೆ ಪ್ರಮಾಣ (10.60%) ಕಂಡುಬಂದಿರುತ್ತದೆ. ಈ ವಿವರವನ್ನು ಕೋಷ್ಟಕ (3) ಹಾಗೂ ರೇಖಾ ಚಿತ್ರ (3)ರಲ್ಲಿ ನೀಡಲಾಗಿದೆ.

ಕೋಷ್ಟಕ (03) ಋತುಮಾನಾನುಸಾರವಾಗಿ ರೋಗಗಳ ಪ್ರತಿ ಶತ ಪ್ರಮಾಣ

ಋತುಗಳು	ಶ್ವಾಸಕೋಶ ಸಂಬಂಧಿತ ರೋಗಗಳಿಗೆ ಚಿಕಿತ್ಸೆ ನೀಡಿದ ಎಮ್ಮೆಗಳ ಸಂಖ್ಯೆ	ಪ್ರತಿ ಶತ ಪ್ರಮಾಣ
ಬೇಸಿಗೆಗಾಲ	30	10.6
ಮಳೆಗಾಲ	148	52.3
ಚಳಗಾಲ	105	37.1
ಒಟ್ಟು	**283**	**100**

ರೇಖಾ ಚಿತ್ರ 3. ಋತುಮಾನಾನುಸಾರವಾಗಿ ರೋಗಗಳ ಪ್ರತಿ ಶತ ಪ್ರಮಾಣ



ಒಟ್ಟಾರೆ ರೋಗಗಳ ಪ್ರಮಾಣ :– ಎಮ್ಮೆಗಳ ಶ್ವಾಸಕೋಶ ಸಂಬಂಧಿತ ರೋಗಗಳ ಒಟ್ಟಾರೆ ಪ್ರಮಾಣವನ್ನು ಬೀದರ ಮತ್ತು ಸುತ್ತಮುತ್ತ ಪ್ರದೇಶದ ಎಮ್ಮೆಗಳಲ್ಲಿ ಅಧ್ಯಯನ ಮಾಡಿದಾಗ ಪ್ರತಿ ಶತ 8.53%ರಷ್ಟು ಕಂಡು ಬಂದಿರುತ್ತದೆ.

ಶ್ವಾಸಕೋಶ ಸಂಬಂಧಿತ ರೋಗಗಳು ಹಾಗೂ ಹವಾಮಾನ ನಿಯತಾಂಕಗಳ ಸಂಬಂಧ :– 10 ವರ್ಷಗಳ ಶ್ವಾಸಕೋಶ ಸಂಬಂಧಿತ ರೋಗಗಳ ಪ್ರಮಾಣ ಹಾಗೂ ಹವಾಮಾನ ನಿಯತಾಂಕಗಳನ್ನು ಪರಸ್ಪರ ಅವಲೋಕಿಸಿದಾಗ, ಈ ರೋಗಗಳು ಹವಾಮಾನದ ನಿಯತಾಂಕಗಳಾದ ಒಟ್ಟಾರೆ ಮಳೆ, ಕಡಿಮೆ ತಾಪಮಾನ ಹಾಗೂ ಆರ್ದ್ರತೆಗಳ ಜೊತೆ ಪರಸ್ಪರ ಧನಾತ್ಮಕ ಸಂಬಂಧ ವಿರುವುದು ಕಂಡುಬಂದಿರುತ್ತದೆ. ಇದಲ್ಲದೆ ಇನ್ನುಳಿದ ಹವಾಮಾನದ ನಿಯತಾಂಕಗಳಾದ ಹೆಚ್ಚಿನ ತಾಪಮಾನ ಜೊತೆ ಪರಸ್ಪರ ಋಣಾತ್ಮಕ ಸಂಬಂಧ ವಿರುವುದು ಕಂಡುಬಂದಿರುತ್ತದೆ

ಚರ್ಚೆ:– ಮೇ 2006 ರಿಂದ ಎಪ್ರೀಲ್ 2016 ರವರೆಗಿನ ಒಟ್ಟು 10 ವರ್ಷದಲಿ ಚಿಕಿತ್ಸೆ ನೀಡಿದ 3314 ಎಮ್ಮೆಗಳ ದಾಖಲಾತಿ ಪತ್ರಗಳನ್ನು ಅಧ್ಯಯನ ಮಾಡಿದಾಗ ಬೀದರ ಹಾಗೂ ಸುತ್ತಮುತ್ತ ಪ್ರದೇಶದ ಎಮ್ಮೆಗಳಲ್ಲಿ ಶ್ವಾಸಕೋಶ ಸಂಬಂಧಿತ ರೋಗಗಳು ಹಲವಾರು ಕಾರಣಗಳಿಂದ ಬಂದಿರುವುದು ಗೋಚರಿಸುತ್ತದೆ. ಅದಲ್ಲದೇ ಬೇರೆ ಬೇರೆ ವರ್ಷದಲ್ಲಿ, ವಯಸ್ಸಿನಲ್ಲಿ ಹಾಗೂ ಋತುಮಾನಗಳಲ್ಲಿ ಈ ರೋಗಗಳ ಪ್ರಮಾಣ ಬೇರೆ ಬೇರೆಯಾಗಿರುವುದು ಕಂಡು ಬಂದಿರುತ್ತದೆ. ಪ್ರಯುಕ್ತ ಈ

ರೋಗಗಳ ಪ್ರಮಾಣದ ಬಗ್ಗೆ ಈ ಕೆಳಗಿನ ಕಂಡಿಕೆಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಹತ್ತು ವರ್ಷದ ಅಧ್ಯಯನದಲ್ಲಿ ಈ ರೋಗಗಳ ಪ್ರಮಾಣವು 2008-2009 ರಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಪ್ರತಿ ಶತ 13.43ರಷ್ಟು ಮತ್ತು 2007-2008ರಲ್ಲಿ ಅತಿ ಕಡಿಮೆ ಪ್ರಮಾಣದಲಿ ಪ್ರತಿ ಶತ 6.36ರಷ್ಟು ದಾಖಲಾಗಿರುತ್ತದೆ.

ವಯಸ್ಸಿನನುಸಾರವಾಗಿ 0-2 ವರ್ಷ ವಯಸ್ಸಿನ ಎಮ್ಮೆಗಳಲ್ಲಿ ಅತಿ ಹೆಚ್ಚಾಗಿ (33.92%) ಹಾಗೂ 10 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಎಮ್ಮೆಗಳಲ್ಲಿ ಅತಿ ಕಡಿಮೆ (2.47%) ಕಂಡು ಬಂದಿರುತ್ತದೆ. ಇದೇ ರೀತಿ ವರದಿಯನ್ನು ಜಯಬೇ (2014), ಪೈರೆ ಹಾಗೂ ಇತರರು (1981); ಲೋಪಜ್ ಮತ್ತು ಬಿಡಫೆಲ್ (1992); ಡಾಂಕರಸಗೋಡ ಹಾಗೂ ಇತರರು (1993); ಸೆನ್ ಮತ್ತು ಅಲ್ಬೆ (2003); ಸಿಂಗ್ ಮತ್ತು ಸಿಂಗ್ (2009); ಮತ್ತು ಅಮೀರ ಹಾಗೂ ಇತರರು (2013) ಮಂಡಿಸಿರುತ್ತಾರೆ. ಕೆಲವು ಸಂಶೋಧಕರು ವಯಸ್ಕ ಎಮ್ಮೆ ಮತ್ತು ಗೋವಿನಲ್ಲಿ ಈ ರೋಗಗಳ ಪ್ರಮಾಣ ಹೆಚ್ಚಾಗಿರುವುದನ್ನು ದಾಖಲಿಸಿರುತ್ತಾರೆ (ರಾಜೀನ್, 1974; ನಾರಿಯಲ್ ಹಾಗೂ ಇತರರು, 1986; ಸೈಯ್ಯಾರಿ ಮತ್ತು ಶರ್ಮಾ, 2011; ಮಖಧೂಮಿ ಹಾಗೂ ಇತರರು 2013).

ಋತುಮಾನಾನುಸಾರವಾಗಿ ರೋಗಗಳ ಪ್ರಮಾಣವು ಮಳೆಗಾಲ್ಲ ಅತಿ ಹೆಚ್ಚಿನ (52.29%) ಮತ್ತುಬೇಸಿಗೆಗಾಲದಲಿ ಅತಿ ಕಡಿಮೆ (10.60%) ಪ್ರಮಾಣವುl ದಾಖಲಾಗಿರುತ್ತದೆ. ಈ ರೋಗಗಳ ಪ್ರಮಾಣವು ಹವಾಮಾನ ನಿಯತಾಂಕಗಳ ಜೊತೆ ಪರಸ್ಪರ ಅವಲೋಕಿಸಿದಾಗ ಒಟ್ಟಾರೆ ಮಳೆ ಮತ್ತು ಅತಿ ಕಡಿಮೆ ತಾಪಮಾನದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದು ದಾಖಲಾಗಿರುತ್ತದೆ.

ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಮ್ಮೆಗಳಲ್ಲಿ ಸರಿಯಾದ ಸಾಕಾಣಿಕೆ/ನಿರ್ವಹಣೆ ಕ್ರಮಗಳನ್ನು ಅನುಸರಿಸದೇ ಇರುವುದು, ವೈಜ್ಞಾನಿಕ ಸಾಕಾಣಿಕೆ ಮತ್ತು ಆರೋಗ್ಯ ನಿರ್ವಹಣೆ ಕ್ರಮಗಳನ್ನು ಅನುಸರಿಸದಿರುವುದು, ಸಾಕಷ್ಟು ಪ್ರಮಾಣದಲ್ಲಿ ಗಾಳಿ, ಬೆಳಕು, ನೀರು ಒದಗಿಸದಿವಿರುವುದು ಹಾಗೂ ಬಹು ಮುಖ್ಯವಾಗಿ ಕರುಗಳಿಗೆ ತಾಯಿಯ ಗಿಣ್ಣದ ಹಾಲನ್ನು ಸರಿಯಾದ ಪ್ರಮಾಣದಲ್ಲಿ ನೀಡದಿರುವುದರಿಂದ ಹೆಚ್ಚಾಗಿ ಕಂಡು ಬಂದಿರುತ್ತದೆ.

ಶ್ವಾಸಕೋಶ ಸಂಬಂಧಿತ ರೋಗಗಳನ್ನು ಋತುಮಾನನು ಸಾರವಾಗಿ ಪ್ರಸ್ತುತ ಅಧ್ಯಯನ ಮಾಡಿದಾಗ ಮಳೆಗಾಲದಲ್ಲಿ ಹೆಚ್ಚಿನ ಪ್ರಮಾಣ (52.29%) ಹಾಗೂ ಬೇಸಿಗೆಗಾಲದಲ್ಲಿ ಕಡಿಮೆ ಪ್ರಮಾಣ (10.60%) ಕಂಡು ಬಂದಿರುತ್ತದೆ. ಋತುಮಾನನುಸಾರವಾಗಿ ಈ ರೋಗಗಳ ಪ್ರಮಾಣ ರೀಬ್ಬೆಲ್ ಹಾಗೂ ಇತರರು (1995), ಲೋನಾರ್‌ಗನ್ ಹಾಗೂ ಇತರರು (2001); ಬ್ರೈಸನ್ (1985); ಕೀಯೋರ್‌ಪಾಸ್ ಹಾಗೂ ಇತರರು (1988); ಡೋಂಕರಗೋಡ ಹಾಗೂ ಇತರರು (1993) ರವರ ಉಲ್ಲೇಖವು ಈ ಅಧ್ಯಯನದ ಪ್ರಕಾರವಾಗಿದೆ.

ಮಳೆಗಾಲದಲ್ಲಾಗುವ ಹವಾಮಾನದ ಆಕಸ್ಮಿಕ ಬದಲಾವಣೆಗಳು, ಸರಿಯಾದ ಪಶು ಸಂಗೋಪನಾ ನಿರ್ವಹಣೆ ಕ್ರಮಗಳನ್ನು ಅನುಸರಿಸದಿರುವುದು, ಅತಿ ಹೆಚ್ಚಿನ ಮಳೆ, ಕರು ಹಾಕುವ ಸಂಧರ್ಬಗಳಿಂದಾಗಿ ಎಮ್ಮೆಗಳಲ್ಲಿ ಒತ್ತಡದ ಪ್ರಮಾಣ ಹೆಚ್ಚಾಗಿ ಈ ರೋಗವು ಮಳೆಗಾಲದಲ್ಲಿ ಹೆಚ್ಚು ಕಂಡು ಬರುತ್ತದೆ.

ಸಾರಾಂಶ:- ಈ ಅಧ್ಯಯನದ ಮುಖ್ಯ ಉದ್ದೇಶ ಬೀದರ ಹಾಗೂ ಸುತ್ತಮುತ್ತ ಪ್ರದೇಶದ ಎಮ್ಮೆಗಳಲ್ಲಿ ಶ್ವಾಸಕೋಶ ಸಂಬಂಧಿತ ರೋಗಗಳ ಪ್ರಮಾಣವನ್ನು ಸಂಶೋಧಿಸಿ ಸೂಕ್ತ ನಿರ್ವಹಣಾ ಕ್ರಮಗಳನ್ನು ಸೂಚಿಸುವುದಾಗಿರುತ್ತದೆ. ಬೀದರನ ಪಶು ವೈದ್ಯಕೀಯ ಬೋಧನಾ ಮತ್ತು ಚಿಕಿತ್ಸಾ ಸಂಕೀರ್ಣದಲ್ಲಿ ಚಿಕಿತ್ಸೆ ನೀಡಿದ 3314 ಎಮ್ಮೆಗಳ ದಾಖಲಾತಿ ಪತ್ರಗಳನ್ನು ಪರಿಶೀಲಿಸಲಾಗಿ ಅವುಗಳಿಂದ ವಿವಿಧ ರೀತಿಯ ಮಾಹಿತಿಯನ್ನು ಕ್ರೂಡೀಕರಿಸಿದಾಗ ಶ್ವಾಸಕೋಶ ಸಂಬಂಧಿತ ರೋಗಗಳು ವಿವಿಧ ಪ್ರಮಾಣದಲ್ಲಿ ಕಂಡು ಬಂದಿರುತ್ತದೆ. ಎಮ್ಮೆಗಳಲ್ಲಿ ಶ್ವಾಸಕೋಶ ಸಂಬಂಧಿತ ರೋಗಗಳ ಒಟ್ಟಾರೆ ಪ್ರಮಾಣವು ಪ್ರತಿ ಶತ 8.53ರಷ್ಟಿರುವುದು ಈ ಅಧ್ಯಯನದಿಂದ ಕಂಡು ಬಂದಿರುತ್ತದೆ. 2 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಮ್ಮೆಗಳಲ್ಲಿ ಪ್ರತಿ ಶತ 30.30ರಷ್ಟು 02-04 ವರ್ಷ ವಯಸ್ಸಿನ ಎಮ್ಮೆಗಳಲ್ಲಿ 19.43 ರಷ್ಟು ಪ್ರತಿ ಶತ, 04-06 ವರ್ಷ ವಯಸ್ಸಿನ ಎಮ್ಮೆಗಳಲ್ಲಿ 14.84 ರಷ್ಟು ಪ್ರತಿ ಶತ, 06-08 ವರ್ಷ ವಯಸ್ಸಿನ ಎಮ್ಮೆಗಳಲ್ಲಿ 10.95 ರಷ್ಟು ಪ್ರತಿ ಶತ, 08-10 ವರ್ಷ ವಯಸ್ಸಿನ ಎಮ್ಮೆಗಳಲ್ಲಿ 07.06 ರಷ್ಟು ಪ್ರತಿ ಶತ ಹಾಗೂ 10 ವರ್ಷ ವಯಸ್ಸಿನ ಮೇಲ್ಪಟ್ಟ ಎಮ್ಮೆಗಳಲ್ಲಿ ಅತಿ ಕಡಿಮೆ ಪ್ರತಿ ಶತ 02.21 ರಷ್ಟು ವಿರುವುದನ್ನು ದಾಖಲಿಸಲಾಗಿದೆ. ಈ ರೋಗಗಳ ಪ್ರಮಾಣವು ಮಳೆಗಾಲದಲ್ಲಿ ಅತಿ ಹೆಚ್ಚು ಪ್ರತಿ ಶತ 52.2 ರಷ್ಟು 9, ಚಳಗಾಲದಲ್ಲಿ ಪ್ರತಿ ಶತ 37.10 ರಷ್ಟು ಹಾಗೂ ಬೇಸಿಗೆಗಾಲದಲ್ಲಿ ಅತಿ ಕಡಿಮೆ ಪ್ರಮಾಣ 10.60ರಷ್ಟು ದಾಖಲಾಗಿದೆ.

ಒಟ್ಟಾರೆ ಎಮ್ಮೆಗಳಲ್ಲಿ ಈ ರೋಗವು ಸಾಮಾನ್ಯವಾಗಿ ಕಂಡು ಬಂದಿದ್ದು, ಚಿಕ್ಕ ವಯಸ್ಸಿನ ಎಮ್ಮೆ ಕರುಗಳಲ್ಲಿ ಶ್ವಾಸಕೋಶ ಸಂಬಂಧಿತ ರೋಗಗಳು ಹೆಚ್ಚಾಗಿ ಕಂಡು ಬಂದಿರುತ್ತವೆ. ಮಳೆಗಾಲ ಹಾಗು ಕೆಲವು ಒತ್ತಡದ ಸಂಧರ್ಬಗಳಲ್ಲಿ ಈ ರೋಗಗಳು ಉಲ್ಬಣಗೊಂಡಿರುವುದು ಗೋಚರಿಸುತ್ತವೆ. ಎಮ್ಮೆಗಳ ಆರೋಗ್ಯ ಪಾಲನೆಯಲ್ಲಿ ಲಸಿಕೆ ಹಾಕಿಸುವುದು ಮತ್ತು ರೋಗಗಳನ್ನು ಬೇಗನೆ ಗುರುತಿಸಿ ತಕ್ಷಣ ಸೂಕ್ತ ಚಿಕಿತ್ಸೆ ನೀಡುವುದು ಮುಂತಾದ ವೈಜ್ಞಾನಿಕ ನಿರ್ವಹಣಾ ಕ್ರಮಗಳನ್ನು ಅನುಸರಿಸಿದಲ್ಲಿ ರೈತರ ಆರ್ಥಿಕ ನಷ್ಟವನ್ನು ತಡೆಯಬಹುದಾಗಿದೆ.

ಉಲ್ಲೇಖಗಳು

ಅಮೀರ, ಪಿ.ಆರ್.ಎಸ್., ಬಾಬಕ್, ಎಫ್ ಫರ್‌ಶಾದ, ಎಸ್., ಬೆಹನಾಮ ಎ. ಎ ., ದಾವೂದ ,ಐ., ಮಸೋದ, ಎ, ಸಯಿದ, ಐ. ಮತ್ತು ಜವದ್, ಕೆ.2013. ಎವ್ಯಾಲುವೇಶನ್ ಆಫ್ ದಿ ಎಪೇಕ್ಟ್ಸ್ ಆಫ್ ಪೆನ್ಸಿಲಿನ್ ಇನ್ ಕಂಟ್ರೋಲ್ ಆಫ್ ಕ್ಲೀನಿಕಲ್ ನಿಮೋನಿಯಾ ಇನ್ ಕಾವ್ಸ, ಎನಿವ್ ಬಯೋ.ರಿ., 4(7): 174-178

ಬ್ರೈಸನ್, ಡಿ.ಜಿ.,1985 ಕಾಫ್ ನಿಮೋನಿಯಾ ಇನ್: ಸಿಂಪೊಜಿಯಮ್ ಆನ್ ಬೋವೈನ್ ರೆಸ್ಪಿರೆಟರಿ ಡಿಸಿಜಸ.ವೆಟ. ಕ್ಲೀನಿಕ್. ನಾರ್ತ. ಅಮೇರಿಕಾ 1: 235–257

ಡಾಂಕರಸ್‌ಗೋಡ, ಜೆ.ಎಸ್.ವಿ., ಕಾರ್ಲ, ಎಸ್., ರಿಬ್ಬೆಲ, ಆಯೋನಾ, ಜಿ., ಬೋಯರ., ಹುಗಿ,. ಜಿ. ಜಿ ಮತ್ತುಬೌನ್ಸ ಸೇಂಡ 1993. ಎಪಿಡಿಮಿಯಾಲೊಜಿ ಸ್ಟಡಿ ಆಫ್ ಎನಜೂಟಿಕ ನಿಮೋನಿಯಾ ಇನ್ ಡೈರಿ ಕಾವ್ಸ ಇನ್ ಸಸ್ಕಾಟಚಿವಾನ್., ಕೆನಡಿಯನ್ ಜೆ. ವೆಟ.ರಿಸರ್ಚಚ 57:247–257

ಜಯಬೇ, ಸಿ. ಎಸ್ 2014 ಕ್ಲಿನಿಕೋ – ಥೆರಾಪೆಟಿಕ ಸ್ಟಡಿಸ ಆನ್ ನಿಮೋನಿಯಾ ಇನ್ ಬೋವೈನ್ಸ., ಎಮ್.ವ್ಹಿ.ಎಸ್.ಸಿ., ಥಿಸಸ್,. ಮಹಾರಾಷ್ಟ್ರ ಎನಿಮಲ್ ಮತ್ತು ಫಿಶರಿ ಸೈನ್ಸಸ ವಿಶ್ವವಿದ್ಯಾಲಯ ನಾಗಪುರ, ಭಾರತ.

ಕಿಯೊರಪಸ, ಎ.ಎಲ್., ಬಟಲರ, ಡಿ.ಜಿ., ಡಬಿಲಜಿಗ, ಆರ್.ಆರ್ ಮತ್ತು ಬೆಕ, ಕೆ.ಎ., 1988. ಎನಜೂಟಿಕ ನಿಮೋನಿಯಾ ಇನ್ ಕಾವ್ಸ. ಕ್ಲಿನಿಕಲ ಮತ್ತು ಮಾರಫಾಲೊಜಿಕಲ ಪಿಚರ್ಸ. Compend Contin. Educ. Pract. Vet., 10: 248–260

ಲೊನಾರಗನ, ಜಿ.ಹೆಚ್., ದರಗಾಟಜ, ಡಿ.ಎ., ಮೊರಲೆ, ಪಿ.ಎಸ ಮತ್ತು ಸ್ಮತ್, ಎಮ್.ಎ., 2001. ಬ್ರೆಂಡ್ಸ ಇನ್ ಮೊರಬ್ಯಾಲಿಟಿ ರೆಶಿಯೊ ಅಮೊಂಗ ಕ್ಯಾಟಲ್ ಇನ ಯುಎಸ್ ಪಿಕ್ವಿಲಾಟ್ಸ. J.Ame. Vet.Med.Assoc., 219(8): pp -1122-1127

ಲೋಪೆಜ್,ಎ ಮತ್ತು ಬಿಲ್ಡ್‌ಫೆಲ್, ಆರ್, 1992. ಪಲಮನರಿ ಇನಫ್ಲೋಮೆಶನ್ ಅಸೊಸಿಯೆಟೆಡ್ ವಿಥ್ ಅಸ್ಪೆರೆಟೆಡ್ ಮೆಕೊನಿಯಾ ಮತ್ತು ಎಪಿಥಿಲಿಯಲ್ ಸೆಲ್ಸ ಇನ ಕಾವ್ಸ. ವೆಟ್. ಪ್ಯಾಥ್, 29(2): 104–111.

ಮಕಧೂಮಿ, ಡಿ.ಎಂ., ಮೋಸಿನ್ ಎ.ಜಿ. ನೂರ್ ಎ.ಟಿ. ಮತ್ತು ಜಾಹಿದ್ ಯು.ಎನ್. 2013 ಥೆರಾಪೆಟಿಕ್ ಮ್ಯಾನೆಜ್‌ಮೆಂಟ್ ಆಫ್ ರೆಸ್ಪೈರೆಟರಿ ಇನ್‌ಫೆಕ್ಷನ್ಸ್ ಇನ ಲಾರ್ಜ್ ಮತ್ತು ಸ್ಮಾಲ್ ರುಮಿನೆಂಟ್ಸ್:- ಎ.ಕ್ಲಿನಿಕಲ್ ಸ್ಟಡಿ ಆಫ್ 96 ಎನಿಮಲ್ಸ್. ಇಂಟಸ್ ಪಾಲಿವೆಟ್., 14(1): 88–92.

ನಾರಿಯಲ್ ಡಿ.ಸಿ., ರಾಂಧವ ಎಸ್.ಎಸ್. ಮತ್ತು ಸಿಂಗ್ ಕೆ.ಐ. 1986. ಥೆರಾಪೆಟಿಕ್ ಅಪ್ರೋಚ್ ಟು ದ ಕ್ಲಿನಿಕಲ್ ಕೆಸಸ್ ಆಫ್ ನಿಮೋಥೋರ್ಯಾಕ್ಸ್ ಇನ್ ಡೈರಿ ಕ್ಯಾಟಲ್ ಮತ್ತು ಬೊಫೆಲ್ಲೋಸ್. ಇಂಡಿಯನ್.ಜೆ., 63:589–590.

ಪೈರಿ .ಹೆಚ್.ಎಂ. ಪಿಟ್ರೈ ಎಲ್. ಪ್ರಿಂಗಲ್, ಸಿ.ಆರ್. ಅಲ್ಲೇನ್ ಇ.ಎಮ್. ಮತ್ತು ಕೆನಡಿ, ಜಿ.ಜೆ. 1981, ಅಕ್ಯೂಟ್ ಫೆಟಲ್ ನ್ಯೂಮೊನಿಯಾ ಇನ್ ಕಾವ್ಸ್ ಡ್ಯೂ ಟು ರೆಸ್ಪೈರೆಟರಿ ಸಿನಿಸಿಯಲ್ ವೈರಸ್. ವೆಟ್.ರೆಕಾರ್ಡ್, 108:411–416.

ರೆಡೊಸ್ಟಿಟ್ಸ್ ಒ.ಎಮ್. ಗೇ, ಸಿ.ಸಿ. ಹಿಂಚ್‌ಕ್ಲಿಫ್, ಕೆ.ಡಬ್ಲೂ ಮತ್ತು ಕಾನ್ಸ್‌ಟೇಬಲ್, ಪಿ.ಡಿ.2010. ವೆಟರ್ನರಿ ಮೆಡಿಸಿನ್ ಎಜುಕೇಶನ್ 10ನೇ, ಸೌಂಡರ್ಸ್ ಎಲ್ಸವಿಯರ್ ಎಡಿನ್‌ಬರ್ಗ್ ಲಂಡನ್., ಪಿ.ಪಿ. 508–517.

ರಿಬೆಲ್, ಸಿ.ಎಸ್.ಮೆಕ್, ಎ.ಹೆಚ್., ಜಾಂಝೀನ್. ಇ.ಡಿ., ಗುಯಿಚೊನ್, ಪಿ.ಟಿ. ಮತ್ತು ಜಿಮ್, ಜಿ.ಕೆ.1995. ಎಫೆಕ್ಟ್ ಆಫ್ ಟೈಮೆ ಆಫ್ ಇಯರ್ ವೆದರ್ ಮತ್ತು ಪ್ಯಾಟರ್ನ ಆಫ್ ಆಕ್ಷನ್ ಮಾರ್ಕೆಟ್ ಸೇಲ್ಸ್ ಆನ್ ಫೆಟಲ್ ಫೈಬ್ರಿನಸ್ ನ್ಯುಮೋನಿಯಾ ಇನ್ ಕಾಫ್ ಇನ್ ಎ ಲಾರ್ಜ್ ಫೀಡಲಾಟ್ ಇನ್ ಅಲ್ಬೆರ್ಟಾ. ಕೆನಾಡಿಯನ್ ಜೆ.ವೆಟ್.ರಿಸರ್ಚ.,59: 167–172.

ಸಯ್ಯಾರಿ, ಎಂ. ಮತ್ತು ಶರ್ಮಾ, ಆರ್., 2011.ಪ್ಯಾಥಾಲೊಜಿಕಲ್ ಮತ್ತು ಬ್ಯಾಕ್ಟಿರಿಯಾಲಾಜಿಕಲ್ ಸ್ಟಡಿ ಆಫ್ ಲೋಬ್ ಡಿಸ್ಟ್ರಿಬುಶನ್ ಆಫ್ ಲೀಜನ್ಸ್ ಇನ ಬಫ್ಯಾಲೋ. ಇಂಟ್.ಜೆ.ವೆಟ್.ರಿಸರ್ಚ್., 5(2): 125–128

ಸೆನ್, ಎಸ್, ಮತ್ತು ಅಲಬೇ, ಎಂ.ಎಕೆ., 2003. ಎಟಿಯಾಲೋಜಿ ಆಫ್ ರೆಸ್ಪೈರೇಟರಿ ಟ್ರ್ಯಾಕ್ಟ್ ಇನ್‌ಫೆಕ್ಶನ್ಸ್ ಇನ್ ಕಾವ್ಸ್ ಮತ್ತು ಇವ್ಯಾಲುವೇಷನ್ ಆಫ್ ಟ್ರೀಟ್‌ಮೆಂಟ್ ವಿಥ್ ಕಾಂಬಿನೇಷನ್ ಆಫ್ ಅಮಾಕ್ಷಿಸಿಲಿ ಮತ್ತು ಕ್ಲ್ಯಾವನಿಕ್ ಆಸಿಡ್. ಇಂಡಿಯನ್ ವೆಟ್.ಜೆ.,80: 519–521.

ಸಿಂಗ್, ಪಿ. ಮತ್ತು ಸಿಂಗ್, ಕೆ.ಪಿ., 2009. ನಿಯೋನೆಟಲ್ ಕಾಫ್ ನ್ಯೂಮೊನಿಯಾ ಮತ್ತು ಇದರ ಥೆರಾಪಿಟಿಕ್ ಮ್ಯಾನೆಜ್‌ಮೆಂಟ್. ಇಂಟಾಸ್ ಪಾಲಿವೆಟ್ 10(2):280–281.

ಜಾನುವಾರುಗಳ ಕೆಚ್ಚಲು ಮತ್ತು ಮೊಲೆಗಳ ರೋಗಗಳಿಗೆ ಶಸ್ತ್ರ ಚಿಕಿತ್ಸೆಯು ರೈತರಿಗೆ ಒಂದು ವರದಾನ

ಭಗವಂತಪ್ಪ ಬ. ಶಿವಪ್ರಕಾಶ ಬಿ. ವಿ., ದಿಲೀಪ್‌ಕುಮಾರ ಡಿ. ಮತ್ತು ಜಹಾಂಗೀರ ಡಿ.
ಪಶು ಶಸ್ತ್ರ ಚಿಕಿತ್ಸೆ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

1. ವಿಷಯ ಪರಿಚಯ:– ಮೆಲಕು ಹಾಕುವ ಪ್ರಾಣಿಗಳಲ್ಲಿ, ಕೆಚ್ಚಲು ಮತ್ತು ಮೊಲೆಗಳ ರೋಗಗಳಿಗೆ ಶಸ್ತ್ರ ಚಿಕಿತ್ಸೆಯು ಒಂದು ಪ್ರಮುಖವಾದ ಪಾತ್ರವನ್ನು ವಹಿಸಿದೆ. ಇವುಗಳ ಇರುವಿಕೆಯು ಸಾಮಾನ್ಯವಾಗಿದ್ದು ಜನಿಸಿದ ನಂತರ ಅಥವಾ ಜನ್ಮಜಾತವಾಗಿ ಬರುವುದೆಂದು ತಿಳಿದಿದೆ ಮತ್ತು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಒಂದನೆಯದು ಚರ್ಮದ ಮೇಲ್ಭಾಗದಲ್ಲಿ, ಎರಡನೆಯದು ಮೊಲೆಯ ಹಾಲಿನ ನಾಳದಲ್ಲಿ ಮತ್ತು ಮೂರನೆಯದು ಮೊಲೆಯ ಕೊನೆಯಲ್ಲಿರುವ ಹಿಂಡುವ ನಾಳದಲ್ಲಿ ಕಾಣಿಸಿವೆ. ಕ್ಷಿಲೀತ ಗತಿಯಲ್ಲಿ ರೋಗಗಳ ನಿಧಾನ, ಶಸ್ತ್ರ ಚಿಕಿತ್ಸೆ ಮತ್ತು ಔಷಧೋಪಚಾರಗಳಿಂದ ಜಾನುವಾರಿನ ಆರೋಗ್ಯ, ರೈತರ ಆರ್ಥಿಕತೆ ಹಾಗೂ ಜಾನುವಾರಿನಿಂದ ಬರುವ ಹಾಲಿನ ಉತ್ಪಾದನೆಯ ಮೇಲೆ ಖೀರುವ ಪರಿಣಾಮವನ್ನು ತಡೆಯಬಹುದು. ಈ ರೋಗಗಳು ಪರಿಯಾದ ರೀತಿಯಲ್ಲಿ ಹಾಲನ್ನು ಕರೆಯುವಿರುವುದರಿಂದ, ಕೆಚ್ಚಲಿನ ಗಾತ್ರ ಹಾಲು ಕೊಡುವ ದನಗಳಲ್ಲಿ ದೊಡ್ಡದಾಗುವುದರಿಂದ, ಅವುಗಳ ಇರುವ ಸ್ಥಾನದಿಂದ,

ಕಾರುಗಳು ಹಾಲು ಕುಡಿಯುವ ಸಮಯದಲ್ಲಿ ಕಚ್ಚುವುದರಿಂದ, ಕಾಲುಗಳಿಂದಾಲಿನ ಮತ್ತು ಮೇಯಲು ಹೋದಾಗ ಬೇಲಿಯ ತಂತಿ ಅಥವಾ ಮುಳ್ಳಿನ ಇರಿತದಿಂದ ಗಾಯಗಳು ಕಂಡುಬರುತ್ತವೆ. ಅದೇ ರೀತಿಯಾಗಿ ರೋಗ ರುಜಿನಿಗಳಿಂದಲೂ ಸಹಿತ ಸಮಸ್ಯೆಗಳು ಉಲ್ಬಣಿಸುವುದನ್ನು ಕಾಣಬಹುದಾಗಿದೆ. ರೈತರು ತೊಂದರೆಗೆ ಒಳಪಟ್ಟ ಜಾನುವಾರುಗಳನ್ನು ತಡವಾಗಿ ತೋರಿಸುವುದರಿಂದ ಹಾಗೂ ಸೂಕ್ತವಾದ ಚಿಕಿತ್ಸೆಯನ್ನು ಕೊಡಿಸಿದೆ ತಪ್ಪುಗ್ರಹಿಕೆಯಿಂದ ಸಾಂಪ್ರದಾಯಿಕ ಆಚರಣೆಗಳಿಂದ ಚಿಕಿತ್ಸೆಯನ್ನು ನೀಡುವುದರಿಂದ ಈ ರೋಗಗಳು ಮೊದಲಿಗಿಂತಲು ಇನ್ನಷ್ಟು ಕೆಟ್ಟದ್ದಾಗಿ ಪರಿಣಮಿಸುತ್ತವೆ. ಆದ್ದರಿಂದ ರೈತರಿಗೆ ಅನುಕೂಲವಾಗುವಂತೆ ಕೆಚ್ಚಲು ಮತ್ತು ಮೊಲೆಗಳ ಸಮಸ್ಯೆಗಳಿಗೆ ಸರಿಯಾದ ತರ್ಕಬದ್ಧವಾದ ಔಷಧೋಪಚಾರ ಮತ್ತು ಶಸ್ತ್ರ ಚಿಕಿತ್ಸೆಯ ಕುರಿತು ಈ ಸಂಶೋಧನೆಯನ್ನು ಮಾಡಿದೆ.

2. ಸಾಮಗ್ರಿಗಳು ಮತ್ತು ಪದ್ಧತಿಗಳು : ಕೆಚ್ಚಲು ಹಾಗೂ ಮೊಲೆಗಳ ತೊಂದರೆಗೆ ಒಳಪಟ್ಟಿರುವ ಜಾನುವಾರುಗಳನ್ನು ಪಶು ಶಸ್ತ್ರ ಚಿಕಿತ್ಸೆ ವಿಭಾಗ ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ತಂದಾಗ ಅವುಗಳನ್ನು ಈ ಸಂಶೋಧನೆಗೆ ಒಳಪಡಿಸಲಾಗಿದೆ. ಈ ಅಧ್ಯಯನದಲ್ಲಿ ಒಟ್ಟಾರೆಯಾಗಿ 35 ಜಾನುವಾರುಗಳಿಗೆ ವಿವಿಧ ಕೆಚ್ಚಲಿನ ಹಾಗೂ ಮೊಲೆಗಳ ರೋಗಗಳಿಗೆ ಚಿಕಿತ್ಸೆಯನ್ನು ನೀಡಿದೆ. ಇವುಗಳಲ್ಲಿ 17 ಎಮ್ಮೆಗಳು 8 ಆಕಳುಗಳು ಹಾಗೂ 10 ಆಡುಗಳು ಒಳಗೊಂಡಿದ್ದವು.

ಅ) ರೋಗದ ನಿಧಾನ : ರೋಗದ ಗುಣಲಕ್ಷಣ, ಮುಟ್ಟಿ ನೋಡಿವುದರಿಂದ, ಮೊಲೆಯ ನಳಕೆಯನ್ನು ತೂರಿಸುವುದರಿಂದ, ಕ್ಷ–ಕಿರಣದಿಂದ ಹಾಗೂ ಶ್ರವಣಾತೀತ ಯಂತ್ರದ ಮೂಲಕ ಕೆಚ್ಚಲು ಮತ್ತು ಮೊಲೆಗಳಲ್ಲಿ ಕಾಣುವ ರೋಗಗಳನ್ನು ನಿಖರತೆಯಿಂದ ಪತ್ತೆಹಚ್ಚಲಾಗಿದೆ. ಈ ರೋಗಗಳಲ್ಲಿ ಕಾಣುವ ಗುಣಲಕ್ಷಣಗಳಾದ ಹಾಲು ಕೊಡದೆ ಇರುವುದು, ಹಾಲಿನ ಇಳುವರಿ ಕಡಿಮೆಯಾಗುವುದು, ಹಾಲಿನ ಬಣ್ಣ ಹಾಗೂ ಹಾಲಿನ ಅಂಶದಲ್ಲಿ ಬದಲಾಗಿರುವುದನ್ನು ಜಾನುವಾರಿನ ಮಾಲಿಕನ ಹೇಳಿಕೆಯಿಂದ ತಿಳಿದಿದೆ. ಕೆಚ್ಚಲು ಬಾವು, ಥಿಲೈಜಸ್ ಹಾಗೂ ಮುಚ್ಚಿಹೋದ ಮೊಲೆಯ ಹಾಲಿನ ನಾಳದ ರೋಗಗಳಿಂದ ಬಳಲುವ ಜಾನುವಾರುಗಳಲ್ಲಿ ಸಾಮಾನ್ಯವಾಗಿ ಕಾಣುವ ಗುಣಲಕ್ಷಣಗಳಾದ ಉಬ್ಬಿದ ಕೆಚ್ಚಲು, ಹುಳಗಳಿರುವುದು, ರಕ್ತ ಅಥವಾ ಕೀವು ಮಿಶ್ರಿತ ದ್ರವ್ಯವು ಗಾಯದಿಂದ ಸೋರುವುದು ಮತ್ತು ಮೊಲೆ ಕೊಳೆತು ಕಳಚಿ ಬೀಳುವುದನ್ನು ನೋಡಿದೆ. ಇನ್ನು ಕೆಲವು ಜಾನುವಾರುಗಳಲ್ಲಿ ತೀವ್ರವಾದ ಉರಿಯೂತ ಇರುವುದರಿಂದ, ಕೆಚ್ಚಲು ಮುಟ್ಟಿದಾಗ ಜಾನುವಾರುಗಳಿಗೆ ನೋವಾಗುವುದು ಕಂಡುಬಂದಿದೆ. ಕೆಚ್ಚಲಿನ ಫೈಬ್ರೋಸಿಸ್‌ನಲ್ಲಿ ಮೊಲೆ ಹಾಗೂ ಕೆಚ್ಚಲ್ಲನ್ನು ಮುಟ್ಟಿ ನೋಡಿದಾಗ ಅದು ಗಟ್ಟಿಯಾಗಿ ಕಲ್ಲಿನಂತಿರುತ್ತದೆ. ಮೊಲೆಯ ಗಾಯದಿಂದ ಹಾಲು ಸೋರುವುದು ಮೊಲೆಯ ನಾಳದ ರೋಗದ ಮುಖ್ಯ ಗುಣಲಕ್ಷಣವಾಗಿದೆ. ಜಾನುವಾರುಗಳಲ್ಲಿ ಮುಚ್ಚಿಹೋದ ಮೊಲೆಯ ಹಾಲಿನ ನಾಳದ ರೋಗದ ಪತ್ತೆಯನ್ನು ಮೊಲೆಯ ನಳಕೆಯನ್ನು ತೂರಿಸುವ ಮೂಲಕ ಮಾಡಿದೆ. ಕೆಚ್ಚಲು ಬಾವುವನ್ನು ಹಾಲಿನ ಸ್ಟ್ರೀಪ್ ಮುಖಾಂತರ ಕಂಡುಹಿಡಿದಿದೆ. ಕ್ಷ–ಕಿರಣ ಸಹಾಯದಿಂದ ಹಾಲಿನಲ್ಲಿರುವ ಕಲ್ಲು, ಮೊಲೆಗಳಲ್ಲಿರುವ ಪರವಸ್ತು, ಕೀವು ಗಡ್ಡೆ ಮತ್ತು ಇನ್ನೀತರ ಗಾಯಗಳನ್ನು ಕಂಡುಹಿಡಿಯಬಹುದು. ಅಯೋಹೆಗ್ಜಾಲ್ ಔಷಧವನ್ನು ಮೊಲೆಯ ಹಾಲಿನ ನಾಳದಲ್ಲಿ ಹಾಕಿ ಕ್ಷ–ಕಿರಣದ ಛಾಯಾ ಚಿತ್ರ ತೆಗೆಯುವುದರಿಂದ ಇನ್ನು ಕೆಲವು ರೋಗಗಳನ್ನು ನಿಖರವಾಗಿ ಪತ್ತೆ ಹಚ್ಚಿದೆ. ಶ್ರವಣಾತೀತ ಯಂತ್ರದ ಸಹಾಯದಿಂದ ಮುಚ್ಚಿದ ಮೊಲೆಯ ಹಾಲಿನ ನಾಳ, ಮೊಲೆ ಮತ್ತು ಕೆಚ್ಚಲಿನ ರಚನೆಯಲ್ಲಾದ ಬದಲಾವಣೆಯನ್ನು ಕಂಡುಹಿಡಿಯುವುದು. ಇದು ಬೇರೆ ವಿಧಾನಗಳಿಗಿಂತ ಸುರಕ್ಷಿತ ಹಾಗೂ ಪರಿಣಾಮಕಾರಿಯಾಗಿ ರೋಗದ ಪತ್ತೆ ಹಚ್ಚುವಲ್ಲಿ ಸಹಾಯ ಮಾಡುತ್ತದೆ.

ಆ) ನಿಯಂತ್ರಣ ಮತ್ತು ಅರವಳಿಕೆ : ಕೆಚ್ಚಲಿನ ರೋಗಗಳಾದ ಗಾಯದ ಚಿಕಿತ್ಸೆ, ಮುಚ್ಚಿದ ಮೊಲೆಯ ಹಾಲಿನ ನಾಳದ ಚಿಕಿತ್ಸೆ, ಹಾಲಿನ ನಳಕೆಯಿಂದ ಹಾಲನ್ನು ತೆಗೆಯುವುದು, ಮೊಲೆಯ ಹಾಲಿನ ನಾಳದಲ್ಲಿ ಔಷಧವನ್ನು ನೀಡುವುದು, ಈ ಕಾರ್ಯಗಳಿಗೆ ಜಾನುವಾರುಗಳನ್ನು ಟ್ರೇವಿಸ್‌ನಲ್ಲಿ ಹಾಕಿ ಹಿಂಗಾಲುಗಳನ್ನು ಹಗ್ಗದ ಸಹಾಯದಿಂದ ಕಟ್ಟಿ ನಿಯಂತ್ರಿಸಬಹುದು. ಝೈಲಾಜಿನ್ ಇಂಜೆಕ್ಷನ್ ಅರೆ ಅರವಳಿಕೆ ಔಷಧವನ್ನು 0.03 ಮಿ.ಗ್ರಾಂ. ಪ್ರತಿ ಕೇಜಿ ದೇಹದ ತೂಕದಂತೆ ಮಾಂಸದಲ್ಲಿ ನೀಡಿ ಶಸ್ತ್ರ ಚಿಕಿತ್ಸೆಯನ್ನು ಮಾಡುವುದು. ಇದರ ಜೊತೆಯಲ್ಲಿ ಜಾನುವಾರುಗಳನ್ನು ಅಡ್ಡಲಾಗಿ ಮಲಗಿಸಿ ತೊಂದರೆಗೊಳಪಟ್ಟ ಕೆಚ್ಚಲ್ಲನ್ನು ಮೇಲ್ಮುಖಮಾಡಿ ನಿಯಂತ್ರಿಸುವುದು. ತದ ನಂತರ ಇಂಜೇಕ್ಷನ್ ಮಾಡಿದ ಜಾಗದಲ್ಲಿ ಅರವಳಿಕೆಯನ್ನಾಗಿಸುವ ಲಿಗ್ನೋಕೇನ್ ಔಷಧವನ್ನು ಪ್ರತಿಷತ್ 2 ರಷ್ಟನ್ನು ಉಪಯೋಗಿಸಿದೆ. ಗಾಯದ ಸುತ್ತಲು ಅಥವಾ ಉಂಗುರಾಕಾರದಲ್ಲಿ ಮೊಲೆಯ ತಳಭಾಗಕ್ಕೆ ನೀಡಿ ಶಸ್ತ್ರ ಚಿಕಿತ್ಸೆಯನ್ನು ಮಾಡಿದೆ.

ಇ) ಶಸ್ತ್ರ ಚಿಕಿತ್ಸೆಯ ಪೂರ್ವ ಸಿದ್ಧತೆ : ದೊಡ್ಡ ಪ್ರಮಾಣದ ಶಸ್ತ್ರ ಚಿಕಿತ್ಸೆ ಮಾಡುವುದಿದ್ದರೆ ಜಾನುವಾರು ಮಾಲಿಕರಿಗೆ ಸುಮಾರು 12 ರಿಂದ 20 ಗಂಟೆಗಳವರೆಗೆ ನೀರು ಮತ್ತು ಆಹಾರವನ್ನು ಹಾಕುವುದನ್ನು ತಡೆಹಿಡಿಯಲು ಹೇಳಿದೆ. ಇಲ್ಲದಿದ್ದರೆ ಶಸ್ತ್ರ ಚಿಕಿತ್ಸೆ ಸಮಯದಲ್ಲಿ ಹೊಟ್ಟೆಯುಬ್ಬರ, ವಾಂತಿ ಹಾಗೂ ಇದರಿಂದ ಸಾವಿನ ಅನಾಹುತಗಳು ಆಗುತ್ತವೆ. ಪ್ರತಿಯೊಂದು ಜಾನುವಾರುಗಳಿಗೆ ನೋವು ನಿವಾರಕ ಇಂಜೆಕ್ಷನ್ ಮೇಲಾಕ್ಸಿಕ್ಯಾಮ್ 0.2 ಮೀ. ಗ್ರಾಂ. ಪ್ರತಿಕೇಜಿ ದೇಹದ ತೂಕದಂತೆ ಮತ್ತು ರೋಗ ಪ್ರತಿ ನಿರೋಧಕ ಎನ್ರೋಫ್ಲಾಕ್ಸಿನ್ ಇಂಜೇಕ್ಷನ್ 2.5 ರಿಂದ 5 ಮೀ. ಗ್ರಾಂ. ಪ್ರತಿಕೇಜಿ ದೇಹದ ತೂಕದಂತೆ ಸಮನಾಗಿ ಮಾಂಸದಲ್ಲಿ ನೀಡಿದೆ. ಶಸ್ತ್ರ ಚಿಕಿತ್ಸೆ ಮಾಡುವ ಸುತ್ತಲಿನ ಜಾಗ ಮತ್ತು ಗಾಯವನ್ನು ನಂಜುನಿವಾರಕ ಔಷಧ ಸೇವಲಾನ್‌ನ್ನು ಉಪಯೋಗಿಸಿ ಶುಚಿಗೊಳಿಸಲಾಗಿದೆ.

ಈ) ಶಸ್ತ್ರ ಚಿಕಿತ್ಸೆ ಮತ್ತು ಔಷಧೋಪಚಾರದ ವಿವರ : ಕೆಚ್ಚಲು ಬಾವು ಹಾಗೂ ಮುಚ್ಚಿದ ಮೊಲೆಯ ಹಾಲಿನ ನಾಳಗಳಿಗೆ ನೋವು ನಿವಾರಕ ಔಷಧಗಳು, ರೋಗ ಪ್ರತಿರೋಧಕ ಔಷಧಗಳು ಮಾಂಸ ಅಥವಾ ಮೊಲೆಯ ಹಾಲಿನ ನಾಳದಲ್ಲಿ ನೀಡಿದೆ. ಹಾಗೂ ಗಾಯದ ಮೇಲೆ ನಂಜು ನಿವಾರಕ ಔಷಧಗಳಾದ ಸಿಲ್ವರ್ ಸಲ್ಫಾಡಯಾಜಿನ್ ಮತ್ತು ಪವೊಡಿನ್ ಐಯೋಡಿನ್ ಮುಲಾಮುಗಳನ್ನು ಹಚ್ಚಿ ಗುಣಪಡಿಸಿದೆ.

ಆದರೆ ಬಾವು ಅಥವಾ ಸೊಂಕಿಗೆ ತಗುಲಿದ ಮೊಲೆಗಳನ್ನು ಹಿಂಡಿದರು ಹಾಲು ಬಾರದೆ ಇದ್ದರೆ, ಮೊಲೆಯ ನಳಕೆಯನ್ನು ಹಾಕಿ ದಿನಕ್ಕೆ 2 ರಿಂದ 3 ಸಾರಿ ಹಾಲನ್ನು ತೆಗೆಯಲಾಗಿದೆ. ಜಾನುವಾರುಗಳು ಥಿಲೈಬಿಸ್ ರೋಗಗ್ರಸ್ಥವಿದ್ದು ಯಾವುದೇ ಔಷಧೋಪಚಾರದಿಂದ ಸರಿಪಡಿಸದಿದ್ದಾಗ ಅವುಗಳಿಗೆ ಶಸ್ತ್ರ ಚಿಕಿತ್ಸೆಯಿಂದ ಪೂರ್ತಿಯಾಗಿ ಹಾಳಾದ ಮೊಲೆಯನ್ನು ಬುಡ ಸಮೇತವಾಗಿ ತೆಗೆಯಲಾಗಿದೆ. ಇನ್ನೂ ಕೆಲವು ಥಿಲೈಬಿಸ್‌ನಿಂದ ಬಳಲುತ್ತಿರುವ ಜಾನುವಾರುಗಳಿಗೆ ಶಸ್ತ್ರ ಚಿಕಿತ್ಸೆಯಿಂದ ಕೊಳೆತ ಮಾಂಸವನ್ನು ತೆಗೆದು ನಂಜು ನಿವಾರಕ ಔಷಧ ಅಥವಾ ಮುಲಾಮುಗಳನ್ನು ಗಾಯಕ್ಕೆ ಹಚ್ಚಿ ಪಟ್ಟಿಯನ್ನು ಮಾಡಿದೆ. ಇದರಿಂದ ಥಿಲೈಬಿಸ್‌ನಿಂದ ಉದುರಿ ಹೋಗೂವ ಮೊಲೆಗಳನ್ನು ಉಳಸಲಾಗಿದೆ. ಕೆಚ್ಚಲಿನಲ್ಲಿ ಕೀವದ ಗಡ್ಡೆ ಇದ್ದರೆ ಅದನ್ನು ಚೂಪಾದ ಬ್ಲೇಡ್‌ನಿಂದ ಇರಿದು ಕೀವನ್ನು ಹೊರ ತೆಗೆದಿದೆ. ನಂತರ ಕೀವದ ಗಡ್ಡೆಯ ಒಳಗಿನ ಕೀವು ತಯ್ಯಾರು ಮಾಡುವ ಪದರನ್ನು ಶಸ್ತ್ರ ಚಿಕಿತ್ಸೆಯಿಂದ ನಾಶ ಪಡಿಸಿದೆ. ಇದಾದ ಮೇಲೆ ಅದನ್ನು ಮುಲಾಮು ಹಚ್ಚಿ ಅಥವಾ ಔಷಧೋಪಚಾರದ ಪಟ್ಟಿಯಿಂದ ಉಪಚಾರ ಮಾಡಲಾಗಿ ಕೀವದ ಗಡ್ಡೆಯನ್ನು ಗುಣಪಡಿಸಿದೆ. ಕೆಚ್ಚಲು ಮತ್ತು ಮೊಲೆಗಳ ಗಾಯದಲ್ಲಿ ಹುಳಗಳ ಬಾಧೆ ಇದ್ದರೆ ಅವುಗಳನ್ನು ಟರ್ಪೆಂಟೈನ್ ಎಣ್ಣೆ ಅಥವಾ ಹೊಂಗೆ ಎಣ್ಣೆ ಹಚ್ಚಿ ಹುಳಗಳನ್ನು ಸಾಯಿಸಿ ಹಾಗೂ ಚಿಮಿಟದ ಸಹಾಯದಿಂದ ಸತ್ತ ಮತ್ತು ಜೀವಂತವಿರುವ ಹುಳಗಳನ್ನು ತೆಗೆದು ನಂತರ ಗಾಯಕ್ಕೆ ಲೊರ್ಯಾಜ್ಜಿನ್ ಮುಲಾಮು ಹಚ್ಚಿ ಗುಣಪಡಿಸಿದೆ. ಸಣ್ಣ ಪ್ರಮಾಣದ ಕೆಚ್ಚಲಿನ ಗಾಯವಾದರೆ ಮುಲಾಮನ್ನು ಹಚ್ಚಿ ಗಾಯವನ್ನು ಗುಣಪಡಿಸಿದೆ. ಅದೇರೀತಿ ನಾಯಿ ಕಡಿತದಿಂದಾದ ಕೆಚ್ಚಲಿನ ಗಾಯಗಳನ್ನು ನಂಜುನಿವಾರಕ ಔಷಧದಿಂದ ಶುಚಿಗೊಳಿಸಿ ಮುಲಾಮು ಹಚ್ಚಿ ಹೊಲಿಗೆಯನ್ನು ಹಾಕದೆ ಗಾಯವನ್ನು ಮಾಯಿಸಿದೆ. ಕೆಚ್ಚಲುಗಳಿಗೆ ಅಡ್ಡಾದಿಡ್ಡಿಯಾಗಿ ಹರಿದ ಗಾಯಗಳಿದ್ದು, ಮೇಲ್ಪದರು ಹಾಗೂ ಮಾಂಸದ ಪದರುಗಳು ಮಾತ್ರ ಒಳಗೊಂಡಿದ್ದರೆ ನೈಲಾನ್, ಪ್ರೋಲಿನ್ ಮತ್ತು ರೇಷ್ಮೆ ದಾರದಿಂದ ಹರಿದ ಪದರುಗಳನ್ನು ಮರು ಜೋಡಿಸಿ ಹೊಲಿದಿದೆ. ಇನ್ನು ಕೆಲವು ಜಾನುವಾರುಗಳಲ್ಲಿ ಎಲ್ಲಾ ಮೂರು ಪದರುಗಳು ಅಡ್ಡಾದಿಡ್ಡಿಯಾಗಿ ಹರಿದು ಗಾಯಗಳಿದ್ದಲ್ಲಿ ಮೊಲೆಯ ಒಳಪದರಿಗೆ ಕರಗುವ (ಕ್ರೋಮಿಕ್ ಕ್ಯಾಟ್‌ಗಟ್) ಅಥವಾ ಕರಗಲಾರದ (ಪ್ರೋಲಿನ್ ಮತ್ತು ನೈಲಾನ್) 2–0, 3–0 ಮತ್ತು 4–0 ದಾರಗಳಿಂದ ಹೊಲಿಗೆಯನ್ನು ಹಾಕಿದೆ. ಮೊಲೆಯ ನಡುವಿನ ಮಾಂಸಕ್ಕೆ ಮತ್ತು ಹೊರಪದರಾದ ಚರ್ಮಕ್ಕೆ ಕರಗಲಾರದ (ಪ್ರೋಲಿನ್ ಮತ್ತು ನೈಲಾನ್) ದಾರಗಳಿಂದ ಹೊಲಿಗೆಯನ್ನು ಹಾಕಿದೆ. ನಂತರ ಹೊಲಿದ ಮೊಲೆಯನ್ನು ಹಿಂಡಿದರು ಹೊಲಿಗೆ ಹಾಕಿದ ಜಾಗದಿಂದ ಹಾಲು ಸೋರದಿರುವುದನ್ನು ಖಚಿತ ಪಡಿಸಿದೆ. ಮೊಲೆಯ ನಾಳವುಳ್ಳ ಜಾನುವಾರುಗಳಿಗೆ ಮರು ಜೋಡಣೆ ಶಸ್ತ್ರ ಚಿಕಿತ್ಸೆಯನ್ನು ಮಾಡಿದೆ. ಮೊಲೆಯ ನಾಳವನ್ನು ಮೊದಲು ನಂಜುನಿವಾರಕ ಔಷಧದಿಂದ ಶುಚಿಗೊಳಿಸಿ ಅಂಡಾಕಾರದ ಹೊಸ ಗಾಯವನ್ನು ನಾಳದ ತುದಿಯಲ್ಲಿ ಮಾಡಿ ನಂತರ ಒಳಪದರು ಹಾಗೂ ಹೊರಪದರುಗಳನ್ನು ಬೇರ್ಪಡಿಸಿದೆ. ಬೇರ್ಪಡಿಸಿದ ಪದರುಗಳನ್ನು ಮೇಲೆ ತಿಳಿಸಿದ ಹಾಗೆ ಬೇರೆ ಬೇರೆಯಾಗಿ ಒಳಪದರು ಮತ್ತು ಹೊರಪದರುಗಳನ್ನು ದಾರದಿಂದ ಹೊಲಿಗೆಯನ್ನು ಹಾಕಿದೆ. ಗಾಯ ಮಾಯುವವರೆಗೆ ಪ್ರಾಸ್ಥೆಟಿಕ್ ನಳಕೆಗಳಾದ ಖಾಲಿಯಾದ ಲೇಖನದ ನಳಕೆ, ಮೊಲೆಯ ಗುಂಡಿಗಳು, ಔಷಧ ನೀಡುವ ಪ್ಲಾಸ್ಟಿಕಿನ ನಳಕೆಗಳನ್ನು ಮೊಲೆಯ ಹಾಲಿನ ನಾಳದಲ್ಲಿ ಜೋಡಿಸಿದೆ. ಇದರಿಂದ ಮೊಲೆಯಲ್ಲಿರುವ ಹಾಲನ್ನು ತೆಗೆಯುವುದು ಹಾಗೂ ಗಾಯವನ್ನು ಮಾಯುವಾಗ ಮೊಲೆಯು ಮುಚ್ಚದಂತೆ ನೋಡಲು ಸಹಾಯಕಾರಿಯಾಗಿವೆ. ಆಡುಗಳಲ್ಲಿ ಕೆಚ್ಚಲಿನ ಬಾವಿನಿಂದ ಗಟ್ಟಿಯಾಗಿರುವುದು, ಕೊಳೆತು ಹೋಗಿರುವುದು, ಚಿಕಿತ್ಸೆಯಾಗದ ರೀತಿಯಲ್ಲಿ ಗಾಯಗಳಿದ್ದಿದ್ದರಿಂದ ಒಂದು ಬದಿಯ ಕೆಚ್ಚಲನ್ನು ಪೂರ್ತಿಯಾಗಿ ಅಥವಾ ಕೆಚ್ಚಲಿನ ಭಾಗಶಃದರಷ್ಟು ತೆಗೆಯಲಾಗಿದೆ. ಇಲ್ಲಿ ರೋಗಕ್ಕೆ ಒಳಗಾದ ಕೆಚ್ಚಲ್ಲನ್ನು ಬುಡಭಾಗಕ್ಕೆ ಕತ್ತರಿಸಿ ಕೆಚ್ಚಲ್ಲನ್ನು ಹಿಡಿದಿಟ್ಟಿರುವ ಮಾಂಸದ ಕಟ್ಟುಗಳನ್ನು ಕತ್ತರಿಸಿ, ಕೆಚ್ಚಲ್ಲನ್ನು ದೇಹದಿಂದ ಬೇರ್ಪಡಿಸಿದೆ. ಕೆಚ್ಚಲ್ಲನ್ನು ಬೇರ್ಪಡಿಸುವಕ್ಕಿಂತ ಮುಂಚೆ ಕೆಚ್ಚಲಿನ ಅಪದಮನಿ, ಅಭಿದಮನಿಗಳನ್ನು ಮತ್ತು ಮಾಂಸದ ಕಟ್ಟುಗಳನ್ನು ಕರಗುವ ದಾರದಿಂದ ಕಟ್ಟಿ ರಕ್ತ ಸ್ರಾವ ಆಗದಂತೆ ನೋಡಿದೆ. ಇದಾದಮೇಲೆ ಉಳಿದ ಚರ್ಮ ಹಾಗೂ ಮಾಂಸದ ಪದರುಗಳನ್ನು ಮರು ಜೋಡಿಸಿ ನೈಲಾನ್ ದಾರದಿಂದ ಹೊಲಿಗೆಯನ್ನು ಹಾಕಿದೆ. ಇದೇ ರೀತಿಯಾಗಿ ಜಾನುವಾರುಗಳಲ್ಲಿ ಕೊಳೆತು ಕಳಚಿ ಬೀಳುವ ಕೆಚ್ಚಲುಗಳಿದ್ದರೆ ಪೂರ್ತಿಯಾಗಿ ಕೆಚ್ಚಲ್ಲನ್ನು ಶಸ್ತ್ರ ಚಿಕಿತ್ಸೆಯಿಂದ ಉಪಚಾರ ಮಾಡಿದೆ.

ಊ) ಶಸ್ತ್ರ ಚಿಕಿತ್ಸೆ ನಂತರ ಉಪಚಾರ : ಪ್ರತಿಯೊಂದು ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಜಾನುವಾರುಗಳಿಗೆ ಮಾಂಸದಲ್ಲಿ ಹಾಗೂ ಮೊಲೆಯಲ್ಲಿ ರೋಗ ಪ್ರತಿರೋಧಕ ಇಂಜೇಕ್ಷನ್‌ಗಳನ್ನು 5 ರಿಂದ 10 ದಿವಸಗಳವರೆಗೆ ಹಾಗೂ ನೋವು ನಿವಾರಕ ಔಷಧಗಳನ್ನು 3 ರಿಂದ 5 ದಿವಸದಗಳ ನೀಡಿದೆ. ಥಿಲೈಬಿಸ್ ಹಾಗೂ ಮೊಲೆಯ ನಾಳದಿಂದ ಬಳಲುತ್ತಿರುವ ಜಾನುವಾರುಗಳಿಗೆ ಶಸ್ತ್ರ ಚಿಕಿತ್ಸೆಯ ನಂತರ ಔಷಧೋಪಚಾರದ ಪಟ್ಟಿಯನ್ನು ಗಾಯ ಮಾಯುವ ವರೆಗೆ ಕಟ್ಟಿಸಿದೆ. ಶಸ್ತ್ರ ಚಿಕಿತ್ಸೆಯ ನಂತರ ಕೈಗಳಿಂದ ಹಾಲು ಕರೆಯುವುದನ್ನು, ಕರುಗಳಿಗೆ ಹಾಲು ಕುಡಿಸುವುದನ್ನು ಮತ್ತು ಮೊಲೆಗಳ ಗಾಯಕ್ಕೆ ಹೊರಗಿನಿಂದ ಯಾವುದೇ ಇರಿತವಾಗುವುದನ್ನು ಸುಮಾರು 10 ರಿಂದ 15 ದಿವಸಗಳ ವರೆಗೆ ತಡೆಹಿಡಿದಿದೆ. ಇಂತಹ ಸಂದರ್ಭದಲ್ಲಿ ಹಿಂಡದೆ ಉಳಿದಿರುವ ಹಾಲನ್ನು ಮೊಲೆಯ ನಳಕೆಯಿಂದ ದಿನದಲ್ಲಿ 2 ರಿಂದ 3 ಸಾರಿ ತೆಗೆದು ಹಾಕಿದೆ. ರೈತರಿಗೆ ಕೆಚ್ಚಲಿನ ಹಾಗೂ ಮೊಲೆಯ ಭಾಗವನ್ನು ಮತ್ತು ದನದ ಕೊಟ್ಟಿಗೆಯನ್ನು ಗಾಯ ಮಾಯುವ ವರೆಗೆ ಶುಚಿಯಾಗಿಟ್ಟುಕೊಳ್ಳುವುದರ ಕುರಿತು ಬುದ್ಧಿ ಮಾತನ್ನು ಹೇಳಿದೆ. ಸರಿಯಾಗಿ ಗಾಯವು ಗುಣವಾದ ಬಳಿಕ ಸುಮಾರು 10 ರಿಂದ 15 ದಿವಸಗಳು ಕಳೆದ ನಂತರ ಮೊಲೆಯ ಚರ್ಮದ ಮೇಲೆ ಇರುವ ದಾರದ ಗಂಟುಗಳನ್ನು ತೆಗೆದಿದೆ ಮತ್ತು ನಂತರದಲ್ಲಿ ನಂಜು ನಿವಾರಕ ಔಷಧದಿಂದ ಉಪಚರಿಸಿದೆ.

3. ಫಲಿತಾಂಶ ಮತ್ತು ವಿಮರ್ಶೆ : ಈ ಅಧ್ಯಯನದಲ್ಲಿ ಒಟ್ಟಾರೆಯಾಗಿ 35 ಜಾನುವಾರುಗಳಿಗೆ ವಿವಿಧ ಕೆಚ್ಚಲಿನ ಹಾಗೂ ಮೊಲೆಗಳ ರೋಗಗಳಿಗೆ ಚಿಕಿತ್ಸೆಯನ್ನು ನೀಡಿದೆ. ಇವುಗಳಲ್ಲಿ 17 ಎಮ್ಮೆಗಳು 8 ಆಕಳುಗಳು ಹಾಗೂ 10 ಆಡುಗಳು ಒಳಗೊಂಡಿದ್ದವು. ಎಮ್ಮೆಗಳಲ್ಲಿ ಥಿಲೈಬಿಸ್ ರೋಗವು

ಹೆಚ್ಚಾಗಿ ಕಂಡು ಬಂದು ನಂತರದ ಸ್ಥಾನದಲ್ಲಿ ಮೊಲೆಯ ನಾಳ ಹಾಗೂ ಅಡ್ಡಾದಿಡ್ಡಿಯಾಗಿ ಹರಿದಿರುವ ಮೊಲೆಗಳ ರೋಗಗಳು ಕಾಣಿಸಿದವು. ಆದರೆ ಆಕಳನಲ್ಲಿ ಅಡ್ಡಾದಿಡ್ಡಿಯಾಗಿ ಹರಿದಿರುವ ಮೊಲೆ ಹಾಗೂ ಮೊಲೆಯ ಊತದಿಂದ ಹಾಲು ಬಾರದಿರುವ ರೋಗಗಳು ಇತರೆ ಸಮಸ್ಯೆಗಳಿಗಿಂತ ಹೆಚ್ಚಾಗಿದ್ದವು. ಆಡುಗಳಲ್ಲಿ ಹೆಚ್ಚಾಗಿ ಮೊಲೆಯ ನಾಳದ ರೋಗಗಳು ಕಂಡುಬಂದಿವೆ. ಮೊಲೆಯ ಗಾಯಗಳು ಅಥವಾ ಕೆಚ್ಚಲು ಬಾವುಗಳ ರೋಗಗಳು ಆಡುಗಳಲ್ಲಿ ಕಡಿಮೆ ಪ್ರಮಾಣದಲ್ಲಿದ್ದವು. ಆದರೆ ಎಮ್ಮೆ ಮತ್ತು ಆಕಳನಲ್ಲಿ ಮೊಲೆಯ ಗಾಯಗಳು ಅಥವಾ ಕೆಚ್ಚಲು ಬಾವುಗಳ ರೋಗಗಳು ಆಡುಗಳಿಗಿಂತ ಹೆಚ್ಚಾಗಿ ಕಂಡು ಬಂದಿದೆ. ವಿವಿಧ ರೀತಿಯ ರೋಗ ಪತ್ತೆ ಹಚ್ಚುವ ವಿಧಾನಗಳಾದ ಮುಟ್ಟಿ ನೋಡುವುದು, ಮೊಲೆಯ ನಳಕೆ ಹಾಕಿ ನೋಡುವುದು, ಕ್ಷ–ಕಿರಣ ಹಾಗೂ ಶ್ರವಣಾತೀತದಿಂದ ಕೆಚ್ಚಲಿನ ರೋಗಗಳನ್ನು ನಿಖರತೆಯಿಂದ ಪತ್ತೆ ಹಚ್ಚಲು ಅನುಕೂಲವಾದವು ಮತ್ತು ಸೂಕ್ತ ಚಿಕಿತ್ಸೆಯನ್ನು ಆಯ್ಕೆಮಾಡಲು ಪರಿಣಾಮಕಾರಿಯಾದವು. ಕಟ್ಟುನಿಟ್ಟಾದ ಔಷಧೋಪಚಾರ, ಸೂಕ್ಷ್ಮತೆಯಿಂದ ಕೂಡಿದ ಶಸ್ತ್ರ ಚಿಕಿತ್ಸೆ, ಬಳಸಿದ ಹೊಲಿಗೆ ದಾರಗಳ ಆಯ್ಕೆ, ರೋಗ ಪ್ರತಿರೋಧಕ ಔಷಧದ ಆಯ್ಕೆ, ಪ್ರಮಾಣಿಕತೆಯಿಂದ ಶಸ್ತ್ರಚಿಕಿತ್ಸೆಯ ನಂತರದ ನಿರ್ವಹಣೆ ಹಾಗೂ ಕೆಚ್ಚಲಿನ ಮತ್ತು ಮೊಲೆಗಳ ಶುಚಿತ್ವವನ್ನು ಕಾಪಾಡಿವುದರಿಂದ ಕೆಚ್ಚಲಿಗೆ ತಗುಲಿದ ರೋಗಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಣದಲ್ಲಿಡಲು ಅನುಕೂಲವಾದವು.

4. ಶಸ್ತ್ರ ಚಿಕಿತ್ಸೆಯ ನಂತರದ ತೊಂದರೆಗಳು : ಒಂದು ಆಡಿನಲ್ಲಿ ಮೊಲೆಯ ನಾಳಕ್ಕೆ ಮರು ಜೋಡಣೆ ಶಸ್ತ್ರ ಚಿಕಿತ್ಸೆಯು ಫಲಪ್ರದಾಯಕವಾಗಲಿಲ್ಲ. ಎರಡು ಎಮ್ಮೆಗಳಲ್ಲಿ ಮೊಲೆಗಳ ನಾಳ ಮರು ಜೋಡಣೆ ಶಸ್ತ್ರ ಚಿಕಿತ್ಸೆ ನೀಡಿದರು ಸಹಿತ ಗಾಯದಿಂದ ಗುಣವಾದವು. ಆದರೆ ಹಾಲು ಬಾರದೆ ಮೊಲೆಯ ಹಾಲಿನ ನಾಳವು ಗಟ್ಟಿಯಾಗಿ ಶಾಶ್ವತವಾಗಿ ಮುಚ್ಚಿಹೋದವು.

5. ತೀರ್ಮಾನಗಳು :

* ವಿವಿಧ ರೀತಿಯ ಕೆಚ್ಚಲಿನ ರೋಗಗಳನ್ನು ನಿಖರತೆಯಿಂದ ಪತ್ತೆ ಹಚ್ಚುವದು, ಸೂಕ್ತ ಚಿಕಿತ್ಸೆಯನ್ನು ನೀಡುವುದು ಮತ್ತು ಕೆಚ್ಚಲಿನ ಮತ್ತು ಮೊಲೆಗಳ ಶುಚಿತ್ವವನ್ನು ಕಾಪಾಡುವುದು

* ಕಟ್ಟುನಿಟ್ಟಾದ ಔಷಧೋಪಚಾರ, ಸೂಕ್ಷ್ಮತೆಯಿಂದ ಕೂಡಿದ ಶಸ್ತ್ರ ಚಿಕಿತ್ಸೆ, ಪ್ರಮಾಣಿಕತೆಯಿಂದ ಶಸ್ತ್ರಚಿಕಿತ್ಸೆಯ ನಂತರದ ನಿರ್ವಹಣೆಯನ್ನು ಮಾಡುವುದು ಮತ್ತು ಹಿಂಡದೆ ಉಳಿದಿರುವ ಹಾಲನ್ನು ಮೊಲೆಯ ನಳಕೆಯಿಂದ ದಿನದಲ್ಲಿ 2 ರಿಂದ 3 ಸಾರಿ ತೆಗೆಯಬೇಕು

* ಜಾನುವಾರುಗಳಲ್ಲಿ ಪೂರ್ತಿಯಾಗಿ ಮೊಲೆಯ/ಕೆಚ್ಚಲ್ಲನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆದು ಹಾಕುವುದು ಮತ್ತು ಮೊಲೆಯ ನಾಳದ ಮರು ಜೋಡಣೆಗಳು ಪರಿಣಾಮಕಾರಿಯಾದ ಚಿಕಿತ್ಸೆಗಳು

6. ಉಪಕಾರ ಸ್ಮರಣೆ : ಈ ಸಂಶೋಧನೆಯನ್ನು ಯಶಸ್ವಿಯಾಗಿ ಪಶು ಶಸ್ತ್ರ ಚಿಕಿತ್ಸೆ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಕೈಗೊಳ್ಳಲು ಹಣಕಾಸಿನ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುವ ಸಂಶೋಧನಾ ನಿರ್ದೇಶಕರು, ಕಪಪಮೀವಿವಿ, ಬೀದರ ಮತ್ತು ಡೀನ್ ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಇವುಗಳಿಗೆ ಮುಖ್ಯ ಸಂಶೋಧನಾಕಾರರು ಹಾಗೂ ಸಹ–ಸಂಶೋಧನಾಕಾರರು ಕೃತಜ್ಞತೆಗಳನ್ನು ಸಲ್ಲಿಸಲಾಗಿದೆ.

7. ಉಲ್ಲೇಖನಗಳು :

1) ಲಂಬ್ ಐಂಡ್ ಜೋನ್ಸ್ (1996). ಆಕಳಿನ ಕೆಚ್ಚಲು ಮತ್ತು ಮೊಲೆಗಳ ಅರವಳಿಕೆಯ ಕುರಿತು. ಪಶುವೈದ್ಯಕೀಯ ಅರವಳಿಕೆ. 3ನೇ ಮುದ್ರಣ ವಿಲಿಯನ್ಸ್ ಮತ್ತು ವಿಲ್ಕಿನ್ಸ್, ಫಿಲಾಡೆಲ್ಫಿಯಾ, ಮೆರಿಲ್ಯಾಂಡ್, ಯು.ಎಸ್.ಎ. ಪುಟ ಸಂಖ್ಯೆ 623 ರಿಂದ 671.

2) ರಾಬರ್ಟ್ಸ್ ಜೆ. ಮತ್ತು ಫಿಶವಿಕ್ ಜೆ. (2010). ದನಗಳಲ್ಲಿ ಮೊಲೆಗಳ ಶಸ್ತ್ರ ಚಿಕಿತ್ಸೆ. ಇನ್ ಪ್ರ್ಯಾಕ್ಟಿಸ್ 32:388–396.

3) ಸ್ಮಿಟ್, ಕೆ.ಎ., ಆರಿಫಿ ಎಂ. ಮತ್ತು ಡಾಬ್ಸನ್ ಎಚ್. (1994). ಹಾಲು ಹಿಂಡುವ ಆಕಳುಗಳಲ್ಲಿ ಹೆಚ್ಚಿನ ಮೊಲೆಗಳ ಹಾಗೂ ಮೊಲೆಯ ಸಂಕೀರ್ಣದಿಂದಿರುವ ಹಾಲಿನ ನಾಳಗಳ ಶಸ್ತ್ರ ಚಿಕಿತ್ಸೆಯ ನಂತರ ಪರೀಕ್ಷೆಗಳು. ಕೆನಡಿಯನ್ ವೆಟರಿನರಿ ಜರ್ನಲ್ 35:25–30.

4) ಸ್ಟೀನರ್ ಎ. ಮತ್ತು ವೋನ್ ರಾಬ್ಟ್ ಎ. (2003) ದನಗಳಲ್ಲಿ ಒಂದು ಪ್ರಮುಖವಾದ ಸ್ಥಳದಲ್ಲಿ ಅರವಳಿಕೆ ನೀಡುವ ಔಷಧದ – ವಿಮರ್ಶೆ. ಮಕಾಡಿ ಫಂಸಾರಿ ಸ್ಕೀವೇಜ್ ಆರ್ಚ್ ಟೈರ್‌ಹೈಲ್ಕಡ್ 145 (6) : 262–271

5) ತ್ಯಾಗಿ ಮತ್ತು ಸಿಂಗ್ (1993). ದಿ ಮೆಮರಿ ಗ್ಲ್ಯಾಂಡ್ಸ್, ಮೆಲಕು ಹಾಕುವ ಪ್ರಾಣಿಗಳ ಶಸ್ತ್ರ ಚಿಕಿತ್ಸೆ. 12ನೇ ಮುದ್ರಣ ಸಿ.ಬಿ.ಎಸ್. ಪಬ್ಲಿಶರ್ಸ್ ಮತ್ತು ಪ್ರೈ.ಲಿ. ಪುಟ ಸಂಖ್ಯೆ 167–174.

ಪ್ಲಾಸ್ಟಿಕ್‌ನ ದುರ್ಬಳಿಕೆಯಿಂದ ಜಾನುವಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮಗಳು

ಮೇಘ ಜಿ.ಕೆ*., ದಿಲೀಪಕುಮಾರ, ಡಿ ಹಾಗೂ ಶಿವ ಪ್ರಕಾಶ, ಬಿವ್ಹಿ
*ಅಂತಿಮ ವರ್ಷದ ವಿದ್ಯಾರ್ಥಿನಿ. ಶಸ್ತ್ರ ಚಿಕಿತ್ಸೆ ಹಾಗೂ ಕ್ಷ–ಕಿರಣ ವಿಭಾಗ, ಪಶು ವೈದ್ಯಕೀಯ ಮಹಾವಿದ್ಯಾಲಯ,
ಬೀದರ–585401

ಪ್ಲಾಸ್ಟಿಕ್‌ನ ಸೇವನೆಯಿಂದ ಪ್ಲಾಸ್ಟಿಕ್ ಅನ್ನಾಹಾರದಲ್ಲಿ ಏಕಿಕೊಂಡು ಆಹಾರ ಸೇವನೆಗೆ ತೊಂದರೆ ಉಂಟಾಗುವುದು ಹೊಟ್ಟೆ ಉಬ್ಬರ ಕಾಣಿಸಿಕೊಳ್ಳುವುದು. ಖಾಲಿಯಿದ್ದ ಪ್ಲಾಸ್ಟಿಕ್ ಸೇವನೆ ಮಾಡಿದ್ದರೆ ಅದು ಹೊಟ್ಟೆಯ ಮುಂಭಾಗ (ರುಮ್ಮೆನ್)ನಲ್ಲಿ ಶೇಖರಣೆಯಾಗಿ ಅಜೀರ್ಣತೆಯನ್ನುಂಟು ಮಾಡುವುದಲ್ಲದೆ

ಹಾಲು, ಮಾಂಸ, ಉಣ್ಣೆ, ತುಪ್ಪಟಗಳ ಉತ್ಪಾದನೆಯನ್ನು ಕುರಿತ–ಗೊಳಿಸಬಹುದು. ಒಂದು ವೇಳೆ ಪ್ಲಾಸ್ಟಿಕ್‌ನ ತುರಿಹುಗಳು ಕರುಳಿನಲ್ಲಿ ಸಿಕ್ಕಿ ಬಿದ್ದರೆ ಜಾನುವಾರುಗಳು ಅಸುನಿಗಬಹುದು ಪ್ಲಾಸ್ಟಿಕ್ ಮಾಲ್ಯರಿಹಾಮಗಳು ಕುರಿತು ರೇಖನದಲ್ಲಿ ಸವಿವರವಾಗಿ ಚರ್ಚಿಸಲಾಗುವುದು.

ಪರಿಚಯ : ಪ್ಲಾಸ್ಟಿಕ್ ಎಂದರೆ ಪೆಟ್ರೋಲಿಯಮ್‌ನ ಹಲವು ಮೋನುಮರ್‌ಗಳನ್ನು ರಾಸಾಯನಿಕ ಬಂದದಿಂದ ಒಗ್ಗೂಡಿದ ಒಂದು ಕೃತಕ ಫಾಲಿಮರ್ ಮತ್ತು ಪ್ಲಾಸ್ಟಿಕ್ ಅಜೈವಿಕ. ಪ್ಲಾಸ್ಟಿಕ್ ಮಾನವ ನಿರ್ಮಿತ ಕಚ್ಚಾತೈಲ ಸಾರದ ಹಲವು ಅಂಶಗಳ ಸಂಯೋಜಿತ. ಈ ಸಂಯೋಜನೆ ಪ್ರಕೃತಿಯ ಅಸ್ತಿತ್ವದಲಲ್ಲ ಮತ್ತು ಈ ಸಂಯೋಜನೆಯನು ಕುಸಿತಗೊಳಿಸಲು ನೈಸರ್ಗಿಕವಾಗಿ ಯಾವುದೇ ವ್ಯವಸ್ಥೆ ಇಲ್ಲ.

ಜಾನುವಾರಗಳಲ್ಲಿ, ಪ್ಲಾಸ್ಟಿಕ್ ಸೇವನೆಯ ಹಿನ್ನೆಲೆಯಲ್ಲಿ ಆಗುವ ಮೆಲುಕು ಚೀಲ ಗಟ್ಟುವಿಕೆಯ ಪ್ರಭುತ್ವ :

1) ಖಸಾಯಿಖಾನೆಗೆ ಕಳಸಲಾದ ಜಾನುವಾರುಗಳ ಮೇಲೆ ನಡೆದ ಅಧ್ಯಯನದ ಮೇರೆಗೆ :

* 3.67% ಹತ್ಯೆಗೊಂಡ ಹೋರಿಗಳ ಹಾಗೂ 9.62% ಎಮ್ಮೆಗಳಲ್ಲಿ ಮೇಲುಕುಚೀಲದಲ್ಲಿ ಪ್ಲಾಸ್ಟಿಕ್ ಕಂಡುಬಂದಿದೆ. (ಪ್ರಹ್ಲಾದ್, 2005).

* ಖಸಾಯಿಖಾನೆಯ ಅಧ್ಯಯನದ ಸಮಯದಲ್ಲಿ, ಗಮನಕ್ಕೆ ಬಂದ ಬಹುತೇಕ ಪ್ಲಾಸ್ಟಿಕ್ ವಸ್ತುಗಳೆಂದರೆ ಪ್ಲಾಸ್ಟಿಕ್ ಚೀಲಗಳು (95%) ನಂತರದಲ್ಲಿ ಧೃಢ ರೆಕ್ಸಿನ್ ಸಮೂಹ (3%), ಸೈಕಲ್ ನಳಕೆ (1%) ಮತ್ತು ನೈಲಾನ್ ಹಗ್ಗಗಳು (1%).

2) ವೈದ್ಯಕೀಯ ಸಂದರ್ಭಗಳಲ್ಲಿ ಪ್ಲಾಸ್ಟಿಕ್‌ನಿಂದ ಉಂಟಾದ ಮೆಲಕುಚೀಲ ಗಟ್ಟುವಕಯೆ ಪ್ರಭುತ್ವ ;

* 0.44% ಅಷ್ಟು ವೈದ್ಯಕೀಯ ಸಂದರ್ಭಗಳಲ್ಲಿ ಮೆಲುಕುಚೀಲ ಗಟ್ಟುವಿಕೆಯ ಪ್ರತ್ಯೇಕ ಕಾರಣ ಪ್ಲಾಸ್ಟಿಕ್ (ಪ್ರಹ್ಲಾದ್, 2005).

* ಪ್ರಯೋಗಿಕವಾಗಿ ಪ್ಲಾಸ್ಟಿಕ್ ವಸ್ತುಗಳನ್ನು ಮೆಲುಕುಚೀಲದ ಶಸ್ತ್ರಚಿಕಿತ್ಸೆಯಿಂದ ತೆಗೆದ ಹಿನ್ನಲೆಗಳು ಹೀಗಿವೆ, ಮುಂಬೈಯಲ್ಲಿ 22 ದನಗಳಲ್ಲಿ (ಮೆಹೆಂಡೇಲ್ ಮತ್ತಿತರರು, 1998). 16 ದನಗಳು ಟರ್ಕಿಯಲ್ಲಿ ಮಗ್‌ರಬಿ ಮತ್ತು (ಹೈಲಟ್, 2001).

ಜಾನುವಾರುಗಳು ಪ್ಲಾಸ್ಟಿಕ್ ಸೇವಿಸಲು ಪ್ರೇರೆಪಿಸುವ ಸಂದರ್ಭಗಳು ಮತ್ತು ಪ್ಲಾಸ್ಟಿಕ್ ಸೇವನೆಯ ಕಾರಣಗಳು

* ಕಡಿಮೆ ಮಳೆ ಮತ್ತು ಅರಣ್ಯ ನಾಶದಿಂದ ಮೇವಿನ ಕೊರತೆ ಮತ್ತು ಮೇಯಿಸುವಿಕೆಯ ಭೂಮಿ ನಿರಂತರ ಕುಸಿತಗೊಂಡಿದೆ. ಅರೆ–ನಗರ, ಹಾಗೂ ನಗರ ಪ್ರದೇಶದ ಮೂಲೀಕಂಗೆ ತಮ್ಮ ಜಾನುವಾರುಗಳಿಗೆ ಸೊಂಪಾಡ ಹಸಿರು ಮೇವು ಮತ್ತು ಮರದ ಎಲೆಗಳನ್ನು ತಿನ್ನಿಸಲು ಅವರಿಗೆ ಪ್ರಮುಖ ಸಮಸ್ಯೆಯಾಗಿದೆ. ಈ ಸಮಸ್ಯೆಯಿಂದ ಹೊರಬರಲು ಮಾಲೀಕರು ಜಾನುವಾರುಗಳನ್ನು ಪಟ್ಟಣದೊಳಗೆ ಮೇಯಲು ಬಿಡುತ್ತಾರೆ (ವಿಶ್ವನಾಥ, 2005).

* ಮುಕ್ತ ಹುಲ್ಲುಗಾವಲಿನಲ್ಲಿ ಮೇಯುವ ಜಾನುವಾರುಗಳು ಭಕ್ಷಕ–ಬಲಿ ವಿದ್ಯಮಾನಗಳಿಗೆ ಒಳಗಾಗುದರಿಂದ ಅವು ಹಗಲು ಹುಲ್ಲಿನ ಜೊತೆಗೆ ಇತೆರೆ ಅನ್ಯ ವಸ್ತುಗಳ ಸೇವಿಸಿ ರಾತ್ರಿ ಸಮಯದಲ್ಲಿ ಸುರಕ್ಷಿತ ಸ್ಥಳವನ್ನು ಸೇರಿದ ಮೇಲೆ ಅವನ್ನು ಮೆಲುಕು ಹಾಕುವ ಚಟುವನ್ನು ಹೊಂದಿದ್ದವು. ಈ ಚಟುವೇ ಪಳಗುವಿಕೆಯ ನಂತರವೂ ಮುಂದುವರೆದಿದೆ.

* ಗರಿಷ್ಠ ಆಯ್ಕೆಯ ಮೇಯುವಿಕೆಯಲ್ಲಿ ಮೊದಲು ಆಡುಗಳು ಆನಂತರದಲ್ಲಿ ಹೋರಿಗಳು ಮತ್ತು ಎಮ್ಮೆಗಳು ಹೀಗಾಗಿ ಬಹುತೇಕ ಎಮ್ಮೆಗಳು ಸರ್ವೇಸಾಮಾನ್ಯವಾಗಿ ಪ್ಲಾಸ್ಟಿಕ್‌ನ್ನು ಮೇವಿನೊಂದಿಗೆ ಸೇವಿಸುತ್ತವೆ.

* ರಂಜಕದ ಕೊರತೆಯ ಅನ್ಯ ವಸ್ತುಗಳ ಸೇವನೆಯನ್ನು ಉತ್ತೇಜಿಸುತ್ತದೆ. (ವಿಶ್ವನಾಥ, 2005).

* ಪೌಷ್ಟಿಕಾಂಶದ ಕೊರತೆ ಇರುವ ಎಮ್ಮೆಗಳು ಅನ್ಯ ವಸ್ತುಗಳಾದಂತಹ ಚರ್ಮದ ತುಂಡುಗಳು, ಉಣ್ಣೆಯ ಚಂಡುಗಳು, ಪೊಲೀತಿನ್ ಮತ್ತು ರಬ್ಬರ್‌ಹಾಳೆಗಳ ಸೇವಿಸುತ್ತವೆ ಎಂದು ಹಲವು ವಿಜ್ಞಾನಿಗಳು ವರದಿ ಮಾಡಿದ್ದಾರೆ (ದಿಲೀಪ್‌ಕುಮಾರ ಮತ್ತಿತರು, 1995 ; ಶಿವಪ್ರಕಾಶ್ ಮತ್ತಿತರು, 2003; ಸಳುಂಕೆ ಮತ್ತಿತರರು, 2003 ಮತ್ತು ಬೂದುರು ಮತ್ತಿತರರು, 2010).

* ಸಾಮಾನ್ಯವಾಗಿ ದನಗಳಲ್ಲಿ ರುಚಿಯ ತಾರತಮ್ಯದ ಕೊರತೆಯಿಂದ ಹಲವು ವಸ್ತುಗಳ ಸೇವೆನೆಗೆ ತುತ್ತಾಗುತ್ತವೆ. ಆದರೆ ಇವುಗಳನ್ನು ಉಳದ ಜಾತಿಯ ಪ್ರಾಣಿಗಳು ತಿರಸ್ಕರಿಸುತ್ತವೆ. (ರೊಡೋಸ್ಟಿಟಿಸ್ ಮತ್ತಿತರರು, 2000).

* ಆಕಳು ಮತ್ತು ಎಮ್ಮೆಗಳಲ್ಲಿ ಪ್ರಾಥಮಿಕ ಮೆಲುಕುಚೀಲ ಗಟ್ಟಿಸುವಿಕೆ ಆಗುವುದು ಹಸಿವಿನ ಖಿನ್ನತೆಯಿಂದ ಹಲವು ಜಾನುವಾರುಗಳು ಪ್ಲಾಸ್ಟಿಕ್ ಹಗ್ಗಗಳು ಅಥವಾ ಚರ್ಮದ ತುಂಡುಗಳ ಸೇವೆನೆಯ, ಮೇಲುಕು ಚೀಲದಲ್ಲಿ ಆಗುವ ಕಡೆಯುವ ಚಟುವಟಿಕೆಗೆ ಒಳಗಾಗಿ ಗಟ್ಟಿ ಚಂಡುವಿನಂತಾಗಿ ಮೆಲುಕು ಚೀಲದ ಗಟ್ಟಿಸುವಿಕೆಗೆ ಕಾರಣವಾಗುತ್ತದೆ. (ಪಿಸೆಟ್, 1962).

* ಹಸಿವಿನ ಖಿನ್ನತೆಯುಳ್ಳ ಜಾನುವಾರುಗಳಲ್ಲಿ ಕಳಪೆ ಗುಣ ಮಟ್ಟದ ಒಣಮೇವು ಕೂಡ ಮೆಲಕು ಚೀಲದ ಗಟ್ಟಿಸುವಿಕೆಗೆ ಕಾರಣವಾಗುತ್ತದೆ.

* ಮುಕ್ತ ಹುಲ್ಲುಗಾವಲಿನ ವ್ಯವಸ್ಥೆಯಡಿಯಲ್ಲಿ, ಜಾನುವಾರುಗಳನ್ನು ಸಾಕಿರುವ ನಗರ ಮತ್ತು ಅರೆ–ನಗರ ಪ್ರದೇಶಗಳಲ್ಲಿ ಅವುಗಳನ್ನು ಸಾಮಾನ್ಯವಾಗಿ ಸಂತೆ ಸ್ಥಳಗಳಲ್ಲಿ, ರಸ್ತೆ ಪಕ್ಕದಲ್ಲಿ ಮತ್ತು ಅಡಿಗೆ ಮನೆಯ ತ್ಯಾಜ್ಯಗಳ ಹತ್ತಿರ ಬಿಟ್ಟು ಬಿಡುತ್ತಾರೆ. ಜಾನುವಾರುಗಳು ಪ್ಲಾಸ್ಟಿಕ್ ಚೀಲದಲ್ಲಿ ಎಸೆಯಲಾದ ತರಕಾರಿ ತ್ಯಾಜ್ಯಗಳನ್ನು ತಿನ್ನುವ ಪ್ರಯತ್ನದಲ್ಲಿ ಅವುಗಳು ಪೂರ್ಣವಾಗಿ ಪ್ಲಾಸ್ಟಿಕ್ ಚೀಲದ ಸಮೇತ ತಿನ್ನುತ್ತವೆ, ಅವುಗಳನ್ನು ಬೇರ್ಪಡಿಸಲಾಗದೆ. (ವಿಶ್ವನಾಥ, 2005 ಮತ್ತು ಬೂದುರ್

ಮತ್ತಿತರರು, 2010).

ಮೆಲಕು ಹಾಕುವ ಪ್ರಾಣಿಗಳ ಉತ್ಪಾದನೆ ಮತ್ತು ಅವುಗಳ ಮರಣದ ಮೇಲೆ ಪ್ಲಾಸ್ಟಿಕ್‌ಗಳ ಪರಿಣಾಮ

ಪ್ರಾಣಿಗಳು ಹಲವು ದಿನಗಳ ಕಾಲ ಪ್ಲಾಸ್ಟಿಕ್ ಸೇವಿಸಿದಾಗ ಅದು ಮೆಲಕು ಚೀಲದಲ್ಲಿ ಶೇಖರಣೆಗೊಂಡು, ಅಲ್ಲೇ ಸುರುಳಿಸುತ್ತಿ ಗಟ್ಟಿ ಮತತು ದೊಡ್ಡದಾದ ಪ್ಲಾಸ್ಟಿಕ್‌ನ ಸಮೂಹವಾಗಿ ರೂಪುಗೊಳ್ಳುತ್ತದೆ. ಇದರಿಂದ ಪ್ರಾಣಿಗಳು ಸೇವಿಸಿದ ಆಹಾರಕ್ಕೆ ಮೆಲುಕು ಚೀಲದಲ್ಲಿ ಕಡಿಮೆ ಜಾಗ ಉಳದುಕೊಳ್ಳುತ್ತದೆ.

ಪ್ಲಾಸ್ಟಿಕ್‌ನ್ನು ಇರಿಯಲಾಗದ ಅಥವಾ ಬೇಧಿಸಿಕೊಂಡು ಹೋಗಲು ಬಾರದ ಅನ್ಯ ವಸ್ತುಗಳ ಲಕ್ಷಣ ಸಮಷ್ಟಿ ಎಂದು ವರ್ಣಿಸಲಾಗಿದೆ (ಬೂದೂರ್ ಮತ್ತಿತರರು, 2010). ನಿಶಕ್ತಿ, ಹಸಿವಾಗದಿರುವುದು, ಸಂಪೂರ್ಣ ಸೇವನೆ ಖಡಿತ, ಕಡಿಮೆ ಹಾಲಿನ ಉತ್ಪಾದನೆಯಿಂದ ಸಂಪೂರ್ಣ ಹಾಲಿನ ಉತ್ಪಾದನೆ ಇಲ್ಲದಿರುವುದು, ಬಲವಂತದ ನಡುಗೆ, ತೀರ ಕಡಿಮೆ ಸಗಣಿ, ನಿರ್ಜಲೀಕರಣ ಮತ್ತು ಕೊನೆಯ ಹಂತದಲ್ಲಿ ಮಲಗಿ ಬಿಡುತ್ತದೆ. (ಕೋಪ್ಲಿ ಮತ್ತಿತರರು, 1998).

ಪ್ಲಾಸ್ಟಿಕ್‌ಗಳು ಅನ್ನನಾಳ, ಮೆಲುಕುಚೀಲ ಮತ್ತು ಕರುಳುಗಳಲ್ಲಿ ಹಾದಿ ಕಟ್ಟುತ್ತವೆ.

ಗಂಟಲು ಹಿಸುಕುವಿಕೆ : ಪ್ಲಾಸ್ಟಿಕ್ ವಸ್ತುಗಳ ಅನ್ನನಾಳದಲ್ಲಿ ಹಾದಿಕಟ್ಟುವಿಕೆಯನ್ನೇ ಗಂಟಲು ಹಿಸುಕುವಿಕೆ ಎನ್ನುತ್ತೇವೆ. ಎಮ್ಮೆಗಳಲ್ಲಿ ಪ್ರಮುಖವಾಗಿ ರೆಕ್ಸಿನ್‌ಯಿಂದಲೆ ಗಂಟಲು ಹಿಸುಕುವಿಕೆಯಾಗುತ್ತದೆ. (ದಿಲೀಪ್‌ಕುಮಾರ ಮತ್ತಿತರರು, 2012 ಮತ್ತು ಯಲ್ಲಪ್ಪಾಅತ್ತನಿ, 2014). ಈ ಗಂಟಲು ಹಿಸುಕುವಿಕೆಯ ಪರಿಣಾಮವಾಗಿ ಪ್ರಾಣಿಗಳು ಕಾರುವಿಕೆ, ಜೊಲ್ಲು ಸೋರುವಿಕೆ ತೀವ್ರವಾಗಿ ಊದಿಸಿಕೊಂಡಿರುವ ಲಕ್ಷಣಗಳನ್ನು ಪ್ರದರ್ಶಿಸುತ್ತವೆ.

ರೋಗ ತಪಾಸಣೆ / ರೋಗ ನಿರ್ಣಯ :

1) ಲಕ್ಷಣಗಳಿಂದ

2) ಕುಚ್ಚು ಕಂಬಿಯ ಮೆಲುಕು ಚೀಲದವರೆಗೆ ಮುಂದೆಸಾಗ ದಿರುವುದು.

3) ಸರಳ ಮತ್ತು ವ್ಯತ್ಯಾಸ ಕ್ಷ–ಕಿರಣ ಚಿತ್ರಾಗ್ರಣ.

ಶಸ್ತ್ರ ಚಿಕಿತ್ಸೆಯ ಉಪಚಾರ : ಅನ್ನನಾಳದ ಶಸ್ತ್ರಚಿಕಿತ್ಸೆ ಮಾಡಿ ಅನ್ನನಾಳದ ದಾರಿ ಕಟ್ಟಡ ಅನ್ಯ ವ್ಯಸ್ತುಗಳನ್ನು ಹೊರ ತೆಗೆಯಲಾಗುತ್ತದೆ.

ಮೆಲುಕು ಚೀಲ ಗಟ್ಟಿಸುವಿಕೆ : ಮೆಲುಕುಚೀಲವು ಹೊಟ್ಟೆಯ ಮೊದಲ ಭಾಗವಾಗಿದೆ. ಮತ್ತು ಇದು ಹೊಟ್ಟೆಯ ಎಡಭಾಗವನ್ನು ದೊಡ್ಡ ಪ್ರಮಾಣದಲ್ಲೇ ಆಕ್ರಮಿಸುತ್ತದೆ. ಮತ್ತಲ್ಲದೆ ಇದರ ಕೆಳ ಭಾಗವು ಹೊಟ್ಟೆಯ ಬಲಭಾಗದವರೆಗೂ ವಿಸ್ತರಿಸಿದೆ. ಆಹಾರವು ಮುಖ್ಯವಾಗಿ ಮೆಲುಕು ಚೀಲದಲ್ಲಿನ ಬ್ಯಾಕ್ಟೀರಿಯಾ ಮತ್ತು ಪೋಟೋಜೋವಾಗಳಂಥಹ ಏಕಾಣು ಜೀವಿಗಳಿಂದ ಜೀರ್ಣಗೊಳ್ಳುತ್ತದೆ.

ಮೆಲುಕು ಚೀಲದಲ್ಲಿ ಪ್ಲಾಸ್ಟಿಕ್ ಶೇಖರಣೆಗೊಳ್ಳುವುದರಿಂದ ಪ್ರೋಟೋಜೋವಾ ಮತ್ತು ಉಪಯುಕ್ತಕರವಾದ ಬ್ಯಾಕ್ಟೀರಿಯಾಗಳ ಸಂಖ್ಯೆ ಕಡಿಮೆಯಾಗುತ್ತದೆ. ಜೊತೆಗೆ ಆವಿಯಾಗುವ ಕೊಬ್ಬಿನ ಆಮ್ಲಗಳು, ಉತ್ಪಾದನೆಯೂ ಕಡಿಮೆಯಾಗುತ್ತದೆ. (ವಿಶ್ವನಾಥ, 2005 ಮತ್ತು ಬೂದೂರ ಇನ್ನಿತರರು, 2010). ಅಲ್ಲದೇ ಪ್ರಾಣಿಯ ಬೆಳವಣಿಗೆಗೆ ಹಾಗೂ ಆರೋಗ್ಯದ ಮೇಲೆ ಗಂಭೀರವಾದ ಪರಿಣಾಮ ಬೀರುತ್ತದೆ.

ರೋಗ ತಪಾಸಣೆ : ಪ್ರಾಣಿಗೆ ಪ್ಲಾಸ್ಟಿಕ್ ತಿನ್ನುವ ಚಟ ಇರುವುದನ್ನು ಮೂಲೀಕರಿಗೆ ಕೇಳಿ ಖಚಿತಪಡಿಸಿಕೊಂಡು ಪ್ಲಾಸ್ಟಿಕ್ ಗಟ್ಟಿಸುವಿಕೆಯ ರೋಗವಿಚಾರವನ್ನು ಮಾಡಬೇಕು.

ಲಕ್ಷಣಗಳು :

* ಪ್ರಾಣಿಯ ಹೊಟ್ಟೆಯು ಊದಿಕೊಂಡಿರುತ್ತದೆ.

* ಮೆಲುಕು ಚೀಲದ ವಿ.ಎಚ್. ಅನ್ನು ಸ್ವಲ್ಪ ಕ್ಷಾರೀಯತೆಯನ್ನು ಸೂಚಿಸುತ್ತದೆ.

* ಎಂ.ಬಿ.ಆರ್.ಟಿ. ಪರೀಕ್ಷೆ ಮಾಡಿದಾಗ ತಡವಾಗಿ ಪರಿಣಾಮ ವನ್ನು ಸೂಚಿಸುತ್ತದೆ.

* ಆವಿಯಾಗುವ ಕೊಬ್ಬಿನ ಆಮ್ಲಗಳ ಅಂಶಗಳನ್ನು ಅಂದಾಜಿ ಸಿದಾಗ, ಅವುಗಳ ಪ್ರಮಾಣವು ತೀರಾ ಕುಸಿತಗೊಂಡಿರುತ್ತದೆ. (ವಿಶ್ವನಾಥ, 2005 ಮತ್ತು ಬೂದೂರ, 2010).

ಶಸ್ತ್ರ ಚಿಕಿತ್ಸೆಯ ಉಪಚಾರ : ಮೆಲುಕು ಚೀಲದ ಶಸ್ತ್ರಚಿಕಿತ್ಸೆಯನ್ನು ಮಾಡಿ ಪ್ಲಾಸ್ಟಿಕ್ ಹೊರತೆಗೆಯಲಾಗುತ್ತದೆ. ನಂತರ ಮೆಲುಕು ಚೀಲದೊಳಗೆ ಇಕೋಟಾಸ್ ಮಾತ್ರಗಳು ಮತ್ತು ಬರ್ಫಜೋನ್ ಪೌಡರ್‌ನ್ನು ಮರುಸ್ಥಾಪಿಸಲಾಗುತ್ತದೆ.

ಕರುಳಲ್ಲಾಗುವ ಅಡಚಣೆಗಳು : ಒಂದು ವೇಳೆ ಪ್ಲಾಸ್ಟಿಕ್ ಜಠರ–ಕರುಳುಗಳ ವೂಹವನ್ನು ತಪ್ಪಿಸಿಕೊಂಡು ಹೋದಲ್ಲಿ ಅವು ಕರುಳಿಗೆ ಹೋಗಿ ಹಾದಿಕಟ್ಟುತ್ತವೆ.

ರೋಗ ತಪಾಸಣೆ :

* ಬಲ ಟೊಂಕದ ತಗ್ಗಿನ ಊತ ಕಂಡು ಬರುತ್ತದೆ ಮತ್ತು ಮಲ ವಿಸರ್ಜನೆ ನಿಲ್ಲುವುದು.

* ನೆಟ್ಟಗರುಳಿನ ಮೂಲಕ ಪರೀಕ್ಷಿಸಿದಾಗ, ಖಾಲಿ ಕರುಳಿನಲ್ಲಿ ಲೋಳೆಯಿರುವುದು ಕಂಡು ಬರುತ್ತದೆ.

* ಅತೀತ ಶಬ್ದ (ಅಲ್ಟಾ ಸೌಂಡ್) ಪರೀಕ್ಷೆ ಮಾಡಿದಾಗ ಎತ್ತಿನ ಕಣ್ಣಿನ ತರಹ ಕಾಣುತ್ತದೆ.

ಶಸ್ತ್ರ ಚಿಕಿತ್ಸೆಯ ಉಪಚಾರ : ಎಂಟರೋಟಮಿ (ಕರಳು ಛೇದನ ಶಸ್ತ್ರ ಚಿಕಿತ್ಸೆ) ಇಂದ ಕರುಳನ್ನು ಬಗೆದು ಅನ್ಯ ವ್ಯಸ್ತುಗಳನ್ನು

ಹೊರತೆಗೆಯಲಾಗುವುದ

ಪ್ಲಾಸ್ಟಿಕ್ ನಿರ್ವಹಣೆಯ ನಿಯಮಗಳು

ಕರ್ನಾಟಕ ಸರ್ಕಾರ ಸಂಖ್ಯೆ: ಅಪಜೀ 17 ಇಪಿಸಿ 2012,

ಯಾವುದೇ ವ್ಯಕ್ತಿ, ಅಂಗಡಿ ಮಾಲೀಕ, ಮಾರಾಟಗಾರ, ಸಗಟು ಮಾರಾಟಗಾರ ಅಥವಾ ಚಿಲ್ಲರೆ ವ್ಯಾಪಾರಿ, ವ್ಯಾಪಾರಿ ಮತ್ತು ಮಾರಾಟಗಾರು, ಯಾವುದೇ ದಪ್ಪದ ಯಾವುದೇ ರೀತಿಯ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳು, ಭಿತ್ತಿಪತ್ರಗಳು, ತೋರಣಗಳು, ಪ್ಲೆಕ್ಸ್‌ಗಳು, ಪ್ಲಾಸ್ಟಿಕ್ ಬಾವುಟಗಳು, ಪ್ಲಾಸ್ಟಿಕ್ ತಟ್ಟೆಗಳು, ಪ್ಲಾಸ್ಟಿಕ್ ಲೋಟಗಳು, ಪ್ಲಾಸ್ಟಿಕ್ ಹಾಳೆಗಳನ್ನು (ಊಟದ ಮೇಜಿನ ಮೇಲೆ ಹರಡುವ) ಸಮಾರಂಭಗಳಲ್ಲಿ ಊಟೋಪಚಾರಕ್ಕೆ ಬಳಕೆ ಮಾಡುವುದನ್ನು ನಿಷೇಧಿಸಲಾಗಿದೆ. ಮುಂದುವರೆದು, ಯಾವುದೇ ಕೈಗಾರಿಕೆ ಅಥವಾ ವ್ಯಕ್ತಿ ಯಾವುದೇ ದಪ್ಪದ ಯಾವುದೇ ರೀತಿಯ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳ, ಭಿತ್ತಿ ಪತ್ರಗಳ, ತೋರಣಗಳ, ಪ್ಲೆಕ್ಸ್‌ಗಳು, ಪ್ಲಾಸ್ಟಿಕ್ ಬಾವುಟಗಳ, ಪ್ಲಾಸ್ಟಿಕ್ ತಟ್ಟೆಗಳ, ಪ್ಲಾಸ್ಟಿಕ್ ಲೋಟಗಳ, ಪ್ಲಾಸ್ಟಿಕ್ ಹಾಳೆಗಳ (ಊಟದ ಮೇಜಿನ ಮೇಲೆ ಹರಡುವ) ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ, ಮಾರಾಟ ಮತ್ತು ವಿತರಣೆ ಮಾಡುವುದನ್ನು ನಿಷೇಧಿಸಿದೆ. ಈ ನಿರ್ದೇಶನವು ಅಧಿಸೂಚನೆಯಾಗಿ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನದಿಂದ ಜಾರಿಗೆ ಬರುತ್ತದೆ.

ಉಪಸಂಹಾರ : ಪ್ಲಾಸ್ಟಿಕ್ ಸೇವನೆಯಿಂದ ಹಲವಾರು ಅಪಾಯ ಗಳಿವೆ. ಅವುಗಳೆಂದರೆ ಹಾಲು, ಮಾಂಸ, ಉಣ್ಣೆ ಉತ್ಪಾದನೆ ಕುಸಿಯುವುದು. ಪ್ಲಾಸ್ಟಿಕ್ ಅನ್ನನಾಳ, ಮೆಲುಕು ಚೀಲ ಮತ್ತು ಕರುಳಿನಲ್ಲಿ ಸಿಲುಕಿ ಜಾನುವಾರುಗಳ ಸಾಗಿವೆ ಕಾರಣವಾಗುತ್ತದೆ. ಸೇವಿಸಿದ ಪ್ಲಾಸ್ಟಿಕ್‌ಗಳನ್ನು ಹೊರತೆಗೆಯಲು ಶಸ್ತ್ರ ಚಿಕಿತ್ಸೆ ನಂತರ ಜಾನುವಾರುಗಳ ಮಾಲೀಕರು ಸರಿಯಾದ ರೀತಿಯಲ್ಲಿ ಅವುಗಳ ಕಾಳಜಿ ವಹಿಸಬೇಕಾಗುತ್ತದೆ. ಚಿಕಿತ್ಸೆಗೆ ಸ್ವಲ್ಪ ಪ್ರಮಾಣದ ವೆಚ್ಚ ಉಂಟಾಗುತ್ತದೆ. ಈ ಶಸ್ತ್ರಚಿಕಿತ್ಸೆಯಿಂದ ಜಾನುವಾರಿನ ದೇಹದಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತೆಗೆಯಲಾಗುವುದು. ಚಿಕಿತ್ಸೆಯ ನಂತರವೂ, ಜಾನುವಾರುಗಳು ಪ್ಲಾಸ್ಟಿಕ್ ಸೇವನೆಯನ್ನು ಮುಂದುವರಿಸಿ ಮತ್ತು ತೊಂದರೆಗೀಡಾಗುತ್ತವೆ. ಅದಕ್ಕೆ ಪ್ಲಾಸ್ಟಿಕ್ ನಿಶೇದಿಸುವುದು ಅತ್ಯಗತ್ಯ ಅಥವಾ ಸರಿಯಾದ ರೀತಿಯಲ್ಲಿ ಬಳಕೆಗೊಂಡ ಪ್ಲಾಸ್ಟಿಕ್‌ಗಳ ವಿಲೇವಾರಿ ಮಾಡುವ ವಿಧಾನವನ್ನು ಪಾಶ್ಚಾತ್ಯ ದೇಶಗಳಂತೆ ಅಳವಡಿಸಿಕೊಳ್ಳಬೇಕು.

ಉಲ್ಲೇಖ:

1. ಬೂದುರು ಪ್ರಲ್ಹಾದ., ಶಿವಪ್ರಕಾಶ, ಬಿ.ವ್ಹಿ., ಉಸ್ತುರ್ಗೆ, ಎಸ್. ಎಮ್., ದಿಲೀಪಕುಮಾರ. ಡಿ., ಕಸರಾಳ್ಳಿಕಾರ್. ವಿ. ಆರ್. ಮತ್ತು ರವಿರಾಯದುರ್ಗ (2008). ಪ್ಲಾಸ್ಟಿಕನಿಂದ ಆಗುವ ದೀರ್ಘಕಾಲದ ಮೆಲುಕುಚೀಲದ ಗಟ್ಟಿಸುವಿಕೆ ಹಸು ಮತ್ತು ಎಮ್ಮೆಗಳ ಮೇಲಿನ ಅಧ್ಯಯನ. ಎಮ್.ವಿ.ಎಸ್.ಸಿ. ಪ್ರಭಂಧ ಸಲ್ಲಿಕೆ, ಕ.ಪ.ಪ.ಮೀ.ವಿ.ವಿ.ಬೀದರ.

2. ದಿಲೀಪಕುಮಾರ. ಡಿ., ಕಸರಾಳ್ಳಿಕಾರ್. ವಿ. ಮತ್ತು ಮುರಳಿಕೃಷ್ಣ, ಬಿ.ವ್ಹಿ (1995). ಎತ್ತಿನಲ್ಲಿ ಕಲ್ಲಿನಿಂದಾದ ಅನ್ನನಾಳದ ಅಡಚಣೆ. ಇಂಡಿಯನ್ ವೆಟ್ ಜೆ. 72:385-86

3. ದಿಲೀಪಕುಮಾರ. ಡಿ., ಶಿವಪ್ರಕಾಶ, ಬಿ.ವ್ಹಿ., ಮಂಜುನಾಥ. ಎಸ್. ಪಿ. ಕಿರಣಕುಮಾರ. ಎಮ್. ಎನ್. ಮತ್ತು ನವೀನ. ಎಮ್. (2012). ಎತ್ತುಗಳಲ್ಲಿ ಅನ್ನನಾಳದ ಅಡಚಣೆ, ಅನ್ನನಾಳದ ಲೋಳ ಪೊರೆಯ ಹೊಲಿಗೆ ಹಾಕುವುದರಲ್ಲಿ ಪ್ರೋಲೀನ್ ಮತ್ತು ಸಿಲ್ಕಗಳ ವೈದ್ಯಕೀಯ ಮೌಲ್ಯಮಾಪನ.

4. ಕೊಪ್ಲಿ, ಆರ್. ಎನ್., ನಡಾಫ್, ಎಫ್. ಮತ್ತು ಫದ್ರನ್, ಎ. (1998). ಪ್ಲಾಸ್ಟಿಕ್ ಸೇವನೇಯ ಸಂಬಂಧಿಸಿದ ದೀರ್ಘಕಾಲದ ಮೇಲುಕು ಚೀಲದ ಉಬ್ಬುವಿಕೆಯೇ ದನಗಳ ಅಜೀರ್ಣಕ್ಕೆ ಕಾರಣ 54 ಸಂದರ್ಭಗಳ ಒಂದು ಅಧ್ಯಯನ. ಇಂಡಿಯನ್. ಜೆ.ಆಫ್. ವೆಟರಿನರಿ ಸರ್ಜರಿ 19(2):105-106.

5. ಎಲ್. ಮಗಬಿ, ಎಚ್. ಎಮ್. ಮತ್ತು ಹೈಲಾಟ್, ಎನ್. (2001). ಜಾನುವಾರುಗಳಲ್ಲಿ ಸ್ಥಳಾಂತರಿತ ನಿಜಒಡಲಿಗೆ ಸಂಬಂಧಿಸಿದ ಮೇಲುಕು ಚೀಲದ ಮತ್ತು ಜಾಲ ಜಠರದ ಅನ್ಯ ವಸ್ತುಗಳ ಶಸ್ತ್ರಚಿಕಿತ್ಸಾ ತಿದ್ದುಪಡಿ. ಪ್ರಾಕಟೀಸ್‌ಚೆ ಟೀರಾರ್ಜೆಟ್. 82(2): 201-05.

6. ಮಹಂಡೇಲ್, ಎಸ್.ಎಸ್., ಪುಂಟಾಂಬೆಕರ್, ಪಿ.ಎಮ್., ಡಿಯೋಪುಕರ್, ವ್ಹಿ.ಎಲ್., ಪಾಟೀಲ್, ಎಮ್.ಬಿ., ಹಾಲ್, ಬಿ.ಜಿ., ನೆಹೆತ್, ಎಸ್.ಬಿ. ಮತ್ತು ದೇಶಪಾಂಡೆ, ಎ.ಕೆ. (1998). ಹೈನು ದನಗಳ ಮೇಲೆ ಪರಿಸರದ ಪ್ಲಾಸ್ಟಿಕ ಮಾಲಿನ್ಯದಿಂದಾಗುವ ಕುರಿತಂತಿನ ಅಧ್ಯಯನ (ಹೊಸ ಉದಯೋನ್ಮುಖ ತೊಂದರೆಗಳು) ಜರ್ನಲ್ ಆಫ್ ಬಾಂಬೆ ವೆಟೆರಿನರಿ ಕಾಲೇಜು. 6(1):21-23.

7. ರೋಡೋಸ್ಟಟ್ಸ, ಒ.ಎಮ್., ಬ್ಲಡ್, ಡಿ.ಸಿ.ಮತ್ತು ಗೆ, ಸಿ.ಸಿ (1994) ವೆಟರಿನರಿ ಮೆಡಿಸಿನ್. ಎ. ಟೆಕ್ಸ್ಟ್‌ಬುಕ್ ಆಫ್ ಡಿಸೀಜೆಸ್ ಇನ್ ಕ್ಯಾಟಲ್, ಶೀಪ, ಪಿಗ್, ಗೋಟ್ ಅಂಡ ಹಾರ್ಸಸ್, ಎಂಟನೇ ಅವೃತ್ತಿ. ಇ.ಎಲ್.ಬಿ.ಎಸ್. ಬೈಲಿಯುರೇ ಟಿಂಡಾಲ್, ಲಂಡನ್, ಯು.ಕೆ.

8. ಸಾಲುಂಕೆ, ವ್ಹಿ. ಎಮ್., ಅಲಿ, ಎಮ್. ಎಸ್., ಬೋಕ್ರೆ, ಎ.ಪಿ. ಮತ್ತು ಪಂಚಬಾಯಿ, ವ್ಹಿ.ಎಸ್. (2003). ಅನ್ನನಾಳದ ಶಸ್ತ್ರಚಿಕಿತ್ಸೆ ನಂತರ-ಎಮ್ಮೆಗಳಲ್ಲಿ ಅನ್ನನಾಳದ ಅಡಚಳಿಣೆಗೆ ಒಂದು ಸುಲಭ ವಿಧಾನ-18 ಸಂದರ್ಭಗಳ ವರದಿ. ಇಂಟಾಸ್ ಪಾಲಿವೆಟ್ 4:366-67.

9. ಸಿಂಗ್ ಜೀತ್., ಸಿಂಗ್, ಎ.ಪಿ ಮತ್ತು ಪಾಟೀಲ್, ಡಿ.ಬಿ. (1993). ರುಮಿನೆಂಟ್ ಸರ್ಜರಿ. ಸಿ.ಬಿ.ಎಸ್. ಪುಟ ಸಂಖ್ಯೆ 192.

10. ವಿಶ್ವನಾಥ ಆರ್. ಹೆಗ್ಗಾ. (2005) ಸಣ್ಣ ಮೇಲುಕು ಹಾಕುವ ಪ್ರಾಣಿಗಳಲ್ಲಿ ಇರಿಯದಂತಹ ಅನ್ಯ ವಸ್ತುಗಳ ಘಟನೆ ಮತ್ತು ಪರಿಣಾಮಗಳ ಜೊತೆಗೆ ಪ್ಲಾಸ್ಟಿಕ ಸೇವನೇಯ ವಿಶೇಷ ಉಲ್ಲೇಖನ. ಎಮ್.ವಿ.ಎಸ್.ಸಿ. ಪ್ರಭಂಧ ಸಲ್ಲಿಕೆ, ಕ.ಪ.ಪ.ಮೀ.ವಿ.ವಿ.ಬೀದರ.

11. ಯಲ್ಲಪ್ಪ ಅತನಿ (2014) ಜಾನುವಾರುಗಳಲ್ಲಿ ಕುತ್ತಿಗೆಯ ಮತ್ತು ಎದೆಗೂಡಿನ ಅನ್ನನಾಳದ ಅಡಚಣೆ ಮೇಲಿನ ಅಧ್ಯಯನ. ಎಮ್.ವಿ.ಎಸ್.ಸಿ. ಪ್ರಭಂಧ ಸಲ್ಲಿಕೆ, ಶಸ್ತ್ರಚಿಕಿತ್ಸೆ ಹಾಗೂ ಕ್ಷಾ-ಕಿರಣ ವಿಭಾಗ' ಕ.ಪ.ಪ.ಮೀ.ವಿ.ವಿ.ಬೀದರ.

ಎಮ್ಮೆಗಳಲ್ಲಿ ರಕ್ತವರ್ಣಜನಕ ಮೂತ್ರದ ಪ್ರಯೋಗಾಲಯ ಪರೀಕ್ಷೆ ಮತ್ತು ಚಿಕಿತ್ಸೆ

ಎನ್.ಎ.ಪಾಟೀಲ,[1] ಸಂದೀಪ. ಹಲಮಂಡಗೆ,[2] ಅಜಯ. ಎಸ್. ಸತಬಗೆ[3] ಮತ್ತು ವಿವೇಕ. ಆರ್. ಕಸರಾಳೀಕರ್[4]
[1], ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪಶುವೈದ್ಯಕೀಯ ಚಿಕಿತ್ಸಾಶಾಸ್ತ್ರ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ,
ಮಿಂಚ ಅಂಚೆ: napvety@gmail.com

5 ರಿಂದ 11 ವರ್ಷ ವಯಸ್ಸಿನ ವರ್ಗೀಕರಿಸಲಾಗದ 10 ಎಮ್ಮೆಗಳು ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಗೆ ಕಪ್ಪು ಕಲಸು ಬಣ್ಣದ ಮೂತ್ರವಿಸರ್ಜನೆ, ಸರಿಯಾಗಿ ಮೇವು ತಿನ್ನದಿರುವುದು, ಹಾಲಿನ ಇಳುವರಿ ಕಡಿಮೆಯಾಗಿರುವುದು ಮತ್ತು ಸಗಣಿ ಹಾಕುವಾಗ ತಿಣುಕುವುದು ಲಕ್ಷಣಗಳ ದೂರಿನೊಂದಿಗೆ ದಾಖಲಾಗಿವೆ. ಚಿಕಿತ್ಸಾಲಯಿಯ ಪರೀಕ್ಷೆಗಳಿಂದ ಸಾಮಾನ್ಯ ಮಟ್ಟದ ಶರೀರದ ಉಷ್ಣತೆ (100.44± 0.200 ಎಫ್), ಹೆಚ್ಚಿದ ನಾಡಿಬಡಿತ (71.40± 1.89 ನಿಮಿಷಕ್ಕೆ), ಹೆಚ್ಚಿದ ಶ್ವಾಸೋಚ್ಛ್ವಾಸ (29.70± 0.67 ನಿಮಿಷಕ್ಕೆ), ಕುಗ್ಗಿದ ಮೆಲುಕು ಉದರ, ಬಳಚಿಕೊಂಡ ಕಣ್ಣು ಮತ್ತು ಯೋನಿಯ ರೋಳ್ವರೆ, ಮತ್ತು ಕಾಮಾಲೆ ಲಕ್ಷಣಗಳು ಕಂಡುಬಂದವು. ರಕ್ತ ವಿಜ್ಞಾನ ಪರೀಕ್ಷೆಯಲ್ಲಿ ಕಡಿಮೆ ಪ್ರಮಾಣದ ರಕ್ತವರ್ಣಜನಕ (5.43±0.25 ಗ್ರಾಂ/ಡೆಲೀ), ಕಡಿಮೆಯಾದ ಒಟ್ಟು ಕೆಂಪು ರಕ್ತಕಣಗಳ ಸಂಖ್ಯೆ (2.73±0.12 x106 /ಮೈಲೀ), ಕಡಿಮೆ ಪ್ರಮಾಣದ ಕಟ್ಟಿದ ಜೀವ ದ್ರವ್ಯಕೋಶ (19.10±0.97 %) ಮತ್ತು ಹೆಚ್ಚಿದ ಬಳಿ ರಕ್ತ ಕಣಗಳ ಸಂಖ್ಯೆ (10.05±0.33 x103/ಮೈಲೀ) ಕಂಡುಬಂದವು. ಕೆಂಪು ರಕ್ತಕಣಗಳ ಸೂಚ್ಯಾಂಕಗಳ ಲೆಕ್ಕ ಮಾಡಲಾಗಿ ಹೆಚ್ಚಿನ ಮಟ್ಟದ ಎಮ್.ಪಿ.ವಿ. (69.82±0.89 ಫೈಲೀ), ಕಡಿಮೆ ಪ್ರಮಾಣದ ಎಮ್.ಪಿ.ಎಚ್ (19.97±0.59 ಪೈಗ್ರಾಲಿ) ಮತ್ತು ಕಡಿಮೆ ಪ್ರಮಾಣದ ಎಮ್.ಪಿ.ಎಚ್.ಪಿ (28.62±0.85 ಗ್ರಾಂ/ಡೆಲೀ) ಕಂಡುಬಂದವು, ಮೇಕ್ರೋಸೈಟಿಕ್ ಹೈಪೋಕ್ರೋಮಿಕ್ ತರಹದ ರಕ್ತಹೀನತೆ ಸೂಚಿಸಿತು. ರಕ್ತಸಾರದ ಪರೀಕ್ಷೆಯಲ್ಲಿ ಕಡಿಮೆಯಾದ ರಂಜಕದ ಪ್ರಮಾಣ (2.65± 0.10 ಮಿಗ್ರಾಂ/ಡೆಲೀ), ಹೆಚ್ಚಾದ ಬಿಲಿರುಬಿನ್ ಪ್ರಮಾಣ (2.39±0.15 ಮಿಗ್ರಾಂ/ಡೆಲೀ),ಹೆಚ್ಚಾದ ಯೂರಿಯಾ ನೈಟ್ರೋಜನ್ ಪ್ರಮಾಣ (28.71±0.78 ಮಿಗ್ರಾಂ/ಡೆಲೀ) ಮತ್ತು ಹೆಚ್ಚಾದ ಕ್ರಿಯಾಟಿನಿನ್ ಪ್ರಮಾಣ (2.21±0.09 ಮಿಗ್ರಾಂ/ಡೆಲೀ) ಕಂಡುಬಂದವು.

ರೋಗ ಪೀಡಿತ ಎಮ್ಮೆಗಳಿಗೆ ಶಿರಾನಾಳದಲ್ಲಿ ರಂಜಕ ಅಂಶ ಹೊಂದಿರುವ ಇಂಜೆಕ್ಷನ್ (ನೋವಿಜಾಕ್, ಇಂಟಾಸ್) ಜೊತೆಗೆ ಇ–ಜೀವಸತ್ವ, ಸೆಲೆನಿಯಂ, ಕಬ್ಬಿಣ, ಕೆಕ್ಟೋಸ್, ಬಿ–ಜೀವಸತ್ವದ ಜೊತೆಗೆ ಯಕೃತ್ ರಸ ಹೊಂದಿರುವ ಇಂಜೆಕ್ಷನ್‌ಗಳಿಂದ ಉಪಚರಿಸಲಾಯಿತು. ಎಲ್ಲ 10 ಎಮ್ಮೆಗಳು ಉಪಚರಿಸಿದ ನಂತರ 5 ದಿನಗಳಲ್ಲಿ ಚೇತರಿಸಿಕೊಂಡವು. ರಕ್ತ ಮತ್ತು ರಕ್ತಸಾರದ ನಿಯತಾಂಕಗಳು 10 ದಿನಗಳಲ್ಲಿ ಸುಧಾರಣೆಗೊಂಡವು.

ಪರಿಚಯ:– ರಂಜಕದ ಕೊರತೆಯಿಂದ ಎಮ್ಮೆಗಳಲ್ಲಿ ಕಂಡು ಬರುವ ರಕ್ತವರ್ಣ ಜನಕ ಮೂತ್ರದ ಪ್ರಸಂಗಗಳು ಭಾರತದ ವಿವಿಧ ಭಾಗಗಳಿಂದ ವರದಿಯಾಗಿವೆ (ನಾಗಪಾಲ ಮತ್ತು ಇತರರು, 1968, ಸಮದ್ ಮತ್ತು ಇತರರು 1979, ಗಹಲಾವತ್ ಮತ್ತು ಇತರರು 2001, ಬಿಕಾನೆ ಮತ್ತು ಇತರರು 2004, ದೋಂಡೆ ಮತ್ತು ಇತರರು 2007). ಕರುಹಾಕಿದ ನಂತರ ಮತ್ತು ಗಬ್ಬದ ಎಮ್ಮೆಗಳಲ್ಲಿ ವಿಶೇಷವಾಗಿ ಬೇಸಿಗೆ ಮತ್ತು ಬರಗಾಲದ ಸಂದರ್ಭಗಳಲ್ಲಿ ಈ ರೋಗ ಹೆಚ್ಚಾಗಿ ಕಂಡುಬರುತ್ತದೆ (ರೇಡೋಸ್ಟೈಟ್ ಮತ್ತು ಇತರರು, 2007).

ವಸ್ತುಗಳು ಹಾಗೂ ವಿಧಾನಗಳು : – 5 ರಿಂದ 11 ವರ್ಷ ವಯಸ್ಸಿನ ವರ್ಗೀಕರಿಸಲಾದ 10 ಎಮ್ಮೆಗಳು ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಗೆ ಕಪ್ಪುಕೆಂಪು ಬಣ್ಣದ ಮೂತ್ರ ವಿಸರ್ಜನೆ, ಸರಿಯಾಗಿ ಮೇವು ತಿನ್ನದಿರುವದು, ಹಾಲಿನ ಇಳುವರಿ ಕಡಿಮೆಯಾಗಿರುವದು ಮತ್ತು ಸಗಣಿ ಹಾಕುವಾಗ ತಿಣುಕುವುದು ಲಕ್ಷಣಗಳ ದೂರಿನೊಂದಿಗೆ ದಾಖಲಾಗಿವೆ. ಎಮ್ಮೆಗಳ ವೈದ್ಯಕೀಯ ಪರೀಕ್ಷೆ, ರಕ್ತ ವಿಜ್ಞಾನ ಪರೀಕ್ಷೆ ಮತ್ತು ರಸಸಾರ ಪರೀಕ್ಷೆಗಳನ್ನು ಸೂಕ್ತವಾದ ವಿಧಾನಗಳಿಂದ ಕೈಗೊಳ್ಳಲಾಯಿತು.

ಫಲಿತಾಂಶ ಮತ್ತು ಚರ್ಚೆ:– ಚಿಕಿತ್ಸಾಲಯದ ಪರೀಕ್ಷೆಗಳಿಂದ ಸಾಮಾನ್ಯ ಮಟ್ಟದ ಶರೀರದ ಉಷ್ಣತೆ (100.44 ± 0.20° ಎಫ್), ಹೆಚ್ಚಿದ ನಾಡಿ ಬಡಿತ (71.40 ± 1.89 /ನಿಮಿಷಕ್ಕೆ), ಹೆಚ್ಚಿದ ಶ್ವಾಸೋಚ್ಛಾಸ (29.70 ± 0.67 /ನಿಮಿಷಕ್ಕೆ), ಕುಗ್ಗಿದ ಮೇಲಕುಉದರ, ಬಿಳಚಿಕೊಂಡ ಕಣ್ಣು ಮತ್ತು ಯೋನಿಯ ಲೋಳ್ವರೆ ಮತ್ತು ಕಾಮಾಲೆ ಕಂಡುಬಂದವು, ಇದೆ ತರಹದ ಲಕ್ಷಣಗಳು ರಕ್ತವರ್ಣಜನಕ ಮೂತ್ರ ಹಾಕುವ ಎಮ್ಮೆಗಳಲ್ಲಿ ವರದಿಯಾಗಿವೆ (ಬಿಕಾನೆ ಮತ್ತು ಇತರರು, 2004 ಮತ್ತು ದೋಂಡೆ ಮತ್ತು ಇತರರು 2007).

ರಕ್ತ ವಿಜ್ಞಾನ ಪರೀಕ್ಷೆಯಲ್ಲಿ ಕಡಿಮೆ ಪ್ರಮಾಣದ ರಕ್ತ ವರ್ಣಜನಕ (5.34 ± 0.25 ಗ್ರಾಂ/ಡೆಲೀ), ಕಡಿಮೆಯಾಧ ಒಟ್ಟು ಕೆಂಪು ರಕ್ತಕಣಗಳ ಸಂಖ್ಯೆ (2.73 ± 0.12 x 106 / ಮೈಲೀ), ಕಡಿಮೆ ಪ್ರಮಾಣದ ಕಟ್ಟಿದ ಜೀವದ್ರವ್ಯಕೋಶ (19.10 ± 0.97 %) ಮತ್ತು ಹೆಚ್ಚಿನ ಮಟ್ಟದ ಎಮ್.ಸಿ.ವಿ. (69.82 ± 0.89 ಪೈಲಿ) ಕಡಿಮೆ ಪ್ರಮಾಣದ ಎಮ್.ಸಿ.ಎಚ್. (19.97 ± 0.59 ಪೈಗ್ರಾಂ) ಮತ್ತು ಕಡಿಮೆ ಪ್ರಮಾಣದ ಎಮ್.ಸಿ.ಎಚ್.ಸಿ. (28.62 ± 0.85 ಗ್ರಾ/ಡೆಲೀ) ಕಂಡುಬಂದವು. ಇದು ಮೇಕ್ರೋಸೈಟಿಕ್ ಹೈಪೋಕ್ರೋಮಿಕ್ ತರಹದ ರಕ್ತಹೀನತೆಯನ್ನು ಸೂಚಿಸುತ್ತದೆ. ಇದೇ ತರಹದ ರಕ್ತಹೀನತೆ, ಈ ರೋಗದಿಂದ ಬಳಲುವ ಎಮ್ಮೆಗಳ್ಲಲಿ ವರದಿಯಾಗಿದೆ (ಬಿಕಾನೆ ಮತ್ತು ಇತರರು, 2004 ಮತ್ತು ದೋಂಡೆ ಮತ್ತು ಇತರರು 2007).

ರಕ್ತಸಾರದ ಪರೀಕ್ಷೆಯಲ್ಲಿ ಕಡಿಮೆಯಾದ ರಂಜಕದ ಪ್ರಮಾಣ (2.65 ± 0.10 ಮಿಗ್ರಾಂ/ಡೆಲೀ), ಸಾಮಾನ್ಯ ಮಟ್ಟದ ಸುಣ್ಣದ ಪ್ರಮಾಣ (8.22 ± 0.11 ಮಿಗ್ರಾಂ/ಡೆಲೀ), ಕಡಿಮೆ ಮಟ್ಟದ ಗ್ಲುಕೋಸ್ ಪ್ರಮಾಣ (47.65 ± 0.77 ಮಿಗ್ರಾಂ/ಡೆಲೀ), ಹೆಚ್ಚಿನ ಮಟ್ಟದ ಬಿಲಿರುಬಿನ್ ಪ್ರಮಾಣ (2.39 ± 0.15 ಮಿಗ್ರಾಂ/ಡೆಲೀ), ಹೆಚ್ಚಿನ ಮಟ್ಟದ ಯುರಿಯಾ ನೈಟ್ರೋಜನ್ ಪ್ರಮಾಣ (28.71 0.78 ಮಿಗ್ರಾಂ/ಡೆಲೀ) ಮತ್ತು ಹೆಚ್ಚಾದ ಕ್ರಿಯಾಟಿನಿನ್

ಪ್ರಮಾಣ (2.21 ± 0.09 ಮಿಗ್ರಾಂ/ಡೆಲೀ) ಕಂಡುಬಂದವು.

ಸದ್ಯದ ಸಂಶೋಧನಾ ಫಲತಾಂಶದ ಪ್ರಕಾರ ರಕ್ತದಲ್ಲಿ ಕಡಿ ಮೆಯಾದ ರಂಜಕದ ಅಂಶವು ಎಮ್ಮೆಗಳ ಮೂತ್ರದಲ್ಲಿ ರಕ್ತವರ್ಣಜನಕ ಬರುವದಕ್ಕೆ ಪ್ರಮುಖ ಕಾರಣವಾಗಿದೆ ಎಂದು ಹೇಳಬಹುದು ಇದು ಹಿಂದಿನ ಸಂಶೋಧನಾ ವರದಿಗಳ (ನಾಗಪಾಲ ಮತ್ತು ಇತರರು 1968, ಮಲ್ಲಿಕ್ ಮತ್ತು ಗೌತಮ್, 1971, ಚುಗ್ ಮತ್ತು ಇತರರು 1986, ಶ್ರೀಧರ್ 1995, ಸಿಂಗ್ 1999, ಸಿಂಗ್ 2000, ಗಹಲಾವತ್ ಮತ್ತು ಇತರರು 2001, ಬಿಕಾನೆ ಮತ್ತು ಇತರರು, 2004, ದೋಂಡೆ ಮತ್ತು ಇತರರು 2007) ಅನುಗುಣವಾಗಿದೆ.

ಕೆಂಪುರಕ್ತಕಣಗಳ ಸ್ಥಿರವಾದ ರಚನಾ ವಿನ್ಯಾಸಕ್ಕೆ ರಂಜಕವು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ರಕ್ತದಲ್ಲಿನ ರಂಜಕದ ಕೊರತೆಯುಂಟದಾಗ ಕೆಂಪುರಕ್ತಕಣದ ಪೂರೆ ಕರಗಿ, ರಕ್ತ–ವರ್ಣಜನಕ ಬಿಡುಗಡೆಯಾಗಿ, ರಕ್ತದಲ್ಲಿ ಸೇರಿ ನಂತರ ಮೂತ್ರಪಿಂಡಗಳ ಮೂಲಕ ಸೋಸಿ ಮೂತ್ರದ ಮುಖಾಂತರ ವಿಸರ್ಜಿಸಲ್ಪಡುತ್ತದೆ. ಇದಲ್ಲದೆ ರಕ್ತವರ್ಣಜನಕ ಕರಗಿ ಬಿಲುರುಬಿನ್ ಬಿಡುಗಡೆಯಾಗಿ ಕಾಮಾಲೆ ಉಂಟಾಗಿ, ರಕ್ತಹೀನತೆಗೆ ಕಾರಣವಾಗುತ್ತದೆ. (ರೇಡೋಸ್ಟೈಟ್ಸ್, 2007).

ರೋಗಪೀಡಿತ ಎಮ್ಮೆಗಳಿಗೆ ರಂಜಕ, ಇನೋಸಿನ್ ಮತ್ತು ಸೋಡಿಯಂ ಪೈರುವೇಟ್ ಅಂಶಗಳನ್ನು ಹೊಂದಿರುವ ನೋವಿಝಾಕ್ (ಇಂಟಾಸ್) ಔಷಧಿಯನ್ನು ಶಿರನಾಳದಲ್ಲಿ 25 ಮಿಲಿ ಲೀಟರ್ ಪ್ರಮಾಣದಲ್ಲಿ ಎರಡು ದಿನಗಳವರೆಗೆ ಕೊಡಲಾಯಿತು. ಜೊತೆಗೆ ಇ–ಜೀವಸತ್ವ ಮತ್ತು ಸೆಲೆನಿಯಂ ಮಿಶ್ರಣಹೊಂದಿರುವ ರೆಫ್ರೆನಾಲ್ (ಕ್ಯಾಡಿಲಾ) ಔಷಧಿಯನ್ನು ಪ್ರತಿ 25 ಕಿ.ಗ್ರಾಂ. ದೇಹತೂಕಕ್ಕೆ ಒಂದು ಮಿಲಿಲೀಟರ್‌ನಂತೆ ಮಾಂಸಖಂಡದೊಳಗೆ ಮೊದಲನೆಯ ದಿನ ಕೊಡಲಾಯಿತು. ಡೆಕ್ಟ್ರೋಸ್ 5% ಒಂದು ಲೀಟರ್ ಶಿರನಾಳದಲ್ಲಿ ಮತ್ತು ಬಿ–ಜೀವಸತ್ವದ ಜೊತೆಗೆ ಯಕೃತ್ತ್ ರಸಹೊಂದಿರುವ ಬೆಲಾಮಿಲ್ (ಜೈಡಸ್) 5 ಮಿಲಿಲೀಟರ್ ಪ್ರಮಾಣದಲ್ಲಿ ಮಾಂಸಖಂಡದೊಳಗೆ 5 ದಿನಗಳವರೆಗೆ ಕೊಡಲಾಯಿತು. ಎಲ್ಲ 10 ಎಮ್ಮೆಗಳು ಉಪಚಾರದಿಂದ 5 ದಿನಗಳಲ್ಲಿ ಚೇತರಿಸಿಕೊಂಡವು, 10 ದಿನಗಳ ನಂತರ ವೈದ್ಯಕೀಯ ಪರೀಕ್ಷೆ ರಕ್ತ ಮತ್ತು ರಕ್ತಸಾರದ ಪರೀಕ್ಷೆಗಳನ್ನು ಮಾಡಲಾಯಿತು. ನಾಡಿಬಡಿತ (52.90 ಶ0.72 /ನಿಮಿಷಕ್ಕೆ), ಶ್ವಾಸೋಚ್ಛಾಸ (20.80 ± 0.63 /ನಿಮಿಷಕ್ಕೆ) ಸಾಮಾನ್ಯ ಮಟ್ಟಕ್ಕೆ ತಲುಪಿದವು. ರಕ್ತವರ್ಣಜನಕದ ಪ್ರಮಾಣ (6.36 ±0.24 ಗ್ರಾಂ/ಡೆಲೀ), ಒಟ್ಟು ಕೆಂಪು ರಕ್ತಕಣಗಳ ಸಂಖ್ಯೆ: (3.59 ± 0.09x106 /ಮೈಲೀ) ಕಟ್ಟಿದ ಜೀವದ್ರವ್ಯಕೋಶ (22.20 ± 0.36 %) ಸುಧಾರಣೆಗೊಂಡವು ಬಿಳರಕ್ತಕಣಗಳ ಸಂಖ್ಯೆ ಸಾಮಾನ್ಯ ಮಟ್ಟಕ್ಕೆ (8.83 ± 0.24x103/ಮೈಲೀ) ತಲುಪಿತು. ರಕ್ತಸಾರದ ರಂಜಕದ ಪ್ರಮಾಣ ಗಣನೀಯವಾಗಿ ಸುಧಾರಣೆಗೊಂಡು (4.33 ± 0.11 ಮಿಗ್ರಾಂ/ಡೆಲೀ) ಸಾಮಾನ್ಯ ಮಟ್ಟದತ್ತ ಬದಲಾವಣೆಗೊಂಡಿತ್ತು ಹೆಚ್ಚಿದ ಬಿಲರುಬಿನ್ ಪ್ರಮಾಣ ಕಡಿಮೆಯಾಗಿ (0.60 ± 0.04 ಮಿಗ್ರಾಂ/ಡೆಲೀ) ಸಾಮಾನ್ಯ ಮಟ್ಟ ತಲುಪಿತು ಅದರಂತೆ ಯುರಿಯಾ ನೈಟ್ರೋಜನ್ ಪ್ರಮಾಣ (19.45 ± 0.71 ಮಿಗ್ರಾಂ/ಡೆಲೀ) ಮತ್ತು ಕ್ರಿಯಾಟಿನಿನ್ ಪ್ರಮಾಣ (1.48 ± 0.06 ಮಿಗ್ರಾಂ/ಡೆಲೀ) ಇಳಕೆಯಾದವು ಗ್ಲೂಕೋಸ್ ಪ್ರಮಾಣದಲ್ಲಿ ಸುಧಾರಣೆ (52.80 ± 0.76 ಮಿಗ್ರಾಂ/ಡೆಲೀ) ಕಂಡುಬಂದಿತು.

ಗಹಲಾವತ್ ಮತ್ತು ಇತರರು (2001), ಬಿಕಾನೆ ಮತ್ತು ಇತರರು (2004), ದೋಂಡೆ ಮತ್ತು ಇತರರು (2007), ರಂಜಕದ ಅಂಶವುಳ್ಳ ಮೂತ್ರದ ಚಿಕಿತ್ಸೆಯನ್ನು ಯಶಸ್ವಿಯಾಗಿ ದಾಖಲಿಸಿದ್ದಾರೆ. ಅದೇ ರೀತಿ ಸದ್ಯದ ವರದಿಯು ರಂಜಕದ ಅಂಶ, ಇನೋಸಿನ್ ಮತ್ತು ಸೋಡಿಯಂ ಪೈರುವೇಟ್ ಅಂಶಗಳನ್ನು ಹೊಂದಿರುವ ನೋವಿಝಾಕ್ (ಇಂಟಾಸ್) ಔಷಧಿಯ ಯಶಸ್ವಿ ಫಲತಾಂಶವನ್ನು ದಾಖಲಿಸಿದೆ.

ಸಾಮಾನ್ಯವಾಗಿ ಎಮ್ಮೆಗಳಿಗೆ ಬೇಸಿಗೆಯಲ್ಲಿ, ಬರಗಾಲದಲ್ಲಿ ಮೇವಿನ ಕೊರತೆಯಿಂದಾಗಿ ಮತ್ತು ಗಬ್ಬದ ಸಂದರ್ಭದಲ್ಲಿ ಉತ್ಕರ್ಷಣಾ ಒತ್ತಡ ಹೆಚ್ಚಾಗಿರುತ್ತದೆ. ಉತ್ಕರ್ಷಣಾ ನಿರೋಧಕಾ ಜೀವಸತ್ವಗಳಾದ ಇ ಮತ್ತು ಸೆಲೆನಿಯಂ ಅಂಶಗಳನ್ನು ಹೊಂದಿರುವ ರೆಫ್ರೆನಾಲ್ (ಕ್ಯಾಡಿಲಾ) ಔಷಧಿಯು ಎಮ್ಮೆಗಳು ಚೇತರಿಸಿಕೊಳ್ಳಲು ಸಹಾಯಕವಾಗಿತಲ್ಲದೆ, ಬಿಜೀವಸತ್ವ ಮತ್ತು ಯಕೃತ್ ರಸ ಹೊಂದಿರುವ ಬೆಲಾಮಿಲ್ ಔಷಧಿಯು ಉಮ್ಮೆಗಳಲ್ಲಿ ಹಸಿವು ಸುಧಾರಣೆಯಾಗುವದರಲ್ಲಿ ಸಹಕಾರಿಯಾದವು ಇದೇ ರೀತಿ ಫಲತಾಂಶವನ್ನು ಹಿಂದಿನ ಸಂಶೋಧಕರು ದಾಖಲಿಸಿದ್ದಾರೆ. (ಬಿಕಾನೆ ಮತ್ತು ಇತರರು, 2004 ಮತ್ತು ದೋಂಡೆ ಮತ್ತು ಇತರರು 2007).

ಉಲ್ಲೇಖಗಳು:

1. ಬಿಕಾನೆ, ಎ.ಯು., ಅನಂತವಾರ, ಎಲ್.ಜಿ., ಬೋಕ್ರೆ, ಎ.ಪಿ. ಮತ್ತು ನರ್ಲಾಡಕರ್, ಬಿ.ಡಬ್ಲು. (2004). ಇಂಡಿಯನ್ ವೆಟ್ ಜ. 81: 192–197.

2. ಚುಗ್,ಎಸ್.ಕೆ., ಮಲ್ಲಿಕ್, ಕೆ.ಎಸ್., ಸಿಂಗಾರಿ, ಎನ್. ಎ. ಮತ್ತು ದ್ವಾರಕಾನಾಥ, ಪಿ.ಕೆ. (1986). ಹರಿಯಾಣಾ ವೆಚ್ 25: 14–20.

3. ದೋಂಡೆ, ಎಸ್.ಎನ್., ದಿಗರ್‌ಸಕರ್, ಎಸ್.ಯು. ಮತ್ತು ಚವ್ಹಾನ್, ವಿ.ವಿ. (2007). ಇಂಟಾಸ್ ಪಾಲಿವೆಟ್ 8: 382–386.

4. ಗಹಲಾವತ್, ಇಂದು, ಸಿಂಗ್, ಕಿತಾಬ ಮತ್ತು ರಾಕೇಶ ಕುಮಾರ (2001). ಹರಿಯಾಣಾ ವೆಟರ್‌ನರಿ 40: 62–65.

5. ಮಲ್ಲಿಕ್ ಕೆ.ಎಸ್. ಮತ್ತು ಗೌತಮ್. ಒ.ಪಿ. (1971). ಹರಿಯಾಣಾ ಅಗ್ರಿಯುನಿವ್. ಜ. ರಿಸ್ 1: 109–113.

6. ನಾಗಪಾಲ್, ಎಮ್.ಸಿ., ಗೌತಮ್, ಒ.ಪಿ. ಮತ್ತು ಗುಲಾಟಿ, ಆರ್.ಎಲ್. (1968). ಇಂಡಿಯನ್ ವೆಟ್.ಜಿ. 45: 1048–1059.

7. ರೇಡೋಸ್ಟೈಟ್ಸ್, ಒ.ಎಮ್., ಗೇ, ಸಿ.ಸಿ., ಹಿಂಚ್‌ಕ್ಲಿಪ್, ಕೆ.ಡಬ್ಲು ಮತ್ತು ಕನ್ಸಟೇಬಲ್, ಪಿ.ಡಿ. (2007). ವೆಟರ್‌ನರಿ ಮೆಡಿಸಿನ್, 10ನೇ ಎಡಿಷನ್ ಪಿಪಿ: 1682–1683.

8. ಸಮದ್. ಎ., ಸಿಂಗ್, ಬಿ ಮತ್ತು ಕುರೇಶಿ, ಎಮ್.ಆರ್. (1979). ಇಂಡಿಯನ್ ವೆಟ್.ಜಿ. 56: 230–232.

9. ಸಿಂಗ್ ಮತ್ತು ರಣಬೀರ್ (1999). ಪಿ.ಎಚ್.ಡಿ.ಥಿಸಿಸ್, ಹರಿಯಾಣಾ ಕೃಷಿ ವಿಶ್ವವಿದ್ಯಾಲಯ.

10. ಸಿಂಗ್ ಮತ್ತು ರಾಜಬೀರ್ (2000). ಎಮ್.ವಿ.ಎಸ್.ಸಿ. ಥಿಸಿಸ್, ಹರಿಯಾಣಾ ಕೃಷಿ ವಿಶ್ವವಿದ್ಯಾಲಯ.

11. ಶ್ರೀಧರ್ (1995). ಪಿ.ಎಚ್.ಡಿ. ಥಿಸೆಸ್, ಹರಿಯಾಣಾ ಕೃಷಿ ವಿಶ್ವವಿದ್ಯಾಲಯ.

ಶ್ವಾನದಲ್ಲಿ ಬೆಬೀಶಿಯೊಸಿಸ್ ರೋಗದ ಯಶಸ್ವಿ ಚಿಕಿತ್ಸೆ – ಒಂದು ಚಿಕಿತ್ಸಾ ವರದಿ

ರೂಪಾಲಿ ಬಿ*, ಪ್ರಿಯಾಂಕ, ಕೃಷ್ಣಮೂರ್ತಿ,ಸಿ.ಎಂ, ವಿವೇಕ್ ಆರ್ ಕಸ್ರಾಳಕರ್ ಮತ್ತು ಎನ್.ಎ. ಪಾಟೀಲ್.
ಪಶು ವೈದ್ಯಕೀಯ ಚಿಕಿತ್ಸಾ ಶಾಸ್ತ್ರ ವಿಭಾಗ, ಪಶು ವೈದ್ಯಕೀಯ ಮಹಾವಿದ್ಯಾಲಯ, ಬೀದರ. ಮಿಂಚಂಚೆ: dr.roopali777@gmail.com

ಶ್ವಾನಗಳಿಗೆ ಉಷ್ಣಗಳಿಂದ ಹರಡುವ ರೋಗಗಳಲ್ಲಿ ಬೆಬೀಶಿಯೋಸಿಸ್ (ಏಕಾಣುಜೀವಿ) ರೋಗವು ಒಂದು ಮಾರಕಾಂತಿಕ ಖಾಯಿಲೆ. ಸುಮಾರು 18 ತಿಂಗಳು ವಯಸ್ಸಿನ ಒಂದು ಗಂಡು ಲ್ಯಾಬ್ರೆಡರ್ ತಳಿಯ ಶ್ವಾನವನ್ನು ವಿಪರೀತ ಜ್ವರದಿಂದ ಮತ್ತು ಆಹಾರವನ್ನು ತ್ಯಜಿಸಿದ್ದುದರಿಂದ ಪಶುವೈದ್ಯಕೀಯ ಕಾಲೇಜಿನ ರೋಗ ಚಿಕಿತ್ಸಾ ವಿಭಾಗಕ್ಕೆ ಕರೆತರಲಾಯಿತು. ರೋಗಿಯನ್ನು ಪರೀಕ್ಷಿಸಲಾಗಿ, ದೇಹದ ಉಷ್ಣತೆ ಸಾಮಾನ್ಯಕ್ಕಿಂತ ಹೆಚ್ಚಿರುವುದು (105.20ಈ), ಹೊರಮೈಮೇಲೆ ಹೆಚ್ಚು ಉಣ್ಣೆಗಳು ಇರುವುದು, ಹಿಗ್ಗಿದ ದುಗ್ಧರಸ ಗ್ರಂಥಿಗಳು, ಬಿಳಚಿದ ಕಣ್ಣು ಕಪ್ಪೆಗಳು, ಹಾಗೂ ಕಿಬ್ಬೊಟ್ಟೆಯಲ್ಲಿ ನೀರಿನ ಶೇಖರಣೆಯಾಗಿ ಕಿಬ್ಬೊಟ್ಟೆಯು ಉಬ್ಬಿರುವಂತೆ (ಏಸಿಟಿಸ್) ಪತ್ತೆಯಾಯಿತು.

ರಕ್ತಪರೀಕ್ಷೆಯಿಂದ ರಕ್ತಕಣಗಳಲ್ಲಿ ಹೆಚ್ಚಿನ ಪ್ರಮಾಣದ ಏಕಾಣುಜೀವಿಗಳಾದ ಬೆಬೀಶಿಯ ಗಿಬ್ಸೋನಿ ರೋಗಾಣುಗಳ ಇರುವಿಕೆ ಕಂಡುಬಂದಿತು. ಪ್ರಯೋಗಾಲಯದಲ್ಲಿ ರಕ್ತ ಪರೀಕ್ಷೆಯಿಂದ ರಕ್ತದಲ್ಲಿನ ಕಿರುಬಿಲ್ಲೆಗಳ ಸಂಖ್ಯೆಯಲ್ಲಿ ಇಳಿಕೆ ಮತ್ತು ರಕ್ತಹೀನತೆಯಾಗಿರುವುದು ಕಂಡುಬಂದಿದಲ್ಲದೇ ಜೀವರಾಸಾಯನಿಕ ಪರೀಕ್ಷೆಯಿಂದ ಹೆಚ್ಚಿನ ಯೂರಿಯಾ ನೈಟ್ರೋಜನ್, ಕ್ರೀಯಾಟಿನಿನ್, ಗ್ಲೋಬುಲಿನ್, ಯಕೃತ್ತಿನ ಕಿಣ್ವಗಳ (ಖಖಿಕಿ) ಹೆಚ್ಚಳವಾಗಿರುವುದು ಮತ್ತು ಪ್ರೋಟೀನ್, ಅಲ್ಬುಮಿನ್, ಅಲ್ಬುಮಿನ್: ಗ್ಲೋಬುಲಿನ್‌ಗಳ ಪ್ರಮಾಣವು ಇಳಿಕೆಯಾಗಿರುವುದು ಕಂಡುಬಂದವು. ಇದು ಬೆಬೀಶಿಯೋಸಿಸ್ ಎಂಬ ರೋಗವೆಂದು ನಿರ್ಧರಿಸಿ ರೋಗದ ಚಿಕಿತ್ಸೆಯನ್ನು ಇಮಿಜೋಕಾರ್ಬ್ ಎಂಬ ಔಷಧಿ ಮತ್ತು ಕೆಲವು ಸಹಾಯಕ ಔಷಧಿಗಳಿಂದ ಯಶಸ್ವಿಯಾಗಿ ಗುಣಪಡಿಸಲಾಯಿತು.

ಶ್ವಾನಗಳಲ್ಲಿ ಉಣ್ಣೆಗಳಿಂದ ಹರಡುವ ರೋಗಗಳಲ್ಲಿ ಬೆಬೀಶಿಯೋಸಿಸ್ ಎಂಬ ಏಕಾಣುಜೀವಿಯ ರೋಗವು ಒಂದು ಮಾರಣಾಂತಿಕ ಖಾಯಿಲೆ ಎಂಬುದು ಜಗತ್ತಿನ ವಿವಿಧ ಭಾಗಗಳಿಂದ ವರದಿಯಾಗಿದೆ (ಸುನಿತಾ ಮತ್ತು ಇತರರು 2011; ಸಲೀಂ ಮತ್ತು ಫರಾಗ್ 2014 ಮತ್ತು ನಂದಿನಿ ಮತ್ತು ಇತರರು 2016). ಬೆಬೀಶಿಯೋಸಿಸ್ ರೋಗಾಣುಗಳಲ್ಲಿ ಬೆಬೀಶಿಯ ಗಿಬ್ಸೋನಿ ಮತ್ತು ಬೆಬೀಶಿಯ ಕ್ಯಾನಿಸ್ ಎಂಬ ಎರಡು ಪ್ರಭೇದಗಳಿದ್ದು ಭಾರತದಲ್ಲಿ ಬೆಬೀಶಿಯ ಗಿಬ್ಸೋನಿಯನ್ನು ಮೊದಲ ಬಾರಿಗೆ 1910 ರಲ್ಲಿ ಗುರುತಿಸಲಾಯಿತು (ಪಠಾಣ್ 1910). ಈ ರೋಗದಲ್ಲಿ ವಿಪರೀತ ಜ್ವರ, ರಕ್ತಹೀನತೆ, ಬಿಳಚಿಕೊಂಡ ಕಣ್ಣುಗಳು, ಜಾಂಡಿಸ್ (ಕಾಮಾಲೆ), ಕೆಂಪು ಮೂತ್ರ (ಹೀಮೋಗ್ಲೋಬಿನೂರಿಯ) ಹಿಗ್ಗಿದ ಯಕೃತ್ (ಲಿವರ್), ಗುಲ್ಮ (Spleen) ಮತ್ತು ದುಗ್ಧರಸ ಗ್ರಂಥಿಗಳು ಸಾಮಾನ್ಯವಾಗಿ ಕಂಡುಬರುವ ರೋಗಲಕ್ಷಣಗಳು (ಬ್ರಿಟ್ಸ್‌ವರ್ಡ್ ಮತ್ತು ಇತರರು 1983). ಹಾಗೆಯೇ ರಕ್ತಪರೀಕ್ಷೆ ಮತ್ತು ಜೀವರಾಸಾಯನಿಕ ಪರೀಕ್ಷೆಯಲ್ಲಿ ರಕ್ತಹೀನತೆ, ಕಿರುಬಿಲ್ಲೆಗಳ ಸಂಖ್ಯೆಯಲ್ಲಿ ಇಳಿಕೆ, ಹೆಚ್ಚಿದ ಯೂರಿಯಾ ನೈಟ್ರೋಜನ್, ಹೆಚ್ಚಿದ ಕ್ರಿಯಾಟಿನಿನ್, ಹೆಚ್ಚಿದ ಯಕೃತ್ತಿನ ಕಿಣ್ವಗಳು (Liver enzymes), ಹೆಚ್ಚಿದ ಗೊಬ್ಲುಲಿನ್ ಮತ್ತು ಪ್ರೋಟೀನ್, ಆಲ್ಬುಮಿನ್ ಮತ್ತು ಆಬ್ಲುಮಿನ್: ಗೊಬ್ಲುಲಿನ್‌ಗಳ ಪ್ರಮಾಣದಲ್ಲಿ ಕಡಿಮೆಯಾಗುವುದು (ಜಿಗ್ನರ್ ಮತ್ತು ಇತರರು 2007 ಮತ್ತು ಸಲೀಂ ಮತ್ತು ಫರಾಗ್ 2014).

ಈಗಿನ ವರದಿಯು ಶ್ವಾನದಲ್ಲಿ ಬೆಬೀಶಿಯೊಸಿಸ್ ರೋಗದಿಂದ ಆಗುವ ರಕ್ತ ಮತ್ತು ಜೀವರಾಸಾಯನಿಕ ವಸ್ತುಗಳ ಪ್ರಮುಖ ಬದಲಾವಣೆಗಳು ಮತ್ತು ಅದರ ಯಶಸ್ವಿ ಚಿಕಿತ್ಸೆಯ ಕುರಿತು ವಿಶ್ಲೇಷಿಸುತ್ತದೆ.

ರೋಗದ ಪೂರ್ವ ಮಾಹಿತಿ: ಸುಮಾರು 18 ತಿಂಗಳು ವಯಸ್ಸಿನ ಒಂದು ಗಂಡು ಲ್ಯಾಬ್ರೆಡರ್ ತಳಿಯ ಶ್ವಾನವನ್ನು ವಿಪರೀತ ಜ್ವರದಿಂದ ಬಳಲುತ್ತಿದ್ದು, ಆಹಾರವನ್ನು ತ್ಯಜಿಸಿದ್ದುದರಿಂದ ಪಶುವೈದ್ಯಕೀಯ ಕಾಲೇಜಿನ ರೋಗ ಚಿಕಿತ್ಸಾ ವಿಭಾಗಕ್ಕೆ ಕರೆತರಲಾಯಿತು.

ರೋಗಿಯನ್ನು ಪ್ರಾಥಮಿಕ ಪರೀಕ್ಷೆಗೆ ಒಳಪಡಿಸಿದಾಗ, ದೇಹದ ಉಷ್ಣತೆ ಸಾಮಾನ್ಯಕ್ಕಿಂತ ಹೆಚ್ಚಿರುವುದು(105.20ಈ), ಹೊರಮೈಮೇಲೆ ಹೆಚ್ಚು ಉಣ್ಣೆಗಳು ಇರುವುದು, ಹಿಗ್ಗಿದ ದುಗ್ಧರಸ ಗ್ರಂಥಿಗಳು, ಬಿಳಚಿದ ಕಣ್ಣ ಕಪ್ಪೆಗಳು, ಹಾಗೂ ಕಿಬ್ಬೊಟ್ಟೆಯಲ್ಲಿ ನೀರಿನ ಶೇಖರಣೆಯಾಗಿ ಕಿಬ್ಬೊಟ್ಟೆಯು ಉಬ್ಬಿರುವಂತೆ ಪತ್ತೆಯಾಯಿತು (Ascites). ಪ್ರಯೋಗಾಲಯದಲ್ಲಿ ರೋಗಪತ್ತೆಯ ಧೃಡೀಕರಣಕ್ಕಾಗಿ 5 ಮಿ.ಲೀ. ರಕ್ತವನ್ನು ರಕ್ತನಾಳದಿಂದ ಪಡೆಯಲಾಯಿತು.

ಫಲಿತಾಂಶ: ಪ್ರಯೋಗಾಲಯದ ರಕ್ತ ಪರೀಕ್ಷೆಯಿಂದ ರಕ್ತದಲ್ಲಿನ ಕಿರುಬಿಲ್ಲೆಗಳ ಸಂಖ್ಯೆಯಲ್ಲಿ ಇಳಿಕೆ ಮತ್ತು ರಕ್ತಹೀನತೆಯಾಗಿರುವುದು ಕಂಡುಬಂದಿತು. ಜೀವರಸಾಯನಿಕ ಪರೀಕ್ಷೆಯಿಂದ ಹೆಚ್ಚಿದ ಯೂರಿಯಾ ನೈಟ್ರೋಜನ್,

ಕ್ರೀಯಾಟಿನಿನ್, ಗ್ಲೋಬುಲಿನ್, ಯಕೃತ್ತಿನ ಕಿಣ್ವಗಳ (SGPT) ಹೆಚ್ಚಳವಾಗಿರುವುದು ಮತ್ತು ಪ್ರೋಟೀನ್, ಅಲ್ಬುಮಿನ್, ಅಲ್ಬುಮಿನ್:ಗ್ಲೋಬುಲಿನ್‌ಗಳ ಪ್ರಮಾಣವು ಇಳಕೆಯಾಗಿರುವುದು ಕಂಡುಬಂದವು (Table 1). ರಕ್ತಪರೀಕ್ಷೆಯಿಂದ ರಕ್ತಕಣಗಳಲ್ಲಿ ಹೆಚ್ಚಿನ ಪ್ರಮಾಣದ ಏಕಾಣುಜೀವಿಗಳಾದ ಬೆಬೀಶಿಯ ಗಿಬ್ಸೋನಿ ರೋಗಾಣುಗಳ ಇರುವಿಕೆ ಕಂಡುಬಂದಿತು. ಈ ಮೇಲಿನ ಎಲ್ಲಾ ರೋಗವಿಧಾನದಿಂದ' ಇದು ಬೆಬಿಶಿಯೋಸಿಸ್ ಎಂಬ ರೋಗವೆಂದು ಪತ್ತೆಯಾಯಿತು, ನಂತರ ಇದಕ್ಕೆ ಸೂಕ್ತ ಚಿಕಿತ್ಸೆಯನ್ನು ನೀಡಲು ನಿರ್ಧರಿಸಲಾಯಿತು.

Table 1: ರಕ್ತಪರೀಕ್ಷೆ ಮತ್ತು ಜೀವರಸಾಯನಿಕ ಪರೀಕ್ಷೆಯಲ್ಲಿ ಕಂಡು ಬಂದ ಬದಲಾವಣೆಗಳು

ಕ್ರ. ಸಂ.	ಹೆಸರು	0 ದಿನ	15ನೇ ದಿನ
1.	ಹೀಮೋಗ್ಲೋಬಿನ್ (ಗ್ರಾಂ/ಡೆಲಿ)	5.8	10.86
2.	ಕೆಂಪು ರಕ್ತಕಣಗಳ ಸಂಖ್ಯೆ (106/ಮೈಕ್ರೋ ಲೀ)	2.18	5.57
3.	ಕಟ್ಟಿದ ಜೀವದ್ರವ್ಯಕೋಶ (ಶೇ.)	16.12	31.08
4.	ಕಿರುಬಿಲ್ಲೆಗಳ ಸಂಖ್ಯೆ (103/ಮೈಕ್ರೋ ಲೀ)	32.00	158.00
5.	ಯೂರಿಯಾ ನೈಟ್ರೋಜನ್ (ಮಿ.ಗ್ರಾಂ/ಡೆಲಿ)	35.26	26.12
6.	ಕ್ರಿಯಾಟಿನಿನ್ (ಮಿ.ಗ್ರಾಂ/ಡೆಲಿ)	1.95	1.42
7.	ಎಸ್.ಜಿ.ಪಿ.ಟಿ. (ಯುನಿಟ್/ಲೀ)	112.00	67.85
8.	ಟೋಟಲ್ ಪ್ರೋಟೀನ್ (ಗ್ರಾಂ/ಡೆಲಿ)	4.4	6.73
9.	ಆಲ್ಬುಮಿನ್ (ಗ್ರಾಂ/ಡೆಲಿ)	1.3	3.24
10.	ಗ್ಲೋಬುಲಿನ್ (ಗ್ರಾಂ/ಡೆಲಿ)	3.1	3.49
11.	ಆಲ್ಬುಮಿನ್:ಗ್ಲೋಬುಲಿನ್	0.42	0.93



ಚಿತ್ರ: ಬೆಬೀಶಿಯ ಗಿಬ್ಸೋನಿ

ಚಿಕಿತ್ಸೆ ವಿಧಾನ: ಮೊದಲನೆಯ ದಿನ ರೋಗಪೀಡಿತ ಶ್ವಾನಕ್ಕೆ ಇಮಿಡೋಕಾರ್ಬ್ ಡೈಪ್ರೋಪಿಯೋನೇಟ್ (ಇಮಿಜಾಲ್‌ಲ) ಎಂಬ ಔಷಧಿಯನ್ನು 5 ಮಿಗ್ರಾಂ/1 ಕೆ.ಜಿ. ದೇಹತೂಕದಂತೆ ಮಾಂಸಖಂಡಕ್ಕೆ ಚುಚ್ಚುಮದ್ದು ನೀಡಲಾಯಿತು (ಒಂದೇ ಚುಚ್ಚುಮದ್ದು). ಸಹಾಯಕ ಚಿಕಿತ್ಸೆಯಾಗಿ ಡೆಕ್ಟ್ರೋಸ್(25%) 200 ಮಿ.ಲೀ, ಲ್ಯಾಸಿಕ್ಸ್ 2 ಮಿ.ಲೀ. ಮತ್ತು ಆಸ್ಟಿಮನ್ 20 ಮಿ.ಲೀ ಔಷಧಿಗಳನ್ನು ರಕ್ತನಾಳದ ಮೂಲದ ನಿಧಾನವಾಗಿ ನೀಡಲಾಯಿತು. ಈ ಸಹಾಯಕ ಚಿಕಿತ್ಸೆಯನ್ನು ಮೂರು ದಿನಗಳವರೆಗೆ ಮುಂದುವರಿಸಲಾಯಿತು. ಮನೆಔಷಧಿಯಾಗಿ ಡೆಕ್ಸೋರೇಂಜ್ 10 ಮಿ.ಲೀ. ದಿನಕ್ಕೆರಡು ಬಾರಿಯಂತೆ 15 ದಿನಗಳವರೆಗೆ ಕುಡಿಸಲು ಮತ್ತು ಪ್ರೋಟೀನ್‌ಯುಕ್ತ ಆಹಾರಗಳಾದ ಪ್ಲೇ ಪ್ರೋಟೀನ್ ಮತ್ತು ಮೊಟ್ಟೆಯ ಬಿಳಿಭಾಗವನ್ನು ಆಹಾರದಲ್ಲಿ ಹೆಚ್ಚು ಉಪಯೋಗಿಸುವಂತೆ ಮಾರ್ಗದರ್ಶನ ನೀಡಲಾಯಿತು.

48 ಗಂಟೆಗಳ ನಂತರ ಶ್ವಾನದ ಆರೋಗ್ಯದಲ್ಲಿ ಧನಾತ್ಮಕ ಬದಲಾವಣೆಗಳಾದ ದೇಹದ ಉಷ್ಣತೆಯು ಸಾಮಾನ್ಯ ಹಂತಕ್ಕೆ ಬಂದಿರುವುದು, ಆಹಾರ ಸೇವನೆಯಲ್ಲಿ ಚೇತರಿಕೆ ಹಾಗೂ ಕಿಬ್ಬೊಟ್ಟೆಯ ಊತವು ಸಹಜ ಸ್ಥಿತಿಗೆ ಬಂದು ಶ್ವಾನವು ಚಟುವಟಿಕೆಯಿಂದ ಇರುವಂತಾಯಿತು.

ಎರಡು ವಾರಗಳ ನಂತರ ಮತ್ತೆ ರಕ್ತ ಪರೀಕ್ಷೆ ಮಾಡಿದಾದ ರಕ್ತಕಣಗಳಲ್ಲಿದ್ದ ಬೆಬೀಶಿಯಾ ರೋಗಾಣುಗಳು ಕಂಡುಬರಲಿಲ್ಲ ಹಾಗೂ ರಕ್ತ ಮತ್ತು ಜೀವರಾಸಾಯನಿಕ ವಸ್ತುಗಳು ಸಹಜ ಸ್ಥಿತಿಯತ್ತ ಬದಲಾವಣೆಗೊಂಡಿರುವುದು ತಿಳಿದುಬಂದಿತು.

ರೋಗ ಚರ್ಚೆ:

* ಸದರಿ ವರದಿಯಲ್ಲಿನ ಫಲಿತಾಂಶದ ಪ್ರಕಾರ ರಕ್ತಹೀನತೆ ಮತ್ತು ಕಿರುಬಿಲ್ಲೆಗಳ ಸಂಖ್ಯೆಯಲ್ಲಿ ಇಳಕೆಯು ಪ್ರಮುಖವಾಗಿ ಕಂಡುಬಂದಿತು. ಇದೇ ರೀತಿಯ ಫಲಿತಾಂಶಗಳು ಈ ರೋಗದಿಂದ ಬಳಲುವ ಶ್ವಾನಗಳಲ್ಲಿ ವರದಿಯಾಗಿವೆ. (ಸುನಿತಾ ಮತ್ತು ಇತರರು 2011 ಮತ್ತು ನಂದಿನಿ ಮತ್ತು ಇತರರು 2016).

* ರಕ್ತಹೀನತೆಗೆ ಕಾರಣವೇನೆಂದರೆ, ಕೆಂಪು ರಕ್ತಕಣಗಳು ಹೆಚ್ಚಿದ ಅವುಗಳ ಮೇಲ್ಮೈ ಸೂಕ್ಷ್ಮತೆಯಿಂದ ಛಿದ್ರವಾಗುವುದು (ಮಾಕಿಂಡೆ ಮತ್ತು ಬೊಬಾಡೆ 1997), ರೋಗನಿರೋಧಕ ಕೇಂದ್ರಿತ ಕಿರುಬಿಲ್ಲೆಗಳ ನಾಶವಾಗುವುದು ಮತ್ತು ಆಕ್ಸಿಡೇಷನ್ ಪ್ರಕ್ರಿಯೆಯಿಂದ ಕೆಂಪುರಕ್ತ ಕಣಗಳು ಬಳಲುವುದರಿಂದ (oxidation stress) ಸಾಮಾನ್ಯವಾಗಿ ನಾಶವಾಗಿ ರಕ್ತದಲ್ಲಿ ಹೀರಲ್ಪಡುತ್ತವೆ.

* ಈ ವರದಿಯಲ್ಲಿ ಕಂಡುಬಂದ ಕಿಬ್ಬೊಟ್ಟೆಯ ಊತದ ಸ್ಥಿತಿಯು ರಕ್ತದಲ್ಲಿ ಸಾಮಾನ್ಯಕ್ಕಿಂತ ಕಡಿಮೆಯಾದ ಪ್ರೋಟೀನ್ ಮತ್ತು ಆಲ್ಬುಮಿನ್ ಅಂಶಗಳಿಂದ ಆಗಿರಬಹುದೆಂದು ವಿಶ್ಲೇಸಿಸುತ್ತದೆ. ಇದೇ ರೀತಿಯ ಬದಲಾವಣೆಯನ್ನು ಹಲವಾರು ಸಂಶೋಧಕರು ಧೃಡಪಡಿಸಿದ್ದಾರೆ (ಇರ್ವಿನ್ ಮತ್ತು ಹಚ್ಚಿನ್‌ಸನ್ 1991; ಸಲಾಕ್ಷಿ ಮತ್ತು ಇತರರು 1999 ಮತ್ತು ಸಲೀಂ ಮತ್ತು ಫರಾಗ್ 2014).

* ಈ ವರದಿಯಲ್ಲಿ ರೋಗಚಿಕಿತ್ಸೆಗಾಗಿ ಇಮಿಡೋಕಾರ್ಬ್ ಮತ್ತು ಹಲವು ಸಹಾಯಕ ಔಷಧಿಗಳನ್ನು (Supportive Therapy) ಬಳಸಿದ್ದರಿಂದ ಶ್ವಾನವು ಯಶಸ್ವಿಯಾಗಿ ಗುಣಮುಖವಾಯಿತು.

ಆದರೆ ಲಿನ್ ಮತ್ತು ಹ್ಯೂಂಗ್ 2010 ರಲ್ಲಿ ಮೂರು ಆಂಟಿಬಯೋಟಿಕ್‌ಗಳ (ಡಾಕ್ಸಿಸೈಕ್ಲಿನ್, ಎನ್ರೋಫ್ಲೆಕ್ಸಾಸಿನ್ ಮತ್ತು ಮೆಟ್ರೋನಿಡಾಜಾಲ್) ಮಿಶ್ರಣವನ್ನು ಡೈಮಿನಾಜಿನ್ ಆಸಿಟುರೇಟ್ (Berinil®) ಜೊತೆಗೆ ಮತ್ತು ಇಲ್ಲದೆ ಬಳಸಿ ಪ್ರಾಯೋಗಿಕವಾಗಿ ಚಿಕಿತ್ಸೆ ನಡೆಸಿದಾಗ ಅಷ್ಟೇನೂ ಉತ್ತಮ ಪ್ರತಿಕ್ರಿಯೆಗಳು ಬಂದಿರಲಿಲ್ಲಾ ಮತ್ತು ರೋಗಾಣುಗಳು ಪೂರ್ಣ ಪ್ರಮಾಣದಲ್ಲಿ ನಾಶವಾಗಿರಲಿಲ್ಲ.

ಸಾರಾಂಶ: ಈ ವರದಿಯು ಶ್ವಾನಗಳಲ್ಲಿ ಉಣ್ಣಿಗಳಿಂದ ಹರಡುವ ಬೆಬಿಶಿಯೋಸಿಸ್ ಎಂಬ ರೋಗದ ಚಿಕಿತ್ಸೆಯನ್ನು ಇಮಿಡೋಕಾರ್ಬ್ ಎಂಬ ಔಷಧಿ ಮತ್ತು ಕೆಲವು ಸಹಾಯಕ ಔಷಧಿಗಳಿಂದ ಯಶಸ್ವಿಯಾಗಿ ಗುಣಪಡಿಸಬಹುದು ಎಂದು ವಿವರಿಸುತ್ತದೆ.

ಉಲ್ಲೇಖಗಳು:

1. ಪಠಾಣ್ ಡಬ್ಲೂ.ಎಸ್. 1910. ಮದ್ರಾಸಿನ ಶ್ವಾನಗಳ ರಕ್ತದಲ್ಲಿ ಹೊಸ ಪೈರೋಪ್ಲಾಸ್ಮ್‌ಗಳ ಇರುವಿಕೆಯ ಪ್ರಾಥಮಿಕ ವರದಿ ಮತ್ತು ತದನಂತರ ಅವುಗಳು ತೋಳ/ನರಿಗಳಲ್ಲಿ ಇರುವಿಕೆಯ ಅನ್ವೇಷಣೆ. ಬುಲೆಟಿನ್.ಸೋ.ಪೆಥಾಲಜಿ. ಎಕ್ಸಾಟ್ 3: 274–280.

2. ಬ್ರಿಟ್ಸ್‌ವರ್ಟ್ ಈ.ಬಿ., ಮಲೋನ್ ಜೆ.ಬಿ., ಮೆಕ್‌ವಿಲಿಯಮ್ಸ್ ಪಿ., ಲೆವಿ ಎಮ್.ಜಿ., ಕ್ವೀಲ್ಸ್ ಸಿ.ಡಬ್ಲೂ ಮತ್ತು ಫುಡಿಚ್ ಎಮ್. ಜೆ. 1983. ಗ್ರೇ ಹೌಂಡ್ ಶ್ವಾನಗಳಲ್ಲಿ ಬೆಬಿಶಿಯೋಸಿಸ್‌ನ ಇರುವಿಕೆ. ಜೆ.ಅಮೆ.ವೆಟ್.ಮೆಡಿ.ಅಸೋಸಿ. 182: 978–982.

3. ಜಿಗ್ನರ್ ಡಬ್ಲೂ., ರೇಪಾಕಾ ಜಿ., ಗಾಜಸ್ಕಾ-ಜಿಗ್ನರ್ ಒ., ಡುಗ್ಲಾಸ್ ಇ ಮತ್ತು ವೆಡ್ರೀಚೋಯಿಸ್ ಎಚ್. 2007. ಪೋಲ್ಯಾಂಡ್‌ನ ಶ್ವಾನಗಳಲ್ಲಿ ದೊಡ್ಡ ಬೆಬಿಶಿಯೋಸಿಸ್ ರೋಗಾಣುಗಳಿಂದ ಜೀವರಾಸಾಯಕಗಳಲ್ಲಿ ವೈಪರಿತ್ಯಗಳು–ಒಂದು ವರದಿ. ಪೋ.ಜ.ವೆಟ್.ಸೈನ್ಸ್. 10: 245–253.

4. ಸಲೀಂ ಎನ್.ವೈ ಮತ್ತು ಫರಾಗ್ ಎಚ್.ಎಸ್. 2014. ಈಜಿಪ್ಟ್‌ನಲ್ಲಿ ಬೆಬಿಶಿಯಾ ಕ್ಯಾನಿಸ್‌ನಿಂದ ಶ್ವಾನಗಳ ರಕ್ತದಲ್ಲಿನ ರೋಗಚಿಕಿತ್ಸಾ ಸಂಶೋಧನೆಗಳು. ಈಜಿಪ್ಟ್.ಕಾಂಪೋ. ಕ್ಲಿನಿಕ್.ಪೆಥಾಲಜಿ. 23: 1305–1307.

5. ಮಾಕಿಂಡೆ ಎಮ್.ಒ ಮತ್ತು ಬೊಬಾಡೆ ಪಿ.ಎ. 1994. ಆರೋಗ್ಯವಂತ ಶ್ವಾನಗಳು ಮತ್ತು ಪರೋಪಜೀವಿಗಳನ್ನು ಹೊಂದಿದ ಶ್ವಾನಗಳಲ್ಲಿ ರಕ್ತಕಣಗಳಲ್ಲಿ ಆಸ್ಮೋಟಿಕ್ ಮೇಲ್ಮೈ ಸೂಕ್ಷ್ಮತೆಯ ಅಧ್ಯಯನ. ರೀಸರ್ಚ್.ವೆಟ್.ಸೈನ್ಸ್. 57: 343–348.

6. ಮುರೇಸ್ ಟಿ., ಯೂಡಾ ಟಿ., ಯಮಾಟೋ ಒ ಮತ್ತು ಮೇಡಿ ವೈ. 1996. ಬೆಬಿಶಿಯಾ ಗಿಬ್ಸೋನಿ ರೋಗಯುಕ್ತ ಶ್ವಾನಗಳ ರಕ್ತಕಣಗಳ ಆಕ್ಸಿಡೇಷನ್ ನಿಂದಾದ ಹಾನಿಯಿಂದ ಫ್ಯಾಗೋಸೈಟೋಸಿಸ್‌ನ ಅಧ್ಯಯನ. ಜ.ವೆಟ್.ಮೆಡಿ.ಸೈನ್ಸ್. 58: 259–261.

7. ಇರ್ವಿನ್ ಪಿ. ಮತ್ತು ಹಚ್ಚಿನ್‌ಸನ್ ಜಿ.ಡಬ್ಲೂ 1991. ಶ್ವಾನಗಳ ಬೆಬಿಶಿಯೋಸಿಸ್ ರೋಗದಲ್ಲಿ ಚಿಕಿತ್ಸಾ ಮತ್ತು ರೋಗ ವಿಧಾನ ಪತ್ರೆ. ಆಸ್ಟ್ರೇಲಿಯನ್.ವೆಟ್.ಜ.68: 204–209.

8. ಸಲಾಕ್ಷಿ ಸಿ. ಸಲಾಕ್ಷಿ ಜೆ., ರೋಚನ್‌ಪೆಟ್ ಎನ್., ಸುತುಮಾಪಿನುಟೋ ಪಿ ಮತ್ತು ನುನ್ಕಲಾಂಗ ಜಿ. 1999. ಪರಾವಲಂಬಿ ಪೀಡಿತ ಶ್ವಾನಗಳ ರಕ್ತಕಣಗಳ ಪಾತ್ರಗಳು. ಕಸೆಟ್‌ಸಾರ್ಟ.ಜರ್ನಲ್. 33(4) 589–600.

9. ಲಿನ್ ಎಮ್.ವೈ ಮತ್ತು ಹ್ಯೂಂಗ್ ಎಚ್.ಪಿ. 2010. ಬೆಬಿಶಿಯಾ ಗಿಬ್ಸೋನಿ ರೋಗಾಣು ಪೀಡಿತ ಶ್ವಾನಗಳ ಚಿಕಿತ್ಸೆಯಲ್ಲಿ ಟ್ರಿಪಲ್ ಆಂಟಿಬಯೋಟಿಕ್‌ಗಳ ಸಮ್ಮಿಶ್ರಣವಾಗಿ ಡಾಕ್ಸಿಸೈಕ್ಲಿನ್, ಎನ್ರೋಫ್ಲೆಕ್ಸಾಸಿನ್ ಮತ್ತು ಮೆಟ್ರೋನಿಡಾಜಾಲ್‌ಗಳನ್ನು ಡೈಮಿನಾಜಿನ್ ಆಸಿಟುರೇಟ್ (Berinil) ಜೊತೆಗೆ ಮತ್ತು ಇಲ್ಲದೆ ಪರೀಕ್ಷಿಸಿದ ಅಧ್ಯಯನ. ಆಕ್ಟ್.ವೆಟ್.ಸ್ಕ್ಯಾಂಡ್.52: 27.

10. ಸುನಿತಾ ಕೆ. ಪಿಳ್ಳೈ ಯು.ಎನ್ ಮತ್ತು ಶಶಿಧರನ್ ಎಚ್.ಪಿ 2011. ಜರ್ಮನ್ ಶೆಫರ್ಡ್ ಶ್ವಾನದಲ್ಲಿ ಬೆಬಿಶಿಯಾ ಗಿಬ್ಸೋನಿ ರೋಗ. ವೆಟ್.ವರ್ಲ್ಡ್. 4(6) 269–270.

11. ನಂದಿನಿ ಎಮ್.ಕೆ., ಪೂನಮ್ ವಿ ಮತ್ತು ಅನ್ಸರ್ ಸಿ. 2016. ಶ್ವಾನಗಳ ಬೆಬಿಶಿಯೋಸಿಸ್ ರೋಗಕ್ಕೆ ನೂತನಾ ಚಿಕಿತ್ಸಾ ವಿಧಾನದ ಶಿಷ್ಟಾಚಾರ–ಒಂದು ಪ್ರಕರಣದ ವರದಿ. ಜ.ಡೈರಿ.ವೆಟ್. ಅನಿಮ್.ರೀಸರ್ಚ್ 3(3).

ದನ ಮತ್ತು ಎಮ್ಮೆಗಳಲ್ಲಿ ಸೆಟೆ ಅಥವಾ ವಾಯು

ನವೀನ್ ಎಮ್, ದಿಲೀಪ್ ಕುಮಾರ್ ಡಿ ಮತ್ತು ಶಿವಪ್ರಕಾಶ್ ಬಿ. ವಿ.
ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ಮತ್ತು ಕ್ಷ-ಕಿರಣ ವಿಭಾಗ, ಅಂಚೆ ಪೆಟ್ಟಿಗೆ ಸಂ:6, ಪಶುವೈದ್ಯಕೀಯ ಮಹಾವಿದ್ಯಾಲಯ,
ಬೀದರ-585401; Email:naveencspvet@gmail.com

ಸೆಟೆ ಅಥವಾ ವಾಲಿಯುವು ಹಸು ಮತ್ತು ಎಮ್ಮೆಗಳಲ್ಲಿ ಕಂಡುಬರುವ ಒಂದು ಅಸ್ವಸ್ಥತೆ. ಇದರಿಂದ ಅವುಗಳು ಕುಂಟುತ್ತವೆ. ಹಾಲು ಕೊಡುವ ಜಾನುವಾರಿನಲ್ಲಿ ಹಾಲು ಕಡಿಮೆಯಾಗುತ್ತದೆ. ಏಕೆಂದರೆ, ಅವುಗಳು ತುಂಬಾ ದೂರಹೋಗಿ ಮೇಯುವಾಗುವುದಿಲ್ಲ. ಎತ್ತುಗಳನ್ನು ಉಳುಮೆಗೆ ಮತ್ತು ಎತ್ತಿನಗಾಡಿ ಎಳೆಯುವುದಕ್ಕೆ ಬಳಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಶಸ್ತ್ರಚಿಕಿತ್ಸೆ ಮೂಲಕ ಸೆಟೆ ತೆಗೆಯುವಾಗುವುದು. ಈ ವಿಷಯವಾಗಿ ಸ್ನಾತ್ತಕೋತ್ತರ ಅಧ್ಯಯನವನ್ನು ಎರಡು ಅಂತಗಳಲ್ಲಿ ಮಾಡಲಾಗಿದೆ. ಮೊದಲನೆಯ ಹಂತದಲ್ಲಿ ದನಗಳಲ್ಲಿ ಸೆಟೆಗಾಲು ರೋಗದ ಘಟನೆಗಳ ಅಧ್ಯಯನ ಮಾಡಲಾಗಿದೆ. 5 ವರ್ಷಗಳಲ್ಲಿ (2005–06 ರಿಂದ 2009–10ರ ವರಗೆ) ಜಾನುವಾರು ಬೋಧನಾ ಪರಿಕೀರ್ಣ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಮತ್ತು ಈಶಾನ್ಯ ಕರ್ನಾಟಕ ಜಿಲ್ಲೆಗಳ

ಪಶುಆಸ್ಪತ್ರೆಗಳಲ್ಲಿ ದಾಖಲಾದ ರೋಗಗ್ರಸ್ತ ಜಾನುವಾರುಗಳ ಮಾಹಿತಿಯನ್ನು ಪರಿಶೀಲಿಸಿ, ದನ ಮತ್ತು ಎಮ್ಮೆಗಳಲ್ಲಿ ಸೆಟಗಾಲು ರೋಗದ ಘಟನೆಗಳನ್ನು ಅಧ್ಯಯನ ಮಾಡಲಾಗಿದೆ. ಈ ಅಧಿಕೃತ ಅಧ್ಯಯನದ ಪ್ರಕಾರ 100 ಜಾನುವಾರುಗಳಲ್ಲಿ 1 ದನದಲ್ಲಿ ಸೆಟೆಗಾಲು ರೋಗ ಕಂಡುಬಂದಿರುತ್ತದೆ. ಆದ್ದರಿಂದ, ಈ ರೋಗವು ರೈತರಿಗೆ ಆರ್ಥಿಕ ನಷ್ಟವನ್ನುಂಟುಮಾಡುತ್ತದೆ. ಎರಡನೆಯ ಹಂತದಲ್ಲಿ ಶಸ್ತ್ರಚಿಕಿತ್ಸಾ ಅಧ್ಯಯನ ಮಾಡಲಾಗಿದೆ. 24 ಸೆಟೆಗಾಲು ರೋಗಗ್ರಸ್ತ ಜಾನುವಾರುಗಳಲ್ಲಿ ಅಧ್ಯಯನ ಮಾಡಲಾಗಿದೆ, ಇವುಗಳಲ್ಲಿ 12 ಎಮ್ಮೆಗಳು, 6 ಹಸುಗಳು ಮತ್ತು 6 ಎತ್ತುಗಳು. ಈ ಜಾನುವಾರುಗಳನ್ನು ವಿವಿಧ ಶಸ್ತ್ರಚಿಕಿತ್ಸಾ ಕ್ರಮಗಳಿಗೆ ಒಳಪಡಿಸಲಾಗಿದೆ. ಈ ಅಧ್ಯಯನದಿಂದ ಕಂಡುಬಂದಿರುವುದೇನೆಂದರೆ ಹಳ್ಳಿಗಳಲ್ಲಿ ಬಯಲಿನಲ್ಲಿ ಬೊಷ್ಟಗಾಲಿನ ಮೂಲಕ ಶಸ್ತ್ರಚಿಕಿತ್ಸೆ ಮಾಡುವುದನ್ನು ಹೋಲಿಸಿದರೆ ಸಣ್ಣ ಇರಿತದಿಂದ ಶಸ್ತ್ರಚಿಕಿತ್ಸೆ ಮಾಡುವುದು ಒಳ್ಳೆಯದು ಹಾಗು ಅನುಕೂಲಕರ. ಏಕೆಂದರೆ, ಸಣ್ಣ ಇರಿತದ ಶಸ್ತ್ರಚಿಕಿತ್ಸೆಯನಂತರ ದನಗಳಲ್ಲಿ ಅಡ್ಡಪರಿಣಾಮಗಳು ಕಡಿಮೆ. ಎಲ್ಲಾ ಸ್ಥಳಾವಕಾಶ ದನಗಳಲ್ಲಿ ಮಲಗಿಸಿ ಸಣ್ಣ ಇರಿತದಿಂದ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಮಾಡಿ ಸೆಟೆತೆಗೆಯಬಹುದು. ಮೃದು ಸ್ಥಳಾವಕಾಶ ದನಗಳಲ್ಲಿ ನಿಲ್ಲಿಸಿ ಸಣ್ಣ ಇರಿತದಿಂದ ಸೆಟೆತೆಗೆಯುವ ವಿಧಾನವನ್ನು ಸುಲಭವಾಗಿ ಬಳಸಬಹುದು.

ಸೆಟೆ ಅಥವಾ ವಾಯವು ಹಸು ಮತ್ತು ಎಮ್ಮೆಗಳಲ್ಲಿ ಕಂಡುಬರುವ ಒಂದು ಅಸ್ವಸ್ಥತೆ. ಇದರಿಂದ ಅವುಗಳು ಕುಂಟುತ್ತವೆ. ಈ ಕಾಯಿಲೆಯ ಲಕ್ಷಣಗಳು ಮುಂಜಾನೆಯಲ್ಲಿ ಮತ್ತು ದೀರ್ಘಕಾಲದ ವಿಶ್ರಾಂತಿಯನಂತರ ಜಾನುವಾರನ್ನು ನಡೆಯುವಂತೆ ಮಾಡಿದಾಗ ಕಂಡುಬರುತ್ತದೆ. ಹಾಲು ಕೊಡುವ ಜಾನುವಾರಿನಲ್ಲಿ ಹಾಲು ಕಡಿಮೆಯಾಗುತ್ತದೆ. ಏಕೆಂದರೆ, ಅವುಗಳು ತುಂಬಾ ದೂರಹೋಗಿ ಮೇಯಲಾಗುವುದಿಲ್ಲ. ಎತ್ತುಗಳನ್ನು ಉಳಮೆಗೆ ಮತ್ತು ಎತ್ತಿನಗಾಡಿ ಎಳೆಯುವುದಕ್ಕೆ ಬಳಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಶಸ್ತ್ರಚಿಕಿತ್ಸೆ ಮೂಲಕ ಸೆಟೆ ತೆಗೆಯಲಾಗುವುದು.

ಸೆಟೆ ತೆಗೆಯಲು ನಾನಾ ಚಿಕಿತ್ಸಾ ಮತ್ತು ಶಸ್ತ್ರಚಿಕಿತ್ಸಾ ವಿಧಾನಗಳನ್ನು ಬಳಸಲಾಗಿದೆ. ಆದರೂ ಈ ವಿಧಾನಗಳಲ್ಲಿ ಯಾವುದು ಉತ್ತಮವಾದದ್ದು ಎನ್ನುವುದೇ ದ್ವಂದ್ವವಾಗಿ ಉಳಿದಿದೆ. ಅದರಲ್ಲೂ ಹಳ್ಳಿಗಳಲ್ಲಿ ಮತ್ತು ದೂರದ ಹೊಲಗಳಲ್ಲಿ ಯಾವುದೇ ಆಧುನಿಕ ಉಪಕರಣಗಳಲ್ಲದೆ ಸೆಟೆ ತೆಗೆಯುವುದು ಒಂದು ಸವಾಲು. ನಾವು ಬಳಸಬಹುದಾದಂತ ವಿಧಾನಗಳು ಜಾನುವಾರುವಿನ ಸ್ವಭಾವ ಮತ್ತು ಅವುಗಳನ್ನು ಪ್ರತಿಬಂಧಿಸಲು ಸಿಗಬಹುದಾದ ಅನುಕೂಲಗಳ ಮೇಲೆ ಅವಲಂಬಿತವಾಗಿರುತ್ತದೆ.

ಸೆಟೆಯು ಅಂಗಾತೀತವಾಗಿ ಹಸು ಮತ್ತು ಹೋರಿಗಳೆರಡರಲ್ಲೂ ಕಂಡುಬರುತ್ತದೆ (ತ್ಯಾಗಿ ಮತ್ತು ಕೃಷ್ಣಮೂರ್ತಿ, 1976). ಈ ಬೇನೆಯು ಎತ್ತುಗಳಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಏಕೆಂದರೆ, ಅವುಗಳನ್ನು ಹೊಲಗಳಲ್ಲಿ ಉಳಮೆಗೆ ಮತ್ತು ಎತ್ತಿನಗಾಡಿ ಎಳೆಯುವುದಕ್ಕೆ ಬಳಸಲಾಗುವುದು (ಪಿಲ್ಲೈ, 1944). ಭಾಸ್ಕರ್ ಸಿಂಗ್ (1979) ಅವರ ಅಧ್ಯಯನದ ಪ್ರಕಾರ ಸೆಟೆಯು ಹೋರಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹಾಲುಕರಿಯುವ ದನಗಳಲ್ಲಿ, 5-6 ವರ್ಷದ ದನಗಳಲ್ಲಿ ಮತ್ತು ಚಳಗಾಲದ ಸಮಯದಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಮಂಡಿಕೀಲಿನೊಳಗೆ ಅಯೋಡಿನ್ ಸೂಜಿಮದ್ದನ್ನು ಕೊಡುವುದು ಮತ್ತು ಶಸ್ತ್ರಚಿಕಿತ್ಸೆ ಮೂಲಕ ಮಂಡಿಚಿಪ್ಪಿನ ಅಸ್ತಿಬಂಧಕವನ್ನು ಕತ್ತರಿಸುವುದು ಸೆಟೆಗಾಲು ರೋಗಕ್ಕೆ ಬಳಸುವ ಸಾಮಾನ್ಯವಾದ ಚಿಕಿತ್ಸಾಕ್ರಮಗಳು. ಆದರೆ ಮಂಡಿಕೀಲಿನೊಳಗೆ ಅಯೋಡಿನ್ ಸೂಜಿಮದ್ದನ್ನು ಕೊಡುವುದರಿಂದ ಕಾಲಿನಲ್ಲಿ ಕ್ಷೀಣತೆಯುಂಟಾಗುತ್ತದೆ (ತ್ಯಾಗಿ ಮತ್ತು ಸಹ ಕೆಲಸಗಾರರು 1972). ಧಿಲ್ಲಾನ್ ಮತ್ತು ಸಹ ಕೆಲಸಗಾರರು (2009) ಸೆಟೆಗಾಲು ರೋಗದಿಂದ ಬಳಲುತ್ತಿದ್ದ 6 ಎಮ್ಮೆಗಳಿಗೆ ಅಯೋಡಿನ್ ಸೂಜಿಮದ್ದನ್ನು ಮಂಡಿಚಿಪ್ಪಿನ ಕೀಲಿನೊಳಗೆ ಕೊಡುವುದರ ಮೂಲಕ ಯಶಸ್ವಿಯಾಗಿ ಚಿಕಿತ್ಸೆಯನ್ನು ನೀಡಿದ್ದಾರೆ.

ಅಧ್ಯಯನದ ವಿಧಾನಗಳು

ಮೊದಲನೆಯ ಹಂತ

ದನಗಳಲ್ಲಿ ಸೆಟೆಗಾಲು ರೋಗದ ಘಟನೆಗಳ ಅಧ್ಯಯನ

1. 5 ವರ್ಷಗಳಲ್ಲಿ (2005-06 ರಿಂದ 2009-10ರ ವರಗೆ) ಜಾನುವಾರು ಬೋಧನಾ ಸಂಕೀರ್ಣ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರದಲ್ಲಿ ದಾಖಲಾದ ರೋಗಗ್ರಸ್ತ ಜಾನುವಾರುಗಳ ಮಾಹಿತಿಯನ್ನು ಪರಿಶೀಲಿಸಿ, ದನ ಮತ್ತು ಎಮ್ಮೆಗಳಲ್ಲಿ ಸೆಟಗಾಲು ರೋಗದ ಘಟನೆಗಳನ್ನು ಅಧ್ಯಯನ ಮಾಡಲಾಗಿದೆ.

2. 5 ವರ್ಷಗಳಲ್ಲಿ (2005 ರಿಂದ 2010ರ ವರಗೆ) ಈಶಾನ್ಯ ಕರ್ನಾಟಕದ ಜಿಲ್ಲೆಗಳ ಪಶುಆಸ್ಪತ್ರೆಗಳಲ್ಲಿ ದಾಖಲಾದ ರೋಗಗ್ರಸ್ತ ಜಾನುವಾರುಗಳ ಮಾಹಿತಿಯನ್ನು ಪರಿಶೀಲಿಸಿ, ದನ ಮತ್ತು ಎಮ್ಮೆಗಳಲ್ಲಿ ಸೆಟಗಾಲು ರೋಗದ ಘಟನೆಗಳನ್ನು ಅಧ್ಯಯನ ಮಾಡಲಾಗಿದೆ.

ಎರಡನೆಯ ಹಂತ

ಶಸ್ತ್ರಚಿಕಿತ್ಸಾ ಅಧ್ಯಯನ :

24 ಸೆಟೆಗಾಲು ರೋಗಗ್ರಸ್ತ ಜಾನುವಾರುಗಳನ್ನು ಅಧ್ಯಯನ ಮಾಡಲಾಗಿದೆ, ಇವುಗಳಲ್ಲಿ 12 ಎಮ್ಮೆಗಳು, 6 ಹಸುಗಳು ಮತ್ತು 6 ಎತ್ತುಗಳು (ಪಟ್ಟಿ 1). ಈ ಜಾನುವಾರುಗಳನ್ನು ವಿವಿಧ ಶಸ್ತ್ರಚಿಕಿತ್ಸಾ ಕ್ರಮಗಳಿಗೆ ಒಳಪಡಿಸಲಾಗಿದೆ. ಇದರಿಂದ ಹಳ್ಳಿಗಳಲ್ಲಿ ಬಯಲಿನಲ್ಲಿ ಬಳಸಬಹುದಾದಂತ ಮತ್ತು ಕಡಿಮೆ ತೊಡಕುಗಳನ್ನುಂಟುಮಾಡ ಬಹುದಾದಂತ ಶಸ್ತ್ರಚಿಕಿತ್ಸಾ ಕ್ರಮವನ್ನು ವಿನ್ಯಾಸಗೊಳಿಸಬಹುದು. ಈ ಜಾನುವಾರುಗಳಿಗೆ ಯಾದೃಚ್ಛಿಕವಾಗಿ 4 ಶಸ್ತ್ರಚಿಕಿತ್ಸಾ ವಿಧಾನಗಳನ್ನು ನಿರ್ದಿಷ್ಟಗೊಳಿಸಲಾಯಿತು. ಮೊದಲ ಗುಂಪಿನಲ್ಲಿ 6 ಎಮ್ಮೆಗಳಿದ್ದು, ಇವುಗಳನ್ನು ಮಲಗಿಸಿ ತೆರೆದಗಾಯ ಮಾಡಿ ಸೆಟೆತೆಗೆಯಲಾಯಿತು (ಚಿತ್ರ 1). ಎರಡನೆಯ ಗುಂಪಿನಲ್ಲಿ 6 ಹಸುಗಳಿದ್ದು, ಇವುಗಳನ್ನು ಮಲಗಿಸಿ ಸಣ್ಣ ಇರಿತದಿಂದ ಸೆಟೆತೆಗೆಯಲಾಯಿತು (ಚಿತ್ರ 2). ಮೂರನೆಯ ಗುಂಪಿನಲ್ಲಿ 6 ಎತ್ತುಗಳಿದ್ದು, ಇವುಗಳನ್ನು ನಿಲ್ಲಿಸಿ ತೆರೆದಗಾಯ ಮಾಡಿ ಸೆಟೆತೆಗೆಯಲಾಯಿತು (ಚಿತ್ರ 3) ಮತ್ತು ನಾಲ್ಕನೇ ಗುಂಪಿನಲ್ಲಿ 6 ಎಮ್ಮೆಗಳಿದ್ದು, ಇವುಗಳನ್ನು ನಿಲ್ಲಿಸಿ ಸಣ್ಣ ಇರಿತದಿಂದ ಸೆಟೆತೆಗೆಯಲಾಯಿತು (ಚಿತ್ರ 4).

ಪಟ್ಟಿ 1: ಅಧ್ಯಯನದ ತಾಂತ್ರಿಕ ವಿವರ

ಕ್ರಮ. ಸಂ.	ಗುಂಪುಗಳು	ದನಗಳ ಸಂಖ್ಯೆ	ಶಸ್ತ್ರಚಿಕಿತ್ಸಾ ವಿಧಾನಗಳು
1.	I (ಎಮ್ಮೆಗಳು)	06	ಮಲಗಿಸಿ ತೆರೆದಗಾಯ ಮಾಡಿ ಸೆಟೆತೆಗೆಯುವ ವಿಧಾನ
2.	II (ಹಸುಗಳು)	06	ಮಲಗಿಸಿ ಸಣ್ಣ ಇರಿತದಿಂದ ಸೆಟೆತೆಗೆಯುವ ವಿಧಾನ
3.	III (ಎತ್ತುಗಳು)	06	ನಿಲ್ಲಿಸಿ ತೆರೆದಗಾಯ ಮಾಡಿ ಸೆಟೆತೆಗೆಯುವ ವಿಧಾನ
4.	IV (ಎಮ್ಮೆಗಳು)	06	ನಿಲ್ಲಿಸಿ ಸಣ್ಣ ಇರಿತದಿಂದ ಸೆಟೆತೆಗೆಯುವ ವಿಧಾನ

ದನ ಮತ್ತು ಎಮ್ಮೆಗಳಲ್ಲಿ ಸೆಟೆಗಾಲುರೋಗಕ್ಕೆ ಚಿಕಿತ್ಸೆ

ಅ. ಶಸ್ತ್ರಚಿಕಿತ್ಸೆಗಾಗಿ ಪೂರ್ವಸಿದ್ಧತೆ

ದನ ಮತ್ತು ಎಮ್ಮೆಗಳನ್ನು ಸಮಗ್ರವಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗುತ್ತದೆ. ಇದರಿಂದ, ಕುಂಟುತನದ ತೀವ್ರತೆಯನ್ನು ಪರಿಶೀಲಿಸಬಹುದು ಮತ್ತು ಇದನ್ನು ಛಾಯಗ್ರಹಣದ ಮೂಲಕ ಸೆರೆಹಿಡಿಯಲಾಗುತ್ತದೆ. ಶಸ್ತ್ರಚಿಕಿತ್ಸೆಮಾಡುವ 3 ತಾಸುಗಳ ಮೊದಲು, ಪ್ರತಿಜೀವಕ ಔಷಧಿಯನ್ನು (ಸ್ಟ್ರೆಪ್ಟೊಪೆನ್ಸಿಲಿನ್ 2.5 ಗ್ರಾಮ್) ಸ್ನಾಯುವಿನೊಳಗೆ ಸೂಜಿಮದ್ದು ಕೊಡಲಾಗುತ್ತದೆ. ಶಸ್ತ್ರಚಿಕಿತ್ಸೆ ಮಾಡುವ ಜಾಗ ಮತ್ತು ಉಪಕರಣಗಳನ್ನು ಶುಚಿಮಾಡಿ ಸಿದ್ಧಪಡಿಸಲಾಗುತ್ತದೆ.

ಆ. ಅರವಳಿಕೆ ವಿಧಾನ: ಸ್ಥಾನಿಕ ಅರವಳಿಕೆ ವಿಧಾನವನ್ನು ಉಪಯೋಗಿಸಲಾಗಿದೆ. ಇದಕ್ಕೆ 2% ಲಿಗ್ನೊಕೇನ್ ಹೌಡ್ರೊಕ್ಲೊರೈಡ್ ಸೂಜಿಮದ್ದನ್ನು ಚರ್ಮದ ಕೆಳಗೆ ಮತ್ತು ಮಂಡಿಚಿಪ್ಪಿನ ಮಧ್ಯ ಮತ್ತು ಒಳ ಅಸ್ತಿಬಂಧಕಗಳ ನಡುವೆ ಒಳಹರಡಿಸಲಾಗುವುದು.



ಚಿತ್ರ 1: ಮೊದಲನೆಯ ಗುಂಪಿನಲ್ಲಿ ಮಲಗಿಸಿ ತೆರೆದಗಾಯ ಮಾಡಿ ಸೆಟೆತೆಗೆಯುವ ವಿಧಾನ.

ಚಿತ್ರ 2: ಎರಡನೆಯ ಗುಂಪಿನಲ್ಲಿ ಮಲಗಿಸಿ ಸಣ್ಣ ಇರಿತದಿಂದ ಸೆಟೆತೆಗೆಯುವ ವಿಧಾನ. ಇದಕ್ಕೆ ಬಿ.ಪಿ ಬ್ಲೇಡನ್ನು ಉಪಯೋಗಿಸಲಾಗಿದೆ

ಚಿತ್ರ 3: ಮೂರನೇ ಗುಂಪಿನಲ್ಲಿ ನಿಲ್ಲಿಸಿ ತೆರೆದಗಾಯ ಮಾಡಿ ಸೆಟೆತೆಗೆಯುವ ವಿಧಾನ.

ಚಿತ್ರ 4: ನಾಲ್ಕನೇ ಗುಂಪಿನಲ್ಲಿ ನಿಲ್ಲಿಸಿ ಸಣ್ಣ ಇರಿತದಿಂದ ಸೆಟೆತೆಗೆಯುವ ವಿಧಾನ. ಇದಕ್ಕೆ ಡೊಂಕಾದ ಸ್ಕಾಲ್ಪಲನ್ನು ಉಪಯೋಗಿಸಲಾಗಿದೆ.

ಇ. ಶಸ್ತ್ರಚಿಕಿತ್ಸಾ ವಿಧಾನ :– ಮೊದಲನೆಯ ಮತ್ತು ಎರಡನೆಯ ಗುಂಪಿನ ಜಾನುವಾರುಗಳನ್ನು ಪಕ್ಕಕ್ಕೆ ಮಲಗಿಸಿ ರೋಗಗ್ರಸ್ತ ಕಾಲು ಮೇಲ್ಭಾಗಕ್ಕೆ ಬರುವಂತೆ ಅಗ್ಗದಿಂದ ಕಟ್ಟಿ ಪ್ರತಿಬಂಧಿಸಲಾಗುತ್ತದೆ (ಚಿತ್ರ 7). ಮೂರನೇ ಮತ್ತು ನಾಲ್ಕನೇ ಗುಂಪಿನ ಜಾನುವಾರುಗಳನ್ನು ನಿಲ್ಲಿಸಿ ಪ್ರತಿಬಂಧಿಸಲಾಗುತ್ತದೆ. ಪಶು ಆಸ್ಪತ್ರೆಗಳಲ್ಲಿ ಟ್ರೇವಿಸನ್ನು ಬಳಸಬಹುದು (ಚಿತ್ರ 8). ಹಳ್ಳಿಗಳಲ್ಲಿ ಜಾನುವಾರುಗಳನ್ನು ಎತ್ತಿನ ಗಾಡಿಗೆ ಅಥವಾ ಟ್ರಾಕ್ಟರ್‌ಗೆ (ಚಿತ್ರ 9) ಅಥವಾ ಎರಡು ಮರಗಳಿಗೆ ಕಟ್ಟಿ ಪ್ರತಿಬಂಧಿಸಬಹುದು (ಚಿತ್ರ 10). ಮಲಗಿಸಿ ಸಣ್ಣ ಹಿರಿತದಿಂದ ಸೆಟೆತೆಗೆಯಲು ಬಿ.ಪಿ. ಬ್ಲೇಡ್ ಸಂಖ್ಯೆ 11 ಬಳಸಲಾಗುತ್ತದೆ (ಚಿತ್ರ 5) ಮತ್ತು ನಿಲ್ಲಿಸಿ ಸಣ್ಣಹಿರಿತದಿಂದ ಸೆಟೆತೆಗೆಯಲು ಡೊಂಕಾದ ಸ್ಕಾಲ್ಪಲ್ ಬಳಸಲಾಗುತ್ತದೆ (ಚಿತ್ರ 6). ನಂತರ ಸಣ್ಣಗಾಯವನ್ನು ಮ್ಯಾಟ್ರಸ್ ವಿಧಾನದಲ್ಲಿ ಹೊಲಿಗೆ ಹಾಕಲಾಗುತ್ತದೆ.

ಈ. ಶಸ್ತ್ರಚಿಕಿತ್ಸೆ ನಂತರ ಉಪಚಾರ :– ತೆರೆದಗಾಯ ಮಾಡಿ ಸೆಟೆತೆಗೆದ ಜಾನುವಾರುಗಳಲ್ಲಿ, ಒಳ ಮಂಡಿಚಿಪ್ಪಿನ ಅಸ್ತಿಬಂಧಕವನ್ನು ದೊಡ್ಡಗಾಯದ ಮೂಲಕ ತೆರೆದು ಕತ್ತರಿಸಲಾಗುತ್ತದೆ. ಈ ಜಾನುವಾರುಗಳನ್ನು 1 ರಿಂದ 2 ದಿನಗಳ ಕಾಲ ವೀಕ್ಷಣೆಯಲ್ಲಿಟ್ಟು 7 ದಿನಗಳ ಕಾಲ ಔಷಧೋಪಚಾರ ಮಾಡಲಾಗುತ್ತದೆ. ಶಸ್ತ್ರಚಿಕಿತ್ಸೆ ಮಾಡಿದ ಎಲ್ಲಾ ಗುಂಪಿನ ಜಾನುವಾರುಗಳಿಗೆ ಪ್ರತಿಜೀವಕ (ಸ್ಟ್ರೆಪ್ಟೊಪೆನ್ಸಿಲಿನ್ 2.5 ಗ್ರಾಮ್) ಮತ್ತು ನೋವುನಿವಾರಕ ಔಷಧಿಗಳನ್ನು (ಮೆಲಾಕ್ಸಿಕ್ಯಾಮ್ 0.2 ಮಿಲಿ ಗ್ರಾಮ್/ ಕೆ.ಜಿ ದೇಹದ ತೂಕ) ಸ್ನಾಯುವಿನೊಳಗೆ ಸೂಜಿಮದ್ದು ಕೊಡಲಾಗುತ್ತದೆ.



ಚಿತ್ರ 5: ಬಿ.ಪಿ ಬ್ಲೇಡ್ ನಂ.11.



ಚಿತ್ರ 6: ಡೊಂಕಾದ ಸ್ಕಾಲ್ಪಲ್

ಚಿತ್ರ 7: ಮೊದಲನೇ ಮತ್ತು ಎರಡನೇ ಗುಂಪಿನ ದನಗಳನ್ನು ಮಲಗಿಸಿ ಪ್ರತಿಬಂಧಿಸುವ ವಿಧಾನ.

ಚಿತ್ರ 8: ಟ್ರೇವಿಸ್‌ನಲ್ಲಿ ನಿಲ್ಲಿಸಿ ಪ್ರತಿಬಂಧಿಸುವ ವಿಧಾನ.

ಚಿತ್ರ 9: ಹಳ್ಳಿಗಳಲ್ಲಿ ಟ್ರಾಕ್ಟರ್‌ಗೆ ಕಟ್ಟಿ ನಿಲ್ಲಿಸಿ ಪ್ರತಿಬಂಧಿಸುವ ವಿಧಾನ.

ಚಿತ್ರ 10: ಹಳ್ಳಿಗಳಲ್ಲಿ ಎರಡು ಮರಗಳ ಕಾಂಡಗಳಿಗೆ ಕಟ್ಟಿ ನಿಲ್ಲಿಸಿ ಪ್ರತಿಬಂಧಿಸುವ ವಿಧಾನ. ಚಿತ್ರ 10: ಹಳ್ಳಿಗಳಲ್ಲಿ ಎರಡು ಮರಗಳ ಕಾಂಡಗಳಿಗೆ ಕಟ್ಟಿ ನಿಲ್ಲಿಸಿ ಪ್ರತಿಬಂಧಿಸುವ ವಿಧಾನ.

ಅಧ್ಯಯನದ ಫಲಿತಾಂಶ ಮತ್ತು ಚರ್ಚೆ:– ಈ ಅಧ್ಯಯನವನ್ನು ಎರಡು ಅಂತಗಳಲ್ಲಿ ಮಾಡಲಾಗಿದೆ. ಮೊದಲನೆಯ ಹಂತದಲ್ಲಿ, ಜಾನುವಾರು ಬೋಧನಾ ಸಂಕೀರ್ಣ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರದಲ್ಲಿ 5 ವರ್ಷಗಳಲ್ಲಿ (2005–06 ರಿಂದ 2009–10 ರ ವರೆಗೆ) ದಾಖಲಾದ ರೋಗಗ್ರಸ್ತ ಜಾನುವಾರುಗಳ ಮಾಹಿತಿಯನ್ನು ಪರಿಶೀಲಿಸಿ, ದನಗಳಲ್ಲಿ ಸೆಟೆಗಾಲು ರೋಗದ ಘಟನೆಗಳನ್ನು ಅಧ್ಯಯನ ಮಾಡಲಾಗಿದೆ (ಪಟ್ಟಿ 2). ಇದರ ಪ್ರಕಾರ 2201 ಜಾನುವಾರುಗಳು ಶಸ್ತ್ರಚಿಕಿತ್ಸಾ ಪ್ರಕ್ರಿಯೆಗಳಿಗೆ ದಾಖಲಾಗಿರುತ್ತವೆ. ಇವುಗಳಲ್ಲಿ 34 ದನಗಳಲ್ಲಿ ಸೆಟೆಗಾಲು ರೋಗ ಕಂಡುಬಂದಿರುತ್ತದೆ. ಒಟ್ಟಾರೆ 5 ವರ್ಷಗಳಲ್ಲಿ (2005–06 ರಿಂದ 2009–10 ರ ವರೆಗೆ) ಜಾನುವಾರು ಬೋಧನಾ ಸಂಕೀರ್ಣ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರದಲ್ಲಿ ಕಂಡುಬಂದ ಸೆಟೆಗಾಲು ರೋಗದ ಘಟನೆಗಳ ಶೇಕಡಾವಾರು 1.55%.

ಹಾಗೆಯೇ, 5 ವರ್ಷಗಳಲ್ಲಿ (2005 ರಿಂದ 2010 ರ ವರೆಗೆ) ಈಶಾನ್ಯ ಕರ್ನಾಟಕದ ಜಿಲ್ಲೆಗಳ ಪಶುಆಸ್ಪತ್ರೆಗಳಲ್ಲಿ ದಾಖಲಾದ ರೋಗಗ್ರಸ್ತ ಜಾನುವಾರುಗಳ ಮಾಹಿತಿಯನ್ನು ಪರಿಶೀಲಿಸಿ, ದನಗಳಲ್ಲಿ ಸೆಟೆಗಾಲು ರೋಗದ ಘಟನೆಗಳನ್ನು ಅಧ್ಯಯನ ಮಾಡಲಾಗಿದೆ (ಪಟ್ಟಿ 3). ಇದರ ಪ್ರಕಾರ 59187 ಜಾನುವಾರುಗಳು ಚಿಕಿತ್ಸಾ ಪ್ರಕ್ರಿಯೆಗಳಿಗೆ ದಾಖಲಾಗಿರುತ್ತವೆ. ಇವುಗಳಲ್ಲಿ 805 ದನಗಳಲ್ಲಿ ಸೆಟೆಗಾಲು ರೋಗ ಕಂಡುಬಂದಿರುತ್ತದೆ. ಒಟ್ಟಾರೆ 5 ವರ್ಷಗಳಲ್ಲಿ (2005 ರಿಂದ 2010 ರ ವರೆಗೆ) ಈಶಾನ್ಯ ಕರ್ನಾಟಕ ಜಿಲ್ಲೆಗಳ ಪಶುಆಸ್ಪತ್ರೆಗಳಲ್ಲಿ ಕಂಡುಬಂದ ಸೆಟೆಗಾಲು ರೋಗದ ಘಟನೆಗಳ ಶೇಕಡಾವಾರು 1.36%.

ಪಟ್ಟಿ 2: ಜಾನುವಾರು ಬೋಧನಾ ಸಂಕೀರ್ಣ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರದಲ್ಲಿ 5 ವರ್ಷಗಳಲ್ಲಿ (2005–06 ರಿಂದ 2009–10 ರ ವರೆಗೆ) ದಾಖಲಾದ ರೋಗಗ್ರಸ್ತ ಜಾನುವಾರುಗಳ ಮಾಹಿತಿ.

ವರ್ಷ	ಶಸ್ತ್ರಚಿಕಿತ್ಸಾ ಪ್ರಕ್ರಿಯೆಗಳಿಗೆ ದಾಖಲಾದ ದನಗಳ ಸಂಖ್ಯೆ	ಸೆಟೆಗಾಲು ರೋಗದಿಂದ ದಾಖಲಾದ ದನಗಳ ಸಂಖ್ಯೆ	ಘಟನೆಗಳ ಶೇಕಡಾವಾರು (%)
2005–06	462	04	0.87
2006–07	413	05	1.21
2007–08	378	07	1.85
2008–09	464	11	2.37
2009–10	484	07	1.45
ಒಟ್ಟು	**2201**	**34**	**1.55**

ಜಾನುವಾರು ಬೋಧನಾ ಸಂಕೀರ್ಣ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರದಲ್ಲಿ ಸೆಟೆಗಾಲು ರೋಗದ ಘಟನೆಗಳ ಶೇಕಡಾವಾರನ್ನು ಶಸ್ತ್ರಚಿಕಿತ್ಸಾ ಪ್ರಕ್ರಿಯೆಗಳಿಗೆ ದಾಖಲಾದ ಜಾನುವಾರುಗಳಲ್ಲಿ ಅಧ್ಯಯನ ಮಾಡಲಾಗಿದೆ ಮತ್ತು ಈಶಾನ್ಯ ಕರ್ನಾಟಕ ಜಿಲ್ಲೆಗಳ ಪಶುಆಸ್ಪತ್ರೆಗಳಲ್ಲಿ ಸೆಟೆಗಾಲು ರೋಗದ ಘಟನೆಗಳ ಶೇಕಡಾವಾರನ್ನು ಚಿಕಿತ್ಸಾ ಪ್ರಕ್ರಿಯೆಗಳಿಗೆ ದಾಖಲಾದ ಜಾನುವಾರುಗಳಲ್ಲಿ ಅಧ್ಯಯನ ಮಾಡಲಾಗಿದೆ.

ಪಟ್ಟಿ 3: 5 ವರ್ಷಗಳಲ್ಲಿ (2005 ರಿಂದ 2010 ರ ವರೆಗೆ) ಈಶಾನ್ಯ ಕರ್ನಾಟಕದ ಜಿಲ್ಲೆಗಳ ಪಶುಆಸ್ಪತ್ರೆಗಳಲ್ಲಿ ದಾಖಲಾದ ರೋಗಗ್ರಸ್ತ ಜಾನುವಾರುಗಳ ಮಾಹಿತಿ.

ಆಸ್ಪತ್ರೆಗಳು	ಚಿಕಿತ್ಸಾ ಪ್ರಕ್ರಿಯೆಗಳಿಗೆ ದಾಖಲಾದ ದನಗಳ ಸಂಖ್ಯೆ	ಸೆಟೆಗಾಲು ರೋಗದಿಂದ ದಾಖಲಾದ ದನಗಳ ಸಂಖ್ಯೆ	ಘಟನೆಗಳ ಶೇಕಡಾವಾರು (%)
ಪಶು ಆಸ್ಪತ್ರೆ, ಬೀದರ	10,139	277	2.73
ಪಶು ಆಸ್ಪತ್ರೆ, ಗುಲಬರ್ಗ	9,171	114	1.24
ಪಶು ಆಸ್ಪತ್ರೆ, ರಾಯಚೂರು	15,346	156	1.02
ಪಶು ಆಸ್ಪತ್ರೆ, ಕೊಪ್ಪಳ	11,268	122	1.08
ಪಶು ಆಸ್ಪತ್ರೆ, ಬಳ್ಳಾರಿ	13,263	136	1.03
ಒಟ್ಟು	**59,187**	**805**	**1.36**

ಈ ಅಂತದ ಅಧ್ಯಯನದಿಂದ ತಿಳಿದುಬರುವುದೇನೆಂದರೆ 100 ಜಾನುವಾರುಗಳಲ್ಲಿ 1 ದನ ಅಥವಾ ಎಮ್ಮೆಯಲ್ಲಿ ಸೆಟೆಗಾಲು ರೋಗ ಕಂಡುಬರುತ್ತದೆ. ಆದ್ದರಿಂದ, ಈ ರೋಗವು ರೈತರಿಗೆ ಆರ್ಥಿಕ ನಷ್ಟವನ್ನುಂಟುಮಾಡುತ್ತದೆ.

ಎರಡನೆಯ ಹಂತದಲ್ಲಿ ಶಸ್ತ್ರಚಿಕಿತ್ಸಾ ಅಧ್ಯಯನ ಮಾಡಲಾಗಿದೆ. 24 ಸೆಟೆಗಾಲು ರೋಗಗ್ರಸ್ತ ದನಗಳ ಅಧ್ಯಯನ ಮಾಡಲಾಗಿದೆ. ಇವುಗಳಲ್ಲಿ 12 ಎಮ್ಮೆಗಳು, 6 ಹಸುಗಳು ಮತ್ತು 6 ಎತ್ತುಗಳು.

ಮೊದಲನೆಯ ಗುಂಪು :– ಈ ಗುಂಪಿನಲ್ಲಿ 6 ಎಮ್ಮೆಗಳಿದ್ದು, ಇವುಗಳಿಗೆ ಮಲಗಿಸಿ ತೆರೆದಗಾಯಮಾಡಿ ಸೆಟೆತೆಗೆಯಲಾಗಿದೆ. ಈ ಶಸ್ತ್ರಚಿಕಿತ್ಸಾ ವಿಧಾನದಿಂದ, 5 ಎಮ್ಮೆಗಳಲ್ಲಿ ಕುಂಟುತನ ಸಂಪೂರ್ಣವಾಗಿ ನಿರ್ಮೂಲನೆಯಾಯಿತು. ಆದರೆ ಒಂದು ಎಮ್ಮೆ ಮಾತ್ರ ಶಸ್ತ್ರಚಿಕಿತ್ಸೆಯಾಗಿ ಅಲವಾರು ದಿನಗಳಾದರೂ ಕುಂಟುತ್ತಿತ್ತು. ಆದ್ದರಿಂದ, ಈ ಎಮ್ಮೆಗೆ ಮತ್ತೊಮ್ಮೆ ಶಸ್ತ್ರಚಿಕಿತ್ಸೆ ಮಾಡಲಾಯಿತು. ಆದರೂ ಗುಣಪಡಿಸಲಾಗಲಿಲ್ಲ. ಏಕಿರಬಹುದೆಂದರೆ ಈ ಎಮ್ಮೆಯೂ ಸುಮಾರು 2 ವರ್ಷಗಳಿಗಿಂತ ಅಧಿಕ ಕಾಲ ಸೆಟೆಗಾಲು ರೋಗದಿಂದ ಬಳಲುತ್ತಿದ್ದು, ಇದರಿಂದ ಅದರ ಮಂಡಿಚಿಪ್ಪಿನ ಒಳ ಅಸ್ತಿಬಂಧಕ ಫೈಬ್ರೋಸಿಸ್ ಆಗಿರಬಹುದು ಅಥವಾ ಅದರ ಮಂಡಿಕೀಲಿಗೆ

ಹಾನಿಯುಂಟಾಗಿರಬಹುದು.

ಶಸ್ತ್ರಚಿಕಿತ್ಸೆಯ ನಾಲ್ಕೈದು ದಿನಗಳ ನಂತರ ಒಂದು ಎಮ್ಮೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿದ ಜಾಗದಲ್ಲಿ ಕೀವಿನ ಗಡ್ಡೆಯುಂಟಾಯಿತು. ಇದನ್ನು ಚಿಕಿತ್ಸೆ ಮೂಲಕ ಸರಿಪಡಿಸಲಾಯಿತು. ದೊಡ್ಡ ಗಾಯದ ಮೂಲಕ ಹಳ್ಳಗಳಲ್ಲಿ ಬಯಲಿನಲ್ಲಿ ಶಸ್ತ್ರಚಿಕಿತ್ಸೆ ಮಾಡಿ ಸೆಟೆತೆಗೆದಿರುವುದು ಇದಕ್ಕೆ ಕಾರಣ.

ಎರಡನೆಯ ಗುಂಪು :– ಈ ಗುಂಪಿನಲ್ಲಿ 6 ಹಸುಗಳಿದ್ದು ಇವುಗಳಿಗೆ ಮಲಗಿಸಿ ಸಣ್ಣ ಇರಿತದಿಂದ ಸೆಟೆತೆಗೆಯಲಾಯಿತು. ಈ ಶಸ್ತ್ರಚಿಕಿತ್ಸಾ ವಿಧಾನದಿಂದ ಎಲ್ಲಾ ಹಸುಗಳಲ್ಲಿ ಕುಂಟುತನವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಯಿತು. ಆದರೆ ಎರಡು ಹಸುಗಳಲ್ಲಿ ಸಣ್ಣ ಹಿರಿತ ಮಾಡುವಾಗ ಬಿ.ಪಿ ಬ್ಲೇಡ್ ಒಳಗಡೆ ಮುರಿದುಹೋಯಿತು. ಒಂದು ಹಸುವಿನಲ್ಲಿ ಬ್ಲೇಡನ್ನು ಯಶಸ್ವಿಯಾಗಿ ಹೊರತೆಗೆಯಲಾಯಿತು. ಇನ್ನೊಂದು ಹಸುವಿನಲ್ಲಿ ಬ್ಲೇಡ್ ತುಂಬಾ ಆಳವಾಗಿ ಮಂಡಿಕೀಲಿನ ಅಂಗಾಂಶದಲ್ಲಿ ತೂರಿಕೊಂಡಿದ್ದರಿಂದ ಹೊರತೆಗೆಯಲಾಗಲಿಲ್ಲ. ಮತ್ತೊಂದು ಹಸುವಿನಲ್ಲಿ ಶಸ್ತ್ರಚಿಕಿತ್ಸೆ ಮಾಡುವಾಗ ತುಂಬಾ ರಕ್ತಸ್ರಾವವಾಯಿತು. ರಕ್ತಸ್ರಾವದ ಜಾಗವನ್ನು ಬಿಗಿಯಾಗಿ ಒತ್ತಿಹಿಡಿದು ಮತ್ತು ರಕ್ತಸ್ರಾವ ನಿಲ್ಲಲು ಸೂಜಿಮದ್ದನ್ನು ನೀಡಿ ರಕ್ತಸ್ರಾವವನ್ನು ನಿಯಂತ್ರಿಸಲಾಯಿತು.

ಮೂರನೆ ಗುಂಪು :– ಈ ಗುಂಪಿನಲ್ಲಿ 6 ಎತ್ತುಗಳಿದ್ದು, ಇವುಗಳಿಗೆ ನಿಲ್ಲಿಸಿ ತೆರೆದ ಗಾಯ ಮಾಡಿ ಸೆಟೆತೆಗೆಯಲಾಯಿತು. ಈ ಶಸ್ತ್ರಚಿಕಿತ್ಸಾ ವಿಧಾನದಿಂದ ಎಲ್ಲಾ ಎತ್ತುಗಳಲ್ಲಿ ಕುಂಟುತನವನ್ನು ನಿರ್ಮೂಲನೆ ಮಾಡಲಾಯಿತು. ಆದರೆ, ಒಂದು ಎತ್ತಿನಲ್ಲಿ ಶಸ್ತ್ರಚಿತ್ಸೆಯ ಒಂದೆರೆಡು ದಿನಗಳ ನಂತರ ಶಸ್ತ್ರಚಿಕಿತ್ಸೆ ಮಾಡಿದ ಜಾಗದಲ್ಲಿ ರಕ್ತ ಹೆಪ್ಪುಗಟ್ಟಿತ್ತು. ಹೆಪಾರಿನ್ ಮುಲಾಮು ಲೇಪಿಸಿ ಮತ್ತು ಕ್ಯಾಲ್ಸಿಯಮ್ ಸೂಜಿಮದ್ದು ನೀಡಿ ಸರಿಪಡಿಸಲಾಯಿತು. ಮತ್ತೊಂದು ಎತ್ತಿನಲ್ಲಿ ಶಸ್ತ್ರಚಿಕಿತ್ಸೆಯ 5 ದಿನಗಳ ನಂತರ ಕೀವಿನ ಗಡ್ಡೆಯುಂಟಾಯಿತು. ಇದನ್ನು ಚಿಕಿತ್ಸೆ ಮೂಲಕ ಸರಿಪಡಿಸಲಾಯಿತು.

ನಾಲ್ಕನೇ ಗುಂಪು :– ಈ ಗುಂಪಿನಲ್ಲಿ 6 ಎಮ್ಮೆಗಳಿದ್ದು, ಇವುಗಳಿಗೆ ನಿಲ್ಲಿಸಿ ಸಣ್ಣ ಇರಿತದಿಂದ ಸೆಟೆತೆಗೆಯಲಾಯಿತು. ಈ ಶಸ್ತ್ರಚಿಕಿತ್ಸಾ ವಿಧಾನದಿಂದ 6 ರಲ್ಲಿ 4 ಎಮ್ಮೆಗಳಲ್ಲಿ ಕುಂಟುತನವನ್ನು ಸಂಪೂರ್ಣವಾಗಿ ನಿರ್ಮೂಲನೆಮಾಡಲಾಯಿತು. ಈ 2 ಎಮ್ಮೆಗಳಿಗೆ ಮತ್ತೆ ಶಸ್ತ್ರಚಿಕಿತ್ಸೆ ಮಾಡಲಾಯಿತು. ಇವುಗಳಲ್ಲಿ ಒಂದಕ್ಕೆ ಶಸ್ತ್ರಚಿಕಿತ್ಸೆ ಯಶಸ್ವಿಯಾಯಿತು. ಇನ್ನೊಂದರಲ್ಲಿ ಯಶಸ್ವಿಯಾಗಲಿಲ್ಲ. ಏಕಿರಬಹುದೆಂದರೆ ಈ ಎಮ್ಮೆಯು ಸುಮಾರು 2 ವರ್ಷಗಳಿಗಿಂತ ಅಧಿಕ ಕಾಲ ಸೆಟೆಗಾಲು ರೋಗದಿಂದ ಬಳಲುತ್ತಿತ್ತು, ಇದರಿಂದ ಅದರ ಮಂಡಿಚಿಪ್ಪಿನ ಒಳ ಅಸ್ತಿಬಂಧಕ ಫೈಬ್ರೋಸಿಸ್ ಆಗಿರಬಹುದು ಮತ್ತು ಚಪ್ಪೆ ಕೀಲಿಗೆ ಹಾನಿಯುಂಟಾಗಿರಬಹುದು. ಮತ್ತೊಂದು ಎಮ್ಮೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಲು ಕಷ್ಟವಾಯಿತು. ಏಕೆಂದರೆ, ಆ ಎಮ್ಮೆಯ ಕೆಚ್ಚಲಗಾತ್ರ ತುಂಬಾ ದೊಡ್ಡದಿದ್ದರಿಂದ ಅದು ಶಸ್ತ್ರಚಿಕಿತ್ಸೆ ಮಾಡುವ ಜಾಗವನ್ನು ಮರೆಮಾಡಿತ್ತು.

ಡೇವಿಡ್ ಮತ್ತು ಸಹ ಕೆಲಸಗಾರರು (2005) ಅವರ ಅಧ್ಯಯನದ ಪ್ರಕಾರ ನಿಲ್ಲಿಸಿ ಸಣ್ಣ ಇರಿತದಿಂದ ಸೆಟೆತೆಗೆಯುವುದು ಉತ್ತಮವಾದ ವಿಧಾನ ಮತ್ತು ಬಿ.ಪಿ ಬ್ಲೇಡ್ ಬದಲು ಡೊಂಕಾದ ಸ್ಕಾಲ್ಪಲ್ ಬಳಸುವುದು ಸುರಕ್ಷಿತವೆಂದು ಪ್ರಸ್ತಾಪಿಸಿದ್ದಾರೆ. ಸೂತ್ರದಾರ್ (2003) ಅವರು 68 ಎಮ್ಮೆಗಳನ್ನು ಮಲಗಿಸಿ ಸಣ್ಣ ಇರಿತದಿಂದ ಸೆಟೆತೆಗೆದಿರುತ್ತಾರೆ ಮತ್ತು 96% ಯಶಸ್ಸನ್ನು ಪಡೆದಿರುತ್ತಾರೆ. ಅಲವಾರು ಸೂಲಿನ ಹಾಲುಕರಿಯುವ ದನಗಳಲ್ಲಿ ಕೆಚ್ಚಲ ಗಾತ್ರ ತುಂಬಾ ದೊಡ್ಡದಿರುತ್ತದೆ. ಆದ್ದರಿಂದ ಈ ದನಗಳನ್ನು ಮಲಗಿಸಿ ಸೆಟೆತೆಗೆಯುವುದು ಅನುಕೂಲಕರವಾಗಿರುತ್ತದೆ. (ಪ್ಯೂಬಿನಿ ಮತ್ತು ಡುಚಾರ್ಮ್, 2004). ಶಿವಪ್ರಕಾಶ್ ಮತ್ತು ಉಸ್ತುರ್ಗೆ (2004) ಇವರು ಸೆಟೆಗಾಲು ರೋಗದಿಂದ ಬಳಲುತ್ತಿದ್ದ 350 ದನಗಳನ್ನು ಅಧ್ಯಯನಮಾಡಿರುತ್ತಾರೆ ಮತ್ತು ಇವರ ಪ್ರಕಾರ ನಿಲ್ಲಿಸಿ ಸಣ್ಣ ಇರಿತದಿಂದ ಸೆಟೆತೆಗೆಯುವುದು ಉತ್ತಮವಾದ ವಿಧಾನ.

ಈ ಅಧ್ಯಯನದಿಂದ ಕಂಡುಬಂದಿರುವುದೇನೆಂದರೆ ಹಳ್ಳಗಳಲ್ಲಿ ಬಯಲಿನಲ್ಲಿ ದೊಡ್ಡಗಾಯದ ಮೂಲಕ ಶಸ್ತ್ರಚಿಕಿತ್ಸೆ ಮಾಡುವುದನ್ನು ಹೋಲಿಸಿದರೆ ಸಣ್ಣ ಇರಿತದಿಂದ ಶಸ್ತ್ರಚಿಕಿತ್ಸೆ ಮಾಡುವುದು ಒಳ್ಳೆಯದು ಹಾಗು ಅನುಕೂಲಕರ. ಏಕೆಂದರೆ, ಸಣ್ಣ ಇರಿತದ ಶಸ್ತ್ರಚಿಕಿತ್ಸೆಯನಂತರ ದನಗಳಲ್ಲಿ ಅಡ್ಡಪರಿಣಾಮಗಳು ಕಡಿಮೆ. ಎಲ್ಲಾ ರೀತಿಯ ಸ್ವಭಾವದ ದನಗಳನ್ನು ಮಲಗಿಸಿ ಸಣ್ಣ ಇರಿತದಿಂದ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಮಾಡಿ ಸೆಟೆತೆಗೆಯಬಹುದು ಮತ್ತು ಈ ವಿಧಾನದಲ್ಲಿ ದನಗಳನ್ನು ಪ್ರತಿಬಂಧಿಸಲು ಹೆಚ್ಚಿನ ಸಹಾಯಕರ ಅವಶ್ಯಕತೆಯಿರುತ್ತದೆ. ಮೃದು ಸ್ವಭಾವದ ದನಗಳಲ್ಲಿ ನಿಲ್ಲಿಸಿ ಸಣ್ಣ ಇರಿತದಿಂದ ಸೆಟೆತೆಗೆಯುವ ವಿಧಾನವನ್ನು ಸುಲಭವಾಗಿ ಬಳಸಬಹುದು. ಕಠಿಣ ಸ್ವಭಾವದ ದನಗಳಲ್ಲಿ ಈ ವಿಧಾನವು ಸ್ವಲ್ಪ ಕಷ್ಟಕರ. ಈ ವಿಧಾನದಲ್ಲಿ ದನಗಳನ್ನು ಪ್ರತಿಬಂಧಿಸಲು ಕಡಿಮೆ ಸಹಾಯಕರ ಅವಶ್ಯಕತೆಯಿರುತ್ತದೆ.

ಗ್ರಂಥಸೂಚಿ

ಭಾಸ್ಕರ್ ಸಿಂಗ್, ಕೆ. 1979. ಕ್ರೊನಿಕ್ ಸೂಡೊಲಗ್ಸೇಶನ್ ಆಫ್ ಪಟೆಲ್ಲಾ ಇನ್ ಬೊವೈನ್ಸ್ ಸಮ್ ಅಬ್ಸರ್ವೇಶನ್. ಇಂಡಿಯನ್ ವೆಟ್. ಆ. 56: 704–706.

ಡೇವಿಡ್, ಡಬ್ಲ್ಯು. ಎ., ಗಾಯ್, ಎಸ್. ಜೆ. ಮತ್ತು ಎಡ್ರಿಯನ್, ಎಸ್., 2005. ಬೊವೈನ್ ಸರ್ಜರಿ ಅನ್ಡ್ ಲೇಮ್ನೆಸ್. 2ನೇ ಎಡಿಶನ್., ಗ್ರಾಫಿಕ್ರಾಪ್ಟ್ ಲಿಮಿಟೆಡ್, ಹಾಂಗ್ ಕಾಂಗ್. ಪುಟ 243–245.

ಧಿಲ್ಲಾನ್, ಕೆ. ಎಸ್., ಜಸ್ಮೇರ್ ಸಿಂಗ್, ಬಿ. ಬಿ. ಎಸ್., ಧಾಲಿವಾಲ್., ರಾಜನಿಶ್ ಶರ್ಮಾ ಮತ್ತು ಪನ್ನು, ಎಮ್. ಎಸ್. 2009. ಪಟೆಲ್ಲಾರ್ ಲಗ್ಸೇಶನ್ ಇನ್ ಬಪೆಲೊ ಅನ್ಡ್ ಇಟ್ಸ್ ಟ್ರೀಟ್ಮೆಂಟ್. ಬಪೆಲೊ ಬಲೆಟಿನ್. 28(4): 168–169.

ಪ್ಯೂಬಿನಿ, ಎಸ್ ಮತ್ತು ಡುಚಾರ್ಮ್, ಎನ್. 2004. ಪಾರ್ಮ್ ಅನಿಮಲ್ ಸರ್ಜರಿ, ಮೊದಲನೇ ಎಡಿಶನ್., ಸಾಂಡರ್ಸ್, ಸೇಂಟ್ ಲೂಯಿಸ್, ಮಿಸ್ಸೌರಿ. ಪುಟ 347–348.

ಪಿಲ್ಲೈ. ಎಮ್. ಆರ್. ಕೆ. 1944. ಎ ನೋಟ್ ಆನ್ ಕ್ರೊನಿಕ್ ಲಗ್ಸೇಶನ್ ಆಫ್ ಪಟೇಲ್ಲ ಅಮಾಂಗ್ ಬೊವೈನ್ಸ್ ವಿತ್ ಸ್ಪೆಶಲ್ ರೆಪೆರೆನ್ಸ್ ಟು ಇಟ್ಸ್ ಎಟಿಯಾಲಜಿ. ಇಂಡಿಯನ್ ವೆಟ್. ಆ. 21: 48–55.

ಶಿವಪ್ರಕಾಶ್, ಬಿ. ವಿ. ಮತ್ತು ಉಸ್ತುರ್ಗೆ, ಎಸ್. ಎಮ್., 2004. ಅಬ್ಸರ್ವೇಶನ್ ಆನ್ ಅಪ್ಪಾರ್ಡ್ ಪಿಕ್ಸೇಶನ್ ಆಫ್ ಪಟೆಲ್ಲಾ ಇನ್ ಕ್ಯಾಟಲ್ ಅನ್ಡ್ ಬಪೇಲೋಸ್: ರಿವೀವ್ ಆಫ್ 350 ಕೇಸಸ್. ಬಪೇಲೊ ಬುಲೆಟಿನ್. 23(3): 58–63.

ಸುತ್ರದಾರ್, ಬಿ. ಸಿ. 2003. ಮೀಡಿಯಲ್ ಪಟೆಲ್ಲಾರ್ ಡಿಸ್ಲಾಟಮಿ ಇನ್ ದ ಬಪೇಲೊ ಆನ್ ಅಪ್ಪಾರ್ಡ್ ಪಟೆಲ್ಲಾರ್ ಪಿಕ್ಸೇಶನ್. ಬಾಂಗ್ಲಾದೆಶ್ ವೆಟೆರಿನೆರಿಯನ್. 20(1): 25–28.

ತ್ಯಾಗಿ, ಆರ್. ಪಿ. ಎಸ್., ಕೃಷ್ಣಮೂರ್ತಿ, ಡಿ ಮತ್ತು ಡಿ.ಸಿ. ಧಬ್ಲಾನಿಯ. 1972. ಅಪ್ಪಾರ್ಡ ಪಿಕ್ಸೇಶನ್ ಆಫ್ ಪಟೆಲ್ಲಾ (ಸ್ಟಿಂಗಾಲ್ಟ್) ಇನ್ ಬೊವೈನ್ಸ್– ಎ ಸರ್ವೆ ರಿಪೋರ್ಟ್. ಇಂಡಿಯನ್ ವೆಟ್. ಆ. 49: 934–941.

ತ್ಯಾಗಿ, ಆರ್. ಪಿ. ಎಸ್. ಮತ್ತು ಕೃಷ್ಣಮೂರ್ತಿ, ಡಿ. 1976. ಅಪ್ಪಾರ್ಡ ಪಿಕ್ಸೇಶನ್ ಆಫ್ ಪಟೆಲ್ಲಾ., ಪಬ್ಲೀಕೇಶನ್ ಡಿವಿಜನ್, ಹರ್ಯಾಣ ಆಗ್ರಿಕಲ್ಚರ್ ಉನಿವರ್ಸಿಟಿ, ಹಿಸ್ಸಾರ್. ಪುಟ 1–88.

ವಿದ್ಯಾರ್ಥಿಗಳಿಗೆ ಪಶುವೈದ್ಯಕೀಯ ಶಿಕ್ಷಣದ ಮಾರ್ಗದರ್ಶನ

ಪ್ರದೀಪ ಕುಮಾರ, ಮಂಜುನಾಥ ಪಾಟೀಲ್, ಎಂ.ಸಿ. ಪಾಟೀಲ್ ಮತ್ತು ಶ್ರೀಕಾಂತ ತಟ್ಟಿ
ಸಹಾಯಕ ಪ್ರಾದ್ಯಾಪಕರು, ಪಶುವೈದ್ಯಕೀಯ ಜನಾರೋಗ್ಯ ಮತ್ತು ಸಮುದಾಯ ರೋಗ ಅಧ್ಯಯನ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ ಬೀದರ – 585 401 ಮಿಂಚಂಚೆ : pdp434@rediffmail.com

ಮಾನವನು ತನ್ನ ಸ್ವಾರ್ಥಕ್ಕಾಗಿ ಕೃಷಿ ಜಮೀನಿನಲ್ಲಿರುವ ಗಿಡ-ಮರಗಳು ಹಾಗೂ ಅರಣ್ಯ ಸಂಪತ್ತನ್ನು ಹಾಳು ಮಾಡಿರುವದು ನೈಜ ಸಂಗತಿ. ಇದರಿಂದ ವಾತಾವರಣದ ವೈಪರಿತ್ಯ ಕಂಡುಬರಿದು, ನೈಸರ್ಗಿಕ ಮೇವಿನ ಕೊರತೆಯಾಗಿ ಪಶು ಸಂಪತ್ತು ಕಡಿಮೆಯಾಗಿದೆ. ಅಲ್ಲದೆ, ವನ್ಯಜೀವಿಗಳಿಂದ ಹಲವಾರು ಮಾರಕ ರೋಗಗಳು ಹರಡುತ್ತಿರುವದು ಕೂಡ ಸಂಶೋಧನೆಯಿಂದ ಕಂಡು ಬಂದಿದೆ. ಹಾಗಾಗಿ, ಚಗತ್ತಿನಾದ್ಯಂತ ಪಶುವೈದ್ಯಕೀಯ ವಿಜ್ಞಾನ ಬಗ್ಗೆ ವಿವಿಧ ಸಂಶೋಧನೆ ಕೈಗೊಳ್ಳುವ ನಿಟ್ಟಿನಲ್ಲಿ ಹಲವಾರು ವಿಶ್ವವಿದ್ಯಾಲಯಗಳು ತರೆಯುತ್ತಿದ್ದು ನಿಜಕ್ಕೂ ಸಂತೋಷದ ವಿಷಯ. ಅದರಲ್ಲೂ ವಿಶೇಷವಾಗಿ ನಮ್ಮ ದೇಶದ ಆರ್ಥಿಕತೆಯು ಮೂಲವಾಗಿರುವ ಕೃಷಿಯಲ್ಲಿ ಪಶು ಸಂಪತ್ತಿನ ಮಹತ್ವ ಬಹು ಪ್ರಮುಖವಾದದ್ದು.

19 ನೇ ಜಾನುವಾರು ಗಣತಿ ಪ್ರಕಾರ, ಭಾರತ ದೇಶವು 190 ಮಿಲಿಯನ್ ಆಕಳು, 108 ಮಿಲಿಯನ್ ಎಮ್ಮೆ, 65 ಮಿಲಿಯನ್ ಕುರಿ, 135 ಮಿಲಿಯನ್ ಆಡು, 10.5 ಮಿಲಿಯನ್ ಹಂದಿ ಹಾಗೂ 729.5 ಮಿಲಿಯನ್ ಕೋಳಿ ಒಳಗೊಂಡಿದೆ. ಇಷೇ ಪ್ರಪಂಚದಲ್ಲಿಯೇ, ಅತೀ ಹೆಚ್ಚಿನ ಆಕಳುಗಳ ಸಂಖ್ಯೆ ಹೊಂದಿದ ನಮ್ಮ ಭಾರತ ದೇಶ ಹಾಲಿನ ಉತ್ಪಾದನೆಯಲ್ಲಿ ಮೊದಲನೆ ಸ್ಥಾನದಲ್ಲಿದೆ. 2014–15 ರಲ್ಲಿ ಅಂಕಿ-ಅಂಶಗಳ ಪ್ರಕಾರ, ಭಾರತ ದೇಶದ ಹಾಲು ಉತ್ಪಾದನೆ 146 ಮಿಲಿಯನ್ ಟನ್ ಆಗಿರುತ್ತದೆ. ವೈಜ್ಞಾನಿಕ ಪದ್ಧತಿಯಲ್ಲಿ ಹೈನುಗಾರಿಕೆ, ಕುರಿ, ಆಡು, ಹಂದಿ, ಕುಮರೆ, ಕತ್ತೆ ಹಾಗೂ ನಾಲ್ಕು ಕಾಕಾಣಿಕೆ ಮಾಡಿದಾಗ ಮಾತ್ರ ನಮ್ಮ ದೇಶದ ಜನಸಂಖ್ಯೆಗೆ ಪಶು ಸಂಗೋಪನಾ ಉತ್ಪನ್ನಗಳಾದ ಹಾಲು, ಮಾಂಸ, ಉಣ್ಣೆ ಹಾಗೂ ಜೆಗಣಿ ನಿಭಾಯಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪಶು ವಿಶ್ವವಿದ್ಯಾಲಯಗಳ ಪಾತ್ರ ಅತ್ಯವಶ್ಯಕವಾಗಿದೆ.

ನಮ್ಮ ದೇಶದಲ್ಲಿ ಪಶು ವಿಶ್ವವಿದ್ಯಾಲಯಗಳು ತ್ರಿ ಮುಖ್ಯ ಕಾರ್ಯಗಳನ್ನು ಮಾಡುತ್ತವೆ. 1. ಭೋಧನೆ, 2. ಸಂಶೋಧನೆ, ತ್ರಿ. ವಿಸ್ತರಣೆ. ಭೋಧನೆಯಲ್ಲಿ ಬಿ.ವಿ.ಎಸ್ಸಿ & ಎ.ಎಚ್, ಎಂ.ವಿ.ಎಸ್ಸಿ ಹಾಗೂ ಪಿ.ಎಚ್‌ಡಿ ಪದವಿಗಳನ್ನು ನೀಡಲಾಗುತ್ತದೆ. ಸಂಶೋಧನೆಯಲ್ಲಿ ನಮ್ಮ ದೇಶದ ಹವಾಮಾನಕ್ಕೆ ಹೊಂದಿಕೊಳ್ಳುವಂತಹ ತಳಿಗಳು, ಹಾಲು ಹಾಗೂ ಕೃಷಿ ಕಾರ್ಯಕ್ಕೆ ಉಪಯೋಗವಾದ ತಳಿಗಳ ಅಭಿವೃದ್ಧಿ, ಜಾನುವಾರುಗಳಿಗೆ ಬರುವ ರೋಗಗಳನ್ನು ಲಸಿಕೆ ಮುಖಾಂತರ ನಿಯಂತ್ರಿಸುವುದು, ಹಾವೋರ್ಗುಗಳ ಬಳಕೆ ಮಾಡಿ ಸಂತಾನೋತ್ಪತ್ತಿಯ ತೊಂದರೆಗಳನ್ನು ನಿವಾರಿಸುವುದು. ವಿಸ್ತರಣೆಗೆ ಸಂಬಂಧಪಟ್ಟಂತೆ, ವಿಶ್ವವಿದ್ಯಾಲಯಗಳಲ್ಲಿ ಆದ ಸಂಶೋಧನೆಗಳನ್ನು ವಿಸ್ತರಣಾ ಘಟಮಟಿಕೆಗಳ ಮುಖಾಂತರ ರೈತಾಪಿ ವರ್ಗದವರಿಗೆ ಮುಟ್ಟಿಸುವುದು. ಇದರಿಂದ ನಮ್ಮ ದೇಶದ ಪಶು ಸಂಗೋಪನಾ ಉತ್ಪನ್ನಗಳಾದ ಹಾಲು, ಮಾಂಸ, ಉಣ್ಣೆ ಹಾಗೂ ಇತರೆ ಉತ್ಪಾದನೆ ಹೆಚ್ಚಾಗಿರುವುದರಿಂದ ಆರ್ಥಿಕವಾಗಿ ರೈತರ ಸಬಲೀಕರಣಕ್ಕೊಂದಿಗೆ ದೇಶವು ಅಭಿವೃದ್ಧಿ ಹೊಂದುತ್ತದೆ. ಹಾಗೆಯೇ, ವಿಸ್ತರಣಾ ಘಟಮಟಿಕೆಗಳಲ್ಲಿ ಪಶು ಆರೋಗ್ಯ ಶಿಬಿರ ಹಾಗೂ ಖನಿಜತಿನ ನಿವಾರಣೆ ಶಿಬಿರದ ಮುಖಾಂತರ ಜಾನುವಾರುಗಳ ರೋಗಗಳನ್ನು ತಹಬಂಗಟ್ಟುವುದು ಮತ್ತು ಸಂತಾನೋತ್ಪತ್ತಿ ತೊಂದರೆಗಳನ್ನು ನಿವಾರಿಸುವುದರಿಂದ ಪ್ರಾಣಿಗಳ ಸಂಖ್ಯೆ ಹೆಚ್ಚುವುದಲ್ಲದೆ, ಹಾಲು ಹಾಗೂ ಇತರೆ ಉತ್ಪನ್ನಗಳು ಹೆಚ್ಚಾಗುತ್ತವೆ.

ಬಿ.ವಿ.ಎಸ್ಸಿ ಮತ್ತು ಎ.ಎಚ್. ಪದವಿ ವಿವರ : ಬಿ.ವಿ.ಎಸ್ಸಿ ಮತ್ತು ಎ.ಎಚ್. ಎಂದರೆ ಪಶು ವಿಜ್ಞಾನ ಹಾಗೂ ಪಶು ಸಂಗೋಪನಾ ಪದವಿ. ಈ ಪದವಿಯು 5 ಶೈಕ್ಷಣಿಕ ವರ್ಷಗಳನ್ನು ಒಳಗೊಂಡಿದ್ದು, ಇದರಲ್ಲಿ 9 ಸೆಮಿಸ್ಟರ್‌ಗಳಿದ್ದು, ಕೊನೆಯ 6 ತಿಂಗಳು ವಿದ್ಯಾರ್ಥಿಗಳು ಕಡ್ಡಾಯವಾಗಿ ಇಂಟರ್ನಶಿಪ್ ಹಾಜರಾಗಬೇಕಾಗುತ್ತದೆ. ಇದಲ್ಲದೆ, ಕಡ್ಡಾಯವಾದ ಶ್ರೇಣಿಯಲ್ಲದ ವಿಷಯಗಳಾದ ಕ್ರೀಡಾ ಶಿಕ್ಷಣ, ರಾಷ್ಟ್ರೀಯ ಸೇವಾ ಯೋಜನೆ, ಕಲಿಕಾ ವೃತ್ತ, ಉದ್ದಿಮೆ ತರಬೇತಿ ಹಾಗೂ ಸ್ಪರ್ಧಾತ್ಮಕ ಪಶು ವೈದ್ಯಕೀಯ ಕೌಶಲ್ಯಗಳನ್ನು ಒಳಗೊಂಡಿರುತ್ತದೆ.

ಪ್ರವೇಶ ಪಡೆಯಲು ಅರ್ಹತೆಗಳು :

1. ಪ್ರವೇಶ ಪಡೆಯುವ ಶೈಕ್ಷಣಿಕ ವರ್ಷದ 31ನೇ ಡಿಸೆಂಬರ್‌ದಂದು

ವಿದ್ಯಾರ್ಥಿಯು 17 ವರ್ಷ ವಯಸ್ಸಿನವನಾಗಿರಬೇಕು.

2. ವಿದ್ಯಾರ್ಥಿಯು 2ನೇ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ ಹಾಗೂ ಆಂಗ್ಲಭಾಷೆಯಲ್ಲಿ ಶೇಕಡಾ 50 ಅಂಕಗಳನ್ನು ಹೊಂದಿರಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 ವಿದ್ಯಾರ್ಥಿಗಳು ಶೇಕಡಾ 40 ಅಂಕಗಳನ್ನು ಹೊಂದಿರಬೇಕು.

3. ಕರ್ನಾಟಕ ಸರಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಬರೆದಿರಬೇಕು. ಭಾರತೀಯ ವೈದ್ಯಕೀಯ ಪರಿಷತ್ತು ಕೋಟಾ/ಕಾಶ್ಮೀರಿ ವಲಸೆಗಾರರಿಗೆ/ಆಂಗ್ಲೊ ಇಂಡಿಯಾ ಪ್ರಜೆಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ಬರೆಯಲು ಅವಶ್ಯಕತೆ ಇರುವುದಿಲ್ಲ.

4. ವಿದ್ಯಾರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕ ಸರ್ಕಾರ ಹೊರಡಿಸುವ ಆದೇಶಗಳಿಗೆ ಬದ್ಧನಾಗಿರಬೇಕು.

5. ರೈತ (ಸ್ವಯಂ ಉಳುಮೆದಾರ) ರ ಪುತ್ರ, ಗ್ರಾಮೀಣ ಕ್ರಪಾಂಕ, ಕನ್ನಡ ಮಾಧ್ಯಮ, ಕ್ರೀಡಾ ಪಟುಗಳು, ಎನ್.ಎಸ್.ಎಸ್. / ಎನ್.ಸಿ.ಸಿ./ಮಾಜಿ ಸೈನಿಕನ ಮಕ್ಕಳು / ಆಂಗ್ಲೋ ಇಂಡಿಯಾ ಪ್ರಜೆ/ ಸ್ಕೌಟ್ಸ್ & ಗೈಡ್ಸ್ / ಅಂಗವಿಕಲರಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಪ್ರವೇಶ ಪ್ರಕ್ರಿಯೆಯಲ್ಲಿ ಸೀಟನ್ನು ಕಾಯ್ದಿರಿಸಲಾಗುತ್ತದೆ.

6. ಕರ್ನಾಟಕ ರಾಜ್ಯದಲ್ಲಿ, ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನಲ್ಲಿ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದೆ. ಬೇರೆ ರಾಜ್ಯದ ವಿದ್ಯಾರ್ಥಿಗಳು ನಮ್ಮ ರಾಜ್ಯದಲ್ಲಿ ಪ್ರವೇಶ ಪಡೆಯಬೇಕಾದರೆ ಭಾರತೀಯ ಪಶು ವೈದ್ಯಕೀಯ ಪರಿಷತ್ತು ನಡೆಸುವ ಪ್ರವೇಶ ಪರೀಕ್ಷೆಯನ್ನು ಬರೆದು, ಸೀಟನ್ನು ತೆಗೆದುಕೊಳ್ಳಬೇಕು. ಈ ಅಭ್ಯರ್ಥಿಗಳಿಗೆ ಶೇ. 15 ರಷ್ಟು ಸೀಟುಗಳನ್ನು ಕಾಯ್ದಿರಿಸಲಾಗಿರುತ್ತದೆ. ಕುರಿತು ಹೆಚ್ಚಿನ ಮಾಹಿತಿಗಾಗಿ, ಉಪಕಾರ್ಯದರ್ಶಿಗಳು, ಭಾರತೀಯ ಪಶು ವೈದ್ಯಕೀಯ ಪರಿಷತ್ತು, ಅಗಸ್ಟ ಕ್ರಾಂತಿ ಭವನ, 'ಎ' ವಿಂಗ್, ರೂ. ನಂ: 288, 2ನೇ ಮಹಡಿ, ಪ್ಲಾಟ ನಂ: 25, ಬಿಕಾಜಿ ಕಾಮ ಸ್ಥಳ, ನವದೆಹಲಿ–110 066 ಇವರನ್ನು ಸಂಪರ್ಕಿಸಬಹುದು.

7. ಅನಿವಾಸಿ ಭಾರತೀಯ/ ಅನಿವಾಸಿ ಭಾರತೀಯರ ಮಕ್ಕಳಿಗೆ ಪ್ರವೇಶ ಪ್ರಕ್ರಿಯೆಯಲ್ಲಿ 5 ಸೀಟನ್ನು ವಿಶೇಷ ಕೋಟಾ ಅಡಿಯಲ್ಲಿ ಕಾಯ್ದಿರಿಸಲಾಗುವುದು. ಅಂತಹ ವಿದ್ಯಾರ್ಥಿಗಳು ನೇರವಾಗಿ ವಿದ್ಯಾಭ್ಯಾಸ ಪದವಿ ಪತ್ರ, ಅನಿವಾಸಿ ಭಾರತೀಯ ಪತ್ರ, ಇತ್ತೀಚಿನ ಪಾಸ್‌ಪೋರ್ಟ ಅಳತೆಯ ಭಾವಚಿತ್ರ ಹಾಗೂ ಇನ್ನಿತರ ದಾಖಲಾತಿಗಳನ್ನು ಕುಲಸಚಿವರ ಕಛೇರಿ, ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿ ನಗರ, ಅಂಚೆ ಪೆಟ್ಟಿಗೆ ಸಂಖ್ಯೆ – 06, ಬೀದರ–585 401 ವಿಳಾಸಕ್ಕೆ ಕಳುಹಿಸಿ ಕೊಡಬಹುದು.

8. ಆಂಗ್ಲೋ ಇಂಡಿಯನ್ನರು ತಮ್ಮ ದಾಖಲಾತಿಗಳನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ ಅವರು ನಿರ್ದೇಶನ ಮಾಡಿದಂತಹ ರಾಯಭಾರಿ ಕಛೇರಿ ಮುಖಾಂತರ ಅರ್ಜಿ ಸಲ್ಲಿಸಬೇಕಾಗುವುದು.

9. ಕರ್ನಾಟಕ ಸರ್ಕಾರದ ಆದೇಶದ ಸಂಖ್ಯೆ: ಎಎಚ್‌ಡಿ 63 ಎಯುಎಂ 03, ಬೆಂಗಳೂರು, ದಿನಾಂಕ: 10.07.2003 ರಂತೆ ಪ್ರತಿ ಪದವಿಗೆ ಅರ್ಹತೆಯುಳ್ಳ ಒಬ್ಬ ವಲಸೆಗಾರ ಕಾಶ್ಮೀರಿ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಅನುವು ಮಾಡಿಕೊಡುವುದು. ಅಂತಹ ವಿದ್ಯಾರ್ಥಿಗಳು ತಮ್ಮ ದಾಖಲಾತಿ ಹಾಗೂ ಪಾಸಪೋರ್ಟ ಅಳತೆಯ ಭಾವಚಿತ್ರದೊಂದಿಗೆ ಅರ್ಜಿಯನ್ನು ನೇರವಾಗಿ ಕುಲಸಚಿವರ ಕಛೇರಿ, ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿ ನಗರ, ಅಂಚೆ ಪೆಟ್ಟಿಗೆ ಸಂಖ್ಯೆ – 06, ಬೀದರ–585 401 ಗೆ ಕಳುಹಿಸಬೇಕು.

ಬಿ.ವಿ. ಎಸ್‌ಸಿ ಪ್ರವೇಶಕ್ಕಾಗಿ ಪ್ರಕ್ರಿಯೆ :

1. ಸಾಮಾನ್ಯ ಹಾಗೂ ಮೀಸಲಾತಿ ಕೋಟಾ : ದ್ವಿತೀಯ ಪಿಯುಸಿ ನಂತರ, ಸಿಇಟಿ ಅಂಕಪಟ್ಟಿಯ ಆಧಾರದ ಮೇಲೆ ವಿದ್ಯಾರ್ಥಿಗಳ ಮೆರಿಟ್ ಲಿಸ್ಟನ್ನು ಮಾಡಲಾಗುವುದು. ಮೆರಿಟ್ ಪ್ರಕಾರವೇ ಸೀಟನ್ನು ನೀಡಲಾಗುವುದು.

2. ಕೃಷಿ ಕೋಟಾದಡಿಯಲ್ಲಿ : ಇದಕ್ಕೆ ಸಂಬಂಧಿಸಿದಂತೆ ರೈತನ ಮಗನಾಗಿದ್ದು, ಆ ರೈತನು ಭೂಮಿಯನ್ನು ಹೊಂದಿರಬೇಕು. ರೈತನ ವಾರ್ಷಿಕ ಆದಾಯವು ಕೃಷಿ / ಪಶು ಸಂಗೋಪನೆ / ಮೀನುಗಾರಿಕೆಯ ಮೂಲ ಉದ್ದಿಮೆಯಾಗಿರುತ್ತದೆ. ಈ ಅಭ್ಯರ್ಥಿಗಳು ಕರ್ನಾಟಕದ ಯಾವುದೇ ಕೃಷಿ/ತೋಟಗಾರಿಕೆ/ಪಶುವೈದ್ಯಕೀಯ/ಮೀನುಗಾರಿಕೆ/ಅರಣ್ಯ/ಗ್ರಹವಿಜ್ಞಾನ ಮಹಾವಿದ್ಯಾಲಯಗಳಲ್ಲಿ ಕೃಷಿ ಪ್ರಾಯೋಗಿಕ ಪರೀಕ್ಷೆ ಬರೆಯಬಹುದು. ಇಂತಹ ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಪರೀಕ್ಷೆ ಮುಖಾಂತರ ಆಯ್ಕೆ ಮಾಡಲಾಗುವುದು.

ಪಶು ಸಂಗೋಪನಾ ಪದವಿಯ ಪಠ್ಯಕ್ರಮವನ್ನು ಮೂಲವಾಗಿ 6 ಭಾಗಗಳಾಗಿ ವಿಂಗಡಿಸಲಾಗಿದೆ.

1. ಮೂಲ ಪಶು ವೈದ್ಯಕೀಯ ವಿಷಯಗಳು (177 ಕ್ರೆಡಿಟಗಳು)

2. ಟ್ರ್ಯಾಕಿಂಗ್ ಕಾರ್ಯಕ್ರಮಗಳು (ಪ್ರತಿ ಎರಡು ಕ್ರೆಡಿಟ್ ಗಂಟೆಗಳುಳ್ಳ ಎರಡು ವಿಷಯಗಳು)

3. ಕಲಿಕೆ ವೃತ್ತ (2 ಚಟುವಟಿಕೆಗಳು)

4. ಉದ್ದಿಮೆಯ ತರಬೇತಿಗಳು (1 ಚಟುವಟಿಕೆ)

5. ಇಂಟರ್ನಶಿಪ್ (6 ತಿಂಗಳು)

6. ಸ್ಪರ್ಧಾತ್ಮಕ ಪಶು ಕೌಶಲ್ಯಗಳು

1. ಮೂಲ ಪಶು ವೈದ್ಯಕೀಯ ವಿಷಯಗಳು (177 ಕ್ರೆಡಿಟಗಳು) :

* ಪಶು ವೈದ್ಯಕೀಯ ಅಂಗ ರಚನಾ ಶಾಸ್ತ್ರ

* ಪಶು ವೈದ್ಯಕೀಯ ಶಾರೀರಿಕ ಹಾಗೂ ಜೀವ ರಸಾಯನ ಶಾಸ್ತ್ರ

* ಪಶು ವೈದ್ಯಕೀಯ ಸಾರ್ವಜನಿಕ ಆರೋಗ್ಯ ಶಾಸ್ತ್ರ

* ಪಶು ವೈದ್ಯಕೀಯ ಆಹಾರ ಶಾಸ್ತ್ರ
* ಪಶು ವೈದ್ಯಕೀಯ ಉತ್ಪಾದನಾ ಶಾಸ್ತ್ರ
* ಪಶು ವೈದ್ಯಕೀಯ ಸಂತಾನೋತ್ಪತ್ತಿ ಹಾಗೂ ಪ್ರಸೂತಿ ಶಾಸ್ತ್ರ
* ಪಶು ವೈದ್ಯಕೀಯ ರೋಗ ಶಾಸ್ತ್ರ
* ಪಶು ವೈದ್ಯಕೀಯ ಔಷಧೀಯ ಹಾಗೂ ವಿಷ ಶಾಸ್ತ್ರ
* ಪಶು ವೈದ್ಯಕೀಯ ಅನುವಂಶಿಕ ಹಾಗೂ ತಳ ಅಭಿವೃದ್ಧಿ ಶಾಸ್ತ್ರ
* ಪಶು ವೈದ್ಯಕೀಯ ಸೂಕ್ಷ್ಮ ಜೀವಾಣು ಶಾಸ್ತ್ರ
* ಪಶು ವೈದ್ಯಕೀಯ ಹಾಗೂ ಪಶು ಸಂಗೋಪನಾ ವಿಸ್ತರಣಾ ವಿಜ್ಞಾನ
* ಪಶು ವೈದ್ಯಕೀಯ ಶಸ್ತ್ರಚಿಕಿತ್ಸೆ ಹಾಗೂ ಕ್ಷ–ಕಿರಣ ಶಾಸ್ತ್ರ
* ಪಶು ವೈದ್ಯಕೀಯ ಪರೋಪಜೀವಿ ಶಾಸ್ತ್ರ

ಅ) ಪ್ರತಿ ಸೆಮಿಸ್ಟರಗೆ ಅನುಗುಣವಾಗಿ ಲಿಖಿತ ಹಾಗೂ ಪ್ರಾಯೋಗಿಕ ವಿಷಯಗಳ ಕ್ರೆಡಿಟ್ ಗಂಟೆಗಳ ವಿವರ ಈ ಕೆಳಗಿನಂತಿದೆ.

ವರ್ಷ	ಸೆಮಿಸ್ಟರ್	ಲಿಖಿತ ವಿಷಯ	ಪ್ರಾಯೋಗಿಕ ವಿಷಯ	ಒಟ್ಟು
ಮೊದಲನೇಯ	I	11	7	18
	II	12	8	20
ಎರಡನೇಯ	III	12	9	21*
	IV	12	9	21*
ಮೂರನೇಯ	V	12	7	19
	VI	13	8	21
ನಾಲ್ಕನೇಯ	VII	10	10	20
	VIII	10	8	18**
ಐದನೇಯ	IX	09	10	19
ಒಟ್ಟು	–	**101**	**76**	**177**

*1 ಕ್ರೆಡಿಟ್ (0+1) – ಜಾನುವಾರುಗಳ ನಿರ್ವಹಣೆ (ಎರಡು ವಿಷಯಗಳು)

**1 ಕ್ರೆಡಿಟ್ (1+0) – ಸಮಾಜದಲ್ಲಿ ಪಶುವೈದ್ಯಾಧಿಕಾರಿ (ಒಂದು ವಿಷಯ)

ಆ) ವಿವಿಧ ಪಶು ಪಶು ವೈದ್ಯಕೀಯ ವಿಭಾಗಗಳಿಗೆ ಅನುಗುಣವಾಗಿ ವಿಷಯಗಳ ವರ್ಗೀಕರಣ :

1.	ಮೂಲ ಪಶು ವೈದ್ಯಕೀಯ ವಿಷಯಗಳು	23+15=38
2	ಉತ್ಪಾದನಾ ವಿಷಯಗಳು	23+15=38
3	ಚಿಕಿತ್ಸಾ ಪೂರ್ವ ವಿಷಯಗಳು	27+14=41
4	ಚಿಕಿತ್ಸೆ ವಿಷಯಗಳು	27+13=40
5	ಪಶು ಚಿಕಿತ್ಸೆ ಕಲಿಕಾ ಸಂಕೀರ್ಣ	0+17=17
6	ಇಂಟರ್ನ್‌ಶಿಪ್ ತರಬೇತಿ ಕಾರ್ಯಕ್ರಮ	6 ತಿಂಗಳು
7	ಕ್ರೆಡಿಟ್ ಗಂಟೆಗಳಲ್ಲದ ಕಡ್ಡಾಯ ವಿಷಯಗಳು	1+2=3
ಒಟ್ಟು 101+76=177 ಮತ್ತು 2x2=4 ಕ್ರೆಡಿಟ್ ಗಂಟೆಗಳಲ್ಲದ ವಿಷಯಗಳು (ಟ್ರ್ಯಾಕಿಂಗ್ ಕಾರ್ಯಕ್ರಮಗಳು)		

2. ಟ್ರ್ಯಾಕಿಂಗ್ ಕಾರ್ಯಕ್ರಮಗಳು :– ಈ ಕಾರ್ಯಕ್ರಮವು, ವಿದ್ಯಾರ್ಥಿಗಳಲ್ಲಿ ಪಶು ವೈದ್ಯಕೀಯ ವೃತ್ತಿಯ ಬಗ್ಗೆ ಹೆಚ್ಚಿನ ಜ್ಞಾನ ಸಂಪಾದಿಸುವುದಕ್ಕೆ ಸ್ವ–ಕಲಿಕೆ ಹಾಗೂ ಅಂತರ್ಜಾಲದ ಮುಖಾಂತರ ಕಲಿಯುದರ ಬಗ್ಗೆ ತಿಳಿಸಿಕೊಡುವುದು. ಈ ದಿಸೆಯಲ್ಲಿ, ಎರಡನೇ ಶೈಕ್ಷಣಿಕ ವರ್ಷದಿಂದ ಐದನೇ ಶೈಕ್ಷಣಿಕ ವರ್ಷದವರೆಗೆ ಡೀನ್, ಪಶು ವೈದ್ಯಕೀಯ ಮಹಾವಿದ್ಯಾಲಯ ಅವರ ಆದೇಶದಂತೆ ಶಿಕ್ಷಕರ ಅಧೀನದಲ್ಲಿ ವಿದ್ಯಾರ್ಥಿಗಳು ಕಲಿಕೆ ಮಾಡಬೇಕಾಗುವುದು. ಕಡ್ಡಾಯವಾಗಿ, ಎರಡು ಕ್ರೆಡಿಟ್‌ಗಳು ಒಂದು ಸೆಮಿಸ್ಟರ್‌ನಲ್ಲಿ ಹಾಗೂ ಇನ್ನೂ ಎರಡು ಕ್ರೆಡಿಟ್‌ಗಳನ್ನು ಇನ್ನೊಂದು ಸೆಮಿಸ್ಟರನಲ್ಲಿ ತೆಗೆದುಕೊಳ್ಳಬೇಕಾಗುವುದು. ವಿದ್ಯಾರ್ಥಿಗಳ ಮೌಲ್ಯ ಮಾಪನವನ್ನು ಗ್ರೇಡಿಂಗ್ ಆಧಾರದ ಮೇಲೆ ಮಾಡಲಾಗುವುದು. ಮೌಲ್ಯಮಾಪನದ ವಿವರ ಈ ಕೆಳಗಿನಂತಿದೆ.

A-ಅತ್ಯುತ್ತಮ

B-ಉತ್ತಮ

C- ಸರಾಸರಿ

D- ಅನುತ್ತೀರ್ಣ

ಟ್ರ್ಯಾಕಿಂಗ್ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.

1. ಬೆಕ್ಕು ಔಷಧಿ ಶಾಸ್ತ್ರ
2. ಅರವಳಿಕೆ ಶಾಸ್ತ್ರ
3. ಕಣ್ಣಿನ ಶಾಸ್ತ್ರ
4. ಚರ್ಮ ವಿಜ್ಞಾನ
5. ಪಶು ವೈದ್ಯಕೀಯ ಪರ್ಯಾಯ ಪಶು ಔಷಧಿ ಶಾಸ್ತ್ರ
6. ಕ್ರೀಡಾ ಜಾನುವಾರುಗಳ ಔಷಧಿ ಶಾಸ್ತ್ರ
7. ಚಿಕಿತ್ಸೆ ಆಹಾರ ವಿಜ್ಞಾನ
8. ನರವ್ಯೂಹ ಶಾಸ್ತ್ರ
9. ಸಣ್ಣ ಪ್ರಾಣಿಗಳ ತುರ್ತು ಚಿಕಿತ್ಸಾ ವಿಷಯ
10. ಮಹಾವಿದ್ಯಾಲಯ / ವಿಶ್ವವಿದ್ಯಾಲಯದ ನಿರ್ಧಾರಕ್ಕೆ ಒಳಪಟ್ಟಿದ್ದು

ಈ ವಿಷಯಗಳು ಕ್ರೆಡಿಟ್‌ಗಳಲ್ಲದ ವಿಷಯಗಳಾದರೂ, ವಿದ್ಯಾರ್ಥಿಗಳ ಪದವಿ ಅಂಕಪಟ್ಟಿಯಲ್ಲಿ ಗ್ರೇಡ್ (ಅತ್ಯುತ್ತಮ/ಉತ್ತಮ/ಸರಾಸರಿ/ಅನುತ್ತೀರ್ಣ) ಎಂದು ಬರೆಯಲಾಗುವುದು.

3. **ಕಲಿಕಾ ವೃತ್ತ** :– ಒಬ್ಬ ವಿದ್ಯಾರ್ಥಿಯು ಬಿ.ವಿ.ಎಸ್‌ಸಿ & ಎ.ಎಚ್ ಪದವಿಯಲ್ಲಿ ಈ ಕೆಳಕಂಡ ಎರಡು ಕಲಿಕಾ ವೃತ್ತದಲ್ಲಿ ದಾಖಲಿಸಬೇಕಾಗುವುದು.

* ಜಾನುವಾರು ಹಾಗೂ ಜೀವನೋಪಾಯ ಕಲಿಕಾ ವೃತ್ತ
* ಕುದುರೆ ಕಲಿಕಾ ವೃತ್ತ
* ನಾಯಿ ಕಲಿಕಾ ವೃತ್ತ
* ರೋಗವನ್ನು ಪತ್ತೆ ಹಚ್ಚುವ ಕಲಿಕಾ ವೃತ್ತ
* ಕಾನೂನು ಹಾಗೂ ಪಶು ವಿಜ್ಞಾನ ಕಲಿಕಾ ವೃತ್ತ
* ಪರ್ಯಾಯ ಪಶು ಉಪಯೋಗ ಕಲಿಕಾ ವೃತ್ತ
* ಪರಿಸರ ಹಾಗೂ ಜಾನುವಾರು ಕಲಿಕಾ ವೃತ್ತ
* ಉತ್ಪಾದನಾ ಪದ್ಧತಿ ಕಲಿಕಾ ವೃತ್ತ
* ಕ್ರೀಡಾ ಪಶು ಕಲಿಕಾ ವೃತ್ತ

4. **ಉದ್ದಿಮೆಯ ತರಬೇತಿಗಳು** :– ವಿದ್ಯಾರ್ಥಿಯು ತಮ್ಮ ಬಿ.ವಿ.ಎಸ್‌ಸಿ ಮತ್ತು ಎ.ಎಚ್ ಪದವಿಯಲ್ಲಿ ಈ ಕೆಳಗಿನ ಯಾವುದಾದರೊಂದು ಉದ್ದಿಮೆಯ ತರಬೇತಿಗಳನ್ನು ಕಡ್ಡಾಯವಾಗಿ ಮುಗಿಸಬೇಕು.

* ಕುರಿ ಸಾಕಾಣಿಕೆ ಹಾಗೂ ಉತ್ಪಾದನೆ
* ಆಡು ಸಾಕಾಣಿಕೆ ಹಾಗೂ ಉತ್ಪಾದನೆ
* ಹಂದಿ ಸಾಕಾಣಿಕೆ ಹಾಗೂ ಉತ್ಪಾದನೆ
* ಮೊಟ್ಟೆ ಹಾಗೂ ಮಾಂಸ ಕೋಳಿ ಸಾಕಾಣಿಕೆ ಹಾಗೂ ಉತ್ಪಾದನೆ
* ಮೀನು ಸಾಕಾಣಿಕೆ ಹಾಗೂ ಉತ್ಪಾದನೆ
* ವೈಜ್ಞಾನಿಕ ಹೈನುಗಾರಿಕೆ
* ಲಸಿಕೆ ಉತ್ಪಾದನೆ
* ಹಾಲಿನ ಉತ್ಪನ್ನಗಳ ತಯಾರಿಕೆ
* ಆಹಾರ ಹಾಗೂ ಹಾಲಿನಲ್ಲಿ ಕಲಬೆರಕೆಯನ್ನು ಪರಿವಿಕ್ಷೀಸುವುದು
* ಪಶು ಆಹಾರ ಉತ್ಪಾದನೆ ಹಾಗೂ ಮಿನರಲ್ ಮಿಶ್ರಣ ತಯಾರಿಕೆ
* ಚಿಕಿತ್ಸಾ ಶೋಧನಾ ಪ್ರಯೋಗಾಲಯ
* ಔಷಧ ಶಾಸ್ತ್ರದಲ್ಲಿ ವಿವಿಧ ಔಷಧಗಳನ್ನು ತಯಾರು ಮಾಡುವುದು
* ಮಾಂಸ ತಯಾರಿಕೆ ಹಾಗೂ ಸಂಸ್ಕರಣೆ
* ಸಾಕು ಪ್ರಾಣಿಗಳ ಸಾಕಾಣಿಕೆ ಹಾಗೂ ಉತ್ಪಾದನೆ

5. **ಇಂಟರ್ನ್‌ಶಿಪ್** :

* ಭಾರತೀಯ ಪಶು ವೈದ್ಯಕೀಯ ಪರಿಷತ್ತು ಪ್ರಕಾರ ವಿದ್ಯಾರ್ಥಿಯು ಐದನೇಯ ಶೈಕ್ಷಣಿಕ ವರ್ಷದ ವಾರ್ಷಿಕ ಪರೀಕ್ಷೆ ಮುಗಿಸಿದ ಮೇಲೆ ಪದವಿ ಪಡೆಯುವುದಕ್ಕೆ ಕಡ್ಡಾಯವಾಗಿ ಆರು ತಿಂಗಳು ಕಾಲ ಇಂಟರ್ನ್‌ಶಿಪ್ ಮಾಡಬೇಕಾಗುತ್ತದೆ.

* ಇಂಟರ್ನ್‌ಶಿಪ್‌ನಲ್ಲಿ ವಿದ್ಯಾರ್ಥಿಯು ಬೆಳಗ್ಗೆ ಅಥವಾ ಸಾಯಂಕಾಲ ಎನ್ನದೆ, ತುರ್ತು ಸಂದರ್ಭದಲ್ಲಿಯೂ ಕೂಡಾ ಜಾನುವಾರುಗಳಿಗೆ ಚಿಕಿತ್ಸೆ ಮಾಡಬೇಕಾಗುವುದು.

* ಇಂಟರ್ನ್‌ಶಿಪ್‌ಗಿಂತ ಮೊದಲು ವಿಶ್ವವಿದ್ಯಾಲಯವು ಆರು ತಿಂಗಳಿಗೆ ಮಾತ್ರ ತಾತ್ಕಾಲಿಕ ಪದವಿ ಪ್ರಮಾಣ ಪತ್ರವನ್ನು ನೀಡುವುದು.

* ತಾತ್ಕಾಲಿಕ ಪದವಿ ಪ್ರಮಾಣ ಪತ್ರದ ಆಧಾರದ ಮೇಲೆ ಭಾರತೀಯ ಪಶು ವೈದ್ಯಕೀಯ ಪರಿಷತ್ತು / ಕರ್ನಾಟಕ ಪಶುವೈದ್ಯಕೀಯ ಪರಿಷತ್ತು ನೋಂದಣಿ ಪ್ರಮಾಣ ಪತ್ರವನ್ನು ನೀಡುವುದು. ತದನಂತರ, ಒಬ್ಬ ವೃತ್ತಿನಿರತ ಪಶು ವೈದ್ಯಾಧಿಕಾರಿ ಅಧೀನದಲ್ಲಿ ವಿದ್ಯಾರ್ಥಿಗಳು ಜಾನುವಾರುಗಳಿಗೆ ಚಿಕಿತ್ಸೆ ನೀಡಲು ಅನುಮತಿ ಪಡೆಯುವುದು.

* ಇಂಟರ್ನ್‌ಶಿಪ್‌ನಲ್ಲಿ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಭತ್ಯೆ ನೀಡುವುದರ ಜೊತೆಗೆ ವಸತಿಯು ಕಲ್ಪಿಸಿಕೊಡಲಾಗುವುದು.

* ಹಾಜರಾತಿ ಕಡ್ಡಾಯವಾಗಿರುವುದರಿಂದ, ಒಬ್ಬ ವಿದ್ಯಾರ್ಥಿಗೆ 6 ತಿಂಗಳಲ್ಲಿ 10 ಸಾಂದರ್ಭಿಕ ರಜೆಗಳು ಮಾತ್ರ ಇರುತ್ತವೆ. ಈ ರಜೆಗಳು ವಿದ್ಯಾರ್ಥಿಗೆ ಇಷ್ಟಬಂದಾಗ ಹಾಕಿಕೊಳ್ಳಲು ಅನುಮತಿ ಇರುವುದಿಲ್ಲ. ಈ ರಜೆಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು ಅವರ ಉನ್ನತ ಅಧಿಕಾರಿಗಳ ನಿರ್ಧಾರದ ಮೇಲೆ ಅವಲಂಬಿತವಾಗಿರುತ್ತದೆ.

* ಇಂಟರ್ನ್‌ಶಿಪ್ ಕಾರ್ಯಕ್ರಮದ ಸಮೀಕ್ಷೆಯನ್ನು ಗಮನಿಸಲು, ಡೀನ್, ಪಶು ವೈದ್ಯಕೀಯ ಮಹಾವಿದ್ಯಾಲಯ ಅವರ ಅಧ್ಯಕ್ಷತೆಯಲ್ಲಿ ಪಶು ವೈದ್ಯಕೀಯ ಚಿಕಿತ್ಸಾ ವಿಭಾಗ ಹಾಗೂ ಜಾನುವಾರು ಅಭಿವೃದ್ಧಿ ವಿಭಾಗ ಮುಖ್ಯಸ್ಥರು ಸದಸ್ಯರಾಗಿರುತ್ತಾರೆ.

* ಹಾಜರಾತಿ ಕೊರತೆ / ಕಾರ್ಯ ಉತ್ತಮವಾಗದಿದ್ದಲ್ಲಿ ವಿದ್ಯಾರ್ಥಿಗೆ ಇಂಟರ್ನ್‌ಶಿಪ್‌ನ್ನು ಎರಡು ತಿಂಗಳು ಕಾಲ ಮತ್ತೆ ಮಾಡಬೇಕಾಗುತ್ತದೆ. ಎರಡು ತಿಂಗಳಿಗಿಂತ ಮೇಲೆ ಆದರೆ ವಿದ್ಯಾರ್ಥಿಯು ಇಂಟರ್ನ್‌ಶಿಪ್ ಪುನರ ನೋಂದಣಿ ಮಾಡಿಸಬೇಕಾಗುವುದು.

* 6 ತಿಂಗಳ ಇಂಟರ್ನ್‌ಶಿಪ್‌ನಲ್ಲಿ ವಿದ್ಯಾರ್ಥಿಗಳು ಈ ಕೆಳಕಂಡಂತೆ ಕಾರ್ಯನಿರ್ವಹಿಸಬೇಕಾಗುವುದು. 3 ತಿಂಗಳುಗಳ ಕಾಲ ಚಿಕಿತ್ಸೆಯ ತರಬೇತಿಯ ವಿಷಯಗಳಿಗೆ ಸಂಬಂಧಪಟ್ಟಂತೆ ಪಶು ಔಷಧ, ಶಸ್ತ್ರ ಚಿಕಿತ್ಸೆ ಹಾಗೂ ಕ್ಷ–ಕಿರಣ, ಸಂತಾನೋತ್ಪತ್ತಿ ಹಾಗೂ ಪ್ರಸೂತಿ, ತುರ್ತು ಸಂದರ್ಭಗಳಲ್ಲಿ ಚಿಕಿತ್ಸೆ, ಆಸ್ಪತ್ರೆ ಹಾಗೂ ದಾಖಲಾತಿಗಳ ನಿರ್ವಹಣೆ. ಒಂದು ತಿಂಗಳು ಕಾಲ ಆಕಳು, ಎಮ್ಮೆ, ಕುರಿ, ಆಡು, ಹಂದಿ, ಕುದುರೆ, ಒಂಟೆ ಹಾಗೂ ಮೊಲ ಸಾಕಾಣಿಕೆ ಘಟಕಗಳಲ್ಲಿ ಕಾರ್ಯನಿರ್ವಹಿಸುವುದು. ಒಂದು ತಿಂಗಳು ಕಾಲ ಮೊಟ್ಟೆ ಹಾಗೂ ಮಾಂಸ ಕೋಳಿ ಸಾಕಾಣಿಕೆ, ಬಾತುಕೋಳಿ, ಟರ್ಕಿ, ಎಮು, ಕೌಜುಗ ಮತ್ತು ಮೀನು ಸಾಕಾಣಿಕೆ ಘಟಕಗಳಲ್ಲಿ ಕಾರ್ಯನಿರ್ವಹಿಸುವುದು. ಒಂದು ತಿಂಗಳು ಕಾಲ ಮೃಗಾಲಯ, ಜೈವಿಕ ಉದ್ಯಾನವನ, ಲಸಿಕಾ

ಉತ್ಪಾದನೆ, ಹಾಲು ಹಾಗೂ ಮಾಂಸ ಉತ್ಪಾದನೆ ಮತ್ತು ರೋಗ ಪತ್ತೆ ಹಾಗೂ ಹತೋಟಿ ಮಾಡುವ ಕೇಂದ್ರಗಳಲ್ಲಿ ತರಬೇತಿ ಪಡೆಯುವುದು.

6. ಸ್ಪರ್ಧಾತ್ಮಕ ಪಶುವೈದ್ಯಕೀಯ ಕೌಶಲ್ಯಗಳು : ಈ ಕೆಳಕಂಡ ಪಶುವೈದ್ಯಕೀಯ ಕೌಶಲ್ಯಗಳನ್ನು ಬಿ.ವಿ.ಎಸ್‌ಸಿ ಹಾಗೂ ಎ.ಎಚ್ ಪದವಿಯಲ್ಲಿ ವಿದ್ಯಾರ್ಥಿಗಳು ನಿರ್ವಹಿಸಬೇಕಾಗುವುದು.

* ಆಕಳು, ಕುರಿ, ಕುದುರೆ, ನಾಯಿ ಮತ್ತು ಹಂದಿಗಳನ್ನು ಹಿಡಿಯುವುದು ಹಾಗೂ ಹತೋಟಿಗೆ ತರುವುದು.

* ಜಾನುವಾರುಗಳ ವಿವಿಧ ತಳಗಳ ಗುರುತಿಸುವಿಕೆ ಹಾಗೂ ಹಲ್ಲುಗಳ ಆಧಾರದ ಮೇಲೆ ಜಾನುವಾರುಗಳ ವಯಸ್ಸನ್ನು ಕಂಡು ಹಿಡಿಯುವುದು.

* ಜಾನುವಾರು ಹಾಗೂ ಕೋಳಿ ಕೊಟ್ಟಿಗೆ ನಿರ್ಮಾಣದ ಬಗ್ಗೆ ತಿಳಿದುಕೊಳ್ಳುವುದು.

* ಸಮತೋಲನ ಪಶು ಆಹಾರ ತಯಾರಿಸುವುದು

* ಜಾನುವಾರುಗಳ ಹೃದಯ ಬಡಿತ, ಉಷ್ಣತೆ ಹಾಗೂ ಉಸಿರಾಟದ ಪರೀಕ್ಷೆ ಮಾಡುವುದು.

* ಶುದ್ಧ ಹಾಲಿನ ಉತ್ಪಾದನೆ, ಹಾಲು ಹಾಗೂ ಹಾಲಿನ ಉತ್ಪನ್ನಗಳ ಕಲಬೆರಕೆಯನ್ನು ಗುರುತಿಸುವುದು.

* ರೋಗೊದ್ರೇಕ ಸಂದರ್ಭದಲ್ಲಿ ರೋಗವನ್ನು ಹತೋಟಿಗೆ ತರುವುದು.

* ಜಾನುವಾರುಗಳಿಗೆ ಜಂತು ನಾಶಕ ಔಷಧಿ ನೀಡುವುದು.

* ಜಾನುವಾರುಗಳಿಗೆ ಶಸ್ತ್ರಚಿಕಿತ್ಸೆಗಿಂತ ಮೊದಲು ಅರವಳಿಕೆ ನೀಡುವುದು.

* ಆಕಳು ಮತ್ತು ಎಮ್ಮೆಗಳಲ್ಲಿ ಬೆದೆ ಲಕ್ಷಣ ಗುರುತಿಸುವಿಕೆ, ಕೃತಕ ಗರ್ಭಧಾರಣೆ ಹಾಗೂ ಗರ್ಭ ಪರೀಕ್ಷೆ ಮಾಡುವುದು

* ಹೋರಿ ಹಾಗೂ ಕೋಣಗಳಲ್ಲಿ ವಿರ್ಯಾಣು ಪರೀಕ್ಷೆ ಮಾಡಿಸುವುದು

* ಕ್ಷ–ಕಿರಣದ ಮುಖಾಂತರ ರೋಗವನ್ನು ಪತ್ತೆ ಹಚ್ಚುವುದು

* ಮೇವಿನ ನಿರ್ವಹಣೆ ಹಾಗೂ ಮೇವಿನ ಗುಣಮಟ್ಟ ಪರೀಕ್ಷಿಸುವುದು

ವಿದ್ಯಾರ್ಥಿ ವೇತನ :

1. ಮೇರಿಟ್ ವಿದ್ಯಾರ್ಥಿ ವೇತನ
2. ಸಾಮಾನ್ಯ ವಿದ್ಯಾರ್ಥಿ ವೇತನ
3. ಉಚಿತ ವಿದ್ಯಾರ್ಥಿ ವೇತನ

ಪರೀಕ್ಷೆ ಹಾಗೂ ಮೌಲ್ಯ ಮಾಪನ : ಶಿಕ್ಷಕರು ಸೆಮಿಸ್ಟರ ಪ್ರಾರಂಭವಾಗುವುದಕ್ಕಿಂತ ಮುಂಚೆ ಲಿಖಿತ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿರುತ್ತಾರೆ. ಸೆಮಿಸ್ಟರ್ ಹಾಗೂ ವಾರ್ಷಿಕ ಪರೀಕ್ಷೆ ಪ್ರಶ್ನೆಪತ್ರಿಕೆ ತಯಾರಿಸುವಾಗ ಶಿಕ್ಷಕರು ಉದ್ದೇಶಿತ ಹಾಗೂ ವಿಷಯಾಧರಿತ ಪ್ರಶ್ನೆಗಳು 60:40 ರ ಅನುಪಾತವನ್ನು ಗಣನೆಗೆ ತೆಗೆದುಕೊಂಡಿರುತ್ತಾರೆ.

ಅ) ವಿವಿಧ ವಿಷಯಗಳಿಗೆ ಸಂಭಂದಪಟ್ಟಂತೆ ಅಂಕಗಳ ವರ್ಗೀಕರಣ :

ವಿಷಯಗಳು	ಅಂತರಿಕ ಪರೀಕ್ಷೆ			ಬಾಹ್ಯ ಪರೀಕ್ಷೆ		
	ಲಿಖಿತ		ಪ್ರಾಯೋಗಿಕ	ಲಿಖಿತ		ಪ್ರಾಯೋಗಿಕ
	ಉದ್ದೇಶಿತ	ವಿಷಯಧಾರಿತ		ಉದ್ದೇಶಿತ	ವಿಷಯಧಾರಿತ	
ಲಿಖಿತ ಹಾಗೂ ಪ್ರಾಯೋಗಿಕ ವರ್ಗ	18	12	20	18	12	20
ಲಿಖಿತ ವರ್ಗ	30	20	ಇಲ್ಲ	30	20	ಇಲ್ಲ
ಪ್ರಾಯೋಗಿಕ ವರ್ಗ	ಇಲ್ಲ	ಇಲ್ಲ	50	ಇಲ್ಲ	ಇಲ್ಲ	50

ಆ) ಪ್ರಾಯೋಗಿಕ ಪರೀಕ್ಷೆಯ ಅಂಕಗಳ ವರ್ಗೀಕರಣ :

ವಿಷಯಗಳು	ಅಂತರಿಕ ಪರೀಕ್ಷೆ	ಬಾಹ್ಯ ಪರೀಕ್ಷೆ
ಪ್ರಾಯೋಗಿಕ ಪರೀಕ್ಷೆ	10	15
ಪ್ರಾಯೋಗಿಕ ದಾಖಲಾತಿ ಪುಸ್ತಕ	05	ಇಲ್ಲ
ಮೌಖಿಕ ಪರೀಕ್ಷೆ	05	05
ಒಟ್ಟು	**20**	**20**

* ಬಿ.ವಿ. ಎಸ್‌ಸಿ ಪದವಿಯಲ್ಲಿ ಸೆಮಿಸ್ಟರ್ ಹಾಗೂ ವಾರ್ಷಿಕ ಪರೀಕ್ಷೆಗಳಿರುತ್ತವೆ. ಸೆಮಿಸ್ಟರ್ ಪರೀಕ್ಷೆಯನ್ನು ವಿದ್ಯಾರ್ಥಿಗಳು ಸೆಮಿಸ್ಟರ್ ಮುಗಿದ ನಂತರ ಹಾಗೂ ವಾರ್ಷಿಕ ಪರೀಕ್ಷೆಯನ್ನು 1ನೇ ಹಾಗೂ 2ನೇ ಸೆಮಿಸ್ಟರ್ ಮುಗಿದ ಮೇಲೆ ಬರೆಯಬೇಕಾಗುತ್ತದೆ.

* ಸೆಮಿಸ್ಟರ್ ಪರೀಕ್ಷೆಯನ್ನು ಆಯಾ ವಿಷಯಕ್ಕೆ ಸಂಬಂಧಪಟ್ಟ ಶಿಕ್ಷಕರು (ಶೇ. ೫೦ ಅಂಕಗಳಿಗೆ) ಪ್ರಶ್ನೆಪತ್ರಿಕೆ ತಯಾರಿಸಿ ಮೌಲ್ಯಮಾಪನ ಮಾಡುವರು. ಈ ಪರೀಕ್ಷೆಯಲ್ಲಿ ವಿಧ್ಯಾರ್ಥಿಗಳು ಗಳಿಸಿದ ಅಂಕಗಳನ್ನು ವಿಭಾಗದ ಮುಖ್ಯಸ್ಥರ ಮುಖಾಂತರ ಕಾಲೇಜಿನ ಡೀನ್ ಅವರಿಗೆ ಒಪ್ಪಿಸಲಾಗುವುದು.

* ಇನ್ನುಳಿದ ಶೇ. ೫೦ ಅಂಕಗಳಿಗೆ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯನ್ನು ಬರೆಯಬೇಕಾಗುವುದು. ವಾರ್ಷಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಯು 2 ಭಾಗದಲ್ಲಿ ಅಂದರೆ ಮುಖ್ಯ ಪ್ರಶ್ನೆ ಪತ್ರಿಕೆ ಹಾಗೂ ಅನುಬಂಧ' ಪ್ರಶ್ನೆಪತ್ರಿಕೆಯಾಗಿ ಕೊಡಲಾಗುವುದು. ಪ್ರಶ್ನೆಪತ್ರಿಕೆಯನ್ನು, ಭಾರತೀಯ ಪಶುವೈದ್ಯಕಿಯ ಪರಿಷ'ತ್ತಿನ ಶಿಫಾರಿಸ್ಸಿನಂತೆ ಪಠ್ಯಕ್ರಮಕ್ಕನುಗುಣವಾಗಿ ಪ್ರಕಟಿಸಿ ಸಂಬಂಧಪಟ್ಟ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಕಳುಹಿಸಲಾಗುವುದು. ಬಾಹ್ಯ ಪರೀಕ್ಷೆಯ ಪ್ರಾಯೋಗಿಕ ಪರೀಕ್ಷೆಯನ್ನು, ವಿಭಾಗದ ಮುಖ್ಯಸ್ಥ ಹಾಗೂ ಬಾಹ್ಯ ಪರೀಕ್ಷೆಗಾರರ ಅಧೀನದಲ್ಲಿ ನಡೆಸಲಾಗುವುದು. ಮೌಲ್ಯಮಾಪನವನ್ನು ಕೂಡ ಬಾಹ್ಯ ಪರೀಕ್ಷೆಗಾರರು ಮಾಡುವರು.

ಯಾವುದೇ ಪಶು ವಿಶ್ವವಿದ್ಯಾಲಯದ ಆಡಾಳಿತಾತ್ಮಕ ವಿವರ ಈ ಕೆಳಕಂಡಂತೆ ಇರುತ್ತದೆ.

ಪಶು ವಿಶ್ವವಿದ್ಯಾಲಯದ ಆಡಾಳಿತಾತ್ಮಕ ವಿವರ

<table>
<tr><td colspan="6">ಪಶು ವಿಶ್ವವಿದ್ಯಾಲಯ</td></tr>
<tr><td colspan="6">ಕುಲಾಧಿಪತಿಗಳು (ರಾಜ್ಯಪಾಲರು, ಕರ್ನಾಟಕ ಸರ್ಕಾರ)</td></tr>
<tr><td colspan="6">ರಾಜ್ಯ ಪಶು ಸಂಗೋಪನಾ ಸಚಿವರು, ಕರ್ನಾಟಕ ಸರಕಾರ</td></tr>
<tr><td colspan="6">ಕುಲಪತಿಗಳು</td></tr>
<tr><td>ಕುಲಸಚಿವರು</td><td>ಶಿಕ್ಷಣ ನಿರ್ದೇಶಕರು</td><td>ಸಂಶೋಧನಾ ನಿರ್ದೇಶಕರು</td><td>ವಿಸ್ತರಣಾ ನಿರ್ದೇಶಕರು</td><td>ಸ್ನಾತಕೋತ್ತರ ನಿರ್ದೇಶಕರು</td><td>ಹಣಕಾಸು ನಿಯಂತ್ರಣಾಧಿಕಾರಿಗಳು</td></tr>
<tr><td rowspan="5">ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳುವುದು, ವಿಶ್ವವಿದ್ಯಾಲಯದ ಆಡಳಿತಾತ್ಮಕ ಸಮಸ್ಯೆಗಳಿಗೆ ಸ್ಪಂದಿಸುವುದು</td><td>ಡೀನ್, ಪಶು ಮಹಾ ವಿದ್ಯಾಲಯ</td><td>ಯೋಜನಾ ನಿರ್ದೇಶಕರು, ಪಶು ಸಂಶೋಧನಾ ಕೇಂದ್ರಗಳು</td><td>ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರಗಳು</td><td rowspan="5">ಸ್ನಾತಕೋತ್ತರ ಹಾಗೂ ಪಿ.ಎಚ್.ಡಿ. ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು, ಪದವಿ ನೀಡುವುದು</td><td rowspan="5">ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿ ವರ್ಗದವರ ಪ್ರತಿ ಮಾಹೆಯ ಸಂಬಳವನ್ನು ಕಾರ್ಯನಿರ್ವಹಿಸುವುದು, ಕೃವಿವಿಯ ಹಣಕಾಸಿನ ಸಂಬಂಧಪಟ್ಟ ವಿವರಗಳನ್ನು ನೋಡಿಕೊಳ್ಳುವುದು.</td></tr>
<tr><td>ಪ್ರಾದ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು</td><td>ಕ್ಷೇತ್ರ ಅಧೀಕ್ಷಕರು</td><td rowspan="4">ವಿಷಯ ತಜ್ಞರುಗಳು</td></tr>
<tr><td>ಪ್ರಾಧ್ಯಾಪಕರು</td><td>ಹಿರಿಯ ವಿಜ್ಞಾನಿ</td></tr>
<tr><td>ಸಹ ಪ್ರಾಧ್ಯಾಪಕರು</td><td rowspan="2">ಕಿರಿಯ ವಿಜ್ಞಾನಿ</td></tr>
<tr><td>ಸಹಾಯಕ ಪ್ರಾಧ್ಯಾಪಕರು</td></tr>
</table>

* ಇದಲ್ಲದೆ ಪಶು ವಿಶ್ವವಿದ್ಯಾಲಯವು ಆಡಳಿತ ಮಂಡಳಿಯ ಸದಸ್ಯರನ್ನು ಒಳಗೊಂಡಿದ್ದು, ವಿಶ್ವವಿದ್ಯಾಲಯದ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಆಡಳಿತ ಮಂಡಳಿಯ ಸದಸ್ಯರ ಅನುಮೋದನೆ ಬೇಕಾಗಿರುತ್ತದೆ.

ಭಾರತ ದೇಶದಲ್ಲಿರುವ ಪಶು ವೈದ್ಯಕೀಯ, ಹೈನುಗಾರಿಕೆ ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯಗಳು

ಕ್ರ. ಸಂ.	ರಾಜ್ಯ	ವಿಶ್ವವಿದ್ಯಾಲಯ	ಮಹಾವಿದ್ಯಾಲಯಗಳು
1	ಆಂಧ್ರಪ್ರದೇಶ	ಶ್ರೀ ವೆಂಕಟೇಶ್ವರ ಪಶು ವೈದ್ಯಕೀಯ ವಿವಿ, ತಿರುಪತಿ	ಪಶುವೈದ್ಯಕೀಯ ಮಹಾವಿದ್ಯಾಲಯ, ತಿರುಪತಿ, ಗನ್ನವರಾಂ, ಪೊಡತೂರ,
			ಮೀನುಗಾರಿಕೆ ಮಹಾವಿದ್ಯಾಲಯ, ಮುತುಕೂರ,
			ಹೈನು ತಾಂತಿಕ ಮಹಾವಿದ್ಯಾಲಯ, ತಿರುಪತಿ
2	ಮಹಾರಾಷ್ಟ್ರ	ಮಹಾರಾಷ್ಟ್ರ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿವಿ, ನಾಗಪೂರ	ಪಶುವೈದ್ಯಕೀಯ ಮಹಾವಿದ್ಯಾಲಯ, ನಾಗಪೂರ, ಮುಂಬಯಿ, ಪರಬಾನಿ, ಉದಗೀರ, ಶಿರವಾಳ.
			ಹೈನುಗಾರಿಕೆ ಮಹಾವಿದ್ಯಾಲಯ, ಉದಗೀರ, ವರುದ್
			ಮೀನುಗಾರಿಕೆ ಮಹಾವಿದ್ಯಾಲಯ, ನಾಗಪೂರ, ಉದಗೀರ್, ದಾಪೋಲಿ
			ಸ್ನಾತಕೋತ್ತರ ಪಶು ಸಂಗೋಪನೆ ಹಾಗೂ ಪಶು ವೈದ್ಯಕೀಯ ಸಂಸ್ಥೆ, ಅಕೋಲಾ.
		ಡೀಮ್ಡ್ ಮೀನುಗಾರಿಕೆ ವಿವಿ, ಮುಂಬಯಿ	ಕೇಂದ್ರ ಮೀನುಗಾರಿಕೆ ಭೋದನಾ ಸಂಸ್ಥೆ, ಮುಂಬಯಿ
3	ಪಂಜಾಬ	ಗುರು ಅಂಗದ ದೇವ ಪಶು ವೈದ್ಯಕೀಯ ವಿವಿ, ಲುಧಿಯಾನಾ	ಪಶುವೈದ್ಯಕೀಯ ಮಹಾವಿದ್ಯಾಲಯ, ಲುಧಿಯಾನಾ
			ಹೈನುಗಾರಿಕೆ ಮಹಾವಿದ್ಯಾಲಯ, ಲುಧಿಯಾನಾ
			ಮೀನುಗಾರಿಕೆ ಮಹಾವಿದ್ಯಾಲಯ, ಲುಧಿಯಾನಾ
			ಪಶು ಜೈವಿಕ ತಂತ್ರಜ್ಞಾನ ಶಾಲೆ, ಲುಧಿಯಾನಾ
4	ತಮಿಳುನಾಡು	ತಮಿಳುನಾಡು ಪಶು ವಿವಿ, ಚೆನ್ನೈ	ಪಶುವೈದ್ಯಕೀಯ ಮಹಾವಿದ್ಯಾಲಯ, ಚೆನ್ನೈ, ನಮಕ್ಕಲ್, ತಿರುನೆಲೆವೆಲಿ, ವರಥನಾಡು
			ಹೈನುಗಾರಿಕೆ ಮಹಾವಿದ್ಯಾಲಯ, ಕೊಡುವಲ್ಲಿ
		ತಮಿಳುನಾಡು ಮೀನುಗಾರಿಕೆ ವಿವಿ, ನಾಗಪಟ್ಟಣಂ	ಮೀನುಗಾರಿಕೆ ಮಹಾವಿದ್ಯಾಲಯ, ತುತಕುಡಿ, ಪೊನ್ನೇರಿ
			ಮೀನು ತಾಂತ್ರಿಕ ಮಹಾವಿದ್ಯಾಲಯ, ನಾಗಪಟ್ಟಣಂ
5	ಕರ್ನಾಟಕ	ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ	ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ, ಬೆಂಗಳೂರು, ಹಾಸನ, ಶಿವಮೊಗ್ಗ.
			ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರು, ಕಲಬುರಗಿ
			ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು.
6	ಉತ್ತರಪ್ರದೇಶ	ಉತ್ತರಪ್ರದೇಶ ಪಂಡಿತ ದೀನ್ ದಯಾಳ್ ಉಪಾಧ್ಯ ಪಶು ಚಿಕಿತ್ಸಾ ವಿವಿ, ಮತುರಾ	ಪಶುವೈದ್ಯಕೀಯ ಮಹಾವಿದ್ಯಾಲಯ, ಮತುರಾ
			ಮೀನುಗಾರಿಕೆ ಮಹಾವಿದ್ಯಾಲಯ, ಮತುರಾ
		ಡೀಮ್ಡ್ ಪಶು ವೈದ್ಯಕೀಯ ವಿವಿ, ಈಜ್ಜತ್'ನಗರ	ಭಾರತೀಯ ಪಶು ವೈದ್ಯಕೀಯ ಸಂಶೋದನಾ ಸಂಸ್ಥೆ, ಈಜ್ಜತ್'ನಗರ, ಬರೇಲಿ ಜಿಲ್ಲಾ
7	ಪಶ್ಚಿಮ ಬಂಗಾಳ	ಪಶ್ಚಿಮ ಬಂಗಾಳ, ಪಶು ಹಾಗೂ ಮೀನುಗಾರಿಕೆ ವೈದ್ಯಕೀಯ ವಿವಿ, ಕೊಲ್ಕತಾ	ಪಶುವೈದ್ಯಕೀಯ ಮಹಾವಿದ್ಯಾಲಯ, ಕೊಲ್ಕತಾ
			ಮೀನುಗಾರಿಕೆ ಮಹಾವಿದ್ಯಾಲಯ, ಕೊಲ್ಕತಾ
			ಹೈನುಗಾರಿಕೆ ಮಹಾವಿದ್ಯಾಲಯ, ಕೊಲ್ಕತಾ

8	ಕೇರಳ	ಕೇರಳ ಪಶು ವೈದ್ಯಕೀಯ ವಿವಿ, ಪೂಕುಟ್, ವಾಯಿನಾಡ್	ಪಶುವೈದ್ಯಕೀಯ ಮಹಾವಿದ್ಯಾಲಯ, ಪೂಕುಟ್, ಮನ್ನುತಿ
			ಹೈನುಗಾರಿಕೆ ಮಹಾವಿದ್ಯಾಲಯ, ಮನ್ನುತಿ
			ಹೈನು ವಿಜ್ಞಾನ ಮತ್ತು ತಾಂತ್ರಿಕ ಮಹಾವಿದ್ಯಾಲಯ, ತಿರುವನಂತಪುರಂ
			ಕೂಕೂಟ ಮಹಾವಿದ್ಯಾಲಯ, ತ್ರೂವಸಂಕುನ್ನು
		ಕೇರಳಾ ಮೀನು ಮತ್ತು ಸಾಗರ ಅಧ್ಯಯನ ವಿಶ್ವ ವಿದ್ಯಾಲಯ ಪನಗಂಡ ಕೋಚ್ಚಿ	ಮೀನುಗಾರಿಕೆ ಮಹಾವಿದ್ಯಾಲಯ, ತ್ರಿಷೂರ್
			ಮೀನುಗಾರಿಕೆ ಮಹಾವಿದ್ಯಾಲಯ, ಕೋಚ್ಚಿ
9	ಪಾಂಡಿಚೇರಿ	ಡೀಮ್ಡ್ ಪಶು ವೈದ್ಯಕೀಯ ವಿವಿ, ಪಾಂಡಿಚೇರಿ	ರಾಜೀವಗಾಂಧಿ ಪಶು ವೈದ್ಯಕೀಯ ಮಹಾವಿದ್ಯಾಲಯ, ಪಾಂಡಿಚೇರಿ
10	ಮಧ್ಯಪ್ರದೇಶ	ನಾನಾಜೀ ದೇಶಮುಖ ಪಶು ಚಿಕಿತ್ಸಾ ವಿಜ್ಞಾನ ವಿವಿ, ಜಬಲ್‌ಪೂರ	ಪಶುವೈದ್ಯಕೀಯ ಮಹಾವಿದ್ಯಾಲಯ, ಜಬಲ್‌ಪೂರ, ರೇವಾ, ಮಾಹೊ
			ಮೀನುಗಾರಿಕೆ ಮಹಾವಿದ್ಯಾಲಯ, ಜಬಲಪೂರ
11	ಹರಿಯಾಣ	ಲಾಲಾ ಲಜಪತರಾಯ ಪಶು ವೈದ್ಯಕೀಯ ವಿವಿ, ಹಿಸ್ಸಾರ್	ಪಶುವೈದ್ಯಕೀಯ ಮಹಾವಿದ್ಯಾಲಯ, ಹಿಸ್ಸಾರ
			ಹೈನು ವಿದ್ಯಾನ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಹಿಸ್ಸಾರ್
		ಡೀಮ್ಡ್ ಹೈನುಗಾರಿಕೆ ವಿವಿ, ಕರ್ನಲ್	ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ, ಕರ್ನಲ್
12	ರಾಜಸ್ಥಾನ	ರಾಜಸ್ಥಾನ ಪಶು ವೈದ್ಯಕೀಯ ವಿವಿ, ಬಿಕಾನರ್	ಪಶುವೈದ್ಯಕೀಯ ಮಹಾವಿದ್ಯಾಲಯ, ಬಿಕಾನರ್, ಉದಯಪುರ
13	ತೆಲಂಗಾಣ	ಶ್ರೀ ಪಿ.ವಿ.ಎನ್.ಆರ್ ತೆಲಂಗಾಣ ರಾಜ್ಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿವಿ, ಹೈದ್ರಾಬಾದ	ಪಶು ವೈದ್ಯಕೀಯ ಮಹಾವಿದ್ಯಾಲಯ, ಹೈದ್ರಾಬಾದ, ಕೊರುತಲ
			ಹೈನು ತಾಂತ್ರಿಕ ಮಹಾವಿದ್ಯಾಲಯ, ಕಾಮಾರೆಡ್ಡಿ
14	ಗುಜರಾತ	ಕಾಮಧೇನು ವಿವಿ, ಗಾಂಧಿನಗರ	ಹೈನುಗಾರಿಕೆ ಮಹಾವಿದ್ಯಾಲಯ, ಅಮ್ರೇಲಿ
15	ಛತ್ತಿಸಗಡ	ಛತ್ತಿಸಗಡ ಕಾಮಧೇನು ವಿವಿ, ಅಂಜೋರಾ, ದುರ್ಗ	ಪಶು ವೈದ್ಯಕೀಯ ಮಹಾವಿದ್ಯಾಲಯ, ಅಂಜೋರಾ, ದುರ್ಗ, ಬಿಲಾಸಪೂರ
			ಮೀನುಗಾರಿಕೆ ಮಹಾವಿದ್ಯಾಲಯ, ಕವರ್ದ (ಕಬೀರದಾಮ)
			ಹೈನುಗಾರಿಕೆ ಮಹಾವಿದ್ಯಾಲಯ, ರಾಯಪೂರ

ಇಷ್ಟೊಂದು ಪ್ರಾಮುಖ್ಯತೆ ಹೊಂದಿರುವ ಪಶು ಸಂಪತ್ತನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಈ ಮೇಲೆ ನಮೂದಿಸಿದ, ಪಶು ವೈದ್ಯಕೀಯ ವಿಜ್ಞಾನ ಸಂಸ್ಥೆಗಳು ನಿಜಕ್ಕೂ ನಮ್ಮ ದೇಶದ ಕೃಷಿ ಆರ್ಥಿಕತೆಯ ಬುನಾದಿ ಎಂದರೆ ತಪ್ಪಾಗಲಿಕ್ಕಿಲ್ಲ. ಇದನ್ನು ಕಾರ್ಯರೂಪಕ್ಕೆ ತರುವಲ್ಲಿ ಮುಂದಿನ ಪೀಳಿಗೆಯೂ ಪಶು ವಿಜ್ಞಾನ ಬಗ್ಗೆ ಒಲುವು ತೋರಿ, ಪಶು ಸಂಪತ್ತು ಉಳಿಸಿ ಬೆಳೆಸಿದ್ದಲ್ಲ, ವಾತಾವರಣದಲ್ಲಿ ಜೀವ ವೈವಿಧ್ಯತೆ ಕಾಪಾಡುವುದರ ಜೊತೆಗೆ, ಕೃಷಿ ಉದ್ದಿಮೆಗಳು ದ್ವಿಗುಣಗೊಂಡು ಸ್ವಾವಲಂಬನೆ ಜೀವನಕ್ಕೆ ದಾರಿದೀಪವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಉಲ್ಲೇಖಗಳು :

1. ಕೃಷಿ ಕೈಪಿಡಿ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ನವದೆಹಲಿ. 6ನೇ ಆವೃತ್ತಿ, 2009. ಪು. ಸಂ. : 1–23
2. ಪಶು ಸಂಗೋಪನೆ ಕೈಪಿಡಿ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ನವದೆಹಲಿ. 3ನೇ ಆವೃತ್ತಿ, 2002. ಪು. ಸಂ. : 1033–1047
3. ಆಡಳಿತ ಮಾಹಿತಿ ಪುಸ್ತಕ. ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ. 2009–10. ಪು. ಸಂ. : 3–40
4. www.agricoop.nic.in
5. www.icar.org.in
6. www.dahd.nic.in
7. www.uasd.edu.co.in
8. www.kvafsu.org.in

ದನಗಳ ಆರೋಗ್ಯದ ಮೇಲೆ ಪ್ಲಾಸ್ಟಿಕ್ ವಸ್ತುಗಳ ಪರಿಣಾಮ

ಎಸ್.ಎಂ. ವಕಾರೆ,1 ಎನ್.ಎ. ಪಾಟೀಲ,2 ವಿವೇಕ. ಆರ್. ಕಸರಳೀಕರ್,3 ಮತ್ತು ಡಿ.ದಿಲೀಪ ಕುಮಾರ,4
ವಿಳಾಸ: ಪ್ರಾದೇಶಿಕ ಶಂಸೊಧನಾ ಅಧಿಕಾರಿಗಳ ಕಛೇರಿ ಎ.ಡಿ.ಡಿ.ಎಲ್.ಐ.ಸಿ. ಎ.ಪಿ.ಎಮ್.ಸಿ. ಗಾಧಿ ಗಂಜ ಬೀದರ.
ಮಿಂಚ ಅಂಚ: drvakare@gmail.com

ಹೊಟ್ಟೆ ಉಬ್ಬುವಿಕೆ ಮತ್ತು ಧೀರ್ಘ ಕಾಲವಿರವ ಸರಿಯಾಗಿ ಮೇವು ತಿನ್ನದಿರುವಿಕೆಯಿರವ ಖಳಲುತ್ತಿನ್ನ, ಪಶುವೈದ್ಯಕೀಯ ಮಹಾವಿದ್ಯಾಲಯವ ಆಸ್ಪತ್ರೆ ಗೆ ದಾಖಲಾದ ದನಗಳ ಹೊಟ್ಟೆಯಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಉದರದ ಶಸ್ತ್ರ ಚಿಕಿತ್ಸೆಯಿರವ ದೃಡಪಡಿಸಿ, ಶಾರೀರಿಕ ಅರಗಕ್ರಿಯಾತ್ಮಕ ಗುಣಲಕ್ಷಣಗಳು, ರಕ್ತನಿಷ್ಟಾನ, ರಕ್ತಸಾರ ಮತ್ತು ಮೆಲಕು ಉದರದ ದ್ರವ್ಯದ ಮೇಲುಂಟಾದ ಪರಿಣಾಮಗಳನ್ನು ಅಭ್ಯಸಿಸಲಾಯಿತು. ಪ್ಲಾಸ್ಟಿಕ್ ವಸ್ತುಗಳ ನೇವನೆಯಿರವ ಖಳಲುತ್ತಿನ್ನ ದನಗಳ ಮೆಲಕು ಉದರದ ಸರಿಕುಚಿತಗೊಳ್ಳುವ ಸಾಮರ್ಥ್ಯ ಕಡಿಮೆಯಾದದ್ದು (0.83±0.31 ಪ್ರತಿ ೩ ನಿಮಿಷಗಳಿಗೆ) ಕಂಡುಖಂಡಿರಿತ್ತಲ್ಲದೆ, ಶರೀರದ ಉಷ್ಣತೆ, ಶ್ವಾಸೋಚ್ಚಾಸ ಮತ್ತು ಹೃದಯದ ಖಡಿತದ ಮೇರೆ ಯಾವುದೇ ಪರಿಣಾಮಗಳು ಕಂಡುಖರಲ್ಲ. ಮೆಲಕು ಉದರದ ದ್ರವದ ರಸಸಾರ ಸಾಮಾನ್ಯ ಮಟ್ಟಕ್ಕಿರತ ಹೆಚ್ಚಾಗಿರುವದು (8.03±0.12) ಕಂಡು ಖರಿನಿತು, ಮೆಲಕು ಉದರ ದ್ರವದಲ್ಲಿರುವ ಏಕಾಣು ಜೀವಿಗಳ ಚಲನ ಶಕ್ತಿ ಮತ್ತು ಸರಿಖೈ ಕಡಿಮೆಯಾದದ್ದು (೩.17±0.54×105)/ಮಿ.ಲೀ.) ಕಂಡುಖರಿನಿತು. ಮಿಥಿಲಿನ್ ನೀಲಿ ಖಣ್ಣ ಕರಗುವ ಅವಧಿ ಹೆಚ್ಚಾಗಿರುವದು (20.67±1.94 ನಿಮಿಷಗಳು), ಜಡವಸ್ತುಗಳು ತಳಗಟ್ಟುವ ಅವಧಿ ಹೆಚ್ಚಾಗಿರುವದು (19.5±1.06 ನಿಮಿಷಗಳು) ಕಂಡುಖರಿನಿತಲ್ಲದೆ, ಒಟ್ಟು ಪಿಷ್ಠ ಪದಾರ್ಥಗಳ ಪ್ರಮಾಣ ಕಡಿಮೆಯಾಗಿರುವದು (61.74±9.32 ಮಿಲೀ/ಲೀ) ಕಂಡುಖರಿನಿತು. ರಕ್ತ ಪರೀಕ್ಷೆಯಲ್ಲಿ ಖಳರಕ್ತ ಕಣಗಳ ಸರಿಖೈ ಹೆಚ್ಚಾಗಿರುವದು (13.57±0.54×103 ಮೈ.ಲೀ) ಕಂಡುಖರಿನಿತು, ರಕ್ತಸಾರದ ಪರೀಕ್ಷೆಯಲ್ಲಿ ಕಡಿಮೆಯಾದ ಒಟ್ಟು ಸಸಾರಜನಕ (5.20±0.23 ಗ್ರಾಂ/ಲೀ), ಗ್ಲುಕೋಸ್ (48.04±1.55 ಗ್ರಾಂ/ಡೆ.ಲೀ), ಸುಣ್ಣದ ಅಂಶ (7.76±0.23 ಮಿಗ್ರಾಂ/ಡೆ.ಲೀ) ಮತ್ತು ರಂಜಕದ ಅಂಶ (5.00±0.28 ಮಿಗ್ರಾಂ/ಡೆ.ಲೀ) ಕಂಡುಖರಿದವು.

ಪರಿಚಯ :– ಸುಮಾರು ೩೦೦ ದಶಲಕ್ಷ ದನಗಳನ್ನು ಹೊಂದಿದ ಭಾರತ ದೇಶದಲ್ಲಿ, ಹೆಚ್ಚುತ್ತಿರುವ ಜನಸಂಖ್ಯೆ, ಕೈಗಾರೀಕರಣ, ನಗರೀಕರಣ, ಅರಣ್ಯನಾಶ, ಮನೆನಿರ್ಮಾಣಕ್ಕಾಗಿ, ಕೃಷಿ ಭೂಮಿಯ ಮಾರ್ಪಾಡಿನಿಂದಾಗಿ, ಮೇವಿನ ಬೆಳೆಗಾಗಿ ಭೂಮಿ ದೊರಕದೆ ಮೇವಿನ ಕೊರತೆ ಹೆಚ್ಚಾಗಿದೆ. ಜೊತೆಗೆ ಅಧುನೀಕರಣದ ಜೀವನ ಶೈಲಿಯಿಂದಾಗಿ ದಿನನಿತ್ಯದ ದಿನಸಿ ವಸ್ತು, ಹಣ್ಣು ತರಕಾರಿ ಮುಂತಾದವುಗಳನ್ನು ಕೊಳ್ಳಲು ಪ್ಲಾಸ್ಟಿಕ ಉಪಯೋಗ ಹೆಚ್ಚಾಗಿದೆ. ಪ್ಲಾಸ್ಟಿಕ್ ವಸ್ತುಗಳ ಸೂಕ್ತ ವಿಲೇವಾರಿ ವ್ಯವಸ್ತೆಯ ಕೊರತೆಯಿಂದಾಗಿ ಈ ವಸ್ತುಗಳು ಹಸಿದ ದನಗಳ ಹೊಟ್ಟೆ ಸೇರಿಕೊಳ್ಳುತ್ತಿವೆ. ಈ ರೀತಿ ದನಗಳ ಮೆಲಕು ಉದರದಲ್ಲಿ ಪ್ಲಾಸ್ಟಿಕ್ ವಸ್ತುಗಳು ದಾಖಲಾಗಿರುವದು ನಮ್ಮ ದೇಶದಲ್ಲಿ ಭೂಪೇಂದ್ರ ಸಿಂಗ್ (2005) ರವರಿಂದ ವರದಿಯಾಗಿದೆ. ಬೂದುರು ಮತ್ತು ಇತರರು (2010) ರವರಿಂದ ಬೀದರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಶೇಕಡಾ 7.61 ರಷ್ಟು ದನಗಳ ಉದರದಲ್ಲಿ ಪ್ಲಾಸ್ಟಿಕ್ ವಸ್ತುಗಳು ವರದಿಯಾಗಿದೆ. ಪ್ರಸ್ತುತ ಸಂಶೋಧನೆಯ ಪ್ರಕಾರ ಬೀದರ ಸ್ಥಳೀಯ ದನ ಕಡಿಯುವ ಮನೆಯಲ್ಲಿ ಪರೀಕ್ಷಿಸಿದಂತೆ ಶೇಕಡಾ 8.94 ರಷ್ಟು ದನಗಳ ಮತ್ತು ಶೇಕಡಾ 9.45 ರಷ್ಟು ಎಮ್ಮೆಗಳ ಮೆಲಕು ಉದರದಲ್ಲಿ ಪ್ಲಾಸ್ಟಿಕ್ ವಸ್ತುಗಳು ಪತ್ತೆಯಾಗಿವೆ.

ವಸ್ತುಗಳು ಹಾಗೂ ವಿಧಾನಗಳು : – ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಗೆ ಸರಿಯಾಗಿ ಮೇವು ತಿನ್ನದಿರುವಿಕೆ ಮತ್ತು ಪದೇ ಪದೇ ಹೊಟ್ಟೆ ಉಬ್ಬುವ ಲಕ್ಷಣಗಳೊಂದಿಗೆ ದಾಖಲಾದ ದನಗಳಲ್ಲಿ, ಹೊಟ್ಟೆಯಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಉದರದ ಶಸ್ತ ಚಿಕಿತ್ಸೆಯಿಂದ ದೃಡಪಡಿಸಿದ ಆರು ದನಗಳನ್ನು ಸದರಿ ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಯಿತು ಈ ದನಗಳ ಸಾಮಾನ್ಯ ವೈದ್ಯಕೀಯ ಪರೀಕ್ಷೆ, ಮೆಲಕು ಉದರದ ದ್ರವದ ರಸ ಸಾರ ಪರೀಕ್ಷೆ, ದ್ರವದಲ್ಲಿ ಏಕಾಣು ಜೀವಿಗಳ ಸಂಖ್ಯೆ, ಒಟ್ಟು ಪಿಷ್ಠ ಪದಾರ್ಥಗಳ ಪ್ರಮಾಣವನ್ನು ವಿಶ್ಲೇಷಿಸಲಾಯಿತು ಮತ್ತು ಜಡವಸ್ತುಗಳು ತಳಗಟ್ಟುವ ಅವಧಿಯನ್ನು ಅಳೆಯಲಾಯಿತು (ಡಿರ್ಕಸೆನ್., 1979)

ರಕ್ತ ಪರೀಕ್ಷೆಯಲ್ಲಿ ಕೆಂಪುರಕ್ತಕಣಗಳ ಸಂಖ್ಯೆ, ರಕ್ತವರ್ಣಜನಕ, ಕಟ್ಟಿದ ದ್ರವ್ಯಕೋಶ ಮತ್ತು ಬಿಳರಕ್ತಕಣಗಳ ಸಂಖ್ಯೆಯನ್ನು ಅಳೆಯಲಾಯಿತು. (ಸ್ಕಾಲ್ಮ ಮತ್ತು ಇತರರು., 1975) ರಕ್ತ ಸಾರದ ಪರೀಕ್ಷೆಯಲ್ಲಿ ಸಸಾರಜನಕ, ಗ್ಲುಕೋಸ್, ಸುಣ್ಣ ಮತ್ತು ರಂಜಕ ಅಂಶವನ್ನು ಅಳೆಯಲಾಯಿತು.

ಫಲಿತಾಂಶ ಮತ್ತು ಚರ್ಚೆ :– ಪ್ಲಾಸ್ಟಿಕ್ ವಸ್ತು ಕಂಡುಬಂದ ದನಗಳ ವೈದ್ಯಕೀಯ ಪರೀಕ್ಷೆ ಮಾಡಲಾಗಿ ಶರೀರದ ಉಷ್ಣತೆ (101.10±0.75 ಫ್ಯಾರನ್ ಹೀಟ್), ಶ್ವಾಸೋಚ್ಛಾಸದ ಪ್ರಮಾಣ (19.17±0.79 ಪ್ರತಿ ನಿಮಿಷ) ಮತ್ತು ಹೃದಯದ ಬಡಿತ (66.83±3.63 ಪ್ರತಿ ನಿಮಿಷ) ಸಾಮಾನ್ಯ ಮಟ್ಟದಲ್ಲಿರುವದು ಕಂಡುಬಂದವು. ಇದೇ ರೀತಿ ಗಹಲೋಟ ಮತ್ತು ಇತರರು (2005), ರೋಹಿ ಮತ್ತು ಇತರರು (2005) ದಾಖಲಿಸಿದ್ದಾರೆ. ದನಗಳ ಉದರದ ಸಂಕುಚಿತಗೊಳ್ಳುವ ಸಾಮರ್ಥ್ಯ ಕಡಿಮೆಯಾದದ್ದು (0.83±0.31 ಪ್ರತಿ ೩ ನಿಮಿಷಗಳಿಗೆ) ಕಂಡುಬಂದಿತು ಇದೇ ರೀತಿ ಹೈಲಟ್ ಮತ್ತು ಇತರರು (1996), ಕೋಹ್ಲಿ ಮತ್ತು ಇತರರು (1998) ದಾಖಲಿಸಿದ್ದಾರೆ.

ಪ್ಲಾಸ್ಟಿಕ್ ವಸ್ತು ಕಂಡುಬಂದ ದನಗಳ ಉದರದ ದ್ರವ ಪರೀಕ್ಷೆ ಮಾಡಲಾಗಿ ರಸಸಾರದ ಕ್ಷಾರತೆ (8.03ಶ0.12) ಕಂಡುಬಂದಿತು. ಇದೇ ರೀತಿ ಸೆನ್ ಮತ್ತು ಇತರರು (2005), ಗಹಲೋಟ ಮತ್ತು ಇತರರು (2005) ದಾಖಲಿಸಿದ್ದಾರೆ. ದ್ರವದಲ್ಲಿನ ಏಕಾಣುಜೀವಿಗಳ ಚಲನ ಶಕ್ತಿ ಕುಂದಿರುವದು ಕಂಡುಬಂದಿತು. ಇದೇ ರೀತಿ ಬೂದೂರು ಮತ್ತು ಇತರರು (2010) ದಾಖಲಿಸಿದ್ದಾರೆ. ದ್ರವದಲ್ಲಿ ಮಿಥಿಲಿನ್ ನೀಲಿ ಬಣ್ಣ ಕರಗುವ ಅವಧಿ ಹೆಚ್ಚಾಗಿರುವದು (20.67±1.94 ನಿಮಿಷಗಳು) ಮತ್ತು ಜಡವಸ್ತುಗಳು ತಳಗಟ್ಟುವ ಅವಧಿ ಹೆಚ್ಚಾಗಿರುವದು (19.5±1.06

ನಿಮಿಷಗಳು) ಕಂಡುಬಂದಿತು ಇದೇ ರೀತಿ ಗಾರಿ (1990) ದಾಖಲಿಸಿದ್ದಾರೆ. ದ್ರವದಲ್ಲಿರುವ ಏಕಾಣು ಜೀವಿಗಳ ಸಂಖ್ಯೆ ಕಡಿಮೆಯಾದದ್ದು (3.17±0.54×105/ಮಿ.ಲೀ) ಕಂಡುಬಂದಿತು. ಇದೇ ರೀತಿ ರಾಮಸಾಮಿ (1984) ದಾಖಲಿಸಿದ್ದಾರೆ. ದ್ರವದಲ್ಲಿರುವ ಒಟ್ಟು ಪಿಷ್ಠ ಪದಾರ್ಥಗಳ ಪ್ರಮಾಣ ಕಡಿಮೆಯಾಗಿರುವದು (61.74±9.32 ಮಿ ಮೋ/ಲೀ) ಕಂಡುಬಂದಿತು. ಇದೇ ರೀತಿ ರೋಹಿ ಮತ್ತು ಇತರರು (2005) ದಾಖಲಿಸಿದ್ದಾರೆ.

ಪ್ಲಾಸ್ಟಿಕ್‌ವಸ್ತು ಕಂಡುಬಂದ ದನಗಳ ರಕ್ತ ಪರೀಕ್ಷೆ ಮಾಡಲಾಗಿ, ಕೆಂಪುರಕ್ತ ಕಣಗಳ ಸಂಖ್ಯೆ (6.40±0.40×106/ಮೈ.ಲೀ), ಕಟ್ಟಿದ ಜೀವ ದ್ರವ್ಯ ಕೋಶ (31.53±1.19 ಪ್ರತಿಶತ), ರಕ್ತವರ್ಣಜನಕ (9.78±0.30 ಗ್ರಾಂ.ಲೀ) ಸಾಮಾನ್ಯ ಮಟ್ಟದಲ್ಲಿ ಕಂಡುಬಂದವು. ಬಿಳಿ ರಕ್ತಕಣಗಳ ಸಂಖ್ಯೆ ಹೆಚ್ಚಾಗಿರುವದು (13.57±0.54×103/ಮೈ.ಲೀ) ಕಂಡುಬಂದಿತು. ಇದೇ ರೀತಿ ಹೈಲಟ್ ಮತ್ತು ಇತರರು (1996) ದಾಖಲಿಸಿದ್ದಾರೆ.

ಪ್ಲಾಸ್ಟಿಕ್ ವಸ್ತುಕಂಡುಬಂದ ದನಗಳ ರಕ್ತಸಾರದ ಪರೀಕ್ಷೆ ಮಾಡಲಾಗಿ ಕಡಿಮೆಯಾದ ಒಟ್ಟು ಸಸಾರಜನಕ (5.20±0.23 ಗ್ರಾಂ/ಡೆ.ಲೀ), ಗ್ಲೂಕೋಸ್ (48.04±1.55 ಗ್ರಾಂ/ಡೆ.ಲೀ), ಸುಣ್ಣದ ಅಂಶ (7.76±0.23 ಮಿಗ್ರಾಂ/ಡೆ.ಲೀ) ಮತ್ತು ರಂಜಕದ ಅಂಶ (5.00±0.28 ಮಿಗ್ರಾಂ/ಡೆ.ಲೀ) ಕಂಡುಬಂದವು ಇದೇ ರೀತಿ ಶರ್ಮಾ ಮತ್ತು ಇತರರು (2012) ದಾಖಲಿಸಿದ್ದಾರೆ.

ಉಲ್ಲೇಖಗಳು:

1. ಬೋದುರ ಪಿ. (2010) ಇನ್‌ಟಾಸ್ ಪಾಲಿವೆಟ್ 11(2):184–188

2. ಭುಪೆಂದ್ರ ಸಿಂಗ್ (2005) ದಿ ಇಂಡಿಯನ್ ಕೌ ಅಕ್ಟೋಂಬರ – ಡಿಸೆಂಬರ 10–18

3. ಸ್ಕಾಲ್ಮ (1975), ವೆಟೆರಿನರಿ ಹೆಮಟಾಲಾಜಿ, ಪಿಪಿ 21–48

4. ಸೆನ್ (2005) ಬಾಂಗಾಲ ದೇಶ ಜರನಲ್ ಆಫ್ ಅನಿಮಲ್ ಸೈನ್ಸೆಸ್, 18:69–73

5. ಶರ್ಮಾ (2012) ಇಂಡಿಯನ್ ವೆಟರಿನರಿ ಜರ್ನರಲ 89:27–29

6. ರಾಮಸಾಮಿ (1984) ಎಮ್.ವಿ.ಎಸ್.ಸಿ. ಥಿಸೆಸ್ ಸಬ್ಮಿಟೆಡ್ ಟೂ ತಮಿಳು ನಾಡು ಅಗ್ರಕಲ್ಚರಲ್ ಯುನಿವರ್ಸಿಟಿ.

7. ರೂಹಿ (2005) ಇಂಡಿಯನ್ ವೆಟ್‌ನರಿ ಮೇಡಿಸಿನ್ ಜರ್ನ್‌ನಲ್ 29:221–222.

8. ಹೈಲಾಟ್ (1996) ಸ್ಮಾಲ್ ರುಮಿನಂಟ್ ರಿಸರ್ಚ್ 24(1):43–48

9. ಕೊಪ್ಲಿ (1998) ಇಂಡಿಯನ್ ಜರ್ನಲ್ ಆಫ್ ವೆಟ್‌ರನರಿ ಸರ್ಜರಿ 19(2):105–106

10. ಡ್ರೀಕ್ಸ್‌ನ (1979) ಬರ್ಲಿನ್ ಆನಡ್ ಹೆಂಬರ್ಗ್. ಪಿ.ಪಿ.184

11. ಗ್ಯಾರಿ (1990) ವೆಟ್ಟ್ ಮೆಡ್ 85(6):660–670

12. ಗೆಹಲೋಟ್ (2005) ಪ್ರೀ ಪ್ರೋಸೆಡಿಂಗ್ಸ್ ಆಫ್ ದಿ ಫರ್ಸ್ಟ್ ರೌಂಡ ಟೆಬಲ್ ಕೊನಫ್ರೆನ್ಸ್ ಆನ್ ರೊಮೇನ್ ಲೋಜಿ ಪಿ.ಪಿ.282–287

ದೊಡ್ಡ ಮೆಲುಕುಹಾಕುವ ಜಾನುವಾರುಗಳಲ್ಲಿ ಹಿಂಗಾಲಿನ ಟಿಬಿಯಾ ಮೂಳೆ ಮುರಿತಕ್ಕೆ ಅಸ್ತಿಮಜ್ಜೆ ಕಂಬಿ ಮತ್ತು ಮಳೆಗಳಿಂದ ಶಸ್ತ್ರಚಿಕಿತ್ಸೆ

ಡಿ. ದಿಲೀಪಕುಮಾರ್, ಬಿ.ವಿ. ಶಿವಪ್ರಕಾಶ್ ಮತ್ತು ಮಂಜುನಾಥ ಪಾಟೀಲ
ಶಸ್ತ್ರಚಿಕಿತ್ಸೆ ಮತ್ತು ಕ್ಷ–ಕಿರಣ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ–585 401
E-mail: drdilipkumar771@yahoo.co.in / drdilipkumar771@gmail.com

ಮೂಳೆ ಮುರಿತವೆಂದರೆ ಅಖಂಡವಾದ ಮೂಳೆಯು ಎರಡು ಅಥವಾ ಎರಡಕ್ಕಿಂತ ಹೆಚ್ಚು ತುಣುಕುಗಳಾಗಿ ಬೇರ್ಪಡುವುದು. ದನ ಮತ್ತು ಕುರಿಗಳಲ್ಲಿ ಹಿಂಗಾಲಿನ ಟಿಬಿಯಾ ಮೂಳೆ ಮುರಿತವು ಸಾಮಾನ್ಯವಾಗಿದ್ದು, ಪ್ರತಿಶತ 28 ಹಾಗೂ 22ರಷ್ಟು ಕ್ರಮವಾಗಿ ಕಂಡುಬರುತ್ತದೆ. ಸಾಮಾನ್ಯವಾಗಿ ಈ ಸಮಸ್ಯೆಯು ಅಪಘಾತದಿಂದ ಕಾಣಿಸಿಕೊಳ್ಳುತ್ತದೆ. ರೋಗದ ಚಿನ್ಹೆಗಳೆಂದರೆ, ಮೂಳೆ ಮುರಿದ ಭಾಗದಲ್ಲಿ ರಕ್ತ ಹೆಪ್ಪುಗಟ್ಟಿ ಊವು ಬರುತ್ತದೆ ಹಾಗೂ ಅದಕ್ಕೆ ನಡೆಯಲು ಕೂಡ ಬರುವುದಿಲ್ಲ ಅಥವಾ ಕುಂಟುತ್ತಾ ನಡೆಯುತ್ತದೆ. ಮುರಿದ ಕಾಲಿನ ಮೇಲೆ ಬೇಹದ ಭಾರ ಹಾಕುವುದಿಲ್ಲ. ಕಾಲು ಮೇಲೆ ಎಳೆದುಕೊಂಡು ನಡೆದಾಡುತ್ತದೆ. ಇದರಿಂದ ಮಾಂಸ ಹಾಗೂ ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಕ್ಷ–ಕಿರಣದ ಪರೀಕ್ಷೆಯಿಂದ ಮೂಳೆಯು ಎಷ್ಟು ತುಂಡುಗಳಾಗಿದೆ ಮತ್ತು ಚಿಕಿತ್ಸೆಯ ನಿರ್ಣಯವನ್ನು ತೆಗೆದುಕೊಳ್ಳಬಹುದು. ಟಿಬಿಯಾದ ಮೇಲಿನ ಕೀಲು (ಸ್ಟೈಫರ್) ಅತಿ ಕ್ಲಿಷ್ಟವಾದ ಕೀಲಾಗಿರುತ್ತದೆ. ಯಾವುದೇ ಪ್ಲಾಸ್ಟರ್ ಪಟ್ಟಿ ಅಥವಾ ಫೈಬರ್ ಕಾಸ್ಟ್ ಹಾಕುವುದರಿಂದ ಸ್ಟೈಫರ್ ಕೀಲಿನ ಚಲನವಲನ ನಿಯಂತ್ರಿಸಲು ಆಗುವುದಿಲ್ಲ. ಹೀಗಾಗಿ ಸಾಮಾನ್ಯವಾಗಿ ಚಿಕಿತ್ಸೆಯು ವಿಫಲಗೊಳ್ಳುತ್ತದೆ. ಆದ್ದರಿಂದ, ಆಧುನಿಕ ತಂತ್ರಜ್ಞಾನ ಅಸ್ತಿಮಜ್ಜೆಯ ಕಂಬಿ ಮತ್ತು ಮಳೆಗಳಿಂದ ಚಿಕಿತ್ಸೆಮಾಡಿ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಪೀಠಿಕೆ: ಮೂಳೆ ಮುರಿತವೆಂದರೆ ಅಖಂಡವಾದ ಮೂಳೆಯ ಎರಡು ಅಥವಾ ಎರಡಕ್ಕಿಂತ ಹೆಚ್ಚು ತುಣುಕುಗಳಾಗಿ ಬೇರ್ಪಡುವುದು. ದನ ಮತ್ತು ಕುರಿಗಳಲ್ಲಿ ಹಿಂಗಾಲಿನ ಟಿಬಿಯಾ ಮೂಳೆ ಮುರಿತವು ಸಾಮಾನ್ಯವಾಗಿದ್ದು ಪ್ರತಿಶತ 28 ಹಾಗೂ 22 ರಷ್ಟು ಕ್ರಮವಾಗಿ ಕಂಡುಬಂದಿರುತ್ತದೆ (ಸಿಂಗ್ ಹಾಗೂ ಇತರರು, 2002). ಸಾಮಾನ್ಯವಾಗಿ, ಈ ಸಮಸ್ಯೆಯು ಅಪಘಾತದಿಂದ ಕಾಣಿಸಿಕೊಳ್ಳುತ್ತದೆ. ಲೋಪ್ಸ್ ಮತ್ತು ಸಹಚರರು, 2004ರಂತೆ ಟಿಬಿಯಾ ಮೂಳೆ ಮುರಿತವು ಶೇ. 22.7 ರಷ್ಟಿರುತ್ತದೆ. ನಸ್

ಮತ್ತು ಇತರರು, 2011ರಂತೆ ಹುಟ್ಟಿದ ಕರುಗಳಲ್ಲಿ ಉದ್ದ ಮೂಳೆ ಮುರಿತದಲ್ಲಿ ಶೇ. 58.0 ರಷ್ಟು ಕಂಡುಬರುತ್ತದೆ.

ರೋಗದ ಲಕ್ಷಣಗಳು: ಈ ಮೂಳೆ ಮುರಿತದಲ್ಲಿ ಮುಖ್ಯವಾಗಿ ಮೇಲ್ಭಾಗ ಹಾಗೂ ಮಧ್ಯ ಭಾಗದ ಎಲುಬುವಿನಲ್ಲಿ ಅತಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಅದೇ ರೀತಿಯಾಗಿ ಮೂಳೆ ಮುರಿತವು ಓರೆ ಅಥವಾ ಅಡ್ಡವಾಗಿ ಹೆಚ್ಚಾಗಿ ಕಾಣಿಸುತ್ತದೆ. ಈ ಮೂಳೆಯ ವಿಶೇಷವೇನೆಂದರೆ, ಈ ಎಲುಬಿನ ಮೇಲೆ ಯಾವುದೇ ಮಾಂಸವು ಇರದಿರುವುದರಿಂದ ಮೂಳೆಯು ಅಪಘಾತಕ್ಕೀಡಾದಾಗ ಮುರಿತವು ಸಂಕೀರ್ಣದಿಂದ ಕೂಡಿರುತ್ತದೆ. ಮುರಿದ ಭಾಗದಲ್ಲಿ ಜಾನುವಾರುಗಳಲ್ಲಿ ನೋವು, ಬಾವು ಮತ್ತು ಗಾಯದ ಗುರುತುಗಳನ್ನು ಕಾಣಬಹುದು. ಈ ತೊಂದರೆಯಿಂದ ಬಳಲುತ್ತಿರುವ ಜಾನುವಾರುಗಳು ಕುಂಟುತ್ತಾ ನಡೆಯುತ್ತವೆ ಹಾಗೂ ಕೆಲವೊಂದು ಸಮಯದಲ್ಲಿ ನಡೆಯಲಾರದೆ ಕುಳಿತುಕೊಂಡಿರುತ್ತವೆ. ಆಮೇಲೆ, ಮುರಿದ ಕಾಲಿನ ಮೇಲೆ ದೇಹದ ಭಾರ ಹಾಕಲಾರದೇ ಒಂದೇ ಜಾಗದಲ್ಲಿ ಕುಳಿತುಕೊಳ್ಳುತ್ತವೆ.

ರೋಗ ಪತ್ತೆಹಚ್ಚುವುದು:

1. ಜಾನುವಾರು ಮಾಲೀಕನ ಹೇಳಿಕೆ ಹಾಗೂ ಮೇಲೆ ತಿಳಿಸಿದ ಚಿಹ್ನೆಗಳ ಮುಖಾಂತರ.

2. ಕ್ಷ–ಕಿರಣ ಸಹಾಯದಿಂದ – ಯಾವ ತರಹದ ಶಸ್ತ್ರ ಚಿಕಿತ್ಸೆ ಮಾಡಬಹುದು ಎಂಬುದನ್ನು ಕಂಡುಕೊಳ್ಳಬಹುದು.

ಪುನರ್‌ಅವಲೋಕನ: ಹ್ಯಾಮಿಲ್ಟನ್ ಮತ್ತು ಟುಲ್ಲೆನರ್ಸ್(1980) ಟಿಬಿಯಾ ಮೂಳೆ ಮುರಿದ ಮೂರು ಹುಟ್ಟಿದ ಕರುಗಳಿಗೆ ಟ್ರಾನ್ಸ್‌ಫಿಕ್ಸೇಶನ್ ಪಿನ್ನಿಂಗ್ ಮಾಡಲಾಯಿತು. ಮೂರು ಕರುಗಳಲ್ಲಿ, 2 ಕರುಗಳು 4 ರಿಂದ 6 ವಾರಗಳಲ್ಲಿ ಮೊದಲಿನಂತಾಗಿ ಸಾಮಾನ್ಯವಾದವು. ಆದರೆ, ಇನ್ನೊಂದು ಕರುವಿಗೆ ಕೀವಿನಿಂದ ಕೂಡಿದ ಸ್ಟೈಫಲ್ ಆರ್ಥರೈಟೀಸ್ ಆಗಿ ಆಮೇಲೆ ದಯಾಮರಣ ನೀಡಲಾಯಿತು.

ಆಡಮ್ಸ್ ಮತ್ತು ಫೆಸಲರ್(1983) ರೇಡಿಯಲ್–ಅಲನಾರ್ ಅಥವಾ ಟಿಬಿಯಲ್ ಮೂಳೆ ಮುರಿತಕ್ಕೊಳಗಾದ 46 ರಿಂದ 775 ಕೆ.ಜಿ. ತೂಕವುಳ್ಳ 15 ದನಗಳನ್ನು ಥಾಮಸ್ ಸ್ಪ್ಲಿಂಟ್ ಹಾಗೂ ಪ್ಲಾಸ್ಟರ್ ಸಿಮೆಂಟ್ ಜೊತೆಗೆ ಹಾಕಿ ಚಿಕಿತ್ಸೆ ಮಾಡಲಾಯಿತು. ಇದಲ್ಲದೇ, ದೀರ್ಘಕಾಲದ ತೊಡಕೆಂದರೆ ಉದ್ದ ಮೂಳೆಗಳು ಡಿವಿಯಟ್ ಆಗುವುದನ್ನು ಗಮನಿಸಿದರು.

ಮಾರ್ಟಿನ್ಸ್ ಮತ್ತು ಇತರರು(1998) ಟಿಬಿಯಲ್ ಮೂಳೆ ಮುರಿತಕ್ಕೊಳಗಾದ 95 ದನಗಳನ್ನು 1990 ರಿಂದ 1994ರವರೆಗೆ ಪರೀಕ್ಷಿಸಲಾಯಿತು. ಅವರ ಪ್ರಕಾರ, ಮುರಿದ ಟಿಬಿಯಾಗೆ ಸಾಂಪ್ರಾದಾಯಿಕ ಔಷಧಿ ಮತ್ತು ಶಸ್ತ್ರ ಚಿಕಿತ್ಸೆ ನೀಡಿದ ನಂತರ ಒಟ್ಟಾರೆ ಗುಣಮುಖವಾಗುವ ಪ್ರಮಾಣ ಶೇಕಡಾ 45 ಎಂದು ತೀರ್ಮಾನಿಸಿದರು.

ಗ್ಯಾಂಗ್ಲ ಮತ್ತು ಇತರರು(2006) ಕಾಲು ಮುರಿತಕ್ಕೆ ಒಳಗಾದ 99 ದನಗಳನ್ನು 2000 ದಿಂದ 2003 ರವರೆಗೆ ಕಾಲಿನ ಸುತ್ತಲೂ ಪಟ್ಟಿ ಸುತ್ತುವುದರ ಅಥವಾ ಒಂದೆ ಕಡೆ ಬಂಧನದಲ್ಲಡುವುದರ ಬಗ್ಗೆ ವರದಿಯನ್ನು ನೀಡಿದರು. ಅವರ ಪ್ರಕಾರ ಅತಿ ಹೆಚ್ಚು ಮೂಳೆ ಮುರಿತವು ಟಿಬಿಯಾ (50%) ನಂತರ ಫೀಮರ್ ಮತ್ತು ಹಾಸ್‌ಕ್ಯಾಲ್ಸಿಸ್ 2ನೇ ಹಾಗೂ 3ನೇ ಸ್ಥಾನ ಪಡೆದುಕೊಳ್ಳುತ್ತವೆ.

ಕಾಜಿಮೆಂಗಲ್ಲು ಮತ್ತು ಇತರರು(2008)ರಲ್ಲಿ 28 ಕರು ಟಿಬಿಯಾಗಳಲ್ಲಿ ಒಳಗಡೆ ಭಾಗದ ವೆಡ್ಜ್ ಹಾಸ್ಟ್ಯೋಟೊಮಿ ಮತ್ತು ಹೊರಗಡೆ ಕರ್ಟಿಕಲ್ ಮುರಿತಕ್ಕೆ ಒಳಗಾದವುಗಳನ್ನು 4 ಗುಂಪುಗಳಾಗಿ ವಿಂಗಡಿಸಲಾಯಿತು. ನಿಯಂತ್ರಣ; ಪ್ಲೇಟ್ ಮತ್ತು ತಿರುಪು ಮೊಳೆಗಳು; 2 ಸ್ಟೇಪಲ್ಸ್; ಮತ್ತು ವೃತ್ತಕಾರದ ಬಾಹ್ಯ ಬಂಧನಿ. ಅವರ ಪ್ರಕಾರ, ಮೇಲ್ಭಾಗದ ಟಿಬಿಯಲ್ ಹಾಸ್ಟ್ಯೋಟೊಮಿಗೆ ಸ್ಟೇಪಲ್ಸ್ ಅಥವಾ ವೃತ್ತಕಾರದ ಬಾಹ್ಯ ಬಂಧನಿಗಿಂತ ಪ್ಲೇಟ್ ಹಾಗೂ ತಿರುಪು ಮೊಳೆಗಳ ಗುಂಪು ಕಾಲಿನ ಸ್ಥಿರತೆ ಕಾಪಾಡಿಕೊಳ್ಳುವಲ್ಲಿ ಒಳ್ಳೆಯ ಫಲಿತಾಂಶ ನೀಡಿದವು.

ಐತಾಳ್ ಮತ್ತು ಇತರರು(2010) 2 ಕರುಗಳಲ್ಲಿ ಮಧ್ಯ ಭಾಗದಲ್ಲಿ ಮುರಿತಕ್ಕೊಳಗಾದ ಟಿಬಿಯಾ ಮೂಳೆಯನ್ನು ಚಿಕಿತ್ಸೆ ಮಾಡಿದರು. ಒಂದು ಕರುವಿನಲ್ಲಿ ವೃತ್ತಕಾರದ ಬಾಹ್ಯ ಬಂಧನಿಯಿಂದ, ಇನ್ನೊಂದು ಕರುವಿನಲ್ಲಿ ವೃತ್ತಕಾರಾದ ಬಾಹ್ಯ ಬಂಧನಿಯ ಜೊತೆಗೆ ಹೆಮಿ ಸರ್ಕುಲೇಜ್ ವೈರಿಂಗ್ ಕೂಡ ಮಾಡಲಾಯಿತು. ಒಂದು ಕರು 60 ದಿನಕ್ಕೆ, ಇನ್ನೊಂದು ಕರು 30 ದಿನಕ್ಕೆ ಮೂಳೆ ಮುರಿತದಿಂದ ಗುಣಮುಖವಾದವು. ವೃತ್ತಕಾರದ ಬಾಹ್ಯ ಬಂಧನಿ ತೆಗೆದ ಮೇಲೆ, ಕೀಲಿನ ಚಲನೆ ಸಾಮಾನ್ಯನಂತೆ ಕಾಲು ನಡೆದಾಡುವುದು ಕ್ರಮೇಣ ಸುಧಾರಿಸಿತು.

ಬೆಲ್ಲನ್ ಮತ್ತು ಮೂಲನ್(2011) ನೊವಲ್ ಅಸ್ಥಿಮಜ್ಜೆ ಕಂಬಿಯನ್ನು ಫೀಮರ್ ಎಲುಬಿನ ಜೋಡಣೆಗೆ ಕರುವಿನಲ್ಲಿ ಮಾಡಲಾಯಿತು. ಹುಟ್ಟಿದ ಕರುಗಳಲ್ಲಿ, ಫೀಮರ್‌ನ ಯಾವುದೇ ಭಾಗದಲ್ಲಿ (ಮೇಲ್ಭಾಗ/ಮಧ್ಯ/ಕೆಳಭಾಗ)ದಲ್ಲಿ ಮುರಿತವನ್ನು ನೊವಲ್ ಅಸ್ಥಿಮಜ್ಜೆಯ ಕಂಬಿ ಮುಖಾಂತರ ಗುಣಪಡಿಸಬಹುದು ಎಂದು ವರದಿ ಮಾಡಿದ್ದಾರೆ.

ನಸ್ ಮತ್ತು ಇತರರು(2011) 125 ಹುಟ್ಟಿದ ಕರುಗಳಲ್ಲಿ ಉದ್ದ ಮೂಳೆಗಳ ಮುರಿತದ ಬಗ್ಗೆ ಅಧ್ಯಯನ ಮಾಡಿದರು. ಅವರ ಪ್ರಕಾರ 125 ಕರುಗಳಲ್ಲಿ ಅತಿ ಹೆಚ್ಚಾದ ಮೂಳೆ ಮುರಿತವು ಟಿಬಿಯಾ (58) ನಂತರ ಫೀಮರ್ (50), ರೇಡಿಯಸ್–ಅಲನಾ (14) ಮತ್ತು ಹ್ಯುಮರಸ್ (3)ರಲ್ಲಿ ಕ್ರಮವಾಗಿ ಕಂಡುಬಂದಿದೆ. ಇದಕ್ಕೆ ಸಾಮಾನ್ಯ ಕಾರಣ, ಪ್ರಸವದ ಸಮಯದಲ್ಲಿ ಆಗುವ ಆಘಾತ ಇದರಿಂದ ಗಿಣ್ಣದಹಾಲು ಸೇವಿಸದಿರುವುದು ಮತ್ತು ಸಹವರ್ತಿ ರೋಗಗಳಿಗೆ ತುತ್ತಾಗುವುದು.

ಬೇರ್ಡ್ ಮತ್ತು ಆಡಮ್ಸ್(2014)ರಂತೆ ಟಿಬಿಯಾ ಮತ್ತು ರೇಡಿಯಸ್–ಅಲನಾ ಮೂಳೆ ಮುರಿತಗಳನ್ನು ದನ ಮತ್ತು ಸಣ್ಣ ಮೆಲುಕು ಹಾಕುವ ಪ್ರಾಣಿಗಳಲ್ಲಿ ಥಾಮಸ್ ಸ್ಪ್ಲಿಂಟ್ ಮತ್ತು ಪ್ಲಾಸ್ಟರ್ ಸಿಮೆಂಟ್ ಹಾಕಲಾಯಿತು. ವಾಕರ್ ಸ್ಪ್ಲಿಂಟ್‌ನ್ನು

ಟಿಬಿಯಾ ಮುರಿತಕ್ಕೆ ಹಾಗೂ ಸ್ಟೈಫಲ್ ಗಾಯಗಳಿಗೊಳಗಾದ ದನಗಳಲ್ಲಿ ಹಾಕಲಾಯಿತು. ವಾಕರ್ ಸ್ಲಿಂಟ್ ಹಿಂದಿನ ಕಾಲಿಗೆ ಒಳ್ಳೆಯ ಸ್ಥಿರತೆಯನ್ನು ಥಾಮಸ್ ಸ್ಪಿಂಟಿಗಿಂತ ಚೆನ್ನಾಗಿ ನೀಡಿದೆ ಎಂದು ವರದಿ ಮಾಡಿದರು.

ಲೋಪ್ಸ್ ಮತ್ತು ಸಹಚರರು(2014)ರಂತೆ 22 ಮೆಲುಕು ಹಾಕುವ ಪ್ರಾಣಿಗಳೆಂದರೆ 8 ಆಡು, 8 ಕುರಿ ಮತ್ತು 6 ದನಗಳನ್ನು ಕ್ರಮವಾಗಿ ಒಳಗೊಂಡಿರುತ್ತದೆ. ಟಿಬಿಯಾ ಮೂಳೆ ಮಿರಿತವು ಶೇ22.7 ರಷ್ಟಿರುತ್ತದೆ. ಟಿಬಿಯಾದ ಕೆಳಭಾಗವು ಮುರಿತಕ್ಕೆ ಒಳಗಾದಾಗ ಸ್ಥಂಬನ ಸಂಪ್ರದಾಯವಾದಿ ಚಿಕಿತ್ಸೆಯ ಮುಖಾಂತರ ಗುಣಪಡಿಸಲಾಯಿತು. ಟಿಬಿಯಾ ಮೇಲ್ಭಾಗದ ಹೊರಗಡೆ ಗಾಯವಾದಂತಹ ಮುರಿದಿರುವಂತಹಗಳನ್ನು ಶಸ್ತ್ರ ಚಿಕಿತ್ಸೆ ಮಾಡಿ ಗುಣಪಡಿಸಲಾಯಿತು.

ವಸ್ತುಗಳು ಮತ್ತು ವಿಧಾನ:

ಅಸ್ಥಿಮಜ್ಜೆ ಕಂಬಿ ವಿಧಾನದಲ್ಲಿ ಬಳಸುವ ಉಪಕರಣಗಳು

1. ಅಸ್ಥಿಮಜ್ಜೆ ಕಂಬಿ – 24 ಮೀ.ಮೀ. ನಿಂದ 30 ಮೀ.ಮೀ. ಉದ್ದ ಹಾಗೂ 12 ಮೀ.ಮೀ. ನಿಂದ 16 ಮೀ.ಮೀ. ವ್ಯಾಸದ ಕಂಬಿಗಳನ್ನು ಬಳಸಲಾಯಿತು.

2. ಮೊಳೆ– 60 ಮೀ.ಮೀ. ನಿಂದ 90 ಮೀ.ಮೀ. ಮೊಳೆಗಳನ್ನು ಬಳಸಲಾಯಿತು.

3. ಜಿಗ್ (ಬಾಹ್ಯ ಗುರಿ ಸಾಧನ) – ಅಸ್ಥಿಮಜ್ಜೆ ಕಂಬಿಯಲ್ಲಿರುವ ರಂಧ್ರಗ'ಳಿಗೆ ಸರಿಸಮಾನಾಗಿರುವಂತೆ ಎಲುಬಿನ ಹೊರಗಡೆ ಈ ಸಾಧನವು ರಂಧ್ರಗಳನ್ನು ಹೊಂದಿರುತ್ತದೆ. ಈ ಉಪಕರಣವು, ಅಸ್ಥಿಮಜ್ಜೆ ಕಂಬಿಯನ್ನು ಮುರಿದ ಮೂಳೆಯ ತುಣುಕಿನ ಮೇಲ್ಭಾಗದಿಂದ ಹಿಡಿದು ಮುರಿದ ತುಣುಕಿನ ಕೆಳಗಡೆ ಮೂಳೆಯ ಭಾಗದವರೆಗೆ ತೂರಿಸಲು ಸಹಾಯ ಮಾಡುತ್ತದೆ. ಇದಲ್ಲದೇ, ಅಸ್ಥಿಮಜ್ಜೆ ಕಂಬಿ ಮತ್ತು ಮುರಿದ ಎಲುಬಿನ ಎರಡು ಬದಿಗಳಿಗೆ ಮೊಳೆಯನ್ನು ಬಿಗಿಯಲು ಸಹಾಯ ಮಾಡುತ್ತದೆ.

4. ಟ್ರೋಕರ್ ಪಾಯಿಂಟ್ – ಮುರಿದ ಎಲುಬಿನ ಮೇಲೆ ಗುರುತು ಮಾಡಲು.

5. ಡ್ರಿಲ್ ಸ್ಲೀವ್ – ಮುರಿದ ಎಲುಬಿನ ಗುರುತಿನ ಜಾಗದಲ್ಲಿ ಇದನ್ನು ಇಡಲಾಗುವುದು.

6. ಡ್ರಿಲ್ ಬಿಟ್ – ಡ್ರಿಲ್ ಸ್ಲೀವ್‌ನ ಮುಖಾಂತರ ಡ್ರಿಲ್ ಬಿಟ್‌ನ್ನು ಹಾಯಿಸಿ ಅಸ್ಥಿಮುಜ್ಜೆ ಕಂಬಿ ಮತ್ತು ಎಲುಬಿನ ಎರಡು ಬದಿಗೆ ರಂಧ್ರವನ್ನು ಹಾಕುವುದು.

7. ಮೊಳೆ ಡ್ರೈವರ್ ಸ್ಲೀವ್ – ಇದರ ಮುಖಾಂತರ ಮೊಳೆಗಳನ್ನು ಅಸ್ಥಿಮಜ್ಜೆ ಕಂಬಿ ಹಾಗೂ ಎಲುಬಿನ ಎರಡು ಬದಿಯ ಜೊತೆ ಸೇರಿಸಿ ಬಿಗಿಯುವುದು.

8. ಸ್ಟೀನ್‌ಮನ್‌ಪಿನ್ – ಇದರ ಮುಖಾಂತರ ಅಸ್ಥಿಮಜ್ಜೆ ಕಂಬಿಯನ್ನು ಮುರಿದ ಎಲುಬಿನ ಒಳಗಡೆ ಕಳುಹಿಸುವುದು.

9. ವೈರಿಂಗ್ – ಮುರಿದ ಎಲುಬಿನ ತುಣುಕುಗಳನ್ನು ಬಿಗಿಯಾಗಿಸುವುದಕ್ಕೆ.

10. ಪವರ್ ಡ್ರಿಲ್ – ಇದರ ಮುಖಾಂತರ ಡ್ರಿಲ್ ಬಿಟ್‌ನ ಸಹಾಯದಿಂದ ಎಲುಬಿನ ಮೇಲೆ ರಂಧ್ರಗಳನ್ನು ಹಾಕುವುದು.

11. ಮೊಳೆ ಡ್ರೈವರ್ – ಎಲುಬಿನ ರಂಧ್ರಗಳ ಮೇಲೆ ಮೊಳೆಗಳನ್ನು ಬಿಗಿಯಾಗಿಸಲು.

ಶಸ್ತ್ರ ಚಿಕಿತ್ಸೆ ಮುಂಚೆ ತಯಾರಿ, ಔಷಧಿ ಮತ್ತು ಅರವಳಿಕೆ :– ಟಿಬಿಯಾ ಮೂಳೆ ಮುರಿತಕ್ಕೆ ಒಳಗಾದ ಜಾನುವಾರುಗಳಿಗೆ ಶಸ್ತ್ರ ಚಿಕಿತ್ಸೆಯ 48 ಗಂಟೆ ಮತ್ತು 24 ಗಂಟೆ ಮುಂಚೆ ಆಹಾರ ಮತ್ತು ನೀರನ್ನು ಕ್ರಮವಾಗಿ ತಡೆಹಿಡಿಯಲಾಯಿತು. ಮುರಿದ ಹಿಂಗಾಲಿನ ಭಾಗದ ಚರ್ಮದ ರೋಮಗಳನ್ನು ತೆಗೆದು ಸೆವಲಾನ್ ಮುಖಾಂತರ ಸ್ವಚ್ಛಗೊಳಿಸುವುದು.

ಶಸ್ತ್ರ ಚಿಕಿತ್ಸೆಯ 5 ಗಂಟೆ ಮುಂಚೆ ಸಿಪ್ಪ್ರಿಯಾಗ್ಲೋನ್ ಜೊತೆ ಟ್ಯಾಜೋಬ್ಯಾಕ್ಟಮ್ (3.0 ಗ್ರಾಂ.) ಜೀವನಿರೋಧಕ ಹಾಗೂ ಮೆಲಾಕ್ಸಿಕ್ಯಾಮ್ (12 ಮೀಲಿ) ಬಾವು ಶಮನಗೊಳಿಸುವ ಔಷಧಿಯನ್ನು ಮಾಂಸಖಂಡದೊಳಗೆ ನೀಡಲಾಯಿತು. ಈ ಶಸ್ತ್ರ ಚಿಕಿತ್ಸೆಯನ್ನು ಅರವಳಿಕೆ ಔಷಧಿಗಳಾದ ಜೈಲಾಜಿನ್ (0.1 ಮೀ.ಗ್ರಾಂ. ಪ್ರತಿ ಕೆ.ಜಿ. ದೇಹದ ತೂಕಕ್ಕೆ) ಅಬಿದಮನಿಯ ಒಳಗಡೆ ನೀಡಲಾಯಿತು. 5 ನಿಮಿಷದ ನಂತರ ಕಿಟಾಮಿನ್ (4 ಮೀ.ಗ್ರಾಂ. ಪ್ರತಿ ಕೆ.ಜಿ. ದೇಹದ ತೂಕಕ್ಕೆ) ಅನುಗುಣವಾಗಿ ಅಬಿದಮನಿಯ ಒಳಗಡೆಗೆ ನೀಡಲಾಯಿತು. ತಕ್ಷಣವೇ, ಶೇ. 4 ಐಸೋಫ್ಲೋರಿನ್ ಅರವಳಿಕೆಯನ್ನು ಶ್ವಾಸನಾಳದ ಮುಖಾಂತರ ಮೊದಲಿಗೆ ನೀಡಲಾಯಿತು. ನಂತರದಲ್ಲಿ ಶೆ. 1 ರಿಂದ 2 ರ ಐಸೋಫ್ಲೋರಿನ್ ನೀಡುತ್ತ, ಮುರಿದ ಟಿಬಿಯಾ ಮೂಳೆಯ ಶಸ್ತ್ರ ಚಿಕಿತ್ಸೆಯ ಮುಖಾಂತರ ಜೋಡಣೆ ಮಾಡಿ ಪೂರ್ಣಗೊಳಿಸಲಾಯಿತು.

ಮುರಿದ ಟಿಬಿಯಾಗೆ ಶಸ್ತ್ರ ಚಿಕಿತ್ಸೆಗೆ ತಲುಪುವುದು :– ಮುರಿದ ಟಿಬಿಯಾ ಮೂಳೆಗೆ ತಲುಪಲು ಒಳಗಿನ ಭಾಗದ ಚರ್ಮದ ಮೇಲೆ ಛೇದನ ಮಾಡಬೇಕು. ಚರ್ಮದ ಕೆಳಗಡೆ ಪದರನ್ನು ಬೇರ್ಪಡಿಸಲಾಯಿತು. ಟಿಬಿಯಾ ಅಭಿದಮನಿ, ಅಪಧ'ಮನಿ ಮತ್ತು ನರಗಳನ್ನು ಕಾಪಾಡಿಕೊಳ್ಳಲಾಯಿತು. ಮುರಿದ ಮೂಳೆಯನ್ನು ಸರಿಯಾದ ರೀತಿಯಲ್ಲಿ ಜೋಡಿಸಲು ಕಾಲಿನ ಕುರದ ಕೆಳಗಡೆ ಹಾಗೂ ಹಿಂಗಾಲಿನ ತೊಡೆಯ ಸುತ್ತ ಹಗ್ಗ ಹಾಕಿ ಎದುರು–ಬದುರು ಜಗ್ಗಲಾಯಿತು. ಮುರಿದ ಮೂಳೆ ಜೋಡಣೆಯಾದನಂತರ ಅಸ್ಥಿಮಜ್ಜೆ ಕಂಬಿ ವಿಧಾನ ಅಳವಡಿಸಲಾಯಿತು. ಕ್ರೊಮಿಕ್ ಕ್ಯಾಟ್‌ಗಟ್ ಸಂಖ್ಯೆ 2 ಮುಖಾಂತರ ಚರ್ಮದ ಕೆಳಗಡೆ ಹೊಲಿಗೆ ಹಾಕುವುದು. ಚರ್ಮವನ್ನು ನೈಲಾನ್ ಮುಖಾಂತರ ಹೊಲಿಗೆ ಹಾಕಲಾಯಿತು.

ಶಸ್ತ್ರ ಚಿಕಿತ್ಸೆ ನಂತರ ನಿರ್ವಹಣೆ :– ಸಿಪ್ಪ್ರಿಯಾಗ್ಲೋನ್ ವಿಥ್ ಟ್ಯಾಜೋಬ್ಯಾಕ್ಟಮ್ @ 20 ಮೀ.ಗ್ರಾಂ. ಪ್ರತಿ ಕೆ.ಜಿ. ಜಾನುವಾರುವಿನ ದೇಹದ ತೂಕಕ್ಕೆ ಹಾಗೂ ಮೆಲಾಕ್ಸಿಕ್ಯಾಮ್ @ 0.4 ಮೀ.ಗ್ರಾಂ. ಪ್ರತಿ ಕೆ.ಜಿ. ಜಾನುವಾರುವಿನ ದೇಹದ ತೂಕಕ್ಕೆ

10 ದಿನಗಳ ವರೆಗೆ ನೀಡಲಾಯಿತು. ಶಸ್ತ್ರ ಚಿಕಿತ್ಸೆ ಮಾಡಿದ ಗಾಯವನ್ನು ನಂಜು ನಿರೋಧಕ ಮುಲಾಮು – ಲೊರಾಕ್ಸಿನ್ ನಿಂದ ಹಚ್ಚಲಾಯಿತು. ಚರ್ಮದ ಹೊಲಿಗೆಯನ್ನು 14 ದಿನಗಳ ನಂತರ ತೆಗೆಯಲಾಯಿತು.

ಉಲ್ಲೇಖಗಳು:

1. ಆಡಮ್ಸ್, ಎಸ್.ಬಿ. ಮತ್ತು ಫೆಸಲರ್, ಜೆ.ಎಫ್., 1983. ದನಗಳಲ್ಲಿ ಥಾಮಸ್ ಸ್ಪ್ಲಿಂಟ್ – ಕ್ಯಾಸ್ಟ್ ಜೊತೆಗೂಡಿ ರೆಡಿಯಾ ಅಲನಾ ಮತ್ತು ಟಿಬಿಯಾ ಮೂಳೆ ಮುರಿತಗಳನ್ನು ಚಿಕಿತ್ಸೆ ಮಾಡಲಾಯಿತು. ಜೆ.ಎಂ.ವೆಟ್.ಮೆಡ್.ಅಸೋ.,183 (4) :430–433

2. ಐತಾಳ್, ಹೆಚ್.ಪಿ., ಕಿಂಜವಾಡೆಕರ್, ಪಿ., ಅಮರ್‌ಪಾಲ್, ಪಾವಡೆ, ಎ.ಎಂ., ಸಿಂಘ, ಜಿ.ಆರ್. ಮತ್ತು ಸೇಟಿಯಾ, ಹೆಚ್.ಸಿ., 2010. ಟಿಬಿಯಾ ಮೂಳೆಯ ಮುರಿತಕ್ಕೊಳಗಾದ ಎರಡು ಕರುಗಳಲ್ಲಿ ವೃತ್ತಕಾರದ ಬಾಹ್ಯ ಬಂಧನಿ ಬಳಸಿ ಚಿಕಿತ್ಸೆ ಮಾಡಿರುವುದು. ವೆಟ್.ಸರ್ಜ್., 39(5):621–6

3. ಬೇರ್ಡ್, ಎ.ಎನ್. ಮತ್ತು ಆಡಮ್ಸ್, ಎಸ್.ಬಿ., 2014. ಮೂಳೆ ಮುರಿಕ್ಕೊಳಗಾದ ದನಗಳಲ್ಲಿ ಥಾಮಸ್ ಸ್ಪ್ಲಿಂಟ್ ಹಾಗೂ ಕ್ಯಾಸ್ಟ್, ವಾಕರ್ ಸ್ಪ್ಲಿಂಟ್ ಮತ್ತು ಸ್ಪೈಕಾ ಬ್ಯಾಂಡೇಜ್ ಹಾಕಿ ರಿಪೇರಿ ಮಾಡುವುದು. ವೆಟ್.ಕ್ಲಿನ್.ನಾರ್ಥ್ ಎಎಂ.ಫುಡ್ ಎನಿಮ್.ಪ್ರಾಕ್ಟಿಸ್.,30(1):77–90

4. ಬೆಲನ್, ಜೆ. ಮತ್ತು ಮೂಲನ್, ಪಿ.ವೈ., 2011. ಫೀಮರ್ ಮೂಳೆ ಮುರಿತಕ್ಕೊಳಗಾದ 25 ಕರುಗಳಲ್ಲಿ ನಾವೆಲ್ ಅಸ್ಥಿಮಜ್ಜೆ ಕಂಬಿ ಮುಖಾಂತರ ರೀಪೇರಿ ಮಾಡುವುದು. ಜೆ.ಎಂ.ವೆಟ್. ಮೆಡ್.ಅಸೋ.,238(11):1490–6

5. ಗ್ಯಾಂಗ್ಲ, ಎಂ., ಗ್ರುಲ್ಕೆ, ಎಸ್., ಸೆರ್ಬಿಯನ್, ಡಿ. ಮತ್ತು ಟೊಯಾಟಿ, ಕೆ., 2006. ಮೂಳೆ ಮುರಿತಕ್ಕೊಳಗಾದ 99 ದನಗಳಲ್ಲಿ ಹೊರಗಡೆ ಕಾಲಿನ ಸುತ್ತ ಪಟ್ಟಿ ಸುತ್ತುವುದು ಅಥವಾ ಬಂಧನದಲ್ಲಿಡುವುದು. ದಿ ವೆಟ್.ರೆಕಾ., 158(8):264–268

6. ಹ್ಯಾಮಿಲ್ಟನ್, ಜಿ.ಎಫ್. ಮತ್ತು ಟುಲ್ಲೆನರ್ಸ್, ಇ.ಪಿ., 1980. ಟಿಬಿಯಾ ಮೂಳೆ ಮುರಿತಕ್ಕೊಳಗಾದ ಕರುಗಳಲ್ಲಿ ಟ್ರಾನ್ಸ್‌ಫಿಕ್ಸೆಶನ್ ಪಿನ್ನಿಂಗ್ ಮಾಡುವುದು. ಜೆ.ಎಂ.ವೆಟ್.ಮೆಡ್. ಅಸೋ.,176(8):725–727

7. ಕಾಜಿಮೆಂಗಲ್ಲು, ಸಿ., ಅಕ್ಕೊಗ್ಯಾನ್, ವೈ., ಸೆನಾರ್, ಎಂ., ಕ್ರುತ್ಲುಮಸ್, ಎ., ಕರಪಿನಾರ್, ಹೆಚ್. ಮತ್ತು ಉಜುನ್, ಬಿ., 2008. ಹೊರಗಡೆ ಮೂಳೆಯ ಕಾರ್ಟಿಕ್ಸ್ ತುಂಡಾಗುವುದು ಹಾಗೂ ಒಳಗಡೆ ಟಿಬಿಯಾ ಆಸ್ಟಿಯಾಟೋಮಿ – ಎ ಬೈಯೋಮೆಕಾನಿಕಲ್ ಸ್ಟಡೀ. ನೀ.,15(4):305–8

8. ಲೋಪ್ಸ್, ಸಿ.ಎ.ಸಿ., ಬಾರ್ಬೋಸಾ, ಸಿ.ಇ., ಪೌಲಾ, ಎ.ಜೆ.ಎಂ., ಮರೆನ್‌ಹೋ ಡೇ, ಓ.ಸಿ., ಬಾಸ್ಟೋಸ್, ಎ.ಜೆ.ಎ. ಮತ್ತು ಡೇ ಅಜೇವೆಡು, ಸಿ.ಎನ್., 2014. 22 ಕಾಲು ಮುರಿತಕ್ಕೊಳಗಾದ ದೊಡ್ಡ ಮೆಲುಕು ಹಾಕುವ ಪ್ರಾಣಿಗಳಲ್ಲಿ ಸಾಂಪ್ರದಾಯವಾದಿ ಮತ್ತು ಶಸ್ತ್ರ ಚಿಕಿತ್ಸೆ. ಪಸ್ಕಿಸಾ ವೆಟರಿನೆರಿಯಾ ಬ್ರೆಸಿಲೈರಾ., 34(11):1045–1050

9. ಮಾರ್ಟಿನ್ಸ್, ಎ., ಸ್ಟೆನೌಟ್, ಎಂ., ಗೇಸ್ಟಿಹ್ಯೂಸ್, ಎಫ್., ಕ್ಯೂಪೆರೆ, ಸಿ.ಡಿ., ಮೂರ್, ಎ.ಡಿ. ಮತ್ತು ವೆರ್ಚುಟೆನ್, ಎಫ್., 1998. ಟಿಬಿಯಾ ಮೂಳೆ ಮುರತಕ್ಕೊಳಗಾದ ದನಗಳಲ್ಲಿ ಸಾಂಪ್ರದಾಯವಾಗಿ ಮತ್ತು ಶಸ್ತ್ರ ಚಿಕಿತ್ಸೆಯಿಂದ ರಿಪೇರಿ ಮಾಡುವುದು. ದಿ ವೆಟ್.ರೆಕಾ., 143(1):12–16

10. ನಸ್, ಕೆ., ಸ್ಟೆಸ್, ಎ., ಫಿಸ್ಟ್, ಎಂ. ಮತ್ತು ಕಸ್ಟಲಿನ್, ಆರ್., 2011. 125 ಹುಟ್ಟಿದ ಕರುಗಳಲ್ಲಿ ಉದ್ದನೆಯ ಮೂಳೆಯ ಚಿಕಿತ್ಸೆ ಮಾಡಿರುವುದು. ಟೈರ್ಜಟಲ್ ಪ್ರಾಕ್ಸ್ ಅಸ್ಟ್ ಜಿ ಗ್ರಾಸ್ಟೈರ್ ನಟ್ಜ್‌ಟೈರೆ, 39(1):15–26

11. ಸಿಂಗ್, ಎ.ಪಿ., ಗಜರಾಜ್ ಸಿಂಗ್ ಮತ್ತು ಪ್ರೇಮ್ ಸಿಂಗ್, 2002. ಮೂಳೆ ಮುರಿತ. ಇಲ್ಲಿ: ಮೆಲುಕು ಹಾಕುವ ಪ್ರಾಣಿಗಳಲ್ಲಿ ಶಸ್ತ್ರ ಚಿಕಿತ್ಸೆ. ಎಡಿಟ್. ತ್ಯಾಗಿ,ಆರ್.ಪಿ.ಎಸ್. ಮತ್ತು ಜಿತ್‌ಸಿಂಗ್, ಸಿಬಿಎಸ್ ಪಬ್ಲಿಷರ್ಸ್ ಮತ್ತು ಡಿಸ್ಟ್ರಿಬುಟರ್ಸ್, ನವದೆಹಲಿ, ಭಾರತ

ಚಿತ್ರ–1: ಎಡ ಹಿಂಗಾಲಿನ ಟಿಬಿಯಾ ಮೂಳೆ ಮುರಿದಿರುವ ಆಕಳು

ಚಿತ್ರ–2: ಕಾಲು ಮಡಿಚಿ ಗಾಳಿಯಲ್ಲಿ ಎತ್ತಿ ಕಾಲ ಮೇಲೆ ಭಾರ ಹಾಕದಿರುವುದು

ಚಿತ್ರ-೩: ಶಸ್ತ್ರ ಚಿಕಿತ್ಸೆಗೆ ಸಜ್ಜಾಗಿರುವ ಮೂಳೆಮುರಿದಿರುವ ಹಿಂಗಾಲು

ಚಿತ್ರ-೬: ಕ್ಷ-ಕಿರಣ ಛಾಯಾ ಚಿತ್ರ - ಸ್ಟೇನ್‌ಲೆಸ್ ಸ್ಟೀಲ್‌ನ ಅಸ್ತಿಮಜ್ಜೆ ಕಂಬಿ ಹಾಗೂ ತಂತಿಯಿಂದ ಮುರಿದ ಟಿಬಿಯಾ ಎಲುಬಿನ ಜೋಡಣೆ ಮಾಡಿರುವುದು

ಚಿತ್ರ-4: ಶಸ್ತ್ರ ಚಿಕಿತ್ಸೆಯ ಮೂಲಕ ಮುರಿದಿರುವ ಟಿಬಿಯಾ ಮೂಳೆ ಹೊರತೆಗೆದಿರುವುದು

ಚಿತ್ರ-7: ಮೂಳೆಯ ಶಸ್ತ್ರ ಚಿಕಿತ್ಸೆಯ ನಂತರ ಚರ್ಮಕ್ಕೆ ಹೊಲಿಗೆ ಹಾಕಿರುವುದು



ಚಿತ್ರ-೫: ಸ್ಟೇನ್‌ಲೆಸ್ ಸ್ಟೀಲ್‌ನ ಅಸ್ತಿಮಜ್ಜೆ ಕಂಬಿ ಹಾಗೂ ತಂತಿಯಿಂದ ಮುರಿದ ಟಿಬಿಯಾ ಎಲುಬಿನ ಜೋಡಣೆ ಮಾಡಿರುವುದು

ಟೀನಿಯಾ ಸೋಲಿಯಂ ಎಂಬ ಲಾಡಿ ಹುಳು ಮತ್ತು ಮೆದುಳಿನ ನ್ಯೂರೋಸಿಸ್ಟಿಸರ್ಕೋಸಿಸ್

ಕೃಷ್ಣಮೂರ್ತಿ, ಸಿ. ಎಂ.
ಸಹಾಯಕ ಪ್ರಾಧ್ಯಾಪಕರು , ಪಶುವೈದ್ಯಕೀಯ ಪರೋಪಜೀವಿ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ, ಬೀದರ್ ಮಿಂಚಂಚೆ: doctorkitty1980@gmail.com

ಟೀನಿಯಾ ಸೋಲಿಯಂ ಎಂಬ ಲಾಡಿ ಹುಳು (ಜಂತು ಹುಳು) ಮನುಷ್ಯನ ಸಣ್ಣ ಕರುಳಿನಲ್ಲಿರುತ್ತವೆ. ಈ ಜಂತುಹುಳುಯುಕ್ತ ಮನುಷ್ಯ ಬಯಲು ಮಲವಿಸರ್ಜನೆ ಮಾಡಿದಾಗ, ಹಂದಿಗಳು ಸ್ವೇಚ್ಛೆಯಿಂದ ಈ ಮಲವನ್ನು ತಿಂದಾಗ ಹಂದಿಗಳ ಮಾಂಸಖಂಡದಲ್ಲಿ ಈ ಜಂತುಹುಳಿನ ಲಾರ್ವಾಗಳು/ಮರಿಗಳು (ಅಖಿಣುಳಖಜಖಿಳಿಷ) ಶೇಖರಣೆಗೊಳ್ಳುತ್ತವೆ. ಮತ್ತೊಬ್ಬ ಆರೋಗ್ಯವಂತ ಮನುಷ್ಯ ಈ ರೋಗಗ್ರಸ್ತ ಹಂದಿ ಮಾಂಸವನ್ನು ಸರಿಯಾಗಿ ಬೇಯಿಸದೆ ತಿಂದಾಗ ಈ ಲಾರ್ವಾಗಳು/ಮರಿಗಳು ಬೆಳೆದು ಪ್ರಬುದ್ಧ ಲಾಡಿ ಹುಳುಗಳಾಗುತ್ತವೆ. ಮಾನವನ ವಿಸರ್ಜನಾ ತ್ಯಾಜ್ಯಮಿಶ್ರಿತ ಕೊಳಚೆ ನೀರನ್ನು ತರಕಾರಿ ಬೆಳೆಯುವುದಕ್ಕಾಗಿ ಹಾಗೂ ಮೇಲು ಗೊಬ್ಬರವಾಗಿ ಉಪಯೋಗಿ ಬೆಳೆದ ತರಕಾರಿಗಳು, ಹಸಿರು ಎಲೆ ಹಾಗೂ ಹಸಿರು ಸೊಪ್ಪುಗಳಾದ ಕೊತ್ತಂಬರಿ, ಪುದೀನಾಗಳಲ್ಲಿ ಲಾಡಿಹುಳುವಿನ ಮೊಟ್ಟೆಗಳು ಶೇಖರಣೆಗೊಂಡಿರುವ ಸಾಧ್ಯತೆ ಇರುತ್ತವೆ.

ಆರೋಗ್ಯವಂತ ವ್ಯಕ್ತಿಯು ಈ ರೀತಿ ರೋಗಗ್ರಸ್ತವಾದ/ಸರಿಪೂರ್ಣವಾಗಿ ಬೇಯಿಸದ ಹಂದಿ ಮಾಂಸವನ್ನು ತಿನ್ನುವುದರಿಂದ ಮತ್ತು ಸರಿಯಾಗಿ ತೊಳೆಯದ ಕಾಯಿಪಲ್ಯಗಳನ್ನು ಬಳಸುವುದರಿಂದ ಈ ಸಿಸ್ಟಿಸರ್ಕಸ್‌ಗಳು ವ್ಯಕ್ತಿಯ ಸಣ್ಣಕರುಳಿನಲ್ಲಿ ಪ್ರಬುದ್ಧ ಹಂತಕ್ಕೆ ಬೆಳೆದು ಸರಿತಾನಾಖವೃನ್ನಿ ಪ್ರಾರಂಭಿಸಿ ಮೊಟ್ಟೆಗಳನ್ನು ಮಲದೊಂದಿಗೆ ವಿಸರ್ಜಿಸುತ್ತವೆ. ಆದರೆ ಕೆಲವು ಬಾರಿ ಈ ಮರಿ ಲಾಡಿ ಹುಳುಗಳು ಸಣ್ಣಕರುಳಿನ ಭಾಗವನ್ನು ತೂರಿಕೊಂಡು ಯಕೃತ್ತಿಗೆ ಸರಿಪರ್ಕ ಕಲ್ಪಿಸುವ ರಕ್ತನಾಳವನ್ನು ಪ್ರವೇಶಿಸಿ ಅಲ್ಲಿಂದ ಹೃದಯದ ಮುಖೇನ ದೇಹದ ವಿವಿಧ ಭಾಗಗಳಿಗೆ ಚಲಿಸಿ ಯಾವುದಾದರು ಒಂದು ಅಂಗದಲ್ಲಿ ವಯಸ್ಕ ಸ್ಥಿತಿ ತಲುಪಿದ ಸಣ್ಣ ಸಣ್ಣ ಗಡ್ಡೆಗಳ ರೂಪದಲ್ಲೇ ಅಸ್ಥಿತ್ವ ಹೊಂದುತ್ತವೆ. ಈ ಹಂತವನ್ನು ಸಿಸ್ಟಿಸರ್ಕೋಸಿಸ್ ಎಂದು ವ್ಯಾಖ್ಯಾನಿಸಲಾಗುತ್ತದೆ. ಉದಾ: ಯಕೃತ್ತು (ಯಕೃತ್ತಿನ ಸಿಸ್ಟಿಸರ್ಕೋಸಿಸ್), ಮೂತ್ರಪಿಂಡ (ಮೂತ್ರಪಿಂಡದ ಸಿಸ್ಟಿಸರ್ಕೋಸಿಸ್), ಮಾಂಸಖಂಡಗಳು (ಮಾಂಸಖಂಡದ ಸಿಸ್ಟಿಸರ್ಕೋಸಿಸ್ ಹಾಗೂ ನರಮಂಡಲವ್ಯೂಹ (ಮಿದುಳಿನ ಸಿಸ್ಟಿಸರ್ಕೋಸಿಸ್). ಪಾರ್ಶ್ವವಾಯು, ಮೆದುಳಿನ ಉರಿಯೂತ, ಕೋಮ, ಪಿಡಿಸು ಅಥವಾ ಬುದ್ಧಿಮಾಲಿನ್ಯ ಲಕ್ಷಣಗಳು ಗೋಚರಿಸಬಹುದು.

ಮನುಷ್ಯ ಹಾಗೂ ಪ್ರಾಣಿಗಳನ್ನು ಕಾಡುವ ರೋಗಗಳನ್ನು ನೆನೆದೊಡನೆ ತಟ್ಟೆಂದು ಗೋಚರಿಸುವುದು ಸೋಂಕು ರೋಗಗಳನ್ನು ಉಂಟುಮಾಡುವ ಬ್ಯಾಕ್ಟೀರಿಯಾ, ವೈರಸ್ ಮತ್ತು ಶಿಲೀಂಧ್ರಗಳು. ಇವುಗಳಷ್ಟೆ ಮುಖ್ಯವಾದ ರೋಗಕಾರಕ ಪರೋಪಜೀವಿ ಅಥವಾ ಪರಾವಲಂಬಿ ಜೀವಿಗಳನ್ನು ಬಹಳ ಸಂದರ್ಭದಲ್ಲಿ ಉತ್ಪ್ರೇಕ್ಷಿಸಲಾಗುತ್ತದೆ. ಪ್ರಾಣಿಗಳಲ್ಲಿ ಪರಾವಲಂಬಿ ಜೀವಿಗಳಾದ ದುಂಡು, ಚಪ್ಪಟೆ ಹಾಗೂ ಲಾಡಿ ಹುಳುಗಳು ಸೂಕ್ಷ್ಮ ಜೀವಿಗಳಂತೆಯೆ, ಪ್ರಾಣಿಗಳು ಮತ್ತು ಮನುಷ್ಯರು ಒಟ್ಟೊಟ್ಟಿಗೆ ಹೊಂದಿಕೊಂಡು ಜೀವನ ನಡೆಸುವಂತಹ ಪರಿಸರದಲ್ಲಿ ಹಲವಾರು ರೋಗಗಳಿಗೆ ಎಡೆ ಮಾಡಿಕೊಡುತ್ತವೆ. ಇಂತಹ ಪರಿಸರದಲ್ಲಿ ಕೆಲವಾರು ರೋಗಗಳು ಪ್ರಾಣಿಗಳಿಂದ ಮನುಷ್ಯರಿಗೆ ಹಾಗೂ ಮನುಷ್ಯನಿಂದಲೂ ಪ್ರಾಣಿಗಳಿಗೆ ಹರಡುತ್ತಿರುತ್ತವೆ ಎಂಬುದು ದೃಢಪಟ್ಟ ವಿಷಯ. ಇಂತಹ ಕಾಯಿಲೆಗಳನ್ನು ನಾವು ಎ) ಅಷ್ಟೇನು ಅಪಾಯಕಾರಿಯಲ್ಲದವು, ಬಿ) ಅಪಾಯಕಾರಿ ಹಾಗೂ ಸಿ) ತುಂಬಾ ಅಪಾಯಕಾರಿ ರೋಗಗಳು ಎಂದು ವರ್ಗೀಕರಿಸಬಹುದು.

ಚಿತ್ರ 1. ಲಾಡಿ ಹುಳು (ಜಂತು ಹುಳು)

ನಾವು ತಿನ್ನುವ ಆಹಾರವನ್ನು ಸ್ವಚ್ಛಗೊಳಿಸದೆ ತಿನ್ನುವುದರಿಂದ ಕೆಲವು ಲಾಡಿಹುಳುಗಳ ಮೊಟ್ಟೆಗಳು ಶರೀರವನ್ನು ಪ್ರವೇಶಿಸಬಹುದು. ವಿವಿಧ ಅಂಗಾಂಗಗಳಲ್ಲಿ ಗೆಡ್ಡೆಗಳಾಗಿ ಪರಿವರ್ತಿತವಾಗಿ ಮಾರಣಾಂತಿಕವು ಆಗಬಹುದು. ಮೆದುಳನಲ್ಲಿ ಗೆಡ್ಡೆಗಳನ್ನು ಉಂಟುಮಾಡುವ ಟೀನಿಯಾ ಸೋಲಿಯಂ ಎಂಬ ಲಾಡಿಹುಳುವಿನಿಂದ ಮನುಷ್ಯರಲ್ಲಿ ಕಾಣಿಸಿಕೊಳ್ಳುವ ನ್ಯೂರೋಸಿಸ್ಟಿಸರ್ಕೋಸಿಸ್ ಎಂಬ ಖಾಯಿಲೆ ಇಂತಹ ತುಂಬ ಅಪಾಯಕಾರಿಯಾಗಬಲ್ಲ ಪ್ರಾಣಿಜನ್ಯ ರೋಗಗಳಲ್ಲಿ ಒಂದು.

ಈ ಖಾಯಿಲೆಯ ಇತಿಹಾಸ: ನ್ಯೂರೋಸಿಸ್ಟಿಸರ್ಕೋಸಿಸ್ ಖಾಯಿಲೆಯು ಇತ್ತೀಚಿನದೇನಲ್ಲ, ಕ್ರಿಸ್ತಪೂರ್ವ 384–322 ರಲ್ಲಿಯೇ ಅರಿಸ್ಟಾಟಲ್ ಈ ರೋಗದ ಬಗ್ಗೆ ಉಲ್ಲೇಖಿಸಿದ್ದಾನೆ. 1960 ರಲ್ಲಿ ಪರಾನೋಲಾ ಎಂಬ ವೈದ್ಯವಿಜ್ಞಾನಿ ಮಿದುಳಿನ ಸಿಸ್ಟಿಸರ್ಕೋಸಿಸ್ ರೋಗವನ್ನು ಒಬ್ಬ ವ್ಯಕ್ತಿಯ ಮರಣೋತ್ತರ ಪರೀಕ್ಷೆಯಲ್ಲಿ ಧೃಡಪಡಿಸಿದ್ದನು. ಈ ಕಾಯಿಲೆಯು ಹೆಚ್ಚಾಗಿ ದಕ್ಷಿಣಅಮೇರಿಕಾ, ಮಧ್ಯಅಮೇರಿಕ ಹಾಗೂ ದಕ್ಷಿಣಪೂರ್ವಏಷ್ಯಾದ ರಾಷ್ಟ್ರಗಳಾದ ಭಾರತ, ಶ್ರೀಲಂಕಾಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಎಲ್ಲಿ ಹಂದಿಗಳ ಸಾಕಾಣಿಕೆ ಹೆಚ್ಚಿದೆಯೋ ಹಾಗೂ ಹಂದಿ ಮಾಂಸ ಮತ್ತು ಅದರ ಉತ್ಪನ್ನಗಳ ಬಳಕೆ ಹೆಚ್ಚು ಇದೆಯೋ ಅಲ್ಲಿ ಈ ಕಾಯಿಲೆ ಸಾಮಾನ್ಯವಾಗಿ ಕಂಡುಬರುತ್ತದೆ. ಒಟ್ಟನಲ್ಲಿ ಹೇಳಬೇಕಾದರೆ, ಬಡರಾಷ್ಟ್ರಗಳು ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಈ ಸಮಸ್ಯೆಯ ತೀವ್ರತೆ ಹೆಚ್ಚು. ಭಾರತದಲ್ಲಿ ಬಹಳ ಮಂದಿ ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಇತ್ತೀಚಿಗೆ ಖ್ಯಾತ ಟೆನಿಸ್ ಕ್ರೀಡಾಪಟು ಮಹೇಶ್ ಭೂಪತಿಯವರು ಈ ಸಮಸ್ಯೆಯಿಂದ ಬಳಲಿದ್ದರು. ಇತ್ತೀಚೆಗೆ ನಡೆದಿರುವ ಸಂಶೋಧನೆಯ ಪ್ರಕಾರ ಶೇ.೩೦% ರಷ್ಟು ಪಿಡಿಸು

ರೋಗಿಗಳು ಈ ಕಾಯಿಲೆಯನ್ನು ಹೊಂದಿರುತ್ತಾರೆ ಎಂದು ತಿಳಿದುಬಂದಿರುತ್ತದೆ.

ಜೀವನಚಕ್ರ: ಸಾಮಾನ್ಯವಾಗಿ ಮನುಷ್ಯರಲ್ಲಿ ಕಂಡುಬರುವ ಲಾಡಿ ಹುಳುಗಳಲ್ಲಿ ಅತೀ ಪ್ರಾಮುಖ್ಯತೆ ಹೊಂದಿರುವಂತಹ ಈ ಲಾಡಿಹುಳುವಿನ ವೈಜ್ಞಾನಿಕ ಹೆಸರು"ಟೀನಿಯಾ ಸೋಲಿಯಂ". ಇವುಗಳು ಮನುಷ್ಯನ ಸಣ್ಣ ಕರುಳನಲ್ಲಿ ವಾಸ್ತವ್ಯ ಹೂಡಿರುತ್ತವೆ. ಹಾಗೂ ಅವುಗಳ ವಂಶಾಭಿವೃದ್ಧಿಯಿಂದ ಉತ್ಪತ್ತಿಯಾಗುವ ಮರಿಗಳು, ಮೊಟ್ಟೆಗಳಿಂದ ಕೂಡಿದ ತುಂಬಿದ ಚೀಲದಂತಿರುವ ಕೊನೆಯ ಹಂತದ ಲಾಡಿಗಳು ದೇಹದ ಭಾಗದಿಂದ ಸಡಿಲಗೊಂಡು ಮಲದ ಜೊತೆಗೆ ಹೊರಗಿನ ವಾತಾವರಣಕ್ಕೆ ವಿಸರ್ಜಿಸಲ್ಪಡುತ್ತವೆ. ಈ ಬೇರ್ಪಟ್ಟ ಲಾಡಿಯ ತುಂಡುಗಳು 100000 ದಿಂದ 2,00000 ಮೊಟ್ಟೆಗಳಿಂದ ತುಂಬಿದ್ದು ಇವುಗಳು ಹರಡಿದಂತೆ' ಪರಿಸರವೆಲ್ಲಾ ಮಲಿನವಾಗುತ್ತದೆ. ಇಂತಹ ಲಾಡಿಹುಳುಗಳನ್ನು ಹೊಂದಿರುವ ರೋಗಯುಕ್ತ ವ್ಯಕ್ತಿ ಅಥವಾ ಮಗು ಬಯಲು ಮಲವಿಸರ್ಜನೆ ಮಾಡಿ, ಆ ಪ್ರದೇಶದಲ್ಲಿ ಹಂದಿಗಳು ಸ್ವೇಚ್ಛೆಯಿಂದ ಅಲೆಯುವ ಸಂದರ್ಭದಲ್ಲಿ' ಈ ಮಲವನ್ನು ತಿನ್ನುವುದರಿಂದ ಮೊಟ್ಟೆ ಗಳು ಹಂದಿಯ ದೇಹವನ್ನು ಸೇರಿಕೊಳ್ಳುತ್ತವೆ.

ಚಿತ್ರ 2. ಸ್ವೇಚ್ಛೆಯಿಂದ ಅಲೆಯುವ ಹಂದಿಗಳು

ಮುಂದಿನ ಹಂತದ ಅಭಿವೃದ್ಧಿಯು ಹಂದಿಯ ದೇಹದಲ್ಲಿ ಉಂಟಾಗಿ ವಿವಿಧ ಗಾತ್ರ ಮತ್ತು ಆಕಾರದ ನೀರ್ಗುಳ್ಳೆ (ಅಥಿಣಖಜಿಣ) ರೀತಿಯ ಆಕೃತಿಗಳು ಮಾಂಸಖಂಡಗಳಲ್ಲಿ, ಹೃದಯ, ಯಕೃತ್ತು ಮತ್ತು ಮೂತ್ರಕೋಶದಂತಹ ಅಂಗಗಳಲ್ಲಿ ಶೇಖರಣೆಗೊಂಡಿರುತ್ತವೆ. ಈ ರೀತಿಯ ನೀರ್ಗುಳ್ಳೆಗಳಿಂದ ಕೂಡಿದ ಹಂದಿಗಳು ಸಾಮಾನ್ಯ ಸ್ಥಿತಿಯಲ್ಲಿದ್ದು, ಯಾವುದೇ ರೀತಿಯ ರೋಗಲಕ್ಷಣಗಳು ಅಷ್ಟಾಗಿ ಕಂಡುಬರುವುದಿಲ್ಲವೆಂಬುದು ವೈದ್ಯಶಾಸ್ತ್ರದಲ್ಲಿನ ಸೋಜಿಗದ ಸಂಗತಿಯೇ ಸರಿ. ಜೈವಿಕ ವಿಕಾಸದಲ್ಲಿ ನಾನು ಬದುಕಬೇಕು ನನ್ನನ್ನು ಸಲಹುವವರು ಬದುಕಬೇಕೆಂಬ ವಿವೇಚನೆ ಈ ಲಾಡಿಹುಳುಗಳಿಗೆ ಪ್ರಕೃತಿಯೇ ತಿಳಿಸಿಕೊಟ್ಟ ಪಾಠ.



ಚಿತ್ರ 3. ಹಂದಿ ಮಾಂಸ ಖಂಡದಲ್ಲಿ ನೀರ್ಗುಳ್ಳೆಗಳು (Cysticercus)

ಆದರೆ ಈ ಹಂದಿಯ ಮಾಂಸವನ್ನು ಸಂಪೂರ್ಣವಾಗಿ ಬೇಯಿಸದೆ ಬಳಸುವುದರಿಂದ/ತಿನ್ನುವುದರಿಂದ ಈ ನೀರ್ಗುಳ್ಳೆ ರೀತಿಯ ಮರಿ ಲಾಡಿಹುಳುಗಳು ಮಾಂಸಖಂಡದಿಂದ ಬಿಡುಗಡೆ ಹೊಂದಿ ಮಾನವನ ಸಣ್ಣ ಕರುಳನಲ್ಲಿ ವಾಸ್ತವ್ಯ ಹೂಡುತ್ತವೆ. ಮುಂದೆ ಇವುಗಳು ಬೆಳೆದು ಗಂಡು ಮತ್ತು ಹೆಣ್ಣು ಎಂದು ವರ್ಗೀಕರಣಗೊಂಡು ಸಂತಾನಾಭಿವೃದ್ಧಿ ಪ್ರಾರಂಭಿಸುತ್ತವೆ. ವಯಸ್ಕ ಹೆಣ್ಣು ಲಾಡಿಹುಳುಗಳು ಮೊಟ್ಟೆಗಳನ್ನು ಉತ್ಪಾದಿಸಿ ತನ್ನ ದೇಹದ ಕೊನೆಯ ಭಾಗಗಳಲ್ಲಿ ಶೇಖರಿಸಿಡುತ್ತವೆ ಹಾಗೂ ಮುಂದೆ ತನ್ನ ಜೀವನಚಕ್ರವನ್ನು ಪೂರ್ಣಗೊಳಿಸುವ ಸಲುವಾಗಿ ಸಂಪೂರ್ಣವಾಗಿ ಮೊಟ್ಟೆಗಳಿಂದ ತುಂಬಿರುವ ದೇಹದ ಕೊನೆಯ ಭಾಗಗಳು ಅಥವಾ ಸೆಗ್ಮೆಂಟ್‌ಗಳನ್ನು ತನ್ಮೂಲಕ ಕಳಚಿಕೊಂಡು ಮಲದ ಮೂಲಕ ವಿಸರ್ಜಿಸಲ್ಪಡಲು ಅನುವುಮಾಡಿಕೊಡುತ್ತವೆ. ಹೀಗೆ ಜೀವನಚಕ್ರ ನಿತ್ಯ ನಿರಂತರವಾಗಿ ಪರಿಸರದಲ್ಲಿ ಮುಂದುವರಿಯುತ್ತಿರುತ್ತದೆ. ಸಸ್ಯಾಹಾರಿಗಳು ತಾವು ಮಾಂಸವನ್ನೆ ತಿನ್ನುವುದಿಲ್ಲ ಹಾಗಾಗಿ ತಾವು ಸುರಕ್ಷಿತ ಎಂದು ಭಾವಿಸಿದರೆ ಅದು ತಪ್ಪು. ಅದಕ್ಕೆ ಕಾರಣ ಈ ಲಾಡಿಹುಳು ಹರಡುವ ಇನ್ನೊಂದು ವಿಧಾನವೇನೆಂದರೆ ಹಲವು ಪಟ್ಟಣ ಪ್ರದೇಶಗಳಲ್ಲಿ ಮಾನವನ ವಿಸರ್ಜನಾ ತ್ಯಾಜ್ಯಮಿಶ್ರಿತ ಕೊಳಚೆ ನೀರನ್ನು ತರಕಾರಿ ಬೆಳೆಯುವುದಕ್ಕಾಗಿ ಹಾಗೂ ಮೇಲು ಗೊಬ್ಬರವಾಗಿ ಉಪಯೋಗಿಸುವುದುಂಟು.

ಚಿತ್ರ 4. ಕಲುಷಿತವಾಗಿರಬಹುದಾದ ತಾಜಾ ತರಕಾರಿಗಳು

ಈ ರೀತಿ ಬೆಳೆದ ತರಕಾರಿಗಳು, ಹಸಿರು ಎಲೆ ಹಾಗೂ ಹಸಿರು ಸೊಪ್ಪುಗಳಾದ ಕೊತ್ತಂಬರಿ, ಪುದೀನಗಳಲ್ಲಿ ಲಾಡಿಹುಳುವಿನ ಈ ಮೊಟ್ಟೆಗಳು ಶೇಖರಣೆಗೊಂಡಿರುವ ಸಾಧ್ಯತೆ ಇರುತ್ತದೆ. ಈ ರೀತಿ ರೋಗಯುಕ್ತ ತರಕಾರಿ, ಕಾಯಿಪಲ್ಯೆ, ಸೊಪ್ಪುಗಳನ್ನು ಸರಿಯಾಗಿ ಸ್ವಚ್ಛಗೊಳಿಸದೆ ಬಳಸುವುದರಿಂದಲೂ ಆರೋಗ್ಯವಂತ ವ್ಯಕ್ತಿಗಳು ರೋಗಕ್ಕೆ ತುತ್ತಾಗುವ ಸಂಭವ ಹೆಚ್ಚು. ಅದೇ ರೀತಿ ಕೆಲವು ರೀತಿಯ ಖಾದ್ಯಗಳಾದ ಹಣ್ಣುಗಳ ಸಲಾಡ್, ತರಕಾರಿ ಪ್ರೈಡ್‌ರೈಸ್ ಹಾಗೂ ಚಟ್ನಿಗಳ ತಯಾರಿಕೆಯಲ್ಲಿ ಕಾಯಿಪಲ್ಯಗಳನ್ನು ನಾವು ಹೆಚ್ಚು ಬೇಯಿಸದೆ ಹಾಗೆಯೆ ಬಳಸುವುದರಿಂದಲೂ ಈ ರೀತಿಯ ರೋಗ ಹರಡುವಿಕೆಯ ಸಾಧ್ಯತೆಗಳು ಹೆಚ್ಚಿರುತ್ತದೆ

ಪರಿಣಾಮಗಳು: ಆರೋಗ್ಯವಂತ ವ್ಯಕ್ತಿಯು ಈ ರೀತಿ ರೋಗಯುಕ್ತವಾದ ಹಾಗೂ ಸಂಪೂರ್ಣವಾಗಿ ಬೇಯಿಸದ ಹಂದಿ ಮಾಂಸವನ್ನು ತಿನ್ನುವುದರಿಂದ, ಸರಿಯಾಗಿ ತೊಳೆಯದ ಕಾಯಿಪಲ್ಯಗಳನ್ನು ಬಳಸುವುದರಿಂದ ಲಾಡಿ ಹುಳುವಿನ ಮರಿಯು ವ್ಯಕ್ತಿಯ ಸಣ್ಣಕರುಳನಲ್ಲಿ ಸಾಮಾನ್ಯವಾಗಿ ವಾಸ್ತವ್ಯ ಹೂಡುತ್ತವೆ ಹಾಗೂ ವಯಸ್ಕ ಹಂತಕ್ಕೆ ಬೆಳವಣಿಗೆಯಾಗಿ

ಸಂತಾನಾಭಿವೃದ್ಧಿ ಪ್ರಾರಂಭಿಸುತ್ತವೆ. ಆದರೆ ಕೆಲವು ಬಾರಿ ಈ ಮರಿ ಲಾಡಿ ಹುಳುಗಳು ಸಣ್ಣಕರುಳಿನ ಭಾಗವನ್ನು ತೂರಿಕೊಂಡು ಯಕೃತ್ತಿಗೆ ಸಂಪರ್ಕಕಲ್ಪಿಸುವ ರಕ್ತನಾಳವನ್ನು ಪ್ರವೇಶಿಸಿದರೆ ಅಲ್ಲಿಂದ ಹೃದಯಕ್ಕೆ ರವಾನೆಗೊಂಡು ಹೃದಯದಿಂದ ದೇಹದ ವಿವಿಧ ಭಾಗಗಳಿಗೆ ಚಲಿಸಲ್ಪಟ್ಟು ಯಾವುದಾದರು ಒಂದು ಭಾಗದಲ್ಲಿ ವಾಸ್ತವ್ಯ ಹೂಡುತ್ತವೆ, ಆದರೆ ವಯಸ್ಕ ಸ್ಥಿತಿ ತಲುಪದೆ ಸಣ್ಣ ಸಣ್ಣ ಗಡ್ಡೆಗಳ ರೂಪದಲ್ಲಿ ಅಸ್ಥಿತ್ವ ಹೊಂದುತ್ತವೆ. ಹಾಗಾಗಿ ವೈದ್ಯಶಾಸ್ತ್ರದಲ್ಲಿ ಆಯಾ ಅಂಗಕ್ಕೆ ಸಂಬಂಧಿಸಿದಂತೆ ಈ ಕಾಯಿಲೆಯನ್ನು ವ್ಯಾಖ್ಯಾನಿಸಲಾಗುತ್ತದೆ. ಉದಾಹರಣೆಗೆ: ಯಕೃತ್ತು (ಯಕೃತ್ತಿನ ಸಿಸ್ಟಿಸರ್ಕೋಸಿಸ್), ಮೂತ್ರಪಿಂಡ (ಮೂತ್ರಪಿಂಡದ ಸಿಸ್ಟಿಸರ್ಕೋಸಿಸ್), ಮಾಂಸಖಂಡಗಳು (ಮಾಂಸಖಂಡದ ಸಿಸ್ಟಿಸರ್ಕೋಸಿಸ್ ಹಾಗೂ ನರಮಂಡಲವ್ಯೂಹ' (ಮಿದುಳಿನ ಸಿಸ್ಟಿಸರ್ಕೋಸಿಸ್).

ರೋಗಲಕ್ಷಣಗಳು:

* ಸಣ್ಣಕರುಳಿನಲ್ಲಿ ವಯಸ್ಕ ಲಾಡಿಹುಳುಗಳಿಂದ ಯಾವುದೇ ರೀತಿಯ ಅಪಾಯಕಾರಿ ರೋಗಲಕ್ಷಣಗಳು ಬರುವುದಿಲ್ಲ ಆದರೆ ಇವುಗಳು ರೋಗ ಹರಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

* ತೂಕ ಕಳೆದುಕೊಳ್ಳುವಿಕೆ, ನಿದ್ರಾಹೀನತೆ, ಹೊಟ್ಟೆನೋವು ಅದರಲ್ಲೂ ಹೊಕ್ಕುಳಿನ ಆಸುಪಾಸುವಿನಲ್ಲಿ ನೋವು ಕೇಂದ್ರೀಕರಿಸುವುದು, ಏನಾದರು ಹೊಟ್ಟೆಗೆ ತಿಂದಾಗ ಈ ನೋವು ಮಾಯವಾಗುವುದು ಇದರ ಪ್ರಮುಖ ಲಕ್ಷಣವಾಗಿರುತ್ತದೆ.

* ಗಡ್ಡೆಗಳು ಮಾಂಸಖಂಡಗಳಲ್ಲಿ/ಅಂಗಗಳಲ್ಲಿ ನೆಲೆಸಿದಾಗಲೂ ಅಷ್ಟೇನು ರೋಗಲಕ್ಷಣಗಳು ಗೋಚರಿಸದೇ ಇರಬಹುದು, ಆದರೆ ಈ ಗಡ್ಡೆಗಳು ಮೆದುಳಿನಲ್ಲಿ ವಾಸ್ತವ್ಯ ಹೂಡಿದಾಗ ಬಹಳ ಅಪಾಯಕಾರಿಯಾದ ರೋಗಲಕ್ಷಣಗಳು ಕಂಡುಬಂದು ವ್ಯಕ್ತಿಯು ಮರಣವನ್ನು ಹೊಂದಬಹುದು.

* ಸಾಮಾನ್ಯವಾಗಿ ಪಾರ್ಶ್ವವಾಯು ಬರುವ ಸಾಧ್ಯತೆಗಳು ಹೆಚ್ಚು. ಅತಿಯಾಗಿ ಬಳಲುವುದು, ಮೆದುಳಿನ ಉರಿಯೂತ ದಂತಹ ಲಕ್ಷಣಗಳು, ಕೋಮದ ಸ್ಥಿತಿ, ದೇಹ ಅದುರುವ ಸ್ಥಿತಿ/ಪಿಡಿಸು ಅಥವಾ ಬುದ್ದಿಮಾಂದ್ಯ ಲಕ್ಷಣಗಳು ಗೋಚರಿಸಬಹುದು.

* ಪಿಡಿಸು ಹಾಗೂ ಹಲವು ಮನೋರೋಗದ ಲಕ್ಷಣಗಳು ಸಹಾ ಕಂಡುಬರುವ ಸಾಧ್ಯತೆ ಇರುತ್ತದೆ.

* ಕೆಲವೊಮ್ಮೆ, ತೀವ್ರತರನಾದ ತಲೆನೋವು, ಕಣ್ಣಿನ ಆಳದಲ್ಲಿ ಅಥವಾ ಸಂಪೂರ್ಣ ಮೈಕೈ ನೋವು, ಊಟ ಸೇರದಿರುವುದು/ವಾಕರಿಕೆ, ವಾಂತಿ, ತೀವ್ರ ತಲೆಶೂಲೆ, ತಲೆತಿರುಗುವ ಲಕ್ಷಣಗಳು ಕಾಣಿಸಬಹುದು.



ಚಿತ್ರ ೫. ಮಿದುಳಿನಲ್ಲಿ ನೀರ್ಗುಳ್ಳೆಗಳು (Neuro-Cysticercus)

ಹತೋಟಿಕ್ರಮಗಳು:

* ತರಕಾರಿಗಳು, ಕಾಯಿಪಲ್ಯೆಗಳು ಮತ್ತು ಹಸಿರು ಸೊಪ್ಪುಗಳಾದ ಕೊತ್ತಂಬರಿ, ಪುದೀನಗಳನ್ನು ಆದಷ್ಟು ಸ್ವಚ್ಛ ನೀರಿನಿಂದ ಬೆಳೆಯಬೇಕು, ಕೊಳಚೆನೀರು ಹಾಗೂ ಮಾನವ ಮಲಮೂತ್ರ ಮಿಶ್ರಿತ ನೀರಿನಿಂದ ಬೆಳೆಯದಂತೆ ಜಾಗ್ರತೆ ವಹಿಸಬೇಕು.

* ಈ ಬಗೆಯ ತರಕಾರಿಗಳನ್ನು/ಸೊಪ್ಪನ್ನು ಬಳಸುವಾಗ ಆದಷ್ಟು ಜಾಗ್ರತೆಯಿಂದ ಹೆಚ್ಚು ಕಾಲ ಸ್ವಚ್ಛ ಮಾಡಿ ಬಳಸಬೇಕು.

* ಹಂದಿ ಮಾಂಸವನ್ನು ಮಾರಾಟದ ಹಂತದಲ್ಲಿ ಪರೀಕ್ಷೆ ಮಾಡಿ ಅಂಥಹ ಗಡ್ಡೆಗಳು ಇದ್ದಲ್ಲಿ ಆ ಮಾಂಸವನ್ನು ಬೇರ್ಪಡಿಸಿ ಮನುಷ್ಯನ ಬಳಕೆಗೆ ಯೋಗ್ಯವಲ್ಲವೆಂದು ಪ್ರಮಾಣಿಸಿ ಕಡೆಗಣಿಸಬೇಕು.

* ಅಡುಗೆ ಸಮಯದಲ್ಲಿ ಹಂದಿ ಮಾಂಸವನ್ನು ಸಂಪೂರ್ಣವಾಗಿ ಬೇಯಿಸಬೇಕು (ಅದರಲ್ಲೂ ಪ್ರೆಷರ್‌ಕುಕ್ಕರ್ ನಲ್ಲಿ ಬೇಯಿಸಿದಾಗ ಈ ಗಡ್ಡೆಗಳು ನಾಶವಾಗುತ್ತವೆ.)

* ಹಂದಿ ಮಾಂಸವನ್ನು 65 ಡಿಗ್ರಿಸೆಲ್ಸಿಯಸ್‌ನಲ್ಲಿ ಅರ್ಧಗಂಟೆ ಬೇಯಿಸಿದಾಗ ಅಥವಾ2-3 ದಿನಗಳವರೆಗೆ -20 ಡಿಗ್ರಿಸೆಲ್ಸಿಯಸ್‌ನಲ್ಲಿ ಶಿತಲೀಕರಣಕ್ಕೆ ಒಳಪಡಿಸಿದಾಗ ಸಹಾ ಈ ಗಡ್ಡೆಗಳನ್ನು ನಾಶಪಡಿಸಬಹುದು.

* ಬಯಲು ಮಲವಿಸರ್ಜನೆಯನ್ನು ತಡೆಗಟ್ಟಬೇಕು, ಹಾಗೂ ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು.

* ಸಾಧ್ಯವಾದಷ್ಟು ಹಂದಿಗಳನ್ನು ಸ್ವೇಚ್ಛೆಯಾಗಿ ಅಲೆಯಲು ಬಿಡದೆ ಕೊಟ್ಟಿಗೆ ಪದ್ದತಿಯಲ್ಲಿ ಸಾಕಾಣಿಕೆ ಮಾಡಬೇಕು. ಹೊರಗೆ ಅಡ್ಡಾಡಲು ಬಿಡುವ ಪ್ರಾಣಿಗಳ ಮಾಲೀಕರು ಅವುಗಳಿಗೆ ಜಂತುನಾಶಕವನ್ನು ಆಗ್ಗಿಂದಾಗ್ಗೆ ಕುಡಿಸಬೇಕು.

* ನಗರಸಭೆ/ಪುರಸಭೆಗಳ ಮುಖೇನ ಜನಸಾಮಾನ್ಯರಿಗೆ ಹಾಗೂ ಪಶುಪಾಲಕರಿಗೆ ರೋಗದ ಬಗ್ಗೆ, ವೈಯುಕ್ತಿಕ ಸ್ವಚ್ಛತೆಯ ಬಗ್ಗೆ, ವೈಜ್ಞಾನಿಕ ಸಾಕಾಣಿಕೆಯ ಬಗ್ಗೆ ತಿಳುವಳಿಕೆ ನೀಡಬೇಕು.

* ಕಸಾಯಿಖಾನೆಗಳಲ್ಲಿ ಖಡ್ಡಾಯ ಮಾಂಸಪರೀಕ್ಷೆಗಳನ್ನು ನಡೆಸುವುದು ಮತ್ತು ರೋಗಯುಕ್ತವಾದ ಮಾಂಸವನ್ನು ಖಂಡಿಸುವುದು.

ವಿಭಾಗ:–8

ನಾಗಾರ್ಜುನೀಯಮ್

ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಪದಾರ್ಥಶಾಸ್ತ್ರಗಳು

NAGARJUNEEYAM

Chemical, Biological & Materials Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ತೈತ್ತರೀಯ ಉಪನಿಷತ್ತಿನ ಶಿಕ್ಷಾವಲ್ಲಿಯ & ಜೀವಜಾಲಶಾಸ್ತ್ರ & ಸಾಮಾಜಿಕ ಚಿಂತನೆ	ಡಾ. ಎಂ. ಎ. ಶೃತಿಕೀರ್ತಿ	240 – 243
2.	ಆತಂಕ ಸೃಷ್ಟಿಸಿದ ಹೊಸ ರೋಗಗಳು ಮತ್ತು ಅವುಗಳ ನಿಯಂತ್ರಣ	ಶ್ರೀಮತಿ ವಿದ್ಯಾ ಪಾಟೀಲ	243 – 247
3.	ಮಾದಕ ವ್ಯಸನ	ವಿದ್ಯಾಶಂಕರ ಎಂ.ಹೆಚ್ ಪ್ರೀತಿ	247 – 250

ತೈತ್ತರೀಯ ಉಪನಿಷತ್ತಿನ ಶಿಕ್ಷಾವಲ್ಲಿಯ & ಜೀವಜಾಲಶಾಸ್ತ್ರ & ಸಾಮಾಜಿಕ ಚಿಂತನೆ

ಡಾ. ಎಂ. ಎ. ಶೃತಿಕೀರ್ತಿ
ಅಧ್ಯಕ್ಷರು, ಸಂಸ್ಕೃತ ವಿಭಾಗ, ಕುವೆಂಪು ವಿ. ವಿ. ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ, E.Mail-mashruthikeerti@gmail.com

ತನಗೂ, ತನ್ನ ಗುರುಗಳಿಗೂ, ತಮ್ಮ ಆಶ್ರಮಕ್ಕೂ, ಸಕಲ ಜಗತ್ತಿಗೂ ಮಂಗಳವಾಗಲಿ ಎಂಬ ಶಿಷ್ಯನ ಪ್ರಾರ್ಥನೆ– ಜಗತ್ತಿನ ಇನ್ನಾವ ಶಿಕ್ಷಾಕ್ರಮದಲ್ಲಿಯೂ ಇಂತಹ ವಿಶಿಷ್ಟ, ಜಗತ್ತಿಗೇ ಮಂಗಳ ಹಾರೈಸುವ ಪ್ರಾರ್ಥನಾಪದ್ಧತಿ ಕಂಡುಬರುವುದಿಲ್ಲ. ಪ್ರಣವಸಹಿತ ಹರಿ ಶಬ್ದವನ್ನುಚ್ಚರಿಸಿ, ಶಿಷ್ಯ ಮತ್ತು ಗುರುವಿನಲ್ಲಿರಬಹುದಾದ ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ದೋಷಗಳನ್ನು ಪರಿಹಾರ ಮಾಡುವ ದಿವ್ಯಶಕ್ತಿಯನ್ನು ಸ್ಮರಿಸಲಾಗಿದೆ. ಸೃಷ್ಟಿ ರಚನಾ ವಿಜ್ಞಾನ – ಆಧಿಲೋಕ – ಪೃಥಿವಿಗೆ ಸಂಬಂಧಿಸಿದ ಸೃಷ್ಟಿಕ್ರಮವನ್ನು, ಉದ್ದೇಶವನ್ನು ವಿವರಿಸುತ್ತಾ – ಆಧಿಪ್ರಜಮ್– ಮಾತಾಪಿತೃ ಸಂಬಂಧೋಪಗತವಿಲಿಖ ಉಲಿತಾಗುವುದೇ ಮಾನವನ ಸಂತಾನ– ಪ್ರಜಾಸಂಧಿ. ಪ್ರಚನನಗ್ಂಲಿ ಎಂದರೆ ವಂಶಾಭಿವೃದ್ಧಿ ಎನ್ನಲಾಗಿದೆ. ಗುರುಕುಲವಲ್ಲಿ ವೈದಿಕವಿದ್ಯಾಧ್ಯಯನ ಪೂರ್ಣಗೊಂಡ ನಂತರ ಆಚಾರ್ಯ–ಶಿಷ್ಯರಿಗೆ ಯಾವ ಆಚರಣೆ ವ್ಯಕ್ತಿಗೂ ಸಮಾಜಕ್ಕೂ ಒಳಿತನ್ನು ಮಾಡುತ್ತದೆಯೋ ಅಂತಹ ಧರ್ಮವನ್ನು ಆಚರಿಸು. ಗುರು ಶಿಷ್ಯರಿಗೆ ಅಗತ್ಯಗಳನ್ನು ನಿಶ್ಶುಲ್ಕವಾಗಿ ವ್ಯವಸ್ಥೆಗೊಳಿಸಿ ಈ ವ್ಯವಸ್ಥೆ ಸತತ, ನಿರಾತಂಕವಾಗಿ ಮುಂದುವರಿಯಬೇಕೆಂಬ ವಿಶೇಷವಿಲ್ಲಿ ಶಿಷ್ಯನು ಗುರು ಅರ್ಥಾತ್ ಗುರುಕುಲಕ್ಕೆ ಅಗತ್ಯ ಧನ ಕಂದು ಕೊಡಬೇಕೆಂದಿದ್ದಾರೆ. ತಾಂಲಿ–ತಂದೆ–ಗುರು,ಹಿರಿಯರು–ಅತಿಥಿಗಳೇ ದೇವರೆಂಬ ಭಾವನೆ ಮಾಡಿಬರಬೇಕೆಂಬ ಉಪಾತ್ತ ಉಪದೇಶವನ್ನು ತಿಳಿಸಲಾಗಿದೆ. ನಿನ್ನ ಮತ್ತು ಸಮಾಜದ ಹಿತವನ್ನು ರಕ್ಷಿಸುತ್ತವೆಯೋ ಅಂತಹ ಸ್ವಾರ್ಥರಹಿತಕಾರ್ಯಗಳನ್ನು ಮಾಡು, ಹಿತವಲ್ಲದವನ್ನು ಮಾಡಬೇಡ ಎಂದಿದ್ದಾರೆ.

ತನಗೂ, ತನ್ನ ಗುರುಗಳಿಗೂ, ತಮ್ಮ ಆಶ್ರಮಕ್ಕೂ, ಸಕಲ ಜಗತ್ತಿಗೂ ಮಂಗಳವಾಗಲಿ ಎಂಬ ಶಿಷ್ಯನ ಪ್ರಾರ್ಥನೆಯೊಂದಿಗೆ ಈ ಅನುವಾಕ ಪ್ರಾರಂಭವಾಗುತ್ತದೆ. ಜಗತ್ತಿನ ಇನ್ನಾವ ಶಿಕ್ಷಾಕ್ರಮದಲ್ಲಿಯೂ ಇಂತಹ ವಿಶಿಷ್ಟ', ಜಗತ್ತಿಗೇ ಮಂಗಳ ಹಾರೈಸುವ ಪ್ರಾರ್ಥನಾಪದ್ಧತಿ ಕಂಡುಬರುವುದಿಲ್ಲ. ಪ್ರಾರಂಭ ದಲ್ಲಿ ಪ್ರಣವಸಹಿತ ಹರಿ ಶಬ್ದವನ್ನುಚ್ಚರಿಸಿ, ಮುಖ್ಯವಾಗಿ ಶಿಷ್ಯ ಮತ್ತು ಗುರುವಿನಲ್ಲಿರಬಹುದಾದ ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ದೋಷಗಳನ್ನು ಪರಿಹಾರ ಮಾಡುವ ದಿವ್ಯಶಕ್ತಿಯನ್ನು ಸ್ಮರಿಸಲಾಗಿದೆ. ಮಿತ್ರನಹಗಲಿನ ಅಧಿದೇವತೆಯ ಅನುಗ್ರಹದಿಂದಲೇ ಜಗತ್ತು ಜಾಗೃತ ಮತ್ತು ಕ್ರಿಯಾಶೀಲವಾಗಿರುತ್ತದೆ. ಇವನು ನಮಗೆ ಮಂಗಳವನ್ನುಂಟುಮಾಡಲಿ. ಹಗಲಿನಲ್ಲಿ ಕ್ರಿಯಾಶೀಲ ದೇಹಕ್ಕೆ ವಿಶ್ರಾಂತಿ ಅತ್ಯಂತ ಅವಶ್ಯಕ ವಿಶ್ರಾಂತಿಯ ಸಮಯವೇ ರಾತ್ರಿ. ರಾತ್ರಿಯ ಅಧಿದೇವತೆ ವರುಣ. ಆತ'ನೂ ನಮಗೆ ಮಂಗಳವನ್ನುಂಟುಮಾಡಲಿ. ಅರ್ಯಮನು ಸೂರ್ಯನ ಶಾಖ ಮತ್ತು ಪ್ರಕಾಶದ ಅಧಿದೇವತೆ. ಭೂಮಿಯ ಮೇಲಿರುವ ನೀರು ಕಾದು ಆವಿಯಾಗಿ ಮೇಲಕ್ಕೆ ಹೋಗಿ ಮೋಡದ ರೂಪ ಪಡೆದು, ಅನಂತರ ಮಳೆಯ ರೂಪದಲ್ಲಿ ಭೂಮಿಗೆ ಸುರಿಯಲು, ತನ್ಮೂಲಕ ಬೆಳೆಬೆಳೆದು ಆಹಾರ ಪ್ರಾಪ್ತಿಯಾಗಲು ಹಾಗೇ ಸಸ್ಯಗಳು ಬದುಕಲು ಮತ್ತು ಜೀವಿಗಳಿಗೆ ಅಗತ್ಯವಾದ ಆಮ್ಲಜನಕದ ಪ್ರಾಪ್ತಿಗೂ ಸೂರ್ಯನ ಶಾಖ ಮತ್ತು ಪ್ರಕಾಶವೇ ಕಾರಣ. ಇದರ ಅಧಿದೇವತೆ ಅರ್ಯಮನು ನಮಗೆ ಮಂಗಳವನ್ನುಂಟುಮಾಡಲಿ. ಜೀವಿಗಳು ಕಾರ್ಯಪ್ರವೃತ್ತರಾಗಬೇಕಾದರೆ ದೈಹಿಕ ಬಲ ಬೇಕು. ಇಲ್ಲದಿದ್ದರೆ ಕ್ರಿಯಾಶೀಲತೆ ಅಥವಾ ಕ್ರಿಯಾಪ್ರವೃತ್ತಿ ನಿಷ್ಫಲ. ಇದರ ಅಧಿಪತಿ ಇಂದ್ರನು ನಮಗೆ ಮಂಗಳವನ್ನುಂಟುಮಾಡಲಿ. ಮಾನವನಿಗೆ ತನ್ನ ಭಾವನೆ ಮತ್ತು ಅನಿಸಿಕೆಗಳನ್ನು ಮತ್ತೊಬ್ಬರಿಗೆ ತಿಳಿಸಬೇಕಾದರೆ ವಾಕ್‌ಶಕ್ತಿ ಇರಬೇಕು. ಹಾಗೇ ಯಾವ ಮಾತನ್ನು ಆಡಬೇಕು, ಆಡಬಾರದೆಂಬುದನ್ನು ಮತ್ತು ಯಾವ ಕಾರ್ಯವನ್ನು ಮಾಡಬೇಕು, ಮಾಡಬಾರದೆಂಬುದನ್ನು ನಿರ್ಣಯಿಸಲು ಬುದ್ಧಿ ಬೇಕು. ವಾಕ್ ಮತ್ತು ಬುದ್ಧಿಯ ಅಧಿದೇವತೆ ಬೃಹಸ್ಪತಿ ನಮಗೆ ಮಂಗಳವನ್ನುಂಟುಮಾಡಲಿ. ವಿಷ್ಣುವು ಜೀವಿಗಳ ಪಾಲನೆ ಮತ್ತು ಪೋಷಣೆಯ ಅಧಿದೇವತೆ. ಪಾದದ ಮೂಲಕ ತ್ರಿವಿಕ್ರಮಾವತಾರದಲ್ಲಿ ಜಗತ್ತನ್ನೇ ಅಳೆದು ತನ್ನ ಸರ್ವವ್ಯಾಪಕತ್ವವನ್ನು ಸೂಚಿಸಿದ ಇವನು ನಮಗೆ ಮಂಗಳವನ್ನುಂಟುಮಾಡಲಿ. ಪರ'ಬ್ರಹ್ಮಸ್ವರೂಪನೂ, ಪರೋಕ್ಷರೂಪನೂ, ಪ್ರತಿ ಜೀವಿಯ ಅನುಭವವೇದ್ಯನೂ ಆದ ಎಲೈ ವಾಯುವೆ, ನೀನೇ ಪ್ರತ್ಯಕ್ಷ ಬ್ರಹ್ಮನಾಗಿದ್ದೀಯೆ. ಇದನ್ನು ಇತರರಿಗೂ ಹೇಳುತ್ತೇನೆ. ಶಾಸ್ತ್ರಗಳ, ನಿಯಮಗಳ ಪರಬ್ರಹ್ಮ ಸ್ವರೂಪನೂ, ಸತ್ಯಸ್ವರೂಪನೂ, ಆದ ವಾಯುವು ನನ್ನನ್ನೂ, ಈ ವಿಷಯವನ್ನು ತಿಳಿಸಿದ ನನ್ನ ಗುರುವನ್ನೂ ರಕ್ಷಿಸಲಿ. ಓಂ ಶಾಂತಿಃ ಶಾಂತಿಃ ಶಾಂತಿಃ ।

ಸೃಷ್ಟಿ ರಚನಾ ವಿಜ್ಞಾನ – ವೇದ ಮತ್ತು ಉಪನಿಷತ್ತುಗಳಲ್ಲಿ'ನ ವಿಷಯಗಳನ್ನು ಗ್ರಹಿಸುವುದರಿಂದ ತನಗೂ (ಶಿಷ್ಯನಿಗೂ), ಬೋಧಿಸುವುದರಿಂದ ಗುರುವಿಗೂ ಯಶಸ್ಸುಂಟಾಗಲಿ. ಆಧ್ಯಾತ್ಮಿಕ ವಿಷಯಗಳನ್ನು ಬೋಧಿಸುವುದರಿಂದ ಗುರುವಿಗೂ, ಗ್ರಹಿಸುವುದರಿಂದ ಶಿಷ್ಯನಿಗೂ ಈ ಅಲೌಕಿಕತೇಜಸ್ಸು ಪ್ರಾಪ್ತವಾಗ'ಲೆಂದು ಪ್ರಾರ್ಥಿಸಲಾಗಿದೆ. ಮೇಲೆ ಹೇಳಿದಂತೆ ಗುರುಶಿಷ್ಯರಿಬ್ಬರಿಗೂ ಯಶಸ್ಸು ಮತ್ತು ಬ್ರಹ್ಮವರ್ಚಸ್ಸು ಪ್ರಾಪ್ತವಾಗುತ್ತದೆಯಾದ್ದರಿಂದ ಸಂಹಿತೆಗಳಲ್ಲಿ ಹೇಳಿರುವ ಆಧ್ಯಾತ್ಮಿಕ ವಿಷಯಗಳನ್ನು ವಿವರವಾಗಿ ಐದು ರೀತಿಯಲ್ಲಿ ವರ್ಗೀಕರಣ ಮಾಡಿ ಹೇಳುತ್ತೇವೆ–ಅಧಿಲೋಕಂ ಅಧಿಜ್ಯೌತಿಷಂ ಅಧಿವಿದ್ಯಂ ಅಧಿಪ್ರಜಂ ಅಧ್ಯಾತ್ಮಮ್ – ಇವುಗಳನ್ನು ಮಹಾಸಂಹಿತೆ ಎನ್ನುತ್ತಾರೆ. ಅಧಿಲೋಕ ಎಂದರೆ ಪೃಥಿವೀ ಮುಂತಾದ ಲೋಕಗಳಿಗೆ ಸಂಬಂಧಿಸಿದ ವಿಷಯ. ಇಲ್ಲಿ ಸೃಷ್ಟಿಕ್ರಮವನ್ನು, ಉದ್ದೇಶವನ್ನು ವಿವರಿಸುತ್ತಾ – ಪೃಥಿವಿ ನಮಗೆ ಪರಿಚಿತ' ಲೋಕ. ಆದ್ದರಿಂದ ಇದು ಪೂರ್ವರೂಪ. ದ್ಯೌಃ ಎಂದರೆ ನಮಗೆ ಪರಿಚಯವಿಲ್ಲದ ಮತ್ತು ಕಾಣಿಸದ, ಮೇಲಿದೆಯೆನ್ನಲಾದ ದ್ಯುಲೋಕ–ಇದು ಉತ್ತರರೂಪ. ಆಕಾಶ–ಇವೆರಡನ್ನೂ ಜೋಡಿಸುವ ಮಾಧ್ಯಮವಾದ್ದರಿಂದ ಇದು ಸಂಧಿ. ವಾಯು – ಚಲನಶೀಲವಾಗಿದ್ದು, ದ್ಯುಲೋಕವನ್ನೂ, ಪೃಥಿವಿಯನ್ನೂ ಸೇರಿಸುವುದರಿಂದ ಸಂಧಾನ. ಜ್ಯೌತಿಷ ಎಂದರೆ ಬೆಳಕಿಗೆ ಸಂಬಂಧಿಸಿದುದು. ಭೂಲೋಕದಲ್ಲಿರುವವರಿಗೆ ಪ್ರಧಾನವಾಗಿ ಅಗ್ನಿಯೇ ಬೆಳಕಿನ ಮೊದಲ ರೂಪ. ಆದ್ದರಿಂದ

ಪೂರ್ವರೂಪ. ಅಂತರಿಕ್ಷದಲ್ಲಿ ಬೆಳಕಿನ ರೂಪವಾದ್ದರಿಂದ ಆದಿತ್ಯನೇ ಉತ್ತರ ರೂಪ. ಭೂಮಿಗೂ ಅಂತರಿಕ್ಷಕ್ಕೂ ನಡುವೆ ಬೆಳಕಿನ ಸಾಧನಗಳಾದ್ದರಿಂದ ನೀರು ತುಂಬಿದ ಮೋಡಗಳು ಸಂಧಿ. ಮೋಡಗಳ ಸಂಘರ್ಷದಿಂದ ಸೃಷ್ಟಿಯಾಗುವ ಮಿಂಚು ಸಂಧಾನ. ಅಧಿವಿದ್ಯಮ್ ಎಂದರೆ ಜ್ಞಾನ. ಜ್ಞಾನಕ್ಕೆ ಸಂಬಂಧಪಟ್ಟ ವಿಷಯವನ್ನು ಅರಿತಿರುವುದರಿಂದ ಪ್ರಧಾನನಾಗಿ ಗುರುವು ಪೂರ್ವರೂಪ. ಜ್ಞಾನವನ್ನು ಪಡೆಯುವ ಶಿಷ್ಯ ಉತ್ತರರೂಪ. ಗುರು ಬೋಧಿಸುವ ಸಾಧನ ವಿದ್ಯೆಯೇ ಸಂಧಿ. ಗುರುಶಿಷ್ಯರ ನಡುವೆ ಸಂಪರ್ಕಮಾಧ್ಯಮ–ಪ್ರವಚನವೇ ಸಂಧಾನ. ಅಧಿಪ್ರಜಮ್ ಎಂದರೆ ಮಾನವನ ಸಂತಾನಾಭಿವೃದ್ಧಿ ವಿಚಾರ. ಮಾತೃ(ಪ್ರಕೃತಿ)ಪ್ರಧಾನವಾದ್ದರಿಂದ, ಇದು ಪೂರ್ವರೂಪ. ಪಿತೃವು(ಪುರುಷ) ಅಷ್ಟೇ ಪ್ರಧಾನವಾದ್ದರಿಂದ ಉತ್ತರರೂಪ. ಮಾತಾಪಿತೃ ಸಂಯೋಗದಿಂದ ಉಂಟಾಗುವುದೇ ಮಾನವನ ಸಂತಾನ- ಪ್ರಜಾಸಂಧಿ. ಪ್ರಜನನಗ್ಂ ಎಂದರೆ ವಂಶಾಭಿವೃದ್ಧಿ– ಸಂಧಾನ. ಅರಿವನ್ನು, ತನ್ನ ಭಾವನೆಗಳನ್ನು ಮತ್ತೊಬ್ಬರಿಗೆ ತಿಳಿಸಲು ಮಾತು (ಭಾಷೆ) ಮಾಧ್ಯಮ. ಪರಿಶುದ್ಧ ಮಾತು ಪರಮಾತ್ಮ ಸ್ವರೂಪ ಎಂಬರ್ಥದಲ್ಲಿ ಮಾತನ್ನು ಅಧ್ಯಾತ್ಮ ಎಂದು ಸಂಕೇತಿಸಿ, ಅಧ್ಯಾತ್ಮಕ್ಕೆ ಕೆಳದವಡೆ ಪೂರ್ವರೂಪ. ಮೇಲುದವಡೆ ಉತ್ತರರೂಪ. ಇವೆರಡರ ಮಧ್ಯದಿಂದ (ಬಾಯಿಯಿಂದ) ಕೇಳಿಸುತ್ತದೆ (ಹೊರಬರುತ್ತದೆ). ಹಾಗಾಗಿ ವಾಕ್ ಸಂಧಿ. ಮಾತು ಸ್ಪಷ್ಟಗೊಳ್ಳಲು ಸಾಧನವಾದ ಜಿಹ್ವೆ ಸಂಧಾನ. ಈ ಮಹಾಸಂಹಿತೆಯನ್ನು ವಿವರಣೆ ಸಹಿತ ಯಾರು ತಿಳಿಯುತ್ತಾರೋ ಅವರು ಬ್ರಹ್ಮವರ್ಚಸ್ಸನ್ನೂ, ಸತ್‌ಸಂತಾನ, ಹಸು, ಅನ್ನವೇ ಮುಂತಾದುವನ್ನೂ ಪಡೆದು ಸ್ವರ್ಗಲೋಕವನ್ನು ಹೊಂದುತ್ತಾರೆ.

ಗುರುಪ್ರಾರ್ಥನಾ – ವೇದಗಳಿಗೆ ಪ್ರಧಾನನೂ, ಸರ್ವವ್ಯಾಪಕನೂ, ಅಮೃತಸ್ವರೂಪಗಳಾದ ವೇದಗಳಲ್ಲಿ ಪ್ರತಿಪಾದ್ಯನಾಗಿರುವ'ನೂ ಆದ ಸರ್ವಶ್ರೇಷ್ಠನಾದ ಪರಬ್ರಹ್ಮನು ಪ್ರಜ್ಞಾಪೂರ್ವಕವಾಗಿ ನನ್ನನ್ನು ಬಲಗೊಳಿಸಲಿ . ಎಲೈ ದೇವನೇ, ಬ್ರಹ್ಮಜ್ಞಾನಿಯಾಗುವಂತೆ ನನ್ನನ್ನು ಅನುಗ್ರಹಿಸು. ನನ್ನ ಶರೀರ ರೋಗರಹಿತವೂ, ಸುದೃಢವೂ ಆಗಿರಲಿ, ನಾಲಿಗೆ ಸದಾ ಸವಿಮಾತುಗಳನ್ನೇ ಆಡುತ್ತಿರಲಿ, ನನ್ನ ಕಿವಿಗಳು (ನಿನ್ನ ಮಹಿಮೆಗಳನ್ನು) ಹೆಚ್ಚು ಹೆಚ್ಚು ಕೇಳುವಂತಾಗಲಿ. ನೀನು ಬ್ರಹ್ಮಜ್ಞಾನದ ಕೋಶವಾಗಿದ್ದೀಯೆ. ಭೋಗಾಸಕ್ತಿಯ ಲೌಕಿಕಜ್ಞಾನದಿಂದ (ಆವರಿಸಿರುವ ನನಗೆ ಗೊತ್ತಾಗದಂತೆ) ಅಡಗಿಕೊಂಡಿರುವೆ. ಈವರೆಗೆ ನಿನ್ನ ಬಗ್ಗೆ ನಾನು ಏನನ್ನು ಅರಿತಿರುವೆನೋ ಅದನ್ನು ಕಾಪಾಡು. ಸದಾ ಅನ್ನಪಾನಗಳನ್ನು, ನನಗೆ ವಸ್ತ್ರವನ್ನೂ, ಹಸುಗಳನ್ನೂ ಒದಗಿಸಿ ಕೊಟ್ಟು ವೃದ್ಧಿಪಡಿಸುತ್ತಾ ನನ್ನನ್ನು ಬೇಗನೆ ಅನುಗ್ರಹಿಸಿ, ಸಂಪತ್ತು ನನಗೆ ಸಿಗುವಂತೆ ಮಾಡು, ಇವುಗಳೊಂದಿಗೆ ತುಪ್ಪಟಗಳಂದ ಕೂಡಿದ ಪಶುಗಳನ್ನೂ ಸಹ ಅನುಗ್ರಹಿಸಿ, ನನ್ನ ಪ್ರಾರ್ಥನೆ ಈಡೇರಿಸು. ಬೇರೆ ಬೇರೆ ಕಡೆಗಳಂದ ಬಹುಸಂಖ್ಯೆಯಲ್ಲಿ, ಇಂದ್ರಿಯನಿಗ್ರಹವುಳ್ಳ, ಸಹನಶೀಲರೂ, ಶಾಂತಮನಸ್ಕರೂ ಆದ ಬ್ರಹ್ಮಚಾರಿಗಳು ನನ್ನಲ್ಲಿಗೆ ಬರಲಿ. ಹೇಗೆ ನೀರು ತಗ್ಗು ಇರುವ ಕಡೆ ಹರಿಯುತ್ತದೆಯೋ, ತಿಂಗಳುಗಳು ಸಂವತ್ಸರದೊಂದಿಗೆ ಸೇರಿಕೊಳ್ಳುವುದೋ ಅದೇ ರೀತಿ ಬ್ರಹ್ಮಚಾರಿಗಳು ಎಲ್ಲ ಕಡೆಯಿಂದಲೂ ನನ್ನ ಬಳಿ ಬರಲಿ. ಈ ಗುರುಕುಲವು ಜನರ, ಧನಿಕರ ದೃಷ್ಟಿಯಲ್ಲಿ ಕೀರ್ತಿಯನ್ನು ಸಂಪಾದಿಸಲಿ. ಭಗವಂತನೇ, ನಿನ್ನನ್ನು ನಾನು ಪ್ರವೇಶಿಸುವಂತಾಗಲಿ. ನನ್ನ ಅಂತರಂಗದಲ್ಲಿ ಸದಾ ನೆಲೆಸು. ಸಹಸ್ರ ರೂಪಗಳುಳ್ಳ ನಿನ್ನಿಂದ ಪಾಪಗಳನ್ನು ಕಳೆದುಕೊಳ್ಳುತ್ತೇನೆ. ನೀನು ಆಶ್ರಯಸ್ಥಾನವಾಗಿದ್ದೀಯೆ. ನನಗೆ ನಿನ್ನ ಸ್ವಸ್ವರೂಪದರ್ಶನವಾಗಲಿ.

ವ್ಯಾಹೃತಿ ಗಳು ಮತ್ತು ಅವುಗಳ ವೈಶಿಷ್ಟ್ಯಗಳು – ಭೂಃ ಭುವಃ ಸುವಃ ಈ ಮೂರು ವ್ಯಾಹೃತಿಗಳಲ್ಲದೆ ನಾಲ್ಕನೆಯದನ್ನು – ಮಹಃ – ಮಾಹಾಚಮಸ್ಯ ಎಂಬ ಮಹರ್ಷಿ ಅರಿತನು. ಅದೇ ಪರಬ್ರಹ್ಮ / ಪರಮಾತ್ಮ. ಉಳಿದ ದೇವತೆಗಳು ಅಂಗಗಳು. ಭೂಃ–ಇದು ಭೂಲೋಕವನ್ನೂ, ಭುವಃ– ಅಂತರಿಕ್ಷಲೋಕವನ್ನೂ, ಸುವಃ– ಸ್ವರ್ಗಲೋಕವನ್ನೂ, ಮಹಃ– ಆದಿತ್ಯಲೋಕವನ್ನೂ ಸೂಚಿಸುತ್ತವೆ. ಆದಿತ್ಯಲೋಕದಿಂದಲೇ ಎಲ್ಲ ಲೋಕಗಳೂ ವರ್ಧಿಸಲ್ಪಟ್ಟವೆಯಲ್ಲವೇ? ಭೂಃ ಎಂಬುದು ಅಗ್ನಿಯನ್ನೂ, ಭುವಃ ವಾಯುವನ್ನೂ, ಸುವಃ ಆದಿತ್ಯನನ್ನೂ, ಮಹಃ ಚಂದ್ರನನ್ನೂ ಸೂಚಿಸುತ್ತದೆ. ಈ ಚಂದ್ರನಿಂದಲೇ ಎಲ್ಲ ಜ್ಯೋತಿಗಳೂ ವರ್ಧಿಸಲ್ಪಡುತ್ತವೆಯಲ್ಲವೇ? ಭೂಃ ಎಂಬುದು ಋಗ್‌ವೇದದ, ಭುವಃ ಸಾಮವೇದದ, ಸುವಃ ಯಜುರ್ವೇದದ ಸೂಕ್ತಗಳನ್ನೂ, ಮಹಃ ಪರಬ್ರಹ್ಮನನ್ನೂ ಸೂಚಿಸುತ್ತವೆ. ಈ ಪರಬ್ರಹ್ಮನಿಂದಲೇ ಎಲ್ಲ ವೇದಗಳೂ ವರ್ಧಿಸುತ್ತವೆಯಲ್ಲವೇ? ಭೂಃ ಎಂಬುದು ಪ್ರಾಣವನ್ನೂ, ಭುವಃ ಅಪಾನವನ್ನೂ, ಸುವಃ ವ್ಯಾನವನ್ನೂ, ಮಹಃ ಅನ್ನವನ್ನೂ ಸೂಚಿಸುತ್ತವೆ. ಅನ್ನದಿಂದಲೇ ಎಲ್ಲ ಪ್ರಾಣಗಳೂ ವರ್ಧಿಸುತ್ತವೆಯಲ್ಲವೇ? ಈ ರೀತಿ ವ್ಯಾಹೃತಿಗಳು ನಾಲ್ಕು ಭಾಗಗಳಾಗಿ, ನಾಲ್ಕು ಬಗೆಯಾಗಿ, ಯಾರು ಅವ'ನ್ನು ಅರಿಯುತ್ತಾನೋ ಅವನು ಬ್ರಹ್ಮನನ್ನು ಅರಿತವನಾಗಿ, ಅಂತಹವನಿಗೆ ಎಲ್ಲ ದೇವತೆಗಳೂ ಕಾಣಿಕೆಯನ್ನು ಸಮರ್ಪಿಸುತ್ತಾರೆ.

ಅಂತರ್‌ಯೋಗದ ವಿವರಣೆ – ಯಾವ ಹೃದಯ ನಮ್ಮಲ್ಲಿದೆಯೋ ಅದರಲ್ಲಿ ಆಕಾಶವಿದೆ. ಆಕಾಶದಲ್ಲಿ ಮನೋಮಯನೂ, ಅಮೃತಸ್ವರೂಪನೂ, ಹಿರಣ್ಮಯನೂ ಆದ ಪುರುಷನಿದ್ದಾನೆ. ಈ ಪುರುಷನನ್ನು ಸೇರುವ ಬಗೆ– ಮಾನವನ ಬಾಯಲ್ಲಿರುವ ಎರಡು ದವಡೆಯ ಸಾಲುಗಳ ಮಧ್ಯೆ ಇಳಿಬಿದ್ದ(ಕಿರುನಾಲಿಗೆ) ಅಂಗದ ಮಧ್ಯದಿಂದ (ಸುಷುಮ್ನಾನಾಡಿಯು) ಕೇಶಾಂತಗಳ ಮೂಲವನ್ನು ವಿಭಾಗಿಸಿಕೊಂಡು, ಶೀರ್ಷಕಪಾಲವನ್ನು ಛೇದಿಸಿಕೊಂಡು (ಸಹಸ್ರಾರ ಚಕ್ರದವರೆಗೆ) ಹೋಗಿದೆ. ಪರಬ್ರಹ್ಮನನ್ನು ಸೇರುವ ಮಾರ್ಗ ವಿದೇ. ಸಹಸ್ರಾರದಲ್ಲಿ(ಕಮಲದಲ್ಲಿ) ಪರಬ್ರಹ್ಮನನ್ನು ಸೇರಿದವನು, ವ್ಯಾಹೃತಿಗಳ ಉಚ್ಚಾರಣೆಯಿಂದ ಆನಂದಾನುಭವವನ್ನು ಅಗ್ನಿಯಲ್ಲಿ, ವಾಯುವಿನಲ್ಲಿ, ಆದಿತ್ಯನಲ್ಲಿ, ಬ್ರಹ್ಮನಲ್ಲಿ ನೆಲೆಸುವುದರಿಂದ ಪಡೆಯುತ್ತಾನೆ. ಅಂತಹ ಸಾಧಕ ದೇಹೇಂದ್ರಿಯಗಳಿಗೆ ವಶನಾಗದೆ ಸ್ವತಂತ್ರನಾಗಿ. ಮನಸ್ಸಿನ ಮೇಲೆ ಹಿಡಿತ ಪಡೆದು, ಮಾತು ಮತ್ತು ನೇತ್ರೇಂದ್ರಿಯವನ್ನು ನಿಗ್ರಹಿಸಿ, ಕಿವಿಗಳು ಮತ್ತು ಪ್ರಜ್ಞಾಶಕ್ತಿಯನ್ನು ವಶದಲ್ಲಿಟ್ಟುಕೊಳ್ಳುತ್ತಾನೆ. ಇದಕ್ಕಿಂತಲೂ ಅಧಿಕವಾದವನು ಅಂದರೆ ಆಕಾಶವೇ ಶರೀರನೂ, ಸತ್ಯಾತ್ಮನೂ, ಪ್ರಾಣಾರಾಮನೂ, ಮನ ಆನಂದನೂ ಶಾಂತಿ ಸಮೃದ್ಧನೂ ಆಗುತ್ತಾನೆ. ಪ್ರಾಚೀನರು ಹೇಳಿರುವ ರಹಸ್ಯಾತ್ಮಕ ವಿಷಯಗಳನ್ನು ತಿಳಿಯಲರ್ಹನಾದ ಶಿಷ್ಯನೇ, ನೀನು ಹೀಗೆ

ಉಪಾಸಿಸು.

ವೇದಾಧ್ಯಾಯಿಯ ಕರ್ತವ್ಯಗಳು – ವೇದ–ವೇದಾಂಗ, ಶಾಸ್ತ್ರಗ್ರಂಥಗಳಧ್ಯಯನದಿಂದ ಅರಿತುಕೊಂಡ ಮಾನವೀಯ ಮೌಲ್ಯಗಳುಳ್ಳ ಧಾರ್ಮಿಕ ವಿಧಿಗಳನ್ನು ಋತ ಎನ್ನುತ್ತಾರೆ. ಈ ವಿಧಿಗಳ ಬಗ್ಗೆ ಸತತ ಸ್ವ–ಅಧ್ಯಯನ ಮಾಡುತ್ತಿರಬೇಕು ಮತ್ತು ಇತರರಿಗೆ ತಿಳಿಯುವಂತೆ ಹೇಳುತ್ತಿರಬೇಕು. ದೈಹಿಕ–ವಾಚಕ– ಮಾನಸಿಕ ನಿಷ್ಕಪಟತೆಯೇ ಸತ್ಯ. ಈ ಸತ್ಯತೆಯನ್ನು ಸ್ವತಃ ಆಚರಣೆಯಲ್ಲಿಯೂ ವ್ಯಕ್ತಗೊಳಿಸಬೇಕು ಮತ್ತು ಪ್ರವಚನಗಳ ಮೂಲಕವೂ ಸಾಮಾಜಿಕರು ಸತ್ಯವ್ರತರಾಗುವಂತೆ ಪ್ರೇರೇಪಿಸಬೇಕು. ನಿಸ್ವಾರ್ಥ, ಜಗನ್ಮಂಗಳಕಾರಕ ವ್ರತನಿಷ್ಠೆಯೇ ತಪಸ್ಸು. ವೇದವಿದನು ಸ್ವತಃ ತಪಸ್ಸನ್ನಾಚರಿಸಬೇಕು ಮತ್ತು ಪ್ರವಚನಗಳ ಮೂಲಕ ಇತರರೂ ತಪಸ್ಸನ್ನು ಆಚರಿಸುವಂತೆ ಮಾಡಬೇಕು. ಇಂದ್ರಿಯನಿಗ್ರಹಿ ಯಾಗಿ, ಇತರರೂ ಇಂದ್ರಿಯನಿಗ್ರಹಿಗಳು ಆಗುವಂತೆ, ಸ್ವತಃ ಶಮ ಶೀಲನಾಗಿ ಇತರರಿಗೂ ಅದನ್ನೇ ಉಪದೇಶಿಸಿ, ಗಾರ್ಹಪತ್ಯ ಮುಂತಾದ ಯಜ್ಞೀಯ ಅಗ್ನಿಗಳನ್ನು ಸ್ವಯಂ ರಕ್ಷಿಸಿ, ರಕ್ಷಿಸುವಂತೆ ಪ್ರೋತ್ಸಾಹಿಸಿ, ಅಗ್ನಿಹೋತ್ರವನ್ನು ಆಚರಿಸಿ, ಇತರರಿಗೂ ಆಚರಿಸುವಂತೆ ತಿಳಿಸಬೇಕು. ಅತಿಥಿಗಳನ್ನು ಗೌರವಿಸಬೇಕಾದ ಮತ್ತು ಉಪಚರಿಸಬೇಕಾದ ಗೃಹಸ್ಥಧರ್ಮವನ್ನು ಸ್ವತಃ ಆಚರಿಸಬೇಕು ಮತ್ತು ಇತರರೂ ಆಚರಿಸುವಂತೆ ಉಪದೇಶಿಸಬೇಕು. ಕಷ್ಟಕಾಲದಲ್ಲಿತರರಿಗೆ ಸಹಾಯ ಮಾಡುವುದು ಮತ್ತು ಕಷ್ಟ ಬಂದಾಗ ಇತರರಿಂದ ಸಹಾಯ ಪಡೆಯುವುದು ಮನುಷ್ಯ ಧರ್ಮ. ಇದನ್ನು ಅನುಷ್ಠಾನದಲ್ಲಿಟ್ಟುಕೊಳ್ಳಬೇಕು ಮತ್ತು ಇತರರೂ ಅನುಸರಿಸುವಂತೆ ಉಪದೇಶಿಸಬೇಕು. ವಿರಾಗಿಯಾಗಿ ಅಥವಾ ಏಕಾಂಗಿಯಾಗಿ ಬಾಳದೆ, ವಿವಾಹಿತ ಪತ್ನಿಯಿಂದಲೇ ತನ್ನ ವಂಶಾಭಿವೃದ್ಧಿಯ ಬಗ್ಗೆ ಗಮನಕೊಡಬೇಕು, ಮತ್ತು ಇತರರಿಗೂ ಹಾಗೆಯೇ ಮಾಡುವಂತೆ ಉಪದೇಶಿಸಬೇಕು. ತನ್ನ ಪುತ್ರ– ಪುತ್ರಿಯರೂ ವಿವಾಹಿತರಾಗಿ ವಂಶಾಭಿವೃದ್ಧಿ ಮಾಡುವಂತೆ ತಿಳಿಸಬೇಕು ಮತ್ತು ಇತರರೂ ಇದನ್ನು ಅನುಸರಿಸುವಂತೆ ಉಪದೇಶಿಸಬೇಕು. ಮೇಲಿನ ಕರ್ತವ್ಯಗಳೊಂದಿಗೆ ಸತ್ಯವಂತನಾಗಿ ಬಾಳುವುದೇ ಜೀವನದ ಗುರಿ ಎಂದು ಸತ್ಯವಂತನಾದ ರಾಥೀತರನೂ, ಸದಾ ಭಗವತ್ ಚಿಂತನ ಮಾಡುತ್ತಾ ಬಾಳುವುದೇ ಜೀವನದ ಗುರಿ ಎಂದು ತಪೋನಿಷ್ಠನಾದ ಪೌರುಶಿಷ್ಟಿಯೂ, ಸ್ವಾಧ್ಯಾಯ ಪ್ರವಚನಗಳೇ ಜೀವನದ ಗುರಿ, ತಪಸ್ಸು ಎಂದು ಮೌದ್ಗಲ್ಯನ ಮಗನಾದ ನಾಕನೂ ಹೇಳುತ್ತಾರೆ.

ಆತ್ಮವಿಶ್ವಾಸ–ಸಾಧಕನಿಗೆ ಪ್ರಾಮಾಣಿಕತೆ ಮತ್ತು ಆತ್ಮವಿಶ್ವಾಸ ಬಹಳ ಮುಖ್ಯ, ನಾನು ವೃಕ್ಷದಂತೆ ಎತ್ತರೆತ್ತರಕ್ಕೆ ಬೆಳೆಯಬಲ್ಲವನು, ನನ್ನ ಕೀರ್ತಿ ಗಿರಿಶಿಖರದಂತೆ ಉನ್ನತ ಮಟ್ಟದ್ದು, ಸೂರ್ಯನಲ್ಲಿ ಆತ್ಮತತ್ತ್ವವಿರುವಂತೆ ನಾನೂ ಆತ್ಮಸ್ವರೂಪನೂ, ವರ್ಚಸ್ವಿಯೂ, ಸಮರ್ಥನೂ, ಅಮೃತನೂ, ಅವ್ಯಯನೂ ಆಗಿದ್ದೇನೆ– ಇದು ತ್ರಿಶಂಕುಮಹರ್ಷಿಯ ಅನುಭವದ ಮಾತು.

ಗುರೂಪದೇಶ– ಉಪದೇಶ ಎಂದರೆ ಹತ್ತಿರ ಕುಳ್ಳರಿಸಿಕೊಂಡು ಹೇಳಬೇಕಾದುದನ್ನು ಪರಿಣಾಮಕಾರಿಯಾಗಿ, ಕ್ರಮಬದ್ಧವಾಗಿ, ಪ್ರಾಮಾಣಿಕವಾಗಿ ಹೇಳುವುದು. ಗುರುಕುಲದಲ್ಲಿ ವೈದಿಕವಿದ್ಯಾಧ್ಯಯನ ಪೂರ್ಣಗೊಂಡ ನಂತರ ಆಚಾರ್ಯ–ಶಿಷ್ಯನಿಗೆ ಸದುಪದೇಶ ಮಾಡುತ್ತಾನೆ–ಸತ್ಯವಾತನಲ್ಲಿ ಪ್ರಾಮಾಣಿಕವ್ಯಕ್ತಿತ್ವ ರೂಪುಗೊಳ್ಳುತ್ತದೆ, ಋಜುಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಇದರಿಂದ ಪ್ರಾಮಾಣಿಕ ಹಾಗೂ ಋಜುಪ್ರವೃತ್ತಿಯ ಸಮಾಜ ನಿರ್ಮಾಣ ಆಗುತ್ತದೆ. ಆದ್ದರಿಂದ ಸತ್ಯವನ್ನೇ ಹೇಳು, ಯಾವ ಆಚರಣೆ ವ್ಯಕ್ತಿಗೂ ಸಮಾಜಕ್ಕೂ ಒಳಿತನ್ನು ಮಾಡುತ್ತದೆಯೋ ಅಂತಹ ಧರ್ಮವನ್ನು ಆಚರಿಸು, ಗುರುಕುಲದಲ್ಲಿ ಏನನ್ನು ಅಧ್ಯಯನ ಮಾಡಿದ್ದೀಯೋ ಅಷ್ಟರಿಂದಲೇ ಅಧ್ಯಯನ ಮುಗಿಯಿತು ಎಂದು ಭಾವಿಸದೆ, ಕಲಿತ ವಿಷಯಗಳನ್ನು ಪುನಃ ಪುನಃ ಮನನ ಮಾಡುತ್ತಿರು ಮತ್ತು ಹೊಸ ವಿಷಯಗಳನ್ನೂ ಸಹ ಅಧ್ಯಯನ ಮಾಡುತ್ತಿರು ಎಂಬ ಉದ್ದೇಶದಿಂದ ನಿನ್ನ ಅಧ್ಯಯನದಲ್ಲಿ ಪ್ರಮಾದ ಮಾಡಬೇಡ ಎಂದಿದ್ದಾರೆ. ಉಪಕಾರ ಸ್ಮರಣೆ– ಕೃತಜ್ಞತೆ– ಪ್ರತಿ ವ್ಯಕ್ತಿಯಲ್ಲಿಯೂ ಇರಬೇಕಾದ ಗುಣ. ಸುಮಾರು ಹನ್ನೆರಡು ವರ್ಷಗಳ ಕಾಲ ಗುರುಕುಲದಲ್ಲಿದ್ದಾಗ ಶಿಷ್ಯನಿಗೆ ಅಶನ, ವಸನ, ವಸ್ತ್ರ, ಶುಶ್ರೂಷೆಗಳ ಅಗತ್ಯಗಳನ್ನು ನಿಶ್ಶುಲ್ಕವಾಗಿ ವ್ಯವಸ್ಥೆಗೊಳಿಸಿದ ಗುರು ಈ ವ್ಯವಸ್ಥೆ ಸತತ, ನಿರಾತಂಕವಾಗಿ ಮುಂದುವರಿಯಬೇಕು ಎಂಬ ದಿಶೆಯಲ್ಲಿ ಶಿಷ್ಯನ ಸೇವೆಯೂ ಅಗತ್ಯ ಎಂಬ ಹಿನ್ನೆಲೆಯನ್ನಿಟ್ಟುಕೊಂಡು, ಶಿಷ್ಯನಾದವನು ಗುರುವಿಗೆ ಅರ್ಥಾತ್ ಗುರುಕುಲಕ್ಕೆ ಅಗತ್ಯವಾದ ಧನವನ್ನು ತಂದುಕೊಡಬೇಕು ಎಂದೂ, ಶಿಷ್ಯನ ವಂಶವು ವೃದ್ಧಿಯಾಗಲಿ ಎಂಬ ಹಾರೈಕೆಯಿಂದ, ಊರಿಗೆ ಹೋದ ಮೇಲೆ ಗೃಹಸ್ಥನಾಗಿ ನಿನ್ನ ವಂಶವನ್ನು ಉದ್ಧರಿಸು, ವಂಶಚ್ಛೇದ ಮಾಡಬೇಡ ಎಂದೂ ಉಪದೇಶಿಸುತ್ತಾನೆ. ಗೃಹಸ್ಥನಾಗಿ ಸಮಾಜದ ಮಧ್ಯೆ ಬಾಳುತ್ತಿರುವಾಗ ಕಷ್ಟಗಳು, ಸಮಸ್ಯೆಗಳು ಸಂದಿಗ್ಧತೆಗಳು ಬಂದಾಗ ಧೃತಿಗೆಟ್ಟು ಕೆಟ್ಟಮಾರ್ಗದಲ್ಲಿ ಹೋಗಬೇಕಾದ ಸನ್ನಿವೇಶ ಬಂದರೂ ವಿಚಲಿತನಾಗಬಾರದು ಎಂದು, ಪ್ರಾಮಾಣಿಕತೆ, ಧರ್ಮ, ಸಚ್ಚಿಂತನೆಯಿಂದ, ಇತರರಿಗೆ ಒಳ್ಳೆಯದುಬಯಸುವುದರಿಂದ, ಅಧ್ಯಯನ – ಅಧ್ಯಾಪನಗಳಿಂದ, ದೇವ – ಪಿತೃಕಾರ್ಯಗಳಿಂದ ಚ್ಯುತನಾಗಬಾರದು ಎನ್ನುತ್ತಾನೆ.

ಭಗವಂತನ ಸಾಕ್ಷಾತ್ ದರ್ಶನಕ್ಕಾಗಿ, ಅವನನ್ನು ಹುಡುಕುತ್ತಾ, ಕಾಡುಮೇಡುಗಳನ್ನು, ಗುಡಿಗೋಪುರಗಳನ್ನು ಹುಡುಕಿಕೊಂಡು ಅಲೆಯಬೇಕಾದುದಿಲ್ಲ. ನಿನ್ನ ಎದುರಿರುವ ತಾಯಿ, ತಂದೆ, ಗುರು ಹಿರಿಯರು, ಅತಿಥಿಗಳೇ ದೇವರೆಂಬ ಭಾವನೆ ನಿನ್ನಲ್ಲಿ ಮಾಡಿಬರಲೆಂಬ ಉದಾತ್ತ ಉಪದೇಶವನ್ನು ತಿಳಿಸಲಾಗಿದೆ. ಯಾವ ಕಾರ್ಯಗಳು ನಿನ್ನ ಮತ್ತು ಸಮಾಜದ ಹಿತವನ್ನು ರಕ್ಷಿಸುತ್ತವೆಯೋ ಅಂತಹ ಸ್ವಾರ್ಥರಹಿತ'ಕಾರ್ಯಗಳನ್ನು ಮಾಡು, ಹಿತವಲ್ಲದವ'ನ್ನು ಮಾಡಬೇಡ. ನಾವು ಯಾವ ಒಳ್ಳೆಯ ಕಾರ್ಯಗಳನ್ನು ಆಚರಿಸಿದ್ದೇವೆಯೋ ಅವುಗಳನ್ನು ಆಚರಿಸು. ಒಳ್ಳೆಯವಲ್ಲದವನ್ನು ಆಚರಿಸಬೇಡ. ನಮಗಿಂತ ಉತ್ತಮವಾದ ಜ್ಞಾನಿಗಳು ಇದ್ದರೆ ಅಂಥವರನ್ನು ಗೌರವಿಸಿ, ಆಸನವನ್ನು ಕೊಟ್ಟು ಕುಳ್ಳರಿಸು . ದಾನ ಶ್ರೇಷ್ಠ ಕರ್ಮ, ಆತ್ಮೋದ್ಧಾರಕವೂ ಹೌದು. ಅದು ನಿಸ್ವಾರ್ಥವನ್ನೂ, ಸಕಲಜನಹಿತವನ್ನೂ ಬಯಸುತ್ತದೆ. ಈ ಕರ್ಮವನ್ನು ಪ್ರತಿಯೊಬ್ಬನೂ ಆಚರಿಸಬೇಕು ಎನ್ನುವ ಅಭಿಲಾಷೆಯಿಂದ–

ಅಹಂಕಾರರಹಿತವಾಗಿ, ತನ್ನ ಶಕ್ತಿಯನ್ನನುಸರಿಸಿ, ಶ್ರದ್ಧೆಯಿಂದ, ವಿನಯದಿಂದ ದಾನ ಕೊಡಬೇಕು. ಅಪಾತ್ರರಿಗೆ, ಕೆಟ್ಟ ಕಾರ್ಯಕ್ಕೆ ದಾನ ಮಾಡುತ್ತಿರುವೆನೇ ? ಎಂದು ಭಯಗ್ರಸ್ತ ಚಿಂತನೆ ಮಾಡಿ ದಾನ ನೀಡಬೇಕು. ದಾನವು ದಾನಿಗೂ, ದಾನಸ್ವೀಕಾರ ಮಾಡುವವನಿಗೂ ಶ್ರೇಯಸ್ಸನ್ನುಂಟುಮಾಡುತ್ತದೆ. ಆದ್ದರಿಂದ ತಿರಸ್ಕಾರರಹಿತವಾಗಿ, ಸ್ನೇಹಭಾವದಿಂದ ಇದು ಕೂಡಿರಬೇಕೆಂದು ಉಪದೇಶಿಸಿದ್ದಾರೆ. ಶಿಷ್ಯನು ಗುರುಕುಲದಲ್ಲಿದ್ದಾಗ, ಅಲ್ಲಿ ಯಾವ ಸಂಪ್ರದಾಯ ಹಾಗೂ ಆಚರಣೆಗಳಿದ್ದವೋ ಅವೇ ಎಲ್ಲ ಕಡೆಯೂ, ಹಾಗೇ ಇರಬೇಕೆಂಬ ನಿಯಮವಿಲ್ಲ. ಶಿಷ್ಯ ಅಧ್ಯಯನದ ನಂತರ ತನ್ನ ದೇಶಕ್ಕೆ, ಊರಿಗೆ ಹೋದಾಗ ಇಂತಹ ವಿಭಿನ್ನಪರಿಸ್ಥಿತಿಯನ್ನೆದುರಿಸಬೇಕಾದಾಗ ಏನು ಮಾಡಬೇಕು? – ನಿನ್ನ ಪ್ರದೇಶಕ್ಕೆ ಹೋದಾಗ, ಶ್ರೌತಸ್ಮಾರ್ತ ಕರ್ಮಾನುಷ್ಠಾನಗಳ, ಸಂಪ್ರದಾಯ ಆಚರಣೆಗಳ ವಿಚಾರದಲ್ಲಾಗಲೀ ಸಂದೇಹ ಬಂದಾಗ, ಆ ಪ್ರದೇಶದಲ್ಲಿ ಶಾಸ್ತ್ರಜ್ಞಾನ ಪರಿಣತರೂ, ಕರ್ಮಸಮರ್ಥರೂ, ಸ್ವತಂತ್ರ ವಿಚಾರವಂತ, ವಿನಯಸಂಪನ್ನ, ಧರ್ಮಶೀಲರೂ ಆದ ಬ್ರಾಹ್ಮಣರು ಹೇಗೆ ಆಚರಿಸುತ್ತಾರೋ ಹಾಗೇ ಆಚರಿಸು. ಅಪರಾಧಿಗಳ ವಿಷಯದಲ್ಲಿ ಶಾಸ್ತ್ರಜ್ಞಾನ ಪರಿಣತರೂ, ಕರ್ಮಸಮರ್ಥರೂ, ಸ್ವತಂತ್ರವಿಚಾರಕ್ಷಮರೂ, ವಿನಯಸಂಪನ್ನರೂ, ಧರ್ಮಶೀಲರೂ ಆದ ಬ್ರಾಹ್ಮಣರು ಹೇಗೆ ವರ್ತಿಸುವರೋ, ಹಾಗೆ ನೀನೂ ವರ್ತಿಸು ಎಂದುಪದೇಶಿಸಿದ್ದಾರೆ. ಇಷ್ಟು ಹೇಳಿ, ಗುರು ತಾನು ಉಪದೇಶಿಸುತ್ತಿಲ್ಲ, ಇದರಲ್ಲಿ ತನ್ನ ಸ್ವಾರ್ಥವಾಗಲೀ, ದುರಹಂಕಾರವಾಗಲೀ ಇಲ್ಲ ಎಂದು ಸ್ಪಷ್ಟಪಡಿಸಲು – ಇದು ವಿಧಿ. ಇದು ಉಪದೇಶ. ಇದು ವೇದ–ಉಪನಿಷತ್ತುಗಳಲ್ಲಿರುವ ರಹಸ್ಯ. ಭಗವಂತನ ಆಜ್ಞೆ. ಇದನ್ನು ಹೀಗೇ ತಪ್ಪದೇ ಆಚರಿಸಬೇಕು, ಪರಿಪಾಲಿಸಬೇಕು ಎಂದಿದ್ದಾರೆ.

ಮೊದಲ ಶಾಂತಿಪಾಠ ಪ್ರಾರ್ಥನಾರೂಪವಾದದ್ದು. ಇದು ವಂದನಾರೂಪವಾದದ್ದು – ಮಿತ್ರನು, ವರುಣನು, ಇಂದ್ರನೂ, ಬೃಹಸ್ಪತಿಯೂ ನಮಗೆ ಸುಖವನ್ನು ಕೊಡಲಿ. ಬ್ರಹ್ಮನಿಗೆ, ವಾಯುವಿಗೆ ನಮಸ್ಕಾರಗಳು. ನೀನು ನಮಗೆ ಪ್ರತ್ಯಕ್ಷವಾದ ಬ್ರಹ್ಮನೆಂದು, ಋತವೆಂದು, ಸತ್ಯವೆಂದು ಹೇಳಿದ್ದೇನೆ. ಅದು ನನ್ನನ್ನು, ಉಪದೇಶಿಸಿದ ಆಚಾರ್ಯನನ್ನು ಕಾಪಾಡಿತು. ಶಾಂತಿಃ ಶಾಂತಿಃ ಶಾಂತಿಃ .

1. ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ತಾಪತ್ರಯಗಳು ನಾಶವಾಗಲಿ ಎಂಬುದನ್ನು ಅಭವ್ಯಕ್ತಗೊಳಿಸಲು ಶಾಂತಿಃ ಶಬ್ದವನ್ನು ಮೂರು ಸಲ ಉಚ್ಚರಿಸಲಾಗಿದೆ

2. ಬ್ರಹ್ಮವರ್ಚಸ್ ಎಂದರೆ ಉಪನಿಷತ್ತುಗಳಲ್ಲ'ನ ಆಧ್ಯಾತ್ಮಿಕ ವಿಷಯಗಳನ್ನು ತಿಳಿದುಕೊಳ್ಳುವುದರಿಂದ ಪ್ರಾಪ್ತವಾಗುವ ಅಲೌಕಿಕ ತೇಜಸ್ಸು

3. ಮೇಧಾಶಕ್ತಿಯನ್ನು ಕೊಟ್ಟು ಪ್ರಜ್ಞಾಬಲಿಷ್ಠನನ್ನಾಗಿ ಮಾಡಲಿ

4. ವ್ಯಾಹೃತಿ ಎಂದರೆ ಪದಗಳ ಉಚ್ಚಾರಣೆ

5. ಯೋಗಶಾಸ್ತ್ರಕ್ಕೆ ಸಂಬಂಧಿಸಿದ ಸೂಕ್ಷ್ಮವಿಷಯವನ್ನು ಇಲ್ಲಿ ಹೇಳಿದೆಯಾದ್ದರಿಂದ, ಈ ಭಾಗದ ಅರ್ಥವನ್ನು ಗುರುಮುಖೇನ ತಿಳಿದುಕೊಳ್ಳುವುದು ಸೂಕ್ತವಾದದ್ದು

6. ಇಂದ್ರಿಯನಿಗ್ರಹ ಎಂದರೆ ದಮ

7. ಶಮ ಎಂದರೆ ಸಹನೆ ಮತ್ತು ಶಾಂತಿ

8. ಉಪದೇಶವೂ ಒಂದು ಕಲೆ ಎಂಬುದನ್ನು ಪರೋಕ್ಷವಾಗಿ ಪ್ರತಿಪಾದಿಸಲಾಗಿದೆ

9. ಸಮಾಜದ ನಡುವೆ ಬಾಳುತ್ತಿರುವಾಗ ಸ್ನಾತಕ ಶಿಷ್ಯನ ದೈನಂದಿನ ನಡವಳಿಕೆಗಳು ಹೇಗಿರಬೇಕು ಎಂಬುದನ್ನು ಇಲ್ಲಿ ಹೇಳಲಾಗಿದೆ

10. ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ತಾಪತ್ರಯಗಳು ನಾಶವಾಗಲಿ ಎಂಬುದನ್ನು ಅಭವ್ಯಕ್ತಗೊಳಿಸಲು ಶಾಂತಿಃ ಶಬ್ದವನ್ನು ಮೂರು ಸಲ ಉಚ್ಚರಿಸಲಾಗಿದೆ

ಆತಂಕ ಸೃಷ್ಟಿಸಿದ ಹೊಸ ರೋಗಗಳು ಮತ್ತು ಅವುಗಳ ನಿಯಂತ್ರಣ

ಶ್ರೀಮತಿ ವಿದ್ಯಾ ಪಾಟೀಲ
ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮಜೀವಶಾಸ್ತ್ರ ವಿಭಾಗ, ಎಲ್. ವಿ. ಡಿ. ಮಹಾವಿದ್ಯಾಲಯ, ರಾಯಚೂರು
E-mail:- biradar888222@gmail.com

ಸೂಕ್ಷ್ಮಜೀವಿಗಳನ್ನು ನಿಯಂತ್ರಿಸಲು ಮಾನವನು ಮಾಡಿದ ವಿಸ್ತಾರವಾದ ಪ್ರಯತ್ನಗಳ ಹೊರತಾಗಿಯೂ, ಉದಯೋನ್ಮುಖ ಸಾಂಕ್ರಾಮಿಕ (ಇ. ಐ. ಡಿ–) ಶತಮಾನಗಳಿಂದ ನಿರ್ಣಾಯಕ ಸವಾಲಾಗಿಯೇ ಉಳಿದಿವೆ. ಈ ರೋಗಗಳು ಮಾನವನ ಪ್ರಗತಿ ಮತ್ತು ಅಸ್ತಿತ್ವಕ್ಕೆ ಪ್ರಮುಖ ಅಡೆ– ತಡೆಯಾಗಿ ಪರಿಣಮಿಸಿವೆ. ಇವುಗಳು ವಿಶ್ವವ್ಯಾಪಕವಾಗಿ ಸಾವು ಮತ್ತು ಅಂಗವಿಕಲತೆಗಳ ಪ್ರಮುಖ ಕಾರಣಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಹೊಸದಾಗಿ ಉದಯಿಸಿದ ರೋಗಗಳು ಪ್ರಕರಣಗಳು ಮಾನವನಲ್ಲಿ ಹೆಚ್ಚಾಗಿವೆ ಮತ್ತು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಾಗುವ ಸಾಧ್ಯತೆಗಳಿವೆ. ಉದಯೋನ್ಮುಖ ರೋಗಗಳು ಹೊಸದಾಗಿ ಉದಯಿಸಿದ ರೋಗಗಳು ಮತ್ತು ಮರು ಹೊರಹೊಮ್ಮುತ್ತಿರುವ ರೋಗಗಳು – ಉದಾಹರಣೆಗೆ ಹೊಸ ಸ್ಟ್ರೆಯ ಅಥವಾ ಹೊಸ ಸಮುದಾಯಗಳಲ್ಲಿ ಕಾಣಿಸಿದ ರೋಗಗಳು, ಲಭ್ಯವಿರುವ ಚಿಕಿತ್ಸೆಗಳಿಗೆ ಪ್ರತಿರೋಧ ಒಡ್ಡುವ ರೋಗಗಳು ಸೇರಿದಂತೆ ಹೊಸ ವೈದ್ಯಕೀಯ ಗುಣಲಕ್ಷಣಗಳೊಂದಿಗೆ ತೀವ್ರವಾಗಿ ಹರಡುವ ರೋಗಗಳು ಮುಂತಾದವುಗಳನ್ನು ಒಳಗೊಂಡಿವೆ. ಇರತಹ ಸುಮಾರು 30 ಹೊಸ ಸಾಂಕ್ರಾಮಿಕ ರೋಗಕಾರಕಗಳನ್ನು ಕಳೆದ ಮೂರು ದಶಕಗಳಲ್ಲಿ ಕಂಡುಹಿಡಿಯಲಾಗಿದೆ. ಅವುಗಳಲ್ಲಿ 60% ರೋಗಗಳು ಪ್ರಾಣಿಜನ್ಯ (ಜುನೋಟಿಕ್) ರೋಗಗಳಾಗಿವೆ. ಭಾರತದಂತಹ ಅಭಿವೃದ್ಧಿಶೀಲ ದೇಶಗಳು ಇ.ಐ.ಡಿ ಗಳಿಂದ ಬಳಲುತ್ತಿವೆ. ಈ ಲೇಖನದಲ್ಲಿ ಕೆಲವು ಪ್ರಮುಖ ಜುನೋಟಿಕ್ ಉದಯೋನ್ಮುಖ ಸಾಂಕ್ರಾಮಿಕ ರೋಗಗಳು ಮತ್ತು ಅವುಗಳ ಗುಣಲಕ್ಷಣ ಮತ್ತು ನಿಯಂತ್ರಣದ ಬಗ್ಗೆ ಉಲ್ಲೇಖಿಸಲಾಗಿದೆ.

ಮಾನವನ ಅವಿರತ ಪ್ರಯತ್ನದ ಹೊರತಾಗಿಯೊ ಸಾಂಕ್ರಾವಿಕ ರೋಗಗಳು ನಿರ್ಣಾಯಕ ಜಾಗತಿಕ ಸವಾಲಾಗಿಯೇ ಉಳದಿವೆ. ಉದಯಿಸುತ್ತಿರುವ ರೋಗಗಳು ಒಂದು ಸಮುದಾಯದಲ್ಲಿ ಹೊಸದಾಗಿ ಕಾಣಿಸಿಕೊಂಡ ರೋಗಗಳು ಮತ್ತು ಭೌಗೋಳಿಕವಾಗಿ ತನ್ನ ವ್ಯಾಪ್ತಿಯನ್ನು ವೇಗವಾಗಿ ಹೆಚ್ಚಿಸಿಕೊಳ್ಳುತ್ತರುವ ರೋಗಗಳನ್ನು ಹೊಂದಿದೆ. ಇತ್ತೀಚಿನ ದಿನಗಳಲ್ಲಿ ನಾವು ವೇಗವಾಗಿ ಬದಲಾಯಿಸುತ್ತರುವ ವಾತಾವರಣದಲ್ಲಿ ವಾಸಿಸುತ್ತಿದ್ದೆವೆ. ಆರ್ ಎನ್ ಎ (ಖಓಂ) ಯನ್ನು ಅನುವಂಶಿಕ ಅಂಶವಾಗಿ ಹೊಂದಿರುವ ಆರ್ ಎನ್ ಎ ವೈರಸ ತ್ವರಿತವಾಗಿ ವಾತಾವರಣಕ್ಕೆ ಅನುಗುಣವಾಗಿ ಹೊಂದಿಕೊಳ್ಳುವ ಗುಣ ಹೊಂದಿವೆ ಮತ್ತು ಅವುಗಳ ಜಿನೊಮ್‌ಗಳನ್ನು ಪುನರಾವರ್ತಿಸುವ ಕಿಣ್ವಗಳು (ಪಾಲಿಮರೇಸ) ಕಾರ್ಯದೋಷದಿಂದ ಇತ್ತೀಚಿನ ಹಲವು ಪ್ರಮುಖ ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ಇವುಗಳು ಕಾರಣವಾಗಿವೆ. ಅಂತರಾಷ್ಟ್ರೀಯ ಪ್ರವಾಸ, ವ್ಯಾಪಾರ ವನ್ಯಜೀವಿಗಳ ನೆಲೆಗಳ ಮಾನವ ಒತ್ತುವರಿ ಮುಂತಾದ ಅಂಶಗಳಿಂದ ಸಾಂಕ್ರಾಮಿಕ ರೋಗಗಳ ಹರಡುವಿಕೆ ಹೆಚ್ಚಾಗಿದೆ ಇವುಗಳ ಜೋತೆಗೆ ನಗರೀಕರಣ ಮತ್ತು ಇತ್ತೀಚಿನ ೫೦ ವರ್ಷಗಳಲ್ಲಿ ಅಗಾಧವಾಗಿ ಹೆಚ್ಚಿದ ಜನಸಂಖ್ಯೆಯಿಂದ ರೋಗಾಣುಗಳ ವ್ಯಾಪ್ತಿ ವಿಸ್ತರಣೆಗೊಂಡಿದೆ. ಒಟ್ಟಿಗೆ ಈ ಎಲ್ಲಾ ಅಂಶಗಳ ಪರಿಣಾಮದಿಂದ ಹಲವಾರು ಹೋಸ ಮತ್ತು ಹಳೆಯ ವೈರಸ್ ಸೋಂಕುಗಳು ಕಳೆದ ಕೆಲವು ದಶಕಗಳಲ್ಲಿ ಮಾನವನಲ್ಲಿ ಹೆಚ್ಚಾಗಿವೆ.

ರೋಗಗಳ ವಿಧಗಳು: ಎಮರ್ಜಿಂಗ್ ಸೋಂಕುಗಳನ್ನು ಹೊಸದಾಗಿ ಉದಯಿಸಿದ ರೋಗಗಳ, ಮರುಕಳಿಸಿದ ರೋಗಗಳು ಮತ್ತು ಉದ್ದೇಶ ಪೂರ್ವಕವಾಗಿ ಹರಡಿಸುತ್ತಿರುವ ರೋಗಗಳು ಎಂದು ವಿಂಗಡಿಸಬಹುದು.

ಹೊಸದಾಗಿ ಉದಯಿಸಿದ ರೋಗಗಳು: ಈ ಮುಂಚೆ ಮಾನವನಲ್ಲಿ ಕಾಣಿಸಿಕೊಂಡಿರದ ರೋಗಗಳು.

ಮರುಕಳಿಸಿದ ರೋಗಗಳು: ಹಿಂದೆ ಅಸ್ತಿತ್ವದಲ್ಲಿದ್ದು ಆದರೆ ಈಗ ವೇಗವಾಗಿ ಹೋಸ ಭೌಗೋಳಿಕ ಪ್ರದೇಶ ಅಥವಾ ಹೊಸ ಸಮುದಾಯದಲ್ಲಿ ಕಾಣಿಸುವ ರೋಗಗಳು ಮತ್ತು ಮನುಷ್ಯನ ನಾಶಕ್ಕಾಗಿ ಉದ್ದೇಶಪೂರ್ವಕವಾಗಿ ಬಳಸಿದ ಸಾಂಕ್ರಾವಿಕ ರೋಗಗಳನ್ನು ಒಳಗೊಂಡಿದೆ.

ಉದ್ಭವಿಸುತ್ತಿರುವ ವೈರಸ್ ರೋಗಗಳಿಗೆ ಕಾರಣಗಳು: ಈ ಕೆಳಗಿನ ಅಂಶಗಳು ವೈರಲೆ ಸೋಂಕುಗಳ ಹೊರಹೊಮ್ಮುವಿಕೆಗೆ ಕಾರಣಗಳಾಗಿವೆ.

* ಅಂತರಾಷ್ಟ್ರೀಯ ಪ್ರವಾಸ ಮತ್ತು ವ್ಯಾಪಾರ– ಸೂಕ್ಷ್ಮಜೀವಿಗಳ ಅಸ್ತಿತ್ವಕ್ಕೆ ಯಾವುದೇ ಭೂಗೋಳಿಕ ಗಡಿಗಳಲ್ಲಿಲ್ಲವಾದ್ದರಿಂದ ಅವುಗಳ ಪ್ರಸಾರ ಮಾನವನ ಚಲನವಲನದೊಂದಿಗೆ ಹೆಚ್ಚಾಗಿದೆ.ಪ್ರತಿಯೊಬ್ಬ ಮನುಷ್ಯನು ಸಾಂಕ್ರಾಮಿಕ ರೋಗ ವಾಹಕನಾಗಿದ್ದಾನೆ. ಪ್ರಪಂಚದಾದ್ಯಂತ ಸಂಚರಿಸುತ್ತಿರುವ ಜನರು ಮತ್ತು ಸರಕುಗಳು ರೋಗಗಳ ಹರಡುವಿಕೆಗೆ ಕಾರಣವಾಗಿದೆ.

ಉದಾಹರಣೆ: ೨೦೦೯ ರಲ್ಲಿ ಹರಡಿದ ಎಚ್1 ಎನ್1 ಸಾಂಕ್ರಾಮಿಕ ಜ್ವರ

* ಮಾನವನ ವರ್ತನೆ ಮತ್ತು ಸುಧಾರಿತ ಔಷಧಗಳು– ಯುದ್ಧ ಮತ್ತು ಉದ್ಯೋಗಕ್ಕಾಗಿ ಮಾನವನ ವಲಸೆ, ನೈಸರ್ಗಿಕ ವಿಕೋಪಗಳು, ಸಾಂಕ್ರಾಮಿಕ ರೋಗಗಳ ಹರಡುವಿಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಇದರ ಜೋತೆಗೆ ನೀರಿನ ಸಂಗ್ರಹ (ಡೆಂಗ್ಯೂ) ,ಹಚ್ಚೆ ಹಾಕಿಸುವದು (ಎಚ್ ಐ ವಿ), ನಗರೀಕರಣ, ಲೈಂಗಿಕ ವರ್ತನೆ (ಎಚ್ ಐ ವಿ) ಮಾದಕ ವ್ಯಸನಿಗಳಲ್ಲಿ ಸಿರಿಂಜುಗಳ ಬಳಕೆ ರಕ್ತದಾನ ಅಥವಾ ಅಂಗಾಂಗಳ ಕಸಿ ಮುಂತಾದ ಆಧುನಿಕ ಮಾನವನ ವರ್ತನೆಗಳು ಸಹ ವೈರಲ್ ರೋಗಗಳ ಪ್ರಸರಣಕ್ಕೆ ಕಾರಣಗಳಾಗಿವೆ.

* **ಜೈವಿಕ ಭಯೋತ್ಪಾದನೆ** : 2010 ರಲ್ಲಿ ಅಮೇರಿಕಾದ ಮೇಲೆ ಅಂಚೆಯ ಮೂಲಕ ಆದ ಆಂಥ್ರಾಕ್ಸ್ ದಾಳಯ ನಂತರ ,ವೈರಸ್‌ಗಳನ್ನು ಜೈವಿಕ ಭಯೋತ್ಪಾದನೆಯಲ್ಲಿ ಅಸ್ತ್ರಗಳಾಗಿ ಬಳಸುವ ಸಾಧ್ಯತೆಗಳು ಹೆಚ್ಚಿವೆ. ಸಿಡುಬು, ಎಬೂಲ, ಮಾರ್ಬಗ್ ಮುಂತಾದ ವೈರಸ್‌ಗಳು ಉದ್ದೇಶಪೂರ್ವಕವಾಗಿ ಪರಿಚಯಿಸಬಹುದಾದ ಸಂಭಾವ್ಯ ವೈರಸ್‌ಗಳಾಗಿವೆ. ಜೈವಿಕ ತಂತ್ರಜ್ಞಾನದ ಬಳಕೆ ವೈರಸ್ ಗಳ ಸಾಮರ್ಥ್ಯವನ್ನು ಹೆಚ್ಚಿಸಲು ಬಳಸಬಹುದಾಗಿದೆ.

* ಸೂಕ್ಷ್ಮಜೀವಿಗಳ ಹೊಂದಿಕೊಳ್ಳುವ ಗುಣ– ಸೂಕ್ಷ್ಮಜೀವಿಗಳು ನಿರಂತರವಾಗಿ ತಮ್ಮ ಪರಿಸರಕ್ಕೆ ಹೊಂದಿಕೊಳ್ಳುವ ಗುಣ ಹೊಂದಿವೆ ಫ್ಲೂ ನಂತಹ ವೈರಸ್‌ಗಳ ಹೊಸ ತಳಿಗಳ ವಿರುದ್ಧ ಮಾನವ ಪ್ರತಿರಕ್ಷಣಾ ವ್ಯವಸ್ಥೆಯು ಪ್ರತಿಕ್ರಿಯಿಸಲು ವಿಫಲವಾಗಿದೆ, ಕೆಲವೊಂದು ವೈರಸ್‌ಗಳು ಹೊಸ ಪ್ರಭೇದಗಳಾಗಿ ರೂಪಾಂತರಗೊಂಡು ಮತ್ತಷ್ಟು ವೇಗವಾಗಿ ಹರಡುತ್ತಿವೆ, ಮತ್ತು ಅಸ್ತಿತ್ವದಲ್ಲಿರುವ ಪ್ರಭೇದಗಳ ಲಸಿಕೆಗಳು ಅವುಗಳ ಮೇಲೆ ನಿಷ್ಪರಿಣಾಮಕಾರಿಯಾಗುತ್ತಿವೆ. ಕೆಲವು ವೈರಸ್‌ಗಳು ವಿಕಸನಹೊಂದಿ ಹೊಸ ರೋಗ ಲಕ್ಷಣಗಳನ್ನು ಉಂಟುಮಾಡುತ್ತವೆ ಬೇರೆ ಜೀವಿಗಳಲ್ಲಿ(ಹೋಸ್ಟ) ರೋಗವನ್ನು ಹರಡುತ್ತಿವೆ. ಸೂಕ್ಷ್ಮಜೀವಿಗಳಲ್ಲಿ ಹೆಚ್ಚುತ್ತಿರುವ ಔಷಧದ ಪ್ರತಿಜೈವಿಕರೋಧ(Antibiotic resistance) ಶಕ್ತಿಕೂಡ ಒಂದು ಆತಂಕಕಾರಿ ಬೆಳವಣಿಗೆಯಾಗಿದೆ.

* ವನ್ಯಜೀವಿಗಳ ವಾಸಸ್ಥಾನದ ಮೇಲೆ ಮಾನವನ ಅತಿಕ್ರಮಣ– ಅರಣ್ಯನಾಶ, ಮಾನವನ ಆವಾಸಸ್ಥಾನದ ವಿಸ್ತರಣೆ, ಗಣಿಗಾರಿಕೆ ಮುಂತಾದ ಚಟುವಟಿಕೆಗಳಿಂದ ಬಹಳಷ್ಟು ವೈರಸ ಸೊಂಕುಗಳು ಮತ್ತೆ ಪುನರ್‌ಜೀವನಪಡೆದು ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿವೆ.ಈ ಅಂಶಗಳು increased exposure of humans to the virus & the vector.

* ಕೃಷಿಯಲ್ಲಿ ಬದಲಾವಣೆಗಳು– ಭಾರತದಲ್ಲಿ ವ್ಯವಸಾಯಕ್ಕಾಗಿ ನಿರ್ಮಾಣಗೊಂಡ ಆಣೆಕಟ್ಟುಗಳು ಮತ್ತು ಕಾಲುವೆಗಳು ಜಪಾನಿಸ್ ಎನ್ಸ್ ಫೆಲೈಟಿಸ್ ನಂತಹ ಸೊಂಕುಗಳ ಹೆಚ್ಚಳಕ್ಕೆ ಕಾರಣವಾಗಿದೆ. ಅದೇ ರೀತಿ ಅರ್ಜೆಂಟೀನಾದಲ್ಲಿ ಕಾಣಿಸಿಕೊಂಡ ಹೇಮರಾಜಿಕ್ ಜ್ವರ (Argentina Hemorrhagic fever)

ಕೂಡ ವ್ಯವಸಾಯ ಬದಲಾವಣೆಯ ಸಂಬಂಧದಿಂದ ಹರಡಿದ ರೋಗವಾಗಿದೆ. 2007 ರಲ್ಲಿ ಕೇರಳದ ಕೊಟ್ಟಾಯಂ ಮತ್ತು ಪಥನಂತಿಟ್ಟ ಪ್ರದೇಶದಲ್ಲಿ ಹರಡಿದ ಚಿಕನ್‌ಗುನ್ಯಾಕ್ಕೆ ಅಲ್ಲಿರುವ ವ್ಯಾಪಕ ರಬ್ಬರ್ ತೋಟಗಳು ಕಾರಣ ಎನ್ನಲಾಗಿದೆ.

* ವನ್ಯಜೀವಿ ವ್ಯಾಪಾರ / ಪರಿಸರ ಪ್ರವಾಸೋದ್ಯಮ: ವನ್ಯಜೀವಿಗಳು ಬಹಳಷ್ಟು ರೋಗಗಳ/ ರೋಗವಾಹಕಗಳ ಉಗಮಸ್ಥಾನವಾಗಿದೆ. ಅಂದಾಜು ಶೇಕಡ 75% ವೈರಸ್‌ಗಳಿಂದ ಹರಡುವ ಸಾಂಕ್ರಾಮಿಕ ರೋಗಗಳು ಪ್ರಾಣಿಜನ್ಯ ರೋಗಗಳಾಗಿವೆ. ವನ್ಯಜೀವಿಗಳಿಗೆ ಸಂಬಂಧ ಪಟ್ಟ ವನ್ಯಜೀವಿ ವ್ಯಾಪಾರ, ವನ್ಯಜೀವಿಗಳ ಸ್ಥಳಾಂತರ, ಪರಸರ ಪ್ರವಾಸೋದ್ಯಮ ಮುಂತಾದ ಅಂಶಗಳು ರೋಗ ಹರಡಲು ಸಹಕಾರಿಯಾಗಿವೆ. ಇತೀಚಿಗೆ ಏಕಾಏಕಿ ಹರಡಿದ ಎಬೂಲಾ ವೈರಸ್‌ಗೆ ಪ್ರಾಣಿಗಳ ಸಾಗಾಣಿಕೆ ಕಾರಣ ಎನ್ನಲಾಗಿದೆ. ಖಖಖ ವೈರಸ್ ಕೂಡ ಪ್ರಾಣಿಗಳಿಂದ ಮನುಷ್ಯನಿಗೆ ಹರಡಲು ಚೀನಾದಲ್ಲಿ ಪ್ರಚಲಿತವಿರುವ ಪ್ರಾಣಿಜನ್ಯ ಪ್ರೋಟಿನ್‌ಗಳ ಬಳಕೆ ಕಾರಣವಾಗಿದೆ.

ಭಾರತದಲ್ಲಿ ಹರಡುತ್ತಿರುವ ವೈರಸ್ ರೋಗಗಳು: ಸಾಂಕ್ರಾಮಿಕ ರೋಗಗಳು ಮಾನವಸ ಆರೋಗ್ಯದ ಮೇಲಷ್ಟೆ ಪರಿಣಾಮ ಬೀರುವುದರ ಜೊತೆಗೆ ಅಗಾಧದ ಆರ್ಥಿಕ ನಷ್ಟ ಉಂಟುಮಾಡುತ್ತವೆ. Centre for disease control& Prevention(CDC) ಮತ್ತು ವಿಶ್ವ ಆರೋಗ್ಯ ಸಂಸ್ಥೆ (WHO) ದಂತಹ ಸಂಸ್ಥೆಗಳು ಈ ರೋಗಗಳ ಹರಡುವಿಕೆ ಪ್ರಭಾವ ಮತ್ತು ನಿಯಂತ್ರಣ ಬಗ್ಗೆ ನಿರಂತರವಾಗಿ ಅಧ್ಯಯನ ನಡೆಸುತ್ತಿವೆ. ಈ ಸಂಸ್ಥೆಗಳ ವರದಿಯ ಪ್ರಕಾರ ಇತೀಚೆಗೆ ಬಹಳಷ್ಟು ವೈರಸ್ ಸೋಂಕುಗಳು ವ್ಯಾಪಕವಾಗಿ ಜಾಗತಿಕವಾಗಿ ಹರಡುತ್ತವೆ. ಇವುಗಳಲ್ಲಿ ಬಹಳಷ್ಟು ಗುರುತಿಸಲ್ಪಡದ ಹೊಸ ವೈರಸ್ ಸೋಂಕುಗಳನ್ನು ಕೂಡ ಒಳಗೊಂಡಿವೆ. ಐತಿಹಾಸಿಕವಾಗಿ, ಏಷ್ಯಾ ಖಂಡ ಹಲವಾರು ಹೊಸ ರೋಗಗಳ ಉಗಮ ಸ್ಥಾನವಾಗಿದೆ, ಜಾಗತಿಕ ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಈ ರೋಗಗಳು ಪ್ರಮುಖ ಪಿಡುಗುಗಳಾಗಿವೆ.ಭಾರತದಲ್ಲಿಯು ಸಹ ಕಳೆದ ಕೆಲವು ದಶಕಗಳಿಂದ ಈ ರೀತಿಯ ಸಾಂಕ್ರಾಮಿಕ ರೋಗಗಳು ಹರಡಿವೆ ಮತ್ತು ಹರಡುತ್ತಿವೆ. ಈಗಿನ ದಿನಗಳಲ್ಲಿ ಇವುಗಳ ನಿಯಂತ್ರಣ ವಿಜ್ಞಾನಿಗಳಿಗೆ ಒಂದು ಬಹುದೊಡ್ಡ ಸವಾಲಾಗಿದೆ. ಭಾರತದಲ್ಲಿ ಇತ್ತೀಚಿಗೆ ಭಾದಿಸದಂತ ಕೆಲವು ಸಾಂಕ್ರಾಮಿಕ ಪಿಡುಗುಗಳು ಈ ರೀತಿಯಾಗಿವೆ.

1. **ಚಿಕನ್‌ಗುನ್ಯಾ:** ಚಿಕನ್‌ಗುನ್ಯಾ ಜ್ವರ, (Chikungunya fever) ಅಲ್ಫವೈರಸ್ ಎಂಬ ಟಾಗೋವೀರಿಡಿಯೆ ಕುಟುಂಬಕ್ಕೆ ಸೇರಿದ ವೈರಸ್‌ನಿಂದ ಹರಡುವ ರೋಗ. 32 ವರ್ಷಗಳ ನಂತರ 2005–06 ರಲ್ಲಿ ಭಾರತದಲ್ಲಿ ಈ ರೋಗ ಮರುಕಳಿಸಿತು ಮತ್ತು ಸುಮಾರು 1.38 ದಶಲಕ್ಷಕ್ಕಿಂತ ಹೆಚ್ಚು ಇದರ ಪ್ರಕರಣಗಳು ದಾಖಲಾಗಿವೆ. ಜ್ವರದ ಜೊತೆಗೆ ಆರ್ಥಾಲ್ಜಿಯಾ ಮತ್ತು ರ್‍ಯಾಶ್‌ಗಳು ಈ ರೋಗದ ಲಕ್ಷಣಗಳು. ಹೆಚ್ಚಾಗಿ ಈ ರೋಗ ಸ್ವಯಂ ಸೀಮಿತವಾಗಿದ್ದರು ಕೇಲವೊಂದು ಸಲ ಹೃದಯ ಮೂತ್ರ ಪಿಂಡಗಳಿಗೆ ಸಂಬಂಧಿಸಿದ ಮತ್ತು ನರಮಂಡಲದ ತೊಂದರೆಗಳಿಗೆ ಕಾರಣವಾಗುತ್ತವೆ. ಇದರ ಜೋತೆಗೆ ತಾಯಿಯಿಂದ ಭ್ರೂಣಕ್ಕೆ ಕೂಡ ಈರೋಗ ಹರಡುತ್ತವೆ ಸಾಧ್ಯತೆಗಳವೆ ಚಿಕನ್ ಗುನ್ಯಾದ ಮೂದಲ ಸಾಂಕ್ರಾಮಿಕ ರೋಗ 1952–53 ರಲ್ಲಿ ಟೌಂಜಾನಿಯಾದಲ್ಲಿ ದಾಖಲಾಗಿದೆ. ಭಾರತದಲ್ಲಿ 1963–64 ಕೂಲ್ಕತಾದಲ್ಲಿ ಕಾಣಿಸಿಕೂಂಡಿತು, ದಕ್ಷಿಣ ಭಾರತದಲ್ಲಿ ಮತ್ತು197ರಲ್ಲಿ ಮಹಾರಾಷ್ಟ್ರದಲ್ಲಿ ಸೂಲಾಪುರದಲ್ಲಿ ಅಂದ್ರಪ್ರದೇಶ, ಕರ್ನಾಟಕ,ಮಧ್ಯಪ್ರದೇಶ, ತವಿಳುನಾಡಿನಲ್ಲಿ ಕಾಣಿಸಿಕೂಂಡು 2005ರಲ್ಲಿ ಮೂರು ದಶಕಗಳ ವಿರಾಮದ ನಂತರ ಮರುಕಳಿಸಿತು, ಭಾರತದ ಇತರ ರಾಜ್ಯಗಳಿಂದ ಕೂಡ ಈ ರೋಗದ ಪ್ರಕರಣಗಳು ವರದಿಯಾಗಿವೆ ಮತ್ತು ಇನ್ನು ಈ ರೋಗದ ಹರಡುವಿಕೆ ಮುಂದುವರೆದಿದೆ.

ಚಿಕನ್‌ಗುನ್ಯಾ ಏಡಸ್ ಈಜಿಪ್ತ ಎಂಬ ಸೊಳ್ಳೆಯ ಮೂಲಕ ಹರಡುತ್ತದೆ. ಅಲ್ಲದೆ ಏಷ್ಯನ್ ಟೈಗರ್ ಸೊಳ್ಳೆ ಮತ್ತು ಏಡಸ್ ಅಲ್‌ಬೊಪಿಕ್ಟಸ್ ಸೊಳ್ಳೆಗಳು ಈ ರೋಗದ ಸಂವಹನಕ್ಕೆ ಕಾರಣವಾಗಿವೆ.

2. **ಡೆಂಗ್ಯೂ:** ಡೆಂಗ್ಯೂ ಪ್ರಪಂಚದಾದ್ಯಂತ ವ್ಯಾಪಕವಾಗಿ ಹೊರಹೊಮ್ಮಿದ ಫ್ಲೆವಿವೈರಸ್ ನಿಂದ ಹರಡಿದ ರೋಗ, ಈ ರೋಗ ಜಾಗತಿಕವಾಗಿ ವೇಗವಾಗಿ ಬದಲಾಗುತ್ತಿವೆ. ಡೆಂಗ್ಯೂ ವೈರಸ್ ಫ್ಲೆವಿವಿರಿಡಿಯೆ ಕುಟುಂಬಕ್ಕೆ ಸೇರಿದೆ ಮತ್ತು ನಾಲ್ಕು ಸಿರೋಟೈಪಗಳನ್ನು (1–4) ಒಳಗೊಂಡಿದೆ ಸಿಯಿಯೋಲಜಿಕ್ ಪರಿಕ್ಷೆಗಳಲ್ಲಿ ಈ ವೈರಸ್‌ಗಳ ನಡುವೆ ವ್ಯಾಪಕ ಅಡ್ಡ ಪ್ರತಿಕ್ರಿಯೆಗಳ ಹೊರತಾಗಿಯು, ಮಾನವನಲ್ಲಿ ಯಾವುದೇ ಅಡ್ಡ ರಕ್ಷಣಾತ್ಮಕ ವಿನಾಯತಿ ಇಲ್ಲ. ಒಂದು ಸ್ಥಳೀಯ ಪ್ರದೇಶದಲ್ಲಿ ವಾಸಿಸುವ ವ್ಯಕ್ತಿಯ ಜೀವಿತಾವದಿಯಲ್ಲಿ ಈ ನಾಲ್ಕು ಸಿರೊಟೈಪಗಳಿಂದ ಸೊಂಕು ಹೊಂದಬಹುದು.

ಡೆಂಗ್ಯೂ ಭಾರತದಲ್ಲಿ ಶತಮಾನಗಳ ಇತಿಹಾಸ ಹೊಂದಿದೆ. ಆದರೆ ಸೌಮ್ಯ ಮತ್ತು ಸ್ವಯಂ ಸೀವಿತವಾಗಿದ್ದು ನಗರ ಪ್ರದೇಶದ ಈ ಸಾಮಾನ್ಯ ಸೊಂಕು ಇತ್ತೀಚಿನ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಿಗೂ ಹರಡುತ್ತಿದೆ.

ಈ ರೋಗದ ಪ್ರಸಾರದಲ್ಲಿ ಏಡಿಸ್ ಸೊಳ್ಳೆಗಳು– ಅದರಲ್ಲು ಏಡಿಸ್ "ಈಜಿಪ್ತಿ" ಪ್ರಮುಖ ಪಾತ್ರ ವಹಿಸುತ್ತದೆ. ಮಾರ್ಪಾಡು ಮಾಡಿಕೊಂಡು ಬೆಳೆಯುತ್ತಿರುವ ಈ ವೈರಸ್ ಮೂರನೇ ತಲೆಮಾರಿಗೆ (third Generation) ಬದಲಾಗಿದ್ದು, ಹಾವಳಿಯ ಹರವನ್ನು ಹೆಚ್ಚಿಸಿಕೊಂಡು ಜನರಿಗೆ ಬೇಗನೆ ಹರಡತ್ತಿದೆ. ಭಾರತದಂತಹ ದೇಶದಲ್ಲಿ ಈ ರೋಗದ ಸಾಂಕ್ರಾಮಿಕಗಳು ಮಳೆಗಾಲದಲ್ಲಿ ಸ್ಫೋಟಗೊಳ್ಳುವುದು ಸಾಮಾನ್ಯ.

ರೋಗಲಕ್ಷಣಗಳು:

* ಪ್ರಾರಂಭದಲ್ಲಿ ಅಲಸ್ಯ, ವಿಪರೀತ ತಲೆನೋವು, ಮೈ ತುಂಬಾ ದದ್ದುಗಳು (ಖಚಿಛಿ) ಕಾಣಿಸಿಕೊಳ್ಳುತ್ತವೆ.

* ನಂತರ ಮೈಕೈ ನೋವು,ತೀವ್ರತರದ ಬೆನ್ನು ನೋವು, ಸಂಧುಗಳಲ್ಲಿ ನೋವು ತೋರಬಹುದು.

* ಕೆಲವೊಂದು ಸಲ ಕೆಂಗಣ್ಣು (conjunctivitis) ಕಾಣಿಸಿಕೊಳ್ಳು ಬಹುದು

* ದೇಹದಲ್ಲಿ ಅಸಾಧ್ಯವಾದ ನೋವು ವ್ಯಾಪಿಸಿ ದೇಹದ ಮೂಳೆಗಳಲ್ಲವೂ ಪಟಪಟನೆ ಮುರಿದಂತಾಗುವುದು,ಇದಕ್ಕೆ ಬ್ರೆಕ್ ಬೋನ್ ಫೀವರ್ ಎಂದು ಕರೆಯುತ್ತಾರೆ

* ಜ್ವರ 48 ರಿಂದ 96 ಗಂಟೆಗಳವರೆಗೆ ಏಕ ಪ್ರಕಾರವಾಗಿ ಕಾಣಿಸಿಕೊಳ್ಳಬಹುದು

* ಹಸಿವು ಕುಗ್ಗುವದು ಬಲಹೀನತೆ ಹಿಗ್ಗುವದು, ವಾಕರಿಕೆ ವಾಂತಿ ಆಗಬಹುದು.

ಲಸಿಕೆಗಳು ಅಥವಾ ವೈರಾಣು ನಿರೋಧಕ ಔಷಧಗಳು ಲಭ್ಯವಿಲ್ಲ.ಈ ರೋಗ ನಿಯಂತ್ರಣದ ಪ್ರಮುಖ ಮಾರ್ಗಮೆಂದರೆ ಸೊಳ್ಳೆಗಳ ನಿಯಂತ್ರಣ ಮತ್ತು ಅವುಗಳ ಕಡಿತದಿಂದ ಬಚಾವಾಗುವುದು.

೩. ಇನ್‌ಫ್ಲುಯೆಂಜಾ (ಫ್ಲೂ) : ಫ್ಲೂ ಅನಾದಿ ಕಾಲದಿಂದಲೂ ಮಾನವನನ್ನು ಕಾಡುತ್ತಿರುವ ಒಂದು ಸಾಂಕ್ರಾಮಿಕ ರೋಗವಾಗಿದೆ, ಈ ರೋಗದ ಹರಡುವಿಕೆಯಲ್ಲಿ ಕಾರಣವೆಂದು ಗುರುತಿಸಲಾಗಿರುವ ವೈರಸ್‌ಗಳಿಗೆ ಇನ್‌ಫ್ಲುಯೆಂಜಾ ವೈರಸ್‌ಗಳಲ್ಲಿ 'ಎ', 'ಬಿ' ಹಾಗೂ 'ಸಿ' ಎಂಬ ಮೂರು ಪ್ರಭೇದಗಳನ್ನು ಗುರುತಿಸಲಾಗಿದೆ.ಮನುಷ್ಯರಲ್ಲಿ ಉಂಟಾಗುವ ಹೆಚ್ಚಿನ ಫ್ಲೂ ಪ್ರಕರಣಗಳಿಗೆ ಇನ್‌ಫ್ಲುಯೆಂಜಾ 'ಎ' ಕಾರಣವಾಗಿವೆ.

*** ಎಚ್1 ಎನ್1 ಸಾಂಕ್ರಾಮಿಕ:** ಇದುವರೆಗೆ ದಾಖಲಾದ ಫ್ಲೂ ಸಾಂಕ್ರಾಮಿಕಗಳಲ್ಲೆಲ್ಲಾ ಅತ್ಯಂತ ತೀವ್ರವಾಗಿದ್ದು ಇನ್‌ಫ್ಲುಯೆಂಜಾ ಎ ಎಚ್1 ಎನ್1 ನಿಂದ 2009 ರಲ್ಲಿ ಹರಡಿದ ಸ್ವಾನಿಷ್ ಫ್ಲೂ ಎನ್ನಲಾಗಿದೆ. ಈ ವೈರಸ್ ಮೊದಲು ಹಕ್ಕಿಗಳಿಂದ ಮನುಷ್ಯರಿಗೆ ಹರಡಿ ನಂತರ ಮನುಷ್ಯನಿಂದ ಹಂದಿಗಳಿಗೂ,ಹಂದಿಗಳಿಂದ ಇನ್ನಿತರ ಹಲವು ಪ್ರಾಣಿಗಳಿಗೆ ಹರಡಿರಬೇಕೆಂದು ಶಂಕಿಸಲಾಗಿದೆ. ಈ ವೈರಾಣು ಮಾರ್ಚ 2009 ರಲ್ಲಿ ಮೆಕ್ಸಿಕೋದಲ್ಲಿ ಗುರುತಿಸಲಾಗಿದ್ದು,ಈಗ ವಿಶ್ವದಾದ್ಯಂತ ಹರಡುತ್ತಿದೆ.ಇದರ ಸೋಂಕಿನಿಂದ ಕೋಟಿಗಟ್ಟಲೆ ಜನರು ಸೋಂಕಿತರಾಗಿದ್ದರೂ, ಸಾವಿನ ಪ್ರಮಾಣ ಶೆ. 0.02 ರಷ್ಟಿದೆ. ಭಾರತದಲ್ಲಿ ಈ ರೋಗ ಮೇ 13 ರಂದು ಅಮೇರಿಕಾದಿಂದ ಹೈದ್ರಾಬಾದಿಗೆ ಬಂದ 23 ವರ್ಷದ ಒಬ್ಬ ಪ್ರಯಾಣಿಕನಿಂದ ಪ್ರವೇಶಿಸಿತು ಮತ್ತು ಅಗಸ್ಟ್ 3 ರಂದು ಪುಣೆಯಲ್ಲಿ ಊ1ಓ1 ನಿಂದಾದ ಮೊದಲ ಮರಣದ ಪ್ರಕರಣ ದಾಖಲಾಯಿತು. ನವೆಂಬರ್ 30ರ ಒಳಗೆ ಭಾರತದಾದ್ಯಂತ 84417 ಶಂಕಿತ ಜನರು ರಕ್ತ ಪರೀಕ್ಷೆಗೆ ಒಳಪಡಿಸಲಾಯಿತು. ಇದರಲ್ಲಿ 18,198 (20.8%) ಜನರಲ್ಲಿ ಸೋಂಕು ಖಚಿತಪಟ್ಟಿದ್ದು ಮತ್ತು 575(3.15%) ಜನರು ಮರಣಹೊಂದಿದರು.ಭಾರತದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ತೀವ್ರವಾಗಿ ಈ ರೋಗ ಹರಡಿತು.

ಈ ಸೋಂಕು ಶ್ವಾಸಾಂಗದ ಸ್ರಾವಗಳ ಮೂಲಕ ಇಬ್ಬರಿಂದೊಬ್ಬರಿಗೆ ಅತಿ ಸುಲಭವಾಗಿ ಮತ್ತು ತ್ವರಿತವಾಗಿ ಹರಡುತ್ತದೆ ಹಾಗು ರೋಗ ಲಕ್ಷಣಗಳು ತೊಡಗುವ 24 ಗಂಟೆಗಳ ಮೊದಲೇ ಸೋಂಕುಳ್ಳವರಿಂದ ಅದು ಹರಡಲಾರಂಭಿಸುತ್ತದೆ.

ರೋಗಲಕ್ಷಣ ಸಾಮಾನ್ಯವಾಗಿ ಸೌಮ್ಯ ಶ್ವಾಸಕೋಶ ಸಂಭಂದಿ ಸಮಸ್ಯೆಯಾದರು ಕೆಲವೊಂದು ಸಲ ನ್ಯೂಮೋನಿಯಾ, ಎಆರ್‌ಡಿಎಸ್ (ARDS = Acute Respiratory Distress Syndrome), ಬಹು ಅಂಗಗಳ ವೈಫಲ್ಯತೆ ಮತ್ತು ಸಾವಿನಂತಹ ತೀವ್ರ ಸ್ವರೂಪದ ಲಕ್ಷಣಗಳನ್ನು ಕಾಣಬಹುದು.

4. ಎಬೊಲ (Ebola Hemorrhagic fever) : ಎಬೊಲ ವೈರಸ್ ಒಂದು ಆರ್ ಎನ್ ಎ ವೈರಸ್ ಆಗಿದ್ದು ಫ್ಲೆವೋ ವೈರಸ್ ಫ್ಯಾಮಿಲಿಗೆ ಸೇರಿದೆ. 1967 ರಲ್ಲಿ ಈ ಕುಖ್ಯಾತ ವೈರಸ್‌ಗಳ ಗುಂಪನ್ನು ಯೂರೋಪಿನಲ್ಲಿ ಕಂಡುಹಿಡಿಯಲಾಯಿತು. ಉಗಾಂಡದಿಂದ ಅಮದುಗೊಂಡ ಆಫ್ರಿಕನ್ ಹಸಿರು ಮಂಗಗಳ ಅಂಗಾಂಶಗಳ ಅಧ್ಯಯನ ನಡೆಸುತ್ತಿದ್ದ ಯೂರೋಪಿಸ ಒಂದು ಸಂಶೋಧನಾ ಕೇಂದ್ರದಲ್ಲಿ ಮೊದಲ ಬಾರಿಗೆ ಇದನ್ನು ಗುರುತಿಸಲಾಯಿತು.1976 ರಲ್ಲಿ ಈ ವೈರಸ್ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ (ಹಿಂದೆ ಜೈರ್ ಎಂಬ ಹೆಸರು ಹೊಂದಿದ) ದಲ್ಲಿ ಹೆಮೊರಾಜಿಕ್ ಜ್ವರದ ಹರಡುವಿಕೆಗೆ ಕಾರಣವಾಯಿತು.ಮರಣ ಪ್ರಮಾಣ ಶೇಕಡ 80% ದಾಖಲಾಗಿದೆ. ಈ ವೈರಸ್‌ನ ನೈಸರ್ಗಿಕ Reservior ಬಾವಲಿ(fruit bats).

ಎಬೊಲ ರೋಗ ಲಕ್ಷಣಗಳು ಇನ್‌ಫ್ಲೊಯೆಂಜಾದ ಲಕ್ಷಣ ಗಳನ್ನು ಹೋಲುತ್ತವೆ. ಇದು ಸುಸ್ತು, ಜ್ವರ, ಬಲಹೀನತೆ, ಹಸಿವಾಗದಿರುವುದು, ಮಾಂಸಖಂಡಗಳ ನೋವು, ಕೀಲುಗಳ ನೋವು ಮುಂತಾದವುಗಳಿಂದ ಕುಡಿವೆ, ಕೆಲವೊಂದು ಸಲ ತಲೆನೋವಿನ ಜೋತೆಗೆ ವಾಕರಿಕೆ, ವಾಂತಿ, ಹೊಟ್ಟೆನೋವು, ತಲೆನೋವು ಕೂಡ ಕಾಣಿಸಿಕೊಳ್ಳಬಹುದು.

ನಿಯಂತ್ರಣ:– ಎಬೊಲ ಸೋಂಕಿಗೆ ಇದುವರೆಗೆ ಯವುದೇ ಲಸಿಕೆ ಲಭ್ಯವಿಲ್ಲ, ಸೋಂಕಿತರ ರಕ್ತ ಮತ್ತು ಇತರ ಸ್ರಾವಗಳ ಸಂಪರ್ಕಕ್ಕೆ ಬರದ ಹಾಗೆ ನೋಡಿಕೊಳ್ಳುವುದು ಸೋಂಕಿತ ಪ್ರಾಣಿಗಳ ಮಾಂಸ ಸೇವನೆ ತೆಜಿಸುವದು ಈ ರೋಗದ ನಿಯಂತ್ರಣದ ವಿಧಾನ.

ಭಾರತದಲ್ಲಿ ಸಾಂಕ್ರಮಿಕ ರೋಗಗಳ ನಿಯಂತ್ರಣ: ಉದಯಿಸುತ್ತಿರುವ ಮತ್ತು ಮರುಕಳುಸುತ್ತಿರುವ ರೋಗಗಳ ಒಂದು ಸವಾಲು

WHO ನ ಇಂಟರ್‌ನ್ಯಾಷನಲ್ ಹೆಲ್ತ್ ರೆಗುಲೇಷನ್ (IHR-2005) ಅಳವಡಿಸಿಕೊಂಡಿರುವ ಭಾರತ ಸಾಂಕ್ರಮಿಕ ರೋಗಗಳ ನಿರ್ವಹಣೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಇಂಟಿಗ್ರೇಟೆಡ್ ಡಿಸಿಸ್ ಸರ್‌ವೈವಲನ್ಸ್ ಪ್ರೊಜೆಕ್ಟ್ 2004 ರಲ್ಲಿ ಜಾರಿಗೊಳಿಸಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಾಂಕ್ರಮಿಕ ರೋಗಗಳ ಬಗ್ಗೆ ಸಂವಹನ ತಂತ್ರಜ್ಞಾನದ ಮೂಲಕ ಸಾರ್ವಜನಿಕ ವಲಯದಲ್ಲಿ ಒದಗಿಸುತ್ತಿದ್ದಾರೆ. ಆರೋಗ್ಯ ಇಲಾಖೆಯ ಸಿಬ್ಬಂದಿಗಳನ್ನು ತರಬೇತಿಗೊಳಿಸಿ ಸಾಂಕ್ರಮಿಕ ರೋಗಗಳನ್ನು ತಡೆಗಟ್ಟಲು

ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ರೋಗಗಳ ಹರಡುವಿಕೆಯಲ್ಲಿ ರೋಗಿಗಳನ್ನು ಪರೀಕ್ಷಿಸುವುದು, ಅವರ ಪ್ರತ್ಯೇಕತೆ ಮತ್ತು ರೋಗ ಹರಡುವ ಸಂಪರ್ಕ ಜಾಡನ್ನು ಕಂಡುಹಿಡಿಯುವುದು ಪ್ರಮುಖ ಅಂಶವಾಗಿದೆ. ಈ ಉದ್ದೇಶವನ್ನು ಸಾಧಿಸಲು ಲಭ್ಯವಿರುವ ರೋಗ ನಿರ್ಧರಿಸುವ ವಿಧಾನಗಳು ಮತ್ತು ತಂತ್ರಜ್ಞಾನಗಳು ಇನ್ನೂ ಹೆಚ್ಚು ಸಂವೇದನಾಶೀಲವಾಗಬೇಕು ಮತ್ತು ರೋಗಗಳ ಪರೀಕ್ಷೆ, ವರದಿ, ಹೊಸ ರೋಗವನ್ನು ಗುರುತಿಸುವ ನಿಖರತೆ ಮತ್ತು ನೈಪುಣ್ಯತೆ ಹೆಚ್ಚಾಗಬೇಕಾಗಿದೆ.

ಉಪ ಸಂಹಾರ :- ವೈರಸ್ ಸಾಂಕ್ರಮಿಕ ರೋಗಗಳು ಇತ್ತೀಚಿಗೆ ವ್ಯಾಪಕವಾಗಿ ಜಗತ್ತಿನಾಧ್ಯಂತಹ ಪುನಃ ಪುನಃ ಭಾದಿಸುತ್ತಿವೆ. ಇವುಗಳ ನಿಯಂತ್ರಣದ ಬಗ್ಗೆ ಎಚ್ಚರ ವಹಿಸುವುದು ಬಹಳ ಮುಖ್ಯವಾಗಿದೆ. ಸರಕಾರ ಮತ್ತು ಆರೋಗ್ಯ ಇಲಾಖೆಯ ಕಾರ್ಯಕ್ರಮಗಳು ಸಾಮಾನ್ಯ ಜನರಿಗೆ ತಲುಪಂತಾಗಬೇಕು ಮತ್ತು ಇವುಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮತ್ತು ಕಾಳಜಿ ಇರಬೇಕಾದದ್ದು ಅತೀ ಅವಶ್ಯಕವಾಗಿದೆ. ಈ ವೈರಸ್ ರೋಗಗಳ ಹರಡುವಿಕೆಯಲ್ಲಿ ರೋಗವಾಹಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳ ನಿಯಂತ್ರಣದಿಂದ ಈ ಸಾಂಕ್ರಮಿಕಗಳನ್ನು ತಕ್ಕಮಟ್ಟಿಗೆ ಕಡಿಮೆ ಮಾಡಬಹುದು.

ಮಾದಕ ವ್ಯಸನ

[1.]ವಿದ್ಯಾಶಂಕರ ಎಂ.ಹೆಚ್, [2.]ಪ್ರೀತಿ
[1.] ಸಹಾಯಕ ಪ್ರಾದ್ಯಾಪಕರು, [2.] ತೃತಿಯ ವರ್ಷ ಬಿ.ಎಸ್ಸಿ. ವಿದ್ಯಾರ್ಥಿನಿ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.

ಇತ್ತೀಚಿನ ದಿನಗಳಲ್ಲಿ ಮಾದಕ ವಸ್ತು ಮಾಫಿಯಾ ಅನ್ನುವುದು ವಿಶ್ವವ್ಯಾಪಿ ಆಗಿರುವರಿತ ಒಲವು ತೋರಿದರೆ. ಈ ಮಾದಕ ವಸ್ತುಗಳ ಮಾರಾಟ ಎಷ್ಟೋ ವರ್ಷಗಳ ಹಿಂದೆ ಪ್ರಾರಂಭವಾಗಿದೆ.

ಯಾವುದೇ ಒಲವು ವಸ್ತು ಅಥವಾ ಹವ್ಯಾಸವೇ ಆಗಲಿ ಮನುಷ್ಯನ ಚಿಂತನೆಗಳು, ನೋವು ಇರಿತವುಗಳ ಮೇರೆ ಒತ್ತಡ ಹೇರುತ್ತಾ ಹೋದಾಗ ಮನುಷ್ಯ ಅದಕ್ಕೆ ಗುಲಾಮನಾಗುತ್ತಾನೆ.

ಇದಕ್ಕೆ ಉದಾಹರಣೆಯೇ ಗಾಂಜಾ, ಧೂಮಪಾನ ಮುಂತಾದವು. ಇರಿತಹ ಮಾದಕ ವಸ್ತುಗಳಿಗೆ ಈಗಿನ ಯುವ ಪೀಳಿಗೆ ಬಲಿಯಾಗುತ್ತಿದೆ. ಈ ಮಾದಕ ವಸ್ತುಗಳನ್ನು ಕಡಿವಾಣ ಮಾಡುವುದು ಅಷ್ಟು ಸುಲಭದ ಮಾತಲ್ಲ.ಏಕೆಂದರೆ ಶ್ರಾವಿರಾರು ಯುವಕ ಯುವತಿಯರು ಹಾಗೂ ಎಷ್ಟೋ ಕೋಟ್ಯಾಧಿಪತಿಗಳು ಈ ಮಾದಕ ವಸ್ತುವಿನ ಮಾಫಿಯಾದ ಜೊತೆ ಕೈಗೂಡಿಸಿದ್ದಾರೆ. ಈ ಮಾದಕ ವಸ್ತುಗಳನ್ನು ಬೇರೆ ಬೇರೆ ದೇಶಗಳಿಂದ ಭಾರತಕ್ಕೆ ರವಾನೆ ಮಾಡಲಾಗುತ್ತಿದೆ.ಈ ಪ್ರಸ್ತುತ ಪ್ರಬಂಧದಲ್ಲಿ ಮಾದಕ ವಸ್ತುಗಳಿಂದ ಆಗುವ ಅನಾಮಕೂಲಗಳು ಮತ್ತು ಇದರಿಂದ ಖಿಷುಗಡೆಗೆ ಇರುವ ಮಾರ್ಗಗಳನ್ನು ಕುರಿತು ಬೆಳಕು ಚೆಲ್ಲಲಾಗಿದೆ.

ಸಾಮಾನ್ಯವಾಗಿ ಓರ್ವ ವ್ಯಕ್ತಿಯು ಯಾವ ಕಾರಣಗಳಿಂದಾಗಿ ಹಾಗೂ ಹೇಗೆ ಮಾದಕ ವ್ಯಸನಕ್ಕೆ ಒಳಗಾಗುತ್ತಾನೆ ಎನ್ನುವುದು ಜನರಿಗೆ ತಿಳಿದು ಬರುವುದಿಲ್ಲ. ಅವರು ತಮ್ಮ ತಪ್ಪು ಕಲ್ಪನೆಯಿಂದಾಗಿ ಆ ವ್ಯಕ್ತಿಯ ಆತ್ಮಸ್ಥೈರ ಹಾಗೂ ನೀತಿ, ಆದರ್ಶಗಳ ಕೊರತೆಯಿಂದಾಗಿ ವ್ಯಸನಿ ಗಳಾಗುತ್ತಾರೆಂದು ತಿಳಿಯುತ್ತಾರೆ.

ಆದರೆ ನೈಜವಾಗಿ ಮಾದಕ ವ್ಯಸನತೆಗೆ ಒಳಗಾಗುವುದು ಒಂದು ದೊಡ್ಡ ಪ್ರಮಾಣದ ರೋಗವಾಗಿದೆ ಹಾಗೂ ಅದರಿಂದ ಹೊರ ಬರಲು ಹೆಚ್ಚಾಗಿ ಒಳ್ಳೆಯ ಉದ್ದೇಶ ಹಾಗೂ ಅಘಾದ ಆತ್ಮ ಸ್ಥೈರ್ಯ ಬೇಕಾಗುತ್ತದೆ. ಈ ಮಾದಕ ವಸ್ತುವು ವ್ಯಕ್ತಿಯು ತಾನಾಗೆ ಸ್ವ-ಇಚ್ಛೆಯಿಂದ ಅದನ್ನು ತೊರೆಯಲು ನಿರ್ಧರಿಸಲು ಚಿಂತಿಸಿದರೂ ಅದು ಆತನ ಮೆದುಳನ್ನು ತನ್ನ ಸ್ವಾಧೀನದಲ್ಲಿ ಇರಿಸಿಕೊಂಡಿರುತ್ತದೆ.

ಆದರೆ ಕೆಲವು ಸಂಶೋಧಕರು ಈ ಮಾದಕ ವಸ್ತುವು ವ್ಯಸನಿಯ ಮೆದುಳಿನ ಮೇಲೆ ಯಾವ ರೀತಿಯಾದ ಪರಿಣಾಮವನ್ನು ಹಾಗೂ ಹೇಗೆ ಎಂಬ ಮಾಹಿತಿಯನ್ನು ಕಂಡುಹಿಡಿದಿದ್ದಾರೆ ಮತ್ತು ಆ ರೋಗಕ್ಕೆ ಚಿಕಿತ್ಸೆಯನ್ನು ಕಂಡುಹಿಡಿದಿದ್ದು, ವ್ಯಸನಿಯು ಅದರಿಂದ ಗುಣಮುಖವಾಗಿ ಬದುಕುವ ಮಾರ್ಗವನ್ನು ಕಂಡುಹಿಡಿದಿದ್ದಾರೆ.

ಮಾದಕ ವ್ಯಸನತೆ ಎಂದರೇನು?

ವ್ಯಸನತೆ ಎಂದರೆ ದೀರ್ಘಾವಧಿಯ ಕಾಲದವೆರೆಗೂ ಇರುವ ಒಂದು ತರಹನಾದ ರೋಗ. ಇದು ಮಾದಕ ವಸ್ತುವಿನ ಬಳಕೆಯಿಂದಾಗಿ ಬರುವ ಒಂದು ರೋಗ. ಇದು ನಿಯಂತ್ರಿಸಲು ಕಠಿಣವಾಗಿರುವಂತಹ ಹಾಗು ಮಾರಣಾಂತಿಕವಾದ ಒಂದು ರೋಗ.

ಪ್ರಥಮವಾಗಿ ಒಬ್ಬ ವ್ಯಕ್ತಿಯು ತನ್ನ ಸ್ವ-ಇಚ್ಛೆಯಿಂದ ಮಾದಕ ವ್ಯಸನಕ್ಕೆ ಒಳಗಾಗುತ್ತಾನೆ. ಆದರೆ ನಿರಂತರವಾದ ಮಾದಕ ಸೇವನೆಯಿಂದಾಗಿ ವ್ಯಸನಿಯು ತನ್ನ ಸ್ವ-ನಿಯಂತ್ರಣ ಶಕ್ತಿಯನ್ನು ಕಳೆದುಕೊಳ್ಳುತ್ತಾನೆ ಹಾಗೂ ಮಾದಕ ಸೇವನೆಗೆ ಸಂಪೂರ್ಣವಾಗಿ ಅವಲಂಬಿತನಾಗುತ್ತಾನೆ. ಆದ್ದರಿಂದಾಗಿ ಮಾದಕ ವ್ಯಸನತೆಯನ್ನು ಮರುಕಳಸುವ ರೋಗ [Relapsing Disease] ಎಂದು ಕರೆಯುತ್ತಾರೆ.

ಮಾದಕ ವ್ಯಸನದಿಂದ ಗುಣಮುಖರಾದಂತಹ ವ್ಯಕ್ತಿಗಳು ಕೆಲವು ವರ್ಷಗಳ ನಂತರ ಮತ್ತೆ ವ್ಯಸನಿಗಲಾಗುವ ಸಂಭವ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ.

ಸಾಮಾನ್ಯವಾಗಿ ವ್ಯಸನದಿಂದ ಗುಣಮುಖನಾದ ವ್ಯಕ್ತಿಯು ಮತ್ತೆ ವ್ಯಸನಕ್ಕೆ ಒಳಗಾಗುವುದು ಸಾಮಾನ್ಯ. ಆದರೆ ಇಲ್ಲಿ ಆ ವ್ಯಕ್ತಿಗೆ ನೀಡಿದ ಚಿಕಿತ್ಸೆ ಫಲಕಾರಿಯಾಗಿಲ್ಲ ಎಂದು ತಿಳಿಯುವಹಾಗಿಲ್ಲ. ಇಂತಹ ಪ್ರಕರಣಗಳಲ್ಲಿ ರೋಗಿಯ ಪ್ರತಿಕ್ರಿಯೆ ತುಂಬಾ ಮುಖ್ಯವಾದ ಅಂಶವಾಗಿರುತ್ತದೆ. ಚಿಕಿತ್ಸೆಯು ರೋಗಿಯ ಮಾನಸಿಕ ಬದಲಾವಣೆಯ ಮೇಲೆ ಅವಲಂಬಿತವಾಗಿರುತ್ತದೆ.

ಮಾದಕ ವ್ಯಸನತೆಯಿಂದಾಗಿ ವ್ಯಕ್ತಿಯ ಮೆದುಳಿನ ಮೇಲಾಗುವ ಪರಿಣಾಮಗಳು:– ಹೆಚ್ಚಾಗಿ ಮಾದಕ ವಸ್ತುಗಳು ಮೆದುಳಿನಲ್ಲಿ ರಾಸಾಯನಿಕ ನಿರ್ವಾಹಕ [Chemical Messenger] ವಾದಂತಹ dopamine ಎಂಬ ರಾಸಾಯನಿಕ ವಸ್ತುವಿನ ಸಹಾಯದಿಂದಾಗಿ ಹರಿದಾಡುತ್ತದೆ. ಈ ಮಾದಕ ವಸ್ತುವು ಮೆದುಳಿನ 'reward circuit' ನ ಮೇಲೆ ಪ್ರಭಾವ ಬೀರುತ್ತದೆ. ಮೆದುಳಿನ 'reward system' ದೇಹದ ಕೆಲವೊಂದು ಕ್ರಿಯೆಗಳನ್ನು ನಿಯಂತ್ರಿಸುತ್ತದೆ. ಅವುಗಳೆಂದರೆ, ಆ ವ್ಯಕ್ತಿಯ ಖುಷಿ, ಆಸೆಗಳು ಹಾಗೂ ಪ್ರೀತಿ ಇನ್ನಿತರ ಮಾನಸಿಕ ಕ್ರಿಯೆಯನ್ನು ನಿಯಂತ್ರಿಸುತ್ತದೆ. ಆದರೆ ಮಾದಕ ಸೇವನೆಯಿಂದಾಗಿ ಮೆದುಳಿನ 'reward circuit' ಅತಿಯಾದ ಸ್ಪಂದನಕ್ಕೊಳಗಾಗುತ್ತದೆ. ಆದ್ದರಿಂದ ಆ ವ್ಯಕ್ತಿಯ ಮಾದಕ ಸೇವನೆಗೆ ಪದೇ ಪದೇ ಪ್ರಚೋದನೆಯಾಗುತ್ತದೆ.

ಓರ್ವ ವ್ಯಕ್ತಿಯ ನಿರಂತರ ಮಾದಕ ಸೇವನೆಯಿಂದಾಗಿ ಆತನ ಮೆದುಳು ಹೆಚ್ಚಿನ dopamine ರಾಸಾಯನಿಕಕ್ಕೆ ಹೊಂದಿಕೊಂಡು ಹೋಗುತ್ತದೆ. ಇದರ ಕಾರಣದಿಂದಾಗಿ ಆ ವ್ಯಕ್ತಿಯ ಹಿಂದಿನ ಖುಷಿ ಸಿಗುತ್ತದೆ. ಆದ್ದರಿಂದಾಗಿ ಆ ವ್ಯಕ್ತಿಗಳಿಗೆ ತಾವು ಹಿಂದೆ ಇದ್ದ ಖುಷಿಯಾದ ಕಾರಣಗಳಲ್ಲಿ ನಿರಾಸಕ್ತಿ ಮೂಡುತ್ತದೆ. ದೀರ್ಘಾವಧಿಯ ಮಾದಕ ಸೇವನೆಯಿಂದಾಗಿ ಆ ವ್ಯಕ್ತಿಯ ದೈನಂದಿನ ಕ್ರಿಯೆಗಳ ಮೇಲೆ ಹಾಗೂ ಆತನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ. ಅವುಗಳೆಂದರೆ;

1) ಕಲಿಯುವಿಕೆ

2) ನಿರ್ಧಾರ

3) ತೀರ್ಮಾನ/ತೀರ್ಪು

4) ಒತ್ತಡ

5) ಜ್ಞಾಪಕಶಕ್ತಿ

6) ನಡವಳಿಕೆ

ಈ ಎಲ್ಲಾ ಕಾರಣಗಳ ಅರಿವಿನಲ್ಲಿಯೂ ವ್ಯಕ್ತಿಯು ಮಾದಕ ಸೇವನೆಯನ್ನು ಮಾಡುವುದನ್ನು ವ್ಯಸನದ ಲಕ್ಷಣ ಎನ್ನುತ್ತಾರೆ [Nature of addiction].

ಮಾದಕ ವ್ಯಸನತೆಗೆ ಕಾರಣಗಳು:–ಯಾವುದೇ ಒಂದೇ ಒಂದು ನಿರ್ದಿಷ್ಟ ಕಾರಣವು ಒಬ್ಬ ವ್ಯಕ್ತಿಯ ವ್ಯಸನಕ್ಕೆ ಕಾರಣ ಎಂದು ಆಲೋಚಿಸಲಾಗುವುದಿಲ್ಲ. ಹಲವಾರು ಕಾರಣ ಹಾಗೂ ತೊಂದರೆಗಳಿಂದ ವ್ಯಕ್ತಿಯು ಮಾದಕ ವ್ಯಸನಕ್ಕೆ ಪ್ರಭಾವಿತನಾಗುತ್ತಾನೆ. ಅತಿ ತೊಂದರೆಗೆ ಒಳಪಟ್ಟ ವ್ಯಕ್ತಿಯು ವ್ಯಸನಿಯಾಗುತ್ತಾನೆ.

ಉದಾಹರಣೆಗೆ:–

* **ಜೀವಶಾಸ್ತ್ರದ ಪ್ರಕಾರ**: ಒಬ್ಬ ವ್ಯಕ್ತಿಯು ಆತನ ಜನನದಲ್ಲಿ ಬಂದಿರುವ genetic ಗಳು ಅರ್ಧ ಪ್ರಮಾಣದಲ್ಲಿ ತೊಂದರೆಗಳಿಗೆ ಕಾರಣವಾಗುತ್ತದೆ ಹಾಗೂ ಇದರಿಂದಾಗಿ ಮಾದಕ ಸೇವನೆಗೆ ಪ್ರಭಾವಿತವಾಗುತ್ತದೆ.

* **ವಾತಾವರಣ**: ವಾತಾವರಣವು ವ್ಯಕ್ತಿಯ ಮೇಲೆ ಬಲವಾದ ಪ್ರಭಾವವನ್ನು ಬೀರುತ್ತದೆ. ಇದರಲ್ಲಿ ಆತನ ಕುಟುಂಬ, ಸ್ನೇಹಿತರು ಹಾಗೂ ಆರ್ಥಿಕ ಸ್ಥಿತಿ ಮತ್ತು ಆತನ ಜೀವನ ಶೈಲಿಯು ಸಹಾ ಮುಖ್ಯ ಕಾರಣವಾಗಿದೆ.

* **ಬೆಳವಣಿಗೆ**: ಅನುವಂಶಿಕ [genetic] ಹಾಗೂ ವಾತಾವರಣದ ಕಾರಣಗಳು ಬೆಳವಣಿಗೆಯ ಹಂತದಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಇದು ವ್ಯಸನತೆಗೆ ಪ್ರಭಾವವನ್ನು ಬೀರುತ್ತದೆ.

ಬೆಳವಣಿಗೆ ಹಂತದ ಯಾವುದೇ ವಯಸ್ಸಿನಲ್ಲಿ ಮಾದಕ ಸೇವನೆಯು ವ್ಯಸನಕ್ಕೆ ಕಾರಣವಾಗುತ್ತದೆ. ಈ ವ್ಯಸನತೆಯ ತೊಂದರೆಯು ಹೆಚ್ಚಾಗಿ ವಯಸ್ಕರಲ್ಲಿ ಕಾಣುತ್ತದೆ. ಅಂದರೆ ಸುಮಾರು 13–19 ರ ವಯಸ್ಸಿನವರ ಮೇಲೆ ಪ್ರಭಾವಿತವಾಗಿರುತ್ತದೆ. ಈ ವಯಸ್ಸಿನಲ್ಲಿ ತೀರ್ಪು, ನಿರ್ಧಾರ ಹಾಗೂ ಸ್ವನಿಯಂತ್ರಣದ ಕ್ರಿಯೆಗಳು ಬೆಳವಣಿಗೆಯ ಹಂತದಲ್ಲಿರುತ್ತದೆ. ಆದ್ದರಿಂದ ಈ ವಯಸ್ಸು ಮಾದಕ ವ್ಯಸನದ ಪ್ರಭಾವಕ್ಕೆ ಒಳಗಾಗುತ್ತದೆ.

ಮಾದಕ ವ್ಯಸನತೆಯನ್ನು ಸರಿಪಡಿಸುವುದು? ಅಥವಾ ತಡೆಯುವುದು?

ದೀರ್ಘಾವಧಿಯ ತೊಂದರೆಗಳಾದಂತಹ ಸಕ್ಕರೆ ಖಾಯಿಲೆ, ಆಸ್ತಮಾ, ಹೃದಯ ಸಂಬಂಧಿ ಖಾಯಿಲೆಗಳಿಗೆ ಸಂಪೂರ್ಣವಾಗಿ ಗುಣ ಪಡಿಸಲು ಅಸಾಧ್ಯ. ಹಾಗೆಯೇ ಮಾದಕ ವ್ಯಸನತೆಗೆ ಚಿಕಿತ್ಸೆ ಹಾಗೂ ಸುಧಾರಣೆ ಸಾಧ್ಯ ಆದರೆ ಸಂಪೂರ್ಣ ಗುಣಪಡಿಸಲು ಆಗುವುದಿಲ್ಲ.

ಓರ್ವ ವ್ಯಕ್ತಿಯು ಮಾದಕ ವ್ಯಸನದಿಂದ ಸುಧಾರಣೆ/ಬಿಡುಗಡೆ ಹೊಂದುತ್ತಿರುವವನು ಪುನ: ಅದಕ್ಕೆ ಮರುಕಳಿಸುವ ಸಾಧ್ಯತೆ ಹೆಚ್ಚಿರುತ್ತದೆ.

ಕೆಲವು ಸಂಶೋಧನೆಗಳ ಪ್ರಕಾರ Combining addiction treatment ಮತ್ತು Behavioral therapy ಯ ಚಿಕಿತ್ಸೆ ಸಫಲವಾಗುತ್ತದೆ. ಕೆಲವು ಸಂಶೋಧನೆಗಳ ಪ್ರಕಾರ ಹಾಗೂ ಸಂತಸದ ಸಂಗತಿ ಎಂದರೆ ಮಾದಕ ಸೇವನೆ ಹಾಗೂ ವ್ಯಸನತೆಗೆ ಇವುಗಳನ್ನು ಪೂರ್ವಕಾಲತವಾಗಿಯೇ ತಡೆಹಿಡಿಯಬಹುದಾಗಿದೆ.

NIDA funded research ನ ಪ್ರಕಾರ ಕುಟುಂಬ, ಶಾಲೆಗಳು ಹಾಗೂ ಸಂಘಗಳು ಮತ್ತು ಮಾಧ್ಯಮಗಳು ವ್ಯಸನತೆಯನ್ನು ತಡೆಯುವಲ್ಲಿ ಪ್ರಮುಖವಾಗಿದೆ.

ಮಾದಕ ವ್ಯಸನತೆಯ ಶುರುವಾಗುವ ರೀತಿ: ಚಿಕ್ಕ ವಯಸ್ಸಿನಲ್ಲಿ ತೊಂದರೆಗಳ ಕಾರಣದ ನಡವಳಿಕೆಯಿಂದಾಗಿ ವ್ಯಸನಕ್ಕೆ ಒಳಗಾಗುತ್ತಾರೆ. ಆದರೆ ಎಲ್ಲಾ ವ್ಯಕ್ತಿಗಳು ಅವಲಂಬನೆಗೆ/ನಿರಂತರ ಸೇವನೆಗೆ ಒಳಗಾಗುವುದಿಲ್ಲ. ಆದರೆ ಒಂದಕ್ಕಿಂತ ಹೆಚ್ಚು ತೊಂದರೆಗಳಿಂದ ಬಳಲುವ ವ್ಯಕ್ತಿಯು ವ್ಯಸನಕ್ಕೆ ಒಳಗಾಗುತ್ತಾನೆ.

ಕಾರಣಗಳು:–

* ಆಕ್ರಮಣಕಾರಿ ನಡವಳಿಕೆ
* ಪೋಷಕರ ಪಾಲನೆಯ ಕೊರತೆ
* ಸುಲಭವಾಗಿ ಮಾದಕ ವಸ್ತುಗಳ ಸಿಗುವಿಕೆ
* ಬಡತನದಲ್ಲಿ ಬಳಲುವಿಕೆ

ಒಂದು ವ್ಯಕ್ತಿ ತನ್ನ ತಾರುಣ್ಯದಲ್ಲಿ ಈ ಕಾರಣಗಳಿಂದಾಗಿ ಬಳಲಿದಲ್ಲಿ ಆತನು ಮಾದಕ ವ್ಯಸನತೆಗೆ ಒಳಗಾಗುವ ಸಂಭವ ಹೆಚ್ಚಾಗಿರುತ್ತದೆ.

ಮಾದಕ ವ್ಯಸನತೆಯ ಲಕ್ಷಣಗಳು:– ವ್ಯಕ್ತಿಯು ವ್ಯಸನಕ್ಕೆ ಒಳಗಾದಲ್ಲಿ ಆತನು ದೈಹಿಕವಾಗಿಯೂ ಮತ್ತು ಮಾನಸಿಕವಾಗಿಯೂ ಖಿನ್ನತೆಗೆ ಒಳಗಾದ ಲಕ್ಷಣಗಳು ಕಂಡು ಬರುತ್ತವೆ. ಅವುಗಳೆಂದರೆ;

* ತಕ್ಷಣದ ಮಾನಸಿಕ ಸ್ಥಿತಿ ಬದಲಾವಣೆ
* ಸಾಮಾನ್ಯವಾದ ನಡವಳಿಕೆಯಲ್ಲಿ ಬದಲಾವಣೆ
* ಸ್ನೇಹಿತರು ಹಾಗೂ ಕುಟುಂಬದಿಂದ ದೂರ ಇರುವುದು
* ಸಾಮಾಜಿಕ ಕ್ರಿಯೆ ಮತ್ತು ದೈನಂದಿನ ಕ್ರಿಯೆಯಲ್ಲಿ ನಿರಾಸಕ್ತಿ
* ನಿದ್ರಾ ಸಮಯದ ಬದಲಾವಣೆ

ಪ್ರತಿಯೊಂದು ಮಾದಕ ವಸ್ತುವು ಅದರದ್ದೇ ರೀತಿಯಾದ ಬೇರೆ ಬೇರೆ ಲಕ್ಷಣವನ್ನು ಹೊಂದಿರುತ್ತದೆ.

ಉದಾಹರಣೆಗೆ:

'Methamphetamines' ಸೇವನೆಯ ವ್ಯಕ್ತಿಯು ತನ್ನನ್ನೇ ತಾನು ಮಾನಸಿಕವಾದ ಬಂಧನಕ್ಕೆ ಒಳಪಡಿಸಿಕೊಳ್ಳುತ್ತಾನೆ.

'Cocaine' ಸೇವನೆಯಿಂದ ಹಸಿವನ್ನು ಕಳೆದುಕೊಳ್ಳುತ್ತಾನೆ.

Tranquilizers/Barbiturates ವ್ಯಸನಿಯು ಆಲಸ್ಯ ಮತ್ತು ದಿಗ್ಭ್ರಮೆಗೆ ಒಳಗಾಗುತ್ತಾನೆ.

ಕೆಲವು ಮಾದಕ ವಸ್ತುಗಳು ಹಾಗೂ ಅದಕ್ಕಿರುವ ಅವಲಂಬನಿತರ ರೇಟಿಂಗ್:

1)ಹೆರೋಯಿನ್ (Heroin)**:** ವ್ಯಸನತೆಯ ರೇಟಿಂಗ್ –3.0 – ಹೊಸ ಅಧ್ಯಯನದ ಮೇರೆಗೆ ನೀಡಲಾಗಿರುವ ಪ್ರಕಾರ 2.89 ರೇಟಿಂಗ್.

2) ಕೊಕೈನ್ (Cocaine)**:** ವ್ಯಸನತೆಯ ರೇಟಿಂಗ್ – 2.39 – ಹೊಸ ಅಧ್ಯಯನದ ಮೇರೆಗೆ ಇದರ ರೇಟಿಂಗ್ ಹೆಚ್ಚಾಗಿದ್ದು ಸುಮಾರು 2.82 ಕ್ಕೆ ಏರಿಕೆಯಾಗಿದೆ.

3) ನಿಕೋಟಿನ್ (Nicotine)**:** ರೇಟಿಂಗ್ **:** 2.21 ಇತ್ತೀಚಿನ ಅಧ್ಯಯನದ ಪ್ರಕಾರ ಇದು ಕೊಕಾಯ್ನ ನಷ್ಟೇ 2.82 ರೇಟಿಂಗ್‌ನಲ್ಲಿದೆ.

4) ಸ್ಟ್ರೀಟ್ ಮೆಥೆಡೋನ್ (Street Methadone): ರೇಟಿಂಗ್ 2.08 – ಇತ್ತೀಚಿನ ಅಧ್ಯಯನದ ಪ್ರಕಾರ ರೇಟಿಂಗ್ 2.68.

5) ಆಲ್ಕೋಹಾಲ್ (Alcohol)**:** ರೇಟಿಂಗ್ **:** 1.93 ಇತ್ತೀಚಿನ ಅಧ್ಯಯನದ ರೇಟಿಂಗ್ 2.13.

ಮಾದಕ ವ್ಯಸನವೆಂದರೆ ಓರ್ವ ವ್ಯಕ್ತಿ ಮಾದಕ ವಸ್ತುವನ್ನು ಒಂದು ಪ್ರಮಾಣದಲ್ಲಿ ಯಾವ ರೀತಿಯಲ್ಲಿ ಸೇವಿಸುತ್ತಾನೋ ಹಾಗು ಅದರಿಂದ ಆತನಿಗೆ ಮತ್ತು ಬೇರೆಯವರಿಗೆ ತೊಂದರೆಯಾಗುವ ಒಂದು ಸ್ಥಿತಿಗೆ ಮಾದಕ ವ್ಯಸನವೆನ್ನುತ್ತಾರೆ.

ಮಾದಕ ವ್ಯಸನದ ವಿವರಣೆಯನ್ನು ಬೇರೆ ಬೇರೆ ಭಾಗಗಳಲ್ಲಿ ವಿವಿಧವಾಗಿ ಹೇಳಲಾಗುತ್ತದೆ. ಅವುಗಳೆಂದರೆ;

* ಸಾರ್ವಜನಿಕ ಹಿತಾಸಕ್ತಿಯ ವಿವರಣೆಗಳು
* ವೈದ್ಯಕೀಯ ವಿವರಣೆಗಳು

ಕೆಲವೊಂದು ಘಟನೆಗಳಲ್ಲಿ ಸಮಾಜದ ವಿರುದ್ಧವಾಗಿ ನಡೆಯುವ ಪ್ರಕರಣ ಈ ಮಾದಕ ವ್ಯಸನವು ಮುಖ್ಯವಾದ ಕಾರಣವಾಗಿದೆ. ಮಾದಕ ವಸ್ತುವಿನ ಕಾರಣವಾಗಿ ಅದರ ಸೇವನೆಯಿಂದಾಗಿ ಸಮಾಜದಲ್ಲಿ ಅಹಿತಕರ ಘಟನೆಗಳು ಹಾಗೂ ಆ ವ್ಯಕ್ತಿಯ ವ್ಯಕ್ತಿತ್ವವು ಬದಲಾಗುತ್ತದೆ.

ಮಾದಕ ವಸ್ತುಗಳ ಕೆಲವೊಂದು ಉದಾಹರಣೆಗಳು:

1) ಆಲ್ಕೋಹಾಲ್ (Alcohol)

2) ಬಾರಿ ಟ್ಯುರೇಟ್ಸ್ (Barbiturates)

3) ಬೆನ್ಜೋಡಯಾಜೆಪ್ಪೈನ್ (Benzodiazepines)

4) ಕ್ಯಾನ್ನಾಬೀಸ್ (Cannabis)

5) ಕೊಕೈನ್ (Cocaine)

6) ಮಿಥಾಕ್ವಲೋನ್ (Methoqualone)

7) ಓಪಿಯೋಯಡ್ಸ್ (Opioids)

ಮಾದಕ ವ್ಯಸನತೆಗೆ ನಿರ್ದಿಷ್ಟ ಕಾರಣಗಳಿರುವುದಿಲ್ಲ. ಇದಕ್ಕೆ ಜೀನ್ಸ್ ಜೆನೆಟಿಕ್ ಡಿಸ್‌ಪೋಸಿಷನ್ (Genetic Disposition) ಗಳು ಬೇರೆಯವರಿಂದ ಪ್ರಭಾವಿತವಾಗಿ ಅದಕ್ಕೆ ಅವಲಂಬಿತ ವಾಗುವುದು ಕಾರಣವಾಗಿವೆ.

ಮಾದಕ ವ್ಯಸನವು ಪ್ರಪಂಚದಾದ್ಯಂತ ಹರಡಿಕೊಂಡಿದೆ. ಅಂಕಿ ಅಂಶಗಳ ಪ್ರಕಾರ 120 ಮಿಲಿಯನ್ ಜನ ಮಾದಕ ವ್ಯಸನತೆಯ ಬಲೆಯಲ್ಲಿ ಸಿಲುಕಿದ್ದರೆ. ಅವರಲ್ಲಿ Cocaine, Heroin ನಂತಹ ಅತ್ಯಂತ ಕೆಟ್ಟ ಮಾದಕ ವಸ್ತುವನ್ನು ಹೆಚ್ಚಾಗಿ ಸೇವಿಸುತ್ತಾರೆ.

2013 ರಲ್ಲಿ ಮಾದಕ ವ್ಯಸನತೆಯ ಪರಿಣಾಮವಾಗಿ 1270,000 ಜನ ಸಾವನ್ನಪ್ಪಿದ್ದಾರೆ. 1990 ರಲ್ಲಿ 53,000 ಜನ ಮಾದಕ ವ್ಯಸನತೆಯ ಕಾರಣದಿಂದಾಗಿ ಸಾವನ್ನಪ್ಪಿದ್ದರು.

Opioids ಡ್ರಗ್ ಸೆವನೆಯಿಂದಾಗಿ ಅತಿ ಹೆಚ್ಚು ಜನ ಸಾವನ್ನಪ್ಪಿದ್ದಾರೆ. ಸುಮಾರು 51,000 ಜನ ಇದರಿಂದಾಗಿ ಮೃತಪಟ್ಟಿದ್ದಾರೆ.

Cocaine ವ್ಯಸನತೆಯಿಂದ ಸುಮರು 4,300 ಜನ ಹಾಗೂ Amphetamine ನಿಂದಾಗಿ ಸುಮಾರು 3,800 ಜನ ಸಾವನ್ನಪ್ಪಿದ್ದಾರೆ ಇದಲ್ಲದೇ Alcohol ಬಳಕೆಯಿಂದಾಗಿ ಇತರೆ 139,000 ಜನ ಮೃತಪಟ್ಟಿದ್ದಾರೆ.

ಮಾದಕ ವ್ಯಸನತೆಯ ಚಿಕಿತ್ಸೆಗಾಗಿ ಯಾರ ಬಳಿ ಸಲಹೆ ಪಡೆಯಬೇಕು?

ವ್ಯಸನತೆಯ ಒಳಗಾಗಿರುವ ವ್ಯಕ್ತಿಯು ಚಿಕಿತ್ಸೆಗೆ ಅವರ ಕುಟುಂಬದ ಸದಸ್ಯರ ಪಾತ್ರ ಮಹತ್ವದ್ದಾಗಿರುತ್ತದೆ. ಚಿಕಿತ್ಸೆಯನ್ನು ನೀಡುವ ಮಾಹಿತಿಯನ್ನು ತಿಳಿದುಕೊಳ್ಳುವುದು ಕಷ್ಟವಾದ ಕೆಲಸವಾಗಿದೆ. ಆದರೆ ಇದಕ್ಕೆ ಕೆಲವು ಸಂಪನ್ಮೂಲಗಳು ಇದರ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಉದಾಹರಣೆಗೆ: – ಅಂತರ್ಜಾಲದ ಕೆಲವು ಜಾಲತಾಣಗಳಲ್ಲಿ ಇದರ ಬಗ್ಗೆ ಮಾಹಿತಿಯನ್ನು ನೀಡುತ್ತವೆ ಹಾಗೂ; The American Society of Addiction Medicine ಎಂಬ ಸಂಘದ ವೈದ್ಯರು ವ್ಯಸನಕ್ಕೆ ಚಿಕಿತ್ಸೆಗಾಗಿ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ.

'NIDA'ಯ ರಾಷ್ಟ್ರೀಯ ಮಾದಕ ವ್ಯಸನ ಚಿಕಿತ್ಸೆ ಘಟಕವು (National drug abuse treatment clinical trials Netuar) ಆಸಕ್ತರಿಗೆ ಅದರ ಬಗ್ಗೆ ಮಾಹಿತಿಯನ್ನು ಹಾಗೂ ಪರೀಕ್ಷೆಯಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ನೀಡುತ್ತದೆ.

'NIDA' ಯ Drug Pubs Research Dissemination Centre ಕೆಲವು ಕೈಪಿಡಿ ಹಾಗೂ ಮಾಹಿತಿ ಪತ್ರಿಕೆ ಮತ್ತು ಇನ್ನಿತರ ಮಾಹಿತಿ ಸಂಪನ್ಮೂಲಗಳನ್ನು ನೀಡುತ್ತದೆ. ಅದರಲ್ಲಿ ಮಾದಕ ವ್ಯಸನ ಹಾಗೂ ಅದರ ಚಿಕಿತ್ಸೆಯ ಬಗ್ಗೆ ತಿಳಿಸಿಕೊಡುತ್ತದೆ.

ರಾಷ್ಟ್ರೀಯ ಆಲ್ಕೋಹಾಲ್ ವ್ಯಸನತೆಯ ಸಂಸ್ಥೆಯು (National Institute on Alcohol Abuse and Alcoholism) ALCOHOL ನ ಸಂಬಂಧಿತ ಚಿಕಿತ್ಸೆಯ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ವಿಭಾಗ:–9

ಭಾಸ್ಕರೀಯಮ್

ಭೌತಿಕಶಾಸ್ತ್ರ, ಗಣಿತಶಾಸ್ತ್ರ ಮತ್ತು ಖಭೌತಶಾಸ್ತ್ರ ವಿಜ್ಞಾನಗಳು

BHASKAREEYAM

Physical, Mathematical & Astro Physical Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಆಧುನಿಕ ತಂತ್ರಜ್ಞಾನ ಪರಮಾಣು ಪ್ರಕಾಶನ ಹೀರುವಿಕೆ ಮಾಪನ ವಿಧಾನದಿಂದ ಆರ್ಯುವೇದಿಯ ಔಷಧ ತಾಮ್ರ ಭಸ್ಮದಲ್ಲಿರುವ ವಿರಳ ಖನಿಜ / ಲೋಹಧಾತುಗಳ ಒಂದು ಅಧ್ಯಯನ	ಅಶ್ವಿನಿ.ಅ ಬ.ರಾ.ಕೆರೂರ	253 – 255
2.	ರೇಣು ಗಾತ್ರದ ಬಿಸ್ಮತ್ ಮಿಶ್ರಿತ ತಾಮ್ರದ ಫೆರ್ರೈಟಗಳಲ್ಲಿ ವಿದ್ಯುತ್ ಪ್ರೇರಕ ಗುಣಗಳ ಮತ್ತು ವಿಧ್ಯುತ್ ಪ್ರವಹಿಸುವ ಗುಣಗಳ ಒಂದು ಅಧ್ಯಯನ	ಪ್ರದೀಪ ಚವ್ಹಾಣ ಏಲ್ ಆರ್ ನಾಯಿಕ	255 – 259

ಆಧುನಿಕ ತಂತ್ರಜ್ಞಾನ ಪರಮಾಣು ಪ್ರಕಾಶನ ಹೀರುವಿಕೆ ಮಾಪನ ವಿಧಾನದಿಂದ ಆರ್ಯುವೇದಿಯ ಔಷಧ ತಾಮ್ರ ಭಸ್ಮದಲ್ಲಿರುವ ವಿರಳ ಖನಿಜ /ಲೋಹಧಾತುಗಳ ಒಂದು ಅಧ್ಯಯನ

ಅಶ್ವಿನಿ.ಅ ಹಾಗೂ ಬ.ರಾ.ಕೆರೂರ
ಭೌತಶಾಸ್ತ್ರ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ–585 106. ಕರ್ನಾಟಕ.

ಆರ್ಯುವೇದಿಯ ಔಷಧವಾದ ಭಸ್ಮವು ಸಸ್ಯ, ರೋಗ ಖನಿಜಗಳಿಂದ ತಯಾರಿಸಲಾದ ಔಷಧವಾಗಿದ್ದು ಇದು ಹಲವು ರೋಗಗಳನ್ನು ಗುಣಪಡಿಸುವಲ್ಲಿ ಒಂದು ಅದ್ಭುತ ಔಷಧವೆಂದು ಹೇಳಲಾಗಿದೆ. ಇತ್ತೀಚಿನ ವೈಜ್ಞಾನಿಕ ತಂತ್ರಜ್ಞಾನ ಆಧುನಿಕ ಜಗತ್ತಿನಲ್ಲಿ ಈ ಆರ್ಯುವೇದ ಔಷಧವನ್ನು ವಿವಿಧ ರೋಗ–ರುಜಿನಗಳಲ್ಲಿ ಬಳಸಲಾಗುತ್ತಿದೆ. ಕೆಮ್ಮು, ಶೀತ, ಮೂತ್ರದ ಅಸ್ವಸ್ಥತೆ, ಸಕ್ಕರೆ ಕಾಯಿಲೆ, ಹಲವು ಚರ್ಮರೋಗಗಳಲ್ಲಿ, ಹೆಪಟೈಟಿಸ್, ಶ್ವಾಸಕೋಶ ಸಂಬಂಧಿ ಸಮಸ್ಯೆಗಳಲ್ಲಿ, ಕ್ಷಯ, ಅಸ್ತಮಾ, ಅಜೀರ್ಣತೆ, ಮೂಲವ್ಯಾಧಿ, ಕ್ಯಾನ್ಸರ ಹೀಗೆ ಹಲವಾರು ರೋಗಗಳ ಚಿಕಿತ್ಸೆಗೆ ಈ ಔಷಧಿಯನ್ನು ವಿವಿಧ ನಾಮಧೇಯದಿಂದ ಬೇರೆ ಬೇರೆ ರೋಗಗಳ ಚಿಕಿತ್ಸೆಯಲ್ಲಿ ಮುಖ್ಯವಾಗಿ ಬಳಸಲಾಗುತ್ತಿದೆ. ಭಸ್ಮಗಳು ನಾನಾ ರೀತಿಯ ಖನಿಜ–ಲೋಹಗಳಿಂದ ಗಿಡ–ಮೂಲಿಕೆಯ ಕಷಾಯಗಳ ಮಿಶ್ರಣಗಳಿಂದ ನಿರ್ದಿಷ್ಟ ವೈದ್ಯಶೈಲಿಯಲ್ಲಿ ಹಲವು ಹಂತಗಳಾಗಿ (ರಾಸಶಾಸ್ತ್ರದಲ್ಲಿ ಹೇಳಲಾಗಿದೆ,) ತಯಾರಿಸಲಾಗುತ್ತದೆ. ಆರ್ಯುವೇದಿಯ ಔಷಧವಾದ ತಾಮ್ರ ಭಸ್ಮವು ತೆಗೆದುಕೋಳಲಾಗಿದ್ದು ಇದನ್ನು ಕ್ಯಾನ್ಸರ, ಯಕೃತ್ತು ರೋಗಗಳಲ್ಲಿ, ಬೋಜ್ಜು, ರಕ್ತಹೀನತೆ, ಖಕ್ಕಳಿಕೆ, ಕಿಬ್ಬೊಟ್ಟೆಯ ತೊಂದರೆಯಲ್ಲಿ ಬಳಸಲಾಗುತ್ತದೆ. ಈ ಭಸ್ಮವನ್ನು ನಾಲ್ಕು ವಿವಿಧ ಆರ್ಯುವೇದಿಯ ಔಷಧಾಲಾಗಳಿಂದ ತೆಗೆದುಕೊಂಡು ಅವುಗಳಲ್ಲಿರುವ ವಿರಳ ಖನಿಜ–ಧಾತುಗಳ ಸಾಂದ್ರತೆಯ ಪ್ರಮಾಣವನ್ನು ಆಧುನಿಕ ತಂತ್ರಜ್ಞಾನವಾದ ಚ್ಚಾರೆಯ ಪರಮಾಣು ಹೀರುವಿಕೆ ಸ್ಪೆಕ್ಟ್ರಮ್ ಬ್ಬಿಡಿಮಾಪನದ (ಈಟಚಿಟಜ ಟಿಂಂಠಟುಛ ಟಛಿಠಂಜಿಂ–ಟುಂಠಟಿ ಖಿಠಿಜಟಛಿಂಟಜಿಂಠಿ–ಟಟಿಂಂಠಂಂಠಟಜಟಿಂಜಿಂಠಿ) ವಿಧಾನದಿಂದ ಕಂಡುಹಿಡಿಯಲಾಗಿದ್ದು, ಅವರ ವಿಶ್ಲೇಷಣೆಯು ಈ ಲೇಖನದಲ್ಲಿ ನಿಡಲಾಗಿದೆ.

ಮುಖ್ಯ ಪದಗಳು: ಆರ್ಯುವೇದಿಯ ಔಷಧ (ತಾಮ್ರ ಭಸ್ಮ), ವಿರಳ ಧಾತುಗಳು.

ಪ್ರಸ್ತಾವನೆ: ಪುರಾತನ ಕಾಲದಿಂದಲೂ ಮನುಷ್ಯನು ತನ್ನ ಆರೋಗ್ಯವನ್ನು ಕಾಪಾಡಿಕೋಳ್ಳಲೂ ಹಾಗೂ ರೋಗ–ರುಜಿನಗಳಿಂದ ದೇಹವನ್ನು ದೂರವಿಡಲು ಹಲವು ಮೂಲಗಳಿಂದ ಔಷಧವನ್ನು ಬಳಸುತ್ತಿದ್ದಾನೆ. ಆರ್ಯುವೆದದಲ್ಲಿ ಔಷಧಗಳನ್ನು ಪ್ರಾಕೃತಿಕ ಮೂಲಗಳಾದ ಸಸ್ಯ, ಪ್ರಾಣಿ, ಹಾಗೂ ಖನಿಜ–ಲೋಹ ಇವುಗಳ ಮಿಶ್ರಣದಿಂದ ತಯಾರಿಸಿ ಬಳಸಲಾಗುತ್ತದೆ. ಔಷಧೀಯ ರೂಪದಲ್ಲಿ ಖನಿಜ–ಲೋಹಗಳ ಬಳಕೆಯೂ ವೇದಿಕ ಕಾಲದಿಂದಲೂ ನಡೆದು ಬಂದಿದ್ದು, ಅವುಗಳಿಂದ ತಯಾರಿಸಲಾದ ಔಷಧಗಳು ಸ್ವಲ್ಪ ಅಥವಾ ಅತಿ ಚಿಕ್ಕ ಪ್ರಮಾಣವು ರೋಗದ ಮೇಲೆ ತ್ವರಿತ ಪರಿಣಾಮ ಬಿರುವುದರಿಂದ ಈಗ ಆರ್ಯುವೇದದಲ್ಲಿ ಅವುಗಳ ಬಳಕೆಯೂ ಆರ್ಯುವೇದದ ಒಂದು ಮಹತ್ವದ ಅಂಶವಾಗಿದೆ. ಆರ್ಯುವೇದದಲ್ಲಿ ಔಷಧಗಳನ್ನು ವಿವಿಧ ಖನೀಜ–ಲೋಹಗಳನ್ನು, ಔಷಧಿಯ ಗುಣ ಹೊಂದಿರುವ ಗಿಡ–ಮೂಲಿಕೆ ಹಾಗೂ ಸಸ್ಯಗಳ, ರಸ, ಕಷಾಯಗಳ ಮಿಶ್ರಣದಿಂದ ತಯಾರಿಸಲಾಗುತ್ತದೆ ಎಂದು ಹೇಳಲಾಗಿದೆ. ಖನಿಜಗಳಾದ ಪಾದರಸ, ಅಭ್ರಕ, ಫೆರಸ್ ಸಲ್ಫೆಟ, ಚಿನ್ನ, ಬೆಳ್ಳಿ, ಕಬ್ಬಿಣ, ಸತು, ತಾಮ್ರ, ಮುತ್ತು, ಹವಳ, ವಜ್ರ ಮುಂತಾದವುಗಳನ್ನು ಭಸ್ಮದ ರೂಪದಲ್ಲಿ ಚಿಕಿತ್ಸಕಾ ಉದ್ದೇಶದಿಂದ ಔಷಧಿಯಾಗಿ ಊಪಯೋಗಿಸಲಾಗುತ್ತಿದೆ. ಭಸ್ಮಗಳು ಆರ್ಯುವೇದದ ಏಕೈಕ ತಯಾರಿಕೆಗಳಾಗಿವೆ, ಅವುಗಳನ್ನು ಸಾಮಾನ್ಯವಾಗಿ ವಿವಿಧ ರಿತೀಯ ಕಾಯಿಲೆ ಅಥಾವ ರೋಗಗಳ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ತಾಮ್ರವು ದೇಹದಲ್ಲಿನ ಕಬ್ಬಿಣಾಂಶವನು ಹೀರಲು ಮತ್ತು ಕೆಂಪು ರಕ್ತ ಕಣಗಳ ತಯಾರಿಕೆಯಲ್ಲಿ ಕಬ್ಬಿಣಾಂಶವನ್ನು ಅಸ್ಥಿಮಜ್ಜೆಗೆ ರವಾನಿಸುವಲ್ಲಿ ನೆರವಾಗುತ್ತದೆ. ತಾಮ್ರದ ಸಹಾಯವಿಲ್ಲದ್ದಲ್ಲಿ ಕಬ್ಬಿಣಾಂಶವು ಸಂಶ್ಲೇಷಣೆ ಹೋಂದದೆ ಅದು ಹೃದಯ, ಯಕೃತ್ತು, ನಿರ್ನಾಳ ಗ್ರಂಥಿ ಹಾಗೂ ಸಂತಾನೋತ್ಪತ್ತಿ ಗ್ರಂಥಿಗಳಲ್ಲಿ ಸಂಗ್ರಹವಾಗುತ್ತದೆ, ಹೀಗೆ ಸಂಗ್ರಹಣೆ ಮುಂದುವರೆದಲ್ಲಿ ದೇಹದ ಅಂಗಗಳಾದ ಯಕೃತ್ತಿನ ವಿಫಲತೆ, ಸಂಧಿವಾತ, ಹಾರ್ಮೋನಗಳ ಅಸಮತೋಲನೆಗೆ ಕಾರಣವಾಗುತ್ತದೆ. ಆದ್ದರಿಂದ ಮನುಷ್ಯನ ದೇಹಕ್ಕೆ ಕಬ್ಬಿಣಕ್ಕಿಂತ, ತಾಮ್ರವು ಹೆಚ್ಚಿನ ಪ್ರಮಾಣದಲ್ಲಿ ಬೆಕಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ತಾಮ್ರ ತೆಗೆದುಕೋಳ್ಳುವಿಕೆ, ದೇಹದಲ್ಲಿ ಸಂಗ್ರಹವಾದ ಕಬ್ಬಿಣವನ್ನು ಬಿಡುಗಡೆ ಮಾಡಿ, ಕೆಂಪು ರಕ್ತ ಕಣಗಳ ತಯಾರಿಕೆಗೆ ಸಹಾಯ ಮಾಡುತ್ತದೆ. ಆದರೆ ಅತಿ ಹೆಚ್ಚಿನ ಪ್ರಮಾಣದ ತಾಮ್ರದಿಂದ ತೀವ್ರ ಹಾಗೂ ತಾತ್ಕಾಲಿಕ ವಿಷವಾಗಿ ಪರಿಣಮಿಸಿ, ವಾಂತಿ, ಅತಿಸಾರ, ಮೂತ್ರಪಿಂಡಕ್ಕೆ ಹಾನಿ, ರಕ್ತಹೀನತೆಗೆ ಕಾರಣವಾಗುತ್ತದೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಆರ್ಯುವೆದಿಯ ಔಷಧವಾದ ತಾಮ್ರ ಭಸ್ಮವನ್ನು ನಾಲ್ಕು ವಿವಿಧ ಔಷಧಾಲಾಯಗಳಲ್ಲಿ ತಯಾರಿಸಲಾದ ಭಸ್ಮವನ್ನು ಖರಿದಿಸಿ ಅವುಗಳಲ್ಲಿರುವ ತಾಮ್ರದ ಹಾಗೂ ಅದರಲ್ಲಿರುವ ಕೇಲವು ಖನಿಜ–ಧಾತುಗಳ ಸಾಂದ್ರತೆಯನ್ನು ಈ ಲೇಖನದಲ್ಲಿ ಕಂಡುಹಿಡಿಯಲಾಗಿದೆ.

ಪ್ರಾಯೋಗಿಕ ವಿಧಾನ: ನಾಲ್ಕು ಬೇರೆ ಬೇರೆ ಆರ್ಯುವೇದಿಯ ಔಷಧ ತಯಾರಿಕಾ ಕಂಪನಿಗಳಾದ ಪತಂಜಲಿ, ಬೈದ್ಯನಾಥ, ಧೂತಪಾಪೆಶ್ವರ, ಲಾಯನ ಇವುಗಳಲ್ಲಿ ತಯಾರಿಸಿದ ತಾಮ್ರ ಭಸ್ಮವನ್ನು ತೆಗೆದುಕೋಳ್ಳಲಾಗಿದೆ. ಅವುಗಳನ್ನು ಟಿಬಿ–1, ಟಿಬಿ–2, ಟಿಬಿ–3, ಮತ್ತು ಟಿಬಿ–4 ಹಿಗೆ ಹೆಸರುಗಳನ್ನು ನಮೂದಿಸಲಾಗಿದೆ. ಕ್ರಮವಾಗಿ ಅವುಗಳು "ಪತಂಜಲಿ, ಬೈದ್ಯನಾಥ, ಧೂತಪಾಪೆಶ್ವರ, ಮತ್ತು ಲಾಯನ". ಕಂಪನಿಯ ಭಸ್ಮಗಳು. 1 ಗ್ರಾಂ ತಾಮ್ರ ಭಸ್ಮವನ್ನು ಶಂಕುವಿನಾಕಾರದ ಫ್ಲಾಸ್ಕನಲ್ಲಿ ತೆಗೆದುಕೊಂಡು 25 ಮಿಲೀ ಕೇಂದ್ರೀಕೃತ ಹೈಡ್ರೋಕ್ಲೋರಿಕ್ ಆಮ್ಲ ಮತ್ತು 25 ಮಿಲೀ ದ್ವಿಗುಣ ನಿರಯಾನೀಕರಣ ಮಾಡಲಾದ ನಿರನ್ನು ಸೇರಿಸಿ ಒಟ್ಟು 50–ಮಿಲೀ ಮಿಶ್ರಣವನ್ನು ಒಂದು ರಾತ್ರಿ ಇಡಲಾಗಿದೆ. ಈ 50–ಮಿಲೀ ಮಿಶ್ರಣವನ್ನು ವ್ಯಾಟಮನ್ ಫಿಲ್ಟರ್ ಪೇಪರ–42 ದಿಂದ

ಶೋಧಿಸಿಕೊಂಡು, 950 ಮಿಲೀ ದ್ವಿಗುಣ ನಿರಯಾನೀಕರಣ ಮಾಡಲಾದ ನಿರನ್ನು ಸೇರಿಸಿಕೊಂಡು ಒಟ್ಟು 1000 ಮಿಲೀ ಮಿಶ್ರಣವನ್ನು ತಯಾರಿಸಿಕೋಳ್ಳಲಾಗಿದೆ. ಈ 1000–ಮಿಲೀ ಮಿಶ್ರಣದಿಂದ ತಾಮ್ರ ಭಸ್ಮದಲ್ಲಿರುವ ವಿರಳ ಖನಿಜ–ಧಾತುಗಳ ಸಾಂದ್ರತೆಯ ಪ್ರಮಾಣವನ್ನು ಆಧುನಿಕ ತಂತ್ರಜ್ಞಾನವಾದ "ಜ್ವಾಲೆಯ ಪರಮಾಣು ಹೀರುವಿಕೆ ಸ್ಪೆಕ್ಟ್ರಮ್ ದ್ವಿತಿಮಾಪನದ" (Flame Atomic Absorption Spectro-photometry) ವಿಧಾನದಿಂದ ಕಂಡುಹಿಡಿಯಲಾಗಿದೆ. ಈ ತಂತ್ರಜ್ಞಾವು (ICE 3000 sires)ಆಗಿದೆ.



ಚಿತ್ರ–1 : ಕಬ್ಬಿಣ ಮತ್ತು ತಾಮ್ರದ ಸಾಂದ್ರತೆಯ ಪ್ರಮಾಣ

ಫಲತಾಂಶಗಳು ಮತ್ತು ಚರ್ಚೆ : ಪ್ರಸ್ತುತ ಲೇಖನದಲ್ಲಿ ನಾಲ್ಕು ಬೆರೆ ಬೆರೆ ಕಂಪನಿಯ ತಾಮ್ರ ಭಸ್ಮದಲ್ಲಿರುವ ಖನಿಜ–ಧಾತುಗಳ ಸಾಂದ್ರತೆಯ ಪ್ರಮಾಣಗಳನ್ನು "ಜ್ವಾಲೆಯ ಪರಮಾಣು ಹೀರುವೆಕೆ ಸ್ಪೆಕ್ಟ್ರಮ ದ್ವಿತಿಮಾಪನದ" ಸಹಾಯದಿಂದ ಕಂಡುಹಿಡಿಯಲಾಗಿದೆ. ದೊರೆತ ಮೌಲ್ಯಗಳನ್ನು ಕೆಳಗಿನ ಕೋಷ್ಟಕ–1 ರಲ್ಲಿ ನಿಡಲಾಗಿದೆ,ಕಂಬ ಸಾಲುಗಳು ಕ್ರಮವಾಗಿ, ಸ್ಯಾಂಪಲ ಕೋಡ, ಕಂಪನಿಯ ಹೆಸರು ಹಾಗು ಖನಿಜ–ಧಾತುಗಳನ್ನು ಸುಚಿಸುತ್ತವೆ



ಚಿತ್ರ –2: ತಾಮ್ರ ಭಸ್ಮದಲ್ಲಿರುವ ಖನಿಜ ಧಾತುಗಳ ಸಾಂದ್ರತೆಯ ಪ್ರಮಾಣ

ಕೋಷ್ಟಕ–1 :

ಸ್ಯಾಂಪಲ ಕೋಡ	ಕಂಪನಿಯ ಹೆಸರು	ಖನಿಜ–ಧಾತುಗಳ ಸಾಂದ್ರತೆ ಮಿಗ್ರಾಂ ಪ್ರತಿ ಲೀಟರ್ ನಂತೆ							
		Mg	K	Ca	Cr	Mn	Fe	Cu	Zn
ಟಿಬಿ–1	ಪತಂಜಲಿ	1.285	4.1277	5.0568	0.2276	0.52	6.342	35.2638	0.0402
ಟಿಬಿ–2	ಬೈದ್ಯನಾಥ	0.2283	0.0686	0.3122	0.0916	0.0979	15.8027	34.0553	0.1009
ಟಿಬಿ–3	ಧೂತಪಾಪೆಶ್ವರ	0.8589	2.8938	0.7655	0.224	0.0118	5.8631	19.559	0.1196
ಟಿಬಿ–4	ಲಾಯನ	1.0071	0.5365	1.8685	0.0432	0.3448	17.54	32.0125	0.0462

ಕೋಷ್ಟಕ:2 ಉಪಕರಣದ ಸ್ಥಿತಿ (INSTRUMENTAL CONDITIONS)

ಧಾತುಗಳು	ಜ್ವಾಲೆಯ ವಿದ್ಯುತ(%)	ತರಂಗಾಂತರ max(nm)	Slit width (nm)	ಜ್ವಾಲೆಯ ವಿಧ	ಉಪಕರಣದ ವಿಧಾನ
Mg	75	285.2	0.5	Air-C_2H_2	ಜ್ವಾಲೆಯ
K	100	766.5	0.5	Air-C_2H_2	ಜ್ವಾಲೆಯ
Ca	100	422.7	0.5	N_2O-C_2H_2	ಜ್ವಾಲೆಯ
Cr	100	357.9	0.5	N_2O-C_2H_2	ಜ್ವಾಲೆಯ
Mn	75	279.5	0.2	Air-C_2H_2	ಜ್ವಾಲೆಯ
Fe	75	248.3	0.5	Air-C_2H_2	ಜ್ವಾಲೆಯ
Cu	75	324.8	0.5	Air-C_2H_2	ಜ್ವಾಲೆಯ
Zn	75	213.9	0.2	Air-C_2H_2	ಜ್ವಾಲೆಯ

ಉಪಸಂಹಾರ: ಕೋಷ್ಟಕ:1ರಲ್ಲಿ ಸುಚಿಸಿದಂತೆ ನಾಲ್ಕು ಔಷಧಾಲಯ (ಕಂಪನಿಯ)ಗಳ ತಾಮ್ರ ಭಸ್ಮದಲ್ಲಿರುವ ಏಂಟು ಧಾತುಗಳ ವಿಶ್ಲೆಷಣೆ ಮಾಡಲಾಗಿದೆ. ತಾಮ್ರದ ಸಾಂದ್ರತೆ ಪ್ರಮಾಣ ಟಬಿ–1 (35.2638 mg/L), ಟಬಿ–2 (34.0553 mg/L), ಟಬಿ–4(32.0125 mg/L) ರಲ್ಲಿ ಸರಾಸರಿ ಸರಿಸಮಾನವಾಗಿದ್ದು(33.7772 mg/L), ಆದರೆ ಟಬಿ–3ಯಲ್ಲಿ(19.559 mg/L) ಶೇಕಡಾ 42.09 ರಷ್ಟು ಇಳಕೆಯಾಗಿದೆ ಆದರೆ ಈ ನಾಲ್ಕು ಔತ್ವನ್ನಗಳ ಭಸ್ಮಗಳಲ್ಲಿ ತಾಮ್ರದ ಪ್ರಮಾಣವು ವಿಶ್ವ ಆರೋಗ್ಯ ಸಂಸ್ಥೆಯ(WHO) ಅನುಮತಿಯ ಮಿತಿಕ್ಕಿಂತ (ಎಲ್ಲಾ ರೀತಿಯ ಆಹಾರಗಳಂದ 40 ಮೀಗ್ರಾ/ಕೆಜಿ) ಕಡಿಮೆ ಪ್ರಮಾಣದಲ್ಲಿ ದೊರೆತಿದೆ ಈ ರೀತಿಯ ವ್ಯತ್ಯಾಸಕ್ಕೆ ಅವರ,ಅವರ ತಯಾರಿಕಾ ವಿಧಾನ ಹಾಗೂ ಸಂಸ್ಕರಣೆಯಲ್ಲಿ ಬಳಸಿಕೊಂಡ ಔಷಧಿಯ ಗಿಡ–ಮೂಲಿಕೆಯ ರಸಗಳ ಮಿಶ್ರಣದ ಪ್ರಮಾಣ ಅಥವಾ ಸಂಸ್ಕರಣೆಯ ಪದ್ಧತಿಯಲ್ಲಿನ ವ್ಯತ್ಯಾಸ ಕಾರಣವಾಗಿರಬಹುದು. ಹಾಗೆ ಕಬ್ಬಿಣದ ಪ್ರಮಾಣವು ಟಬಿ–2 (15.8027 mg/L) ಹಾಗೂ ಟಬಿ–4 (17.54 mg/l) ಸುಮಾರು ಸರಿಸುಮಾರು(16.671 mg/L) ಮತ್ತು ಟಬಿ–1 (6.342mg/L)ಹಾಗೂ ಟಬಿ–3 (5.8631 mg/L) ಸರಿಸುಮಾರು(6.102 mg/L) ದೋರಕಿದ್ದು ಅವುಗಳ ವ್ಯತ್ಯಾಸ %51.84 ರಷ್ಟು ಕಂಡುಬಂದಿದೆ ಇದು ಕೂಡಾ (WHO) ಅನುಮತಿಯ ಮಿತಿಕ್ಕಿಂತ ಕಡಿಮೆ ಪ್ರಮಾಣದಲ್ಲಿ ದೋರೆತಿದೆ. ಇನ್ನು ಊಳದ ವಿರಳ ಖನಿಜ–ಧಾತುಗಳಾದ (Mg.K.Ca,Cr,Mn, Zn) ಇವುಗಳ ಸಾಂದ್ರತೆಯ ಪ್ರಮಾಣ ಅನುಮತಿಯ ಮಿತಿಕ್ಕಿಂತ ಕಡಿಮೆ ಪ್ರಮಾಣದಲ್ಲಿ ದೋರಕಿದೆ, ಕೋಷ್ಟಕ–1 ರಲ್ಲಿ ಹಾಗೂ ಚಿತ್ರ–1 ರಲ್ಲಿ ನಿಡಲಾಗಿದೆ.

ಆಧಾರ ಗ್ರಂಥ:

1. Swapnil.Y.Chaudhari1, Chandrashekar Y Jagtap2, R.Galib, Prashant.B.Bedarkar3, Biswajyoti Patgiri4, Pradeep Kumar Prjapati5.: Review of Research work done on Tamra bhasma[incinerated copper] at Institute for Post-Graduate Teaching & Research in Ayurveda Jamnagar: AYU 2013 Jan-Mar; 34(1): 21-25.

2. Chandrashekar Y. Jagtap, Pradeep Kumar Prajapati, Biswajyoti Patagiri, Vinay J. Shukla: Standard manufacturing procedure of Tamra Bhasma : AYU|Oct-Dec-2012|vol 33| Issue-4.

ರೇಣು ಗಾತ್ರದ ಬಿಸ್ಮತ್ ಮಿಶ್ರಿತ ತಾಮ್ರದ ಫೆರೈಟಗಳಲ್ಲಿ ವಿದ್ಯುತ್ ಪ್ರೇರಕ ಗುಣಗಳ ಮತ್ತು ವಿಧ್ಯುತ್ ಪ್ರವಹಿಸುವ ಗುಣಗಳ ಒಂದು ಅಧ್ಯಯನ

ಪ್ರದೀಪ ಚವ್ಹಾಣ[1] ಮತ್ತು ಏಲ್ ಆರ್ ನಾಯಿಕ[1*]

[1]ಭೌತಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580003, ಇ–ಮೇಲ್: naik_40@rediffmail.com

$CuBi_xFe_{2-x}O_4$ ರಾಸಾಯನಿಕ ಸೂತ್ರ ಹೊಂದಿರುವಂತಹ ಖಹಾಹರಳಿಯ ರೇಣು ಗಾತ್ರದ ಫೆರೈಟಗಳನ್ನು ಸರಕರ ದ್ರಾವಣ ಪದ್ಧತಿಯಿಂದ ತಯಾರಿಸಲಾಯಿತು. ಫಿಖಆ ಅಧ್ಯಯನದಿಂದ ತಯಾರಿಸಿದ ಫೆರೈಟನ ಶುದ್ಧತ್ವ, ಘನಾಕೃತಿಯ ರಚನೆಗಳನ್ನು ನೃಪಿಕರಿಸಿಕೊಳ್ಳಲಾಯಿತು. ರೇಣು ಕಣಗಳ ಗಾತ್ರವು ಸುಮಾರು 16.82nm ನಿಂದ 37.16nm ಗಳೆರಿಯ ಪಿಖಾಯಿ–ಶೆರರ್ ಸೂತ್ರದಿಂದ ಕಂಡುಕೊಳ್ಳಲಾಯಿತು. ಹರಳುಗಳಲ್ಲಿಯ ಪರಮಾಣು ಸ್ಥಾನ ಮತ್ತು ಪರಮಾಣುಗಳಲ್ಲಿಯ ಅಂತರಗಳನ್ನು (hkl) ಸ್ಟಿರಾಲಿಕಗಳಿಂದ ಅಲಿಯುಟಾಯಿತು. ಬಿಸ್ಮತ್ ಪರಮಾಣು ಹೆಚ್ಚಾದಂತೆ ಪರಮಾಣು ಚಾರಾಲಧರ ಸ್ಥಿರಾಲಿಕ ಹೆಚ್ಚಾಸನ್ನು ಕಂಡು ಖಂಡಿತು. ಬಿಸ್ಮತ್ ಪರಮಾಣುಗಳು ಹೆಚ್ಚಾದಂತೆ ರೇಣು ಕಣಗಳ ಸಚ್ಚಿಭ್ರತೆಯು (ಚಾಳಾತ್ವ) ಕಡಿಮೆ ಆಗಿರುವುದು ಕಂಡು ಖಂಡಿತು. ಕೊಠಡಿಯ ಸಾಮಾನ್ಯ ತಾಪಮಾನದಲ್ಲಿ ಆವರ್ಧಿತ ವಿದ್ಯುತ್ ಉಪಯೋಗಿಸಿ ವಿದ್ಯುತ್ ಪ್ರೇರಣಾ ಖಪರಾವಾಹೆಯನ್ನು ಅಧ್ಯಯನ ಮಾಡಲಾಯಿತು. ವಿದ್ಯುತ್ ಕರಿಪನಾಲಿಕ ಹೆಚ್ಚಾದಂತೆ ವಿದ್ಯುತ್ ಪ್ರೇರಣಾಲಿಕ ಕಡಿಮೆ ಆಗಿರುವುದು ಕಂಡು ಖಂಡಿತು. ಈ ಗುಣವು ಖಹಾಶಃ ಖಣವಿದ್ಯುತ್ ಕಣ ಮತ್ತು ಧನವಿದ್ಯುತ್ ಕಣಗಳು Fe2+ ಮತ್ತು Fe3+ ಗಳ ಮಯೆ ಜಿಗಿದಾಡುವುದೇ ಕಾರಣವಿರಬೇಕು. ಜಿಗಿದಾಡುವ ಕರಿಪನಾಲಿಕ ಮತ್ತು ವಿದ್ಯುತ್ ಕರಿಪನಾಲಿಕಗಳಲ್ಲಿ ಹೊಂದಾಣಿಕೆ ಇಲ್ಲದೇ ಇರುವುದು ಕಾರಣವಿರಬಹುದು. ಇದನ್ನು ನೃಪಿಕರಿಸಲು ಈ ವಿದ್ಯುತ್ ಪ್ರೇರಕಗಳ ಆವರ್ಧಿತ ವಿದ್ಯುತ್ ಪ್ರವಹಿಸುವಿಕೆಯ ಅಧ್ಯಯನದಿಂದ ಸಾಧ್ಯ.

ಪೀಠಿಕೆ :– ಘನ ಸ್ಪಿನೇಲ್ ಫೆರೈಟನ ಸಾಮಾನ್ಯ ಸೂತ್ರ ಒಈಜ2ಔ4, ಇಲ್ಲಿ ಒ ಒಂದು ದ್ವಿವೇಲೆನ್ಸಿಯ ಆಯಾನು, ಇವುಗಳ ಸಮರ್ಥ ಅನ್ವಯಗಳಿಗೆ ಕಾರಣವೆನೆಂದರೆ ಈ ಫೆರೈಟಗಳ ಬೆಳಕಿನ ಮತ್ತು ವಿದ್ಯುತ್ ಸ್ಥಿತಿ ಸ್ಥಾಪಕ ಗುಣಗಳು. ಬಹುಸ್ಪಟಿಕೀಯ ಫೆರೈಟ ವಸ್ತುಗಳು ಚೆನ್ನಾಗಿ ವಿದ್ಯುತ್ ಪ್ರೇರಕ ಗುಣಗಳನ್ನು ಪ್ರದರ್ಶಿಸುತ್ತದೆ. ಅವುಗಳ ಅನೇಕ ತಾಂತ್ರಿಕ ಉಪಯೋಗಗಳನ್ನು: ಮೈಕ್ರೋವೇವ್‌ದಿಂದ ಹಿಡಿದು ರೇಡಿಯೊ ತರಂಗಾಂತರಗಳವರೆಗೆ ಹೊಂದಿದೆ. ಸಂಯೋಜಿಸಿದ ರೇಣು ಗಾತ್ರದ ವಸ್ತುಗಳ ಮಹತ್ವವು ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಬಹುಪಯುಕ್ತವಾಗಿದೆ. ಬಿಸ್ಮತ್ ಲೋಹವು ಅತಿಯಾಗಿ ಬಳಸಿದ ವಸ್ತುಗಳಲ್ಲಿ ಒಂದು ಹೆಚ್ಚಿನ ಉಪಯೋಗವಾಗಿರುವ ಮತ್ತು ಇದು ಅರೆಲೋಹದ ಆಸಕ್ತಿದಾಯಕ ವಿದ್ಯುತ್ ಗುಣಗಳನ್ನು ಹೊಂದಿದೆ. ಅವುಗಳಲ್ಲಿ ವಿದ್ಯುತ್ ಆವೇಶ ವಾಹಕಗಳ ಹೆಚ್ಚಿನ ಚಲನೆ, ಕಡಿಮೆ ಪರಿಣಾಮಕಾರಿ ಮಾದ್ಯಮ, ಕಡಿಮೆ ವಾಹಕದ ಸಾಂದ್ರತೆ, ದೀರ್ಘ ಸರಾಸರಿ ಮುಕ್ತ ಪಥ; ಹೆಚ್ಚಾಗಿ, ಫರ್ಮಿ ಆಯಾಮದಲ್ಲಿ ಬಹಳಷ್ಟು ಅಸಮರ್ಪಕವಾಗಿವೆ ಮತು ಹೆಚ್ಚಿನ ಕಾಂತೀಯತೆಯನ್ನು ಪ್ರಸ್ತುತಪಡಿಸಿದೆ [1]. ರೇಣು ಗಾತ್ರದ ವಸ್ತುಗಳು ಸಂಶೋಧನೆಯಲ್ಲಿ ಮಹತ್ವದ ಪಾತ್ರವನ್ನು ಪಡೆದುಕೊಂಡಿದ್ದಕ್ಕೆ ಕಾರಣ ಅವುಗಳ ಗಾತ್ರದ ಕ್ವಾಂಟಮ್ ನಡುವಳಿಕೆಯನ್ನು ಅನೇಕ ಉಪಯೋಗಗಳಲ್ಲಿ ಬಳಸಲಾಗಿದೆ.

ಅವುಗಳೆಂದರೆ ವೇಗವರ್ಧನೆ, ಔಷಧ ವಿತರಣೆ, ಶಾಶ್ವತ ಕಾಂತತ್ವ ದಾಖಲಿಸುವಿಕೆ, ಅಂಟೀನಾ ರಾಡ್‌ಗಳು, ಸುರುಳಿಗಳ ಭಾರ, ದೂರಸಂಪರ್ಕ ಸಾಧನಗಳು, ಪರಿವರ್ತಕಗಳು, ಇತ್ಯಾದಿ. ಈ ಫೆರೈಟ ವಸ್ತುಗಳು ತಾಂತ್ರಿಕವಾಗಿ ಮಹತ್ವವಾಗಿವೆ ಮತ್ತು ಇವು ಅನೇಕ ರೀತಿಯ ಉಪಯೋಗಗಳನ್ನು ಹೊಂದಿವೆ [2]. ಫೆರೈಟಗಳು ಕಡಿಮೆ ವಿಷತ್ವ ಹೊಂದಿರುವ ಕಾರಣ ಬಿಸ್ಮತ್ ಮಿಶ್ರಿತ ವಸ್ತುಗಳು ಇತ್ತಿಚೆಗೆ ಸಾವಯವ ನೈಟ್ರೊ ಸಂಯುಕ್ತಗಳನ್ನು ಪತ್ತೆ ಹಚ್ಚುವಲ್ಲಿ ಬಳಸಲಾಗಿದೆ, ಸೌಂದರ್ಯವರ್ಧಕಗಳಲ್ಲಿ ಮತ್ತು ಔಷಧಗಳಲ್ಲಿ ಸೋಂಕು ಪತ್ತೆ ಹಚ್ಚುವ'ಲ್ಲಿಯೂ ಕೂಡ ಬಳಕೆಯಾಗಿದೆ [3].

ಮೃದುವಾದ ರೇಣು ಗಾತ್ರದ ತಾಮ್ರದ ಫೆರೈಟಗಳನ್ನು ಉಷ್ಣವಾಹಕ ಮತ್ತು ಉಷ್ಣಸಾಂದ್ರೀಕರಣವಾಗಿ ಅರ್ಬುದ ಚಿಕಿತ್ಸೆಗೆ ಉಪಯೋಗಿಸಬುಹುದು (cryogenic treatment) [4]. ಇದನ್ನು ರಸಾಯನಿಕ ಚಿಕಿತ್ಸೆ ಮತ್ತು ವಿಕಿರಣ ಚಿಕಿತ್ಸೆಗೆ ಹೊಲಿಸಿದರೆ ಇದು ಅತೀ ಕಡಿಮೆ ಅಡ್ಡ ಪರಿಣಾಮವನ್ನು ಹೊಂದಿದೆ ಎಂದು ಹೇಳಬಹುದು. ಕಾಂತೀಯ ರೇಣು ಕಣಗಳ ಸ್ವಯಂ ತಾಪನವು ಆವರ್ತಿತ ಆಯಸ್ಕಾಂತೀಯದಲ್ಲಿ ಹಿಸ್ಟರೇಸಿಸ್ ನಷ್ಟ ಮತ್ತು ವಿಶ್ರಾಂತಿ ನಷ್ಟವನ್ನುಂಟು ಮಾಡುತ್ತದೆ.

ವಿದ್ಯುತ್ ಮತ್ತು ವಿದ್ಯುತ್ ಪ್ರೇರಕಗಳ ಗುಣಲಕ್ಷಣಗಳ ಅಧ್ಯಯನವು ಅತೀ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ ಮತ್ತು ಉಪಯುಕ್ತ ಗುಣಲಕ್ಷಣಗಳನ್ನು ಫೆರೈಟಗಳು ಹೊಂದಿವೆ. ಇವು ಸಂಸ್ಕರಣೆ ಪರಿಸ್ಥಿತಿ, ಹೆಪ್ಪುಗಟ್ಟಿಸುವ ತಾಪಮಾನ, ಹೆಪ್ಪುಗಟ್ಟಿಸುವ ಸಮಯ, ರಾಸಾಯನಿಕ ಸಂಯೋಜನೆ ಮತ್ತು ಮಿಶ್ರಣಗಳ ಮೇಲೆ ಅವಲಂಬನೆಯಾಗಿದೆ. ಆದಾಗ್ಯು, ಆವರ್ತಿತ ವಾಹಕತೆಯು ವಹನ ಯಾಂತ್ರಿಕದ ಬಗೆಗಿನ ಅತೀ ಮಹತ್ವದ ಮಾಹಿತಿಯನ್ನು ನೀಡುತ್ತದೆ. ಅಲ್ಲದೆ, ಇದೊಂದು ಫೆರೈಟಗಳ ವಾಹಕತೆಯ ಪರಿಣಾಮದ ಕ್ರಮವನ್ನು ವಿದ್ಯುತ್ ಪ್ರೇರಕ ಹಾಗು ಕಾಂತೀಯ ವರ್ತನೆಯನ್ನು ಹೆಚ್ಚು ಪ್ರಭಾವಶಾಲಿಯಾಗಿಸುತ್ತದೆ.

1. ಅಧ್ಯಯನ

ಅ. ವಸ್ತುಗಳ ತಯಾರಿಕಾ ವಿಧಾನ:– ರೇಣು ಗಾತ್ರದ ಬಹುಸ್ಪಟಿಕೀಯ ಫೆರೈಟಗಳ ಸಾಮಾನ್ಯ ಸೂತ್ರ BixCuFe2-xO4 ($0 \le x \le 1$) ಅನ್ನು ಸರ್‌ಕರ ದ್ರಾವಣದ ವಿಧಾನದಿಂದ ತಯಾರಿಸಲಾಯಿತು. 10 ಗ್ರಾಂ ಪಿ.ವಿ.ಎ ಯನ್ನು 100 ಮೀ.ಲೀ. ಆಯಾನುಕಣಗಳಲ್ಲದ ಭಾಷ್ಪೀಕರಿಸಿದ ಶುದ್ಧವಾದ ನೀರಿನಲ್ಲಿ ಕಾಂತೀಯ ಕದಡುವಿಕೆಯ ಸಹಾಯದಿಂದ ಬೆರೆಸಲಾಯಿತು. 30 ಗ್ರಾಂ ಸರ್‌ಕರವನ್ನು 50 ಮೀ.ಲೀ. ಆಯಾನುಕಣಗಳಲ್ಲದ ಭಾಷ್ಪೀಕರಿಸಿದ ಶುದ್ಧವಾದ ನೀರಿನಲ್ಲಿ ಬೆರೆಸಿ ಸ್ವಚ್ಛ ದ್ರಾವಣವಾಗುವಂತೆ ಅಲುಗಾಡಿಸಲಾಯಿತು. ನಂತರ ಮೇಲೆ ತಯಾರಿಸಿದ 10 ಮೀ.ಲೀ ಪಿ.ವಿ.ಎ ದ್ರಾವಣವನ್ನು ಬಿಸಿಯಾದ ಸರ್‌ಕರ ದ್ರಾವಣಕ್ಕೆ ಬೆರೆಸಲಾಯಿತು. ಆಮೇಲೆ ಕಾಂತೀಯ ಕದಡುವಿಕೆಯ ಸಹಾಯದಿಂದ 80 ಡಿ. ಸೇ. ವರೆಗೆ ಬಿಸಿ ಮಾಡಿ ಸ್ವಚ್ಛ ದ್ರಾವಣವನ್ನು ತಯಾರಿಸಲಾಯಿತು. ಶುದ್ಧವಾದ ವಿಶ್ಲೇಷಣಾತ್ಮಕ ಕಾರಕ ಶ್ರೇಣಿಯ ಲೋಹದ ನೈಟ್ರೇಟಗಳಾದ $Cu(NO_3)_2$, $Bi(NO_3)_3$ ಮತ್ತು $Fe(NO_3)_3$ ಗಳು ರೇಣು ಗಾತ್ರದ ಫೆರೈಟಗಳ ತಯಾರಿಕೆಗೆ ಆರಂಭಿಕ ವಸ್ತುಗಳಾಗಿವೆ. ಈ ಲೋಹದ ನೈಟ್ರೇಟಗಳನ್ನು ಸ್ಟೋಕಿಯೋಮೆಟ್ರಿಕ್ ಪ್ರಮಾಣದ ಪ್ರಕಾರ 50 ಮೀ.ಲೀ. ಆಯಾನುಕಣಗಳಲ್ಲದ ಭಾಷ್ಪೀಕರಿಸಿದ ಶುದ್ಧವಾದ ನೀರಿನಲ್ಲಿ ಕರಗಿಸಿ ಏಕರೂಪದ ಮಿಶ್ರಣವನ್ನು ತಯಾರಿಸಲಾಯಿತು. ಇದನ್ನು ಮೇಲೆ ತಯಾರಿಸಿದ ಪಿ.ವಿ.ಎ ದ್ರಾವಣ ಮತ್ತು ಸರ್‌ಕರ ದ್ರಾವಣಕ್ಕೆ ಬೆರೆಸಿ ಸೂಕ್ತವಾದ ತಾಪಮಾನದಲ್ಲಿ ಕಾಂತೀಯ ಕದಡುವಿಕೆಯ ಸಹಾಯದಿಂದ ಬಿಸಿಮಾಡಲಾಯಿತು. ನಂತರ ಈ ದ್ರಾವಣವನ್ನು ಹಳದಿ ಬಣ್ಣದ ಸಾರಜನಕದ ಆಕ್ಸೈಡ್ ಹೊಗೆ ಸಂಪೂರ್ಣವಾಗಿ ಆವಿಯಾಗುವವರೆಗೆ ಬಿಸಿ ಮಾಡಿ ಸ್ನಿಗ್ಧತೆಯ ಮಿಶ್ರಣವನ್ನು ವಿದ್ಯುತ್ ಅಥವಾ ಗ್ಯಾಸ್ ಬರ್ನರ್ ಮೇಲೆ ಇದ್ದಿಲು ರೂಪದಲ್ಲಿ ಬರುವವರೆಗೆ ಬಿಸಿ ಮಾಡಿ ಮತ್ತು ಇದು ಉತ್ಕರ್ಷಣಕ್ಕೆ ಒಳಗಾಗಲು ಬಿಸಿ ಮಾಡಿದ ನಂತರ ಅದನ್ನು ರೇಣು ಗಾತ್ರದ ಫೆರೈಟನ ಪುಡಿ ಆಕಾರದಲ್ಲಿ ತಯಾರಿಸಲಾಯಿತು. ಈ ಫೆರೈಟನ ಪುಡಿಯನ್ನು ಪೂರ್ವಭಾವಿಯಾಗಿ ಉಷ್ಣತೆಯನ್ನು ನಿರ್ಧರಿಸಿದಂತಹ ಕುಲುಮೆಯಲ್ಲಿ 800ಡಿ.ಸೇ. ತಾಪಮಾನದಲ್ಲಿ 8 ಗಂಟೆಗಳವರೆಗೆ ಬಿಸಿ ಮಾಡಲಾಯಿತು. ನಂತರ ಕುಲುಮೆಯನ್ನು ನಿಧಾನವಾಗಿ ಕೊಠಡಿ ತಾಪಮಾನದಲ್ಲಿ ತಂಪು ಮಾಡಲಾಯಿತು. ಈ ಪುಡಿಗೆ 2% ಪಿ.ವಿ.ಎ (Polyvinyl Alcohol) ದ್ರಾವಣವನ್ನು (ಇದು ಬಂಧಕದ ಏಜೆಂಟಾಗಿ ವರ್ತಿಸುತ್ತದೆ) ಸೇರಿಸಿ ಉಳ್ಳಲಾಯಿತು. ನಂತರ ಈ ಪುಡಿಯನ್ನು ಮಾತ್ರೆಯ ಗಾತ್ರದಲ್ಲಿ hydraulic press ನ ಸಹಾಯದಿಂದ 5 ಟನ್/ಇಂಚ್2 ಒತ್ತಡದಿಂದ ಒತ್ತಲಾಯಿತು. ಈ ಮಾತ್ರೆ ಆಕಾರದ ಫೆರೈಟ ಪುಡಿಯನ್ನು 1000 ಡಿ.ಸೇ. ತಾಪಮಾನದಲ್ಲಿ 12 ಗಂಟೆಗಳವರೆಗೆ ಬಿಸಿ ಮಾಡಿ ನಿಧಾನವಾಗಿ ಕೊಠಡಿ ತಾಪಮಾನದಲ್ಲಿ ತಂಪು ಮಾಡಲಾಯಿತು.

ಬ. ವಸ್ತುಗಳ ಅಧ್ಯಯನ :– ಎಕ್ಸರೇ ವಿವರ್ತನೆ ಅಧ್ಯಯನವನ್ನು X-ray diffractometer ನ ಸಹಾಯದಿಂದ Cu-Kα ವಿಕಿರಣದ ಮೂಲದಿಂದ 1.5406Å ತರಂಗಾಂತರವನ್ನು ಬಳಸಿ ಅಧ್ಯಯನ ಮಾಡಲಾಯಿತು. ಕಂಪನಾಂಕ ಆಧಾರಿತ ವಿದ್ಯುತ್ ಪ್ರೇರಕ ಸ್ಥಿರಾಂಕ ಮತ್ತು ವಿದ್ಯುತ್ ಪ್ರೇರಕತ್ವದ ರಾಷದ ಅಧ್ಯಯನವನ್ನು LCR meter bridge (Model: PSM1700) ನ ಸಹಾಯದಿಂದ ಕೊಠಡಿ ತಾಪಮಾನದಲ್ಲಿ ನಡೆಸಲಾಯಿತು. ರೇಣು ಗಾತ್ರದ ಫೆರೈಟಗಳ ರಂಧ್ರಗಳನ್ನು Hendricks ಮತ್ತು Adams ರ ವಿಧಾನದಿಂದ ಅರಿಯಲಾಯಿತು.

$$\%Porosity = 1-(da/dx) \quad (1)$$

ಇಲ್ಲಿ da= ನಿಜವಾದ ಸಾಂದ್ರತೆ, dx= ಎಕ್ಸರೇ ಸಾಂದ್ರತೆ.

ಕಂಪನಾಂಕ ಆಧಾರಿತ ವಿದ್ಯುತ್ ಪ್ರೇರಕ ಸ್ಥಿರಾಂಕವನ್ನು ಈ ಕೆಳಗಿನ ಸೂತ್ರದಿಂದ ತಿಳಯಲಾಯಿತು.

$$\varepsilon' = Cp \times t)/(\varepsilon' 0A) \quad (2)$$

ಇಲ್ಲಿ Cp= ಸಮಾಂತರ ಧಾರಣ, t= ವಸ್ತುವಿನ ದಪ್ಪ, ε'= permittivity of free space A=ವಸ್ತುವಿನ ವಿಸ್ತೀರ್ಣ.

ಕಂಪನಾಂಕ ಆಧಾರಿತ ಆವರ್ತನ ವಾಹಕತೆಯನ್ನು ಈ ಕೆಳಗಿನ

ಸೂತ್ರದಿಂದ ಕಂಡುಕೊಳ್ಳಲಾಯಿತು.

$$\sigma AC = \varepsilon' \varepsilon 0 \omega \tan\delta \quad (3)$$

ಇಲ್ಲಿ ω= ಕೋನೀಯ ಕಂಪನಾಂಕ, ε'= ವಿದ್ಯುತ್ ಪ್ರೇರಕ ಸ್ಥಿರಾಂಕ ಮತ್ತು tanδ= ವಿದ್ಯುತ್ ಪ್ರೇರಕತ್ವದ ರಾಷ.

2. ಫಲಿತಾಂಶಗಳು ಮತ್ತು ಚರ್ಚೆ:– ಒಂದೇ ಹಂತದ ಘನ ಸ್ಪಿನೇಲ್ ರಚನೆ ಮತ್ತು ಶುದ್ಧತೆಯನ್ನು ಎಕ್ಸರೇ ವಿವರ್ತನೆಯ ಸಹಾಯದಿಂದ ಚಿತ್ರ–1 ರಿಂದ ಅರಿತುಕೊಳ್ಳಲಾಯಿತು. ಗಮನಿಸಲಾದ ಎಲ್ಲ ಪ್ರತಿಬಿಂಬಗಳನ್ನು ಘನ ಸ್ಪಿನೇಲ್ ಪರಮಾಣು ಸ್ಥಾನಗಳಾಗಿ ನಿಗದಿಪಡಿಸಿ, ಒಂದೇ ಹಂತದ ರಚನೆಯನ್ನು ಯಾವುದೇ ಇತರ ಕಲ್ಮಶಗಳ ಕುರುಹುಗಳಿಲ್ಲವೆಂದು ಸ್ಥಿರೀಕರಿಸಲಾಯಿತು. ಹೆಚ್ಚಿನ ತೀವ್ರತೆಯನ್ನು ಹೊಂದಿದ ಗರಿಷ್ಟಗಳನ್ನು ASTM ದತ್ತಾಂಶದ ಸಹಾಯದಿಂದ ಸೂಚ್ಯಂಕದೋಡನೆ ಗುರುತಿಸಿಕೊಳ್ಳಲಾಯಿತು.



ಚಿತ್ರ–1. ಎಕ್ಸರೇ ವಿವರ್ತನೆಯ ಬಿಸ್ಮತ್ ಮಿಶ್ರಿತ ತಾಮ್ರದ ಫೆರೈಟ ರೇಣು ಕಣಗಳು.

ಆದಾಗ್ಯು, ಎಕ್ಸರೇ ವಿವರ್ತನೆಯ ದತ್ತಾಂಶದಿಂದ ಬಿಸ್ಮತ್‌ನ ಪ್ರಮಾಣ ಹೆಚ್ಚಾದಂತೆ ಅಂತರ್ ಸಮತಲೀಯ ಮೌಲ್ಯವು ನಿಧಾನವಾಗಿ ಕಡಿಮೆ ಮೌಲ್ಯಕ್ಕೆ ಇಳಿಯಿತು. ವಿಶಾಲವಾದ ಎಕ್ಸರೇ ವಿವರ್ತನೆಯ ಗರಿಷ್ಟವು ರೇಣು ಕಣಗಳ ಗಾತ್ರದ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ತೋರಿಸುತ್ತದೆ. ಬಿಸ್ಮತ್ ಮಿಶ್ರಿತ ತಾಮ್ರದ ಫೆರೈಟ ರೇಣು ಕಣಗಳ ಗಾತ್ರವನ್ನು ಡಿಬಾಯ್–ಶೇರರ್ ಸೂತ್ರದ ಸಹಾಯದಿಂದ ಕಂಡುಕೊಳ್ಳಲಾಯಿತು ಮತ್ತು ಕಣಗಳ ಗಾತ್ರವನ್ನು ಕೋಷ್ಟಕ–1 ರಲ್ಲಿ ಕೊಟ್ಟಿದೆ. ಈ ರೇಣು ಕಣಗಳ ಗಾತ್ರವು 16.82nm ದಿಂದ 37.16nm ಗಳವರೆಗೆ ಇದೆ ಎಂದು ತಿಳಿದು ಬಂದಿತು [5]. ಜಾಲಾಂಧರ ಸ್ಥಿರಾಂಕ (lattice constant) ಗಳನ್ನು d ಮೌಲ್ಯ ಮತ್ತು (hkl) ನಿಯತಾಂಕಗಳ ಸಹಾಯದಿಂದ ಕಂಡುಕೊಳ್ಳಲಾಯಿತು. ಈ ನಿಯತಾಂಕಗಳನ್ನು ಕೋಷ್ಟಕ–1 ರಲ್ಲಿ ತೋರಿಸಲಾಗಿದೆ. ಬಿಸ್ಮತ್ ಕಣಗಳ ಗಾತ್ರ ಹೆಚ್ಚಾದಂತೆ ಜಾಲಾಂಧರ ಸ್ಥಿರಾಂಕಗಳು ಹೆಚ್ಚಾಗುವುದು ಕಂಡು ಬಂತು. ಈ ಜಾಲಾಂಧರ ಸ್ಥಿರಾಂಕಗಳು ಹೆಚ್ಚುತ್ತಿರುವ ಪ್ರವೃತ್ತಿಯ ಮೌಲ್ಯಕ್ಕೆ ಕಾರಣವೇನೆಂದರೆ ಚಿಕ್ಕ ಗಾತ್ರದ Cu_2+ (0.72Å) ಆಯಾನುಗಳು ದೊಡ್ಡದಾಗಿರುವ Bi_3+ (1.02 Å) ಆಯಾನುಗಳೊಂದಿಗೆ ಅದಲು–ಬದಲು ಆಗಿರುವುದೇ ಇರಬಹುದು. ಹೀಗೆ ನೋಡಿದಾಗ, ಬಿಸ್ಮತ್ ಪ್ರಮಾಣ ಹೆಚ್ಚಾದಂತೆ ಎಕ್ಸರೇ ಸಾಂದ್ರತೆಯ ಮೌಲ್ಯವು ಕೂಡ ಹೆಚ್ಚಾಗಿರುವುದಕ್ಕೆ ಕಾರಣವೇನೆಂದರೆ ಈ ಏಕಕೋಶ ಆಯಾಮಗಳ ಕಡಿತದ ಜೋತೆಗೆ ಬದಲಾಯಾದ ಚಿಕ್ಕ ಗಾತ್ರದ Cu_2+ ಆಯಾನುಗಳ ಫಲಿತಾಂಶವು ನಿರ್ಧಿಷ್ಟ ಪ್ರಮಾಣದಲ್ಲಿ ಕಣಗಳ ಸಂಖ್ಯೆ ಹೆಚ್ಚು ಪೇರಿಸಿರುವುದು ಕಂಡು ಬಂದಿತು. ರೇಣು ಕಣದ ಫೆರೈಟಗಳ ರಂಧ್ರಗಳನ್ನು ಸೂತ್ರ–1 ರಿಂದ ಕಂಡುಕೋಳ್ಳಲಾಯಿತು [6]. ಕೋಷ್ಟಕ–1 ರಲ್ಲಿ ನೀಡಿರುವಂತೆ, ಬಿಸ್ಮತ್ ಪ್ರಮಾಣ ಹೆಚ್ಚಾದಂತೆ, ಫೆರೈಟಗಳ ರಂಧ್ರಗಳು ಕಡಿಮೆಯಾಗಿರುವುದಕ್ಕೆ ಕಾರಣವೇನೆಂದರೆ ಫೆರೈಟ ಧಾನ್ಯಗಳ ಬೆಳವಣಿಗೆಯೇ ಆಗಿದೆ. ಈ ಫೆರೈಟನ ಮಾದರಿಯಲ್ಲಿ ಹೆಚ್ಚಿನ ಪ್ರಮಾಣದ ರಂಧ್ರಗಳು ಕಂಡು ಬಂದಿದ್ದು 21.5% ವು $CuFe_2O_4$ ನಲ್ಲಿ ಮಾತ್ರ. ಇದರ ನಂತರ, ಬಿಸ್ಮತ್ ಪ್ರಮಾಣ ಹೆಚ್ಚಾದಂತೆ ರಂಧ್ರಗಳ ಗಾತ್ರವು ಕೂಡ ಕಡಿಮೆಯಾಗಿರುವುದು ಕಂಡು ಬಂದಿತು.

ಕೋಷ್ಟಕ–1. X ಪ್ರಮಾಣ, ಸರಾಸರಿ ಕಣಗಳ ಗಾತ್ರ(nm), ಜಾಲರಿ ಸ್ಥಿರಾಂಕ(nm), %ರಂಧ್ರಗಳು.

X ಪ್ರಮಾಣ	ಸರಾಸರಿ ಕಣಗಳ ಗಾತ್ರ(nm)	ಜಾಲರಿ ಸ್ಥಿರಾಂಕ (nm)	%ರಂಧ್ರಗಳು
0.0	16.82	0.832	21.5
0.1	18.04	0.794	19.8
0.2	21.56	0.815	19.3
0.3	24.51	0.842	17.8
0.4	29.65	0.855	15.6
0.5	37.16	0.879	13.5

ಚಿತ್ರ–2 ಮತ್ತು 3 ರಲ್ಲಿ ತೋರಿಸಿದಂತೆ, ಕಂಪನಾಂಕ ಆಧಾರಿತ ವಿದ್ಯುತ್ ಪ್ರೇರಕ ಸ್ಥಿರಾಂಕ ಮತ್ತು ವಿದ್ಯುತ್ ಪ್ರೇರಕತ್ವದ ರಾಷವು ಬಿಸ್ಮತ್ ಮಿಶ್ರಿತ ತಾಮ್ರದ ರೇಣು ಗಾತ್ರದ ಫೆರೈಟಗಳ ವಿವಿಧ ಕಂಪನಾಂಕವನ್ನು ತೋರಿಸುತ್ತದೆ. ಬಿಸ್ಮತ್ ಪ್ರಮಾಣ ಹೆಚ್ಚಾದಂತೆ ವಿದ್ಯುತ್ ಪ್ರೇರಕ ಸ್ಥಿರಾಂಕ ಮತ್ತು ವಿದ್ಯುತ್ ಪ್ರೇರಕತ್ವದ ರಾಷದ ಪ್ರಮಾಣವು ಕಡಿಮೆಯಾಗಿರುವುದು ಕಂಡುಬಂದಿತು. ಇದು ಸಾಮಾನ್ಯ ವಿದ್ಯುತ್ ಪ್ರೇರಕತ್ವದ ಪ್ರಸರಣ ವರ್ತನೆಯನ್ನು ತೋರಿಸುತ್ತದೆ.



ಚಿತ್ರ-2. ಬಿಸ್ಮತ್ ಮಿಶ್ರಿತ ತಾಮ್ರದ ರೇಣು ಗಾತ್ರದ ಫೆರೈಟಗಳ ವಿದ್ಯುತ್ ಪ್ರೇರಕ ಸ್ಥಿರಾಂಕದ ವಿವಿಧ ಆವರ್ತನ

ಸಾಮಾನ್ಯವಾಗಿ, ಕಡಿಮೆ ಆವರ್ತನದಲ್ಲಿ (kHz ಎಲ್ಲೆಯಲ್ಲಿ) ವಿದ್ಯುತ್ ಪ್ರೇರಕ ಸ್ಥಿರಾಂಕವು ತೀವ್ರವಾಗಿ ಕಡಿಮೆಯಾಗುತ್ತಾ ಬಂದಿದೆ. ನಂತರ ವಿದ್ಯುತ್ ಪ್ರೇರಕ ಸ್ಥಿರಾಂಕವು ನಿರಂತರ ರೂಪದಲ್ಲಿ ಉಳಿದಿದೆ (MHz ಎಲ್ಲೆಯಲ್ಲಿ). ಆದ್ದರಿಂದ, ಈ ಬಿಸ್ಮತ್ ಮಿಶ್ರಿತ ತಾಮ್ರದ ರೇಣು ಗಾತ್ರದ ಫೆರೈಟಗಳು ಒಳ್ಳೆಯ ವಿದ್ಯುತ್ ಪ್ರೇರಕತ್ವದ ವಸ್ತುಗಳಾಗಿವೆ [7]. ಇಲ್ಲಿ ಕಂಪನಾಂಕ ಹೆಚ್ಚಾದಂತೆ ವಿದ್ಯುತ್ ಪ್ರೇರಕ ಸ್ಥಿರಾಂಕವು ಕಡಿಮೆಯಾಗಿದೆ. ಏಕೆಂದರೆ ಯಾವಾಗ ಅನ್ವಯಿಕ ವಿದ್ಯುತ್ ಹೆಚ್ಚಿನ ಕಂಪನಾಂಕದಲ್ಲಿ ಪ್ರಸಾರವಾಗುತ್ತದೆಯೋ ಆವಾಗ ದ್ವಿದೃವೀಯ ದ್ರವೀಕರಣವು ಕಡಿಮೆಯಾಗುತ್ತದೆ.



ಚಿತ್ರ-3. ಬಿಸ್ಮತ್ ಮಿಶ್ರಿತ ತಾಮ್ರದ ರೇಣು ಗಾತ್ರದ ಫೆರೈಟಗಳ ವಿದ್ಯುತ್ ಪ್ರೇರಕತ್ವದ ರಾಷದ ವಿವಿಧ ಕಂಪನಾಂಕ.

ಬೇರೆ ಪದಗಳಲ್ಲಿ ಹೇಳುವುದಾದರೆ, ಅನ್ವಯಿಕ ವ್ಯಾಪ್ತಿಯ ಕೆಲವು ಕಂಪನಾಂಕ ಮೀರಿದಾಗ, ಎಲೆಕ್ಟ್ರಾನುಗಳ ವಿನಮಯವು ಪರ್ಯಾಯ ಕ್ಷೇತ್ರದಲ್ಲಿ ಅನುಗುಣವಾಗಿರುವುದಿಲ್ಲ. ಹೆಚ್ಚಿನ ಮೌಲ್ಯದ ವಿದ್ಯುತ್ ಪ್ರೇರಕ ಸ್ಥಿರಾಂಕವು ಕಡಿಮೆ ಕಂಪನಾಂಕ ಪ್ರದೇಶದಲ್ಲಿರುವುದಕ್ಕೆ ಕಾರಣ ಈಜ2+ ಆಯಾನುಗಳ ವರ್ಚಸ್ಸು, ಆಮ್ಲಜನಕದ ಖಾಲಿ ಜಾಗ, ಫೆರೈಟ ಧಾನ್ಯದ ಮೇಲ್ಮೈ ಪ್ರದೇಶದಲ್ಲಿನ ದೋಷಗಳು, ಇತ್ಯಾದಿ [12]. ಹಾಗೆಯೇ, ಕಂಪನಾಂಕ ಹೆಚ್ಚಾದಂತೆ, ವಿದ್ಯುತ್ ಪ್ರೇರಕ ಸ್ಥಿರಾಂಕ ಕಡಿಮೆಯಾಗಿರುವುದಕ್ಕೆ ಕಾರಣವೇನೆಂದರೆ ಧೃವೀಕರಣ ಯಾಗುವಿಕೆಯಲ್ಲಿನ ಕೊಡುಗೆ ಯಾವುದೇ ಜಾತಿಯ ಹೆಚ್ಚಿನ ಕಂಪನಾಂಕಗಳಲ್ಲಿ ಅನ್ವಯಿಕದ ಹಿಂದೆ ಮಂದಗತಿಯು ತೋರಿಸಲು ಕಂಡುಬರುತ್ತದೆ. ಜೊತೆಗೆ, ಕಂಪನಾಂಕ ಹೆಚ್ಚಾದಂತೆ ಆವರ್ತಿತ ವಾಹಕತೆಯ ಬಿಸ್ಮತ್ ಮಿಶ್ರಿತ ತಾಮ್ರದ ಫೆರೈಟಗಳು ಹೆಚ್ಚಾಗಿರುವುದನ್ನು ಚಿತ್ರ-4 ರಲ್ಲಿ ತೋರಿಸಲಾಗಿದೆ. ಈ ಆವರ್ತಿತ ವಾಹಕತೆಯ ನಡವಳಿಕೆಯನ್ನು Fe^{2+} ಮತ್ತು Fe^{3+} ಆಯಾನುಗಳ (n-ಪ್ರಕಾರ) ನಡುವಿನ ಎಲೆಕ್ಟ್ರಾನುಗಳ ಜಿಗಿತದ ಸಹಾಯದಿಂದ ವಿವರಿಸಲಾಯಿತು. ಸಾಮಾನ್ಯವಾಗಿ, ಕಂಪನಾಂಕ ಹೆಚ್ಚಾದಂತೆ ಆವರ್ತಿತ ವಾಹಕತೆಯು ಹೆಚ್ಚಾಗಿರುವುದಕ್ಕೆ ಕಾರಣ ಮ್ಯಾಕ್ಸವೇಲ್-ವ್ಯಾಗ್ನರ್‌ನ ದೃಶ್ಯತ್ವ ಸಿದ್ಧಾಂತೀಯ ಸಿದ್ಧಾಂತ [8, 9] ಮತ್ತು ಇದು ಕೂಪ್ಸ್ ಮಾದರಿಗೆ ಹೊಂದುತ್ತದೆ [10]. ಫೆರೈಟ ಧಾನ್ಯಗಳ ಗಡಿ ಅಥವಾ ವಿದ್ಯುತ್ ಪ್ರೇರಕತ್ವದ ಪದರುಗಳು ಕಡಿಮೆ ಕಂಪನಾಂಕದಲ್ಲಿ ಅತೀ ಹೆಚ್ಚು ಸಕ್ರೀಯವಾಗಿವೆ. ಆದ್ದರಿಂದ, Fe^{2+} ಮತ್ತು Fe^{3+} ನ ಕಂಪನಾಂಕ ಜಿಗಿತವು ಕಡಿಮೆ ಇರುವುದು ಕಂಡು ಬಂದಿತು. ಅನ್ವಯಿಕ ಕ್ಷೇತ್ರದ ಕಂಪನಾಂಕ ಮಾಹಿತಿಯು ಹೆಚ್ಚಾದಂತೆ ಫೆರೈಟ ಧಾನ್ಯದ ಗಡಿಭಾಗ ಹೆಚ್ಚು ಚುರುಕಾಗಿರುವುದು Fe^{2+} ಮತ್ತು Fe^{3+} ಅಯಾನುಗಳ ಎಲೆಕ್ಟ್ರಾನುಗಳ ಜಿಗಿದಾಡುವಿಕೆಯಿಂದ, ಅಲ್ಲಿಂದ ಕಂಪನಾಂಕದ ಜಿಗಿತ ಹೆಚ್ಚಾಗಿರುವುದು ಕಂಡು ಬಂದಿತು.



ಚಿತ್ರ-4. ವಿವಿಧ ಕಂಪನಾಂಕದ ಆವರ್ತಿತ ವಾಹಕತೆಯ ಬಿಸ್ಮತ್ ಮಿಶ್ರಿತ ತಾಮ್ರದ ಫೆರೈಟಗಳು

ಇಲ್ಲಿ ಕಂಪನಾಂಕ ಹೆಚ್ಚಾದಂತೆ ಆವರ್ತಿತ ವಾಹಕತೆಯೂ ಹೆಚ್ಚಾಗಿರುವುದನ್ನು ಕಂಡುಕೊಳ್ಳಲಾಯಿತು. ಕಂಪನಾಂಕ ಹೆಚ್ಚಾದಂತೆ ಆವರ್ತಿತ ವಾಹಕತೆಯೂ ನಿರಂತರ ಹೆಚ್ಚಾಗಿರುವುದು ಪೊಲ್ಯಾರಾನ್ ರೀತಿಯ ವಾಹಕತೆಯನ್ನು ಖಚಿತಪಡಿಸುತ್ತದೆ [11]. ಇದರಲ್ಲಿ ಎರಡು ಪ್ರಕಾರದ ಪೊಲ್ಯಾರಾನ್‌ಗಳು ವಾಹಕದ ಯಾಂತ್ರಿಕತೆಗೆ ಕಾರಣವೆಂದು ಹೇಳಬಹುದು. ಅವುಗಳೆಂದರೆ ಸಣ್ಣ ಮತ್ತು ದೊಡ್ಡ ಪೊಲ್ಯಾರಾನ್‌ಗಳು. ಸಣ್ಣ ಪೊಲ್ಯಾರಾನ್‌ಗಳ

ಮಾದರಿಯಲ್ಲಿ, ಕಂಪನಾಂಕ ಹೆಚ್ಚಾದಂತೆ ವಾಹಕದ ಪ್ರಮಾಣ ಹೆಚ್ಚಾಗುತ್ತದೆ. ಮತ್ತು ದೊಡ್ಡ ಪೊಲ್ಯಾರಾನ್‌ಗಳ ಮಾದರಿಯ ಸಂದರ್ಭದಲ್ಲಿ, ಕಂಪನಾಂಕ ಹೆಚ್ಚಾದಂತೆ ವಾಹಕದ ಪ್ರಮಾಣ ಕಡಿಮೆಯಾಗುತ್ತದೆ. ಆದ್ದರಿಂದ, ಬಿಸ್ಮತ್ ಮಿಶ್ರಿತ ರೇಣು ಗಾತ್ರದ ಫೆರೈಟಗಳು ಸಣ್ಣ ಪೊಲ್ಯಾರಾನ್‌ಗಳ ಮಾದರಿಯನ್ನು ತೋರಿಸಿಕೊಡುತ್ತವೆ.

ತಿರ್ಮಾನಗಳು :– ಬಿಸ್ಮತ್ ಮಿಶ್ರಿತ ರೇಣು ಗಾತ್ರದ ತಾಮ್ರದ ಫೆರೈಟಗಳನ್ನು ಸರ್‌ಕರ ದ್ರಾವಣದ ವಿಧಾನದಿಂದ ಯಶಸ್ವಿಯಾಗಿ ಸಂಯೋಜಿಸಿ ಅದರ ಜೊತೆಗೆ ಘನ ಸ್ಪಿನೇಲ್ ರಚನೆ ಮತ್ತು ಗುಂಪಿನ Fd_{3m}-Oh^7 ಸ್ಥಳಾವಕಾಶವನ್ನು ಹೊಂದಿದೆ ಎಂದು ಅರಿಯಲಾಯಿತು. ರೇಣು ಗಾತ್ರದ ಫೆರೈಟಗಳ ರಚನಾತ್ಮಕ ನಿಯತಾಂಕಗಳನ್ನು XRD ಸಹಾಯದಿಂದ ಅರಿತುಕೊಳ್ಳಲಾಯಿತು; ಜಾಲಾಂಧರ ಸ್ಥಿರಾಂಕ, ಅಂತರ್ ಸಮತಲೀಯ ದೂರ, ಮಿಲ್ಲರ್ ಸೂಚ್ಯಂಕಗಳು ಮತ್ತು ಕಣಗಳ ಗಾತ್ರವನ್ನು ಯಶಸ್ವಿಯಾಗಿ ಕಂಡುಹಿಡಿಯಲಾಯಿತು. ಕಂಪನಾಂಕ ಹೆಚ್ಚಾದಂತೆ ವಿದ್ಯುತ್ ಪ್ರೇರಕ ಸ್ಥಿರಾಂಕ ಮತ್ತು ವಿದ್ಯುತ್ ಪ್ರೇರಕತ್ವದ ರಾಷವು ಹೆಚ್ಚಾಗಿರುವುದು ವಿದ್ಯುತ್ ಪ್ರೇರಕತ್ವದ ಪ್ರಸರಣ ವರ್ತನೆಯನ್ನು ತೋರಿಸಿತ್ತದೆ. ಅದೇ ರೀತಿ, ಕಂಪನಾಂಕ ಹೆಚ್ಚಾದಂತೆ ಆವರ್ತಿತ ವಾಹಕತೆಯು ಕೂಡ ಹೆಚ್ಚಾಗಿರುವುದು ರೇಣು ಗಾತ್ರದ ಫೆರೈಟಗಳಲ್ಲಿ ಕಂಡುಬಂದಿತು. ಅಲ್ಲದೇ, ಇದು ಸಣ್ಣ ಪೊಲ್ಯಾರಾನ್ ರೀತಿಯ ಎಲೆಕ್ಟಾನುಗಳ ವಾಹಕತೆಗೆ ಕಾರಣವೆಂದು ಹೇಳಬುಹುದು.

ಕೃತಜ್ಞತೆಗಳು :– ಪೂರ್ಣ ಪ್ರಬಂಧವನ್ನು ಇಂಗ್ಲೀಷ ಭಾಷೆಯಿಂದ ಕನ್ನಡ ಭಾಷೆಗೆ ಅನುವಾದ ಮಾಡಲು ಸಹಕರಿಸಿದ ಮತ್ತು ಪ್ರಬಂಧಕ್ಕೆ ಸಂಬಂದಿಸಿದ ಸಲಹೆಗಳನ್ನು ನೀಡಿದ ಪ್ರೊ. ಸಿ. ಎಸ್. ಅನೀತಕುಮಾರ ಅವರಿಗೆ ಈ ಪೂರ್ಣ ಪ್ರಬಂಧದ ಎಲ್ಲ ಲೇಖಕರು ಕೃತಜ್ಞತೆಗಳನ್ನು ಸಲ್ಲಿಸುತ್ತೆವೆ.

ಉಲ್ಲೇಖಗಳು

[1] ಡು. ಎಕ್ಸ್, ಸಾಯ್. ಎಸ್, ಮಾಸ್ಲೊವ್. ಡಿ. ಎಲ್ ಮತ್ತು ಹೆಬಾರ್ಡ ಎ. ಎಫ್. ಫಿಜಿಕ್ಸ್. ರೀವಿವ್ ಲೇಟರ್ಸ್. 94(2005) 166601.

[2] ಹೆಚ್. ಕಾವಸ್, ಎನ್. ಕಸಪೊಗ್ಲು, ಎ.ಬಾಯ್‌ಕಲ್, ವಾಯ್. ಕೊಸಿಯೊಗ್ಲು, ಕೆಮೀಕಲ್ ಪೆಪರ್ಸ್. 63(4) (2009) 450.

[3] ಚೆನ್. ಹೆಚ್. ವಾಯ್, ವೂ. ಎಲ್, ರೇನ್. ಸಿ, ಲುವೋ. ಕ್ಯೂ. ಝೀಡ್, ಜರ್ನಲ್ ಆಫ್ ಪಾವರ್ ಸೋರ್ಸ. 95 (2001) 191.

[4] ಎಮ್. ಮೊಹಪಾತ್ರ, ಸಿ. ಉಪಾದ್ಯಾಯ್, ಎಸ್. ಆನಂದ್, ಜರ್ನಲ್ ಆಫ್ ಮ್ಯಾಗ್ನೆ. ಮ್ಯಾಗ್ನೆ. ಮಟಿರಿಯಲ್ಸ್. 295, (2005) 44.

[5] ಆರ್. ಅರುಲ್‌ಮುರುಗನ್, ಜಿ. ವೈದ್ಯನಾಥನ್, ಎಸ್. ಸೆಂಥಿಲ್‌ನಾಥನ್, ಬಿ. ಜಯದೇವನ್, ಜರ್ನಲ್ ಆಫ್ ಮ್ಯಾಗ್ನೆ. ಮ್ಯಾಗ್ನೆ. ಮಟಿರಿಯಲ್ಸ್. 298 (2006) 83.

[6] ಪಿ. ಪ್ರಿಯದರ್ಶಿನಿ, ಎ. ಪ್ರದೀಪ, ಪಿ. ಸಾಂಬಶಿವರಾವ್, ಜಿ. ಚಂದ್ರಶೇಖರನ್, ಜರ್ನಲ್ ಆಫ್ ಮಟಿರಿಯಲ್ಸ್ ಕೇಮಿಸ್ಟ್ರಿ. ಫಿಜಿಕ್ಸ್. 116 (2009) 207.

[7] ಝೋರಿಕಾ. ಝೀಡ್. ಎಲ್, ಸೇಡೊಮಿರ್ ಜೆ, ಡಿ. ಎಲ್. ಸೆಕುಲಿಕ್, ಮಟಿರಿಯಲ್ಸ್ ರಿಸರ್ಚ ಬುಲೆಟಿನ್. 48 (2013) 4368.

[8] ಜೆ. ಸಿ. ಮ್ಯಾಕ್ಸವೆಲ್, ಎಲೆಕ್ಟ್ರಿಸಿಟಿ ಮತ್ತು ಮ್ಯಾಗ್ನೇಟಿಜಮ್, ಆಕ್ಸಫರ್ಡ ಯುನಿವರ್ಸಿಟಿ ಪ್ರೆಸ್, ನ್ಯೂಯಾರ್ಕ, (1973) 88.

[9] ಕೆ. ಡಬ್ಲೂ. ವ್ಯಾಗ್ನರ್, ಆರ್ಕ. ಎಲೆಕ್ಟ್ರೋಟೆಕ್. 2 (1914) 371.

[10] ಸಿ. ಜಿ. ಕೂಪ್ಸ್, ಫಿಜಿಕಲ್ ರೀವಿವ್ಸ್. 83 (1951) 121.

[11] ಪಿ. ಶಿವಕುಮಾರ್, ಆರ್. ರಮೇಶ್, ಎ. ರಮಾನಂದ್, ಜರ್ನಲ್ ಆಫ್ ಅಲಾಯ್ಸ್ ಮತ್ತು ಕಂಪೌಂಡ್ಸ್. 537 (2012) 203.

[12] ಪ್ರದೀಪ ಚವ್ಹಾಣ, ಎಲ್. ಆರ್. ನಾಯಕ್, ಎಂಟರ್‌ನ್ಯಾಷನಲ್ ಜರ್ನಲ್ ಆಫ್ ಇಂಜಿನಿಯರಿಂಗ್ ಮತ್ತು ಸೈಂಟಿಫಿಕ್ ರೀಸರ್ಚ. 6(1) (2016) 29.

ವಿಭಾಗ:–10

ಭರದ್ವಾಜೀಯಮ್

ವಾಸ್ತುನಿರ್ಮಾಣಶಾಸ್ತ್ರ, ಯಂತ್ರಶಾಸ್ತ್ರ, ವೈಮಾಂತರಿಕ್ಷಶಾಸ್ತ್ರ ಮತ್ತು ಸಾರಿಗೆ ವಿಜ್ಞಾನಗಳು

BHARADVAJEEYAM

Civil, Mechanical, Aerospace and Transportation Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಸ್ಮಾರ್ಟ್ ಸಿಟಿಯ (ಭವ್ಯಸುಂದರ ನಗರ) ಪರಿಕಲ್ಪನೆ: ಸಮಾಜದ ದೃಷ್ಟಿಯಲ್ಲಿ	ಮಾನಸ. ಎನ್ ವಿದ್ಯಾ. ಆರ್ ಡಾ. ಹಾ. ಮಾ. ನಾಗಾರ್ಜುನ ಡಾ ವಿದ್ಯಾಶಂಕರ್	262 – 264

ಸ್ಮಾರ್ಟ್ ಸಿಟಿಯ (ಭವ್ಯಸುಂದರ ನಗರ) ಪರಿಕಲ್ಪನೆ: ಸಮಾಜದ ದೃಷ್ಟಿಯಲ್ಲಿ

ಮಾನಸ. ಎನ್, ವಿದ್ಯಾ. ಆರ್, ಡಾ. ಹಾ. ಮಾ. ನಾಗಾರ್ಜುನ ಮತ್ತು ಡಾ ವಿದ್ಯಾಶಂಕರ್
ಪ್ರಥಮ ಸೆಮಿಸ್ಟರ್. ಬಿ.ಸಿ.ಎ, ಪ್ರಾಧ್ಯಪಕರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ

ಸ್ಮಾರ್ಟ ಸಿಟಿಯ ಪರಿಕಲ್ಪನೆ: ಸಮುದಾಯ ದತ್ತವಾಗಿ ಜನರ ಅಗತ್ಯತೆಗಳನ್ನು ಪೂರೈಸುವ, ಮೂಲ ಭೂತ ಸೌಕರ್ಯಗಳನ್ನು ಹೊಂದಿರುವ ನಗರವನ್ನು ಸ್ಮಾರ್ಟ್ ಸಿಟಿಯೆಂದು ಪರಿಕಲ್ಪಿಸ ಬಹುದಾಗಿದೆ.

* **"ಒಂದು ಭವ್ಯ ಸುಂದರ ನಗರ"** ನಿರ್ಮಾಣದ ಪರಿಕಲ್ಪನೆ ಯು ಇಂದಿನ ನವ ಪೀಳಗೆಗೆ ಒಂದು ವರದಾನ, ಅದನ್ನು ಆಂಗ್ಲಾಭಾಷೆಯಲ್ಲಿ "ಸ್ಮಾರ್ಟ್ ಸಿಟಿ" ಎಂದೇ ಸಂಭೋದಿಸಲಾಗುತ್ತದೆ. ಈ ಸ್ಮಾರ್ಟ್ ಸಿಟಿಯು ಒಂದು ಆಧುನಿಕ ಜಗತ್ತು. ನಮ್ಮ ನಡಿವಿನ ನಗರವನ್ನು ಭವ್ಯ ಸುಂದರಾಗಿ, ಆತ್ಯಾಕರ್ಷಣೆಯಿಂದ ಬೆರಗುಗೊಳಿಸಿ ನಮ್ಮ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಒಂದು ಉತ್ಕೃಷ್ಟವಾದ ಪರಿಕಲ್ಪನೆ. "ಸಿಟಿಯ ಅಂದೆ ಹೆಚ್ಚಿಸು, ಸ್ಮಾರ್ಟ್ ಸಿಟಿಯನ್ನು ಅಳವಡಿಸು" ಎಂಬುದು ಇಂದಿನ ಘೋಷಣಾ ವಾಕ್ಯ. ನಗರವನ್ನು ಮೂಲಭೂತ ಸೌಕರ್ಯಗಳನ್ನು ಕ್ರೂಡೀಕರಿಸಿಕೊಂಡು ಭವ್ಯಸುಂದರ ನಗರವನ್ನಾಗಿ ಮಾರ್ಪಾಟು ಮಾಡಿದಲ್ಲಿ ಅದು ದೇಶ, ವಿದೇಶಗಳಲ್ಲಿ ಆಕರ್ಷಿಸುವುದೇ ಅಲ್ಲದೇ ಇಂದಿನ ಯುವ ಪೀಳಗೆಗೆ ಉತ್ತಮ ಅವಕಾಶಗಳನ್ನು ಒದಗಿಸುತ್ತದೆ ಎಂದು ಆಶಿಸಬಹುದಾಗಿದೆ.

*ವಿಷಯ: "ಸ್ಮಾರ್ಟ್ ಸಿಟಿ"

ಈ ಕೆಳಕಂಡ ಅಂಶಗಳ ಮೂಲಕ ವ್ಯಾಖ್ಯಾನಿಸ ಬಹುದಾಗಿರುತ್ತದೆ. ಅವುಗಳೆಂದರೆ,

ಸ್ಮಾರ್ಟ್ ಪರಿಸರ, ಸ್ಮಾರ್ಟ್ ನಾಗರಿಕ, ಸ್ಮಾರ್ಟ್ ಆರೋಗ್ಯ, ಸ್ಮಾರ್ಟ್ ಆಡಳಿತ, ಸ್ಮಾರ್ಟ್ ಶಿಕ್ಷಣ, ಸ್ಮಾರ್ಟ್ ತಂತ್ರಜ್ಞಾನ, ಸ್ಮಾರ್ಟ್ ನೀರಿನ ವ್ಯವಸ್ಥೆ

* **ಸ್ಮಾರ್ಟ್ ಪರಿಸರ**:– ಪರಿಸರ ಮಾನವನ ಅವಿಭಾಜ್ಯ ಅಂಬ, ಪರಿಸರ ಹಾನಿಯಾದಲ್ಲಿ ಮಾನವನ ಅಸ್ತಿತ್ವ ಇರುವುದಿಲ್ಲ. ಪರಿಸರ ಸಂರಕ್ಷಣೆಗೆ ಗಿಡ, ಮರಗಳು ಅತ್ಯಾವಶ್ಯಕ, ಮನುಷ್ಯನ ಅಸ್ತಿತ್ವಕ್ಕೆ ಆಮ್ಲಜನಕ ಮಹತ್ವವಾದುದು ಇಂತಹ ಜೀವವಾಹಿನಿಯನ್ನು ಒದಗಿಸುವಂತಹದ್ದು, ಮರ ಗಿಡಗಳು, ಆಮ್ಲಜನಕವನ್ನು ಹೆಚ್ಚು ಹೊರಸೂಸುವ ಮರಗಿಡಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ಬೆಳೆಸುವುದು ಹಾಗೂ ನಿರ್ದಿಷ್ಟ ಸಮುದಾಯಕ್ಕೊಂದು, ಅಬಾಲ ವೃದ್ಧರಿಗೂ ಅಗತ್ಯವಾದ ಉದ್ಯಾನವನ್ನು ಸ್ಥಾಪಿಸುವುದು ಆ ಮೂಲಕ ಆರೋಗ್ಯ ವೃದ್ಧಿಸುವುದು ಸ್ಮಾರ್ಟ್‌ಸಿಟಿಯಿಂದ ಮಾತ್ರ ಸಾಧ್ಯ.

* **ಸ್ಮಾರ್ಟ್ ನಾಗರಿಕ**: " ನಾಗರಿಕ ನಿಲ್ಲದ ನಗರವಿಲ್ಲ ಎಂಬ ಮಾತು ಎಷ್ಟು ಸತ್ಯವೋ ಹಾಗೆ ನಗರವಿಲ್ಲದೆ ಸ್ಮಾರ್ಟ್‌ಸಿಟಿಯ ಕಲ್ಪನೆ ಎಲ್ಲ. ನಗರಗಳಲ್ಲಿ ಯುವಕರಿಗೆ ಹಾಗೂ ಯುವತಿಯರಿಗೆ ಉದ್ಯೋಗದ ಉತ್ತಮಅವಕಾಶಗಳನ್ನು ಹೆಚ್ಚು ಹೆಚ್ಚು ಕಲ್ಪಿಸಬೇಕು. ಜನರು ಕಾರ್ಯಪ್ರವೃತ್ತರಾಗಬೇಕು ಸೋಮಾರಿಗಳಾಗಬಾರದು, ಇಂದಿನ ಯುವಜನಾಂಗ ಕೆಲಸವಿಲ್ಲದೆ ವ್ಯರ್ಥವಾಗಿ ಕಾಲಕಳೆಯುವ ಪ್ರಸಂಗ ಒದಗಿದೆ. ಒಬ್ಬರು ದುಡಿದು ಮನೆ ಮಂದಿ ಕೂತು ತಿನ್ನುವ ಪ್ರಸಂಗ ಒದಗಬಾರದು. ಸಂಸ್ಕೃತಿಯನ್ನು ಅಳವಡಿಸಿಕೊಂಡು ಆಧುನಿಕ ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಂಡು ಭೌದ್ಧಿಕತೆಯನ್ನು ವಿಸ್ತರಿಸಿಕೊಂಡು ಬದುಕುವುದೇ ನಾಗರಿಕನ ಆದ್ಯ ಕರ್ತವ್ಯವಾಗಿದೆ. ಸ್ಮಾರ್ಟ್ ಸಿಟಿ ಪರಿಕಲ್ಪನೆಯಲ್ಲಿ ನಾಗರಿಕನಿಗೆ ಎಲ್ಲಾ ರೀತಿಯ ಸೌಲಭ್ಯಗಳು ದೊರೆಯುವುದರಿಂದ ಆಧುನಿಕ ಜಗತ್ತಿನಲ್ಲಿ ಸಮಾಜದ ಮುಖ್ಯ ವಾಹಿನಿಗೆ ತನ್ನ ಅಗತ್ಯತೆಗಳನ್ನು ತೆರೆದುಕೊಳ್ಳಲು ಸಾಧ್ಯವಾಗುತ್ತದೆ.

ಉದಾಹರಣೆ: ಉನ್ನತ ವ್ಯಾಸಂಗವನ್ನು ಕೈಗೊಳ್ಳಲು ಸದಾವಕಾಶವನ್ನು ಕಲ್ಪಿಸಿ ಪದವಿ, ಸ್ನಾತಕೋತ್ತರ ಪದವಿ, ತಾಂತ್ರಿಕ ಪದವಿ, ವೈದ್ಯಕೀಯ ಪದವಿ ಎಲ್ಲವನ್ನು ಒಂದೇ

ಸೂರಿನಡಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

*** ಸ್ಮಾರ್ಟ್ ಆರೋಗ್ಯ**:– "ಆರೋಗ್ಯವೇ ಭಾಗ್ಯ" ನಾವು 21ನೇ ಶತಮಾನಕ್ಕೆ ಕಾಲಿಟ್ಟರೂ ಸಹ ಉತ್ತಮ ಆರೋಗ್ಯ ಪಡೆಯುವುದು ದುಸ್ತರವಾಗಿದೆ. ಹಿಂದೆ "ಹುಟ್ಟು ಆಕಸ್ಮಿಕ ಸಾವು ಖಚಿತ" ಎನ್ನುತ್ತಿದ್ದರು ಈಗ "ಹುಟ್ಟು ಖಚಿತ ಸಾವು ಆಕಸ್ಮಿಕ" ಎನ್ನುವಂತಾಗಿದೆ. ಯಾವುದೇ ದೊಡ್ಡ ಸಮಸ್ಯೆಗೆ ದೂರದ ನಗರಗಳಿಗೆ ಹೋಗಬೇಕಾಗಿದೆ. ತುರ್ತು ಘಟಕದ ವ್ಯವಸ್ಥೆಯು ಇಲ್ಲ ಪ್ರಯಾಣಿಸುವ ಸಮಯದಲ್ಲಿಯೇ ಎಷ್ಟೋ ಜನ ಅಸುನೀಗಿರುತ್ತಾರೆ. ಇಂತಹ ದುರವಸ್ಥೆ ಉಂಟಾಗದಂತೆ ಸ್ಮಾರ್ಟ್ ಸಿಟಿಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳಿರುವ ಆಸ್ಪತ್ರೆಗಳನ್ನು ನಿರ್ಮಾಣ ಮಾಡಿ ತುರ್ತು ವ್ಯವಸ್ಥೆ ದೊರಕುವಂತೆ ಸೌಲಭ್ಯ ಒದಗಿಸಬೇಕು. ಚಿಕ್ಕ ಸಮಸ್ಯೆಯಿಂದ ಗಂಭೀರ ಹಾಗೂ ತೀವ್ರವಾದ ಸಮಸ್ಯೆಗಳಿಗೆ ಪರಿಹಾರ ದೊರಕುವಂತಹ ಸೌಲಭ್ಯ ಲಭ್ಯವಾಗುವಂತೆ ಮಾಡಬೇಕು.

ಸದೃಡ ನಾಗರಿಕನಾಗಿರಲು ಆರೋಗ್ಯ ತುಂಬ ಮುಖ್ಯವಾಗಿದೆ. ಇಂತಹ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಪೂರಕವಾದ ವೈದ್ಯಕೀಯ ಸವಲತ್ತುಗಳು ಮನೆಯ ಬಾಗಿಲಲ್ಲೇ ದೊರೆಯಬೇಕೆಂದರೆ, ಅದು ಸ್ಮಾರ್ಟ್ ಸಿಟಿಯಿಂದ ಮಾತ್ರ ಸಾಧ್ಯ.



*** ಸ್ಮಾರ್ಟ್ ಆಡಳಿತ**: "ದೇಶದ ಅಳಿವು ಉಳಿವು ಆಡಳಿತದ ಮೇಲಿದೆ"– ಗಾಂದೀಜಿ ರಾಮರಾಜ್ಯದ ಕನಸು ಕಂಡಿದ್ದರು, ಒಂದು ದೇಶ ಪ್ರಗತಿಪಥದತ್ತ ಸಾಗಬೇಕಾದರೆ ಉತ್ತಮ ಆಡಳಿತ ವ್ಯವಸ್ಥೆ ಇರಬೇಕು. ನಮ್ಮದು ಹಳ್ಳಿಗಳ ನಾಡು, ಹಳ್ಳಿಯಿಂದ ದಿಲ್ಲಿಗೆ ಎಂಬ ನಾಣ್ನುಡಿ ಇದೆ. ನಮ್ಮ ದೇಸದ ಚುಕ್ಕಾಣಿ ಹಿಡಿಯುವ ನಾಯಕರು ವಿದ್ಯಾವಂತರಾಗಿರಬೇಕು. ಉತ್ತಮ ಪರಿಜ್ಞಾನವಿರಬೇಕು ಉತ್ತಮ ನಾಯಕನನ್ನು ಚುನಾಯಿಸುವುದು ನಾಗರಿಕರಾದ ನಮ್ಮ ಆದ್ಯಕರ್ತವ್ಯ. ಹಳ್ಳಿಗಾಡಿನಿಂದ ಹಿಡಿದು ನಗರ ಪಟ್ಟಣದವರೆಗೆ ಮೂಲಭೂತ ಸೌಕರ್ಯಗಳ ಕೊರತೆಯಾಗದಂತೆ ಸಮತೋಲನವನ್ನು ಕಾಯ್ದುಕೊಂಡು ಹೋಗುವ ಜವಾಬ್ದಾರಿ ಆಡಳಿತದ ಚುಕ್ಕಾಣಿ ಹಿಡಿದ ಪ್ರಧಾನಿಯಂತಹ ಉನ್ನತ ಹುದ್ದೆಯನ್ನು ಅಲಂಕರಿಸುವ ನಾಯಕನ ಮೇಲಿದೆ. ಹಾಗಿದ್ದಲಿ ಮಾತ್ರ ಸ್ಮಾರ್ಟ್ ಸಿಟಿಯ ಕನಸು ನನಸಾಗುತ್ತದೆ. ಆಡಳಿತ ಮನುಷ್ಯನ ದೈನಂದಿನ ವ್ಯವಹಾರಕ್ಕೆ ಪೂರಕವಾದುದು. ದಿನನಿತ್ಯದ ಜೀವನಕ್ಕೆ ಕಚೇರಿಗಳ ಮೊರೆಹೋಗುವುದು ಸರ್ವೇ ಸಾಮಾನ್ಯ ಅಂತೆಯೇ ಒಂದೇ ವ್ಯವಸ್ಥೆಯಲಿ ಆಡಳಿತಕ್ಕೆ ಒಳಪಟ್ಟ ಎಲ್ಲಾ ಕಚೇರಿಗಳು ನಾಗರಿಕರಿಗೆ ಲಭ್ಯವಾಗುವುದು ಉತ್ತಮ.

*** ಸ್ಮಾರ್ಟ್ ಶಿಕ್ಷಣ**:– ಶಿಕ್ಷಣ ಸಮಾಜದ ಪ್ರತಿಯೊಬ್ಬ ಪ್ರಜೆಯ ಬೌದ್ಧಿಕ ಆರಿವಿಗೆ ಪೂರಕವಾದುದು, ಇದು ಕೇವಲ ಅರಿವಿಗಷ್ಟೆ ಅಲ್ಲದೇ ಉನ್ನತ ಜ್ಞಾನವನ್ನು ಸಂಪಾದಿಸಲು ಪ್ರತಿಯೊಬ್ಬ ನಾಗರಿಕನು ಉನ್ನತ ಪದವಿಯನ್ನು ಪಡೆಯಬೇಕೆಂಬುದು ಶಿಕ್ಷಣ ಕ್ಷೇತ್ರದ ಗುರಿಯಾಗಿದೆ. ಈ ಹಿನ್ನಲೆಯಲ್ಲಿ ಉನ್ನತ ಶಿಕ್ಷಣವು ಪ್ರತಿಯೊಬ್ಬ ನಾಗರಿಕನಿಗೂ ತಲುಪಬೇಕಾದರೆ ಎಲ್ಲಾ ರಂಗದ ವಿಷಯ ವಸ್ತುವಿನ ವಿಶ್ವವಿದ್ಯಾನಿಲಯದ ಸ್ಥಾಪನೆಯ ಅಗತ್ಯ. ಸ್ಮಾರ್ಟ್ ಸಿಟಿಯ ಉದ್ದೇಶವು ಆಗಿದೆ.

*** ಸ್ಮಾರ್ಟ್ ತಂತ್ರಜ್ಞಾನ:** "ತಂತ್ರಜ್ಞಾನ ಸ್ಮಾರ್ಟ್‌ಸಿಟಿಗೆ ಭೂಷಣ ವಿದ್ದಂತೆ" ಸ್ಮಾರ್ಟ್ ಸಿಟಿ ರಚಿಸಲು ತಂತ್ರಜ್ಞಾನದ ಬಳಕೆ ಅತ್ಯಾವಶ್ಯಕವಾಗಿದೆ. ಹೊಸ ಹೊಸ ತಂತ್ರಜ್ಞಾನದ ಬಳಕೆಯಿಂದ ನಾವು ಸಮಯವನ್ನು ಸದುಪಯೋಗ ಪಡಿಸಿಕೊಳ್ಳಬಹುದು, ಸಮಯ ಅತ್ಯಂತ ಮೌಲ್ಯವಾದುದು, ತಂತ್ರಜ್ಞಾನದ ಬಳಕೆಯಿಂದ ಅತ್ಯಂತ ವೇಗವಾಗಿ ಕಾರ್ಯವನ್ನು ಕಡಿಮೆ ಸಮಯದಲ್ಲಿ ಪೂರ್ಣಗೊಳಿಸಬಹುದಾಗಿದೆ. ಇಂದಿನ ಜಾಗತಿಕ ಪೈಪೋಟಿಯ ಸನ್ನಿವೇಶದಲ್ಲಿ ತಂತ್ರಜ್ಞಾನ ಬಹುಮುಖ್ಯ ಪಾತ್ರ ವಹಿಸುತ್ತದೆ. ಅದರಂತೆ ಕಂಪ್ಯೂಟರ್ ಬಳಕೆ, ವ್ಯವಸಾಯ ಇತ್ಯಾದಿಗಳಲ್ಲಿ ಟ್ರಾಕ್ಟರ್ ಹಾಗೂ ಇತರೆ ಯಂತ್ರಗಳ ಬಳಕೆ ಅದೆಷ್ಟು ಮಾನವ ದಿನಗಳನ್ನು ಮಿತವನ್ನಾಗಿಸಿದೆ. ಇದಕ್ಕೆ ಉದಾಹರಣೆ, ಜಪಾನ್, ತಂತ್ರಜ್ಞಾನದ ಬಳಕೆಯಿಂದ 2ನೇ ಮಹಾಯುದ್ಧ ನಂತರದಲ್ಲಿ ಉಂಟಾದ ದಯನೀಯ ಪರಿಸ್ಥಿತಿಯಿಂದ ಚೇತರಿಸಿ ಅತೀ ಶೀಘ್ರವಾಗಿ ಚೇರತಿಸಿಕೊಂಡು ಅಮೇರಿಕಕ್ಕೆ ಸವಾಲು ಹಾಕುವಮಟ್ಟಕ್ಕೆ ಬೆಳೆದಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ನಾವು ತಂತ್ರಜ್ಞಾನದ ಉತ್ಕೃಷ್ಠ ಬಳಕೆಯಿಂದ ದೇಶವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಬೇಕಾಗಿದೆ. ತಂತ್ರಜ್ಞಾನದಿಂದ ಆಧುನಿಕ ಜಗತ್ತಿಗೆ ಪೂರಕವಾದ ಮಾನವ ನಿರ್ಮಿತ ಎಲ್ಲಾ ಬಗೆಯ ಯಂತ್ರೋಪಕರಣಗಳು, ತಯಾರಿಕೆ ಮತ್ತು ಬಳಕೆಗೆ ಕೈಗಾರಿಕೋದ್ಯಮಗಳು ಸ್ಥಾಪಿತಗೊಳ್ಳಬೇಕು. ಇದು ಸ್ಮಾರ್ಟ್‌ಸಿಟಿಯ ಯೋಜನೆಯ ಫಲವಾಗಬೇಕು. ಕೈಗಾರಿಕೋದ್ಯಮಗಳನ್ನು ಸ್ಥಾಪನೆ ಮಾಡುವುದರಿಂದ ಉದ್ಯೋಗಗಳು ಸೃಷ್ಠಿಯಾಗುತ್ತದೆ ಇದರಿಂದ ಪ್ರತಿಯೊಬ್ಬರಿಗೆ ಉದ್ಯೋಗವಕಾಶಗಳು ದೊರಕುತ್ತವೆ.



*** ನೀರಿನ ವ್ಯವಸ್ಥೆ:**– "ನೀರಿದ್ದರೆ ಜೀವನ ಇಲ್ಲದಿದ್ದರೆ ಮರಣ" ಇಂತಹ ನೀರಿನ ಸಂರಕ್ಷಣೆ ನಮ್ಮೆಲರ ಆಧ್ಯಕರ್ತವ್ಯ, ಮುಂದುವರೆದ ನಗರಗಳಲ್ಲಿ ಕೈಗಾರಿಕೀರಣದಿಂದ ಹಾಗೂ ಜನ ಸಂಖ್ಯೆಯ ಒತ್ತಡದಿಂದ ನಾವು ಎಲ್ಲಾ ತ್ಯಾಜ್ಯ ಪದಾರ್ಥಗಳನ್ನು ನದಿ ನೀರಿಗೆ ಸೇರಿಸುವ ಪರಿಪಾಠ ಬೆಳೆದು ಬಂದಿದೆ.



ಉಪಸಂಹಾರ

* "ಪರಿಸರ ಸಂರಕ್ಷಣೆಯೇ ನಮ್ಮ ಆದ್ಯಗುರಿ" ಆದ್ದರಿಂದ "ಪರಿಸರ ಉಳಿಸಿ ಸ್ಮಾರ್ಟ್‌ಸಿಟಿ ಬೆಳೆಸಿ". ಸ್ಮಾರ್ಟ್ ಸಿಟಿ ಎಂಬುದು ಕೇವಲ ಕಲ್ಪನೆಯಾಗುಳಯದೇ ಇಂದಿನ ಪ್ರಪಂಚದ ಜಾಗತಿಕ ಪೈಪೋಟಿಯಲ್ಲಿ ನಾವು ಸನ್ನದ್ಧರಾಗಬೇಕು. ಸ್ಮಾರ್ಟ್‌ಸಿಟಿಯಂತಹ ಯೋಜನೆಗಳನ್ನು ಹಮ್ಮಿಕೊಂಡು ನಗರವನ್ನು ಭವ್ಯ ಸುಂದರ ನಗರವನ್ನಗಿಸಬೇಕು. ಆಗ ಮಾತ್ರ ಸ್ಮಾರ್ಟ್‌ಸಿಟಿಯ ಕನಸು ನನಸಾಗುತ್ತದೆ.

* "ಸ್ಮಾರ್ಟ್‌ಸಿಟಿಯ ಉಳಿವು ದೇಶದ ಉಳಿವು" – ನಮ್ಮ ದೇಶವು ಪ್ರಗತಿಪಥದತ್ತ ಸಾಗಬೇಕಾದರೆ ಸ್ಮಾರ್ಟ್ ಸಿಟಿಯಂತಹ ಕನಸು ನನಸಾಗಬೇಕು. ಆದ್ದರಿಂದ ಸ್ಮಾರ್ಟ್‌ಸಿಟಿಯನ್ನು ಬೆಳೆಸಿ ದೇಶವನ್ನು ಉಳಿಸಿ

* ಸ್ಮಾರ್ಟ್‌ಸಿಟಿ ನಾಗರಿಕ ಜೀವನಕ್ಕೆ ಅಭೂತಪೂರ್ವ ಬೆಲೆಯನ್ನು ಒದಗಿಸುವ ಆಶಯವನ್ನು ಹೊಂದಿರುವಂತಹದ್ದು. ಈ ಆಶಯದ ನೆಲೆಯಲ್ಲಿ ಸ್ಮಾರ್ಟ್‌ಸಿಟಿ ನಿರ್ಮಾಣವಾದರೆ. ಆಧುನಿಕ ಜಗತ್ತಿನಲ್ಲಿ ನಮ್ಮ ನಗರಗಳನ್ನು ಜಗದ್ವಿಖ್ಯಾತಗೊಳಿಸುವಲ್ಲಿ ಸಾರ್ಥಕವಾಗುತ್ತದೆ.

ವಿಭಾಗ:–12

ವರಾಹಮಿಹಿರಮ್

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಅಣುರೇಣುಮಾನ ತಂತ್ರಜ್ಞಾನ, ಆಹಾರ ತಂತ್ರಜ್ಞಾನ ಮತ್ತು ಅತೀತ ವಿಜ್ಞಾನಗಳು

VARAHAMIHIRAM

IT, BT, NT, FT and Frontier Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಜನತೆಯ ಆಹಾರ ಮತ್ತು ಪೋಷಣೆ ಜೀವನ ಗುನಮಟ್ಟದ ಮೇಲೆ ನೀರಾವರಿ ಹಾಗೂ ಆಹಾರ ತಂತ್ರಜ್ಞಾನದ ವೈಶಿಷ್ಟತೆ	ಡಾ ಅನಿತಾ ಹಂಜಿ	267 – 270
2.	ಮಾಹಿತಿ ತಂತ್ರಜ್ಞಾನ ಹಾಗೂ ಮೀನುಗಾರಿಕೆ ಮಾರುಕಟ್ಟೆ: ಒಂದು ಅಧ್ಯಯನ	ಪ್ರಸನ್ನ ಕುಮಾರ್. ಎಂ. ಜಿ ಡಾ॥ ವೈ. ಎಂ. ರಾಜು	271 – 272
3.	ಹ್ಯಾಕಿಂಗ್	ವಿದ್ಯಾಶಂಕರ ಎಂ.ಹೆಚ್ ವಿಕಾಸ್, ದೀಪಕ್	272 – 275
4.	ಪ್ರಾಚೀನ ಭಾರತೀಯರಿಗಿದ್ದ ಆಹಾರ ಪರಿಜ್ಞಾನ	ಹೆಚ್. ವಿ. ಕಾಶಿನಾಥಶಾಸ್ತ್ರಿ	275 – 276
5.	ಐದು ಪೆನ್ನುಗಳ ತಂತ್ರಾಂಶದ ಬಳಕೆಯ – ಒಂದು ನೋಟ	ಶ್ರೀಮತಿ. ಪದ್ಮಾವತಿ	277 – 278

ಜನತೆಯ ಆಹಾರ ಮತ್ತು ಪೋಷಣೆ ಜೀವನ ಗುನಮಟ್ಟದ ಮೇಲೆ ನೀರಾವರಿ ಹಾಗೂ ಆಹಾರ ತಂತ್ರಜ್ಞಾನದ ವೈಫಿಟ್ಟತೆ

ಡಾ ಅನಿತಾ ಹಂಜಿ ಪಿಎಚ್‌ಡಿ
ಪ್ರಾದ್ಯಾಪಕರು ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿಧ್ಯಾಲಯ ಧಾರವಾಡ

ಕರ್ನಾಟಕವಲ್ಲಿ ಬಹುಮುಖ್ಯವಾಗಿ ನೀರಾವರಿ ಯೋಜನೆಯು ಒಣ ಭೂಮಿಯನ್ನು ಹಸಿರು ಪಲವತ್ತತೆ ಹೆಚ್ಚಿಸಲು ಹಲವಾರು ನೀರಾವರಿ ಯೋಜನೆಗಳು ಉದ್ಭವಗೊಂಡವು. ಅವುಗಳಲ್ಲಿ ಕೃಷ್ಣರಾಜ ಸಾಗರ ಡ್ಯಾಮ ,ಶರಾವತಿ ,ಕಾಳಿ ನದಿ, ಹೇಮಾವತಿ ,ತುಂಗಭದ್ರಾ ಮತ್ತು ಕೃಷ್ಣಾ ಮೇಲದಂಡೆ ಯೋಜನೆಗಳು ಉತ್ತರ ಕರ್ನಾಟಕದಲ್ಲಿ ಉದ್ಭವವಾದವು. ಇದರ ಒಂದು ವಿಶಿಷ್ಟತೆ ಜನತೆಯ ಜೀವನ ಶೈಲಿ, ಗುಣಮಟ್ಟ ಪೋಷಣೆ ಹಾಗೂ ಆರೋಗ್ಯದ ಮೇಲೆ ಪರಿಣಾಮಕಾರಿ ಬದಲಾವಣೆ ಉಂಟು ಮಾಡಿತು .ಅಲ್ಲದೆ ವ್ಯವಸಾಯದಲ್ಲಿಪ್ರಮುಖ ಬದಲಾವಣೆ ,ಪಸಲು ಬೆಳೆಯಲ್ಲಿ ಬದಲಾವನೆ ಹಾಗೂ ಅಬಿವ್ರದ್ದಿ ಮೂಲಕ ಆರ್ಥಿಕ ಪರಿಸ್ಥಿತಿ ಗುಣಮಟ್ಟ ಅಬಿವ್ರದ್ದಿಯಾಗಲು ಕಾರಣವಾಗಿದೆ. ಉತ್ಪಾದನೆಗೆ ಅವಶ್ಯವಿರುವ ಸಾಮಗ್ರಿ, ಗಳು ಹಾಗೂ ತಂತ್ರಜ್ಞಾನದ ಮೂಲಕ ಉತ್ಪಾದನೆ ಹೆಚ್ಚಿಸಲಾಯಿತು. ಘಟಪ್ರಭಾ ಮಲಪ್ರಭಾ ನೀರಾವರಿ ಯೋಜನೆ ಜಿಲ್ಲೆಗಳಾದ ವಿಜಯಪುರ ಬೆಳಗಾಂವಿ ಜಿಲ್ಲೆಗಳನ್ನು ಸಂಶೋದನೆ ಸ್ಥಳ ಪರಿಗ ಸಿಸಿ ಉತ್ಪಾದನೆ. ಬೆಳೆ ವಿಧಾನ ,ಆಹಾರ ಸೇವನೆ ವಿಧಾನ ,ಪೋಷಣೆ .ಸಾಮಾಜಿಕ ,ಆರ್ಥಿಕ ಪರಿಸ್ಥಿತಿ ಮೇಲೆ ಘಟಪ್ರಭಾ ಮಲಪ್ರಭಾ ನೀರಾವರಿ ಯೋಜನೆಯಿಂದಾದ ಪರಿಣಾಮಗಳ ಅವಲೋಕನ ಅಧ್ಯಯನ ಕೈಕೊಳ್ಳಲಾಯಿತು. .ಈ ಯೋಜನೆಯಿಂದ ನಿಗದಿತ ಪೊಷ್ಠ ಹಿಡುವಳಿದಾರ, ನಿಗದಿತ ಸಣ್ಣ ಹಿಡುವಳಿದಾರರ ಆಹಾರ ಪಮೀಕ್ಷೆ,ಸಾಮಾಜಿಕ ಪರಿಸ್ಥಿತಿ ಆರ್ಥಿಕ ಪರಿಸ್ಥಿತಿ ತಂತ್ರಜ್ಞಾನ ಅಳವಡಿಕೆ ಕುರಿತು ಪಮೀಕ್ಷೆ ಮಾಡಲಾಯಿತು.

ಆಹಾರ ಧಾನ್ಯ ಉತ್ಪಾದನ ಜನಪರಿಮೈ ಮಾಹಿತಿ ಮೂಲಕಪ್ರತಿ ವ್ಯಕ್ತಿಗೆ ಆಹಾರ ಧಾನ್ಯ ಲಭ್ಯತೆ ತಾಳೆ ಮಾಡಲಾಯಿತು. ನೀರಾವರಿ ಹಾಗೂ ಹಾಗೂ ತಂತ್ರಜ್ಞಾನ ಇದು ಒಂದುಪರಿಣಾಮಕಾರಿ ಅಂಶ. ಆಹಾರ ಪೋಷಣೆ ,ಲಭ್ಯತೆ, ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿ ಮೇಲೆ ಧನಾತ್ಮಕ ಮತ್ತು ಋಣಾತ್ಮಕ ಪ್ರಭಾವ ಬೀರುತ್ತವೆ

ಪೀಠಿಕೆ: – ಕರ್ನಾಟಕದಲ್ಲಿ ಬಹುಮುಖ್ಯವಾಗಿನೀರಾವರಿ ಯೋಜನೆಯು ಒಣಭೂಮಿಯನ್ನು ಹಸಿರು ಪಲವತ್ತತೆ ಹೆಚ್ಚಿಸಲು ಹಲವಾರು ನೀರಾವರಿ ಯೋಜನೆಗಳು ಉದ್ಭವಗೊಂಡವು . ಅವುಗಳಲ್ಲಿ ಕೃಷ್ಣರಾಜ ಸಾಗರಡ್ಯಾಮ ಶರಾವತಿ ಹೇಮಾವತಿ ಕಾಳನದಿ ತುಂಗಬದ್ರಾ ಮತ್ತು ಕೃಷ್ಣಾಮೇಲದಂಡೆ ಯೋಜನೆಗಳು ಉತ್ತರ ಕರ್ನಾಟಕದ್ಲಿ ಉದ್ಭವವಾದವು. ಇದರ ಒಂದು ವಿಶಿಷ್ಟತೆ ಜನತೆಯ ಜೀವನ ಶೈಲಿ,ಗುಣಮಟ್ಟ , ಪೋಷಣೆ ಹಾಗೂ ಆರೋಗ್ಯದ ಮೇಲೆ ಪರಿಣಾಮಕಾರಿ ಬದಲಾವಣೆ ಉಂಟು ಮಾಡಿತು. ಅಲ್ಲದೆ, ವ್ಯವಸಾಯದಲ್ಲಿ ಪ್ರಮುಖ ಬದಲಾವಣೆ ಪಸಲು ಬೆಳೆಯಲ್ಲಿ ಬದಲಾವನೆ ಹಾಗೂ ಅಬಿವ್ರದ್ದಿ ಮೂಲಕ ಆರ್ಥಿಕ ಪರಿಸ್ಥಿತಿ ಗುಣಮಟ್ಟ ಅಬಿವ್ರದ್ದಿಯಾಗಲು ಕಾರಣವಾಗಿದೆ. ನೀರಾವರಿ ಹಾಗೂ ತಂತ್ರಜ್ಞಾನ ಇದು ಒಂದು ಪರಿಣಾಮಕಾರಿ ಅಂಶ.ಆಹಾರ ಪೋಷಣೆ ,ಲಬ್ಯತೆ, ಆಹಾರ ಮಾದರಿ ಹಾಗೂ ಆಹಾರ ಸೇವನೆ ಹಾಗೂ ಆಹಾರ ತಂತ್ರಜ್ಞಾನ ಇದು ಒಂದು ಪರಿಣಾಮಕಾರಿ ಅಂಶ ಆಹಾರ ಪೋಷಣೆ ಲಬ್ಯತೆ ಆಹಾರ ಸೇವನೆ ಹಾಗೂ ಆರೋಗ್ಯದ ಮೇಲೆ ಧನಾತ್ಮಕ ಮತ್ತು ಋಣಾತ್ಮಕ ಪ್ರಭಾವ ಬೀರುತ್ತದೆ.



ವಿಧಾನ :– ಘಟಪ್ರಭಾ,ಮಲಪ್ರಭಾ ನೀರಾವರಿ ಯೋಜನೆ ಜಿಲ್ಲೆಗಳಾದ ವಿಜಯಪುರ ಬೆಳಗಾವಿ ಜಿಲ್ಲೆಗಳನ್ನು ಸಂಶೋದನೆ ಸ್ಥಳ ಪರಿಗಣನೆ ಮಾಡಲಾಯಿತು. ಚಿತ್ರ ಏ ಸಂಶೊದನೆಗೆ ಆಯ್ಕೆ ಸ್ಥಳಗಳು ಮುಗಳಕೋಡ,ಪಾಲಭಾವಿ,ಸಸಾಲಟ್ಟಿ,ತೇರ ದಾಳ,ಶೇಗುಣಸಿ,ಹಳಂಗಳ ಮುಂತಾದವುಗಳನ್ನು ಆಯ್ಕೆ ಮಾಡಲಾಯಿತು. ಚಿತ್ರ . ಬ ನೀರಾವರಿ ಹಾಗೂ ನೀರಾವರಿ ರಹಿತ ಯೋಜನೆ ಅಡಿ ದೊಡ್ಡಕುಟುಂಬ ಹಾಗೂ ಚಿಕ್ಕ ಹಿಡುವಳಿ

ಕುಟುಂಬ ಗಳನ್ನು ಅಧ್ಯಯನಕ್ಕೆ ಒಳಪಡಿಸಲಾಯಿತು.(ಸಂಖ್ಯೆ 192). ಚಿತ್ರ ಸಿ.

ಸೂಚಕ ಮಾಹಿತಿ ಮತ್ತು ಸಾಮಾಜಿಕ ಮತ್ತು ಆರ್ಥೀಕ ..ಶಿಕ್ಷಣ,ವೃತ್ತಿ,ಆಧಾಯ ಮಾಹಿತಿಯನ್ನು ರಚಣಾತ್ಮಕ ಮಾದರಿ ಮೂಲಕ ಕಲೆ ಹಾಕಲಾಯಿತು. ಆಧಾಯ ಸಂಪನ್ಮೂಲ . ಹಾಗೂ ಆಧಾಯ ಕುಪ್ಪುಸ್ವಾಮಿ (1991)ರವ್ವಯ ವರ್ಗಿಕರ'ಣ ಮಾಡಲಾಯಿತು. ಪ್ರತಿ ವ್ಯಕ್ತಿಗೆ ಆಹಾರ ಸೇವನೆಗೆ ಲಬ್ಯತೆಯನ್ನು ಲೆಕ್ಕ ಹಾಕಲಾಯಿತು. ಹಾಗೂ ಪೋಷಣೆ ಸ್ಥಿತಿ ಅನ್ನಪೂರ್ಣಾ ಸೊಪ್ಪವೇರ ಮುಕಾಂತರ ಕಂಡುಹಿಡಿಯಲಾಯಿತು.

ಪರಿಣಾಮ ಹಾಗೂ ಚರ್ಚೆ :– ನೀರಾವರಿ ಹಾಗೂ ನೀರಾವರಿ ರಹಿತ ಯೋಜನೆ ಅಡಿ ಪ್ರತಿಶತ ಏಕಧಳ ಧಾನ್ಯ ಹಾಗೂ ಕಾಳುಗಳ ಸೇವನೆಗೆ ಲಬ್ಯತೆ ಪರಿಣಾಮ ಈ ಕೆಳಕಂಡಂತೆ ಅವಲೋಕಿಸಲಾಗಿದೆ.



ಚಿತ್ರ 1 ನೀರಾವರಿ ರಹಿತ ಯೋಜನೆಯಲ್ಲಿ ಪ್ರತಿಶತ ಜೋಳ ಸೇವನೆಗೆ ಲಭ್ಯತೆ

ನೀರಾವರಿ ಯೋಜನೆಯ ವ್ಯವಸಾಯದಲ್ಲಿ ಜೋಳ, ಕಾಳು, ಲಬ್ಯತೆಸಾಮಾನ್ಯವಾಗಿ ವಿರಳವಾಗಿದೆ.ನೀರಾವರಿಯೋಜನೆರಹಿತ ದೊಡ್ಡ ಹಿಡುವಳಿ ರೈತರಲ್ಲಿ ಪ್ರತಿಶ'ತ 54 ರಷ್ಟು ಜೋಳ ಸೇವನೆಗೆ ಲಬ್ಯತೆ ಇರುತ್ತದೆ.ಸಣ್ಣ ಹಿಡುವಳಿದಾರರಲ್ಲಿ ಕಡಿಮೆ ಲಬ್ಯತೆ (49%) ಇರುವದು– ಚಿತ್ರ 1.



ಚಿತ್ರ 2ನೀರಾವರಿ ಹಾಗೂ ನೀರಾವರಿ ರಹಿತ ಯೋಜನೆಯಲ್ಲಿ ಪ್ರತಿಶತ ಗೋದಿ ಸೇವನೆಗೆ ಲಭ್ಯತೆ

ಗೋದಿ – ನೀರಾವರಿ ಯೋಜನೆಯ ವ್ಯವಸಾಯದಲ್ಲಿ ದೊಡ್ಡ ಹಿಡುವಳಿದಾರರಲ್ಲಿ ಗೋದಿ ಉತ್ಪಾದನೆಯು ಸೇವನೆಗೆ ಲಬ್ಯತೆ ಪ್ರತಿಶತ 35 ರಷ್ಟು ಹಾಗೂ ಸಣ್ಣ ಹಿಡುವಳಿದಾರರಲ್ಲಿ ಪ್ರತಿಶತ 48 ರಷ್ಟು ಹೆಚ್ಚುವರಿ ಲಬ್ಯತೆ ಇರುತ್ತದೆ.ಆದರೆ ನೀರಾವರಿ ಯೋಜನೆರಹಿತ ಸ್ಥಳದಲ್ಲಿ ಪ್ರತಿಶತ 10 ರಿಂದ 40 ರಷ್ಟು ಸೇವನೆಗೆ ಕಡಿಮೆ ಲಬ್ಯತೆ ಇರುವದು ಕಂಡುಬಂದಿ' (ಚಿತ್ರ 2).



ಚಿತ್ರ 3ನೀರಾವರಿ ಯೋಜನೆಯಲ್ಲಿ ಪ್ರತಿಶತ ಗೋವಿನ ಜೋಳ ಸೇವನೆಗೆ ಲಭ್ಯತೆ

ಗೊವಿನಜೋಳ ಸೇವನೆ ಲಬ್ಯತೆಯ ಪ್ರಮಾಣ ಪ್ರತಿಶತ 8ರಿಂದ 98ರಷ್ಟು ನೀರಾವರಿ ಯೋಜನೆಯ ಹಿಡುವಳಯಲ್ಲಿ ಹಾಗೂ ಅತೀ ವಿರಳ (1–2%) ಲಬ್ಯೆತೆ ನೀರಾವರಿ ರಹಿತ ಯೋಜನೆಯಲ್ಲಿ ಕಂಡುಬಂದಿದೆ (ಚಿತ್ರ 3).



ಚಿತ್ರ 4 ನೀರಾವರಿ ರಹಿತ ಯೋಜನೆಯಲ್ಲಿ ಸಣ್ಣ ಕಾಳುಗಳ ಸೇವನೆಗೆ ಲಭ್ಯತೆ

ನವನೆ, ಸಜ್ಜೆ ,ಸಣ್ಣ ಕಾಳುಗಳ ಲಬ್ಯತೆ ಪ್ರತಿಶತ 10ರಿಂದ25 ರಷ್ಟು ನೀರಾವರಿ 'ರಹಿತಯೋಜನೆ ಸಣ್ಣ ಹಿಡುವಳಿದಾರ ಹಾಗೂ ದೊಡ್ಡ ಹಿಡುವಳಿ ರೈತರಲ್ಲಿ ಕಂಡುಬಂದಿದೆ'(.ಇದರಂತೆ ದ್ವಿದಳ ದಾನ್ಯಗಳು ತೊಗರೆ.ಶೇಂಗಾ.,ಹೆಸರು ಹಾಗೂ ಮಡಿಕೆ ಮುಂತಾದುವುಗಳು (ಚಿತ್ರ 4)ಸೇವನೆಗೆ ಲಬ್ಯತಯು ಪ್ರಮಾಣ ಪ್ರತಿಶ'ತ 1–60, 3–20, 50,21 ಮತ್ತು ಮಡಿಕೆ 40 ರಿಂದ 60 ರಷ್ಟು .ನೀರಾವರಿ ಯೋಜನೆಯ ಸಣ್ಣ ಹಿಡುವಳಿದಾರರು , ದೊಡ್ಡ ಹಿಡುವಳಿದಾರ ರೈತರಲ್ಲಿ ಕಂಡುಬಂದಿದೆ (ಚಿತ್ರ 5)



ಚಿತ್ರ 5ನೀರಾವರಿ ರಹಿತ ಯೋಜನೆಯಲ್ಲಿ ಪ್ರತಿವ್ಯಕ್ತಿಗೆ ದ್ವಿಧಳ ಧಾನ್ಯಗಳ ಲಭ್ಯತೆ.



ಚಿತ್ರ 6ನೀರಾವರಿ ಯೋಜನೆಯಲ್ಲಿ ಪ್ರತಿವ್ಯಕ್ತಿಗೆ ದ್ವಿಧಳ ಧಾನ್ಯಗಳ ಲಭ್ಯತೆ

ಆದರೆ ಅವರೆ ಕಾಳು ಹಾಗೂ ಕಡಲೆ ಕಾಳು ಸೇವನೆಗೆ ಲಭ್ಯತೆಯ ಪ್ರಮಾಣ ಪ್ರತಿಶತ 0.5 –60 ರಷ್ಟು,70–90 ರಷ್ಟು ನೀರಾವರಿ ಯೋಜನೆಯಲ್ಲಿ ಮಾತ್ರ ಕಂಡು ಬಂದಿದೆ. ಇದರಂತೆ ಹಾಲು ನೀರಾವರಿ ಯೋಜನೆಯಲ್ಲಿ ಸಣ್ಣ ಮತ್ತು ದೊಡ್ಡ ಹಿಡುವಳಿದಾರರಲ್ಲಿ 80–99 ರಷ್ಟು ಹಾಗೂ 70–88% ರಷ್ಟು ನೀರಾವರಿ ರಹಿತ ಯೋಜನೆಯಲ್ಲಿ ಕಂಡುಬಂದಿದೆ.



ಚಿತ್ರ 7 ನೀರಾವರಿ ಹಾಗೂ ನೀರಾವರಿ ರಹಿತ ಯೋಜನೆಯಲ್ಲಿ ಪ್ರತಿಶತ ಹಣ್ಣು ಮತ್ತು ತರಕಾರಿ ಲಭ್ಯತೆ.

ಇದರಂತೆ ಹಣ್ಣುಗಳ ಲಭ್ಯತೆ ಪ್ರತಿಶತ 100 ರಷ್ಟು ನೀರಾವರಿ ಯೋಜನೆಯಲ್ಲಿ ಹಾಗೂ ಪ್ರತಿಶತ 10 ರಷ್ಟು ನೀರಾವರಿ ರಹಿತ ಯೊಜನೆಯಲ್ಲಿ ವಿರಳತೆ ಕಂಡು ಬಂದಿದೆ. ತರಕಾರಿ ಪ್ರತಿಶತ 80 ರಷ್ಟು ನೀರಾವರಿ ಯೊಜನೆಯಲ್ಲಿ ಸೇವನೆಗೆ ಲಭ್ಯತೆ ಹಾಗೂ ಪ್ರತಿಶತ 40 ರಷ್ಟು (ಚಿತ್ರ 7), ಅರ್ಧದಷ್ಟುನೀರಾವರಿ ರಹಿತ ಯೋಜನೆಯಲ್ಲಿ ಲಭ್ಯತೆ ಕಂಡು ಬಂದಿದೆ. ನೀರಾವರಿ ಯೋಜನೆಯಲ್ಲಿ ರೈತರು ವಾಣಿಜ್ಯ ಬೆಳೆಗಳನ್ನು ಆಯ್ದುಕೊಂಡಿರುವದರಿಂದ ದಾನ್ಯ, ಕಾಳು, ಬೇಳೆ ವಿರಳತೆ .(ಕೆನಡಿ,ಕೊಗಿಲ್ 1987) ಈ ಅಧ್ಯಯನದಲ್ಲಿ ಕೂಡ ಕಡಿಮೆ ನವನೆ ಸಜ್ಜೆ ಬೆಳೆಗಳು ,ದ್ವಿಧಳ ದಾನ್ಯಗಳ ಸೇವನೆ ಮೊಟಕುಗೊಂಡಿರುವದು ಕಂಡುಬಂದಿದೆ.

ಪೋಷಣೆ ಲಭ್ಯತೆ



ಚಿತ್ರ 8 ನೀರಾವರಿ ಹಾಗೂ ನೀರಾವರಿ ರಹಿತ ಯೋಜನೆಯಲ್ಲಿ ಪ್ರತಿಶತ ಶಕ್ತಿ ಹಾಗೂ ರಂಜಕ ಲಭ್ಯತೆ

ಶಕ್ತಿ ಪೋಷಣೆ ಲಭ್ಯತೆ ಇದು ಸಾಮಾನ್ಯವಾಗಿ ಆಹಾರ ಉತ್ಪಾದನೆ ಹಾಗೂ ಸೇವನೆಗೆ ಲಭ್ಯತೆ ಆಧಾರಿತವಾಗಿರುತ್ತದೆ . ನೀರಾವರಿ ಯೋಜನೆಯಡಿ ದೊಡ್ಡ ಹಿಡುವಳಿದಾರರಲ್ಲಿ ಪ್ರತಿಶತ 83 ಹಾಗೂ 81 ರಷ್ಟು ಚಿಕ್ಕ ಹಿಡುವಳಿದಾರರಲ್ಲಿ ಲಭ್ಯತೆ ಇರುತ್ತದೆ ಆದರೆ ನೀರಾವರಿ ರಹಿತ ಯೋಜನೆಯಲ್ಲಿ ಪ್ರತಿಶತ 81 ಹಾಗೂ80 ರಷ್ಟು ಲಭ್ಯತೆ ಇರುತ್ತದೆ. ಪ್ರೋಟಿನ್ (ರಂಜಕ)ಪೋಷಣೆ ನೀರಾವರಿ ಯೋಜನೆಯಡಿ ಪ್ರತಿಶತ 80 ರಷ್ಟು ದೊಡ್ಡ ಹಾಗೂ ಚಿಕ್ಕ ಹಿಡುವಳಿದಾರರಲ್ಲಿ ಕಂಡು ಬಂದಿದೆ(ಚಿತ್ರ 8).



ಚಿತ್ರ 9 ನೀರಾವರಿ ಹಾಗೂ ನೀರಾವರಿ ರಹಿತ ಯೋಜನೆಯಲ್ಲಿ ಪ್ರತಿಶತ ಕೊಬ್ಬು ಲಭ್ಯತೆ

ನೀರಾವರಿ ' ಯೋಜನೆಯಲ್ಲಿ ಪ್ರತಿಶತ 200 ರಷ್ಟು 200 ರಷ್ಟು ಕೊಬ್ಬು ನೀರಾವರಿ ರಹಿತ ಯೋಜನೆಯಡಿ ಹಾಗೂಪ್ರತಿಶತ 150 ಮತ್ತು 100 ರಷ್ಟು ದೊಡ್ಡ ಹಿಡುವರಿದಾರರಲ್ಲಿ ಮತ್ತು ಚಿಕ್ಕ ಹಿಡುವಳಿದಾರರಲ್ಲಿ ಕಂಡುಬಂದಿದೆ(ಚಿತ್ರ 9)



ಚಿತ್ರ 10 ನೀರಾವರಿ ಯೋಜನೆಯಲ್ಲಿ ಪ್ರತಿಶತ ಜೀವಸತ್ವ ಸೇವನೆಗೆ ಲಭ್ಯತೆ.



ಚಿತ್ರ 11ನೀರಾವರಿ ರಹಿತ ಯೋಜನೆಯಲ್ಲಿ ಪ್ರತಿಶತ ಜೀವಸತ್ವ ಸೇವನೆಗೆ ಲಭ್ಯತೆ.

ಪ್ರತಿಶತ 60 ರಷ್ಟು ಕಬ್ಬಿಣಾಂಶ ನೀರಾವರಿ ಯೋಜನೆಯಡಿ ಹಾಗೂ ಪ್ರತಿಶತ 65 ಹಾಗೂ 42 ರಷ್ಟು ನೀರಾವರಿ ರಹಿತ ಯೋಜನೆಯ ದೊಡ್ಡ ಹಾಗು ಚಿಕ್ಕ ಹಿಡುವಳಿದಾರರಲ್ಲಿ ಕಂಡುಬಂದಿದೆ.ಸುಣ್ಣದಂಶ ಪ್ರತಿಶತ 300 ಮತ್ತು 200 ರಷ್ಟು ನೀರಾವರ ಯೋಜನೆಯಡಿ ಹಾಗೂ 50 ರಷ್ಟು ನೀರಾವರಿ ರಹಿತ ದೊಡ್ಡ ಹಾಗೂ ಚಿಕ್ಕ ಹಿಡುವಳಿದಾರರಲ್ಲಿ ಲಭ್ಯತೆ ಇರುತ್ತದೆ. ಜೀವಸತ್ವ (ನಿಯಾಸಿನ್,ಕೆರೊಟಿನ್) ಪೋಷಣೆ ಲಭ್ಯತೆಯು ಪ್ರತಿಶತ 95 ಮತ್ತು 85 ಹಾಗೂ 75, 79 ರಷ್ಟು ನೀರಾವರಿ ಯೋಜನೆ ದೊಡ್ಡ ಮತ್ತು ಚಿಕ್ಕ ಹಿಡುವಳಿದಾರರಲ್ಲಿ ಹೆಚ್ಚು ಲಭ್ಯತೆ ಇರುವದು ಕಂಡು ಬಂದಿದೆ ಆದರೆ ನೀರಾವರಿ ರಹಿತ ಯೋಜನೆಯ (10)

ಹಿಡುವಳಿದಾರರಲ್ಲಿ ಕಡಿಮೆ ಪೋಷಣೆ ಪ್ರತಿಶತ 80 ಮತ್ತು 60 ಹಾಗೂಪ್ರತಿಶತ 50 ಮತ್ತು 40 ರಷ್ಟು ಅತಿ ಕಡಿಮೆ ಪೋಷಣೆ ಸೇವನೆ ಕಂಡುಬಂದಿದೆ.ನೀರಾವರಿ ರಹಿತ ಯೋಜನೆಯಡಿ ಹೆಚ್ಚು ಜೋಳ ,ಸಣ್ಣ ಕಾಳು ಸೇವನೆ ಸಜ್ಜೆ ಮತ್ತು ದ್ವಿದಳ ದಾನ್ಯಗಳನ್ನು ಉತ್ಪಾದಿಸುವದರಿಂದ ಪ್ರೋಟಿನ್ ,ಕಬ್ಬಿಣಾಂಶ ಪೋಷಕಾಂಶಕ ಹೇರಳವಾಗಿ ಲಭ್ಯವಿರುತ್ತದೆ.ಆದರೆ ನೀರಾವರಿ ಯೋಜನೆಯಡಿ ಅತಿ ಹೆಚ್ಚು ತರಕಾರಿ ,ಹಣ್ಣು ಸಕ್ಕರೆ,ಬೆಲ್ಲ,ಹೆಚ್ಚು ಉತ್ಪಾದನೆಯಿಂದ ಮತ್ತು ಸೇವನೆಗೆ ಲಭ್ಯತೆ ಇರುವದರಿಂದ ಜೀವಸತ್ವ, ಶಕ್ತಿ ಪೋಷಣೆ ಹೇರಳವಾಗಿವೆ(ಚಿತ್ರ 11). ಆಯ್ದುಕೊಂಡ ಅಧ್ಯಯನ ದಂತೆ ತಂತ್ರಜ್ಞಾನ ಬಳಕೆಯಿಂದ ಅಕ್ಕಿ ಉತ್ಪಾದನೆ ತಮಿಳುನಾಡಿನ ಉತ್ತರ ಅರ್ಕಾಡ ರಿಜಿಯನದಲ್ಲಿ ಆರ್ ಡಿ ಎಗೆ ಹೋಲಿಸಿದಂತೆ ಪ್ರತಿಶತ 80 ರಷ್ಟು ಶಕ್ತಿಹೆಚ್ಚು ಪೋಷಣೆ ಸೇವನೆ (ಅನಾನ್ 1986 ಕಾಲಿಕಮಾಹಿತಿ) ವರದಿಯಾಗಿದೆ.

1 ಪಟ್ಟಿ 1 ಜನಜೀವನದ ಅಧ್ಯಯನದ ಅಂಶಗಳು

	ಅಂಶಗಳು	ನೀರಾವರಿ ಯೋಜನೆ	ನೀರಾವರಿ ರಹಿತ ಯೋಜನೆ
1	**ಶಿಕ್ಷಣ**		
	ಸಾಕ್ಷರತೆ	44.4	38
	ಉತ್ತಮ ಶಿಕ್ಷಣ	17.1	3.5
2	**ಉದ್ಯೋಗ**		
	ವ್ಯವಸಾಯ	34.4	30
	ಇನ್ನಿತರ	6.7	17.4
3	**ಆಧಾಯ**		
	ಹೆಚ್ಚು ಆಧಾಯ	37.5	26
	ಮಧ್ಯಮ ಆಧಾಯ	20	8
	ಕಡಿಮೆ ಆಧಾಯ	1	8

ನೀರಾವರಿ ಯೋಜನೆಯಲ್ಲಿ ಸಾಕ್ಷರತೆ ಹಾಗೂ ಉತ್ತಮ ಶಿಕ್ಷಣ ಇರುವದು ಕಂಡು ಬಂದಿದೆ. ನೀರಾವರಿ ರಹಿತ ಯೋಜನೆಯಲ್ಲಿ ಶಿಕ್ಷಣ ಕಡಿಮೆ ಪ್ರಮಾಣ,(38%).ನೀರಾವರಿ ಯೋಜನೆಯಲ್ಲಿ ಉದ್ಯೋಗ ವ್ಯವಸಾಯ ಆಧಾರಿತವಾಗಿದೆ ಹಾಗೂ ಉತ್ತಮ ಆದಾಯ ಇರುತ್ತದೆ.ನೀರಾವರಿ ರಹಿತ ಯೋಜನೆಯಲ್ಲಿ ಇನ್ನಿತರ ಉದ್ಯೋಗ ಹಾಗೂ ಕಡಿಮೆ (ಆದಾಯ ಹೊಂದಿರುವದು ಕಂಡು ಬಂದಿದೆ. ಪಟ್ಟಿ 1).

ಸಾರಾಂಶ : ನೀರಾವರಿ ರಹಿತ ಯೋಜನೆಯಲ್ಲಿ ಕಾಳುಗಳು ಹಾಗೂ ದ್ವಿದಳ ದಾನ್ಯಗಳು ಸೇವನೆಗೆ ಹೆಚ್ಚುವರಿಯಾಗಿರುತ್ತದೆ. ಹಣ್ಣು, ಹಾಲು, ತರಕಾರಿ, ನೀರಾವರಿ ಯೋಜನೆಯಲ್ಲಿ ಹೆಚ್ಚುವರಿ ಲಭ್ಯತೆ ಇರುವದು ಕಂಡು ಬಂದಿದೆ. ಪೋಷಣೆ ಹೆಚ್ಚುಕಡಿಮೆ ಸಮಾನ ರೀತಿಯಲ್ಲಿ ಇರುತ್ತದೆ. ಹೆಚ್ಚುವರಿ ನೀರಾವರಿ ಯೋಜನೆಯಲ್ಲಿ ಕಂಡು ಬಂದಿರುತ್ತದೆ. ಮತ್ತು ಜೀವಸತ್ವ ಲಭ್ಯತೆ ನೀರಾವರಿ ಯೋಜನೆಯಲ್ಲಿ ಕಂಡುಬಂದಿದೆ.

ಆರ್ಥಿಕ ಪರಿಸ್ಥಿತಿ ಹಾಗೂ ಶಿಕ್ಷಣದ ಮಟ್ಟ ನೀರಾವರಿ ಯೋಜನೆಯಲ್ಲಿ ಉತ್ತಮ ಸ್ಥಿತಿ ಹೊಂದಿರುತ್ತದೆ.

ಉಲ್ಲೇಖಗಳು:

1) ಕುಪ್ಪುಸ್ವಾಮಿ 1991 ಟೆಸ್ಟ್‌ಬುಕ್ ಅಪ್ ಕಮ್ಯುನಿಟಿ ಮೆಡಿಸನ್ 1998 ಎಸ್. ಡಿ ಕುಲಕರ್ಣಿ ಎ.ಪಿ ಮತ್ತು ಬಿರಿಡೆಲಪಿ ವೊರಾ ಮೆಡಿಕಲ್ ಪಬ್ಲಿಕೇಶನ್, ಮುಂಬೈ ಪು.ಸಂ. 28-30.

2) ವಿಕಾರಿಯಾ ಎಸ್.ಬಿ ಮತ್ತು ಸಿಯಾನಿ ಆರ್.ಎಲ್. 2000 ಡಿಪರ್ಸಂಟೆಲ್ ಇಮ್‌ಪ್ಯಾಕ್ಟ ಅಪ್ ಅರ್ಬನ್ ಇರಿಗೇಶನ್ ಪ್ರೊಜೆಕ್ಟ್ ಆನ್ ಫಾರರ್ಮಸ್ ಅಪ್ ಸೌತ್ ಸರಸತ್ರಾ ಜೋನ್ಸ್ ಅರ್ಥ ವಿಕಾಸ 36 (2) 35-61.

ಮಾಹಿತಿ ತಂತಜ್ಞಾನ ಹಾಗೂ ಮೀನುಗಾರಿಕೆ ಮಾರುಕಟ್ಟೆ: ಒಂದು ಅಧ್ಯಯನ

ಪ್ರಸನ್ನ ಕುಮಾರ್. ಎಂ. ಜಿ*, ಡಾ॥ ವೈ. ಎಂ. ರಾಜು
*ಸಂಶೋಧನಾ ವಿದ್ಯಾರ್ಥಿ, **ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು-574 199

ಭಾರತದ ಮೀನುಗಾರಿಕೆ ಮಾರುಕಟ್ಟೆ ಬಹಳ ಅತ್ಯಂತ ಹಿರಿದಾಗಿದ್ದು ಅನೇಕರ ಜೀವನಾಡಿಯಾಗಿದೆ. ಅದರಲ್ಲೂ ಕರಾವಳಿ ಕರ್ನಾಟಕವು ಪುರಾತನ ಇತಿಹಾಸವನ್ನು ಹೊಂದಿದ್ದು , ಅನೇಕ ಜನರು ತಮ್ಮ ಜೀವನವನ್ನು ಇದರಲ್ಲೇ ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಮಾಹಿತಿ ತಂತ್ರಜ್ಞಾನವನ್ನು ಸಕ್ರಿಯವಾಗಿ ಬಳಸಿ ಮೀನುಗಾರಿಕೆ ಮಾರುಕಟ್ಟೆಯ ಸವತೋಮುಖ ಅಭಿವೃದ್ಧಿ ಅತ್ಯಾವಶ್ಯಕವಾಗಿದೆ. ಇದರಿಂದ ಈ ಕೆಳಕಂಡ ಉದ್ದೇಶಗಳನ್ನು ಅಧ್ಯಯನದಲ್ಲಿ ಸಾಧಿಸಲಾಗಿದೆ,ಕರಾವಳಿ ಮೀನುಗಾರರು ಮಾಹಿತಿ ತಂತ್ರಜ್ಞಾನಗಳನ್ನು ಮೀನುಗಾರಿಕೆ ಪ್ರಾಮುಖ್ಯತೆಗಾಗಿ ಹಾಗೂ ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಾರೆಯೇ ಹಾಗೂ ಅದನ್ನು ಹೇಗೆ ಬಳಸುತ್ತಾರೆ?,ಮಾಹಿತಿ ತಂತ್ರಜ್ಞಾನ ಹೇಗೆ ಮೀನುಗಾರಿಕೆ ಹಾಗೂ ಅದರ ಉತ್ಪನ್ನಗಳ ಮೇಲೆ ಪರಿಣಾಮವನ್ನು ಬೀರುತ್ತವೆ ?,ಯಾವ ರೀತಿಯ ಮೀನುಗಾರಿಕೆ ಸಂಬಂಧ ಪಟ್ಟಂತಹ ಹಾಗು ಜೀವನ ಮೌಲ್ಯಾಧಾರಿತ ವಿಷಯಗಳು ಮಾಹಿತಿ ತಂತ್ರಜ್ಞಾನದ ಮೂಲಕ ಕರಾವಳಿ ಮೀನುಗಾರರಿಗೆ ಒದಗಿಸಬಹುದು ?

ಪೀಠಿಕೆ:– ಭಾರತದ ಮೀನುಗಾರಿಕೆ ಮಾರುಕಟ್ಟೆ ಬಹಳ ಅತ್ಯಂತ ಹಿರಿದಾಗಿದ್ದು ಅನೇಕರ ಜೀವನಾಡಿಯಾಗಿದೆ. ಅದರಲ್ಲೂ ಕರಾವಳಿ ಕನಾ೯ಟಕವು ಪುರಾತನ ಇತಿಹಾಸವನ್ನು ಹೊಂದಿದ್ದು , ಅನೇಕ ಜನರು ತಮ್ಮ ಜೀವನವನ್ನು ಇದರಲ್ಲೇ ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಮಾಹಿತಿ ತಂತ್ರಜ್ಞಾನವನ್ನು ಸಕ್ರಿಯವಾಗಿ ಬಳಸಿ ಮೀನುಗಾರಿಕೆ ಮಾರುಕಟ್ಟೆಯ ಸವ೯ತೋಮುಖ ಅಭಿವೃದ್ಧಿ ಅತ್ಯಾವಶ್ಯಕವಾಗಿದೆ. ಮುಖ್ಯವಾಗಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮೀನುಗಾರಿಕೆಯ ಮೂಲವಾಗಿದೆ. ಸಹಜವಾಗಿ 60% ಮೀನುಗಾರರು ಅನಕ್ಷರಸ್ಥರು, ಹಿಂದುಳಿದ ವಗ೯ದವರಾಗಿದ್ದು, ಸಾಮಾಜಿಕವಾಗಿ ಹಾಗು ಆಥಿ೯ಕವಾಗಿ ಹಿಂದುಳಿರುತ್ತಾರೆ. ತಾವು ಗಳಿಸಿದ ದುಡಿಮೆಗೆ ಸಂಪೂಣ೯ ಲಾಭಾಂಶ ಪಡಿಯುವಲ್ಲಿ ವಿಫಲವಾಗುತ್ತಾರೆ. ಕಾರಣವೇನೆಂದರೆ, ದಲ್ಲಾಳಿಗಳು, ಮಧ್ಯವತಿ೯ಗಳು, ಮಾರುಕಟ್ಟೆ ಮಾಹಿತಿಯ ಕೊರತೆ ಇತ್ಯಾದಿ. ಈ ಕೆಳಕಂಡ ಉದ್ದೇಶಗಳನ್ನು ಅಧ್ಯಯನದಲ್ಲಿ ಸಾಧಿಸಲಾಗಿದೆ.

ಉದ್ದೇಶಗಳು:

ಮಾಹಿತಿ ತಂತ್ರಜ್ಞಾನ ಹಾಗೂ ಮೀನುಗಾರಿಕೆ ಮಾರುಕಟ್ಟೆಯ ಅವಶ್ಯಕತೆಯನ್ನು ಕುರಿತು ಅಧ್ಯಯನವನ್ನು ಕೆಳಕಂಡ ಉದ್ದೇಶಗಳೊಂದಿಗೆ ಕೈಗೊಳ್ಳಲಾಗಿದೆ:

1. ಮೀನುಗಾರರು ಮಾಹಿತಿ ತಂತ್ರಜ್ಞಾನಗಳನ್ನು ಮೀನುಗಾರಿಕೆ ಪ್ರಾಮುಖ್ಯತೆಗಾಗಿ ಹಾಗೂ ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಾರೆಯೇ ಹಾಗೂ ಅದನ್ನು ಹೇಗೆ ಬಳಸುತ್ತಾರೆ?

2. ಮಾಹಿತಿ ತಂತ್ರಜ್ಞಾನ ಹೇಗೆ ಮೀನುಗಾರಿಕೆ ಹಾಗೂ ಅದರ ಉತ್ಪನ್ನಗಳ ಮೇಲೆ ಪರಿಣಾಮವನ್ನು ಬೀರುತ್ತವೆ ?

3. ಯಾವ ರೀತಿಯ ಮೀನುಗಾರಿಕೆ ಸಂಬಂಧ ಪಟ್ಟಂತಹ ಹಾಗು ಜೀವನ ಮೌಲ್ಯಾಧಾರಿತ ವಿಷಯಗಳು ಮಾಹಿತಿ ತಂತ್ರಜ್ಞಾನದ ಮೂಲಕ ಕರಾವಳಿ ಮೀನುಗಾರರಿಗೆ ಒದಗಿಸಬಹುದು ?

ಮೀನು ಮಾರುಕಟ್ಟೆ ಚಿತ್ರಗಳು:

ಮಾಹಿತಿ ಮತ್ತು ಸಂವಹನ ಅರಿವು:– ಭಾರತದಂತಹ ಸಮಾಜದಲ್ಲಿ ಮೊಬೈಲ್ ಫೋನ್ ಎಂಬುದು ಅದರಲ್ಲೂ ಮೀನುಗಾರಿಕೆಯ ಕ್ಷೇತ್ರದಲ್ಲಿ ವರದಾನವಾಗಿದೆ . ಇದು ಒಂದು ವಿದ್ಯುತ್ ಸಾಧನವಾಗಿದ್ದು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಯಾವುದೇ ಜೋಡಣೆ ಸಂಪ೯ಕ ಇಲ್ಲದೇ ಮಾತನಾಡಬಹುದಾಗಿದೆ.

ಭಾರತದ ಮೀನುಗಾರಿಕೆ ಮಾರುಕಟ್ಟೆಯ ಹಂತ ಹಂತದ ಬೆಳವಣಿಗೆ:





ಮುಖ್ಯವಾಗಿ ಮೊಬೈಲ್ ಫೋನ್ ಹೇಗೆ ಮೀನುಗಾರರಿಂದ ಮಾರುಕಟ್ಟೆವರೆಗಿನ ವಿವಿಧ ಹಂತಗಳಲ್ಲಿ ಬಳಸಲಾಗುತ್ತದೆ ಮತ್ತು ಬಳಸಬಹುದು ಎಂದು ಅರಿತುಕೊಳ್ಳಬೇಕು. ಇನ್ನು ವಿಷಯಗಳೆಂದರೆ ಕಚ್ಚಾವಸ್ತುಗಳು ದೊರಕುವ ಸ್ಥಳಗಳ ಮೇಲಿನ ಮಾಹಿತಿ, ಮೀನುಗಳ ಗುಣಮಟ್ಟ, ಆಧುನಿಕ ತಂತ್ರಜಾಞಾನ ಇತ್ಯಾದಿ, ಇವೆಲ್ಲವು ಮೀನುಗಾರಿಕೆಯ ಉತ್ಪನ್ನದ ಉನ್ನತಿಯಲ್ಲಿ ಪ್ರಾಥಮಿಕ ಪಾತ್ರವನ್ನು ವಹಿಸುತ್ತದೆ.

ಉಪಸಂಹಾರ: ಮೇಲಿನ ಎಲ್ಲಾ ಅಂಶಗಳನ್ನು ಗಮನಿಸುತ್ತಾ ಹೋದರೆ ಮಾಹಿತಿ ತಂತ್ರಜಾಞಾನವು ಮೀನುಗಾರಿಕೆ ಮಾರುಕಟ್ಟೆಯ ಉತ್ಪನ್ನದ ಹೆಚ್ಚುವರಿಯಲ್ಲಿ ಹಾಗೂ ಅಭಿವೃದ್ಧಿಯ ಸವ೨ತೋಮುಖವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮೀನುಗಾರರು ಮಾಹಿತಿ ತಂತ್ರಜಾಞಾನವನ್ನು ಸರಳ ಸುಲಭವಾಗಿ ಬಳಸಬಹುದಾಗಿದ್ದು, ಅನೇಕ ಗುಣ ಲಕ್ಷಣಗಳನ್ನು ಹೊಂದಿದೆ ಹಾಗೂ ನಿರಂತರ ಸೇವೆಯನ್ನು ಒದಗಿಸುತ್ತವೆ. ಬೆಳೆಯುತ್ತಿರುವ ತಾಂತ್ರಿಕತೆ ಹಾಗೂ ಗಡಿ ಇಲ್ಲದ ಜಾಗತಿಕರಣ ವ್ಯವಹಾರದಿಂದಾಗಿ ಮಾರುಕಟ್ಟೆಯಲ್ಲಿ ವೈವಿಧ್ಯಮಯ ಮೊಬೈಲ್‌ಗಳು ಕಡಿಮೆ ಬೆಲೆಗೆ ದೊರಕುತ್ತಿವೆ ಎಂಬುದು ಒಂದು ಆಶಾದಾಯಕವಾಗಿದೆ.ಮೊಬೈಲ್ ಬಳಕೆದಾರರು ಮುಖ್ಯವಾಗಿ ಮೊಬೈಲ್ ಸೇವೆಗಳನ್ನು ವಾಣಿಜ್ಯ ದೃಷ್ಟಿಯಿಂದ ಹಾಗೂ ಹೆಚ್ಚಿನ ಕೃಷಿ ಹಿಡುವಳಿಗೆ, ತಿಳುವಳಿಕೆಗಳನ್ನು ಮತ್ತು ಮಾಹಿತಿಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸಬೇಕು. ವಾಣಿಜ್ಯ ಕ್ಷೇತ್ರವು ಮೊಬೈಲ್ ಬಳಕೆಯಲ್ಲಿ ಅದರಲ್ಲು ಸಣ್ಣ ಹಿಡುವಳಿದಾರರಿಗೆ ಒಂದು ದಾರಿ ದೀಪವಾಗಿ ಪರಿಣಮಿಸಲು ಹೆಚ್ಚು ಹೆಚ್ಚಾಗಿ ವಾಣಿಜ್ಯಕರಣವಾದ ಮೊಬೈಲ್ ಬಳಕೆ ಅತ್ಯಗತ್ಯ.

ಹ್ಯಾಕಿಂಗ್

[1] ವಿದ್ಯಾಶಂಕರ ಎಂ.ಹೆಚ್, [2] ವಿಕಾಸ್, ದೀಪಕ್
[1] ಸಹಾಯಕ ಪ್ರಾದ್ಯಾಪಕರು, [2] ಪ್ರಥಮ ವರ್ಷ ಬಿ.ಸಿ.ಎ. ವಿದ್ಯಾರ್ಥಿ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.

ಹ್ಯಾಕಿಂಗ್ ಎನ್ನುವುದು ಒಂದು ಅಭ್ಯಾಸವಾಗಿದೆ.ಆ ಅಭ್ಯಾಸದಲ್ಲಿ ಕಂಪ್ಯೂಟರ್‌ನ ಕಾರ್ಯ್ರಚರಿತ್ರ ಬದಲಾವಣೆ ಹಾಗು ಗುಣಲಕ್ಷಣಗಳ ಬದಲಾವಣೆ ಮಾಡುತ್ತಾರೆ. ಏಕೆಂದರೆ ನಿಮ್ರಾಪಕನ ಮೂಲ ಉದ್ದೇಶವನ್ನು ಹೊರತುಪಡಿಸಿ ಬೇರೆ ಕಾರ್ಯ್ರವನ್ನು ಮಾಡುವುದಾಗಿದೆ. ಈಗಿನ ದಿನಗಳಲ್ಲಿ ಹ್ಯಾಕಿಂಗ್ ಎನ್ನುವುದು ಮನೆಮಾತಾಗಿದೆ.ಅದರಲ್ಲೂ ಕಂಪ್ಯೂಟರ್‌ನ ಸುರಕ್ಷ ವ್ಯವಸ್ಥೆಯ ಹ್ಯಾಕಿಂಗ್ ಜನಚರಿತವಾಗಿದೆ.ಹೀಗೆ ಆಗಲು ಕಾರಣ ಜನರು ಹಾಗು ಮಾಧ್ಯಮದವರ ಗಮನ ಬ್ಲಾಕ್‌ಹ್ಯಾಟ್ಸ್ ಹ್ಯಾಕರ್‌ಗಳ ಕಡೆಗೆ ನೆಡೆದಿರುವುದರಿಂದ ಹ್ಯಾಕಿಂಗ್ ಜನಚರಿತವಾಗಿದೆ. ಹ್ಯಾಕಿಂಗ್ ಎನ್ನುವ ಪದವು ಜನರ ತಪ್ಪುತಿಳುವಳಿಕೆಯಿಂದಾಗಿ ಸುರಕ್ಷತೆ ಮತ್ತು ಅಂತರ್ಜಾಲ ಕಾನೂನು ಉಲ್ಲಂಘನೆ ಎಂದು ಮನವರಿಕೆ ಮಾಡಿಕೊಂಡಿದ್ದಾರೆ. ಈ ಪ್ರಸ್ತುತ ಪ್ರಬಂಧದಲ್ಲಿ ಹ್ಯಾಕಿಂಗ್ ಗಾ ಸಂಬಂಧಿಸಿದ ವಿವರಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ.

ಸಾಮಾನ್ಯ ಬಳಕೆಯಲ್ಲಿ ಹ್ಯಾಕರ್ ವ್ಯಕ್ತಿಯ ರೂಪದಲ್ಲಿ ಕಂಪ್ಯೂಟರ್‌ನನ್ನು ಶಿಥಿಲಗೊಳಿಸುತ್ತದೆ. ಸಾಮಾನ್ಯವಾಗಿ ಅಡಳಿತಾತ್ಮಕ ನಿಯಂತ್ರಣಗಳಲ್ಲಿ ಪ್ರವೇಶಿಸುವಂತದ್ದಾಗಿದೆ. ಹ್ಯಾಕರ್‌ನ ಸುತ್ತಲೂ ಅವೃತವಾಗಿರುವ ಉಪಸಂಸ್ಕೃತಿಯನ್ನು ಯಾವಾಗಲೂ ಕಂಪ್ಯೂಟರ್‌ನ ಭೂಗತ ಎಂದು ಉಲ್ಲೇಖಿಸಲಾಗುತ್ತದೆ. ಪ್ರತಿಪಾದಕರ ಒತ್ತಾಯವನ್ನು ಕಲಾತ್ಮಕ ಮತ್ತು ರಾಜಕೀಯ ವಲಯದಿಂದ ಪ್ರಚೊದಿಸಬೇಕಾಗಿದೆ. ಮತ್ತು ಅವುಗಳನ್ನು ಪಡೆದುಕೊಳ್ಳುವಲ್ಲಿ ಅಕ್ರಮವಾದ ವಿಧಾನದ ಕುರಿತು ಯಾವಾಗಲೂ ಹೆಚ್ಚು ಆಸಕ್ತಿ ತೋರುವುದಿಲ್ಲ.

ಹ್ಯಾಕರ್ ಪದದ ಇತರ ಬಳಕೆಗಲು ಅಸ್ತಿತ್ವದಲ್ಲಿವೆ ಅವುಗಳು ಕಂಪ್ಯೂಟರ್ ಭದ್ರತೆಗೆ ಸಂಬಂದಿಸಿಲ್ಲ (ಕಂಪ್ಯೂಟರ್ ಪ್ರೋಗ್ರಾಮರ್ ಮತ್ತು ಹೋಂ ಕಂಪ್ಯೂಟರ್ ಹವ್ಯಾಸಿಗರು), ಅದರೆ ಇವುಗಳನ್ನು ಮುಖ್ಯವಾಹಿನಿಯಲ್ಲಿ ಅಪರೂಪವಾಗಿ ಬಳಸಲಾಗುತ್ತದೆ. ಇದೀಗ ಕ್ಯಾಕರ್ಸ್ ಎಂದು ಹೇಳಲಾಗುವವರು ನಿಜವಾಗಿಯೂ ಹ್ಯಾಕರ್ಸ್ ಅಲ್ಲ ಎಂದು ಕೆಲವರು ಚರ್ಚಿಸುತ್ತಾರೆ. ಈ ಮೊದಲು ಮಾಧ್ಯಮವು ವಿವರಿಸುವಂತೆ ಹ್ಯಾಕರ್‌ಗಳಂತೆ ಕಂಪ್ಯೂಟರ್‌ಗಳನ್ನು ಒಡೆಯುವ ವ್ಯಕ್ತಿಗಳಿರುವಂತೆ ಹ್ಯಾಕರ್ ಸಮುದಾಯವಿತ್ತು ಎಂದು ಹೇಳುತ್ತಾರೆ. ಈ ಸಮುದಾಯವು ಜನರ ಸಮುದಾಯವಾಗಿದ್ದು, ಇವರು ಕಂಪ್ಯೂಟರ್ ಪ್ರೋಗ್ರಾಂಮಿಂಗ್‌ನಲ್ಲಿ ಹೆಚ್ಚು ಕಾಳಜಿಯನ್ನು ಹೊಂದಿದ್ದರು ಅಲ್ಲದೆ ಯಾವಾಗಲು ಓಪನ್ ಸೋರ್ಸ್ ಸಾಫ್ಟ್‌ವೇರ್ ರಚಿಸುತ್ತಿದ್ದರು ಈ ಜನರನ್ನು ಸೈಬರ್ – ಕ್ರಿಮಿನಲ್ ಹ್ಯಾಕರ್ಸ್ ಅನು ಇದೀಗ "ಕ್ರಾ ಕರ್ಸ್" ಎಂದು ಉಲ್ಲೇಖಿಸಲಾಗುತ್ತದೆ.

ಇತಿಹಾಸ:– ಹ್ಯಾಕಿಂಗ್ "ಫೋನ್ ಫ್ರೀಕಿಂಗ್" ಎಂದು ಹೇಳಲಾಗುವ ಅಧಿಕೃತವಲ್ಲದ ಫೋನ್ ನೆಟ್‌ವರ್ಕಿಂಗ್ ನಡೆದಂತೆಯೆ ಇದೂ ನಡೆದುಕೊಂಡು ಬಂದಿದೆ, ಹಾಗೂ ತಂತ್ರಜ್ಞಾನ ಮತ್ತು ಪಾಲ್ಗೋಳ್ಳುವವರ ನಡುವೆ ಯಾವಾಗಲೂ ಒಂದರ ಮೇಲೊಂದರಂತೆ ಹರಡಿದೆ ಬ್ರೂಸ್ ಸ್ಟೆರ್ಲಿಂಗ್ ಯಿಪ್ಪೀಸ್‌ಗೆ ಭೂಗತ ಜಗತ್ತಿನ ಕಂಪ್ಯೂಟರ್‌ನ ಬೇರುಗಳನ್ನು ಜಾಲಾಡಿದ್ದಾರೆ. 1960ರ ಸಂಸ್ಕೃತಿಗೆ ವಿರುದ್ಧವಾದ

ಚಳುವಳಿಯನ್ನು ಟೆಕ್ನಾಲಜಿ ಅಸಿಸ್ಟೆನ್ಸ್ ಪ್ರೋಗ್ರಾಂ (ಟಿಎಪಿ) ವಾರ್ತಾ ಪತ್ರಿಕೆಯಲ್ಲಿ ಪ್ರಕಟಿಸಿತು. ಎಂಐಟಿ ಲ್ಯಾಬ್ಸ್ ಅಥವಾ ಹೋಮ್‌ಬ್ರೂ ಕ್ಲಬ್ ಸೇರಿದಂತೆ 70ರ ದಶಕಕ್ಕೂ ಮೊದಲ ಹ್ಯಾಕರ್ ಸಂಸ್ಕೃತಿಯನ್ನು ಹ್ಯಾಕಿಂಗ್‌ನ ಹೆಚ್ಚಿನ ಪ್ರಯೋಜನಕಾರಿಯಂತೆ ಹೇಳಬಹುದಾಗಿದೆ. ಇದು ನಂತರ ಮುಂಚಿನ ಪರ್ಸನಲ್ ಕಂಪ್ಯೂಟರ್‌ಗಳು ಅಥವಾ ಓಪನ್ ಸೋರ್ಸ್ ಮೂವ್‌ಮೆಂಟ್ ಎಂದು ಹೊರಗೆಡವಿದೆ.

ಮಾನವನಿರ್ಮಿತಗಳು ಮತ್ತು ಕಸ್ಟಮ್‌ಗಳು:– ಭೂಗತ ಕಂಪ್ಯೂಟರ್ ತಂತ್ರಜ್ಞಾನವನ್ನು ಹೆಚ್ಚು ಅವಲಂಬಿಸಿದೆ. ಇದು ತನ್ನದೇ ಆದ ಸ್ವಂತ ಶೈಲಿಯನ್ನು ಮತ್ತು ಸಾಮಾನ್ಯವಲ್ಲದ ವಿಭಿನ್ನ ರೀತಿಯ ಕಾಗುಣಿತಗಳ ಬಳಕೆಯನ್ನು ಮಾಡಿದೆ. ಉದಾಹರಣೆಗೆ 1337 ಸ್ಟೀಕ್. ಈ ರೀತಿಯ ಪ್ರೋಗ್ರಾಂಗಳನ್ನು ಬರೆಯುವುದು ಮತ್ತು ಇತರ ಚಟುವಟಿಕೆಗಳನ್ನು ನಡೆಸುವುದಕ್ಕೆ ಹ್ಯಾಕ್ಟಿವಿಸಮ್ ಎಂದು ಉಲ್ಲೇಖಿಸಲಾಗುತ್ತದೆ. ಈ ಗುರಿ ಸಾಧಿಸುವಲ್ಲಿ ಕೆಲವರು ಅಕ್ರಮ ಕ್ರಾ್ಯಕಿಂಗ್ ಕಾನೂನಿನ ಪ್ರಕಾರವಾಗಿ ಸಮರ್ಥನೆ ನಡಿಸುತ್ತಾರೆ. ಸಾಮಾನ್ಯ ಪ್ರಕಾರವೆಂದರೆ ವೆಬ್‌ಸೈಟ್ ಡೀಫೇಸ್‌ಮೆಂಟ್ ಆಗಿದೆ. ಭೂಗತ ಕಂಪ್ಯೂಟರ್ ಅನ್ನು ಯಾವಾಗಲೂ ವೈಲ್ಡ್‌ವೆಸ್ಟ್‌ಗೆ ಹೋಲಿಸಲಾಗುತ್ತದೆ ಅವರ ನೈಜ ಹೆಸರುಗಲನ್ನು ಬಹಿರಂಗಪಡಿಸದೆ ಗುರುತನ್ನು ರಹಸ್ಯವಾಗಿರಿಸಿಕೊಂಡು ಅಲಿಯಾಸ್ ಹೆಸರನ್ನು ಬಳಸುವುದು ಹ್ಯಾಕರ್ಸ್‌ಗಳಲ್ಲಿ ಸಾಮಾನ್ಯವಾದ ರೂಢಿಯಾಗಿದೆ.

ಹ್ಯಾಕರ್ ಗುಂಪುಗಳು:– ಹ್ಯಾಕರ್ ಕನ್ವೆನ್ಷನ್‌ಗಳು ಅಥವಾ "ಹ್ಯಾಕರ್ ಕಾನ್ಸ್' ಎಂದು ಹೇಳಲಾಗುವ ಭೂಗತ ಕಂಪ್ಯೂಟರ್ ಅನ್ನು ಸಾಮಾನ್ಯವಾದ ನೈಜ ಜಗತ್ತಿನ ಗುಂಪು ಬೆಂಬಲಿಸುತ್ತದೆ. ಸಮ್ಮರ್‌ಕಾನ್ (ಬೇಸಿಗೆ), ಡಿಇಎಫ್ ಕಾನ್, ಹೋಹೋಕಾನ್ (ಕ್ರಿಸ್‌ಮಸ್), ಶ್ಮೂಕಾನ್ (ಫೆಬ್ರವರಿ), ಬ್ಲಾ್ಯಕ್‌ಹ್ಯಾಟ್, ಹ್ಯಾಕರ್ ಹಾಲ್ಟೆಡ್, ಮತ್ತು ಹೆಚ್. ಒ.ಪಿ.ಇ. ಸೇರಿದಂತೆ ಪ್ರತಿ ವರ್ಷ ಹಲವಾರು ಜನರನ್ನು ಸೆಳೆಯುತ್ತದೆ. ಅವರು ವಿವರಣೆಯನ್ನು ವಿಸ್ತರಿಸಲು ಸಹಾಯ ಮಾಡಿದರು ಮತ್ತು ಭೂಗತ ಕಂಪ್ಯೂಟರ್‌ನ ಪ್ರಾಮುಖ್ಯತೆಯನ್ನು ಘನೀಕರಿಸಿದರು.

ಹ್ಯಾಕರ್ ನಿಲುವುಗಳು:– ವಿಭಿನ್ನ ನಿಲುವುಗಳು ಮತ್ತು ಉದ್ದೇಶಗಳೊಂದಿಗೆ ಒಬ್ಬರಿಗೊಬ್ಬರು ಎಲ್ಲೆ ಗುರುತಿಸಿಕೊಳ್ಳಲು ಭೂಗತ ಕಂಪ್ಯೂಟರ್‌ನ ಉಪಗುಂಪುಗಳು ವಿಭಿನ್ನ ರೀತಿಯ

ಪದಗಳನ್ನು ಬಳಸುತ್ತಾರೆ, ಅಥವಾ ಅವರು ಒಪ್ಪಿಕೊಳ್ಳದೇ ಇರುವಂತಹ ಕೆಲವು ನಿರ್ದಿಷ್ಟ ಗುಂಪಿನೊಂದಿಗೆ ಬೇರೆಯಾಗಲು ಪ್ರಯತ್ನಿಸುತ್ತಾರೆ. ಭೂಗತ ಕಂಪ್ಯೂಟರ್ ಸದಸ್ಯರನ್ನು ಕ್ರಾ್ಯಕರ್ಸ್ ಕರೆಯಬೇಕೆಂದು ಎರಿಕ್ ಎಸ್. ರೇಮಂಡ್ ಅವರು ವಾದಿಸುತ್ತಾರೆ. ಇನ್ನೂ ಆ ಜನರು ಅವರನ್ನೇ ಹ್ಯಾಕರ್ಸ್ ಅಂತೆ ಕಾಣುತ್ತಾರೆ ಮತ್ತು ರೆಮೆಂಡ್‌ನಿಂದಲೇ ತೀವ್ರವಾಗಿ ನಿರಾಕರಿಸಲಾಗುವ ದೃಷ್ಟಿಕೋನ ಹೊಂದಿರುವ ಹ್ಯಾಕರ್ ಸಂಸ್ಕೃತಿಯನ್ನು ರೇಮೆಂಡ್ನ ದೃಷ್ಟಿಕೋನಗಳನ್ನೂ ಇವರು ಸೇರಿಸಲು ಪ್ರಯತ್ನಿಸುತ್ತಾರೆ. ಹ್ಯಾಕರ್–ಕ್ರಾ್ಯಕರ್ ದ್ವಿವಿಭಜನೆಯ ಬದಲಾಗಿ, ಇವರು ವಿಭಿನ್ನ ವರ್ಗಗಳ ರೋಹಿತಕ್ಕೆ ಹೆಚ್ಚು ಒತ್ತು ನೀಡುತ್ತಾರೆ. ಅಂದರೆ ವೈಟ್‌ಹ್ಯಾಟ್ (ನೈತಿಕ ಹ್ಯಾಕಿಂಗ್), ಗ್ರೇ ಹ್ಯಾಟ್, ಬ್ಲಾ್ಯಕ್‌ಹ್ಯಾಟ್ ಮತ್ತು ಸ್ಕ್ರಿಪ್ಟ್ ಕಿಡ್ಡಿಯಂತಹವು ರೇಮಂಡ್‌ಗೆ ಭೇದ್ಯವಾಗಿ, ಬ್ಲಾ್ಯಕ್‌ಹ್ಯಾಟ್ ಹ್ಯಾಕರ್ಸ್, ಅಥವಾ ಅಕ್ರಮ ಉದ್ದೇಶಗಳೊಂದಿಗೆ ಹೆಚ್ಚು ಸಾಮಾನ್ಯ ಹ್ಯಾಕರ್ಸ್ ಅವರು ಬ್ಲಾ್ಯಕ್‌ಹ್ಯಾಕ್ ಹ್ಯಾಟ್ ಹ್ಯಾಕರ್ಸ್ ಅನ್ನು ಉಲ್ಲೇಖಿಸಲು ಸಾಮಾನ್ಯವಾಗಿ ಕ್ರಾ್ಯಕರ್ ಪದವನ್ನು ನಿಗಧಿಪಡಿಸುತ್ತಾರೆ.

ವೈಟ್ ಹ್ಯಾಟ್:– ದುರುದ್ದೇಶವಲ್ಲದ ಕಾರಣಗಳಿಗಾಗಿ ವೈಟ್ ಹ್ಯಾಟ್ ಹ್ಯಾಕರ್ ಭದ್ರತೆಯನ್ನು ಉಲ್ಲಂಘಿಸುತ್ತಾರೆ. ಉದಾಹರಣೆಗೆ ತಮ್ಮದೇ ಆದ ಭದ್ರತೆ ವ್ಯವಸ್ಥೆಯನ್ನು ಪರೀಕ್ಷಿಸಲು ಬಳಸುತ್ತಾರೆ. ಕಂಪ್ಯೂಟರ್ ವ್ಯವಸ್ಥೆಗೊಳೊಂದಿಗೆ ಕಲತುಕೊಳ್ಳುವಲ್ಲಿ ಮತ್ತು ಕೆಲಸ ಮಾಡುವಲ್ಲಿ ಈ ರೀತಿಯ ಹ್ಯಾಕರ್ ಆನಂದವನ್ನು ಪಡೆಯುತ್ತಾರೆ ಮತ್ತು ಫಲಿತಾಂಶವಾಗಿ ವಿಷಯದ ಕುರಿತು ಆಳವಾಗಿ ಅರ್ಥಮಾಡಿಕೊಳ್ಳುತ್ತಾರೆ. ಆ ರೀತಿಯ ಜನರು ಸಾಮಾನ್ಯವಾಗಿ ತಮ್ಮ ಹ್ಯಾಕಿಂಗ್

ತಂತ್ರಗಳನ್ನು ನ್ಯಾಯ ಸಮ್ಮತವಾದ ಹಾದಿಯಲ್ಲಿ ಬಳಸುತ್ತಾರೆ, ಅಂದರೆ ಭದ್ರತೆ ಅಲೋಚಕರಾಗುವುದು. ಹ್ಯಾಕರ್ ಭದ್ರತೆಯ ಲ್ಲಿರುವವನ್ನಗಿಲ್ಲದಿದ್ದರೂ 'ಹ್ಯಾಕರ್' ಪದವು ಮೂಲವಾಗಿ ಈ ರೀತಿಯ ಜನರನ್ನು ಒಳಗೊಂಡಿತ್ತು.

ಗ್ರೇಹ್ಯಾಟ್:– ನೀತಿಗಳು ಮತ್ತು ಅಥವಾ ಬಾರ್ಡರ್‌ಲೈನ್ ನೀತಿತ್ವದ ಹ್ಯಾಕರ್ ಆಗಿದೆ. ಯಾವಾಗಲೂ ಸರಳವಾಗಿ ಒಪ್ಪಿಕೊಳ್ಳಲಾಗುತ್ತದೆ.

ಬ್ಲಾ ಕ್‌ಹ್ಯಾಟ್:– ಬ್ಲಾ ಕ್‌ಹ್ಯಾಟ್ ಹ್ಯಾಕರ್ ಅನ್ನು ಕೆಲವೊಮ್ಮೆ 'ಕ್ರ್ಯಾಕರ್' ಎಂದೂ ಕರೆಯಲಾಗುತ್ತದೆ, ಕೆಲವೊಮ್ಮೆ ಕಂಪ್ಯೂಟರ್ ಭದ್ರತೆಯನ್ನು ಯಾವುದೇ ದ್ರುಢೀಕರನವಿಲ್ಲದೆ ಅಥವಾ ತಂತ್ರಜ್ಞಾನವನ್ನು (ಸಾಮಾನ್ಯವಾಗಿ ಒಂದು ಕಂಪ್ಯೂಟರ್, ಫೋನ್ ವ್ಯವಸ್ಥೆ ಅಥವಾ ನೆಟ್‌ವರ್ಕ್) ನಾಶಪಡಿಸಲು, ಕ್ರೆಡಿಟ್ ಕಾರ್ಡ್ ವಂಚನೆ, ಗುರುತಿಸುವಿಕೆ ಕಳ್ಳತನ, ವಂಚನೆ, ಆಥವಾ ಇತರ ರೀತಿಯ ಅಕ್ರಮ ಚಟುವಟಿಕೆಯನ್ನು ಬಲಸುತ್ತಾರೆ.

ಸ್ಕ್ರಿಪ್ಟ್ ಕಿಡ್ಡಿ:– ಸ್ಕ್ರಿಪ್ಟ್ ಕಿಡ್ಡಿ ಎಂಬುದು ಇತರರಿಂದ ರಚಿಸಲಾದ ಪ್ರೀ – ಪ್ಯಾಕ್ ಮಾಡಲಾದ ಸ್ವಯಂಚಾಲಿತ ಸಲಕರಣೆಗಳನ್ನು ಬಳಸಿಕೊಂಡು ತಂತ್ರಜ್ಞರಲ್ಲದವರು ಕಂಪ್ಯೂಟರ್ ವ್ಯವಸ್ಥೆಯನ್ನು ಸಾಮಾನ್ಯವಾಗಿ ಕಡಿಮೆ ಅರ್ಥಮಾಡಿಕೊಳ್ಳುವಿಕೆಯೊಂದಿಗೆರುವವರು ಮಾಡುತ್ತಾರೆ. ಇವುಗಳೆಲ್ಲಾ ಹ್ಯಾಕರ್ ಸಮುದಾಯದಲ್ಲಿನ ಬಹಿಸ್ಕೃತವಾದವಾಗಿವೆ.

ಹ್ಯಾಕ್ಟಿವಿಸ್ಟ್:– ಸಾಮಾಜಿಕ, ಸೈದ್ಧಾಂತಿಕ, ಧಾರ್ಮಿಕ ಅಥವಾ ರಾಜಕೀಯ ಸಂದೇಶವನ್ನು ಘೋಷಿಸಲು ತಂತ್ರಜ್ಞಾನವನ್ನು ಬಳಸಿಕೊಳ್ಳುವ ಹ್ಯಾಕರ್ ಅನ್ನು ಹ್ಯಾಕ್ಟಿವಿಸ್ಟ್ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಹೇಳುವುದಾದಪ್ಪೆ, ಹೆಚ್ಚಿನ ಹ್ಯಾಕ್ಟಿವಿಸಮ್ ವೆಬ್‌ಸೈಟ್ ವಿರೂಪಗೊಳಿಸುವುದು ಅಥವಾ ಸೇವೆ ದಾಳಿಗಳ ನಿರಾಕರಣೆಯನ್ನು ಒಳಗೊಂಡಿರುತ್ತದೆ. ಹೆಚ್ಚಿನ ತೀವ್ರ ಸಂದರ್ಭಗಳಲ್ಲಿ, ಹ್ಯಾಕ್ಟಿವಿಸಮ್ ಅನ್ನು ಸೈಬರ್ ಬಯೋತ್ವಾದನೆಯ ಸಾಧನದಂತೆ ಬಳಸಲಾಗುತ್ತಿದೆ. ಹ್ಯಾಕ್ಟಿವಿಸ್ಟ್‌ಗಳನ್ನು ನಿಯೋಹ್ಯಾಕರ್ಸ್ ಎಂದು ಕರೆಯಲಾಗುತ್ತದೆ.

ಸಾಮಾಜಿಕ ಎಂಜಿನಿಯರಿಂಗ್:– ಸಿಸ್ಟಂನ ಕುರಿತು ಸೂಕ್ಷ್ಮ ಮಾಹಿತಿಯನ್ನು ಬಹಿರಂಗಪಡಿಸುವಲ್ಲಿ ಸಾಮಾಜಿಕ ಎಂಜಿನಿಯರಿಂಗ್ ಒಂದು ಕಲೆಯಾಗಿದೆ. ಇದನ್ನು ಯಾರಾದರು ಪರವಾಗಿ ಅಥವಾ ಆ ರೀತಿಯ ಮಾಹಿತಿಯನ್ನು ಪಡೆದುಕೊಳ್ಳುವಲ್ಲಿ ನೀವು ಅನುಮತಿಗಳನ್ನು ಹೊಂದಿರುವಿರಿ ಎಂದು ನಂಬುವಂತೆ ಮಾಡುವ ಮೂಲಕ ಇದನ್ನು ಮಾಡಲಾಗುತ್ತದೆ.

ಟ್ರೋಜನ್ ಹಾರ್ಸ್‌ಗಳು:– ಟ್ರೋಜನ್ ಹಾರ್ಸ್ ಎಂಬುದು ಒಂದು ರೀತಿ ಮಾಡುತ್ತಿರುವಂತೆ, ಅದರೆ ಇದು ಬೇರೆನನ್ನೂ ಮಾಡುತ್ತಿರುತ್ತದೆ. ಟ್ರೋಜನ್ ಹಾರ್ಸ್ ಅನ್ನು ಕಂಪ್ಯೂಟರ್‌ನಲ್ಲಿ ಹಿಂದಿನ ಬಾಗಿಲನಂತೆ ಹೊಂದಿಸಿ ನಂತರ ಸಮಯದಲ್ಲಿ ಒಳಪ್ರವೇಶಿಸುವಂತೆ ಬಳಸಬಹುದಾಗಿದೆ (ಟ್ರೋಜಾನ್ ವಾರ್ಸ್ ನಿಂದ ಹಾರ್ಸ್ ಅನ್ನು ಉಲ್ಲೇಖಿಸುತ್ತದೆ. ಒಳಪ್ರವೇಶಿಸುವವರನ್ನು ಒಳಕ್ಕೆ ಅನುಮತಿಸುವ ಮೂಲಕ ಅದೇ ರೀತಿಯ ಕಾರ್ಯವನ್ನು ಹೊಂರಿರುವ ಕಾರಣ ಇದಕ್ಕೆ ಆ ಹೆಸರು ನೀಡಲಾಗಿದೆ).

ವೈರಸ್:– ಇತರ ಎಕ್ಸಿಕ್ಯೂಟಬಲ್ ಕೋಡ್ ಅಥವಾ ಡಾಕ್ಯುಮೆಂಟ್‌ಗಳಿಗೆ ನಕಲುಗಳನ್ನು ಸೇರ್ಪಡಿಸುವ ಮೂಲಕ ಹರಡುವ ಸ್ವಯಂ – ಪುನರಾವರ್ತನೆ ಪ್ರೋಗ್ರಾಂ ಅನ್ನು ವೈರಸ್ ಎಂದು ಕರೆಯುತ್ತಾರೆ. ಆದ್ದರಿಂದ, ಜೀವಿಸುತ್ತಿರುವ ಸೆಲ್‌ಗಳಲ್ಲಿ ಸೇರ್ಪಡೆಯಾಗಿ ಹೇಗೆ ವ್ಯಾಪಿಸುತ್ತದೆಯೊ ಅದೇ ರೀತಿ ಕಂಪ್ಯೂಟರ್ ವೈರಸ್ ಜೈವಿಕ ವೈರಸ್‌ನಂತೆಯೆ ವರ್ತಿಸುತ್ತದೆ.

ಕೆಲವು ಹಾನಿಯಿಲ್ಲದಿರುವುದಾಗಿದ್ದರೆ ಅಥವಾ ಕೇವಲ ಮೋಸವಾಗಿದ್ದರೆ ಹಲವಾರು ಕಂಪ್ಯೂಟರ್ ವೈರಸ್ ಅನ್ನು ವಂಚನೀಯ ಎಂದು ಪರಿಗಣಿಸಲಾಗುತ್ತದೆ.

ಸಾಮಾನ್ಯ ವಿಧಾನಗಳು

ಸುರಕ್ಷತೆಯ ಕಾರ್ಯರೂಪ:– ಸುರಕ್ಷತೆಯ ಕಾರ್ಯರೂಪವು ಸಿದ್ಧಗೊಳಿಸಿದ ಅಪ್ಲಿಕೇಶನ್ ಅಗಿದ್ದು ತಿಳಿದಿರುವ ಕೊರತೆಯ ಪ್ರಯೊಜನ ಪಡೆದುಕೊಳ್ಳುತ್ತದೆ. ಸುರಕ್ಷತೆ ಕಾರ್ಯರೂಪದ ಸಾಮಾನ್ಯ ಉದಾಹರಣೆಗಳೆಂದರೆ ಎಸ್‌ಕ್ಯುಎಲ್ ಇಂಜೆಕ್ಷನ್, ಕ್ರಾಸ್‌ಸೈಟ್ ಸ್ಕ್ರಿಪ್ಟಿಂಗ್ ಮತ್ತು ಕ್ರಾಸ್ ಸೈಟ್ ರಿಕ್ವೆಸ್ಟ್ ಪೋರ್ಜರಿಯು ಉಪಪ್ರೋಗ್ರಾಮಿಂಗ್ ರೂಢಿಯಿಂದ ಉಪಪ್ರಮಾಣಿತವಾದ ಫಲಿತಾಂಶದಿಂದ ಸುರಕ್ಷತೆಯ ರಂದ್ರಗಳನ್ನು ದುರುಪಯೋಗಪಡಿಸಿಕೊಳ್ಳುತ್ತದೆ. ಇತರ ಕಾರ್ಯರೂಪಗಳನ್ನು ಎಫ್‌ಟಿಪಿ, ಹೆಚ್‌ಟಿಟಿಪಿ, ಪಿಹೆಚ್‌ಪಿ, ಎಸ್‌ಎಸ್‌ಹೆಚ್, ಟೆಲ್‌ನೆಟ್ ಮತ್ತು ಕೆಲವು ವೆಬ್–ಪುಟಗಲು, ವೆಬ್‌ಸೈಟ್ / ಡೊಮೇನ್ ಹ್ಯಾಕಿಂಗ್‌ನಲ್ಲಿ ಇವುಗಳು ಬಹಳ ಸಾಮಾನ್ಯವಾಗಿವೆ.

ಭೇದ್ಯತೆಗಳ ಸ್ಕಾನರ್:– ತಿಳಿದಿರುವ ಬಲಹೀನತೆಗಾಗಿ ನೆಟ್‌ವರ್ಕ್ ಕಂಪ್ಯೂಟರ್‌ಗಳ ಶಿಘ್ರ ಶೋಧನೆಯ ಬಳಕೆಗಾಗಿ ಭೇದ್ಯತೆಗಳ ಸ್ಕಾ ್ಯನರ್‌ನ್ನು ಬಳಸಲಾಗುತ್ತದೆ. ಹ್ಯಾಕರ್ಸ್ ಸಾಮಾನ್ಯವಾಗಿ ಪೋರ್ಟ್ ಸ್ಕಾ ್ಯನರ್ ಅನ್ನು ಸಹ ಬಳಸುತ್ತದೆ. ನಿರ್ದಿಷ್ಟ ಕಂಪ್ಯೂಟರ್‌ನಲ್ಲಿ ಯಾವ ಪೋರ್ಟ್‌ಗಳು 'ತೆರೆದಿದೆ' ಅಥವಾ ಕಂಪ್ಯೂಟರ್ ಅನ್ನು ಪ್ರವೇಶಿಸಲು ಲಭ್ಯವಿದೆ ಎಂಬುದನ್ನು ಪರಿಶೀಲಿಸಲು ಮತ್ತು ಕೆಲವು ಬಾರಿ ಯಾವ ಪ್ರೋಗ್ರಾಂ ಅಥವಾ ಸೇವೆಯನ್ನು ಆ ಪೋರ್ಟ್‌ನಲ್ಲಿ ಪಟ್ಟಿ ಮಾಡಲಾಗುತ್ತಿದೆ, ಮತ್ತು ಅದರ ಆವೃತ್ತಿಯನ್ನು ಪರಿಶೀಲಿಸುತ್ತದೆ (ಫೈರ್‌ವಾಲ್‌ಗಳು ಇನ್‌ಬೌಂಡ್ ಮತ್ತು ಔಟ್‌ಬೌಂಡ್ ಎರಡೂ ಪೋರ್ಟ್‌ಗಳು / ಮೆಷಿನ್‌ಗಳಿಗೆ ಒಳನ್ನುಗ್ಗುವವರನ್ನು ತಡೆಯುತ್ತದೆ, ಆದರೂ ಸಹ ಸುತ್ತುವರಿಯುವ ಸಂಭವವಿದೆ ಎಂಬುದನ್ನು ಗಮನಿಸಿ).

ಪಾಸ್‌ವರ್ಡ್ ಕ್ರಾ ್ಯಕಿಂಗ್

ಪ್ಯಾಕೆಟ್ ಸ್ನಿಫರ್:– ಪ್ಯಾಕೆಟ್ ಸ್ನಿಫರ್ ಡೇಟಾ ಪ್ಯಾಕೆಟ್‌ಗಳನ್ನು ಕ್ಯಾಪ್ಚರ್ ಮಾಡುವ ಅಪ್ಲಿಕೇಶನ್ ಆಗಿದೆ, ಇದನ್ನು ಪಾಸ್‌ವರ್ಡ್‌ಗಳು ಮತ್ತು ಇತರ ಡೇಟಾವನ್ನು ಕ್ಯಾಪ್ಚರ್ ಮಾಡಲು ನೆಟ್‌ವರ್ಕ್‌ನಾದ್ಯಂತ ಬಳಸಲಾಗುತ್ತದೆ.

ಸ್ಫೂಫಿಂಗ್ ದಾಳ:– ಸ್ಫೂಫಿಂಗ್ ದಾಳಿಯು ಒಂದು ಪ್ರೋಗ್ರಾಂ, ಸಿಸ್ಟಂ, ಅಥವಾ ವೆಬ್‌ಸೈಟ್ ಅನ್ನು ಕಪಟವಾಗಿ ಮತ್ತೊಂದರಂತೆ ಡೇಟಾವನ್ನು ತಪ್ಪಾಗಿ ತೋರಿಸುತ್ತಾ ಈ ಮೂಲಕ ಬಳಕೆದಾರ ಅಥವಾ ಮತ್ತೊಂದು ಪ್ರೋಗ್ರಾಂಗೆ ನಂಬಲರ್ಹ ಮೂಲವೆಂದು ನಂಬುವಂತೆ ಮಾಡುವಂತಹವುಗಳನ್ನು ಒಳಗೊಂಡಿರುತ್ತದೆ. ಪ್ರೋಗ್ರಾಂಗಳು, ಸಿಸ್ಟಂಗಳು, ಅಥವಾ ಬಳಕೆದಾರರನ್ನು ಬಳಕೆದಾರ ಹೆಸರುಗಳು ಮತ್ತು ಪಾಸ್‌ವರ್ಡ್‌ಗಳಂತಹ ಗೌಪ್ಯ ಮಾಹಿತಿಯನ್ನು ದಾಳಿಕೋರರಿಗೆ ಬಹಿರಂಗಪಡಿಸುವುದು ಸಾಮಾನ್ಯವಾಗಿ ಇದರ ಉದ್ದೇಶವಾಗಿರುತ್ತದೆ.

ಪ್ರಾಚೀನ ಭಾರತೀಯರಿಗಿದ್ದ ಆಹಾರ ಪರಿಜ್ಞಾನ

ಹೆಚ್. ವಿ. ಕಾಶಿನಾಥಶಾಸ್ತ್ರಿ
ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಸಹ್ಯಾದ್ರಿ ಕಾಲೇಜು, ಆವರಣ, ಶಿವಮೊಗ್ಗ–5677 203 E-mail: panditaradya@gmail.com

ಇಂದು ಮಾನವನಿಗೆ ಅತ್ಯಂತ ಮುಖ್ಯವಾದುದು, ಹಾಗೂ ಅತ್ಯಗತ್ಯವಾದುದು ಆರೋಗ್ಯ, ಇದು ದೈಹಿಕವಾಗಿಯೂ ಇರಬಹುದು ಮಾನಸಿಕವಾಗಿಯೂ ಇರಬಹುದು. ಎರಡು ಒಂದಕ್ಕೊಂದು ಪೂರಕವೇ ದೈಹಿಕವಾಗಿ ರೋಗಗ್ರಸ್ಥನಾದರೆ ಮಾನಸಿಕವಾಗಿ ಖಿನ್ನನಾಗುತ್ತಾನೆ. ಮಾನಸಿಕವಾಗಿ ಖಿನ್ನನಾಗಿದ್ದರೆ ದೈಹಿಕವಾಗಿ ನಿಸ್ತೇಜನಾಗುತ್ತಾನೆ. ಇವುಗಳ ಪರಿಹಾರಕ್ಕಾಗಿ ಪ್ರಾಚೀನ ಭಾರತೀಯರು ಹಲವಾರು ಜೀವನಶೈಲಿಯನ್ನು ತಿಳಿಸಿದ್ದಾರೆ. ಅವುಗಳಲ್ಲಿ ಆಹಾರ ಪದ್ಧತಿಯೂ ಪ್ರಮುಖವಾದುದು. ಇಂದಿನ ಆಹಾರ ಶೈಲಿಯು ನಾಕಷ್ಟು ಭಿನ್ನವಾಗಿರುವುದನ್ನು ನಾವು ಕಂಡಿದ್ದೇವೆ. ನಮ್ಮ ಹಿಂದಿನ ತಲೆಮಾರಿನವರ ಆಹಾರ ಪದ್ಧತಿಯೂ ನಮ್ಮ ಆಹಾರ ಪದ್ಧತಿಯೂ ಈಗ ಹೊಸದಾಗಿ ಬರುತ್ತಿರುವ ಆಹಾರ ಪದ್ಧತಿಯೂ ಒಂದಕ್ಕೊಂದು ವ್ಯತಿರಿಕ್ತವಾಗಿರುವುದನ್ನು ನಾವು ಕಂಡಿದ್ದೇವೆ. ಆದರೆ ಇದು ನಮ್ಮ ಮೇಲೆ ಅತ್ಯಂತ ದುಷ್ಪರಿಣಾಮವನ್ನು ಬೀರುತ್ತಿರುವುದು ನಮ್ಮ ಗಮನಕ್ಕೆ ಬರಿದಿರುವುದಿಲ್ಲ. ಇದರ ಕುರಿತಾಗಿ ಈಗೀಗ ಸ್ವಲ್ಪಮಟ್ಟಿನ ಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿದ್ದರೂ ಅದು ಹೆಚ್ಚು ಜನರನ್ನು ತಲುಪುತ್ತಿಲ್ಲ.

ಹಾಗಾಗಿ ನಮ್ಮ ಪೂರ್ವಿಕರು ತಮ್ಮ ಸಾಹಿತ್ಯಗಳಲ್ಲಿ ಆರೋಗ್ಯದ ಕುರಿತಾಗಿ, ಆಹಾರದ ಕುರಿತಾಗಿ ತಿಳಿಸಿರುವ ಮಾಹಿತಿಗಳನ್ನು, ಸಲಹೆಸೂಚನೆಗಳನ್ನು ಅಳವಡಿಸಿಕೊಂಡಿದ್ದೇ ಆದಲ್ಲಿ ಸ್ವಾಸ್ಥ್ಯ ಕಾಪಾಡಿಕೊಳ್ಳುವಲ್ಲಿ ಅತ್ಯಂತ ಹೆಚ್ಚಿನ ಪ್ರಯೋಜನವಾಗುತ್ತದೆ. ಈ ನಿಟ್ಟಿನಲ್ಲಿ ಸರಿಸ್ಕೃತ ಸಾಹಿತ್ಯದಲ್ಲಿ ಉಪದೇಶಿಸಿರುವ ಆಹಾರ ವಿಷಯಕ ಮಾಹಿತಿಗಳನ್ನು ಹಾಗೂ ಅದರ ಪ್ರಸ್ತುತತೆಯನ್ನು ಈ ಪ್ರಬಂಧದಲ್ಲಿ ಪರಿಚರಿಸಲು ಪ್ರಯತ್ನಿಸಲಾಗಿದೆ.

'ಆಹಾರಶುದ್ಧೌ ಸತ್ವಶುದ್ಧಿಃ' ಎನ್ನುವ ಉಪನಿಷತ್ತಿನ ಉಕ್ತಿಯಂತೆ ಆಹಾರ ಶುದ್ಧಿಯಿಂದ ಸತ್ವಶುದ್ಧಿಯುಂಟಾಗುತ್ತದೆ. ಶುದ್ಧಾಹಾರ ಸೇವನೆಯಿಂದ ನಮ್ಮಲ್ಲಿನ ಕೆಟ್ಟಭಾವನೆಗಳೂ ಬದಲಾಗುತ್ತವೆ. ಹಾಗಾಗಿ ಕೇವಲ ಉದರಪೋಷಣೆಗಾಗಿಯಷ್ಟೇ ಆಹಾರವಲ್ಲ. ಅದರಿಂದ ಭಾವವೂ ವಿಕಾಸವಾಗುತ್ತದೆ ಎಂದು ದೃಢಪಟ್ಟಿರುವುದನ್ನು ಹಲವು ಸಂಶೋಧನೆಗಳಿಂದ ತಿಳಿದುಬರುತ್ತದೆ. ಹಾಗಾಗಿಯೇ ಆಹಾರಕ್ಕೆ ಪೂಜ್ಯತ್ವವನ್ನು ನಮ್ಮ ಪೂರ್ವಿಕರು ಕೊಟ್ಟಿದ್ದರು. 'ಅನ್ನಂಬ್ರಹ್ಮೇತಿ ವ್ಯಜಾನಾತ್' ಅಂದರೆ ಅನ್ನವೇ ಪರಬ್ರಹ್ಮವೆಂದು ಉಪನಿಷತ್ತೂ ಕೂಡ ತಿಳಿಸುತ್ತದೆ. ಹಾಗಾಗಿಯೇ ಆಹಾರವನ್ನು ಅತ್ಯಂತ ಗೌರವದಿಂದ ಕಂಡಾಗಲೇ ಆತನಿಗೆ ಅದರಿಂದುಂಟಾಗುವ ಪರಿಣಾಮವೇ ಬೇರೆ. ಹಾಗಾಗಿಯೇ ಆಹಾರ ಸೇವಿಸುವ ಸ್ಥಳವು ಅತ್ಯಂತ ಶುಚಿಯಾಗಿರಬೇಕು. ಹಾಗೂ ಆಹಾರ ಸೇವಿಸುವ ವಾತಾವರಣ ಪರಿಶುದ್ಧವಾಗಿರಬೇಕು. ಹಾಗೂ ಆಹಾರ ಸೇವಿಸುವ ಮೊದಲು ಸೇವಿಸುವ ಸಂದರ್ಭದಲ್ಲಿ ದೇವತಾ ಪ್ರಾರ್ಥನೆ ಮಾಡುವ ಪರಿಪಾಠವಿತ್ತು. ಇದರಿಂದ ಮಾನಸಿಕವಾಗಿ ಅತ್ಯಂತ ಪ್ರಭಾವವುಂಟಾಗುವುದೆಂದು ಮನಶ್ಶಾಸ್ತ್ರಜ್ಞರೂ ಕೂಡ ಸಮ್ಮತಿಸಿದ್ದಾರೆ. ಇಂತಹ ಪರಿಶುದ್ಧವಾದ ಆಹಾರದ ಸೇವನೆಯಿಂದ ದೇಹಕ್ಕೆ ಅಗತ್ಯವಾದ ರಕ್ತಾದಿ ಧಾತುಗಳು ಪರಿಪೂರ್ಣವಾಗಿ ವರ್ಧಿಸುತ್ತವೆ ಎಂಬುದನ್ನು ಆಗಲೇ ಕಂಡುಕೊಂಡಿದ್ದರು. ಆದರೆ ಇಂದಿನ ನಮ್ಮ ಆಹಾರ ಸೇವನೆ ಇದಕ್ಕೆ ತದ್ವಿರುದ್ಧವಾಗಿದೆ. ರಸ್ತೆಬದಿಯಲ್ಲಿನ ಕಲುಷಿತವಾತಾವರಣದಲ್ಲಿ, ಅಸಂಬದ್ಧ ಪ್ರಲಾಪಗಳೊಡನೆ, ದೂರದರ್ಶನದಲ್ಲಿನ ಅನಪೇಕ್ಷಿತ ಕಾರ್ಯಕ್ರಮಗಳ ವೀಕ್ಷಣೆಯ ಮೂಲಕ ಆಹಾರ ಸೇವಿಸುತ್ತಿದ್ದೇವೆ. ಇದು ಮಾನಸಿಕವಾಗಿಯೂ, ದೈಹಿಕವಾಗಿಯೂ ದುಷ್ಪರಿಣಾಮವನ್ನು ಬೀರುತ್ತದೆ.

ಮಾತ್ರಯಾಪ್ಯಭ್ಯವಹೃತಂ ಪಥ್ಯಂ ಚಾನ್ನರಜೀರ್ಯತಿ ।

ಚಿಂತಾಶೋಕಭಯಕ್ರೋಧದುಃಖಶಯ್ಯಾಪ್ರಜಾಗರೈಃ ॥

(ಚರಕ ಸಂಹಿತೆ)

ಪ್ರಮಾಣಬದ್ಧವಾಗಿ ನಾವು ದುಶ್ಚಿಂತನೆಗಳಿಂದ ಸೇವಿಸುವ' ಆಹಾರವೂ ಕೂಡ ಶೋಕ, ಭಯ, ಕ್ರೋಧ, ದುಃಖ ಹಾಗೂ ಹಗಲು ನಿದ್ರೆ, ರಾತ್ರಿ ಜಾಗರಣೆ ಇತ್ಯಾದಿ ದುಷ್ಫಲಗಳನ್ನುಂಟುಮಾಡುತ್ತವೆ. ಎಂದು ಚರಕ ಸಂಹಿತೆಯಲ್ಲಿ ಹೇಳಲಾಗಿದೆ.

ನಾವು ಸೇವಿಸುವ ಆಹಾರವು ಹಿತವಾಗಿರಬೇಕು ಹಾಗೂ ಮಿತವಾಗಿರಬೇಕು ಇಲ್ಲದಿದ್ದಲ್ಲಿ ಅದು ಆರೋಗ್ಯಕ್ಕಿಂತ ರೋಗಕ್ಕೆ ಕಾರಣವಾಗುತ್ತದೆ.

ಅನಾತ್ವವಂತಃ ಪಶುವದ್ಭುಂಜತೇ ಯೇ ಪ್ರಮಾಣತಃ ।

ರೋಗಾನೀಕಸ್ಯ ತೇ ಮೂಲಮಜೀರ್ಣಂ ಪ್ರಾಪ್ನುವಂತಿ ಹಿ ॥

(ಸುಶ್ರುತ ಸಂಹಿತೆ)

ಚಪಲಕ್ಕಾಗಿ ತಿನ್ನುವವರು ಅಂದರೆ ತಿನ್ನುಬಾಕರು ಪ್ರಮಾಣದ ಪರಿವೆಯೇ ಇಲ್ಲದೆ ಪಶುವಿನಂತೆ ಊಟಮಾಡುತ್ತಾರೆ. ಅಂತಹವರು ರೋಗಕ್ಕೆ ತುತ್ತಾಗುತ್ತಾರೆ. ಹಾಗಾಗಿ ದೇಹಕ್ಕೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಸೇವಿಸಬೇಕು. ಏಕೆಂದರೆ

ಪ್ರಾಯೇಣಾಹಾರವೈಷಮ್ಯಾದಜೀರ್ಣಂ ಜಾಯತೇ ನೃಣಾಂ ।

ತನ್ಮೂಲೋ ರೋಗಸಂಘಾತಸ್ತದ್ವಿನಾಶಾದ್ವಿನಶ್ಯತಿ ॥

(ಅರ್ಥಸಂಗ್ರಹ)

ಸಾಮಾನ್ಯವಾಗಿ ಆಹಾರದ ಏರುಪೇರಿನಿಂದಲೇ ಮನುಷ್ಯನಿಗೆ ಅಜೀರ್ಣವುಂಟಾಗುತ್ತದೆ. ಹಾಗಾಗಿ ಎಲ್ಲಾ ರೋಗಗಳ ಮೂಲ ಅಜೀರ್ಣವೇ. ಅದೇ ಇಲ್ಲದಿದ್ದರೆ ರೋಗವೇ ಘಟಿಸುವುದಿಲ್ಲ. ಆದ್ದರಿಂದ ಆಹಾರವನ್ನು ಎಷ್ಟು ಅಗತ್ಯವೋ ಎಷ್ಟು ಯೋಗ್ಯವೋ ಅಷ್ಟು ಸ್ವೀಕರಿಸುವುದು ಉತ್ತಮ. ಇಲ್ಲದಿದ್ದರೇ ಅದೇ ವಿಷವಾಗುತ್ತದೆ.

ಚಾಣಕ್ಯನು ತನ್ನ ಕೃತಿಯಲ್ಲಿ ಈ ವಿಷಯವನ್ನು ಹೀಗೆ ಪ್ರಸ್ತಾಪಿಸುತ್ತಾನೆ –

ದುರಧೀತಾ ವಿಷಂ ವಿದ್ಯಾ ಅಜೀರ್ಣೇ ಭೋಜನಂ ವಿಷಂ ।

ವಿಷಂಗೋಷ್ಠೀ ದರಿದ್ರಸ್ಯ ವೃದ್ಧಸ್ಯ ತರುಣೀ ವಿಷಂ ॥

(ಚಾಣಕ್ಯ ಶತಕ)

ದುಷ್ಟರೀತಿಯಲ್ಲಿ ಕಲಿತ ವಿದ್ಯೆ ವಿಷಕ್ಕೆ ಸಮಾನ ಅಂತೆಯೇ ಅಜೀರ್ಣವಿದ್ದಾಗ ಭೋಜನವು ವಿಷ, ದರಿದ್ರನಿಗೆ ಗೋಷ್ಠಿಯು ವಿಷ ಹಾಗೂ ವೃದ್ಧನಿಗೆ ತರುಣಿಯಾದ ಪತ್ನಿಯು ವಿಷ. ಎಂದಿದ್ದಾನೆ ಹಾಗಾಗಿ ಅಜೀರ್ಣವೇ ಸರ್ವರೋಗಕ್ಕೂ ಆಗರ ಆದ್ದರಿಂದ ಹಿತಾಹಾರಿ ಮತ್ತು ಮಿತಾಹಾರಿಯಾಗುವುದರಿಂದ ಆರೋಗ್ಯವು ನಮ್ಮ ಕೈಯಲ್ಲೇ ಇರುತ್ತದೆ.

ಹಾಗಾಗಿ ನಾವು ಸೇವಿಸುವ ಆಹಾರ ಅಗತ್ಯಕ್ಕೆ ತಕ್ಕಂತೆ ಇರಬೇಕು. ಆರೋಗ್ಯಶಾಸ್ತ್ರದ ಪ್ರಕಾರ ಆಹಾರವನ್ನು ಸಂಪೂರ್ಣವಾಗಿ ಉದರಕ್ಕೆ ತುಂಬಬಾರದು.

ಜಠರಂ ಪೂರಯೇದರ್ಧಮನ್ನೈರ್ಭಾಗಂ ಜಲೇನ ಚ ।

ವಾಯೋಃ ಸಂಚರಣಾರ್ಥಾಯ ಚತುರ್ಥಮವಶೇಷಯೇತ್ ॥

(ವಿಷ್ಣುಪುರಾಣ)

ಅಂದರೆ ಜಠರದ ಅರ್ಧಭಾಗವನ್ನು ಅನ್ನದಿಂದಲೂ, ಖಾಲುಭಾಗವನ್ನು ನೀರಿನಿಂದಲೂ ತುಂಬಬೇಕು. ಉಳಿದ ಖಾಲುಭಗವನ್ನು ವಾಯುವಿನ ಸಂಚಾರಕ್ಕಾಗಿ ಬಿಡಬೇಕು. ಎಂದು ವಿಷ್ಣುಪುರಾಣದಲ್ಲಿ ಹೇಳಿದೆ. ಆಗ ಜೀರ್ಣಕ್ರಿಯೆಗೆ ಅನುಕೂಲವಾಗಿ ಆರೋಗ್ಯವು ಸುಸ್ಥಿರವಾಗುತ್ತದೆ.

ಇಲ್ಲಿ ಆಹಾರವು ಸಸ್ಯಾಹಾರವಾಗಿಯೂ ಇರಬಹುದು ಮಾಂಸಾಹಾರವಾಗಿಯೂ ಇರಬಹುದು ಆದರೆ ಯಾವುದನ್ನು ಯಾವಕಾಲದಲ್ಲಿ ಎಷ್ಟು ಸೇವಿಸಬೇಕೆಂದು ತಿಳಿದು ಸೇವಿಸಿದರೆ ಮಾತ್ರ ಅದು ಪಥ್ಯಾಹಾರವಾಗುತ್ತದೆ.

ಪ್ರಾಣಾಃ ಪ್ರಾಣಭೃತಾಮನ್ನಂ ತದಯುಕ್ತ್ಯಾ ನಿಹಂತ್ಯಸೂನ್ ।

ವಿಷಂ ಪ್ರಾಣಹರಂ ತಚ್ಚ ಯುಕ್ತಿಯುಕ್ತಂ ರಸಾಯನಂ ॥

ಪ್ರಾಣಿಗಳೇ ಪ್ರಾಣಿಗಳಿಗೆ ಆಹಾರವಾಗುತ್ತವೆ. ಇಲ್ಲಿ ಮನುಷ್ಯನು ಒಂದು ಪ್ರಾಣಿಯಾದ್ದರಿಂದ ಇತರ ಪ್ರಾಣಿಯನ್ನು ಸೇವಿಸುವಾಗ ಅದನ್ನು ಸರಿಯಾದ ರೀತಿಯಲ್ಲಿ ಸೇವಿಸಿದರೆ ಅದು ಆಹಾರವಾಗುತ್ತದೆ. ಇಲ್ಲದಿದ್ದಲ್ಲಿ ಅದು ತಿನ್ನುವವನನ್ನೇ ಕೊಲ್ಲುತ್ತದೆ. ಹೇಗೆಂದರೆ ಪ್ರಾಣವನ್ನು ತೆಗೆಯುವಂತಹ ವಿಷವನ್ನೂ ಸಹ ಯುಕ್ತರೀತಿಯಲ್ಲಿ ಬಳಸಿದರೆ ಅದು ಔಷಧವಾಗುತ್ತದೆ. ಅಂತೆಯೇ ಇದೂ ಸಹ.

ಹೀಗೆ ಸಂಸ್ಕೃತದ ಬಹಳಷ್ಟು ಸಾಹಿತ್ಯದಲ್ಲಿ ಆಹಾರ ಪದ್ಧತಿಯನ್ನು ಅಲ್ಲಲ್ಲಿ ಚರ್ಚಿಸಿರುವುದನ್ನು ನೋಡಿದರೆ ಆಹಾರದ ವಿಚಾರವಾಗಿ ಅವರಿಗಿದ್ದ ಆಳವಾದ ಜ್ಞಾನ ತಿಳಿಯುತ್ತದೆ. ಇನ್ನು ಚರಕ, ಸುಶ್ರುತ ಸಂಹಿತೆಗಳಲ್ಲಿ ಇದರ ಕುರಿತಾಗಿ ಸಾಕಷ್ಟು ಮಾಹಿತಿಯಿದೆ. ಇದನ್ನು ಇಂದಿನ ನಮ್ಮ ಆಹಾರ ಶೈಲಿಯಲ್ಲಿ ಅಳವಡಿಸಿಕೊಂಡಿದ್ದೇ ಆದಲ್ಲಿ ಆರೋಗ್ಯವಂತ ಸಮಾಜ ನಿರ್ಮಿಸುವಲ್ಲಿ ಸಹಾಯಕವಾಗುತ್ತದೆ.

ಪರಾಮರ್ಶನ ಗ್ರಂಥಗಳು

1. ಯಾಜ್ಞ್ಯವಲ್ಕ್ಯಸ್ಮೃತಿ – ದಿ.ನಾಗೇಶ ರಂಗೋ ಕುಲಕರ್ಣಿ – ಪ್ರತಿಭಾ ಗ್ರಂಥಮಾಲೆ, ಧಾರವಾಡ.

2. ವೈದ್ಯಕೀಯ ಸುಭಾಷಿತ ಸಾಹಿತ್ಯ – ಪ್ರೊ.ಬ. ರಾಜಶೇಖರಯ್ಯ – ನಾಗಮಲೆ ಜ್ಯೋತಿ ಪ್ರಕಾಶನ, ಮೈಸೂರು.

3. ಸಂಸ್ಕೃತ ಸಾಹಿತ್ಯ ಪರಂಪರೆ – ಡಾ.ಎಂ.ಶಿವಕುಮಾರಸ್ವಾಮಿ – ಭಾರವಿ ಪ್ರಕಾಶನ

4. ಸಂಸ್ಕೃತ ಕಾವ್ಯ – ಡಾ.ಕೆ.ಕೃಷ್ಣಮೂರ್ತಿ – ವಿದ್ಯುತ್ ಪ್ರಕಾಶನ, ಮೈಸೂರು

5. ಸಂಸ್ಕೃತ ಸಾಹಿತ್ಯ ಚರಿತ್ರೆ – ಎಸ್. ಸಂಪತ್ತೈಂಗಾರ್ – ಹಂಸಧ್ವನಿ ಪ್ರಕಾಶನ, ಬೆಂಗಳೂರು

ಐದು ಪೆನ್ನುಗಳ ತಂತ್ರಾಂಶದ ಬಳಕೆಯ – ಒಂದು ನೋಟ

ಶ್ರೀಮತಿ. ಪದ್ಮಾವತಿ
ಸಹಾಯಕ ಪ್ರಾಧ್ಯಾಪಕರು, ಗಣಕಯಂತ್ರ ವಿಭಾಗ, ಎಲ್.ವಿ.ಡಿ. ಮಹಾವಿದ್ಯಾಲಯ, ರಾಯಚೂರು.
Email Id: padmareddy186@gmail.com

ಪಿ.ಐ.ಎಸ್.ಎಮ್ ಎನ್ನುವ ತಂತ್ರಜ್ಞಾನ ಸಾಧನವು ಒಂದು ಪೆನ್ನು ಮತ್ತು ಫಲಕವನ್ನು ಬಳಸಿಕೊಂಡು ಕಾರ್ಯನಿರ್ವಹಿಸುವ ಕಂಪ್ಯೂಟರ್ ಬಳಕೆದಾರರ ಇಂಟರ್‌ಫೇಸಗೆ ಉಪಯೋಗವಾಗುವಂತಹ ಉಪಕರಣವನ್ನು ಎನ್.ಇ.ಸಿ. ನಿಗಮವು ಅನಿಷ್ಕಾರಗೊಳಿಸಿತು. "ಐದು ಪೆನ್ನು ತಂತ್ರಜ್ಞಾನ" ಎನ್ನುವುದು ಪೆನ್ ಕಂಪ್ಯೂಟಿಂಗ್ ಕ್ಷೇತ್ರವಲ್ಲಿನ ಇತ್ತೀಚಿನ ಸಂಶೋಧನೆ. ಪೆನ್ನು ಕಂಪ್ಯೂಟಿಂಗ್ ಒಂದು ವೈವಿಧ್ಯಮಯವಾಗಿದ್ದು, ಬಳಕೆದಾರರು ಒದಗಿಸುವ ಪಾರಂಪರಿಕ ಪ್ರಭಾವದ ಪತ್ತ ಮಾಹಿತಿಗಾಗಿ ಸಂಬಂಧಿಸಿದಂತಹ ಒಂದು ಪ್ರಾಥಮಿಕ ಸಾಧನವಾಗಿ ಒಂದು ತೋರುಗಡ್ಡಿ ಸಾಧನ ಹಾಗೂ ಕೈಬರಹದ ಗುರುತಿಸುವಿಕೆಯನ್ನು ಬಳಸಿಕೊಳ್ಳುವ ಮೂಲಕ ಬಳಕೆದಾರ ಇಂಟರ್‌ಫೇಸ್ ಒಂದನ್ನು ವಿಮ್ಯುಕ್ತಗೊಳಿಸುವುದು. 5 ಪೆನ್ ಪಿ.ಪಿ. ತಂತ್ರಜ್ಞಾನವು 5 ಪೆನ್‌ಗಳು ಸಾಧನಗಳಾಗಿ ಬಳಗೊಂಡಿದ್ದು, ಅವನ್ನು ಪಿ.ಪಿ.ಯು., ಪ್ರಾಜೆಕ್ಟರ್, ವರ್ಚುವರ್ ಕೀಬೋಮನೆ, ಕೆಮೆರಾ ಮತ್ತು ಸೆಲ್ಯೂಲರ್ ಫೋನ್‌ಗಳ ಕಾರ್ಯಗಳನ್ನು ಒದಗಿಸಲು ಬಳಸಲಾಗುತ್ತದೆ. ಎಲ್ಲಾ 5 ಪೆನ್‌ಗಳು ಒಂದಕ್ಕೊಂದು ತಂತ್ರಜ್ಞಾನ ಸಂಪರ್ಕ ಹೊಂದಿದ್ದು, ಅದು ಮುಖ್ಯವಾಗಿ ಬ್ಲೂಟೂತ್ ಆಗಿರುವುದು. ಎಲ್ಲಾ 5 ಪೆನ್‌ಗಳ ಕಟ್ಟನ್ನು ತಂತ್ರಜ್ಞಾನವು ಸೆಲ್ಯೂಲಾರ್ ಫೋನ್ ಪೆನ್ ಮಾರ್ಗವಾಗಿ ಅಂತರ್ಜಾಲದೊಂದಿಗೆ ಸಂಪರ್ಕ ಹೊಂದಿದೆ.

ಪರಿಚಯ: ಸಂಪರ್ಕ ತಂತ್ರಜ್ಞಾನದ ವೇಗವಾದ ಬೆಳವಣಿಗೆ ಈ ಆಧುನೀಕ ಜಗತ್ತಿನಲ್ಲಿ ಹೆಚ್ಚಾಗುತ್ತಿದೆ.ಕಂಪ್ಯೂಟರ್ ಎಲ್ಲರಿಗೂ ತಿಳಿದಿರುವಂತೆ ಬಳೆಸುವ ಪ್ರಮುಖ ಸಂವಹನ ಯಂತ್ರ. ಪ್ರಸುತ 21ನೇ ಶತಮಾನದ ತಂತ್ರಜ್ಞಾನ ಕ್ಷೇತ್ರದಲ್ಲಿ ಇದು ಒಂದು ಹೂಸ ಯುಗದ ತಂತ್ರಜ್ಞಾನ ಎಂದು ಪರಿಗಣಿಸಲಾಗಿದೆ.ಸಮಕಾಲೀನ ಜಗತ್ತಿನಲ್ಲಿ ಸಂವಹನ ತಂತ್ರಜ್ಞಾನವು ದಡ್ಡದಾಗಿ ಬೆಳೆಯುತ್ತಾ ಇದೆ.ಇದು ಬೆಳಕೆದಾರರ ಸ್ನೇಹೀಆಗಿದೆ.ಈ ವಿವಿಧ ಪೆನ್ನುಗಳು ತಮ್ಮದೇ ಆದ ಆಕಾರ ಮತ್ತು ತಮ್ಮದೇ ಆದ ಕಾರ್ಯ ವೈಖರಿಯನ್ನು ಹೂಂದಿವೆ.ಎಲ್ಲಾ ಪೆನ್ ಒಟ್ಟಿಗೆ ಸಂಯೋಜಿಸಿ,ಅವನ್ನು ಒಂದು ಸುಲಭ ಮತ್ತು ಒಂದುಗೂಡಿದ ರೀತಿಯಲ್ಲಿ ನಾವು ಬಳಸಬಹುದು.೨೦೦೩ರಲ್ಲಿ ನಡೆದ ಐ.ಟಿ.ಯು ಟೆಲಿಕಾಂ ವಿಶ್ವ ಪ್ರದರ್ಶನ ಸಮಯದಲ್ಲಿ ಜಿನೀವಾ ಟೋಕಿಯೋ ಮೂಲದ ಎನ್.ಇ.ಸಿ ಕಾರ್ಪೊರೆಷನ್ ಪಿ.ಐ.ಎಸ್.ಎಮ್ ನ ಪರಿಕಲ್ಪನಾ ಮಾದರಿಯನ್ನು ಮಂಡಿಸಿದರು.ಡಿಜಿಟಲ್ ಪೆನ್ ತಂತ್ರಜ್ಞಾನವು ಕೈಬರಹದ ಮಾಹಿತಿಯನ್ನು ಡಿಜಿಟಲ್ ಪ್ರತಿಯನ್ನು ಪಡೆದು ಮತ್ತು ಬ್ಲೂಟೂತ್ ನಿಸ್ತಂತು ತಂತ್ರಜ್ಞಾನದ ಮೂಲಕ ಡಿಜಿಟಲ್ ಸಾಧನಗಳಿಗೆ ಇದನ್ನು ವರ್ಗಾಯಿಸಲಾಗುತ್ತದೆ.ಈ ತಂತ್ರಜ್ಞಾನವು ವಿವಿಧ ಉದ್ದೇಶಗಳಿಗಾಗಿ ಮತ್ತು ಬಹುಮಾಧ್ಯಮ ಚಟುವಟಿಕೆಗಳಿಗಾಗಿ ಬಳಸಬಹುದು.ಎಲ್ಲಾ ವೆಬ್ ಸಂಬಂಧಿಸಿದ ವಿಷಯವನ್ನು ಬಳಕೆದಾರರು ಬಳಸಬಹುದಾಗಿದೆ.



ಚಿತ್ರ:ಐದು ಪೆನ್ನುಗಳ ತಂತ್ರಜ್ಞಾನ

ಘಟಕಗಳು:–

1)ಸಿ.ಪಿ.ಯು ಪೆನ್: ಈ ಪೆನ್ ಎಲ್ಲಾ ಇತರ ನಾಲ್ಕು ಪೆನ್ ಸಾಧನಗಳ ಜೋತೆ ಸಂಪರ್ಕ ಹೊಂದಿದೆ.ಇದು ಒಂದು ಸಂಯುಕ್ತ ಸಾಧನವಾಗಿ ವರ್ತಿಸುತ್ತದೆ.ಇದು ಕೂಡ ಒಂದು ಗಣಕೀಕೃತ ಇಂಜಿನ್ ಆಗಿದೆ.ಇದು ಒಂದು ಡೆಸ್ಕ್‌ಟಪ್ ಕಂಪ್ಯೂಟರ್‌ತರ ಕೆಲಸವನ್ನು ಮಾಡಬಲ್ಲದು.ಹೆಚ್ಚುವರಿಯಾಗಿ,ಇದು ಒಂದು ದ್ವಂದ್ವ ಕೋರ್ ಪ್ರೋಸೆಸರ್ ವ್ಯವಸ್ಥೆಗೆ ಹೊಲುವ ಕಾರ್ಯಗಳನ್ನು ಮಾಡುವುದು.ಈ ಪೆನ್ ವಿಡೋಂಸ್ ಅಪರೇಟಿಂಗ್ ಸಿಸ್ಟಮ್ ಮತ್ತು ದ್ವಂದ್ವ ಕೋರ್ ಸೂಕ್ಷ್ಮ ಸಂಸಾರಕ ಚಿಪ್ ಜೋತೆ ಕೆಲಸ ನಿರ್ವಹಿಸುತ್ತದೆ.



ಚಿತ್ರ: ಸಿ.ಪಿ.ಯು ಪೆನ್

2) ಸಂವಹನ ಪೆನ್: ಈ ಸಾಧನವು ಎಲ್ಲಾ ಲೇಖನಿಗಳ ನಡುವೆ ಸಂವಹನ ಸುಗಮಗೊಳಿಸುತ್ತದೆ.ಈ ಪೆನ್ ಅಂತರ್ಗತ ಸೆಲ್ಯೂಲರ್ ಫೋನ್ ಹಂದಿದ್ದು ಮತ್ತು ಇಂಟರ್ನೆಟ್ ಮುಖಾಂತರ ಎಲ್ಲಾ ಪೆನ್‌ಗಳಿಗೆ ಸಂವಹನ ಮಾಡುತ್ತದೆ,ಆದ್ದರಿಂದ ಇದು ಎಲ್ಲಾ ವೆಬ್ ಸಂಬಂಧಿಸಿದ ಕಾರ್ಯಗಳ ಸಾಮರ್ಥ್ಯ ಹೊಂದಿದೆ. ತೋರುಗಡ್ಡೆ ಸಾದನವು ಸರಿಸಮವಾಗಿ ಮೌಸ ಕಾರ್ಯಗಳನ್ನು ಮಾಡುತ್ತದೆ.ಈ ಪೆನ್ ಬಳಕೆದಾರರಿಗೆ ಮಾಹಿತಿಯನ್ನು ವ್ಯವಹರಿಸಲು "ಪ್ರೆಕ್ಷೇಪಕ ಪೆನ್" ನಹಾಯ ಮಾಡುತ್ತದೆ.

ಚಿತ್ರ:ಸಂವಹನ ಪೆನ್

3) ಪ್ರೆಕ್ಷೇಪಕ ಪೆನ್: ಈ ಪೆನ್ ಒಂದು ಸಾಪ್ರದಾಯಿಕ ಪ್ರೆಕ್ಷೇಪಕ ಕೆಲಸ ಮಾಡುತ್ತದೆ.ಇದರ ಗರಿಷ್ಠ ರೆಸಲ್ಯೂಷನ್ ಉತ್ತಮ ಗುಣಮಟ್ಟದ ಚಿತ್ರ ಒದಗಿಸುತ್ತದೆ.ಇದು 1024*768 ಪಿಕ್ಸೆಲ್ಗಳನ್ನು ಹೊಂದಿದೆ.ಈ ಪೆನ್ ಬಳಕೆದಾರರಿಗೆ ಉತ್ತಮ ಅನುಭವವನ್ನು ನಿಡುವುದು ಮತ್ತು ಒಂದು ಚಪ್ಪಟೆ ಮೇಲ್ಮೈ ಮೇಲೆ ದರ್ಶಿತ ಮಾಡಬಹುದು ಮತ್ತು ಅದರ ಸ್ಪಷ್ಟತೆ ಪ್ರೆಕ್ಷೇಪಕ ಪೆನ್ ಮತ್ತು ದರ್ಶಿತ ಮೇಲ್ಮೈನ ನಡುವಿನ ಅಂತರವನ್ನು ಅವಲಂಬಿಸಿದೆ. ಎರಡು ಪೆನ್ಗಳಲ್ಲಿ ಹೆಚ್ಚಿನ ಅಂತರವಿದ್ದರೆ ಅದರ ಸ್ಪಷ್ಟತೆ ಕಡಿಮೆ ಇರುತ್ತದೆ.ಇದು ಸಂವಹನ ಪೆನ್ ಮತ್ತು ಕ್ಯಾಮೆರಾ ಪೆನ್ ಸಂಯೋಜನೆಯೊಂದಿಗೆ ಕೆಲಸ ಮಾಡುತ್ತದೆ.ಚಿತ್ರದಲ್ಲಿ ತೋರಿಸಿರುವಂತೆ ಪ್ರೆಕ್ಷೇಪಕ ಪೆನ್ ಚಪ್ಪಟೆ ಮೇಲ್ಮೈ ಮೇಲೆ ಒಂದು ಸಣ್ಣ ನಿಲುಮೆ ಮೇಲೆ ಜೋಡಿಸಲಾಗುವುದು.



ಚಿತ್ರ: ಪ್ರೆಕ್ಷೇಪಕ ಪೆನ್

4) ಡಿಜಿಟಲ್ ಕ್ಯಾಮೆರಾ ಪೆನ್: ಡಿಜಿಟಲ್ ಕ್ಯಾಮೆರಾವನ್ನು ನಾವು ವೆಬ್ಕ್ಯಾಮ್ ಆಗಿ ಕರೆಯಬಹುದು.ಈ ಪೆನ್ ಚಿತ್ರಗಳ ಮತ್ತು ವೀಡಿಯೂಗಳ ವಶಪಡಿಸಿಕೊಳ್ಳುವಲ್ಲಿ ಸಹಾಯ ಮಾಡುವ ಒಂದು ಅಂತರ್ಗತ ಡಿಜಿಟಲ್ ಕ್ಯಾಮೆರಾ ಹೊಂದಿದೆ.ಇದಲ್ಲದೇ ವೀಡಿಯೂ ಕಾನ್ವರೆನ್ಸಿಂಗ್, ವೀಡಿಯೂ ರೆರ್ಕಾಡಿಂಗ್ ಇತ್ಯಾದಿ ವೆಬ್ ಸಂಬಂಧಿಸಿದ ಉಪಯೋಗಗಳಿಗಾಗಿ ವೆಬ್ಕ್ಯಾಮ್ ಬಳಸಬಹುದು.ಅಲ್ಲದೇ ಇದು ಮುಖದ ಹಾವ ಬಾವಗಳಿಂದ ಗುರುತಿಸಬಹುದಾಗಿದೆ.ಇದು ಚಲನೆಯ ಸಂವೇದಕಗಳ ಕ್ಯಾಮೆರಾ 360ಡಿಗ್ರಿ ತಿರುಗಿಸಲು,ಸ್ವಯಂಚಾಲಿತವಾಗಿ ಹೊಂದಿಸಲು ಕ್ಯಾಮೆರಾ ಸಹಾಯ ಮಾಡುವುದು.

ಚಿತ್ರ:ಡಿಜಿಟಲ್ ಕ್ಯಾಮೆರಾ ಪೆನ್

5) ವರ್ಚುವಲ್ ಕೀಬೋರ್ಡ್: ಈ ಪೆನ್ ಎಲ್.ಇ.ಡಿ. ಪ್ರೊಜೆಕ್ಟರ್ ಪೆನ್ನ್ನು ಹೋಲುವ ಕಾರ್ಯಗಳನ್ನು ಮಾಡುವುದು.ಲೇಸರ್ ಪೆನ್ ಕೀಬೋರ್ಡ್ ಕಿಫಇಖಖಿಜ ಜೋಡಣೆಯನ್ನು ಹೊಂದಿರುತ್ತದೆ ಮತ್ತು ಇದನ್ನು ಚಪ್ಪಟೆಯಾದ ಮೇಲ್ಮೈ ಮೇಲೆ ಕೀಬೋರ್ಡ್ ಹೊರಸೊಸುತ್ತದೆ.ಕೀಲಿಗಳನ್ನು ಲೇಸರ್ ಕೀಲಿಮಣೆಯಲ್ಲಿ ಒತ್ತಿದಾಗ ಇನ್ಪುಟ್ ಸಾಧನ ಗುರುತಿಸುತ್ತದೆ. ಇದು ಸಾಧಾರಣ ಕಂಪ್ಯೂಟರ್ ಕೀಲಿಮಣೆಯನ್ನು ಹೋಲುತ್ತದೆ. ಇದರ ಕೀಬೋರ್ಡ್ ಸೆಟ್ಟಿಂಗಸ್ ಬದಲಾವಣೆ ಧ್ವನಿಯಿಂದ ಮಾಡಬಹುದು.

ಚಿತ್ರ:ವರ್ಚುವಲ್ ಕೀಬೋರ್ಡ್

ಪ್ರಯೋಜನಗಳು:–

1) ನಮ್ಮ ಅನುಕುಲಕ್ಕಾಗಿ ಸಾಮಾನ್ಯವಾಗಿ ಇದನ್ನು ಸುಲಭವಾಗಿ ಬಳಸಬಹುದು ಸಣ್ಣದು ಮತ್ತು ಕಾಂಪ್ಯಾಟ್ ಆಗಿದೆ.

2) ಇದು ನಿಸ್ತಂತು ತಂತ್ರಜ್ಞಾನವನ್ನು ಬೆಂಬಲಿಸುತ್ತದೆ.

3) ಅತ್ಯುತ್ತಮ ಬ್ಯಾಟರಿ ಸಾಮರ್ಥ್ಯ ಹೊಂದಿರುತ್ತದೆ.

4) ಪೆನ್ ಒಂದು ಮಾನಿಟರ್ ಮತ್ತು ಕೀಲಿಮಣಿಯಾಗಿ ಎರಡು ವಿಧದಲ್ಲಿ ಕಾರ್ಯನೀರ್ವಹಿಸುತ್ತದೆ.

ಅನಾನುಕೂಲಗಳು:–

1) ಇದು ನಿಸ್ತಂತು ತಂತ್ರಜ್ಞಾನದ ಮೇಲೆ ಕೆಲಸ ಮಾಡುತ್ತದೆ,ಆದರೆ ಇದಕ್ಕೆ ಅಂತರದ ಮೀತಿಯಿದೆ.

2) ಇದು ಹೆಚ್ಚು ದುಬಾರಿಯಾಗಿರುವುದು.

3) ನಿಸ್ತಂತು ವ್ಯವಸ್ಥೆಯಿರುವುದರಿಂದ ಘಟಕಗಳು ಬದಲಾಗಿ ಕಾರ್ಯ ವ್ಯೆಖರಿ ಬದಲಾಗಬಹುದು.

4) ದರ್ಶಿತ ಮೇಲ್ಮೈ ಹೆಚ್ಚು ಬಳಕೆಗೆ ಚಪ್ಪಟೆಯಾಗಿರಬೇಕು.

ಉಪ ಸಂಹಾರ:– ಇದುವರೆಗಿನ ಐದು ಪೆನ್ ಬಳಕೆಯ ವಿವೇಚನೆಯಿಂದ, ಆದುನೀಕ ಕಾರ್ಯ ಒತ್ತಡದಲ್ಲಿ ಇದರ ಬಳಕೆ ಹೆಚ್ಚು ಮೌಲಿಕವೂ ಸರಳವೂ ಆಗೀರುತ್ತೆದೆ.ಇದರ ಬಹುಮುಖ ಕೆಲಸ ಹೆಚ್ಚು ಅನುಕೂಲವಾಗೀರುತ್ತದೆ.ಬ್ಯಾಟರಿ ಬಾಳಿಕೆ ಎರಡು ವಾರದವರೆಗೆ ಇರುತ್ತದೆ,ಬ್ಯಾಟರಿ ಪೆನ್ನಲ್ಲಿ ಅಂತರ್ಗತವಾಗಿರುತ್ತದೆ.ಇದು ಸಣ್ಣದಾದ ಮತ್ತು ಸಾಂದ್ರವಾದ ಸಾಧನವಾಗಿರುವುದರಿಂದ ಪ್ರಯಾಣದಲ್ಲಿ ಅನುಕೂಲವಾಗಿರುತ್ತದೆ.

ಸಮ್ಮೇಳನದ ಕೇಂದ್ರ ವಿಷಯ:–01

ವೈಜ್ಞಾನಿಕ ಪಶುಸಂಗೋಪನೆ ಹಾಗೂ ಮೀನುಗಾರಿಕೆಯಿಂದ ಆರ್ಥಿಕ ಸಬಲೀಕರಣ

FOCAL THEME:-01

Economic Prosperity through Scientific Animal Husbandry & Fisheries

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಹೈನುಗಾರಿಕೆಯ ಜೀವನಾಡಿ: ಮೇವಿನ ಬೆಳೆಗಳ ನರ್ಸರಿಯ ಯಶೋಗಾಥೆ	ಡಾ. ವೀರಣ್ಣ ಕೆ. ಸಿ ಡಾ. ಮಾದವಪ್ರಸಾದ್ ಡಾ.ನಾಗಭೂಷಣ ಡಾ.ಮಂಜಿತ ಕುಮಾರ್ ಬಿ.ಆರ್ ಶ್ರುತಿ ಎಮ್. ಜಿ ಸಜಿನ್ ಎಮ್.ಜಿ	281 – 285
2.	ಕಲಬುರಗಿ ಜಿಲ್ಲೆಯ ಹೈನು ಅಭಿವೃಧಿಯಲ್ಲಿ ಸಾಂಪ್ರದಾಯಕ ಹಾಲು ಉತ್ಪನ್ನಗಳ ಪಾತ್ರ	ಶಿವಕುಮಾರ ಡಾ: ಶರಣಗೌಡ ಬಿ. ಪಾಟಿಲ್ ಡಾ: ಕೆ. ಬಿ. ವೇದಮುರ್ತಿ	285 – 287
3.	ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೈನುಗಾರಿಕೆಯ ವಿಶ್ಲೇಷಣೆ	ಡಾ. ಕೆ.ಸಿ.ವೀರಣ್ಣ ಡಾ. ಗೋಪಾಲ.ಜಿ.ಟಿ ಹರೀಶ. ಎಂ	288 – 289
4.	ಪಶುಸಂಗೋಪನೆಯಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಜಾನುವಾರುಗಳಲ್ಲಿ ಉಣ್ಣೆಗಳ ಹತೋಟಿ ಕ್ರಮಗಳು	ಡಾ॥ ಕೃಷ್ಣಮೂರ್ತಿ, ಸಿ. ಎಂ	289 – 291

ಹೈನುಗಾರಿಕೆಯ ಜೀವನಾಡಿ: ಮೇವಿನ ಬೆಳೆಗಳ ನರ್ಸರಿಯ ಯಶೋಗಾಥೆ

ಡಾ. ವೀರಣ್ಣ ಕೆ. ಸಿ., ಡಾ. ಮಾದವಪ್ರಸಾದ್, ಡಾ.ನಾಗಭೂಷಣ, ಡಾ.ಮಂಜಿತ ಕುಮಾರ್ ಬಿ.ಆರ್., ಶ್ರುತಿ ಎಮ್. ಜಿ. ಮತ್ತು ಸಜಿನ್ ಎಮ್.ಜಿ.
ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

ಪೀಠಿಕೆ:– ಹಾಲು ಕೊಡುವ ರಾಸುಗಳಿಗೆ ಹಸಿರು ಮೇವಿನ ಪಾತ್ರ ಬಹಳ ಮುಖ್ಯವಾಗಿದೆ. ಹಸಿರು ಮೇವು ಹಾಲು ಉತ್ಪಾದನೆಗೆ ಬೇಕಾದ ಪೋಷಕಾಂಶಗಳನ್ನು ಒದಗಿಸುತ್ತದೆ. ರೈತರು ತಮ್ಮ ಸ್ವಂತ ಜಮೀನಿನಲ್ಲಿ ಹಸಿರು ಮೇವು ಬೆಳೆಯುವುದರಿಂದ ಕುರಿ ಸಾಕಾಣಿಕೆ, ಆಡು ಸಾಕಾಣಿಕೆಗೆ ಅಥವ ಹಸು ಸಾಕಾಣಿಕೆಗೆ ತಗುಲುವ ಆಹಾರದ ವೆಚ್ಚವನ್ನು ಕಡಿಮೆ ಮಾಡಬಹುದು. ಪ್ರಸ್ತುತವಾಗಿ ಜಾನುವಾರು ಆಹಾರವನ್ನು 3 ವಿಧಗಳಾಗಿ ವಿಂಗಡಿಸಲಾಗಿದೆ, 1–ಧಾನ್ಯದ ತವುಡು, 2–ದಾಣಿ ಮಿಶ್ರಣ, ಧಾನ್ಯದ ನುಚ್ಚು, ಧಾನ್ಯದ ತವುಡು ಹಸಿರು ಮತ್ತು ಒಣ ಮೇವನ್ನು ಒಳಗೊಂಡಿರುತ್ತದೆ.ದಾಣಿ ಮಿಶ್ರಣವು ದ್ವಿದಳ ಧಾನ್ಯಗಳ ಎಣ್ಣೆ ತೆಗೆದ ಹಿಂಡಿಗಳ ಮಿಶ್ರಣವನ್ನು ಹೊಂದಿರುತ್ತದೆ. ಧಾನ್ಯದ ನುಚ್ಚು ಅನುಪಯುಕ್ತ ಏಕದಳ ಮತ್ತು ದ್ವಿದಳ ಧಾನ್ಯಗಳನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ಗ್ರಾಮೀಣ ಭಾಗದ ರೈತರು ಜಮೀನಿನ ಬದುಗಳ ಮೇಲಿರುವ ಹಸಿರು ಹುಲ್ಲು, ಕಳೆ ತೆಗೆದ ಹುಲ್ಲು ಇತ್ಯಾದಿ ಮೇವನ್ನು ಒಟ್ಟುಗೂಡಿಸಿ ಹಸಿರು ಮೇವನ್ನು ಪೂರೈಸುತ್ತಾರೆ.ಬಹಳಷ್ಟು ರೈತರು ಹಸಿರು ಮೇವಿನ ಕೊರತೆಯಿಂದಾಗಿ ಒಣ ಮೇವನ್ನು ಮತ್ತು ದಾನಿಮಿಶ್ರಣವನ್ನು ನೀಡುತ್ತಾರೆ.ಇದರಿಂದ ಹಸಿರು ಮೇವನ್ನು ಜಾನುವಾರುಗಳಿಗೆ ಕೋಡುವ ಕಡೆ ನಿರ್ಲಕ್ಷಿಸುತ್ತಿದ್ದಾರೆ.ಕೆಲವು ರೈತರು ದಾಣಿ ಮಿಶ್ರಣವನ್ನು ಹಾಲು ಕೊಡುವ ರಾಸುಗಳಿಗೆ ಮಾತ್ರ ನೀಡುತ್ತದ್ದಾರೆ, ಹಾಲು ಕೊಡದಿರುವ ರಾಸುಗಳಿಗೆ ಕೇವಲ ಒಣ ಮೇವನ್ನು ಮಾತ್ರ ನೀಡುತ್ತಿದ್ದಾರೆ.ಈ ಎಲ್ಲಾ ಮೇಲಿನ ಅಂಶಗಳನ್ನು ಗಮನಿಸಿ ಜಗಳೂರು ತಾಲೂಕಿನಲ್ಲಿ ರೈತರ ಭಾಗವಹಿಸುವಿಕೆಯ ಮುಖಾಂತರ ಅವರದೆ' ಜಮೀನಿನಲ್ಲಿ 20 ಗುಂಟೆ ವಿಸ್ತಾರದಲ್ಲಿ 10 ವಿವಿಧ ಮೇವಿನ ತಳಗಳ ನರ್ಸರಿಯನ್ನ ಅಬಿವೃದ್ದಿ ಪಡಿಸಲಾಗಿದೆ. ಈ ನರ್ಸರಿಯಿಂದ ರೈತನು ತನ್ನ ಹೈನುರಾಸುಗಳಿಗೆ ಹಸಿಮೇವಿನ ಸ್ವಾವಲಂಬನೆಯನ್ನ ಹೊಂದುವುದರ ಜೊತೆಗೆ ಸುತ್ತಮುತ್ತಲಿನ ಗ್ರಾಮದ ರೈತರಿಗೆ ಮೇವಿನ ಬೀಜ ಮತ್ತು ಬೇರುಗಳನ್ನ ಪೂರೈಸುತ್ತಿದ್ದಾರೆ. ಇದರ ಯಶೋಗಾಥೆ ಇತರ ರೈತರಿಗೆ ಮಾದರಿಯಾಗಲಿ ಎಂಬ ಉದ್ದೇಶದಿಂದ ವಿವರಿಸಲಾಗಿದೆ.

ಮೇವಿನ ಬೆಳೆಯ ನರ್ಸರಿಯ ಯಶೋಗಾಥೆ :– ಹರಪನಹಳ್ಳಿ ತಾಲೂಕಿನ ಆಯ್ದ ಜಲಾನಯನ ಪ್ರದೇಶಗಳನ್ನು ಸಮೀಕ್ಷೇ ಮಾಡಿ ಸಂದರ್ಶಿಸಿದಾಗ ಈ ಪ್ರದೇಶದಲ್ಲಿ ರಾಸುಗಳಿಗೆ ಸರಾಸರಿ ಶೇ. 35–40 ರಷ್ಟು ಮಾತ್ರ ಹಸಿರು ಮತ್ತು ಒಣ ಮೇವು ಪೋರ್ಯಸಲಾಗುತ್ತಿದೆ ಎಂದು ತಿಳಿದುಬಂದಿದೆ.ಇಲ್ಲಿನ ಜನರು ಶೇ.3–4 ರಷ್ಟು ಭೂಮಿಯಲ್ಲಿ ಮಾತ್ರ ಮೇವನ್ನು ಪಶುಸಂಗೋಪನೆಗಾಗಿ ಬೆಳೆಯುತ್ತಿದ್ದು ಉತ್ತಮ ದರ್ಜೆಯ ಮೇವಿನ ಲಭ್ಯತೆ ಇಲ್ಲದಿರುವುದು ಹಾಲಿನ ಉತ್ಪಾದನೆ ಕಡಿಮೆಯಾಗಲು ಹಾಗೂ ಅನಾರೋಗ್ಯಕ್ಕೆ ತುತ್ತಾಗಲು ಮುಖ್ಯ ಕಾರಣವೆಂದು ಗುರುತಿಸಲಾಯಿತು. ನಂತರ ಸುಜಾಲ ಯೋಜನೆಯಡಿ ಎಲ್ಲಾ ವರ್ಗದ ಹೈನುಗಾರರಿಗೆ ಉಪಯೋಗವಾಗಲು ಉತ್ಕೃಷ್ಟ ಮಟ್ಟದ ಮೇವು ಸ್ಥಳಯವಾಗಿ ದೊರೆಯಬೇಕು ಎಂಬ ಉದ್ದೇಶದಿಂದ ರೈತರ ಜಮೀನಿನಲ್ಲಿ ವಿವಿದ ತಳಗಳ ಮೇವಿನ ಬೆಳೆಗಳುಳ್ಳ ನರ್ಸರಿಯನ್ನು ಸ್ಥಾಪಿಸುವ ಚಟುವಟಿಕೆಯನ್ನು ಪ್ರಾರಂಭಿಸಲಾಯಿತು.

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಅಳಗಂಜಿಕೆರೆ ಗ್ರಾಮದ ಶ್ರೀ ಈಶ್ವರಪ್ಪ ಬಿನ್ ಸಿದ್ಲಿಂಗಪ್ಪ ಚಕ್ರಸಾಲಿ ಎಂಬ ರೈತರನ್ನು ಮೇವಿನ ಬೆಳಗಳ ನರ್ಸರಿಯ ಚಟುವಟಿಕೆಗೆ ಆಯ್ಕೆ ಮಾಡಲಾಯಿತು.ಇವರು 20 ಎಕರೆ ಸ್ವಂತ ಕೃಷಿ ಭೂಮಿಯನ್ನು ಹೊಂದಿದ್ದಾರೆ. ವಿದೇಶಿ ಮಿಶ್ರತಳಿಗಳಾದ ಹೊಲ್‌ಸ್ಟಿನ್ ಫ್ರೀಜಿಯನ್ ತಳಿಯ 5 ರಾಸುಗಳನ್ನು ಹಾಗೂ 2 ಕರುಗಳನ್ನೊಳಗೊಂಡ ಕಿರಿದಾದ ಡೈರಿಯನ್ನು ನಡೆಸುತ್ತಿದ್ದಾರೆ.ಪ್ರತಿದಿನ 40 ಲೀ ಹಾಲು ಉತ್ಪಾದನೆ ಮಾಡುತ್ತಾರೆ.ಜೊತೆಗೆ ಸ್ವಂತ ಹಾಲು ಉತ್ಪಾದಕ ಸಂಘವನ್ನು ನಡೆಸುತ್ತಿದ್ದಾರೆ. ಸ್ವ ಇಚ್ಚೆಯಿಂದ ಅವರ 3 ಎಕರೆ ಹೋಲದಲ್ಲಿ 0.5 ಎಕರೆಯನ್ನು ಬಳಸಿಕೊಂಡು ವಿವಿಧ ಬಗೆಯ 10 ತಳಿಯ ಮೇವಿನ ದಂಟು, ಮೇವಿನ ಬೀಜಗಳು ಮತ್ತು ಮೇವಿನ ಮರಗಳನ್ನು ನೆಟ್ಟು ವೈಜ್ಞಾನಿಕ ರೀತಿಯ ಬೇಸಾಯಕ್ರಮಗಳನ್ನು ಅಳವಡಿಸಿಕೊಂಡು ಮೇವಿನ ಬೆಳೆಗಳ ನರ್ಸರಿಯನ್ನು ಬೆಳೆಸಲಾಯಿತು.ಕಾಲ ಕಾಲಕ್ಕೆ ವೈಜ್ಞಾನಿಕ ವಿಧಾನದಲ್ಲಿ ಗೊಬ್ಬರ ನೀಡುವಿಕೆ, ನೀರುಣಿಸುವಿಕೆ, ಸಾಗುವಳಿ ಕ್ರಮಗಳಿಂದ ನರ್ಸರಿಯು ಉತ್ತಮ ಬೆಳವಣಿಗೆಯನ್ನು ಹೊಂದಲಾಯಿತು. 5 ತಳಿಯ ಮೇವಿನ ದಂಟುಗಳನ್ನು ಬೆಳೆಸಲಾಗಿದೆ ಅವುಗಳೆಂದರೆ, ನೇಪಿಯರ್ ಹುಲ್ಲು (ಆಊಒ–6 ಚಿಟಜ ಅಔ–4), ಗಿನಿ ಹುಲ್ಲು, (ಸಂಮೃದ್ಧಿ), ರುಜಿ ಹುಲ್ಲು ಮತ್ತು ರೋಡ್ಸ ಹುಲ್ಲು ಹಾಗೂ 3 ವಿಧದ ಮೇವಿನ ಬೀಜಗಳಾದ ಮೆಕ್ಕೆಜೋಳ (ಸೌಥ್ ಆಫ್ರಿಕನ್ ಟಾಲ್), ಕುದುರೆ ಮೇಂತೆ (ಡೆಸ್‌ಮೋಥೋಸ್) ಮತ್ತು ಪಿಲ್ಲಿ ಪಿಸರ (ಸ್ಮಾಲ್ ಮೋಂಡಾಲ್) ಮತ್ತು 2 ವಿಧದ ಮೇವಿನ ಗಿಡಗಳಾದ ನುಗ್ಗೆಗಿಡ (ಕುಬ)) ಮತ್ತು ಚೊಗಚೆ ಗಿಡಗಳನ್ನು 0.5 ಎಕರೆ ಜಮೀನಿನಲ್ಲಿ ಬೆಳೆಸಲಾಯಿತು. ಮೇವಿನ ಬೆಳೆಗಳ ತಳಗಳ ವಿವರ ಈ ಕೆಳಗಿನಂತಿದೆ

1. ನೇಪಿಯರ್ ಹುಲ್ಲುಗಳಾದ ಡಿ. ಎಜ್. ಎನ್ ಹಾಗೂ ಕೋ–4 ತಲಾ 700,
2. ರುಜಿ ಹುಲ್ಲು 750,
3. ರೋಡ್ಸ ಹುಲ್ಲು 750,
4. ಗಿನಿ 600,
5. ಮೇವಿನ ಮೆಕ್ಕೆಜೋಳ 1.5 ಕೆ.ಜಿ,
6. ಕುದುರೆ ಮೇಂತೆ ಮತ್ತು

7. ಪಿಲ್ಲಿ ಪಿಸರ ತಲಾ 0.5 ಕೆ.ಜಿ ಹಾಗೂ ಮೇವಿನ ಮರಗಳಾದ

8. ನುಗ್ಗೆಗಿಡ ಮತ್ತು ಚೊಗಚೆ ಗಿಡಗಳನ್ನು ತಲಾ 250 ಗ್ರಾಂ ನಂತೆ ಬೀಜಗಳನ್ನು ಅಥವಾ ಮೇವಿನ ಬೇರುಗಳನ್ನು ನಾಟಿ ಮಾಡಿ ಬೆಳೆಸಲಾಗಿದೆ.

ಈ ಎಲ್ಲ ಬೆಳೆಗಳ ಭತ್ತನೆ ಕಾರ್ಯಕ್ರಮವು ಮುಂಗಾರಿನಲ್ಲಿ ಅಂದರೆ ಜುಲೈ ತಿಂಗಳ 2015–2016 ರ ಸಾಲಿನಲ್ಲಿ ರೈತರ ಸಹಯೋಗದೊಂದಿಗೆ ಮೇವಿನ ಬೇಳೆಗಳ ನರ್ಸರಿಯನ್ನು ಬೆಳೆಸಲಾಯಿತು.ಎಲ್ಲ ನಿರ್ವಹಣೆಯ ಕ್ರಮಗಳನ್ನುದಾಖಲಿಸಲಾಯಿತು.

ಮೇವಿನ ಬೆಳೆಗಳ ರಚನಾಕ್ರಮ:



(ಅ)

(ಆ) (ಇ) (ಈ) (ಉ)

ಆಖ್ಯಾನ:

ಅ) ಮೇವಿನ ಬೆಳೆಗಳ ರಚನಾಕ್ರಮ

ಆ ಮತ್ತು ಇ) ವಿವಿಧ ತಳಿಯ ಬೀಜ ಭತ್ತುವಿಕೆ ಮತು ಬೇರು ನೆಡುತ್ತಿರುವಿಕೆ

ಈ)ವಿವಿದ ಮೇವಿನ ಬೆಳೆಗಳ ನರ್ಸರಿಯ ಪಕ್ಷೀನೋಟ

ಉ)ಭತ್ತನೆ ಮಾಡಿದ 50 ದಿನಗಳ ನಂತರ ಕಳೆ ತೆಗೆಯುತ್ತಿರುವುದು

ಊ)DHN-6 ತಳಿಯ ನೇಪಿಯರ್ ಮೇವಿನ ಛಾಯಾಚಿತ್ರ

ಋ) CO-4 ತಳಿಯನೇಪಿಯರ್ ಮೇವಿನ ಛಾಯಾಚಿತ್ರ

ಎ) ಮೇವಿನ ಮೆಕ್ಕೆಜೋಳ ತಳಿಯಛಾಯಾಚಿತ್ರ

ಏ)ರೋಡ್ಸ್‌ತಳಿಯನೇಪಿಯರ್ ಮೇವಿನ ಛಾಯಾಚಿತ್ರ

(ಊ)

(ಖ)

(ಎ)

(ಏ)

ವಿವಿಧ ಮೇವಿನ ಬೆಳೆಗಳ ಉತ್ಪದನೆ:– ಈ ಎಲ್ಲ ಮೇವಿನ ಬೆಳೆಗಳು ಬಹುವಾರ್ಷಿಕ ಮೇವಿನ ತಳಗಳಾಗಿದ್ದು ಒಂದು ಸಾರಿ ನಾಟಿ ಮಾಡಿದರೆ 6–8 ವರ್ಷಗಳವರೆಗೆ ಹಾಗೂ ಪ್ರತಿ ವರ್ಷವು 5– 6 ಬಾರಿ ಕಟಾವು ಮಾಡಬಹುದು. ಇವುಗಳು ನೀರಾವರಿ ಇರುವ ಫಲವತ್ತಾದ ಭೂಮಿಯಲ್ಲಿ ಅಧಿಕ ಇಳುವರಿ ನೀಡುವ ಶಕ್ತಿಯನ್ನು ಹೊಂದಿರುತ್ತವೆ. ಈ ಮೇವಗಳನ್ನು ಹಸಿರು ಮೇವಾಗಿ ಮತ್ತು ರಸಮೇವಾಗಿ ಪರಿವರ್ತಸಿ ಕೊಳ್ಳಬಹುದು.ಎಲ್ಲ ಹವಾಮಾನ ಪರಿಸ್ಥಿತಿಗೆ ಹೊಂದಿಕೊಂಡು ಬೆಳೆಯಬಹುದಾದರೂ ಉಷ್ಣವಲಯದ ಪ್ರದೇಶದಲ್ಲಿ ಅಧಿಕ ಇಳುವರಿಯನ್ನು ಪಡೆಯಬಹುದು.ಹಸಿರು ಮೇವಿನ ಹುಲ್ಲಗಳು ಮೊದಲನೇ ಕಟಾವನ್ನು ಭತ್ತನೆಯಾದ/ ನಾಟಿ ಮಾಡಿದ 80–90 ದಿನಗಳ ಒಳಗೆ ಮಾಡಬೇಕು, ತದನಂತರದ ಕಟಾವುಗಳನ್ನು 1.5 – 2 ತಿಂಗಳ ಒಳಗೆ' ಕಟಾವು ಮಾಡಬಹುದು. ಈ ಹಸಿರು ಮೇವಿನ ಬೆಳೆಗಳನ್ನು ವರ್ಷಕ್ಕೆ 5–6 ಬಾರಿ ಕಟಾವು ಮಾಡಬಹುದಾಗಿದೆ. ಹಾಗೆಯೇ ಮೆಕ್ಕೆಜೋಳ, ಕುದುರೆ ಮೇಂತೆ ಮತ್ತು ಪಿಲ್ಲ ಪಿಸರ ಮೇವನ್ನು ಮೊದಲನೇ ಕಟಾವನ್ನು ಭತ್ತನೆಯಾದ 60–65 ದಿನಗಳಲ್ಲಿ ಕಟಾವು ಮಾಡಬಹುದು, ತದನಂತರದ ಕಟಾವುಗಳನ್ನು 1.5 – 2 ತಿಂಗಳ ಒಳಗೆ' ಕಟಾವು ಮಾಡಬಹುದು.

ಈಶ್ವರಪ್ಪ ಚಕ್ರಸಾಲಿ ಅವರ ಮೇವಿನ ಬೆಳೆಗಳ ನರ್ಸರಿಯಲ್ಲಿ ಉತ್ಪಾದನೆಯಾದ ಮೇವಿನ ವಿವರ:

1. ವಿವಿಧ ಹಸಿರು ಮೇವಿನ ದಂಟುಗಳ ಉತ್ಪಾದನೆ (1 ವರ್ಷಕ್ಕೆ 2 ಗುಂಟೆಯಲ್ಲಿ ಬೆಳೆದ ಮೇವು):

ಅ) ನೇಪಿಯರ್ ತಳಗಳು ತಲಾ:– 1. DHN-6 – 2000 ಬೇರುಗಳು

2. CO-4 - 2000 ಬೇರುಗಳು

ಆ) ಗಿನಿ ಹುಲ್ಲು :–1500 ಬೇರುಗಳು,

ಇ)ರುಜಿ ಹುಲ್ಲು :– 1500 ಬೇರುಗಳು ಮತ್ತು

ಈ) ರೋಡ್ಸ ಹುಲ್ಲು :– 2000 ಬೇರುಗಳು

2. ಹಸಿರು ಮೇವಿನ ಉತ್ಪಾದನೆ (1 ವರ್ಷಕ್ಕೆ 2 ಗುಂಟೆಯಲ್ಲಿ ಬೆಳೆದ ಮೇವು):

ಅ) ನೇಪಿಯರ್ ಹುಲ್ಲು:–450–500 ಕೆ. ಜಿ.,

ಆ) ಗಿನಿ ಹುಲ್ಲು :–400 ಕೆ. ಜಿ.,

ಇ) ರುಜಿ ಹುಲ್ಲು:– 380 ಕೆ. ಜಿ.

ಈ) ರೋಡ್ಸ್ ಹುಲ್ಲು:– 500 ಕೆ. ಜಿ.

ಉ) ಕುದುರೆ ಮೇಂತೆ:– 180 ಕೆ. ಜಿ.

ಊ) ಪಿಲ್ಲಿ ಪಿಸರ:– 150 ಕೆ. ಜಿ.ಮತ್ತು

ಋ) ಮೇವಿನ ಮೆಕ್ಕೆಜೋಳ (1 ವರ್ಷಕ್ಕೆ 2 ಗುಂಟೆ ಪ್ರದೇಶದಲ್ಲಿ ಎರಡು ಸಲ ಬೆಳೆದ ಮೇವು):– 900 ಕೆ. ಜಿ.

3. ಉತ್ತಮ ಗುಣಮಟ್ಟದ ಬೀಜದ ಉತ್ಪಾದನೆ (1 ವರ್ಷಕ್ಕೆ 2 ಗುಂಟೆಯಲ್ಲಿ ಬೆಳೆದ ಮೇವು):

ಅ) ಕುದುರೆ ಮೇಂತೆ:–2 kgಮತ್ತು

ಆ) ಪಿಲ್ಲಿ ಪಿಸರ:– 3 kg

ಮೇವಿನ ಬೆಳೆಗಳ ಆರ್ಥಿಕತೆ :– ಮೇವಿನ ಬೆಳೆಗಳ ನರ್ಸರಿಗೆ ತಗುಲಿದ ಕೃಷಿಯ ಖರ್ಚು– ವೆಚ್ಚಗಳನ್ನು ಕ್ರೂಡಿಕರಿಸಿ ಲಾಭವನ್ನು ಅಂದಾಜಿಸಲಾಗಿದೆ. ವಿವಿದ ದೀರ್ಘಕಾಲಿಕ ಮೇವಿನ ಬೆಳೆಗಳನ್ನು ಬೆಳೆಯಲು ಬೀಜದ ವೆಚ್ಚ, ಬಿತ್ತನೆ ಮಾಡಿದ ಖರ್ಚು, ಭೂಮಿಯ ಸಿದ್ಧಪಡಿಸಿದ ವೆಚ್ಚ, ಕೆಲಸಗಾರರ ಕೂಲಿಯ ವೆಚ್ಚ ಹಾಗೂ ಸಾಗುವಳಿ ಮಾಡಲು ತಗುಲುವ ಖರ್ಚುಗಳನ್ನೆಲ್ಲ ಒಟ್ಟುಗೊಡಿಸಿ ಖರ್ಚು– ವೆಚ್ಚಗಳನ್ನು ಹಾಕ'ಲಾಗಿದೆ. ನಂತರ ಬೀಜಗಳ ಉತ್ಪಾದನೆಯನ್ನು, ಹಸಿರು ಮತ್ತು ಒಣ ಮೇವಿನ ಉತ್ಪನ್ನವನ್ನು ಒಟ್ಟುಗೊಡಿಸಿ ಲಾಭಾಂಶವ'ನ್ನು ಪ್ರತಿ ಹೆಕ್ಟೆರ್‌ಗೆ ವಾರ್ಷಿಕಕ್ಕೆ ಲೆಕ್ಕ ಹಾಕ'ಲಾಗಿದೆ.

ಮೇವಿನ ಬೆಳೆಗಳು ಕಟಾವಿಗೆ ಬಂದ ನಂತರ ಈಶ್ವರಪ್ಪ ಚಕ್ರಸಾಲಿ

ರೈತರ ರಾಸುಗಳ ಆರೋಗ್ಯ ಸ್ಥಿತಿ, ಹಾಲಿನ ಇಳುವರಿಯಲ್ಲಿ ಬದಾಲಾಗುತ್ತಿರುವ ಉತ್ಪಾದನೆಯನ್ನು ಗಮನಿಸುತ್ತಿದ್ದ ಸುತ್ತಲಿನ ರೈತರು ಸ್ವಯಂ ಪ್ರೇರಣೆಯಿಂದ ತಾವು ತಮ್ಮ ಜಮೀನಿನಲ್ಲಿ ರಾಸುಗಳಿಗಾಗಿಯೆ ಪ್ರತ್ಯೇಕವಾಗಿ ಮೇವನ್ನು ಬೆಳೆಸಲು ಮುಂದಾಗಿರುವುದರಿಂದ ಮೇವಿನ ಬೇಡಿಕೆ ಹೆಚ್ಚಾಯಿತು. ರಾಸುಗಳ ಸಂಖ್ಯೆಗೆ ಅನುಗುನವಾಗಿ ಉತ್ತಮ ತಳಿಯ ಮೇವಿನ ಪೊರೈಕೆಗಾಗಿ ಶ್ರೀಯುತ.ರಮೇಶ್ ರವರ ಬಳಿ ಮೇವಿನ ತಾಕುಗಳನ್ನು ಪ್ರತಿ ಬೇರುಗಳಿಗೆ ೩೦ ಪೈಸೆಯಂತೆ ಖರೀದಿಸಿ ತಮ್ಮ ತಮ್ಮ ಜಮೀನಿನಲ್ಲಿ ಮೇವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಮೇವಿನ ಖರೀದಿಯಿಂದ ಈಶ್ವರಪ್ಪ ಚಕ್ರಸಾಲಿ ರವರು ನರ್ಸರಿಗಾಗಿ ವ್ಯಯಿಸಿದ್ದ ವೆಚ್ಚವು ಮರುಪಾವತಿ ಆಗುತ್ತಿರುವುದರಿಂದ ಅವರ ಆರ್ಥಿಕತೆಯಲ್ಲಿ ಉತ್ತಮ ಬೆಳವಣಿಗೆಯನ್ನು ಕಾಣಾಲಾಗುತ್ತಿದೆ.

1. ಮೇವಿನ ಬೆಳೆಗಳಗಾಗಿ ವಾರ್ಷಿಕ ಒಟ್ಟು ವೆಚ್ಚ (ಪ್ರತ್ಯೇಕ ತಳಗಳಿಂದ) ನೇಪಿಯರ್ (ಆಓಊ-6 ಚಿಟಜ ಅಔ-4), ಗಿನಿ ಹುಲ್ಲು, ರುಜಿ ಹುಲ್ಲು ಮತ್ತು ರೋಡ್ಸು ಹುಲ್ಲುಗಳಿಂದ ಒಂದು ವರ್ಷಕ್ಕೆ ಒಂದು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಸಲು ಒಟ್ಟು ಸರಾಸರಿ ರೂ. 41,000/- ಖರ್ಚು ಬರುತ್ತದೆಮತ್ತು ಇದರಿಂದ ದೊರೆತ ಆಗುವಳಿ (ಉತ್ಪಾದನೆ) ಒಂದು ವರ್ಷಕ್ಕೆ ಒಂದು ಹೆಕ್ಟೇರ್ ಪ್ರದೇಶದಲ್ಲಿಸರಾಸರಿರೂ. 72,000/-. ಸಾಗುವಳಿ ಮಾಡಿದ ರೈತನಿಗೆ ಸರಾಸರಿ ವರ್ಷಕ್ಕೆ ಸರಾಸರಿ ರೂ. 31,000/- ನಷ್ಟು ಲಾಭಾಂಶವನ್ನು ಪಡೆಯಬಹುದು.

2. ಮೇವಿನ ಮೆಕ್ಕೆಜೋಳ ಬೆಳೆಗಳಗಾಗಿ ವಾರ್ಷಿಕವಾಗಿ (ಒಂದು ವರ್ಷಕ್ಕೆ ಒಂದು ಹೆಕ್ಟೇರ್ ಪ್ರದೇಶದಲ್ಲಿ) ಬೆಳೆಸಲು ಒಟ್ಟು ಸರಾಸರಿ ರೂ. 18,500/- ಖರ್ಚು ಬರುತ್ತದೆಮತ್ತು ಇದರಿಂದ ದೊರೆತ ಆಗುವಳಿ (ಉತ್ಪಾದನೆ) ಒಂದು ವರ್ಷಕ್ಕೆ ಒಂದು ಹೆಕ್ಟೇರ್ ಪ್ರದೇಶದಲ್ಲಿಸರಾಸರಿರೂ. 60,000/-. ಸಾಗುವಳಿ ಮಾಡಿದ ರೈತನಿಗೆ ಸರಾಸರಿ ವರ್ಷಕ್ಕೆ ಸರಾಸರಿ ರೂ. 41,000/- ನಷ್ಟು ಲಾಭಾಂಶವನ್ನು ಪಡೆಯಬಹುದು.

3. ಹಾಗೆಯೆ ಬಹುವಾರ್ಷಿಕ ಮೇವಿನ ಬೆಳೆಗಳಾದ ಕುದುರೆ ಮೆಂತೆ ಮತ್ತು ಪಿಲ್ಲಿ ಪಿಸರ ದಿಂದ ವಾರ್ಷಿಕವಾಗಿ (ಒಂದು ವರ್ಷಕ್ಕೆ ಒಂದು ಹೆಕ್ಟೇರ್ ಪ್ರದೇಶದಲ್ಲಿ) ಬೆಳೆಸಲು ಅನುಕ್ರಮವಾಗಿ ಒಟ್ಟು ಸರಾಸರಿ ರೂ. 18,000/- ಮತ್ತು ರೂ. 16,000/- ಖರ್ಚು ಬರುತ್ತದೆಮತ್ತು ಇದರಿಂದ ದೊರೆತ ಆಗುವಳಿ (ಉತ್ಪಾದನೆ) ಒಂದು ವರ್ಷಕ್ಕೆ ಒಂದು ಹೆಕ್ಟೇರ್ ಪ್ರದೇಶದಲ್ಲಿಅನುಕ್ರಮವಾಗಿ ಸರಾಸರಿರೂ. 62,500/- ಮತ್ತು ರೂ. 43,500/-. ಸಾಗುವಳಿ ಮಾಡಿದ ರೈತನಿಗೆ ಸರಾಸರಿ ವರ್ಷಕ್ಕೆ ಅನುಕ್ರಮವಾಗಿ ಸರಾಸರಿ ರೂ. 44,500/- ಮತ್ತು ರೂ. 27,000/- ನಷ್ಟು ಲಾಭಾಂಶವನ್ನು ಪಡೆಯಬಹುದು.

ಮೇವಿನ ನರ್ಸರಿಯ ಉಪಯೋಗಗಳ ಬಗ್ಗೆ ಈಶ್ವರಪ್ಪ ಚಕ್ರಸಾಲಿಯವರ ಅನಿಸಿಕೆಗಳು ಈ ಕೆಳಗಿನಂತಿವೆ:

1. ಹಸಿರು ಮೇವು ಮತ್ತು ಒಣ ಮೇವು ಲಭ್ಯತೆಯ ಜೊತೆಗೆ ಮೇವಿನ ಮರಗಳು, ಮೇವಿನ ಬೆಳೆಗಳು ವರ್ಷಪೂರ್ತಿ ಸ್ಥಳೀಯವಾಗಿ ದೊರೆಯುತ್ತದೆ.

2. ಉತ್ತಮ ದರ್ಜೆಯ ಮತ್ತು ಪೋಷಕಾಂಶಯುಕ್ತ ಹಸಿರು ಮೇವಿನ ಲಭ್ಯತೆ

3. ತಮ್ಮ ರಾಸುಗಳಲ್ಲಿ ಹಾಲಿನ ಉತ್ಪಾದನೆಯ ಪ್ರಮಾಣ ಪ್ರತಿ ರಾಸುವಿನಿಂದ ದಿನಕ್ಕೆ 1.0-2 ಲೀ ಹಾಲು ಏರಿಕೆಯಾಗಿರುತ್ತದೆ.

4. ಹಾಲಿನಶ್ರೇಣಿಯ ಪ್ರಮಾಣ ಏರಿಕೆಯಾಗಿರುತ್ತದೆ (25° C-27 ° C).

5. ಉತ್ತಮ ದರ್ಜೆಯ ಹಸಿರು ಮೇವು ನೀಡುವುದರಿಂದ ರಾಸುಗಳ ದೇಹ ಸ್ಥತಿ ಆರೋಗ್ಯದಿಂದಿರುಲು ಕಾರಣವಾಗಿದೆ

6. ಹಾಲಿನಲ್ಲಿ ಜಿಡ್ಡಿನಾಂಶ (Fat) ಮತ್ತು ಘನಪದಾರ್ಥ (SNF) ಕೂಡ ಹೆಚ್ಚಾಗಿರುವುದು ಕಂಡುಬಂದಿರುವುದು.

7. ರೈತರು ವರ್ಷ ಪೂರ್ತಿ ಆದಾಯ ಪಡೆಯುವುದರಿಂದ

4.ಪಟ್ಟಿ: ವಿವಿಧ ಮೇವಿನ ಬೆಳೆಗಳ ಆದಾಯದ ಪಟ್ಟಿ

ಕ್ರಮ. ಸಂಖ್ಯೆ	ಮೇವಿನ ಬೆಳೆಗಳು	ಖರ್ಚು (ರೂ./ಹೆಕ್ಟೆರ್/ ವರ್ಷ)	ಆದಾಯ (ರೂ./ಹೆಕ್ಟೆರ್/ ವರ್ಷ)	ಲಾಭ (ರೂ./ಹೆಕ್ಟೆರ್/ ವರ್ಷ)
A	ನೇಪಿಯರ್ ಹುಲ್ಲು			
1	ಆಓಊ-6	40,850	75,000	34,150
2	ಅಔ-4	40,850	80,000	39,150
B	ಗಿನಿ ಹುಲ್ಲು	37,200	62,500	25,300
C	ರುಜಿ ಹುಲ್ಲು	42,700	60,500	17,800
D	ರೋಡ್ಸ್ ಹುಲ್ಲು	42,700	80,000	37,300
E	ಮೇವಿನ ಮೆಕ್ಕೆಜೋಳ	18,500	60,000	41,500
F	ಕುದುರೆ ಮೇಂತೆ	18,000	62,500	44,500
G	ಪಿಲ್ಲಿ ಪಿಸರ	16,000	43,000	27,000

ವಾರ್ಷಿಕ ಆದಾಯದ ಪ್ರಮಾಣ ಏರಿಕೆಯಾಗಿದೆ.

ಈ ಮೇವಿನ ಬೆಳೆಗಳ ನರ್ಸರಿಯ ಯಶಸ್ಸನ್ನು ಕ್ಷೇತ್ರ ಪ್ರಾತ್ಯೇಕ್ಷತೆಯ ಮೂಲಕ ಇತರ ರೈತರಿಗೆ ಮಾಹಿತಿ ಪ್ರಧಾನ ಮಾಡಲಾಯಿತು. ಈ ಕಾರ್ಯಕ್ರಮದ ಉದ್ದೇಶ ಹೈನುಗಾರಿಕೆಯಲ್ಲಿ ತೊಡಗಿರುವ ಅಳಗಂಜಿಕೆರೆ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮದ ರೈತರಿಗೆ ಮೇವಿನ ಬೆಳೆಗಳನ್ನು ಬೆಳೆಯುವುದರ ಪ್ರಾಮುಖ್ಯತೆ, ಪ್ರಯೋಜನಗಳ ಕುರಿತು ಅರಿವು ಮೂಡಿಸಲು ಮೇವಿನ ಬೆಳೆಗಳ ಪ್ರಾತ್ಯೇಕ್ಷತೆಯನ್ನು ನರ್ಸರಿ ಇರುವ ಜಮೀನಿನಲ್ಲೆ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಮೀನುಗಾರಿಕೆ ಇಲಾಖೆ, ಪಶುಪಾಲನ ಮತ್ತು ಪಶುವೈದ್ಯಸೇವಾ ಇಲಾಖೆ ಹಾಗೂ ಯಡಿಹಳ್ಳಿ ಗ್ರಾಮ ಪಂಚಾಯಿತಿಯ ಸಹಯೋಗದೊಂದಿಗೆ ದಿನಾಂಕ 29-02-2016 ರಂದು ಆಯೋಜಿಸಲಾಯಿತು. ಈ ಕ್ಷೇತ್ರ ಪ್ರಾತ್ಯೇಕ್ಷತೆಗೆ ಈ ಎಲ್ಲ ಇಲಾಖೆಯ ಅಧಿಕಾರಿರುಂದದವರು ಭಾಗವಹಿಸಿ ತಮ್ಮ ತಮ್ಮ ಅನಿಸಿಕೆಗಳ ಜೊತೆಗೆ ಈ ಸುಜಲಾ ಯೋಜನೆಯಿಂದ ಅಳಗಂಜಿಕೆರೆ ಗ್ರಾಮದ ರೈತರಾದ ಈಶ್ವರಪ್ಪ ಚಕ್ರಸಾಲರವರಿಗೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ರೈತರಿಗೆ ಅನುಕೂಲವಾಗಿದೆ ಎಂದು ಅಭಿಪ್ರಾಯಪಟ್ಟರು. ಹಾಗೂ ಪ್ರಾತ್ಯೇಕ್ಷತೆಯಲ್ಲಿ ರೈತರಾದ ಈಶ್ವರಪ್ಪ ಚಕ್ರಸಾಲ ಮತ್ತು ಅವರ ಪುತ್ರರಾದ ಮಣಿಕಂಠರವರು ಮೇವಿನ ತಳಗಳನ್ನು ಬೆಳೆಯುವುದರಿಂದ ಆದ ಅನುಕೂಲಗಳನ್ನು ಮತ್ತು ಅನುಭವವನ್ನು ಹಂಚಿಕೊಂಡರು.

(ಅ)

ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಂದ ಮೇವಿನ ಬೆಳೆಗಳ ಕ್ಷೇತ್ರೋತ್ಸವದ ಉದ್ಘಾಟನೆ

(ಆ)

ಮೇವಿನ ಬೆಳೆಗಳ ಹಸ್ತಪ್ರತಿ ಬಿಡುಗಡೆ

ಕಲಬುರಗಿ ಜಿಲ್ಲೆಯ ಹೈನು ಅಭಿವೃಧಿಯಲ್ಲಿ ಸಾಂಪ್ರದಾಯಕ ಹಾಲು ಉತ್ಪನ್ನಗಳ ಪಾತ್ರ

ಶಿವಕುಮಾರ ಸಹಾಯಕ ಪ್ರಾಧ್ಯಾಪಕರು, ಹೈನು ತಾಂತ್ರಿಕ ವಿಭಾಗ,. ಡಾ: ಶರಣಗೌಡ ಬಿ. ಪಾಟೀಲ್ ಸಹಪ್ರಾಧ್ಯಾಪಕರು, ಹೈನು ತಾಂತ್ರಿಕ ವಿಭಾಗ,. ಡಾ: ಕೆ. ಬಿ. ವೇದಮುರ್ತಿ ಸಹಾಯಕ ಪ್ರಾಧ್ಯಾಪಕರು, ಹೈನು ಅರ್ಥಶಾಸ್ತ್ರ ಹಾಗು ವ್ಯವಹಾರ ವಿಭಾಗ,. ಹೈನು ವಿಜ್ಞಾನ ಮಹಾವಿದ್ಯಾಲಯ, ಮಹಾಗಾಂವ ಕ್ರಾಸ್, ಕಲಬುರಗಿ-585316. ಕ.ಪ.ಪ.ಮಿ.ವಿ.ವಿ.ಬಿದರ.

ಪ್ರಸ್ತುತ ಅಭ್ಯಾಯನವು ಸಾಂಪ್ರದಾಯಿಕ ಹಾಲು ಉತ್ಪನ್ನಗಳ ಉತ್ಪಾದನೆಯಿಂದ ಹೈನು ಅಭಿವೃಧಿಯ ಕುರಿತು ವಿಶ್ಲೇಷಿಸುವದಾಗಿ ಉದ್ದೇಶಿಸಲಾಗಿದೆ. ಕಲಬುರಗಿ ಜಿಲ್ಲೆಯ ಸಾಂಪ್ರದಾಯಿಕ ಹಾಲು ಉತ್ಪನ್ನಗಳ ಉತ್ಪಾದನೆ ಹಾಗು ಮಾರಾಟದಲ್ಲಿ ತನ್ನದೆಯಾದ ಪ್ರಮುಖ ಪಾತ್ರವನ್ನು ಹೊಂದಿರುವದಾಗಿರುತ್ತದೆ, ಕೊವಾ ಆಧಾರಿತ ಪೆಡಾ ಉತ್ಪನ್ನವು ಜಿಲ್ಲೆಯ ಪ್ರಮುಖ ಮಳಗೆಗಳಿಂದ ಸರಾಸರಿ 17 ಕಿ.ಗ್ರಾ. ಒಂದು ದಿನಕ್ಕೆ ಒಂದು ಮಳಗೆಯಿಂದ ಮಾರಾಟವಾಗುತ್ತಿದ್ದು ಬೊದಲ ಸ್ಥಾನದಲ್ಲಿದೆ, ಅದೆ ರೀತಿ ಮಾಲ್ಪುರಿ ಉತ್ಪನ್ನವು ಸರಾಸರಿ 14 ಕಿ.ಗ್ರಾ. ಒಂದು ದಿನಕ್ಕೆ ಒಂದು ಮಳಗೆಯಿಂದ ಮಾರಾಟವಾಗುತ್ತಿದ್ದು ಎರಡನೆ ಸ್ಥಾನದಲ್ಲಿರುತ್ತದೆ. ಮಾಲ್ಪುರಿ ಕೊವಾ ಆಧಾರಿತ ಸಿಹಿ ಉತ್ಪನ್ನವಾಗಿದ್ದು ಮುಸ್ಲಿಂ ಜನಾಂಗದವರು ಹೆಚ್ಚಿನ ರೀತಿಯಲ್ಲಿ ಸೇವಿಸುತ್ತಾರೆಂದು ತಿಳಿದುಬಂದಿರುತ್ತದೆ. 2011 ರ ಜನಗಣತಿ ಪ್ರಕಾರ ಕಲಬುರಗಿ ನಗರದಲ್ಲಿ ಶೇಖಡ 37.29 ರಷ್ಟು ಮುಸ್ಲಿಂ ಜನಾಂಗದವರಿದ್ದು ಈ ಉತ್ಪನ್ನಕೆ ತುಂಬಾ ಬೇಡಿಕೆ ಇರುವದಾಗಿ ಕಂಡು ಬಂದಿದೆ.

ಈ ಅಭ್ಯಾಯನದ ಫಲಿತಾಂಶವು ಪ್ರಸ್ತುತಪಡಿಸುವದೇನೆಂದರೆ ಕಲಬುರಗಿ ಜಿಲ್ಲೆಯಲ್ಲಿ "ಮಾಲ್ಪುರಿ" ಉತ್ಪನ್ನಕೆ ಹೆಚ್ಚಿನ ಬೇಡಿಕೆಯಿದ್ದು ಅದಕ್ಕೆ ಬೇಕಾಗುವ ಕಚ್ಚಾಪದಾರ್ಥ ಕೊವಾವನ್ನು ಉತ್ಪಾದಿಸಿ ಮಾರಾಟ ಮಾಡುವದರಿಂದ ಹಾಲಿನ ಆದಾಯಕಿಂತಲು ದ್ವಿಗುಣ ಆದಾಯವನ್ನು ಪಡೆಯಬಹುದೆಂದು ತಿಳಿದು ಬಂದಿದೆ.

ಪ್ರಮುಖ ಪದಗಳು: ಕೊವಾ, ಪೆಡಾ, ಮಾಲ್ಪುರಿ.

ಪೀಠಿಕೆ:– ಎನ್.ಡಿ.ಡಿ.ಬಿ. 2014–15ರ ಪ್ರಕಾರ ಇಂದು ನಮ್ಮ ದೇಶದ ಹಾಲಿನ ವರ್ಷಿಕ ಉತ್ಪಾದನೆಯು 146.3 ಮಿಲಿಯನ್ ಟನ್ ಗಳಷ್ಟಿದ್ದು ಪ್ರಪಂಚದ ಹಾಲು ಉತ್ಪಾದನಯಲ್ಲಿ ಮೊದಲ ಸ್ಥಾನದಲ್ಲಿದೆ ಹಾಗು ಕರ್ನಾಟಕ ರಾಜ್ಯದ ಹಾಲಿನ ವರ್ಷಿಕ ಉತ್ಪಾದನಯು 6121(000ಟನ್) ಗಳಷ್ಟು ಇರುತ್ತದೆ(ಡಿಪಾರ್ಟಮೆಂಟ್ ಒಫ್ ಅನಿಮಲ ಹಸಬಂಡ್ರಿ 2014–15).

ಶಿವರಾಯಸಿಂಗ (2014) ರವರ ಪ್ರಕಾರ ಭಾರತದ ಒಟ್ಟು ಹಾಲಿನ ಉತ್ಪಾದನಯಲ್ಲಿ ಶೇಖಡ 50 ರಷ್ಟು ಭಾಗವನ್ನು ಸಾಂಪ್ರದಾಯಿಕ ಹಾಲು ಉತ್ಪನ್ನಗಳ ಉತ್ಪಾದನೆಯಲ್ಲಿ ಉಪಯೋಗಿಸಲಾಗುತ್ತಿದೆಂದು ತಿಳಿದುಬರುತ್ತದೆ. ಉತ್ತರ ಕರ್ನಾಟಕದ ಕಲಬುರಗಿ ಜಿಲ್ಲೆಯ ಸಿಹಿ ತಿಂಡಿಯೆಂದು ಹೆಸರುವಾಸಿಯಾಗಿರುವ "ಮಾಲ್ಪೂರಿ" ಉತ್ಪನ್ನವನ್ನು 1968 ವರ್ಷದಿಂದ ಪ್ರಾರಂಭಿಸಿದವರು ಮೂಲತ ಕಲಬುರಗಿ ಜಿಲ್ಲೆಯ ನಿವಾಸಿಯಾಗುರುವ ಮೊಹ್ಮದ ಮಹ್ಮೂದ ಅಲಿ. ಈ ಉತ್ಪನ್ನದ ಉತ್ತಮವಾದ ಸಂವೇದನ ಲಕ್ಷಣಗಳು ಜನರನ್ನು ಇವತ್ತಿಗೂ ಸೆಳೆಯುತ್ತಲಿವೆ ಹಾಗೂ ಕಲಬುರಗಿಯಲ್ಲಿ ಮಾಮೂ ಮಾಲ್ಪೂರಿ ಎಂಬ ಹೆಸರಿನಿಂದ ಪ್ರಖ್ಯಾತಿಯನ್ನು ಪಡೆದಿದೆ.

ಉದ್ದೇಶಗಳು

* ಕಲಬುರಗಿ ನಗರದ ಮಾರುಕಟ್ಟೆಯಲ್ಲಿ ಸಾಂಪ್ರದಾಯಿಕ ಹಾಲು ಉತ್ಪನ್ನಗಳ ಮಾರಾಟವನ್ನು ವಿಶ್ಲೇಸಿಸುವದು.

* ಕೋವಾ ಆಧಾರಿತ ಮಾಲ್ಪೂರಿ ಉತ್ಪನ್ನದ ಉತ್ಪಾದನೆಯ ವಿಧಾನ ಕುರಿತು ಅಧ್ಯಾಯನ ಮಾಡುವದು.

ಕಾರ್ಯಾವಿಧಾನ :– ಮೇಲೆ ಉಲ್ಲೆಖಿಸಿರುವ ಉದ್ದೇಶಗಳಿಗೆ ಅನುಸಾರವಾಗಿ ಕಲಬುರಗಿ ನಗರದ ವಿವಿಧ ಹಾಲು ಉತ್ಪನ್ನಗಳ ಮಳಿಗೆಗಳಿಂದ ಮಾಹಿತಿಯನ್ನು ಕರೆಹಾಕಲಾಯಿತು, ಹಾಗು ವಿವಿಧ ಉತ್ಪಾದಕರಿಂದ ಮಾಲ್ಪುರಿ ಉತ್ಪಾದನಾ ವಿಧಾನದ ಮಾಹಿತಿಯನ್ನು ಕರೆಹಾಕಲಾಯಿತು.

ಫಲತಾಂಶಮತ್ತುಚರ್ಚೆ:– ಕಲಬುರಗಿನಗರದಮಾರುಕಟ್ಟೆಯಲ್ಲಿನ ಕೋವಾ ಆಧಾರಿತ ಸಾಂಪ್ರದಾಯಿಕ ಹಾಲು ಉತ್ಪನ್ನಗಳ ಮಾರಾಟವನ್ನು ಕೋಶ್ಟಕ 1 ರಲ್ಲಿ ಪ್ರಸ್ತುತಪಡಿಸಲಾಗಿದ್ದು ಇದರ ಪ್ರಕಾರ ಪೇಡಾ ಉತ್ಪನ್ನದ ಮಾರಾಟವು ಇತರೆ ಉತ್ಪನ್ನಗಳಿಗೆ ಹೋಲಿಸಿದಾಗ ಹೆಚ್ಚಳವಿರುವದು ಕಂಡುಬಂದಿರುತ್ತದೆ, ಮಾರುಕಟ್ಟೆಯಲ್ಲಿನ ವಿವಿಧ ಮಳಿಗೆಗಳ ಪೇಡಾ ದರವನ್ನು ಪರಿಶೀಲಿಸಿದಾಗ 1 ಕಿ.ಗ್ರಾ. ಪೇಡಾ ರೂಪಾಯಿ 240ಕ್ಕೆ ಮಾರಾಟ ಮಾಡುವದಾಗಿ ಕಂಡುಬಂದಿದ್ದು ಹಾಗು ಇದರ ಮಾರಾಟವು ಒಂದು ದಿನಕ್ಕೆ ಒಂದು ಮಳಿಗೆಯಿಂದ ಸುಮಾರು 17.2 ಕಿ.ಗ್ರಾ. ಇರುತ್ತದೆ.

ಕೋವಾ ಆಧಾರಿತ ಉತ್ಪಾನ್ನಗಳಲ್ಲಿ ಮಾಲ್ಪೂರಿಯು ಎರಡನೆ ಅತಿ ಹೆಚ್ಚು ಮಾರಾಟವಾಗುವ ಉತ್ಪನ್ನವೆಂದು ಕೋಶ್ಠಕ 1 ರಿಂದ ತಿಳಿದು ಬಂದಿದ್ದು ಒಂದು ದಿನಕ್ಕೆ 14.2 ಕಿ.ಗ್ರಾ. ಒಂದು ಮಳಿಗೆಯಿಂದ ಮಾರಾಟವಾಗುತ್ತದೆ ಹಾಗು ಇದರ ಮಾರಾಟ ದರವು ರೂ. 220 ಇದ್ದು ಪೇಡಾ ಉತ್ಪನ್ನಕಿಂತಲು ಕಡಿಮೆ ಇರುತ್ತದೆ, ಪ್ರತಿ ಮಳಿಗೆಯಿಂದಲು ದಿನಕ್ಕೆ ಕನಿಷ್ಟ 1 ರಿಂದ 60 ಕಿ. ಗ್ರಾ. ವರೆಗೂ ಮಾರಾಟವಾಗುವದನ್ನು ಕಂಡುಬಂದಿರುತ್ತದೆ. ಅದರಂತೆ ಖಲಾಕಂದ ಉತ್ಪನ್ನವು ಮೂರನೆ ಸ್ಥಾನದಲಿದ್ದು ಪ್ರತಿ ದಿನಕ್ಕೆ 9.2 ಕಿ.ಗ್ರಾ. ನಂತೆ ಒಂದು ಮಳಿಗೆಯಿಂದ ಮಾರಾಟವಾಗುತ್ತಿದು ಇದರ ದರವು ಇತರ ಎಲ್ಲಾ ಉತ್ಪನ್ನಗಳಿಗಿಂತಲು ಹೆಚ್ಚಿನದಾಗಿರುತ್ತದೆ 1 ಕಿ. ಗ್ರಾ ಖಲಾಕಂದ ರೂ. 380 ರಂತೆ ಇರುತ್ತದೆ.

ಬ್ರರ್ಫಿ ಕೂಡಾ ಕೊವಾ ಆಧರಿತ ಸಿಹಿ ಉತ್ಪನ್ನವಾಗಿದ್ದು ಇದರ ಮಾರಾಟವು ಇತರ ಕೋವ ಆಧಾರಿತ ಸಿಹಿ ಉತ್ಪನ್ನಗಳಿಗಿಂತಲು ಕಡಿಮೆ ಇದ್ದು ದಿನಕ್ಕೆ 4.8 ಕಿ.ಗ್ರಾ. ನಂತೆ ಒಂದು ಮಳಿಗೆಯಿಂದ ಮಾರಾಟವಾಗುವದನ್ನು ಕಂಡುಬಂದಿದ್ದುಇದರ ದರವು 1ಕಿ.ಗ್ರಾ. ಬರ್ಫಿ ರೂ. 320 ರಂತೆ ಇರುತ್ತದೆ.

ಕೋಶ್ಠಕ 2ರ ಪ್ರಕಾರ ಮಾಲ್ಪೂರಿ ಉತ್ಪಾದನೆಯಲ್ಲಿ ನಗರದ ವಿವಿಧ ಉತ್ಪಾದಕರು ಬಳಸುತ್ತಿರುವ ಪದಾರ್ಥಗಳ ಪ್ರಮಾಣದ ಬಗ್ಗೆ ವಿವರಣೆಗಳನ್ನು ನಿಡಿದ್ದು ಪದಾರ್ಥಗಳ ಬಳಕೆ ಪ್ರಮಾಣದಲ್ಲಿ ತುಂಬಾ ವ್ಯತ್ಯಾಸಗಳ ಇರುವುಕೆಯನ್ನು ಕಂಡು ಬಂದಿದೆ. ಉತ್ಪಾದಕ "ಅ" ರವರ ಪ್ರಕಾರ 5 ಕಿ.ಗ್ರಾ. ಖೊವಾದ ಜೊತೆಗೆ 2 ಕಿ.ಗ್ರಾ. ಸಕ್ಕರೆ ಬೆರಿಸಿದರೆ ಉತ್ಪಾದಕ "ಕ" 7 ಕಿ.ಗ್ರಾ. ಖೊವಾದ ಜೊತೆಗೆ 1.7 ಕಿ.ಗ್ರಾ. ಸಕ್ಕರೆಯನ್ನು ಬೆರಿಸುತ್ತಾರೆ, ಈ ಮೆಲ್ಕಂಡ ವ್ಯತ್ಯಾಸಗಳಂದ ಉತ್ಪನ್ನದ ಸಂವೇದನಾ ಲಕ್ಷಣಗಳಲ್ಲಿ ಬದಲಾವಣೆಯನ್ನು ಕಂಡು ಬಂದಿರಿತ್ತದೆ, ಅದೆ ರೀತಿ ಇತರ ಪದಾರ್ಥಗಳಾದ ಹಿಟ್ಟು, ಅಡುಗೆ ಎಣ್ಣೆ, ಏಲಕ್ಕಿ ಪುಡಿಗಳ ಬಳಕೆಯಲ್ಲಿ ಕೂಡಾ ಗಮನಾರ್ಹ ವ್ಯತ್ಯಾಸವನ್ನು ಕಂಡು ಬಂದಿರುತ್ತದೆ.

ಅದೆ ರೀತಿ ಸಕ್ಕರೆ ಪಾಕದ ಬಳಕೆಯಲ್ಲಿ ಕೂಡಾ ವ್ಯತ್ಯಾಸ ಕಂಡುಬಂದಿದ್ದು ಉತ್ಪಾದಕ "ಅ" 5 ಕಿ.ಗ್ರಾ. ಉತ್ಪನ್ನಕೆ ಸಕ್ಕರೆ ಮತ್ತು ನೀರನ್ನು 5:2 ರ ಅನುಪಾತದಲ್ಲಿ ಮಿಶ್ರಣಗೊಳಿಸಿದ್ದು, ಇನ್ನೊರ್ವ ಉತ್ಪಾದಕ "ಬ" 1ಕಿ.ಗ್ರಾ. ಉತ್ಪನ್ನಕೆ 1:0.4 ರ ಅನುಪಾತದಲ್ಲಿ ಮಿಶ್ರಣಗೊಳಿಸಿದ್ದು ಉತ್ಪಾದಕ "ಕ" 7 ಕಿ.ಗ್ರಾ. ಉತ್ಪನ್ನಕೆ 5:2 ರ ಅನುಪಾತದಲ್ಲಿ ಮಿಶ್ರಣಗೊಳಿಸಿದ್ದು ಸಕ್ಕರೆಪಾಕವನ್ನು ತಯಾರಿಸುತ್ತಾರೆ.

ಮಾಮೂ ಮಲ್ಪೂರಿ ಸ್ವೀಟ್ಸ ರವರ ಪ್ರಕಾರ ಮಾಲ್ಪೂರಿ ಉತ್ಪಾದಿಸುವ ವಿಧಾನ:

ಕೋವ (7ಕಿ.ಗ್ರಾ.)

↓

ಸಕ್ಕರೆ (1.7ಕಿ.ಗ್ರಾ.)

↓

ಕೋವಾ ಮತ್ತು ಸಕ್ಕರೆ ಮಿಶ್ರಣವನ್ನು ಬಿಸಿ ಮಾಡುವದು(20 ನಿಮಿಶ)

↓

ಮೈದ ಹಿಟ್ಟಿನ ಚಪಾತಿ

↓

70 ಗ್ರಾ. ಕೋವಾ ಮತ್ತು ಸಕ್ಕರೆ ಮಿಶ್ರಣವನ್ನು ಮೈದ ಹಿಟ್ಟಿನ ಚಪಾತಿಗೆ ಸೇರಿಸುವದು

↓

ಮಿಶ್ರಣದ ಹೋಳಿಗೆಯನ್ನು ಡಲ್ಡಾ ಫಿ ಅಡುಗೆ ಎಣ್ಣೆಯಲಿ ಹುರಿಯುವದು

↓

ಸಕ್ಕರೆ ಪಾಕದಲ್ಲಿ 15 ನಿಮಿಷದವರೆಗೆ ಬೆರೆಸುವದು

↓

ಮಾಲ್ಪೂರಿ

ಕೋಶ್ಠಕ 1) ಕಲಬುರಗಿ ನಗರದ ಮಾರುಕಟ್ಟಿಯಲ್ಲಿನ ಕೋವಾ ಆಧಾರಿತ ಸಾಂಪ್ರಾದಾಯಿಕ ಹಾಲು ಉತ್ಪನ್ನಗಳ ಮಾರಾಟ.

ಕ್ರಮ ಸಂಖೆ	ಉತ್ಪನ್ನಗಳು	ಸರಾಸರಿ ಮಾರಾಟ ಕಿ.ಗ್ರಾ./ ದಿನಕ್ಕೆ/ ಮಳಗೆ	ವ್ಯಾಪ್ತಿ ಕಿ.ಗ್ರಾ./ ದಿನಕ್ಕೆ/ ಮಳಗೆ	ಮೊತ್ತ ರೂ/ಕಿ.ಗ್ರಾ
1	ಪೇಡಾ	17.2	2–50	240
2	ಮಾಲ್ಪೂರಿ	14.2	1–60	220
3	ಕಲಾಖಂದ	9.2	2–30	380
4	ಬರ್ಫಿ	4.8	2–10	320ಚ್

ಕೋಶ್ಠಕ 2) ಕಲಬುರಗಿ ನಗರದ ವಿವಿಧ ಉತ್ಪಾದಕರಿಂದ ಮಾಲ್ಪೂರಿ ಉತ್ಪಾದನಯಲ್ಲಿ ಬಳಸುವ ಪದಾರ್ಥಗಳ ಪ್ರಮಾಣ.

ಕ್ರಮ ಸಂಖೆ	ಪದಾರ್ಥ ಗಳು	ಉತ್ಪಾದಕ “ಅ”	ಉತ್ಪಾದಕ “ಬ”	ಉತ್ಪಾದಕ “ಕ”
1	ಕೊವಾ	5 ಕಿ.ಗ್ರಾ.	1 ಕಿ.ಗ್ರಾ.	7 ಕಿ.ಗ್ರಾ.
2	ಸಕ್ಕರೆ	2 ಕಿ.ಗ್ರಾ.	0.5 ಕಿ.ಗ್ರಾ.	1.7 ಕಿ.ಗ್ರಾ.
3	ಮೈದಾ ಹಿಟ್ಟು	3 ಕಿ.ಗ್ರಾ.	1 ಕಿ.ಗ್ರಾ.	7 ಕಿ.ಗ್ರಾ.
4	ಅಡುಗೆ ಎಣ್ಣೆ	5 ಕಿ.ಗ್ರಾ.	1 ಕಿ.ಗ್ರಾ.	5 ಕಿ.ಗ್ರಾ.
5	ಸಕ್ಕರೆ ಪಾಕ ಸಕ್ಕರೆ:ನೀರು	5:2	1:0.4	5:2
6	ಏಲಕ್ಕಿ ಪುಡಿ	50 ಗ್ರಾ.	10 ಗ್ರಾ.	50ಗ್ರಾ.

* ಉತ್ಪಾದಕ “ಅ”– ದಿಲ್ಲಿವಾಲಾ ಸ್ವೀಟ್ಸ, ಕಲಬುರಗಿ

* ಉತ್ಪಾದಕ “ಬ” ಅಗರವಾಲ್ ಸ್ವೀಟ್ಸ, ಕಲಬುರಗಿ

* ಉತ್ಪಾದಕ “ಕ”ಮಾಮೂ ಮಾಲ್ಪೂರಿ ಸ್ವೀಟ್ಸ, ಕಲಬುರಗಿ

ನಿರ್ಣಯ:– ಈ ಅಧ್ಯಾಯನದ ಫಲಿತಾಂಶವು ಸಾಂಪ್ರದಾಯಕ ಹಾಲಿನ ಉತ್ಪನ್ನಗಳಿಗಿರುವ ಪ್ರಮುಖ ಬೇಡಿಕೆಯನ್ನು ತಿಳಿಸುತ್ತದೆ, ಜಿಲ್ಲೆಯ ನಗರ ಮಾರುಕಟ್ಟೆ ಪರಿಶೀಲನಾ ವರದಿಯ ಪ್ರಕಾರ ಮಾಲ್ಪೂರಿ ಉತ್ಪನ್ನಕೆ ಹೆಚ್ಚಿನ ಬೇಡಿಕೆಯಿದ್ದು, ಇದರ ಉತ್ಪಾದನಾ ವಿಧಾನವನ್ನು ಪ್ರಮಾಣಿಕರಣಗೋಳಿಸಿವದರಿಂದ ಉತ್ತಮವಾದ ಸ್ಂವೇದನ ಲಕ್ಷಣವುಳ ಮಾಲ್ಪೂರಿಯನ್ನು ತಯಾರಿಸಬಹುದು ಹಾಗು ಇತರೆ ಉತ್ಪಾದಕರಿಗೆ ಉತ್ಪಾದನಾ ವಿಧಾನವನ್ನು ತಿಳಿಸುವದರಿಂದ ಗ್ರಾಹಕರ ಬೇಡಿಕೆಯನು ಈಡೇರಿಸಬಹುದು. ಅದರೊಂದಿಗೆ ಹಾಲು ಉತ್ಪಾದಕರು ಉತ್ಪಾದಿಸಿದ ಹಾಲನ್ನು ಮಾಲ್ಪೂರಿಗೆ ಬೇಕಾಗುವ ಕೋವಾ ಪದಾರ್ಥವನ್ನು ಉತ್ಪಾದಿಸಿ ಮಾರಾಟ ಮಾಡುವದರಿಂದ ರೈತರ ಆರ್ಥಿಕ ಸ್ಥಿತಿಯನ್ನು ಸಧ್ರೂಡಗೊಳಸಬಹುದೆಂದು ತಿಳಿದುಬಂದಿರುತ್ತದೆ.

ಶಿರ್ಷಿಕೆಗಳು:

• Deapartment of Animal Husabandry Dairying and Fishries Ministry of Agriculture @ GOI 2014-15.

• http://www.Sensus 2011.co.in/sensus/city/453/Gulbarga-html.

• Shivaraya Singh,2014 Dairy Products and Quality Assurance Vol. 2 (317-318)

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೈನುಗಾರಿಕೆಯ ವಿಶ್ಲೇಷಣೆ

ಡಾ. ಕೆ.ಸಿ.ವೀರಣ್ಣ, ಡಾ. ಗೋಪಾಲ.ಜಿ.ಟಿ ಮತ್ತು ಹರೀಶ. ಎಂ
ಪಶು ವೈದ್ಯಕೀಯ ಮತ್ತು ಪಶುಪಾಲನಾ ವಿಸ್ತರಣಾ ಶಿಕ್ಷಣ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

ಜಾಗತಿಕ ಮಟ್ಟದಲ್ಲಿ ಭಾರತ ದೇಶವು ಹಾಲಿನ ಉತ್ಪಾದನೆಯಲ್ಲಿ ಮೊದಲನೆ ಸ್ಥಾನದಲ್ಲಿದೆ. 2013–14ನೇ ಸಾಲಿನಲ್ಲಿ 137.68 ಮೆಟ್ರಿಕ್ ಟನ್‌ನಷ್ಟಿದ್ದ ಹಾಲಿನ ಉತ್ಪಾದನೆ 2014–15ನೇ ಸಾಲಿನಲ್ಲಿ 146.31 ಮೆಟ್ರಿಕ್ ಟನ್‌ನಷ್ಟಿಗೆ ಏರಿಕೆಯಾಗಿದೆ. ಈ ದಾಖಲೆ ಏರಿಕೆ ಶೇ.6.3ರಷ್ಟಿದ್ದು, ಇದಕ್ಕೆಮಾಣವಾಗಿ ಅಂತರರಾಷ್ಟ್ರೀಯ ಏರಿಕೆ ಮಟ್ಟ ಕೇವಲ 2.2ರಷ್ಟಿದೆ. ಆದರೆ ನಮ್ಮ ದೇಶದ ಹೈನುರಾಸುಗಳ ದಿನದ ಸರಾಸರಿ ಹಾಲಿನ ಇಳುವರಿ ಪ್ರತಿ ರಾಸುವಿಗೆ ಕೇವಲ4.4 ಲೀಟರ್ ಆಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ರಾಸುವಿನ ಉತ್ಪಾದನಾ ಸರಾಸರಿ ಇನ್ನೂ ಕಡಿಮೆ ಇದೆ. ಇದಲ್ಲದೆ ನಮ್ಮ ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಹಾಲಿನ ಗುಣಮಟ್ಟ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ವಿಫಲವಾಗಿದೆ. ಈ ನಿಟ್ಟಿನಲ್ಲಿ ಅವಲೋಕನೆ ಮಾಡಿದಾಗ ನಮ್ಮ ದೇಶದ ಹೈನುರಾಸುಗಳಿಂದ ಸರಾಸರಿ ಇಳುವರಿಯನ್ನು ಹೆಚ್ಚಿಸುವ ಸಾಧ್ಯತೆಗಳಿವೆ. ಹಾಗೆಯೇ ಶುದ್ಧ ಹಾಲನ್ನು ಉತ್ಪಾದಿಸಿ ಗುಣಮಟ್ಟವನ್ನು ಕಾಪಾಡಿಕೊಂಡಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಹೊಂದಬಹುದಾಗಿದೆ. ದೇಶದ ಹಾಲಿನ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು 11ನೇ ಸ್ಥಾನದಲ್ಲಿದ್ದು, ಕರ್ನಾಟಕ ಹಾಲು ಒಕ್ಕೂಟ ದಿನಂದ ಪ್ರತಿ ದಿನ 50 ಲಕ್ಷ ಲೀಟರ್ ಹಾಲನ್ನು ಸಂಗ್ರಹಿಸಲಾಗುತ್ತಿದೆ.

ಜಾಗತಿಕ ಮಟ್ಟದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಬೇಡಿಕೆಯನ್ನು ವಿಶ್ಲೇಷಣೆ ಮಾಡಿದಾಗ ಪ್ರತಿ ವರ್ಷ ಗಣನೀಯ ಪ್ರಮಾಣದಲ್ಲಿ ಏರಿಕೆ ಕಾಣುತ್ತಿದ್ದು, ಮುಂದಿನ 2 ದಶಕಗಳ ಹಾಲು ಮತ್ತು ಹಾಲಿನ ಉತ್ಪನ್ನಗಳ ಬೇಡಿಕೆ ಬಿಗುಗೊಳ್ಳುವ ಸಂಭವವಿದೆ. ಇದಕ್ಕೆ ಅನೇಕ ಕಾರಣಗಳಿದ್ದು, ಅವುಗಳಲ್ಲಿ ಮುಖ್ಯವಾಗಿ ಸಾರ್ವಜನಿಕರಲ್ಲಿ ಆರೋಗ್ಯ ಮತ್ತು ಪೌಷ್ಠಿಕ ಆಹಾರದ ಬಗ್ಗೆ ಮನವರಿಕೆಯಾಗಿರುವುದು ಮತ್ತು ಕೊಂಡುಕೊಳ್ಳುವ ಸಾಮರ್ಥ್ಯ ವೃದ್ಧಿಸಿರುವುದು ಪ್ರಮುಖವಾಗಿದೆ. ಈ ಹೆಚ್ಚುತ್ತಿರುವ ಬೇಡಿಕೆಯ ಲಾಭವನ್ನು ಹೈನುಗಾರಿಕೆಯಲ್ಲಿ ತೊಡಗಿರುವ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ತಲುಪಿಸುವುದು ವಿಜ್ಞಾನಿಗಳ ಮತ್ತು ಯೋಜನಾಕಾರರ ಕರ್ತವ್ಯವಾಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳು ಮಳೆಯಾಧಾರಿತ ಕೃಷಿಯನ್ನು ಅವಲಂಬಿಸಿರುವುದರಿಂದ ಹೈನುಗಾರಿಕೆ ಈ ಭಾಗದ ರೈತರ ಪ್ರಮುಖ ಉಪಕಸುಬಾಗಿದೆ. ಜೊತೆಗೆ ಅನೇಕ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು ಹೈನುಗಾರಿಕೆಯಿಂದ ಜೀವನೋಪಾಯ ನಡೆಸುತ್ತಿದ್ದಾರೆ. ಆದ್ದರಿಂದ ಈ ಪ್ರದೇಶದಲ್ಲಿನ ಹೈನುಗಾರಿಕೆಯಲ್ಲಿರುವ ಸಮಸ್ಯೆಗಳು, ಅಭಿವೃದ್ಧಿಗೆ ಇರುವ ಅವಕಾಶಗಳು ಮತ್ತು ಯೋಜನೆಯ ರೂಪುರೇಷೆಗಳ ವಿಶ್ಲೇಷಣೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಹೈನುಗಾರಿಕೆ ಅಭಿವೃದ್ಧಿಗೆ ಪೂರಕವಾಗಲಿದೆ.

ಹೈನುಗಾರಿಕೆಯಲ್ಲಿರುವ ಪ್ರಮುಖ ಸಮಸ್ಯೆಗಳು:

* ಮಿಶ್ರತಳಿ ಹೈನುರಾಸುಗಳ ಕೊರತೆ.

* ಹೈನುರಾಸುಗಳ ಪ್ರತಿ ರಾಸುವಿನ ಸರಾಸರಿ ಹಾಲಿನ ಉತ್ಪಾದನೆ ಕೇವಲ 4.4 ಲೀಟರ್‌ಗಳು.

* ಸಮತೋಲನ ಆಹಾರವನ್ನು ಕೊಡುವ ಪದ್ಧತಿಗಳನ್ನ ಅಳವಡಿಸಿಕೊಳ್ಳದಿರುವುದು.

* ಹಾಲಿನಲ್ಲಿ ಕಡಿಮೆ ಕೊಬ್ಬಿನಾಂಶ ಮತ್ತು ಘನ ಪದಾರ್ಥ.

* ಕಡಿಮೆ ಗುಣಮಟ್ಟದ ಹಾಲಿನ ಉತ್ಪಾದನೆ.

* ಹೈನುಗಾರಿಕೆ ಸಂಬಂಧಿತ ಚಟುವಟಿಕೆಗಳಿಗೆ ಸಾಲ ಕೊಡಲು ಹಣಕಾಸು ಸಂಸ್ಥೆಗಳ ನಿರುತ್ಸಾಹ

* ಶೀತಲೀಕರಣ ಸೌಲಭ್ಯ ಕೊರತೆ.

* ಶೇ. 80 ಕ್ಕಿಂತ ಹೆಚ್ಚು ಹಾಲಿನ ಉತ್ಪಾದನೆ ಅಸಂಘಟಿತ ವಲಯದಿಂದ ಆಗುತ್ತಿರುವುದು.

* ಹೈನುಗಾರಿಕೆ ಸಂಬಂಧಿತ ಚಟುವಟಿಕೆಗಳಿಗೆ ಬೇಕಾದ ಕೌಶಲ್ಯವಿರುವ ಮಾನವ ಸಂಪನ್ಮೂಲದ ಕೊರತೆ.

* ರಾಸುಗಳ ಆರೋಗ್ಯ ರಕ್ಷಣೆಗೆ ಸುಸಜ್ಜಿತ ವ್ಯವಸ್ಥೆಯ ಕೊರತೆ.

* ಹೆಚ್ಚು ಹಾಲು ಉತ್ಪಾದನಾ ವೆಚ್ಚ ಮತ್ತು ಹಾಲಿನ ಕಲಬೆರಕೆ

* ಋತುವಿಗೆ ಅನುಗುಣವಾಗಿ ಹಾಲಿನ ಉತ್ಪಾನೆಯ ಏರುಪೇರು.

* ಮೇವು ಬೆಳೆಯಲು ಭೂಮಿ ಮತ್ತು ಭೂ ಸಂಪನ್ಮೂಲಗಳ ಮೇಲೆ ಹೆಚ್ಚಿನ ಒತ್ತಡ.

* ಮೇವು ಬೆಳೆಯಲು ನಿರಾವರಿ ಭೂಮಿಯ ಕೊರತೆ.

ಅವಕಾಶಗಳು:

* ಉನ್ನತಿಕರಿಸಿದ ಎಮ್ಮೆ ತಳಿಗಳ ಲಭ್ಯತೆ

* ಬೀದರ್ ಜಿಲ್ಲೆಯಲ್ಲಿ ಹೈನುಗಾರಿಕೆಗೆ ಬೇಕಾದ ಪೂರಕ ಪರಿಸರ

* ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆ.

* ಆರೋಗ್ಯ ಮತ್ತು ಸಮತೋಲನ ಆಹಾರದ ಬಗ್ಗೆ ಗಮನ.

* ಹಾಲು ಉತ್ಪಾದಕರ ಸಹಕಾರ ಸಂಘಗಳ ಗುಚ್ಛ

ಹೈನುಗಾರಿಕೆ ಅಭಿವೃದ್ಧಿಗೆ ಯೋಜನಾ ರೂಪುರೇಷೆ:

* ಹಾಲಿನ ಒಕ್ಕೂಟಗಳ ಸಂಗ್ರಹ, ಸಂಸ್ಕರಣೆ ಸಾರಿಗೆ ವೆಚ್ಚಗಳನ್ನು ಕಡಿತಗೊಳಿಸುವುದು.

* ಕಟ್ಟುನಿಟ್ಟಾದ ತಳಿ ಸಂವರ್ಧನಾ ನೀತಿಯ ಅಳವಡಿಕೆ

* ಸಮತೋಲನ ಆಹಾರದ ಪೂರೈಕೆ

* ಮೇವು ಉತ್ಪಾದನೆಗೆ ಉತ್ತೇಜನ, ಹುಲ್ಲುಗಾವಲುಗಳ

ಅಭಿವೃದ್ಧಿ.

* ಹೈನುಗಾರಿಕೆ ಸಂಬಂಧಿಸಿದ ಕೌಶಲ್ಯ ಆಧಾರಿತ ತರಭೇತಿ ಸಂಸ್ಥೆಗಳ ಸ್ಥಾಪನೆ.

* ಹಾಲು ಮತ್ತು ಹಾಲಿನ ಉತ್ಪನ್ನಗಳ ರಫ್ತಿಗೆ ಉತ್ತೇಜನ

* ಶುದ್ಧ ಹಾಲು ಉತ್ಪಾದನೆಗೆ ಆರ್ಥಿಕ ಉತ್ತೇಜನ

* ಅವಶ್ಯಕತೆಗೆ ಅನುಗುಣವಾಗಿ ಆರೋಗ್ಯ ರಕ್ಷಣೆಯ ಸೌಲಭ್ಯಗಳ ಅಭಿವೃದ್ಧಿ.

* ಹಾಲಿನ ಉತ್ಪಾದನ ವೆಚ್ಚಕ್ಕನುಗುಣವಾಗಿ ಮಾರುಕಟ್ಟೆಯ ದರ ನಿಗದಿಪಡಿಸುವುದು.

* ಉತ್ಪಾದನ ಹಂತದಿಂದ ಮಾರುಕಟ್ಟೆಯ ಹಂತದವರೆಗೆ ಶೀತಲೀಕರಣ ವ್ಯವಸ್ಥೆ.

* ಹಾಲು ಮತ್ತು ಹಾಲಿನ ಉತ್ಪನ್ನಗಳ ಉದ್ಯಮಗಳಲ್ಲಿ ತೊಡಗುವ ಉದ್ಯಮಶೀಲರಿಗೆ ತರಭೇತಿ ಮತ್ತು ಸಾಲ ಸೌಲಭ್ಯ.

ಪಶುಸಂಗೋಪನೆಯಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಜಾನುವಾರುಗಳಲ್ಲಿ ಉಣ್ಣೆಗಳ ಹತೋಟಿ ಕ್ರಮಗಳು

ಡಾ॥ ಕೃಷ್ಣಮೂರ್ತಿ, ಸಿ. ಎಂ.
ಸಹಾಯಕ ಪ್ರಾಧ್ಯಾಪಕರು ಮತ್ತು (ಪ್ರಭಾರಿ) ಮುಖ್ಯಸ್ಥರು, ಪಶುವೈದ್ಯಕೀಯ ಪರೋಪಜೀವಿ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ, ಬೀದರ್ ಮಿಂಚಂಚೆ: doctorkitty1980@gmail.com

ಉಣ್ಣೆಗಳು ಜಾನುವಾರುಗಳ ಹೊರಮೇಲ್ಮೈ ಮೇಲೆ ವಾಸ ಮಾಡುವ ಕೀಟಪ್ರಭೇದಕ್ಕೆ ಸೇರಿದ ಹೊರ ಪರೋಪಜೀವಿಗಳು. ಇವುಗಳು ಪ್ರಾಣಿಗಳ ರಕ್ತವನ್ನು ಹೀರುತ್ತವೆ ಇದರಿಂದ ರಕ್ತ ಹೀನತೆ/ಅನೀಮಿಯಾ ಉಂಟಾಗಿ ಕುಂಠಿತ ಬೆಳವಣಿಗೆ, ಹಾಲು, ತುಪ್ಪಟ ಹಾಗೂ ಮಾಂಸದ ಉತ್ಪಾದನೆ ಕಡಿಮೆಯಾಗುತ್ತದೆ. ಉಣ್ಣೆಗಳಿಂದ ಪ್ರಾಣಿಗಳಿಗೆ ವಿಷಭಾಧೆ (Tick Toxicosis), ಪಾರ್ಶ್ವವಾಯು (Tick Paralysis) ಮತ್ತು Tick Pyemia ಎಂಬ ತೊಂದರೆಗಳ ಜೊತೆಗೆ ಹಲವು ಮಾರಕಾಂಶಿಕ ರೋಗಗಳಾದ ಆರಿಥ್ರ್ಯಾಕ್ಸ್, ಮರಿಗಾನ ಕಾಯಿಲೆ, ಕೆಂಪುಮೂತ್ರ ರೋಗ (ಬೆಬೀಸಿಯೋಸಿಸ್), ಥೈರೇರಿಯೋಸಿಸ್, ಅನಾಪ್ಲಾಸ್ಮಾ ಹರಡುತ್ತವೆ. ಇದರಿಂದ ಜಾನುವಾರುಗಳ ಆರೋಗ್ಯದಲ್ಲಿ ತೊಂದರೆ ಉಂಟಾಗಿ ಅವುಗಳ ಬೆಳವಣಿಗೆಯು ಕುಂಠಿತಗೊಂಡು, ಹಾಲು, ಮಾಂಸ ಮತ್ತು ಮೊಟ್ಟೆಗಳ ಉತ್ಪಾದನೆಯಲ್ಲಿ ಗಣನೀಯ ಇಳಿಕೆ ಕಂಡುಬರುವುದರಿಂದ ರೈತರು ಆರ್ಥಿಕವಾಗಿ ನಷ್ಟವನ್ನು ಅನುಭವಿಸುತ್ತಾರೆ. ಆದ್ದರಿಂದ ಪಶುಸಂಗೋಪನೆಯಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಜಾನುವಾರುಗಳಲ್ಲಿ ಉಣ್ಣೆಗಳ ಹತೋಟಿ ಮಾಡುವ ಕ್ರಮಗಳನ್ನು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ರೂಪಿಸಿಕೊಳ್ಳಬೇಕು.

ಪ್ರಮುಖ ಪದಗಳು: ಉಣ್ಣೆಗಳು, ರಕ್ತ ಹೀನತೆ, ಮಾರಕಾಂಶಿಕ ರೋಗಗಳು.

ಉಣ್ಣೆಗಳೆಂದರೇನು ಅವುಗಳಿಂದ ಪ್ರಾಣಿಗಳಿಗೆ ಉಂಟಾಗುವ ತೊಂದರೆಗಳೇನು?

ಉಣ್ಣೆಗಳೆಂದರೆ ನಾಲ್ಕು ಜೊತೆ ಕಾಲುಗಳುಳ್ಳ (ಅಷ್ಟಪದಿ) ಕೀಟಪ್ರಭೇದಗಳು, ಸಾಮಾನ್ಯವಾಗಿ ಪ್ರಾಣಿಗಳ ಹೊರಮೇಲ್ಮೈ ಮೇಲೆ ವಾಸ ಮಾಡುವ ಪರೋಪಜೀವಿಗಳು.

* ಉಣ್ಣೆಗಳು ಪ್ರಾಣಿಗಳ ರಕ್ತವನ್ನು ಹೀರುತ್ತವೆ ಇದರಿಂದ ರಕ್ತ ಹೀನತೆ/ಅನೀಮಿಯಾ ಉಂಟಾಗಿ ಕುಂಠಿತ ಬೆಳವಣಿಗೆ, ಹಾಲು, ತುಪ್ಪಟ ಹಾಗೂ ಮಾಂಸದ ಉತ್ಪಾದನೆ ಕಡಿಮೆಯಾಗುತ್ತದೆ.

* ಉಣ್ಣೆಗಳು ಕಚ್ಚುವಿಕೆಯಿಂದ/ಇರುವಿಕೆಯಿಂದ ಪ್ರಾಣಿಗಳು ಸಹನೆ ಕಳೆದುಕೊಳ್ಳುತ್ತವೆ, ಯಾವಾಗಲೂ ಮೈಯನ್ನು ಕೆರೆದುಕೊಳ್ಳುತ್ತಾ ಈ ಉಣ್ಣೆಗಳನ್ನು ಮೈಮೇಲಿಂದ ಕೆಡವಲು ಪ್ರಯತ್ನ ಮಾಡುತ್ತಿರುತ್ತವೆ. ಇದರಿಂದ ಸರಿಯಾಗಿ ಮೇವು ತಿನ್ನುವುದನ್ನು ಬಿಟ್ಟು ಬೆಳವಣಿಗೆ ಕುಂಠಿತವಾಗುತ್ತದೆ.

* ಉಣ್ಣೆಗಳು ಕಚ್ಚಿದಾಗ ದೇಹಕ್ಕೆ ಕೆಲವು ವಿಷ ವಸ್ತುಗಳು ಚರ್ಮದ ಮೂಲಕ ಸೇರಿ ಪ್ರಾಣಿಗಳಲ್ಲಿ ವಿಷಭಾಧೆ ಉಂಟಾಗಬಹುದು (ಟಿಕ್ ಟಾಕ್ಸಿಕೋಸಿಸ್) ಎಂದು ಹೇಳುತ್ತೇವೆ.

* ಪ್ರಾಣಿಗಳಲ್ಲಿ ಉಣ್ಣೆಗಳಿಂದ ನರದೌರ್ಬಲ್ಯ ಉಂಟಾಗಿ ಹಿಂಬಾಗದ ಕಾಲುಗಳ ಸ್ವಾದೀನ ಕಳೆದುಕೊಂಡು ಪಾರ್ಶ್ವವಾಯು (ಲಕ್ವ) ಸಹಾ ಉಂಟಾಗಬಹುದು (ಟಿಕ್ ಪೆರಾಲಿಸಿಸ್) ಎಂದು ಹೇಳುತ್ತೇವೆ.

* ಒಂದು ಉಣ್ಣೆಯು ಒಂದು ದಿನದಲ್ಲಿ ಸರಾಸರಿಯಾಗಿ ೦.೫ ಮಿಲೀ ಇಂದ 2.೦ ಮಿಲಿಲೀಟರ್ ರಕ್ತವನ್ನು ಹೀರಬಹುದು. ಒಂದು ಸಂಶೋದನೆಯ ಪ್ರಕಾರ ಸುಮಾರು ೫೦೦ ಉಣ್ಣೆಗಳು ಒಂದು ಕರುವಿನ ರಕ್ತವನ್ನೆಲ್ಲಾ ಹೀರಿ ಸಾವನ್ನುಂಟುಮಾಡಬಹುದೆಂದು ಸಾಬೀತಾಗಿದೆ. ಆದ್ದರಿಂದ ಸೂಕ್ತ ಹತೋಟಿ ಕ್ರಮಗಳನ್ನು ಅನುಸರಿಸಬೇಕು.

* ಕೆಲವು ದನಕರುಗಳಲ್ಲಿ ಕಿವಿ, ಕತ್ತು ಹಾಗೂ ಕೆಚ್ಚಲಿನ ಸುತ್ತಮುತ್ತ ಬಹಳ ಹೆಚ್ಚು ಉಣ್ಣೆಗಳು ಅಂಟಿಕೊಂಡು ರಕ್ತ ಹೀರುತ್ತಿರುತ್ತವೆ. ಈ ಉಣ್ಣೆಗಳು ರಕ್ತ ಹೀರಿ ಬಿಟ್ಟ ಜಾಗಗಳು ನೊಣಗಳನ್ನು ಆಕರ್ಷಣೆ ಮಾಡಿ ಗಾಯಗಳಾಗಿ ಅವುಗಳು ಮೊಟ್ಟೆ ಇಟ್ಟು ಗಾಯದಲ್ಲಿ ಹುಳುಗಳಾಗುವ ಸಂಭವ ಹೆಚ್ಚಿರುತ್ತದೆ.

* ಸಣ್ಣ ಕುರಿಮರಿಗಳಲ್ಲಿ ಈ ರೀತಿ ಕಚ್ಚಿದಂತಹಾ ಜಾಗಗಳಲ್ಲಿ ಕೀವು ತುಂಬಿಕೊಂಡು ಗಾಯ ಉಲ್ಬಣವಾಗುವ ಸಂಭವ ಹೆಚ್ಚು ಇದನ್ನು (ಟಿಕ್ ಪಯ್ಯೋಮಿಯಾ) ಎಂದು ಕರೆಯುತ್ತಾರೆ.

* ಉಣ್ಣೆಗಳು ಹಲವಾರು ಮಾರಣಾಂತಿಕ ರೋಗಗಳನ್ನು ಸಹಾ

ಹರಡುತ್ತವೆ, ಅವುಗಳಲ್ಲಿ

* ಬ್ಯಾಕ್ಟೀರಿಯಾ: ಆಂಥ್ರ್ಯಾಕ್ಸ್

* ವೈರಾಣುಗಳು: ಮಂಗನ ಕಾಯಿಲೆ

* ಏಕಾಣುಜೀವಿಗಳು: ಕೆಂಪುಮೂತ್ರ ರೋಗ (ಬೆಬೀಸಿಯಾ), ಥೈಲೇರಿಯಾ, ಆನಪ್ಲಾಸ್ಮ

ಉಣ್ಣೆಗಳ ಹರಡುವಿಕೆ ಮತ್ತು ಜೀವನ ಕ್ರಮ :– ಈ ಉಣ್ಣೆಗಳಲ್ಲಿ ಹಲವು ಪ್ರಭೇದಗಳಿದ್ದು, ಇವುಗಳು ಸರಾಸರಿ 1000 ದಿಂದ 20,000 ಮೊಟ್ಟೆಗಳನ್ನು ಗುಂಪು ಗುಂಪಾಗಿ ಗೊಂಚಲಿನಂತೆ ಇಡುತ್ತವೆ. ಸಾಮಾನ್ಯವಾಗಿ ಬಿಸಿಲು ಮತ್ತು ಮಳೆಯಿಂದ ರಕ್ಷಣೆ ಇರುವಂತ ಜಾಗಗಳಲ್ಲಿ ಹೆಚ್ಚು ಇಡುತ್ತವೆ. ಅವುಗಳಲ್ಲಿ, ದನದ ಕೊಟ್ಟಿಗೆ ಮನೆಯ ಗೋಡೆಗಳಲ್ಲಿನ ಬಿರುಕುಗಳು, ಸಂದಿ–ಗೊಂದಿಗಳು, ಕೊರಕಲುಗಳು, ಮೇವು ಹಾಕುವ ದೇಣಿ/ಗೋಂದಿಗೆ, ಮರ–ಮುಟ್ಟುಗಳ ಮೇಲೆ, ಸಣ್ಣಪುಟ್ಟ ಕಲ್ಲುಗಳ ಅಡಿಯಲ್ಲಿ, ಅಥವಾ ನೆಲದಲ್ಲಿರುವ ಬಿರುಕುಗಳಲ್ಲಿ ಹೆಚ್ಚು ಇಡುತ್ತವೆ.

ಕೆಲವು ದಿನಗಳಲ್ಲಿ ಈ ಮೊಟ್ಟೆಗಳು ಒಡೆದು ಮರಿಗಳಾಗಿ/ಲಾರ್ವಾ ಹೊರಬರುತ್ತವೆ. ಈ ಮರಿಗಳು/ಲಾರ್ವಾ ಹಸಿವಿನಿಂದ ಸಿಕ್ಕ ಸಿಕ್ಕ ಪ್ರಾಣಿಗಳು/ದನಕರುಗಳು/ಕೊಟ್ಟಿಗೆಯಲ್ಲೇ ಉಳಯುವ ಸಣ್ಣಕರುಗಳು/ಕುರಿಮರಿಗಳು ಹಾಗೂ ಮನುಷ್ಯರ ಮೇಲೂ ಆಕ್ರಮಣ ಮಾಡಿ ರಕ್ತವನ್ನು ಹೀರುತ್ತವೆ. 2–3 ದಿನಗಳು ಹೀಗೆ ರಕ್ತ ಹೀರಿದ ನಂತರ ನೆಲಕ್ಕೆ ಉದುರಿ ಪೊರೆಕಳಚಿ ನಿಂಫ್/ಕೋಶಗಳಾಗಿ ಬದಲಾಗುತ್ತವೆ.

ಈ ಕೋಶಗಳು ಲಾರ್ವಾಗಳಂತೆ ಮತ್ತೆ ರಕ್ತ ಹೀರಲು ಪ್ರಾರಂಭ ಮಾಡುತ್ತವೆ. 3–4 ದಿನಗಳು ರಕ್ತವನ್ನು ಹೀರಿದ ನಂತರ ಪ್ರೌಢಾವಸ್ಥೆಗೆ ತಲುಪುತ್ತವೆ. ನಂತರ ಗಂಡು ಮತ್ತು ಹೆಣ್ಣು ಉಣ್ಣೆಗಳೆಂದು ಮಾರ್ಪಾಟಾಗುತ್ತವೆ. ಈ ಗಂಡು ಮತ್ತು ಹೆಣ್ಣು ಉಣ್ಣೆಗಳು ಮಿಲನದಿಂದ/ಕೂಡುವುದರಿಂದ ಹೆಣ್ಣು ಉಣ್ಣೆಯು ಗರ್ಭದರಿಸಿ ಮತ್ತೆ ರಕ್ತವನ್ನು ಹೀರಲು ಪ್ರಾರಂಭಿಸುತ್ತದೆ. ಸಂಪೂರ್ಣವಾಗಿ ರಕ್ತ ಹೀರಿದ ನಂತರ ಈ ಹೆಣ್ಣು ಉಣ್ಣೆಯು ಪ್ರಾಣಿಗಳ ಮೈಮೇಲಿಂದ ಜಾರಿ ನೆಲಕ್ಕೆ ಬಿದ್ದು ಈ ಮೇಲೆ ಹೇಳಿದ ಜಾಗಗಳಲ್ಲಿ ಮೊಟ್ಟೆಗಳನ್ನು ಇಡುತ್ತವೆ ನಂತರ ಈ ಮೊಟ್ಟೆಗಳು ಒಡೆದು ಮರಿಗಳಾಗಿ ಇವುಗಳ ಜೀವನಚಕ್ರ ಮುಂದುವರಿಯುತ್ತದೆ.

ಉಣ್ಣೆಗಳ ಪ್ರಭೇದಗಳು ಮತ್ತು ಹರಡುವ ರೋಗಗಳು :– ರೈತಮಿತ್ರರೇ, ಈ ಉಣ್ಣೆಗಳಲ್ಲಿ ಎರಡು ವಿಧ, ಒಂದು ಮೃದು ಉಣ್ಣೆ (ಖಾಜಿಣ ಖಾಫಿಇ) ಮತ್ತೊಂದು ಒರಟು ಉಣ್ಣೆ (ಊಚಿಡಿಜಿ ಖಾಫಿಇ). ಈ ಮೃದು ಉಣ್ಣೆಗಳು ಕೋಳಿಮನೆಗಳಲ್ಲಿ, ಕೋಳಿಮನೆಗಳ ಸುತ್ತಮುತ್ತಲಿನ ಮರಗಿಡಗಳಲ್ಲಿದ್ದು, ಕೋಳಿಗಳ ಮೇಲೆ, ಪಂಜರದಲ್ಲಿ ಸಾಕುವಂತಹ ಪಕ್ಷಿಗಳು ಅಥವಾ ಪ್ರಾಣಿಗಳ ಮೇಲೆ ಆಕ್ರಮಣ ಮಾಡಿ ರಕ್ತವನ್ನು ಹೀರಿ ತಮ್ಮ ಜೀವನ ನಡೆಸುತ್ತವೆ.

ಇನ್ನು ಒರಟು ಉಣ್ಣೆಗಳಲ್ಲಿ ಒಂದೊಂದು ಭೌಗೋಳಿಕ ಪ್ರದೇಶಕ್ಕೂ, ಒಂದೊಂದು ಪ್ರಾಂತ್ಯದಲ್ಲೂ ಹಲವು ಪ್ರಭೇದಗಳಿವೆ. ಮುಖ್ಯವಾಗಿ,

ಬೂಫಿಲಸ್ ಉಣ್ಣೆಗಳು (Boophilus Tick: Caster Bean Tick): ಇವುಗಳು ಹರಳಿನ ರೀತಿ ಇರುತ್ತವೆ. ಹೆಚ್ಚಾಗಿ ಹಸು ಮತ್ತು ಎಮ್ಮೆಗಳನ್ನು ಆಶ್ರಯಿಸಿರುತ್ತವೆ. ಕೆಲವು ಬಾರಿ ಕುರಿ, ಮೇಕೆ, ನಾಯಿ, ಕುದುರೆ ಒಂಟೆಗಳನ್ನೂ ಸಹ ಆಶ್ರಯಿಸುತ್ತವೆ. ಈ ಉಣ್ಣೆಗಳು ಹಸುಗಳಲ್ಲಿ ಬಹು ಮುಖ್ಯವಾದ ಕೆಂಪು ಮೂತ್ರ ರೋಗ ಎಂಬ ಏಕಾಣುಜೀವಿಯಿಂದ ಬರುವ ಮಾರಣಾಂತಿಕ ಖಾಯಿಲೆಯನ್ನು ಹರಡುತ್ತವೆ. ರೋಗಗ್ರಸ್ತ ಹಸು/ಎಮ್ಮೆಗಳ ಮೂತ್ರವು ಕಾಫಿ ಡಿಕಾಕ್ಷನ್ ಬಣ್ಣ ಹೊಂದಿದ್ದು, ವಿಪರೀತ ಜ್ವರದಿಂದ ಬಳಲುತ್ತವೆ, ಒಂದು ವೇಳೆ ಸೂಕ್ತ ಚಿಕಿತ್ಸೆ ಸಿಗದಿದ್ದರೆ ಒಂದೆರಡು ದಿನಗಳಲ್ಲಿ ಸಾಯುತ್ತವೆ.

ರಿಫಿಸೆಫ್ಯಾಲಸ್ ಉಣ್ಣೆಗಳು (Riphicephalus Tick: Brown Dog Tick): ಹೆಚ್ಚಾಗಿ ನಾಯಿಗಳಲ್ಲಿ ಕಂಡುಬರುತ್ತವೆ. ಕೆಲವೊಮ್ಮೆ ಹಸು ಮತ್ತು ಎಮ್ಮೆ, ಕುದುರೆ ಕುರಿ, ಮತ್ತು ಮೇಕೆಗಳನ್ನೂ ಸಹ ಆಶ್ರಯಿಸುತ್ತವೆ. ಈ ಉಣ್ಣೆಗಳು ನಾಯಿಗಳಿಗೆ ಹಲವು ರೋಗಗಳನ್ನು ಹರಡುತ್ತವೆ. (Babesia, Hepatozoon, Ehrlichia). ದನಕರುಗಳಿಗೂ ಸಹ ಹಲವು ಬ್ಯಾಕ್ಟೀರಿಯಾ, ವೈರಾಣುಗಳು, ಏಕಾಣುಜೀವಿಗಳನ್ನು ಹರಡುತ್ತವೆ.

ಹೀಮೊಫೈಸಾಲಿಸ್ ಉಣ್ಣೆಗಳು (Haemophysalis): ಈ ಉಣ್ಣೆಗಳು ದನಕರುಗಳು, ಕುರಿ ಮತ್ತು ಮೇಕೆಗಳನ್ನು ಆಶ್ರಯಿಸಿರುತ್ತವೆ. ಈ ಉಣ್ಣೆಗಳು ಬಹಳಾ ಪ್ರಸಿದ್ಧಿ ಏಕೆಂದರೆ, ನಮ್ಮ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಮಲೆನಾಡು ಪ್ರದೇಶದ ಕ್ಯಾಸನೂರುವಿನ ಮಂಗನ ಕಾಯಿಲೆಗೆ ಕಾರಣವಾದ ವೈರಾಣುಗಳನ್ನು ಹರಡುವ ಪ್ರಭೇದವಾಗಿರುತ್ತವೆ. ಕಾಡಂಚಿನ ಗ್ರಾಮಗಳಲ್ಲಿರುವ ರಾಸುಗಳು ಮೇಯಲು ಕಾಡಿಗೆ/ಕಾಡಂಚಿಗೆ ಹೋದಾಗ ರಾಸುಗಳ ಮೇಲಿರುವ ಉಣ್ಣೆಗಳು ಮಂಗಗಳನ್ನು ಕಚ್ಚುತ್ತವೆ. ಆ ಮಂಗಗಳಲ್ಲಿ ಮಂಗನ ಕಾಯಿಲೆಗೆ ಕಾರಣವಾದ ವೈರಾಣುಗಳಿದ್ದರೆ ಈ ಉಣ್ಣೆಗಳು ವೈರಾಣುಗಳನ್ನು ಹರಡುವ ಕೊಂಡಿಯಾಗುತ್ತವೆ. ಯಾವಾಗ ಮಂಗಗಳು ಸಾವನ್ನಪ್ಪುತ್ತವೆಯೋ ಈ ಉಣ್ಣೆಗಳು ಮಂಗನ ದೇಹವನ್ನು ಬಿಟ್ಟು ಪ್ರಾಣಿಗಳ ಮೈಮೇಲೆ ಅಂಟಿಕೊಂಡು ಕಾಡಿನಿನಂದ ಊರಿಗೆ/ಹಳ್ಳಿಗಳಿಗೆ ರಾಸುಗಳ ಮುಖಾಂತರ ರವಾನೆಯಾಗುತ್ತವೆ. ಈ ರೋಗಯುಕ್ತ ಉಣ್ಣೆಗಳು ಹಳ್ಳಿಗಳಲ್ಲಿರುವ ಮನುಷ್ಯರಿಗೆ/ವನಪಾಲಕರಿಗೆ/ಪಶುಪಾಲಕರಿಗೆ/ಗೋಪಾಲಕರಿಗೆ ಕಚ್ಚಿದಾಗ ಆ ಜನರಿಗೆ ಮಂಗನ ಕಾಯಿಲೆ ವೈರಾಣುಗಳು ಹರಡಿ ರೋಗವನ್ನುಂಟು ಮಾಡಿ ಸಾವನ್ನು ತರುತ್ತದೆ.

ಆಂಬ್ಲಿಯೋಮಾ ಉಣ್ಣೆಗಳು (Amblyomma): ಈ ಉಣ್ಣೆಗಳ ಮೈಮೇಲೆ ಬಣ್ಣ ಬಣ್ಣದಿಂದ ಕೂಡಿದ ರೇಖೆಗಳಿದ್ದು ಮೇಲ್ಮೈ ಒಡವೆಗಳಂತೆ ಮಿನುಗುತ್ತಿರುತ್ತದೆ. ಈ ಉಣ್ಣೆಗಳು ಸಹಾ ದನಕರುಗಳು ಕುರಿ, ಮೇಕೆಗಳನ್ನು ಆಶ್ರಯಿಸಿರುತ್ತವೆ.

ಹಯಲೋಮ ಉಣ್ಣೆಗಳು (Hyalomma:ಉದ್ದ ಮೂತಿಯ

ಉಣ್ಣೆಗಳು)

ಈ ಉಣ್ಣೆಗಳು ಸಹಾ ದನಕರುಗಳು ಕುರಿ, ಮೇಕೆಗಳನ್ನು ಆಶ್ರಯಿಸಿರುತ್ತವೆ. ಪ್ರಾಣಿಗಳ ಮಲೇರಿಯಾ ಎಂದೇ ಹೇಳಬಹುದಾದ ಥೈಲೇರಿಯಾಸಿಸ್ ಎಂಬ ಏಕಾಣುಜೀವಿ ರೋಗವನ್ನು ಹರಡುತ್ತವೆ. ಈ ರೋಗದಲ್ಲಿ ವಿಪರೀತ ಜ್ವರವಿದ್ದು ಬಿಟ್ಟು ಬಿಟ್ಟು ಬರುತ್ತಿರುತ್ತದೆ. ಅನೀಮಿಯಾ, ದುಗ್ಧ ಗ್ರಂಥಿಗಳು ಊದಿಕೊಂಡು ಜಾಂಡೀಸ್‌ನಂತಹ ರೋಗಲಕ್ಷಣಗಳು ಕಂಡುಬರುತ್ತದೆ. ಒಂದು ವೇಳೆ ಸೂಕ್ತ ಚಿಕಿತ್ಸೆ ಸಿಗದಿದ್ದರೆ ಒಂದೆರಡು ದಿನಗಳಲ್ಲಿ ಸಾಯುತ್ತವೆ. ಅನಪ್ಲಾಸ್ಮ ಎಂಬ ರೋಗವನ್ನೂ ಸಹಾ ಹರಡುತ್ತವೆ. ವಿಪರೀತ ಜ್ವರವಿದ್ದು ಬಿಟ್ಟು ಬಿಟ್ಟು ಬರುತ್ತಿರುತ್ತದೆ. ಅನೀಮಿಯಾ, ಮೇವು ತಿನ್ನದಿರುವುದು ಮೆಲುಕು ಹಾಕದಿರುವುದು, ಜಾಂಡೀಸ್‌ನಂತಹ ರೋಗಲಕ್ಷಣಗಳು ಕಂಡುಬರುತ್ತದೆ. ಸೂಕ್ತ ಚಿಕಿತ್ಸೆ ಸಿಗದಿದ್ದರೆ ಸಾಯುತ್ತವೆ.

ಉಣ್ಣೆಗಳ ಹತೋಟಿ ಮಾಡುವ ಕ್ರಮಗಳು:– ರೈತಭಾಂದವರೇ, ಈ ಉಣ್ಣೆಗಳಿಂದ ಇಷ್ಟೆಲ್ಲಾ ತೊಂದರೆಗಳಿರುವುದರಿಂದ ಅವುಗಳನ್ನು ವ್ಯವಸ್ಥಿತವಾಗಿ ಹತೋಟಿ ಮಾಡುವ ಕ್ರಮಗಳನ್ನು ರೂಡಿಸಿಕೊಳ್ಳಬೇಕು.

* ಪ್ರಾಣಿಗಳನ್ನು ಮತ್ತು ಪ್ರಾಣಿಗಳ ಕೊಟ್ಟಿಗೆಯನ್ನು ಯಾವಾಗಲೂ ಸ್ವಚ್ಚವಾಗಿ ಮತ್ತು ಶುಭ್ರವಾಗಿಡಬೇಕು.

* ಕ್ರಮಬದ್ಧವಾಗಿ/ವಾರಕ್ಕೊಮ್ಮೆ ರಾಸುಗಳ ಮೈಮೇಲಿನ ಉಣ್ಣೆಗಳನ್ನು ಒಂದೊಂದಾಗಿ ಬೇರ್ಪಡಿಸಿ ಗುಂಪುಮಾಡಿ ಸುಟ್ಟುಹಾಕಬಹುದು.

* ಉಣ್ಣೆಗಳ ವಿರುದ್ಧ ಮಾರುಕಟ್ಟೆಯಲ್ಲಿ/ಹತ್ತಿರದ ಪಶುವೈದ್ಯ ಕೇಂದ್ರಗಳಲ್ಲಿ ಸಿಗುವ ಉಣ್ಣೆ ನಿವಾರಕ/ ಉಣ್ಣೆ ನಾಶಕ ಔಷಧಿಗಳನ್ನು/ಕೀಟನಾಶಕಗಳನ್ನು ರಾಸುಗಳ ಮೈಮೇಲೆ ಸಿಂಪಡಿ ಈ ಉಣ್ಣೆಗಳನ್ನು ನಾಶಪಡಿಸಬಹುದು. ರಾಸುಗಳ ಮೈಮೇಲೆ ಗಾಯಗಳಿದ್ದಾಗ ಔಷಧಿ ಬಳಸಬಾರದು.

* ಉಣ್ಣೆಗಳ ಜೀವನ ಚಕ್ರದ ಭಾಗಗಳಾದ ಮೊಟ್ಟೆಗಳು, ಲಾರ್ವಾಗಳು ಮತ್ತು ಕೋಶಗಳು ಹೆಚ್ಚಾಗಿ ಪ್ರಾಣಿಗಳು ವಾಸಿಸುವ ಕೊಟ್ಟಿಗೆಯಲ್ಲಿ ಗೋಡೆಗಳಲ್ಲಿನ ಬಿರುಕುಗಳು, ಸಂದಿ–ಗೊಂದಿಗಳಿರುವ ಜಾಗದಲ್ಲಿ ಸರಿಯಾಗಿ ಕೀಟನಾಶಕಗಳನ್ನು ಸಿಂಪಡಿಸಬೇಕು.

* ಪ್ರಾಣಿಗಳನ್ನು ತಾತ್ಕಾಲಿಕವಾಗಿ ವಿಶ್ರಾಂತಿಗೊಳಿಸುವ ಮನೆ ಮುಂದಿನ ಅಂಗಳ/ಹಿತ್ತಲಿನ ಪ್ರದೇಶಗಳಲ್ಲೂ ಸಹ ಉಣ್ಣೆನಾಶಕ ಔಷಧಿಗಳಿಂದ ಆಗಿಂದಾಗ್ಗೆ ಸಿಂಪಡಿಸಿಕೊಳ್ಳಬೇಕು.

* ಉಣ್ಣೆಗಳು ಹೆಚ್ಚಿದ್ದಾಗ ವಾರಕ್ಕೆ ಒಮ್ಮೆಯಂತೆ 2–3 ಬಾರಿ ಕೀಟನಾಶಕಗಳನ್ನು ಸಿಂಪಡಿಸಬೇಕು, ನಂತರ 3 ತಿಂಗಳಿಗೆ ಒಮ್ಮೆಯಂತೆ ಸಿಂಪಡಿಸಬೇಕು/ಸ್ಪ್ರೇ ಮಾಡಬೇಕು.

* ಉತ್ತಮ ಗುಣಮಟ್ಟದ/ಸರಿಯಾದ ಉಣ್ಣೆ ನಾಶಕಗಳ ಆಯ್ಕೆ ಮಾಡುವಲ್ಲಿ ಸನಿಹದ ಪಶುವೈದ್ಯರ ಸಲಹೆಯನ್ನು ಪಡೆಯಬೇಕು ಏಕೆಂದರೆ ಹೆಚ್ಚಿನ ಪ್ರಮಾಣದ ಔಷಧಿ ಬಳಸಿದರೆ ಇವು ವಿಷವಾಗಿ ಪರಿಣಮಿಸಬಹುದು.

* ಬೆಳಗ್ಗೆ ಎಳೆಬಿಸಿಲಿನ ನಂತರ ರಾಸುಗಳಿಗೆ ಚೆನ್ನಾಗಿ ಮೇವು/ನೀರು ಕೊಟ್ಟು ಅವುಗಳ ಬಾಯಾರಿಕೆ/ದಾಹ ನೀಗಿಸಿ, ಬಾಯಿಗೆ ಬಾಯಿ ಕುಣಿಕೆ ಹಾಕಿ ಕೊಟ್ಟಿಗೆಯಲ್ಲೇ ಔಷಧಿಯನ್ನು ಸಿಂಪಡಿಸಿ 30 ನಿಮಿಷದಿಂದ ಒಂದು ತಾಸಿನವರೆಗೆ ಬಿಟ್ಟು ನಂತರ ರಾಸುಗಳ ಮೈ ತೊಳೆಯಿರಿ. ಆನಂತರ ಕೊಟ್ಟಿಗೆಯನ್ನು ಪ್ರತ್ಯೇಕವಾಗಿ ಸಿಂಪಡಿಸಬೇಕು.

* ಉಣ್ಣೆಗಳ ತೊಂದರೆಯಿಂದ ರಕ್ತಹೀನತೆಯಾಗಿ ಬಳಲುತ್ತಿರುವ ರಾಸುಗಳಿಗೆ/ಹಾಲು ಹಿಂಡುವ ರಾಸುಗಳಿಗೆ ಹೆಚ್ಚಿನ ಕಬ್ಬಿಣದ ಅಂಶವಿರುವ ಸಮತೋಲನ ಆಹಾರವನ್ನು ನೀಡಿ ಪೋಷಣೆ ಮಾಡಿ.

* ನೈಸರ್ಗಿಕವಾಗಿ ಬೆಳೆಯುವ ಸ್ಟೈಲೋಸ್ಯಾಂತಸ್ ಎಂಬ ಗಿಡವು (ಕಳೆಸಸ್ಯ) ಉಣ್ಣೆಗಳನ್ನು ಹತೋಟಿಯಲ್ಲಿಡುವ ಔಷದಿ ಗುಣವನ್ನು ಹೊಂದಿರುವುದರಿಂದ ಈ ರೀತಿಯ ಸಸ್ಯ/ಗಿಡಗಳನ್ನು ಮನೆಯ ಮುಂದಿನ ಅಂಗಳ, ಹಿತ್ತಲಿನಲ್ಲಿ ಮತ್ತು ಹೊಲಗಳ ಬದುಗಳಲ್ಲಿ ಹೆಚ್ಚಾಗಿ ಬೆಳೆಯುವುದರಿಂದ ಉಣ್ಣೆಗಳ ನಿರ್ಮೂಲನೆ ಸಾಧ್ಯವಾಗುತ್ತದೆ.

* ಯಾವುದೇ ರೀತಿಯ ಜ್ವರದ ಲಕ್ಷಣಗಳು ಕಂಡುಬಂದ ತಕ್ಷಣ ಉಪೇಕ್ಷೆ ಮಾಡದೇ ಹತ್ತಿರದ ಪಶು ವೈದ್ಯರಲ್ಲಿ ಪರೀಕ್ಷಿಸಿ ಪ್ರಾರಂಭಿಕ ಹಂತದಲ್ಲೇ ಸೂಕ್ತ ಚಿಕಿತ್ಸೆ ನೀಡಿಸಿದರೆ ಅಪಾರ ಪ್ರಮಾಣದ ರಾಸುಗಳ ಸಾವು ನೋವುಗಳು ಹಾಗೂ ಆರ್ಥಿಕ ನಷ್ಟವನ್ನು ತಡೆಯಬಹುದು.

* ಸಾಮಾನ್ಯವಾಗಿ ಬಡಕಲು ದೇಹದ, ವಯಸ್ಸಾದ ಹಾಗೂ ಸಣ್ಣ ವಯಸ್ಸಿನ ರಾಸುಗಳಲ್ಲಿ ದೇಹದ ಶಕ್ತಿ ಕುಂದಿರುವುದರಿಂದ ಉಣ್ಣೆಗಳು/ಪರೋಪಜೀವಿಗಳು ಬೇಗನೇ ಆವಾಹನೆಯಾಗಿ/ಅಂಟಿಕೊಂಡು ತೊಂದರೆ ನೀಡುತ್ತವೆ. ಆದ್ದರಿಂದ ರೈತರು ರಾಸುಗಳಿಗೆ ಆಗಿಂದಾಗ್ಗೆ ವೈಜ್ಞಾನಿಕವಾಗಿ ಸಮತೋಲನ ಆಹಾರವನ್ನು ಬಳಸಿ, ಲಸಿಕೆ ಹಾಗು ಚುಚ್ಚುಮದ್ದುಗಳನ್ನು ಕೊಡಿಸಿ, ಜಂತುನಿವಾರಕಗಳನ್ನು ನೀಡಿ, ಉಣ್ಣೆನಾಶಕ/ನೊಣಗಳ ನಿವಾರಣೆ ಮಾಡಿಕೊಳ್ಳುವುದರ ಮುಖಾಂತರ ಹೈನುಗಾರಿಕೆ, ಕುರಿಸಾಕಾಣಿಕೆ, ಕೋಳಿ ಸಾಕಾಣಿಕೆ ಮತ್ತು ಹಂದಿ ಉದ್ಯಮಗಳಲ್ಲಿ ಹೆಚ್ಚಿನ ಲಾಭವನ್ನು ಪಡೆದು, ತಾವೂ ಅಭಿವೃದ್ಧಿ ಹೊಂದುವುದರ ಜೊತೆಗೆ ರಾಜ್ಯದ ಮತ್ತು ದೇಶದ ಆರ್ಥಿಕತೆಯನ್ನು ಹೆಚ್ಚಿಸಬಹುದು.

ಲೇಖಕರ ಪಟ್ಟಿ

.ಮೇಘನ ಟಿ.ಯು 164
ಪ್ರಿಯದರ್ಶಿನಿ 45
ಪ್ರಿಯಾಂಕ 213
ಪ್ರಿಯಾಂಕ ಎಸ್.ಆರ್ 164
ಪ್ರೀತಿ 247
ಭುವನೇಶ್ವರಿ ಕಾಂಬಳೆ 99
ಭಗವಂತಪ್ಪ ಬ 204
ಸಂದೀಪ. ಹಲಮಂಡಗೆ 211
ಸಂದೀಪ್. ಹೆಚ್ 199
ಸಂತೋಷರಡ್ಡಿ ಮಾಚೇನಹಳ್ಳಿ 186
ಸಂತೋಷ್ ಕೆ ಎಮ್ 195
ಸುಧಾ ಎಮ್. ಪಿ. 186
ಸಜಿನ್ ಎಮ್.ಜಿ 281
ಸೋನಿಯ ಶರಹತ್ ಎಂ 134
ದಿಲೀಪ್ ಕುಮಾರ ಡಿ. 204. 207, 215, 229, 230
ದೀಪಕ್ 272
ನವೀನ್ ಎಮ್ 195, 251
ಪುಷ್ಪ ಪಿ 75, 171
ಪ್ರಸನ್ನ ಕುಮಾರ್. ಎಂ. ಜಿ 113, 271
ಪ್ರದೀಪ ಕುಮಾರ 174, 221
ಪ್ರದೀಪ ಚವ್ಹಾಣ 255
ಪ್ರಹ್ಲಾದ ಉಬಾಲೆ 174
ಶಂಭುಲಿಂಗಯ್ಯ ವಿರಕ್ತಮಠ 108
ಶ್ರುತಿ ಎಮ್. ಜಿ 281
ಶಂಕ್ರಮ್ಮ.ಅ.ಹುಲಿಕಟ್ಟಿ 8
ಮಿಸ್.ರಮ್ಯಶ್ರೀ.ಎಂ.ಜಿ 114
ವಿವೇಕ ಆರ. ಕಸರಳಿಕರ 200, 211, 213, 229
ವಿಂದ್ಯಾ. ಕೆ. ಎಂ 129
ವಿಕಾಸ್ 272
ವಿದ್ಯಾ. ಆರ್ 262
ಬ.ರಾ.ಕೆರೂರ 253
ಭೀಮಪ್ಪ ಹೊನ್ನಿಕೊಳ್ಳ 26
ಶಿವಕುಮಾರ 285
ಶ್ರೀ ಹರೀಶ್ ಶೆಣೈ 184, 188
ಶ್ರೀ. ರೆಹಮಾನ ಆಯ್. ಗೊರಜನಾಳ 9, 14
ಶ್ರೀ. ಗಣೇಶ್ ಪ್ರಸಾದ್. ಎಲ್ 192
ಶ್ರೀನಿವಾಸ್.ವಿ 137
ಶ್ರೀಮತಿ ಶಾಂತಾದೇವಿ ಪಾಟೀಲ 81
ಶ್ರೀಮತಿ ವಿದ್ಯಾ ಪಾಟೀಲ 243
ಶ್ರೀಮತಿ. ಪಿ. ಬಿ. ರುದ್ರಾಕ್ಷಿ 154
ಶ್ರೀಮತಿ. ಪದ್ಮಾವತಿ 277
ಶ್ರೀಕಾಂತ ತಟ್ಟಿ 221
ವರ್ಷ ಎಂ ಮದ್ದಿನ್ 164
ಮಂಜುನಾಥ ಪಾಟೀಲ್ 174, 221, 230
ಮುತ್ತುಶೆಟ್ಟಿ 29, 78
ಮಧು ಎಸ್ ಗಿರಿ 186
ಮಾನಸ. ಎನ್ 262
ಮೇಘ ಜಿ.ಕೆ 207
ಯಲ್ಲಪ್ಪ. ಶ. ಇಂಗಳೆ 199. 200
ಅನೀಲ್ ಅಪ್ರಾಳ್ 60, 66
ಅಪರ್ಣ ಬಿ 126
ಅಶ್ವಿನಿ.ಅ 253
ಅಜಯ. ಎಸ್. ಸತಬಿಗೆ 211
ಅಜಯ್. ಎಸ್ 199
ಜಹಾಂಗೀರ ಡಿ 204
ರವೀಂದ್ರ ಬಿ.ಜಿ 200

ರವಿರಾಯ್‌ದುರ್ಗ್ 195
ರವಿಕುಮಾರ.ಎಸ್ 83
ರೂಪಾಲಿ ಬಿ 213
ರಂಜಿನಿ ಎ. 186
ಉಮೇಶ ಕ ಪಾಟೀಲ 95
ರಜೀಯಾ ನದಾಫ್ 69
ರಘುರಾಮಲು ವಾಯ್ 186
ಎಸ್.ಎಂ. ವಕಾರೆ 229
ಎನ್.ಎ. ಪಾಟೀಲ 199, 200, 211, 213, 229
ಎಂ.ಸಿ. ಪಾಟೀಲ್ 221
ಏಲ್ ಆರ್ ನಾಯಿಕ 255
ಹರೀಶ. ಎಂ 288
ಹೆಚ್. ವಿ. ಕಾಶಿನಾಥಶಾಸ್ತ್ರಿ 97, 275
ಕಾವ್ಯ. ಎ. ಎನ್ 143
ಕೃಷ್ಣಮೂರ್ತಿ,ಸಿ.ಎಂ 213
ಡಾ .ನಾಗಭೂಷಣ 281
ಡಾ ಅನಿತಾ ಹಂಜಿ 267
ಡಾ. ಪ್ರೀತಿ 181
ಡಾ. ಪತ್ರೆಮ್ಮ ಧಾರವಾಡ 23, 91
ಡಾ. ವೀರಣ್ಣ ಕೆ. ಸಿ 281, 288
ಡಾ. ವಿದ್ಯಾಶಂಕರ ಎಂ.ಹೆಚ್ 32, 143, 164, 247, 262, 272
ಡಾ. ಲಕ್ಷ್ಮೀದೇವಿ ವಾಯ್ 69
ಡಾ. ಶಿವಪ್ರಕಾಶ ಬಿ. ವ್ಹಿ 204, 207, 215, 230
ಡಾ. ಮಾದವಪ್ರಸಾದ್ 281
ಡಾ. ಆರ್. ಪೂರ್ಣಿಮ 18
ಡಾ. ಎಸ್. ಯಶೋಧ 83
ಡಾ. ಹಾ. ಮಾ. ನಾಗಾರ್ಜುನ 262
ಡಾ. ಗೋಪಾಲ.ಜಿ.ಬಿ 288
ಡಾ. ಗೌಡಪ್ಪ. ಜಿ. ಇ 88
ಡಾ. ಚಂದ್ರಶೇಖರ್ ಎಸ್. ವಾಸ್ಟರ್ 181
ಡಾ. ದತ್ತಾತ್ರೇಯ. ವಿ. ಎನ್ 39
ಡಾ.ಭಾಗ್ಯಶ್ರೀ ಹ.ದೊಡಮನಿ 69, 81
ಡಾ.ಮಂಜಿತ ಕುಮಾರ್ ಬಿ.ಆರ್ 281
ಡಾ.ಈಶ್ವರ ಪಿ 114
ಡಾ.ಎಸ್ ಆಂಜನೇಯ 137
ಡಾ.ಬಿ.ಎಂ.ಗೀತಾಂಜಲಿ 35
ಡಾ: ಶರಣಗೌಡ ಬಿ. ಪಾಟಿಲ್ 285
ಡಾ: ವಿಜಯಕುಮಾರ ಎಸ್ 192
ಡಾ: ಕೆ. ಬಿ. ವೇದಮುರ್ತಿ 285
ಡಾ॥ ನಾಗರಾಜ ಗಂ, ಮೂಲಿಮನಿ 160
ಡಾ॥ ಶಿಲ್ಪಾ ಉಷ್ಣ 158
ಡಾ॥ ವೈ. ಎಂ. ರಾಜು 113, 271
ಡಾ॥ ಎಂ. ಎ. ಶೃತಿಕೀರ್ತಿ 150, 240
ಡಾ॥ ಕೃಷ್ಣಮೂರ್ತಿ, ಸಿ. ಎಂ 235, 289
ಕಿರಣ್ ಕುಮಾರ್ 117
ಗೀತಾ. ಸಿ 6
ಗೀತಾ. ಹೆಚ್.ಪಿ 122
ಗೀತಾಬಾಯಿ ಬಡಿಗೇರ 72
ಗಿರಿಜಾ ಅಕ್ಕಿ 69
ಚಂದನ ಎಸ್ 32
ಚಂದ್ರಮೌಳಿ ಎಂ.ಎಸ್ 49, 55
ಚಂದ್ರಕಾಂತ ಬಿ ಬಿರಾದರ 43
ದೈವಶಿಖಾಮಣಿ ಎಸ್ 186
ಧನಲಕ್ಷ್ಮಿ ಎಸ್ 195